ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯ

(ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ
ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ)

ಸಂಪುಟ - ೩

(ಅಧ್ಯಾಯ : ೧೮ರಿಂದ ೨೧ರವರೆಗೆ)

ಸಂಪಾದನೆ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶಕರು:

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

'ಪಾಜಕ', ನಂ. 67, 50 ಅಡಿ ರಸ್ತೆ, ಹನುಮಂತನಗರ,
ಬೆಂಗಳೂರು - 560 019.

Śrīmadānandatīrthabhagavatpāda-praṇīta MAHĀBHĀRATATĀTPARYANIRṆAYA (Volume 3 : Adhyāya 18 to 21) — critically edited with Kannada rendering, explanatory notes and extracts from various Sanskrit Glosses — by Vidyāvācaspati, Darśanaratnam, Sacchāstravicakṣaṇaratnam, Pravacanācārya, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapraviṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & Karnataka Rajyotsava Award-2002 and Śrī Vidyāmānya-Mahāpraśasti of Śrī Pejavar Mutt, Udupi) **Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** "Pajaka",No.67, Fifty Feet Road, Hanumanthanagar, Bangalore - 560019.

Phone : 2660 2802
2662 2345.

Internet : www.vyasamadhwa.org

E-mail : info@vyasamadhwa.org

First Edition : 2004
Pages 688 (xxxii+652+4)

© Dr. Vyasanakere Prabhanjanacharya

Typeset by :
Rayiprāṇa Impressions and
Śrī VyāsaMadhva Samśodhana Pratiṣṭhāna

Printed at :
Rāṣṭrotthāna Mudraṇālaya,
Bangalore -19.

ವಿಷಯ ಸೂಚೀ

ಮುನ್ನುಡಿ xxi-xxxii

ಮಹಾಭಾರತತಾತ್ಪರ್ಯನಿರ್ಣಯ **೧-೬೫೨**
(ಅಧ್ಯಾಯ ೧೮ರಿಂದ ೨೧)

ಅಧ್ಯಾಯ - ೧೮ (ಭೀಮಾರ್ಜುನದಿಗ್ವಿಜಯಃ) **೧-೯೩**

(ಭೀಮನ ಶುದ್ಧಭಾಗವತಧರ್ಮ, ಅಸ್ತ್ರವಿದ್ಯಾಪರೀಕ್ಷೆ, ದ್ರುಪದಪರಾಭವ, ಧೃಷ್ಟದ್ಯುಮ್ನದ್ರೌಪದಿಯರ ಉತ್ಪತ್ತಿ, ಯುಧಿಷ್ಠಿರನಿಗೆ ಯೌವರಾಜ್ಯ)

ಅರ್ಜುನನ ಅಸ್ತ್ರವಿದ್ಯಾಪ್ರಾವೀಣ್ಯ (೧) ೧
ಭೀಮಸೇನನ ಪರಿಶುದ್ಧ ಭಾಗವತಧರ್ಮ (೨) ೧
ಯಾಚನೆ ಭಾಗವತಧರ್ಮವಲ್ಲ (೩) ೨
ಭೀಮನ ವೈಷ್ಣವದೀಕ್ಷೆ (೬) ೩
ಭೀಮಸೇನ ವಿದ್ಯೋಪಜೀವನ ಮಾಡಲಿಲ್ಲ (೧೧) ೬
ಭೀಮನ ಅಸ್ತ್ರಯುದ್ಧದ ಮರ್ಮ (೧೨) ೮
ಭೀಮಸೇನನ ನಮಸ್ಕಾರ ಕೌಶಲ (೧೪) ೧೦
ದ್ರೌಪದಿಯ ಭಾಗವತಧರ್ಮ (೧೬) ೧೧
ಇತರ ದೇವತೆಗಳು ಅಚ್ಛಿನ್ನಧರ್ಮರಲ್ಲ (೧೮) ೧೩
ಬಲರಾಮ ಅರ್ಜುನರು ಧರ್ಮ ತಪ್ಪಿದ ಪ್ರಸಂಗ (೧೯) ೧೩
ಪ್ರದ್ಯುಮ್ನಾದಿಗಳ ಧರ್ಮಲೋಪ (೨೦) ೧೪
ವಿದುರನ ಧರ್ಮಲೋಪ (೨೨) ೧೫
ನಕುಲಸಹದೇವರ ಧರ್ಮಲೋಪ (೨೩) ೧೬
ದೇವಕೀ ವಸುದೇವರ ಹಾಗೂ ಭೀಷ್ಮರ ಧರ್ಮಲೋಪ (೨೪) ೧೬
ದ್ರೋಣಾದಿಗಳ ಹಾಗೂ ಶಿವಾದಿದೇವತೆಗಳ ಧರ್ಮಲೋಪ (೨೫) ೧೭
ಪರಶುಕ್ಲತ್ರಯರು (೨೭) ೨೦
ಕುರು ಪಾಂಡವರ ಅಸ್ತ್ರವಿದ್ಯಾ ಪ್ರದರ್ಶನ (೨೯) ೨೩

ಅಶ್ವತ್ಥಾಮರ ಅಸ್ತ್ರಕೌಶಲ (೩೨) ೨೪
ಅರ್ಜುನನ ಅಪ್ರತಿಮಕೌಶಲ (೩೩) ೨೫
ಕರ್ಣನ ರಂಗಪ್ರವೇಶ - ಅಸ್ತ್ರವಿದ್ಯಾ ಪ್ರದರ್ಶನ (೩೪) ೨೬
ಸೂತಪುತ್ರಕರ್ಣ (೩೬) ೨೭
ಕರ್ಣನಿಗೆ ಅಂಗರಾಜ್ಯಾಭಿಷೇಕ (೩೮) ೨೯
ಕರ್ಣನ ಪಿತೃಭಕ್ತಿ (೩೯) ೨೯
ಭೀಮ ದುರ್ಯೋಧನರ ಅಸ್ತ್ರವಿದ್ಯಾ ಪ್ರದರ್ಶನ (೪೦) ೩೦
ದೇವಾಸುರರ ಸಂಭ್ರಮ (೪೧) ೩೦
ಅಶ್ವತ್ಥಾಮನ ಮಧ್ಯಸ್ಥಿಕೆ (೪೪) ೩೧
ಭೀಮ ದುರ್ಯೋಧನರ ದೃಢನಿಶ್ಚಯ (೪೮) ೩೩
ದೇವತೆಗಳ ಅರ್ಜುನ ಪಕ್ಷಪಾತ (೫೧) ೩೫
ಗುರುದಕ್ಷಿಣಾ ಪ್ರಸಂಗ (೨೪) ೩೬
ಕೌರವರ ಪರಾಭವ (೫೮) ೩೮
ಭೀಮಾರ್ಜುನರ ವಿಜಯ (೬೫) ೪೧
ಅರ್ಜುನನಿಂದ ದ್ರುಪದನ ಸೆರೆ (೭೪) ೪೪
ದ್ರೋಣರ ಪ್ರತಿಜ್ಞಾಪೂರ್ತಿ (೮೨) ೪೬
ದ್ರೋಣರ ಧರ್ಮದೀಕ್ಷೆ - ಕ್ಷಾತ್ರವೃತ್ತಿಯ ಹಿನ್ನೆಲೆ (೮೮) ೪೯
ದ್ರುಪದ ಮಾಡಿದ ಯಜ್ಞ (೯೦) ೫೦
ಧೃಷ್ಟದ್ಯುಮ್ನನ ಜನನ (೯೫) ೫೨
ದ್ರೌಪದಿಯ ಅವತಾರ (೯೮) ೫೩
ದ್ರೌಪದಿಯ ಹಿರಿಮೆ (೧೦೧) ೫೬
ದ್ರೌಪದಿಯ ಹಿನ್ನೆಲೆ - ಉಮಾದಿ ಸ್ತ್ರೀಯರಿಗೆ ಬ್ರಹ್ಮಶಾಪ (೧೦೩) ೫೯
ದ್ರೌಪದಿಯ ಜನ್ಮಾಂತರಗಳು (೧೦೭) ೬೧
ವಿಪ್ರಕನ್ಯಾವತಾರ (೧೧೧) ೬೪
ನಳನಂದಿನೀ - ಇಂದ್ರಸೇನಾ (೧೦೬) ೬೮
ಮುದ್ಗಲನಿಗೆ ಬ್ರಹ್ಮಶಾಪ (೧೧೭) ೬೯

ಮುದ್ಗಲ - ನಳನಂದಿನೀ (೧೨೨) ೭೨
ಇಂದ್ರಸೇನೆಯ ತಪಸ್ಸು (೧೨೩) ೭೨
ಶಿವನಿಂದ ಪಂಚಪತಿತ್ವ ವರ (೧೨೭) ೭೪
ಪಂಚೇಂದ್ರೋಪಾಖ್ಯಾನ (೧೩೧) ೭೫
ಇಂದ್ರನಿಗೆ ಶಿವನ ಶಾಪ (೧೩೪) ೭೭
ಶಿವನಿಗೆ ಬ್ರಹ್ಮಶಾಪ (೧೩೮) ೭೯
ಧೃಷ್ಟದ್ಯುಮ್ನ ದ್ರೌಪದಿಯರ ಹಿರಿಮೆ (೧೪೭) ೮೫
ದ್ರೋಣರ ಬಳಿ ಧೃಷ್ಟದ್ಯುಮ್ನನ ಅಸ್ತ್ರಾಭ್ಯಾಸ (೧೫೦) ೮೬
ಪಾಂಡವರಿಗೆ ಕೃಷ್ಣನ ಅಭಿನಂದನೆ (೧೫೧) ೮೮
ಭೀಮಾರ್ಜುನ ವಿಜಯದ ಫಲಶ್ರುತಿ (೧೫೩) ೮೯
ಧರ್ಮರಾಜನಿಗೆ ಯೌವರಾಜ್ಯ (೧೫೯) ೯೧
ಭೀಮಾರ್ಜುನರ ದಿಗ್ವಿಜಯ (೧೬೦) ೯೨

ಅಧ್ಯಾಯ - ೧೯ (ಪಾಂಡವರಾಜ್ಯಲಾಭಃ) **೯೪-೨೭೦**

(ಅರಗಿನ ಮನೆಯ ದಹನ, ಹಿಡಿಂಬವಧೆ, ಬಕಾಸುರವಧೆ, ದ್ರೌಪದೀಸ್ವಯಂವರ, ಸುವಜ್ರವಧ, ಪಾಂಡವರಿಗೆ ಅರ್ಧರಾಜ್ಯ)

ಶಕುನಿಯ ಮೂಲಕ ನಾಸ್ತಿಕ್ಯನೀತಿ (೧) ೯೪
ಕಳಿಂಗ ಹಾಗೂ ಅವನ ನೀತಿ (೨) ೯೪
ಕಳಿಂಗನೀತಿಯ ಸಾರ (೩) ೯೫
ದುರ್ಯೋಧನನ ದುಷ್ಟನೀತಿ (೫) ೯೭
ದುರ್ಯೋಧನನಿಗೆ ಧೃತರಾಷ್ಟ್ರನ ಹಿತವಚನ (೯) ೧೦೧
ದುರ್ಯೋಧನನ ಕುತಂತ್ರ (೧೩) ೧೦೩
ದುರ್ಯೋಧನನ ಮಂತ್ರವಿದ್ಯೆ (೧೬) ೧೦೫
ಭೀಮಸೇನನ ದಿವ್ಯಜ್ಞಾನ (೨೬) ೧೧೪
ಧರ್ಮರಾಜ ಅಣ್ಣನೇಕೆ? (೨೯) ೧೧೬
ವಿದುರನ ಪಾಂಡವಪ್ರೇಮ (೩೦) ೧೧೮

ವಾರಣಾವತದಲ್ಲಿ ಅರಗಿನ ಮನೆ (೩೨) ೧೨೦
ಪ್ರಹಸ್ತನೇ ಪುರೋಚನ (೩೩) ೧೨೧
ವಿದುರನಿಂದ ಸುರಂಗ ನಿರ್ಮಾಣ (೩೬) ೧೨೩
ಪುರೋಚನನ ಸೋದರಿ ಮತ್ತು ಅವಳ ಮಕ್ಕಳು (೩೮) ೧೨೫
ಅರಗಿನ ಮನೆಯ ದಹನ (೩೯) ೧೨೫
ಭೀಮನ ಭೀಮಪರಾಕ್ರಮ (೪೦) ೧೨೮
ಪುರಜನರ ಶೋಕ (೪೪) ೧೩೧
ಭೀಷ್ಮಾದಿಗಳ ವ್ಯಥೆ (೪೬) ೧೩೩
ಹಿಡಿಂಬ ವನದಲ್ಲಿ ಪಾಂಡವರು (೪೭) ೧೩೪
ಹಿಡಿಂಬೆಯ ಪರಿಚಯ (೪೮) ೧೩೫
ಭೀಮನಿಂದ ಹಿಡಿಂಬವಧೆ (೫೩) ೧೩೮
ವ್ಯಾಸಾಗಮನ - ಭೀಮ ಹಿಡಿಂಬಿಯರ ವಿವಾಹ (೫೭) ೧೪೧
ಘಟೋತ್ಕಚನ ಜನನ (೬೨) ೧೪೫
ಏಕಚಕ್ರನಗರದಲ್ಲಿ ಪಾಂಡವರು (೬೫) ೧೪೭
ಭೀಮನ ಭಿಕ್ಷಾಟನೆಯ ಪರಿ (೬೭) ೧೪೮
ಬಕಾಸುರವಧೆಯ ಹಿನ್ನೆಲೆ (೭೦) ೧೫೧
ಬ್ರಾಹ್ಮಣ ಕುಟುಂಬದ ಶೋಕ (೭೩) ೧೫೩
ಬಕಾಸುರನ ಪರಿಚಯ (೭೮) ೧೫೮
ಕುಂತಿಯಿಂದ ಬ್ರಾಹ್ಮಣ ಕುಟುಂಬಕ್ಕೆ ಆಶ್ವಾಸನೆ (೮೦) ೧೬೦
ಯುಧಿಷ್ಠಿರನ ವಿಷಾದ (೮೩) ೧೬೩
ಕುಂತಿ ತಿಳಿಸಿದ ಭೀಮನ ಮಹಿಮೆ (೮೬) ೧೬೫
'ಬಂಡಿಯನ್ನವ ಉಂಡಿತು ಕೂಸು' (೮೯) ೧೬೭
ಭೀಮನಿಂದ ಬಕನ ವಧೆ (೯೦) ೧೬೮
ಬಕವಧೆಯ ವೈಖರಿ (೯೧) ೧೬೯
ಪುರವಾಸಿಗಳಿಂದ ಭೀಮನ ಪೂಜೆ (೯೫) ೧೭೩
ದ್ರೌಪದಿ ಸ್ವಯಂವರಕ್ಕೆ ಪಯಣ (೯೬) ೧೭೪

ದ್ರೌಪದೀ ಸ್ವಯಂವರದ ಹಿನ್ನೆಲೆ (೯೭) ೧೭೫
ಹಸ್ತಿನಾಪುರದಲ್ಲಿ ಶ್ರೀಕೃಷ್ಣ (೯೯) ೧೭೭
ಶತಧನ್ವನಿಂದ ಸತ್ರಾಜಿತನ ಹತ್ಯೆ (೧೦೧) ೧೭೮
ಪಾಂಚಾಲನಗರಕ್ಕೆ ಶ್ರೀಕೃಷ್ಣ (೧೦೪) ೧೮೦
ಪಾಂಚಾಲನಗರದತ್ತ ಪಾಂಡವರು (೧೦೫) ೧೮೦
ಬ್ರಾಹ್ಮಣರು ನುಡಿದ ಸ್ವಯಂವರದ ಭವಿಷ್ಯ (೧೦೭) ೧೮೧
ಪಾಂಡವರ ಪ್ರಯಾಣ ವೈಖರಿ (೧೦೮) ೧೮೨
ಚಿತ್ರರಥ ಅಂಗಾರವರ್ಣನಾದ (೧೦೯) ೧೮೩
ಗಂಧರ್ವನಿಗೆ ಅರ್ಜುನನಿಂದ ಆಗ್ನೇಯಾಸ್ತ್ರದ ಉಪದೇಶ (೧೧೪) ೧೮೬
ಪಾಂಡವ ಪುರೋಹಿತರಾಗಿ ಧೌಮ್ಯರು (೧೧೭) ೧೯೦
ದ್ರೌಪದೀ ಸ್ವಯಂವರದ ನಿಬಂಧನೆ (೧೧೯) ೧೯೧
ರಾಜರುಗಳ ಪರಾಭವ (೧೨೨) ೧೯೩
ಶಿಶುಪಾಲ ಪರಾಭವ (೧೨೩) ೧೯೩
ಶಲ್ಯ ಪರಾಭವ (೧೨೫) ೧೯೪
ಜರಾಸಂಧ ಪರಾಭವ (೧೨೬) ೧೯೫
ಕರ್ಣ ಪರಾಭವ (೧೨೮) ೧೯೬
ಮತ್ಸ್ಯಯಂತ್ರ ಭೇದನಕ್ಕೆ ಭೀಮಾರ್ಜುನರು (೧೨೯) ೧೯೮
ಅರ್ಜುನನಿಂದ ಮತ್ಸ್ಯಯಂತ್ರ ಭೇದ (೧೩೦) ೧೯೯
ಸ್ವಯಂವರದಲ್ಲಿ ಯಾದವರ ಪಾತ್ರ (೧೩೩) ೨೦೩
ಭೀಮ ಪರಾಕ್ರಮ (೧೩೪) ೨೦೩
ಭೀಮನಿಂದ ಶಲ್ಯನಪರಾಭವ (೧೩೭) ೨೦೫
ಅರ್ಜುನನಿಂದ ಕರ್ಣನ ಪರಾಭವ (೧೩೯) ೨೦೬
ಕುಂತಿಯ ವಿಚಿತ್ರ ಸಂದೇಶ (೧೪೨) ೨೦೮
ಪಾಂಡವರ ಬಳಿಗೆ ಶ್ರೀಕೃಷ್ಣ (೧೪೩) ೨೦೯
ದ್ರುಪದನ ಜಿಜ್ಞಾಸೆ - ಪಾಂಡವಪರೀಕ್ಷಣ (೧೪೪) ೨೧೦
ದ್ರೌಪದಿಯ ಪಂಚಪತಿತ್ವ (೧೫೧) ೨೧೫

ವ್ಯಾಸಾಗಮನ (೧೫೨) ೨೧೬
ಪಾಂಡವ ದ್ರೌಪದಿಯರ ಸ್ವರೂಪ ಪರಿಚಯ (೧೫೪) ೨೧೮
ವ್ಯಾಸರಿಂದ ದ್ರುಪದನಿಗೆ ದಿವ್ಯದೃಷ್ಟಿ (೧೫೬) ೨೧೯
ವಿವಾಹಕ್ಕೆ ದ್ರುಪದನ ಸಮ್ಮತಿ (೧೫೭) ೨೨೦
ದ್ರೌಪದಿಯ ವಿವಾಹ ವೈಭವ (೧೫೮) ೨೨೧
ದ್ರೌಪದೀ ವಿವಾಹದಲ್ಲಿ ಕೃಷ್ಣ ವ್ಯಾಸರು (೧೬೦) ೨೨೩
ರತ್ನಮಾಲೆಗಳೊಂದಿಗೆ ದಾಸದಾಸಿಯರ ಉಡುಗೊರೆ (೧೬೪) ೨೨೬
ಪಾಂಚಾಲನಗರದ ಮೇಲೆ ಕೌರವರ ದಾಳಿ (೧೬೬) ೨೨೬
ಇಬ್ಬರು ದ್ರುಪದ ಪುತ್ರರ ಮರಣ (೧೬೭) ೨೨೭
ಮತ್ತೊಮ್ಮೆ ಭೀಮಪರಾಕ್ರಮ (೧೬೯) ೨೨೮
ಧೃತರಾಷ್ಟ್ರನ ಖೇದಮೋದಗಳು (೧೭೧) ೨೨೯
ವಿದುರನ ಹಿತೋಕ್ತಿ (೧೭೪) ೨೩೧
ಹಸ್ತಿನಾಪುರಕ್ಕೆ ಪಾಂಡವರು (೧೭೮) ೨೩೩
ಪುರಜನರ ಸಂಭ್ರಮ (೧೮೦) ೨೩೫
ಗಾಂಧಾರಿಯ ಪ್ರತಿಕ್ರಿಯೆ (೧೮೧) ೨೩೫
ಪಾಂಡವ ದ್ರೌಪದಿಯರ ವಿಚಿತ್ರ ದಾಂಪತ್ಯ (೧೮೩) ೨೩೭
ಮದುವೆಯಲ್ಲೂ ದುರ್ಯೋಧನನ ಕುತಂತ್ರ (೧೮೯) ೨೪೫
ಕರ್ಣನ ಅದ್ಭುತ ವಿಜಯ (೧೯೦) ೨೪೬
ದುರ್ಯೋಧನಾದಿಗಳ ಪಲಾಯನ (೧೯೫) ೨೪೯
ಕರ್ಣಜಯ (೧೯೬) ೨೪೯
ಪೂರ್ಣಾಂಗರಾಜನಾಗಿ ಕರ್ಣ (೧೯೮) ೨೫೦
ಲಕ್ಷಣ ಲಕ್ಷಣೆಯರ ಹುಟ್ಟು (೨೦೦) ೨೫೪
ದುಶ್ಶಾಸನನ ಮಗ (೨೦೩) ೨೫೬
ಕಳಿಂಗ ರಾಜಕುಮಾರಿಯ ಸ್ವಯಂವರ (೨೦೪) ೨೫೭
ದುರ್ಯೋಧನಾದಿಗಳ ಪರಾಭವ - ಕರ್ಣನ ಪಲಾಯನ (೨೦೫) ೨೫೭
ಭೀಮನ ಅದ್ಭುತ ಪರಾಕ್ರಮ (೨೦೬) ೨೫೮

ಇಂದ್ರಪ್ರಸ್ಥಕ್ಕೆ ಪಾಂಡವರು (೨೦೭) ೨೫೯
ಯುಧಿಷ್ಠಿರ ಪಟ್ಟಾಭಿಷೇಕದ ವೈಭವ (೨೦೯) ೨೬೦
ವ್ಯಾಸರಿಂದ ಪಟ್ಟಾಭಿಷೇಕ (೨೧೦) ೨೬೧
ಶ್ರೀಕೃಷ್ಣನಿಂದ ಪಟ್ಟಾಭಿಷೇಕ (೨೧೧) ೨೬೨
ಯುವರಾಜನಾಗಿ ಭೀಮ (೨೧೨) ೨೬೩
ಇಂದ್ರಪ್ರಸ್ಥಕ್ಕೆ ಪಾಂಡವರ ಪಯಣ (೨೧೩) ೨೬೩
ಪಾಂಡವರ ಹಿಂದೆ ಪುರಜನರು (೨೧೪) ೨೬೪
ಪುರಜನರಿಗೆ ದುರ್ಯೋಧನನ ಬೆದರಿಕೆ (೨೧೬) ೨೬೫
ಪುರಜನರ ದೃಢನಿಶ್ಚಯ (೨೧೭) ೨೬೫
ಧರ್ಮರಾಜನ ವಿನಂತಿ (೨೧೮) ೨೬೬
ಹಸ್ತಿನಾಪುರದಲ್ಲೇ ಉಳಿದ ಪಟ್ಟಣಿಗರು (೨೧೯) ೨೬೭
ವಿಶ್ವಕರ್ಮನಿಂದ ಇಂದ್ರಪ್ರಸ್ಥದ ಪುನರ್ನಿರ್ಮಾಣ (೨೨೦) ೨೬೮
ಇಂದ್ರಪುರಿಯಂತಾದ ಇಂದ್ರಪ್ರಸ್ಥ (೨೨೦) ೨೬೮
ದುರ್ಯೋಧನನಿಗೆ ರಾಜ್ಯಾಭಿಷೇಕ (೨೨೨) ೨೬೯
ಪಾಂಡವರ ಸಂಭ್ರಮ (೨೨೩) ೨೭೦

ಅಧ್ಯಾಯ - ೨೦ (ಖಾಂಡವವನದಾಹಃ) **೨೭೧-೪೩೩**

(ಕಾಳೀಸ್ವಯಂವರ, ಷಣ್ಮಹಿಷಿಯರ ವಿವಾಹ, ಧನ್ಯಾಶ್ವರ್ಯಾಖ್ಯಾನ, ನರಕಾಸುರವಧೆ, ಪಾರಿಜಾತಹರಣ, ಸುಭದ್ರಾಕಲ್ಯಾಣ, ಖಾಂಡವವನದಾಹ)

ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ - ಧರ್ಮರಾಜನ ಕಾರ್ಯ (೧) ೨೭೧
ಮಹಾರಾಣಿಯಾಗಿ ದ್ರೌಪದಿ (೨) ೨೭೨
ಅರ್ಜುನಾದಿಗಳ ಕಾರ್ಯ (೩) ೨೭೩
ಭೀಮನಿಂದ ಧರ್ಮರಾಜ್ಯ (೪) ೨೭೪
ನಕುಲ ಸಹದೇವರ ಕಾರ್ಯ (೫) ೨೭೪
ಪಾಂಡವ ಸೇನಾಧಿಪತಿಯಾಗಿ ಧೃಷ್ಟದ್ಯುಮ್ನ (೬) ೨೭೫
ಪಾಂಡವರ ರಾಜ್ಯದ ಹಿರಿಮೆ (೭) ೨೭೬

ಕೃತಯುಗವನ್ನು ಮೀರಿಸಿದ ಕಲಿಯುಗ (೧೦) ೨೭೮
ಧರ್ಮರಾಜ ದೇವಕಿಯರ ವಿವಾಹ (೧೧) ೨೭೯
ಕಾಳೀ ಸ್ವಯಂವರ (೧೨) ೨೮೦
ಭೀಮಸೇನನ ವಾದವೈಖರಿ (೧೫) ೨೮೨
ಹಸ್ತಿನಾಪುರದಲ್ಲಿ ವ್ಯಾಘ್ರೇಶ್ವರಲಿಂಗ (೨೦) ೨೮೮
ಗೋಮತೀ ತೀರದಲ್ಲಿ ಶಾರ್ದೂಲಲಿಂಗ (೨೨) ೨೮೯
ಕೇದಾರದಲ್ಲಿ ಶಿವಲಿಂಗ (೨೪) ೨೯೦
ಅಪೂರ್ವ ಭೀಮ ವಿಜಯ (೨೫) ೨೯೧
ಗಂಗೆಯ ಪಾಲಾದ ಜರಾಸಂಧ (೨೬) ೨೯೨
ಕಾಳೀಪುತ್ರ ಶರ್ವತ್ರಾತ (೨೮) ೨೯೪
ಶ್ರೀಕೃಷ್ಣನಿಂದ ಶತಧನ್ವನ ವಧೆ (೨೯) ೨೯೪
ವಿದೇಹದಲ್ಲಿ ಬಲರಾಮ - ಅವನ ಬಳಿ ದುರ್ಯೋಧನ (೩೩) ೨೯೭
ಬಲರಾಮನಲ್ಲಿ ದುರ್ಯೋಧನನ ಗದಾಭ್ಯಾಸ (೩೪) ೨೯೮
ಸುಭದ್ರೆಯನ್ನು ನೀಡಲು ದುರ್ಯೋಧನನಿಗೆ ಬಲರಾಮನ ವಾಗ್ದಾನ (೩೫) ೨೯೮
ಸುಭದ್ರೆಯ ಪೂರ್ವಾಪರ (೩೬) ೨೯೯
ಅಕ್ರೂರನ ಬಳಿ ಸ್ಯಮಂತಕಮಣಿ (೩೭) ೩೦೦
ಕಾಳಿಂದೀ ವಿವಾಹ (೪೪) ೩೦೫
ನೀಲಾದೇವಿಯ ಸ್ವಯಂವರ (೪೬) ೩೦೬
ಮಿತ್ರವಿಂದಾ ವಿವಾಹ (೪೮) ೩೦೭
ಭದ್ರಾವಿವಾಹ (೪೯) ೩೦೮
ಲಕ್ಷಣಾ ಸ್ವಯಂವರ (೫೦) ೩೦೯
ಶ್ರೀಕೃಷ್ಣನ ಅಷ್ಟಮಹಿಷಿಯರು (೬೦) ೩೧೫
ಧನ್ಯಾಶ್ಚರ್ಯಾಖ್ಯಾನ (೬೩) ೩೧೭
ಶ್ರೀಕೃಷ್ಣನ ಅದ್ಭುತ ಶಕ್ತಿಯ ಪ್ರತ್ಯಕ್ಷ (೭೮) ೩೨೯
ಸತ್ಯಭಾಮೆಯ ಪ್ರಣಯಕೋಪ (೮೩) ೩೩೩
ನರಕಾಸುರ ವಧೆಗೆ ಇಂದ್ರನ ಪ್ರಾರ್ಥನೆ (೮೫) ೩೩೪

ಪ್ರಾಗ್ಜ್ಯೋತಿಷಕ್ಕೆ ಶ್ರೀಕೃಷ್ಣನ ಪ್ರಯಾಣ (೮೬) ೩೩೫
ಸತ್ಯಭಾಮೆಯಿಂದ ಭೀಮದ್ವಾದಶೀವ್ರತ (೮೮) ೩೩೬
ನರಕಾಸುರನಿಗೆ ಬ್ರಹ್ಮವರ (೯೦) ೩೩೮
ನರಕಾಸುರನ ಮಂತ್ರಿಗಳಿಗೂ ವರ (೯೦) ೩೩೯
ನರಕಾಸುರನ ದುರ್ಗಗಳು (೯೨) ೩೩೯
ನರಕಾಸುರನ ಮಂತ್ರಿಗಳು (೯೩) ೩೪೦
ಶ್ರೀಕೃಷ್ಣನಿಂದ ಗಿರಿದುರ್ಗದ ಭೇದ (೯೪) ೩೪೦
ಮುರಾರಿಯಾದ ಕೃಷ್ಣ (೯೫) ೩೪೧
ಕೃಷ್ಣನರಕಾಸುರರ ಯುದ್ಧ (೯೮) ೩೪೨
ಕೃಷ್ಣನ ಅಸುರಮೋಹನ (೧೦೦) ೩೪೩
ಬಿಲ್ಲುಹಿಡಿದ ಭಾಮೆ (೧೦೨) ೩೪೪
ನರಕಾಸುರನ ವಧೆ (೧೦೩) ೩೪೫
ಭೂದೇವಿಯ ಪರಿಚಯ (೧೦೫) ೩೪೬
ಭಗದತ್ತನಿಗೆ ರಾಜ್ಯಾಭಿಷೇಕ (೧೦೬) ೩೪೭
ನರಕಾಸುರ ಸಂಪತ್ತು ದ್ವಾರಕೆಗೆ (೧೦೮) ೩೪೮
ಹದಿನಾರು ಸಾವಿರದ ನೂರು ಕನ್ಯೆಯರ ಪೂರ್ವಾಪರ (೧೧೧) ೩೫೦
ಸ್ವರ್ಗಕ್ಕೆ ಶ್ರೀಕೃಷ್ಣನ ಪ್ರಯಾಣ (೧೦೬) ೩೫೩
ಅದಿತಿಗೆ ಕರಣಕುಂಡಲಪ್ರಾಪ್ತಿ (೧೦೮) ೩೫೪
ನಂದನವನದಲ್ಲಿ ಸತ್ಯಭಾಮಾ ಸಮೇತನಾಗಿ ಕೃಷ್ಣ (೧೨೦) ೩೫೫
ಪಾರಿಜಾತಾಪಹರಣ (೧೨೫) ೩೫೭
ಸಕಲ ದೇವತೆಗಳ ಪರಾಭವ (೧೨೬) ೩೫೮
ಗರುಡನಿಂದ ಶಿವನ ಪರಾಭವ (೧೩೦) ೩೬೦
ಸತ್ಯಭಾಮೆ ಮಾಡಿದ ಇಂದ್ರನ ಪರಿಹಾಸ (೧೩೨) ೩೬೨
ಇಂದ್ರನ ಶರಣಾಗತಿ (೧೩೩) ೩೬೨
ಶ್ರೀಕೃಷ್ಣನಿಂದ ಇಂದ್ರನಿಗೆ ವರಪ್ರಾಪ್ತಿ (೧೩೪) ೩೬೩
ಮರಳಿ ಧರೆಗೆ ಶ್ರೀಕೃಷ್ಣ (೧೩೬) ೩೬೪

ಷೋಡಶಸ್ತ್ರೀಸಹಸ್ರೇಶನಾದ ಶ್ರೀಕೃಷ್ಣ (೧೩೯) ೩೬೫
ಶ್ರೀಕೃಷ್ಣನ ಪುತ್ರ ಪುತ್ರಿಯರು (೧೪೦) ೩೬೬
ಪ್ರದ್ಯುಮ್ನ ಸಾಂಬರ ದಿಗ್ವಿಜಯ (೧೪೩) ೩೬೮
ನಾರದರು ಕಂಡ ಶ್ರೀಕೃಷ್ಣನ ಅಪೂರ್ವ ದಾಂಪತ್ಯ (೧೪೮) ೩೭೦
ಪಾಂಡವರ ಬಳಿಗೆ ನಾರದರು (೧೪೯) ೩೭೧
ಪರಸ್ಪರ ಹತರಾದ ಸುಂದೋಪಸುಂದರು (೧೫೦) ೩೭೨
ಬ್ರಹ್ಮದೇವರ ಆದೇಶ (೧೫೨) ೩೭೩
ಅರ್ಜುನನಿಂದ ಗೋ ಬ್ರಾಹ್ಮಣ ರಕ್ಷಣೆ (೧೫೩) ೩೭೬
ಅರ್ಜುನನ ತೀರ್ಥಯಾತ್ರೆ (೧೫೪) ೩೭೭
ಉಲೂಪಿಯಲ್ಲಿ ಗರ್ಭಾದಾನ (೧೫೫) ೩೭೮
ಇರಾವಂತನ ಅವತಾರ (೧೫೬) ೩೭೮
ಅರ್ಜುನನಿಗೆ ನಿಯಮಭಂಗದೋಷವಿಲ್ಲ (೧೫೯) ೩೮೦
ಅರ್ಜುನ ಚಿತ್ರಾಂಗದೆಯರ ವಿವಾಹ (೧೬೦) ೩೮೧
ಶಚಿಯೇ ಚಿತ್ರಾಂಗದೆ (೧೬೧) ೩೮೨
ಬಭ್ರುವಾಹನನಾದ ಜಯಂತ (೧೬೨) ೩೮೩
ಅರ್ಜುನ ಮಾಡಿದ ನಕ್ರಮೋಚನ (೧೬೩) ೩೮೪
ದ್ವಾರಕೆಯ ಬಳಿ ಸನ್ಯಾಸಿಯಾಗಿ ಅರ್ಜುನ (೧೬೬) ೩೮೬
ದ್ವಾರಕೆಯಲ್ಲಿ ಅರ್ಜುನನ ಚಾತುರ್ಮಾಸ್ಯ (೧೭೦) ೩೮೯
ಸುಭದ್ರಾ ಅರ್ಜುನರ ಸಮಾಗಮ (೧೭೮) ೩೯೩
ಸುಭದ್ರಾ ಕಲ್ಯಾಣ (೧೮೪) ೩೯೭
ಸುಭದ್ರೆಯೊಂದಿಗೆ ಅರ್ಜುನನ ನಿರ್ಗಮನ (೧೮೭) ೩೯೮
ಅರ್ಜುನನ ಅದ್ಭುತ ಅಸ್ತ್ರಕೌಶಲ (೧೮೯) ೩೯೯
ಸುಭದ್ರೆಯ ಸಾರಥ್ಯ (೧೯೦) ೪೦೦
ವಿಪೃಥುವಿನ ಕೃಷ್ಣಭಕ್ತಿ (೧೯೨) ೪೦೧
ಅರ್ಜುನನ ಬಗ್ಗೆ ಕೆರಳಿದ ಯಾದವರು (೧೯೬) ೪೦೩
ಯಾದವರಿಗೆ ಶ್ರೀಕೃಷ್ಣನ ಸಂದೇಶ (೨೦೦) ೪೦೪

ಇಂದ್ರಪ್ರಸ್ಥದಲ್ಲಿ ಅರ್ಜುನ (೨೦೭) ೪೦೪
ದ್ರೌಪದೀಪುತ್ರರು (೨೧೧) ೪೧೦
ಅಭಿಮನ್ಯು ಜನನ (೨೧೩) ೪೧೨
ಪಾಂಡವರ ಪುತ್ರರಲ್ಲಿ ಅಭಿಮನ್ಯುವಿನ ಹಿರಿಮೆ (೨೧೪) ೪೧೨
ಖಾಂಡವ ವನದಲ್ಲಿ ಕೃಷ್ಣಾರ್ಜುನರು (೨೧೫) ೪೧೩
ಅಗ್ನಿಯಿಂದ ಅನ್ನಯಾಚನೆ (೨೧೭) ೪೧೪
ಅಗ್ನಿಗೆ ಅಜೀರ್ಣವಾದದ್ದು (೨೧೮) ೪೧೫
ಅಗ್ನಿಯಿಂದ ಕೃಷ್ಣನಿಗೆ ಚಕ್ರ ಸಮರ್ಪಣೆ (೨೨೩) ೪೧೮
ಅರ್ಜುನನಿಗೆ ಗಾಂಡೀವಾದಿ ಸಮರ್ಪಣೆ (೨೨೫) ೪೧೯
ಗಾಂಡೀವ ಬ್ರಹ್ಮಧನುಸ್ಸು (೨೨೬) ೪೨೦
ಶ್ರೀರಾಮನ ರಥ (೨೨೭) ೪೨೧
ಧ್ವಜದಲ್ಲಿ ಹನುಮಂತ (೨೨೮) ೪೨೨
ಖಾಂಡವವನ ದಹನ (೨೩೧) ೪೨೩
ಇಂದ್ರಾರ್ಜುನರ ಯುದ್ಧ (೨೩೩) ೪೨೪
ಅರ್ಜುನನಿಗೆ 'ಕೃಷ್ಣ' ಎಂಬ ಹೆಸರು (೨೩೬) ೪೨೬
ಖಾಂಡವ ವನದಲ್ಲಿ ಉಳಿದವರು (೨೩೮) ೪೨೭
ಜರಿತಾರಿ ಮೊದಲಾದ ನಾಲ್ಕು ಪಕ್ಷಿಗಳು - ಅಶ್ವಸೇನ (೨೩೯) ೪೨೮
ಮಯಾಸುರನ ಶರಣಾಗತಿ (೨೪೧) ೪೩೦
ಮಯನ ಪ್ರಾರ್ಥನೆ (೨೪೩) ೪೩೧
ಸಭಾ ನಿರ್ಮಾಣಕ್ಕೆ ಶ್ರೀಕೃಷ್ಣನ ಆದೇಶ (೨೪೪) ೪೩೨
ಇಂದ್ರಪ್ರಸ್ಥಕ್ಕೆ ಮರಳಿದ ಕೃಷ್ಣಾರ್ಜುನರು (೨೪೫) ೪೩೩

ಅಧ್ಯಾಯ - ೨೧ (ಪಾಂಡವವನವಾಸಗಮನಮ್) **೪೩೪-೪೫೨**

(ದಿನಾಶ್ವಮೇಧಯಾಗ, ಜರಾಸಂಧವಧೆ, ರಾಜಸೂಯಯಾಗ, ಶಿಶುಪಾಲವಧೆ, ಮಯಸಭೆ, ದ್ಯೂತ, ಅನುದ್ಯೂತ, ವನವಾಸಗಮನ)

ಮಯೆಸಭೆಯ ನಿರ್ಮಾಣ (೧) ೪೩೪

ಮಯನಿಂದ ಭೀಮಸೇನನಿಗೆ ಗದಾ ಸಮರ್ಪಣೆ (೨) ೪೩೫
ದ್ವಾರಕೆಗೆ ಶ್ರೀಕೃಷ್ಣ (೩) ೪೩೫
ಸ್ಯಮಂತಪಂಚಕದಲ್ಲಿ ವಸುದೇವನಿಂದ ಶ್ರೀಕೃಷ್ಣ ಮಾಡಿಸಿದ ಯಜ್ಞ (೪) ೪೩೬
ಶ್ರೀಕೃಷ್ಣ ಮಾಡಿದ ಏಕಾಹಯಜ್ಞ (ಮಹಾಶ್ವಮೇಧಯಜ್ಞ) (೧೧) ೪೩೮
ಶ್ರೀಕೃಷ್ಣ ನಿರ್ಮಿಸಿದ ಅಶ್ವದ ಹಿರಿಮೆ (೧೪) ೪೩೯
ವಿಪ್ರಾಗಮನ (೧೫) ೪೪೦
ವಿಪ್ರ ಶಿಶುವಿನ ರಕ್ಷಣೆಗೆ ಅರ್ಜುನನ ಪ್ರತಿಜ್ಞೆ (೧೬) ೪೪೦
ಅರ್ಜುನನ ದರ್ಪ (೧೮) ೪೪೧
ಕೃಷ್ಣ ನೀಡಿದ ಎಚ್ಚರಿಕೆ (೨೦) ೪೪೨
ಅರ್ಜುನನ ಅಗ್ನಿಪ್ರವೇಶದ ಪ್ರತಿಜ್ಞೆ (೨೨) ೪೪೩
ಅನಿರುದ್ಧನ ಸ್ವರೂಪ (೨೩) ೪೪೪
ಅರ್ಜುನನ ವೈಫಲ್ಯ - ಶ್ರೀಕೃಷ್ಣನಲ್ಲಿ ಶರಣಾಗತಿ (೨೭) ೪೪೫
ಅರ್ಜುನನೊಂದಿಗೆ ಕೃಷ್ಣನ ಅನಂತಾಸನ ಪ್ರಯಾಣ (೨೮) ೪೪೬
ಕೃಷ್ಣನ ಪ್ರಯಾಣ ವೈಭವ (೨೯) ೪೪೭
ಮೂಲರೂಪದಲ್ಲಿ ಕೃಷ್ಣನ ಐಕ್ಯ (೩೦) ೪೪೮
ವಿಪ್ರಪುತ್ರರೊಂದಿಗೆ ಕೃಷ್ಣನ ಆಗಮನ (೩೨) ೪೪೯
ಮರಳಿ ದ್ವಾರಕೆಗೆ (೩೪) ೪೫೦
ಕೃಷ್ಣನಿಂದ ದಂತವಕ್ರ ವಿಡೂರಥರ ವಧೆ (೩೭) ೪೫೨
ವಿಜಯನಿಗೆ ಸದ್ಗತಿ (೩೯) ೪೫೪
ಭೂಗೋಳ ವರ್ಣನೆ (೪೦) ೪೫೫
ಲೋಕಾಲೋಕಪ್ರದೇಶ (೪೫) ೪೫೭
ಬ್ರಹ್ಮಾಂಡದ ಪರಿಮಾಣ (೩೬) ೪೫೮
ಬ್ರಹ್ಮಾಂಡದ ಆವರಣಗಳು (೪೭) ೪೬೦
ಶ್ರೀಹರಿಯ ಅಪೂರ್ವ ಮಾಹಾತ್ಮ್ಯ (೪೮) ೪೬೧
ರಾಜಸೂಯ ಯಾಗಕ್ಕೆ ಪಾಂಡುವಿನ ಸಂದೇಶ (೫೩) ೪೬೨
ಚತುರ್ದಶ ಲೋಕಗಳು (೫೪) ೪೬೩

ದಿಕ್ಪಾಲಕ ಸಭಾವರ್ಣನೆ - ಇಂದ್ರಸಭೆಯಲ್ಲಿ ಹರಿಶ್ಚಂದ್ರ (೬೩) ೪೬೬
ಯಮಸಭೆಯಲ್ಲಿ ಪಾಂಡುರಾಜ; ಯಮಸಭೆ ಇಂದ್ರಸಭೆಗಳಲ್ಲಿ ರಾಮವಾಮನರು ಉಪಾಸ್ಯರು (೬೪) ೪೬೬
ಬ್ರಹ್ಮಸಭೆಯಲ್ಲಿ ಸಕಲ ಪ್ರಾದುರ್ಭಾವಗಳು - ವರುಣಸಭೆಯಲ್ಲಿ ಮತ್ಸ್ಯ (೬೬) ೪೬೭
ಕುಬೇರಸಭೆಯಲ್ಲಿ ಕಲ್ಕಿ - ಈಶಾನ್ಯದಲ್ಲಿ ನೃಸಿಂಹ (೬೭) ೪೬೭
ರಾಜಸೂಯ ಯಾಗಕ್ಕೆ ಪಾಂಡುರಾಜನ ಆದೇಶ (೭೦) ೪೬೮
ರಾಜಸೂಯಯಾಗಕ್ಕೆ ಮಂತ್ರಾಲೋಚನೆ (೭೨) ೪೬೯
ಶ್ರೀಕೃಷ್ಣನ ಬಳಿಗೆ ದೂತಪ್ರೇಷಣ (೭೩) ೪೬೯
ಬಂಧಿತ ರಾಜರ ಪ್ರಾರ್ಥನೆ (೭೫) ೪೭೦
ಇಂದ್ರಪ್ರಸ್ಥಕ್ಕೆ ಶ್ರೀಕೃಷ್ಣ (೭೮) ೪೭೧
ಶ್ರೀಕೃಷ್ಣನಲ್ಲಿ ಪಾಂಡವರ ಪ್ರಾರ್ಥನೆ (೭೯) ೪೭೨
ರಾಜಸೂಯ ಯಾಗದ ಹಿರಿಮೆ (೮೦) ೪೭೨
ಪರಾವಹನಿಗೆ ಇಂದ್ರಶಾಪ (೮೪) ೪೭೫
ಜರಾಸಂಧ ವಧೆ ಅನಿವಾರ್ಯ (೯೦) ೪೭೮
ಯಾಗ ಮಾಡಲು ಧರ್ಮರಾಜನ ಸಂದೇಹ (೯೨) ೪೭೯
ಭೀಮಸೇನನ ಸಂದೇಶ (೯೪) ೪೮೦
ಜರಾಸಂಧ ವಧೆಯ ಮಹತ್ತ್ವ (೯೮) ೪೮೩
ಜರಾಸಂಧನನ್ನು ಕೊಲ್ಲುವವನು ಭಾವಿಬ್ರಹ್ಮ (೧೦೧) ೪೮೪
ಜರಾಸಂಧ ವಧೆಗೆ ಭೀಮಸೇನನ ನಿರ್ಣಯ (೧೦೪) ೪೮೬
ಧರ್ಮರಾಜನ ಗೊಂದಲ (೧೦೭) ೪೮೭
ಭೀಮ ಹೇಳಿದ ಕೃಷ್ಣಮಹಿಮೆ (೧೧೧) ೪೮೯
ಶ್ರೀಕೃಷ್ಣ ನೀಡಿದ ಆಶ್ವಾಸನೆ (೧೧೬) ೪೯೧
ಭೀಮಾರ್ಜುನರೊಂದಿಗೆ ಜರಾಸಂಧವಧೆಗಾಗಿ ಶ್ರೀಕೃಷ್ಣನ ಪಯಣ (೧೨೧) ೪೯೩
ಕೃಷ್ಣ ಮೊದಲಾದವರಿಂದ ಜರಾಸಂಧನ ಗಿರಿಲಿಂಗಭೇದನ (೧೨೨) ೪೯೪
ಜರಾಸಂಧನ ಬಳಿಗೆ ಕೃಷ್ಣ ಭೀಮಾರ್ಜುನರು (೧೨೪) ೪೯೭
ಜರಾಸಂಧನೊಂದಿಗೆ ಮಾತುಕತೆ (೧೨೬) ೪೯೮

ಜರಾಸಂಧನಿಗೆ ಕೃಷ್ಣಸಂದೇಶ (೧೨೮) ೪೯೯
ಜರಾಸಂಧನ ದುರಾಗ್ರಹ (೧೩೧) ೫೦೧
ಕೃಷ್ಣಾದಿಗಳ ವಿಪ್ರವೇಷಕ್ಕೆ ಕಾರಣ (೧೩೫) ೫೦೨
ಅರ್ಜುನನ ಗರ್ವಭಂಗ (೧೪೦) ೫೦೪
ಕೃಷ್ಣನಿಗೆ ಅಂಜಿದ ಜರಾಸಂಧ (೧೪೫) ೫೦೭
ಸಹದೇವನಿಗೆ ರಾಜ್ಯಾಭಿಷೇಕ (೧೫೦) ೫೦೯
ಭೀಮ ಜರಾಸಂಧರ ಭಯಂಕರ ಯುದ್ಧ (೧೫೧) ೫೧೦
ವಾಗ್ಯುದ್ಧದಲ್ಲಿ ಜರಾಸಂಧನ ಪರಾಜಯ (೧೫೩) ೫೧೧
ಗದೆಗಳು ಪುಡಿಯಾದವು (೧೫೪) ೫೧೨
ಭೀಮನಿಂದ ಜರಾಸಂಧವಧೆ (೧೫೮) ೫೧೫
ಜರಾಸಂಧ ವಧೆಯಿಂದ ಕೃಷ್ಣನ ವಿಶೇಷಾನುಗ್ರಹ (೧೬೩) ೫೧೮
ಸಹದೇವನಿಗೆ ರಕ್ಷಣೆ (೧೬೬) ೫೨೧
ಸಹದೇವನಿಂದ ರಥಸಮರ್ಪಣೆ (೧೬೭) ೫೨೨
ಸಹದೇವನ ಪತ್ನಿಯಾಗಿ ಸಹದೇವನ ತಂಗಿ (೧೬೮) ೫೨೨
ಮರಳಿ ಇಂದ್ರಪ್ರಸ್ಥಕ್ಕೆ (೧೭೨) ೫೨೬
ಶ್ರೀವ್ಯಾಸಾಗಮನ - ರಾಜಸೂಯಕ್ಕೆ ಅನುಜ್ಞೆ (೧೭೪) ೫೨೭
ರಾಜಸೂಯದಲ್ಲಿ ಭೀಮನ ಪಾತ್ರ (೧೭೫) ೫೨೮
ಅರ್ಜುನಾದಿಗಳ ಪಾತ್ರ (೧೭೯) ೫೩೨
ಅರ್ಜುನನ ದಿಗ್ವಿಜಯ ಕಾತರ (೧೮೦) ೫೩೩
ಶ್ರೀವ್ಯಾಸರ ಹಿತೋಕ್ತಿ (೧೮೧) ೫೩೩
ಭೀಮನಿಂದ ಮಾತ್ರ ಪೂರ್ವ ದಿಗ್ವಿಜಯ ಸಾಧ್ಯ (೧೮೨) ೫೩೩
ಭೀಮಸೇನನ ಅಪೂರ್ವ ಪೂರ್ವ ದಿಗ್ವಿಜಯ (೧೯೨) ೫೩೯
ಶಿಶುಪಾಲನ ಶರಣಾಗತಿ (೧೯೩) ೫೩೯
ಪೌಂಡ್ರಕ ಕರ್ಣಾದಿಗಳ ಪರಾಭವ - ಹಿಮಾಲಯ ಶಿಖರದಲ್ಲಿ ಗರುಡ
ಶೇಷಾದಿಗಳ ಪರಾಭವ (೧೯೫) ೫೪೦
ಬಾಣಾಸುರ ಪರಾಭವ (೧೯೮) ೫೪೧

ಮರಳಿ ಇಂದ್ರಪ್ರಸ್ಥಕ್ಕೆ (೨೦೧)	೫೪೨
ಭೀಮಸೇನನಿಂದ ಯಜ್ಞಸಿದ್ಧತೆ (೨೦೬)	೫೪೪
ಸಹದೇವನ ದಕ್ಷಿಣ ದಿಗ್ವಿಜಯ (೨೦೯)	೫೪೪
ರುಗ್ಮಿಯಿಂದ ಕಾಣಿಕೆ ಸಮರ್ಪಣೆ (೨೧೦)	೫೪೫
ಘಟೋತ್ಕಚನ ಮೂಲಕ ವಿಭೀಷಣನಿಂದ ಕಪ್ಪ ಕಾಣಿಕೆ (೨೧೩)	೫೪೬
ನಕುಲನ ಪಶ್ಚಿಮ ದಿಗ್ವಿಜಯ (೨೧೬)	೫೪೮
ಅರ್ಜುನನ ಉತ್ತರ ದಿಗ್ವಿಜಯ (೨೧೭)	೫೪೮
ಭಗದತ್ತನ ಪರಾಜಯ (೨೧೯)	೫೫೦
ಅರ್ಜುನನಿಂದ ಸಮಸ್ತ ದಿಗ್ವಿಜಯ (೨೨೩)	೫೫೨
ಭೀಮಾದಿಗಳು ತಂದ ಐಶ್ವರ್ಯರಾಶಿ (೨೨೬)	೫೫೪
ವಿಶ್ವಕರ್ಮ ಸಭೆಯ ಅಪೂರ್ವತೆ (೨೨೮)	೫೫೫
ರಾಜಸೂಯ ಯಾಗದ ಪ್ರಾರಂಭ (೨೨೯)	೫೫೫
ಯುಧಿಷ್ಠಿರನ ಯಜ್ಞದೀಕ್ಷೆ (೨೩೦)	೫೫೬
ಯಜ್ಞಪತ್ನಿಯಾಗಿ ದ್ರೌಪದಿ (೨೩೧)	೫೫೭
ಯಜ್ಞವೈಭವ (೨೩೨)	೫೫೮
ಯಜ್ಞದಲ್ಲಿ ಪಾಲ್ಗೊಂಡವರು (೨೩೩)	೫೫೮
ರಾಜಸೂಯಯಜ್ಞದಲ್ಲಿ ನಡೆದ ಅಪೂರ್ವ ಜ್ಞಾನಯಜ್ಞ (೨೩೬)	೫೫೯
ಅಗ್ರಪೂಜೆಯ ಜಿಜ್ಞಾಸೆ (೨೩೮)	೫೬೧
ಶ್ರೀಕೃಷ್ಣನಿಗೆ ಅಗ್ರಪೂಜೆ (೨೪೪)	೫೬೪
ಶಿಶುಪಾಲನ ಆಕ್ಷೇಪ (೨೫೧)	೫೬೯
ಭೀಮನ ಭಗವನ್ನಿಷ್ಠೆ (೨೫೨)	೫೭೦
ಕೃಷ್ಣ ಶಿಶುಪಾಲರ ಯುದ್ಧ - ಕೃಷ್ಣನಿಂದ ಶಿಶುಪಾಲನ ವಧೆ (೨೫೭)	೫೭೩
ಜಯನಿಗೆ ಸದ್ಗತಿ (೨೫೯)	೫೭೩
ರಾಜಸೂಯ ಯಾಗದ ವೈಭವ (೨೬೦)	೫೭೪
ಅವಭೃಥಸ್ನಾನ (೨೬೩)	೫೭೬
ದುರ್ಯೋಧನ ಮಾನಭಂಗ (೨೬೫)	೫೭೭

ಭೀಮ ದ್ರೌಪದಿಯರ ಪರಿಹಾಸ (೨೭೭) ೫೮೭
ದುರ್ಯೋಧನನ ಅವಿವೇಕ (೨೭೮) ೫೮೪
ದುರ್ಯೋಧನನ ಸಂತಾಪ (೨೭೯) ೫೮೫
ದುರ್ಯೋಧನನ ಮಾತ್ಸರ್ಯ (೨೮೨) ೫೮೭
ದ್ವೇಷಕ್ಕೆ ನೀರೆರೆದ ಶಕುನಿ (೨೮೩) ೫೮೮
ಹೆಚ್ಚಿದ ದುರ್ಯೋಧನನ ವೈರ (೫೮೫) ೫೮೮
ಶಕುನಿಯಿಂದ ಜೂಜಿಗೆ ಸಲಹೆ (೨೮೭) ೫೮೯
ಧೃತರಾಷ್ಟ್ರನ ಬಳಿ ಶಕುನಿದುರ್ಯೋಧನರು (೨೯೦) ೫೯೦
ಧೃತರಾಷ್ಟ್ರನ ಹಿತೋಕ್ತಿ (೨೯೨) ೫೯೦
ದುರ್ಯೋಧನನ ದುರಾಗ್ರಹ (೨೯೪) ೫೯೧
ಧೃತರಾಷ್ಟ್ರನ ಪುತ್ರವ್ಯಾಮೋಹ (೨೯೮) ೫೯೩
ವಿದುರನ ಹಿತೋಕ್ತಿ (೩೦೧) ೫೯೪
ವಿದುರನ ಮೂಲಕ ದ್ಯೂತಕ್ಕೆ ಆಹ್ವಾನ (೩೦೩) ೫೯೫
ಸಾಲ್ವನ ತಾಮಸ ತಪಸ್ಸು (೩೦೪) ೫೯೫
ಸಾಲ್ವನನ್ನು ಎದುರಿಸಲು ಪ್ರದ್ಯುಮ್ನಾದಿಗಳ ಪ್ರಯಾಣ (೩೦೯) ೫೯೭
ಜೂಜಿಗೆ ನಡೆದ ಧರ್ಮಮೂರ್ತಿ (೩೧೦) ೫೯೮
ಧರ್ಮರಾಜನ ಅಧಾರ್ಮಿಕ ಪ್ರತಿಜ್ಞೆ (೩೧೪) ೫೯೯
ಜೂಜಿನ ಸಭೆಗೆ ಪಾಂಡವರು (೩೧೬) ೬೦೧
ಜೂಜಿನಲ್ಲಿ ಯುಧಿಷ್ಠಿರನ ವಿಚಿತ್ರ ಪರಾಭವ (೩೧೯) ೬೦೨
ದ್ರೌಪದಿಯ ಬಳಿಗೆ ಪ್ರಾತಿಕಾಮಿ (೩೨೧) ೬೦೫
ದ್ಯೂತಸಭೆಗೆ ದ್ರೌಪದಿ (೩೨೨) ೬೦೫
ಭೀಷ್ಮಾದಿಗಳಿಗೆ ದ್ರೌಪದಿಯ ಪ್ರಶ್ನೆ (೩೨೩) ೬೦೬
ದ್ರೌಪದಿಯ ಧರ್ಮಜಿಜ್ಞಾಸೆ (೩೨೪) ೬೦೬
ಭೀಷ್ಮಾದಿಗಳ ಅಧಾರ್ಮಿಕ ವರ್ತನೆ (೩೨೮) ೬೦೯
ವಿದುರನ ಧರ್ಮನಿಷ್ಠೆ (೩೨೯) ೬೧೦
ವಿಕರ್ಣನ ಡಾಂಭಿಕತೆ (೩೩೨) ೬೧೧

ಭೀಮಸೇನನ ಯುಧಿಷ್ಠಿರ ಶಾಸನ (೫೩೩) ೬೧೨
ಕರ್ಣನ ವಿಕೃತವರ್ತನೆ - ದುರ್ಯೋಧನನ ಭೇದತಂತ್ರ (೫೩೬) ೬೧೪
ದುರ್ಯೋಧನನ ಭೇದನೀತಿ (೫೩೭) ೬೧೪
ಭೀಮಸೇನನ ವೀರಾವೇಶ (೫೩೮) ೬೧೫
ಭೀಮನಿಂದ ಸಭೆಯ ಕಂಪನ (೫೪೦) ೬೧೬
ಭೀಷ್ಮಾದಿಗಳ ಶರಣಾಗತಿ (೫೪೧) ೬೧೭
ಭೀಮನ ಸಹನೆಯ ಮರ್ಮ (೫೪೨) ೬೧೭
ಭೀಮನ ಊರುಭಂಗ ಪ್ರತಿಜ್ಞೆ (೫೪೪) ೬೧೮
ಭೀಮನ ಭಯಂಕರ ಶಪಥ (೫೪೬) ೬೧೯
ಮತ್ತೊಮ್ಮೆ ಕರ್ಣನ ಅಪಚಾರ (೫೪೮) ೬೨೦
ಪಾಂಡವ ವಸ್ತ್ರಾಪಹರಣಕ್ಕೆ ದುರ್ಯೋಧನನ ಆದೇಶ (೫೫೦) ೬೨೧
ಪಾಂಡವರ ಅಪೂರ್ವ ಸಹನೆ (೫೫೨) ೬೨೧
ದ್ರೌಪದೀವಸ್ತ್ರಾಪಹರಣಕ್ಕೆ ದುಃಶಾಸನನ ಪ್ರಯತ್ನ (೫೫೩) ೬೨೨
ದುಃಶಾಸನನ ವಧೆಗೆ ಭೀಮನ ಭಯಂಕರ ಪ್ರತಿಜ್ಞೆ (೫೫೪) ೬೨೩
ಶ್ರೀಕೃಷ್ಣನಿಂದ ಅಕ್ಷಯವಸ್ತ್ರಪ್ರದಾನ (೫೫೫) ೬೨೪
ಶಾಂತನಾದ ದುಃಶಾಸನ (೫೫೬) ೬೨೫
ದುರ್ಯೋಧನನ ಮಹಾಪಚಾರ (೫೫೭) ೬೨೬
ದ್ರೌಪದಿಯ ಭೀಮಪ್ರತಿಜ್ಞೆ (೫೫೮) ೬೨೬
ಭೀಮನ ಧರ್ಮಸಂದೇಶ (೫೬೧) ೬೩೧
ಭೀಮನ ಉಗ್ರರೂಪ (೫೬೪) ೬೩೩
ದುಃಶಕುನಗಳ ಸರಮಾಲೆ (೫೬೬) ೬೩೩
ವಿದುರನ ಹಿತೋಕ್ತಿ (೫೬೮) ೬೩೪
ಧೃತರಾಷ್ಟ್ರನ ವರಪ್ರದಾನ (೫೭೨) ೬೩೬
ವರಸ್ವೀಕಾರ ಪ್ರಸಂಗದಲ್ಲೂ ದ್ರೌಪದಿಯ ಧರ್ಮನಿಷ್ಠೆ (೫೭೭) ೬೩೮
ಇಂದ್ರಪ್ರಸ್ಥದತ್ತ ಪಾಂಡವರು (೫೮೨) ೬೪೦
ದುಃಶಾಸನ ನೀಡಿದ ಅನುದ್ಯೂತದ ಸಲಹೆ (೫೮೩) ೬೪೦

ಮತ್ತೊಮ್ಮೆ ದ್ಯೂತ (೩೮೫) ೬೪೦
ಅನುದ್ಯೂತದಲ್ಲಿ ಯುಧಿಷ್ಠಿರನ ಪರಾಭವ (೩೮೯) ೬೪೨
ದುರ್ಯೋಧನನ ಪೈಶಾಚಿಕ ತೃಪ್ತಿ (೩೯೦) ೬೪೨
ಪ್ರಾಣ ತೆಗೆದ ನಗು (೩೯೨) ೬೪೩
ಕೌರವರ ದ್ರೋಣ ಶರಣಾಗತಿ (೩೯೪) ೬೪೪
ದ್ರೋಣರಿಂದ ಕೌರವರಿಗೆ ಅಭಯ (೩೯೫) ೬೪೫
ದುರ್ಯೋಧನನ ಮತ್ತೊಂದು ಅವಿವೇಕ (೩೯೭) ೬೪೫
ಊರು ಭಂಗಕ್ಕೆ ಭೀಮನ ಮತ್ತೊಂದು ಶಪಥ (೩೯೮) ೬೪೬
ಕುಂತಿಯ ವ್ಯಥೆ (೩೯೯) ೬೪೭
ಪಾಂಡವರ ಅಪೂರ್ವ ವನಗಮನ (೪೦೦) ೬೪೮
ಶತ್ರುಸಂಹಾರಕ್ಕೆ ತೋಳುಗಳೇ ಸಾಕು (೪೦೧) ೬೪೯
ದ್ರೌಪದಿಯ ಮುಕ್ತಕೇಶದ ಮರ್ಮ (೪೦೨) ೬೪೯
ಅರ್ಜುನನ ವಿಚಿತ್ರ ಸಂದೇಶ (೪೦೩) ೬೫೦
ನಾಚಿ ತಲೆಬಾಗಿದ ನಕುಲ ಸಹದೇವರು (೪೦೪) ೬೫೦
ಧೌಮ್ಯರಿಂದ ಪ್ರೇತಸಂಸ್ಕಾರಸೂಕ್ತಗಳ ಪಠನೆ (೪೦೫) ೬೫೦
ಪಾಂಡವರ ಹಿಂದೆ ಹಸ್ತಿನಾಪುರದ ಜನತೆ (೪೦೬) ೬೫೧
ಗಂಗಾತೀರದಲ್ಲಿ ಗಂಗಾಜನಕನ ಸ್ಮರಣೆಯಲ್ಲಿ ಪಾಂಡವರು (೪೦೭) ೬೫೧

ಪರಿಶಿಷ್ಟ **೬೫೩ – ೬೬೬**

೧. ದಕ್ಷಿಣಾರೂಪದ ಬಗ್ಗೆ ಕೆಲವು ವಿಶೇಷಾಂಶಗಳು ೬೫೩ - ೬೫೫
೨. 'ಅಯಮಗ್ನೇ ಜರಿತಾ...' ಸೂಕ್ತ ೬೫೬

*****

ಮುನ್ನುಡಿ

ಶ್ರೀಮಧ್ವಾಚಾರ್ಯ(ಕ್ರಿ.ಶ. ೧೨೦೦–೧೨೭೮)ಪ್ರಣೀತವಾದ ಮಹಾಭಾರತತಾತ್ಪರ್ಯ–ನಿರ್ಣಯ ವ್ಯಾಸಭಾರತವನ್ನು ಕುರಿತ ಗ್ರಂಥಗಳಲ್ಲೆಲ್ಲ ಅತ್ಯಂತಪರಿಪೂರ್ಣವಾದ ಕೃತಿ. ವ್ಯಾಸಭಾರತದ ಕಥಾಸಂಗ್ರಹದೊಂದಿಗೆ ಅಲ್ಲಿಯ ಧರ್ಮಸೂಕ್ಷ್ಮಗಳ ವಿವೇಚನೆ, ತಾತ್ತ್ವಿಕವಿಚಾರಗಳ ಅವಲೋಕನ, ವಿವಧಪಾತ್ರಗಳ ಸ್ವಭಾವಚಿತ್ರಣ, ಪ್ರತಿಹಂತದಲ್ಲೂ ವ್ಯಕ್ತವಾಗುವ ಭಗವಂತನ ಮಹಿಮಾತಿಶಯಗಳನ್ನು ಸ್ಫುಟಪಡಿಸುವ ಅನನ್ಯಕೃತಿ ಎಂಬುದು ಇದರ ಹಿರಿಮೆ. ವ್ಯಾಸೋತ್ತರಕಾಲದ ಕೃತಿಗಳಲ್ಲೆಲ್ಲ ಅಗ್ರಮಾನ್ಯವೆನ್ನಿಸುವ ಸರ್ವೋತ್ಕೃಷ್ಟಕೃತಿ ಇದು.

ಪ್ರಸುತ ಸಂಪುಟವು ಮಹಾಭಾರತತಾತ್ಪರ್ಯನಿರ್ಣಯ ಗ್ರಂಥದ ಅನುವಾದದ ತೃತೀಯ ಸಂಪುಟ. ಕಳೆದ ಸಂಪುಟದಲ್ಲಿ ರುಗ್ಮಿಣೀಕಲ್ಯಾಣಾದಿ ವಿವರಗಳಿಂದ ಕೂಡಿದ ೧೭ನೇ ಅಧ್ಯಾಯದೊಂದಿಗೆ ಹತ್ತರಿಂದ ಹದಿನೇಳನೆಯ ಅಧ್ಯಾಯದವರೆಗಿನ ಒಟ್ಟು ಎಂಟು ಅಧ್ಯಾಯಗಳ ಅನುವಾದವನ್ನು ಕೊಡಲಾಗಿತ್ತು. ಈ ಸಂಪುಟದಲ್ಲಿ ೧೮ ರಿಂದ ೨೧ರವರೆಗೆ ಒಟ್ಟು ೪ ಅಧ್ಯಾಯಗಳ ಅನುವಾದವನ್ನು ನೀಡಲಾಗಿದೆ.

ಹದಿನೆಂಟನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೧೬೧)

ಈ ಅಧ್ಯಾಯದಲ್ಲಿ ಕುರುಪಾಂಡವರ ಅಸ್ತ್ರವಿದ್ಯಾಭ್ಯಾಸ ಪೂರೈಸಿದ್ದು ಅವರಲ್ಲಿ ಅರ್ಜುನ ಸರ್ವಶ್ರೇಷ್ಠ ಧನುರ್ಧಾರಿಯೆನಿಸಿದ್ದು ಭೀಮನು ಅಸ್ತ್ರವಿದ್ಯೆಯನ್ನು ಪರಿಪೂರ್ಣವಾಗಿ ಸ್ವಯಂಪ್ರತಿಭೆಯಿಂದ ತಿಳಿದವನಾಗಿದ್ದರೂ ಅದನ್ನು ಪ್ರಯೋಗಿಸದಿರಲು ಕಾರಣ, ಬಗೆಬಗೆಯ ಧರ್ಮಸೂಕ್ಷ್ಮಗಳಲ್ಲಿ ಭೀಮಸೇನನ ಪರಿಪೂರ್ಣವಾದ ಕೌಶಲ, ಸ್ತ್ರೀಯರಲ್ಲಿ ದ್ರೌಪದೀ ಭೀಮನಂತೆ ಶುದ್ಧಭಾಗವತಧರ್ಮರತಳು ಎಂಬುದರ ನಿರೂಪಣೆ, ಬಲರಾಮ, ಅಶ್ವತ್ಥಾಮ, ಅರ್ಜುನ, ಯುಧಿಷ್ಠಿರ, ವಿದುರ, ಭೀಷ್ಮದ್ರೋಣಾದಿಗಳು, ನಕುಲಸಹದೇವಾದಿಗಳು ಮೊದಲಾಗಿ ಇತರರೆಲ್ಲ ಶ್ರೇಷ್ಠದೇವಾಂಶಸಂಭೂತರಾಗಿದ್ದರೂ ಮೂಲರೂಪದಲ್ಲಿ ಹೇಗೋ ಹಾಗೆ ಅವತಾರರೂಪದಲ್ಲೂ ಸಹ ಧರ್ಮಚ್ಯುತಿಗೆ ಒಳಗಾದವರು ಎಂಬುದರ ನಿರೂಪಣೆ, ಮಹಾಲಕ್ಷ್ಮಿ ಬ್ರಹ್ಮ ವಾಯುಗಳು ಹಾಗೂ ಸರಸ್ವತೀ ಭಾರತಿಯರು ಮಾತ್ರ ಪರಶುಕ್ಲತ್ರಯರು ಎಂಬ ವಿಶಿಷ್ಟ ಪ್ರಮೇಯದ ನಿರೂಪಣೆ, ಅಸ್ತ್ರವಿದ್ಯಾಭ್ಯಾಸ ಪೂರೈಸಿದ ಕುರುಪಾಂಡವರ ಪರೀಕ್ಷೆ, ಅದರಲ್ಲಿ ವ್ಯಕ್ತವಾದ ಅರ್ಜುನನ ಹಿರಿಮೆ, ಕರ್ಣನ ರಂಗಪ್ರವೇಶ, ಅರ್ಜುನನನ್ನೂ ಮೀರಿಸಿದ ಅವನ ಅಸ್ತ್ರಕೌಶಲ, ಕರ್ಣ ಸೂತಪುತ್ರನೆಂದು ಗುರುತಿಸಿದ ಭೀಮಸೇನನ ಪೂರ್ಣಪ್ರಜ್ಞತ್ವ, ದುರ್ಯೋಧನನು ಕರ್ಣನಿಗೆ ನೀಡಿದ ಅರ್ಧಾಂಗರಾಜ್ಯ, ಕರ್ಣಾರ್ಜುನರ ಗೆಲುವಿಗಾಗಿ ಭೀಮದುರ್ಯೋಧನರ ದೃಢನಿರ್ಧಾರ, ದ್ರುಪದನನ್ನು ಸೆರೆಹಿಡಿದು ಒಪ್ಪಿಸುವ ಮೂಲಕ

3-6-2006

ಗುರುದಕ್ಷಿಣೆ ಸಲ್ಲಿಸಲು ದ್ರೋಣರ ಅಪೇಕ್ಷೆ, ಆ ಕಾರ್ಯದಲ್ಲಿ ಕರ್ಣಸಮೇತರಾದ ಕೌರವರ ವೈಫಲ್ಯ, ಭೀಮಾರ್ಜುನರ ಅದ್ಭುತ ಪರಾಕ್ರಮ, ಭೀಮನ ಸಹಕಾರದಿಂದ ಅರ್ಜುನ ದ್ರುಪದನನ್ನು ಸೆರೆಹಿಡಿದು ದ್ರೋಣರಿಗೆ ಒಪ್ಪಿಸಿದ್ದು, ದ್ರುಪದನ ಅರ್ಧರಾಜ್ಯವನ್ನು ಕಿತ್ತುಕೊಂಡು ದ್ರೋಣರಿಂದ ಅವನ ಬಿಡುಗಡೆ, ಪರಾಭವದಿಂದ ಕೆರಳಿ ದ್ರುಪದ ಯಾಜೋಪಯಾಜರ ನೇತೃತ್ವದಲ್ಲಿ ಯಜ್ಞ ಮಾಡಿ ಧೃಷ್ಟದ್ಯುಮ್ನ,ದ್ರೌಪದಿಯರನ್ನು ಪಡೆದದ್ದು ಭಾರತಿಯ ಅವತಾರರಾದ ದ್ರೌಪದಿಯ ಅಸಾಧಾರಣವಾದ ಹಿರಿಮೆ, ಅವರಲ್ಲಿ ಪಾರ್ವತ್ಯಾದಿ ದೇವತಾಸ್ತ್ರೀಯರ ಆವೇಶ, ಅದಕ್ಕೆ ಕಾರಣವಾದ ಸನ್ನಿವೇಶ ಹಾಗೂ ಪೂರ್ವಜನ್ಮಗಳ ನಿರೂಪಣೆ, ಕೃತವರ್ಮನ ಮೂಲಕ ಶ್ರೀಕೃಷ್ಣನಿಮದ ಪಾಂಡವರ ದ್ರುಪದವಿಜಯದ ಅಭಿನಂದನೆ, ದ್ರೋಣರ ಬಳಿ ಧೃಷ್ಟದ್ಯುಮ್ನನ ಅಸ್ತ್ರಾಭ್ಯಾಸ, ಭೀಮಾರ್ಜುನರ ವಿಜಯ ಬೀರಿದ ಅಪಾರ ಪ್ರಭಾವ, ಹಾಗೂ ಧರ್ಮರಾಜನ ಯೌವ್ವರಾಜ್ಯಾಭಿಷೇಕಗಳು ನಿರೂಪಿತವಾಗಿವೆ.

ಭೀಮಸೇನನ ಪರಿಶುದ್ಧ [೧]ಭಾಗವತಧರ್ಮರತತ್ವ (ಶ್ಲೋ. ೨–೧೫), ದ್ರೌಪದಿಯ ಅದ್ಭುತ ಅವತಾರರಹಸ್ಯ, ಪಾರ್ವತ್ಯಾದಿದೇವತಾಸ್ತ್ರೀಯರ ಶಾಪಪ್ರಸಂಗ, ವಿಪ್ರಕನ್ಯಾದಿ ಅವತಾರತ್ರಯಗಳ ನಿರೂಪಣೆ, ಈ ಅಧ್ಯಾಯದ ಪ್ರಮುಖ ಘಟ್ಟಗಳು.

---

೧. ಶುದ್ಧೇ ಭಾಗವತೇ ಧರ್ಮೇ ನಿರತೋ ಯದ್ವೃಕೋದರಃ ।
ನ ಕಾಮ್ಯಕರ್ಮಕೃತ್ ತಸ್ಮಾನ್ನಾಯಾಚದ್ದೇವಮಾನುಷಾನ್ ॥
ನ ಹರಿಶ್ಚಾರ್ಥಿತಸ್ತೇನ ಕದಾಚಿತ್ ಕಾಮ್ಯಲಿಪ್ಸಯಾ ।
ಭಿಕ್ಷಾಮಟಂಶ್ಚ ಹುಂಕಾರಾತ್ ಕರವದ್ವೈ ಶ್ಯತೋಽಗ್ರಹೀತ್ ॥
ನಾನ್ಯದೇವಾ ನತಾಸ್ತೇನ ವಾಸುದೇವಾನ್ನ ಪೂಜಿತಾಃ ।
ನ ಪ್ರತೀಪಂ ಹರೇಃ ಕ್ವಾಪಿ ಸ ಕರೋತಿ ಕಥಂಚನ ॥
ನ ಚೌರ್ದ್ಧ್ವದೈಹಿಕಾನುಜ್ಞಾಮವೈಷ್ಣವಕೃತೇಽಕರೋತ್ ।
ನ ಕರೋತಿ ಸ್ವಯಂ ನೈಷಾಂ ಪ್ರಿಯಮನ್ಯಾಚರೇತ್ ಕ್ವಚಿತ್ ॥
ಸಖ್ಯಂ ನಾವೈಷ್ಣವೈಶ್ಚಕ್ರೇ ಪ್ರತೀಪಂ ವೈಷ್ಣವೇನ ತು ।
ಪರೋಕ್ಷೇಽಪಿ ಹರೇರ್ನಿಂದಾಕೃತೋ ಜಿಹ್ವಾಂ ಛಿನತ್ತಿ ಚ ॥
ಪ್ರತೀಪಕಾರಿಣೋ ಹಂತಿ ವಿಷ್ಣೋರ್ವೈತಾನಜೀಘನತ್ ।
ನ ಸಂಶಯಂ ಕದಾಽಪ್ಯೇಷ ಧರ್ಮೇ ಜ್ಞಾನೇಽಪಿ ವಾಽಕರೋತ್ ॥
ವಿದ್ಯೋಪಜೀವನಂ ನೈಷ ಚಕಾರಾಪದ್ಯಪಿ ಕ್ವಚಿತ್ ।....
ಆಜ್ಞಯೈವ ಹರೇರ್ದ್ಯೂಣೇರಸ್ತ್ರಾಣ್ಯಸ್ತ್ರೈರಶಾಮಯತ್ ।...
ಪ್ರತ್ಯಕ್ಷೀಭೂತದೇವೇಷು ಬಂಧುಜ್ಯೇಷ್ಠೇಷು ವಾ ನತಿಮ್ ।
ಮರ್ಯಾದಾಸ್ಥಿತಯೇಽಶಾಸದ್ಭಗವಾನ್ ಪುರುಷೋತ್ತಮಃ ॥
ತತ್ರಾಪಿ ವಿಷ್ಣುಮೇವಾಸೌ ನಮೇನ್ನಾನ್ಯಂ ಕಥಂಚನ ।
ಆಜ್ಞಯೈವಾಸ್ತದೇವಾಂಶ್ಚ ಪ್ರೇರಯಾಮಾಸ ನಾರ್ಥನಾತ್ ॥ –(೧೮/೪-೬, ೮-೧೧,೧೨,)

ವ್ಯಾಸೋತ್ತರಕಾಲದ ಮಹಾಭಾರತಕ್ಕೆ ಸಂಬಂಧಿಸಿದ ಕೃತಿಗಳಲ್ಲಿ ಭೀಮಸೇನನ ಪಾತ್ರ ವಿಕೃತರೀತಿಯಲ್ಲಿ ಚಿತ್ರಿತವಾಗಿರುವುದೇ ಹೆಚ್ಚು. ಮುಂಗೋಪಿ, ಹೊಟ್ಟೆಬಾಕ ಮೊದಲಾದ ರೀತಿಯ ಕೆಟ್ಟ ಚಿತ್ರವನ್ನೇ ನಾಟಕ, ಯಕ್ಷಗಾನಗಳು ನೀಡಿರುವುದುಂಟು. ಆದರೆ ಭೀಮಸೇನ ಮಹಾಭಾರತದ ಮಹಾನಾಯಕ, ಸಕಲಸದ್ಗುಣಗಳ ಸಾಕಾರಮೂರ್ತಿ, ಅಪ್ರತಿಮ ಬಲಶಾಲಿ, ಅಸ್ತ್ರವಿದ್ಯಾದಿ ಸಕಲ ವಿದ್ಯಾಪಾರಂಗತ, ಭಗವನ್ನಿಷ್ಠೆಯಲ್ಲಂತೂ ಸರ್ವೋನ್ನತ ಹಿರಿಮೆಯ ಮಹಾಮಹಿಮ, ಎಂದೂ ಧರ್ಮ ತಪ್ಪದ ಶುದ್ಧಭಾಗವತಧರ್ಮರತ ಎಂಬ ಮುಖ್ಯವಿಷಯವನ್ನು ಮೂಲಮಹಾಭಾರತದ ವಾಕ್ಯ ಹಾಗೂ ಪ್ರಸಂಗಗಳಿಂದ ಸ್ಫುಟಪಡಿಸಿರುವುದು ಮಹಾಭಾರತತಾತ್ಪರ್ಯನಿರ್ಣಯದ ಅಸಾಮಾನ್ಯ ವೈಶಿಷ್ಟ್ಯಗಳಲ್ಲೊಂದು. ಅದರಂತೆ ದ್ರೌಪದಿಯ ಬಗ್ಗೆಯೂ =ಇಲ್ಲಿ ಬಂದಿರುವ ವಿವರಗಳು ಅತ್ಯಂತ ಅಪೂರ್ವವಾದವುಗಳು. ಮೇಲ್ನೋಟಕ್ಕೆ ಪಂಚಪತಿಗಳನ್ನು ಹೊಂದಿದ್ದೂ ಜೀವಕೋಟಿಯ ಅದ್ಭುತ ಮಹಾಪತಿವ್ರತೆಯೆನಿಸಿದ್ದು ದ್ರೌಪದಿಯ ಹಿರಿಮೆ. ಅದನ್ನು ಸಾಮಾನ್ಯ–ಜನತೆಯೂ ಶ್ರದ್ಧಾಭಕ್ತಿಗಳಿಂದ ಗೌರವಿಸಿದೆ. ಆದರೆ ದ್ರೌಪದಿ ಭೀಮನ ಪತ್ನಿ ಮಾತ್ರ ಎಂದು ನಿರೂಪಿಸಿ ಪಾತಿವ್ರತ್ಯದ ರಹಸ್ಯವನ್ನು ಅನಾವರಣಗೊಳಿಸಿದ ಹಿರಿಮೆ ಮಹಾಭಾರತ–ತಾತ್ಪರ್ಯನಿರ್ಣಯದ್ದು ಮಾತ್ರ. ಇಲ್ಲಿ ಬಂದಿರುವ ದ್ರೌಪದಿಯ ಅವತಾರಗಳ ರಹಸ್ಯವೆಲ್ಲ ಮಹಾಭಾರತ ಹಾಗೂ ಪುರಾಣಗಳಲ್ಲಿ ಬಂದಿರುವ ವಿಷಯಗಳ ಸಂಕಲನ ಎಂದು ತಿಳಿಸುತ್ತಲೇ ಅವುಗಳನ್ನೆಲ್ಲ ಸ್ಫುಟಪಡಿಸಿರುವುದು ಈ ಘಟ್ಟದ ಹಿರಿಮೆ. ಶುದ್ಧಧರ್ಮಾನುಷ್ಠಾನದಲ್ಲಿ ದ್ರೌಪದಿಯ [೧]ಸ್ಥಾನ ಭೀಮನ ಅನಂತರದ್ದು ಎಂಬುದು ಇನ್ನೊಂದು ವಿಶೇಷ.

ಕರ್ಣ ಕೌಂತೇಯನಾದರೂ ಸೂತಪುತ್ರನೆನ್ನಿಸಲು ಮುಖ್ಯಕಾರಣದ ವಿಶ್ಲೇಷಣೆ ಈ ಅಧ್ಯಾಯದ ಮತ್ತೊಂದು ಅಪೂರ್ವ ಭಾಗ. ಕರ್ಣ ಕ್ಷತ್ರಿಯಪುತ್ರನಾದರೂ ಕ್ಷತ್ರಿಯೋಚಿತ ಸಂಸ್ಕಾರಗಳನ್ನು [೨]ಹೊಂದದೆ ಸೂತಜಾತಿಯ ಸಂಸ್ಕಾರಗಳನ್ನು ಹೊಂದಿ ಬೆಳೆದುದೇ ಅವನ ಸೂತಪುತ್ರತ್ವಕ್ಕೆ ಮುಖ್ಯಕಾರಣ. ಕೃಷ್ಣಬಲರಾಮರು ವೈಶ್ಯಜಾತಿಯ ನಂದಗೋಪ ಯಶೋದೆಯರ ಬಳಿ ಲೋಕದೃಷ್ಟಿಯಲ್ಲಿ ಬೆಳೆದರೂ, ಅವರಿಗೆ ವಸುದೇವನ ಸೂಚನೆಯಂತೆ ಗರ್ಗಾಚಾರ್ಯರಿಂದ ಕ್ಷತ್ರಿಯೋಚಿತಸಂಸ್ಕಾರಗಳೇ[೩] ನಡೆದದ್ದರಿಂದ ಅವರು ಕ್ಷತ್ರಿಯರೆನ್ನಿಸಿದರು. ಕರ್ಣನ ಪ್ರಸಂಗದಲ್ಲಿ ಹೀಗಾಗದೆ, ಅವನಿಗೆ ಸೂತಸಂಸ್ಕಾರವೇ ಆಗಿದ್ದರಿಂದ ಆವನು ಸೂತಪುತ್ರನಾದ. ಹೀಗೆ ಕಥಾಸಂಗ್ರಹದೊಂದಿಗೆ ಇಂತಹ ಸೂಕ್ಷ್ಮ ಪ್ರಮೇಯಗಳ ವಿಶ್ಲೇಷಣೆಯನ್ನೂ ಈ ಅಧ್ಯಾಯ ನೀಡಿದೆ.

---

೧. ಅನ್ವೇನಮೇವ ತದ್ಧರ್ಮೇ ಕೃಷ್ಣಾ ಸಂಸ್ಥಿತಾ ಸದಾ ।...
ನ ವಾಚಾ ಮನಸಾ ವಾऽಪಿ ಪ್ರತೀಪಂ ಕೇಶವೇऽಚರತ್ ॥ – (೧೮/೧೬, ೧೭)

೨. ಅಕ್ಷತ್ರಸಂಸ್ಕಾರಯುತೋ ಜಾತೋऽಪಿ ಕ್ಷತ್ರಿಯೇ ಕುಲೇ ।
ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥ – (೧೮/೩೭)

೩. ಗರ್ಗಃ ಶೂರಸುತೋಕ್ಕಾವ್ರಜಮಾಯತ್ ಸಾತ್ತ್ವತಾಂ ಪುರೋಧಾಃ ಸಃ ।
ಚಕ್ರೇ ಕ್ಷತ್ರಿಯಯೋಗ್ಯಾನ್ ಸಂಸ್ಕಾರಾನ್ ಕೃಷ್ಣರೋಹಿಣೀಸೂನ್ವೋಃ ॥ – (೧೩/೧)

ಹತ್ತೊಂಭತ್ತನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೨೨೩)

ಶಕುನಿ ಕಳಿಂಗ ಎಂಬ ಒಬ್ಬ ದೈತ್ಯಸ್ವಭಾವದ ವಿಪ್ರನ ಮೂಕ ದುರ್ಯೋಧನಾದಿಗಳಿಗೆ ನಾಸ್ತಿಕ್ಯನೀತಿಯನ್ನುಪದೇಶಿಸಿದ್ದು ಆದರಿಂದ ತನ್ನ ದುಷ್ಟಬುದ್ಧಿಯನ್ನು ಹೆಚ್ಚಿಸಿಕೊಂಡ ದುರ್ಯೋಧನ ಒತ್ತಡ ತಂದು ಧೃತರಾಷ್ಟ್ರನ ಮೂಲಕ ಪಾಂಡವರನ್ನು ವಾರಣಾವತಕ್ಕೆ ಕಳುಹಿಸಿದ್ದು ವಾರಣಾವತದ ಅರಮನೆಯಲ್ಲಿ ಭೀಮನ ರಕ್ಷಣೆಯಿಂದ ಯುಧಿಷ್ಠಿರಾದಿಗಳು ಸುರಕ್ಷಿತವಾಗಿ ಬದುಕುಳಿದದ್ದು ಭೀಮನಿಂದ ಅರಗಿನ ಮನೆ ಪುರೋಚನನ ಸಮೇತ ಬೂದಿಯಾದದ್ದು ಭೀಮನಿಂದ ಹಿಡಿಂಬಾಸುರನ ವಧೆ, ವೇದವ್ಯಾಸರ ಆದೇಶದಂತೆ ಭೀಮ ಹಿಡಿಂಬಿಯನ್ನು ವಿವಾಹವಾದದ್ದು ಹಿಡಿಂಬಿಯ ಹಿನ್ನೆಲೆ, ಘಟೋತ್ಕಚನ ಜನನ, ಏಕಚಕ್ರನಗರದಲ್ಲಿ ವೇದವ್ಯಾಸರ ಆದೇಶದಂತೆ ವಿಪ್ರವೇಷದಲ್ಲಿ ಪಾಂಡವರ ವಾಸ, ಭೀಮಸೇನನಿಂದ ನಡೆದ ಬಕಾಸುರನ ವಧೆ, ವ್ಯಾಸರ ಆದೇಶದಂತೆ ಪಾಂಡವರ ಪಾಂಚಾಲಾಗಮನ, ಮಾರ್ಗಮಧ್ಯದಲ್ಲಿ ಚಿತ್ರರಥ ಗಂಧರ್ವನ ಪ್ರಸಂಗ, ಪಾಂಡವ ಪುರೋಹಿತರಾಗಿ ಧೌಮ್ಯಾಚಾರ್ಯರು, ದ್ರೌಪದೀ ಸ್ವಯಂವರ, ಅರ್ಜುನನಿಂದ ನಡೆದ ಮತ್ಸ್ಯಯಂತ್ರ ಭೇದನ, ಆಗ ನಡೆದ ಯುದ್ಧದಲ್ಲಿ ಭೀಮಾರ್ಜುನರ ಅದ್ಭುತ ಪರಾಕ್ರಮ, ಪಂಚಪಾಂಡವರೊಂದಿಗೆ ದ್ರೌಪದಿಯ ವಿವಾಹ ಪೂರೈಸಲು ಶ್ರೀವೇದವ್ಯಾಸರ ಆದೇಶ, ಸಂದೇಹಿಸಿದ ದ್ರುಪದ ರಾಜನಿಗೆ ವೇದವ್ಯಾಸರು ದಿವ್ಯದೃಷ್ಟಿ ನೀಡಿ ತೋರಿದ ದ್ರೌಪದಿ ಹಾಗೂ ಪಾಂಡವರ ಸ್ವರೂಪ, ಕೃಷ್ಣವ್ಯಾಸರ ನೇತೃತ್ವದಲ್ಲಿ ನಡೆದ ದ್ರೌಪದೀವಿವಾಹ, ದ್ರೌಪದಿಯ ಅದ್ಭುತ ದಾಂಪತ್ಯದ ನಿರೂಪಣೆ, ಕೌರವರು ಪಾಂಚಾಲರನ್ನು ಆಕ್ರಮಿಸಿ ಪಾಂಡವರಿಂದ ಪರಾಭೂತರಾದದ್ದು ದುರ್ಯೋಧನ ಕಾಶಿರಾಜಪುತ್ರಿಯನ್ನು ಸ್ವಯಂವರದ ನಿಯಮವನ್ನು ಉಲ್ಲಂಘಿಸಿ ಅಪಹರಿಸಿದ್ದು ಕರ್ಣನ ಅದ್ಭುತ ಪರಾಕ್ರಮಕ್ಕೆ ಮೆಚ್ಚಿ ಜರಾಸಂಧ ನೀಡಿದ ಅರ್ಧ ಅಂಗರಾಜ್ಯದ ವಿವರ, ಹಸ್ತಿನಾಪುರಕ್ಕೆ ದ್ರೌಪದೀಸಮೇತರಾಗಿ ಪಾಂಡವರ ಆಗಮನ, ಕಳಿಂಗದೇಶದ ರಾಜಕುಮಾರಿಯನ್ನು ದುರ್ಯೋಧನ ವಂಚನೆಯಿಂದ ಅಪಹರಿಸಿದ್ದು ಕರ್ಣನೊಂದಿಗೆ ದುರ್ಯೋಧನಾದಿ ಸಕಲ ಕೌರವರನ್ನು ಜರಾಸಂಧ ಪರಾಭವಗೊಳಿಸಿದ್ದು ಭೀಮಸೇನನಿಂದ ಸುವಜ್ರನ ಸಂಹಾರ, ಹಾಗೂ ಮಹಾರಾಜ, ಯುವರಾಜರಾಗಿ ಧರ್ಮ ಭೀಮರಿಗೆ ಕೃಷ್ಣ ವ್ಯಾಸರಿಂದ ಪಟ್ಟಾಭಿಷೇಕ, ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ — ಇವು ಈ ಅಧ್ಯಾಯದ ಮುಖ್ಯ ವಿಷಯಗಳು.

ಕಣಿಕನೀತಿಯ ಸ್ವರೂಪವನ್ನು ಒಂದೇ ಶ್ಲೋಕದಲ್ಲಿ ಸಂಗ್ರಹಿಸಿರುವ ಇಲ್ಲಿಯ ರೀತಿ ಅಪೂರ್ವ (೧೯/೩) :

ಧರ್ಮೈವ ಯತ್ರ ಪರಮಂ ನ ಸುರಾಶ್ಚ ಪೂಜ್ಯಾಃ ಸ್ವಾರ್ಥೇನ ವಂಚನಕೃತೇ ಜಗತೋಽಖಿಲಂ ಚ ।
ಧರ್ಮಾದಿ ಕಾರ್ಯಮಪಿ ಯಸ್ಯ ಮಹೋಪಧಿಃ ಸ್ಯಾತ್ ಶ್ರೇಷ್ಠಃ ಸ ಏವ ನಿಖಿಲಾಸುರದೈತ್ಯಸಂಘಾತ್ ॥

ಧೃತರಾಷ್ಟ್ರನ ಮನಸ್ಸನ್ನು ದುರ್ಯೋಧನ ಹಂತಹಂತವಾಗಿ ತನ್ನೆಡೆಗೆ ಸೆಳೆದುಕೊಳ್ಳುವ ರೀತಿ, ದೊಡ್ಡಪ್ಪನಾದ ಧೃತರಾಷ್ಟ್ರನ ಮಾತನ್ನು ತನಗೆ ಪ್ರತಿಕೂಲವಾಗಿದ್ದರೂ ಗೌರವದಿಂದ ಪಾಲಿಸಹೊರಟ ಧರ್ಮರಾಜನ ರೀತಿ, ಅರಗಿನ ಮನೆಯಲ್ಲಿನ ಅನಾಹುತದ ಬಗ್ಗೆ ವಿದುರ ಮುನ್ನೆಚ್ಚರಿಕೆ ನೀಡುವ ರೀತಿ, ಭೀಮನಿಂದ ನಡೆದ ಅರಗಿನ ಮನೆಯ ದಹನ, ಹಿಡಿಂಬಿಯನ್ನು ವಿವಾಹವಾಗಲು ಭೀಮ ಮೊದಲು [೧]ನಿರಾಕರಿಸಿದ ಹಿನ್ನೆಲೆ, ಬಕಾಸುರನ ಪೀಡೆಯಿಂದ ನೊಂದ ಬ್ರಾಹ್ಮಣ ದಂಪತಿಗಳ [೨]ಶೋಕದ ಪರಿ, ಕುಂತಿ ಭೀಮನನ್ನು ಕಳುಹಿಸಲು [೩]ತೋರುವ ಧೈರ್ಯ, ಆತಂಕಕ್ಕೊಳಗಾದ ಧರ್ಮರಾಜನನ್ನು ಕುಂತಿ ಸಾಂತ್ವನ [೪]ಪಡಿಸಿದ ರೀತಿ, ಭೀಮ ಬಕನನ್ನು ಕೊಂದ [೫]ಪರಿ, ಚಿತ್ರರಥನನ್ನು ಅರ್ಜುನ ಆಗ್ನೇಯಾಸ್ತ್ರದಿಂದ ಜಯಿಸಿದ ರೀತಿ, ಮತ್ಸ್ಯಯಂತ್ರಭೇದನದ [೬]ನಿರೂಪಣೆ, ಭೀಮ ದೊಡ್ಡ ವೃಕ್ಷವೊಂದನ್ನು ಕಿತ್ತಿ ಆಕ್ರಮಿಸ ಬಂದ ರಾಜರುಗಳನ್ನೆಲ್ಲ ಎದುರಿಸಿದ [೭]ಅದ್ಭುತವೈಖರಿ, ಭೀಮನ ಪರಾಕ್ರಮಕ್ಕೆ ಅಂಜಿದ ಶಲ್ಯನ ಪಲಾಯನ, ದ್ರೌಪದಿಯ ಪೂರ್ವವೃತ್ತಾಂತವನ್ನು ತಿಳಿಸಿ, ಶ್ರೀವೇದವ್ಯಾಸರು ದ್ರುಪದಾದಿಗಳನ್ನು ಒಪ್ಪಿಸಿದ ರೀತಿ(ಶ್ಲೋ. ೧೫೪–೧೫೬), ದ್ರೌಪದಿಯ ಪರಮಪವಿತ್ರವಾದ ದಾಂಪತ್ಯದ ಬಗೆಗಿನ ವಿವರಗಳು ತೀರ ಅಪೂರ್ವ:

---

೧. ತಾಂ ಭೀಮ ಆಹ ಕಮನೀಯತನುಂ ನ ಪೂರ್ವಂ ಜ್ಯೇಷ್ಠಾದುವೈಮಿ ವನಿತಾಂ ನ ಹಿ ಧರ್ಮ ಏಷಃ।
ಸಾ ಚಾಹ ಕಾಮವಶಗಾ ಪುನರೇತದೇವ ಸ್ವಾವೇಶಯುಗ್ ಹಿ ಮರುದಗ್ರ್ಯಪರಿಗ್ರಹಸ್ಯ ॥ – (೧೯/೫೦)

೨. ತತ್ಕಾಲ ಏವ ರುದಿತಂ ನಿಜವಾಸಹೇತೋರ್ವಿಪ್ರಸ್ಯ ದಾರಸಹಿತಸ್ಯ ನಿಶಮ್ಯ ಭೀಮಃ।
ಸ್ತ್ರೀಬಾಲಸಂಯುತಗೃಹೇ ಸುತಲಾಲನಾದೌ ಲಜ್ಜೀದಿತಿ ಸ್ಮ ಜನನೀಮವದನ್ನ ಚಾಗಾತ್ ॥ – (೧೯/೭೧)

೩. ಏವಂ ಬಲಾಢ್ಯಮಮುಮಾಶು ನಿಹತ್ಯ ಭೀಮಃ ಕೀರ್ತಿಂ ಚ ಧರ್ಮಮಧಿಕಂ ಪ್ರತಿಯಾಸ್ಯತೀಹ।
ಸರ್ವೇ ವಯಂ ಚ ತಮನು ಪ್ರಗೃಹೀತಧರ್ಮಾ ಯಾಸ್ಯಾಮ ಇತ್ಯವದದಾಶು ಧರಾಸುರಂ ತಮ್॥ – (೧೯/೮೦)

೪. ಇತ್ಯುಕ್ತವಂತಮಮುಮಾಹ ಸುಧೀರಬುದ್ಧಿಃ ಕುಂತೀ ನ ಪುತ್ರಕ ನಿಹಂತುಮಯಂ ಹಿ ಶಕ್ಯಃ।
ಸರ್ವೈಃ ಸುರೈರಸುರಯೋನಿಭರಷ್ಕನೇನ ಚೂರ್ಣೀಕೃತೋ ಹಿ ಶತಶೃಂಗಗಿರಿಃ ಪ್ರಸೂತ್ಯಾಮ್ ॥
ಏಷ ಸ್ವಯಂ ಹಿ ಮರುದೇವ ನರಾತ್ಮಕೋಽಭೂತ್ ಕೋ ನಾಮ ಹಂತುಮಿಮಮಾಪ್ತಬಲೋ ಜಗತ್ಸು।
ಇತ್ಯೇವಮಸ್ತ್ವಿತಿ ಸ ತಾಮವದತ್ ಪರೇದ್ಯುರ್ಭೀಮೋ ಜಗಾಮ ಶಕಟೇನ ಕೃತೋರುಭೋಗಃ॥ – (೧೯/೮೭)

೫. ಆಕ್ರಮ್ಯ ಪಾದಮಪಿ ಪಾದತಲೇನ ತಸ್ಯ ದೋರ್ಭ್ಯಾಂ ಪ್ರಗೃಹ್ಯ ಚ ಪರಂ ವಿದದಾರ ಭೀಮಃ।
ಮೃತ್ವಾ ಸ ಚೋರುತಮ ಏವ ಜಗಾಮ ಪಾಪೋ ವಿಷ್ಣುರ್ವಿಡೇವ ಹಿ ಶನೈರನಿವೃತ್ತಿಚೋಗ್ರಮ್ ॥– (೧೯/೯೧)

೬. ತತ್ಪಾರ್ಜನಃ ಪವನಜಾತ್ ಪ್ರಿಯತೋಽಪ್ಯನುಜ್ಞಾಮಾದಾಯ ಕೇಶವಮಜಂ ಮನಸಾ ಪ್ರಣಮ್ಯ।
ಕೃತ್ವಾ ಗುಣಾನ್ವಿತಮದೋ ಧನುರಶ್ರಮೇಣ ಯಂತ್ರಾಂತರೇಣ ಸ ಶರೈರಧುನೋಚ್ಚಲಕ್ಷ್ಯಮ್ ॥
– (೧೯/೧೩೧)

೭. ಭೀಮಸ್ತು ರಾಜಸಮಿತಿಂ ಪ್ರತಿಸಂಪ್ರಯಾತಾಂ ದೃಷ್ಟ್ವೈವ ಯೋಜನದಶೋಚ್ಚ್ರಯಮಾಶು ವೃಕ್ಷಮ್।
ಆರುಜ್ಯ ಸರ್ವನೃಪತೀನಭಿತೋ ಹ್ಯತಿಷ್ಠತ್ ದೃಷ್ಟ್ವಾ ಪಲಾಯನಪರಾಶ್ಚ ಬಭೂವುರೇತೇ ॥ – (೧೯/೧೩೪)

ಊಷುಸ್ತತ್ರೈವ ಪರಿವತ್ಸರಪಂಚಕಂ ತೇ ಪಾಂಡೋರ್ಗೃಹೇ ಸುಸುಖಿನೋಽಖಿಲಭೋಗಯುಕ್ತಾಃ ।
ಕೃಷ್ಣಾ ಚ ತೇಷು ಪೃಥಗೇವ ಚತುಃಸ್ವರೂಪಾ ರೇಮೇ ತಥೈಕತನುರಪ್ಯಭಿಮಾನಿಭೇದಾತ್ ॥
ಕನ್ಯೈವ ಸಾಽಭವದತಃ ಪ್ರತಿವಾಸರಂ ಚ ಜನ್ಮಾಭವದ್ಭ್ಯಭಿಮತೇಃ ಪೃಥಗೇವ ನಾಶಾತ್ ।
ಪ್ರಾಯೋ ಹಿ ನಾಭಿಮತಿನಾಶಮವಾಪ ವಾಣೇ ತಸ್ಮಾನ್ನರುಚ್ಚ ಸಕಲೇಷ್ವಭವಿಷ್ಣ ಆಸೀತ್ ॥
ಧರ್ಮಾತ್ಮಜಾದಿಷು ಮರುತ್ ಪ್ರತಿವಿಷ್ಣ ಏಷಾಂ ಬುದ್ಧಿಂ ವಿಮೋಹ್ಯ ರಮತೇ ಸತತಂ ತಯಾ ಯತ್ ।
ಶುದ್ಧೈವ ಸಾ ಹಿ ತತ ಏವ ದಿನೇ ದಿನೇ ಚ ಸಂಮೋಹತೋ ಮರಣವದ್ಭವತೀಹ ಕನ್ಯಾ॥
ನೋ ಸುಪ್ತಿವತ್ ತ್ವಿದಮತೋಽನ್ಯವಶತ್ವತೋ ಹಿ ದೇಹಸ್ಯ ಸಂಸ್ಕೃತಿತ ಏವ ಹರೇರ್ನ ಮೋಹಃ ।
ನಾವೇಶವಚ್ಚ ತತ ಏವ ಮೃತೇಃ ಸ್ವರೂಪಮೇತತ್ ತ್ವತಃ ಪ್ರತಿದಿನಂ ಜನನಾದ್ಧಿ ಕನ್ಯಾ ॥
ಏವಂ ಸ ವಾಯುರನುವಿಷ್ಣಯುಧಿಷ್ಠಿರಾದಿಭೀಮಾತ್ಮನೈವ ರಮತೇ ಸತತಂ ತಯೈಕಃ ।
ಅನ್ಯಾದೃಶಾ ಹಿ ಸುರಭುಕ್ತಿರತೋಽನ್ಯರೂಪಾ ಮಾನುಷ್ಯಭುಕ್ತಿರಿತಿ ನಾತ್ರ ವಿಚಾರ್ಯಮಸ್ತಿ ॥

– (೧೯/೧೮೪-೧೮೬)

ಯುಧಿಷ್ಠಿರಭೀಮರಿಗೆ ನಡೆದ ರಾಜ್ಯಾಭಿಷೇಕದ ವೈಭವ(ಶ್ಲೋ. ೨೦೯–೨೧೧), ಪಾಂಡವರು ಇಂದ್ರಪ್ರಸ್ಥಕ್ಕೆ ತೆರಳಿದಾಗ ಪ್ರಜೆಗಳು ಶೋಕಿಸಿದ ರೀತಿ (ಶ್ಲೊ. ೨೧೪–೨೧೫) — ಹೀಗೆ ಇಲ್ಲಿಯ ವಿವಿಧಘಟ್ಟಗಳು ನಿರೂಪಿತವಾಗಿರುವ ರೀತಿ ಅನನ್ಯವಾದುದು.

ಯುಧಿಷ್ಠಿರನ ಬದಲು ಭೀಮಸೇನ ಪಾಂಡವಜ್ಯೇಷ್ಠನಾಗಿದ್ದಲ್ಲಿ ಆಗಬಹುದಿದ್ದ ಮಹಾಭಾರತದ ಚಿತ್ರವನ್ನು ಅಲ್ಲಿ ನೀಡಿರುವ ರೀತಿ ತೀರ ವಿಶಿಷ್ಟವಾದುದು (೧೯/೨೯, ೩೦):

ಕೀರ್ತ್ಯರ್ಥಮೇವ ನಿಜಧರ್ಮಪರಿಪ್ರಹಾಣೇ ಪ್ರಾಪ್ತೇಽಗ್ರಜಸ್ಯ ವಚನಾತ್ ಪ್ರತಿಹಾತುಮೇವ ।
ಭೀಮಸ್ಯ ದೋಷಮುಭಯಂ ಪ್ರತಿಹಾತುಮೀಶೋ ಜ್ಯೇಷ್ಠಂ ಚಕಾರ ಹರಿರತ್ರ ಸುತಂ ವೃಷಸ್ಯ ॥
ಹಂತವ್ಯತಾಮುಪಗತೇಷು ಸುಯೋಧನಾದಿಷ್ವನ್ಯೋ ವಧಾನ್ನ ಹಿ ಭವೇನ್ನಿಜಧರ್ಮ ಏವ ।
ಪೂರ್ವಂ ವಧೇ ನ ಹಿ ಸಮಸ್ತ ಏವ ದೋಷಾಸ್ತೇಷಾಂ ಪ್ರಯಾಂತಿ ವಿಕೃತಿಂ ಚ ತದರ್ಥತೋಽಪಿ ॥

ಇಪ್ಪತ್ತನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೨೪೫)

ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರಕ್ರಮ, ಪಾಂಡವರ ರಾಜ್ಯದ ಹಿರಿಮೆ, ಕಾಳೀಸ್ವಯಂವರ, ಆ ಪ್ರಸಂಗದಲ್ಲಿ ನಡೆದ ವಾಗ್ಯುದ್ಧ ಬಾಹುಯುದ್ಧಗಳಲ್ಲಿ ಭೀಮನಿಂದ ಜರಾಸಂಧಾದಿಸಮಸ್ತರ ಪರಾಭವ, ಭೀಮ ಶಿವನನ್ನು ಕೆಲವು ಪ್ರಸಂಗಗಳಲ್ಲಿ ಪರಾಭವ–ಗೊಳಿಸಿದ್ದ ವಿವರ, ಕೃಷ್ಣನಿಂದ ಶತಧನ್ವನ ಸಂಹಾರ, ಬಲರಾಮನ ಬಳಿ ವಿದೇಹದೇಶದಲ್ಲಿ ದುರ್ಯೋಧನನ ಗದಾಭ್ಯಾಸ, ಬಲರಾಮನಿಂದ ಸುಭದ್ರಾಪ್ರದಾನಕ್ಕಾಗಿ ದುರ್ಯೋಧನ ವಂಚನೆಯಿಂದ ವಚನ ಪಡೆದದ್ದು, ಸುಭದ್ರೆಯ ಪರಿಚಯ, ಸ್ಯಮಂತಕಮಣಿಯನ್ನು ಕೃಷ್ಣ ಅಕ್ರೂರನಿಗೆ ನೀಡಿದ್ದು, ಕೃಷ್ಣ ಕಾಳಿಂದೀ, ನೀಲಾ, ಮಿತ್ರವಿಂದಾ, ಭದ್ರಾ ಹಾಗೂ

ಲಕ್ಷಣಾದೇವಿಯರನ್ನು ವಿವಾಹವಾದದ್ದು ಧನ್ಯಾಶ್ಚಯೋರ್ಪಾಖ್ಯಾನ, ನರಕಾಸುರವಧೆ, ಪಾರಿಜಾತಹರಣ, ಕೃಷ್ಣನಿಂದ ಇಂದ್ರಾದಿಗಳ ಪರಾಭವ, ಪಾರಿಜಾತವೃಕ್ಷವನ್ನು ಕೃಷ್ಣ ದ್ವಾರಕೆಯಲ್ಲಿ ಸ್ಥಾಪಿಸಿದ್ದು, ಕೃಷ್ಣಹದಿನಾರು ಸಾವಿರದ ಒಂದು ನೂರು ಕನ್ಯೆಯರನ್ನು ವಿವಾಹವಾದದ್ದು, ನಾರದರು ಬ್ರಹ್ಮದೇವರ ಆದೇಶದಂತೆ ಪಾಂಡವರಿಗೆ ತಿಳಿಸಿದ ಸುಂದೋಪಸುಂದರ ಕಥೆ, ದ್ರೌಪದಿಯ ಜೊತೆಗೆ ವರ್ಷಕ್ಕೊಬ್ಬರಂತೆ ಯುಧಿಷ್ಠಿರಾದಿ ಪಾಂಡವರು ದಾಂಪತ್ಯ ನಡೆಸಲು ಬ್ರಹ್ಮದೇವರ ಆದೇಶ, ಅರ್ಜುನನ ತೀರ್ಥಯಾತ್ರೆ, ಸುಭದ್ರಾಕಲ್ಯಾಣ, ಪಾಂಡವಸಂತತಿಯ ವರ್ಣನೆ, ಖಾಂಡವವನ ದಹನ, ಮಯನಿಗೆ ಕೃಷ್ಣಾರ್ಜುನರಿಂದ ಪ್ರಾಣಭಿಕ್ಷೆ — ಇವು ಈ ಅಧ್ಯಾಯದ ಮುಖ್ಯಾಂಶಗಳು.

ಭೀಮಸೇನ ನೇತೃತ್ವದ ಪಾಂಡವರ ರಾಜ್ಯಭಾರದ ವರ್ಣನೆ ರಾಮರಾಜ್ಯದ ವರ್ಣನೆಯಂತಿರುವುದು ಗಮನಾರ್ಹ (೨೦/೭) :

ನಾವೈಷ್ಣವೋ ನ ದರಿದ್ರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ।
ತೇಷಾಂ ರಾಷ್ಟ್ರೇ ಶಾಸತಿ ಭೀಮಸೇನೇ ನ ವ್ಯಾಧಿತೋ ನಾಪಿ ವಿಪರ್ಯಯಾನ್ಮೃತಿಃ ॥

ಕಾಳೀಸ್ವಯಂವರದಲ್ಲಿ ಭೀಮಸೇನ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಿದ ರೀತಿ ಈ ಭಾಗವನ್ನು ಉತ್ತಮಶಾಸ್ತ್ರಗ್ರಂಥವನ್ನಾಗಿಸಿದೆ (೨೦/೧೫–೨೫):

ಪೂರ್ವಂ ವಾಕ್ಯೈರ್ವೈದಿಕೈಸ್ತಾನ್ ಸ ಭೀಮೋ ಜಗ್ಮೇ ತರ್ಕೈಃ ಸಾಧುಭಿಃ ಸಂಪ್ರಯುಕ್ತೈಃ ।
ವೇದಾ ಹ್ಯದೋಷಾ ಇತಿ ಪೂರ್ವಮೇವ ಸಂಸಾಧಯಿತ್ವೈವ ಸದಾಗಮೈಶ್ಚ ॥
ವೇದಾಧಿಕ್ಯಂ ಶೈವಶಾಸ್ತ್ರೇ ಚಾಹುರ್ವೇದೋಜ್ಝಿತಾನಾಂ ಬಹುಲಾಂ ಚ ನಿಂದಾಮ್ ।
ತಥಾ ಶಾಕ್ತೇಯಸ್ಕಾಂದಸೌರಾದಿಕಾನಾಂ ತತ್ಸೈವೋಕ್ತಂ ಛಂದಸಾಂ ವೈಷ್ಣವತ್ವಮ್ ॥
ವಿಷ್ಣೋರಾಧಿಕ್ಯಂ ತಾನಿ ಶಾಸ್ತ್ರೇ ಚಾಹುಃ ಶಿವಾದಿಭ್ಯಃ ಕುತ್ರಚಿನ್ನೈವ ವೇದೇ ।
ವಿಷ್ಣೋರುತ್ಕರ್ಷಃ ಕಥಿತೋ ಬೌದ್ಧಪೂರ್ವಾಶ್ಚಾಹುರ್ವಿಷ್ಣುಂ ಪರಮಂ ಸರ್ವತೋಽಪಿ ॥
ಲೋಕಾಯತಾಶ್ಚ ಕ್ವಚಿದಾಹುರಗ್ರ್ಯಂ ವಿಷ್ಣುಂ ಗುರುಂ ಸರ್ವವರಂ ಬೃಹಸ್ಪತೇಃ ।
ಸರ್ವಾಗಮೇಷು ಪ್ರಥಿತೋಽತ ಏವ ವಿಷ್ಣುಃ ಸಮಸ್ತಾಧಿಕ ಏವ ಮುಕ್ತಿದಃ ॥
ತೇಷಾಮಾಗಮೇಷ್ವೇವ ಪರಸ್ಪರಂ ಚ ವಿರುದ್ಧತಾ ಹ್ಯನ್ಯಪಕ್ಷೇಷು ಭೂಪಾಃ ।
ಪ್ರತ್ಯಕ್ಷತಶ್ಚಾತ್ರ ಪಶ್ಯಧ್ವಮಾಶು ಬಲಂ ಬಾಹ್ವೋರ್ಮೇ ವಿಷ್ಣುಪದಾಶ್ರಯಸ್ಯ ॥ (ಇತ್ಯಾದಿ)

ದುರ್ಯೋಧನ ಸುಭದ್ರೆಯನ್ನು ಬಯಸಿದ್ದರ ಹಿನ್ನೆಲೆ ಪ್ರೀತಿಸೌಹಾರ್ದವಾಗಿರದೆ, ಕೃಷ್ಣನನ್ನು ಉಪಾಯವಾಗಿ ತನ್ನೆಡೆಗೆ ಸೆಳೆದುಕೊಳ್ಳುವ ಕಪಟವಾಗಿತ್ತು ಎಂಬ ನಿರೂಪಣೆಯೂ ಗಮನಾರ್ಹ :

ರೂಪೇಣ ತಸ್ಯಾ ಮೋಹಿತೋ ಧಾರ್ತರಾಷ್ಟ್ರೋ ವಿಶೇಷತಃ ಕೃಷ್ಣರಾಮೌ ಭಗಿನ್ಯಾಃ ।
ಸ್ನೇಹಾದ್ವಶಂ ಯಾಸ್ಯತ ಇತ್ಯಗೃಹ್ಣಾದ್ದಸ್ತಂ ಹಲಾಂಕಂ ಹಲಿನೋ ರಿಪುಘ್ನಮ್॥ –(೨೦/೩೬)

ಸುಂದೋಪಸುಂದರ ಕಥೆಯನ್ನು ಒಂದೇ ಶ್ಲೋಕದಲ್ಲಿ ಸಂಗ್ರಹಿಸಿರುವುದು ತುಂಬಾ ಅಪೂರ್ವರೀತಿಯದು (೨೦/೧೫೧) :

ಸುಂದೋಪಸುಂದೌ ಭ್ರಾತರೌ ಬ್ರಹ್ಮವಾಕ್ಯಾತ್ ಪರಸ್ಪರಾದನ್ಯತೋ ನೈವ ವಧ್ಯೌ ।
ತಿಲೋತ್ತಮಾರ್ಥೇ ನಿಹತೌ ಪರಸ್ಪರಂ ತಯೋರ್ವಧಾರ್ಥೇ ಸೃಷ್ಟಯಾ ತೇನ ದೈತ್ಯೌ ॥

ಧನ್ಯಾಶ್ಚರ್ಯಪ್ರಸಂಗವನ್ನು ಕೆಲವೇ ಶ್ಲೋಕಗಳಲ್ಲಿ ಆಚಾರ್ಯರು ಸಂಗ್ರಹಿಸಿರುವ ಪರಿ ಶಾಸ್ತ್ರಗ್ರಂಥಗಳ ಸಂಗ್ರಹಣಕೌಶಲ ಇತಿಹಾಸದಲ್ಲೇ ಅನನ್ಯವಾದುದು (೨೦/೬೫–೭೭):

ಏತ್ಯಾಕಾಶಾನ್ನಾರದಃ ಕೃಷ್ಣಮಾಹ ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿತ್ ।
ಇತ್ಯಾಶ್ಚರ್ಯೋ ಧನ್ಯ ಇತ್ಯೇವ ಶಬ್ದಸ್ತಯೇ ತೂಕ್ತೇ ವಾಸುದೇವಸ್ತಮಾಹ ॥
ದಕ್ಷಿಣಾಭಿಃ ಸಾಕಮಿತ್ಯೇವ ಕೃಷ್ಣಂ ಪಪ್ರಚ್ಛುರೇತತ್ ಕಮಿತಿ ಸ್ಮ ಭೂಪಾಃ ।
ನಾರಾಯಣೋ ಮುನಿಮೂಚೇ ವದೇತಿ ಶೃಣುಧ್ವಮಿತ್ಯಾಹ ಸ ನಾರದೋಽಪಿ ॥
ಕೂರ್ಮೋ ದೃಷ್ಟ್ವೋ ವಿಷ್ಣುಪದ್ಯಾಂ ಮಯೋಕ್ತಸ್ತ್ವಮುತ್ತಮೋ ನಾಸ್ತಿ ಸಮಸ್ತವೇತಿ ।
ಊಚೇ ಗಂಗಾಮುತ್ತಮಾಂ ಸಾ ಜಲೇಶಮುಮಾಮೂಚೇ ಪೃಥಿವೀನಾಮಿಕಾಂ ಸಃ ॥
ಯಾ ಮಾದೃಶಾ ದೇವತಾಃ ಸರ್ವಶಸ್ತಾ ಧೃತಾಸ್ತಯಾ ಪ್ರಥಿತತ್ವಾತ್ ಪೃಥಿವ್ಯಾ ।
ಶಿವಂ ಶೇಷಂ ಗರುಡಂ ಚಾಹ ಸಾಽಪಿ ಪರಾವನಾತ್ ಪರ್ವತನಾಮಧೇಯಾನ್ ॥
ತೈರೇವಾಹಂ ಮತ್ಸಮಾಶ್ಚೈವ ದೇವ್ಯೋ ಧ್ರಿಯಂತ ಇತ್ಯೇವ ತ ಊಚುರೇಽಥ ।
ಬ್ರಹ್ಮಾಣಮೇವೋತ್ತಮಮಾಹ ಸೋಽಪಿ ವೇದಾತ್ಮಿಕಾಂ ಪ್ರಕೃತಿಂ ವಿಷ್ಣುಪತ್ನೀಮ್ ॥
ಸೈಕಾ ದೇವೀ ಬಹುರೂಪಾ ಬಭಾಷೇ ಯುಕ್ತಾ ಯದಾಽಹಂ ಜ್ಞೇನ ನಾರಾಯಣೇನ ।
ಯಜ್ಞಕ್ರಿಯಾಮಾನಿನೀ ಯಜ್ಞನಾಮ್ನೀ ತದೋತ್ತಮಾ ತತ್ಪ್ರವೇಶಾತ್ ತದಾಖ್ಯಾ ॥ (ಇತ್ಯಾದಿ)

ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿದ್ದಾಗಲೇ ಕೃಷ್ಣನಿಂದ ನರಕಾಸುರವಧೆ, ಪಾರಿಜಾತಹರಣಾದಿಪ್ರಸಂಗಗಳು ನಡೆದವು ಎಂಬ ಕಾಲಾನುಕ್ರಮದ ವಿವೇಚನೆ ಬೇರಾವ ಕೃತಿಯಲ್ಲೂ ಕಂಡುಬರದ ವಿಶೇಷ.

ಆದಿಪರ್ವದ ಕಥೆ ಈ ಅಧ್ಯಾಯದೊಂದಿಗೆ ಮುಕ್ತಾಯವಾಗುವುದು.

ಇಪ್ಪತ್ತೊಂದನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೪೦೮)

ಮಯ ಧರ್ಮರಾಜನಿಗೆ ಅದ್ಭುತ ಸಭೆಯೊಂದನ್ನು ನಿರ್ಮಿಸಿದ್ದು, ಭೀಮನಿಗೆ ವಾಯುವಿನ ಗದೆಯನ್ನು ನೀಡಿದ್ದು, ಕೃಷ್ಣ ಮಾಡಿದ ಏಕಾಹ ಅಶ್ವಮೇಧಯಾಗ, ವಿಪ್ರಶಿಶುರಕ್ಷಣೆಯಲ್ಲಿ ಅರ್ಜುನನ ವೈಫಲ್ಯ, ಅವನ ಅಗ್ನಿಪ್ರವೇಶಕ್ಕೆ ಸಿದ್ಧತೆ, ಕೃಷ್ಣ ಅರ್ಜುನನ್ನು ವೈಕುಂಠಕ್ಕೆ ಕರೆದೊಯ್ದು ವಿಪ್ರಶಿಶುಗಳನ್ನು ಮರಳಿ ತಂದಿದ್ದು, ಭೂಗೋಳವರ್ಣನೆ, ತನ್ನ ಮೂಲಸ್ಥಾನಪ್ರಾಪ್ತಿಗಾಗಿ ಪಾಂಡುರಾಜ ನಾರದರ ಮೂಲಕ ರಾಜಸೂಯಯಾಗವನ್ನು ಮಾಡಲು ಯುಧಿಷ್ಠಿರನಿಗೆ ನೀಡಿದ

ಆದೇಶ, ಆ ಯಾಗದ ಬಗ್ಗೆ ಶ್ರೀಕೃಷ್ಣನೊಂದಿಗೆ ಧರ್ಮರಾಜನ ಮಂತ್ರಾಲೋಚನೆ, ಕೃಷ್ಣ ವರ್ಣಿಸಿದ ಆ ಯಾಗದ ಮಹಿಮೆ, ಜರಾಸಂಧನಿಗೆ ಅಂಜಿ ಯಾಗ ಕೈಗೊಳ್ಳಲು ಯುಧಿಷ್ಠಿರನ ಹಿಂಜರಿಕೆ, ಭೀಮಸೇನ ಜರಾಸಂಧನನ್ನು ವಧಿಸಲು ತಾನು ಸಮರ್ಥ ಎಂದು ನಿರೂಪಿಸಿದ್ದು ವಿಪ್ರವೇಷದಲ್ಲಿ ಭೀಮಾರ್ಜುನರೊಂದಿಗೆ ಕೃಷ್ಣನ ಮಗಧದೇಶದ ಪ್ರಯಾಣ, ಭೀಮಜರಾಸಂಧರ ಅದ್ಭುತಯುದ್ಧ, ಭೀಮನಿಂದ ಜರಾಸಂಧನ ವಧೆ, ಸಹದೇವನಿಗೆ ಪಟ್ಟಾಭಿಷೇಕ, ವ್ಯಾಸರು ಉಪದೇಶಿಸಿದ ಯಾಗದ ವಿಧಿವಿಧಾನಗಳು, ಭೀಮಾದಿನಾಲ್ವರು ಪಾಂಡವರಿಂದ ನಡೆದ ದಿಗ್ವಿಜಯ ಕಾರ್ಯ, ವ್ಯಾಸರ ಆದೇಶದಂತೆ ಭೀಮಸೇನನಿಂದ ಯಾಗಶಾಲೆಯ ನಿರ್ಮಾಣ, ರಾಜಸೂಯಯಾಗಕ್ಕಾಗಿ ನಡೆದ ವಿಶ್ವದ ಸಕಲಜೀವಿಗಳ ಸಂಗಮ, ರಾಜಸೂಯಯಾಗದಲ್ಲಿನಡೆದ ಅದ್ಭುತವಾದಕಥೆಗಳಲ್ಲಿ ಶ್ರೀವೇದವ್ಯಾಸರ ಪ್ರಾಶ್ನಿಕತ್ವ, ಶ್ರೀಕೃಷ್ಣನಿಗೆ ಅಗ್ರಪೂಜೆ, ಕೃಷ್ಣನಿಂದ ಶಿಶುಪಾಲನ ವಧೆ, ರಾಜಸೂಯ ಯಾಗದ ಪರಿಸಮಾಪ್ತಿ ಮಯಸಭೆಯಲ್ಲಿ ದುರ್ಯೋಧನನಿಗಾದ ಬಗೆಬಗೆಯ ಅಪಮಾನ, ಭೀಮದ್ರೌಪದಿಯರ ನಗುವನ್ನು ಸಹಿಸದ ದುರ್ಯೋಧನನ ಕ್ರೋಧ, ದ್ಯೂತಕ್ಕೆಂದು ಶಕುನಿ ನೀಡಿದ ಸಲಹೆ, ಶಕುನಿ ದುರ್ಯೋಧನರ ಸಂಚಿಗೆ ಬಲಿಯಾಗಿ ಧೃತರಾಷ್ಟ್ರ ವಿದುರನ ಹಿತೋಕ್ತಿಯನ್ನು ಕಡೆಗಣಿಸಿ ಯುಧಿಷ್ಠಿರನಿಗೆ ದ್ಯೂತಕ್ಕೆ ಆಹ್ವಾನ ನೀಡಿದ್ದು ಹಸ್ತಿನಾಪುರದಲ್ಲಿ ನಡೆದ ದ್ಯೂತದಲ್ಲಿ ಶಕುನಿಯ ಕಪಟದಿಂದ ಯುಧಿಷ್ಠಿರನ ಸೋಲು, ಸಹೋದರರನ್ನೂ ದ್ರೌಪದಿಯನ್ನೂ ದ್ಯೂತದಲ್ಲಿ ಸೋತದ್ದು ಸಭೆಗೆ ದ್ರೌಪದಿಯನ್ನು ಕರೆಸಿ ದುರ್ಯೋಧನ ಅವಮಾನಿಸಿದ್ದು, ದ್ರೌಪದಿಯ ಧಾರ್ಮಿಕಪ್ರಶ್ನೆಗೆ ಭೀಷ್ಮಾದಿಗಳ ಮೌನ, ವಿದುರನ ಪ್ರತಿಭಟನೆ, ವಿಕರ್ಣನ ಡಾಂಭಿಕತೆ, ಭೀಮನ ಅದ್ಭುತಪರಾಕ್ರಮ, ದುರ್ಯೋಧನಾದಿಗಳ ರಕ್ಷಣೆಗೆ ಭೀಷ್ಮಾದಿಗಳು, ಕೃಷ್ಣಕೃಷ್ಣೆಯರನ್ನು ದುರ್ಯೋಧನ ಅವಮಾನಿಸಿದ್ದು, ಪ್ರತಿಯಾಗಿ ದುರ್ಯೋಧನನ ತೊಡೆ ಮುರಿಯುವ, ತಲೆ ತುಳಿಯುವ ಭೀಮಸೇನನ ಪ್ರತಿಜ್ಞೆಗಳು, ದುಃಶಾಸನನಿಂದ ದ್ರೌಪದೀವಸ್ತ್ರಾಪಹರಣದ ಪ್ರಯತ್ನ, ದುಃಶಾಸನನ ಸಂಹಾರಕ್ಕೆ ಭೀಮನ ಪ್ರತಿಜ್ಞೆ, ಕೃಷ್ಣನಿಂದ ಅಕ್ಷಯವಸ್ತ್ರ ಪ್ರದಾನ, ದ್ರೌಪದಿ ತೊಟ್ಟ ಶಪಥ, ಕರ್ಣವಧೆಗೆ ಅರ್ಜುನ, ಶಕುನಿವಧೆಗೆ ಸಹದೇವ, ಉಲೂಕನ ವಧೆಗೆ ನಕುಲ ಶಪಥ ತೊಟ್ಟದ್ದು ಭೀಮನ ಭಯಕ್ಕೆ ಅಂಜಿ ಧೃತರಾಷ್ಟ್ರ ದ್ರೌಪದಿಯನ್ನು ಸಮಾಧಾನಪಡಿಸಲು ವರರೂಪವಾಗಿ ಪಾಂಡವರಿಗೆ ಸರ್ವವನ್ನೂ ಹಿಂದಿರುಗಿಸಿದ್ದು, ದುಃಶಾಸನನ ಸಲಹೆಯಂತೆ ಅನುದ್ಯೂತಕ್ಕಾಗಿ ಧೃತರಾಷ್ಟ್ರ ಯುಧಿಷ್ಠಿರನನ್ನು ಕರೆಸಿದ್ದು, ದ್ಯೂತದಲ್ಲಿ ಪರಾಜಿತನಾದ ಯುಧಿಷ್ಠಿರನು ಸಹೋದರರು ಹಾಗೂ ದ್ರೌಪದಿಯೊಂದಿಗೆ ಹನ್ನೆರಡು ವರ್ಷಗಳ ವನವಾಸ ಹಾಗೂ ಒಂದು ವರ್ಷದ ಅಜ್ಞಾತವಾಸಕ್ಕಾಗಿ ತೆರಳಿದ್ದು, ಕಾಡಿಗೆ ಹೊರಟ ಪಾಂಡವರನ್ನು ದುಃಶಾಸನಾದಿಗಳು ಅಣಕ ಮಾಡಿದ್ದು, ಎಲ್ಲ ಕೌರವರನ್ನೂ ಕೊಲ್ಲುವುದಾಗಿ ಭೀಮನ ಪ್ರತಿಜ್ಞೆ, ಪ್ರಾಣರಕ್ಷಣೆಗಾಗಿ ಕೌರವರ ದ್ರೋಣಶರಣಾಗತಿ, ಯುದ್ಧದಲ್ಲಿ

ಅವರ ಪರ ವಹಿಸಲು ದ್ರೋಣರ ವಚನ, ಭೀಮನ ಸಿಂಹದ ನಡಿಗೆಯನ್ನು ದುರ್ಯೋಧನ ಅಣಕವಾಡಿದ್ದು ಅವನ ಮತ್ತೊಂದು ತೊಡೆಯನ್ನು ಮುರಿಯುವುದಾಗಿ ಭೀಮನ ಉಗ್ರ ಶಪಥ, ಪಾಂಡವರ ವನವಾಸಕ್ಕೊಸ್ಕರ ನಿರ್ಗಮನ — ಇವು ಇಪ್ಪತ್ತೊಂದನೆಯ ಅಧ್ಯಾಯದ ಮುಖ್ಯಾಂಶಗಳು. ಸಭಾಪರ್ವದ ಸಮಗ್ರನಿರ್ಣಯ ಈ ಅಧ್ಯಾಯದಲ್ಲಿ ಬಂದಿದೆ. ಇದರ ಜೊತೆಗೆ ಹರಿವಂಶ, ಭಾಗವತಗಳಲ್ಲಿ ಬಂದಿರುವ ಕೃಷ್ಣನ ಮಹಿಮೆಯ ವಿವರಣೆಯೂ ಸೇರಿವೆ.

ಭೂಗೋಳವರ್ಣನೆ ಇಲ್ಲಿಯ ಅತ್ಯಪೂರ್ವ ಭಾಗಗಳಲ್ಲೊಂದು :

ಅಯಂ ದ್ವೀಪಃ ಸಾಗರಶ್ಚ ಲಕ್ಷಯೋಜನವಿಸ್ತೃತೌ ।
ತದನ್ಯೇ ತು ಕ್ರಮೇಣೈವ ದ್ವಿಗುಣೇನೋತ್ತರೋತ್ತರಾಃ ॥
ಅಂತ್ಯಾರ್ಧ್ಯರ್ಧಸ್ಥಲಂ ಹೈಮಂ ಬಾಹ್ಯತೋ ವಾಜ್ರಲೇಪಿಕಮ್ ।
ಏತತ್ ಸರ್ವಂ ಲೋಕನಾಮ ಹ್ಯೇತಸ್ಮಾದ್ದ್ವಿಗುಣಂ ತಮಃ ॥
ಅಂಧಂ ಯತ್ರ ಪತಂತ್ಯುಗ್ರಾ ಮಿಥ್ಯಾಜ್ಞಾನಪರಾಯಣಾಃ ।
ಘನೋದಕಂ ತದ್ದ್ವಿಗುಣಂ ತದಂತೇ ಧಾಮ ಮಾಮಕಮ್ ॥
ಯತ್ತದ್ದೃಷ್ಟಂ ತ್ವಯಾ ಪಾರ್ಥ ತತ್ರ ಮುಕ್ತೈರಜಾದಿಭಿಃ ।
ಸೇವ್ಯಮಾನಃ ಸ್ಥಿತೋ ನಿತ್ಯಂ ಸರ್ವೈಃ ಪರಮಪೂರುಷಃ ॥
ಲೋಕಾಲೋಕಪ್ರದೇಶಸ್ತು ಪಂಚಾಶಲ್ಲಕ್ಷವಿಸ್ತೃತಃ ।
ಸಪಂಚಾಶತ್ಸಹಸ್ರಶ್ಚ ತಸ್ಯಾಪಿ ಗಣನಂ ತಥಾ ॥
ಯೋಜನಾನಾಂ ಪಂಚವಿಂಶತ್ಕೋಟಯೋ ಮೇರುಪರ್ವತಾತ್ ।
ಚತಸೃಷ್ವಪಿ ದಿಕ್ಷೂರ್ಧ್ವಮಧಶ್ಚಾಂಡಂ ಪ್ರಕೀರ್ತಿತಮ್ ॥
ಅಬಗ್ನೀರನಭೋऽಹಂಕೃನ್ಮಹತತ್ತ್ವಗುಣತ್ರಯೈಃ ।
ಕ್ರಮಾದ್ ದಶಗುಣೈರೇತದಾವೃತಂ ಪರತಸ್ತತಃ ॥ – (೨೧/೪೧-೪೭)

ವಿವಿಧ ದೇವತಾಸಭೆಗಳಲ್ಲಿ ಉಪಾಸ್ಯಮಾನವಾದ ಭಗವದ್ರೂಪಗಳ ವಿವರ ಇಲ್ಲಿಯ ಮತ್ತೊಂದು ವಿಶೇಷಾಂಶ (೨೧/೬೫–೬೭):

ಉಪಾಸ್ಯಮಾನೋ ಭಗವಾನ್ ರಾಮೋ ಯಮಸಭಾತಲೇ ।
ಉಕ್ತ ಇಂದ್ರೇಣ ಚೋಪಾಸ್ಯೋ ವಾಮನಾತ್ಮಾ ಜನಾರ್ದನಃ ॥
ಪ್ರಾದುರ್ಭಾವಾಶ್ಚ ನಿಖಿಲಾ ಬ್ರಹ್ಮಣೋಪಾಸಿತಾಃ ಸದಾ ।
ವರುಣಸ್ಯಾನುಗಾ ನಾಗಾಸತ್ತ್ರ ಮತ್ಸ್ಯಾಕೃತಿರ್ಹರಿಃ ॥
ಗಂಧರ್ವಾ ಧನದಸ್ಯಾಪಿ ತತ್ರ ಕಲ್ಕೀ ಹರಿಃ ಪ್ರಭುಃ ।
ರುದ್ರಸ್ಯೋಗ್ರಾಣಿ ಭೂತಾನಿ ನೃಸಿಂಹಾತ್ಮಾ ಶಿವೇನ ಚ ॥

ಯಶಸ್ಸಿನ ಸೂತ್ರವಾಗಿ ಸ್ವರೂಪಯೋಗ್ಯತೆ, ಶ್ರೀಹರಿಯ ಅನುಗ್ರಹ ಮತ್ತು ಮಹಾಪ್ರಯತ್ನಗಳೆಂಬ ಮೂರು ಸಾಧನಗಳನ್ನು ಭೀಮಸೇನ ನಿರೂಪಿಸುವುದು ಸಾಧಕನಿಗೆ ಮಹಾಮಾರ್ಗದರ್ಶಕಸೂತ್ರ :

ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ ।
ಮಹಾಪ್ರಯತ್ನವರ್ಜಿತಾ ಜನಾ ನ ಜಗ್ಮುರುನ್ನತಿಮ್ ॥ – (೨೧/೯೫)

ರಾಜಸೂಯಯಾಗದ ಯಶಸ್ಸಿನಲ್ಲಿ ಜರಾಸಂಧವಧೆಯ ಸ್ಥಾನವನ್ನು ಕೃಷ್ಣ ನಿರೂಪಿಸಿದ ರೀತಿಯೂ ಭೀಮನ ಅಪಾರಹಿರಿಮೆಯನ್ನು ಅರ್ಥ ಮಾಡಿಕೊಳ್ಳಲು ಅತ್ಯಂತ ಉಪಯುಕ್ತ:

ಯದಿ ಸ್ಮ ತೇನ ಮಾಗಧೋ ನಿಹನ್ಯತೇ ಸತಾಂ ಜಯಃ ।
ವಿಪರ್ಯಯೇಣ ಚಾಸತಾಮಿತಿ ಸ್ಮ ವಿದ್ಧಿ ನಾನ್ಯಥಾ ॥
ಸ ಪಾರಮೇಷ್ಮ್ಯಸತ್ಪದಂ ಪ್ರಯಾತ್ಯಸಂಶಯಂ ಯುಧಿ ।
ಯ ಏವ ಹಂತಿ ಮಾಗಧಂ ಸ ವೇದಧರ್ಮಪಾಲಕಃ ॥
ನಿಹಂತಿ ಮಾಗಧೇಶ್ವರಂ ಸ ಏವ ವೈಷ್ಣವಂ ಜಗತ್ ।
ಕರೋತಿ ಶರ್ವಪಾಲಿತೋ ಯತಃ ಸ ಬಾರುಹದ್ರಥಃ ॥
ನಿಹಂತಿ ಶೈವನಾಯಕಂ ಯ ಏವ ವೈಷ್ಣವಾಗ್ರಣೀಃ ।
ಇತಿ ಸ್ಮ ಭಾವಸಂಯುತೇ ವದತ್ಯಜೇಽಬಭೀನ್ನೃಪಃ ॥ – (೨೧/೧೦೦-೧೦೩)

ರಾಜಸೂಯಯಾಗದ ಪುಣ್ಯಫಲದ ವಿಭಾಗಕಥನ ಇಲ್ಲಿಯ ಮತ್ತೊಂದು ಅಪೂರ್ವಭಾಗ. ಪುಣ್ಯಪಾಪಗಳ ವಿಭಾಗದ ಪರಿ ಇಲ್ಲಿಯ ಮತ್ತೊಂದು ಮಹತ್ತ್ವದ ವಿವರ. ರಾಜಸೂಯಯಾಗದಲ್ಲಿ ತತ್ತ್ವನಿರ್ಣಾಯಕಕಥೆಗಳು ನಡೆದದ್ದನ್ನು ನಿರೂಪಿಸುವ ಶ್ಲೋಕ ಹೀಗಿದೆ :

ತತ್ರ ಸರ್ವಜಗದೇಕಸಂಗಮೇ ತತ್ತ್ವನಿರ್ಣಯಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ ವ್ಯಾಸ ಏವ ಭಗವಾನ್ ಬಭೂವ ಹ ॥
ತತ್ತ್ವನಿರ್ಣಯಕಥಾಸು ನಿರ್ಣಯೋ ವಾಸುದೇವಗುಣವಿಸ್ತರೋಽಭವತ್ ।
ನಾಸ್ತಿ ತತ್ಸದೃಶ ಉತ್ತಮಃ ಕುತಃ ಪಾರ ಏಷ ನ ತತೋಽನ್ಯ ಇತ್ಯಪಿ ॥ –(೨೧/೨೩೬,೨೩೭)

ಶ್ರೀಹರಿಯ ಶ್ರೀವೇದವ್ಯಾಸ ಹಾಗೂ ಶ್ರೀಪರಶುರಾಮರೂಪಗಳು ಉಪಸ್ಥಿತವಿದ್ದರೂ, ಕೃಷ್ಣರೂಪಕ್ಕೇ ಅಗ್ರಪೂಜೆ ನಡೆಸಲು ಭೀಷ್ಮರು ನೀಡಿದ ಕಾರಣದ ಹಿನ್ನೆಲೆಯನ್ನೂ ಇಲ್ಲಿ ವಿವರಿಸಿರುವ ರೀತಿ ಅತ್ಯಂತ [೧]ಮನೋಜ್ಞವಾಗಿದೆ.

ದುರ್ಯೋಧನ ಮಯಸಭೆಯಲ್ಲಿ ಹಾಸ್ಯಾಸ್ಪದ ರೀತಿಯಲ್ಲಿ ಅವಮಾನಕ್ಕೆ ಗುರಿ–ಯಾಗುವುದರ ನಿರೂಪಣೆಯೂ ತುಂಬಾ [೨]ಮಾರ್ಮಿಕವಾದುದು. ದ್ರೌಪದಿ ಸಭೆಯಲ್ಲಿ ಭೀಷ್ಮಾದಿಗಳನ್ನು ನಿರುತ್ತರರಾಗುವಂತೆ [೩]ವಾದಿಸಿದ ರೀತಿ ಆಕೆ ಶ್ರೇಷ್ಠ ಬ್ರಹ್ಮವಾದಿನಿ ಎಂಬುದನ್ನು

---

೧. ಅವಿವಾದೇ ಪ್ರಸಿದ್ಧಿಶ್ಚ ನೈವಾಸ್ಯ ಭವಿತಾ ಕ್ವಚಿತ್ ।
ತಸ್ಮಾತ್ ಕೃಷ್ಣಾಯ ದಾತವ್ಯಮಿತಿ ಭೀಷ್ಮೇಣ ಚಿಂತಿತಮ್ ॥
ಕೃಷ್ಣಾಯ ದತ್ತೇ ರಾಜಾನೋ ವಿವಾದಂ ಕುರ್ಯುರಂಜಸಾ ।
ವಿವಾದೇನ ಚ ಕೀರ್ತಿಃ ಸ್ಯಾದ್ವಾಸುದೇವಸ್ಯ ವಿಸ್ತೃತಾ ॥ – (೨೧/೨೪೭, ೨೪೮)

ಸ್ಫುಟಪಡಿಸುವುದು. ಆ ಸಭೆಯಲ್ಲಿ ಭೀಮಸೇನ ತೋರುವ ಅದ್ಭುತಪರಾಕ್ರಮ ಹಾಗೂ ತೊಡುವ ಶಪಥಗಳ ರೀತಿ ಅತ್ಯಂತ ಪರಿಣಾಮಕಾರಿಯಾದುದು.

******

ಹಿಂದಿನ ಸಂಪುಟದಂತೆ ಈ ಸಂಪುಟದಲ್ಲೂ ಮೂಲಶ್ಲೋಕಗಳು, ಅದರ ಅನುವಾದ, ವಿವರಣೆ, ಸಂವಾದಿಯಾದ ಮೂಲಗ್ರಂಥಗಳ ಶ್ಲೋಕಗಳು, ಅಡಿಟಿಪ್ಪಣಿಯಲ್ಲಿ ವ್ಯಾಖ್ಯಾನಗಳ ವಿಶೇಷಾಂಶಗಳು ಮೊದಲಾದವುಗಳನ್ನು ಕೊಡಲಾಗಿದೆ. ಇತರ ವಿಶೇಷಾಂಶಗಳನ್ನು ಕೊನೆಯ ಸಂಪುಟದ ಮುನ್ನುಡಿಯಲ್ಲಿ ಕಾಣಬಹುದು.

******

ಪ್ರಸುತ್ತ ಸಂಪುಟದ ಪ್ರಕಾಶನಕ್ಕೂ **ಶ್ರೀಮತಿ ಶುಭಾ ರಂಗನಾಥ್** ಮತ್ತು **ಶ್ರೀ ಡಿ.ಎಸ್.ರಂಗನಾಥ್** ದಂಪತಿಗಳು ತಮ್ಮ ಸುಪುತ್ರ ದಿ॥ **ಶ್ರೀನಿವಾಸ ಶ್ರೇಯಸ್**ನ ಶ್ರೇಯಸ್ಸಿಗಾಗಿ ಆರ್ಥಿಕವಾಗಿ ಸೇವೆ ಸಲ್ಲಿಸಿ, ವಿಶೇಷಪುಣ್ಯಭಾಗಿಗಳಾಗಿರುವರು. ಇಂತಹ ಅನುಪಮ ಪುಣ್ಯಕಾರ್ಯಕ್ಕಾಗಿ ಈ ದಂಪತಿಗಳನ್ನು ನಮ್ಮ ಪ್ರತಿಷ್ಠಾನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಅವರ ಸುಪುತ್ರನ ಸದ್ಗತಿಪ್ರಾಪ್ತಿಗಾಗಿ ಪ್ರಾರ್ಥಿಸುವಲ್ಲಿ ತಾನೂ ಭಾಗಿಯಾಗಿದೆ.

ಬೆಂಗಳೂರು — ವ್ಯಾಸನಕೆರೆ ಪ್ರಭಂಜನಾಚಾರ್ಯ

ತಾರಣ – ಬಲಿಪ್ರತಿಪತ್ (ದೀಪಾವಳಿ)

೧೩–೧೧–೨೦೦೪, ಶನಿವಾರ

---

೨. ದ್ವಾರಂ ಸಭಾಯಾ ಹರಿನೀಲರಶ್ಮಿವ್ಯೂಢಂ ನ ಜಾನನ್ ಸ ವಿಹಾಯ ಭಿತ್ತಿಮ್ ।
ಅಭ್ಯಂತರಾಣಾಂ ದೃಶಿ ನೋ ವಿಘಾತಿನೀಂ ಸಂಸ್ಫಾಟಕಾಮಾಶು ದೃಢಂ ಚುಚುಂಬೇ ॥...
ತತ್ರೇಂದ್ರನೀಲಭುವಿ ರತ್ನಮಯಾನಿ ದೃಷ್ಟ್ವಾ ಪದ್ಮಾನಿ ನೀರಮನಸಾ ಜಗೃಹೇ ಸ್ವವಸ್ತ್ರಮ್ ।
ರತ್ನೋರುದೀಧಿತಿನಿಗೂಢಜಲಂ ಸ್ಥಲಂ ಚ ಮತ್ವಾ ಪಪಾತ ಸಹಿತೋಽವರಜೈರ್ಜಲೌಘೇ ॥
– (೨೧/೨೭, ೨೭೬) ॥

೩. ಅಧರ್ಮ ಏಷ ವಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ॥
ಕಥಂ ಫಲಾತ್ಮಕೇ ದ್ಯೂತೇ ಜಿತೇ ಧರ್ಮಜಯೋ ಭವೇತ್ ।
ನ ಹಿ ದ್ಯೂತಂ ಧರ್ಮಮಾಹುರ್ವಿಶೇಷೇಣ ತು ಭೂಭುಜಾಮ್ ॥
ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥
ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ ।... – (೨೧/೩೨೩-೩೨೭)

ಅಧ್ಯಾಯ - ೧೮

(ಭೀಮಾರ್ಜುನದಿಗ್ವಿಜಯಃ)

(ಭೀಮನ ಶುದ್ಧಭಾಗವತಧರ್ಮ, ಅಸ್ತ್ರವಿದ್ಯಾಪರೀಕ್ಷೆ, ದ್ರುಪದಪರಾಭವ, ಧೃಷ್ಟದ್ಯುಮ್ನದ್ರೌಪದಿಯರ ಉತ್ಪತ್ತಿ, ಯುಧಿಷ್ಠಿರನಿಗೆ ಯೌವರಾಜ್ಯ)

ಅರ್ಜುನನ ಅಸ್ತ್ರವಿದ್ಯಾಪ್ರಾವೀಣ್ಯ

ಯದಾ ರಾಮಾದವಾಪ್ತಾನಿ ದಿವ್ಯಾಸ್ತ್ರಾಣಿ ಪ್ರಪೇದಿರೇ ।
ದ್ರೋಣಾತ್ ಕುಮಾರಾಸ್ತೇಷ್ವಾಸೀತ್ ಸರ್ವೇಷ್ವಪ್ಯಧಿಕೋಽರ್ಜುನಃ॥ ೧ ॥

ಅ: ದ್ರೋಣರು ಪರಶುರಾಮದೇವರಿಂದ ಪಡೆದಿದ್ದ ದಿವ್ಯಾಸ್ತ್ರಗಳನ್ನು, ಅವರಿಂದ ರಾಜಕುಮಾರರು ಕಲಿತುಕೊಂಡರು. ಅವರೆಲ್ಲರೊಳಗೆ ಅರ್ಜುನ ಮಿಗಿಲೆನ್ನಿಸಿದ.

ವಿ: ಆವರೆಗೂ ಕ್ಷತ್ರಿಯರಿಗೆ ದುರ್ಲಭವಾಗಿದ್ದ ಪರಶುರಾಮದೇವರ ದಿವ್ಯಾಸ್ತ್ರಗಳು ದ್ರೋಣರ ಮೂಲಕ ಅವರಿಗೆ ದೊರೆಯುವಂತಾಯಿತು ಎಂಬುದು ವಿಶೇಷ. ದ್ರೋಣರು ವಚನ ನೀಡಿದ್ದಂತೆ ಅರ್ಜುನನನ್ನು ಅಸ್ತ್ರಜ್ಞಶಿರೋಮಣಿಯನ್ನಾಗಿ ಮಾಡಿದರು. ಅದಕ್ಕೆ ಅರ್ಜುನನಿಗಿದ್ದ ವಿಶೇಷವಾದ ಅರ್ಹತೆಯೂ ಕಾರಣವಾಗಿತ್ತು.

ಭೀಮಸೇನನ ಪರಿಶುದ್ಧ ಭಾಗವತಧರ್ಮ

ನಿಜಪ್ರತಿಭಯಾ ಜಾನನ್ ಸರ್ವಾಸ್ತ್ರಾಣ್ಯತೋಽಧಿಕಮ್ ।
ನಾಸ್ತ್ರಯುದ್ಧಂ ಕ್ವಚಿದ್ಭೀಮೋ ಮನ್ಯತೇ ಧರ್ಮಮಂಜಸಾ ॥ ೨ ॥

ಅ: ಭೀಮಸೇನ ತನ್ನ ಸ್ವಾಭಾವಿಕ ಪ್ರತಿಭೆಯಿಂದ ಸಕಲ ಅಸ್ತ್ರಗಳನ್ನೂ ಅದಕ್ಕಿಂತಲೂ ಹೆಚ್ಚಾಗಿಯೇ ತಿಳಿದಿದ್ದನು. ಆದರೆ, ಎಂದೂ ಭೀಮಸೇನ ಅಸ್ತ್ರಯುದ್ಧವನ್ನು ಶ್ರೇಷ್ಠ ಧರ್ಮವೆಂದು ಭಾವಿಸಿರಲಿಲ್ಲ.

ವಿ: ಅರ್ಜುನನಿಗಿಂತಲೂ ಮಿಗಿಲಾಗಿದ್ದ ಅಸ್ತ್ರಜ್ಞ ಭೀಮಸೇನನಾಗಿದ್ದ. ಅವನ್ನೆಲ್ಲಾ ಹಾಗೆ ಸ್ವಯಂಪ್ರತಿಭೆಯಿಂದಲೇ [೩]ತಿಳಿಯುವಂತಹ ಹಿರಿಮೆ ಅವನದ್ದು. ಆದರೂ, ಭೀಮಸೇನ ಅಸ್ತ್ರಯುದ್ಧವನ್ನು ಎಂತಹ ಪ್ರಸಂಗದಲ್ಲೂ ಸಾಮಾನ್ಯವಾಗಿ ಮಾಡುತ್ತಿರಲಿಲ್ಲ. ಅದಕ್ಕೆ ಅದು ಅಷ್ಟು ಉತ್ತಮವಾದ ಧರ್ಮ ಅಲ್ಲ ಎಂಬ ವಿಚಾರ ಕಾರಣವಾಗಿತ್ತು.

---

೧. सर्वेषामेव शिष्याणां बभूवाभ्यधिकोऽर्जुनः ॥ –ಭಾರತ (ಆದಿ. ೧೩೧/೧೩)

೨. ಅಂಜಸಾ ಧರ್ಮಂ ಮುಖ್ಯಧರ್ಮಮ್ । – (ತಾ.)

೩. ಈಶ್ವರಾದನ್ಯತ್ರ ಆಲೋಚನೇ ಸರ್ವವಿಷಯಂ ಋಜುಯೋಗಿಜ್ಞಾನಮ್ ॥ – (ಪ್ರಮಾಣಪದ್ಧತಿ)

ಯಾಚನೆ ಭಾಗವತಧರ್ಮವಲ್ಲ

ನ ಹಿ ಭಾಗವತೋ ಧರ್ಮೋ ದೇವತಾಭ್ಯುಪಯಾಚನಮ್ ।
ಜ್ಞಾನಭಕ್ತೀ ಹರೇಸ್ತೃಪ್ತಿಂ ವಿನಾ ವಿಷ್ಣೋರಪಿ ಕ್ವಚಿತ್ ।
ನಾಕಾಂಕ್ಷ್ಯಂ ಕಿಮುತಾನ್ಯೇಭ್ಯೋ ಹ್ಯಸ್ತ್ರಂ ಕಾಮ್ಯಫಲಪ್ರದಮ್ ॥ ೩ ॥

ಅ: ದೇವತೆಗಳನ್ನು ಬೇಡುವುದು ಭಾಗವತಧರ್ಮವೆನ್ನಿಸದಲ್ಲವೇ!. ಸಾಕ್ಷಾತ್ ಶ್ರೀಹರಿಯಿಂದಲೂ ಜ್ಞಾನ, ಭಕ್ತಿ ಮತ್ತು ಅವನ ತೃಪ್ತಿಯನ್ನು ಹೊರತು ಬೇರೆ ಏನನ್ನೂ ಬೇಡಬಾರದು. ಎಂದಮೇಲೆ ಉಳಿದವರಿಂದ ಬಯಸಬಾರದು ಎಂಬುದು ಕೈಮುತ್ಯಸಿದ್ಧ. ಅಸ್ತ್ರವು ಕಾಮ್ಯಫಲವನ್ನು ನೀಡುವಂತಹುದಲ್ಲವೇ!

ವಿ: ೧) ಅಸ್ತ್ರಯುದ್ಧ ಉತ್ತಮ ಧರ್ಮವಲ್ಲ ಎಂಬುದಕ್ಕೆ ವಿವರಣೆ ಇಲ್ಲಿದೆ. ಅಸ್ತ್ರಯುದ್ಧವೆಂದರೆ ಅಸ್ತ್ರಾಭಿಮಾನಿ ದೇವತೆಗಳನ್ನು ಪ್ರಾರ್ಥಿಸಿ ಅಸ್ತ್ರಗಳನ್ನು ಪ್ರಯೋಗಿಸುವುದು ಎಂದರ್ಥ. ಹಾಗೆ ಪ್ರಯೋಗಿಸುವಾಗ ತಮ್ಮ ಗುರಿ ಈಡೇರುವಂತೆ ಅವರ ಅನುಗ್ರಹವನ್ನು ಬೇಡಿಕೊಳ್ಳಬೇಕಾಗುವುದು. ಹಾಗೆ ಬೇಡುವುದು ಭಾಗವತಧರ್ಮವಲ್ಲ ಎಂದರ್ಥ.

೨) ದೇವತೆಗಳನ್ನಿರಲಿ, ಸಾಕ್ಷಾತ್ ಶ್ರೀಹರಿಯನ್ನೂ ಸಹ ಜ್ಞಾನ, ಭಕ್ತಿ ಹಾಗೂ ಅವನ ತೃಪ್ತಿಯನ್ನು ಹೊರತು ಬೇರೇನನ್ನೂ ಕೇಳಬಾರದು ಎಂಬುದು ಶಾಸ್ತ್ರದ ಆದೇಶ – 'ಮಾ ಫಲೇಷು ಕದಾಚನ', 'ಮಾಗೃಧಃ ಕಸ್ಯಸ್ವಿದ್ಧನಂ'. ಇತರ ದೇವತೆಗಳಂತೂ ಸ್ವಾತಂತ್ರ್ಯೇಣ ಫಲ ನೀಡುವವರೇ ಅಲ್ಲ ಎಂದಮೇಲೆ ಅವರನ್ನು ಹಾಗೆ ಕೇಳುವ ಪ್ರಸಕ್ತಿ ಒದಗುವುದೇ ಇಲ್ಲ ಎಂದರ್ಥ. ಅಸ್ತ್ರಯುದ್ಧವೆಂದರೆ ಮೇಲೆ ಹೇಳಿದಂತೆ ಕಾಮ್ಯಫಲ ಕೇಳುವಂತಹುದೇ. ಆದ್ದರಿಂದ, ಅದು ಶ್ರೇಷ್ಠ ಧರ್ಮವಲ್ಲ ಎಂದು ನಿರ್ಣಯ.

ಶುದ್ಧೋ ಭಾಗವತೇ ಧರ್ಮೇ ನಿರತೋ ಯದ್ವೃಕೋದರಃ ।
ನ ಕಾಮ್ಯಕರ್ಮಕೃತ್ ತಸ್ಮಾನ್ನಾಯಾಚದ್ದೇವಮಾನುಷಾನ್ ॥ ೪ ॥

---

೧. ಭಕ್ತಿರ್ಜ್ಞಾನಂ ವಿರಕ್ತಿಶ್ಚ ನವಕಃ ಶ್ರವಣಾದಿಕಃ ।
ಧರ್ಮೋ ಭಾಗವತಃ ಪ್ರೋಕ್ತಸ್ತದ್ಭಕ್ತೇಷು ತಥಾ ನವ ॥ ಇತಿ ತಂತ್ರಸಾರೇ । – ಭಾ.ತಾ.(೭/೧೦/೪೬)

೨. ತದಧೀನಪ್ರವೃತ್ತಿತ್ವಾತ್ ತದೀಯಂ ಸರ್ವಮೇವ ಯತ್ ।
ತದ್ದತ್ತೇನೈವ ಭುಂಜೀಥಾ ಅತೋ ನಾನ್ಯಂ ಪ್ರಯಾಚಯೇತ್। ಬ್ರಹ್ಮಾಂಡೇ॥ – ಈಶಾವಾಸ್ಯಭಾಷ್ಯ

೩. ಕಾಮ್ಯಫಲಪ್ರದಮಸ್ತ್ರಂ ಅನ್ಯೇಭ್ಯೋ ದೇವೇಭ್ಯೋ ನಾಕಾಂಕ್ಷ್ಯಮಿತಿ ಕಿಮ್ । ಆಧಿಕಾರಿಕದೇವಾನಾಂ ಸ್ವಾಧಿಕಾರಾಭಿಕಾಮನಂ ಚೇತ್ ಆಧಿಕಾರಿಕಾಣಾಂ ಭಗವತ್ಪ್ರೀತ್ಯರ್ಥತ್ವಾತ್ ತೃಪ್ತಿಪದೇನೈವ ವಿವಕ್ಷಿತಮಿತಿ ಭಾವಃ ।
– (ತಾ.)

ಅ: ಭೀಮಸೇನ ಪರಿಶುದ್ಧವಾದ ಭಾಗವತಧರ್ಮದಲ್ಲಿ ನಿರತನಾದವನು. ಎಂದೂ ಕಾಮ್ಯಕರ್ಮವನ್ನು ನಡೆಸದವನು. ಆದ್ದರಿಂದಲೇ ದೇವತೆಗಳನ್ನಾಗಲೀ, ಮನುಷ್ಯರನ್ನಾಗಲೀ ಎಂದೂ ಬೇಡಲೇ ಇಲ್ಲ.

ವಿ: ಭೀಮಸೇನನದು ಪರಿಶುದ್ಧ ಧರ್ಮದೀಕ್ಷೆ. ಕಾಮ್ಯಕರ್ಮವನ್ನು ಎಂದೂ ಮಾಡದ, ದೇವತೆಗಳನ್ನಾಗಲೀ, ಮನುಷ್ಯರನ್ನಾಗಲೀ ಎಂದೂ ಯಾವುದನ್ನೂ ಬೇಡದ ಹಿರಿಮೆ ಅವನದ್ದು.

ನ ಹಿ ಯಾಚಂತಿ ರಾಜಾನ ಏಷ ಧರ್ಮಃ ಸನಾತನಃ ॥ – ಭಾರತ(ವನ. ೧೫೪/೧೦)

ನ ಹರಿಶ್ಚಾರ್ಥಿತಸ್ತೇನ[೧] ಕದಾಚಿತ್ ಕಾಮ್ಯಲಿಪ್ಸಯಾ ।
ಭಿಕ್ಷಾಮಟಂಶ್ಚ ಹುಂಕಾರಾತ್ ಕರವದ್ವೈಶ್ಯತೋಽಗ್ರಹೀತ್ ॥ ೫ ॥

ಅ: ಶ್ರೀಹರಿಯನ್ನು ಸಹ ಅವನೆಂದೂ ಕಾಮ್ಯಫಲದ ಬಯಕೆಯಿಂದ ಬೇಡಿಲ್ಲ. ಭಿಕ್ಷೆ ಬೇಡುವಾಗಲೂ ಅದನ್ನು ಹುಂಕಾರದಿಂದ ವೈಶ್ಯರಿಂದ ಕಪ್ಪ ಸ್ವೀಕರಿಸುವಂತೆ ಸ್ವೀಕರಿಸುತ್ತಿದ್ದ.

ವಿ : ಏಕಚಕ್ರನಗರದಲ್ಲಿ ಕೆಲವು ದಿನ ಭಿಕ್ಷೆ ಬೇಡುವ ಪ್ರಸಂಗದಲ್ಲೂ ಭೀಮಸೇನ 'ದೇಹಿ' ಎಂದು ಭಿಕ್ಷೆ ಬೇಡಲಿಲ್ಲ. ವೈಶ್ಯರ ಮನೆಗಳ ಮುಂದೆ ಹುಂಕಾರದಿಂದ ಕಪ್ಪದಂತೆ ಅದನ್ನು ಅಧಿಕಾರಯುತವಾಗಿ ಪಡೆಯುತ್ತಿದ್ದನೇ ಹೊರತು ಯಾಚನೆಯಿಂದಲ್ಲ. ಭೀಮನ ಹುಂಕಾರಕ್ಕೆ ಮಣಿದ ಜನ ಭಿಕ್ಷೆ ನೀಡುತ್ತಿದ್ದರು. ಅದರಿಂದಾಗಿ ಅವನಿಗೆ ಯಾಚನೆಯ ದೋಷ ಎಂದೂ ತಪ್ಪಿದ್ದಲ್ಲ.

ಭೀಮನ ವೈಷ್ಣವದೀಕ್ಷೆ

ನಾನ್ಯದೇವಾನತಾಸ್ತೇನ ವಾಸುದೇವಾನ್ನ ಪೂಜಿತಾಃ ।
ನ ಪ್ರತೀಪಂ[೨] ಹರೇಃ ಕ್ವಾಪಿ ಸ ಕರೋತಿ ಕಥಂಚನ ॥ ೬ ॥

---

೧. ವಿಷ್ಣೋಃ ಪ್ರಕಾಶಂ ತಂ ಚಾಪಿ ನಿತ್ಯಭಕ್ತ್ಯಾಭಿಸೇವತೇ ।
ಸುಖದುಃಖಾದಿಭಾವೇಽಪಿ ವಿಷ್ಣುಭಕ್ತೌ ಸಮಃ ಸದಾ ।
ಅರ್ಥಾರ್ಥಂ ವಾ ಪ್ರಿಯಾರ್ಥಂ ವಾ ನಿಂದಾದೀನಾಂ ಭಯಾದಪಿ ।
ನ ವಿಷ್ಣುಭಕ್ತಿಹ್ರಾಸೋಽಸ್ಯ ಕಿಂತು ಸಾಮ್ಯಮಥೋನ್ನತಿಃ ।
ಅವೈಷ್ಣವಾರಂಭವರ್ಜೀ ವಿಷ್ಣುಂ ಯಾತಿ ನ ಸಂಶಯಃ' ಇತಿ ಚ ॥ - ಗೀತಾತಾತ್ಪರ್ಯ (೧೪/೨೨-೨೪)

೨. ನ ಬ್ರಾಹ್ಮಣಾದಿಭ್ಯ ಇತ್ಯರ್ಥಃ । ತಂ ತಥಾ ಸತಿ ಹುಂಕಾರಾನುಪಪತ್ತೇರಿತಿ ಭಾವಃ । ಭೀಮೋ ವಿಶಾಂ ಸದನ ಏವೇತಿ ವಕ್ಷ್ಯತಿ । – (ತಾ.)

೩. ಪ್ರತೀಪಂ ವಿರೋಧಮ್ । – (ವ.)

ಅ: ಶ್ರೀಹರಿಯ ಹೊರತು ಇತರ ದೇವತೆಗಳಿಗೆ ಭೀಮ ಎಂದೂ ಮಣಿದಿಲ್ಲ; ಅವರನ್ನು ಪೂಜಿಸಿಯೂ ಇಲ್ಲ. ಶ್ರೀಹರಿಗೆ ಎಂದೂ ಯಾವ ರೀತಿಯಲ್ಲೂ ವಿರೋಧವನ್ನು ಮಾಡಿಲ್ಲ.

ವಿ : ೧) ಪ್ರಾಸಂಗಿಕವಾಗಿ ಇತರ ಭಾಗವತಧರ್ಮಗಳನ್ನು ಇಲ್ಲಿ ವಿವರಿಸುತ್ತಿರುವರು. ಶ್ರೀಹರಿಯ ಹೊರತು ಇತರ ದೇವತೆಗಳನ್ನು ಸರ್ವೋತ್ತಮತ್ವೇನ ಪೂಜಿಸುವುದು ಯಾರಿಗೂ ಧರ್ಮವಲ್ಲ.

೨) ಅದರಂತೆ ಶ್ರೀಹರಿಗೆ ವಿರೋಧ ಮಾಡುವುದೂ ಸಹ ಸರ್ವಥಾ ಅಧರ್ಮ. ಭೀಮ ಇಂತಹ ಅಧರ್ಮವನ್ನು ಎಂದೂ ಮಾಡದೇ ಸದಾ ಧರ್ಮಪಾಲನೆ ಮಾಡುತ್ತಿದ್ದ.

ಅನುಪಸ್ಕರಿಣ[೧]ಕೋ ಯುದ್ಧೇ ನಾಭಿಯಾತಿ ಹ್ಯುಪಸ್ಕರೀ[೨] ।
ನಾಪಯಾತಿ ಯುಧಃ ಕ್ವಾಪಿ ನ ಕ್ವಚಿಚ್ಛದ್ಮ ಚಾಚರೇತ್ ॥ ೭ ॥

ಅ: ಭೀಮ ಯುದ್ಧದಲ್ಲಿ ನಿರಾಯುಧರ ಮೇಲೆ ಆಯುಧಪಾಣಿಯಾಗಿ ಯುದ್ಧ ಮಾಡಿಲ್ಲ. ಎಂದೂ ಯುದ್ಧದಿಂದ ಪಲಾಯನವನ್ನೂ ಮಾಡಿಲ್ಲ; ಕಪಟ ವಂಚನೆಗಳನ್ನೂ ನಡೆಸಿಲ್ಲ.

ವಿ: ೧) ನಿರಾಯುಧರ ಮೇಲೆ ಸಾಯುಧನಾಗಿ ಕಾದುವುದು, ಯುದ್ಧದಿಂದ ಪಲಾಯನ ಮಾಡುವುದು, ಮೋಸ ಮಾಡುವುದು ಸಹ [೩]ಭಾಗವತಧರ್ಮವಲ್ಲ ಎಂದರ್ಥ.

೨) ಇಡೀ ಮಹಾಭಾರತದಲ್ಲಿ ಒಂದು ಬಾರಿಯೂ ಸಹ ಭೀಮಸೇನ ಶತ್ರುಗಳಿಗೆ ಬೆನ್ನು ತೋರಿಸಿಲ್ಲ ಎಂಬುದು ಅಪೂರ್ವ ಹಿರಿಮೆ. ದುರ್ಯೋಧನಾದಿಗಳು ಹಾಗೆ ಪಲಾಯನ ಮಾಡಿದ್ದು ಅದೆಷ್ಟು ಬಾರಿಯೋ!!

ನ ಚೌರ್ಧ್ವದೈಹಿಕಾನುಜ್ಞಾಮವೈಷ್ಣವಕೃತೇ[೪]ಽಕರೋತ್ ।
ನ ಕರೋತಿ ಸ್ವಯಂ ನೈಷಾಂ ಪ್ರಿಯಮಪ್ಯಾಚರೇತ್ ಕ್ವಚಿತ್ ॥ ೮ ॥

ಅ: ಭೀಮಸೇನ ವಿಷ್ಣುದ್ವೇಷಿಗಳ ಅಂತ್ಯಕ್ರಿಯೆಗೂ ಅನುಮತಿಯನ್ನೂ ನೀಡಲಿಲ್ಲ, ಸ್ವತಃ ತಾನೂ ಮಾಡಲಿಲ್ಲ. ಹರಿದ್ವೇಷಿಗಳಿಗೆ ಪ್ರಿಯವಾಗುವಂತೆ ಎಂದೂ ನಡೆದುಕೊಂಡಿಲ್ಲ.

---

೧. ಅನುಪಸ್ಕರಿಣಃ ಕವಚಾಸ್ತಾದಿರಹಿತಾನ್ ಸ್ವಯಂ ಉಪಸ್ಕರೀ ಕವಚಾದಿಮಾನ್ ..... ಛದ್ಮ ಅದೃಶ್ಯತ್ವಾದಿ। – (ಜ.)

೨. ಸ್ವಯಮುಪಸ್ಕರೀ ಕವಚಾದಿಮಾನ್ ಯುದ್ಧಾಯ ಯುದ್ಧಾರ್ಥಮ್ । – (ವ.)

೩. ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ – ಗೀತಾ (೧೮/೪೩.)

೪. ನೈವೋರ್ಧ್ವದೈಹಿಕಾನುಜ್ಞಾಮಿತ್ಯತ್ರ ಅವೈಷ್ಣವಕೃತೇ ಊರ್ಧ್ವಂ ದೈಹಿಕಂ ಕುರ್ವಿತ್ಯನುಜ್ಞಾಂ ನಾಕರೋತ್।
ಸ್ವಯಂ ನ ಕರೋತಿ ಚ ॥ – (ವಾ.)

ವಿ: ೧) ವಿಷ್ಣುಭಕ್ತರನ್ನು ಗೌರವಿಸುವಂತೆ, ವಿಷ್ಣುದ್ವೇಷಿಗಳನ್ನು ಪ್ರತಿಭಟಿಸುವುದೂ ಸಹ ಭಾಗವತಧರ್ಮದ ಅಂಗ. ದೇಶಭಕ್ತರನ್ನು ಗೌರವಿಸುವಂತೆ ದೇಶದ್ರೋಹಿಗಳನ್ನು ವಿರೋಧಿಸುವುದೂ ಕರ್ತವ್ಯವಲ್ಲವೆ!. ಅದನ್ನು ಭೀಮಸೇನ ಪರಿಪೂರ್ಣವಾಗಿಯೇ ಪಾಲಿಸಿರುವನು.

೨) ಧೃತರಾಷ್ಟ್ರ ಕೌರವರಿಗೆ ಶ್ರಾದ್ಧ ಮಾಡಿ ವನಗಮನಕ್ಕೆ ತೆರಳಲು ಯೋಚಿಸಿದ್ದಾಗ ಅದಕ್ಕೆ ಸ್ವತಃ ಧರ್ಮರಾಜ ಆದೇಶ ನೀಡಿದರೂ, ಅದನ್ನು ಭೀಮಸೇನ ಪ್ರತಿಭಟಿಸಿದ ಪ್ರಸಂಗ ಮುಂದೆ ಬರುವುದು(೩೧/೩೧–೩೬). ವಿಷ್ಣುದ್ವೇಷಿಗಳಾದ ದುರ್ಯೋಧನಾದಿಗಳಿಗೆ ಕರ್ಣಾದಿಗಳು ಅನುಕೂಲವಾಗಿ ನಡೆದುಕೊಂಡಂತೆ ಭೀಮ ಎಂದೂ ನಡೆದುಕೊಳ್ಳಲಿಲ್ಲ.

ಸಖ್ಯಂ[೧] ನಾವೈಷ್ಣವೈಶ್ಚಕ್ರೇ ಪ್ರತೀಪಂ[೨] ವೈಷ್ಣವೇನ ತು ।
ಪರೋಕ್ಷೇಽಪಿ ಹರೇರ್ನಿಂದಾಕೃತೋ ಜಿಹ್ವಾಂ ಛಿನತ್ತಿ[೩] ಚ ॥ ೯ ॥

ಅ: ಅವೈಷ್ಣವರೊಡನೆ ಭೀಮಸೇನ ಸ್ನೇಹವನ್ನೂ ಬೆಳೆಸಲಿಲ್ಲ; ವೈಷ್ಣವರಲ್ಲಿ ವೈರವನ್ನೂ ಮಾಡಲಿಲ್ಲ. ತನ್ನ ಕಣ್ಣಿಗೆ ಬೀಳದಂತೆ ಹರಿಯನ್ನು ನಿಂದಿಸಿದವರ [೩]ನಾಲಿಗೆಯನ್ನು ಸಹ ಸೀಳಿ ಹಾಕುತ್ತಿದ್ದ.

ವಿ: ವಿಷ್ಣುಭಕ್ತರ ದ್ವೇಷ ನವವಿಧದ್ವೇಷಗಳಲ್ಲಿ ಒಂದಾಗಿರುವಂತೆ, ವಿಷ್ಣುದ್ವೇಷಿಗಳಲ್ಲಿ ಪ್ರೀತಿಯೂ ಅಂತಹ ದ್ವೇಷದ ಒಂದು ಮುಖ. ಎಂದೂ ಅವೈಷ್ಣವರೊಂದಿಗೆ ಭೀಮಸೇನ ಯಾವ ಕಾರಣಕ್ಕೂ ಸ್ನೇಹ ಬೆಳೆಸಲಿಲ್ಲ. ಹರಿನಿಂದೆಯನ್ನು ಎದುರಿಗೆ ಮಾಡಿದರಿರಲಿ, ಎಲ್ಲೋ ಮಾಡಿದರೂ ಅವರನ್ನು ಶಿಕ್ಷಿಸುವುದು ಭೀಮಸೇನನ ಮತ್ತೊಂದು ವ್ರತ.

---

೧. ಅನೀಶಂ ಜೀವರೂಪೇಣ ಪರಮಾತ್ಮಾನಮೀಶ್ವರಮ್ ।
ಯೇ ಮನ್ಯಂತೇ ತಾನ್ ಸಮೀಕ್ಷ್ಯ ಸ್ನೇಹಾನ್ನಿರಯಭಾಗ್ಭವೇತ್ ॥ –ಇತಿ ಭಾ.ತಾ.(೬/೧೨/೧೧)

ನಾಪ್ಯೇಕತ್ವವಾದಿಭಃ । ಸಮತ್ವವಾದಿಭಿರ್ನಾ ಽಹಂ ಸಂಗಚ್ಛೇಯಂ ಕದಾಚನ ॥ - ಯತಿಪ್ರಣವಕಲ್ಪ

೨. ಸರ್ವದೇವಾತ್ಮಕಃ ಪ್ರಾಣಃ ಸರ್ವದೇವಮಯೋ ವಿಭುಃ ।
ವಾಸುದೇವಾನುಗೋ ನಿತ್ಯಂ ತಥಾ ವಿಷ್ಣುವಶೇ ಸ್ಥಿತಃ ॥
ವಾಸುದೇವಪ್ರತೀಪಂ ತು ನ ಶ್ರುಣೋತಿ ನ ಪಶ್ಯತಿ ।
ದೇವಾಃ ಪ್ರತೀಪಂ ಕುರ್ವಂತಿ ರುದ್ರೇಂದ್ರಾಂದ್ಯಾಃ ಸುರೇಶ್ವರಾಃ ॥
ಪ್ರತೀಪಂ ಕುರುತೇ ಕ್ವಾಪಿ ನ ಪ್ರಾಣಃ ಸರ್ವಗೋಚರಃ ।
ತಸ್ಮಾತ್ ಪ್ರಾಣೋ ಮಹಾವಿಷ್ಣೋರ್ಬಲಮಾಹುರ್ಮನೀಷಿಣಃ ॥ –ಸ್ಕಂದಪುರಾಣ (ವೈಶಾಖಮಾಹಾತ್ಮ್ಯ)

೩. ಕರ್ಣೌ ಪಿಧಾಯ ನಿರಿಯಾದ್ಯದಕಲ್ಪ ಈಶೇ ಧರ್ಮಾವಿತರ್ಯಸೃಣಿಭರ್ನ್ಯಭಿರಸ್ಯಮಾನೇ ।
ಛಿಂದ್ಯಾತ್ ಪ್ರಸಹ್ಯ ರುಶತೀಮಸತಾಂ ಪ್ರಭುಶ್ಚೇತ್ ಜಿಹ್ವಾಮಸೂನಪಿ ತತೋ ವಿಸೃಜೇತ್ ಸ ಧರ್ಮಃ ॥
–ಭಾಗವತ (೪/೪/೧೭)

[೧]ಪ್ರತೀಪಕಾರಿಣೋ ಹಂತಿ [೨]ವಿಷ್ಣೋರ್ವೈತಾನಜೇಘನತ್ ।
ನ ಸಂಶಯಂ ಕದಾಽಪ್ಯೇಷ ಧರ್ಮೇ ಜ್ಞಾನೇಽಪಿ ವಾಽಕರೋತ್ [೩] ॥ ೧೦ ॥

ಅ: ವಿಷ್ಣುವಿಗೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ತಾನು ಕೊಲ್ಲುತ್ತಿದ್ದ. ಇತರರಿಂದಲೂ ಕೊಲ್ಲಿಸುತ್ತಿದ್ದ. ಧರ್ಮದಲ್ಲಾಗಲೀ, ಜ್ಞಾನದಲ್ಲಾಗಲೀ ಎಂದೂ ಭೀಮಸೇನ ಸಂಶಯಪಡಲೇ ಇಲ್ಲ.

ವಿ: ೧) ತಾನು ಶ್ರೀಹರಿಗೆ ವಿರುದ್ಧವಾಗಿ ನಡೆಯದಿದ್ದುದು ಮಾತ್ರವಲ್ಲ, ನಡೆದವರನ್ನು ತಾನು ಶಿಕ್ಷಿಸುತ್ತಿದ್ದ. ಅರ್ಜುನಾದಿ ಇತರರಿಂದಲೂ ಶಿಕ್ಷಿಸುತ್ತಿದ್ದ. ಇದಕ್ಕೆ ಸಭಾಪರ್ವದಲ್ಲಿ ಕರ್ಣನನ್ನು ಕೊಲ್ಲಿಸುವ ಪ್ರತಿಜ್ಞೆಯನ್ನು ಭೀಮ ದ್ರೌಪದಿಯರು ಮಾಡಿದ ಪ್ರಸಂಗವನ್ನು ಉಲ್ಲೇಖಿಸಬಹುದು. (೨೧/೩೫ಲ, ೩೫೯).

೨) ಧರ್ಮದಲ್ಲಿ ಜ್ಞಾನದಲ್ಲಿ ಯುಧಿಷ್ಠಿರಾದಿಗಳು ಒಮ್ಮೊಮ್ಮೆ ಸಂಶಯಪಟ್ಟಿದ್ದು ಕಂಡಿದೆ. ಧರ್ಮರಾಜ ದ್ಯೂತದಂತಹ ನಿಂದ್ಯಕಾರ್ಯದಲ್ಲಿಯೇ ತೊಡಗಿದವನು. ಅರ್ಜುನನಂತೂ ಪರಮಭಾಗವತಧರ್ಮವಾದ ಯುದ್ಧವನ್ನು ಅಧರ್ಮ ಎಂದು ಶಂಕಿಸಿ ತೊರೆಯಲು ಬಯಸಿ–ದ್ದವನು. ಆದರೆ, ಭೀಮಸೇನ ಹಾಗೆಂದೂ ಮಾಡಲಿಲ್ಲ. ಬದಲಾಗಿ ಯುದ್ಧವಿಮುಖನಾಗಿದ್ದ ಧರ್ಮರಾಜನನ್ನು ಯುದ್ಧ ಮಾಡುವ ನಿಶ್ಚಯ ಹೊಂದುವಂತೆ ಮಾಡಿದ್ದು ಭೀಮಸೇನನೇ (೨೨/೬೩–೧೨೨).

---

೧. ಪ್ರತೀಪಕಾರಿಣೋ ಹಂತಿ ವಿಷ್ಣೋರ್ವೈತಾನಜೇಘನದಿತ್ಯತ್ರ ವಿಷ್ಣೋಃ ಪ್ರತೀಪಕಾರೀಣಃ ಸ್ವಯಂ ಹಂತಿ। ಏತಾನ್ ಪ್ರತೀಪಕಾರಿಣಃ ಅಜೀಘನದ್ವಾ = ಘಾತಯಾಮಾಸ ವಾ ಅನ್ಯಕರೇಣ ಘಾತಯತಿ ವೇತ್ಯರ್ಥಃ ॥ –(ವಾ.)

೨. ವಿಷ್ಣ್ವಭಕ್ತಾನ್ ಸದಾ ವಾಯುಃ ಶಾಸಯೇತ್ ತಮಸಿ ಕ್ಷಿಪನ್ ।
ವಿಷ್ಣುಭಕ್ತಾನ್ ವಿಮೋಕ್ಷಾಯ ಪ್ರಾಪಯಿತ್ವಾ ಸುಖಂ ನಯೇತ್ ॥ - ಇತಿ ಭಾ. ತಾ. (೧೧/೨೧/೨೮)

ದೇಹತ್ಯಾಗಾನಂತರಂ ಕರ್ತವ್ಯಕರ್ಮಣೋಽನುಜ್ಞಾಂ ಸ್ವಯಮ್ । – (ಜ.)

ಏತಾನಕೃತೋದ್ವಾಹರಾಜಪುತ್ರದುಷ್ಪ್ರೇಕ್ಷ್ಯಾನ್ ದ್ಯೂತಕಿತವಾದ್ಯವೈಷ್ಣವಾನ್ ಅಜೀಘನತ್ । ಘಾತಯತಿ ಪರೈರಿತಿ ಶೇಷಃ ॥ – (ವ.)

೩. ಏವಂ ಚ ಮುಖ್ಯಪ್ರಾಣಸ್ಯ ಕಃ ಸುರೇಷು ಸಮೋ ಭವೇತ್ ।
ಬುದ್ಧಿಶುದ್ಧಿಶ್ಚ ಕಸ್ಯ ಸ್ಯಾದ್ಯಥಾಽಸ್ಯ ಜಗತಾಂ ಗುರೋಃ ॥
ಅತಃ ಸರ್ವಸುರೇಭ್ಯೋಽಪಿ ಪ್ರಾಣ ಏವೋತ್ತಮೋ ಭವೇತ್ ।
ಪ್ರಾಣಸ್ಯಾಪಿ ಹಿ ಯಃ ಪ್ರಾಣಃ ಸೋಽಭೂತ್ ಸರ್ವೋತ್ತಮೋತ್ತಮಃ ॥
– ಸರಸಭಾರತೀವಿಲಾಸ (೮/೭೦-೭೧)

ಭೀಮಸೇನ ವಿದ್ಯೋಪಜೀವನ ಮಾಡಲಿಲ್ಲ

೧ ೨
ವಿದ್ಯೋಪಜೀವನಂ ನೈಷ ಚಕಾರಾಪದ್ಯಪಿ ಕ್ವಚಿತ್ ।
೩
ಅತೋ ನ ಧರ್ಮನಹುಷೌ ಪ್ರತ್ಯುವಾಚ ಕಥಂಚನ ॥ ೧೧ ॥

ಅ: ಭೀಮಸೇನ ಎಂತಹ ಆಪತ್ತಿನಲ್ಲೂ ವಿದ್ಯೆಯನ್ನು ಜೀವನೋಪಾಯವನ್ನಾಗಿಸಿ-ಕೊಳ್ಳಲಿಲ್ಲ. ಅದರಿಂದಾಗಿ ಯಮ ಮತ್ತು ನಹುಷರ ಪ್ರಶ್ನೆಗಳಿಗೆ ಯಾವ ರೀತಿಯಲ್ಲೂ ಉತ್ತರಿಸಲಿಲ್ಲ.

ವಿ: ೧) ಭೀಮಸೇನನ ಪರಿಪೂರ್ಣಜ್ಞಾನವನ್ನು ಇಲ್ಲಿ ನಿರೂಪಿಸುತ್ತಿರುವರು. ಮಹಾಭಾರತ ಸ್ಪಷ್ಟ ನಿರೂಪಿಸಿರುವಂತೆ ಭೀಮಸೇನನ ತತ್ತ್ವಜ್ಞಾನ ಪರಿಣತಿ ಅನನ್ಯವಾದದ್ದು. ಎರಡು ಪ್ರಸಂಗಗಳಲ್ಲಿ ಮಾತ್ರ ಅವನು ಧರ್ಮಜಿಜ್ಞಾಸೆಗೆ ಉತ್ತರ ನೀಡದೇ ಇದ್ದಂತೆ ಕಾಣುವುದು. ಅದರಲ್ಲಿ ಮೊದಲನೆಯದ್ದು ಅಜಗರ ಪ್ರಸಂಗದಲ್ಲಿ ನಹುಷನ ಪ್ರಶ್ನೆಗಳಿಗೆ ಉತ್ತರ ನೀಡದಿದ್ದುದು. ಎರಡನೆಯದ್ದು ಯಕ್ಷನ ಪ್ರಶ್ನೆಗಳಿಗೆ ಉತ್ತರಿಸದಿದ್ದುದು. ಮೇಲ್ನೋಟಕ್ಕೆ ಈ ಎರಡು ಪ್ರಸಂಗಗಳಲ್ಲಿ ಅವನಿಗೆ ಉತ್ತರ ನೀಡುವ ಪರಿಜ್ಞಾನ ಇರಲಿಲ್ಲವೆಂಬಂತೆ ತೋರುವುದು. ವಸ್ತುಸ್ಥಿತಿ ಹಾಗಲ್ಲ ಎಂಬ ವಿವರಣೆ ಇಲ್ಲಿದೆ.

೨) ಭೀಮಸೇನ ಆ ಎರಡೂ ಪ್ರಸಂಗಗಳಲ್ಲೂ ಪರಿಪೂರ್ಣವಾದ ಉತ್ತರವನ್ನು ನೀಡಬಲ್ಲ ಮಹಾಜ್ಞಾನಿ. ಆದರೆ, ಅಜಗರ ಪ್ರಶ್ನೆಗಳನ್ನಷ್ಟೇ ಕೇಳದೇ ಅವುಗಳನ್ನು ಉತ್ತರಿಸಿದಲ್ಲಿ ಮಾತ್ರ ಅವನನ್ನು ಬಿಡುಗಡೆ ಮಾಡುವುದಾಗಿ ನಿಬಂಧನೆ ಮುಂದಿಟ್ಟ. ಅದರಂತೆ ಯಕ್ಷನೂ ಸಹ ಪ್ರಶ್ನೆಗಳಿಗೆ ಉತ್ತರಿಸಿದಲ್ಲಿ ಮಾತ್ರ ಜಲಪಾನ ಮಾಡಲು ಅನುಮತಿ ನೀಡುವುದಾಗಿ ನಿಬಂಧನೆ ಹಾಕಿದ. ಎಂದರೆ ಪ್ರಶ್ನೆಗಳಿಗೆ ಉತ್ತರವನ್ನು ಆ ಪ್ರಯೋಜನಕ್ಕಾಗಿ ನೀಡಬೇಕು ಎಂದಾಗುವುದು. ಉಪಜೀವನ ಎಂದರೆ ಇದೇ. ಅದು ಸರ್ವಥಾ ಧರ್ಮವಲ್ಲ ಎಂಬುದೇ ಶಾಸ್ತ್ರಗಳ ಪ್ರತಿಪಾದನೆ. ಕ್ಷತ್ರಿಯನಿರಲಿ, ಬ್ರಾಹ್ಮಣನೂ ಸಹ ಹಾಗೆ ವಿದ್ಯೋಪಜೀವನ ಮಾಡಕೂಡದು ಎಂದು ಶಾಸ್ತ್ರವಿಧಿ. ಅದಕ್ಕೆಂದೇ ಭೀಮಸೇನ ಆ ಎರಡೂ ಪ್ರಸಂಗಗಳಲ್ಲೂ ಉತ್ತರಿಸಲಿಲ್ಲ ಎಂದು ತಿಳಿಯಬೇಕು ಎಂದು ಭಾವ.

---

೧. ವಿದ್ಯೋಪಜೀವನಂ ವಿದ್ಯಯಾ ಉದರಪೋಷಣಮ್ । –(ವ.)

೨. ಅತೋ ನ ಧರ್ಮನಹುಷಾವಿತ್ಯತ್ರ ಅತಃ= ಸ್ವಜೀವನಕಾಮ್ಯಯಾ ವಿದ್ಯೋಪಜೀವನಸ್ಯಾಕಾರ್ಯತ್ವಾತ್ ಸರ್ಪರೂಪೀ ನಹುಷಃ ಪಕ್ಷಿರೂಪೀ ಯಮಃ । ಕಥಂಚನ= ಸ್ವಸ್ಯ ಬಂಧನಾದ್ಯಾಯಾಸಪ್ರಾಪ್ತಾವಪಿ ನ ಪ್ರತ್ಯುವಾಚ= ತತ್ಕೃತಪ್ರಶ್ನಪ್ರತಿವಚನಂ ನ ದತ್ತವಾನ್ ॥ –(ವಾ.)

೩) ಯುದ್ಧವಿಮುಖನಾದ ಧರ್ಮರಾಜನಿಗೆ ಯುದ್ಧದ ಮಹತ್ವವನ್ನು ವಿವರಿಸಿ, ಅದರಲ್ಲಿ ತೊಡಗುವಂತೆ ಮಾಡಿದ ಮಹಾಪ್ರಾಜ್ಞನಾದ ಭೀಮನಿಗೆ ಉತ್ತರಗಳು ತಿಳಿದಿರಲಿಲ್ಲ ಎಂಬುದು ಸರ್ವಥಾ ಅಸಂಭಾವಿತ. ಮಹಾಭಾರತದಲ್ಲಿ ಮೊದಲು ಬರುವುದು ನಹುಷನ ಪ್ರಸಂಗ, ಅನಂತರ ಬರುವುದು ಧರ್ಮನ ಪ್ರಸಂಗ. ಆದರೆ, ಧರ್ಮ ನಹುಷನಿಗಿಂತ ತಾರತಮ್ಯದಲ್ಲಿ ಮಿಗಿಲು ಎಂಬುದನ್ನು ಸೂಚಿಸಲು 'ಧರ್ಮನಹುಷೌ' ಎಂದಿರುವರು ಎಂದು ತಿಳಿಯಬೇಕು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಆಯಾ ಪ್ರಸಂಗಗಳಲ್ಲೇ ಕಾಣಬಹುದು.

ಭೀಮನ ಅಸ್ತ್ರಯುದ್ಧದ ಮರ್ಮ

ಆಜ್ಞಯೈವ ಹರೇದ್ರೌಣೇರಸ್ತ್ರಾಣ್ಯಸ್ತ್ರೈರಶಾಮಯತ್ ।
ಅದೃಶ್ಯೋಽಲಂಬುಸೋ ಭಗ್ನೋ[೧] ನಾನ್ಯತ್ರ ತು ಕಥಂಚನ ॥ ೧೨ ॥

ಅ: ಶ್ರೀಹರಿಯ ಆದೇಶದಂತೆ ಅಶ್ವತ್ಥಾಮರ ಅಸ್ತ್ರಗಳನ್ನು ಅಸ್ತ್ರಗಳಿಂದ ಎದುರಿಸಿ ಉಪಶಮನಗೊಳಿಸಿದ. ಅದರಂತೆ ಕಣ್ಣಿಗೆ ಕಾಣಿಸಿಕೊಳ್ಳದೆ ಯುದ್ಧ ಮಾಡುತ್ತಿದ್ದ ಅಲಂಬುಸ-ನನ್ನೂ ಪರಾಭವಗೊಳಿಸಿದ. ಬೇರೆ ಯಾವ ಸಂದರ್ಭಗಳಲ್ಲೂ ಭೀಮಸೇನ ಸರ್ವಥಾ ಅಸ್ತ್ರಯುದ್ಧ ಮಾಡಿಲ್ಲ.

ವಿ: ೧) ಭೀಮಸೇನ ಅಸ್ತ್ರಯುದ್ಧ ಮಾಡಿದ ಪ್ರಸಂಗಗಳು ಎರಡು ಮಾತ್ರ. ಒಂದು ಕರ್ಣಪರ್ವದ ಆರಂಭದಲ್ಲಿ ಅಶ್ವತ್ಥಾಮರೊಂದಿಗೆ ನಡೆದ ಅದ್ವಿತೀಯವಾದ ಅಸ್ತ್ರಸಮರ; ಮತ್ತೊಂದು ದ್ರೋಣಪರ್ವದ ಕೊನೆಯ ಘಟ್ಟದಲ್ಲಿ ಅಲಂಬುಸನೆಂಬ ರಾಕ್ಷಸನೊಂದಿಗೆ ನಡೆದ ಅಸ್ತ್ರಯುದ್ಧ.

೨) ಈ ಎರಡು ಪ್ರಸಂಗಗಳಲ್ಲೂ ಭೀಮಸೇನ ಅಸ್ತ್ರಯುದ್ಧ ಮಾಡಿದ್ದು ಶ್ರೀಹರಿಯ ಆದೇಶದಿಂದ ಮಾತ್ರ; ಅನಿವಾರ್ಯತೆಯಿಂದಲ್ಲ ಎಂದು ತಿಳಿಯಬೇಕು. ಆದ್ದರಿಂದಲೇ ಅದು ದೋಷವಾಗಲಿಲ್ಲ ಎಂದರ್ಥ. ಇದರಲ್ಲಿ ಅಶ್ವತ್ಥಾಮರು ತ್ರಿಮೂರ್ತಿಗಳಲ್ಲಿ ಕೊನೆಯವರಾದ ಶಿವನ ಅವತಾರರಾದ ದೇವಶ್ರೇಷ್ಠರಾದರೆ, ಅಲಂಬುಸ ಭಯಂಕರ ರಾಕ್ಷಸರ ಸಾಲಿಗೆ ಸೇರಿದ ದುಷ್ಟ.

---

೧. ಅದೃಶ್ಯೋಽಲಂಬುಸೋ ಭಗ್ನ ಇತ್ಯತ್ರ ಭಗ್ನಃ= ಪರಾಭವಂ ಪ್ರಾಪಿತಃ ॥

೧ಖ. ಅದೃಶ್ಯೋಽಲಂಬುಸೋ ಭಗ್ನಃ ಪರಾಜಿತಃ ನತು ಹತಃ । ಅನ್ಯತ್ರ ತು ಘಟೋತ್ಕಚೇನ ಹತ ಇತಿ ಷಡ್ವಿಂಶಾಧ್ಯಾಯೇಽಭಿಧಾನಾತ್ ಆಜ್ಞಯೇತ್ಯನುವರ್ತತೇ ॥ –(ಜ., ವ.)

ಹೀಗೆ ಒಬ್ಬ ಶ್ರೇಷ್ಠ ಮತ್ತೊಬ್ಬ ನಿಕೃಷ್ಟ. ಹೀಗೆ ಇಬ್ಬರ ಮೇಲೆ ಭೀಮ ಮಾತ್ರ ತನ್ನ ಅಸ್ತ್ರಯುದ್ಧ ಕೌಶಲವನ್ನು ತೋರಿಸಿದ ಎಂದರ್ಥ.

ನ ಹ್ಯಸ್ತ್ರಯುದ್ಧೇ ಸದೃಶೋ ದ್ರೌಣೇರಸ್ತ್ಯರ್ಜುನಾದೃತೇ
ಸರ್ವವಿತ್ತ್ವಂ ತತೋ ಭೀಮೇ ಪ್ರದರ್ಶಯಿತುಮೀಶ್ವರಃ ।
ಅದಾದಾಜ್ಞಾಮಸ್ತ್ರಯುದ್ಧೇ ತಥೈವಾಲಂಬುಸಂ ಪ್ರತಿ ॥ ೧೩ ॥

ಅ: ಅಸ್ತ್ರಯುದ್ಧದಲ್ಲಿ ಅಶ್ವತ್ಥಾಮರಿಗೆ ಅರ್ಜುನನ ಹೊರತು ಇತರರಾರೂ ಸಾಟಿಯಾಗಿರಲಿಲ್ಲ. ಅದರಿಂದ ಭೀಮನ ಸರ್ವಜ್ಞತ್ವವನ್ನು ಜಗತ್ತಿಗೆ ತೋರಿಸಿಕೊಡಲೆಂದು ಪ್ರಭುವಾದ ಶ್ರೀಕೃಷ್ಣ ಅಶ್ವತ್ಥಾಮನೊಂದಿಗೂ ಹಾಗೆಯೇ ಅಲಂಬುಸನೊಂದಿಗೂ ಅಸ್ತ್ರಯುದ್ಧ ಮಾಡಲು ಭೀಮನಿಗೆ ಆದೇಶ ನೀಡಿದ್ದ.

ವಿ: ಇವರಿಬ್ಬರ ಮೇಲೆ ಮಾತ್ರ ಅಸ್ತ್ರಯುದ್ಧಕ್ಕೆ ಶ್ರೀಕೃಷ್ಣ ಆದೇಶ ನೀಡಿದ್ದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವರು. ಭೀಮಸೇನ ಅಸ್ತ್ರಯುದ್ಧ ಮಾಡುತ್ತಿರಲಿಲ್ಲ ಎಂದ ಮಾತ್ರಕ್ಕೆ ಅದರ ಪರಿಜ್ಞಾನವಿರಲಿಲ್ಲ ಎಂಬ ತಪ್ಪು ಕಲ್ಪನೆ ಜನ ಹೊಂದುವಂತಾಗಬಾರದು. ಅದು ಸಾಧ್ಯವಾಗಲು ಭೀಮಸೇನ ಅಸ್ತ್ರಯುದ್ಧವನ್ನು ಮಾಡಿ ತೋರಿಸಲೇಬೇಕು. ಹಾಗೆ ಯಾರ ಮೇಲೋ ತೋರಿಸಿದರೆ ಅದಕ್ಕೆ ಅಷ್ಟಾಗಿ ಮಹತ್ವವಿರದು. ಅದಕ್ಕಾಗಿ ಅಶ್ವತ್ಥಾಮರಂತಹ ಅರ್ಜುನನಿಗೆ ಸರಿಸಾಟಿಯಾದ ಅಸ್ತ್ರಜ್ಞರ ಮೇಲೆ ಅಸ್ತ್ರಯುದ್ಧ ಮಾಡಲು ಶ್ರೀಕೃಷ್ಣ ಆಜ್ಞೆ ನೀಡಿದ. ಇದರಿಂದ ಭೀಮಸೇನ ಅರ್ಜುನ, ಅಶ್ವತ್ಥಾಮರನ್ನೂ ಮೀರಿಸುವ ಅಸ್ತ್ರಜ್ಞ ಎಂಬುದನ್ನು ಜಗತ್ತು ತಿಳಿಯುವಂತಾಯಿತು ಎಂದರ್ಥ. ಆ ವಿವರ ಮುಂದೆ ಕರ್ಣಪರ್ವದ ಆರಂಭದ ಭಾಗದಲ್ಲಿ ವಿವರವಾಗಿ ಬಂದಿದೆ.

೨) ಹಾಗೆ ಒಂದು ಬಾರಿ ಮಾತ್ರ ತೋರಿಸಿದ್ದಲ್ಲಿ ಅದನ್ನು ಆಕಸ್ಮಿಕ ಎಂದು ಜನ ತಪ್ಪು ತಿಳಿಯುವ ಅಪಾಯವಿದೆ. ಅದಕ್ಕಾಗಿ ಅಲಂಬುಸನಂತಹ ಅಸುರಶ್ರೇಷ್ಠನ ಮೇಲೆಯೂ ಅಸ್ತ್ರಯುದ್ಧ ಪ್ರಾವೀಣ್ಯವನ್ನು ತೋರಿಸಲು ಶ್ರೀಕೃಷ್ಣ ಆದೇಶಿಸಿದ. ಎರಡು ಬಾರಿಯೂ ಭೀಮಸೇನನ ಪರಿಜ್ಞಾನ ಎದುರಾಳಿಗಳ ಪರಿಜ್ಞಾನಕ್ಕಿಂತ ಅತ್ಯಂತ ಮಿಗಿಲು ಎಂದು ಸಿದ್ಧವಾದ ಉಲ್ಲೇಖ ಮಹಾಭಾರತದಲ್ಲೇ ಬಂದಿದೆ. ಹೀಗೆ ಎರಡು ಬಾರಿ ಒಂದೇ ಕಾರ್ಯವನ್ನು ಮಾಡುವುದು ಸಂಜೀವನಪರ್ವತ ತರುವ ಪ್ರಸಂಗ ಮೊದಲಾದ ಅನೇಕ ಪ್ರಸಂಗಗಳಲ್ಲಿ ಕಂಡುಬಂದಿದೆ. ಇವುಗಳಲ್ಲಿ ಅಲಂಬುಸನನ್ನು ಪರಾಭವಗೊಳಿಸಿದ ಪ್ರಸಂಗ ಮೊದಲು ನಡೆದದ್ದು (೨೬/೮೨–೮೫); ಅಶ್ವತ್ಥಾಮರೊಂದಿಗೆ ಅಸ್ತ್ರಯುದ್ಧ ನಡೆದದ್ದು ಆ ಬಳಿಕ (೨೭/೫–೧೦).

ಭೀಮಸೇನನ ನಮಸ್ಕಾರ ಕೌಶಲ

ಪ್ರತ್ಯಕ್ಷೀಭೂತದೇವೇಷು ಬಂಧುಜ್ಯೇಷ್ಠೇಷು ವಾ ನತಿಮ್ ।
ಮರ್ಯಾದಾಸ್ಥಿತಯೇಽಶಾಸದ್ಭಗವಾನ್ ಪುರುಷೋತ್ತಮಃ ॥ ೧೪ ॥

ಅ: ಪ್ರತ್ಯಕ್ಷವಾಗಿ ಕಾಣಿಸಿಕೊಂಡ ದೇವತೆಗಳಲ್ಲಿಯೂ, ವಯೋಜ್ಯೇಷ್ಠರಲ್ಲೂ, ಬಂಧು-ಜ್ಯೇಷ್ಠರಲ್ಲೂ ಲೋಕಮರ್ಯಾದೆಯ ಸಂರಕ್ಷಣೆಗಾಗಿ ಭಗವಂತನಾದ ಶ್ರೀಕೃಷ್ಣ ಭೀಮನಿಗೆ ನಮಸ್ಕರಿಸಲು ಆದೇಶ ನೀಡಿದ್ದ.

ವಿ: ಭೀಮಸೇನ ಎದುರಿಗೆ ಕಂಡಾಗ ದೇವತೆಗಳಿಗೂ, ತಾಯಿಯಾದ ಕುಂತಿ ಮೊದಲಾದ ಬಂಧುಗಳಿಗೂ ನಮಸ್ಕರಿಸಿದ ಉಲ್ಲೇಖ ಮಹಾಭಾರತದಲ್ಲಿ ಬಂದಿದೆ. ಇದು ಇತರರಿಗೆ ನಮಸ್ಕಾರ ಮಾಡಿದ ಪ್ರಸಂಗಕ್ಕೆ ದೃಷ್ಟಾಂತವಾಗಿ ಧರ್ಮಲೋಪಕ್ಕೆ ಕಾರಣವಾಗಲಿಲ್ಲವೇ ಎಂಬ ಪ್ರಶ್ನೆಗೆ ಇಲ್ಲಿ ಪರಿಹಾರವಿದೆ. ಭೀಮ ಹಾಗೆ ಅವರಿಗೆ ನಮಸ್ಕರಿಸಲು ಶ್ರೀಕೃಷ್ಣನ ಆದೇಶವೇ ಕಾರಣ. ಶ್ರೀಕೃಷ್ಣ ಹಾಗೆ ಆದೇಶ ನೀಡಲು ದೇವತೆಗಳಿಗೂ, ಹಿರಿಯಬಂಧುಗಳಿಗೂ ಜನ ನಮಸ್ಕರಿಸುವ ಧರ್ಮವನ್ನು ಜನ ತಿಳಿಯುವಂತಾಗಲಿ ಎಂಬ ಲೋಕಶಿಕ್ಷಣ ಉದ್ದೇಶ. ಶ್ರೀಕೃಷ್ಣ ಸ್ವತಃ ತಾನೂ ಸಹ ಹಾಗೆ ವಸುದೇವಾದಿಗಳಿಗೆ ನಮಸ್ಕರಿಸಿ ಲೋಕಶಿಕ್ಷಣ ಮಾಡಿರುವನು. ಆದ್ದರಿಂದ ಈ ಪ್ರಸಂಗಗಳು ಧರ್ಮಲೋಪಕ್ಕೆ ಕಾರಣವಾಗಲಾರವು ಎಂದರ್ಥ.

ತತ್ರಾಪಿ ವಿಷ್ಣುಮೇವಾಸೌ ನಮೇನ್ನಾನ್ಯಂ ಕಥಂಚನ ।
ಆಜ್ಞಯೈವಾಸ್ತ್ರದೇವಾಂಶ್ಚ ಪ್ರೇರಯಾಮಾಸ ನಾರ್ಥನಾತ್ ॥ ೧೫ ॥

ಅ: ಆಗಲೂ ಭೀಮಸೇನ ನಮಸ್ಕರಿಸುತ್ತಿದ್ದುದು ಅವರೊಳಗಿನ ವಿಷ್ಣುವನ್ನೇ ಹೊರತು ಇತರರಿಗಲ್ಲ. ಹಾಗೆಯೇ ಆ ಎರಡು ಬಾರಿ ಅಸ್ತ್ರಯುದ್ಧ ಮಾಡಿದಾಗಲೂ, ಅಸ್ತ್ರಗಳನ್ನು ಪ್ರಯೋಗಿಸಿದ್ದು ದೇವತೆಗಳನ್ನು ಯಾಚಿಸಿ ಅಲ್ಲ, ಪ್ರೇರೇಪಣೆ ಮಾಡಿ ಮಾತ್ರ.

ವಿ: ೧) ಹಾಗೆ ಹಿರಿಯಬಂಧುಗಳಿಗೆ ವಂದಿಸುವಾಗಲೂ ದೇವತೆಗಳಿಗೆ ನಮಸ್ಕರಿಸುವಾಗಲೂ ಭೀಮ ನಿಜವಾಗಿಯೂ ವಂದಿಸುತ್ತಿದ್ದುದು ಅವರ ಅಂತರ್ಯಾಮಿಯಾದ ಶ್ರೀಹರಿಗೆ ಮಾತ್ರ. ಆ ಪ್ರತ್ಯೇಕ ದೇವತೆಗಳಿಗಾಗಲೀ, ಬಂಧುಗಳಿಗಾಗಲೀ ಅಲ್ಲ. ಶಾಸ್ತ್ರವಿಧಿ ಇರುವುದೂ ಹಾಗೆಯೇ. 'ಸದೇಹಮಾನಿ ಹರಯೇ ಪ್ರಣಮೇತ್ ಕೇವಲಾಯ ವಾ ।' (ಕರ್ಮನಿರ್ಣಯ).

೨) ವ್ಯಕ್ತಿಗಳು ಸ್ವರೂಪತಃ ಶ್ರೇಷ್ಠರಾಗಿದ್ದರೆ ಅವರಿಗೂ, ಅವರೊಳಗಿನ ಭಗವಂತನಿಗೂ ವಂದಿಸಬೇಕು. ಹಾಗಿಲ್ಲದಿದ್ದಲ್ಲಿ ಒಳಗಿರುವ ಭಗವಂತನಿಗೆ ಮಾತ್ರ ವಂದಿಸಬೇಕು ಎಂದರ್ಥ.

೩) ಅದರಂತೆ ಅಸ್ತ್ರಯುದ್ಧ ಮಾಡುವಾಗಲೂ ಅಸ್ತ್ರದೇವತೆಗಳನ್ನು ಆಜ್ಞೆಮಾಡಿ ಪ್ರೇರೇಪಿಸುತ್ತಿದ್ದನೇ ಹೊರತು ಯಾಚನೆ ಮಾಡಿಯಲ್ಲ. ಆದ್ದರಿಂದ ಆಗಲೂ ಧರ್ಮಲೋಪ ಆಗಲೇ ಇಲ್ಲ. ಹಾಗಿದ್ದರೆ ಬೇರೆ ಸಂದರ್ಭಗಳಲ್ಲೂ ಅಸ್ತ್ರಯುದ್ಧವನ್ನು ದೇವತೆಗಳಿಗೆ ಆದೇಶ ನೀಡಿಯೇ ಮಾಡಬಹುದಾಗಿತ್ತಲ್ಲ ಎಂದು ಶಂಕಿಸಬೇಕಿಲ್ಲ. ಹಾಗೆ ಮಾಡಿದ್ದಲ್ಲಿ ಧರ್ಮಲೋಪ–ವಾಗದಿದ್ದರೂ ಪುಣ್ಯಲೋಪ ಆಗಿಯೇ ಆಗುವುದು. ಅವರ ಸಹಾಯ ಇಲ್ಲದೇ ಮಾಡಬಹುದಾದ ಕಾರ್ಯಗಳನ್ನು ಸಹಾಯ ಪಡೆದು ಮಾಡಿದಲ್ಲಿ ಸ್ವಲ್ಪ ಪುಣ್ಯವನ್ನು ಅವರಿಗೆ ನೀಡುವುದು ಅನಿವಾರ್ಯವಲ್ಲವೇ. ತನ್ನ ಕರ್ತವ್ಯವನ್ನು ಮತ್ತೊಬ್ಬರಿಂದ ಮಾಡಿಸುವುದು ಶ್ರೇಷ್ಠ ಧರ್ಮವಲ್ಲ ಎಂದು ಶಾಸ್ತ್ರವಚನ. ಆದ್ದರಿಂದ ಎರಡು ಸಂದರ್ಭಗಳಲ್ಲಿ ಮಾತ್ರ ಶ್ರೀಹರಿಯ ಆದೇಶ ವಿಶೇಷದಿಂದಾಗಿ ಅಸ್ತ್ರಯುದ್ಧವನ್ನು ಮಾಡಿ ತನ್ನ ಅಸ್ತ್ರವಿದ್ಯಾಕೌಶಲವನ್ನು ಭೀಮಸೇನ ಜಗತ್ತಿಗೆ ಸಾರಿದ ಎಂದು ತಿಳಿಯಬೇಕು.

ದ್ರೌಪದಿಯ ಭಾಗವತಧರ್ಮ

ಅನ್ವೇನಮೇವ[೧] ತದ್ಧರ್ಮೇ ಕೃಷ್ಣೈಕಾ ಸಂಸ್ಥಿತಾ ಸದಾ ।
ಧೃತರಾಷ್ಟ್ರಾದಪಿ ವರಂ ತತೋ ನಾತ್ಮಾರ್ಥಮಗ್ರಹೀತ್ ॥ ೧೬ ॥

ಅ: ಭೀಮಸೇನನ ಅನಂತರ ಹಾಗೆ ಭಾಗವತಧರ್ಮದಲ್ಲಿ ಸದಾ ನಿರತಳಾಗಿದ್ದುದು ದ್ರೌಪದಿ ಒಬ್ಬಳೇ. ಆದ್ದರಿಂದಲೇ ಧೃತರಾಷ್ಟ್ರನಿಂದಲೂ ಅವಳು ವರವನ್ನು ತನಗಾಗಿ ಪಡೆದುಕೊಳ್ಳಲಿಲ್ಲ.

ವಿ: ೧) ಪುರುಷರಲ್ಲಿ ಭೀಮನಂತೆ ಬೇರಾವ ಸಾಧಕನೂ ಹಾಗೆ ಶುದ್ಧಭಾಗವತಧರ್ಮದಲ್ಲಿ ನಿರತನಾಗಿಲ್ಲ. ಸ್ತ್ರೀಯರಲ್ಲೂ ಸಹ ಹಾಗೆ ನಿರತಳಾಗಿದ್ದುದು ದ್ರೌಪದಿ ಮಾತ್ರ. ಆ ದ್ರೌಪದಿಯಂತೂ ಭೀಮಪತ್ನಿಯಾದ ಸಾಕ್ಷಾತ್ ಭಾರತಿ. ಅವಳು ಭಾವಿಸರಸ್ವತಿಯಾದ ಋಜು ದೇವತೆ. ಆದ್ದರಿಂದ ಅವರಿಬ್ಬರಿಗೆ ಮಾತ್ರ ಅಂತಹ ಅತ್ಯುತ್ತಮಧರ್ಮಾಚರಣೆ ಸಾಧ್ಯವಾಯಿತು. ಇತರರಿಗೆ ಅಲ್ಲ ಎಂದು ತಿಳಿಯಬೇಕು.

---

೧. ಅನ್ವೇನಮೇವ ತದ್ಧರ್ಮ ಇತ್ಯತ್ರ ಏನಂ = ಭೀಮಂ ಅನು = ಅನುಸೃತ್ಯ ಏಕಾ ಕೃಷ್ಣೈವ ತದ್ಧರ್ಮೇ= ಕೃಷ್ಣಧರ್ಮೇ ಸಂಸ್ಥಿತೇತಿ ಯೋಜನಾ ॥ –(ವಾ.)

ವಾಯುಃ ಸ್ವಮೂಲರೂಪೇ ಚ ಸ್ವಾವತಾರೇಷ್ವಪಿ ಪ್ರಭುಃ ।
ಉಕ್ತರೀತ್ಯಾ ಯತಃ ಸಿದ್ಧಸ್ತತಃ ಶುದ್ಧತರೋಽಭವತ್ ॥
ತಸ್ಮಾದುಕ್ತಪ್ರಕಾರೇಣ ವಾಯುರೇಕಃ ಪರೇ ಹರೌ ।
ಶುಕ್ಲೋಽಭೂದ್ಭಾರತೀ ಶುಕ್ಲತಮಾಽಸೀತ್ ತದನುಗ್ರಹಾತ್ ॥ –ಸರಸಭಾರತೀವಿಲಾಸ (೮/೮೧-೮೨)

೨) ಭೀಮ ಹನುಮಂತನಿಂದ ವರಪಡೆದ ಬಗ್ಗೆ ವಿವರಣೆ ಮುಂದೆ ಬಂದಿದೆ (೨೨/೨೮೭). ದ್ಯೂತದ ಪ್ರಸಂಗದಲ್ಲಿ ಧೃತರಾಷ್ಟ್ರನ ಕೋರಿಕೆಯಂತೆ ದ್ರೌಪದಿ [೧]ಎರಡು ವರಗಳನ್ನು ಕೇಳುವ ವಿವರ ಮುಂದೆ ಬರುತ್ತದೆ (೨೧/೩೭೭–೩೮೧). ಅದು ಧರ್ಮಲೋಪಕ್ಕೆ ಕಾರಣವಲ್ಲವೇ ಎಂಬ ಆಕ್ಷೇಪಕ್ಕೆ ಉತ್ತರ ಇಲ್ಲಿದೆ. ಅವರು ವರವನ್ನು ಹಾಗೆ ಕೇಳಿದ್ದು ನಿಜವಾದರೂ ಅದು ತನಗೋಸ್ಕರ ಕೇಳಿಕೊಂಡ ವರವಲ್ಲ, ಕೇವಲ ಧರ್ಮರಾಜಾದಿಗಳ ಹಿತಕ್ಕೋಸ್ಕರ ಮಾತ್ರ. ಅದನ್ನೂ ಕೂಡ ತಾನಾಗಿಯೇ ಕೇಳಿದ್ದೂ ಅಲ್ಲ, ಧೃತರಾಷ್ಟ್ರನ ಕೋರಿಕೆಯಿಂದ ಮಾತ್ರ ಎಂಬ ಅರ್ಥವೂ ಇಲ್ಲಿದೆ. ಆ ವರಗಳೂ ಸಹ ನಿಜವಾದ ವರಗಳೇ ಅಲ್ಲ. 'ದ್ಯೂತದಲ್ಲಿ ಮೋಸದಿಂದ ಅಪಹರಿಸಿದ್ದನ್ನು ನ್ಯಾಯಮಾರ್ಗದಲ್ಲಿ ಹಿಂದಕ್ಕೆ ಪಡೆಯುವುದು ವರ ಹೇಗಾದೀತು?' ಎಂಬ ವಿಶೇಷ ವಿವರಣೆ ಮುಂದೆ ಬರುತ್ತದೆ. (೨೧/೩೮೦). ರಾಜಸ್ತ್ರೀಗೆ ಎರಡು ವರಗಳು ಭಾಗವತಧರ್ಮದಲ್ಲಿ ವಿಹಿತ ಎಂಬ ಮತ್ತೊಂದು ಕಾರಣವೂ ಅಲ್ಲಿ ನೀಡಲ್ಪಟ್ಟಿದೆ.

[೨]
ನಾಶಪದ್ಧಾರ್ತರಾಷ್ಟ್ರಾಂಶ್ಚ ಮಹಾಪದ್ಯಪಿ ಸಾ ತತಃ।
ನ ವಾಚಾ ಮನಸಾ ವಾऽಪಿ ಪ್ರತೀಪಂ ಕೇಶವೇऽಚರತ್ ॥ ೧೭ ॥

ಅ: ಅದರಂತೆ ಅವಳು ಎಂತಹ ಮಹಾ ಆಪತ್ತಿನಲ್ಲಿಯೂ ಧೃತರಾಷ್ಟ್ರಪುತ್ರರಾದ ಕೌರವರನ್ನು ಶಪಿಸಲಿಲ್ಲ. ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ ಶ್ರೀಹರಿಗೆ ವಿರೋಧವನ್ನು ಮಾಡಲಿಲ್ಲ.

ವಿ: ೧) ವರ ಸ್ವೀಕರಿಸುವುದು ನಿಷಿದ್ಧವಾಗಿರುವಂತೆ, ಶಾಪ ನೀಡುವುದೂ ಸಹ ಭಾಗವತ–ಧರ್ಮದಲ್ಲಿ ನಿಷಿದ್ಧವೇ. ಭೀಮಸೇನ ಯಾರನ್ನೂ ಶಪಿಸಿಲ್ಲ ಎಂಬುದು ಸ್ಪಷ್ಟ. ಅದರಂತೆ, ದ್ರೌಪದಿಯೂ ಯಾರಿಗೂ ಶಾಪ ನೀಡಿಲ್ಲ. ಮಹಾಪತಿವ್ರತಾಸ್ತ್ರೀಯರೂ ಸಹ ತುಂಬಾ ಆಪತ್ತಿನಲ್ಲಿ ಸಂಯಮ ಕಳೆದುಕೊಂಡು ಶಾಪ ನೀಡಿದ ಉಲ್ಲೇಖ ಪುರಾಣಗಳಲ್ಲಿ ವಿಪುಲವಾಗಿ ದೊರೆಯುತ್ತದೆ.

೨) ಆದರೆ, ದ್ರೌಪದಿ ಎಂತಹ ಮಹಾಪತ್ತಿನಲ್ಲಿಯೂ ದುರ್ಯೋಧನಾದಿಗಳಂತಹ ಮಹಾಪಾಪಿಗಳಿಗೂ ಶಾಪ ನೀಡಿಲ್ಲ ಎಂಬುದು ಮತ್ತೊಂದು ಗಮನಾರ್ಹವಾದ ಸಾಧನೆ ಎಂದರ್ಥ. ದುರ್ಯೋಧನಾದಿಗಳನ್ನು ಭೀಮಾದಿಗಳು ಕೊಲ್ಲಬೇಕೆಂದು ದ್ರೌಪದಿ ಮಾಡಿದ್ದು

---

೧. ಏಕಮಾಹುರ್ವೈಶ್ಯವರಂ ದ್ವೌ ತು ಕ್ಷತ್ರಸ್ತ್ರಿಯಾ ವರೌ।
ತ್ರಯಸ್ತು ರಾಜ್ಞೋ ರಾಜೇಂದ್ರ ಬ್ರಾಹ್ಮಣಸ್ಯ ಶತಂ ವರಾಃ ॥ – ಭಾರತ (ಸಭಾ. ೭೧/೩೫)

೨. ಬ್ರಹ್ಮಾ ತು ಜಗತಃ ಕ್ಷೇಮಾಯ ಭಗವದಾಜ್ಞಯಾ ಚ ಶಾಪಾದಿ ದದಾತೀತಿ ನ ಕ್ಷುದ್ರೋಪದ್ರವಃ। – (ತಾ.)

ಶಪಥವೇ ಹೊರತು ಶಾಪವಲ್ಲ ಎಂಬ ವಿವರವೂ ಮುಂದೆ ಬರುವುದು. ಹೀಗೆ ಶಾಪ ಕೊಡುವ ಪ್ರಸಂಗದಲ್ಲೂ ಸಹ ದ್ರೌಪದಿ ಶಾಪ ಕೊಡದಿದ್ದುದು ಆಕೆಯ ಹಿರಿಮೆಗೆ ಸ್ಪಷ್ಟ ನಿದರ್ಶನ ಎಂಬ ಮಾತು ಮೂಲ ಮಹಾಭಾರತದಲ್ಲೂ ಸ್ಪಷ್ಟವಾಗಿಯೇ ಬಂದಿದೆ.

೩) ಅದರಂತೆ ಮಾತು ಮನಸ್ಸುಗಳಿಂದ ಭಗವಂತನಿಗೆ ದ್ರೋಹ ಬಗೆಯದಿರುವುದು ಮತ್ತೊಂದು ಭಾಗವತಧರ್ಮ. ಎಂತಹ ಭಗವದ್ಭಕ್ತರೂ ತುಂಬಾ ಆಪತ್ತು ಒದಗಿದಾಗ 'ಅಯ್ಯೋ! ದೇವರು ಹೀಗೆ ಮಾಡಿದನಲ್ಲ' ಎಂದು ಬಯ್ಯುವುದುಂಟು. ಕೆಲವೊಮ್ಮೆ ಮನಸ್ಸಿನಲ್ಲಾದರೂ ಕೊರಗುವುದುಂಟು. ಆದರೆ, ದ್ರೌಪದಿ ಸರ್ವಥಾ ಎಂದೂ ಹಾಗೆ ಮಾಡಲಿಲ್ಲ. ವಸ್ತ್ರಾಪಹರಣ ಪ್ರಸಂಗದಂತಹ ಪರಮ ಆಪತ್ಕಾಲದಲ್ಲೂ ದ್ರೌಪದಿ ಭಕ್ತಿಯಿಂದ, ಗೌರವದಿಂದ ಶ್ರೀಕೃಷ್ಣನನ್ನು ಸ್ಮರಣೆ ಮಾಡಿದಳೇ ಹೊರತು ಸ್ವಲ್ಪ ಮಾತ್ರಕ್ಕೂ ಅತೃಪ್ತಿಯನ್ನು ವ್ಯಕ್ತಪಡಿಸಿಲ್ಲ ಎಂಬುದು ಅತ್ಯಂತ ಮಹತ್ವಪೂರ್ಣವಾದ ಸಾಧನೆ ('...ಸಸ್ಮಾರ ಕೃಷ್ಣಂ ಸುವಿಶೇಷತೋಽಪಿ' – ೨೧/೩೫).

ಇತರ ದೇವತೆಗಳು ಅಚ್ಛಿನ್ನಧರ್ಮರಲ್ಲ

ಅನ್ಯೇ[೧] ಭಾಗವತತ್ವೇಽಪಿ ಛಿನ್ನಧರ್ಮಾಃ ಕ್ವಚಿತ್ ಕ್ವಚಿತ್ ॥ ೧೮ ॥

ಅ: ಇತರರು ಭಗವದ್ಭಕ್ತರಾದರೂ ಕೆಲವೆಡೆಗಳಲ್ಲಿ ಧರ್ಮತಪ್ಪಿದವರಾಗಿರುವರು.

ವಿ: ಗರುಡ, ಶೇಷ, ರುದ್ರಾದಿ ದೇವತೆಗಳು ಮಹಾವಿಷ್ಣುಭಕ್ತರೇ ಆದರೂ ಕೆಲವು ಪ್ರಸಂಗ–ಗಳಲ್ಲಿ ಹರಿಗೆ ಸಮ್ಮತವಲ್ಲದ ರೀತಿಯಲ್ಲೂ ನಡೆದುಕೊಂಡಿರುವುದುಂಟು ಎಂದರ್ಥ.

ಬಲರಾಮ ಅರ್ಜುನರು ಧರ್ಮ ತಪ್ಪಿದ ಪ್ರಸಂಗ

ಸ್ಯಮಂತಕಾರ್ಥೇ ರಾಮೋಽಪಿ ಕೃಷ್ಣಸ್ಯ[೨] ವಿಮನಾಽಭವತ್[೩]।
ಅವಮೇನೇಽರ್ಜುನಃ[೪] ಕೃಷ್ಣಂ ವಿಪ್ರಸ್ಯ ಶಿಶುರಕ್ಷಣೇ ॥ ೧೯ ॥

---

೧. ಅನ್ಯೇ ಭಾಗವತತ್ತ್ವೇಽಪಿ ಛಿನ್ನಧರ್ಮಾಃ ಕ್ವಚಿತ್ ಕ್ವಚಿದಿತ್ಯತ್ರ । ಭಾಗವತಾನಾಂ ಭಾವಃ ಭಾಗವತತ್ವಂ ತಸ್ಮಿನ್ ಭಗವದ್ಧರ್ಮೇ ಛಿನ್ನಧರ್ಮಾಃ ಛಿನ್ನಮನೋವೃತ್ಯಯ ಇತ್ಯರ್ಥಃ । ಅನ್ಯೇಷಾಮಿತ್ಯಧ್ಯಾಹಾರೇಣ ಅನ್ಯೇಷಾಂ ಭಾಗವತತ್ವೇಽಪೀತಿ ವಾ । – (ತಿ.)

೨. ಕೃಷ್ಣಸ್ಯೇತಿ ಕರ್ಮಣಿ ಷಷ್ಠೀ । – (ಜ.)

೩. ಭವತ್ ಅಭವತ್ । ಅಡಭಾವಃ ಛಾಂದಸಃ । – (ತಾ.)

೪. "ನಾಹಂ ಸಂಕರ್ಷಣೋ ಬ್ರಹ್ಮನ್ನ ಕೃಷ್ಣಃ ಕಾರ್ಷ್ಣಿರೇವ ಚ । ಅಹಂ ಧನಂಜಯೋ ನಾಮ ಗಾಂಡೀವಂ ಯಸ್ಯ ಕಾರ್ಮುಕಮ್" ಇತಿ ಭಾಗವತೋಕ್ತೇಃ (೧೦/೮೯/೩೯) – (ವಾ.)

ಅ: ಸ್ಯಮಂತಕಮಣಿಗಾಗಿ ಬಲರಾಮನು ಸಹ ಶ್ರೀಕೃಷ್ಣನೊಂದಿಗೆ ಮನಸ್ಸು ಕೆಡಿಸಿಕೊಂಡ. ಬ್ರಾಹ್ಮಣನ ಶಿಶುರಕ್ಷಣೆಯ ಪ್ರಸಂಗದಲ್ಲಿ ಅರ್ಜುನ ಶ್ರೀಕೃಷ್ಣನನ್ನು ಅವಮಾನಿಸಿದ.

ವಿ: ೧) ಬಲರಾಮ ಶೇಷಾವತಾರ, ಶ್ರೀಕೃಷ್ಣನ ಪರಮಭಕ್ತರಲ್ಲೊಬ್ಬ. ಅವನೂ ಕೆಲವು ಕಡೆ ಧರ್ಮ ತಪ್ಪಿರುವುದುಂಟು. ಅಂತಹ ಒಂದು ನಿದರ್ಶನ ಸ್ಯಮಂತಕಮಣಿಯ ಪ್ರಸಂಗ. ಶತಧನ್ವನನ್ನು ಬೆನ್ನಟ್ಟಿದ ಕೃಷ್ಣರಾಮರು ಅವನನ್ನು ಹಿಡಿಯುವ ಸಂದರ್ಭದಲ್ಲಿ ಶತಧನ್ವನ ಕುದುರೆ ಸತ್ತು ಅವನು ಓಡಿ ಪಾರಾಗಲು ಯತ್ನಿಸುತ್ತಾನೆ. ಆಗ ಕೃಷ್ಣರಾಮರಿಬ್ಬರೂ ಓಡುತ್ತಲೇ ಅವನನ್ನು ಹಿಂಬಾಲಿಸುವರು. ಕೃಷ್ಣ ಬಲರಾಮನಿಗಿಂತ ಮುಂಚಿತವಾಗಿಯೇ ಶತಧನ್ವನನ್ನು ಹಿಡಿದು ಸಂಹರಿಸುತ್ತಾನೆ. ಬಲರಾಮ ಬಂದಾಗ 'ಅಣ್ಣ ಇವನ ಬಳಿ ಮಣಿಯಿಲ್ಲ' ಎನ್ನುತ್ತಾನೆ. ಬಲರಾಮ ಶ್ರೀಕೃಷ್ಣ ಮಣಿಯನ್ನು ತಾನು ತೆಗೆದುಕೊಂಡು ಇಲ್ಲ ಎಂದು ಸುಳ್ಳು ಹೇಳುತ್ತಿದ್ದಾನೆ ಎಂದು ತಪ್ಪು ತಿಳಿದುಕೊಂಡು ವಿದೇಹ ನಗರಕ್ಕೆ ತೆರಳಿ ನಾಲ್ಕು ವರ್ಷಗಳ ಕಾಲ ಅಲ್ಲಿಯೇ ಉಳಿದು ಬಿಡುತ್ತಾನೆ. ಶ್ರೀಕೃಷ್ಣ ಹೇಳಿದ್ದು ಸತ್ಯವೇ ಆಗಿತ್ತು, ಶತಧನ್ವ ಪಲಾಯನ ಮಾಡುವ ಮುನ್ನವೇ ಆ ಮಣಿಯನ್ನು ಅಕ್ರೂರನ ಕೈಗೆ ನೀಡಿರುತ್ತಾನೆ. ಮಣಿ ಅವನ ಬಳಿ ಇರಲೇ ಇಲ್ಲ, ಶ್ರೀಕೃಷ್ಣ ಹೇಳಿದ್ದೂ ಅದನ್ನೇ. ಆದರೆ, ಶ್ರೀಕೃಷ್ಣ ಸುಳ್ಳು ಹೇಳಿದ ಎಂಬ ಭಾವನೆಯನ್ನು ತಳೆದ ಬಲರಾಮ ಅವನ ನಿರ್ದೋಷತ್ವಕ್ಕೆ ಅಪಚಾರ ಮಾಡಿದಂತಾಯಿತು ಎಂಬುದು ಸ್ಪಷ್ಟ ಎಂದು ತಿಳಿಯಬೇಕು (೨೦/೩೨, ೩೩).

೨) ಅದರಂತೆ ಹುಟ್ಟಿದ ಮಕ್ಕಳೆಲ್ಲಾ ತತ್ಕ್ಷಣವೇ ಅದೃಶ್ಯವಾಗುತ್ತಿದ್ದ ವಿಚಿತ್ರ ಪ್ರಸಂಗವನ್ನು ಬ್ರಾಹ್ಮಣನೊಬ್ಬ ಶ್ರೀಕೃಷ್ಣನ ಮುಂದೆ ಅರಿಕೆ ಮಾಡಲೆಂದು ಬಂದಾಗ ಅರ್ಜುನ ಆ ರಕ್ಷಣೆಯ ಕಾರ್ಯವನ್ನು ತಾನೇ ಮಾಡುವುದಾಗಿ ಹೇಳಿಕೊಳ್ಳುತ್ತಾನೆ. ಆಗ ಆ ವಿಪ್ರ ಇದು ನಿನಗಾದೀತೇ ಎಂದು ಶಂಕಿಸಿದಾಗ ಅರ್ಜುನ ''ನಾನೇನು ಶ್ರೀಕೃಷ್ಣನಂತಹವನಲ್ಲ, ಬಲರಾಮನಂತಹವನೂ ಅಲ್ಲ, ನಾನು ಅರ್ಜುನ ತಿಳಿಯಿತೇ?'' ಎಂದು ಅಹಂಕಾರ ಪಡುತ್ತಾ ತಾನು ಶ್ರೀಕೃಷ್ಣನಿಗಿಂತ ಮಿಗಿಲು ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಹರಿಯೊಂದಿಗೆ ಸಾಮ್ಯಚಿಂತನವೇ ಅತ್ಯಂತಪ್ರಬಲದೋಷವಾಗಿರುವಾಗ ಅದಕ್ಕಿಂತ ಮಿಗಿಲಾಗಿ ಹಿರಿಮೆಯನ್ನೇ ಅರ್ಜುನ ತನ್ನ ಬಗ್ಗೆ ಚಿಂತಿಸಿಕೊಂಡದ್ದು ಅಪರಾಧವೆಂಬುದು ಖಚಿತ ಎಂದು ಭಾವ (೨೧/೧೮).

ಪ್ರದ್ಯುಮ್ನಾದಿಗಳ ಧರ್ಮಲೋಪ

ಪ್ರದ್ಯುಮ್ನ ಉದ್ಧವಃ ಸಾಂಬೋಽನಿರುದ್ಧಾದ್ಯಾಶ್ಚ ಸರ್ವಶಃ ।
ಹರೇರಿಷ್ಟಂ ಸುಭದ್ರಾಯಾಃ ಫಲ್ಗುನೇ ದಾನಮಂಜಸಾ ।
ಜ್ಞಾತ್ವಾಽಪಿ ರುರುಧುಃ ಸಮ್ಯಕ್ ಸಾತ್ಯಕಿಃ ಕೃಷ್ಣಸಂಮಿತಮ್ ॥ ೨೦ ॥

ಕದಾಚಿನ್ನನ್ಯತೇ ಪಾರ್ಥಂ ಧರ್ಮಜೋಽಪಿ ನರಂ ಹರಿಮ್ ।
ಮತ್ವಾಽಬಿಭೇದ್ಜರಾಸಂಧವಧೇ ಕೃಷ್ಣಮುದೀರಿತುಮ್ ॥ ೨೧ ॥

ಅ: ಪ್ರದ್ಯುಮ್ನ, ಉದ್ಧವ, ಸಾಂಬ, ಅನಿರುದ್ಧ ಮೊದಲಾದವರೆಲ್ಲ ಎಲ್ಲ ರೀತಿಯಲ್ಲೂ ಸುಭದ್ರೆಯನ್ನು ಅರ್ಜುನನಿಗೆ ಕೊಡುವುದೇ ಶ್ರೀಕೃಷ್ಣನ ಇಷ್ಟ ಎಂದು ಚೆನ್ನಾಗಿ ತಿಳಿದಿದ್ದರೂ ಅದಕ್ಕೆ ಅಡ್ಡಿ ಮಾಡಿದರು; ಸಾತ್ಯಕಿ ಒಮ್ಮೊಮ್ಮೆ ಅರ್ಜುನನ್ನು ಶ್ರೀಕೃಷ್ಣನಿಗೆ ಸಮ ಎಂದು ತಪ್ಪು ತಿಳಿಯುತ್ತಿದ್ದ; ಯುಧಿಷ್ಠಿರನೂ ಸಹ ಕೃಷ್ಣನನ್ನು ಮನುಷ್ಯನೆಂದು ಬಗೆದು ಜರಾಸಂಧನ ವಧೆಗಾಗಿ ಶ್ರೀಕೃಷ್ಣನನ್ನು ಕಳಿಸುವ ಸಮಯದಲ್ಲಿ ಅಂಜಿದ.

ವಿ: ೧) ಪ್ರದ್ಯುಮ್ನ ಕೃಷ್ಣಪುತ್ರ; ಅನಿರುದ್ಧ ಕೃಷ್ಣಪೌತ್ರ; ಉದ್ಧವ ಬೃಹಸ್ಪತಿಯ ಅವತಾರ; ಸಾಂಬ ಸ್ಕಂದನ ಅವತಾರ. ಇವರೆಲ್ಲ ವಿಶೇಷವಾದ ಶ್ರೀಕೃಷ್ಣಸೇವೆಗೆಂದೇ ಯಾದವರಾಗಿ ಅವತರಿಸಿದ್ದವರು. ಅವರಿಗೆಲ್ಲ ಸುಭದ್ರೆಯನ್ನು ಅರ್ಜುನನಿಗೆ ಕೊಡುವುದೇ ಕೃಷ್ಣನ ಸಂಕಲ್ಪವೆಂದು ಸ್ಫುಟವಾಗಿ ತಿಳಿದಿದ್ದರೂ, ಬಲರಾಮನ ಪಕ್ಷವಹಿಸಿ ಕೃಷ್ಣಸಂಕಲ್ಪಕ್ಕೆ ವಿರುದ್ಧವಾಗಿ ನಡೆಯಲು ಪ್ರಯತ್ನಿಸಿದರು. ಹರಿಗೆ ಹೀಗೆ ವಿರೋಧಚಿಂತನೆ ಭಾಗವತಧರ್ಮಕ್ಕೆ ಪ್ರಶಸ್ತವೆನ್ನಿಸದು.

೨) ಸಾತ್ಯಕಿ ಆ ತಪ್ಪನ್ನು ಮಾಡಲಿಲ್ಲವಾದರೂ, ಅರ್ಜುನನ್ನು ಕೆಲವೊಮ್ಮೆ ಕೃಷ್ಣನಿಗೆ ಸಮಾನ ಎಂದು ಭ್ರಮಿಸುವ ಮಹಾಪರಾಧವನ್ನು ಮಾಡುತ್ತಿದ್ದ.

೩) ಪಾಂಡವಜ್ಯೇಷ್ಠನೆನ್ನಿಸಿದ ಧರ್ಮರಾಜ ಕೃಷ್ಣನನ್ನು ಮನುಷ್ಯನೆಂದು ಬಗೆದು ಜರಾಸಂಧವಧೆಗೆ ಭೀಮಾರ್ಜುನರೊಂದಿಗೆ ತಾನು ತೆರಳುವೆನೆಂದು ಸ್ವತಃ ಶ್ರೀಕೃಷ್ಣನೇ ಹೇಳಿದರೂ ಆ ಬಗ್ಗೆ ನಂಬಿಕೆಯನ್ನು ಹೊಂದದೇ ಅಂಜಿಕೆಯನ್ನೇ ವ್ಯಕ್ತಪಡಿಸಿದ. ಈ ಎಲ್ಲ ವಿವರಗಳೂ ಮುಂದೆ ಆಯಾ ಪ್ರಸಂಗಗಳಲ್ಲಿ ವಿವರವಾಗಿ ಬರುತ್ತವೆ.

ವಿದುರನ ಧರ್ಮಲೋಪ

ಬಂಧನಂ ಶಂಕಮಾನೋಽಪಿ ಕೃಷ್ಣಸ್ಯ ವಿದುರೋಽಪಿ ತು ।
ಕೌರವೇಯಸಭಾಮಧ್ಯೇ ನಾವತಾರಮರೋಚಯತ್[೧] ॥ ೨೨ ॥

ಅ: ಶ್ರೀಕೃಷ್ಣನನ್ನು ಬಂಧಿಸಬಹುದೆಂಬ ಶಂಕೆಯಿಂದ ವಿದುರ ಕೌರವರ ಸಭೆಗೆ ಶ್ರೀಕೃಷ್ಣ ತೆರಳುವುದನ್ನು ಅಷ್ಟಾಗಿ ಮೆಚ್ಚಲಿಲ್ಲ.

---

೧. ನಾವತಾರಮರೋಚಯದಿತ್ಯತ್ರ 'ತೃ ಪ್ಲವನ' ಇತಿ ಧಾತೋಃ ಅವತಾರಂ ಅವತರಣಂ ಪ್ಲವನಂ ಗಮನಮಿತಿ ಯಾವತ್ ॥ – (ವಾ.)

ವಿ: ವಿದುರ ಮಹಾಭಾಗವತಶಿರೋಮಣಿಗಳಲ್ಲೊಬ್ಬನಾಗಿ ಪರಿಗಣಿತನಾದವನು. ಆದರೆ ಆತನೂ ಕೆಲವೊಮ್ಮೆ ಧರ್ಮ ತಪ್ಪಿದವನೇ. ಸಂಧಾನಕ್ಕೆಂದು ಕೃಷ್ಣ ಹಸ್ತಿನಾಪುರಕ್ಕೆ ಆಗಮಿಸಿದಾಗ ಅವನಿಗೆ ಅಪೂರ್ವ ಆತಿಥ್ಯ ನೀಡಿದ ವಿದುರ [೧]ವಿಜ್ಞಾಪಿಸಿಕೊಂಡ ''ಏನೇ ಆದರೂ ಕೌರವ ಸಭೆಗೆ ತೆರಳುವುದು ಅಷ್ಟು ಉಚಿತವಲ್ಲ. ಆ ಪಾಪಿಗಳು ನಿನ್ನನ್ನು ಕಟ್ಟಿಬಿಡುವ ಅಪಾಯವೂ ಉಂಟು''. ಸರ್ವಬಂಧವೋಚಕನಾದ ಶ್ರೀಕೃಷ್ಣನಿಗೆ ಬಂಧನದ ಶಂಕೆ ವಿದುರನ ಮಹಾದೋಷವಾದದ್ದು ಹೀಗೆ.

ನಕುಲಸಹದೇವರ ಧರ್ಮಲೋಪ

ನಕುಲಃ ಕರದಾನಾಯ [೨]ಪ್ರೇಷಯಾಮಾಸ ಕೇಶವೇ ।
ಅವಮೇನೇ ಹರೇರ್ಬುದ್ಧಿಂ ಸಹದೇವಃ ಕುಲಕ್ಷಯಾತ್ [೩] ॥ ೨೩ ॥

ಅ: ನಕುಲ ಕಪ್ಪ ನೀಡಬೇಕೆಂದು ಶ್ರೀಕೃಷ್ಣನ ಬಳಿಗೇ ಹೇಳಿ ಕಳಿಸಿದ. ಸಹದೇವ ಕುಲಕ್ಷಯವಾಯಿತೆಂಬ ಕಾರಣದಿಂದ ಶ್ರೀಕೃಷ್ಣನ ನೀತಿಯನ್ನು ಅವಮಾನಿಸಿದ.

ವಿ: ರಾಜಸೂಯಯಾಗ ಸಂದರ್ಭದಲ್ಲಿ ಪಶ್ಚಿಮದಿಕ್ಕಿಗೆ ದಿಗ್ವಿಜಯಕ್ಕೆಂದು ತೆರಳಿದ ನಕುಲ ಕಪ್ಪ ಕೊಡಬೇಕೆಂಬ ಸಂದೇಶವನ್ನು ಶ್ರೀಕೃಷ್ಣನಿಗೂ ಕಳುಹಿಸಿದ. ಆ ಕಾಲಕ್ಕೆ ಅವನು ಕೃಷ್ಣನ ಹಿರಿಮೆ–ಯನ್ನು ಮರೆತಿದ್ದ ಎಂಬುದು ಸ್ಪಷ್ಟ. ಅದರಂತೆ, ಸಹದೇವನೂ ಯುದ್ಧ ಮುಗಿದ ಮೇಲೆ ಅಪಾರ ಜನರು ಮೃತರಾದದ್ದನ್ನು ಕಂಡು ಶ್ರೀಕೃಷ್ಣನ ನೀತಿ ಅಷ್ಟೇನೂ ಯೋಗ್ಯವಾದುದಾಗಿರಲಿಲ್ಲ ಎಂದು ಅವಮಾನಿಸಿದ. ಹೀಗೆ ನಕುಲಸಹದೇವರೂ ಶುದ್ಧಧರ್ಮವನ್ನು ತಪ್ಪಿದವರೇ ಆಗಿದ್ದರು ಎಂದರ್ಥ.

ದೇವಕೀ ವಸುದೇವರ ಹಾಗೂ ಭೀಷ್ಮರ ಧರ್ಮಲೋಪ

ದೇವಕೀವಸುದೇವಾದ್ಯಾ ಮೇನಿರೇ ಮಾನುಷಂ ಹರಿಮ್ ।
ಭೀಷ್ಮಸ್ತು ಭಾರ್ಗವಂ ರಾಮಮವಮೇನೇ [೪] ಯುಯೋಧ ಚ ॥ ೨೪ ॥

---

೧. ತೇಷಾಂ ಸಮುಪವಿಷ್ಟಾನಾಂ ಸರ್ವೇಷಾಂ ಪಾಪಚೇತಸಾಮ್ ।
ತವ ಮಧ್ಯಾವತರಣಂ ಮಮ ಕೃಷ್ಣ ನ ರೋಚತೇ ।
ದುರ್ಬುದ್ಧೀನಾಮಶಿಷ್ಟಾನಾಂ ಬಹೂನಾಂ ದುಷ್ಟಚೇತಸಾಮ್ ।
ಪ್ರತೀಪಂ ವಚನಂ ಮಧ್ಯೇ ತವ ಕೃಷ್ಣ ನ ರೋಚತೇ ॥
ಅನುಪಾಸಿತವೃದ್ಧತ್ವಾಚ್ಚ್ರಯೋ ದರ್ಪಾಚ್ಚ ಮೋಹಿತಃ ।
ವಯೋದರ್ಪಾದಮರ್ಷಾಚ್ಚ ನ ತೇ ಶ್ರೇಯೋ ಗ್ರಹೀಷ್ಯತಿ ॥ – ಭಾರತ(ಉದ್ಯೋಗ. ೯೨/೧೬-೧೮)

೨. .... ತತ್ರಸ್ಥಃ ಪ್ರೇಷಯಾಮಾಸ ವಾಸುದೇವಾಯ ಭಾರತ । – ಭಾರತ (ಸಭಾ. ೩೨/೧೩)

೩. ಕುಲಕ್ಷಯಾತ್ ಕುಲಕ್ಷಯಕಾರಣಾತ್ । – (ವ.)

೪. ನಿಂದಾಕೃತವಾನಿತಿ ಭಾವಃ । – (ಜ.)

ಅ: ದೇವಕಿ, ವಸುದೇವ ಮೊದಲಾದವರಂತೂ ಶ್ರೀಕೃಷ್ಣನನ್ನು ಮನುಷ್ಯನೆಂದೇ ತಿಳಿಯುತ್ತಿದ್ದವರು. ಭೀಷ್ಮರು ಪರಶುರಾಮ॥ ರೂಪದ ಶ್ರೀಹರಿಯನ್ನು ಅವಮಾನಿಸಿದರು. ಅವನೊಂದಿಗೆ ಯುದ್ಧವನ್ನೂ ಮಾಡಿದರು.

ಎ: ದೇವಕಿ, ವಸುದೇವ, ನಂದಗೋಪ, ಯಶೋದೆ ಮೊದಲಾದವರೆಲ್ಲ ತುಂಬ ಯೋಗ್ಯರೇ ಆದರೂ ಶ್ರೀಕೃಷ್ಣನನ್ನು ಒಬ್ಬ ಮನುಷ್ಯ, ತಮ್ಮ ಮಗ ಎಂದೆಲ್ಲ ತಪ್ಪು ತಿಳಿಯುತ್ತಿದ್ದರು. ಭೀಷ್ಮರಂತೂ ಸಾಕ್ಷಾತ್ ಶ್ರೀಹರಿಯ ದಶಾವತಾರಗಳಲ್ಲೊಂದಾದ ಪರಶುರಾಮರೂಪಿ ಶ್ರೀಹರಿಯನ್ನು ಅವನ ಮಾತು ನಡೆಸದೇ ಅವಮಾನಿಸಿದರು; ಅವನೊಂದಿಗೆ ಯುದ್ಧಕ್ಕೂ ತೊಡಗಿದರು. ಕುರುಕುಲಪಿತಾಮಹರೂ, ಪರಮಭಾಗವತರೂ ಎನಿಸಿದ್ದ ಅವರೂ ಸಹ ಇಂತಹ ತಪ್ಪಿನಿಂದ ಪಾರಾಗಲಿಲ್ಲ ಎಂದರ್ಥ.

ದ್ರೋಣಾದಿಗಳ ಹಾಗೂ ಶಿವಾದಿದೇವತೆಗಳ ಧರ್ಮಲೋಪ

ದ್ರೋಣಕರ್ಣದ್ರೌಣಿಕೃಪಾಃ [೧]ಕೃಷ್ಣಾಭಾವೇ ಮನೋ ದಧುಃ ।
ದೇವಾಃ ಶಿವಾದ್ಯಾ ಅಪಿ [೨]ತು ವಿರೋಧಂ ಚಕ್ರಿರೇ ಕ್ವಚಿತ್ ॥ ೨೫ ॥

ಅ: ದ್ರೋಣಾಚಾರ್ಯರು, ಕರ್ಣ, ಅಶ್ವತ್ಥಾಮರು, ಕೃಪಾಚಾರ್ಯರು ಶ್ರೀಕೃಷ್ಣನನ್ನು ಇಲ್ಲವಾಗಿಸಲು ಮನಸ್ಸು ಮಾಡಿದ್ದವರು. ಶಿವ ಮೊದಲಾದ ದೇವತೆಗಳೂ ಕೆಲವೊಮ್ಮೆ ಶ್ರೀಕೃಷ್ಣನಲ್ಲಿ ವಿರೋಧ ಮಾಡಿದವರೇ.

ವಿ: ೧) ದ್ರೋಣರು ಯುದ್ಧ ಮಾಡುವಾಗ ಶ್ರೀಕೃಷ್ಣನ ಮೇಲೆ ಬಾಣಪ್ರಯೋಗಿಸುತ್ತಾ ಹೊಡೆಯುವ ಪ್ರಯತ್ನವನ್ನೂ ಮಾಡಿದರು. ಇತರ ಸಾಮಾನ್ಯ ಸಾರಥಿಗಳ ಮೇಲೆ ಪ್ರಯೋಗಿಸುವಂತೆ ಬಾಣಗಳನ್ನು ಪ್ರಯೋಗಿಸಿದರು. ಕರ್ಣ ನೇರವಾಗಿ ಶ್ರೀಕೃಷ್ಣನ ಮಾತನ್ನು ನಿರಾಕರಿಸಿದವನು. ಅಶ್ವತ್ಥಾಮರಂತೂ ಕೃಷ್ಣನಿಂದ ಚಕ್ರವನ್ನು ಪಡೆದು ಅವನ ಮೇಲೆಯೇ ಅದನ್ನು ಪ್ರಯೋಗಿಸಿ ಅವನನ್ನು ಇಲ್ಲದಂತೆ ಮಾಡುವ ಯೋಜನೆ ಹೊಂದಿದ್ದವರು. (೨೮/೧೫೬, ೧೫೭) ಕೃಪಾಚಾರ್ಯರೂ ದುರ್ಯೋಧನನ ಪಕ್ಷ ಸೇರುವ ಮೂಲಕ ಕೃಷ್ಣನಿಗೆ ವಿರೋಧ ಮಾಡಿದವರೇ.

೨) ಇದೆಲ್ಲ ಮಹಾಭಾರತ ಕಾಲದಲ್ಲಿ ಅವತರಿಸಿದ್ದ ದೇವತೆಗಳ ಅಪರಾಧಗಳ ಪ್ರಸಂಗಗಳ ನಿರೂಪಣೆ. ಇನ್ನು ಮೂಲರೂಪದಲ್ಲೇ ಶಿವಾದಿದೇವತೆಗಳು ಕೆಲವೊಮ್ಮೆ ಶ್ರೀಹರಿಗೆ ವಿರೋಧ ಮಾಡಿರುವುದುಂಟು. ರಾವಣಸಂಹಾರದ ಅನಂತರ ರುದ್ರದೇವರು ಧನುಸ್ಸು ಹಿಡಿದು ರಾಮನ

---

೧. ಕೃಷ್ಣಾಭಾವೇ = ಯುದ್ಧೇ ಶರತಾಡನಾದಿನಾ ಕೃಷ್ಣನಾಶೇ ॥ – (ವಾ.)

೨. ದೇವಾಃ ಮೂಲರೂಪೇಣಾಪಿ ದೇವಾ ಅಪಿ ವಿರೋಧಂಚಕ್ರಿರೇ । – (ಜ.)

ಮೇಲೆಯೇ ಯುದ್ಧಕ್ಕೆ ಸಿದ್ಧರಾಗಿ ನಿಂತದ್ದು(೮/೨೧೮), ಗೋವರ್ಧನೋದ್ಧಾರ ಪ್ರಸಂಗ, ಪಾರಿಜಾತಹರಣ ಪ್ರಸಂಗದಲ್ಲಿ ಇಂದ್ರ ಕೃಷ್ಣನ ಮೇಲೆ ಕೋಪಗೊಂಡು ವಿರೋಧ ಮಾಡಿದ್ದು, ಪಾರಿಜಾತಹರಣಪ್ರಸಂಗದಲ್ಲಿ ಇಂದ್ರನೊಂದಿಗೆ ಶಿವಾದಿಸಕಲದೇವತೆಗಳೂ ಶ್ರೀಕೃಷ್ಣನೊಂದಿಗೆ ಯುದ್ಧಕ್ಕೆ ನಿಂತದ್ದು – ಹೀಗೆ ಅನೇಕ ಪ್ರಸಂಗಗಳಲ್ಲಿ ಅವರಿಂದ [೧]ಅಪಚಾರ ನಡೆದಿದೆ ಎಂದರ್ಥ.

---

೧. ವಿಶ್ವಂಭರಸ್ಯ ಭರ್ತುರ್ಮೇ ಶಕ್ಯಾಕೋಽಸ್ತಿ ಸಮಸ್ತ್ವಿತಿ ।
ಗರುಡೋಽಪ್ಯಸುರಾವೇಶಾದಹಂ ಚಕ್ರೇ ಕ್ವಚಿತ್ ಕಿಲ ॥
ತಪಸಾऽऽರಾಧ್ಯ ಯೋ ವಿಷ್ಣುಂ ತಸ್ಯ ವಾಹನತಾಮಗಾತ್ ।
ಈದೃಶಸ್ಯಾಪಿ ಕುಮತಿಃ ಕಲ್ಯಾವೇಶಾನ್ನ ಸಂಶಯಃ ॥
ಕಿಂಚಿದ್ಧಾರಂ ದರ್ಶಯಿತ್ವಾ ತಂ ಚ ಕೃಷ್ಣೋ ನ್ಯಪಾತಯತ್ ।
ಮಹೀತಲೇ ತದಾ ಕಾಕಾಸ್ತಸ್ಯ ಶೋಕಂ ದದುಃ ಕಿಲ ॥
ಅತೋಽದ್ಯಾಪಿ ಸ್ವತುಂಡೇನ ಗರುಡಾಕಾರಧಾರಿಣಮ್ ।
ಅಭ್ಯೇತ್ಯ ಬಲವಂತಂ ಚ ಘ್ನಂತಿ ಕಾಕಾಃ ಪತತ್ರಿಣಮ್ ॥
ನಷ್ಟಾಹಂಕಾರಚಿತ್ತಂ ಚ ಪುನರಂಗೀಚಕಾರ ತಮ್ ।
ಇತ್ಯಾಹ ಭಾರತೇ ವ್ಯಾಸಸ್ತತ್ ತಸ್ಯಾಪಿ ನ ಶುದ್ಧತಾ ॥
ಸ್ಯಮಂತಕಾರ್ಥೇ ರಾಮೇಣ ಕೃತಃ ಶೇಷಸ್ವರೂಪಿಣಾ ।
ವಿರೋಧಂ ಸ್ವಾನುಜೇ ಕೃಷ್ಣೇ ದನುಜಾವಿಷ್ಟಚೇತಸಾ ॥
ಅತೋ ಮನುಜ ದುರ್ಬುದ್ಧಿಂ ತ್ಯಜ ಸರ್ವೋತ್ತಮಂ ಭಜ ।
ವ್ರಜ ವೈಕುಂಠಪದವೀಂ ನಿಜಂ ಸ್ಥಾನಂ ತದಿಚ್ಛಯಾ ॥
ದುರ್ವಾಸಾಃ ಶಂಕರಸ್ಯಾಂಶೋ ಹಂಸರೂಪೀ ನಿರಂಹಸೇ ।
ಅಂಬರೀಷಾಯ ಚುಕ್ರೋಧ ಕ್ರೋಧಾವಿಷ್ಟಮನೋರಥಃ ॥
ತದಾऽಸುರಾಣಾಮರಿಣಾ ಸೋಽರಿಣಾऽನುದ್ರುತೋ ಭಯಾತ್ ।
ಜಗಾಮ ಬ್ರಹ್ಮಸದನಂ ಸೋಽಪ್ಯಧೋವದನೋಽಭವತ್ ॥
ಅಲಬ್ಧಕಾರ್ಯಃ ಕೈಲಾಸಮಗಮಚ್ಛಂಕರಾಲಯಮ್ ।
ಸೋಽಪಿ ಭೀತೋ ಹರೇಶ್ಚಕ್ರಾದಾಹಾನುಸರ ತಂ ಹರಿಮ್ ॥
ಯಸ್ಯೇದಮಾಯುಧಂ ಪುತ್ರೇತ್ಯುಕ್ತೋ ವೈಕುಂಠಮನ್ವಗಾತ್ ।
ಹರಿಃ ಸ್ವಭಕ್ತವಾತ್ಸಲ್ಯಾನ್ನಾಮೋಚಯದಮುಂ ಮುನಿಮ್ ॥
ಅತೋಽಂಬರೀಷಧಾಮ್ನೈವ ಗತಃ ಸೋಽಪಿ ಹರೇರರಿಮ್ ।
ಸ್ತುತ್ಯೈವ ಮೋಚಯಾಮಾಸ ನ ತು ಸೋಽಪ್ಯಾತ್ಮಶಕ್ತಿತಃ ॥
ಅತಃ ಶಿವಸ್ಯಾಪಿ ಮತಿರ್ವಿರುದ್ಧಾऽಭವದಚ್ಯುತೇ ।
ಹರೇಃ ಸರ್ವೋತ್ತಮತ್ವಂ ಚ ಸಿದ್ಧಮಾಸೀಜ್ಜಗತ್ತ್ರಯೇ ॥
ತಸ್ಮಾದ್ಧರ್ಯಾಯುಧಾದೇವ ಬಿಭ್ಯತುರ್ಬ್ರಹ್ಮಶಂಕರೌ ।
ತಚ್ಚಕ್ರಂ ಯಸ್ಯ ವಶಗಂ ಸೋಽಭೂತ್ ಸರ್ವೋತ್ತಮೋತ್ತಮಃ ॥
ದ್ರೌಣ್ಯಾತ್ಮಾ ಶಂಕರಃ ಕೃಷ್ಣಮವಜಜ್ಞೇ ಪದೇ ಪದೇ ।
ಹರಿಃ ಶಶಾಪ ಕಿಲ ತಂ ದುರ್ಯೋಧನಮತಾನುಗಮ್ ॥

೩) ರಾಮಾಯಣದಲ್ಲೂ ಸಹ ಇಂದ್ರಾವತಾರನಾದ ವಾಲಿ ರಾಮರಕ್ಷಿತನಾದ ಸುಗ್ರೀವನ ವಿರುದ್ಧ ಹೋರಾಡಿ ರಾಮನಿಗೆ ದ್ರೋಹವೆಸಗಿದ. ಸುಗ್ರೀವ ರಾಮೋಪಕಾರವನ್ನು ಮರೆತು ಅಪರಾಧ ಮಾಡಿದ. ಜಾಂಬವಂತ ಮೊದಲಾದವರೆಲ್ಲ ಸೀತಾನ್ವೇಷಣಪ್ರಸಂಗದಲ್ಲಿ ತಾರಪ್ರೇರಿತನಾದ ಅಂಗದ ಕೈಗೊಂಡ ರಾಮಕಾರ್ಯವನ್ನು ಕೈಬಿಡುವ ಯೋಜನೆಗೆ ತಲೆ ಆಡಿಸಿದವರು. ವಿಭೀಷಣನೂ ರಾಮನ ಬಗ್ಗೆ ಒಮ್ಮೊಮ್ಮೆ ತಪ್ಪು ತಿಳಿದವನೇ. ದಶರಥಾದಿಗಳು ಮಾಡಿದ ರಾಮವಿರೋಧವಂತು ಪ್ರಸಿದ್ಧ. ಕೈಕೇಯಿಯಂತೂ ರಾಮನನ್ನೇ ಕಾಡಿಗಟ್ಟುವಂತಹ ಮಹಾಪಾತಕವನ್ನು ಎಸಗಿದಳು. ಲಕ್ಷ್ಮಣ ಕೆಲವೊಮ್ಮೆ ತಪ್ಪಾಗಿ ವರ್ತಿಸಿದ ಬಗ್ಗೆ ರಾಮನಿಂದ ಟೀಕಿಸಲ್ಪಟ್ಟಿದ್ದುಂಟು. ಭರತ 'ರಾಮ ಮಾತು ಕೊಟ್ಟಂತೆ ಬರಲಿಲ್ಲ' ಎಂಬ ಖೇದವನ್ನು ವ್ಯಕ್ತಪಡಿಸುವ ಮೂಲಕ ರಾಮನ ಸತ್ಯಸಂಧತ್ವದ ಬಗ್ಗೆ ಸಂಶಯಪಟ್ಟನು. ಅಲ್ಲಿಯೂ ಸಹ ಯಾವುದೇ ರೀತಿಯ ರಾಮದ್ರೋಹದ ಕಾರ್ಯ ಮಾಡದ ಏಕಮಾತ್ರ ವ್ಯಕ್ತಿ ಹನುಮಂತ ಮಾತ್ರ.

೨
ಋಷಿಮಾನುಷಗಂಧರ್ವಾ ವಕ್ತವ್ಯಾಃ ಕಿಮತಃ ಪರೇ ।
೩
ಜನ್ಮಜನ್ಮಾಂತರಾಜ್ಞಾನಾದವಜಾನಂತಿ ಯತ್ ಸದಾ ॥ ೨೬ ॥

ಅ: ಋಷಿಗಳು, ಮನುಷ್ಯರು ಮತ್ತು ಗಂಧರ್ವರ ಬಗ್ಗೆಯಂತೂ ಮತ್ತೇನೂ ಹೇಳಬೇಕಿಲ್ಲ. ಅವರು ಜನ್ಮ ಜನ್ಮಾಂತರಗಳಲ್ಲೂ ಅಜ್ಞಾನವಶದಿಂದಾಗಿ ಸದಾ ಅವನನ್ನು ಅವಮಾನಿಸುವವರೇ.

ಹತೇ ಚ ರಾವಣೇ ಶಂಭುರ್ಧನುರಾದಾಯ ರಾಘವಮ್ ।
ಆಜುಹಾವ ರಣಾಯೇತಿ ಕಥಾ ರಾಮಾಯಣೇ ಸ್ಫುಟಾ ॥
ಏವಂ ಚ ಶಂಕರಸ್ಯಾಪಿ ಕಲ್ಯಾವಿಷ್ಟಂ ಮನೋಽಭವತ್ ।
ತಸ್ಮಾದನ್ಯಸುರಾಣಾಂ ಕಾ ವಾರ್ತಾ ತದನುವರ್ತಿನಾಮ್ ॥
ಇಂದ್ರಶ್ಚ ಪಾರಿಜಾತಾರ್ಥಂ ಯುಯುಧೇ ಹರಿಣಾ ಸಹ ।
ಅಚೀಕರದ್ಧರೌ ವೈರಂ ಮಖಭಂಗೇ ಕೃತೇ ಸತಿ ॥
ಪಾರಿಜಾತಾಪಹರಣೇ ಸೇಶ್ವರಾ ದಿಗಧೀಶ್ವರಾಃ ।
ಆಯುಧ್ಯ ಹರಿಣಾ ಸಾರ್ಧಂ ಯುದ್ಧೇ ಕ್ರುದ್ಧಮನೋರಥಾಃ ॥
ಬಲಿನಾ ಕಲಿನಾ ವಿದ್ಧಾಸ್ತೇ ಚ ಸಿದ್ಧಾ ವಿಚಾರಣೇ ।
ಭೂಭಾರಭೂತದೈತ್ಯಾನಾಂ ವಧಾಯ ಕ್ಷೀರಸಾಗರಮ್ ॥
ಗತ್ವಾ ಯೇ ಪ್ರಾರ್ಥಯಾಮಾಸುರ್ಜಪ್ತ್ವಾ ತಪ್ತ್ವಾ ಚ ಸತ್ತಪಃ ।
ತೇಷಾಮದ್ಯೇದೃಶೀ ಮನ್ಯೇ ಕುಬುದ್ಧಿರ್ನ ಸ್ವಭಾವತಃ ॥
ಅತೋಽನ್ಯಾವೇಶತೋ ವಾಚ್ಯಾ ಭೂತಾವಿಷ್ಟಾಂತರಾತ್ಮವತ್ ।
ತಸ್ಮಾದ್ವಾಯ್ವಿತರೇ ದೇವಾಃ ಕಲ್ಯಾಕ್ರಾಂತಮನೋರಥಾಃ ॥
ವಾಯೋರಪಿ ಸಮಾ ನಾಸಂಸ್ತ್ ಕಥಂ ಸ್ಯುರ್ಹರೇಃ ಸಮಾಃ । - ಸರಸಭಾರತೀವಿಲಾಸ (೯/೧-೨೩)

ಎಃ ದೇವತೆಗಳೇ ಈ ರೀತಿ ಧರ್ಮತಪ್ಪಿರುವಾಗ ಅವರಿಗಿಂತ ತಾರತಮ್ಯದಲ್ಲಿ ಕಡಿಮೆ– ಯೆನ್ನಿಸುವ ಋಷಿಗಳು, ಮನುಷ್ಯೋತ್ತಮರು, ಗಂಧರ್ವರು ಮೊದಲಾದವರೆಲ್ಲ ಅಜ್ಞಾನವಶಾತ್ ಅನೇಕ ಬಾರಿ ಶ್ರೀಹರಿಯನ್ನು ತಪ್ಪು ತಿಳಿಯುವ ಮೂಲಕ ಅವಮಾನಿಸುವವರೇ ಆಗಿರುವರು ಎಂದರ್ಥ.

ಪರಶುಕ್ಲತ್ರಯರು

ತಸ್ಮಾದೇಕೋ ವಾಯುರೇವ ಧರ್ಮೋ ಭಾಗವತೇ ಸ್ಥಿತಃ ।
ಲಕ್ಷ್ಮೀಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃತಮ್ ॥ ೨೭ ॥

---

೨. ಋಷಿರ್ಮಾನುಷೇತ್ಯತ್ರ ಮಾನುಷಪದೇನ ಚಕ್ರವರ್ತಿನಃ । ಅತಃ ಪರಮಸ್ಮದಾದಯಃ ಯದ್ಯಸ್ಮಾಜ್ಜನ್ಮಜನ್ಮಾಂತರೇ ಸದಾ ಭಗವದಜ್ಞಾನಾತ್ ಸದಾऽವಜಾನಂತಿ । ಅತಃ ವಿರೋಧಂ ಕುರ್ವತೀತಿ ಕಿಮಾಶ್ಚರ್ಯಮಿತ್ಯರ್ಥಃ । ಯದ್ವಾ ಋಷಿರ್ಮಾನುಷೇತ್ಯತ್ರ ಮಾನುಷಪದೇನಾಸ್ಮದಾದಯೋ ವಿವಕ್ಷಿತಃ । ಯದಾ ಪ್ರಾಪ್ತಪದಾ ದೇವಾ ಅಪಿ ಮೂಲರೂಪಿಣೋ ವಿರೋಧಂ ಚಕ್ರಿರೇ । ಅತಃ ಪರಂ ಋಷಿಮಾನುಷಗಂಧರ್ವಾ ವಿರೋಧಂ ಚಕ್ರಿರ ಇತಿ ಕಿಮು ವಕ್ತವ್ಯಾಃ । ತದುಪಪಾದಯತಿ– ಜನ್ಮೇತಿ । – (ತಾ.)

೩. ಜನ್ಮಜನ್ಮಾಂತರೇऽಜ್ಞಾನಾದಿತ್ಯತ್ರ ಜನ್ಮಜನ್ಮಾಂತರೇ । ಸದಾ= ಸರ್ವದಾ ಅಜ್ಞಾನಾತ್= ವಿದ್ಯಮಾನಾದಜ್ಞಾನಾತ್ ಅವಜಾನಂತಿ= ಕದಾಚಿತ್ ಕದಾಚಿದವಜಾನಂತಿ ॥ – (ವಾ.)

ಯದಿ ದೇವಾಶ್ಚ ಋಷ್ಯಾದ್ಯಾ ನಿಂದ್ಯಂತೇ ಯತ್ರ ಕುತ್ರಚಿತ್ ।
ನ ತಾವತಾ ಗುಣೈರ್ಹೀನಾಃ ಸ್ಥಿತಪ್ರಜ್ಞಾ ಹಿ ತೇ ಮತಾಃ ॥
ಯಥಾಯೋಗ್ಯಂ ತು ತಾತ್ಪರ್ಯಂ ನಿಂದಾಯಾ ಅನ್ಯದೇವ ತು ॥ - ಇತಿ ಗಾರುಡೇ (ಭಾ. ತಾ. ೪/೪/೨೦)

ಜ್ಞಾನರೂಪಾನಪಿ ಸುರಾನ್ ವಿನಾ ಪ್ರಾಣಂ ಕ್ವಚಿತ್ ಪರೇ ।
ಆವಿಶಂತಿ ಹ್ಯತಸ್ತೇಷಾಮಜ್ಞಾನಾದಿ ನ ತು ಸ್ವತಃ ॥ - ಇತಿ ದೇವತತ್ತ್ವೇ (ಭಾ. ತಾ. ೧೧/೪/೭)

೪. ಪರಶುಕ್ಲತ್ರಯಂ ಶ್ರುತಮಿತ್ಯತ್ರ ಸರಸ್ವತೀ ವಾಯುಃ ಲಕ್ಷ್ಮೀಶ್ಚೇತಿ ಪರೇ= ಪರಮಾತ್ಮನಿ ಶುಕ್ಲಾನಾಂ= ಶುದ್ಧಾನಾಂ ತ್ರಯಂ= ತ್ರಿಕಂ ಶ್ರುತಂ= ಶ್ರುತಿಪ್ರಸಿದ್ಧಮ್ । ವಾಯುರ್ಭಾರತೀತ್ಯನುಕ್ತ್ವಾ ಸರಸ್ವತೀತಿ ಕಥನಾತ್ ವಾಯುಪದೇನ ಬ್ರಹ್ಮಾऽಪಿ ಗೃಹ್ಯತೇ ಸರಸ್ವತೀಪದೇನ ಭಾರತ್ಯಪಿ ಗೃಹ್ಯತ ಇತಿ ಸೂಚಿತಮ್ ॥ – (ವಾ.)

ಪರಶುಕ್ಲತ್ರಯಂ ಪರಮಶುದ್ಧತ್ರಯಮ್ । – (ತಾ.)

ಶ್ರೀಬ್ರಹ್ಮವಾಣೀಪ್ರಾಣೇಶಭಾರತ್ಯಾಖ್ಯಾಃ ಪರೇ ಹರೌ ।
ಪಂಚೇಮಾಶ್ಚಂಚಲಾ ನೈವ ಕಥಂಚನ ಕದಾಚನ ॥
ಏಕೀಭಾವಾದ್ ಬ್ರಹ್ಮವಾಯ್ವೋಸ್ತತ್ಪನ್ನೋಸ್ತದ್ವದೇವ ಹಿ ।
ಏಕೀಭಾವೇ ಸತೀಮಾಸ್ತು ತಿಸ್ರೋऽಭೂವನ್ ಹಿ ದೇವತಾಃ ॥
ಯಚ್ಛುದ್ಧಾಪರಪರ್ಯಾಯಂ ಪದಂ ಶುಕ್ಲಾಭಿಧಂ ಬುಧಾಃ ।
ಆಹುಸ್ತೇನ ಪರೇ ತತ್ತ್ವೇ ಶುಕ್ಲಮೇತತ್ತ್ರಯಂ ಕಿಲ ॥ – ಸ. ಭಾ. ವಿ. ೩/೧-೩

ಅ: ಆದ್ದರಿಂದ ವಾಯು ಒಬ್ಬನೇ ಸದಾ ಭಾಗವತಧರ್ಮದಲ್ಲಿ ನಿರತನಾದವನು. ಲಕ್ಷ್ಮೀ, ಸರಸ್ವತಿಯರೂ ಸಹ ಅಂತಹವರೇ. ಈ ಮೂವರೂ ಪರಶುಕ್ಲತ್ರಯರು ಎನ್ನಿಸಿರುವರು.

ವಿ: ೧) ಮೂಲರೂಪದಲ್ಲೇ ಆಗಲೀ, ಅವತಾರರೂಪದಲ್ಲೇ ಆಗಲೀ ಯಾವ ರೀತಿಯಲ್ಲೂ ಎಷ್ಟು ಮಾತ್ರಕ್ಕೂ ಅನಾದ್ಯನಂತಕಾಲೀನವಾದ ಜೀವನದಲ್ಲಿ ಒಂದೇ ಒಂದು ಬಾರಿಯೂ ಯಾವುದೇ ರೀತಿಯ ವಿರೋಧವನ್ನು ಮಾಡದವರು ಎಂದರೆ ವಾಯುದೇವರೊಬ್ಬರೇ. ವಾಯುದೇವರು ಹೀಗೆ ಶುದ್ಧಧರ್ಮರತರಾಗಿರುವಂತೆ ಬ್ರಹ್ಮ ದೇವರೂ ಶುದ್ಧಧರ್ಮರತರೇ ಎಂಬುದು ಕೈಮುತ್ಕಸಿದ್ಧ. ಅವರು ಹಿಂದಿನ ಕಲ್ಪದಲ್ಲಿ ವಾಯುದೇವರಾಗಿದ್ದವರಲ್ಲವೇ.

೨) ಭಾರತಿಯು ಭಾಗವತಧರ್ಮರತರಾಗಿದ್ದಂತೆ ಸರಸ್ವತಿಯೂ ಸಹ ಧರ್ಮರತರೇ. ಭಾರತಿ ಭಾವಿಸರಸ್ವತಿಯೇ ಅಲ್ಲವೇ. ಅವರಿಗೆ ಲಿಂಗದೇಹದ ಸಂಬಂಧವಿದ್ದರೂ ದಗ್ಧಪಟಾಯಮಾನವಾದ ಅದು ಯಾವುದೇ ರೀತಿಯಲ್ಲೂ ಅವರ ಮೇಲೆ ಪ್ರಭಾವ ಬೀರದೇ ಇರುವುದು ಎಂಬುದೇ ಶಾಸ್ತ್ರವಚನ.

ಅಸುರಾವೇಶರಹಿತವಾಯೋರೇವ ಹಿ ಶುಕ್ಲತಾ ।
ಉಚಿತಾऽತೋ ಮುಖ್ಯವಾಯುರಾಖಿಣಾಶ್ಮಸಮಃ ಕಿಲ ॥
ಯನ್ಮುಖ್ಯವಾಯುಪ್ರತಿಮಾಪೂಜಾವಿಚ್ಛೇದಕಾಸುರಾನ್ ।
ಚೂರ್ಣೀಕರೋತಿ ತೇನಾಸಾವವಿಚ್ಛಿನ್ನಾರ್ಹಣೋಚಿತಾ ॥
ಇತಿ ಮತ್ವಾ ತತ್ತ್ವವಿದೋ ಮಧ್ವಸ್ಯ ಸ್ವೋಪಕಾರಿಣಃ ।
ವಾಯೋಸ್ಸತೀಯರೂಪಸ್ಯ ಹೃದ್ಯರ್ಚಾಂ ಕುರ್ವತೇ ಹರೇಃ ॥
ವಾಯುರೇವ ಯತೋ ಬ್ರಹ್ಮಾ ಸೋऽಪಿ ಶುಕ್ಲೋऽಭವತ್ ತತಃ ।
ವಾತಾಧ್ವೀತಾಸುರಾ ವಾಯೋಃ ಪತ್ನೀಂ ಪತ್ಯಂಕಗಾಂ ಸದಾ ॥
ಯದ್ದ್ರಷ್ಟುಮಪಿ ಶಕ್ತಾ ನೋ ಸಾऽಪಿ ಶುಕ್ಲಾऽಭವತ್ ತತಃ ।
ಸ್ವಸ್ಪರ್ಶಾಸಹಮಾನೋऽಪಿ ಪತ್ನೀಸ್ಪರ್ಶಂ ಸಹೇತ ಕಃ ॥
ಅತೋऽಭೂದ್ಭಾರತೀ ಶುಕ್ಲತಮಾ ವೇದವಿದಾಂ ಮತೇ ।
ಯತಃ ಸರಸ್ವತೀ ದೇವೀ ಭಾರತೀ ಪೂರ್ವಜನ್ಮನಿ ॥
ಅತಸ್ತಸ್ಯಾಶ್ಚ ಶುಕ್ಲತ್ವಂ ಯುಕ್ತಮೇವೇತಿ ಮೇ ಮತಿಃ ।
ಅತಃ ಶ್ರೌತಂ ಚ ಯೌಕ್ತಂ ಚ ಪರೇ ಶುಕ್ಲಮಿದಂ ತ್ರಯಮ್ ॥
ಏವಂ ಚ ವಾಯೋರವಮಾ ದೇವಾಃ ಶರ್ವಪುರೋಗಮಾಃ ।
ವಾಯೋರಪೀಶಸ್ಯ ಹರೇರಾಸನ್ ಕಿಂಕರಕಿಂಕರಾಃ ॥
ಅತಃ ಶ್ರೀಹರಿಣೈಕ್ಯಂ ವಾ ಸಾಮ್ಯಂ ವಾ ಕಸ್ಯ ಸಂಭವೇತ್ ।
ತಸ್ಮಾದಪ್ಯುತ್ತಮತ್ವಂ ಯತ್ ತದಪ್ಯಮರಸೋಪಮಮ್ ॥
ಕಿಂ ಚ ವಾಯೋಃ ಶುಕ್ಲತಾಯಾಂ ತಸ್ಯ ಪುತ್ರಾಸ್ತುತೇ ತ್ರಯಃ ।
ಹನುಮದ್ಭೀಮಮಧ್ವಾಖ್ಯಾಃ ಮನೋಮಾಲಿನ್ಯವರ್ಜಿತಾಃ ॥ —ಸರಸಭಾರತೀವಿಲಾಸ(೫/೨೯-೩೮)

೩) ಇನ್ನು ಮಹಾಲಕ್ಷ್ಮಿಯ ವಿಚಾರ, ಅವರಂತೂ ಬ್ರಹ್ಮ, ವಾಯುಗಳಿಗಿಂತಲೂ ಕೋಟಿ ಗುಣ ಮಿಗಿಲಾದ ಶ್ರೀಹರಿಯ ಪರಮಭಕ್ತರು, ನಿತ್ಯಮುಕ್ತರು, ಪ್ರಾಕೃತ ದೇಹವೇ ಇಲ್ಲದವರು. ಅವರೂ ಸಹ ಇವರೆಲ್ಲರಿಗಿಂತ ಮಿಗಿಲಾಗಿ ಪರಿಶುದ್ಧಭಾಗವತಧರ್ಮರತರು ಎಂಬುದು ಅತ್ಯಂತ ಸ್ಪಷ್ಟ. ಹೀಗೆ ಮಹಾಲಕ್ಷ್ಮಿ, ಬ್ರಹ್ಮ ಹಾಗೂ ವಾಯು, ಸರಸ್ವತಿ ಹಾಗೂ ಭಾರತಿ ಎಂಬ ಈ ಮೂವರು ಮಾತ್ರ ಪರಮಾತ್ಮನ ವಿಚಾರದಲ್ಲಿ ಪರಿಶುದ್ಧರಾದ್ದರಿಂದ ಅವರಿಗೆ ಪರಶುಕ್ಲತ್ರಯ ಎಂದು ಹೆಸರು.

೪) ಇಲ್ಲಿ ವಾಯು ಶಬ್ದದಿಂದ ಬ್ರಹ್ಮ ದೇವರು ಮೊದಲಾದ ಉಳಿದ ಸಕಲಪುರುಷ ಋಜುಗಳನ್ನೂ, ಸರಸ್ವತೀ ಶಬ್ದದಿಂದ ಭಾರತಿ ಮೊದಲಾದ ಇತರ ಸಕಲ ಸ್ತ್ರೀಋಜುಗಳನ್ನೂ ಗ್ರಹಿಸಬೇಕು. ಹೀಗೆ ಮಹಾಲಕ್ಷ್ಮಿ ಹಾಗೂ ಪುರುಷಋಜುಗಳು ಮತ್ತು ಸ್ತ್ರೀಋಜುಗಳು ಎಂಬ ಮೂವರು ಪರಶುಕ್ಲತ್ರಯರು ಎಂದು ಒಟ್ಟು ತಾತ್ಪರ್ಯ.

ಈ ಪರಶುಕ್ಲತ್ರಯತ್ವದ ವಿವೇಚನೆಯನ್ನು ಶ್ರೀವಾದಿರಾಜಸ್ವಾಮಿಗಳು ತಮ್ಮ ಸರಸಭಾರತೀವಿಲಾಸ[೧] ಕೃತಿಯಲ್ಲಿ ಬಹಳ ವಿಶೇಷ ರೀತಿಯಲ್ಲಿ ಮಾಡಿ ತೋರಿಸಿರುವರು.

---

೧. ಕಲಿರೂಪಧರಂ ಭೀಮನಾಮಾ ಯೋ ಮರ್ದಯಿಷ್ಯತಿ ।
ದುರ್ವಾದಿರೂಪದೈತ್ಯಾನಾಂ ಗರ್ವಂ ಖರ್ವೀಕರಿಷ್ಯತಿ ॥
ಗುರ್ವಗ್ರೇಸರರೂಪೋ ಯಶ್ಚಾರ್ವಪೂರ್ವತರೋಕ್ತಿಮಾನ್ ।
ತಸ್ಯ ರಾಕ್ಷಸತೋ ಭೀತಿಂ ಪ್ರೇಕ್ಷಾವಾನ್ ವಕ್ಷ್ಯತೀಹ ಕಃ ॥
ಯಸ್ತು ಹಸ್ತತಲೇನೈವ ತಥಾ ಪಾದತಲೇನ ಚ ।
ಮುಷ್ಟಿನಾ ಚಾಸುರಮದಚ್ಛೇತ್ತಾ ತಂ ಕೋಽಸುರಃ ಸ್ಪ್ರಶೇತ್ ॥
ಯಸ್ಯ ದೃಷ್ಟಿಶ್ಚ ಮುಷ್ಟಿಶ್ಚ ಗದಾ ಚಾರಿವಿದಾರಿಣೇ ।
ಅನೇಕಕೋಟಿಸಂಖ್ಯಾತಾನೇಕಲಃ ಸಕಲಾನ್ ಖಿಲಾನ್ ॥
ಚೂರ್ಣೀಚಕಾರ ಗದಯಾ ಸೌಗಂಧಿಕವನೇ ಕಿಲ ।
ಬಲವಂತಂ ಭೀಮಸೇನಂ ರಕ್ಷೋವಿಕ್ಷೋಭಕಾರಿಣಮ್ ॥
ನ ದ್ರಷ್ಟುಮಪಿ ಶಕ್ತೋಽಸ್ತಿ ಸ್ಪಷ್ಟುಂ ಶಕ್ಷ್ಯತಿ ಕೋಽಸುರಃ ।
ಪ್ರಮಾಣಗಣಬಾಣೌಘೈರಾಸೇತೋರಾಹಿಮಾಚಲಾತ್ ॥
ವ್ಯದ್ರಾವಯತ್ ಖಿಲಾನ್ ಕ್ಷುದ್ರಸಿದ್ಧಾಂತಸ್ಯ ಪ್ರವರ್ತಕಾನ್ ।
ತಸ್ಯ ಮಧ್ವಮುನೇಃ ಶುದ್ಧಾಂ ಬುದ್ಧಿಂ ಕೋ ವಾಽಸುರೋ ವಿಶೇತ್ ॥
ಮಾನುಷಾನ್ಮೋಪಭೋಗೇಽಪಿ ಸೂನೂನಾಂ ಯಸ್ಯ ಧೀಮತಾಮ್ ।
ಹೀನತಾ ಮಾನಸೇ ನಾಸ್ತಿ ತಸ್ಯ ವಾಯೋಃ ಕುತೋಽಸ್ತಿ ಸಾ ॥
ಬುದ್ಧಿಸ್ತಸ್ಯ ಪರೇ ತತ್ತ್ವೇ ಶುದ್ಧಾಽಭೂತ್ ತದ್ಧನೂಮತಃ ।
ಶುದ್ಧಸ್ಯ ಭೀಮಸೇನಸ್ಯ ಮಧ್ವಸ್ಯ ಚ ಮಹಾತ್ಮನಃ ॥
ಭೀಮೋ ಜಿತಾರಿಸ್ತೋಮೋ ಯಃ ಸೋಮಾನ್ವಯಸಮುದ್ಭವಃ ।
ನಾಮೈವ ಯಸ್ಯ ಭಯದಂ ಧೀಮಾಂಶ್ಚ್ರೀಮಾನ್ ಸ ಭಣ್ಯತೇ ॥ - ಸ. ಭಾ. ವಿ. ೬/೪-೧೩.

ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ[೧] ॥ ೨೮ ॥

ಅ: ಇದನ್ನೆಲ್ಲ ಅಮಿತಸ್ವರೂಪರಾದ ವೇದವ್ಯಾಸರೇ ಪುರಾಣಗಳಲ್ಲೂ, ಭಾರತದಲ್ಲೂ ತಮ್ಮ ಸ್ವರೂಪಜ್ಞಾನದಿಂದ ಅಲ್ಲಲ್ಲಿ ವಿವರಿಸಿರುವರು.

ವಿ: ಹೀಗೆ ಪರಶುಕ್ಲತ್ರಯರ ವಿಚಾರ ಮೊದಲಾದ ವಿವರಗಳೆಲ್ಲ ಸಾಕ್ಷಾತ್ ವೇದವ್ಯಾಸ–ರೂಪದಿಂದ ಶ್ರೀಹರಿಯೇ ಮಹಾಭಾರತದಲ್ಲಿ, ಭಾಗವತಾದಿಪುರಾಣಗಳಲ್ಲಿ ತಿಳಿಸಿಕೊಟ್ಟಿರುವನು ಎಂದರ್ಥ.

ಕುರು ಪಾಂಡವರ ಅಸ್ತ್ರವಿದ್ಯಾ ಪ್ರದರ್ಶನ

ಯದಾ ತೇ ಸರ್ವಶಸ್ತ್ರಾಸ್ತ್ರವೇದಿನೋ ರಾಜಪುತ್ರಕಾಃ ।
ಬಭೂವೂ ರಂಗಮಧ್ಯೇ ತಾನ್ ಭಾರದ್ವಾಜೋ ವ್ಯದರ್ಶಯತ್ ॥ ೨೯ ॥

ಅ: ಆ ರಾಜಪುತ್ರರುಗಳೆಲ್ಲ ಹಾಗೆ ಸರ್ವ ಶಸ್ತ್ರಾಸ್ತ್ರಗಳಲ್ಲೂ ನಿಪುಣರೆನಿಸಿದಾಗ ದ್ರೋಣಾಚಾರ್ಯರು ಅವರನ್ನೆಲ್ಲ ಪರೀಕ್ಷಾ ರಂಗದ ನಡುವೆ ಪ್ರದರ್ಶಿಸಿದರು.

ವಿ: ೧) ಈವರೆಗೆ ಪ್ರಾಸಂಗಿಕವಾಗಿ ಭೀಮಸೇನ, ದ್ರೌಪದಿಯರ ಭಾಗವತಧರ್ಮದ ತತ್ತ್ವವನ್ನು ವಿಶ್ಲೇಷಿಸಿ ಇನ್ನು ಮುಂದೆ ಮಹಾಭಾರತದ ಮುಖ್ಯಕಥೆಯನ್ನು ಮುಂದು–ವರಿಸುತ್ತಿರುವರು.

೨) ಅಸ್ತ್ರಾಭ್ಯಾಸ ಪೂರೈಸಿದ ಮೇಲೆ ದ್ರೋಣಾಚಾರ್ಯರು ತಾವು ರಾಜಕುಮಾರರು–ಗಳನ್ನು ಸಿದ್ಧಮಾಡಿರುವ ಬಗೆಯನ್ನು ಭೀಷ್ಮಾದಿಗಳಿಗೆಲ್ಲ ತಿಳಿಸಿಕೊಡುವ ಉದ್ದೇಶದಿಂದ ಒಂದು ಪರೀಕ್ಷಾರಂಗವನ್ನು ಏರ್ಪಡಿಸಿ ಅದರ ಮಧ್ಯದಲ್ಲಿ ಅವರೆಲ್ಲರ ಶಸ್ತ್ರಾಸ್ತ್ರಕೌಶಲವನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಿದರು ಎಂದರ್ಥ.

ರಕ್ತಚಂದನಸತ್ಪುಷ್ಪವಸ್ತ್ರಶಸ್ತ್ರಗುಡೋದನೈಃ[೨] ।
ಸಂಪೂಜ್ಯ ಭಾರ್ಗವಂ ರಾಮಮನುಜಜ್ಞೇ ಕುಮಾರಕಾನ್ ॥ ೩೦ ॥

---

೧. ಸ್ವಸಂವಿದಾ ಸ್ವರೂಪಜ್ಞಾನೇನ । – (ವ., ಜ.)

೨. ಅನುಜಜ್ಞೇ ಆಜ್ಞಾಪಯಾಮಾಸ । – (ಜ.)

ಅ: ಶ್ರೀಗಂಧ, ಒಳ್ಳೆಯ ಹೂವುಗಳು, ವಸ್ತ್ರಗಳು, ಶಸ್ತ್ರಗಳು ಹಾಗೂ ಬೆಲ್ಲದ ಭಕ್ಷ್ಯಗಳಿಂದ ಗುರುವಾದ ಪರಶುರಾಮರೂಪದ ಶ್ರೀಹರಿಯನ್ನು ಚೆನ್ನಾಗಿ ಪೂಜಿಸಿ ಅವರು ರಾಜಕುಮಾರರಿಗೆ ತಮ್ಮ ಅಸ್ತ್ರಕೌಶಲವನ್ನು ಪ್ರದರ್ಶನ ಮಾಡಲು ಆದೇಶಿಸಿದರು.

ವಿ: ಕೌಶಲವನ್ನು ಪ್ರದರ್ಶಿಸುವ ಮುನ್ನ ದ್ರೋಣಾಚಾರ್ಯರು ತಮ್ಮ ಗುರುಗಳು ಎಂಬ ಕಾರಣದಿಂದಲೂ, ಧನುರ್ವಿದ್ಯಾಪ್ರವರ್ತಕರೂಪ ಎಂಬ ಕಾರಣದಿಂದಲೂ ಶ್ರೀಹರಿಯ ಪರಶುರಾಮರೂಪವನ್ನು ಆರಾಧಿಸಿದರು ಎಂದರ್ಥ.

ತೇ ಭೀಷ್ಮದ್ರೋಣವಿದುರಗಾಂಧಾರೀಧೃತರಾಷ್ಟ್ರಕಾನ್ ।
ಸರಾಜಮಂಡಲಾನ್ ನತ್ವಾ ಕುಂತೀಂ ಚಾದರ್ಶಯಂಶ್ಚ್ರಮಮ್[೧] ॥ ೩೧ ॥

ಅ: ಭೀಷ್ಮ, ದ್ರೋಣ, ವಿದುರ, ಗಾಂಧಾರಿ, ಧೃತರಾಷ್ಟ್ರರನ್ನೂ, ರಾಜರುಗಳ ಗುಂಪುಗಳನ್ನೂ ವಂದಿಸಿ, ಕುಂತಿಗೂ ನಮಸ್ಕರಿಸಿ ಕುರುಪಾಂಡವರು ತಮ್ಮ ವಿದ್ಯಾಪರಿಶ್ರಮವನ್ನು ತೋರಿಸಿದರು.

ವಿ: ಗುರು ಹಿರಿಯರಿಗೆ ನಮಸ್ಕರಿಸಿ ಸತ್ಕಾರ್ಯವನ್ನು ಪ್ರಾರಂಭಿಸುವ ಶಿಷ್ಟಾಚಾರದಂತೆ ಅವರೆಲ್ಲ ನಡೆದರು ಎಂದರ್ಥ.

ಅಶ್ವತ್ಥಾಮರ ಅಸ್ತ್ರಕೌಶಲ

ಸರ್ವೈಃ ಪ್ರದರ್ಶಿತೇಽಸ್ತ್ರೇ ತು ದ್ರೋಣಾದಾತ್ತಮಹಾಸ್ತ್ರವಿತ್ ।
ದ್ರೌಣಿರಸ್ತ್ರಾಣ್ಯಮೇಯಾನಿ ದರ್ಶಯಾಮಾಸ ಚಾಧಿಕಮ್ ॥ ೩೨ ॥

ಅ: ಉಳಿದೆಲ್ಲರೂ ತಮ್ಮ ಅಸ್ತ್ರಕೌಶಲವನ್ನು ಪ್ರದರ್ಶಿಸಿದ ಬಳಿಕ ದ್ರೋಣರಿಂದ ಪಡೆದಿದ್ದ ಶ್ರೇಷ್ಠವಾದ ಮಹಾಸ್ತ್ರಗಳನ್ನು ತಿಳಿದಿದ್ದ ಅಶ್ವತ್ಥಾಮ ಅವರೆಲ್ಲರಿಗಿಂತ ಮಿಗಿಲಾಗಿ ಗಹನವಾದ ಅಸ್ತ್ರಗಳನ್ನು ಪ್ರದರ್ಶಿಸಿದ.

ವಿ: ೧) ಉಳಿದೆಲ್ಲರು ತೋರಿಸಿದ ಅಸ್ತ್ರಕೌಶಲಕ್ಕಿಂತ ಅಶ್ವತ್ಥಾಮರು ತೋರಿದ ಕೌಶಲ ಮಿಗಿಲಾಗಿದ್ದಿತು ಎಂದರ್ಥ. ಸ್ವತಃ ಸಾಕ್ಷಾತ್ ಪರಶುರಾಮರ ಶಿಷ್ಯರೂ ಶಿವನ ಅವತಾರರೂ,

---

೧. ಅದರ್ಶಯಚ್ಚ್ರಮಮಿತ್ಯತ್ರ ಶ್ರಮಂ = ವಿದ್ಯಾಪರಿಶ್ರಮಮ್ ॥ –(ವಾ.)
ಶ್ರಮಂ ವಿದ್ಯಾಭ್ಯಾಸಮ್ ॥ – (ಜ., ವ.)

ದ್ರೋಣಾಚಾರ್ಯರ ಪುತ್ರರೂ ಆದ ಅವರಿಗೆ ಅಂತಹ ಅಪೂರ್ವವಿದ್ಯೆ ಸಿದ್ಧಿಸಿದ್ದು ಸಹಜವಾಗಿತ್ತು ಎಂದರ್ಥ.

೨) ತಮ್ಮ ಮೂಲ ರೂಪವಾದ ಶಿವರೂಪದಿಂದ ಪರಶುರಾಮರಲ್ಲೂ, ('ಶಂಭುವರೇಣ್ಯ' – ದ್ವಾದಶಸ್ತೋತ್ರ) ಅಶ್ವತ್ಥಾಮರ ರೂಪದ ಮೂಲಕ ಪರಶುರಾಮರ ಸಾಕ್ಷಾಚ್ಛಿಷ್ಯರಾದ ದ್ರೋಣಾಚಾರ್ಯರಲ್ಲೂ ಅಧ್ಯಯನ ಮಾಡಿದ್ದು ಅವರ ವಿಶೇಷ ಕೌಶಲಕ್ಕೆ ಮುಖ್ಯಕಾರಣವಾಗಿತ್ತು ಎಂದು ತಿಳಿಯಬೇಕು. ಅಶ್ವತ್ಥಾಮರು ವಿಶೇಷ ಅಸ್ತ್ರಜ್ಞರೆಂಬ ವಿವರ ಹಲವಾರು ಸಂದರ್ಭಗಳಲ್ಲಿ ಮೂಲಮಹಾಭಾರತದಲ್ಲೂ, ನಿರ್ಣಯದಲ್ಲೂ ನಿರೂಪಿತವಾಗಿದೆ.

ಅರ್ಜುನನ ಅಪ್ರತಿಮಕೌಶಲ

ತತೋಽಪ್ಯತಿತರಾಂ ಪಾರ್ಥೋ[೧] ದಿವ್ಯಾಸ್ತ್ರಾಣಿ ವ್ಯದರ್ಶಯತ್ ।
ಅವಿಧ್ಯನ್ಮಾಶಕೇ ಪಾದೇ ಪಕ್ಷಿಣಃ ಪಕ್ಷ್ಮ ಏವ ಚ ।
ಏವಮಾದೀನಿ ಚಾಸ್ತ್ರಾಣಿ ಬಹೂನ್ಯೇಷ ವ್ಯದರ್ಶಯತ್ ॥ ೩೩ ॥

ಅ: ಅಶ್ವತ್ಥಾಮರಿಗಿಂತ ತುಂಬಾ ಮಿಗಿಲಾಗಿ ಅರ್ಜುನ ದಿವ್ಯಾಸ್ತ್ರಗಳನ್ನು ಪ್ರದರ್ಶನ ಮಾಡಿದ. ಒಂದು ನೊಣದ ಕಾಲಿಗೂ, ಒಂದು ಪಕ್ಷಿಯ ಕಣ್ಣುರೆಪ್ಪೆಗೂ ಅರ್ಜುನ ಬಾಣದಿಂದ ಹೊಡೆದನು. ಇವೇ ಮೊದಲಾದ ಅನೇಕ ಅಸ್ತ್ರಗಳನ್ನು ಅವನು ತೋರಿಸಿದನು.

ವಿ: ೧) ಅರ್ಜುನ ಸ್ವರೂಪದಲ್ಲಿ ಇಂದ್ರಾವತಾರನಾಗಿದ್ದರೂ, ರುದ್ರಾವತಾರರಾದ ಅಶ್ವತ್ಥಾಮರಿಗಿಂತಲೂ ಮಿಗಿಲಾಗಿ ಹಾಗೆ ಅಸ್ತ್ರಕೌಶಲವನ್ನು ಪ್ರದರ್ಶಿಸಲು ಸಾಧ್ಯವಾಗಿದ್ದಕ್ಕೆ ಅವನಲ್ಲಿದ್ದ ವೀರನಾಮಕ ವಾಯುದೇವರ ಆವೇಶ, ನರಾಂಶಗಳು ಮುಖ್ಯ ಕಾರಣವಾಗಿದ್ದವು. ಇನ್ನಿತರ ಕಾರಣಗಳನ್ನು ಸಹ ಅಲ್ಲಲ್ಲೇ ತಿಳಿಸಿರುವರು.

೨) ಅರ್ಜುನ ಹಾಗೆ ಹೊಡೆದದ್ದು [೨]ಕೃತಕ ನೊಣದ ಪಾದಕ್ಕೆ ಹಾಗೂ ಕೃತಕಪಕ್ಷಿಯ ಕಣ್ಣುರೆಪ್ಪೆಗೆ ಎಂಬ ಮಾತು ಮೂಲ ಮಹಾಭಾರತದಲ್ಲಿದೆ. ಇದರಿಂದ ಅವನು ಪರೀಕ್ಷೆಗಾಗಿಯೂ ಸಹ ಪ್ರಾಣಿಹಿಂಸೆ ಮಾಡಿದವರಲ್ಲ ಎಂಬ ಪ್ರಮೇಯ ವ್ಯಕ್ತವಾಗುವುದು.

---

೧. ಪಕ್ಷಿಣಃ ಪಕ್ಷ್ಮ ಏವ ಚೇತ್ಯತ್ರ ''ಪಾ ರಕ್ಷಣ'' ಇತಿ ಧಾತೋಃ ಪಂ= ನಯನರಕ್ಷಣಂ ತತ್ರ ಕ್ಷ್ಮಂ= ಕ್ಷಮಂ ಸಮರ್ಥಮಿತಿ ವ್ಯುತ್ಪತ್ಯಾ ಪಕ್ಷ್ಮಮೇವ ಪಕ್ಷ್ಮ ತಸ್ಮಿನ್ನಿತ್ಯರ್ಥಃ ॥ –(ವಾ.)

ಪಾದೇ ಪಾದಮಿತ್ಯರ್ಥಃ। ಪಕ್ಷಿಣಃ ಪಕ್ಷ್ಮೇ ಅಕ್ಷಿಲೋಮನಿ। 'ಪಕ್ಷ್ಮಪತ್ರೇ ಚ ಸೂಕ್ಷ್ಮಾಂಶೇ ಕಿಂಜಲ್ಕೇ ನೇತ್ರಲೋಮನಿ' ಇತ್ಯಮರಃ। –(ಜ.)

೨. ಕೃತ್ರಿಮಂ ಭಾಸಮಾರೋಪ್ಯ ವೃಕ್ಷಾಗ್ರೇ ಶಿಲ್ಪಿಭಿಃ ಕೃತಮ್ ।
ಅವಿಜ್ಞಾತಂ ಕುಮಾರಾಣಾಂ ಲಕ್ಷ್ಯಭೂತಮುಪಾದಿಶತ್ ॥ –ಭಾರತ (ಆದಿ. ೧೩೧/೬೮)

ಕರ್ಣನ ರಂಗಪ್ರವೇಶ - ಅಸ್ತ್ರವಿದ್ಯಾ ಪ್ರದರ್ಶನ

ತದೈವ ಕರ್ಣ ಆಗತ್ಯ ರಾಮೋಪಾತ್ತಾಸ್ತ್ರಸಂಪದಮ್ ।
ದರ್ಶಯನ್ನಧಿಕಃ ಪಾರ್ಥಾದಭೂದ್ರಾಜನ್ಯಸಂಸದಿ ॥ ೩೪ ॥

ಅ: ಕರ್ಣ ಆ ಸಮಯದಲ್ಲಿ ಅಲ್ಲಿಗೆ ಆಗಮಿಸಿ ತಾನು ಪರಶುರಾಮರಿಂದ ಕಲಿತಿದ್ದ ಅಸ್ತ್ರ ಸಂಪತ್ತನ್ನು ತೋರಿಸಿ ಆ ರಾಜಸಭೆಯಲ್ಲಿ ಅರ್ಜುನನಿಗಿಂತ [೧]ಮಿಗಿಲೆನ್ನಿಸಿದ.

ವಿ: ೧) ಕರ್ಣ ಸೂರ್ಯಾವತಾರ. ಎಂದರೆ ತಾರತಮ್ಯದಲ್ಲಿ ಅರ್ಜುನನಿಗಿಂತ ಕಡಿಮೆ. ಆದರೂ ಅವನಿಗೆ ಅರ್ಜುನನಿಗಿಂತ ಹೆಚ್ಚಾಗಿ ಅಸ್ತ್ರ ಕೌಶಲ ಸಿದ್ಧಿಸಿರಲು ಆತನು ಪರಶುರಾಮ ದೇವರ ಬಳಿ ಸಾಕ್ಷಾತ್ತಾಗಿ ಅಸ್ತ್ರಾಭ್ಯಾಸ ಮಾಡಿದ್ದೇ ಕಾರಣವಾಗಿದ್ದಿತು ಎಂಬುದನ್ನು '**ರಾಮೋಪಾತ್ತಾಸ್ತ್ರಸಂಪದಂ**' ಎಂಬ ಮಾತಿನಿಂದ ತಿಳಿಸಿರುವರು ಎಂದು ತಿಳಿಯಬೇಕು.

೨) ಎಂದರೆ ಕರ್ಣ ಪರಶುರಾಮರ ಸಾಕ್ಷಾತ್ ಶಿಷ್ಯ; ಅರ್ಜುನ ಅವರ ಪ್ರಶಿಷ್ಯ. ಸಿದ್ಧಿ-ವ್ಯತ್ಯಾಸಕ್ಕೆ ಆ ಸಂದರ್ಭದಲ್ಲಿ ಅದು ಪ್ರಧಾನ ಕಾರಣವಾಯಿತು. ಅದರೊಂದಿಗೆ ಪರಶುರಾಮರು ನೀಡಿದ್ದ ವರವೂ ಅದಕ್ಕೆ ನೆರವಾಯಿತು ಎಂದು ತಿಳಿಯಬೇಕು.

ಕುಂತೀ ನಿಜಂ ಸುತಂ [೨]ಜ್ಞಾತ್ವಾ ಲಜ್ಜಯಾ ನಾವದಚ್ಚ ತಮ್ ।
ಪಾರ್ಥೋಽಸಹಂಸ್ತಂ ಯುದ್ಧಾಯೈವಾಹ್ವಯಾಮಾಸ ಸಂಸದಿ ॥ ೩೫ ॥

ಅ: ಕುಂತಿಯು ಅವನನ್ನು ತನ್ನ ಮಗನೆಂದು ಗುರುತಿಸಿದರೂ ಲಜ್ಜೆಯಿಂದಾಗಿ ಅದನ್ನು ಹಾಗೆ ತಿಳಿಸದಾದಳು. ಅರ್ಜುನನು ಕರ್ಣನ ಕೌಶಲವನ್ನು ಸಹಿಸಲಾಗದೇ ಆ ಸಭೆಯಲ್ಲಿ ಅವನನ್ನು ಯುದ್ಧಕ್ಕೇ ಆಹ್ವಾನಿಸಿದ.

---

೧. ಹಂಸಡಿಬಿಕವಿಷಯೇ ದುರ್ವಾಸಸ ಇವ ಸ್ವವರೋಲ್ಲಂಘನಸಾಮರ್ಥ್ಯಾಭಾವಾತ್ ಕರ್ಣಸ್ಯಾಪಿ ಪರಾಭವಃ। ಪಾಂಡವೇಷು ಸ್ಪರ್ಧಯಾ ಗತತ್ವಾದ್ರಾಮಶಾಪಾಚ್ಚ ಪರಾಭವಃ ಸ್ಯಾತ್ । ದುರ್ಯೋಧನಸ್ಯ ಕಥಮಿತಿ ಚೇತ್ ತಸ್ಯಾಪ್ಯಜೇಯತ್ವವರಾನುಕ್ತೇರತ ಏವ ಮಂತ್ರೈರೇವ ಭೀಮಂ ಜೇಷ್ಯಾಮೀತಿ ವಕ್ಷ್ಯತ್ಯವಧ್ಯತ್ವವರೋಕ್ತಾವಪಿ ತಸ್ಯ ಶರೀರಪೀಡಾ ಸ್ಯಾದೇವ । ಅತ ಏವ ರುಗ್ಣೀಸ್ವಯಂವರೇ ಅವಧ್ಯೋಽಪಿ ಜರಾಸುತಃ ವಜ್ರೇಣ ಶರೀರಪೀಡಾ ಸ್ಯಾದಿತಿ । – (ಶ್ರೀ.)

೨. ಕುಂತಿಭೋಜಸುತಾ ಮೋಹಂ ವಿಜ್ಞಾತಾರ್ಥಾ ಜಗಾಮ ಹ । –ಭಾರತ (ಆದಿ. ೧೩೫/೭)

ಕುಂತ್ಯಾಶ್ಚ ಪ್ರತ್ಯಭಿಜ್ಞಾಯ ದಿವ್ಯಲಕ್ಷಣಸೂಚಿತಮ್ ।
ಪುತ್ರಮಂಗೇಶ್ವರಂ ಸ್ನೇಹಾಚ್ಚನ್ನಾ ಪ್ರೀತಿರಜಾಯತ ॥ – ಭಾರತ (ಆದಿ. ೧೩೬/೨೩)

ಎ: ಕುಂತಿಯು ಅಲ್ಲಿಗೆ ಆಗಮಿಸಿದ ಕರ್ಣನನ್ನು ತನ್ನ ಮಗನೆಂದು ಗುರುತಿಸಿದಳು. ಜನ್ಮದೊಂದಿಗೆ ದೇಹಕ್ಕಂಟಿದ್ದ ಅವನ ಕವಚ ಕುಂಡಲಗಳಿಂದಾಗಿ ಅವಳಿಗೆ ಅವನ ಗುರುತು ತಿಳಿಯುವುದು ಲೋಕದ ದೃಷ್ಟಿಯಿಂದಲೂ ಅಸಾಧ್ಯ ಕಾರ್ಯವೇನಾಗಿರಲಿಲ್ಲ. ಆದರೂ ಅವಳು ಆ ವಿಷಯವನ್ನು ಅವನಿಗಾಗಲೀ, ಇತರರಿಗಾಗಲೀ ತಿಳಿಸಲಿಲ್ಲ. ಅದಕ್ಕೆ ಲಜ್ಜೆ ಕಾರಣವಾಗಿತ್ತು ಎಂದರ್ಥ. ಇದರೊಂದಿಗೆ ಆ ವೇಳೆಗಾಗಲೇ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದ ಕುರುಪಾಂಡವ ಸಂಘರ್ಷ ಇವನ ಸೇರ್ಪಡೆಯಿಂದಾಗಿ ಮತ್ತೊಂದು ತಿರುವನ್ನು ಪಡೆದುಕೊಂಡೀತೆಂಬ ಆತಂಕವೂ ಅವಳನ್ನು ಕಾಡುತ್ತಿದ್ದಿರಬಹುದು ಎಂದೂ ಭಾವಿಸಬಹುದು.

ಸೂತಪುತ್ರ ಕರ್ಣ

ರಣಾಯಾಕ್ಷತ್ರಿಯಾಹ್ವಾನಂ ಜಾನನ್ ಧರ್ಮಪ್ರತೀಪಕಮ್ ।
ಭೀಮೋ ನಿವಾರ್ಯ ಬೀಭತ್ಸುಂ ಕರ್ಣಾಯಾದಾತ್ [೧]ಪ್ರತೋದಕಮ್ ೩೬

ಅ: ಕ್ಷತ್ರಿಯನಲ್ಲದವನನ್ನು ಸಮರಕ್ಕೆ ಆಹ್ವಾನಿಸುವುದು ಧರ್ಮವಿರುದ್ಧ ಎಂದು ಬಲ್ಲ ಭೀಮ ಅರ್ಜುನನ್ನು ತಡೆದು ಕರ್ಣನ ಕೈಗೆ ಚಾಟಿಯನ್ನು ನೀಡಿದ.

ವಿ: ಕ್ಷತ್ರಿಯನಲ್ಲದವನನ್ನು ಕ್ಷತ್ರಿಯ ಯುದ್ಧಕ್ಕೆ ಆಹ್ವಾನಿಸಬಾರದು ಎಂಬುದು ಧರ್ಮಸೂಕ್ಷ್ಮ. ಅದಕ್ಕೆ ಕಾರಣ ಸ್ಪಷ್ಟ – ಕ್ಷತ್ರಿಯರಲ್ಲದವರು ಕ್ಷತ್ರಿಯರಂತೆ ಅಸ್ತ್ರ ಕೋವಿದರಾಗಿರುವ ಸಂಭವವಿಲ್ಲವಾದುದರಿಂದ ಅದು ವಿಷಮಸಮರವಾಗುವ ಸಂಭವದಿಂದಾಗಿ ಆ ನಿಯಮ ಎಂದು ತಿಳಿಯಬೇಕು. ಇದು ಕ್ಷತ್ರಿಯೇತರರ ಅವಮಾನದ ಪ್ರಸಂಗವಾಗಿರದೇ ಅವರ ರಕ್ಷಣೆಯ ವ್ಯವಸ್ಥೆಯ ಮುಖ ಎಂದು ತಿಳಿಯಬೇಕು. ಆದರೆ ಅರ್ಜುನ ಆ ಧರ್ಮಸೂಕ್ಷ್ಮವನ್ನು ಉದ್ವೇಗದಿಂದಾಗಿ ಗಮನಿಸದಾಗಿದ್ದ. ಆದರೆ, ಪೂರ್ಣಪ್ರಜ್ಞನಾದ ಭೀಮ ಅದನ್ನು ಗುರುತಿಸಿ ಅರ್ಜುನನ ಆ ಕಾರ್ಯವನ್ನು ತಡೆದ. ಕರ್ಣನನ್ನು ಸೂತಪುತ್ರನೆಂದು ತಾನು ಗುರುತಿಸಿರುವುದಾಗಿ ತಿಳಿಸಲೆಂದು ಅವನ ಕೈಗೆ ಚಾಟಿಯೊಂದನ್ನು ನೀಡಿದ ಎಂದು ತಿಳಿಯಬೇಕು.

ಅಕ್ಷತ್ರಸಂಸ್ಕಾರಯುತೋ ಜಾತೋ[೨]ಽಪಿ ಕ್ಷತ್ರಿಯೇ ಕುಲೇ ।
ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥ ೩೭ ॥

---

೧. ಪ್ರತೋದಕಂ ತೋತ್ರಂ ಅದಾತ್ । ಸೂತಜಾತೇಸ್ತವ ರಥನಿಯಮನಮೇವ ಧರ್ಮಃ । ನ ಕ್ಷತ್ರಿಯೈಃ ಸಹ ಯುದ್ಧಮಿತಿ ಸಂಜ್ಞಾಯಾ ಜ್ಞಾಪಯನ್ ಅಶ್ವತಾಡನಾಂಗಂ ತೋತ್ರಂ ಅದಾದಿತಿ ಭಾವಃ ॥ – (ಜ.)

೨. ವ್ರಾತ್ಯೋಽಷ್ಟಮವರ್ಷೇಽನುಪನೀತಃ । – (ತಾ.)

ಅ: ಕ್ಷತ್ರಿಯಕುಲದಲ್ಲಿ ಜನಿಸಿದ್ದರೂ, ಕ್ಷತ್ರಿಯೋಚಿತ ಸಂಸ್ಕಾರವನ್ನು ಹೊಂದದಿದ್ದಲ್ಲಿ ಎಂದೂ ಕ್ಷತ್ರಿಯನಾಗಲಾರ. ವ್ರಾತ್ಯನಾದ ವಿಪ್ರೋತ್ತಮನಂತೆ.

ವಿ : ಕರ್ಣ ಕುಂತೀಪುತ್ರ, ಕುಂತಿ ಕ್ಷತ್ರಿಯಳು. ಮಗುವಿನದು ತಾಯಿಯ ಜಾತಿಯೆಂದೇ ಶಾಸ್ತ್ರವಚನ ('ಗುಣಾಃ ಪಿತುರ್ಮಾತೃಜಾತಿಃ' – ೨೦/೧೫೭). ಅದರಂತೆ ಕರ್ಣ ಕ್ಷತ್ರಿಯನೆಂದಾ–ಗುವನು. ಅದು ಅವನು ಕ್ಷತ್ರಿಯನಲ್ಲ ಎಂಬ ಭೀಮನ ನಿರ್ಣಯ ಹೇಗೆ ಸಮುಚಿತ ಎಂಬುದಕ್ಕೆ ಇಲ್ಲಿ ಉತ್ತರವಿದೆ. ಕ್ಷತ್ರಿಯನಾಗಿ ಜನಿಸಿದ ಮಾತ್ರಕ್ಕೆ ಕ್ಷತ್ರಿಯನಾಗಲಾರ. ಅವನಿಗೆ ಸಕಾಲದಲ್ಲಿ ಕ್ಷತ್ರಿಯೋಚಿತ ಸಂಸ್ಕಾರವಾದಾಗಲೇ ಅವನು ಕ್ಷತ್ರಿಯ ಎನ್ನಿಸುವನು. ಬ್ರಾಹ್ಮಣನ ರೀತಿಯೂ ಇಂತಹುದೇ ಅಲ್ಲವೇ. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಬ್ರಾಹ್ಮಣನೆನ್ನಿಸದೇ ಚೌಲ, ಉಪನಯನಾದಿಸಂಸ್ಕಾರಗಳು ಬ್ರಾಹ್ಮಣಜಾತಿಗೆ ವಿಹಿತವಾದ ರೀತಿಯಲ್ಲಿ ಸಕಾಲದಲ್ಲಿ ನಡೆದಾಗ ಮಾತ್ರವೇ ಅವನು ನಿಜವಾಗಿಯೂ ಬ್ರಾಹ್ಮಣನ್ನಿಸುವುದು. ಇಲ್ಲವಾದಲ್ಲಿ ಅವನು ಬ್ರಾಹ್ಮಣ–ನೆನ್ನಿಸದೇ ವ್ರಾತ್ಯ ಎನ್ನಿಸುವನು. ಅದರಂತೆಯೇ ಕರ್ಣನನ್ನೂ ತಿಳಿಯಬೇಕು ಎಂದರ್ಥ. ಕರ್ಣ ಕ್ಷತ್ರಿಯನಾಗಿ ಹುಟ್ಟಿದ್ದರೂ, ಅವನು ಅತಿರಥ ರಾಧೆಯರ ಮಗನಾಗಿ ಬೆಳೆದದ್ದರಿಂದ ಅವನಿಗೆ ಕ್ಷತ್ರಿಯ ಸಂಸ್ಕಾರವಾಗಲಿಲ್ಲ, ಬದಲಾಗಿ ಸೂತ ಸಂಸ್ಕಾರವೇ ಆಯಿತು. ಅದರಿಂದಾಗಿ ಅವನದ್ದು ಸೂತಜಾತಿ ಎಂದಾಯಿತೇ ಹೊರತು ಕ್ಷತ್ರಿಯಜಾತಿಯಲ್ಲ ಎಂಬುದು ಧರ್ಮಸೂಕ್ಷ್ಮ. ಇದನ್ನೆಲ್ಲ ತಿಳಿದಿದ್ದುದು ಭೀಮನ ಹಿರಿಮೆ ಎಂದರ್ಥ. ಇಲ್ಲಿ [೧]'ವ್ರಾತ್ಯ' ಎಂಬುದಕ್ಕೆ ವ್ರತನಿಷ್ಠ ಎಂಬ ಅರ್ಥವೂ ಗ್ರಾಹ್ಯ. ಆಗ ಇದು ವ್ಯತಿರೇಕದೃಷ್ಟಾಂತವಾಗುವುದು.

---

೧. ಯಥಾ ವ್ರಾತ್ಯೋ ದ್ವಿಜೋತ್ತಮ ಇತ್ಯತ್ರ ವ್ರಾತ್ಯೋ ವ್ರತನಿಷ್ಠಃ ದ್ವಿಜೋತ್ತಮೋ ಯಥೇತಿ ವ್ಯತಿರೇಕದೃಷ್ಟಾಂತಃ । ತಥಾ ಪ್ರಕೃತೇಽಪೀತಿ ಯಥಾ ಮಹಾನಸಃ ತಥಾ ಮಹಾಹ್ರದೋ ವಹ್ನಿಮಾನ್ ನ ಯಥಾ ವಿಷ್ಣುರ್ದೇವಶ್ರೇಷ್ಠಃ ತಥಾ ವಾಯುರ್ನೇತಿ ಅತ್ರ ಯಥಾವ್ಯತಿರೇಕದೃಷ್ಟಾಂತಃ । ತಥಾ ಪ್ರಕೃತೇಽಪಿ ನನು ಭವತ್ಪಕ್ಷೇ ವ್ಯಾಹತಿಃ ॥ ವ್ರಾತ್ಯಃ ಸಂಸ್ಕಾರಹೀನ ಸ್ಯಾದಿತ್ಯನೇನ ವ್ರಾತ್ಯಶಬ್ದಸ್ಯ ಸಂಸ್ಕಾರಹೀನೇ ಪ್ರಯೋಗಾತ್ ಇತಿ ಚೇನ್ನ । ಅರಿಷ್ಟಶಬ್ದವದುಭಯವಾಚಿತ್ವಾತ್ । ಅತ ಏವ ಜಯತೀರ್ಥಶ್ರೀಮಚ್ಚರಣೈಃ ವ್ರಾತ್ಯೋ ವ್ರತನಿಷ್ಠ ಇತಿ ವ್ಯಾಖ್ಯಾತಮ್। ಕಿಂಚ ಯದಿ ದ್ವಿಜಶಬ್ದಃ ರೂಢ್ಯಾ ಬ್ರಾಹ್ಮಣವಾಚೀ ತದಾ ವ್ರಾತ್ಯೋ ದ್ವಿಜೋ ಯಥೇತ್ಯೇತಾವತೈವ ಪೂರ್ತೇಃ ಉತ್ತಮಶಬ್ದವೈಯರ್ಥ್ಯಂ ಯದಿ ಚ ದ್ವಿಜಾಭ್ಯಾಮುತ್ತಮಯೋಗೇನ ತದಾ 'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ' ಇತಿ ವಚನೇನ ಸಂಸ್ಕಾರೋಪೇತವೈಶ್ಯಕ್ಷತ್ರಿಯೋತ್ತಮತ್ವಂ ಸಂಸ್ಕಾರೋಪೇತಸ್ಯೈವ ವಕ್ತವ್ಯಮ್ । ಅನ್ಯಥಾ ತದುತ್ತಮತ್ವಾನುಪಪತ್ತೇಃ । ತಥಾ ಚ ಸಂಸ್ಕಾರೋಪೇತ ಏವ ದ್ವಿಜಶಬ್ದಮುಖ್ಯಾರ್ಥಃ । ತಸ್ಯ ಮುಖ್ಯಾರ್ಥಬಾಧಾದಿ ವಿನಾ ಪರಿತ್ಯಜ್ಯ ಬ್ರಾಹ್ಮಣಕುಲೋತ್ಪನ್ನಾಂಗೀಕಾರೇ ಮುಖ್ಯಾರ್ಥಪರಿತ್ಯಾಗಾದಿಕೋ ದೋಷೋಽನ್ವಯದೃಷ್ಟಾಂತೇ ವ್ಯತಿರೇಕದೃಷ್ಟಾಂತೇ ತು ನೈವಮಿತಿ ॥ (ಪತ್ರ ೨೯/೧) – (ತಿ.)

ನ ತ್ವಮರ್ಹಸಿ ಪಾರ್ಥೇನ ಸೂತಪುತ್ರ ರಣೇ ವಧಮ್ ।
ಕುಲಸ್ಯ ಸದೃಶಸ್ಯೂರ್ಣಂ ಪ್ರತೋದೋ ಗೃಹ್ಯತಾಂ ತ್ವಯಾ ॥
– ಕರ್ಣನನ್ನು ಕುರಿತು ಭೀಮನ ವಚನ - ಭಾರತ. (ಆದಿ. ೧೩೬/೬)

ಕರ್ಣನಿಗೆ ಅಂಗರಾಜ್ಯಾಭಿಷೇಕ

ನಿರುತ್ತರೇ ಕೃತೇ ಕರ್ಣೇ ಭೀಮೇನೈವ ಸುಯೋಧನಃ
ಅಭ್ಯಷೇಚಯದಂಗೇಷು ರಾಜಾನಂ ಪಿತ್ರನುಜ್ಞಯಾ ।
ಧೃತರಾಷ್ಟ್ರಃ ಪಕ್ಷಪಾತಾತ್ ಪುತ್ರಸ್ಯಾನುವಶೋಽಭವತ್ ॥ ೩೮ ॥

ಅ: ಕರ್ಣ ಭೀಮನಿಂದ ಹೀಗೆ ನಿರುತ್ತರಗೊಂಡಾಗ ದುರ್ಯೋಧನನು ತಂದೆಯಾದ ಧೃತರಾಷ್ಟ್ರನ ಅನುಮತಿಯನ್ನು ಪಡೆದು ಅವನನ್ನು ಅಂಗದೇಶದ ರಾಜನನ್ನಾಗಿ ಅಭಿಷೇಕ ಮಾಡಿದ. ಮಗನ ಮೇಲಿನ ಪಕ್ಷಪಾತದಿಂದಾಗಿ ಧೃತರಾಷ್ಟ್ರ ಅವನಿಗೆ ವಶವರ್ತಿಯಾಗಿದ್ದ.

ವಿ: ಭೀಮು ಚಾಟಿ ನೀಡಿದ್ದು ಕರ್ಣನಿಗೆ ಅರ್ಥವಾಯಿತು. ತನ್ನ ಜಾತಿ ಅವನಿಗೆ ತಿಳಿದಿದೆ ಎಂದು ಮನವರಿಕೆಯಾಯಿತು. ಅದರಿಂದಾಗಿ ಅವನು ಉತ್ತರವಿಲ್ಲದವನಾದ ಎಂದರ್ಥ. ಇದನ್ನು ಗಮನಿಸಿದ ದುರ್ಯೋಧನ ಸಂದರ್ಭದ ದುರ್ಲಾಭ ಪಡೆಯಲು ಯೋಚಿಸಿದ. ಹತಾಶನಾದ ಕರ್ಣನನ್ನು ಈಗ ಪ್ರೋತ್ಸಾಹಿಸಿದಲ್ಲಿ ಅವನು ತನ್ನ ಪಕ್ಷ ಸೇರುವನು. ಅದರಿಂದಾಗಿ ಅರ್ಜುನನಂತಹ ಮಹಾಸ್ತ್ರಜ್ಞನನ್ನು ಎದುರಿಸಲು ತನಗೆ ಅನುಕೂಲವಾಗುವುದು ಎಂಬುದು ಅವನ ಒಟ್ಟು [೧]ವಿಚಾರವಾಗಿತ್ತು. ಪರಶುರಾಮರ ಉದ್ದೇಶವಿದ್ದುದೂ ಹಾಗೆಯೇ. ಅದರಿಂದಾಗಿ ಅವನು ಅವನನ್ನು ಅಂಗದೇಶದ ರಾಜನನ್ನಾಗಿ ಆಗಲೇ ತಂದೆಯ ಅನುಮತಿಯಿಂದ ಅಭಿಷೇಕಿಸಿದನು. ಪುತ್ರವ್ಯಾಮೋಹದಿಂದಾಗಿ ಅವನ ನಿಶ್ಚಯಕ್ಕೆ ಧೃತರಾಷ್ಟ್ರ ಸಮ್ಮತಿಯನ್ನು ನೀಡಿದ ಎಂದು ತಾತ್ಪರ್ಯ. ಕ್ಷತ್ರಿಯನಿಗೆ ಪ್ರತಿಗ್ರಹ ನಿಷಿದ್ಧ; ಅಂಗರಾಜ್ಯವನ್ನು ಪ್ರತಿಗ್ರಹಿಸಿದ್ದರಿಂದ ಕರ್ಣನಲ್ಲಿ ಕ್ಷತ್ರಿಯತ್ವ ಲೋಪವಾಗಿರುವುದು ಸ್ಪಷ್ಟಪಡುವುದು.

ಕರ್ಣನ ಪಿತೃಭಕ್ತಿ

ಅಭಿಷಿಕ್ತೇ ತದಾ ಕರ್ಣೇ ಪ್ರಾಯಾದಧಿರಥಃ ಪಿತಾ ।
ಸರ್ವರಾಜಸಭಾಮಧ್ಯೇ ವವಂದೇ ತಂ ವೃಷಾ[೨] ತದಾ
ತುತುಷುಃ ಕರ್ಮಣಾ ತಸ್ಯ ಸಂತಃ ಸರ್ವೇ ಸಮಾಗತಾಃ ॥ ೩೯ ॥

---

೧. ದುರ್ಯೋಧನಸ್ಯಾಪಿ ತದಾ ಕರ್ಣಮಾಸಾದ್ಯ ಪಾರ್ಥಿವ ।
ಭಯಮರ್ಜುನಸಂಜಾತಂ ಕ್ಷಿಪ್ರಮಂತರಧೀಯತ ॥ – ಭಾರತ (ಆದಿ. ೧೩೬/೨೪)

೨. 'ವೃಷಾ ಕರ್ಣಮಹೇಂದ್ರಯೋಃ' ಇತಿ ವಿಶ್ವಃ । 'ಬ್ರಾಹ್ಮಣಃ ಸತ್ಯವಾದೀ ಚ ತಪಸ್ವೀ ನಿಯತವ್ರತಃ । ರಿಪುಷ್ವಪಿ ದಯಾವಾಂಶ್ಚ ತಸ್ಮಾತ್ ಕರ್ಣೋ ವೃಷಾ ಸ್ಮೃತಃ ॥' ಇತಿ ವಚನಾದ್ವಾ । – (ಜ.)

ವಿಪ್ರೇಭ್ಯೋ ಹೇಮವರ್ಷಣಾದ್ ವೃಷಾ ಕರ್ಣಃ । – (ವ.)

೩. ಅನೇನಾಸತಾಮಸತ್ಕರ್ಮಣ್ಯೇವ ಸಂತೋಷೋ ನ ತು ಸತ್ಕರ್ಮಣೀತ್ಯಾಸರ್ಗಿಕನಿಯಮಃ ಸೂಚಿತಃ ॥ – (ಸ.)

ಅ: ಕರ್ಣ ಹಾಗೆ ಪಟ್ಟಾಭಿಷಿಕ್ತನಾಗುವ ವೇಳೆಗೆ ಅವನ ತಂದೆ ಅತಿರಥ ಅಲ್ಲಿಗೆ ಆಗಮಿಸಿದ. ಸಮಸ್ತ ರಾಜರಿಂದ ಕೂಡಿದ್ದ ಆ ಸಭೆಯಲ್ಲಿ ಕರ್ಣ ಅವನನ್ನು ನಮಸ್ಕರಿಸಿದ. ಅವನ ಆ ವರ್ತನೆಯಿಂದ ಅಲ್ಲಿ ನೆರೆದಿದ್ದ ಸಕಲ ಸಜ್ಜನರೂ ಸಂತೋಷಿಸಿದರು.

ವಿ: ೧) ಕರ್ಣನಿಗೆ ಹಾಗೆ ಪಟ್ಟಾಭಿಷೇಕವಾಗುತ್ತಿರುವಂತೆ ಅವನ ತಂದೆ ಅತಿರಥ ಅಲ್ಲಿಗೆ ಬಂದ; ಕರ್ಣ ತತ್ಕ್ಷಣವೇ ಅವನಿಗೆ ಗೌರವದಿಂದ ನಮಸ್ಕರಿಸಿದ. ಅತಿರಥನಿಗೆ ಹಾಗೆ ನಮಸ್ಕರಿ–ಸುವುದರಿಂದ ತಾನು ಸೂತಜಾತಿಯವನು ಎಂದು ಉಚಿತವಾಗುವುದು ಎಂದು ತಿಳಿದಿದ್ದರೂ ಕರ್ಣ ಅವನಿಗೆ ನಮಸ್ಕರಿಸಲು ಸಂಕೋಚಪಡಲಿಲ್ಲ. ಅದಕ್ಕೆ ಅವನಿಗಿದ್ದ ನಿರ್ಮಲ ಪಿತೃಭಕ್ತಿಯೇ ಕಾರಣ. ಅದನ್ನು ಗಮನಿಸಿದ ಸಜ್ಜನರ ವೃಂದ ಕರ್ಣನ ಆ ಶ್ರೇಷ್ಠ ಗುಣವನ್ನು ಗಮನಿಸಿ ಸಂತುಷ್ಟರಾದರು ಎಂದರ್ಥ. ವೃಷಾ ಎಂದರೆ ಕರ್ಣ ಎಂದರ್ಥ. ಇದರಿಂದ ಭೀಮ ಕರ್ಣನನ್ನು ಸೂತನೆಂದು ಗುರುತಿಸಿದ್ದು ಅತ್ಯಂತ ಸೂಕ್ತ ಎಂದು ಎಲ್ಲರಿಗೂ ಮನವರಿಕೆಯಾಯಿತು ಎಂದು ತಿಳಿಯಬೇಕು.

೨) ದಾನಶೂರನಾದ್ದರಿಂದಲೂ, ಸತ್ಯವಾದಿಯಾದ್ದರಿಂದಲೂ ಕರ್ಣನಿಗೆ ವೃಷಾ ಎಂದು ಹೆಸರು.

ಭೀಮ ದುರ್ಯೋಧನರ ಅಸ್ತ್ರವಿದ್ಯಾ ಪ್ರದರ್ಶನ

ಭೀಮದುರ್ಯೋಧನೌ ತತ್ರ ಶಿಕ್ಷಾಸಂದರ್ಶನಚ್ಛಲಾತ್
ಸಮಾದಾಯ ಗದೇ ಗುರ್ವ್ಯೌ ಸಂರಂಭಾದಭ್ಯುದೀಯತುಃ ॥ ೪೦ ॥

ಅ: ಆಗ ಭೀಮ ದುರ್ಯೋಧನರು ತಮ್ಮ ವಿದ್ಯೆಯ ಕೌಶಲವನ್ನು ತೋರಿಸುವ ನೆಪದಿಂದ ಭಾರವಾದ ಗದೆಗಳನ್ನೆತ್ತಿಕೊಂಡು ಪರಸ್ಪರರನ್ನು ಕೋಪದಿಂದ ಎದುರಿಸಿದರು.

ವಿ: ಇತರರೆಲ್ಲರ ಪ್ರದರ್ಶನ ಮುಗಿದ ಮೇಲೆ ಭೀಮ ದುರ್ಯೋಧನರು ತಮ್ಮ ಅಸ್ತ್ರವಿದ್ಯೆಯ ಪ್ರಾವೀಣ್ಯವನ್ನು ತೋರಿಸಲೆಂದು ಗದಾಪಾಣಿಗಳಾಗಿ ಒಬ್ಬರನ್ನೊಬ್ಬರು ಎದುರಿಸಿದರು ಎಂದರ್ಥ.

ದೇವಾಸುರರ ಸಂಭ್ರಮ

ದೇವಾಸುರಮನುಷ್ಯಾದಿಜಗದೇತಚ್ಚರಾಚರಮ್
ಸರ್ವಂ ತದಾ ದ್ವಿಧಾ ಭೂತಂ ಭೀಮದುರ್ಯೋಧನಾಶ್ರಯಾತ್ ॥ ೪೧ ॥

---

೪೫. ಕುರುರಾಜೇ ಚ ರಂಗಸ್ಥೇ ಭೀಮೇ ಚ ಬಲಿನಾಂ ವರೇ ।
ಪಕ್ಷಪಾತಕೃತಸ್ನೇಹಃ ಸ ದ್ವಿಧೇವಾಭವಜ್ಜನಃ ॥ - ಇತಿ ಭಾರತೇ (ಆದಿ. ೧೩೪/೧)

ಅ: ದೇವತೆಗಳು, ಅಸುರರು, ಮನುಷ್ಯ ಮೊದಲಾದ ಈ ಚೇತನಾಚೇತನ ಜಗತ್ತೆಲ್ಲ ಭೀಮ ದುರ್ಯೋಧನರ ಪಕ್ಷವನ್ನು ವಹಿಸಿ ಇಬ್ಭಾಗವಾಯಿತು.

ವಿ: ಭೀಮ ದುರ್ಯೋಧನರು ಹಾಗೆ ಪರಸ್ಪರ ಎದುರಾಗುತ್ತಲೇ ದೇವತೆಗಳಿಂದ ಹಿಡಿದು ಮನುಷ್ಯರು ಮೊದಲಾದ ಇಡೀ ಜಗತ್ತು ಒಬ್ಬೊಬ್ಬರ ಪಕ್ಷವನ್ನು ವಹಿಸಿದ್ದರಿಂದ ಎರಡು ಭಾಗವಾಗಿ ಒಡೆಯಿತು ಎಂದರ್ಥ. ಇತರರ ಅಸ್ತ್ರಪ್ರದರ್ಶನ ಕಾಲದಲ್ಲಿ ಕಾಣಿಸಿಕೊಳ್ಳದಿದ್ದ ಹೊಸ ಸಮಸ್ಯೆ ಈಗ ಉದ್ಭವಿಸಿತು ಎಂದು ಭಾವ. ಹಾಗೆ ಪಕ್ಷವಹಿಸಲು ಭೀಮಸೇನ ಜೀವೋತ್ತಮನಾದದ್ದು ಸಾತ್ವಿಕರಿಗೂ, ದುರ್ಯೋಧನ ಜೀವಾಧಮನಾಗಿದ್ದು ತಾಮಸರಿಗೂ ಅವರವರ ಪಕ್ಷವನ್ನು ವಹಿಸಲು ಪ್ರಚೋದನೆ ನೀಡಿತು ಎಂದರ್ಥ.

ದೇವಾ ದೇವಾನುಕೂಲಾಶ್ಚ ಭೀಮಮೇವ ಸಮಾಶ್ರಿತಾಃ
ಅಸುರಾ ಅಸುರಾಶ್ಚೈವ ದುರ್ಯೋಧನಸಮಾಶ್ರಯಾಃ ॥ ೪೨ ॥

ಅ: ದೇವತೆಗಳು ಮತ್ತು ದೇವತೆಗಳ ಪರವಾದವರೆಲ್ಲ ಭೀಮನನ್ನೇ ಆಶ್ರಯಿಸಿದರು. ಅಸುರರು ಹಾಗೂ ಅವರ ಕಡೆಯವರೆಲ್ಲ ದುರ್ಯೋಧನನನ್ನೇ ಅವಲಂಬಿಸಿದರು.

ವಿ: ಸಾತ್ವಿಕರು ಭೀಮಪಕ್ಷವನ್ನೂ, ತಾಮಸರು ದುರ್ಯೋಧನನ ಪಕ್ಷವನ್ನೂ ವಹಿಸಿದರು ಎಂದರ್ಥ.

ದ್ವಿಧಾ ಭೂತಾ ಮನುಷ್ಯಾಶ್ಚ[೧] ದೇವಾಸುರವಿಭೇದತಃ
ಜಯ ಭೀಮ ಮಹಾಬಾಹೋ ಜಯ ದುರ್ಯೋಧನೇತಿ ಚ ॥ ೪೩ ॥

ಅ: ಮನುಷ್ಯರೂ ಸಹ 'ಮಹಾಬಾಹುವಾದ ಭೀಮಸೇನ ನಿನಗೆ ಜಯವಾಗಲಿ', 'ಮಹಾಬಾಹು ದುರ್ಯೋಧನ ನಿನಗೆ ಜಯವಾಗಲಿ' ಎನ್ನುತ್ತ ತಮ್ಮ ದೈವ ಸ್ವಭಾವ, ಆಸುರ ಸ್ವಭಾವಕ್ಕೆ ಅನುಗುಣವಾಗಿ ಎರಡು ಗುಂಪುಗಳಾದರು.

ಅಶ್ವತ್ಥಾಮನ ಮಧ್ಯಸ್ಥಿಕೆ

ಹುಂಕಾರಾಂಶ್ಚೈವ ಫಟ್ಕಾರಾಂಶ್ಚಕ್ರುರ್ದೇವಾಸುರಾ ಅಪಿ
ದೃಷ್ಟ್ವಾ ಜಗತ್ ಸುಸಂರಬ್ಧಂ ದ್ರೋಣೋಽಥ ದ್ವಿಜಸತ್ತಮಃ ॥ ೪೪ ॥

---

೧. ಹೀ ವೀರ ಕುರುರಾಜೇತಿ ಹೀ ಭೀಮ ಇತಿ ಜಲ್ಪತಾಮ್ ।
ಪುರುಷಾಣಾಂ ಸುವಿಪುಲಾಃ ಪ್ರಣಾದಾಃ ಸಹಸೋತ್ಥಿತಾಃ ॥ – ಭಾರತ (ಆದಿ. ೧೩೪/೨)

ನೇದಂ ಜಗದ್ವಿನಶ್ಯೇತ ಭೀಮದುರ್ಯೋಧನಾಶ್ರಯಾತ್ ।
ಇತಿ ಪುತ್ರೇಣ ತೌ ವೀರೌ ನ್ಯವಾರಯದರಿಂದಮೌ ॥ ೪೫ ॥

ಅ: ದೇವತೆಗಳೂ, ಅಸುರರೂ [೧]ಹುಂಕಾರಗಳನ್ನೂ ಫಟ್ಕಾರಗಳನ್ನೂ ಮಾಡತೊಡಗಿದರು. ವಿಪ್ರೋತ್ತಮರಾದ ದ್ರೋಣರು ಜಗತ್ತೆಲ್ಲ ಹಾಗೆ ತಲ್ಲಣಗೊಂಡಿದ್ದನ್ನು ಕಂಡು ಈ ಭೀಮ, ದುರ್ಯೋಧನರ ಪಕ್ಷಗಳ ಅವಲಂಬನೆಯಿಂದಾಗಿ ಈ ಜಗತ್ತು ನಾಶವಾಗದಿರಲಿ ಎಂದು ತಮ್ಮ ಪುತ್ರ ಅಶ್ವತ್ಥಾಮನಿಂದ ಶತ್ರು ಸಂಹಾರಕರಾದ ಆ ಇಬ್ಬರು ವೀರರನ್ನು ತಡೆದು ನಿಲ್ಲಿಸಿದರು.

ವಿ: ೧) ದ್ರೋಣರಿಗೆ ಸಮಸ್ಯೆ ಅರ್ಥವಾಯಿತು, ಹೆಸರಿಗೆ ಅದು ಭೀಮ ದುರ್ಯೋಧನರ ಸಂಘರ್ಷವಾದರೂ ಅದರ ಹಿಂದೆ ಇಡೀ ಜಗತ್ತು ಪಾಲ್ಗೊಂಡಿದೆ. ಅದರಿಂದಾಗಿ ಇಡೀ ಜಗತ್ತು ನಾಶವಾಗುವುದು ಉಚಿತ ಎಂಬುದನ್ನೂ ಗಮನಿಸಿದರು. ಹಾಗಾಗದಿರಲಿ ಎಂದು ಅಶ್ವತ್ಥಾಮರ ಮೂಲಕ ಅದನ್ನು ತಡೆಯಲು ಪ್ರಯತ್ನಿಸಿದರು ಎಂದರ್ಥ.

೨) ಅವರಿಬ್ಬರನ್ನು ತಡೆದು ನಿಲ್ಲಿಸಲು ತಮಗಿಂತಲೂ ತಮ್ಮ ಮಗನೇ ಹೆಚ್ಚು ಸಮರ್ಥ ಎಂಬ ಅರಿವು ಅವರಿಗಿತ್ತು. ಶಿವನ ಕಾರ್ಯವಾದ ಲಯಕಾರ್ಯವನ್ನು ತಪ್ಪಿಸಲೆಂದು ಶಿವಾವತಾರನಾದ ತಮ್ಮ ಮಗನನ್ನು ಅವರು ಕಳುಹಿಸಿದರಲ್ಲಿ ಇರುವ ಔಚಿತ್ಯವೂ ಗಮನಾರ್ಹ.

ಸ್ವಕೀಯಾಯಾಂ ಸ್ವಕೀಯಾಯಾಂ ಯೋಗ್ಯತಾಯಾಂ ನ ತು ಕ್ವಚಿತ್
ಯುವಯೋಃ ಸಮ ಇತ್ಯುಕ್ತ್ವಾ ದ್ರೌಣಿರೇತೌ ನ್ಯವಾರಯತ್ ॥ ೪೬ ॥

ಅ: ನಿಮ್ಮ ನಿಮ್ಮ ಯೋಗ್ಯತೆಯಲ್ಲಿ ನಿಮಗೆ ಸಮನಾದವರು ಎಲ್ಲೂ ಇಲ್ಲ ಎಂದು ನುಡಿದು ಅಶ್ವತ್ಥಾಮ ಅವರಿಬ್ಬರನ್ನೂ ತಡೆದು ನಿಲ್ಲಿಸಿದ.

ವಿ: ೧) ಭೀಮ ಸಾತ್ವಿಕ ಶಿರೋಮಣಿ, ಸಾತ್ವಿಕರಲ್ಲಿ ಅವನಂಥವರು ಬೇರಾರೂ ಇಲ್ಲ. ಅದರಂತೆ ದುರ್ಯೋಧನ ದೈತ್ಯನಾಯಕ, ತಾಮಸರಲ್ಲಿ ಅವನಂಥವರು ಮತ್ತಾರೂ ಇಲ್ಲ. ಎಂದರೆ ಭೀಮ ಜೀವೋತ್ತಮ, ದುರ್ಯೋಧನ ಜೀವಾಧಮ ಎಂದು ಸೂಚ್ಯವಾಗಿ ತಿಳಿಸುತ್ತಲೇ ಅಶ್ವತ್ಥಾಮ ಅವರಿಬ್ಬರನ್ನೂ ಸಮಾಧಾನ ಪಡಿಸುವ ಮೂಲಕ ತಡೆದು ನಿಲ್ಲಿಸಿದ ಎಂದರ್ಥ.

೨) ಒಂದರ್ಥದಲ್ಲಿ ಭೀಮ ಶಿವಾವತಾರನಾದ ಅಶ್ವತ್ಥಾಮರ ತಂದೆ; ಶಿವ ವಾಯುಪುತ್ರನಲ್ಲವೇ; ದುರ್ಯೋಧನನಿಗೆ ಆರಾಧ್ಯದೈವ – ಹೀಗೆ ಒಂದೆಡೆ ತಂದೆ ಮತ್ತೊಂದೆಡೆ

---

೧. ಫಾಟ್‌ಕಾರಶ್ಚೈವ ಪೂತ್ಕಾರಸ್ತಥಾ ಕಿಲಕಿಲಾದಯಃ ।
ಅನುಕಾರಶಬ್ದಾ ವಿಜ್ಞೇಯಾ ಯೇ ಚಾನ್ಯೇ ತಾದೃಶಾ ಮತಾಃ ॥ ಇತ್ಯಭಿಧಾನೇ । – ಭಾ.ತಾ. (೩/೧೮/೫)

ಭಕ್ತ ಅವರಿಬ್ಬರನ್ನೂ ಸರಿಯಾಗಿ ಅರ್ಥಮಾಡಿಕೊಂಡೇ ಅಶ್ವತ್ಥಾಮರು ಹಾಗೆ ನುಡಿದು ಅವರನ್ನು ನಿಲ್ಲಿಸಿದರು ಎಂದು ಭಾವ.

ದ್ರೋಣಾಜ್ಞಯಾ ವಾರಿತೌ ತೌ ಯಯತುಃ ಸ್ವಂ ಸ್ವಮಾಲಯಮ್
ಸುರಾಸುರಾನ್ ಸುಸಂರಬ್ಧಾನ್ ಕಾಲೇನ ದ್ರಕ್ಷ್ಯಥೇತಿ ಚ । 8/9/09
ಬ್ರಹ್ಮಾ ನಿವಾರ್ಯ ಸಸುರೋ ಯಯೌ ಸೇಶಃ ಸ್ವಮಾಲಯಮ್ ॥ ೪೭ ॥

ಅ: ದ್ರೋಣರ ಆದೇಶದಂತೆ ಹಾಗೆ ತಡೆಯಲ್ಪಟ್ಟ ಆ ಭೀಮ ದುರ್ಯೋಧನರು ತಮ್ಮ ತಮ್ಮ ಮನೆಗಳಿಗೆ ಮರಳಿದರು. ಮುಂದೊಂದು ಸಮಯದಲ್ಲಿ ಅವರ ಸಮರವನ್ನು ನೋಡುವಿರಿ ಎಂದು ದೇವತೆಗಳಿಗೂ, ಅಸುರರಿಗೂ ತಿಳಿಸಿ ಬ್ರಹ್ಮ ದೇವರು ದೇವತೆಗಳೊಂದಿಗೆ ಮತ್ತು ಶಿವನೊಂದಿಗೆ ಕೂಡಿಕೊಂಡು ತಮ್ಮ ಲೋಕಕ್ಕೆ ತೆರಳಿದರು.

ವಿ: ೧) ಆಗ ನಿಜಕ್ಕೂ ಯುದ್ಧ ಮಾಡುವುದು ಭೀಮನಿಗೆ ಬೇಡವಾಗಿತ್ತು, ಏಕೆಂದರೆ ಮುಂದೆ ಕುರುಕ್ಷೇತ್ರ ಸಮರದಲ್ಲೇ ದುರ್ಯೋಧನನ ವಧೆಯಾಗಬೇಕು ಎಂಬ ಶ್ರೀಕೃಷ್ಣನ ಸಂಕಲ್ಪ ಅವರಿಗೆ ತಿಳಿದಿತ್ತು, ದುರ್ಯೋಧನನಿಗೂ ಆಗ ಯುದ್ಧ ತಪ್ಪಿದರೆ ಸಾಕಿತ್ತು. ಅದಕ್ಕೆ ಅವನಿಗಿದ್ದ ಅಪಾರವಾದ ಭೀಮನ ಭಯ ಕಾರಣವಾಗಿತ್ತು.

೨) ದ್ರೋಣರ ಆದೇಶದಂತೆ ಅಶ್ವತ್ಥಾಮ ಹಾಗೆ ನುಡಿದದ್ದರಿಂದ ಅವರು ತತ್ಕಾಲಕ್ಕೆ ಆ ಸಮರವನ್ನು ನಿಲ್ಲಿಸಲು ಒಂದು ನೆಪವಾಯಿತು ಮಾತ್ರ ಎಂದು ತಿಳಿಯಬೇಕು. ಸರ್ವಜ್ಞನಾದ ಭೀಮಸೇನನಿಗೆ ಮತ್ತೊಬ್ಬರಿಂದ ಹೇಳಿಸಿಕೊಂಡು ಕರ್ತವ್ಯಗಳನ್ನು ತಿಳಿಯಬೇಕಾದ ಆವಶ್ಯಕತೆ ಸರ್ವಥಾ ಇಲ್ಲವಷ್ಟೇ.

ಭೀಮ ದುರ್ಯೋಧನರ ದೃಢನಿಶ್ಚಯ

ಕರ್ಣಂ ಹಸ್ತೇ ಪ್ರಗೃಹ್ಯೈವ ಧಾರ್ತರಾಷ್ಟ್ರೋ ಗೃಹಂ ಯಯೌ ।
ಪಾರ್ಥಂ ಹಸ್ತೇ ಪ್ರಗೃಹ್ಯೈವ ಭೀಮಃ ಪ್ರಾಯಾತ್ ಸ್ವಮಾಲಯಮ್ ॥೪೮॥

ಅ: ಕರ್ಣನ ಕೈಯನ್ನು ಹಿಡಿದುಕೊಂಡೇ ದುರ್ಯೋಧನ ಮನೆಗೆ ಹೊರಟ. ಅರ್ಜುನನ ಕೈಯನ್ನು ಹಿಡಿದುಕೊಂಡೇ ಭೀಮಸೇನ ತನ್ನ ಮನೆಗೆ ತೆರಳಿದ.

ವಿ: ಹಾಗೆ ತೆರಳುವಾಗ ಕರ್ಣನ ಕೈಯನ್ನು ದುರ್ಯೋಧನ ಹಿಡಿದುಕೊಂಡಿದ್ದರೆ, ಅರ್ಜುನನ ಕೈಯನ್ನು ಭೀಮ ಹಿಡಿದಿದ್ದ ಎಂದರ್ಥ. ಅದಕ್ಕೆ ಕಾರಣವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

ಪಾರ್ಥೇನ ಕರ್ಣೋ ಹಂತವ್ಯ ಇತ್ಯಾಸೀದ್ಭೀಮನಿಶ್ಚಯಃ ।
ವೈಪರೀತ್ಯೇನ ತಸ್ಯಾಸೀದ್ ದುರ್ಯೋಧನವಿನಿಶ್ಚಯಃ
ತದರ್ಥಂ ನೀತಿಮತುಲಾಂ ಚಕ್ರತುಸ್ತಾವುಭಾವಪಿ ॥ ೪೯ ॥

ಅ: ಅರ್ಜುನನಿಂದ ಕರ್ಣನನ್ನು ಕೊಲ್ಲಿಸಬೇಕೆಂದು ಭೀಮನ ನಿಶ್ಚಯವಾಗಿತ್ತು, ಅದಕ್ಕೆ ವಿರುದ್ಧವಾಗಿ ಕರ್ಣನಿಂದ ಅರ್ಜುನನ್ನು ಕೊಲ್ಲಿಸಬೇಕೆಂಬುದು ದುರ್ಯೋಧನನ ತೀರ್ಮಾನವಾಗಿತ್ತು. ಅದಕ್ಕಾಗಿಯೇ ಅವರಿಬ್ಬರೂ ಅನುಪಮವಾದ ಯೋಜನೆಗಳನ್ನು ಹೂಡಿದರು.

ವಿ: ೧) ಭೀಮ ತನ್ನ ಕೈಯಲ್ಲಿ ಅರ್ಜುನನ್ನು ಹಿಡಿಯುವಲ್ಲಿ ಅವನನ್ನು ತಾನು ಕೈಬಿಡುವುದಿಲ್ಲ, ಅವನಿಂದಲೇ ಕರ್ಣನನ್ನು ಕೊಲ್ಲಿಸುವೆ ಎಂಬ ಸೂಚನೆಯಿದ್ದರೆ, ದುರ್ಯೋಧನನಿಗೆ ಕರ್ಣನನ್ನು ನಾನು ಕೈಬಿಡಲಾರೆ, ಅವನಿಂದಲೇ ಅರ್ಜುನನ್ನು ಕೊಲ್ಲಿಸುವೆ ಎಂಬ ಯೋಚನೆಯಿತ್ತು ಎಂದರ್ಥ.

೨) ಭೀಮ ತಾನು ಮಾತ್ರವಲ್ಲದೇ ಇತರ ಯೋಗ್ಯರಿಂದಲೂ ಅವರಿಗೆ ಉಚಿತವಾದ ಹರಿಸೇವೆಯನ್ನು ಮಾಡಿಸುವ ಮಹಾಸಮರ್ಥನಾದರೆ, ದುರ್ಯೋಧನ ತಾನು ಮಾತ್ರವಲ್ಲದೇ ತನ್ನ ಕೈಗೆ ಸಿಕ್ಕುವ ಸಜ್ಜನರಿಂದಲೂ ಸಹ ದುಷ್ಕಾರ್ಯ ಮಾಡಿಸುವ ಮಹಾಪಾಪಿಷ್ಠ ಎಂದರ್ಥ.

೩) ಅರ್ಜುನ ಶ್ರವಣಾದಿಗಳ ಸಂಕೇತ; ಭೀಮ ಅವನ ಕೈಹಿಡಿದಿದ್ದು ವಾಯುದೇವರು ಶಾಸ್ತ್ರಶ್ರವಣಾದಿಗಳನ್ನು ಮಾಡುವವರನ್ನು ಸಂರಕ್ಷಿಸುವುದು ಉಚಿತ ಎಂಬ ತತ್ವವನ್ನು ಸಾರಲು. ದುರ್ಯೋಧನ ಕರ್ಣನ ಕೈಹಿಡಿದದ್ದು ಶ್ರವಣಾದಿಗಳಿಗೆ ಕಾರಣವಾಗುವ ಕವಿಯನ್ನು ತಾನು ದುರ್ವಿಷಯಗಳ ಪ್ರಚೋದನೆಯ ಮೂಲಕ ಖಂಡಿತ ತಪ್ಪಿಸುವೆ ಎಂಬ ಅವನ ದುಷ್ಕಾರ್ಯಕ್ಕೆ ಸೂಚಕವಾಗಿತ್ತು ಎಂದೂ ತಿಳಿಯಬಹುದು.

ತಥೋತ್ಕರ್ಷೇ ಫಲ್ಗುನಸ್ಯ ಯಶಸೋ ವಿಜಯಸ್ಯ ಚ
ಉದ್ಯೋಗ ಆಸೀದ್ಭೀಮಸ್ಯ ಧಾರ್ತರಾಷ್ಟ್ರಸ್ಯ ಚಾನ್ಯಥಾ ॥ ೫೦ ॥

ಅ: ಅರ್ಜುನನ ಕೀರ್ತಿ ಮತ್ತು ವಿಜಯ ಹೆಚ್ಚುವಂತೆ ಮಾಡಲು ಭೀಮಸೇನನ ಪ್ರಯತ್ನ ಸಾಗಿದ್ದರೆ, ತದ್ವಿರುದ್ಧವಾಗಿ ಕರ್ಣನ ಯಶಸ್ಸು ಮತ್ತು ವಿಜಯಗಳು ಹೆಚ್ಚುವಂತೆ ಮಾಡುವಲ್ಲಿ ದುರ್ಯೋಧನನ ಪ್ರಯತ್ನ ಸಾಗಿತ್ತು.

ವಿ: ಸಾಧನೆಯೆಂದರೆ ಇದೇ. ವಾಯುದೇವರ ಸಾಧನೆ ಯಾವಾಗಲೂ ಶ್ರವಣಾದಿಗಳ ಏಳಿಗೆಗಾಗಿ. ಕಲಿಯ ಸಾಧನೆ ಯಾವಾಗಲೂ ಶ್ರವಣಾದಿಗಳನ್ನು ವಿನಾಶಗೊಳಿಸಲೆಂದು. ಇದೊಂದು ಸಾರ್ವತ್ರಿಕ ಸಂಘರ್ಷ ಎಂದು ತಿಳಿಯಬೇಕು.

ದೇವತೆಗಳ ಅರ್ಜುನ ಪಕ್ಷಪಾತ

೧
ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ ।
ಆಸನ್ ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ ।
ಸುರಾಃ ಸುಗ್ರೀವಪಕ್ಷಸ್ಥಾ ಪೂರ್ವಮಾಸಂಸ್ತಥೈವ ಹಿ ॥ ೫೧ ॥

ಅ: ಭೀಮನ ಸಲುವಾಗಿ ಶ್ರೀಕೃಷ್ಣ ಹಾಗೂ ಇತರ ದೇವತೆಗಳೆಲ್ಲ ಅರ್ಜುನನ ಪಕ್ಷ ವಹಿಸಿದರು. ಹಿಂದೆ ಹನುಮಂತನನ್ನು ಹಿಡಿದ ಕಾರಣದಿಂದಾಗಿ ಶ್ರೀರಾಮ ಮೊದಲಾದವರೂ ಇತರ ದೇವತೆಗಳೂ ಸುಗ್ರೀವ ಪಕ್ಷವನ್ನು ವಹಿಸಿದ್ದಂತೆ ಈಗಲೂ ನಡೆಯಿತು.

ಎ: ೧) ರಾಮಾವತಾರದಲ್ಲಿ ಹನುಮಂತನಿಗಾಗಿ ಸುರರೆಲ್ಲ ಸುಗ್ರೀವಪಕ್ಷ ವಹಿಸಿದ್ದಂತೆ ಈ ಕೃಷ್ಣಾವತಾರದಲ್ಲಿ ಭೀಮನಿಗಾಗಿ ಅರ್ಜುನನ ಪಕ್ಷ ವಹಿಸಿದರು ಎಂದರ್ಥ. ಅಲ್ಲಿ ಸುರರೆಲ್ಲ ವಾಲಿಯ ಪಕ್ಷವನ್ನು ತೊರೆದಿದ್ದಂತೆ, ಇಲ್ಲಿ ಕರ್ಣನ ಪಕ್ಷವನ್ನು ತೊರೆದಿರುವರು. ಅಲ್ಲಿಯ ಸುಗ್ರೀವ ಇಲ್ಲಿಯ ಕರ್ಣ, ಅಲ್ಲಿಯ ವಾಲಿ ಇಲ್ಲಿಯ ಅರ್ಜುನ ಎಂಬುದನ್ನು ಗಮನಿಸಿದರೆ ಈ ಸಂಘರ್ಷದ ಮರ್ಮ ಅರ್ಥವಾಗುವುದು.

೨) ಎರಡು ಪ್ರಸಂಗಗಳಲ್ಲೂ ಶ್ರೀರಾಮಹನುಮಂತರ ಪಕ್ಷ, ಶ್ರೀಕೃಷ್ಣ ಭೀಮರ ಪಕ್ಷ ಮಾತ್ರ ಒಂದೇ ಆಗಿತ್ತು ಎನ್ನುವುದರ ಮೂಲಕ ಶ್ರೀರಾಮ ಮತ್ತು ಕೃಷ್ಣರು ಸರ್ವೋತ್ತಮರಾದರೆ, ಶ್ರೀಹನುಮಂತ ಮತ್ತು ಭೀಮರು ಜೀವೋತ್ತಮರು ಎಂಬ ತತ್ವ ಸೂಚಿತವಾಗಿದೆ ಎಂದು ತಿಳಿಯಬೇಕು ('ಹರಿಯ ಮತವೇ ಹನುಮನ ಮತವು').

ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ ।
ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಽಕರೋತ್ ॥ ೫೨ ॥

---

೧. ಭೀಮಾರ್ಥೇ ಭೀಮಪ್ರಿಯಾರ್ಥೇ। – (ಜ.)

ಯತೋ ರಾಮಾಕೃತೌ ಭಕ್ತಮಪಿ ತ್ಯಕ್ತ್ವಾ ರವೇಃ ಸುತಮ್ ।
ಭೀಮಾರ್ಥಂ ಪಾರ್ಥಮೇವಾಂಗೀಚಕ್ರೇ ಚಕ್ರಧರಃ ಪ್ರಭುಃ ॥
ಭೀಮೋಽಪಿ ಕೃಷ್ಣಪ್ರೀತ್ಯರ್ಥಂ ಪಾರ್ಥಂ ತ್ರೈಲೋಕ್ಯವಿಶ್ರುತಮ್ ।
ಕರ್ತುಂ ಮಾರ್ತಾಂಡತನಯಂ ಪ್ರಾಜ್ ಮಿತ್ರಮಪಿ ತತ್ಯಜೇ ॥ – ಸ. ಭಾ. ವಿ. ೬/೧೪,೧೫

ಅ: ಅದಕ್ಕೆಂದೇ ದೇವರಾಜನಾದ ಇಂದ್ರ ಭೀಮನಿಗೆ ತಮ್ಮನಾಗಿ ಜನಿಸಿದ. ಹಿಂದೆ ಮಾಡಿದ ತಪ್ಪಿಗಾಗಿ ಅವನು ಅನುತಾಪ ಪಟ್ಟಿದ್ದ. ಅದಕ್ಕೆಂದು ಭೀಮ ಅವನನ್ನು ಹಾಗೆ ಕೈಹಿಡಿದು ರಕ್ಷಿಸಿದ.

ವಿ: ೧) ವಾಲಿಯಾಗಿದ್ದಾಗ ಹನುಮಂತನನ್ನು ಬಿಟ್ಟಿದ್ದರಿಂದಾಗಿ ತಾನು ಕೆಟ್ಟೆ ಎಂಬುದನ್ನು ಅರ್ಥಮಾಡಿಕೊಂಡ ಇಂದ್ರ ಆ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ಅದನ್ನು ಸರಿಪಡಿಸಿಕೊಳ್ಳಲೆಂದು ಮಹಾಭಾರತ ಕಾಲದಲ್ಲಿ ಹನುಮಂತನೇ ಆದ ಭೀಮಸೇನನಿಗೆ ಸಾಕ್ಷಾತ್ ತಮ್ಮನಾಗಿ ಹುಟ್ಟಿ ಆತನ ಅನುಗ್ರಹಕ್ಕೆ ಪಾತ್ರನಾದ ಎಂದರ್ಥ.

೨) ಅವನ ಚಿಂತನೆಯನ್ನು ಮನ್ನಿಸಿ ಭೀಮಸೇನ ಅವನನ್ನು ಕೈಹಿಡಿದು ಉದ್ಧರಿಸಿದ.

ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ ।
ಅಸುಃ ಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥ ೫೩ ॥

ಅ: ದುರ್ಯೋಧನನ ಸಲುವಾಗಿ ದೈತ್ಯದಾನವರೆಲ್ಲ ಕರ್ಣನ ಪಕ್ಷವನ್ನು ವಹಿಸಿದರು. ಹೀಗೆ ಕರ್ಣಾರ್ಜುನರು ಆ ಸಮರವೆಂಬ ದ್ಯೂತದಲ್ಲಿ ಪಣವಾದರು.

ವಿ: ಭೀಮನಿಗಾಗಿ ಸುರರೆಲ್ಲ ಅರ್ಜುನನ ಪಕ್ಷ ವಹಿಸಿದಂತೆ ದುರ್ಯೋಧನನಿಗಾಗಿ ದೈತ್ಯರೆಲ್ಲ ಕರ್ಣನ ಪಕ್ಷವನ್ನು ವಹಿಸಿದರು. ಹೀಗೆ ಅರ್ಜುನನನ್ನು ಪಣವನ್ನಾಗಿ ಮಾಡಿಕೊಂಡು ಸುರರು ಕರ್ಣನನ್ನು ಪಣವನ್ನಾಗಿ ಮಾಡಿಕೊಂಡು ಅಸುರರು ಆ ಸಮರದ್ಯೂತಕ್ಕೆ ಇಳಿದರು ಎಂದರ್ಥ.

ಗುರುದಕ್ಷಿಣಾ ಪ್ರಸಂಗ

ಅಥ ಪೃಷ್ಟೋ ದಕ್ಷಿಣಾರ್ಥಂ[೨] ದ್ರೋಣ ಆಹ ಕುಮಾರಕಾನ್ ।
ಬದ್ಧ್ವಾ[೩] ಪಾಂಚಾಲರಾಜಾನಂ ದತ್ತೇತ್ಯೂಚುಸ್ತಥೇತಿ ತೇ ॥ ೫೪ ॥

---

೧. ಗ್ಲಹೌ ಆಸತುಃ = ದ್ಯೂತೇ ದೇಯದ್ರವ್ಯರೂಪೌ ಬಭೂವತುಃ। – (ಜ.)

೨. ದಕ್ಷಿಣಾರ್ಥಂ ಗುರುದಕ್ಷಿಣಾರ್ಥಮ್ । 'ದಕ್ಷಿಣಾಯಾಂ' ಇತಿ ಪಾಠೇ ದಕ್ಷಿಣಾವಿಷಯೇ। – (ಜ., ವ.)

೩. ಬದ್ಧ್ವಾ ಪಾಂಚಾಲರಾಜಾನಮಿತ್ಯತ್ರ ಅನಿತ್ಯತ್ವಾತ್ ಸಮಾಸಾಂತವಿಧೇಃ ಪಾಂಚಾಲರಾಜಾನಮಿತ್ಯುಕ್ತಮ್॥ – (ವಾ.)

ಅ: ದಕ್ಷಿಣೆಗಾಗಿ ಪ್ರಾರ್ಥಿತರಾದ ದ್ರೋಣರು ರಾಜಪುತ್ರರುಗಳಿಗೆ ತಿಳಿಸಿದರು: ''ಪಾಂಚಾಲ ರಾಜನಾದ ದ್ರುಪದನನ್ನು ಹಿಡಿದು ನನಗೊಪ್ಪಿಸಿರಿ''. ಅವರೂ ಹಾಗೆಯೇ ಆಗಲಿ ಎಂದು ನುಡಿದರು.

ವಿ: ದ್ರೋಣರು ಕುರು ಪಾಂಡವರ ಗುರುತ್ವ ವಹಿಸಲು ಮುಖ್ಯ ಕಾರಣ ದ್ರುಪದನ ನಿಗ್ರಹ. ಅದಕ್ಕೀಗ ಸಮಯ ಒದಗಿತು ಎಂದು ಭಾವಿಸಿ ದ್ರೋಣರು ಗುರು ದಕ್ಷಿಣೆಯನ್ನಾಗಿ ತನಗೆ ಅವಮಾನ ಮಾಡಿದ್ದ ದ್ರುಪದನನ್ನು ಕೈಸೆರೆ ಹಿಡಿದು ತಮಗೆ ಒಪ್ಪಿಸಲು ಅಪೇಕ್ಷಿಸಿದರು ಎಂದರ್ಥ.

ತೇ ಧಾರ್ತರಾಷ್ಟ್ರಾಃ ಕರ್ಣೇನ ಸಹಿತಾಃ ಪಾಂಡವಾ ಅಪಿ ।
ಯಯುರ್ದ್ರೋಣೇನ ಸಹಿತಾಃ ಪಾಂಚಾಲನಗರಂ ಪ್ರತಿ ॥ ೫೫ ॥

ಅ: ಕರ್ಣನೊಂದಿಗೆ ಕೌರವರೂ ಹಾಗೆಯೇ ಪಾಂಡವರೂ ದ್ರೋಣರೊಂದಿಗೆ ಕೂಡಿಕೊಂಡು ಪಾಂಚಾಲ ಪಟ್ಟಣಕ್ಕೆ ತೆರಳಿದರು.

ವಿ: ತಾವೇ ಆ ಕಾರ್ಯವನ್ನು ಸಾಧಿಸಬೇಕೆಂಬ ಹಟದಿಂದ ಕೌರವರು ಕರ್ಣನೊಂದಿಗೆ ಕೂಡಿ ದ್ರುಪದನ ಮೇಲೆ ಮುಂಚಿತವಾಗಿಯೇ ಏರಿ ಹೋದರು ಎಂಬುದನ್ನು ತಿಳಿಸಲು ಅವರ ಉಲ್ಲೇಖವನ್ನೇ ಇಲ್ಲಿ ಮೊದಲಿಗೆ ಮಾಡಿರುವರು ಎಂದು ತಿಳಿಯಬಹುದು. ಅವರಿಗೆ ಗುರುದಕ್ಷಿಣೆ ಕೊಡುವ ಕಾತರಕ್ಕಿಂತ ಪಾಂಡವರನ್ನು ಮೀರಿಸಬೇಕೆಂಬ ಅಸೂಯೆ ಮುಖ್ಯ ಕಾರಣವಾಗಿತ್ತು ಇಂತಹ ಸಾತ್ವಿಕರ ಮೇಲಿನ ಮಾತ್ಸರ್ಯ ದುಷ್ಕರ ಪ್ರಧಾನ ಲಕ್ಷಣ ಎಂದು [೧]ಭಾಗವತ ನಿರೂಪಿಸಿದೆ: **'ನಿರ್ಮತ್ಸರಾಣಾಂ ಸತಾಮ್'**.

ಅಥಾಹ ಭೀಮಃ ಸಾಮರ್ಥ್ಯವಿವೇಕಾಭೀಪ್ಸಯಾ ಗುರುಮ್ ।
ಗರ್ವ ಏಷ ಕುಮಾರಾಣಾಮನಿವಾರ್ಯೋ ದ್ವಿಜೋತ್ತಮ ॥ ೫೬ ॥

ಗಚ್ಛಂತ್ವೇತೇಽಗ್ರತೋ ನೈಷಾಂ ವಶಗೋ ದ್ರುಪದೋ ಭವೇತ್ ।
ನಿವೃತ್ತೇಷ್ವಕೃತಾರ್ಥೇಷು ವಯಂ ಬಧ್ವಾ ರಿಪುಂ ತವ ।
ಆನಯಾಮೋ ನ ಸಂದೇಹೋ ಇತಿ ತಸ್ಥೌ ಸಸೋದರಃ ॥ ೫೭ ॥

---

೧. ಉತ್ತಮೇ ಸ್ವಾತ್ಮನೋ ನಿತ್ಯಂ ಮಾತ್ಸರ್ಯಂ ಪರಿವರ್ಜಯೇತ್ ।
ಕುರುತೇ ಯತ್ರ ಮಾತ್ಸರ್ಯಂ ತತ್ತತ್ಸ್ಯ ವಿಹೀಯತೇ ॥– ಭಾ.ತಾ(೧/೧/೩)ಉದ್ಧೃತ ಮಹಾಸಂಹಿತಾವಚನ

ಅ: ಆಗ ಭೀಮ ಸಾಮರ್ಥ್ಯದಲ್ಲಿನ ವ್ಯತ್ಯಾಸವನ್ನು ಪ್ರಕಾಶಪಡಿಸಬೇಕೆಂಬ ಬಯಕೆಯಿಂದ ಗುರುಗಳಾದ ದ್ರೋಣರಿಗೆ [೧]ತಿಳಿಸಿದ : ''ವಿಪ್ರೋತ್ತಮ! ಈ ಕುಮಾರರುಗಳ ದುರಹಂಕಾರ ತಡೆಯಲಾಗದ್ದು, ಇವರೇ ಮುಂದೆ ಹೋಗಲಿ. ದ್ರುಪದನೆಂದೂ ಇವನಿಗೆ ವಶನಾಗಲಾರ. ಇವರು ವಿಫಲರಾಗಿ ಮರಳಿದ ಮೇಲೆ ನಾವು ತೆರಳಿ ನಿಮ್ಮ ಶತ್ರುವಾದ ಅವನನ್ನು ಖಂಡಿತ-ವಾಗಿಯೂ ಹಿಡಿದು ತರುವೆವು; ಸಂದೇಹಬೇಡ'' ಹೀಗೆ ನುಡಿದು ಸಹೋದರರೊಂದಿಗೆ ಮುಂದೆ ಹೋಗದೇ ಉಳಿದು ನಿಂತ.

ವಿ: ೧) ಕೌರವರೊಂದಿಗೆ ತಾವು ಆಗಲೇ ತೆರಳಿದಲ್ಲಿ ವಿಜಯ ಸಾಧಿಸುವುದು ತಾವು, ಹೆಸರುಗಳಿಸುವುದು ಅವರು ಎಂದಾಗುವ ಅಪಾಯವಿದೆ. ಅಂತಹ ಪ್ರಸಂಗಕ್ಕೆ ಅವಕಾಶವಾಗ-ಬಾರದು ಎಂದು ಭೀಮ ಹಾಗೆ ನುಡಿದ ಎಂದರ್ಥ. ಕೌರವರ ಅಶಕ್ತಿ ಪ್ರಕಟವಾದ ಮೇಲೆ ತಾವು ಹೋಗಿ ಕಾರ್ಯವನ್ನು ಸಾಧಿಸಿದಲ್ಲಿ ಕೌರವರ ಅಶಕ್ತಿಯೊಂದಿಗೆ ತಮ್ಮ ಮಹಾಸಾಮರ್ಥ್ಯವೂ ಪ್ರಕಟವಾಗುವುದು ಎಂಬ ಈ ಚಿಂತನೆಯನ್ನೇ ಯೋಗ ಎನ್ನುವುದು.

೨) ರಾಮಾಯಣದಲ್ಲೂ ಉಳಿದ ಕಪಿಗಳೆಲ್ಲ ಸಮುದ್ರ ಹಾರಲು ಅಸಮರ್ಥರೆಂದು ನಿರ್ಣಯವಾದ ಮೇಲೆಯೇ ಹನುಮಂತ ತಾನು ಹಾರಲು ಸನ್ನದ್ಧನಾದ ಎಂಬುದನ್ನು ಗಮನಿಸಬೇಕು — **'ತೇಷಾಮಶಕ್ತಿಂ ಪ್ರಕಟಾಂ ವಿಧಾಯ'** (೬/೫೯). ಅಲ್ಲಿ ಸಾತ್ವಿಕರ ಅಹಂಕಾರಕ್ಕೆ ತೆರೆ ಎಳೆಯಬೇಕಾಗಿತ್ತು, ಇಲ್ಲಿ ದುಷ್ಟರ ದುರಹಂಕಾರವನ್ನು ಮೆಟ್ಟಬೇಕಿತ್ತು ಎಂಬುದು ವಿಶೇಷ. ಇಲ್ಲಿ ಭೀಮನ ಪೂರ್ಣಪ್ರಜ್ಞತ್ವವೂ ಸಹ ವ್ಯಕ್ತವಾಗಿರುವುದನ್ನು ಗಮನಿಸಬೇಕು.

ಕೌರವರ ಪರಾಭವ

ಸದ್ರೋಣಕೇಷು ಪಾರ್ಥೇಷು ಸ್ಥಿತೇಷ್ವನ್ಯೇ ಸಸೂತಜಾಃ
ಯಯುರಾತ್ತಪ್ರಹರಣಾಃ ಪಾಂಚಾಲಾಂತಃಪುರಂ ದ್ರುತಮ್ ॥ ೫೮ ॥

ಅ: ಪಾಂಡವರು ದ್ರೋಣರೊಂದಿಗೆ ಅಲ್ಲಿಯೇ ಉಳಿಯಲು ಕರ್ಣನೊಂದಿಗೆ ಕೌರವ-ರೆಲ್ಲ ಆಯುಧಪಾಣಿಗಳಾಗಿ ಪಾಂಚಾಲರಾಜನಾದ ದ್ರುಪದನ ಅಂತಃಪುರಕ್ಕೆ ವೇಗದಿಂದ ನುಗ್ಗಿದರು.

---

೧. ಪೂರ್ವಮೇವ ತು ಸಂಮಂತ್ರ್ಯ ಪಾರ್ಥೋ ದ್ರೋಣಮಥಾಬ್ರವೀತ್ ।
ದರ್ಪೋದ್ರೇಕಾತ್ ಕುಮಾರಾಣಾಮಾಚಾರ್ಯಂ ದ್ವಿಜಸತ್ತಮಮ್ ॥
ಏಷಾಂ ಪರಾಕ್ರಮಸ್ಯಾಂತೇ ವಯಂ ಕುರ್ಯಾಮ ಸಾಹಸಮ್ ।
ಏತೈರಶಕ್ಯಃ ಪಾಂಚಾಲೋ ಗ್ರಹೀತುಂ ರಣಮೂರ್ಧನಿ ॥ - ಭಾರತ (ಆದಿ. ೧೩೭/೧೨,೧೩)

ವಿ: ೧) ಪಾಂಡವರು ಹಿಂದುಳಿದುದ್ದೇತಕೆ ಎಂಬ ಬಗ್ಗೆ ಯಾವ ವಿಚಾರವನ್ನೂ ಮಾಡದೇ ಕೌರವರು ಕೇವಲ ಉತ್ಸಾಹಭರದಿಂದ ಮುನ್ನುಗ್ಗಿಯೇಬಿಟ್ಟರು ಎಂದರ್ಥ.

೨) ದೊಡ್ಡವರ ರೀತಿಯನ್ನು ಅರ್ಥಮಾಡಿಕೊಂಡು ನಡೆಯಲೂ ಸಹ ಒಳ್ಳೆಯ ಸಂಸ್ಕಾರ ಬೇಕು ಎಂಬುದಕ್ಕೆ ಇದೊಂದು ನಿದರ್ಶನ.

ಕುಮಾರಾನ್ ಗ್ರಹಣೇಪ್ಸುಂಸ್ತಾನುಪಯಾತಾನುದೀಕ್ಷ್ಯ ಸಃ
ಅಕ್ಷೌಹಿಣೀತ್ರಿತಯಯುಜ್ ನಿಃಸೃತೋ ದ್ರುಪದೋ ಗೃಹಾತ್ ॥ ೫೯ ॥

ಅ: ತನ್ನನ್ನು ಸೆರೆಹಿಡಿಯಲು ಬಯಸಿ ಆ ರಾಜಕುಮಾರರು ಬಂದಿರುವುದನ್ನು ಗಮನಿಸಿದ ದ್ರುಪದ ಮೂರು ಅಕ್ಷೋಹಿಣಿ ಸೇನೆಯಿಂದ ಕೂಡಿ ಅರಮನೆಯಿಂದ ಹೊರ ಹೊರಟ.

ವಿ: ದ್ರುಪದನ ಸೇನೆ ಮೂರು ಅಕ್ಷೋಹಿಣಿಯಷ್ಟು ಅಪಾರವಾಗಿತ್ತು ಎಂಬ ಇಲ್ಲಿಯ ಉಲ್ಲೇಖ ಗಮನಾರ್ಹ. ಹೀಗಾಗಿ ಅಂದಿನ ಪ್ರತಿಷ್ಠಿತ ರಾಜರಲ್ಲಿ ದ್ರುಪದನ ಸ್ಥಾನ ಅಗ್ರಶ್ರೇಣಿಯಲ್ಲಿತ್ತು ಎಂದಾಗುವುದು.

ತೇ ಶರೈರಭವರ್ಷಂತಃ ಪರಿವಾರ್ಯ ಕುಮಾರಕಾನ್
ಅರ್ದಯಾಮಾಸುರುದ್ವೃತ್ತಾನ್ ಸ್ತ್ರಿಯೋ ಬಾಲಾಶ್ಚ ಸರ್ವಶಃ ॥ ೬೦ ॥

ಅ: ಅವರೆಲ್ಲ ಬಾಣಗಳ ಸುರಿಮಳೆಗೈಯುತ್ತಾ ಆ ರಾಜಕುಮಾರರನ್ನು ಸುತ್ತುವರಿದು ನೋಯಿಸತೊಡಗಿದರು. ನಡತೆಗೆಟ್ಟ ಅವರನ್ನು ಹೆಂಗಸರು, ಮಕ್ಕಳೂ ಸಹ ಎಲ್ಲೆಡೆಗಳಿಂದಲೂ ಪೀಡಿಸತೊಡಗಿದರು.

ಹರ್ಮ್ಯಸಂಸ್ಥಾಃ ಸ್ತ್ರಿಯೋ ಬಾಲಾ ಗ್ರಾವಭಿರ್ಮುಸಲೈರಪಿ
ಅತ್ಯರ್ಥಮರ್ದಯಾಮಾಸುಃ ಕುಮಾರಾನ್ ಸುಸುಖೇಧಿತಾನ್ ॥ ೬೧ ॥

ಅ: ಉಪ್ಪರಿಗೆಗಳಲ್ಲಿ ನಿಂತಿದ್ದ ಹೆಂಗಸರು, ಮಕ್ಕಳು ಕಲ್ಲುಗಳಿಂದಲೂ, ಒನಕೆಗಳಿಂದಲೂ ಸುಖದಿಂದ ಬೆಳೆದಿದ್ದ ಆ ರಾಜಪುತ್ರರುಗಳನ್ನು ಬಹಳವಾಗಿ ಪೀಡಿಸಿದರು.

ವಿ: ಒಂದು ಕಡೆ ಅಪಾರ ಸಂಖ್ಯೆಯ ಸೇನೆಯ ಶರವೃಷ್ಟಿ, ಮತ್ತೊಂದು ಕಡೆ ಉಪ್ಪರಿಗೆಗಳಿಂದ ಹೆಂಗಸರು, ಮಕ್ಕಳು ಎಸೆಯುತ್ತಿದ್ದ ಕಲ್ಲುಗಳು ಮತ್ತು ಒನಕೆಗಳು – ಇವುಗಳಿಂದಾಗಿ ಸುಖವಾಗಿ ತಿಂದು ಬೆಳೆದಿದ್ದ ಆ ರಾಜಪುತ್ರರುಗಳಿಗೆ ಸಹಿಸಲಾಗದಷ್ಟು ಪೀಡೆ ಉಂಟಾಯಿತು ಎಂದು ಭಾವ.

ದ್ರುಪದಸ್ಯ ವರೋ ಹ್ಯಸ್ತಿ ಸೂರ್ಯದತ್ತಸ್ತಪೋಬಲಾತ್
ಆಯೋಜನಾತ್ ಪುರಮುಪ ನ ತ್ವಾಂ ಜೇಷ್ಯತಿ ಕಶ್ಚನ ॥ ೬೨ ॥

ಅ: ದ್ರುಪದನಿಗೆ ತಪೋಬಲದಿಂದಾಗಿ ಸೂರ್ಯ ನೀಡಿದ್ದ ಒಂದು ವರ ಇತ್ತು - 'ನಗರದ ಸುತ್ತ ಒಂದು ಯೋಜನದ ವರೆಗೆ ನಿನ್ನನ್ನು ಯಾವನೂ ಗೆಲ್ಲಲಾರ'.

ವಿ: ಆ ಕುಮಾರರ ಸೋಲಿಗೆ ಮುಖ್ಯಕಾರಣವನ್ನು ಇಲ್ಲಿ ನೀಡಿರುವರು. ಸೇನೆ ಹಾಗೂ ಹೆಂಗಸರ, ಮಕ್ಕಳ ಪೆಟ್ಟುಗಳು ಹಾಗೆ ಭಯಾನಕವಾಗಲು ದ್ರುಪದನಿಗಿದ್ದ 'ನಗರದ ಸುತ್ತ ಒಂದು ಯೋಜನದ ವರೆಗೆ ಅವನಿಗೆ ಶತ್ರುಗಳಿಂದ ಸೋಲಿಲ್ಲ' ಎಂಬ ಸೂರ್ಯನ ವರ ಕಾರಣವಾಗಿದ್ದಿತು ಎಂದರ್ಥ.

ಇತಿ ತೇನ ವರೇಣೈವ ಸುಖಸಂವರ್ಧಿತಾಶ್ಚ ತೇ
ಭಗ್ನಾಃ[೧] ಕುಮಾರಾ ಆವೃತ್ಯ ದುದ್ರುವುರ್ಯತ್ರ ಪಾಂಡವಾಃ ॥ ೬೩ ॥

ಅ: ಹೀಗೆ ಆ ವರದಿಂದಾಗಿಯೇ ಸುಖವಾಗಿ ಬೆಳೆದಿದ್ದ ಆ ರಾಜಕುಮಾರರುಗಳು ಪೆಟ್ಟು ತಿಂದವರಾಗಿ ಹಿಂತಿರುಗಿ ಪಾಂಡವರಿದ್ದಲ್ಲಿಗೆ ಓಡಿದರು.

ವಿ: ಕರ್ಣ ಸ್ವತಃ ಸೂರ್ಯಾವತಾರನಾದರೂ ತನ್ನದೇ ವರವನ್ನು ತಾನು ಉಲ್ಲಂಘಿಸಲು ಸಾಧ್ಯವಾಗದೇ ಪರಾಭವಗೊಳ್ಳುವಂತಾಯಿತು ಎಂಬುದು ಒಂದು ಕಾರಣವಾದರೆ, ಅದಕ್ಕಿಂತ ಮಿಗಿಲಾಗಿ ಅರ್ಜುನಾದಿಗಳ ಮೇಲೆ ಸ್ಪರ್ಧೆಯಿಂದ ತೆರಳಿದ್ದರಿಂದ ಹಾಗೆ ಸ್ಪರ್ಧೆಯಿಂದ ತೆರಳಿದಲ್ಲಿ ಸೋಲಾಗುವುದು ಖಚಿತ ಎಂಬ ಪರಶುರಾಮದೇವರ ಶಾಪ ಮುಖ್ಯ ಕಾರಣವಾಯಿತು ಎಂದು ತಿಳಿಯಬೇಕು (೧೫/೫೮).

ಸ್ತ್ರೀಬಾಲವೃದ್ಧಸಹಿತೈಃ ಪಾಂಚಾಲೈರಪ್ಯನುದ್ರುತಾಃ
ಭೀಮಾರ್ಜುನೇತಿ ವಾಶಂತೋ[೨] ಯಯುರ್ಯತ್ರ ಸ್ಮ ಪಾಂಡವಾಃ ॥ ೬೪ ॥

---

೧. 'ಭಗ್ನಾಃ ಕುಮಾರಾ ಆವೃತ್ಯ ದುದ್ರುವುರ್ಯತ್ರ ಪಾಂಡವಾ' ಇತ್ಯತ್ರ ರುದ್ರವರಾದಜೇಯಸ್ಯ ದುರ್ಯೋಧನಸ್ಯ ರಾಮವರಾದಜೇಯಸ್ಯ ಕರ್ಣಸ್ಯ ಚ ಪರಾಜಯಃ ಕಥಮಿತಿ ಚೇತ್ ಸತ್ಯಮ್ । ತದಿತರೇಷಾಂ ಸೂರ್ಯವರೇಣ ಪರಾಜಯಃ ತಯೋಸ್ತೂದ್ವೃತ್ತಾನಿತ್ಯುಕ್ತತ್ವಾತ್ । ತಾಭ್ಯಾಂ ತದಾನೀಮಸ್ತದೇವತಾವಂದನಾದಿಕಂ ವಿನಾಸ್ತ್ರಯುದ್ಧಂ ಕೃತಮಿತಿ ಜ್ಞಾಯತೇ । ಅತಸ್ತಯೋಃ ಪರಾಜಯ ಇತಿ ಶ್ರುತೋಽರ್ಥ । – (ರಾ.)

೨. ದ್ರವಂತಿ ಸ್ಮ ನದಂತಿ ಸ್ಮ ಕ್ರೋಶಂತಃ ಪಾಂಡವಾನ್ ಪ್ರತಿ ॥ – ಭಾರತ (ಆದಿ. ೧೩೭/೨೫)

ಅ: ಹೆಂಗಸರು, ಮಕ್ಕಳು ಮತ್ತು ಮುದುಕರೊಂದಿಗೆ ಕೂಡಿದ ಪಾಂಚಾಲರಿಂದ ಬೆನ್ನಟ್ಟಲ್ಪಟ್ಟ ಅವರೆಲ್ಲ 'ಭೀಮ..! ಅರ್ಜುನ..!' ಎಂದು ಕೂಗುತ್ತಾ ಅವರಿದ್ದಲ್ಲಿಗೆ ಧಾವಿಸಿದರು.

ವಿ : ಹತಾಶರಾದ ಕೌರವರೆಲ್ಲಾ ರಕ್ಷಣೆಗಾಗಿ ಭೀಮಾರ್ಜುನರನ್ನೇ ಕೂಗುತ್ತಾ ಅವರಿದ್ದಲ್ಲಿಗೆ ಧಾವಿಸಿದರು ಎಂದರ್ಥ. ಅಂತೂ ಕೌರವರ ಪ್ರಥಮ ಪ್ರಯತ್ನದಲ್ಲೇ ಘೋರ ಪರಾಭವ ಒದಗಿ 'ಪ್ರಥಮಗ್ರಾಸೇ ಮಕ್ಷಿಕಾಪಾತಃ' ಎಂಬ ಸ್ಥಿತಿ ಉಂಟಾಯಿತು. ಇದು ಜೀವನದುದ್ದಕ್ಕೂ ಅವರಿಗೆ ಒದಗಲಿದ್ದ ಸೋಲಿನ ಸಾಲಿಗೆ ನಾಂದಿಯಾಯಿತು ಎಂದೂ ಭಾವಿಸಬಹುದು. ಸಾತ್ವಿಕರ ಮೇಲಿನ ಮಾತ್ಸರ್ಯ ಎಂದೂ ಒಳಿತಿಗೆ ಕಾರಣವಾಗದು ಎಂಬುದಕ್ಕೂ ಇದು ನಿದರ್ಶನ. ಅವರು ಭೀಮಾರ್ಜುನ ಎಂದು ಕೂಗುತ್ತ ಬಂದದ್ದೂ ಗಮನಾರ್ಹ.

ಭೀಮಾರ್ಜುನರ ವಿಜಯ

ತಾನ್ ಪ್ರಭಗ್ನಾನ್ ಸಮಾಲ್ಲೋಕ್ಯ ಭೀಮಃ ಪ್ರಹರತಾಂ ವರಃ
ಆರುರೋಹ ರಥಂ ವೀರಃ ಪುರ ಆತ್ತಶರಾಸನಃ ॥ ೬೫ ॥

ಅ: ಅವರೆಲ್ಲ ಇನ್ನಿಲ್ಲದಂತೆ ಪರಾಜಿತರಾದುದನ್ನು ಕಂಡು ಯೋಧಾಗ್ರೇಸರನೂ ವೀರನೂ ಆದ ಭೀಮಸೇನ ಧನುಸ್ಸನ್ನು ಎತ್ತಿಕೊಂಡು ರಥವನ್ನು ಏರಿ ಮುಂದೆ ಸಾಗಿದ.

ವಿ: 'ವೀರ' ಎಂದರೆ ಹಿಡಿದ ಕೆಲಸವನ್ನು ಬಿಡದೆ [೩]ಪೂರೈಸುವವನು ಎಂದರ್ಥ. ಭೀಮಸೇನ ಸದಾ ವೀರನೇ ಎಂದು ಆತನ ದ್ವಾದಶನಾಮ ಸ್ತೋತ್ರದಲ್ಲೇ ಬಂದಿದೆ : 'ಜರಾಸಂಧಾಂತಕೋ ವೀರಃ'.

ತಮನ್ವಯಾದಿಂದ್ರಸೂನುಃ [೫]ಯಮೌ ತಸ್ಯೈವ ಚಕ್ರಯೋಃ
ಯುಧಿಷ್ಠಿರಸ್ತು ದ್ರೋಣೇನ ಸಹ ತಸ್ಥೌ ನಿರೀಕ್ಷಕಃ ॥ ೬೬ ॥

ವಾಶಂತಃ ವಾಶ್ಯಮಾನಾಃ ಶಬ್ದಂ ಕುರ್ವತಃ। – (ಜ.)

ವಾಶಂತಃ ಶಬ್ದಂ ಕುರ್ವಂತಃ। – (ವ.)

೩. ಆರಭ್ಯಾಂತಗಾಮೀ ಯಃ ಸ ವೀರ ಇತಿ ಕೀರ್ತಿತಃ।

೪. ಸೇನಾಗ್ರಗೋ ಭೀಮಸೇನಃ ಸದಾऽಭೂತ್ ಗದಯಾ ಸಹ। - ಭಾರತ (ಆದಿ. ೧೩೭/೨೭)

೫. ಯಮೌ ತಸ್ಯೈವ ಚಕ್ರಯೋರಿತ್ಯತ್ರ ತಸ್ಯ= ಅರ್ಜುನಸ್ಯ ಚಕ್ರಯೋಃ= ರಥಚಕ್ರಯೋಃ ಸಮೀಪ ಏವ ಅನ್ವಗಾತಾಮ್ ॥ – (ವಾ.)

ಅ: ಇಂದ್ರಪುತ್ರನಾದ ಅರ್ಜುನ ಅವನ ಹಿಂದೆ ತಾನೂ ನಡೆದ. ಅವನ ಎಡ, ಬಲಗಳಲ್ಲಿ ರಥಚಕ್ರಗಳ ಬಳಿಯಲ್ಲಿ ನಕುಲ, ಸಹದೇವರು ಹೊರಟರು. ಯುಧಿಷ್ಠಿರ ದ್ರೋಣನೊಂದಿಗೆ ನಿರೀಕ್ಷಕನಾಗಿ ಅಲ್ಲಿಯೇ ಉಳಿದ.

ವಿ: ೧) ಅರ್ಜುನನ ರಥದ ಚಕ್ರಗಳ ಬಳಿ ನಕುಲ, ಸಹದೇವರು ತೆರಳಿದರು ಎಂದು ಮೂಲಮಹಾಭಾರತದಲ್ಲಿದೆ. ವಾದಿರಾಜೀಯದಲ್ಲಿಯೂ ಹಾಗೆಯೇ ಇದೆ. [೧]ಜನಾರ್ದನೀಯ ವರದರಾಜೀಯಗಳಲ್ಲಿ ಭೀಮನ ರಥಚಕ್ರಗಳ ಸಮೀಪದಲ್ಲಿ ತೆರಳಿದರು ಎಂಬ ಅರ್ಥವಿದೆ. ಒಟ್ಟಾಗಿ ಭೀಮಾರ್ಜುನರೊಂದಿಗೆ ನಕುಲ, ಸಹದೇವರೂ ತೆರಳಿದರು ಎಂದರ್ಥ.

೨) ಯುಧಿಷ್ಠಿರ ಹಿರಿಯ; ಅವನನ್ನು ಹೆಚ್ಚು ಪ್ರಸಂಗಗಳಲ್ಲಿ ನಿರೀಕ್ಷಕನಾಗಿಯೇ ಇರುವಂತೆ ನೋಡಿಕೊಂಡದ್ದು ಭೀಮಾದಿಗಳ ವಿಶೇಷ. ಧರ್ಮಿಷ್ಠರನ್ನು ಅವರು ಇದ್ದಲ್ಲಿಯೇ ಯಶಸ್ವಿ–ಗಳಾಗುವಂತೆ ಮಾಡಿ ಕೀರ್ತಿ ನೀಡುವುದು ದೇವತೆಗಳ ವೈಶಿಷ್ಟ್ಯ ಎಂಬ ಪ್ರಮೇಯವೂ ಇದರಿಂದ ಸೂಚಿತ ಎಂದೂ ತಿಳಿಯಬಹುದು.

ಆಯಾಂತಮಗ್ರತೋ ದೃಷ್ಟ್ವಾ ಭೀಮಮಾತ್ತಶರಾಸನಮ್
ದುದ್ರುವುಃ ಸರ್ವಪಾಂಚಾಲಾ ವಿವಿಶುಃ ಪುರಮೇವ ಚ ॥ ೬೭ ॥

ಅ: ಭೀಮ ಎಲ್ಲರಿಗಿಂತ ಮುಂದೆ ಧನುರ್ಧಾರಿಯಾಗಿ ನುಗ್ಗಿ ಬರುತ್ತಿದ್ದುದನ್ನು ಕಂಡು ಎಲ್ಲ ಪಾಂಚಾಲರೂ ಭಯದಿಂದ ಓಡಿದರು. ಪಟ್ಟಣವನ್ನೇ ಸೇರಿಬಿಟ್ಟರೂ ಸಹ.

ವಿ: ಭೀಮ ಯುದ್ಧ ಮಾಡುವುದಿರಲಿ, ತನ್ನ ದರ್ಶನ ಮಾತ್ರದಿಂದಲೇ ಎದುರಾಳಿಗಳನ್ನು ಹೇಗೆ ಹಿಮ್ಮೆಟಿಸುತ್ತಿದ್ದ ಎಂಬುದಕ್ಕೆ ಇದು ಗಮಕ. ಹಾಗೆ ಓಡಿದ್ದರಿಂದ ಅವರಿಗೆ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಾಯಿತು. ಅಥವಾ ಪ್ರಾಣನನ್ನು ಎದುರಿಸಿ ಹೋಗದಿದ್ದುದರಿಂದ ಅವರ ಪ್ರಾಣ ಉಳಿಯಿತು ಎಂದೂ ತಿಳಿಯಬಹುದು.

ದ್ರುಪದಸ್ತ್ವಭ್ಯಯಾದ್ಭೀಮಂ ಸಪುತ್ರಃ [೨]ಸಹ ಸೇನಯಾ
ಚಕ್ರರಕ್ಷೌ ತು ತಸ್ಯಾಸ್ತಾಂ ಯುಧಾಮನ್ಯೂತ್ತಮೌಜಸೌ ॥ ೬೮ ॥

---

೧. ಯಮೌ ತಸ್ಯ ಭೀಮಸ್ಯೈವ ಚಕ್ರಯೋ ರಥಚಕ್ರಯೋಃ ಸಮೀಪೇ ಗತಾವಿತ್ಯರ್ಥಃ। – (ವ.)
ತಸ್ಯ ಭೀಮಸ್ಯ ಚಕ್ರಯೋಃ ರಥಚಕ್ರಯೋಃ ಸಮೀಪೇನ ಜಗ್ಮತುರಿತಿ ಶೇಷಃ। – (ಜ.)

೨. **ಸಾರಸೇನಯಾ** (ವೇ. ಪಾಠ); ಸಾರಸೇನಯಾ ಪ್ರಬಲಸೇನಯಾ (ವೇ.)

ಅ: ದ್ರುಪದ ತನ್ನ ಪುತ್ರರೊಡನೆ ಸೇನೆಯೊಂದಿಗೆ ಭೀಮನನ್ನು ಎದುರಿಸಿದ; ಅವನ ಎಡ, ಬಲಗಳಲ್ಲಿ ಚಕ್ರರಕ್ಷಕರಾಗಿ ಯುಧಾಮನ್ಯು ಮತ್ತು ಉತ್ತಮೌಜಸ್ ಇಬ್ಬರೂ ಇದ್ದರು.

೧
ಧಾತ್ರ್ಯರ್ಯಮಾವೇಶಯುತೌ ವಿಶ್ವಾವಸುಪರಾವಸೂ
ಸುತೌ ತಸ್ಯ ಮಹಾವೀರೌ ಸತ್ಯಜಿತ್ ಪೃಷ್ಠತೋಽಭವತ್ ॥ ೬೯ ॥

ಅ: ಅವರಿಬ್ಬರೂ ವಿಶ್ವಾವಸು ಮತ್ತು ಪರಾವಸು ಎಂಬ ಗಂಧರ್ವರ ಅವತಾರ. ಧಾತೃ ಮತ್ತು ಅರ್ಯಮಾ ಎಂಬ ಆದಿತ್ಯರ ಆವೇಶದಿಂದ ಕೂಡಿದ್ದವರು, ದ್ರುಪದನ ಪುತ್ರರು, ಮಹಾಪರಾಕ್ರಮಿಗಳು. ಅವರಿಬ್ಬರ ಹಿಂದೆ ಸತ್ಯಜಿತ್ ಇದ್ದ.

ಸ ಮಿತ್ರಾಂಶಯುತೋ ವೀರಶ್ಚಿತ್ರಸೇನೋ ಮಹಾರಥಃ
ಅಗ್ರತಸ್ತು ಶಿಖಂಡ್ಯಾಗಾದ್ರಥೋದಾರಃ ಶರಾನ್ ಕ್ಷಿಪನ್ ॥ ೭೦ ॥

ಅ: ಸತ್ಯಜಿತ್ ಮಿತ್ರನೆಂಬ ಆದಿತ್ಯನ ಅಂಶ. ಚಿತ್ರಸೇನ ಎಂಬ ಗಂಧರ್ವನ ಅವತಾರ; ವೀರ, ಮಹಾರಥ. ಅವರೆಲ್ಲರ ಮುಂಭಾಗದಲ್ಲಿ ಶ್ರೇಷ್ಠ ರಥಿಕನಾಗಿದ್ದ ಶಿಖಂಡಿ ಬಾಣಗಳನ್ನು ಪ್ರಯೋಗಿಸುತ್ತಾ ಸಾಗಿದ್ದ.

ಜನಮೇಜಯಸ್ತಮನ್ವೇವ ಪೂರ್ವಂ ಚಿತ್ರರಥೋ ಹಿ ಯಃ
ತ್ವಷ್ಟುರಾವೇಶಸಂಯುಕ್ತಃ ಸ ಶರಾನಭ್ಯವರ್ಷತ ॥ ೭೧ ॥

ಅ: ಅವನ ಹಿಂದೆಯೇ ಚಿತ್ರರಥ ಎಂಬ ಗಂಧರ್ವನ ಅವತಾರವಾಗಿದ್ದ ತ್ವಷ್ಟ್ರ ಎಂಬ ಆದಿತ್ಯನ ಆವೇಶದಿಂದ ಕೂಡಿದ್ದ ಜನಮೇಜಯ ಸಾಗಿದ್ದ. ಅವನು ಬಾಣಗಳ ಮಳೆಯನ್ನು ಕರೆದ.

ವಿ: ಈ ಜನಮೇಜಯ ದ್ರುಪದಪುತ್ರ; ಮಹಾಭಾರತ ಶ್ರವಣ ಮಾಡಿದ ಜನಮೇಜಯ ಪರೀಕ್ಷಿದ್ರಾಜನ ಮಗ.

---

೧. 'ಧಾತ್ರ್ಯರ್ಯಮಾವೇಶಯುತೌ ಯುಧಾಮನ್ಯುತ್ತಮೌಜಸೌ' ಇತ್ಯತ್ರ ಧಾತುರ್ಬ್ರಹ್ಮಣಃ ಅರ್ಯಮಾಶ್ಚ ತಯೋರಾವೇಶಾಭ್ಯಾಂ ಯುತಾವಿತಿ । ಬ್ರಹ್ಮಾವೇಶಯುತೋ ಯುಧಾಮನ್ಯುಃ । ತದುಕ್ತಂ – 'ಯುಧಾಮನ್ಯುಃ ಪಾರ್ಷದಸ್ತು ಬ್ರಹ್ಮಾವೇಶಯುತೋ ಬಲೀ' ಇತ್ಯಂಶಾವತರಣೇ। – (ರಾ.)

ದ್ವಾದಶಾದಿತ್ಯೇಷು ಮಧ್ಯೇ ಧಾತ್ರಾರ್ಯಮ್ಣೋರಾವೇಶಯುತೌ। – (ಜ.)

೨. ರಥೋದಾರಃ ರಥೇನೋತ್ಕೃಷ್ಟಃ। – (ಜ.)

ತಾವುಭೌ ವಿರಥೌ ಕೃತ್ವಾ ವಿಚಾಪೌ ಚ ವಿವರ್ಮಕೌ ।
ಭೀಮೋ ಜಘಾನ ತಾಂ ಸೇನಾಂ ಸವಾಜಿರಥಕುಂಜರಾಮ್ ॥ ೭೨ ॥

ಅ: ಅವರಿಬ್ಬರನ್ನೂ ವಿರಥರನ್ನಾಗಿಯೂ, ಧನುಸ್ಸಿಲ್ಲದವರನ್ನಾಗಿಯೂ, ಕವಚ ರಹಿತರನ್ನಾಗಿಯೂ ಮಾಡಿ ಭೀಮಸೇನ ಕುದುರೆ, ರಥ, ಆನೆಗಳಿಂದ ಕೂಡಿದ್ದ ಆ ಸೇನೆಯನ್ನು ಹೊಡೆಯತೊಡಗಿದ.

ಅಥೈನಂ ಶರವರ್ಷೇಣ ಯುಧಾಮನ್ಯೂತ್ತಮೌಜಸೌ
ಅಭೀಯತುಸ್ತೌ ವಿರಥೌ ಚಕ್ರೇ ಭೀಮೋ ನಿರಾಯುಧೌ ॥ ೭೩ ॥

ಅ: ಆಗ ಆ ಭೀಮನನ್ನು ಯುಧಾಮನ್ಯು ಮತ್ತು ಉತ್ತಮೌಜಸರು ಬಾಣಗಳ ಮಳೆಯಿಂದ ಎದುರಿಸಿದರು. ಭೀಮ ಅವರಿಬ್ಬರನ್ನೂ ವಿರಥರನ್ನಾಗಿಯೂ, ನಿರಾಯುಧರನ್ನಾಗಿಯೂ ಮಾಡಿದ.

ವಿ: ೧) ಸೂರ್ಯನ ವರವಿದ್ದರೂ ಪಾಂಚಾಲ ಸೇನೆಗೆ ಹಾಗೂ ದ್ರುಪದನಿಗೆ ಭೀಮನನ್ನು ಏನೂ ಮಾಡಲಾಗಲಿಲ್ಲ. ಸೂರ್ಯನಿಗಿಂತ ತುಂಬಾ ಮಿಗಿಲಾದ ವಾಯುದೇವರ ಮೇಲೆ ಸೂರ್ಯನ ವರ ಪರಿಣಾಮಕಾರಿಯಾಗದು ಎಂಬುದು ಇಲ್ಲಿಯ ಭಾವ.

೨) ಅದರಂತೆ ಆ ವೇಳೆಗೆ ಆ ಸೈನ್ಯ ನಗರದ ಹೊರ ವಲಯದಿಂದ ಒಂದು ಯೋಜನ ದಾಟಿಯೇ ಬಂದಿದ್ದು ಅದಕ್ಕೆ ಪೂರಕವಾಗಿ ಇದ್ದಿತು ಎಂದು ತಿಳಿಯಬೇಕು.

ಅರ್ಜುನನಿಂದ ದ್ರುಪದನ ಸೆರೆ

ಹಸ್ತಪ್ರಾಪ್ತಂ ಚ ಪಾಂಚಾಲಂ ನಾಗ್ರಹೀತ್ ಸ ವೃಕೋದರಃ[೧]
ಗುರ್ವರ್ಥಮರ್ಜುನಸ್ಯೋರ್ವೀಂ ಪ್ರತಿಜ್ಞಾಂ ಕರ್ತುಮಪ್ಯ ತಾಮ್ ।
ಮಾನಭಂಗಾಯ ಕರ್ಣಸ್ಯ ಪಾರ್ಥಮೇವ ನ್ಯಯೋಜಯತ್ ॥ ೭೪ ॥

ಅ: ಗುರುಗಳಿಗಾಗಿ ಅರ್ಜುನ ಮಾಡಿದ್ದ ಮಹಾಶಪಥವನ್ನು ಸತ್ಯಗೊಳಿಸಲೆಂದೂ, ಕರ್ಣನ ಮಾನಭಂಗ ಮಾಡಲೆಂದೂ ಭೀಮ ಆಗ ಕೈಗೆ ಸಿಗುವಂತಿದ್ದರೂ ದ್ರುಪದನನ್ನು ಸೆರೆ ಹಿಡಿಯಲಿಲ್ಲ. ಅದಕ್ಕಾಗಿ ಅರ್ಜುನನ್ನೇ ತೊಡಗಿಸಿದ.

---

೧. ಗುರ್ವರ್ಥಂ ಗುರುಪ್ರಯೋಜನಮುದ್ದಿಶ್ಯ ಕೃತಮಿತಿ ಶೇಷಃ । – (ಜ.)

ವಿ: ೧) ಆಗೊಮ್ಮೆ ದ್ರುಪದ ಭೀಮನಿಗೆ ಕೈಸೆರೆಗೆ ಸಿಗುವ ಪ್ರಸಂಗ ಒದಗಿತು. ಆದರೆ ಭೀಮ ಅವನನ್ನು ತಾನು ಸೆರೆ ಹಿಡಿಯದೇ ಆ ಅವಕಾಶವನ್ನು ಅರ್ಜುನನಿಗೆ ನೀಡಿದ. ಗುರುದಕ್ಷಿಣೆಯನ್ನು ಪೂರೈಸುವ ಅರ್ಜುನನ ಶಪಥ ಸತ್ಯವಾಗುವುದರೊಂದಿಗೆ ಕರ್ಣನ ಮಾನಭಂಗವಾಗಬೇಕೆಂಬುದು ಭೀಮಸೇನನ ಉದ್ದೇಶವಾಗಿತ್ತು ಎಂದರ್ಥ.

೨) ಕರ್ಣಾರ್ಜುನರಿಬ್ಬರೂ ಪರಸ್ಪರ ಎದುರಾಳಿಗಳಾಗಿದ್ದಾಗ ಕರ್ಣನಿಗೆ ಆಗದಿದ್ದ ಕಾರ್ಯವನ್ನು ಅರ್ಜುನ ಮಾಡುವುದರಿಂದ ಕರ್ಣನ ಮಾನಭಂಗವಾಗುವುದು ಸಹಜವಲ್ಲವೇ. ಭೀಮ ಸೆರೆ ಹಿಡಿದಿದ್ದರೂ ಕರ್ಣನ ಮಾನ ಹೋಗುತ್ತಿತ್ತು, ಆದರೆ, ಅರ್ಜುನ ಸೆರೆ ಹಿಡಿದಿದ್ದರಿಂದ ಕರ್ಣನ ಮಾನಕ್ಕೆ ಬಹಳವಾಗಿ ಚ್ಯುತಿಯಾಯಿತು ಎಂದರ್ಥ.

ಸ ಶರಾನ್ ಕ್ಷಿಪತಸ್ತಸ್ಯ ಪಾಂಚಾಲಸ್ಯಾರ್ಜುನೋ ದ್ರುತಮ್ ।
ಪುಪ್ಲುವೇ ಸ್ಯಂದನೇ ಚಾಪಂ ಛಿತ್ವಾ ತಂ ಚಾಗ್ರಹೀತ್ ಕ್ಷಣಾತ್ ॥ ೭೫ ॥

ಅ: ಬಾಣಗಳನ್ನು ಪ್ರಯೋಗಿಸುತ್ತಿದ್ದ ದ್ರುಪದನ ರಥಕ್ಕೆ ಅರ್ಜುನ ತ್ವರೆಯಿಂದ ಹಾರಿ ಅವನ ಬಿಲ್ಲನ್ನು ಕತ್ತರಿಸಿ ಕ್ಷಣಮಾತ್ರದಲ್ಲಿ ಅವನನ್ನು ಸೆರೆ ಹಿಡಿದ.

ಸಿಂಹೋ ಮೃಗಮಿವಾದಾಯ ಸ್ವರಥಂ ಚಾಭಿಪೇದಿವಾನ್ ।
ಅಥ ಪ್ರಕುಪಿತಂ ಸೈನ್ಯಂ ಫಲ್ಗುನಂ ಪರ್ಯವಾರಯತ್ ॥ ೭೬ ॥

ಅ: ಸಿಂಹವು ಜಿಂಕೆಯನ್ನು ಹೇಗೋ ಹಾಗೆ ಅವನನ್ನು ಹಿಡಿದು ಅರ್ಜುನ ಮರಳಿ ತನ್ನ ರಥವನ್ನು ಸೇರಿಕೊಂಡ. ಆಗ ಬಹಳವಾಗಿ ಕೆರಳಿದ ಸೈನ್ಯ ಅರ್ಜುನನ್ನು ಸುತ್ತುಗಟ್ಟಿತು.

ಜಘಾನ ಭೀಮಸ್ತರಸಾ ತತ್ ಸೈನ್ಯಂ ಶರವೃಷ್ಟಿಭಿಃ ।
ಅಥ ಸತ್ಯಜಿದಭ್ಯಾಗಾತ್ ಪಾರ್ಥಂ ಮುಂಚನ್ ಶರಾನ್ ಬಹೂನ್ ॥ ೭೭ ॥

ಅ: ಭೀಮ ತಕ್ಷಣವೇ ಆ ಸೈನ್ಯವನ್ನು ಬಾಣಗಳ ಮಳೆಗಳಿಂದ ಹೊಡೆಯತೊಡಗಿದ. ಆಗ ಸತ್ಯಜಿತ್ ಅನೇಕ ಬಾಣಗಳನ್ನು ಸುರಿಸುತ್ತಾ ಅರ್ಜುನನ ಮೇಲೆ ಎರಗಿದ.

ತಮರ್ಜುನಃ ಕ್ಷಣೇನೈವ ಚಕ್ರೇ ವಿರಥಕಾರ್ಮುಕಮ್ ।
ಘ್ನಂತಂ ಭೀಮಂ ಪುನಃ ಸೈನ್ಯಮರ್ಜುನಃ ಪ್ರಾಹ ಮಾ ಭವಾನ್ ॥ ೭೮ ॥

ಸೇನಾಮರ್ಹತಿ ರಾಜ್ಞೋಽಸ್ಯ ವೀರ ಹಂತುಮಶೇಷತಃ ।
ಸಂಬಂಧಯೋಗ್ಯಸಾತ್ತಸ್ಯ[೧] ಸಖಾಽಯಂ ನಃ ಸುಧಾರ್ಮಿಕಃ ॥ ೭೯ ॥

ನೇಷ್ಯಾಮ ಏನಮೇವಾತೋ ಗುರೋರ್ವಚನಗೌರವಾತ್ ।
ಸ್ನೇಹಪಾಶಂ ತತಶ್ಚಕ್ರೇ ಬೀಭತ್ಸೌ ದ್ರುಪದೋಽಧಿಕಮ್ ॥ ೮೦ ॥

ಅ: ಅರ್ಜುನ ಒಂದೇ ಕ್ಷಣದಲ್ಲಿ ಅವನ ರಥ ಹಾಗೂ ಬಿಲ್ಲುಗಳನ್ನು ನಾಶಮಾಡಿದ. ಸೇನೆಯನ್ನು ಮರಳಿ ಹೊಡೆಯುತ್ತಲೇ ಇದ್ದ ಭೀಮನನ್ನು ಕುರಿತು ಅರ್ಜುನ ಕೇಳಿಕೊಂಡ - 'ವೀರನಾದ ನೀನು ಈ ರಾಜನ ಸೇನೆಯನ್ನೆಲ್ಲಾ ಪೂರ್ತಿ ನಾಶಮಾಡುವುದು ಬೇಡ. ಇವನು ನಮ್ಮ ಸಂಬಂಧಕ್ಕೆ ಯೋಗ್ಯನಾದವನು. ನಮ್ಮ ತಂದೆಯ ಸ್ನೇಹಿತ ಮತ್ತು ತುಂಬಾ ಧರ್ಮಿಷ್ಠ. ಗುರುಗಳ ಮಾತಿನ ಮೇಲಿನ ಗೌರವದಿಂದಾಗಿ ನಾವು ಇವನನ್ನಷ್ಟೇ ಹಿಡಿದೊಯ್ಯೋಣ'. ಅವನು ಹೀಗೆನ್ನುತ್ತಲೇ ದ್ರುಪದ ಅರ್ಜುನನ ಮೇಲೆ ವಿಶೇಷವಾಗಿ ಸ್ನೇಹಪಾಶಕ್ಕೊಳಗಾದ.

ವಿ: ಸೆರೆ ಹಿಡಿದಿದ್ದು ಅರ್ಜುನನಾದರೂ ಅವನ ಬಗ್ಗೆಯೇ ಅಪಾರ ಸ್ನೇಹ ದ್ರುಪದನಿಗೆ ಹುಟ್ಟುವಂತಾದದ್ದು ಭಗವತ್ಸಂಕಲ್ಪದ ಹಿರಿಮೆಗೆ ನಿದರ್ಶನ.

ತತಃ ಸೇನಾಂ ವಿಹಾಯೈವ ಭೀಮೋ ಬೀಭತ್ಸುಮನ್ವಯಾತ್ ।
ಮುಕ್ತಾ ಕಥಂಚಿದ್ಭೀಮಾಸ್ಯಾತ್[೨] ಸಾಸೇನಾ ದುದ್ರುವೇ ಭಯಾತ್ ॥ ೮೧ ॥

ಅ: ಬಳಿಕ ಸೇನೆಯನ್ನು ಹೊಡೆಯುವುದನ್ನು ಬಿಟ್ಟು ಭೀಮಸೇನ ಅರ್ಜುನನ್ನು ಹಿಂಬಾಲಿಸಿ ತೆರಳಿದ. ಹೀಗೆ ಭೀಮನ ಬಾಯಿಂದ ಹೇಗೋ ಉಳಿದುಕೊಂಡ ಸೇನೆ ಭಯದಿಂದ ಪಲಾಯನಗೈದಿತು.

ವಿ: ಭೀಮ ಬಿಟ್ಟಿದ್ದರಿಂದ ಸೇನೆ ಉಳಿಯುವಂತಾಯಿತೇ ಹೊರತು ಅದಕ್ಕೆ ತಾನಾಗಿಯೇ ಉಳಿದುಕೊಳ್ಳುವ ಸಾಮರ್ಥ್ಯ ಎಷ್ಟುಮಾತ್ರಕ್ಕೂ ಇರಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ದ್ರೋಣರ ಪ್ರತಿಜ್ಞಾಪೂರ್ತಿ

ದ್ರುಪದಂ ಸ್ಥಾಪಯಾಮಾಸಾಥಾರ್ಜುನೋ ದ್ರೋಣಸನ್ನಿಧೌ ।
ಪಪ್ರಚ್ಛೈನಂ ತಥಾ ದ್ರೋಣಃ ಸಖ್ಯಮಸ್ಯುತ ನೇತಿ ವಾ ॥ ೮೨ ॥

---

೧. ಸಂಬಂಧಯೋಗ್ಯಃ ಭಾವಿಸಂಬಂಧಂ ಹೃದಿ ವಿಧಾಯೇದಮುಕ್ತಮ್ । – (ಜ.)

೨. ಭೀಮಾಸ್ಯಾತ್ ಭೀಮಮುಖಾತ್ । – (ಜ.)

ಅ: ಅರ್ಜುನ ದ್ರೋಣರ ಸನ್ನಿಧಿಗೆ ದ್ರುಪದನನ್ನು ತಂದೊಪ್ಪಿಸಿದ. ದ್ರೋಣರಾಗ ದ್ರುಪದನನ್ನು ಕೇಳಿದರು : ''ನನ್ನೊಂದಿಗೆ ಸಖ್ಯವಿದೆಯೋ, ಇಲ್ಲವೋ?''.

ಎ: ಹೀಗೆ ಕೇಳುವ ಮೂಲಕ ದ್ರೋಣರು ಬಡಬ್ರಾಹ್ಮಣನೊಂದಿಗೆ ರಾಜನಾದ ನನಗೆಂತಹ ಸ್ನೇಹ ಎಂಬ ಅವನ ಅವಮಾನದ ಮಾತಿಗೆ ಪ್ರತೀಕಾರ ಮಾಡಿದರು ಎಂದು ತಿಳಿಯಬೇಕು. ಹೀಗೆ ದ್ರುಪದನನ್ನು ಅವನ ರೀತಿಯಲ್ಲಿಯೇ ಪರಾಭವಗೊಳಿಸಿದ್ದು ದ್ರೋಣರ ಕೌಶಲ.

ಅಸ್ತೀದಾನೀಮಿತಿ ಪ್ರಾಹ ದ್ರುಪದೋಽಂಗಿರಸಾಂ ವರಮ್ ।
ಅಥಾಹ ದ್ರುಪದಂ ದ್ರೋಣಃ ಸಖ್ಯಮಿಚ್ಛೇಽಕ್ಷಯಂ ತವ ॥ ೮೩ ॥

ನ ಹ್ಯರಾಜ್ಞೋ ಭವೇತ್ ಸಖ್ಯಂ ತವೇತೀದಂ ಕೃತಂ ಮಯಾ ।
ನ ವಿಪ್ರಧರ್ಮೋ ಯದ್ಯುದ್ಧಮತಸ್ತ್ವಾಂ ನ ಮಯಾ ಧೃತಃ ॥ ೮೪ ॥

ಶಿಷ್ಯೈರೇತತ್ ಕಾರಿತಂ ಮೇ ತವ ಸಖ್ಯಮಭೀಪ್ಸತಾ ।
ಅತಃ ಸಖ್ಯಾರ್ಥಮೇವಾದ್ಯ ತ್ವದ್ರಾಜ್ಯಾರ್ಧೋ[೧]ಹೃತೋ ಮಯಾ ॥ ೮೫ ॥

ಗಂಗಾಯಾ[೨] ದಕ್ಷಿಣೇ ಕೂಲೇ ತ್ವಂ ರಾಜೈವೋತ್ತರೇ ತ್ವಹಮ್ ।
ನ ಹ್ಯರಾಜತ್ವ ಏಕಸ್ಯ ಸಖ್ಯಂ ಸ್ಯಾದಾವಯೋಃ ಸಖೇ ॥ ೮೬ ॥

ಅ: 'ಈಗ ಉಂಟು' ಎಂದು ದ್ರುಪದ ದ್ರೋಣರಿಗೆ ನುಡಿದ. ಮತ್ತೆ ದ್ರೋಣರು ದ್ರುಪದನಿಗೆ ನುಡಿದರು ''ನಿನ್ನೊಂದಿಗೆ ನನಗೆ ಶಾಶ್ವತ ಸಖ್ಯ ಬೇಕಿದೆ, ರಾಜನಲ್ಲದವನೊಂದಿಗೆ ನಿನಗೆ ಸ್ನೇಹ ಉಂಟಾಗದು ಎಂದು ನಾನು ಇದನ್ನು ಮಾಡಿದೆ. ಯುದ್ಧ ಬ್ರಾಹ್ಮಣ ಧರ್ಮವಲ್ಲ, ಆದ್ದರಿಂದ ನಾನೇ ನಿನ್ನನ್ನು ಸ್ವತಃ ಸೆರೆ ಹಿಡಿಯಲಿಲ್ಲ. ಇದನ್ನು ನಿನ್ನೊಂದಿಗೆ ಸಖ್ಯ ಬಯಸಿ ನಾನು ಶಿಷ್ಯರಿಂದ ಮಾಡಿಸಿದೆ. ಈಗಲೂ ನಾನು ನಿನ್ನೊಂದಿಗೆ ಸಖ್ಯಕ್ಕೋಸ್ಕರವಾಗಿಯೇ ಅರ್ಧ ರಾಜ್ಯವನ್ನು ಮಾತ್ರ ಕಿತ್ತಿಕೊಳ್ಳುವೆ. ಗಂಗೆಯ ದಕ್ಷಿಣ ತೀರದಲ್ಲಿ ನೀನು ರಾಜ, ಉತ್ತರ

---

೧. ಸಮಾಂಶಸ್ಯಾವಿವಕ್ಷಿತತ್ವಾದರ್ಧ ಇತಿ ಪುಲ್ಲಿಂಗನಿರ್ದೇಶಃ । – (ಜ.)
ಸಮಾನತ್ವಸ್ಯಾವಿವಿಕ್ಷಿತತ್ವಾದರ್ಧ ಇತಿ ಪುಲ್ಲಿಂಗನಿರ್ದೇಶಃ । – (ವ.)

೨. ರಾಜಾಽಸಿ ದಕ್ಷಿಣೇ ಕೂಲೇ ಭಾಗೀರಥ್ಯಾ ಅಹಮುತ್ತರೇ ॥ – ಭಾರತ (ಆದಿ. ೧೩೭/೭೦)

ತೀರದಲ್ಲಿ ನಾನೇ ರಾಜ. ಇಬ್ಬರಲ್ಲಿ ಒಬ್ಬನು ರಾಜನಾಗದಿದ್ದರೂ ನಮ್ಮಿಬ್ಬರಿಗೂ ಸಖ್ಯವಾಗದಲ್ಲವೆ!''.

ವಿ: ೧) ದ್ರೋಣರು ತಾವು ಮಾಡಿದ ಆ ಕಾರ್ಯದ ಹಿನ್ನೆಲೆಯನ್ನೆಲ್ಲ ಇಲ್ಲಿ ತಿಳಿಸಿರುವರು. ನನಗೇನೂ ವೈಯಕ್ತಿಕವಾಗಿ ರಾಜ್ಯ ಬೇಕಿರಲಿಲ್ಲ, ಆದರೆ ರಾಜನಲ್ಲದವನೊಂದಿಗೆ ನಿನಗೆ ಗೆಳೆತನ ಸಾಧ್ಯವಿಲ್ಲವೆಂದುದ್ದರಿಂದ ನಾನೀಗ ನಿನ್ನನ್ನು ಸೆರೆ ಹಿಡಿದು ರಾಜ್ಯ ಕಿತ್ತಿಕೊಳ್ಳಬೇಕಾಯಿತು. ಯುದ್ಧ ಬ್ರಾಹ್ಮಣ ಧರ್ಮವಲ್ಲವಾದ್ದರಿಂದ ನನ್ನ ಶಿಷ್ಯರಿಂದ ಸೆರೆ ಹಿಡಿಸಬೇಕಾಯಿತು. ಈಗಲೂ ನಾನು ನಿನ್ನ ಪೂರ್ಣ ರಾಜ್ಯವನ್ನು ತೆಗೆದುಕೊಳ್ಳುತ್ತಿಲ್ಲ. ಹಾಗೆ ಮಾಡಿದಲ್ಲಿ ನಾನು ಮಾತ್ರ ರಾಜನಾಗಿ ನೀನು ರಾಜನಾಗದೇ ಉಳಿಯುವುದರಿಂದ ರಾಜನಾದ ನನ್ನೊಂದಿಗೆ ರಾಜನಲ್ಲದ ನೀನು ಸಖ್ಯ ಒಪ್ಪಿಕೊಳ್ಳುವುದು ಅಸಾಧ್ಯವಾಗುವುದು. ಅದಕ್ಕೆಂದೇ, ನಿನ್ನ ಅರ್ಧ ರಾಜ್ಯವನ್ನು ಮಾತ್ರ ತೆಗೆದುಕೊಂಡು ಉಳಿದರ್ಧವನ್ನು ನಿನಗೇ ನೀಡುವೆನು. ಇದರಿಂದಾಗಿ ನನ್ನ ಸ್ನೇಹ ಶಾಶ್ವತವಾಗಿ ಉಳಿಯುವುದು. ಗಂಗೆಯ ದಕ್ಷಿಣಕ್ಕೆ ನೀನು ರಾಜನಾದರೆ, ಉತ್ತರಕ್ಕೆ ನಾನು ರಾಜನಾಗುವೆ.

೨) ದ್ರೋಣರ ಈ ಮಾತುಗಳಲ್ಲಿ ಅವರು ದ್ರುಪದ ಮಾಡಿದ ಅವಮಾನದಿಂದ ಎಷ್ಟು ನೊಂದಿದ್ದರು ಎಂಬುದು ಸ್ಫುಟಪಡುವುದು. ಅರ್ಧರಾಜ್ಯ ಹಿಂದಿರುಗಿಸುವಲ್ಲಿಯೂ ಅವರು ಅವನ ಧೋರಣೆಯ ಬಗ್ಗೆ ವ್ಯಂಗ್ಯವಾಡಿರುವುದನ್ನು ಗಮನಿಸಬೇಕು. ಅಂತೂ ಶಾಶ್ವತಸ್ನೇಹವನ್ನು ಬಯಸಿ ಮಾಡಿದರೆನ್ನಲಾದ ಕಾರ್ಯ ಅವರಿಬ್ಬರಲ್ಲಿ ಶಾಶ್ವತವೈರಕ್ಕೆ ಕಾರಣವಾಯಿತು ಎಂಬುದು ವಿಧಿವಿಲಾಸ. ಹರಿಸಂಕಲ್ಪವೆಂದರೆ ಇದೇ.

೩) ಗುರುಗಳಾದ ಪರಶುರಾಮರು ದುಷ್ಟಕ್ಷತ್ರಿಯರನ್ನು ಸಂಹರಿಸಿದ್ದರೆ, ಅವರ ಶಿಷ್ಯರಾದ ದ್ರೋಣರು ಸ್ವಭಾವತಃ ಶಿಷ್ಟನಾಗಿದ್ದರೂ ದುಷ್ಟತನ ತೋರಿದ ದ್ರುಪದನನ್ನು ವಿಶಿಷ್ಟ ರೀತಿಯಲ್ಲಿ ಶಾಸನ ಮಾಡಿದರು ಎಂಬುದನ್ನು ಗಮನಿಸಬೇಕು.

ಇತ್ಯುಕ್ತ್ವೋನ್ಮುಚ್ಯ ತಂ ದ್ರೋಣೋ ರಾಜ್ಯಾರ್ಧಂ ಗೃಹ್ಯ ಚಾಮುತಃ ।
ಯಯೌ ಶಿಷ್ಯೈರ್ನಾಗಪುರಂ ನ್ಯವಸತ್ ಸುಖಮತ್ರ ಚ ॥ ೮೭ ॥

ಅ: ಹೀಗೆ ನುಡಿದು ಅವನನ್ನು ಬಿಡುಗಡೆ ಮಾಡಿ ದ್ರೋಣರು ಅವನಿಂದ ಅರ್ಧ ರಾಜ್ಯವನ್ನು ಸ್ವೀಕರಿಸಿ ಶಿಷ್ಯರೊಂದಿಗೆ ಹಸ್ತಿನಾಪುರಕ್ಕೆ ತೆರಳಿದರು; ಅಲ್ಲಿ ಸುಖವಾಗಿ ನೆಲೆಸಿದರು ಸಹ.

ವಿ: ೧) ದ್ರೋಣರು ದ್ರುಪದನಿಗೆ ಅರ್ಧ ರಾಜ್ಯ ನೀಡಿ, ಅರ್ಧ ರಾಜ್ಯದೊಂದಿಗೆ ಹಸ್ತಿನಾ–ಪುರಕ್ಕೆ ಮರಳಿದರು. ಅವಮಾನದ ಬೇಗೆ ಪರಿಹಾರವಾದ್ದರಿಂದ ಸುಖವಾಗಿ ನೆಲೆಸಿದರು ಎಂದರ್ಥ.

೨) ದ್ರೋಣರಿಗೆ ನಿಜವಾಗಿಯೂ ರಾಜ್ಯದ ಆಪೇಕ್ಷೆ ಇರಲಿಲ್ಲವೆಂಬುದಕ್ಕೂ ಇದು ದ್ಯೋತಕ.

ದ್ರೋಣರ ಧರ್ಮದೀಕ್ಷೆ - ಕ್ಷಾತ್ರವೃತ್ತಿಯ ಹಿನ್ನೆಲೆ

ಬ್ರಾಹ್ಮಣ್ಯತ್ಯಾಗಭೀರುಃ ಸನ್ ನಾಗೃಹ್ಣಾತ್ ಧನುರಪ್ಯಸೌ ।
ಧಾರ್ತರಾಷ್ಟ್ರೈಸ್ತು ಭೀಮಸ್ಯ ಭಯಾತ್ ಪಾದೌ ಪ್ರಣಮ್ಯ ಚ ॥ ೮೮ ॥

ಶರಣಾರ್ಥಂ ಯಾಚಿತತ್ವಾತ್ ಸಪುತ್ರೋ ಯಯುಧೇ ಪರೈಃ ।
ಏವಂ ಹರೀಚ್ಛಯೈವಾಸೌ ಕ್ಷಾತ್ರಂ ಧರ್ಮಮುಪೇಯಿವಾನ್ ॥ ೮೯ ॥

ಅ: ಬ್ರಾಹ್ಮಣ್ಯ ತೊರೆದಂತಾಗುವುದು ಎಂಬ ಭಯದಿಂದ ಅವರು ಆಗ ಸ್ವತಃ ಬಿಲ್ಲನ್ನು ಕೈಗೆತ್ತಿಕೊಳ್ಳಲಿಲ್ಲ. ಮುಂದೆ ಧೃತರಾಷ್ಟ್ರಪುತ್ರರು ಭೀಮನ ಭಯದಿಂದಾಗಿ ಪಾದಗಳಿಗೆರಗಿ ರಕ್ಷಣೆಗಾಗಿ ಪ್ರಾರ್ಥಿಸಿದ್ದರಿಂದ ತಮ್ಮ ಮಗನೊಂದಿಗೆ ಪಾಂಡವರೊಂದಿಗೆ ಯುದ್ಧ ಮಾಡಿದರು. ಹೀಗೆ ಶ್ರೀಹರಿಯ ಇಚ್ಛೆಯಿಂದಲೇ ಅವರು ಕ್ಷಾತ್ರಧರ್ಮವನ್ನು ಹಿಡಿದರು.

ವಿ: ೧) ಹೀಗೆ ದ್ರೋಣರು ತಮ್ಮ ಶಿಷ್ಯರಿಂದ ದ್ರುಪದನ ಪರಾಭವ ಕಾರ್ಯವನ್ನು ಮಾಡಿಸಿದ್ದು ತಾವು ಸ್ವತಃ ಧನುಸ್ಸನ್ನು ಹಿಡಿದು ಬ್ರಾಹ್ಮಣ್ಯವನ್ನು ಕಳೆದುಕೊಳ್ಳಬಾರದು ಎಂಬ ಧರ್ಮರಕ್ಷಣೆಯ ಉದ್ದೇಶದಿಂದ ಎಂಬುದನ್ನು ಗಮನಿಸಬೇಕು. ಸ್ವತಃ ಅವಮಾನಗೊಂಡರೂ ಧನುಸ್ಸನ್ನು ಕೈಗೆತ್ತಿಕೊಳ್ಳದ ಅವರು ಮುಂದೆ ಕೌರವರ ಪಕ್ಷದಲ್ಲಿ ಸೇರಿ ಪಾಂಡವರ ವಿರುದ್ಧ ಹೋರಾಡಲು ಕಾರಣವನ್ನು ಇಲ್ಲಿ ತಿಳಿಸಿರುವರು.

೨) ಮುಂದೆ ಎಂದರೆ ಸಭಾಪರ್ವದ ಕೊನೆಯಲ್ಲಿ ತಮ್ಮನ್ನೆಲ್ಲಾ ಕೊಲ್ಲುವ ಭೀಮನ ಶಪಥದಿಂದ ಕಂಗಾಲಾದ ಕೌರವರೆಲ್ಲ ರಕ್ಷಣೆಗಾಗಿ ಪ್ರಾರ್ಥಿಸಿದ್ದರಿಂದ ದ್ರೋಣರು ಬಿಲ್ಲು ಹಿಡಿದು ಕಾದಾಡಿದರೇ ಹೊರತು ತಮ್ಮ ಸ್ವಾರ್ಥಸಾಧನೆಗಾಗಿ ಅಲ್ಲ ಎಂಬುದು ಇಲ್ಲಿಯ ಭಾವ.

೩) ಇದಕ್ಕೆಲ್ಲ ಮುಖ್ಯ ಕಾರಣವಾದದ್ದು ಶ್ರೀಹರಿಯ ಇಚ್ಛೆ. ಅವರು ಹಾಗೆ ಬಿಲ್ಲು ಹಿಡಿಯುವ ಮೂಲಕ ಪಾಂಡವ ಸೈನ್ಯದ ವೀರರನ್ನು ಸಂಹರಿಸಿ ಭೂಭಾರಹರಣ ಕಾರ್ಯದಲ್ಲಿ ತಮಗೆ ಸೇವೆ ಸಲ್ಲಿಸಲಿ ಎಂದೇ ಪರಶುರಾಮರೂಪದಿಂದ ಅವರಿಗೆ ಧನುರ್ವಿದ್ಯೆಯನ್ನು ಉಪದೇಶಿಸಿದ್ದ (೧೫/೧೨).

೪) ಪಾಂಡವರೊಂದಿಗೆ ಅವರಿಗೆ ವೈಯಕ್ತಿಕ ದ್ವೇಷವಿರಲಿಲ್ಲ; ಬದಲಾಗಿ ಅಪಾರ ಪ್ರೀತಿಯೇ ಇದ್ದಿತು ಎಂಬುದು ಉದ್ದಕ್ಕೂ ಕಾಣುವ ವಿಚಾರ.

ದ್ರುಪದ ಮಾಡಿದ ಯಜ್ಞ

ದ್ರುಪದಸ್ತು ದಿವಾರಾತ್ರಂ ತಪ್ಯಮಾನಃ ಪರಾಭವಾತ್ ।
ಭೀಮಾರ್ಜುನಬಲಂ ದೃಷ್ಟ್ವಾ ಚೈಚ್ಛತ್ ಪಾಂಡವಸಂಶ್ರಯಮ್ ॥ ೯೦ ॥

ಅ: ದ್ರುಪದನಾದರೂ ಹಗಲೂ, ರಾತ್ರಿ ಸೋಲಿನಿಂದಾಗಿ ಪರಿತಪಿಸುತ್ತಾ ಭೀಮಾರ್ಜುನರ ಬಲವನ್ನು ನೋಡಿ ಪಾಂಡವರನ್ನು ಆಶ್ರಯಿಸಲು ಬಯಸಿದ.

ಸಂಬಂಧೀತ್ಯರ್ಜುನವಚಶ್ಚಿಕೀರ್ಷುಃ ಸತ್ಯಮೇವ ಚ ।
ಮಾರ್ದವಂ ಚಾರ್ಜುನೇ ದೃಷ್ಟ್ವಾ ಸುತಾಮೈಚ್ಛತ್ ತದರ್ಥತಃ ॥ ೯೧ ॥

ಅ: ಸಂಬಂಧಿಯೆಂಬ ಅರ್ಜುನನ ಮಾತನ್ನು ಸತ್ಯಮಾಡಲು ಸಹ ಬಯಸಿದ; ಹಾಗೂ ಅರ್ಜುನನಲ್ಲಿನ ಮೃದು ಸ್ವಭಾವವನ್ನು ಕಂಡು ಅವನಿಗೆ ನೀಡಲೆಂದು ಒಬ್ಬ ಮಗಳನ್ನು ಪಡೆಯಲು ಬಯಸಿದ.

ಪುತ್ರಂ ಚ ದ್ರೋಣಹಂತಾರಮಿಚ್ಛನ್ ವಿಪ್ರವರ್ಗೌ ಯಯೌ ।
ಯಾಜೋಪಯಾಜಾವಾನೀಯಾರ್ಥಾರ್ಬುದೇನ ಗವಾಂ ನೃಪಃ ॥ ೯೨ ॥

ಅ: ದ್ರೋಣರನ್ನು ಕೊಲ್ಲುವಂತಹ ಮಗನೊಬ್ಬನನ್ನು ಸಹ ಪಡೆಯಬಯಸಿ ಯಾಜೋಪಯಾಜರು ಎಂಬ ವಿಪ್ರಶ್ರೇಷ್ಠರ ಬಳಿಗೆ ತೆರಳಿದ; ಹತ್ತು ಕೋಟಿ ಗೋವುಗಳನ್ನು ನೀಡಿ ಅವರನ್ನು ಕರೆತಂದ.

ವಿ: ೧) ದ್ರುಪದ ತಾನು ಮಾಡಿದ ಅವಮಾನಕ್ಕೆ ದ್ರೋಣರು ತಕ್ಕ ಶಾಸ್ತಿ ಮಾಡಿದರು ಎಂಬ ತಥ್ಯವನ್ನು ಅರ್ಥಮಾಡಿಕೊಳ್ಳುವ ಬದಲು, ಅವರು ತನ್ನನ್ನು ಅವಮಾನಿಸಿದರು ಎಂದಷ್ಟೇ ಭಾವಿಸಿ ಅದಕ್ಕೆ ಪ್ರತೀಕಾರ ತೀರಿಸಲು ಸಂಕಲ್ಪಿಸಿದ. ಅದಕ್ಕಾಗಿ ಅವರನ್ನು ಕೊಲ್ಲುವಂತಹ ಮಗನೊಬ್ಬ–ನನ್ನು ಪಡೆಯುವ ತೀರ್ಮಾನಕ್ಕೆ ಬಂದ. ಅದರಂತೆ ಅರ್ಜುನನು ನುಡಿದಂತಹ 'ಸಂಬಂಧಿ' ಎಂಬ ಮಾತಿನಿಂದ ಆಕರ್ಷಿತನಾಗಿ ಅವನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳಲು ತೀರ್ಮಾನಿಸಿ ಅವನಿಗೆ ಕೊಡಲೆಂದು ಒಬ್ಬ ಮಗಳನ್ನೂ ಸಹ ಪಡೆಯಲು ಬಯಸಿದ.

---

೧. 'ಯಾಜೋಪಯಾಜಾವಾನೀಯಾರ್ಥಾರ್ಬುದೇನ ಗವಾಂ ನೃಪಃ । ಚಕಾರೇಷ್ಟಿಂ ಚೇ'ತ್ಯತ್ರ ನೃಪೋ ದ್ರುಪದಃ । ತಯೋಃ ಗವಾಂ ಅರ್ಬುದೇನಾರ್ಬುದಸಂಖ್ಯಾಕಗೋಪ್ರದಾನೇನ ಯಾಜೋಪಯಾಜಾವಾನೀಯೇಷ್ಟಿಂ ಪುತ್ರಕಾಮೇಷ್ಟಿಂ ಚಕಾರೇತಿ । – (ರಾ.)

೨. ಅರ್ಬುದೇನೇತಿ ಗವಾಮರ್ಬುದದಾನೇನ ತೋಷಯಿತ್ವೇತ್ಯರ್ಥಃ । – (ತಾ.)

೨) ಇದೊಂದು ವಿಶಿಷ್ಟ ಪ್ರಸಂಗ. ಮಗಳೇ ಇಲ್ಲದ ದ್ರುಪದ ರಾಜ ಅರ್ಜುನನನ್ನು ಅಳಿಯನೆಂದು ತೀರ್ಮಾನಿಸಿ ಅನಂತರ ಮಗಳನ್ನು ಪಡೆದ ವಿಚಿತ್ರ ಕಥೆ. ದೈವಸಂಕಲ್ಪದ ಮತ್ತೊಂದು ಅಪೂರ್ವ ಮುಖವನ್ನು ತೆರೆದಿಡುವ ವಿಚಿತ್ರಪ್ರಸಂಗ. ಅಂತಹ ಸಂಕಲ್ಪ ಈಡೇರಲು ಸಾಮಾನ್ಯ ಸಾಧನಗಳಿಂದ ಅಸಾಧ್ಯವೆಂದು ಬಗೆದು ಯಜ್ಞವೊಂದನ್ನು ಹಮ್ಮಿಕೊಂಡ.

೩) ಅಂತಹ ಯಜ್ಞವೂ ಸಹ ಸಾಮಾನ್ಯ ಪುರೋಹಿತರಿಂದ ನಡೆದಲ್ಲಿ ಸಫಲವಾಗದು ಎಂದು ಭಾವಿಸಿ ಆ ಕಾಲದ ಅತ್ಯಂತ ಪ್ರತಿಷ್ಠಿತ ಪುರೋಹಿತರೆನ್ನಿಸಿದ್ದ ಯಾಜೋಪಯಾಜರಲ್ಲಿಗೆ ತೆರಳಿದ. ಅವರು ಇವನ ಪ್ರಾರ್ಥನೆಗೆ ಅಷ್ಟಾಗಿ ಗಮನ ಹರಿಸದಿರಲು, ಕೊನೆಗೆ ಹತ್ತು ಕೋಟಿ ಗೋವುಗಳನ್ನು ಕೊಡುವ ವಚನವಿತ್ತು ಅವರನ್ನು ಒಪ್ಪಿಸಿದ.

೪) ಅಂತಹ ಗೋವುಗಳಿಂದ ತಮ್ಮ ಯಜ್ಞಕಾರ್ಯ ಇನ್ನೂ ವೈಭವದಿಂದ ಸಾಗುವುದು ಎಂಬ ಸದ್ವಿಚಾರದಿಂದ ಅವರಿಬ್ಬರೂ ಸಮ್ಮತಿಸಿ ಗಂಗಾತೀರದಲ್ಲಿ ಯಜ್ಞವೊಂದನ್ನು ಮಾಡಿಸಿದರು. ಸಾಂಗವಾಗಿ ಯಜ್ಞ ಪೂರೈಸಿದ ಮೇಲೆ ಸಂತತಿ ನೀಡಬಲ್ಲ ಹವಿಶ್ಶೇಷವನ್ನು ಸ್ವೀಕರಿಸಲೆಂದು ಅವನ ಪತ್ನಿಯನ್ನು ಆಹ್ವಾನಿಸಿದರು. ಅವಳು ಆಗ ಅಲಂಕಾರ ಕಾರ್ಯದಲ್ಲಿ ತೊಡಗಿದ್ದಳು. ಅದನ್ನು ನೆಪ ಮಾಡಿ ಅಹಂಕಾರದಿಂದ ಆಗಮಿಸಲು ಸ್ವಲ್ಪ ವಿಳಂಬಿಸಿದಳು.

ಚಕಾರೇಷ್ಟಿಂ ತು ತದ್ಭಾರ್ಯಾ ದ್ವಿಜಾಭ್ಯಾಮತ್ರ ಚಾಹುತಾ ।
ದ್ರುಪದಾತ್ ಸುತಲಬ್ಧ್ಯರ್ಥಂ ಸಾऽಹಂಕಾರಾದ್ವ್ಯಲಂಬಯತ್ ॥ ೯೩ ॥

ಅ: ದ್ರುಪದ ಯಜ್ಞ ಮಾಡಿದ. 'ದ್ರುಪದನಿಂದ ಪುತ್ರನನ್ನು ಪಡೆಯಲಿ' ಎಂದು ಅವನ ಹೆಂಡತಿಯನ್ನು ಕರೆದಾಗ ಅವಳು ಅಹಂಕಾರದಿಂದ ತಡಮಾಡಿದಳು.

ವಿ: ಅವಳು ಹಾಗೆ ವಿಳಂಬ ಮಾಡಿದ್ದು ಅಲಂಕಾರ ಇನ್ನೂ ಪೂರೈಸಿಲ್ಲ ಎಂಬ ನೆಪದಿಂದ. ವಸ್ತುಸ್ಥಿತಿ ಅದಾಗಿರದೇ ದುರಹಂಕಾರದ ಪ್ರದರ್ಶನವೇ ಮುಖ್ಯವಾಗಿತ್ತು. ಶಾಸ್ತ್ರ ನಿಷೇಧಿಸುವುದು ಅಹಂಕಾರವನ್ನೇ ಹೊರತು ಅಲಂಕಾರವನ್ನಲ್ಲ.

ಕಿಮೇತಯೇತ್ಯವಜ್ಞಾಯ ತಾವುಭೌ ವಿಪ್ರಸತ್ತಮೌ ।
ಅಜುಹ್ವತಾಂ ತತ್ಪುತ್ರಾರ್ಥಂ ಪತ್ನ್ಯಾ ಪ್ರಾಶ್ಯಂ ಹವಿಸ್ತದಾ ॥ ೯೪ ॥

ಅ: ಇವಳಿಂದೇನು ಎಂದು ಕಡೆಗಣಿಸಿ ಆ ಇಬ್ಬರು ವಿಪ್ರೋತ್ತಮರು ಸಂತಾನ ಪ್ರಾಪ್ತಿಗಾಗಿ ಅವಳು ಸೇವಿಸಬೇಕಿದ್ದ ಹವಿಸ್ಸನ್ನು ಅಗ್ನಿಯಲ್ಲಿ ಹೋಮಿಸಿಬಿಟ್ಟರು.

---

೧. ಅಹಂಕಾರಾದಿತಿ । ಇಷ್ಟೌ ಕೃತಾಯಾಮಪಿ ಮದಪೇಕ್ಷಾऽಸ್ತೀತ್ಯಹಂಕಾರಾದಿತ್ಯರ್ಥಃ । ಗವಾಮರ್ಬುದಸ್ಯ ದಕ್ಷಿಣಾತ್ವೇನ ದತ್ತಾದಹಂಕಾರ ಇತ್ಯಾಹುಃ । - (ತಾ.)

ವಿಃ ಯಾಜೋಪಯಾಜರು ಅಪೂರ್ವ ಸಿದ್ಧಿ ಪಡೆದಿದ್ದ ಮಹಾತಪಸ್ವಿಗಳು. ಅವಳ ಅಹಂಕಾರವನ್ನರಿತ ಅವರು ಅದಕ್ಕೆ ತಕ್ಕ ಶಾಸ್ತಿ ಮಾಡಲೆಂದು ಅವಳು ಸೇಮಿಸಬೇಕಿದ್ದ ಹವಿಸ್ಸನ್ನು ಅಗ್ನಿಯಲ್ಲಿಯೇ ಹೋಮಿಸಿಬಿಟ್ಟರು. ಇದು ಅವರಿಗೆ ತಮ್ಮ ಸಿದ್ಧಿಯ ಮೇಲಿದ್ದ ಅಗಾಧ ವಿಶ್ವಾಸಕ್ಕೂ ದ್ಯೋತಕ.

ಧೃಷ್ಟದ್ಯುಮ್ನನ ಜನನ

ಹುತೇ ಹವಿಷಿ ಮಂತ್ರಾಭ್ಯಾಂ ವೈಷ್ಣವಾಭ್ಯಾಂ ತದೈವ ಹಿ ।
ದೀಪ್ತಾಂಗಾರನಿಭೋ ವಹ್ನಿಃ ಕುಂಡಮಧ್ಯಾತ್ ಸಮುತ್ಥಿತಃ ॥ ೯೫ ॥

ಅ: ಎರಡು ವೈಷ್ಣವ ಮಂತ್ರಗಳಿಂದ ಆ ಹವಿಸ್ಸನ್ನು ಹೋಮಿಸುತ್ತಿದ್ದಂತೆಯೇ ಹೊಳೆಯುವ ಕೆಂಡದಂತಹ ಕಾಂತಿಯ ಅಗ್ನಿ ಕುಂಡಮಧ್ಯದಿಂದ ಮೇಲೆದ್ದು ಬಂದನು.

ವಿಃ ೧) ದ್ರುಪದನ ಬಯಕೆಯಂತೆ ಒಬ್ಬ ಪುತ್ರ ಹಾಗೂ ಒಬ್ಬ ಪುತ್ರಿ ಇಬ್ಬರ ಉತ್ಪತ್ತಿಗೆಂದು ಅವರು ಎರಡು ವೈಷ್ಣವ ಮಂತ್ರಗಳಿಂದ ಆ ಹವಿಶ್ಶೇಷವನ್ನು ಅಗ್ನಿಕುಂಡದಲ್ಲಿ ಹಾಕುತ್ತಿದ್ದಂತೆಯೇ ಆಶ್ಚರ್ಯ ನಡೆಯಿತು.

೨) ಮೊದಲಿಗೆ ಸ್ವತಃ ಅಗ್ನಿಯೇ ಆ ಕುಂಡದ ಮಧ್ಯದಿಂದ ಅವತರಿಸಿ ಬಂದ ಎಂದರ್ಥ. ದ್ರುಪದನಿಗೆ ದ್ರೋಣರ ಮೇಲಿದ್ದ ಕ್ರೋಧಾಗ್ನಿಯ ಸಂಕೇತದಂತೆ ಸ್ವತಃ ಅಗ್ನಿಯೇ ಅವತರಿಸಿ ಬಂದಿದ್ದು ಅಲ್ಲಿಯ ವಿಶೇಷವಾಯಿತು.

೩) ಕುಂಡದ ವಿಸ್ತಾರ ೨೪ ಅಂಗುಲದಷ್ಟು ಚಿಕ್ಕದಾದರೂ, ಧೃಷ್ಟದ್ಯುಮ್ನ ಅಣಿಮಾದ್ಯಷ್ಟಸಿದ್ಧಿಗಳಿಂದ ಕೂಡಿದ ಯೋಗಿಯಾದ್ದರಿಂದ ಹಾಗೆ ಅವತರಿಸಲು [೧]ಸಾಧ್ಯವಾಯಿತು ಎಂದರ್ಥ.

ಕಿರೀಟೀ ಕುಂಡಲೀ ದೀಪ್ತೋ ಹೇಮಮಾಲೀ ವರಾಸಿಮಾನ್ ।
ರಥೇನಾದಿತ್ಯವರ್ಣೇನ ನದನ್ ದ್ರುಪದಮಭ್ಯಯಾತ್ ॥ ೯೬ ॥

ಅ: ಅವನು ಕಿರೀಟ ಧರಿಸಿದ್ದ, ಕುಂಡಲಗಳನ್ನು ತೊಟ್ಟಿದ್ದ, ಚಿನ್ನದ ಹಾರಗಳನ್ನು ಧರಿಸಿ ಕಂಗೊಳಿಸುತ್ತಿದ್ದ, ಶ್ರೇಷ್ಠವಾದ ಖಡ್ಗವೊಂದನ್ನು ಕೈಯಲ್ಲಿ ಹಿಡಿದಿದ್ದ. ಸೂರ್ಯನಂತೆ ಹೊಳೆಯುವ ರಥದೊಂದಿಗೆ ಸಿಂಹನಾದ ಮಾಡುತ್ತಾ ದ್ರುಪದನ ಬಳಿಗೆ ಬಂದ.

---

೧. ನನು ಚತುರ್ವಿಂಶಾಂಗುಲಂ ವಾ ತದ್ವಿಸ್ತಾರೋ ದ್ವಾದಶೋ ನ ವೇತಿ ಕಂಠಪರಿಮಾಣಸ್ಯಾಲ್ಪತ್ವಾತ್ ಕಥಂ ಧೃಷ್ಟದ್ಯುಮ್ನಸ್ಯ ರಥೇನ ಸಕುಂಡಮಧ್ಯಾದಾಗಮನಮಿತಿ ಚೇತ್ ಸತ್ಯಮ್ । ಅಣಿಮಾದ್ಯೈಶ್ವರ್ಯಯೋಗಾತ್ ಸಂಭವತೀತಿ ಸೂಚನಾಯ ಹಿಶಬ್ದಃ । ದ್ವಿತೀಯಹಿಶಬ್ದೇನ ದ್ರೌಪದ್ಯಾಃ ದ್ವ್ಯಂಗುಲತ್ರ್ಯಂಗುಲಪರಿಮಿತ-ವೇದಿಮಧ್ಯಾದಾಗಮನಮಪಿ ಅಣಿಮಾದಿಯೋಗಾದಿತಿ ಜ್ಞಾಯತೇ ॥ – (ರಾ.)

ವಿ: ಸ್ವತಃ ಅಗ್ನಿಯೇ ಅವತರಿಸಿದ್ದರಿಂದ ಅವನು ಅಗ್ನಿಯಂತೆಯೇ ಹೊಳೆಯುತ್ತಿದ್ದ. ತಲೆಯ ಮೇಲೆ ಕಿರೀಟ, ಕಿವಿಗಳಲ್ಲಿ ಕುಂಡಲ, ಕೊರಳಲ್ಲಿ ಚಿನ್ನದ ಹಾರಗಳು, ಕೈಯಲ್ಲಿ ಶ್ರೇಷ್ಠವಾದ ಖಡ್ಗ, ಜೊತೆಗೆ ರಥ – ಹೀಗೆ ಧೃಷ್ಟದ್ಯುಮ್ನ ಅವತರಿಸಿದ.

ಧೃಷ್ಟತ್ವಾತ್[೧] ದ್ಯೋತನತ್ವಾಚ್ಚ ಧೃಷ್ಟದ್ಯುಮ್ನ ಇತೀರಿತಃ ।
ಮುನಿಭಿರ್ದ್ರುಪದೇನಾಪಿ ಸರ್ವವೇದಾರ್ಥತತ್ತ್ವವಿತ್ ॥ ೯೭ ॥

ಅ: ದಿಟ್ಟತನದೊಂದಿಗೆ ಕಾಂತಿಯುಕ್ತನೂ ಆಗಿದ್ದರಿಂದ ಅವನು ಮುನಿಗಳಿಂದಲೂ, ದ್ರುಪದನಿಂದಲೂ ಧೃಷ್ಟದ್ಯುಮ್ನ ಎಂದೇ ಕರೆಯಲ್ಪಟ್ಟ. ಅವನು ಸಕಲ ವೇದಾರ್ಥಗಳ ತತ್ವವನ್ನು ಬಲ್ಲವನಾಗಿದ್ದ.

ವಿ: ಅವನಿಗೆ ಧೃಷ್ಟದ್ಯುಮ್ನ ಎಂಬ ಹೆಸರಾಗಲು ಕಾರಣವನ್ನು ಇಲ್ಲಿ ತಿಳಿಸಿರುವರು. ಕ್ಷತ್ರಿಯೋಚಿತವಾದ ದಿಟ್ಟತನ ಹಾಗೂ ಕ್ಷಾತ್ರತೇಜಸ್ಸಿನ ಸಂಕೇತವಾದ ವಿಶಿಷ್ಟಕಾಂತಿ ಅವನಲ್ಲಿ ತುಂಬಿದ್ದರಿಂದ ಧೃಷ್ಟದ್ಯುಮ್ನ ಎಂಬ ಹೆಸರು ಅವನಿಗೆ ಸಾರ್ಥಕವಾಯಿತು. ರಾಮಾಯಣದಲ್ಲಿ ನೀಲ ಎಂಬ ಕಪಿಯಾಗಿ ಅವತರಿಸಿದ್ದ ಅಗ್ನಿ ಇಲ್ಲಿ ಧೃಷ್ಟದ್ಯುಮ್ನನಾಗಿ ದ್ರುಪದಪುತ್ರನೆನ್ನಿಸಿದ.

ದ್ರೌಪದಿಯ ಅವತಾರ

ಅನ್ವೇನಂ ಭಾರತೀ ಸಾಕ್ಷಾದ್ವೇದಿಮಧ್ಯಾತ್[೨] ಸಮುತ್ಥಿತಾ ।
ಪ್ರಾಣೋ ಹಿ ಭರತೋ[೩] ನಾಮ ಸರ್ವಸ್ಯ ಭರಣಾಚ್ಛ್ರುತಃ ॥ ೯೮ ॥

ತದ್ಭಾರ್ಯಾ ಭಾರತೀ ನಾಮ ವೇದರೂಪಾ ಸರಸ್ವತೀ[೪] ।
ಶಂರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವ ಚ ಕೀರ್ತಿತಾ ॥ ೯೯ ॥

ಅ: ಅವನನ್ನು ಅನುಸರಿಸಿ ಸಾಕ್ಷಾತ್ ಭಾರತೀದೇವಿಯು ಯಜ್ಞವೇದಿಯ ಮಧ್ಯದಿಂದ ಮೇಲೆದ್ದು ಬಂದಳು. ಸರ್ವವನ್ನೂ ಧರಿಸಿರುವುದರಿಂದ ವಾಯುದೇವರಿಗೆ ಭರತ ಎಂದು ಹೆಸರು ಶ್ರುತಿಯಲ್ಲಿದೆ. ಅವನ ಪತ್ನಿಯಾದ್ದರಿಂದ ಅವಳಿಗೆ ಭಾರತಿ ಎಂದು ಹೆಸರು.

---

೧. ಧೃಷ್ಟತ್ವಾದ್ಧಾರ್ಷ್ಟ್ಯತ್ವಾತ್ ಧೃಷ್ಟಃ ದ್ಯೋತನತ್ವಾತ್ ಪ್ರಕಾಶಮಾನತ್ವಾತ್ ದ್ಯುಮ್ನಃ । – (ಜ.)

೨. ಕುಮಾರೀ ಚಾಪಿ ಪಾಂಚಾಲೀ ವೇದಿಮಧ್ಯಾತ್ಸಮುತ್ಥಿತಾ । – ಇತಿ ಭಾರತೇ (ಆದಿ. ೧೬೨/೪೪)

೩. ರತತ್ವಾತ್ ಭಾತ್ಯಕೇ ವಿಷ್ಣಾವಥವಾ ಽಪಿ ಜಗದ್ಭೃತೇಃ ।
ಭರತೋ ವಾಯುರುದ್ದಿಷ್ಟೋ ಭಾರತೀ ತತ್ಸರಸ್ವತೀ ॥ - ಇತಿ ಭಾ. ತಾ. (೧೦/೯೪/೨೦)

ವೇದಾಬಿಮಾನಿನಿಯಾದ್ದರಿಂದ ಅವಳು ಸರಸ್ವತಿ. ಸುಖಸ್ವರೂಪರಾದ ವಾಯುದೇವರನ್ನು ಆಶ್ರಯಿಸಿರುವುದರಿಂದ ಶ್ರೀ ಎಂದೂ ಅವಳಿಗೆ ಪ್ರಸಿದ್ಧಿ.

ವಿ: ೧) ಧೃಷ್ಟದ್ಯುಮ್ನ ಹುಟ್ಟಿದ ಅನಂತರ ಮತ್ತೊಂದು ಆಶ್ಚರ್ಯ ನಡೆಯಿತು. ಅದೇ ಯಜ್ಞವೇದಿಯ ಮಧ್ಯದಿಂದ ಅಪ್ರತಿಮ ಸುಂದರಿಯೊಬ್ಬಳು ಪ್ರಾದುರ್ಭವಿಸಿದಳು. ಸಾಕ್ಷಾತ್ ಭಾರತಿಯೇ ಹಾಗೆ ಅವತರಿಸಿದಳು. ಭರತ ಎಂದರೆ ವಾಯು ಎಂದರ್ಥ. ವಿಶ್ವವನ್ನೇ ಧರಿಸಿರುವುದರಿಂದ ಅವರಿಗೆ ಆ ಹೆಸರು, ಭೂಮಿಯನ್ನು ಹೊತ್ತ ಶೇಷದೇವರನ್ನು ಕೂರ್ಮರೂಪದಿಂದ ಧರಿಸಿರುವವರೂ ಅವರೇ. ಅದಕ್ಕೇ ಭಾರತಿ ಎಂದು ಅವರ ಪತ್ನಿಯ ಹೆಸರು. ಸರಸ್ವತಿ ಎಂಬುದು ಅವರ ಇನ್ನೊಂದು ಹೆಸರು. ಭಾರತದಲ್ಲಿ ಅಲ್ಲಿ ಅವತರಿಸಿದ್ದು ಶ್ರೀ ಎಂದು ಉಲ್ಲೇಖವಿದೆ. ಅದಕ್ಕೆ ಭಾರತಿಯೆಂಬ ಅರ್ಥವನ್ನೇ ಆಚಾರ್ಯರು ಇಲ್ಲಿ ನಿರುಕ್ತಿಯ ಮೂಲಕ ತಿಳಿಸಿರುವರು. 'ಶಂ ಶ್ರಿತಾ ಶ್ರೀಃ' – ಎಂದರೆ ಸುಖಸ್ವರೂಪಿಯಾದ ವಾಯುದೇವರನ್ನು ಆಶ್ರಯಿಸಿದವಳು ಎಂದರ್ಥ (೨/೧೨೬).

೨) ಹೀಗೆ ಪವಿತ್ರವಾದ ಯಜ್ಞವೇದಿಯ ಅಗ್ನಿಯ ಮಧ್ಯದಿಂದಲೇ ಅವತರಿಸುವ ಮೂಲಕ ದ್ರೌಪದಿ ತಾನು ಅತ್ಯಂತ ಪವಿತ್ರಳು ಎಂಬುದನ್ನು ಜಗತ್ತಿಗೆ ಸಾರಿದಳು ಎಂದೂ ತಿಳಿಯಬೇಕು. ಅಗ್ನಿಯೊಳಗಿಂದ ಬಂದದ್ದೇ ಶುದ್ಧ, ಯಜ್ಞಾಗ್ನಿಯಂತೂ ಅತ್ಯಂತ ಪವಿತ್ರ. ಅದರ ಮಧ್ಯದಿಂದ ಪ್ರಾದುರ್ಭವಿಸಿದ ದ್ರೌಪದಿ ಪರಮ ಪವಿತ್ರಳು ಎಂಬುದು ಕೈಮುತ್ಯಸಿದ್ಧ. ಪವನಪತ್ನಿಯಾದ ಆಕೆ

---

೪. ಇದಮುಕ್ತಂ ಭವತಿ । ಸರಃಶಬ್ದಸ್ತಾವತ್ ಸರ್ವಗತಸರ್ವಜ್ಞಬಲಪೂರ್ಣಪರಮಸುಖಭಗವದ್ವಾಚಕಃ । ತಾದೃಶ ಹರಿವಾಚಕತ್ವೇನ ಭಾರತೀಸರಸ್ವತೀಶಬ್ದೇನೋಚ್ಯತೇ । ವಾಚಕತ್ವಂ ಚ ವೇದಾಭಿಮಾನಿತ್ವೇನೇತಿ । ತದುಕ್ತಂ ಋಗ್ಭಾಷ್ಯೇ (೧/೩/೧೫೨)–

> ಸರಣಾತ್ ಸರ್ವಗತ್ವೇನ ಸರ್ವಜ್ಞೋ ವಾ ಸರೋ ಹರಿಃ ।
> ಸರಸಃ ಸರತಿತ್ವಾದ್ ವಾ ತದ್ವತ್ಕೈವ ಸರಸ್ವತೀ ।
> ಹರೌ ಗುಣಾಃ ಸರಃಶಬ್ದಾ ದೇವೀ ತು ಹರಿವಾಚಿನೀ ॥ ಇತಿ । – (ತಾ.)

೫. ಇದಾನೀಂ ಪಂಚದ್ರೌಪದೀಸ್ವರೂಪಂ ನಿರೂಪಯಿತುಮಾರಭತೇ । ಶಂರೂಪಮಾಶ್ರಿತಾ ವಾಯುಮಿತ್ಯಾದಿನಾ । ಶಕಾರಸ್ಯಾವೃತ್ಯಾ ಶಂ ಸುಖರೂಪಂ ವಾಯುಂ ಶ್ರಿತಾ ಶ್ರೀರಿತ್ಯರ್ಥಃ। ಯದ್ವಾ ಶಂರೂಪೇಣ ವಾಯುನಾ ರಮತ ಇತಿ ಶ್ರೀಃ । ಆಶ್ರಿತೇತಿ ತು ಫಲಿತಕಥನಮ್ ॥ – (ವಾ.)

ವಾಯೋಃ, 'ಅಜ್ಞಾನಂ ತು ಚತುರ್ವಾರಂ ದ್ವಿವಾರಂ ಭಯಮೇವ ಚ । ಶೋಕೋಽಪಿ ತಾವಾನ್' ಇತ್ಯುಕ್ತ ದುಃಖೇನಾಪ್ಯಸಂಪೀಡಿತತ್ವೇನ ಸರ್ವದಾ ಸ್ವರೂಪಸುಖಾವಿರ್ಭಾವೇನ ಚ ಶಂರೂಪತ್ವಂ ಬೋಧ್ಯಮ್ ॥ – (ತಾ.)

೫. 'ಮುಕ್ತಾನಾಂ ಪಾಂಡವಾನಾಂ ಚ ಅಂತರಂ ಕಿಂಚಿದೇವ ಹಿ' ಇತ್ಯುಕ್ತೈರಿಂದ್ರಾದೀನಾಮಪಿ ಶಂರೂಪತ್ವಾದಿತಿ ಭಾವಃ । – (ತಾ.)

ಪಾವನೆಯಾಗಿರುವು ಸಹಜವೇ ಆಗಿದೆ. ಯಜ್ಞ ಸರ್ವಸತ್ಕರ್ಮಗಳ ಸಂಕೇತ (**'ಯಜ್ಞಾರ್ಥಾತ್ ಕರ್ಮಣೋಽನ್ಯತ್ರ'**). ಯಜ್ಞದಿಂದ ದ್ರೌಪದಿಯ ಪ್ರಾದುರ್ಭಾವ ಎಂದರೆ ಸತ್ಕರ್ಮಗಳನ್ನು ನಿಷ್ಕಾಮನೆಯಿಂದ ಕೃಷ್ಣಾರ್ಪಣ ಬುದ್ಧಿಯಿಂದ ಆಚರಿಸಿದಾಗ ಸದ್ವಿದ್ಯಾಪ್ರಾಪ್ತಿ ಎಂದರ್ಥ (**'ಕರ್ಮಣಾ ಜ್ಞಾನಮಾತನೋತಿ'**). ವಿದ್ಯಾಭಿಮಾನಿನಿಯಾದ ದ್ರೌಪದಿ ಸತ್ಕರ್ಮಾನುಷ್ಠಾನದ ಫಲವಾಗಿ ಅನುಗ್ರಹಿಸಿ ಜ್ಞಾನಪ್ರಾಪ್ತಿಗೆ ಕಾರಣಳಾಗುವಳು ಎಂದಾಗುವುದು.

೩) ಸೀತಾದೇವಿ ಅವತರಿಸಿದ್ದೂ ಸಹ ಯಜ್ಞಭೂಮಿಯಿಂದ. ಯಜ್ಞಭೂಮಿಯಿಂದ ಪ್ರಾದುರ್ಭವಿಸಿದ ಅವರು ಸರ್ವೋತ್ತಮನ ಪತ್ನಿ, ಯಜ್ಞವೇದಿಯಿಂದ ಪ್ರಾದುರ್ಭವಿಸಿದ ದ್ರೌಪದಿ ಜೀವೋತ್ತಮನ ಪತ್ನಿ. ಆಕೆಯ ಕಥೆ ರಾಮಾಯಣವಾದರೆ, ಈಕೆಯ ಕಥೆ ಮಹಾಭಾರತವಾಯಿತು. ಸೀತೆ ಸತ್ಸಂಪತ್ತಿಗೆ ಅಭಿಮಾನಿದೇವತೆಯಾದ ಮಹಾಲಕ್ಷ್ಮಿ, ದ್ರೌಪದಿ ಸದ್ವಿದ್ಯೆಗೆ ಅಭಿಮಾನಿ ದೇವತೆಯಾದ ಭಾರತಿ ಎಂಬುದನ್ನೂ ಗಮನಿಸಬೇಕು. ಇಬ್ಬರ ಕಲ್ಯಾಣವೂ ಸ್ವಯಂವರದ ಹಿನ್ನೆಲೆಯಲ್ಲೇ ಆದದ್ದು ಮತ್ತೊಂದು ವಿಶೇಷ.

ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ ।
ತಾಶ್ಚೇಂದ್ರಧರ್ಮನಾಸತ್ಯಸಂಶ್ರಯಾಚ್ಛ್ರಿಯ ಈರಿತಾಃ ॥ ೧೦೦ ॥

ಅ: ಶಚಿಯ, ಶ್ಯಾಮಲೆಯ ಹಾಗೂ ಉಷಾದೇವಿಯರ ಆವೇಶದಿಂದಲೂ ಅವಳು ಕೂಡಿದ್ದಳು. ಇಂದ್ರ, ಧರ್ಮ, ಅಶ್ವಿನೀದೇವತೆಗಳನ್ನು ಆಶ್ರಯಿಸಿದ್ದರಿಂದಾಗಿ ಅವರಿಗೂ 'ಶ್ರೀ' ಎಂದು ಹೆಸರು.

ವಿ: ಶ್ರೀ ಎಂಬ ಹೆಸರು ಭಾರತಿಗೆ ಅನ್ವಯಿಸುವಂತೆ ಶಚಿ ಮೊದಲಾದ ಇತರರಿಗೂ ಅನ್ವಯಿಸುವುದು ಎಂದರ್ಥ. ಹೀಗೆ ಶ್ರೀ ಅವತರಿಸಿದಳು ಎಂಬ ಮಾತಿಗೆ ಭಾರತಿ ಹಾಗೂ ಅವಳೊಂದಿಗೆ ಶಚೀ, ಶ್ಯಾಮಲಾ, ಉಷಾದೇವಿಯರೂ ಅವರ ದೇಹದಲ್ಲಿಯೇ ಸೇರಿ ಅವತರಿಸಿದರು ಎಂದರ್ಥ.

---

೧. ಶಚೀಶ್ಯಾಮಳೋಷಸ್ಸು ತು ಶ್ರಿತತ್ವಾಚ್ಛ್ರಿಯಃ। ಇಂದ್ರಧರ್ಮನಾಸತ್ಯಾನಾಂ ತು ಯೋಗ್ಯತಯಾ ಸಂಬಂಧಃ। ಸಂಸಾರೇಽಪಿ ವಾಯೋಃ ಸರ್ವದಾ ವೃತ್ತಿರೂಪಸುಖಾನುಭವಿತೃತ್ವಾತ್ ಶಂರೂಪಂ ವಾಯುಮಿತ್ಯುಕ್ತಮ್। ಗೌತಮಶಾಪೇನ ಸಹಸ್ರಾಕ್ಷೇ ಬಲಿಬಲೇನ ಸ್ವರ್ಗಾತ್ಪಲಾಯಿತೇ ಬ್ರಹ್ಮಹತ್ಯಾಭಯೇನ ಕಮಲನಾಲಾಂತಃ ಪ್ರವಿಷ್ಟೇ ಚ ಇಂದ್ರೇ ತದಭಾವಾತ್ ಶಂಶಬ್ದೇನ ತದಗ್ರಹಣಮ್। ತತೋಽಪಿ ನೀಚಾನಾಂ ಯಮನಾಸತ್ಯಾನಾಂ ತು ಸುತರಾಂ ತದಭಾವಾತ್ ಶಂಶಬ್ದೇನ ತದಗ್ರಹಣಮ್। ಭಾರತೀಪಕ್ಷೇಽಪಿ ಶಂಶ್ರಿತೇತಿ ಸ್ಥಿತೇ ''ಛಂದಸಿ ಸಮಾನೇ ಪೂರ್ವಲೋಪಃ'' ಇತಿ ವಚನಾತ್ ಪೂರ್ವಶಕಾರಸ್ಯ ಲೋಪೇ ಶ್ರೀರಿತ್ಯೇವ ಶಬ್ದಸ್ವರೂಪಮುರ್ವರಿತಮಿತಿ ಜ್ಞೇಯಮ್॥ – (ವಾ.)

ದ್ರೌಪದಿಯ ಹಿರಿಮೆ

ಸಾ ಕೃಷ್ಣಾ[೧] ನಾಮತಶ್ಚಾಸೀದುತ್ಕೃಷ್ಟತ್ವಾದ್ಧಿ ಯೋಷಿತಾಮ್ ।
ಕೃಷ್ಣಾ ಸಾ ವರ್ಣತಶ್ಚಾಸೀದುತ್ಕೃಷ್ಟಾ ನಂದಿನೀ ಚ ಸಾ ॥ ೧೦೧ ॥

ಅ: ಅವಳು ಕೃಷ್ಣೆ ಎಂದೇ ಹೆಸರಾದಳು. ಸ್ತ್ರೀಯರಲ್ಲಿ ಉತ್ಕೃಷ್ಟಳಾದ್ದರಿಂದಲೂ, ಕೃಷ್ಣವರ್ಣ-ವನ್ನು ಹೊಂದಿದವಳಾದ್ದರಿಂದಲೂ, ಉತ್ಕೃಷ್ಟವಾದ ಆನಂದವನ್ನು ಉಳ್ಳವಳಾದ್ದರಿಂದಲೂ, ತನ್ನನ್ನು ಆಶ್ರಯಿಸಿದವರಿಗೆ ಆನಂದ ನೀಡುವವಳಾದ್ದರಿಂದಲೂ ಅವಳಿಗೆ ಆ ಹೆಸರು.

ವಿ: ದ್ರೌಪದಿಗೆ ಅನೇಕ ಹೆಸರುಗಳು – ದ್ರುಪದ ಪುತ್ರಿಯಾದ್ದರಿಂದ **ದ್ರೌಪದಿ**, ಯಜ್ಞಸೇನ ಎಂಬ ನಾಮಾಂತರ ದ್ರುಪದನಿಗೆ ಇದ್ದದ್ದರಿಂದ **ಯಾಜ್ಞಸೇನೀ**, ತಾತ ಪೃಷತನಾದ್ದರಿಂದ **ಪಾರ್ಷತೀ**, ಪಾಂಚಾಲ ದೇಶದ ರಾಜಕುಮಾರಿಯದ್ದರಿಂದ **ಪಾಂಚಾಲಿ**. ತಂದೆ, ತಾತ ಹಾಗೂ ದೇಶದಿಂದಾಗಿ ಈ ಮೂರು ಹೆಸರುಗಳು ಪ್ರಸಿದ್ಧ; ಆದರೆ ಅವಳಿಗೆ ನಾಮಕರಣವಾದದ್ದು ಮಾತ್ರ **ಕೃಷ್ಣಾ** ಎಂದು. ಕೃಷ್ಣಾ ಎಂದರೆ ಶ್ರೇಷ್ಠಳು, ಉತ್ಕೃಷ್ಟಳು ಎಂದರ್ಥ. ಶ್ರೀಕೃಷ್ಣ ಸರ್ವೋತ್ತಮನಾದ್ದರಿಂದ ಆ ಹೆಸರು

---

೧. ಯೋಷಿತಾಂ ಮಧ್ಯೇ ಉತ್ಕೃಷ್ಟತ್ವಾತ್ ಕೃಷ್ಣಾ । ನಿರುಕ್ತತ್ವಾತ್ ಸವರ್ಣತ್ವಾತ್ ಕಕಾರಸ್ಯ ಣಕಾರಃ ನಿರುಕ್ತತ್ವಾದೇವ ಉಪಪದಾಲೋಪಶ್ಚೇತಿ ಭಾವೇನೋಕ್ತಮ್। ಸಾ ಕೃಷ್ಣಾ ನಾಮತಶ್ಚಾಸೀದುತ್ಕೃಷ್ಟತ್ವಾದ್ಧಿ ಯೋಷಿತಾಮಿತಿ। ವರ್ಣತಃ ಕೃಷ್ಣೇತಿ ತು ಸ್ಪಷ್ಟಮ್ ''ಣಶ್ಚ ನಿರ್ವೃತಿವಾಚಕಃ'' ಇತಿ ವಚನಾತ್ ಉತ್ಕೃಷ್ಟಂ ಣಂ ಸುಖಂ ಯಸ್ಯಾಃ ಸಾ ಕೃಷ್ಣೇತಿ ಚ ಭಾವೇನೋಕ್ತಂ ಉತ್ಕೃಷ್ಟಾ ನಂದಿನೀ ಚ ಸೇತಿ । ಏವಂ ಚ ಭಾರತೀ ತ್ರೇಧಾऽಪಿ ಕೃಷ್ಣಾಪದವಾಚ್ಯಾ । ಇತರಾಸಾಂ ತು ಕೃಷ್ಣಾ ಸಾ ವರ್ಣತಶ್ಚಾಸೀದಿತಿ ವದತಾ ಗ್ರಂಥಕಾರೇಣೈವ ವರ್ಣತಃ ಕೃಷ್ಣಾಶಬ್ದವಾಚ್ಯತ್ವಂ ಉಕ್ತಪ್ರಾಯಮಿತಿ ಜ್ಞೇಯಮ್ ॥ – (ವಾ.)

ಕೃಷಶಬ್ದಸ್ಯ ಉತ್ಕೃಷ್ಟತ್ವಾತ್ ಣಶಬ್ದಸ್ಯ ಆನಂದವಾಚಕತ್ವಾತ್ ನಾಮ್ನಾ ಕೃಷ್ಣೇತ್ಯಾಸೀತ್ । – (ಜ.)

ಪರಮೇಶ್ವರವಾಚಕಕೃಷ್ಣಶಬ್ದಾತ್ ಮತ್ವರ್ಥೀಽಚಮಂಗೀಕೃತ್ಯ ಪ್ರಿಯತ್ವೇನ ಕೃಷ್ಣೋऽಸ್ಯಾ ಅಸ್ತೀತ್ಯರ್ಥಃ। – (ಸ.)

ಮಾನುಷಂ ವಿಗ್ರಹಂ ಕೃತ್ವಾ ಸಾಕ್ಷಾದಮರವರ್ಣಿನೀ ।
ನೀಲೋತ್ಪಲಸಮೋ ಗಂಧೋ ಯಸ್ಯಾಃ ಕ್ರೋಶಾತ್ ಪ್ರಧಾವತಿ ॥
ಯಾ ವಿಭರ್ತಿ ಪರಂ ರೂಪಂ ಯಸ್ಯಾ ನಾಸ್ತ್ಯುಪಮಾ ಭುವಿ ॥ – ಭಾರತ (ಆದಿ. ೧೬೨/೪೬)

ತಾಂ ಚಾಪಿ ಜಾತಾಂ ಸುಶ್ರೋಣೀಂ ವಾಗುವಾಚಾಶರೀರಿಣೀ ।
ಸರ್ವಯೋಷಿದ್ವರಾ ಕೃಷ್ಣಾ ನಿನೀಷುಃ ಕ್ಷತ್ರಿಯಾನ್ ಕ್ಷಯಮ್ ॥
ಸುರಕಾರ್ಯಮಿಯಂ ಕಾಲೇ ಕರಿಷ್ಯತಿ ಸುಮಧ್ಯಮಾ ॥ – ಭಾರತ (ಆದಿ.೧೬೨/೪೮)

ಸರ್ವಲಕ್ಷಣಸಂಪೂರ್ಣಾ ವೈದೂರ್ಯಮಣಿಸಂನಿಭಾ ।
ಕೃಷ್ಣೇತ್ಯಬ್ರುವನ್ ಕೃಷ್ಣಾಂ ಕೃಷ್ಣಾऽಭೂತ್ ಸಾ ಹಿ ವರ್ಣತಃ ॥ – ಭಾರತ (ಆದಿ.೧೬೨/೫೪)

ಹೊಂದಿದ್ದರೆ, ಸ್ತ್ರೀ ಜೀವರುಗಳಲ್ಲಿ ಸರ್ವೋತ್ಕೃಷ್ಟಳಾದ್ದರಿಂದ ದ್ರೌಪದಿಗೆ ಆ ಹೆಸರು. ಅದರಂತೆ 'ಣ' ಎಂದರೆ ಆನಂದ ಎಂದರ್ಥ; 'ಕೃಷ್' ಎಂದರೆ ಶ್ರೇಷ್ಠ ಎಂದರ್ಥ. ಹೀಗೆ ಉತ್ಕೃಷ್ಟವಾದ ಆನಂದದಿಂದ ಕೂಡಿದ್ದರಿಂದ **ಕೃಷ್ಣಾ** ಎಂಬ ಹೆಸರು ಯುಕ್ತವಾಯಿತು ಎಂದರ್ಥ. ಬಣ್ಣದಲ್ಲಿ ಕೃಷ್ಣವರ್ಣದವಳಾಗಿದ್ದುದು ಅದಕ್ಕೆ ಮತ್ತೊಂದು ಕಾರಣ.

[೧]ಉತ್ಪತ್ತಿತಶ್ಚ ಸರ್ವಜ್ಞಾ ಸರ್ವಾಭರಣಭೂಷಿತಾ ।
ಸಂಪ್ರಾಪ್ತಯೌವನೈವಾಸೀದಜರಾ [೨]ಲೋಕಸುಂದರೀ ।
[೩]ಉಮಾಂಶಯುಕ್ತಾऽತಿತರಾಂ ಸರ್ವಲಕ್ಷಣಸಂಯುತಾ ॥ ೧೦೨ ॥

ಅ: ಅವಳು ಹುಟ್ಟುತ್ತಲೇ ಸರ್ವಜ್ಞಳು, ಸರ್ವಾಭರಣಭೂಷಿತೆ, ಯೌವನಯುಕ್ತೆ ಮುಪ್ಪಿಲ್ಲದವಳು ಹಾಗೂ ತ್ರಿಲೋಕಸುಂದರಿ. ಅವಳಲ್ಲಿ ವಿಶೇಷವಾಗಿ ಉಮಾವೇಶವಿದ್ದಿತು. ಅವಳು ಸರ್ವಲಕ್ಷಣಸಂಪನ್ನೆಯೂ ಆಗಿದ್ದಳು.

ವಿ: ೧) ದ್ರೌಪದಿಯ ಅನೇಕ ವೈಶಿಷ್ಟ್ಯಗಳು ಇದರಲ್ಲಿ ನಿರೂಪಿತವಾಗಿವೆ. ವೇದಾಭಿಮಾನಿ ದೇವತೆಯಾದ ಅವರು ಹುಟ್ಟುತ್ತಲೇ ಸರ್ವಜ್ಞಳಾಗಿದ್ದುದು ಯುಕ್ತ. ವಿದ್ಯೆಯೇ ಅಭರಣಗಳೆಲ್ಲಾ ಮಿಗಿಲಾದುದು, ಅಂತಹ ವಿದ್ಯಾಭಿಮಾನಿ ದೇವತೆಯಾದ ಅವಳು ಸರ್ವಾಭರಣ ಯುಕ್ತಳಾದದ್ದು ಸ್ವಾಭಾವಿಕ. ಸಂಪ್ರಾಪ್ತಯೌವನಾ ಎಂಬ ಪದದ ಮೂಲಕ ವಿವಾಹದ ಬಗ್ಗೆ ಇದ್ದ ಮತ್ತೊಂದು ಸಮಸ್ಯೆಗೂ ಪರಹಾರ ಸೂಚಿತವಾಗಿದೆ. ದ್ರುಪದ ಸಂಕಲ್ಪಿಸಿದಂತೆ ಅವಳು ಅರ್ಜುನನಿಗೆ ಪತ್ನಿಯಾಗಬೇಕು, ಅವಳು ಮಗುವಾಗಿ ಅವತರಿಸಿದ್ದರೆ ಅವರಿಬ್ಬರ ವಯಸ್ಸಿನ ಅಂತರ ಅಗಾಧವಾಗುತ್ತಿತ್ತು. ಯೌವನವತಿಯೇ ಆಗಿ ಅವತರಿಸಿದ್ದರಿಂದ ಆ ಪ್ರಶ್ನೆಗೆ ಅವಕಾಶವಿಲ್ಲದಂತಾಯಿತು. ಇನ್ನು ಅಜರಾ ಎಂಬ ಇಲ್ಲಿಯ ಪದ, ಅದಕ್ಕೆ ಮುಪ್ಪಿಲ್ಲದವಳು ಎಂದರ್ಥ. ಇದು ತೀರಾ ವಿಶಿಷ್ಟವಾದ ದ್ರೌಪದಿಯ ಮತ್ತೊಂದು ಲಕ್ಷಣ. ಅವರದು ಶುದ್ಧ ಸತ್ತ್ವಾತ್ಮಕವಾದ ದೇಹವಾದ್ದರಿಂದ ಅದಕ್ಕೆ ಮುಪ್ಪು, ರೋಗ ಮೊದಲಾದವುಗಳ ಪ್ರಸಕ್ತಿ ಸರ್ವಥಾ ಇಲ್ಲ ಎಂದು

---

೧. ಉತ್ಪತ್ತಿತ ಏವೇತಿ ಸರ್ವತ್ರ ಸಂಬಧ್ಯತೇ । – (ವ.)

೨. ಅಜರಾ ಕದಾऽಪಿ ಜರಾರಹಿತಾ । – (ತಾ.)

೩. ಉಮಾಂಶಯುಕ್ತಾ ನಿತರಾಂ – (ಪಾಠಾಂತರ)

ಉಮಾಂಶಯುಕ್ತಾऽತಿತರಾಮಿತ್ಯತ್ರ ಅತಿತರಾಮಿತ್ಯಸ್ಯ ಸರ್ವಲಕ್ಷಣಸಂಯುತೇತ್ಯುತ್ತರವಾಕ್ಯೇನ ಸಂಬಂಧಃ। ಉಮಾ ಚ ದೇವ್ಯಸ್ತಾ ಇತ್ಯತ್ರ ಶಚೀಶ್ಯಾಮಳೋಷಾರೂಪಾಃ ದೇವ್ಯಃ ನ ತು ಭಾರತೀ॥ – (ವಾ.)

ಭಾವ. ಮಹಾಭಾರತದ ಉದ್ದಕ್ಕೂ ದ್ರೌಪದಿಯನ್ನು ನಿತ್ಯತರುಣೆಯನ್ನಾಗಿ ವರ್ಣಿಸಿರುವುದು ಇದಕ್ಕೆ ವಿಶೇಷವಾಗಿ ಪೋಷಕ.

೨) ಅದರಂತೆ ಹನುಮಂತ, ಭೀಮಸೇನ ಮತ್ತು ಆನಂದತೀರ್ಥ ಎಂಬ ವಾಯುದೇವರ ಅವತಾರಗಳೂ ಸಹ ಮುಪ್ಪಿಲ್ಲದ ಅವತಾರಗಳು. ಹನುಮದ್ರೂಪವಂತೂ ಚಿರಂಜೀವಿರೂಪ. ಭೀಮಸೇನನಿಗೆ ಮುಪ್ಪಿಲ್ಲದಿರುವುದು ಮಹಾಭಾರತದಲ್ಲಿಯೇ ಪ್ರಸಿದ್ಧ. ಶ್ರೀಮನ್ಮಧ್ವಾಚಾರ್ಯರು ಅದ್ಯಾಪಿ ಬದರಿಯಲ್ಲಿ ನೆಲೆಸಿದ್ದು ಒಟ್ಟು ಕಲಿಯುಗದ ಮೂವತ್ತಾರು ಸಾವಿರ ವರ್ಷಗಳ ಕಾಲ ಅವರು ಭೂಮಿಯಲ್ಲಿರುವುದು ಪ್ರಸಿದ್ಧವೇ. ಋಜುಗಳ ದೇಹ ಶುದ್ಧ ಸತ್ವಾತ್ಮಕವಲ್ಲದೆ ಅವರಿಗೆ ಲಿಂಗದೇಹದ ಸಂಪರ್ಕವೂ ಸಹ ದಗ್ಧಪಟಾಯಮಾನವಾದದ್ದು. ಅದರಿಂದಾಗಿ ಅವರಿಗೆ ಕಾಲವಮಾನ, ವಯೋವಮಾನಗಳ ನಿಮಿತ್ತದಿಂದ ಒದಗುವ ವಿಕಾರಗಳು ನಗಣ್ಯ ಎಂದು ಮುಖ್ಯಭಾವ. ಲೋಕಸುಂದರಿ ಎಂಬುದು ದ್ರೌಪದಿಯ ಮತ್ತೊಂದು ಹಿರಿಮೆ. ಸಾಮಾನ್ಯವಾಗಿ ತ್ರಿಪುರಸುಂದರಿ ಎಂಬ ಹೆಸರು ಪಾರ್ವತಿಗೆ ಪ್ರಸಿದ್ಧ. ಆದರೆ, ದ್ರೌಪದಿ ಪಾರ್ವತಿಗಿಂತ ಮಿಗಿಲಾದ ದೇವತೆಯಾದ್ದರಿಂದ ತ್ರಿಲೋಕಸುಂದರಿ. ಇನ್ನು ಮಹಾಲಕ್ಷ್ಮ್ಯಂತೂ ಲೋಕೈಕಸುಂದರಿ. ಸೌಂದರ್ಯ ಸ್ತ್ರೀಯರ ವಿಚಾರದಲ್ಲಿ ಯೋಗ್ಯತೆಗೆ ನಿರ್ಣಾಯಕ ಎಂದು ಎರಡನೇ ಅಧ್ಯಾಯದಲ್ಲಿ ನಿರೂಪಿಸಿರುವರು: **'ಯತ್ರ ರೂಪಂ ತತ್ರ ಗುಣಾಃ'** (೨/೩೬). ಆದ್ದರಿಂದ ತ್ರಿಲೋಕಸುಂದರಿ ಎಂಬ ಪದ ಕೇವಲ ದೇಹ ಸೌಂದರ್ಯವನ್ನು ಮಾತ್ರ ಸೂಚಿಸದೇ ಅವರು ಜೀವಜಗತ್ತಿನಲ್ಲೇ ಸ್ತ್ರೀ ಜೀವರಲ್ಲಿ ಅತ್ಯಂತ ಶ್ರೇಷ್ಠಳು ಎಂಬ ವಿಶೇಷಾರ್ಥವನ್ನು ಸೂಚಿಸಿವುದು ಎಂದು ತಿಳಿಯಬೇಕು.

೩) ಉಮಾವೇಷ ವಿಶೇಷವಾಗಿ ಇದ್ದ ವಿವರದ ಬಗ್ಗೆ ಸ್ಪಷ್ಟೀಕರಣ ಮುಂದೆ ಬಂದಿದೆ. ಸರ್ವಲಕ್ಷಣ ಸಂಪನ್ನೆ ಎಂಬುದು ದ್ರೌಪದಿಯ ಮತ್ತೊಂದು ವೈಶಿಷ್ಟ್ಯ. ಸ್ವರೂಪದಲ್ಲಿ ಋಜು–ಗಳೆಲ್ಲ ದ್ವಾತ್ರಿಂಶಲ್ಲಕ್ಷಣೋಪೇತರು. ಅವತಾರಗಳಲ್ಲೂ ಅವರು ದ್ವಾತ್ರಿಂಶಲ್ಲಕ್ಷಣೋಪೇತರು ಎಂಬುದು ಮತ್ತೊಂದು ವಿಶೇಷ. ಬೇರೆ ದೇವತೆಗಳು ಮೂಲ ರೂಪದಲ್ಲಿ ದ್ವಾತ್ರಿಂಶಲ್ಲಕ್ಷಣೋ–ಪೇತರಲ್ಲ, ಅವರ ಇರುವಷ್ಟು ಲಕ್ಷಣಗಳೂ ಸಹ ಅವತಾರಗಳಲ್ಲಿ ಸಮಗ್ರ ವ್ಯಕ್ತವಾಗುವ ನಿಯಮವಿಲ್ಲ. ಆದರೆ, ಋಜುಗಳದು ಮಾತ್ರ ವಿಶೇಷ. ಅವರು ಮೂಲರೂಪದಂತೆ ಅವತಾರ–ರೂಪದಲ್ಲೂ ಸರ್ವಲಕ್ಷಣೋಪೇತರು. ಆದ್ದರಿಂದ ದ್ರೌಪದಿಯು 'ಸರ್ವಲಕ್ಷಣಸಂಯುತಾ' ಎಂಬ ಇಲ್ಲಿಯ ಮಾತು ತುಂಬಾ ಗಮನಾರ್ಹವಾದುದು. ಭೀಮಸೇನ ದ್ವಾತ್ರಿಂಶಲ್ಲಕ್ಷಣೋಪೇತ ಎಂಬ ಮಾತು ಈಗಾಗಲೇ ಬಂದಿದೆ (೧೨/೧೩೩). ಮಹಾಭಾರತದಲ್ಲಿ ಒಂದೆರಡು ಕಡೆ ದ್ರೌಪದಿಯನ್ನು ಪಾರ್ವತಿಯ ಅವತಾರ ಎಂದು ಕರೆದಂತೆ ಕಾಣುತ್ತದೆ. ಅದರ ಭಾವವನ್ನು ಇಲ್ಲಿ 'ಉಮಾಂಶಯುಕ್ತಾ ನಿತರಾಂ' ಎಂಬ ಮಾತಿನಿಂದ ವಿವರಿಸಿದರು. ಎಂದರೆ ಅವರಲ್ಲಿ ಶಚಿ, ಶ್ಯಾಮಲಾ, ಉಷಾದೇವಿಯರ ಆವೇಶವಿದ್ದರೂ ಅವರೆಲ್ಲರಿಗಿಂತ ಹೆಚ್ಚಾಗಿ ಪಾರ್ವತಿಯ ಆವೇಶ ಇದ್ದಿತು ಎಂಬುದಾಗಿ ಲಕ್ಷಾಲಂಕಾರಗೃಹೀತಪಾಠದಲ್ಲಿದೆ :

ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ ।
ಪಂಚಾನಾಂ ಸಹಿತಾ ಕೃಷ್ಣಾ ರೂಪಾ ಪಾರ್ವತ್ಯನಿಂದಿತಾ ॥ –ಭಾರತ(೧/೧೯೬/೫೧)

ದ್ರೌಪದಿಯ ಹಿನ್ನೆಲೆ - ಉಮಾದಿ ಸ್ತ್ರೀಯರಿಗೆ ಬ್ರಹ್ಮಶಾಪ

ಪೂರ್ವಂ ಹ್ಯುಮಾ ಚ ದೇವ್ಯಸ್ತಾಃ[೧] ಕದಾಚಿದ್ಭರ್ತೃಭಿರ್ಯುತಾಃ ।
ವಿಲಾಸಂ ದರ್ಶಯಾಮಾಸುಃ ಬ್ರಹ್ಮಣಃ ಪಶ್ಯತೋಽಧಿಕಮ್ ॥ ೧೦೩ ॥

ಅ: ಹಿಂದೆ ಉಮಾದೇವಿ ಹಾಗೂ ಶಚಿ, ಶ್ಯಾಮಲಾ, ಉಷಾ ಎಂಬ ಇತರು ಮೂವರು ದೇವಿಯರು ಒಮ್ಮೆ ತಮ್ಮ ಪತಿಗಳೊಂದಿಗೆ ಕೂಡಿ ಬ್ರಹ್ಮ ದೇವರು ನೋಡುತ್ತಿದ್ದಂತೆಯೇ ಬಹಳವಾಗಿ ವಿಲಾಸ ತೋರಿದರು.

ಎ: ಹಿಂದೆ ಒಮ್ಮೆ ಬ್ರಹ್ಮದೇವರ ಬಳಿಗೆ ಪಾರ್ವತಿ, ಶಚಿ, ಶ್ಯಾಮಲಾ ಮತ್ತು ಉಷಾ ಎಂಬ ನಾಲ್ವರು ದೇವತಾಸ್ತ್ರೀಯರು ತಮ್ಮ ಗಂಡಂದಿರಾದ ಶಿವ, ಇಂದ್ರ, ಯಮ ಮತ್ತು ಅಶ್ವಿನೀ ದೇವತೆಗಳೊಂದಿಗೆ ಕೂಡಿ ತಮ್ಮ ವಿಲಾಸವನ್ನು ಬಹಳವಾಗಿ ತೋರಿಸಿಕೊಂಡರು. ಹಾಗೆ ದೊಡ್ಡವರ ಮುಂದೆ ವಿಲಾಸ ಪ್ರದರ್ಶನ ಎಂಬುದು ಶಾಸ್ತ್ರ ವಿಹಿತವಲ್ಲದ ಅಶಿಸ್ತಿನ ನಡವಳಿಕೆ. ಅದನ್ನು ಪ್ರಾರಬ್ಧವಶಾತ್ ಅವರೆಲ್ಲಾ ಆ ರೀತಿ ಮಾಡಿದರು ಎಂದು ತಿಳಿಯಬೇಕು.

ಶಶಾಪ ತಾಸ್ತದಾ ಬ್ರಹ್ಮಾ ಮಾನುಷೀಂ ಯೋನಿಮಾಪ್ಸ್ಯಥ ।
ತತ್ರಾನ್ಯಗಾಶ್ಚ ಭವತೇತ್ಯೇವಂ ಶಪ್ತಾಃ ಸುರಾಂಗನಾಃ ॥ ೧೦೪ ॥

ವಿಚಾರ್ಯ ಭಾರತೀಮೇತ್ಯ ಸರ್ವಮಸ್ಯೈ ನಿವೇದ್ಯ ಚ ।
ಸಹಸ್ರವತ್ಸರಂ ಚೈನಾಂ ಶುಶ್ರೂಷಿತ್ವಾ ಬಭಾಷಿರೇ ॥ ೧೦೫ ॥

ಅ: ಆಗ ಬ್ರಹ್ಮ ಅವರಿಗೆ ಶಾಪವಿತ್ತ. ''ನೀವೆಲ್ಲಾ ಮಾನವ ಜನ್ಮವನ್ನು ಹೊಂದಿರಿ, ಅಲ್ಲಿ ಪರಪುರುಷನ ವಶವಾಗಿರಿ''. ಹೀಗೆ ಶಪಿಸಲ್ಪಟ್ಟ ಆ ದೇವತೆ ಸ್ತ್ರೀಯರುಗಳು ವಿಚಾರ ಮಾಡಿ

---

೧. ಶಚ್ಯಾದಿಭ್ಯೋ ನಿತರಾಮುಮಯಾ ಸಹ ಸರ್ವತ್ರವಹಾರೇಷು ಭಾರತ್ಯಾ ಅವಸ್ಥಾನಾದಿತಿ ಭಾವಃ । –(ವ.)

ಪುರಾ ಯಮಸುತಾ ಗೌರೀ ದಸ್ರಯೋಃ ಸತ್ಪ್ರಿಯಾ ಶಚೀ ।
ಏಕೀಭೂಯ ತಥಾ ಯೋಗಾತ್ ಸಮೀಪಂ ಬ್ರಹ್ಮಣೋ ಯಯುಃ ॥
ತಸ್ಯ ಜ್ಞಾನಪರೀಕ್ಷಾರ್ಥಂ ತಜ್ಜ್ಞಾತ್ವಾ ತಾಃ ಶಶಾಪ ಹ ॥ (ಮತ್ಸ್ಯಪುರಾಣ) –(ಶ್ರೀ.)

ಭಾರತೀದೇವಿಯ ಬಳಿಗೆ ತೆರಳಿ ಸಾವಿರ ವರ್ಷಗಳ ಕಾಲ ಅವರನ್ನು ಸೇವಿಸಿ, ಎಲ್ಲವನ್ನೂ ಅವರಿಗೆ ಅರಿಕೆಮಾಡಿ, ಪ್ರಾರ್ಥಿಸಿಕೊಂಡರು.

ವಿ: ಬ್ರಹ್ಮದೇವರು ಅವರಿಗೆ ಅವರು ಮಾಡಿದ ತಪ್ಪಿಗೆ ಉಚಿತವಾದ ಶಾಪವನ್ನೇ ನೀಡಿದರು. ತಮ್ಮ ಪತಿಗಳೊಂದಿಗೆ ಮಿತಿ ಮೀರಿದ ವಿಲಾಸ ತೋರಿದ ಅವರಿಗೆ ಪರಪುರುಷಸಂಪರ್ಕವಾಗಲಿ ಎಂಬುದು ವಿಶಿಷ್ಟ ಶಾಪವಾಯಿತು. ಅದು ದೇವತಾಸ್ತ್ರೀಯರಿಗಂತೂ ಅತ್ಯಂತ ನಿಂದಿತವಾದದ್ದು. ಅದನ್ನು ಅಂಗೀಕರಿಸುವುದೂ ಸಾಧ್ಯವಿಲ್ಲ, ಬ್ರಹ್ಮ ದೇವರ ಶಾಪವಾದ್ದರಿಂದ ಪರಿಹರಿಸಿಕೊಳ್ಳಲೂ ಅಸಾಧ್ಯ. ಅಂತಹ ಸಮಸ್ಯೆಯಿಂದ ಬಿಡುಗಡೆ ಹೊಂದಲು ಬೇರಾವ ಉಪಾಯವನ್ನೂ ಕಾಣದೆ, ಭಾರತಿಯನ್ನು ಶರಣು ಹೊಂದುವುದೊಂದೇಮಾರ್ಗವೆಂದು ಅವರನ್ನು ಪ್ರಾರ್ಥಿಸಿಕೊಂಡರು. ಅಂತಹ ಪ್ರಾರ್ಥನೆ ಸುಲಭವಾಗಿ ಈಡೇರುವಂತಹುದೂ ಅಲ್ಲ. ಅದಕ್ಕಾಗಿ ಅವರು ಒಂದು ಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡಿ ಅವರನ್ನು ಪ್ರಸನ್ನೀಕರಿಸಿಕೊಂಡು ಪ್ರಾರ್ಥಿಸಿದರು ಎಂದು ಭಾವ.

ದೇವಿ ನೋ ಮಾನುಷಂ ಪ್ರಾಪ್ಯಮನ್ಯಗಾತ್ವಂ ಚ ಸರ್ವಥಾ
ತತ್ರಾಪಿ ಮಾರುತಾದನ್ಯಂ ನ ಸ್ಪೃಶೇಮ ಕಥಂಚನ ॥ ೧೦೬ ॥

ಅ: 'ದೇವಿ! ನಾವು ಮಾನವರಾಗಿ ಜನಿಸಬೇಕಿದೆ. ಅಲ್ಲಿ ಪರಪುರುಷ ಸ್ಪರ್ಶವೂ ತಪ್ಪದೆ ಉಂಟಾಗಲಿದೆ. ಅಲ್ಲೂ ನಾವು ವಾಯುವಿನ ಹೊರತು ಇತರರನ್ನು ಯಾವ ರೀತಿಯಿಂದಲೂ ಸ್ಪರ್ಶಿಸದಂತಾಗಬೇಕು.'

ವಿ: ೧) ಬ್ರಹ್ಮದೇವರ ಶಾಪದಂತೆ ಪರಪುರುಷ ಸ್ಪರ್ಶವಾಗಲೇ ಬೇಕಿದೆ. ಯಾವ ಪುರುಷನ ಸ್ಪರ್ಶವಾದರೂ ಅದು ಪ್ರಬಲ ದೋಷವೇ ಆಗವುದು. ಆದರೆ, ವಾಯುದೇವರ ಸ್ಪರ್ಶವಾದರೆ ಅದು ಪರಪುರುಷ ಸ್ಪರ್ಶ ದೋಷವಾಗುವುದಿಲ್ಲ. ವಾಯುದೇವರು ಪರಿಶುದ್ಧರು. ಪರಸ್ತ್ರೀಯರ

---

೨. ಮಹಾಸಭಾಯಾಂ ಸ್ವೈರಿಣೀವದಾಚರಣಾತ್ ತತ್ರಾನ್ಯಗಾಶ್ಚ ಭವತೇತ್ಯುಕ್ತಮ್। ಅನ್ಯಾನ್ ಗಚ್ಛಂತೀತಿ ಅನ್ಯಗಾಃ ಪರಪುರುಷಸ್ಪರ್ಶಮಾತ್ರವತ್ಯ ಇತ್ಯರ್ಥಃ ನ ತು ತೈಃ ಸಹ ರಂತವ್ಯಮಿತಿ ಶಾಪಃ। ತಥಾಸತಿ ಸ್ಪಷ್ಟಮನ್ಯರಮಣ್ಯೋ ಭವತೇತ್ಯೇವ ವದೇತ್। ಅತ ಏವ ಮಾರುತಾದನ್ಯಂ ನ ಸ್ಪೃಶೇಮೇತಿ ವದಿಷ್ಯಂತಿ।''ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚ'' ಇತಿ ವಚನಾತ್ ಮಾನುಷಸಂಸ್ಪರ್ಶೋಽಪಿ ದೇವಾನಾಂ ಮಹಾದೋಷಃ। ಸ್ನುಷಾಸ್ಥಾನೀಯಾನಾಂ ಸಾಕ್ಷಾದ್ವಾಯುಪತ್ನ್ಯಾ ತ್ವಯಾ ಸಹ ಸ್ಥಿತಾನಾಮಸ್ಮಾಕಂ ಕದಾಚಿತ್ತ್ವಯಾ ಸಹ ರಮಮಾಣೇನ ವಾಯುನಾ ಸ್ಪರ್ಶೋಽಪಿ ಪುತ್ರ್ಯಾಃ ಪಿತುಃ ಸ್ಪರ್ಶವತ್ ನ ದೋಷ ಇತಿ ಭಾವೇನಾಹುಃ ಮಾರುತಾದನ್ಯಂ ನ ಸ್ಪೃಶೇಮ ಕಥಂಚನೇತಿ। ಪೂರ್ವಂ ಚಾನ್ಯತ್ರ ಲೀಲಯೇತ್ಯತ್ರ ಪೂರ್ವಂ= ಅನ್ಯಗಾಮಿತ್ವಶಾಪಾತ್ಪೂರ್ವಮಿತ್ಯರ್ಥಃ॥ – (ವಾ.)

ಕೇಚಿತ್ ತು ತತ್ರ ವಕ್ಷ್ಯಮಾಣಶಾಪಾಂತರಪ್ರಯುಕ್ತಮಾನುಷಜನ್ಯಸ್ತ್ರಿತ್ಯರ್ಥಮಾಹುಃ। – (ತಾ.)

ಕೇಚಿತ್ ಅನ್ಯಗಾತ್ವಂ ಚ ಶಾಪಾಂತರಪ್ರಯುಕ್ತದೇಹೇಷ್ವನ್ಯಗಾತ್ವಂ ಚೇತ್ಯರ್ಥಮಾಹುಃ। – (ತಾ.)

ಬಗ್ಗೆ ಕಾಮನಾಡಿ ದೋಷಗಳು ಅವರಲ್ಲಿ ಸರ್ವಥಾ ಇಲ್ಲ. ಆದ್ದರಿಂದ, ಅವರ ಸ್ಪರ್ಶವಾಗುವಂತಾದರೆ ಬ್ರಹ್ಮ ದೇವರ ಶಾಪವೂ ಸತ್ಯವಾಗುವುದು, ತಮಗೆ ಪರಪುರುಷ ಸ್ಪರ್ಶ ಪ್ರಯುಕ್ತವಾದ ದೋಷವೂ ಉಂಟಾಗದು, ಆದ್ದರಿಂದ ವಾಯುದೇವರ ಸ್ಪರ್ಶ ತಮಗೆ ಉಂಟಾಗಬೇಕು ಎಂಬುದು ಅವರ ಚಿಂತನೆ.

೨) ವಾಯುದೇವರ ಸ್ಪರ್ಶ ಮಗಳಿಗೆ ತಂದೆಯ ಸ್ಪರ್ಶದಂತೆ ವಾತ್ಸಲ್ಯದ ಸ್ಪರ್ಶವಾಗುವುದೇ ಹೊರತು ದೋಷಕ್ಕೆ ಕಾರಣವಾಗುವುದಿಲ್ಲ ಎಂದು ಮುಖ್ಯಭಾವ. ಅದಕ್ಕಾಗಿ ಅವರ ಆ ಪ್ರಾರ್ಥನೆ ಎಂದು ತಿಳಿಯಬೇಕು ಎಂದು ವಾದಿರಾಜೀಯದಲ್ಲಿದೆ.

ದ್ರೌಪದಿಯ ಜನ್ಮಾಂತರಗಳು

ಬ್ರಹ್ಮಣೈವ ಚ ಶಪ್ತಾಃ ಸ್ಮಃ ಪೂರ್ವಂ ಚಾನ್ಯತ್ರ ಲೀಲಯಾ
ಏಕದೇಹತ್ವಮಾಪ್ಯೈನಂ ಯದಾ ವಂಚಯಿತುಂ ಗತಾಃ ॥ ೧೦೭ ॥

ಅ: 'ಹಿಂದೆ ಮತ್ತೊಂದು ಸಂದರ್ಭದಲ್ಲಿ ನಮಗೆ ಬ್ರಹ್ಮ ದೇವರಿಂದ ಬೇರೊಂದು ಶಾಪವೂ ಒದಗಿದೆ. ನಾವು ವಿನೋದಕ್ಕೆಂದು ಒಮ್ಮೆ ಒಂದೇ ದೇಹದಲ್ಲಿ ಕೂಡಿಕೊಂಡು ಅವರನ್ನು ವಂಚಿಸಲೆಂದು ಹೋಗಿದ್ದೆವು.'

ಎ: ಈ ಶಾಪದೊಂದಿಗೆ ತಮಗೆ ಬ್ರಹ್ಮ ದೇವರ ಮತ್ತೊಂದು ಶಾಪವೂ ಇದ್ದುದನ್ನೂ ಅವರು ತಿಳಿಸುತ್ತಿರುವರು. ಅದು ನಡೆದದ್ದು ಹೀಗೆ – ಒಮ್ಮೆ ಪಾರ್ವತೀ ಮೊದಲಾದ ಆ ನಾಲ್ವರು ಸ್ತ್ರೀಯರೂ ಬ್ರಹ್ಮ ದೇವರ ಬಳಿಗೆ ಒಂದೇ ದೇಹದಲ್ಲಿ ಸೇರಿಕೊಂಡು ತೆರಳಿದರು. ಆ ರೀತಿ ಒಂದೇ

ನನ್ವೇಕಸ್ಮಿನ್ ಜನ್ಮನ್ಯನೇಕಗಾತ್ರಮಿತಿ ಹಿ ಭಗವತ್ಸಿದ್ಧಾಂತಃ । ತರ್ಹಿ ಜನ್ಮಚತುಷ್ಟಯೇ ಭಾರತ್ಯಾ ಸಹಭಾವಪ್ರಾರ್ಥನಮನುಪಪನ್ನಮಿತಿ ಚೇನ್ನ । ಜನ್ಮತ್ರಯೇಽಪ್ಯನೇಕಗಾತ್ರಪಕ್ಷೇಽಪಿ ತೌಲ್ಯಾತ್ । ವಿಪ್ರಕನ್ಯಾದೇಹೇ ಅನೇಕಗಾತ್ರಾಭಾವೇನ ಸಹಭಾವವೈಯರ್ಥ್ಯಾತ್ । ವಸ್ತುತಸ್ತು ಬ್ರಹ್ಮಣಾ ಏಕದೇಹಾ ಮಾನುಷತ್ವಮಿತಿ ಪುನಶ್ಚ ಮಾನುಷೀಂ ಯೋನಿಮಾಪ್ಸ್ಯಥ ತತ್ರಾನೇಕಗಾಶ್ಚ ಭವತೇತಿ ಚ ಶಪ್ತತ್ವಾಚ್ಚ ಅಸ್ಮಿನ್ ಜನ್ಮನ್ಯನೇಕಗಾತ್ರಂ ಭವಿಷ್ಯತೀತಿ ಅನೇಕಗಾತ್ರಜನ್ಮನ ಅನಿರ್ಧಾರಿತತ್ವಾತ್ । ಸಂದೇಹೇನ ಜನ್ಮಚತುಷ್ಟಯೇಽಪಿ ಭಾರತೀಸಹಭಾವಪ್ರಾರ್ಥನೋಪಪತ್ತೇಃ । ನನು ಜನ್ಮತ್ರಯೇ ದೇಹೈಕ್ಯಸ್ಯ ಶಾಪಪ್ರಯುಕ್ತತ್ವೇಽಪಿ ಅನೇಕಗಾತ್ರಜನ್ಮನಿ ದೇಹೈಕ್ಯಶಾಪಾಭಾವಾತ್ ಕುತೋ ದೇಹೈಕ್ಯಮಿತಿ ಚೇತ್, ಅನೇಕಗಾತ್ರದೇಹೇ ತಾಸಾಂ ದೇಹೈಕ್ಯಸ್ಯ ಮಾರುತಸಂಬಂಧಾರ್ಥಮಿಚ್ಛಯೋಪಪತ್ತೇಃ । ಪ್ರತ್ಯೇಕಂ ಭಾರತೀಯುಕ್ತತ್ವೇನ ಮಾರುತಸಂಬಂಧೇಚ್ಛಾಯಾಽಶಕ್ಯತ್ವಾತ್ । ನಹಿ ಮಹತ್ಯಾ ಭಾರತ್ಯಾ ವಾಯೋಶ್ಚ ತಾಸಾಮನೇಕಗಾತ್ರಜನ್ಮನಿ ಬಹುಮಾನುಷದೇಹೇಷು ಸಹಭಾವಸಂಭೋಗಪ್ರಾರ್ಥನಂ ಶಕ್ಯಮತೋ ಭೀತಿವಶೇನೇತಿ ಕೇಚಿತ್ ತು ಜನ್ಮತ್ರಯೇ ದೇಹೈಕ್ಯಂ ಚತುರ್ಥಂ ಜನ್ಮ ತು ಪೃಥಗೇವ । ಜನ್ಮತ್ರಯಸ್ಯೈವ ಭಾರತೀ ಯುಕ್ತತ್ವಮ್ । ದೇವಿ ಜನ್ಮಸು ಚತುರ್ಷ್ವಪೀತಿ ..... ಅಭಿಪ್ರಾಯಿಕಮ್ । ಚತುರ್ಷು ಮಧ್ಯೇ ತ್ರಿಷ್ವಿತಿ ವಾ ಯೋಜನಾ । – (ತಾ.)

ದೇಹದಲ್ಲಿ ಸೇರಿ ತೆರಳಿದ್ದ ಅವರನ್ನು ಬ್ರಹ್ಮ ದೇವರು ಗುರುತಿಸುವರೋ ಎಂದು ಪರೀಕ್ಷಿಸುವುದು ಅವರ ಉದ್ದೇಶವಾಗಿತ್ತು.

೧
ಏಕದೇಹಾ ಮಾನುಷತ್ವಮಾಪ್ಸ್ಯಥ ತ್ರಿಶ ಉದ್ಧತಾಃ
ತ್ರಿಶೋ ಮದ್ವಂಚನಾಯೇತಾ ಇತಿ ತೇನೋದಿತಾ ವಯಮ್ ॥ ೧೦೮ ॥

ಅ: ನೀವೆಲ್ಲ ಉದ್ಧತರಾಗಿ ಮೂರು ಬಾರಿ ನನ್ನನ್ನು ಹೀಗೆ ವಂಚಿಸಲೆಂದು ಬಂದಿದ್ದರಿಂದ ನೀವು ಒಂದೇ ದೇಹದಲ್ಲಿ ಸೇರಿ ಮನುಷ್ಯ ಜನ್ಮ ಹೊಂದಿರಿ ಎಂದು ನಾವು ಅವರಿಂದ ಶಪಿಸಲ್ಪಟ್ಟೆವು.

ಎ: ಆ ರೀತಿ ಅವರು ತೆರಳಿದ್ದು ಒಂದು ಬಾರಿಯಲ್ಲ; ಒಟ್ಟು ಮೂರು ಬಾರಿ. ಅದಕ್ಕಾಗಿ ಅವರು – ''ಮೂರು ಬಾರಿ ನೀವು ಹೀಗೆ ಇಂತಹ ಅವಿಹಿತ ಕಾರ್ಯವನ್ನು ಮಾಡಿದ್ದಂದ ನೀವೆಲ್ಲ ಹೀಗೆ ಒಂದೇ ದೇಹದಲ್ಲಿಯೇ ಸೇರಿ ಮೂರು ಸಲ ಮನುಷ್ಯರಾಗಿ ಹುಟ್ಟಿರಿ'' ಎಂದು ಶಪಿಸಿದರು. ಸರ್ವಜ್ಞರಾದ ಬ್ರಹ್ಮ ದೇವರನ್ನು ಪರೀಕ್ಷೆ ಮಾಡಲು ಹೊರಟ ಅವರ ಪ್ರಯತ್ನ ಹೀಗೆ ದುರಂತಕ್ಕೆ ಕಾರಣವಾಯಿತು ಎಂದರ್ಥ. ದೇವತಾಸ್ತ್ರೀಯರುಗಳು ವಿಶೇಷ ಧರ್ಮರತರಾದರೂ ಅವರಿಗೆ ಇಂತಹ ವಿಚಿತ್ರ ವಿನೋದದ ಬಗ್ಗೆ ಆಸಕ್ತಿಹುಟ್ಟಲು ಪ್ರಾರಬ್ಧ ಕರ್ಮವೇ ಕಾರಣ ಎಂದು ತಿಳಿಯಬೇಕು. ಮೊದಲಿನ ಎರಡು ಬಾರಿಯ ತಪ್ಪನ್ನು ಕ್ಷಮಿಸಿ ಮೂರನೆಯ ಬಾರಿ ತಪ್ಪು

---

೧. ಏಕದೇಹಾ ಮಾನುಷತ್ವಮಿತ್ಯತ್ರ ಏಕದೇಹತಯಾ ತ್ರಿಶೋ ಮದ್ವಂಚನಾರ್ಥಮಾಗತತ್ವಾತ್ ತ್ರಿಶೋ ದೇಹೈಕ್ಯೇನ ಮಾನುಷತ್ವಮವಾಪ್ಸ್ಯಥೇತ್ಯೇವ ಶಾಪಃ। ನ ತ್ವತ್ರಾಪ್ಯನ್ಯಗಾಮಿತ್ವಶಾಪ ಇತಿ ಜ್ಞೇಯಮ್ । ನನ್ವೇಕದೇಹತ್ವಜನ್ಮಸು ಅನ್ಯಗಾಮಿತ್ವಶಾಪಾಭಾವಾತ್ ಕುತೋ ಭಾರತೀಪ್ರಾರ್ಥನಮ್। ಚತುರ್ಥಜನ್ಮನಿ ಪಶ್ಚಾತ್ತನಾನ್ಯಗಾಮಿತ್ವಶಾಪೇ ಸತ್ಯಪಿ ಏಕದೇಹತ್ವಶಾಪಸ್ಯ ತ್ರಿಶ ಇತಿ ನಿರ್ಣೀತತ್ವೇನ ಕುತೋ ದೇಹೈಕ್ಯಮಿತಿ ಚೇತ್ಸತ್ಯಮ್। ಶಾಪಾಭಾವೇऽಪಿ ದೇವಸ್ತ್ರೀತ್ವೇನ ಅತಿಮನೋಹರತನುತ್ವಾತ್ ರಾವಣಾದಿವತ್ ಕಾಮೀ ಕೋऽಪಿ ಮಾನವಃ ಅಸ್ಮಾನ್ ಬಲಾತ್ ಸ್ಪ್ರಕ್ಷ್ಯತೀತಿ ಭಯಾ ಭಾರತೀಪ್ರಾರ್ಥನಮ್। ಚತುರ್ಥಜನ್ಮನಿ ಸ್ವಾರ್ಥಂ ಭಾರತ್ಯಾ ವಾಯೋಶ್ಚ ಬಹುಮಾನುಷದೇಹೇಷು ಮಾನುಷತ್ವಪ್ರಾಪಣಮನುಚಿತಮಿತಿ ಭೀತ್ಯಾ ಸ್ವಯಮೇವ ಭಾರತ್ಯಾ ಸಹ ಪೂರ್ವಾಭ್ಯಸ್ತೈಕದೇಹತ್ವಂ ಸಂಪಾದ್ಯ ಜಾತಾಃ। ಯದ್ವಾ ಏಕದೇಹೇ ಸ್ಥಿತ್ವೈವ ಪತಿಪ್ರಾರ್ಥನಾತ್ ಶಿವೋऽಪಿ ಏಕದೇಹತಯೈವ ಸ್ವಸ್ವಪತಿಪ್ರಾಪ್ತಿವರಂ ದದೌ। ಅತೋऽಪಿ ದ್ರೌಪದೀಜನ್ಮನಿ ಪಂಚಾನಾಮೇಕದೇಹತ್ವಮಿತಿ ಜ್ಞೇಯಮ್। ಶಿವೇನ ಬ್ರಹ್ಮಶಾಪಂ ವಿಮೋಚ್ಯ ಸ್ವಪತಿಸಂಯೋಗವರೇ ದತ್ತೇ ಸತಿ ಪುನರನ್ಯಗಾಮಿತ್ವಶಂಕಾಭಾವೇऽಪಿ ''ಅತಸ್ತ್ವಯೈಕದೇಹತ್ವಮಿಚ್ಛಾಮೋ ದೇವಿ ಜನ್ಮಸು। ಚತಸೃಷ್ವಪಿ'' ಇತಿ ಪ್ರಾಗುಕ್ತಸತ್ಯಸಂರಕ್ಷಣಾಯ ಮೋಹನರೂಪತ್ವೇನ ಕಸ್ಯಚಿತ್ಕಾಮಿನಃ ಸ್ಪರ್ಶಶಂಕಾನಿವಾರಣಾರ್ಥಂ ಚ ಏಕಸ್ಮಿನ್ನೇವ ದೇಹೇ ಭಾರತ್ಯಾ ಸಹೈವ ಚತುರ್ವಾರಂ ಜನ್ಮೇತಿ ಸರ್ವತ್ರ ಸಮಾಧಾನಸಂಭವಾತ್। ಬ್ರಹ್ಮಶಾಪಸ್ಯ ವಿಮೋಚನಾಭಾವೇ ಕುಪಿತೋ ಬ್ರಹ್ಮಾ ಶಿವಸ್ಯ ಕುತಃ ಶಾಪಂ ದದ್ಯಾತ್ । ವಿರುದ್ಧಫಲಂ ಚ ಕಥಮೇಕತ್ರ ಸ್ಯಾದಿತಿ ಯುಕ್ತಿರಪ್ಯನುಸಂಧೇಯಾ। ತಸ್ಮಾದುಕ್ತವಿಧಯೈವ ಸಮಾಧಾನಮಿತಿ ಜ್ಞೇಯಮ್ ॥ – (ವಾ.)

ಮಾಡಿದಾಗ ಶಿಕ್ಷಿಸುವ ಲೋಕದ ಪದ್ಧತಿಗೆ ಬ್ರಹ್ಮ ದೇವರು ನೀಡಿದ ಈ ಶಾಪ ಪ್ರಸಂಗ ನಾಂದಿ ಹಾಡಿತು ಎಂದೂ ಭಾವಿಸಬಹುದು.

ಅತಸ್ತ್ವಯೈಕದೇಹತ್ವಮಿಚ್ಛಾಮೋ ದೇವಿ ಜನ್ಮಸು
ಚತುರ್ಷ್ವಪಿ ಯತೋಽಸ್ಮಾಕಂ ಶಾಪದ್ವಯನಿಮಿತ್ತತಃ ॥ ೧೦೯ ॥

ಅ: 'ದೇವಿ, ನಮಗೆ ಹೀಗೆ ಎರಡು ಶಾಪಗಳು ಇರುವುದರಿಂದ ನಾವೀಗ ಒಟ್ಟು ನಾಲ್ಕು ಜನ್ಮಗಳಲ್ಲೂ ನಿನ್ನೊಂದಿಗೆ ಒಂದು ದೇಹದಲ್ಲಿ ಸೇರಿ ಹುಟ್ಟಲು ಇಚ್ಛಿಸುವೆವು.'

ವಿ: ಒಟ್ಟು ಬ್ರಹ್ಮ ದೇವರ ಶಾಪ ಎರಡು. ಒಂದು ಶಾಪದಂತೆ ಒಂದು ಮಾನವ ದೇಹ ಅದರಲ್ಲಿ ಪರಪುರುಷ ಸಂಪರ್ಕ, ಇನ್ನೊಂದು ಶಾಪದಂತೆ ಒಂದೇ ದೇಹದಲ್ಲಿ ಸೇರಿ ಮೂರು ಬಾರಿ ಮನುಷ್ಯ ಜನ್ಮ. ಈ ಎರಡು ಶಾಪಗಳಲ್ಲೂ ತಾವೆಲ್ಲಾ ಅವರೊಂದಿಗೆ ಸೇರಿಕೊಂಡು ಒಂದೇ ದೇಹವನ್ನು ಪಡೆದು ಹುಟ್ಟಬೇಕೆಂಬುದು ತಮ್ಮ ಅಪೇಕ್ಷೆಯೆಂದು ಅವರು ತಿಳಿಸಿದರು.

ಚತುರ್ಜನ್ಮ ಭವೇದ್ಭೂಮೌ ತ್ವಾ ನಾನ್ಯೋ ಮಾರುತಾತ್ ವ್ರಜೇತ್
ನಿಯಮೋಽಯಂ ಹರೇರ್ಯಸ್ಮಾದನಾದಿರ್ನಿತ್ಯ ಏವ ಚ ॥ ೧೧೦ ॥

ಅ: 'ನಮಗೆ ಭೂಮಿಯಲ್ಲಿ ನಾಲ್ಕು ಬಾರಿ ಜನ್ಮ ಒದಗುವುದು, ನಿನ್ನನ್ನು ವಾಯುದೇವರ ಹೊರತು ಬೇರಾರೂ ಸ್ಪರ್ಶಿಸಲಾರರು, ಇದು ಅನಾದಿನಿತ್ಯವಾದ ಶ್ರೀಹರಿಯ ನಿಯಮ.'

ವಿ: ೧) ಹಾಗೆ ಭಾರತೀ ದೇವಿಯೊಂದಿಗೆ ಸೇರಿ ನಾಲ್ಕು ಜನ್ಮ ಹುಟ್ಟಲು ಕಾರಣ ಇದರಲ್ಲಿ ನಿರೂಪಿತವಾಗಿದೆ. ಒಂದು ಜನ್ಮದಲ್ಲಿ ಪರಪುರುಷ ಸಂಪರ್ಕ, ಅದು ಸರ್ವಥಾ ವಾಯುದೇವರ ಹೊರತು ಬೇರಾರೊಂದಿಗೂ ಆಗಕೂಡದು. ಅದು ಸಿದ್ಧಿಸಬೇಕಾದರೆ ಭಾರತೀದೇವಿಯೊಂದಿಗೆ ತಾವು ಹುಟ್ಟುವಂತಾಗಬೇಕು. ಭಾರತೀ ದೇವಿಯನ್ನು ವಾಯುದೇವರ ಹೊರತು ಬೇರಾರೂ ಸಹ ಎಂದೂ ಸ್ಪರ್ಶಿಸಲು ಸಾಧ್ಯವಿಲ್ಲ ಎಂಬುದು ಶ್ರೀಹರಿಯ ವಿಶೇಷ ನಿಯಮ.

---

೧. ಚತುರ್ಷು ಜನ್ಮಸು ಮಧ್ಯೇ ಜನ್ಮತ್ರಯೇ ತ್ವಯಾ ಸಹ ಏಕದೇಹತ್ವಮಿಚ್ಛಾಮ ಇತ್ಯನ್ವಯಃ। ಚತುರ್ಷ್ವಪಿ ಜನ್ಮಸು ಏಕದೇಹತ್ವಂ ಶಚ್ಯಾದಿಭಿರ್ವಾಂಛಿತಮಿತಿ ನ ಭ್ರಮಿತವ್ಯಂ। ತಥಾಚ ಏಕದೇಹತ್ವೇನ ತ್ರಿಜನ್ಮಸು ಮಧ್ಯೇ ಏಕತಮೇ ಅನ್ಯಗಾತ್ವಂ ಭವಿಷ್ಯತೀತಿ ಭಾವಃ। – (ಜ.)

ಅತ್ರ ಚತುರ್ಷು ಜನ್ಮಸು ಏಕದೇಹತ್ವಪ್ರಾರ್ಥನಂ ಸ್ತ್ರೀತ್ವಾದನ್ಯಪುರುಷಸಂಸ್ಪರ್ಶಭೀತ್ಯೈವ । ನ ತು ಏಕದೇಹತ್ವ ನಿಯಮಸಿದ್ಧ್ಯರ್ಥಂ । ಅತ ಏವ ಚತುರ್ಷ್ವಪಿ ಜನ್ಮಸು ಅನ್ಯಪುರುಷಗಾಮಿತ್ವ ನಿಯಮೋಽಪಿ ನಾಸ್ತಿ । ತಥೈವ ಶಪ್ತತ್ವಾದಿತಿ ಭಾವಃ। – (ವ.)

೨) ಸಾಮಾನ್ಯವಾಗಿ ಉತ್ತಮ ಸ್ತ್ರೀಯರಿಗೆ ವಿಶೇಷವಾಗಿ ದೇವತಾ ಸ್ತ್ರೀಯರಿಗೆ ನಿಯತಪತಿ ಸಂಪರ್ಕವೇ ಸದಾ ಒದಗುವುದು. ಶಾಪಾದಿಗಳ ಕಾರಣದಿಂದ ಇತರ ದೇವತಾಸ್ತ್ರೀಯರಿಗೆ ಪರಪುರುಷ ಸಂಪರ್ಕ ಒದಗಬಹುದು. ಉದಾಹರಣೆಗೆ ವಾಲಿಪತ್ನಿಯಾದ ಶಚಿಯ ಅವತಾರಳಾದ ತಾರೆಗೆ ಸುಗ್ರೀವ ಸಂಪರ್ಕ, ಅದರಂತೆ ಗುರುಪತ್ನಿಯಾದ ತಾರೆಗೆ ಚಂದ್ರನ ಸಂಪರ್ಕ, ಹಾಗೆಯೇ ಕಾಮುಪತ್ನಿಯಾದ ರತಿಗೆ ಶಂಬರಾಸುರನ ಸಂಪರ್ಕ. ಆದರೆ, ವಾಯುಪತ್ನಿಯಾದ ಭಾರತಿಗೆ ಮಾತ್ರ ಯಾವುದೇ ಕಾರಣದಿಂದಲೂ ವಾಯುದೇವರ ಹೊರತು ಬೇರಾರ ಸಂಪರ್ಕವೂ ಸರ್ವಥಾ ಇಲ್ಲ. ಅದು ಶ್ರೀಹರಿಯು ಅವರಲ್ಲಿ ಮಾಡಿದ ವಿಶೇಷಾನುಗ್ರಹ. ಆದ್ದರಿಂದ ಅವರೊಂದಿಗೆ ಸೇರಿ ಇವರೆಲ್ಲ ಜನಿಸಿದರೆ, ಇವರಿಗೆ ಪವಿತ್ರವಾದ ವಾಯುದೇವರ ಸಂಪರ್ಕದ ಹೊರತು ಇತರ ದೇವತೆಗಳ ಸಂಪರ್ಕ ನಿಶ್ಚಿತವಾಗಿ ಒದಗದು. ಅದಕ್ಕಾಗಿ ಈ ರೀತಿಯ ವಿಶೇಷ ಪ್ರಾರ್ಥನೆ ಎಂದರ್ಥ.

೩) ಅವರಿಗೆ ಒಂದು ಜನ್ಮದಲ್ಲಿ ಮಾತ್ರ ಪರಪುರುಷ ಸ್ಪರ್ಶದ ಶಾಪವಿದ್ದರೂ, ಅವರು ಒಟ್ಟು ನಾಲ್ಕು ಜನ್ಮಗಳಲ್ಲೂ ಭಾರತೀ ದೇವಿಯೊಂದಿಗೆ ಸೇರಿಕೊಂಡೇ ಜನನವಾಗಲು ವಿಶೇಷಕಾರಣವನ್ನು ಶ್ರೀವಾದಿರಾಜಸ್ವಾಮಿಗಳು ಹೀಗೆ ನೀಡಿರುವರು – ಅವರಿಗೆ ಒಂದು ಜನ್ಮದಲ್ಲಿ ಮಾತ್ರ ಬ್ರಹ್ಮ ಶಾಪದಂತೆ ಪರಪುರುಷ ಸಂಪರ್ಕದ ಶಾಪವಿದ್ದರೂ, ಇತರ ಮೂರು ಜನ್ಮಗಳಲ್ಲೂ ದೇವತಾ ಸ್ತ್ರೀಯರಾದ ಅವರು ಅದ್ಭುತವಾದ ರೂಪಾದಿಗಳಿಂದ ಕೂಡಿರುವುದರಿಂದ ವರಾದಿಗಳಿಂದ ಉನ್ಮತ್ತರಾದ ಅಸುರರಿಂದ ಸ್ಪರ್ಶಾದಿಗಳ ಭಯ ಇದ್ದೇ ಇರುವುದು. ಅದನ್ನೂ ಸಹ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲೆಂದು ಅವರು ಈ ಬಗೆಯ ಉಪಾಯ ಮಾಡಿದರು ಎಂದು ಭಾವ.

ವಿಪ್ರಕನ್ಯಾವತಾರ

ಅತಸ್ತ್ವಯೈಕದೇಹಾನ್ ನೋ ನಾನ್ಯ ಆಪ್ನೋತಿ ಮಾರುತಾತ್
ಇತೀರಿತೇ ತಥೇತ್ಯುಕ್ತಾ ಪಾರ್ವತ್ಯಾದಿಯುತೈವ[೧] ಸಾ ॥ ೧೧೧ ॥

ವಿಪ್ರಕನ್ಯಾಽಭವತ್ ತತ್ರ ಚತಸ್ರಃ ಪಾರ್ವತೀಯುತಾಃ
ಏಕದೇಹಸ್ಥಿತಾಶ್ಚಕ್ರುರ್ಹರೀಶಾಯ ತಪೋ ಮಹತ್ ॥ ೧೧೨ ॥

ಅ: 'ಆದ್ದರಿಂದ ನಿನ್ನೊಂದಿಗೆ ಒಂದೇ ದೇಹದಲ್ಲಿರುವ ನಮ್ಮನ್ನು ವಾಯುವಿನ ಹೊರತು ಬೇರಾರೂ ಹೊಂದಲಾರರು'. ಅವರು ಹೀಗೆನ್ನಲು ಹಾಗೆಯೇ ಆಗಲಿ ಎಂದು ನುಡಿದು ಆ

---

೧. ಪಾರ್ವತ್ಯಾದೀನಾಂ ರುದ್ರಪರಿಚರ್ಯಾದಿಕರ್ಮಣಃ ಸ್ವಕೃತಕರ್ಮಣಶ್ಚ ಏಕವಿಷಯತ್ವಾರ್ಥೇ ಅನ್ಯಥಾ ವಿರುದ್ಧಕರ್ಮತ್ವೇನ ಏಕಶರೀರಸ್ಥಾನಾಂತದನ್ಯಥಾನಾದಿಪ್ರಸಂಗಾದಿತಿ ಭಾವಃ। – (ಜ.)

ಭಾರತೀದೇವಿಯು ಪಾರ್ವತ್ಯಾದಿಸ್ತ್ರೀಯರೊಂದಿಗೆ ಕೂಡಿಕೊಂಡು ವಿಪ್ರಕನ್ಯೆಯಾಗಿ ಜನಿಸಿದಳು. ಅಲ್ಲಿ ಪಾರ್ವತಿಯಿಂದ ಕೂಡಿದ ಇತರ ನಾಲ್ವರು ದೇವತಾಸ್ತ್ರೀಯರೂ ಆ ಒಂದೇ ದೇಹದಲ್ಲಿ ಇದ್ದು ರುದ್ರದೇವರನ್ನು ಕುರಿತು ದೊಡ್ಡ ತಪಸ್ಸನ್ನು ಮಾಡಿದರು.

ವಿ: ೧) ಅವರು ಹೀಗೆ ಪ್ರಾರ್ಥಿಸಿಕೊಳ್ಳಲು ಭಾರತೀದೇವಿಯು ಅವರ ಪ್ರಾರ್ಥನೆಯನ್ನು ಅಂಗೀಕರಿಸಿದರು. ಅವರು ಮಾಡಿದ ಅನುಗ್ರಹ ಅತ್ಯಂತ ವಿಶಿಷ್ಟವಾದುದು. ಅವರ ಸಂರಕ್ಷಣೆಗಾಗಿ ಸ್ವತಃ ತಾವು ನಾಲ್ಕು ಬಾರಿ ವಿನಾ ಕಾರಣ ಮನುಷ್ಯಲೋಕದಲ್ಲಿ ಅವತರಿಸುವಂತಹ ಪ್ರಸಂಗಕ್ಕೆ ಒಬ್ಬ ಶ್ರೇಷ್ಠ ದೇವತಾಸ್ತ್ರೀ ಅಂಗೀಕರಿಸುವುದು ಸಾಮಾನ್ಯ ವಿಚಾರವಲ್ಲ. ಶಾಪವಿರುವುದು ಅವರಿಗೆ ಅವರೊಂದಿಗೆ ಹುಟ್ಟಬೇಕಾದ್ದು ಇವರು. ಆ ಶಾಪವೋ ಅತ್ಯಂತ ವಿಚಿತ್ರವಾದುದು. ಅದಕ್ಕೆ ಸಮ್ಮತಿಸಿದ್ದು ಭಾರತೀ ದೇವಿಯ ಪರಮ ಕಾರುಣ್ಯಕ್ಕೆ ಸಂಕೇತ. ಅವರೆಲ್ಲರ ಪಾವಿತ್ರ್ಯವನ್ನು ಸಂರಕ್ಷಿಸಲು ಹಾಗೆ ಅವತರಿಸುವ ಮೂಲಕ ಭಾರತೀ ದೇವಿ ಸಾರಿದ ತತ್ವ ಲೋಕಪೂಜಿತವಾದುದು. ಪರರ ಕಲ್ಯಾಣಕ್ಕಾಗಿ ಅದರಲ್ಲೂ ಪಾತಿವ್ರತ್ಯದಂತಹ ಅತ್ಯಂತ ಭೂಷಣಪ್ರಾಯವಾದ ಧರ್ಮದ ರಕ್ಷಣೆಗಾಗಿ ಎಂತಹ ತ್ಯಾಗ ಮಾಡುವುದೂ ಶ್ರೀಹರಿಯ ವಿಶೇಷ ಪ್ರೀತಿಗೆ ಸಾಧನ ಎಂಬುದು ಅದರ ಭಾವ.

೨) ವಾಯುದೇವರು ಲೋಕಕಲ್ಯಾಣಕ್ಕಾಗಿ ಕಾಲಕೂಟದಂತಹ ಘೋರ ವಿಷವನ್ನು ಪಾನ ಮಾಡಿ ಅಮೃತಮಥನ ಕಾಲದಲ್ಲಿ ಇಡೀ ಜಗತ್ತನ್ನು ಪಾಲಿಸಿದ ವಿವರ ಹಿಂದೆ ಬಂದಿದೆ. ಅವರು

---

೨. ಅತ್ರ ಜನ್ಮನಾಂ ಚತುಷ್ಟಯಂ ಕಥಮಿತ್ಯುಕ್ತೇ ವಿಪ್ರಕನ್ಯೈಕಾ ನಲನಂದಿನೀ ದ್ವಿತೀಯಾ ತೃತೀಯಾ ದ್ರೌಪದೀ ಚತುರ್ಥೀ ಕಾಲೀತ್ಯಾದಿ । ನನು ಸಾ ಕೇವಲಾ ಭಾರತೀ । ಅನ್ಯದೇವ್ಯಸ್ತ್ರಾವಿಷ್ಟಾ ಇತ್ಯನೇನ ಕಾಲ್ಯಾಃ ಶುದ್ಧಭಾರತೀತ್ವಾತ್ ಕಥಂ ಕಾಲೀ ಚತುರ್ಥೇತ್ಯಾಶಂಕಾಯಾಂ ಸಾ ಕೇವಲಭಾರತೀ ನಾನ್ಯದೇವ್ಯಸ್ತ್ರಾವಿಷ್ಟಾ ಇತ್ಯಪಿ ವದಂತಿ । ಚಂದ್ರಾ ವಾ ಚತುರ್ಥೇತಿ ವದಂತಿ । ಉಭಯತ್ರಾಪಿ ಹೇತುಃ । ಭಾರತೀ ಜಾತೇತ್ಯನುಕ್ತ್ವಾ ಕೃಷ್ಣಾ ಜಾತಾ ಇತ್ಯುಕ್ತತ್ವಮೇವ । –(ತಿ.)

ಯದ್ವಾ ऽಶೂನ್ಯಶಯನವ್ರತಂ ವಿಧವಾದಿಭಿಃ ಸರ್ವಾಭಿಃ ಸ್ತ್ರೀಭಿಃ ಪುರುಷೈಶ್ಚ ಕಾರ್ಯಮಿತ್ಯುಚ್ಯತೇ । ತತ್ಫಲಂ ಚ ದಂಪತ್ಯೋಃ ಸರ್ವದಾ ಅಶೂನ್ಯಶಯನಮೇವ । ತತ್ತು ವಿಧವಾಯಾ ವಿಧುರಸ್ಯಾನುಪಪದ್ಯಮಾನಂ ತದತಿರಿಕ್ತಜನ್ಮನಿ ಯಥಾ ಕಲ್ಪ್ಯತೇ । ಏವಮೇವ ಭಾರತ್ಯಾ ಇದಾನೀಂ ಕನ್ಯಾ ಜನ್ಮತ್ವಾದೇವ ತದತಿರಿಕ್ತಸರ್ವೇಷ್ವಪಿ ಜನ್ಮಸು ಇತ್ಯುಪಪತ್ತೇಃ। ಅತ ಏವಾಚಾರ್ಯೈಃ ಪೂರ್ವಂ ವಿಪ್ರಕನ್ಯಾ ऽಭವದಿತ್ಯುಕ್ತಮ್ । ಅನ್ಯಥಾ 'ಬಭೂವ ನಲನಂದಿನೀ'ತ್ಯಾದಿವತ್ ವಿಪ್ರಪುತ್ರ್ಯಭವದಿತ್ಯವಕ್ಷ್ಯತ್ । ಮಾನುಷೇಷ್ವಪಿ ಜನ್ಮಸು ಪತಿಯೋಗವರಂ ಪ್ರಾದಾದಿತ್ಯತ್ರ ಜನ್ಮಸ್ವಿತಿಬಹುವಚನಾತ್ ಸರ್ವೇಷ್ವಪಿ ಜನ್ಮಸು ಪತಿಯೋಗವರಃ ಪ್ರತೀಯತೇ । ತದನುಪಪನ್ನಮ್ । ದ್ರೌಪದೀವ್ಯತಿರಿಕ್ತಜನ್ಮನಿ ಪತಿಯೋಗಾಭಾವಾತ್ ತಸ್ಮಾತ್ ಕಥಮೇತದಿತಿ ಚೇನ್ನ । ಪ್ರತಿದಿನಂ ಜನನಾತ್ ಜನ್ಮಸ್ವಿತ್ಯುಪಪತ್ತೇಃ । ಯಥೋಕ್ತಮೇಕೋನವಿಂಶೇ ಪ್ರತಿದಿನಂ ಜನನಾದ್ಧಿ ಕನ್ಯೇತಿ । ಮಾನುಷೇಷು ಜನ್ಮಸ್ವಪಿ ಸಂಭಾವಿತೇ ದ್ರೌಪದೀಜನ್ಮನೀತಿ ವಾ । 'ಅಪಿಃ ಪದಾರ್ಥಸಂಭಾವನಾನ್ವಯಸರ್ಗಗರ್ಹಾಸಮುಚ್ಚಯೇಷ್ವಿ'ತಿ ಸೂತ್ರಾತ್ ॥ –(ತಿ.)

ಹಾಗೆಮಾಡಿದ್ದರೆ ಇಂತಹ ದೇವತಾಸ್ತ್ರೀಯರ ಕಲ್ಯಾಣಕ್ಕಾಗಿ ಅವರ ಪತ್ನಿ ಭಾರತೀ ದೇವಿ ಹೀಗೆ ಮಾಡಿದರು. ಹೀಗೆ ಅತ್ಯಂತ ಆದರ್ಶ ಪತಿಪತ್ನಿಯರಾಗಿ ವಾಯುಭಾರತಿಯರು ಶಾಸ್ತ್ರ ಪ್ರಪಂಚ–ದಲ್ಲಿ ಮಾನ್ಯರಾಗಿರುವುದನ್ನು ಗಮನಿಸಬೇಕು.

೩) ಅಂತಹ ನಾಲ್ಕು ಜನ್ಮಗಳಲ್ಲಿ ಮೊದಲನೆಯ ಜನ್ಮ ತ್ರೇತಾಯುಗದಲ್ಲಿ ವಿಪ್ರಕನ್ನೆಯಾಗಿ ಅವತಾರ. ಆಗ ಹನುಮಂತನಾಗಿ ವಾಯುದೇವರ ಅವತಾರ. ಇವರು ಕನ್ಯೆ, ಅವರು ಬ್ರಹ್ಮಚಾರಿ ಎಂಬುದು ವಿಶೇಷ. ಆ ಜನ್ಮದಲ್ಲಿ ಪಾರ್ವತೀ ಮೊದಲಾದ ನಾಲ್ಕು ಜನ ಆ ಒಂದೇ ದೇಹದಲ್ಲಿದ್ದೇ ರುದ್ರ ದೇವರನ್ನು ಕುರಿತು ದೊಡ್ಡತಪಸ್ಸನ್ನು ಆಚರಿಸಿದರು.

ತದ್ದೇಹಸ್ಥಾ ಭಾರತೀ ತು ರುದ್ರದೇಹಸ್ಥಿತಂ ಹರಿಮ್ ।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಧೃತವ್ರತಾ ॥ ೧೧೩ ॥

ಅ: ಅವರ ದೇಹದಲ್ಲಿದ್ದ ಭಾರತೀದೇವಿ ಮಾತ್ರ ರುದ್ರದೇವರ ದೇಹದಲ್ಲಿದ್ದ ಶ್ರೀಹರಿಯನ್ನು ಕರ್ಮೈಕ್ಯಕ್ಕೋಸ್ಕರ ವ್ರತನಿಷ್ಠಳಾಗಿ ತಪಸ್ಸಿನಿಂದ ಪ್ರಸನ್ನೀಕರಿಸಿದಳು.

---

೧. ಕರ್ಮೈಕ್ಯಾರ್ಥಂ ಧೃತವ್ರತೇತ್ಯತ್ರ ಏಕದೇಹೇ ಕೃತನಮಸ್ಕಾರಸಕೃದ್ಯೋಜನಾದಿಕರ್ಮಣಾಮೈಕ್ಯಾರ್ಥಂ= ಫಲೈಕ್ಯೇನೈಕ್ಯಾರ್ಥಮ್। ಅನ್ಯಥಾ ಭಾರತ್ಯಾ ಶಿವಾಂತರ್ಗತವಿಷ್ಣುಪೂಜಾರೂಪಕರ್ಮಣಃ ಕೃತತ್ವೇನ ಅನ್ಯಾಭಿಃ ಶಿವಪೂಜಾರೂಪಕರ್ಮಣಃ ಕೃತತ್ವಾತ್ ಕರ್ಮೈಕ್ಯಾಯೋಗಾತ್। ''ಸ್ವಭರ್ತೃಸಂಯೋಗಂ ವರ'' ಮಿತಿ ವಚನಾತ್ ಅನ್ಯಾಸಾಮಪಿ ಚತಸೃಣಾಂ ಸ್ವಭರ್ತೃಸಂಯೋಗ ಏವ। ಭೀಮೋಽಪಿ ದ್ರೌಪದೀದೇಹೇ ಭಾರತೀಮೇವ ರಮಯತಿ। ನ ಶಚ್ಯಾದ್ಯಾಃ ಪರನಾರೀಃ। ಪ್ರಾಚೀನಾನ್ಯಗಾಮಿತ್ವಶಾಪಸ್ಯ ಅಭಿನವಸ್ವಪತಿಸಂಯೋಗಾಖ್ಯಶಿವವರೇಣ ತಿರಸ್ಕೃತತ್ವೇನ ಅನ್ಯಗಮನೇ ಕಾರಣಾಭಾವಾತ್। ''ಇತೀರಿತೇ ಪೃಥಯಾ ऽऽಹೂತವಾಯುಸಂಸ್ಪರ್ಶಮಾತ್ರಾದಭವದ್ಬಲದ್ವಯೀ'' ಇತಿ ವಚನಾತ್ ಯೋ ವಾಯುಃ ಪುತ್ರಜನನಾರ್ಥಂ ಕುಂತೀಸಮೀಪಂ ಪ್ರತ್ಯಾಗತೋಽಪಿ ಕುಂತ್ಯಾಃ ಉದರಮೇವ ಪಸ್ಪರ್ಶ ನ ತು ರೇಮೇ। ಸೋಽಯಂ ನಿರವದ್ಯಶಿರೋಮಣಿರ್ವಾಯುರೂಪೋ ಭೀಮಃ ನಿರ್ನಿಮಿತ್ತಂ ಸ್ಪೃಷ್ಟಾ ಏವ ನ ದೂಷಯೇದಿತಿ ಕಿಂ ವಕ್ತವ್ಯಮ್। ಅತಃ ಪಾರ್ವತ್ಯಾ ಅಪಿ ವಕ್ಷ್ಯಮಾಣಬ್ರಹ್ಮಶಾಪಾನ್ನ ಸ್ವಪತಿಷ್ಯಸಂಯೋಗೋ ನಾಪ್ಯನ್ಯಪತಿಸಂಯೋಗ ಇತಿ ತತ್ಪಾತಿವ್ರತ್ಯಂ ನ ಕೋಽಪಿ ತ್ಯಾಜಯೇದಿತಿ ಸರ್ವಮವದಾತಮ್। ಅತ ಏವ ಭೀಮಸ್ಯ ದ್ರೌಪದ್ಯಾ ಸಹ ಏಕಾಕಿತಯಾ ರತಿಕಾಲೇ ''ಅನ್ಯಾ ದೇವೀಃ ಸ್ವಾಪಯಿತ್ವಾ ಶರೀರೇ'' ಇತಿ ಸ್ವಯಮೇವ ವಕ್ಷ್ಯತ್ಯಾಚಾರ್ಯಃ ॥ –(ವಾ.)

ಕರ್ಮೈಕ್ಯಾರ್ಥಂ ಪಾರ್ವತ್ಯಾದೀನಾಂ ರುದ್ರಪರಿಚರ್ಯಾದಿಕರ್ಮಣಃ ಸ್ವಕೃತಕರ್ಮಣಶ್ಚ ಏಕವಿಷಯ-ತ್ವಾರ್ಥಂ ಅನ್ಯಥಾವಿರುದ್ಧಕರ್ಮತ್ವೇನ ಏಕಶರೀರಸ್ಥಾನಾಂತದುನ್ಮಥನಾದಿಪ್ರಸಂಗಾದಿತಿ ಭಾವಃ । ರುದ್ರದೇಹಸ್ಥಿತ-ರುದ್ರನಾಮಾನಂ ಹರಿಂ ತಪಸಾ ತೋಷಯಾಮಾಸೇತ್ಯನ್ವಯಃ । 'ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ ಸ್ಥಿತಃ' ಇತಿ ವಚನಾತ್ ॥ –(ಜ.)

'ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ ಸ್ಥಿತಃ' ಇತಿ ವಚನಾತ್ ॥

ಕುತೋ ವಾ ಭಾರತೀ ರುದ್ರಾಧಿಷ್ಠಾನೇಽಪೂಜಯದಿತ್ಯತ ಆಹ ಕರ್ಮೈಕ್ಯಾರ್ಥಮಿತಿ । ಕರ್ಮಣಾಮೇಕ-ವಿಷಯತ್ವಸಿದ್ಧ್ಯರ್ಥಮಿತ್ಯರ್ಥಃ। –(ತಾ.)

ಏ: ಉಳಿದವರೆಲ್ಲಾ ರುದ್ರದೇವರನ್ನು ಆರಾಧಿಸಿದರೆ, ಭಾರತೀದೇವಿ ಮಾತ್ರ ರುದ್ರ ದೇವರನ್ನು ಆರಾಧಿಸದೇ, ಅವರ ಅಂತರ್ಯಾಮಿಯಾದ ಶ್ರೀಹರಿಯನ್ನೇ ಆರಾಧಿಸಿದರು ಎಂದರ್ಥ. ಅದಕ್ಕೆ ಅವರು ಸ್ವತಃ ರುದ್ರದೇವರಿಗಿಂತ ಮಿಗಿಲಾದವರಾಗಿದ್ದುದೇ ಕಾರಣ. ಆ ರೀತಿಯಾದ ತಪಸ್ಸಿನ ಮುಖ್ಯ ಉದ್ದೇಶ ಕರ್ಮೈಕ್ಯ. ಅವರೆಲ್ಲರ ತಪಸ್ಸಿನ ಮುಖ್ಯ ಉದ್ದೇಶ ಸ್ವಭರ್ತೃ ಸಂಪ್ರಾಪ್ತಿ ಕರ್ಮೈಕ್ಯ ಎಂಬುದು ಮುಂದೆ ದೊರೆಯುವ ದೇಹೈಕ್ಯಕ್ಕೂ, ಅಲ್ಲಿ ನಡೆಯುವ ಗುರಿ ಸಾಧನೆಯ ಏಕತೆಗೂ ಸಾಧನ ಎಂದು ತಿಳಿಯಬೇಕು.

ತಸ್ಯೈ ಸ ರುದ್ರದೇಹಸ್ಥೋ ಹರಿಃ ಪ್ರಾದಾದ್ವರಂ ಪ್ರಭುಃ ।
ಅನಂತತೋಷಣಂ[೧] ವಿಷ್ಣೋಃ ಸ್ವಭರ್ತ್ರಾ ಸಹಜನ್ಮಸು ॥ ೧೧೪ ॥

ಸರ್ವೇಷ್ವಪೀತಿ ಚಾನ್ಯಾಸಾಂ ದದೌ ಶಂಕರ ಏವ ಚ ।
ವರಂ ಸ್ವಭರ್ತೃಸಂಯೋಗಂ[೨] ಮಾನುಷೇಷ್ವಪಿ[೩] ಜನ್ಮಸು ॥ ೧೧೫ ॥

ಅ: ಭಾರತೀದೇವಿಗೆ ರುದ್ರದೇವರ ಅಂತರ್ಯಾಮಿಯಾದ ಸರ್ವಸಮರ್ಥನಾದ ಶ್ರೀಹರಿ ತನ್ನ ಪತಿಯೊಂದಿಗೆ ಸಕಲ ಜನ್ಮಗಳಲ್ಲೂ ಶ್ರೀಹರಿಯ ಅನಂತ ಬಗೆಯ ತೃಪ್ತಿಯನ್ನು ಮಾಡು ಎಂದು ವರ ನೀಡಿದ. ಇತರರಿಗೆ ಮನುಷ್ಯ ಜನ್ಮಗಳಲ್ಲೂ ಸಹ ಅವರಿಗೆ ಅವರ ಪತಿಗಳೊಂದಿಗೆ ಸಮಾಗಮ ರೂಪ ವರವನ್ನು ನೀಡದನು.

ವಿ: ಅವರ ತಪಸ್ಸು ಸಿದ್ಧಿಸಿ ವರ ಲಭಿಸಿತು ಎಂದರ್ಥ. ಭಾರತೀದೇವಿಗೆ ವರ ನೀಡಿದ್ದು ಸಾಕ್ಷಾತ್ ಶ್ರೀಹರಿಯಾದರೆ, ಇತರ ದೇವಿಯರಿಗೆ ವರ ನೀಡಿದ್ದು ಶ್ರೀಹರಿಯ ಆಜ್ಞೆಯಂತೆ ರುದ್ರದೇವರು ಎಂಬುದು ವಿಶೇಷ.

---

೧. ಅನಂತೋಷಣಮಿತ್ಯತ್ರ ಅನಂತತೋಷಣಂ ಕರಿಷ್ಯಸೀತಿ ಯೋಗ್ಯಕ್ರಿಯಾಧ್ಯಾಹಾರಃ ॥ – (ವಾ.)
ವಿಷ್ಣೋರನಂತತೋಷಣಂ ಅಮಿತತೋಷಣಮ್ । – (ಜ.)
ಅನಂತತೋಷಣಮಿತಿ ಸ್ವಭರ್ತ್ರಾ ಸಹ ವಿಷ್ಣೋರಪರಿಚ್ಛಿನ್ನತೋಷಣಮಿತ್ಯರ್ಥಃ । – (ತಾ.)

೨. .... ಅತ್ರ ಭಾರತ್ಯಾ ಕಾಮ್ಯವರಪ್ರಾರ್ಥನಾಭಾವಾತ್ ಸ್ವಭರ್ತೃಸಂಯೋಗಂ ನಾಮ ಸ್ವಭರ್ತ್ರಾ - ಸಹ ತಯಾ ವಿಷ್ಣೋರನಂತಪ್ರೀತಿಸಂಯೋಗಃ ಪ್ರಾರ್ಥಿತಃ ಹರಿಣಾ ಸ ಏವ ವರೋ ದತ್ತಃ । – (ಜ.)

ಅತ್ರ ಭಾರತ್ಯಾ ಗಮ್ಯವರಪ್ರಾರ್ಥನಾಭಾವಾತ್ ಸ್ವಭರ್ತೃಸಂಯೋಗಂ ನಾಮ ಸ್ವಭರ್ತ್ರಾ ಸಹಿತಯಾ ವಿಷ್ಣೋರನಂತಪ್ರೀತಿಸಂಯೋಗಃ ಪ್ರಾರ್ಥಿತಃ ಹರಿಣಾ ಸ ಏವ ವರೋ ದತ್ತಃ । ಅನ್ಯಾಸಾಂ ತು ಕೇವಲಂ ಸ್ವಭರ್ತೃಸಂಯೋಗ ಏವ ರುದ್ರೇಣ ದತ್ತ ಇತಿ ಹೃದಯಮ್ ॥ – (ಜ.)

೩. ಮಾನುಷೇಷ್ವಪೀತಿ । ಮಾನುಷಜನ್ಮಸು ಮಧ್ಯೇ ಏಕಸ್ಮಿನ್ ಜನ್ಮನೀತ್ಯರ್ಥಃ । – (ತಾ.)

ನಳನಂದಿನೀ - ಇಂದ್ರಸೇನಾ

ತತಸ್ತದೈವ ದೇಹಂ ತಾ ವಿಸೃಜ್ಯ ನಳನಂದಿನೀ[೧]
ಬಭೂವುರಿಂದ್ರಸೇನೇತಿ ದೇಹೈಕ್ಯೇನ ಸುಸಂಗತಾಃ ॥ ೧೧೬ ॥

---

೧. ಪುರಾ ಪೂರ್ವಜನ್ಮನಿ ಪೂರ್ವೋಕ್ತಪ್ರಕಾರೇಣ ನಾಲಾಯನೀತಿ ವಿಶ್ರುತಾ । ಪಶ್ಚಾತ್ ಸೈವೇಂದ್ರಸೇನೇತಿ ವಿಖ್ಯಾತಾ ಜಾತಾ । ಪೂರ್ವಜನ್ಮನಿ ನಾಲಾಯನೀತಿ ವಿಶ್ರುತಾ । ನಲಪುತ್ರೀತ್ವಾತ್ ನಾಲಾಯನೀ ನಲನಂದಿನೀತಿ ಚ ವಿಶ್ರುತಾ । ತಸ್ಯಾ ಮುದ್ಗಲಃ । ದ್ವಿತೀಯೇ ಜನ್ಮನೀಂದ್ರಸೇನಾ । ತಸ್ಯಾಮೌದ್ಗಲ್ಯಃ ಮುದ್ಗಲಪುತ್ರಃ ಪತಿಃ । – ಲಕ್ಷಾಲಂಕಾರ

ನಳನಂದಿನೀ। ಬಭೂವುರಿಂದ್ರಸೇನೇತ್ಯತ್ರ ದ್ವಿತೀಯಜನ್ಮನಿ ನಳನಂದಿನೀ ಬಭೂವುಃ। ತಂ ಚ ದೇಹಂ ಸ್ವೇಚ್ಛಯೈವ ವಿಸೃಜ್ಯ ತೃತೀಯಜನ್ಮನಿ ಪುನರಿಂದ್ರಸೇನೇತಿ ಬಭೂವುರಿತ್ಯರ್ಥಃ। ನ ತು ನಳನಂದಿನ್ಯೇವೇಂದ್ರಸೇನಾ। ತಥಾ ಸತ್ಯಾರಬ್ಧತ್ರಿತ್ವಸ್ಯಾಂತಗಮನಾಭಾವೇನ ಗ್ರಂಥಕರ್ತುರಕೌಶಲಪ್ರಸಂಗಾತ್ ॥ – (ವಾ.)

ದೇವೀನಾಂ ಬಹುತ್ವಾದ್ಬಭೂವುರಿತಿ ಬಹುವಚನಮ್ । ನಲನಂದಿನೀದೇಹಸ್ಯೈಕತ್ವಾನ್ನಲನಂದಿನೀ-ತ್ಯೇಕವಚನಮ್ । ನ ಚಾತ್ರ ನಲನಂದಿನೀ ಇಂದ್ರಸೇನಾಖ್ಯಂ ದೇಹದ್ವಯಮಿತಿ ಶಂಕ್ಯಮ್ । ಇಂದ್ರಸೇನೇತೀತಿಕರಣೇನ ನಲನಂದಿನ್ಯಾಮಿಂದ್ರಸೇನಶಬ್ದಾಭಿಧೇಯತ್ವಸ್ಯ ಪ್ರತೀತೇಃ ಪದಾರ್ಥವಿಪರ್ಯಾಸೇ ಹಿ ಇತಿಕರಣಃ ಪ್ರಯುಜ್ಯತೇ । ಮೃತ್ತಿಕೇತ್ಯೇವ ಸತ್ಯಮಿತಿ ಯಾವತ್ । ನಲನಂದಿನೀದೇಹಸ್ಯ ಕಾರ್ಯಾಂತರಾನುಕ್ತೇಶ್ಚ ತಸ್ಮಾನ್ನಲನಂದಿನ್ಯಾ ಏವ ಇಂದ್ರಸೇನೇತಿ ಸಂಜ್ಞಾ ನತು ದೇಹದ್ವಯಮ್ ॥ – (ಜ.)

ನ ಚಾತ್ರ ನಲನಂದಿನೀಇಂದ್ರಸೇನಾಖ್ಯಂ ದೇಹದ್ವಯಮಿತಿ ಶಂಕ್ಯಮ್ । ಇಂದ್ರಸೇನೇನೇತಿ ಕರಣೇ ನಲನಂದಿನ್ಯಾ ಇಂದ್ರಸೇನಾಶಬ್ದಾಭಿಧೇಯತ್ವಸ್ಯ ಪ್ರತೀತೇಃ ಪದಾರ್ಥವಿಪರ್ಯಾಸೇ ಹಿ ಇತಿ ಕರಣಪ್ರಯುಜ್ಯತೇ । 'ಮೃತ್ತಿಕೇತ್ಯೇವ ಸತ್ಯಮಿ'ತಿವತ್ ನಲನಂದಿನೀದೇಹಸ್ಯ ಕಾರ್ಯಾಂತರಾನುಕ್ತೇಶ್ಚ ತಸ್ಮಾನ್ನಲನಂದಿನ್ಯಾ ಏವ ಇಂದ್ರಸೇನೇತಿ ಸಂಜ್ಞಾ ನ ತು ದೇಹದ್ವಯಮ್ ॥ – (ವ.)

ನಲನಂದಿನೀತಿ । ಇಂದ್ರಸೇನೇತಿ ನಾಮ್ನಾ ನಲಸ್ಯ ಪುತ್ರೀ ಬಭೂವುರಿತ್ಯರ್ಥಃ । ತದುಕ್ತಂ ಮಹಾಭಾರತೇ –

ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯನೀ ಸುತಾ ।
ಮೌದ್ಗಲ್ಯಂ ಪತಿಮಾಸಾದ್ಯ ಚಚಾರ ವಿಗತಜ್ವರಾ ॥ ಇತಿ ।

ಕೇಚಿತ್ ತು ದ್ವಿತೀಯಜನ್ಮನಿ ನಲನಂದಿನೀ ಬಭೂವುಸ್ತಂ ಚ ದೇಹಂ ಸ್ವೇಚ್ಛಯೈವ ವಿಸೃಜ್ಯ ತೃತೀಯಜನ್ಮನಿ ಪುನರಿಂದ್ರಸೇನೇತಿ ನಾಮ್ನಾ ಬಭೂವುರಿತ್ಯರ್ಥಃ । ಅನ್ಯಥಾ ಜನ್ಮಚತುಷ್ಟಯಾನುಕ್ತಿದೋಷಾ ಇತ್ಯಾಹುಃ । ವಿಪ್ರಕನ್ಯೇತಿ ಪ್ರಥಮಂ ಜನ್ಮ ತತ್ರ ನ ಸ್ವಪರಪುರುಷಸಂಯೋಗಃ । ನಲನಂದಿನೀತಿ ದ್ವಿತೀಯಮ್ । ತತ್ರ ಮುದ್ಗಲಸ್ಥವಾಯುಸಂಯೋಗಃ । ದ್ರೌಪದೀತಿ ತೃತೀಯಮ್ । ತತ್ರ ಪಾರ್ವತ್ಯತಿರಿಕ್ತಾನಾಂ ಸ್ವಪತಿನಾತ್ರ ಸಂಯೋಗಃ। ಪಾರ್ವತ್ಯಾಸ್ತು ತಸ್ಯಾಪ್ಯಭಾವಃ । ಕಲಿಯುಗೇ ಭಗವತ ಆಚಾರ್ಯಸ್ಯಾವತಾರಸಮಯೇ ಚತುರ್ಥಜನ್ಮ ಯದ್ವಕ್ಷ್ಯತಿ । 'ತದೈವ ಕೃಷ್ಣಾಪಿ ಭುವಿ ಪ್ರಜಾತೇ'ತಿ ಸಾ ತು ಕಲ್ಯಾಣೇ ತಸ್ಯಾಶ್ಚ ವಿಪ್ರಕನ್ಯಾವನ್ನ ವಿವಾಹ ಇತಿ ಸಂಪ್ರದಾಯ ವಿದಃ । ತಥಾ ಚ ನ ಜನ್ಮಚತುಷ್ಟಯಾನುಕ್ತಿದೋಷ ಇತ್ಯಲಮ್ ॥ – (ತಾ.)

ದಮಯಂತ್ಯಾಂ ನಲಾಜ್ಜಾತತ್ವಾನ್ನಲನಂದಿನೀ । ನಾಮ್ನಾ ಇಂದ್ರಸೇನೇತ್ಯರ್ಥಃ । 'ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯಿನೀ ಸುತಾ' ಇತಿ ಸಭಾಪರ್ವಣಿ ಭಾರತವಚನಾತ್ ॥ – (ಶ್ರೀ.)

ಅ: ಅನಂತರ ಆಗಲೇ ಅವರು ಆ ದೇಹವನ್ನು ತೊರೆದು ನಳನ ಮಗಳಾಗಿ ಇಂದ್ರಸೇನಾ ಎಂಬ ಹೆಸರಿನಿಂದ ಒಂದೇ ದೇಹದೊಂದಿಗೆ ಕೂಡಿ ಒಟ್ಟಾಗಿಯೇ ಜನಿಸಿದರು.

ವಿ: ಅವರೆಲ್ಲ ಎರಡನೇ ಜನ್ಮದಲ್ಲಿ ನಳ ದಮಯಂತಿಯರ ಪುತ್ರಿಯಾಗಿ ಜನಿಸಿದರು. ಆಗಲೂ ಅವರೆಲ್ಲರದ್ದು ಒಂದೇ ದೇಹ. [೧]ಇಂದ್ರಸೇನಾ ಎಂದು ಹೆಸರು. ಇಲ್ಲಿ ವ್ಯಾಖ್ಯಾನಗಳಲ್ಲಿ ಭಿನ್ನಾಭಿಪ್ರಾಯವಿದೆ. ಹೆಚ್ಚಿನ ವ್ಯಾಖ್ಯಾನಕಾರರ ಅಭಿಪ್ರಾಯ ನಳನಂದಿನಿಯೇ ಇಂದ್ರಸೇನಾ ಎಂದು, ಮಹಾಭಾರತದಲ್ಲಿ ಬಂದಿರುವಂತೆ ನಳದಮಯಂತಿಯರ ಪುತ್ರಿಯ ಹೆಸರು ಇಂದ್ರಸೇನಾ ಎಂದೇ :

ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯನೀ ಶುಭಾ ।
ಮೌದ್ಗಲ್ಯಂ ಪತಿಮಾಸಾದ್ಯ ಚಚಾರ ವಿಗತಜ್ವರಾ ॥

ಈ ವ್ಯಾಖ್ಯಾನಗಳಂತೆ ವಿಪ್ರಕನ್ಯಾ, ಇಂದ್ರಸೇನಾ, ದ್ರೌಪದೀ ಮತ್ತು ಚಂದ್ರಾ ಎಂಬವು ಕ್ರಮವಾಗಿ ಅವರ ನಾಲ್ಕು ಅವತಾರಗಳು. ವಾದಿರಾಜೀಯದಂತೆ ನಳನಂದಿನಿ ಮತ್ತು ಇಂದ್ರಸೇನೆಯರು ಬೇರೆ ಬೇರೆ. ಅವರ ವ್ಯಾಖ್ಯಾನದಂತೆ ವಿಪ್ರಕನ್ಯಾ, ನಳನಂದಿನೀ, ಇಂದ್ರಸೇನಾ ಮತ್ತು ದ್ರೌಪದಿ – ಇವು ನಾಲ್ಕು ಅವರ ಅವತಾರಗಳು. ಶ್ರೀಮದಾಚಾರ್ಯರು ಮೂವತ್ತೆರಡನೇ ಅಧ್ಯಾಯದಲ್ಲಿ 'ತದೈವ ಕೃಷ್ಣಾ ಭುವಿಪ್ರಜಾತಾ' ('ಆಗಲೇ ದ್ರೌಪದಿಯು ಅವತರಿಸಿದಳು') ಎಂದಿರುವುದರಿಂದ ಹೆಚ್ಚು ವ್ಯಾಖ್ಯಾನಕಾರರ ಭಾವ. ಗರುಡಪುರಾಣದಲ್ಲೂ ಹಾಗೆಯೇ ಇದೆ. ವಾದಿರಾಜೀಯ ಲಕ್ಷಾಲಂಕಾರದ ಪಾಠವೂ ಸಹ ಇದಕ್ಕೇ ಸಂವಾದಿಯಾಗಿದೆ.

ಮುದ್ಗಲನಿಗೆ ಬ್ರಹ್ಮಶಾಪ

ತದಾऽऽಸೀನ್ಮುದ್ಗಲೋ ನಾಮ ಮುನಿಸ್ತಪಸಿ ಸಂಸ್ಥಿತಃ
ಚಕಮೇ ಪುತ್ರಿಕಾಂ ಬ್ರಹ್ಮೇತ್ಯಶೃಣೋತ್ ಸ ಕಥಾಂತರೇ ॥ ೧೧೭ ॥

ಅ: ಆಗ ಮುದ್ಗಲನೆಂಬ ಮುನಿ ತಪೋನಿರತನಾಗಿದ್ದ. ಅವನು ಕಥೆಯೊಂದರಲ್ಲಿ ಬ್ರಹ್ಮ ದೇವರು ತನ್ನ ಮಗಳನ್ನು ಮೋಹಿಸಿದ ಎಂದು ಕೇಳಿದ.

ವಿ: ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಥೆಯನ್ನು ಇಲ್ಲಿ ತಿಳಿಸುತ್ತಿರುವರು. ಅದರಂತೆ ಮುದ್ಗಲನೆಂಬ ಒಬ್ಬ ಮುನಿ ಪುರಾಣ ಕಥೆಯನ್ನು ಕೇಳುತ್ತಿದ್ದಾಗ ಬ್ರಹ್ಮ ದೇವರು ತಾವೇ ಸೃಷ್ಟಿಸಿದ ತಮ್ಮ ಪುತ್ರಿಯನ್ನು ತಾವೇ ಮೋಹಿಸಿದರು ಎಂಬ ಅರ್ಥದ ಮಾತನ್ನು ಕೇಳಿದ. ಇಂತಹ ಮಾತು ಶ್ರೀಮದ್ಭಾಗವತಪುರಾಣದಲ್ಲಿದೆ: 'ಅಕಾಮಾಂ ಚಕಮೇ ಕ್ಷತ್ತಃ ಸಕಾಮಾ ಇತಿ ನಃ ಶ್ರುತಮ್' (೩/೧೨/೨೮).

---

೧. ಇಂದ್ರಸೇನಂ ಸುತಂ ಚಾಪಿ ಇಂದ್ರಸೇನಾಂ ಚ ಕನ್ಯಕಾಮ್ । - ಭಾರತೇ (ವನ. ೫೭/೪೬)

ಅಪಾಹಸತ್ ಸೋಽಬ್ಜಯೋನಿಂ ಶಶ್ಚಾಪೈನಂ ಚತುರ್ಮುಖಃ ।
ಭಾರತ್ಯಾದ್ಯಾಃ ಪಂಚದೇವೀರ್ಗಚ್ಛ ಮಾನಿನ್ನಭೂತಯೇ[೨] ॥ ೧೧೮ ॥

ಅ: ಮುದ್ಗಲ ಬ್ರಹ್ಮನನ್ನು ಅಪಹಾಸ ಮಾಡಿದ, ಅವನಿಗೆ ಬ್ರಹ್ಮ ಶಪಿಸಿದ: ''ದುರಹಂಕಾರಿಯೇ! ನೀನು ಭಾರತಿ ಮೊದಲಾದ ಪಂಚದೇವಿಯರನ್ನು ಹೊಂದು. ಅದು ನಿನಗೆ ಅನರ್ಥಕ್ಕೆ ಕಾರಣವಾಗುವುದು''.

ವಿ: ಬ್ರಹ್ಮದೇವರು ಮೋಹಿಸಿದ ಆ ಕನ್ಯೆ ನಿಜವಾದ ಸರಸ್ವತಿಯಲ್ಲ, ಅವರು ಆಕೆಯನ್ನು ನಿಜವಾಗಿ ಮೋಹಿಸಲೂ ಇಲ್ಲ. ಹಾಗೆ ಮಾಡಿದ್ದು ಅಸುರಮೋಹನಕ್ಕೆಂದು ಮಾತ್ರ. ಅದರ ರಹಸ್ಯವನ್ನೂ ತಿಳಿಯದೆ ಮುದ್ಗಲ ಬ್ರಹ್ಮದೇವರನ್ನು ಕಾಮುಕರು ಎಂಬ ಅರ್ಥದಲ್ಲಿ ನಗಾಡಿದ. ಅದರ ಫಲವಾಗಿ ಬ್ರಹ್ಮದೇವರು ಶಾಪ ನೀಡಿದರು ಎಂದರ್ಥ. ಉತ್ತಮರ ಬಗ್ಗೆ ಪೂರ್ವಾಪರಗಳನ್ನು ತಿಳಿಯದೇ ಅಪಹಾಸ ಮಾಡುವುದು ತಾಮಸ ಲಕ್ಷಣ ಎಂದು ಭಾಗವತದಲ್ಲಿದೆ[೪]. ಮುದ್ಗಲಮುನಿ ಸಾತ್ವಿಕನಾದರೂ ಅಸುರಾವೇಶದಿಂದಾಗಿ ಹಾಗೆ ಅಪಹಾಸ ಮಾಡಿ ಶಾಪಕ್ಕೊಳಗಾದ ಎಂದು ತಿಳಿಯಬೇಕು.

ಇತೀರಿತಸ್ತಂ ತಪಸಾ ತೋಷಯಾಮಾಸ ಮುದ್ಗಲಃ ।
ಶಾಪಾನುಗ್ರಹಮಸ್ಯಾಥ[೫] ಚಕ್ರೇ ಕಂಜಸಮುದ್ಭವಃ ॥ ೧೧೯ ॥

ಅ: ಬ್ರಹ್ಮ ಹೀಗೆ ಶಾಪ ನೀಡಲು ಮುದ್ಗಲ ಅವರನ್ನು ತಪಸ್ಸಿನಿಂದ ಪ್ರಸನ್ನೀಕರಿಸಿಕೊಂಡ. ಬಳಿಕ ಬ್ರಹ್ಮದೇವರು ಅವನಿಗೆ ನೀಡಿದ ಶಾಪಕ್ಕೆ ಬದಲಾಗಿ ಅನುಗ್ರಹ ಮಾಡಿದರು.

ವಿ: ಪಾಪವನ್ನು ಮಾಡದಿರುವುದು ಸಜ್ಜನರ ಲಕ್ಷಣ, ಅಕಸ್ಮಾತ್ತಾಗಿ ಅಂತಹ ಪಾಪಕರ್ಮ ಘಟಿಸಿದರೆ ಅದಕ್ಕಾಗಿ ಪಶ್ಚಾತ್ತಾಪಪಟ್ಟು ಸೂಕ್ತವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದೂ ಸಹ

---

೧. ಅಹಂ ಕಾಮರಹಿತ ಇತ್ಯಭಿಮಾನಿನ್ । – (ವ.)

೨. ಅಭೂತಯೇ ನರಕಾದ್ಯನರ್ಥಪ್ರಾಪ್ತಯೇ । – (ಜ.)

೩. 'ಯಾಂ ತತ್ಯಾಜ ವಿಭುರ್ಬ್ರಹ್ಮಾ ಮಾನುಷೀ ವಾಕ್ಚ ಸಾ ಸ್ಮೃತಾ ।
ಸರಸ್ವತೀ ನಿಜಾ ಭಾರ್ಯಾ ದೈವೀಂ ವಾಚಂ ತು ತಾಂ ವಿದುಃ'ಇತಿ ಚ – ಭಾ.ತಾ. (೩/೧೩/೩೩)

೪ ರಜಸಾ ಘೋರಸಂಕಲ್ಪಾಃ ಕಾಮುಕಾ ಅಹಿಮನ್ಯವಃ ।
ದಾಂಭಿಕಾ ಮಾನಿನಃ ಪಾಪಾ ವಿಹಸಂತ್ಯಚ್ಯುತಪ್ರಿಯಾನ್ ॥ – ಭಾಗವತ (೧೧/೫/೮)

೫. ಶಾಪಾನುಗ್ರಹಂ ಶಾಪಾನಂತರಂ ಶಾಪಸ್ಯ ಅನುಗ್ರಹಸ್ತಮಿತಿ ವಾ । – (ಜ.)

ಸಜ್ಜನರ ಲಕ್ಷಣವೇ. ಇಲ್ಲಿ ಮುದ್ಗಲ ಹೀಗೆ ನಡೆದು ತನ್ನ ಸಾತ್ವಿಕತೆಯನ್ನು ತೋರಿದ. ಬ್ರಹ್ಮ ದೇವರನ್ನು ತಪಸ್ಸು ಮಾಡಿ ಮೆಚ್ಚಿಸಿ, ಅವರ ಅನುಗ್ರಹವನ್ನು ಸಂಪಾದಿಸಿ ಶಾಪ ಮೋಕ್ಷದ ಬಗೆಯನ್ನು ಅರಿತ ಎಂದರ್ಥ.

೧
ನ ತ್ವಂ ಯಾಸ್ಯಸಿ ತಾ ದೇವೀರ್ಮಾರುತಸ್ತ್ವಚ್ಛರೀರಗಃ ।
ಯಾಸ್ಯತಿ ತ್ವಂ ತದಾ ಮೂರ್ಚ್ಛಾಂ ಗತೋ ನೈವ ವಿಬುಧ್ಯಸೇ ॥ ೧೨೦ ॥

೨
ನ ಚ ಪಾಪಂ ತತಸ್ತೇ ಸ್ಯಾದಿತ್ಯುಕ್ತೇ ಚೈನಮಾವಿಶತ್ ।
ಮಾರುತೋಽಥೇಂದ್ರಸೇನಾಂ ಚ ಗೃಹೀತ್ವಾಽಥಾಭವದ್ಗೃಹೀ ॥ ೧೨೧ ॥

ಅ: 'ನೀನು ಆ ದೇವಿಯರ ಸಂಪರ್ಕ ಮಾಡುವುದಿಲ್ಲ, ನಿನ್ನ ದೇಹದಲ್ಲಿದ್ದು ಮಾರುತ ಸಂಗ ಮಾಡುವನು. ನೀನು ಆಗ ಪ್ರಜ್ಞೆಯಿಲ್ಲದವನಾಗಿದ್ದು ಅದರ ಪರಿಜ್ಞಾನವನ್ನು ಹೊಂದದವನಾಗುವಿ. ಅದರಿಂದ ನಿನಗೆ ಪಾತಕ ಒದಗದು' ಎಂದು ನುಡಿದರು, ವಾಯುದೇವರು ಅವನೊಳಗೆ ಪ್ರವೇಶಿಸಿದರು. ಮುಂದೆ ಅವನು ಇಂದ್ರಸೇನೆಯನ್ನು ವಿವಾಹವಾಗಿ ಗೃಹಸ್ಥಾಶ್ರಮಿಯಾದ.

ವಿ: ಮುಂದೆ ಅದರಂತೆಯೇ ನಡೆಯಿತು. ವಾಯುದೇವರು ಮುದ್ಗಲನಲ್ಲಿ ಪ್ರವೇಶಿಸಿ ಇಂದ್ರಸೇನೆಯನ್ನು ವಿವಾಹವಾಗಿ, ಅವಳೊಡನೆ ವಿಹರಿಸಿದರು. ವಾಯುದೇವರದು ಭಾರತೀರಮಣವಾದರೆ, ಇತರ ದೇವತಾಸ್ತ್ರೀಯರಿಗೆ ವಾಯುದೇವರ ವಾತ್ಸಲ್ಯದ ಸ್ಪರ್ಶವಾಯಿತು ಎಂದರ್ಥ.

---

೧. ಪಂಚ ದೇವೀರ್ಗಚ್ಛೇತಿ ಬ್ರಹ್ಮಶಾಪಸ್ಯ ''ನ ತ್ವಂ ಯಾಸ್ಯಸಿ ತಾ ದೇವೀ''ರಿತಿ ಬ್ರಹ್ಮವರೇಣೈವ ಪರಿಹೃತತ್ವಾತ್। ಮಾರುತಸ್ತ್ವಚ್ಛರೀರಗಃ ಯಾಸ್ಯತೀತಿ ವಚನಸ್ಯ ಸಾಮಾನ್ಯವಚನತ್ವೇನ ತಾ ದೇವೀರಿತ್ಯನುಕರ್ಷೇ ಕಾರಣಾಭಾವಾತ್। ಮುದ್ಗಲವತ್ ತಾ ದೇವೀರ್ಗಚ್ಛೇತಿ ವಾಯೋಃ ಶಾಪಾಭಾವೇನ ಚ ಇಂದ್ರಸೇನಾಮಿತಿ ವಕ್ಷ್ಯಮಾಣಪದಾಕರ್ಷಣೇನ ಭಾರತೀರೂಪಾಮಿಂದ್ರಸೇನಾಂ ಯಾಸ್ಯತೀತಿ ಸಂಬಂಧಸಂಭವಾತ್। ಅತ್ರಾಪಿ ವಾಯೋರ್ನ ಪರಸ್ತ್ರೀಗಮನಂ ಶಂಕ್ಯಮ್। ಅತ ಏವೇಂದ್ರಸೇನಾಂ ಗೃಹೀತ್ವೇತಿ ರೇಮೇ ಚ ಸ ತಯಾ ಸಾರ್ಧಮಿತಿ ಚ ಸ್ಥಾನದ್ವಯೇಽಪ್ಯೇಕವಚನಮೇವ ನತು ತಾಭಿರಿತಿ ಬಹುವಚನಮ್। ಕಿಂಚ ಆಪಾತತಃ ಪ್ರತೀತೋಽಪಿ ದೋಷೋ ನ ಮಹತ್ತು ಶಂಕನೀಯಃ। ಕಿಂತು ವಾಕ್ಯಮೇವಾನ್ಯಥಾ ವ್ಯಾಖ್ಯೇಯಮ್। ಅಪ್ರತೀತದೋಷಸ್ಯೋಹನಂ ತು ಮೋಹಾದೇವೇತಿ ಜ್ಞೇಯಮ್ ॥ – (ವಾ.)

೨. ನ ಚ ಶಾಪಂ ತತಸ್ತೇ ಸ್ಯಾದಿತ್ಯತ್ರ ಶಪ್ಯತೇಽನೇನೇತಿ ಶಾಪಂ= ಶಾಪವಚನಂ ನತು ಶಪನಂ ಶಾಪಃ। ಅತೋ ನ ಪುಲ್ಲಿಂಗತಾನಿಯಮ ಇತಿ ಜ್ಞೇಯಮ್ ॥ – (ವಾ.)

ಮುದ್ಗಲ - ನಳನಂದಿನೀ

ರೇಮೇ ಚ [೧]ಸ ತಯಾ ಸಾರ್ಧಂ ದೀರ್ಘಕಾಲಂ ಜಗತ್ಪ್ರಭುಃ ।
ತತೋ ಮುದ್ಗಲಮುದ್ಬೋಧ್ಯ ಯಯೌ ಚ ಸ್ವಂ ನಿಕೇತನಮ್ ॥ ೧೨೨ ॥

ಅ: ಅವಳೊಂದಿಗೆ ಜಗತ್ಪ್ರಭುವಾದ ವಾಯು ಚಿರಕಾಲ ವಿಹರಿಸಿದ. ಬಳಿಕ ಮುದ್ಗಲನನ್ನು ಎಚ್ಚರಿಸಿ ತನ್ನ ಲೋಕಕ್ಕೆ ಮರಳಿದ.

ವಿ: ಮೇಲ್ನೋಟಕ್ಕೆ ಮಹಾಭಾರತ ಮತ್ತು ಕೆಲವು ಪುರಾಣಗಳಲ್ಲಿ ಮುದ್ಗಲ ಇಂದ್ರಸೇನೆ–ಯೊಡನೆ ರಮಿಸಿದ ಎಂಬರ್ಥದ ಮಾತುಗಳುಂಟು. ಅವೆಲ್ಲವುಗಳ ಮರ್ಮವನ್ನು ಶ್ರೀಮದಾ–ಚಾರ್ಯರು ಹೀಗೆ ತಿಳಿಸಿರುವರು ಎಂದು ತಿಳಿಯಬೇಕು. ಮುದ್ಗಲ ಮೊದಲಿಗೆ ಒಬ್ಬ ಕುಷ್ಠರೋಗಿ–ಯಂತೆ ವರ್ತಿಸಿ ಇಂದ್ರಸೇನೆಯ ನಿಷ್ಠೆಯನ್ನು ಪರೀಕ್ಷಿಸಿ, ಬಳಿಕ ದಿವ್ಯರೂಪದಿಂದ ಇಂದ್ರಸೇನೆ–ಯೊಡನೆ ರಮಿಸಿದ ಎಂದು ಪೌರಾಣಿಕನಿರೂಪಣೆ. ಇಲ್ಲಿ ಕುಷ್ಠರೋಗಿಯಾದ ಮುದ್ಗಲ ಎಂದರೆ ಬ್ರಹ್ಮದೇವರ ಶಾಪದಿಂದ ಪೀಡಿತನಾದ ಮುದ್ಗಲ ಎಂದೂ, ಅವನು ಧರಿಸಿದ ದಿವ್ಯರೂಪ ಎಂದರೆ ವಾಯುದೇವರು ಪೂರ್ಣಸನ್ನಿಧಾನವನ್ನಿರಿಸಿದ ವಿಶೇಷ ದೇಹ ಎಂದೂ ಅರ್ಥಮಾಡಿಕೊಂಡರೆ ನಿರ್ಣಯಕ್ಕೆ ಅನುಗುಣವಾದ ಭಾವ ತಿಳಿಯುವುದು.

ಇಂದ್ರಸೇನೆಯ ತಪಸ್ಸು

ತತೋ ದೇಶಾಂತರಂಗತ್ವಾ ತಪಶ್ಚಕ್ರೇ ಸ ಮುದ್ಗಲಃ ।
ಸೇಂದ್ರಸೇನಾ ವಿಯುಕ್ತಾಽಥ ಭರ್ತ್ರಾ ಚಕ್ರೇ ಮಹತ್ತಪಃ ॥ ೧೨೩ ॥

ಅ: ಅನಂತರ ಮುದ್ಗಲ ದೇಶಾಂತರಕ್ಕೆ ತೆರಳಿ ತಪಸ್ಸನ್ನು ಆಚರಿಸಿದ. ಪತಿಯಿಂದ ಅಗಲಿದ ಆ ಇಂದ್ರಸೇನೆ ದೊಡ್ಡ ತಪಸ್ಸಿಗೆ ತೊಡಗಿದಳು.

[೨]ತದ್ದೇಹಗಾ ಭಾರತೀ ತು ಕೇಶವಂ ಶಂಕರೇ ಸ್ಥಿತಮ್ ।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಹಿ ಪೂರ್ವವತ್ ॥ ೧೨೪ ॥

---

೧. ತಯಾ = ಇಂದ್ರಸೇನಯಾ । – (ಜ.)

೨. ತದ್ದೇಹಗಾ ಭಾರತೀ ತು ಶಂಕರಸ್ಥಂ ಕೇಶವಂ ಪೂರ್ವವತ್ ಕರ್ಮೈಕ್ಯಾರ್ಥಂ ತೋಷಯಾಮಾಸ । – (ಜ.)

ಅ: ಅವಳ ದೇಹದಲ್ಲಿದ್ದ ಭಾರತಿ ಮಾತ್ರ ಶಂಕರನ ಅಂತರ್ಯಾಮಿಯಾದ ಶ್ರೀಹರಿಯನ್ನು ಎಂದಿನಂತೆ ಕರ್ಮೈಕ್ಯಕ್ಕೋಸ್ಕರ ತಪಸ್ಸಿನಿಂದ ಪ್ರಸನ್ನಗೊಳಿಸಿದಳು.

ಉಮಾದ್ಯಾ ರೌದ್ರಮೇವಾತ್ರ ತಪಶ್ಚಕ್ರುರ್ಯಥಾ ಪುರಾ ।
ಪ್ರತ್ಯಕ್ಷೇ ಚ ಶಿವೇ ಜಾತೇ ತದ್ದೇಹಸ್ಥೇ ಚ ಕೇಶವೇ ॥ ೧೨೫ ॥

ಪೃಥತ್ ಪೃಥಕ್ ಸ್ವಭರ್ತ್ರಾಪ್ಯೈ ತಾಃ ಪಂಚಾಪ್ಯೇಕದೇಹಗಾಃ ।
ಪ್ರಾರ್ಥಯಾಮಾಸುರಭವತ್ ಪಂಚಕೃತ್ವೋ ವಚೋ ಹಿ ತತ್ ॥ ೧೨೬ ॥

ಅ: ಪಾರ್ವತಿ ಮೊದಲಾದವರು ಆ ದೇಹದಲ್ಲಿ ಎಂದಿನಂತೆ ರುದ್ರದೇವರನ್ನು ಕುರಿತೇ ತಪಸ್ಸು ಮಾಡಿದರು. ಶಿವನೂ ಅವನೊಳಗಿನ ಶ್ರೀಹರಿಯೂ ಪ್ರತ್ಯಕ್ಷರಾಗಲು ಆ ಐವರು ಒಂದೇ ದೇಹದಲ್ಲಿದ್ದೇ ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮ ಪತಿಗಳನ್ನು ಹೊಂದುವುದಕ್ಕೋಸ್ಕರವಾಗಿ ವರಗಳನ್ನು ಬೇಡಿಕೊಂಡರು. ಅವರ ಮಾತು ಐದು ಬಾರಿ ಅವರ ಬಾಯಿಂದ ಹೊರ ಬಂದಿತು.

ವಿ: ೧) ಅವರ ತಪಸ್ಸಿಗೆ ಮೆಚ್ಚಿ ಭಾರತೀ ದೇವಿಗೆ ಶ್ರೀಹರಿಯು ಇತರ ಸ್ತ್ರೀಯರಿಗೆ ರುದ್ರ ದೇವರು ದರ್ಶನ ನೀಡಿದರು. ಆಗ ಅವರೆಲ್ಲರೂ **'ಪತಿಂ ದೇಹಿ'** ಎಂಬುದಾಗಿ ಪ್ರತ್ಯೇಕ ಪ್ರತ್ಯೇಕವಾಗಿ ವರ ಕೇಳಿಕೊಂಡರು. ವ್ಯಕ್ತಿಗಳು ಬೇರೆಯಾದರೂ ಅವರಿದ್ದ ದೇಹ ಹಾಗೂ ಅವರು ಮಾತನಾಡಿದ ಬಾಯಿ ಒಂದೇಯಾಗಿದ್ದರಿಂದ ಮೇಲ್ನೋಟಕ್ಕೆ ಒಬ್ಬರೇ ಆ ಮಾತನ್ನು ಐದು ಬಾರಿ ನುಡಿದಂತೆ ಆಯಿತು ಎಂದರ್ಥ. 'ಪತಿಂ ದೇಹಿ' ಎಂಬ ಮಾತು ಒಟ್ಟು ಐದು ಸಲ ಒಬ್ಬ ಸ್ತ್ರೀಯ ಬಾಯಿಂದ ಬಂದಂತಾಯಿತು.

೨) ಅವರು ವಿಪ್ರಕನ್ಯೆಯಾಗಿದ್ದಾಗ ತಪಸ್ಸು ಮಾಡಿ ಅಂತಹುದೇ ವರವನ್ನು ಬೇಡಿ ಪಡೆದಿದ್ದರು. ವಿಶೇಷ ಪ್ರಸಂಗದ ಹಿನ್ನೆಲೆ ಇದ್ದುದರಿಂದ ಆ ಗುರಿಯನ್ನು ಸಾಧಿಸಲೆಂದು ಈ ಜನ್ಮದಲ್ಲಿ ಪುನಃ ಹಾಗೆ ತಪಸ್ಸನ್ನು ಮಾಡಿ ವರ ಬೇಡಿದರು ಎಂದು ತಿಳಿಯಬೇಕು. ಭಾರತಿ ವಿಪ್ರಕನ್ಯಾ ದೇಹದಲ್ಲಿದ್ದಾಗ ಶ್ರೀಹರಿ ಅವರ ತಪಸ್ಸಿಗೆ ಮೆಚ್ಚಿ ವರ ನೀಡಿದ್ದಂತೆ ಅವರಿಗೆ ಇಂದ್ರಸೇನಾ ದೇಹದಲ್ಲಿದ್ದಾಗಲೂ ಅವರಿಗೆ ಅವರ ಪತಿಯಾದ ವಾಯುದೇವರೊಂದಿಗೆ ಸಂಪರ್ಕವಾಯಿತು. ಆದರೆ ಇತರರಿಗೆ ಅದಿನ್ನೂ ಸಿದ್ಧಿಸಿರಲಿಲ್ಲ. ಅದಕ್ಕಾಗಿ ಅವರು ವಿಶೇಷವಾಗಿ ಈ ಜನ್ಮದಲ್ಲೂ ಹಾಗೆ ತಪಸ್ಸು ಮಾಡಿದರು ಎಂದರ್ಥ. ಇತರರಿಗೆ ಆ ವರ ಮುದ್ಗಲನ ಸಂಪರ್ಕ–ವಾಗದಂತೆ ಪಾರು ಮಾಡುವಷ್ಟರ ಮಟ್ಟಿಗೆ ಮಾತ್ರ ಸಿದ್ಧಿಸಿತು ಎಂದು ತಿಳಿಯಬೇಕು.

ಶಿವನಿಂದ ಪಂಚಪತಿತ್ವವರ

ಶಿವದೇಹಸ್ಥಿತೋ ವಿಷ್ಣುರ್ಭಾರತ್ಯೈ ತು ದದೌ ಪತಿಮ್
ಅನ್ಯಾಸಾಂ ಶಿವ ಏವಾಥ ಪ್ರದದೌ ಚತುರಃ ಪತೀನ್ ॥ ೧೨೭ ॥

ಅ: ಶಿವ ದೇಹದಲ್ಲಿದ್ದ ವಿಷ್ಣು ಭಾರತಿಗೆ ಪತಿಪ್ರಾಪ್ತಿ ರೂಪದ ವರವನ್ನು ನೀಡಿದ. ಇತರ ದೇವಿಯರಿಗೆ ಶಿವನೇ ನಾಲ್ವರು ಗಂಡಂದಿರನ್ನು ವರವನ್ನಾಗಿ ನೀಡಿದ.

ವಿ: ಐದು ಸಲ ಪತಿಂ ದೇಹಿ ಎಂದು ಕೇಳಿದ್ದರಿಂದ ನಿನಗೆ ಐವರು ಪತಿಗಳಾಗಲಿ ಎಂಬ ಮಾತು ವರವಾಗಿ ಅವರಿಗೆ ಲಭಿಸಿತು. ಹಾಗೆ ವರ ನೀಡಿದ್ದು ಭಾರತೀದೇವಿಗೆ ಶಿವನ ದೇಹದಲ್ಲಿದ್ದ ಹರಿ, ಇತರರಿಗೆ ಶಿವ. ಅಲ್ಲಿಯೂ ಸಹ ಹರಿ–ಹರ ಇಬ್ಬರ ಮಾತೂ ಸಹ ಹರ ಒಬ್ಬನ ಬಾಯಿಂದಲೇ ಬಂದಿದ್ದರಿಂದ ಒಟ್ಟಾಗಿ ಐದು ಜನ ಪತಿಗಳು ನಿಮಗಾಗಲಿ ಎಂದು ಅರ್ಥಬರುವಂತಾಯಿತು ಎಂದು ತಿಳಿಯಬೇಕು. ಶಿವ ಸಹ ಹಾಗೆ ವರ ನೀಡಲು ಒಬ್ಬ ಸ್ತ್ರೀಯೇ ಐವರು ಗಂಡಂದಿರನ್ನು ಹೊಂದುವ ವರವನ್ನು ಕೇಳಿರುವಳು ಎಂಬ ತಪ್ಪು ತಿಳಿದದ್ದೇ ಕಾರಣವಾಯಿತು ಎಂದು ತಿಳಿಯಬೇಕು.

ದೇವ್ಯಶ್ಚತಸ್ರಸ್ತು ತದಾ ದತ್ತಮಾತ್ರೇ ವರೇಽಮುನಾ
ದೇವಾನಾಮವತಾರಾರ್ಥಂ[೧] ಪಂಚ ದೇವ್ಯಃ ಸ್ಮ ಇತ್ಯಥ ॥ ೧೨೮ ॥

ನಾಜಾನನ್ನೇಕದೇಹತ್ವಾತ್[೨] ಚಿದ್ಯೋಗಾತ್[೩] ಕ್ಷೀರನೀರವತ್[೪]
ತಾಃ ಶ್ರುತ್ವಾ ಸ್ವಪತಿಂ ದೇವಿ ನ ಚಿರಾತ್ ಪ್ರಾಪ್ಸ್ಯಸೀತಿ ಚ ॥ ೧೨೯ ॥

ಅ: ಆ ನಾಲ್ಕು ದೇವಿಯರು ಶಿವ ಹಾಗೆ ವರ ನೀಡುತ್ತಲೇ ದೇವತೆಗಳ ಅವತಾರ-ಕ್ಕೋಸ್ಕರವಾಗಿ ತಾವು ಪಂಚ ದೇವಿಯರು ಅಲ್ಲಿರುವುದನ್ನು ಅವರು ತಿಳಿಯದೇ ಒಂದೇ

---

೧. ದೇವಾನಾಮವತಾರಾರ್ಥಮಿತ್ಯತ್ರ ದೇವಾನಾಂ = ಧರ್ಮವಾಯುನಾಸತ್ಯಾಖ್ಯದೇವಾನಾಂ ಭಾರ್ಯಾಸಂಯೋಗಾನರ್ಹಶಂಕರಾಖ್ಯದೇವಸ್ಯ ಚಾವತಾರಾರ್ಥಮಿತ್ಯರ್ಥಃ ॥ – (ವಾ.)

೨. ಈಶ್ವರ ಏವ ಮೋಹಯಾಮಾಸೇತಿ ಭಾವಃ । – (ತಾ.)

೩. ಕೇಚಿತ್ ತು ಚಿದ್ಯೋಗಾದಿತ್ಯಸ್ಯ ಮತ್ಕೈಕ್ಯಾದಿತ್ಯರ್ಥಮಾಹುಃ । – (ತಾ.)

೪. ತಾಃ ಶ್ರುತ್ವಾ ಸ್ವಪತಿಂ ದೇವೀತ್ಯತ್ರ ಹೇ ದೇವಿ ಸ್ವಪತಿಂ ನ ಚಿರಾತ್ಪ್ರಾಪ್ಸ್ಯಸೀತಿ ಸಕೃದ್ವಿಷ್ಣೂಕ್ತಂ ಚತುರ್ವಾರಂ ಶಂಕರೋಕ್ತಂ ಚೇತಿ ಮಿಳಿತ್ವಾ ಪಂಚಕೃತ್ವಃ ವಚನಂ ಶ್ರುತ್ವಾ। ಪೃಥಕ್ = ಸ್ವಸ್ವಪತಿಭ್ಯಃ ಪೃಥಕ್ ಚತ್ವಾರಃ ಪತಯೋ ಭವಿಷ್ಯಂತೀತ್ಯೇಕಸ್ಯಾಃ ಪಂಚಭರ್ತೃತಾಂ ಮೇನಿರ ಇತಿ ಯೋಜನಾ॥ – (ವಾ.)

ದೇಹದಲ್ಲಿದ್ದುದರಿಂದಲೂ, ಚೈತನ್ಯದ ಸಂಪರ್ಕವಿದ್ದುದರಿಮದಲೂ, ಹಾಲು ನೀರುಗಳಂತೆ ಬೆರೆತವರಾಗಿ 'ದೇವೀ, ನಿನ್ನ ಪತಿಯನ್ನು ನೀನು ಬೇಗನೆ ಪಡೆಯುವಿ' ಎಂಬ ಆ ಮಾತನ್ನು ಕೇಳಿದರು.

ವಿ: ಭಾರತೀ ದೇವಿಯ ಹೊರತು ಇತರ ದೇವಿಯರಿಗೆಲ್ಲ ತಾವು ವಿಶಿಷ್ಟ ಕಾರ್ಯಕ್ಕೋಸ್ಕರ ಅವತಾರ ಮಾಡಿದವರು ಎಂಬ ವಿಷಯದ ವಿಸ್ಮೃತಿ ಹೊಂದಿದ್ದರಿಂದ ಬೇರೇನನ್ನೂ ತಿಳಿಯದೇ ತಮಗೆಲ್ಲ ಒಬ್ಬನೇ ಪತಿಯಾಗುವನು ಎಂಬಷ್ಟು ಮಾತ್ರ ಅರ್ಥಮಾಡಿಕೊಂಡರು ಎಂದು ಭಾವ.

ವಿಷ್ಣೂಕ್ತಂ ಶಂಕರೋಕ್ತಂ ಚ ಚತ್ವಾರಃ ಪತಯಃ ಪೃಥಕ್ ।
ಭವಿಷ್ಯಂತೀತ್ಯಥೈಕಸ್ಯಾ ಮೇನಿರೇ ಪಂಚಭರ್ತೃತಾಮ್ ॥ ೧೩೦ ॥

ಅ: ವಿಷ್ಣು ಹೇಳಿದ ಒಬ್ಬ ಪತಿ, ಶಿವ ಹೇಳಿದ ಇತರ ನಾಲ್ವರು ಪತಿಗಳು ಎಂಬ ಪ್ರತ್ಯೇಕವಾದ ಮಾತುಗಳನ್ನು ಅವರು ಒಬ್ಬಳಿಗೇ ಐದು ಜನ ಪತಿಗಳು ಲಭಿಸುವರೆಂದು ತಪ್ಪಾಗಿ ತಿಳಿದರು.

ವಿ: ಹಿಂದೆ ಹೇಳಿದಂತೆ ಭಾರತೀದೇವಿಯ ಹೊರತು ಇತರ ನಾಲ್ವರಿಗೂ ಅಂತಹ ಭ್ರಮೆ ಒದಗಿತು ಎಂದರ್ಥ. ಭಾರತೀದೇವಿಯರು ಸರ್ವಜ್ಞರಾದ್ದರಿಂದ ಅವರಿಗೆ ಭ್ರಮೆ ಯಾವ ವಿಷಯದಲ್ಲೂ, ಯಾವ ಕಾಲದಲ್ಲೂ ಸರ್ವಥಾ ಇರದು ಎಂಬುದನ್ನು ಮರೆಯಬಾರದು.

ಪಂಚೇಂದ್ರೋಪಾಖ್ಯಾನ

ರುರುದುಶ್ಚೈಕದೇಹಸ್ಥಾ[೧] ಏಕೈವಾಹಮಿತಿ ಸ್ಥಿತಾಃ ।
ಅಥಾಭ್ಯಾಗಾನ್ಮಹೇಂದ್ರೋಽತ್ರ ಸೋಽಬ್ರವೀತ್ ತಾಂ ವರಸ್ತ್ರಿಯಮ್ ೧೩೧

ಅ: ಒಂದೇ ದೇಹದಲ್ಲಿದ್ದ ಅವರೆಲ್ಲ ತಾವೆಲ್ಲ ಒಬ್ಬಳೇ ಎಂದು ತಿಳಿದು ಅಳತೊಡಗಿದರು. ಆಗ ಅಲ್ಲಿಗೆ ಮಹೇಂದ್ರ ಆಗಮಿಸಿದ. ಅವನು ಆ ಶ್ರೇಷ್ಠ ಸ್ತ್ರೀಯನ್ನು ಹೀಗೆ ಕೇಳಿದ.

---

೧. ರುರುದುಃ ಸರ್ವಜ್ಞಭಾರತೀವ್ಯತಿರಿಕ್ತಾಃ ಪಾರ್ವತ್ಯಾದ್ಯಾಃ ॥ – (ವಾ.)

ಅಹಮೇಕೈವೇತಿ ಜ್ಞಾನಾದ್ರೋದನಂ । ತೇನೇಂದ್ರಸ್ಯ ರುದ್ರಶಾಪಃ । ತತೋ ರುದ್ರಸ್ಯ ಮೃಷಾವಚನಂ । ತೇನ ರುದ್ರಸ್ಯ ಬ್ರಹ್ಮದತ್ತ ಶಾಪಃ । ತತೋಽರ್ಜುನಾಶ್ವತ್ಥಾಮಾದಿರೂಪೇಣ ದೇವಾನಾಮವತಾರಾರ್ಥಂ ಅಜ್ಞಾನಂ ತಾಸಾಮಿತ್ಯರ್ಥಃ । – (ಜ., ವ.)

ಎ: 'ಪತಿಂ ದೇಹಿ' ಎಂಬ ಮಾತು ಒಬ್ಬಳ ಮಾತಿನಂತೆ ಕೇಳಿಸಿದ್ದಂತೆ ಈಗ ಅವರೆಲ್ಲ ಪ್ರತ್ಯೇಕವಾಗಿ ಅತ್ತದ್ದೂ ಸಹ ಒಬ್ಬಳ ಅಳುವೇ ಎಂಬಂತೆ ಕಾಣಿಸಿತು ಎಂಬ ವಿಶೇಷಾಂಶವನ್ನು ಇಲ್ಲಿ ಗಮನಿಸಬೇಕು. ಅವಳ ಅಳುವನ್ನು ಕೇಳಿ ಅಲ್ಲಿಗೆ ಇಂದ್ರ ಆಗಮಿಸಿದ. ಅವಳ ಅಳುವಿಗೆ ಕಾರಣವನ್ನು ಕೇಳಿದ ಎಂದರ್ಥ.

ಕಿಮರ್ಥಂ ರೋದಿಷೀತ್ಯೇವ ಸಾऽಬ್ರವೀದ್ವಟುರೂಪಿಣಮ್ ।
ಶಂಕರಂ ದರ್ಶಯಿತ್ವೈವ ಪಂಚಭರ್ತೃತ್ವಮೇಷ ಮೇ ॥
ವರಾರ್ಥಮರ್ಥಿತಃ ಪ್ರಾದಾದಿತಿ ತಂ ಶಿವ ಇತ್ಯಥ ॥ ೧೩೨ ॥

ಅಜಾನನ್ ಶಕ್ರ ಆಹೋಚ್ಚೈಃ ಕಿಮೇತದ್ಭುವನತ್ರಯೇ ।
ಮತ್ಪಾಲಿತೇ ಯೋಷಿತಂ ತ್ವಂ ವೃಥಾ ಶಪಸಿ ದುರ್ಮತೇ ॥ ೧೩೩ ॥

ಅ: 'ಏತಕ್ಕಾಗಿ ಅಳುತ್ತಿರುವಿ?' ಎನ್ನಲು ಅವಳು ವಟುರೂಪಿಯಾದ ಶಿವನನ್ನು ತೋರಿಸಿ 'ವರ ಬೇಡಿದ ನನಗೆ ಈತನು ಐವರು ಪತಿಗಳನ್ನು ನೀಡಿರುವನು' ಎಂದು ನುಡಿದಳು. ಅವನನ್ನು ಶಿವ ಎಂದು ತಿಳಿಯದೇ ಇಂದ್ರ ಜೋರಾಗಿ ಕೇಳಿದ 'ಎಲವೋ, ದುರ್ಬುದ್ಧಿಯವನೇ ಇದೇನು? ಮೂರು ಲೋಕಗಳೂ ನನ್ನಿಂದ ಪಾಲಿತವಾಗಿರುವಾಗ ಈ ಸ್ತ್ರೀಯನ್ನು ನೀನು ವಿನಾಕಾರಣ ಏತಕ್ಕೆ ಶಪಿಸಿರುವೆ?'

ವಿ: ೧) ಇಂದ್ರನು ಅಳುವಿನ ಕಾರಣವನ್ನು ಕೇಳಲು ಅವಳು ತನ್ನ ಮುಂದೆ ನಿಂತಿದ್ದ ವಟುವನ್ನು ತೋರಿಸಿ ಇವನು ಹೀಗೆ ನನಗೆ ವರ ನೀಡಿದ ಎಂದಳು. ಇದರಿಂದ ಶಿವ ಅಲ್ಲಿಗೆ ಸಾಕ್ಷಾದ್ರೂಪದಲ್ಲಿ ಬರದೇ, ಒಬ್ಬ ವಟುವಿನ ರೂಪದಲ್ಲಿ ಬಂದಿದ್ದ ವಿವರ ಸ್ಫುಟಪಡುವುದು.

೨) ಹೀಗೆ ರೂಪಾಂತರದಲ್ಲಿ ಬರಲು ದೇವತೆಗಳಿಗೆ 'ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ' ಎಂಬ ಶಾಸ್ತ್ರವಾಣಿಯೇ ಕಾರಣ ಎನ್ನಬಹುದು. ಇಂದ್ರನೂ ಸಹ ಆ ವಟುವನ್ನು ಶಿವ ಎಂದು ಗುರುತಿಸದೇ ಯಾವನೋ ಒಬ್ಬ ವಟುವೆಂದು ಭಾವಿಸಿ ಜೋರಾಗಿ ಬೆದರಿಸಿಯೇ ಕೇಳಿದ ಎಂದರ್ಥ. ಹಾಗೆ ಕೇಳುವಲ್ಲಿ ತಾನು ಮೂರು ಲೋಕದ ರಾಜ ಎಂಬ ಅಹಂಕಾರವನ್ನೂ ತೋರಿಸಿದ ಎಂಬ ಭಾವವೂ ಸಹ ದುರ್ಮತೇ, ಭುವನತ್ರಯೇ ಮತ್ಪಾಲಿತೇ ಎಂಬ ಪದಗಳಿಂದ ವ್ಯಕ್ತವಾಗುವುದು.

---

೧. ವರಾರ್ಥಂ ವರಾಯ ಪ್ರತ್ಯರ್ಥಂ ವಾ । ಮದವಜ್ಞಾನಾದಿತಿ । (ತಾ.)

೨. ವೃಥಾ ಅಪರಾಧಂ ವಿನಾ – (ಜ.)

೩) ಒಬ್ಬ ಸ್ತ್ರೀಗೆ ಐದು ಜನ ಪತಿಯರು ಎಂದರೆ ಅದು ವರ ಹೇಗಾದೀತು, ಬಹುಪತಿತ್ವ ಸರ್ವಥಾ ಶಾಸ್ತ್ರ ಸಮ್ಮತವಲ್ಲ ಎಂಬುದೇ ಅದಕ್ಕೆ ಕಾರಣ.

೪) ಇಂದ್ರ ಅಲ್ಲಿಗೆ ಬರಲು ಕಾರಣವಾದದ್ದು ಗಂಗಾನದಿಯಲ್ಲಿ ಬಂಗಾರದ ಕಮಲಗಳು ತೇಲಿ ಬರುತ್ತಿದ್ದ ದೃಶ್ಯವನ್ನು ಕಂಡದ್ದು ಕಾರಣವಾಯಿತು. ಆ ಕಮಲಗಳು ಆ ಇಂದ್ರಸೇನೆಯ ಆ ಸಮಯದ ಕಣ್ಣೀರಿನ ಹನಿಗಳು ನೀರಿನಲ್ಲಿ ಬೀಳುತ್ತಲೇ ಕಮಲಗಳಾಗಿ ಅರಳುತ್ತಿದ್ದುದರಿಂದಾಗಿ ಎಂಬ ವಿವರ [೧]ಮಹಾಭಾರತದಲ್ಲಿದೆ.

೫) ಲಕ್ಷಾಲಂಕಾರದಲ್ಲಿ[೨] ಶ್ರೀವಾದಿರಾಜರು ಕಣ್ಣೀರು ಹಾಗೆ ಕಮಲವಾಗಲು ಭಾರತೀ–ದೇವಿಗೆ ಸರ್ವಥಾ ದುಃಖವಿಲ್ಲದೇ ಇರುವುದರಿಂದ ಅವರ ಕಣ್ಣಿಂದ ಉದುರಿದ ನೀರು ಆನಂದಾಶ್ರುವೇ ಹೊರತು ದುಃಖಾಶ್ರುವಲ್ಲ ಎಂಬ ತತ್ವಕ್ಕೆ ಸೂಚಕ ಎಂದು ವಿಶೇಷಾರ್ಥವನ್ನು ಬರೆದಿರುವರು.

ಇಂದ್ರನಿಗೆ ಶಿವನ ಶಾಪ

ಇತೀರಿತೇ ಶಿವಃ ಪ್ರಾಹ ಪತ [೩]ಮಾನುಷ್ಯಮಾಪ್ನುಹಿ ।
ಅಸ್ಯಾಶ್ಚ ಭರ್ತಾ ಭವಸಿ [೪]ತ್ವಾಮೇವೈಷಾ ವರಿಷ್ಯತಿ ॥ ೧೩೪ ॥

ಅ: ಇಂದ್ರ ಹೀಗೆಂದಾಗ ಶಿವ ನುಡಿದ 'ನೀನು ಸ್ವರ್ಗದಿಂದ ಪತನಹೊಂದು, ಮನುಷ್ಯನಾಗಿ ಜನಿಸು. ಇವಳಿಗೆ ನೀನೆ ಪತಿಯಾಗುವಿ, ಇವಳು ನಿನ್ನನ್ನೇ ವರಿಸುವಳು'.

ವಿ: ೧) ಇಂದ್ರನ ಅಹಂಕಾರದ ವರ್ತನೆಗೆ ಕೆರಳಿದ ಶಿವ ಅವನನ್ನು ಹೀಗೆ ಶಪಿಸಿದ ಎಂದು ತಿಳಿಯಬೇಕು. ಸ್ವರೂಪತಃ ಇಂದ್ರ ಶಿವನ ಶಿಷ್ಯ, ಎಂದರೆ ಇಂದ್ರನ ಆ ವರ್ತನೆ ಒಂದರ್ಥದಲ್ಲಿ ಗುರುವಿಗೆ ಮಾಡಿದ ಅಪಚಾರದಂತಾಯಿತು. ಅದಕ್ಕೆ ಶಿಕ್ಷೆಯಾಗಿ ಅಂತಹ ಶಾಪ ಎಂದು ತಿಳಿಯಬೇಕು. ಈ ಶಾಪದಿಂದಾಗಿ ಇಂದ್ರ ಅರ್ಜುನನಾಗಿ ಜನಿಸುವಂತಾಯಿತು.

---

೧. ಸಮಾಸೀನಾಸ್ತೇ ಸಮೇತಾ ಮಹಾಬಲಾ ಭಾಗೀರಥ್ಯಾಂ ದದೃಶುಃ ಪುಂಡರೀಕಮ್ ॥ ...
ತಸ್ಯಾಶ್ರುಬಿಂದುಃ ಪತಿತೋ ಜಲೇ ಯಸ್ತತ್ ಪದ್ಮಮಾಸೀದಥ ತತ್ರ ಕಾಂಚನಮ್ ॥–(ಆದಿ. ೧೯೬/೯,೧೧)

೨. ಇಂದ್ರಸೇನಾರೋದನಂ ವಸ್ತುಸ್ಥಿತ್ಯಾ ದೋಷಾಭಾವೇऽಪಿ ಅಜ್ಞಲೋಕಾಪವಾದಭಯಾದೇವ । ನ ತು ಶೋಕಾತ್ । ಶೋಕಜತ್ವೇ ಉಷ್ಣಸ್ಯ ತಸ್ಯ ಅಶ್ರುಣಃ ಶೋಷಕತ್ವೇನ ಜಗದ್ವಿಸ್ಮಾಪಕ ಪದ್ಮೋದಯ-ಹೇತುತ್ವವಿರೋಧಾತ್ । – ಲಕ್ಷಾಲಂಕಾರ

೩. ಮಾನುಷ್ಯಂ ಮನುಷ್ಯದೇಹಮ್ । – (ಜ.)

೪. ತ್ವಾಮೇವೈಷಾ ವರಿಷ್ಯತೀತ್ಯತ್ರ ಏಷಾ = ದ್ರೌಪದೀದೇಹಸ್ಥಾ ಶಚೀ ತ್ವಾಮೇವ ವರಿಷ್ಯತೀತ್ಯರ್ಥಃ। ಅತ ಏವ ಸ್ವಯಂವರೇ ದ್ರೌಪದೀ ಅರ್ಜುನಕಂಠ ಏವ ಮಾಲಾಂ ದದಾವಿತಿ ಜ್ಞೇಯಮ್ ॥ – (ವಾ.)

೨) ಮುಂದೆ ಸ್ವಯಂವರದಲ್ಲೂ ಮತ್ಸ್ಯಯಂತ್ರ ಭೇದ ಮಾಡಿದ ಅರ್ಜುನನ ಕೊರಳಿಗೇ ದ್ರೌಪದಿ ಮಾಲೆ ಹಾಕುವಂತಾಯಿತು ಎಂದು ತಿಳಿಯಬೇಕು. ಆ ವರಕ್ಕೆ ಸಂಬಂಧಿಸಿದಂತೆ ಇಂದ್ರ ಶಿವನನ್ನು ಪ್ರಶ್ನಿಸಿದ್ದರಿಂದ ಶಿವ ನೀಡಿದ ಶಾಪ ಆ ಇಂದ್ರಕನ್ಯೆಯ ಪಂಚಭರ್ತೃತ್ವಕ್ಕೆ ಸಂಬಂಧಿಸಿದ ಶಾಪವೇ ಆಯಿತು ಎಂಬುದನ್ನೂ ಗಮನಿಸಬೇಕು.

೩) 'ಇವಳು' ಎಂದರೆ ಇವಳೊಳಗಿನ ಶಚಿ ಎಂದರ್ಥ.

ಪಶ್ಯಾತ್ರ ಮದವಜ್ಞಾನಾತ್ ಪತಿತಾಂಸ್ತ್ವದೃಶಾನ್ ಸುರಾನ್ ।
ಗಿರೇರಧಸ್ತಾದಸ್ಯೈವೇತ್ಯುಕ್ತೋಽಸೌ ಪಾಕಶಾಸನಃ
ಉದ್ಬಬರ್ಹ ಗಿರಿಂ ತಂ ತು ದದರ್ಶಾತ್ರ ಚ ತಾನ್ ಸುರಾನ್ ॥ ೧೩೫ ॥

ಅ: 'ನನ್ನನ್ನು ಅವಮಾನಿಸಿದ್ದರಿಂದಾಗಿ ಪತಿತರಾಗಿರುವಂತಹ ನಿನ್ನಂತಹ ದೇವತೆಗಳನ್ನು ಈ ಬೆಟ್ಟದ ಕೆಳಗೆ ನೋಡು' - ಹೀಗೆ ಶಿವ ಹೇಳಲು ಇಂದ್ರ ಆ ಗಿರಿಯನ್ನು ಮೇಲೆತ್ತಿ ಅಲ್ಲಿ ಆ ದೇವತೆಗಳನ್ನು ಕಂಡ.

ವಿ: ಶಿವ ಇಂದ್ರನಿಗೆ ಅವನಿಗೆ ಸಂಬಂಧಿಸಿದಂತೆ ಮಾತ್ರ ಶಪಿಸದೆ ಪ್ರಕೃತ ಅಸಂಬಂಧವಾಗಿದ್ದ ಮಾತೊಂದನ್ನೂ ನುಡಿದ. ಅದರಂತೆ ಅವನಿಗೆ ಅವಮಾನಿಸಿದ ಇತರರನ್ನು ಶಿವ ಆ ಬೆಟ್ಟದ ಕೆಳಗೆ ಕೂಡಿ ಹಾಕಿರುವನು ಎಂದಾಗುವುದು. ಇದು ಸರ್ವಥಾ ಅಸಮಂಜಸವಾದ ಮಾತು. ಅದು ಹೇಗೆ ಎಂಬುದನ್ನು ಮುಂದೆ ವಿವರಿಸಿರುವರು.

[೧]ಪೂರ್ವೇಂದ್ರಾನ್ ಮಾರುತವೃಷನಾಸತ್ಯಾಂಶ್ಚತುರಃ ಸ್ಥಿತಾನ್
ಮಾನುಷೇಷ್ವವತಾರಾಯ ಮಂತ್ರಂ ರಹಸಿ ಕುರ್ವತಃ ॥ ೧೩೬ ॥

ಅ: ಹಿಂದೆ ಇಂದ್ರರಾಗಿದ್ದ ವಾಯು, ಯಮ ಮತ್ತು ಅಶ್ವಿನೀ ದೇವತೆಗಳು - ಈ ನಾಲ್ವರೂ ಅಲ್ಲಿ ಮಾನವರಾಗಿ ಅವತಾರ ಮಾಡಲೆಂದು ರಹಸ್ಯವಾಗಿ ಮಂತ್ರಾಲೋಚನೆಗೆ ತೊಡಗಿದ್ದುದನ್ನು ಕಂಡ.

ವಿ: ೧) ಬೆಟ್ಟ ಎತ್ತಿ ನೋಡಿದಾಗ ಅಲ್ಲಿ ಕಂಡಿದ್ದು ನಾಲ್ವರು ದೇವತೆಗಳು. ಅವರೆಲ್ಲ ಹಿಂದಿನ ಮನ್ವಂತರಗಳಲ್ಲಿ ಇಂದ್ರ ಪದವಿಯಲ್ಲಿದ್ದವರು. ವಾಯು ರೋಚನ ನಾಮಕನಾಗಿಯೂ, ಯಮ ಸತ್ಯಜಿತ್ ನಾಮಕನಾಗಿಯೂ, ಅಶ್ವಿನೀ ದೇವತೆಗಳು ತ್ರಿಶಿಖ ಮತ್ತು ವಿಭು ಎಂಬ ಹೆಸರಿನಿಂದಲೂ

---

೧. ಪೂರ್ವೇಂದ್ರಾನ್ ಪೂರ್ವಮನ್ವಂತರೇಷು ಇಂದ್ರಾನ್ । – (ಜ.)

ಕ್ರಮವಾಗಿ ಸ್ವಾರೋಚಿಷ, ಉತ್ತಮ, ರೈವತ ಮತ್ತು ತಾಪಸ ಎಂಬ ಮನ್ವಂತರಗಳಲ್ಲಿ ಇಂದ್ರಪದವಿಯಲ್ಲಿದ್ದವರು.

೨) ಅವರೆಲ್ಲ ಹಾಗೆ ಅಲ್ಲಿ ಬೆಟ್ಟದ ಬುಡದಲ್ಲಿ ಕುಳಿತಿದ್ದುದು ನಿಜವಾದರೂ ಅದಕ್ಕೆ ಅವರೆಲ್ಲ ಶಿವನನ್ನು ಅವಮಾನ ಪಡಿಸಿ ಅದರ ಫಲದಿಂದಾಗಿ ಅವನಿಂದ ಶಿಕ್ಷೆಗೊಳಗಾಗಿ ಅಲ್ಲಿ ನೆರೆದಿದ್ದರು ಎಂಬುದು ಮಾತ್ರ ಸುಳ್ಳಾಗಿತ್ತು ಎಂಬ ವಿವರ ಮುಂದೆ (ಶ್ಲೋ. ೧೪೪, ೧೪೫ ರಲ್ಲಿ) ಬಂದಿದೆ.

ತತೋ ವರೇಣ್ಯಂ ವರದಂ ವಿಷ್ಣುಂ ಪ್ರಾಪ್ಯ ಸ ವಾಸವಃ ।
ತತ್ಪ್ರಸಾದಾನ್ನರಾಂಶೇನ ಯುಕ್ತೋ ಭೂಮಾವಜಾಯತ ॥ ೧೩೭ ॥

ಅ: ಅನಂತರ ಇಂದ್ರ ವರಪ್ರದನಾದ ಸರ್ವಸೇವ್ಯನಾದ ಶ್ರೀಹರಿಯನ್ನು ತಪಸ್ಸಿನಿಂದ ಮೆಚ್ಚಿಸಿ ಅವನ ಅನುಗ್ರಹದಿಂದ ನರಾಂಶದಿಂದ ಕೂಡಿ ಭೂಮಿಯಲ್ಲಿ ಹುಟ್ಟಿದ.

ವಿ: ಇಂದ್ರ ಅದರಂತೆ ಮುಂದೆ ಶ್ರೀಹರಿಯನ್ನು ಆರಾಧಿಸಿ, ಅವನ ಅನುಗ್ರಹದಿಂದ ನರಾಂಶ–ದಿಂದ ಕೂಡಿ ಅರ್ಜುನನಾಗಿ ಜನಿಸಿದ ಎಂದರ್ಥ. ಅರ್ಜುನನಲ್ಲಿ ನರಾಂಶದೊಂದಿಗೆ ವಾಯು–ದೇವರ ವೀರನಾಮಕ ರೂಪದ ಆವೇಶ, ವಿಷ್ಣುವಿನ ಧನಂಜಯ ಎಂಬ ವಿಭೂತಿರೂಪ ಇದ್ದ ವಿವರ ಭಾಗವತತಾತ್ಪರ್ಯನಿರ್ಣಯದಲ್ಲಿದೆ: '**ಏಷ್ಣೋರ್ವಾಯೋರನಂತಸ್ಯ ತ್ರಿಭಿರಂಶೈರ್ನರಃ ಸ್ಮೃತಃ**'.

ಶಿವನಿಗೆ ಬ್ರಹ್ಮಶಾಪ

ಮದವಜ್ಞಾನಿಮಿತ್ತೇನ ಪತಿತಾ ಇತಿ ತಾನ್ ಸುರಾನ್ ।
ಮಾರುತಾದೀನ್ ಮೃಷಾವಾದೀರಿತಿ ಬ್ರಹ್ಮಾ ಶಿವಂ ತದಾ ॥ ೧೩೮ ॥

ಶಶಾಪ ಮಾನುಷೇಷು ತ್ವಂ ಕ್ಷಿಪ್ರಂ ಜಾತಃ ಪರಾಭವಮ್ ।
ಶಕ್ರಾನ್ನರತನೋರ್ಯಾಸಿ ಯಸ್ಮೈ ತ್ವಂ ತು ಮೃಷಾऽವದಃ ॥ ೧೩೯ ॥

ಅ: ಆಗ ಬ್ರಹ್ಮ ''ನನ್ನ ಅವಜ್ಞೆಯ ಕಾರಣದಿಂದ ಇವರೆಲ್ಲ ಪತಿತರಾಗಿರುವರು ಎಂದು ನೀನು ವಾಯು ಮೊದಲಾದವರ ಬಗ್ಗೆ ಸುಳ್ಳು ಹೇಳಿರುವಿ'' ಎಂದು ನುಡಿದು ಶಿವನನ್ನು ಶಪಿಸಿದ: ''ಬೇಗನೆ ಮಾನವನಾಗಿ ಹುಟ್ಟಿ ನೀನು ಯಾರಿಗೆ ಸುಳ್ಳು ಹೇಳಿದೆಯೋ ಅಂತಹ ಇಂದ್ರನ ನರರೂಪದಿಂದ ಪರಾಭವಹೊಂದುವಿ''.

ವಿ: ೧) ಶಿವನನ್ನು ಪ್ರಶ್ನಿಸಿದ ಇಂದ್ರನಿಗೆ ಶಿವನಿಂದ ಶಾಪ ಬಂದಂತೆ, ವಾಯುದೇವರಂತಹ ಸೋತ್ತಮರ ಬಗ್ಗೆ ಮಿಥ್ಯಾಪವಾದ ಹೊರಿಸಿದ ಕಾರಣದಿಂದಾಗಿ ಶಿವನಿಗೂ ಬ್ರಹ್ಮನ ಶಾಪ ಒದಗಿತು.

೨) ವಾಯುದೇವರು ಯಾರ ಬಗ್ಗೆಯೂ ಅಪಚಾರ ಮಾಡದವರು, ಶುದ್ಧಭಾಗವತ ಧರ್ಮರತರು. ಅಂಥವರ ಬಗ್ಗೆ ಮಾಡಿದ ಮಿಥ್ಯಾರೋಪ ರುದ್ರದೇವರ ಮತ್ತೊಂದು ಅವತಾರಕ್ಕೆ ಕಾರಣವಾಯಿತು.

೩) ಜನ್ಮಾದಿದೋಷಪರಿಹಾರಕರಾದ ವಾಯುದೇವರ ಬಗ್ಗೆ ತಪ್ಪು ತಿಳಿದರೆ, ಭೂಲೋಕದಲ್ಲಿ ಜನ್ಮತಪ್ಪಿದ್ದಲ್ಲ ಎಂಬ ತತ್ವಕ್ಕೂ ಇದು ನಿದರ್ಶನವಾಯಿತು.

೪) ಬ್ರಹ್ಮಶಾಪದಿಂದ ಹೀಗೆ ಜನಿಸಿದವರೇ ಅಶ್ವತ್ಥಾಮಾಚಾರ್ಯರು. ಅವರು ಸ್ವರೂಪದಲ್ಲಿ ಅರ್ಜುನನಿಗಿಂತ ಉತ್ತಮರಾದರೂ ಅನೇಕ ಸಲ ಅವನಿಂದಲೇ ಸೋಲುವಂತಾಗಲು ಬ್ರಹ್ಮದೇವರ ಈ ಶಾಪ ಕಾರಣವಾಯಿತು ಎಂಬ ವಿಶೇಷಾಂಶ ಇಲ್ಲಿದೆ.

ಮಚ್ಛಪ್ತಾನಾಂ ಚ ದೇವೀನಾಮವಿಚಾರ್ಯ ಮಯಾ ಯತಃ ।
ಪತಿಯೋಗವರಂ ಪ್ರಾದಾಃ ನಾವಾಪ್ಸ್ಯಸಿ ತತಃ ಪ್ರಿಯಾಮ್ ॥ ೧೪೦ ॥

ಮಾನುಷೇಷು ತತಃ ಪಶ್ಚಾದ್ಭಾರತೀದೇಹನಿರ್ಗತಾಮ್ ।
ಸ್ವಲೋಕೇ ಪ್ರಾಪ್ಸ್ಯಸಿ ಸ್ವಾರ್ಥೇ ವರೋಽಯಂ ತೇ ಮೃಷಾ ಭವೇತ್ ॥ ೧೪೧ ॥

ಅ: ನಾನು ಶಪಿಸಿದ ಈ ದೇವಿಯರಿಗೆ ನನ್ನೊಂದಿಗೆ ವಿಚಾರ ಮಾಡದೇ ನೀನು ಪತಿಪ್ರಾಪ್ತಿರೂಪ ವರವನ್ನು ನೀಡಿರುವಿ, ಆದ್ದರಿಂದ ನೀನು ಮನುಷ್ಯದೇಹದಲ್ಲಿ ನಿನ್ನ ಪ್ರಿಯೆಯನ್ನು ಹೊಂದದಿರುವಿ. ಅನಂತರ ಭಾರತೀ ದೇಹದಿಂದ ಹೊರಬರುವ ನಿನ್ನ ಪತ್ನಿಯನ್ನು ನಿನ್ನ ಲೋಕದಲ್ಲಿ ಪಡೆಯುವಿ. ನಿನ್ನ ವಿಷಯದ ಮಟ್ಟಿಗೆ ಈ ನಿನ್ನ ವರ ಸುಳ್ಳಾಗಲಿ.

ವಿ: ೧) ಪಾರ್ವತಿ ಮೊದಲಾದ ನಾಲ್ವರಿಗೆ ಪರಪುರುಷ ಸಂಯೋಗವಾಗುವಂತೆ ಬ್ರಹ್ಮ ದೇವರ ಶಾಪವಿದ್ದ ವಿವರ ಈಗಾಗಲೇ ಬಂದಿದೆ. ಆ ಬಗ್ಗೆ ಸರಿಯಾಗಿ ವಿಚಾರ ಮಾಡದೆ, ಬ್ರಹ್ಮದೇವರೊಂದಿಗೆ ಸಮಾಲೋಚಿಸದೆ, ಪತಿಪ್ರಾಪ್ತಿರೂಪ ವರವನ್ನು ನೀಡಿದ್ದು ಬ್ರಹ್ಮ ದೇವರಿಗೆ ಮಾಡಿದ ಅಪಚಾರವೇ. ಅದರಿಂದಾಗಿ ಆ ದೇಹದಲ್ಲಿನ ಪಾರ್ವತಿಯೊಂದಿಗೆ ಶಿವನ ಅವತಾರವಾದ

---

೧. ಸ್ವಾರ್ಥೇ ವರೋಽಯಂ ತೇ ಮೃಷಾ ಭವೇದಿತ್ಯತ್ರ ವರಃ = ಸ್ವಪತಿಂ ದೇವಿ ನ ಚಿರಾತ್ಪ್ರಾಪ್ಸ್ಯಸೀತಿ ವರಃ। ಸ್ವಾರ್ಥೇ = ಹೇ ಶಂಕರ ತ್ವದರ್ಥೇ ಮೃಷಾ ಭವಿಷ್ಯತಿ = ದ್ರೌಪದೀದೇಹಸ್ಥಪಾರ್ವತೀಂ ಪ್ರತಿ ತಯಾ ತ್ವಂ ನ ಪ್ರಾಪ್ಸ್ಯಸೀತ್ಯರ್ಥಃ। 'ವರಂ ಸ್ವಭರ್ತೃಸಂಯೋಗಂ ಮಾನುಷೇಷ್ವಪಿ ಜನ್ಮಸು' ಇತಿ ವಚನಾತ್ ಸಕಲಮಾನುಷಜನ್ಮಸು ಸಾಧಾರಣ್ಯೇನ ಪತಿಪ್ರಾಪ್ತಿವರೇ ದತ್ತೇಽಪಿ ''ಸ್ವಪತಿಂ ದೇವಿ ನ ಚಿರಾತ್ ಪ್ರಾಪ್ಸ್ಯಸಿ'' ಇತಿ ವಚನಾತ್ ಏತಸ್ಮಾದ್ದ್ವಿತೀಯಜನ್ಮನ್ಯೇವ ಸ್ವಪತಿಪ್ರಾಪ್ತ್ಯರ್ಥಂ ಪುನಸ್ತಪಃ ಕರಣಮಿತಿ ಜ್ಞೇಯಮ್ ॥ – (ವಾ.)

ಅಶ್ವತ್ಥಾಮ ವಿವಾಹವಾಗದೇ ಆ ಜನ್ಮಪೂರ್ತಿಯಾಗಿ ಬ್ರಹ್ಮಚಾರಿಯಾಗಿಯೇ ಇರಬೇಕಾಯಿತು ಎಂದು ತಿಳಿಯಬೇಕು.

೨) ಶಿವ ನೀಡಿದ ವರವನ್ನು ಇತರ ದೇವತಾ ಸ್ತ್ರೀಯರ ಬಗ್ಗೆ ಸತ್ಯವಾಗುವಂತೆ ಅನುಗ್ರಹಿಸಿದ ಬ್ರಹ್ಮದೇವರು ಶಿವ ಮಟ್ಟಿಗೆ ಮಾತ್ರ ಆ ವರ ವಿಫಲವಾಗುವಂತೆ ಮಾಡಿದರು. ವಾಯುದೇವರು ಶಿವನಿಗೆ ಅಪಚಾರ ಮಾಡಿದರೆಂದು ಶಿವ ಹೇಳಿದ ಮಾತು ಸುಳ್ಳಾಗಿ ಅದು ವಾಯುದೇವರಿಗೆ ಶಿವನೇ ಮಾಡಿದ ಅಪಚಾರವಾಯಿತು. ಅದರೊಂದಿಗೆ ಬ್ರಹ್ಮದೇವರ ಶಾಪಕ್ಕೆ ವಿರುದ್ಧವಾಗಿ ವರ ನೀಡಿದ್ದರಿಂದಲೂ ಅವರು ಬ್ರಹ್ಮ ದೇವರಿಗೆ ಸಹ ಅಪಚಾರ ಮಾಡಿದಂತಾಯಿತು. ಅದರ ಫಲವಾಗಿ ಅಂತಹ ಅಜೀವ ಬ್ರಹ್ಮಚರ್ಯದ ಶಾಪ ಅವರಿಗೆ ಒದಗಿತು.

೩) ಭೀಷ್ಮರು ಮತ್ತು ಅಶ್ವತ್ಥಾಮರು ಮಹಾಭಾರತದಲ್ಲಿ ಉಲ್ಲೇಖಿತರಾಗಿರುವ ಇಬ್ಬರು ಅಜೀವ ಬ್ರಹ್ಮಚಾರಿಗಳು. ಅವರಿಬ್ಬರಿಗೂ ತಮ್ಮ ಪತ್ನಿಯರ ಸಂಪರ್ಕ ತಪ್ಪಲು ಈ ಶಾಪ ನಿಮಿತ್ತವಾಯಿತು. ಇಬ್ಬರಿಗೂ ಅಂತಹ ಶಾಪ ನೀಡಿದ್ದು ಬ್ರಹ್ಮದೇವರೇ ಎಂಬುದು ಮತ್ತೊಂದು ವಿಶೇಷ. ಭೀಷ್ಮರ ಶಾಪಕ್ಕೆ ಕಾರಣ ಗೋವಿಗೆ ಮಾಡಿದ ಅಪಚಾರವಾದರೆ, ಅಶ್ವತ್ಥಾಮರ ಶಾಪಕ್ಕೆ ಬ್ರಹ್ಮದೇವರಿಗೆ ಮಾಡಿದ ಅಪಚಾರ ಕಾರಣವಾಯಿತು.

೪) ಹನುಮಂತ ರಾಮಾಯಣ ಉಲ್ಲೇಖಿಸಿರುವ ಅಖಂಡ ಬ್ರಹ್ಮಚಾರಿ. ಶಿವನ ಅಶ್ವತ್ಥಾಮ ರೂಪದಂತೆ ಅದು ವಾಯುದೇವರ ಅವತಾರ ರೂಪ. ಇಬ್ಬರವೂ ಚಿರಂಜೀವಿ ರೂಪಗಳೇ. ಆದರೆ, ಹನುಮಂತನ ಬ್ರಹ್ಮಚರ್ಯಕ್ಕೆ ಯಾವುದೇ ಶಾಪ ನಿಮಿತ್ತವಾಗಿರದೇ ಅದು ಕೇವಲ ವಿಷ್ಣುಪ್ರೀತ್ಯರ್ಥವಾದ ಮಹಾವ್ರತವಾಯಿತು. ಅಶ್ವತ್ಥಾಮ–ಭೀಷ್ಮರದು ಅನಿವಾರ್ಯವಾದ ವ್ರತವಾಯಿತು ಎಂಬದು ಇಲ್ಲಿಯ ಅಪೂರ್ವ ವ್ಯತ್ಯಾಸ. ಅದಕ್ಕೇ ಹನುಮಂತನನ್ನು 'ಬ್ರಹ್ಮಚರ್ಯಾದಿಧರ್ಮ್ಯಃ' ಎಂದು ವಾಯುಸ್ತುತಿಯಲ್ಲಿ ಕೊಂಡಾಡಲಾಗಿದೆ.

ಏಷಾ ಸಾ ದ್ರೌಪದೀ ನಾಮ [೧]ಪಂಚದೇವೀತನುರ್ಭವೇತ್ ।
[೨]ಮೃಷಾ ವಾಗ್ಯೇಷು ತೇ ಪ್ರೋಕ್ತಾ ಮಾರುತಾದ್ಯಾಸ್ತು ತೇಽಖಿಲಾಃ ॥ ೧೪೨ ॥

[೩]ತಾಸಾಂ ಪತಿತ್ವಮಾಪ್ಸ್ಯಂತಿ ಭ್ಗಾರತ್ಯೈವ ತು ಪಾರ್ವತೀ ।
ಸಂಯುಕ್ತಾ ವ್ಯವಹಾರೇಷು ಪ್ರವರ್ತೇತ ನ ಚಾನ್ಯಥಾ ॥ ೧೪೩ ॥

---

೧. ಕೇಚಿತ್ ತು ಸೈಷಾ ಪಂಚದೇವೀತನುಃ ದ್ರೌಪದೀನಾಮ ಭವೇದಿತ್ಯಾಹುಃ । – (ತಾ.)

ಅ: ಪಂಚ ದೇವಿಯರಿಂದ ಕೂಡಿದ ಇವಳೇ ದ್ರೌಪದಿ ಎಂಬುದಾಗಿ ಅವತರಿಸುವಳು. ''ನೀನು ವಾಯುದೇವರು ಮೊದಲಾದ ಯಾವ ದೇವತೆಗಳ ಬಗ್ಗೆ ಸುಳ್ಳು ನುಡಿದೆಯೋ, ಆ ದೇವತೆಗಳೇ ಈಕೆಗೆ ಅಲ್ಲಿ ಪತಿಗಳಾಗುವರು. ಭಾರತಿಯೊಂದಿಗೆ ಕೂಡಿದ ಪಾರ್ವತಿಯು ಇತರ ವ್ಯವಹಾರಗಳಲ್ಲಿ ಮಾತ್ರ ಪ್ರವೃತ್ತಿ ಹೊಂದುವಳು; ಇದು ತಪ್ಪದು''.

ಎ: ಹಾಗೆ ಬೆಟ್ಟದ ಕೆಳಗೆ ಸಮಾಲೋಚನೆ ನಡೆಸುತ್ತಿದ್ದ ವಾಯು, ಯಮ ಮತ್ತು ಅಶ್ವಿನೀ ದೇವತೆಗಳು ಕ್ರಮವಾಗಿ ಭೀಮ, ಯುಧಿಷ್ಠಿರ ಮತ್ತು ನಕುಲ, ಸಹದೇವರಾಗಿ ದ್ರೌಪದಿ ದೇಹ–ದಲ್ಲಿದ್ದ ಸಾಕ್ಷಾತ್ ಭಾರತಿ, ಶ್ಯಾಮಲಾ ಮತ್ತು ಉಷಾದೇವಿಯರಿಗೆ ಪತಿಗಳಿನ್ನಿಸಿದರು. ಪಾರ್ವತಿಗೆ ಮಾತ್ರ ದ್ರೌಪದಿ ದೇಹದಲ್ಲಿ ಪ್ರವೇಶವಿದ್ದರೂ ಆ ರೂಪಕ್ಕೆ ಅಶ್ವತ್ಥಾಮರೊಂದಿಗೆ ವಿವಾಹ–ವಾಗದೇ ಹೋಯಿತು ಎಂದು ತಿಳಿಯಬೇಕು.

ಏತೇ ಹಿ ಮಾರುತಾದ್ಯಾಸ್ತೇ[೪] ದೇವಕಾರ್ಯಾರ್ಥಗೌರವಾತ್ ।
ಜಾತಾ ಇತಿ ಶ್ರುತಿಸ್ತಸ್ಮಾನ್ನಾವಜ್ಞಾ ತೇಽತ್ರ ಕಾರಣಮ್ ॥ ೧೪೪ ॥

---

೨. ಸಂಯುಕ್ತಾ ವ್ಯವಹಾರೇಷು ಪ್ರವರ್ತೇತ ನ ಚಾನ್ಯಥೇತ್ಯತ್ರ ವ್ಯವಹಾರೇಷು = ಭೋಜನಾಭ್ಯಂಜನಾದಿ-ವ್ಯವಹಾರೇಷು। ಅನ್ಯಥಾ = ರಮಣಾದಿರೂಪಪ್ರಕಾರಾಂತರೇಣ ನ ಚೇತ್ಯರ್ಥಃ। 'ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ। ಪಂಚಾನಾಂ ಸಹಿತಾ ಕೃಷ್ಣಾರೂಪಾ ಪಾರ್ವತ್ಯನಿಂದಿತಾ' ಇತ್ಯಾದಿಮೂಲಭಾರತ-ವಾಕ್ಯಾರ್ಥಪ್ರಪಂಚನಾಯ ದ್ರೌಪದ್ಯಾ ನಿರವದ್ಯತ್ವಸಮರ್ಥನಾಯ ಚ ಸವಿಸ್ತರಂ ಪಂಚದ್ರೌಪದೀಕಥಾನಿರೂಪಣಂ ಕೃತಮಾಚಾರ್ಯೈರಿತಿ ಜ್ಞೇಯಮ್। ಹೇ ದ್ರುಪದ ತತಃ ಪಂಚದೇವೀನಾಂ ಪಂಚಕೃತ್ವಃ ಸ್ವಸ್ವಪತಿಯೋಗ-ವರದಾನಮಹಿಮ್ನಾ ದ್ರೌಪದೀದೇಹೇಽಪಿ ಪಂಚದೇವೀನಾಮಾವಶ್ಯಕತ್ವಾತ್ಕಾರಣಾತ್ ದೇವರೂಪಿಣ್ಯೇಷಾ ತೇ ಸುತಾ ಕೃಷ್ಣಾರೂಪಾ ಪಾರ್ವತೀ ಭಾರತ್ಯಾದ್ಯಾಶ್ಚತಸ್ರಶ್ಚೇತಿ ಮಿಳಿತ್ವಾ ಪಂಚಾನಾಂ ಪಂಚಭಿರ್ದೇವೀಭಿಃ ಸಹಿತಾ ಸತೀ ಜಜ್ಞೇ। ಪಂಚಾನಾಂ ದೇವಾನಾಮಂಶೈಃ ಸಹಿತೇತಿ ವಾ। ತತಃ ಏಷಾ ತೇ ಸುತಾ ಅನಿಂದಿತಾ ಭಾರತ್ಯಾದೀನಾಂ ಚತಸೃಣಾಂ ದೇವೀನಾಂ ಸ್ವಸ್ವಪತಿಭಿರೇವ ಸಂಯೋಗಾತ್ ಪಂಚಮ್ಯಾಃ ಪಾರ್ವತ್ಯಾಃ ಪತಿಸಂಯೋಗಸ್ಯಾಭಾವಾತ್ ಪ್ರಾಜ್ಞೈರ್ನಿಂದಿತಾ ನ ಭವತೀತ್ಯರ್ಥಃ। ''ಕರ್ತೃಕರ್ಮಣೋಃ ಕೃತಿ'' ಇತಿ ವಚನಾತ್ ಪಂಚಾನಾಮಿತಿ ಕರ್ತರಿ ಷಷ್ಠೀಯಂ ಪಂಚದೇವೀನಾಮಪಿ ಪೃಥಕ್ಪೃಥಗೇಕದೇಹೇ ಕರ್ತೃತ್ವಸೂಚನಾರ್ಥಮ್। ಅನ್ಯಥಾ ಸಹಯೋಗೇ ತೃತೀಯಾವಿಧಾನಾತ್ ಪಂಚಭಿಃ ಸಹಿತೇತ್ಯವಕ್ಷ್ಯತ್ ॥ –(ವಾ.)

ತತಸ್ತದರ್ಥಮ್ । ಅಪರಿಹಾರ್ಯವರಪ್ರಾಪ್ತಪಂಚಪತಿಸಂಬಂಧೇಽಪಿ ಸ್ವಪಾತಿವ್ರತ್ಯಾತ್ಪ್ರಚ್ಯುತ್ಯರ್ಥ-ಮಿತ್ಯರ್ಥಃ । ಪಂಚಾನಾಂ ಪಂಚಭಿಃ ಆತ್ಮನಾ ಸಹ ಪಂಚಭಿರ್ದೇವೀಭಿಃ ಸಹಿತಾ ಸತೀ । ಪಾರ್ವತೀ । ಗಂಗಾಸಂಬಂಧೇನ ಗಂಗಾಶಬ್ದವಾಚ್ಯತೀರವತ್ ಪಾರ್ವತೀಸಂಬಂಧೇನ ಪಾರ್ವತೀಶಬ್ದವಾಚ್ಯಾ । ದೇವೀ-ಚತುಷ್ಟಯಸ್ಯ ಪ್ರಸಿದ್ಧತ್ವಾತ್ ಪಂಚಮದೇವೀಸ್ಫೋರಣಾಯೇದಮುಕ್ತಮ್ । ಅನಿಂದಿತಾ ಪಂಚದೇವೀಸಾಹಿತ್ಯೇನ ಜನನಾತ್ ಪಂಚಪತಿತ್ವಪ್ರಾಪ್ತನಿಂದಾರಹಿತಾ ಕೃಷ್ಣಾರೂಪಾ ದ್ರೌಪದೀರೂಪಾ ದೇವರೂಪಿಣೀ ಏಷಾ ತೇ ಸುತಾ ಯಜ್ಞವೇದ್ಯಾಂ ಜಜ್ಞೇ । –ಲಕ್ಷಾಲಂಕಾರ

ಅ: ''ವಾಯು ಮೊದಲಾದ ಈ ದೇವತೆಗಳೇ ದೇವತಾಕಾರ್ಯದ ಮಹತ್ತ್ವದ ಕಾರಣದಿಂದಾಗಿ ಮಾನವರಾಗಿ ಅವತರಿಸಿದರು ಎಂದು ಶ್ರುತಿಯಿದೆ. ಅವರ ಅವತಾರಕ್ಕೆ ನಿನ್ನನ್ನು ಅವಮಾನಿಸಿದ್ದು ಕಾರಣವಲ್ಲ''.

ವಿ: ೧) ವಾಯುದೇವರಂತೆ, ಇಂದ್ರ ಮೊದಲಾದವರು ಸಹ ಭೀಮಾದಿಗಳಾಗಿ ಅವತರಿಸಿದ್ದು ಭಗವತ್ಕಾರ್ಯ ಸಾಧನೆಗೇ ಹೊರತು ಶಿವನನ್ನು ಅವಮಾನಿಸಿದ ಕಾರಣದಿಂದಲ್ಲ ಎಂದರ್ಥ.

೨) ಅವರು ಶಿವನನ್ನು ಅವಮಾನಿಸಿಯೇ ಇಲ್ಲ ಎಂಬುದನ್ನೂ ಗಮನಿಸಬೇಕು. ಅವರ ಬಗ್ಗೆ ಸುಳ್ಳು ಹೇಳಿದ್ದರಿಂದ ಅವರಿಗೆ ಇವರಿಗಿಂತ ಹೆಚ್ಚು ಮಾನ್ಯತೆ ದೊರೆತು ಇವರು ಲೋಕದೃಷ್ಟಿಯಲ್ಲಿ ಕೆಲವೊಮ್ಮೆ ಪರಾಭವಗೊಳ್ಳಲು ಕಾರಣವಾಯಿತು ಎಂದೂ ಸಹ ತಿಳಿಯಬಹುದು.

ದೀರ್ಘಕಾಲಂ ಮನುಷ್ಯೇಷು ತತಸ್ತ್ವಂ ಸ್ಥಿತಿಮಾಪ್ಸ್ಯಸಿ ।
ಇತ್ಯುಕ್ತ್ವಾಪ್ರಯಯೌ ಬ್ರಹ್ಮಾ ಸೋಽಶ್ವತ್ಥಾಮಾ ಶಿವೋಽಭವತ್ ।
ಪಂಚದೇವೀತನುಸ್ತ್ವೇಷಾ ದ್ರೌಪದೀ ನಾಮ ಚಾಭವತ್ ॥ ೧೪೫ ॥

---

೩. ಹಾನೋಪಾನಾದಿವ್ಯವಹಾರೇಷ್ವೇವ ಪ್ರವರ್ತತೇ। – (ಜ.)

ಪಾರ್ವತೀವ್ಯವಹಾರೇಷ್ವೇವ ಭೋಜನಾಭ್ಯಂಜನಾದಿವ್ಯವಹಾರೇಷ್ವೇವ ಭಾರತ್ಯೈವ ಸಂಯುಕ್ತಾ ನ ತು ರಮಣಾದೌ ನಾಪಿ ಶಚ್ಯಾದಿಭಿರಿತಿ ಸಂಯುಕ್ತತ್ವೋಪಪತ್ತೇಃ । ಅವಧಾರಣಾನುಪಪತ್ತಿರಿತಿ ಚೇನ್ನ । ಶಚ್ಯಾದಿಭಿರಪಿ ಸಂಯೋಗೇ ಅರ್ಜುನಾದ್ಯುಚ್ಛಿಷ್ಟಭೋಜನಯಾ ಸಂವಾಹನಾದಿಪ್ರಸಕ್ತೇರಿತಿ ಭಾವಃ। – (ತಾ.)

೪. ದೇವಕಾರ್ಯಾರ್ಥಗೌರವಾದಿತ್ಯಸ್ಯ ದೇವಕಾರ್ಯಸ್ಯ ತತ್ಸಾಧ್ಯಫಲಸ್ಯ ಚ ಮಹತ್ವಾದಿತ್ಯರ್ಥಃ। – (ಸ.)

೫. ಏಷಾ ಇಂದ್ರಸೇನಾ ದೇವಕೀತಿ ಶ್ಯಾಮಲಾಯಾಶ್ಚತುರ್ಥಂ ಜನ್ಮ ಚೇತ್ಯಾಂಗದೇತಿ ಶಚ್ಯಾಃ ಜರಾಸಂಧ-ಕನ್ಯಾರೂಪೋಷಾಯಾಃ ಏವ ಪಾರ್ವತ್ಯಾ ಅಪಿ ಚತುರ್ಥಂ ಜನ್ಮಾಸ್ತೀತಿ ಬೋದ್ಧವ್ಯಮ್ । ಅನ್ಯಥಾ ದ್ರೌಣೇಃ ಸ್ತ್ರೀವಿಯೋಗಲಕ್ಷಣಃ ಶಾಪೋ ನ ಸ್ಯಾತ್ । ಸತ್ಯಾಂ ಸ್ತ್ರಿಯಾಂ ತದಲಾಭಸ್ಯೈವ ಸ್ತ್ರೀವಿಯೋಗತ್ವಾತ್ ಪತಿಯೋಗಪ್ರಾಪ್ತಿರುಪವರದ್ವಯಸ್ಯ ದ್ರೌಪದೀದೇಹೇ ದೇವಕ್ಯಾದಿಪೃಥಗವತಾರೇ ಚ ಫಲಂ ಜ್ಞೇಯಮ್ ॥ – (ಜ.)

ಏವಂ ಚ ಭಾರತೀಸಂಸೃಷ್ಟತಯಾ ವಿಪ್ರಕನ್ಯೇಂದ್ರಸೇನಾದ್ರೌಪದೀಜನ್ಮತ್ರಯಮೇಕದೇಹಕೃತವಂಚನಫಲಂ। ಭಾರತ್ಯ ಸಂಸೃಷ್ಟತಯಾ ಪೃಥಕ್ ಸ್ವಪತಿಪ್ರಾಪ್ತ್ಯರ್ಥಂ ದೇವಕ್ಯಾದಿರೂಪೇಣ ಜನ್ಮ ಚತುರ್ಥಂ ಪೃಥಗ್ ದೇಹಕೃತ ವಿಲಾಸ ದರ್ಶನಫಲಂ। ತತ್ರಾನ್ಯಗಾಮಿತ್ವಶಾಪ ಏಕದೇಹತ್ವೇನಾನುಭೂತಃ। ತತ್ರಾನ್ಯಗಾಶ್ಚ ಭವತ್ಯೇತ್ಯುಕ್ತತ್ವಾತ್ । ಪಾರ್ವತ್ಯಾಃ ಪೃಥಗ್ ಜನ್ಮಾಭಾವಸ್ತು ಭಾರತ್ಯೈ ವ ತು ಪಾರ್ವತೀತಿ ಬ್ರಹ್ಮವಚನಬಲಾತ್ । ಬ್ರಹ್ಮಶಿವಾಭ್ಯಾಂ ದತ್ತಯೋಃ ವರಶಾಪಯೋಃ ಪರಪುರುಷಗಾಮಿತ್ವಸ್ವಭರ್ತೃಗಾಮಿತ್ವರೂಪಯೋಃ ಸಾಮಾನ್ಯೋಕ್ತ್ಯಾ ದತ್ತಯೋಃ ಕ್ವಚಿತ್ ಪರ್ಯವಸಾನೋಪಪತ್ತೇಃ ವಿಪ್ರಕನ್ಯಾಜನ್ಮನಿ ಸ್ವಪುರುಷಸಂಯೋಗಾಭಾವಃ । ಇಂದ್ರಸೇನಾರೂಪೇ ಪರಪುರುಷ-ಗಾಮಿತ್ವಮಾತ್ರಂ। ದ್ರೌಪದೀರೂಪೇ ಸ್ವಪರಪುರುಷೋಭಯಸಂಯೋಗ ಇತಿ ಸರ್ವಮವದಾತಮ್। – (ವ.)

ಅ: ''ಅದರಿಂದಾಗಿ ನೀನು ಮನುಷ್ಯಲೋಕದಲ್ಲಿ ಚಿರಕಾಲ ನೆಲೆಸುವಿ''. ಹೀಗೆ ಹೇಳಿ ಬ್ರಹ್ಮದೇವರು ಹೊರಟು ಹೊದರು. ಆ ಶಿವನೇ ಅಶ್ವತ್ಥಾಮನಾಗಿ ಹುಟ್ಟಿದ. ಪಂಚದೇವಿಯರಿಂದ ಕೂಡಿದ ಇಂದ್ರಸೇನೆ ದ್ರೌಪದಿಯಾಗಿ ಅವತರಿಸಿದಳು.

ವಿ: ೧) ಅಶ್ವತ್ಥಾಮರು ಬ್ರಹ್ಮಚಾರಿಗಳಾಗಲು ಹಿಂದೆ ಹೇಳಿದ್ದು ಕಾರಣವಾದರೆ, ಅವರು ಚಿರಂಜೀವಿಗಳಾಗಲು ಬ್ರಹ್ಮ ದೇವರು ನೀಡಿದ ಈ ಶಾಪ ಕಾರಣವಾಯಿತು. ಆ ಶಾಪಕ್ಕೆ ಹಿಂದೆ ಹೇಳಿದಂತೆ ಅವರು ಅವರ ಬಗ್ಗೆ ಸುಳ್ಳು ಹೇಳಿದ್ದೇ ಕಾರಣ.

೨) ಹನುಮಂತನು ಚಿರಂಜೀವಿಯಾದರೂ ಆತನ ಆ ಚಿರಂಜೀವಿತ್ವಕ್ಕೆ ಯಾವುದೇ ಶಾಪಾದಿಗಳು ಕಾರಣವಲ್ಲದೇ ಕೇವಲ ರಾಮರೂಪದ ಶ್ರೀಹರಿಯ ವಿಶೇಷಾನುಗ್ರಹ ಕಾರಣವಾಯಿತು.

೩) ಹೀಗೆ ಬ್ರಹ್ಮಚರ್ಯದಲ್ಲಿ ಮಾತ್ರವಲ್ಲದೇ ಚಿರಂಜೀವಿತ್ವದಲ್ಲೂ ಹನುಮಂತನ ಸ್ಥಾನ ಅಶ್ವತ್ಥಾಮರಿಗಿಂತ ತುಂಬ ಉನ್ನತವಾದುದು ಎಂಬ ವಿಶೇಷ ಪ್ರಮೇಯ ಇಲ್ಲಿ ಸೂಚಿತವಾಗಿದೆ ಎಂದು ತಿಳಿಯಬೇಕು. ಹನುಮಂತನಿಗಿರುವಂತಹ ವೈಶಿಷ್ಟ್ಯ ಅಶ್ವತ್ಥಾಮಾದಿ ಇತರ ಚಿರಂಜೀವಿಗಳಿಗೆ ಇಲ್ಲದಿರುವುದೂ ಗಮನಾರ್ಹ.

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ ।
ಉಕ್ತೋಽರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥ ೧೪೬ ॥

ಅ: ಇಲ್ಲಿ ಹೇಳಿದ ಎಲ್ಲಾ ವಿಷಯಗಳೂ ಅದರಂತೆ ಹಿಂದೆ ಹೇಳಿದ ಸಕಲ ಪ್ರಮೇಯಗಳೂ ವೇದಗಳಲ್ಲೂ, ಪುರಾಣಗಳಲ್ಲೂ, ಮಹಾಭಾರತದಲ್ಲೂ ಸ್ಫುಟವಾಗಿ ತಿಳಿಯುವವು.

ವಿ: ೧) ಈ ವಿಷಯಗಳು ವೇದಗಳಲ್ಲೂ, ಅವುಗಳಿಗಿಂತ ಹೆಚ್ಚಾಗಿ ಪುರಾಣಗಳಲ್ಲೂ ಇನ್ನೂ ಮಿಗಿಲಾಗಿ ಮಹಾಭಾರತದಲ್ಲೂ ಪ್ರತಿಪಾದಿತವಾಗಿವೆ ಎಂಬುದು ಇಲ್ಲಿಯ **'ವೇದೇಷು ಸಪುರಾಣೇಷು ಭಾರತೇ ಚ'** – ಎಂಬ ಉಲ್ಲೇಖನ ಕ್ರಮ ತಿಳಿಸುವುದು.

ನನು ಚತುರ್ಮುಖಶಾಪಾನುಸಾರೇಣೇಂದ್ರಸೇನಾದೇಹೇऽನ್ಯಗಾತ್ವಸ್ಯ ಪ್ರಾಪ್ತತ್ವಾತ್ ತದನಂತರ ಭಾವಿರುದ್ರವರಸ್ಯ ಕಥಂ ತಚ್ಛಾಪವಿಘಟಕತ್ವಂ? ಯೇನ ಮಚ್ಛಪ್ತಾನಾಂ ಇತ್ಯಾದಿ ಘಟತೇ। ಸ್ವಪತಿವಿಯೋಗಸ್ಯ ಬ್ರಹ್ಮಣಾನಾದಿಷ್ಟತ್ವಾದಿತಿ ಚೇನ್ನ। ಜನ್ಮತ್ರಯೇ ಏಕದೇಹಸ್ಥಿತತಯಾ ಮಾನುಷ್ಯಪತಿವಿಯೋಗಾದೇಶಾಭಿಪ್ರಾಯಕತ್ವಾತ್। ಅನ್ಯಥೈಕದೇಹಸ್ಥಿತಾನಾಂ ಮಧ್ಯೇ ಏಕಸ್ಯಾ ಭರ್ತೃಸಂಯೋಗಸ್ಯಾನ್ಯಾಸಾಮನ್ಯಗಾಮಿತ್ವಂ ವಿನಾನುಪಪತ್ತೇಃ ಏಕಸ್ಮಿನ್ ದೇಹೇऽನ್ಯಗಾತ್ವಂ ಸ್ಯಾದಿತಿ ಸ್ವೋಕ್ತಿರ್ವ್ಯಾಘ್ಯಾ ಸ್ಯಾತ್। ದ್ರೌಪದೀದೇಹೇ ತು ವಿಶೇಷಂ ವಕ್ಷ್ಯತೀತಿ ಜ್ಞೇಯಂ। ಮೃಷೇತಿ। ನ ಚ ದೇಹಂ ರುದ್ರಸ್ಯಾನಿಷ್ಟಂ। ಸ್ವಪತಿಸಂಯೋಗ ವರಾಪ್ರತಿಬಂಧಕತ್ವಾದಿತಿ ವಾಚ್ಯಂ। ವಿವಿಕ್ತ ದೇಹೇಷು ಸ್ವಪತಿಸಂಯೋಗವರಸ್ಯ ರುದ್ರದತ್ತತ್ವೇನ ಪ್ರತಿಬಂಧಕತ್ವಾತ್। ಅತ ಏವ 'ಚತ್ವಾರಃ ಪತಯಃ ಪೃಥಕ್' ಇತ್ಯಸ್ಯ (ಶ್ಲೋ. ೧೩೦) ಪೃಥಗ್ದೇಹೇಷೀತ್ಯರ್ಥಮಾಹುಃ। ಅತ ಏವ ರುದ್ರವರವಿರೋಧಿತಯಾ ಸೇಂದ್ರಸೇನಾ ದ್ರೌಪದೀನಾಮ್ನಾ ಪಂಚದೇವೀತನುರ್ಭವೇದಿತಿ ಜ್ಞೇಯಮ್। – (ತಾ.)

೨) ಗರುಡಪುರಾಣ ಬ್ರಹ್ಮಕಾಂಡದಲ್ಲಿ ಈ ವಿವರಗಳು ಸಮಗ್ರವಾಗಿಯೇ ದೊರೆಯು–ತ್ತವೆ. ಮಹಾಭಾರತದ ದ್ರೌಪದಿಯ ಸ್ವಯಂವರ ಪ್ರಸಂಗದಲ್ಲಿನ ಪಂಚೇಂದ್ರೋಪಾಖ್ಯಾನದಲ್ಲಿ ಈ ವಿವರ ಬಂದಿದೆ ಎಂದು ತಿಳಿಯಬೇಕು.

ಧೃಷ್ಟದ್ಯುಮ್ನ ದ್ರೌಪದಿಯರ ಹಿರಿಮೆ

ಮುಮುದುಃ ಸರ್ವಪಾಂಚಾಲಾ ಜಾತಯೋಃ ಸುತಯೋಸ್ತಯೋಃ ।
ಮಾನುಷಾನ್ನೋಪಭೋಗೇನ ಸಂಸರ್ಗಾನ್ಮಾನುಷೇಷು ಚ ॥ ೧೪೭ ॥

೧
ಮನುಷ್ಯಪುತ್ರತಾಯಾಶ್ಚ ಭಾವೋ ಮಾನುಷ ಏತಯೋಃ ।
ಅಭೂನ್ನಾತಿತರಾಮಾಸೀತ್ ತದಯೋನಿತ್ವಹೇತುತಃ ॥ ೧೪೮ ॥

ಅ: ಆ ಇಬ್ಬರು ಮಕ್ಕಳು ಜನಿಸುತ್ತಲೇ ಸಕಲ ಪಾಂಚಾಲರೂ ಬಹಳವಾಗಿ ಆನಂದಿಸಿದರು. ಮನುಷ್ಯರ ಅನ್ನವನ್ನು ಉಂಡದ್ದರಿಂದಲೂ, ಮಾನವರ ಸಹವಾಸ ಮಾಡಿದ್ದರಿಂದಲೂ ಅವರಿಗೆ ಮನುಷ್ಯರಾಗಿ ಜನಿಸಿದ ಸ್ವಭಾವ ಎನ್ನಬೇಕು. ಆದರೆ, ಅವರು ಮನುಷ್ಯಯೋನಿಯಲ್ಲಿ ಅವತರಿಸಲಿಲ್ಲವಾದ್ದರಿಂದ ಮಾನುಷಭಾವ ಅವರಿಗೆ ಹೆಚ್ಚಾಗಿ ಉಂಟಾಗಲೇ ಇಲ್ಲ.

ವಿ: ಬ್ರಹ್ಮಶಾಪದಂತೆ ದ್ರೌಪದಿ ಮನುಷ್ಯಯೋನಿಯಲ್ಲಿ ಹುಟ್ಟಬೇಕಾಗಿತ್ತು, ಆದರೆ, ಯಜ್ಞಕುಂಡದಿಂದ ಅವತರಿಸಿದ್ದರಿಂದ ಅವರಿಗೆ ಮನುಷ್ಯತ್ವ ಹೇಗೆ ಉಂಟಾಯಿತು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಹುಟ್ಟಿನಿಂದ ದ್ರೌಪದಿ ಮನುಷ್ಯಳಲ್ಲ, ಅಯೋನಿಜಳು. ಆದರೂ, ಮನುಷ್ಯ ಜನ್ಮ ಎಂಬ ವ್ಯವಹಾರ ಅವರು ಮಾನುಷಾನ್ನವನ್ನು ಉಂಡದ್ದರಿಂದ, ಮನುಷ್ಯರೊಂದಿಗೆ ವ್ಯವಹರಿಸಿ–ದ್ದರಿಂದ ಮಾತ್ರ. ಈ ಮಟ್ಟಿಗೆ ಬ್ರಹ್ಮಶಾಪದ ಸಾರ್ಥಕ್ಯ ಎಂದು ತಿಳಿಯಬೇಕು. ಇಲ್ಲಿ ಪ್ರಧಾನವಾಗಿ ದ್ರೌಪದಿ ಭಾರತಿಯಾದ್ದರಿಂದ ಅವರಗೆ ಬ್ರಹ್ಮ ಶಾಪವೇ ಇಲ್ಲದ್ದರಿಂದ, ಅವರು ಮನುಷ್ಯಯೋನಿ–ಯಲ್ಲಿ ಹುಟ್ಟುವ ಕಾರಣವೇ ಇಲ್ಲ, ಆದರೆ ಪಾರ್ವತ್ಯಾದಿ ಸ್ತ್ರೀಯರಿಗೆ ಆ ಶಾಪವಿದ್ದದರಿಂದ ಈ ಆಕ್ಷೇಪ. ಅವರಿಗೆ ಮೇಲೆ ಹೇಳಿದ ಕಾರಣಗಳಿಂದ ಮನುಷ್ಯತ್ವಪ್ರಾಪ್ತಿ ಎಂದು ಇದರ ಭಾವ. ಧೃಷ್ಟದ್ಯುಮ್ನ ಅಶ್ವತ್ಥಾಮಾದಿಗಳಂತೆ ಮನುಷ್ಯ ಯೋನಿಯಲ್ಲಿ ಜನಿಸಿಲ್ಲವೆಂಬುದು ವಿಶೇಷ.

---

೧. ಮನುಷ್ಯಪುತ್ರತಾಯಾಶ್ಚೇತ್ಯತ್ರ ಮನುಷ್ಯಪುತ್ರತ್ವಾಯ ತದ್ಯೋಗ್ಯಮಂತ್ರೈರಭಿಮಂತ್ರ್ಯ ಹುತಹವಿಷೋತ್ಪತ್ತೇರ್ನಿರ್ಮಿತತ್ವಾಚ್ಚೇತ್ಯರ್ಥಃ । ಯಥಾ ಕ್ಷತ್ರಿಯಕುಲೋತ್ಪನ್ನಸ್ಯ ವಿಶ್ವಾಮಿತ್ರಸ್ಯ ಬ್ರಾಹ್ಮಣ್ಯಪ್ರಾಪ್ತ್ಯೈ ತದ್ಯೋಗ್ಯಮಂತ್ರಾಭಿಮಂತ್ರಿತಹವಿಃಪ್ರಾಶನಮೇವ ಕಾರಣಂ ತಥಾತ್ರಾಪೀತಿ ದ್ರಷ್ಟವ್ಯಮ್ ॥ – (ರಾ.)

ನನು ದ್ರೌಪದ್ಯಾ ವೇದಿಮಧ್ಯಾದುತ್ಥಿತತ್ವಾತ್ ಬ್ರಹ್ಮಶಾಪಮೋಘತಾ । ಕಥಂ ಕೃಷ್ಣಾ ಧೃಷ್ಟದ್ಯುಮ್ನಯೋಃ ಮನುಷ್ಯತ್ವವ್ಯವಹಾರ ಇತ್ಯತ ಆಹ ಮಾನುಷೇತಿ । – (ತಾ.)

ಯಾಜೋಪಯಾಜೌ ತಾವೇವ ದಯಿತಾ ದ್ರುಪದಸ್ಯ ಸಾ ।
ಮಾತೃಸ್ನೇಹಾರ್ಥಮನಯೋರ್ಯಯಾಚೇ ದದತುಶ್ಚ ತೌ ॥ ೧೪೯ ॥

ಅ: ಯಾಜೋಪಯಾಜರನ್ನು ದ್ರುಪದನ ಪತ್ನಿ ಅವರಿಬ್ಬರಿಗೂ ತನ್ನಲ್ಲಿ ತಾಯಿ ಎಂಬ ಸ್ನೇಹ ಹುಟ್ಟುವಂತೆ ಅನುಗ್ರಹಿಸಲು ಕೇಳಿಕೊಂಡಳು. ಅವರು ಅದನ್ನು ನೀಡಿದರು.

ವಿ: ತಾನು ಅಲಂಕಾರ ಪೂರೈಸಿ ಬರುವ ವೇಳೆಗೆ ತಾನು ತಿನ್ನಬೇಕಾಗಿದ್ದ ಹವಿಸ್ಸಿನಿಂದ ಆ ವಳೆಗಾಗಲೇ ಧೃಷ್ಟದ್ಯುಮ್ನ, ದ್ರೌಪದಿಯರು ಯಜ್ಞಕುಂಡ, ಯಜ್ಞವೇದಿಗಳಿಂದ ಅವತರಿಸಿದ್ದನ್ನು ಕಂಡು ದ್ರುಪದಪತ್ನಿಯ ಅಹಂಕಾರ ಅಳಿಯಿತು, ಯಾಜೋಪಯಾಜರ ಹಿರಿಮೆ ತಿಳಿಯಿತು. ತನ್ನ ತಪ್ಪಿಗಾಗಿ ಪರಿತಪಿಸಿ ಅವಳು ತಾನು ಸಾಕ್ಷಾತ್ತಾಗಿ ಅವರಿಬ್ಬರ ತಾಯಿಯಾಗುವ ಯೋಗವನ್ನು ಕಳೆದುಕೊಂಡರೂ, ಅವರಿಬ್ಬರಿಗೂ ತನ್ನ ಬಗ್ಗೆ ತಾಯಿ ಎಂಬ ಪ್ರೀತಿ ಹುಟ್ಟಿ, ಅದರಿಂದಾಗಿ ತಾನು ಅವರ ತಾಯಿ ಎನ್ನಿಸಿಕೊಳ್ಳುವ ಭಾಗ್ಯ ನೀಡಲು ಬೇಡಿಕೊಂಡಳು. ಯಾಜೋಪಯಾಜರು ಆದರ್ಶ ವಿಪ್ರರು. ಅವಳ ಬಗ್ಗೆ ಕರುಣೆ ತೋರಿದ ಅವರು ಆ ವರವನ್ನು ನೀಡಿ ಅನುಗ್ರಹಿಸಿದರು ಎಂದರ್ಥ.

ದ್ರೋಣರ ಬಳಿ ಧೃಷ್ಟದ್ಯುಮ್ನನ ಅಸ್ತ್ರಾಭ್ಯಾಸ

ಜಾತಮಾತ್ಮನಿಹಂತಾರಂ ಭಾರದ್ವಾಜೋ ನಿಶಮ್ಯ ತಮ್ ।
ಯಶೋಽರ್ಥಮಸ್ತ್ರಾಣಿ ದದಾವಗ್ರಹೀತ್ ಸೋಽಪಿ ಲೋಭತಃ
ರಾಮಾಸ್ತ್ರಾಣಾಂ ದುರ್ಲಭತ್ವಾತ್ ತ್ರಿದಶೇಷ್ವಪಿ ವೀರ್ಯವಾನ್ ॥ ೧೫೦ ॥

ಅ: ತನ್ನನ್ನು ಕೊಲ್ಲಲೆಂದೇ ಹುಟ್ಟಿಬಂದವನು ಎಂದು ಧೃಷ್ಟದ್ಯುಮ್ನನ ಬಗ್ಗೆ ಕೇಳಿ ತಿಳಿದಿದ್ದರೂ ದ್ರೋಣರು ಕೀರ್ತಿಪ್ರಾಪ್ತಿಗಾಗಿ ಅವನಿಗೆ ಅಸ್ತ್ರಗಳನ್ನು ಉಪದೇಶಿಸಿದರು. ಶಕ್ತಿಶಾಲಿಯಾದ ಅವನೂ ಸಹ ಪರಶುರಾಮರ ಶಸ್ತ್ರಗಳು ದೇವತೆಗಳಲ್ಲಿಯೂ ದುರ್ಲಭ ಎಂಬುದನ್ನು ತಿಳಿದು ಅವುಗಳ ಮೇಲಿನ ಆಸೆಯಿಂದಾಗಿ ಅವರ ಬಳಿ ಅವುಗಳನ್ನು ಉಪದೇಶ ಪಡೆದ.

ವಿ: ೧) ಇದೊಂದು ವಿಚಿತ್ರ ಪ್ರಸಂಗ. ಧೃಷ್ಟದ್ಯುಮ್ನನ ಅಸ್ತ್ರಾಭ್ಯಾಸ [೧]ದ್ರೋಣರ ಬಳಿ–ಯಲ್ಲಿಯೇ ನಡೆಯಿತು. ಅವನು ಹುಟ್ಟಿ ಬಂದಿದ್ದು ಅವರನ್ನು ಕೊಲ್ಲಲೆಂದು. ಅದು ಹೇಳುವ

---

೧. ಧೃಷ್ಟದ್ಯುಮ್ನಂ ತು ಪಾಂಚಾಲ್ಯಮಾನೀಯ ಸ್ವಂ ನಿವೇಶನಮ್ ।
ಉಪಾಕರದಸ್ತ್ರಹೇತೋಃ ಭಾರದ್ವಾಜಃ ಪ್ರತಾಪವಾನ್ ॥
ಅಮೋಕ್ಷಣೀಯಂ ದೈವಂ ಹಿ ಭಾವಿ ಮತ್ವಾ ಮಹಾಮತಿಃ ।
ತಥಾ ತತ್ಕೃತವಾನ್ ದ್ರೋಣ ಆತ್ಮಕೀರ್ತ್ಯನುರಕ್ಷಣಾತ್ ॥ –ಕೃ. ಭಾರತ (ಆದಿ. ೧೮೧/೫೯, ೬೦)

ದ್ರೋಣರಿಗೂ ಗೊತ್ತಿತ್ತು, ಕಲಿತ ಅವನಿಗೂ ತಿಳಿದಿತ್ತು, ಅದರಂತೆ ಅವನು ತನ್ನನ್ನು ದ್ವೇಷಿಸುವ ದ್ರುಪದನ ಪುತ್ರ ಎಂಬುದು ಅವರಿಗೆ ಗೊತ್ತಿದ್ದಂತೆ, ಅವರು ತನ್ನ ತಂದೆಯ ವೈರಿಯಾದ ದ್ರೋಣರು ಎಂಬುದು ಅವನಿಗೂ ತಿಳಿದಿತ್ತು. ಹೀಗಾಗಿ ಅವರಿಬ್ಬರಲ್ಲಿ ಗುರುಶಿಷ್ಯಭಾವ ಸರ್ವಥಾ ಸಾಧ್ಯವಿರಲಿಲ್ಲ. ಆದರೂ, ಅದು ಯಾಶಸ್ವಿಯಾಗಿಯೇ ನಡೆದುಹೋಯಿತು ಎಂಬಲ್ಲಿ ಶ್ರೀಹರಿಯ ಅಪೂರ್ವ ಸಂಕಲ್ಪದ ಮಹತ್ವ ಅಡಗಿದೆ.

೨) ಕಂಸ ಮುಂದೆಂದೋ ಜನಿಸುವ ತನ್ನ ತಂಗಿಯಾದ ದೇವಕಿಯ ಎಂಟನೆಯ ಗರ್ಭ ತನಗೆ ಮೃತ್ಯು ಎಂದು ಕೇಳಿ ಆಗಲೇ ಅವಳನ್ನೇ ಕೊಲ್ಲಲೆಂದು ಹೊರಟಿದ್ದ ಮಹಾದುಷ್ಟ. ಆದರೆ ತನ್ನನ್ನು ಕೊಲ್ಲುವವನೇ ತನ್ನ ಪಾದ ಹಿಡಿದು ಶಿಷ್ಯನನ್ನಾಗಿ ಸ್ವೀಕರಿಸಲು ಪ್ರಾರ್ಥಿಸಿದಾಗಲೂ ಕಾಲು ಹಿಡಿದ ಮೃತ್ಯುವನ್ನು ಕೈಯಿಂದ ಹೊಸಕುವ ಯೋಚನೆಯನ್ನೂ ಮಾಡದೇ ಅವನನ್ನು ಸ್ವೀಕರಿಸಿದ್ದು ದ್ರೋಣಾಚಾರ್ಯರ ಅಪೂರ್ವ ದೈವೀ ಸಂಪತ್ತು. ಕಂಸನದ್ದು ಪ್ರತಿಗಾಮಿ ಪ್ರವೃತ್ತಿಯಾದರೆ, ದ್ರೋಣರದ್ದು ಅನುಗಾಮಿ ಪ್ರವೃತ್ತಿ. ಇಬ್ಬರಿಗೂ ನಿರೀಕ್ಷಿತ ರೀತಿಯಲ್ಲಿ ಮೃತ್ಯು ಒದಗಿದರೂ, ಕಂಸನಿಗೆ ಅಧೋಗತಿಯಾದರೆ, ದ್ರೋಣರಿಗೆ ಸದ್ಗತಿಯಾಯಿತು.

೩) ದ್ರೋಣರು ಭಾವಿಸಿದರು : ''ಇವನು ನನ್ನನ್ನು ಕೊಲ್ಲಲೆಂದೇ ಹುಟ್ಟಿದವನು. ನಾನು ಹೇಳಲಿ, ಹೇಳದಿರಲಿ ಅವನು ಕೊಲ್ಲುವುದು ನಿಶ್ಚಯ. ಈಗ ಇಂತಹವನಿಗೂ ಪಾಠ ಹೇಳುವ ಮೂಲಕ ನನ್ನ ವಿಶಾಲಮನೋಭಾವ ಜಗತ್ತಿಗೆ ತಿಳಿದು ಕೀರ್ತಿ ಲಭಿಸುವ ಯೋಗ ಹರಿ ನೀಡಿರುವನು. ಅದನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಕಿಲ್ಲ'' ಎಂದು ಭಾವಿಸಿ ಅವರು ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿಯೇ ಬಿಟ್ಟರು.

೪) ಅವನೂ ಹಾಗೆಯೇ – ಮುಂದೆಂದೋ ತಾನು ಇವರನ್ನು ಕೊಲ್ಲುವುದು ನಿಶ್ಚಯ– ವಾದರೂ, ಅಮೋಘವಾದ ಪರಶುರಾಮಾಸ್ತ್ರಗಳು ಇವರಿಂದ ದೊರೆಯುವ ಅವಕಾಶವಿರುವಾಗ ಅದನ್ನೇಕೆ ಕಳೆದುಕೊಳ್ಳಬೇಕು. ಅಂತಹ ಅಮೋಘ ಅಸ್ತ್ರಗಳಿಗಾಗಿ ಇಂಥವರ ಶಿಷ್ಯರಾಗುವುದರಲ್ಲಿ ಅವಿವೇಕವೇನಿದೆ ಎಂದು ವಿದ್ಯೆಯ ಮೇಲಿನ ಪ್ರೀತಿಯಿಂದಾಗಿ ಅವರ ಬಳಿ ಶಿಷ್ಯನಾಗಿ ಓದಿಯೇಬಿಟ್ಟ.

೫) ಸಾತ್ತ್ವಿಕರಲ್ಲಿ ಬರುವ ವಿವಾದ ಹೇಗೆ ಸಂಪೂರ್ಣ ಸರ್ವವಿಷಯಕ ವಿವಾದವಾಗದೇ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಸೀಮಿತಗೊಂಡು, ಉಳಿದಂತೆ ವಿಶ್ವಾಸದಲ್ಲಿಯೇ ಪರ್ಯವಸಾನ ಹೊಂದುವುದು ಎನ್ನಲು ಇದೊಂದು ಅತ್ಯಪೂರ್ವ ನಿದರ್ಶನ.

೬) ಸೂತ ಮತ್ತು ನಿಷಾದ ಎಂಬ ಕಾರಣದಿಂದ ಕರ್ಣ ಮತ್ತು ಏಕಲವ್ಯರನ್ನು ನಿರಾಕರಿಸಿದ್ದ ದ್ರೋಣರು ಸ್ವಯಂ ಮೃತ್ಯುಸ್ವರೂಪನಾದ ಧೃಷ್ಟದ್ಯುಮ್ನನಿಗೆ ಅಸ್ತ್ರೋಪದೇಶ ಮಾಡುವ

ಮೂಲಕ ತಮ್ಮದು ಧರ್ಮನಿಷ್ಠವಾದ ಸಾತ್ವಿಕ ಪ್ರವೃತ್ತಿಯೇ ಹೊರತು ವೈಯಕ್ತಿಕದ್ವೇಷಾದಿಗಳಿಂದ ಹೊರಡುವ ತಾಮಸ ಪ್ರವೃತ್ತಿಯಲ್ಲ ಎಂಬುದನ್ನು ಜಗತ್ತಿಗೆ ಸಾರಿದರು. ಅವರ ಈ ವಿಶಾಲ ಮನೋಭಾವವನ್ನು ಜಿಜ್ಞಾಸುಗಳು ಗುರುತಿಸುವ ಅಗತ್ಯ ತುಂಬಾ ಇದೆ. ಈ ಮೂಲಕ ಅವರು ತಮ್ಮ ದೇವಗುರುತ್ವವನ್ನು ಸಮರ್ಥಿಸಿಕೊಂಡರು ಎಂದೂ ತಿಳಿಯಬಹುದು.

ಪಾಂಡವರಿಗೆ ಕೃಷ್ಣನ ಅಭಿನಂದನೆ

ಭೀಮಾರ್ಜುನಾಭ್ಯಾಂ ಬದ್ಧಂ ತಂ ಶ್ರುತ್ವಾ ಪಾಂಚಾಲಭೂಪತಿಮ್ ।
ಪ್ರಾಹಿಣೋತ್ ಕೃತವರ್ಮಾಣಂ ಪಾಂಡವಾನಾಂ ಜನಾರ್ದನಃ ।
ಪಾಂಡವೇಷ್ವತುಲಾಂ ಪ್ರೀತಿಂ ಲೋಕೇ ಖ್ಯಾಪಯಿತುಂ ಪ್ರಭುಃ ॥ ೧೫೧ ॥

ಅ: ಭೀಮಾರ್ಜುನರಿಂದ ಪಾಂಚಾಲರಾಜ ಸೆರೆಹಿಡಿಯಲ್ಪಟ್ಟ ವಿಚಾರವನ್ನು ಕೇಳಿ ಕೃಷ್ಣ ಪಾಂಡವರ ಮೇಲಿನ ತನ್ನ ಅನುಪಮ ಪ್ರೀತಿಯನ್ನು ಲೋಕಕ್ಕೆ ತಿಳಿಸಿಕೊಡಲೆಂದು ಕೃತವರ್ಮನನ್ನು ಅವರ ಬಳಿಗೆ ಕಳುಹಿಸಿಕೊಟ್ಟ.

ವಿ: ೧) ಶ್ರೀಕೃಷ್ಣ ಸರ್ವಜ್ಞ, ಆತನು ಯಾರಿಂದಲು ಏನನ್ನೂ ಕೇಳಿ ತಿಳಿಯಬೇಕಾದ್ದಿಲ್ಲ; ಆದರೂ, ಭೀಮಾರ್ಜುನರು ಸಾಧಿಸಿದ ದ್ರುಪದ ಜಯವನ್ನು ಅಭಿನಂದಿಸುವ ಮೂಲಕ ಪಾಂಡವರ ಮೇಲಿನ ತನ್ನ ಅಪಾರ ಪ್ರೀತಿಯನ್ನು ಲೋಕಕ್ಕೆ ಸಾರಲೆಂದು ಕೃತವರ್ಮನನ್ನು ಕಳುಹಿಸಿಕೊಟ್ಟ ಎಂದರ್ಥ.

೨) ಶ್ರೀಕೃಷ್ಣ ಈ ಕಾರ್ಯ ಮಹತ್ಸಾಧನೆಯನ್ನು ಮಾಡಿದ ಆತ್ಮೀಯರನ್ನು ಅಭಿನಂದಿಸುವ ಲೋಕರೂಢಿಗೆ ನಾಂದಿಯಾಯಿತು ಎಂದು ಭಾವಿಸಬಹುದು.

ಸಮ್ಮಾನ್ಯ ಪಾಂಡವಾನ್ ಸೋಽಪಿ ಶೂರಾನುಜಸುತಾಸುತಃ[೧] ।
ತೈರ್ಮಾನಿತಃ ಕೃಷ್ಣಭಕ್ತ್ಯಾ ಭ್ರಾತೃತ್ವಾಚ್ಚ[೨] ಹರಿಂ ಯಯೌ ॥ ೧೫೨ ॥

---

೧. ಶೂರಾನುಜಸುತಾಸುತ ಇತ್ಯತ್ರ ಶೂರಾನುಜಸ್ಯ ಯಾ ಸುತಾ ತಸ್ಯಾಃ ಸುತ ಇತ್ಯರ್ಥಃ। ಅತ ಏವ ಶೂರಾನುಜಸುತಾಯಾಃ ಸುತಃ = ಕೃತವರ್ಮಾ। ಶೂರಸುತಾಯಾಃ ಕುಂತ್ಯಾಃ ಸುತಾಃ ಪಾಂಡವಾಃ। ತೇನ- ಜ್ಯೇಷ್ಠಾಯಾಃ ಪುತ್ರತ್ವಾತ್ - ಕನಿಷ್ಠಾಯಾಃ ಪುತ್ರತ್ವಾಚ್ಚ ಭ್ರಾತೃತ್ವಮ್ ॥ – (ವಾ.)

೨. ಶೂರಪುತ್ರೀ ಕುಂತೀ ತದನುಜಸುತಾ ಕೃತವರ್ಮಮಾತಾ ಏವಂ ಮಾತೃಭಗಿನೀಸುತತ್ವಾತ್ ಭ್ರಾತೇತ್ಯುಕ್ತಂ ಭವತಿ। – (ಜ.)

ಅ: ಕೃತವರ್ಮ ಶೂರರಾಜನ ತಮ್ಮನ ಮಗಳ ಮಗ. ಶ್ರೀಕೃಷ್ಣನ ಮೇಲಿನ ಭಕ್ತಿಯಿಂದಾಗಿಯೂ, ಸೋದರ ಎಂಬ ಕಾರಣದಿಂದಾಗಿಯೂ ಅವನು ಪಾಂಡವರಿಂದ ಸಮ್ಮಾನಿತನಾಗಿ ಶ್ರೀಕೃಷ್ಣನ ಬಳಿಗೆ ಮರಳಿದ.

ವಿ: ೧) ಕೃತವರ್ಮ ಒಬ್ಬ ಪ್ರಸಿದ್ಧನಾದ ಯಾದವವೀರ, ಅವನು ಶುಕ್ಲಪಕ್ಷದ ಅಭಿಮಾನಿ ದೇವತೆಯ ಅವತಾರ ಎಂಬ ವಿವರ ಈಗಾಗಲೇ ಬಂದಿದೆ. ಅವನು ಶೂರರಾಜನ ತಮ್ಮನ ಮಗಳ ಮಗ. ಪಾಂಡವರು ಶೂರರಾಜನ ಮಗಳ ಮಕ್ಕಳು, ಎಂದರೆ ಪಾಂಡವರ ತಾಯಿ ಹಾಗೂ ಕೃತವರ್ಮನ ತಾಯಿ ಅಕ್ಕ ತಂಗಿಯರು.

೨) ಹೀಗೆ ಕೃತವರ್ಮ ಪಾಂಡವರ ಹತ್ತಿರದ ಸಂಬಂಧಿ ಎಂದಾಗುವುದು. ಪಾಂಡವರು ಅವನನ್ನು ಸಂಬಂಧಿ ಎಂದು ಆದರಿಸಿದ್ದು ಲೌಕಿಕ ಕಾರಣ. ಕೃಷ್ಣನ ಮೇಲಿನ ಭಕ್ತಿಯಿಂದ ಆದರಿಸಿದ್ದು ಮುಖ್ಯವಾದ ಆಧ್ಯಾತ್ಮಿಕ ಕಾರಣ ಎಂದೂ ತಿಳಿಯಬೇಕು.

ಭೀಮಾರ್ಜುನ ವಿಜಯದ ಫಲಶ್ರುತಿ

ತತಃಪ್ರಭೃತಿ ಸಂತ್ಯಜ್ಯ ದೇವಪಕ್ಷಾ ಜರಾಸುತಮ್ ।
ಪಾಂಡವಾನಾಶ್ರಿತಾ ಭೂಪಾ ಜ್ಞಾತ್ವಾ ಭೈಮಾರ್ಜುನಂ ಬಲಮ್ ॥ ೧೫೩ ॥

ವಿಶೇಷತಶ್ಚ ಕೃಷ್ಣಸ್ಯ ವಿಜ್ಞಾಯ ಸ್ನೇಹಮೇಷು ಹಿ ।
ಪರಾಜಿತಾಶ್ಚ ಬಹುಶಃ[೧] ಕೃಷ್ಣೇನಾಚಿಂತ್ಯಕರ್ಮಣಾ ॥ ೧೫೪ ॥

ಅ: ಅಂದಿನಿಂದ ಅಚಿಂತ್ಯಕರ್ಮನಾದ ಶ್ರೀಕೃಷ್ಣನಿಂದ ಅನೇಕ ಬಾರಿ ಪರಾಭವಗೊಂಡಿದ್ದ ದೇವಪಕ್ಷದ ರಾಜರು ಭೀಮಾರ್ಜುನರ ಬಲವನ್ನು ತಿಳಿದು ಜರಾಸಂಧನನ್ನು ತೊರೆದು ಪಾಂಡವರನ್ನೇ ಆಶ್ರಯಿಸಿದರು. ಅದಕ್ಕೆ ವಿಶೇಷವಾಗಿ ಶ್ರೀಕೃಷ್ಣನ ಪ್ರೀತಿ ಅವರಲ್ಲಿದ್ದುದು ಕಾರಣವಾಯಿತು.

ವಿ: ಅಲ್ಲಿಯವರೆಗೆ ಜರಾಸಂಧನ ಜೊತೆಗೆ ಬಂದು ಶ್ರೀಕೃಷ್ಣನ ವಿರುದ್ಧವಾಗಿ ವಿರಾಟ, ದ್ರುಪದ ಮೊದಲಾದ ಅನೇಕ ಸಾತ್ವಿಕ ರಾಜರು ಯುದ್ಧ ಮಾಡಿದ್ದರು. ಶ್ರೀಕೃಷ್ಣನಿಂದ ಪರಾಭವಗೊಂಡಿದ್ದರು. ಅವರೆಲ್ಲ ಈಗ ದ್ರುಪದನಂತಹ ಪ್ರತಿಷ್ಠಿತ ರಾಜನನ್ನು ಅಸಹಾಯರಾಗಿ ಸೋಲಿಸಿದ ಭೀಮಾರ್ಜುನರ ಅನುಪಮವಾದ ಬಲವನ್ನು ಕೇಳಿ ಪಾಂಡವರ ಪಕ್ಷವನ್ನು ಸೇರಿಬಿಟ್ಟರು ಎಂದರ್ಥ. ಪಾಂಡವರ ಮೇಲೆ ಶ್ರೀಕೃಷ್ಣನಿಗಿದ್ದ ವಿಶೇಷವಾದ ಪ್ರೀತಿ ಅದಕ್ಕೆ ಇನ್ನೂ ಪ್ರಬಲವಾದ ವಿಶೇಷ ಕಾರಣವಾಗಿತ್ತು.

---

೧. ಬಹುಶಃ ಕೃಷ್ಣೇನ ಪರಾಜಿತಾಃ ಭೂಪಾಃ । – (ಜ.)

ಪ್ರತಾಪಾದೇವ ತೇ ಪೂರ್ವಂ ಜರಾಸಂಧವಶಂಗತಾಃ ।
ನ ಸ್ನೇಹಾತ್ ತದ್ಬಲಂ ಜ್ಞಾತ್ವಾ ಪಾರ್ಥಾನಾಂ ಕೇಶವಸ್ಯ ಚ ॥ ೧೫೫ ॥

ಜನ್ಮಾಂತರಾಭ್ಯಾಸವಶಾತ್ ಸ್ನಿಗ್ಧಾಃ ಕೃಷ್ಣೇ ಚ ಪಾಂಡುಷು ।
ಜರಾಸಂಧಭಯಂ ತ್ಯಕ್ತ್ವಾ ತಾನೇವ ಚ ಸಮಾಶ್ರಿತಾಃ ॥ ೧೫೬ ॥

ಅ: ಅವರೆಲ್ಲ ಮೊದಲಿಗೆ ಜರಾಸಂಧನ ಪ್ರತಾಪದಿಂದಾಗಿ ಅವನ ವಶವಾಗಿದ್ದವರು, ಪ್ರೀತಿಯಿಂದಲ್ಲ. ಈಗ ಶ್ರೀಕೃಷ್ಣ ಹಾಗೂ ಪಾಂಡವರ ಬಲವನ್ನು ತಿಳಿದು, ಜನ್ಮಾಂತರ ಸಂಸ್ಕಾರದ ಫಲದಿಂದಾಗಿ ಶ್ರೀಕೃಷ್ಣ ಹಾಗೂ ಪಾಂಡವರಲ್ಲಿ ಸ್ನೇಹ ಹೊಂದಿದವರಾದರು, ಜರಾಸಂಧನ ಅಂಜಿಕೆಯನ್ನು ಬಿಟ್ಟು ಅವರನ್ನೇ ಆಶ್ರಯಿಸಿಬಿಟ್ಟರು.

ವಿ: ೧) ಆ ರಾಜರುಗಳು ಮುಂಚೆಯೂ ಸಹ ಜರಾಸಂಧನನ್ನು ಹಿಂಬಾಲಿಸಿದ್ದು ಅವನ ಮೇಲಿನ ಪ್ರೀತಿಯಿಂದಲ್ಲ, ಅವನಿಗಿದ್ದ ವರಾದಿಗಳ ಹಿನ್ನೆಲೆಯ ಬಲಕ್ಕೆ ಅಂಜಿಕೆಯಿಂದ ಮಾತ್ರ. ಈಗ ಶ್ರೀಕೃಷ್ಣರಕ್ಷಿತರಾದ ಭೀಮಾರ್ಜುನರ ಬಲ ಅವನಿಗಿಂತ ತುಂಬಾ ಮಹತ್ತರವಾದುದು ಎಂದು ಮನಗಂಡ ಅವರು ಜರಾಸಂಧನ ಅಂಜಿಕೆಯನ್ನು ತೊರೆದು ಶ್ರೀಕೃಷ್ಣ ಹಾಗೂ ಪಾಂಡವರ ಗುಂಪಿಗೆ ಸೇರಿದರು.

೨) ಪಾಂಡವರು ಶ್ರೀಕೃಷ್ಣಭಕ್ತರಾದ್ದರಿಂದ ಅವರ ಪಕ್ಷಕ್ಕೆ ಸೇರಿದರೆ ಸಹಜವಾಗಿಯೇ ಕೃಷ್ಣನ ಪ್ರೀತಿ ತಮಗೆ ಲಭಿಸುವುದು ಎಂಬ ಚಿಂತನೆ ಅವರನ್ನು ಹಾಗೆ ಮಾಡಲು ಪ್ರೇರೇಪಿಸಿತು. ಅವರೆಲ್ಲ ಮೂಲತಃ ಭಗವದ್ಭಕ್ತರೇ ಆಗಿದ್ದವರು ಎಂಬುದು ಅದಕ್ಕೆ ಮತ್ತೊಂದು ಮುಖ್ಯ ಕಾರಣ. ಹೀಗೆ ಅನೇಕ ಕಾರಣಗಳು ಇಲ್ಲಿ ಅಡಗಿವೆ. ಕಾರಣಾಂತರದಿಂದ ದುರ್ಮತಗಳನ್ನು ಆಶ್ರಯಿಸುವ ಸಜ್ಜನರು ಸಹ ಶ್ರೀವೇದವ್ಯಾಸರ, ಶ್ರೀಮಧ್ವರ, ಜಯತೀರ್ಥರ ಗ್ರಂಥಗಳ ಅಪಾರವಾದ ಹಿರಿಮೆಯನ್ನು ಕಂಡಾಗ ಆ ಮತಗಳನ್ನು ತೊರೆದು ಶ್ರೀವ್ಯಾಸಮತವನ್ನು ಅನುಸರಿಸುವರು ಎಂಬ ಸೂಚನೆಯೂ ಇಲ್ಲಿದೆ. ತ್ರಿವಿಕ್ರಮಪಂಡಿತರಂಥವರು ಇದಕ್ಕೆ ಉತ್ತಮ ನಿದರ್ಶನ.

ಅಪಿ ತಂ ಬಹುಶಃ ಕೃಷ್ಣವಿಜಿತಂ ನೈವ ತತ್ಯಜುಃ ।[೧]
ಆಸುರಾಃ ಪೂರ್ವಸಂಸ್ಕಾರಾತ್ ಸಂಸ್ಕಾರೋ ಬಲವಾನ್ ಯತಃ ॥ ೧೫೭ ॥

---

೧. 'ಸಂಸ್ಕಾರೋ ಬಲವಾನೇವ ಬ್ರಹ್ಮಾದ್ಯಾ ಅಪಿ ತದ್ವಶಾಃ ।
ತಥಾऽಪಿ ಸೋऽನ್ಯಥಾಕರ್ತುಂ ಶಕ್ಯತೇऽತಿಪ್ರಯತ್ನತಃ' ಇತಿ ॥ — ಗೀತಾಭಾಷ್ಯ (೩/೩೪)

'ಸ್ವಭಾವಃ ಪ್ರಕೃತಿಶ್ಚೈವ ಸಂಸ್ಕಾರೋ ವಾಸನೇತಿ ಚ' ಇತ್ಯಭಿಧಾನಾತ್ ॥ — ಗೀ.ಭಾ. (೭/೨೦).

ಅ: ಅಸುರರು ಮಾತ್ರ ಜರಾಸಂಧ ಅನೇಕ ಸಲ ಶ್ರೀಕೃಷ್ಣನಿಂದ ಪರಾಭವಗೊಂಡಿದ್ದನ್ನು ಚೆನ್ನಾಗಿ ತಿಳಿದಿದ್ದರೂ ಸಹ ತಮ್ಮ ಹಿಂದಿನ ಸಂಸ್ಕಾರದ ಬಲದಿಂದಾಗಿ ಅವನನ್ನು ಬಿಡಲಿಲ್ಲ. ಸಂಸ್ಕಾರ ತುಂಬಾ ಬಲಿಷ್ಠವಾದುದಲ್ಲವೇ!

ವಿ: ಹೀಗೆ ಜರಾಸಂಧನ ಪಕ್ಷವನ್ನು ತೊರೆದು ಪಾಂಡವ ಪಕ್ಷಕ್ಕೆ ಬಂದವರು ವಿರಾಟ, ದ್ರುಪದರಂತಹ ಸಾತ್ವಿಕ ರಾಜರೇ ಹೊರತು, ಸಾಲ್ವ, ಏಕಲವ್ಯರಂತಹ ದುಷ್ಟ ಜನರಲ್ಲ. ಅವರಿಗೂ ಶ್ರೀಕೃಷ್ಣನ ಹಿರಿಮೆ, ಪಾಂಡವರ ಮಹಿಮೆಗಳು ತಿಳಿದಿದ್ದರೂ ಸ್ವಭಾವತಃ ಹರಿದ್ವೇಷಿಗಳಾದ್ದರಿಂದ ಜರಾಸಂಧನ ಪಕ್ಷವನ್ನು ತೊರೆಯಲು ಅವರಿಗೆ ಸಾಧ್ಯವಾಗಲಿಲ್ಲ ಎಂದು ತಿಳಿಯಬೇಕು. ಇಲ್ಲಿ ಸಂಸ್ಕಾರವೆಂದರೆ ಮುಖ್ಯವಾಗಿ ಅವರ ಸ್ವರೂಪವೆಂದೇ ಅರ್ಥ.

ದೇವಾ ಹಿ ಕಾರಣಾದನ್ಯಾನಾಶ್ರಯಂತೋಽಪಿ ನಾಂತರಮ್ ।
ಸ್ನೇಹಂ[೧] ತ್ಯಜಂತಿ ದೇವೇಷು ತಥಾಽನ್ಯೇಷ್ವಪಿ ಚ ಸ್ಫುಟಮ್ ॥ ೧೫೮ ॥

ಅ: ದೇವತೆಗಳು ಕಾರಣಾಂತರದಿಂದ ಇತರರನ್ನು ಅವಲಂಬಿಸಿದರೂ, ದೇವತೆಗಳ ಬಗೆಗಿನ ಅಂತರಂಗದ ಪ್ರೀತಿಯನ್ನು ತೊರೆಯಲಾರರು. ಅದರಂತೆ, ಅಸುರರು ಕಾರಣಾಂತರದಿಂದ ಸುರರನ್ನು ಆಶ್ರಯಿಸಿದರೂ, ಅಸುರರ ಮೇಲಿನ ಅಂತರಂಗದ ಪ್ರೀತಿಯನ್ನು ತೊರೆಯಲಾರರು.

ವಿ: ದೇವತೆಗಳು ಅಂತರಂಗದಲ್ಲಿ ಸದಾ ದೇವಭಕ್ತರು. ಅದರಂತೆ ಅಸುರರು ಸದಾ ದೇವದ್ವೇಷಿಗಳು. ಹಾಗೆಯೇ ಸುರರು ದೈತ್ಯದ್ವೇಷಿಗಳು, ಅಸುರರು ದೈತ್ಯಭಕ್ತರು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

ಧರ್ಮರಾಜನಿಗೆ ಯೌವರಾಜ್ಯ

ಧೃತರಾಷ್ಟ್ರೋ ಬಲಂ ಜ್ಞಾತ್ವಾ ಬಹುಶೋ ಭೀಮಪಾರ್ಥಯೋಃ ।
ದೇವತ್ವಾಚ್ಚ ಸ್ವಭಾವೇನ ಜ್ಯೇಷ್ಠತ್ವಾದ್ಧರ್ಮಜಸ್ಯ ಚ
ಸುಪ್ರೀತ ಏವ ತಂ ಚಕ್ರೇ ಯೌವರಾಜ್ಯಾಭಿಷೇಕಿಣಮ್ ॥ ೧೫೯ ॥

---

೧. ಯಥಾ ದೇವಾಃ ದೇವೇಷು ಸ್ನೇಹಂ ನ ತ್ಯಜಂತಿ ತಥಾ ಅಸುರಾ ಅನ್ಯೇ ಅಸುರೇಷು ಸ್ನೇಹಂ ನ ತ್ಯಜಂತೀತ್ಯರ್ಥಃ। – (ತಾ.)

ಅ: ಧೃತರಾಷ್ಟ್ರನು ಭೀಮಾರ್ಜುನರ ಬಲವನ್ನು ಬಹುಪ್ರಸಂಗಗಳಲ್ಲಿ ಅರಿತು ತಾನು ಸ್ವಭಾವತಃ ದೇವತೆಯೊದ್ದರಿಂದಲೂ, ಯುಧಿಷ್ಠಿರ ರಾಜಕುಮಾರರುಗಳಲ್ಲಿ ಜ್ಯೇಷ್ಠನಾದ್ದರಿಂದಲೂ ಅತ್ಯಂತ ಪ್ರೀತಿಯಿಂದಲೇ ಅವನನ್ನು ಯೌವರಾಜ್ಯದಲ್ಲಿ ಅಭಿಷೇಕಮಾಡಿದ.

ವಿ: ೧) ಈ ವೇಳೆಗೆ ಭೀಮಾರ್ಜುನರ ಬಲವನ್ನು ಗಮನಿಸಿದ್ದ ಧೃತರಾಷ್ಟ್ರ ಯುಧಿಷ್ಠಿರನಿಗೆ ಯುವರಾಜ ಪದವಿಯನಿತ್ತು ಅಭಿಷೇಕಿಸಿದ.

೨) ಅದಕ್ಕೆ ಮೂಲತಃ ಅವನು ಧೃತರಾಷ್ಟ್ರ ಎಂಬ ಗಂಧರ್ವನ ಅವತಾರವಾಗಿದ್ದುದು ಒಂದು ಮುಖ್ಯ ಕಾರಣವಾದರೆ, ಧರ್ಮರಾಜ ಕುರು ಪಾಂಡವರಲ್ಲೆಲ್ಲಾ ಅತ್ಯಂತ ಹಿರಿಯನಾದ್ದರಿಂದ ರಾಜ್ಯಕ್ಕೆ ಅವನೇ ಉತ್ತರಾಧಿಕಾರಿ ಎಂಬ ಮತ್ತೊಂದು ಕಾರಣವೂ ಮುಖ್ಯವಾಗಿತ್ತು.

ಭೀಮಾರ್ಜುನರ ದಿಗ್ವಿಜಯ

ಭೀಮಾರ್ಜುನಾವಥೋ ಜಿತ್ವಾ ಸರ್ವದಿಕ್ಷು ಚ ಭೂಪತೀನ್ ।
ಚಕ್ರತುಃ ಕರದಾನ್ ಸರ್ವಾನ್ ಧೃತರಾಷ್ಟ್ರಸ್ಯ ದುರ್ಜಯೌ ॥ ೧೬೦ ॥

ಅ: ಭೀಮಾರ್ಜುನರು ಅನಂತರ ಸಕಲ ದಿಕ್ಕುಗಳಲ್ಲೂ ರಾಜರುಗಳನ್ನು ಪರಾಭವಗೊಳಿಸಿ ಅವರೆಲ್ಲರನ್ನೂ ಧೃತರಾಷ್ಟ್ರನಿಗೆ ಕಪ್ಪ ನೀಡುವವರನ್ನಾಗಿ ಮಾಡಿದರು, ಅವರಿಬ್ಬರು ಮಾತ್ರ ಯಾರಿಗೂ ಸೋಲಲೇ ಇಲ್ಲ.

ವಿ: ೧) ಭೀಮಾರ್ಜುನರು ಎಂದಿನಂತೆ ತಮ್ಮ ದಿಗ್ವಿಜಯ ಕಾರ್ಯವನ್ನು ಮುಂದುವರೆಸಿ ಸಕಲ ರಾಜರುಗಳನ್ನು ಕ್ರಮವಾಗಿ ಸಾಮಂತರನ್ನಾಗಿ ಮಾಡಿಕೊಳ್ಳತೊಡಗಿದರು. ಅವರಿಬ್ಬರು ಮಾತ್ರ ಯಾರಿಗೂ ಸೋಲದ ಮಹಾಬಲರು ಎಂದರ್ಥ.

೨) ಇದು ಭೀಮಾರ್ಜುನರ ಎರಡನೆಯ ದಿಗ್ವಿಜಯ. ಮೊದಲ ದಿಗ್ವಿಜಯದ ವಿವರ ಈಗಾಗಲೇ ಬಂದಿದೆ (೧೪/೮೭–೯೪).

ತಯೋಃ ಪ್ರೀತೋಽಭವತ್ ಸೋಽಪಿ ಪೌರಜಾನಪದಾಸ್ತಥಾ ।
ಭೀಷ್ಮದ್ರೋಣಮುಖಾಃ ಸರ್ವೇಽಪ್ಯತಿಮಾನುಷಕರ್ಮಣಾ ॥ ೧೬೧ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಭೀಮಾರ್ಜುನದಿಗ್ವಿಜಯೋ ನಾಮ ಅಷ್ಟಾದಶೋಽಧ್ಯಾಯಃ ॥ ೧೮ ॥

ಅ: ಧೃತರಾಷ್ಟ್ರನೂ ಸಹ ಅವರಿಬ್ಬರ ಬಗ್ಗೆ ತುಂಬಾ ಸಂತೃಪ್ತನಾದ. ಅದರಂತೆ ಪಟ್ಟಣಿಗರೂ, ದೇಶ ನಿವಾಸಿಗಳೂ, ಭೀಷ್ಮ, ದ್ರೋಣ ಮೊದಲಾದವರೂ ಅವರ ಅತಿಮಾನುಷ ಕಾರ್ಯದಿಂದ ಸಂತುಷ್ಟರಾದರು.

ವಿ: ಧೃತರಾಷ್ಟ್ರನಿಗೆ ಭೀಮಾರ್ಜುನರ ಕಾರ್ಯದಿಂದ ತನ್ನ ಪ್ರಭಾವ ವಿಸ್ತಾರಗೊಂಡಿದ್ದನ್ನು ಕಂಡು ಸಂತೋಷವಾಯಿತು. ಭೀಷ್ಮ, ದ್ರೋಣರೂ ಮೊದಲಾದ ಹಿರಿಯರು, ಇತರ ಸಮಸ್ತ ಜನರೂ ಸಹ ಭೀಮಾರ್ಜುನರ ಅದ್ಭುತ ಕಾರ್ಯಕ್ಕೆ ಬಹಳವಾಗಿ ಸಂತೋಷಿಸಿದರು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಭೀಮಾರ್ಜುನದಿಗ್ವಿಜಯ'ವೆಂಬ ಹದಿನೆಂಟನೆಯ ಅಧ್ಯಾಯ ಮುಗಿಯಿತು ॥ ೧೮ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೧೯

(ಪಾಂಡವರಾಜ್ಯಲಾಭಃ)

(ಅರಗಿನ ಮನೆಯ ದಹನ, ಹಿಡಿಂಬವಧೆ, ಬಕಾಸುರವಧೆ,
ದ್ರೌಪದೀಸ್ವಯಂವರ, ಸುವಜ್ರವಧ, ಪಾಂಡವರಿಗೆ ಅರ್ಧರಾಜ್ಯ)

ಶಕುನಿಯ ಮೂಲಕ ನಾಸ್ತಿಕ್ಯನೀತಿ

ಏವಂ ಶುಭೋಚ್ಚಗುಣವತ್ಸು ಜನಾರ್ದನೇನ
ಯುಕ್ತೇಷು ಪಾಂಡುಷು ಚರತ್ಸ್ವಧಿಕಂ ಶುಭಾನಿ ।
ನಾಸ್ತಿಕ್ಯನೀತಿಮತುಲಾಂ ಗುರುದೇವತಾದಿ-
ಸತ್ಸ್ವಂಜಸೈವ ಜಗೃಹುರ್ಧೃತರಾಷ್ಟ್ರಪುತ್ರಾಃ ॥ ೧ ॥

ಅ: ಹೀಗೆ ಮಂಗಳಕರವಾದ ಶ್ರೇಷ್ಠ ಗುಣಗಳಿಂದ ಕೂಡಿದ ಪಾಂಡವರು ಜನಾರ್ದನನಾದ ಶ್ರೀಕೃಷ್ಣನೊಂದಿಗೆ ವಿಶೇಷವಾಗಿ ಶುಭಕಾರ್ಯಗಳನ್ನು ನಡೆಸುತ್ತಿದ್ದಾಗ, ಕೌರವರು ಗುರುಗಳು, ದೇವತೆಗಳು ಮೊದಲಾದ ಸಜ್ಜನರ ವಿಷಯದಲ್ಲಿ ಅನುಪಮವಾದ ನಾಸ್ತಿಕ್ಯನೀತಿಯನ್ನು ಬಹಳವಾಗಿ ಕೈಗೊಂಡರು.

ಎ: ಹೀಗೆ ಶ್ರೀಕೃಷ್ಣರಕ್ಷಿತರಾದ ಪಾಂಡವರದು ಪರಮಾಸ್ತಿಕ್ಯ ನೀತಿಯಾದರೆ, ಶಕುನಿ ನೇತೃತ್ವದ ಕೌರವರದು ಪರಮನಾಸ್ತಿಕ್ಯನೀತಿಯಾಯಿತು ಎಂದರ್ಥ. ಸಾತ್ವಿಕರದು ದೈವಭಕ್ತಿಯಿಂದ ಕೂಡಿದ ಸತ್ಕಾರ್ಯಪರಂಪರೆಯಾದರೆ ತಾಮಸರದು ಗುರುದೇವತಾದಿ ದ್ರೋಹರೂಪವಾದ ಪರಮ ದುಷ್ಕಾರ್ಯ ಪರಂಪರೆಯಾಯಿತು.

ಕಳಿಂಗ ಹಾಗೂ ಅವನ ನೀತಿ

ನಾಮ್ನಾ ಕಲಿಂಗ ಇತಿ ಚಾಸುರಕೋ[1] ದ್ವಿಜೋಽಭೂ-
ಚ್ಛಿಷ್ಯಃ ಸುರೇತರಗುರೋಃ ಶಕುನೇರ್ಗುರುಃ ಸಃ ।
ನೀತಿಂ ಸ ಕುತ್ಸಿತತಮಾಂ[2] ಧೃತರಾಷ್ಟ್ರಪುತ್ರೇ-
ಷ್ವಾಧಾದ್ರಹೋ ವಚನತಃ ಶಕುನೇಃ ಸಮಸ್ತಾಮ್ ॥ ೨ ॥

---

೧. ನಾಸ್ತಿಕ್ಯನೀತಿಂ ಗುರುರ್ನಾಸ್ತಿದೇವತಾऽಪಿನಾಸ್ತಿ ಇತ್ಯಾದಿಪ್ರತಿಪಾದಿಕಾಂ ನೀತಿಂ – (ಜ.)

೧. ಅಂಜಸೈವೇತ್ಯೇವಕಾರಸ್ಯ ಗುರುದೇವತಾದಿಸತ್ತ್ವೇವೇತಿ ಸಂಬಂಧಃ ॥ –(ವಾ.)

ಅ: ಕಳಿಂಗ ಎಂಬ ಹೆಸರಿನ ಅಸುರ ಸ್ವಭಾವದ ಬ್ರಾಹ್ಮಣನಿದ್ದ. ಅವನು ಅಸುರ ಗುರುಗಳಾದ ಶುಕ್ರಾಚಾರ್ಯರ ಶಿಷ್ಯ ಹಾಗೂ ಶಕುನಿಯ ಗುರು. ಶಕುನಿಯ ಮಾತಿನಿಂದ ಅವನು ಗುಟ್ಟಾಗಿ ಅತ್ಯಂತ ಹೇಯವಾದ ನೀತಿಯನ್ನು ಕೌರವರಿಗೆ ಸಮಗ್ರವಾಗಿ ಉಪದೇಶ ಮಾಡಿದ.

ವಿ: ೧) ಕಳಿಂಗ ಶುಕ್ರ ಶಿಷ್ಯನಾದ ಒಬ್ಬ ರಾಕ್ಷಸ ಸ್ವಭಾವದ ಬ್ರಾಹ್ಮಣ ತನ್ನ ಶಿಷ್ಯನಾದ ಶಕುನಿಯ ಮಾತಿನಂತೆ ಕೌರವರಿಗೆ ಅತ್ಯಂತ ಕೆಟ್ಟದಾದ ನಾಸ್ತಿಕ್ಯ ನೀತಿಯನ್ನು ಉಪದೇಶಿಸಿದ ಎಂದರ್ಥ.

೨) ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ಇವನ ಹೆಸರನ್ನು ಕಣಿಕ, ಕಣಿಂಕ ಎಂಬ ಹೆಸರುಗಳಿಂದ ಕರೆಯಲಾಗಿದೆ. ಆದರೆ, ಶ್ರೀಮದಾಚಾರ್ಯರು ತಿಳಿಸಿರುವಂತೆ ಮೂಲ ಪಾಠ ಕಳಿಂಗ ಎಂದೇ ಇರಬೇಕು.

೩) ಅವನ ಗುರುಗಳಾದ ಶುಕ್ರಾಚಾರ್ಯರು ಅಸುರರ ಗುರುಗಳಾದರೂ ದೈವೀ ಸಂಪತ್ತಿನವರು. ಅವರಲ್ಲಿ ಭಗವಂತನ ವಿಭೂತಿ ರೂಪದ ಸನ್ನಿಧಾನವೂ ಉಂಟು ('ಕವೀನಾಮುಶನಾ ಕವಿಃ' – ಗೀತಾ ೧೦/೩೭). ಆದರೆ, ಅವರ ಶಿಷ್ಯನಾದ ಇವನು ಮಾತ್ರ ನಿಜಕ್ಕೂ ಅಸುರನೇ ಎಂಬುದು ವಿಶೇಷ. ಅವನು ಧೃತರಾಷ್ಟ್ರನ ಮಂತ್ರಿಗಳಲ್ಲಿ ಒಬ್ಬನಾಗಿದ್ದ.

ಕಳಿಂಗನೀತಿಯ ಸಾರ

ಧರ್ಮೈವ ಯತ್ರ ಪರಮಂ ನ ಸುರಾಶ್ಚ ಪೂಜ್ಯಾಃ
ಸ್ವಾರ್ಥೇನ ವಂಚನಕೃತೇ ಜಗತೋಽಖಿಲಂ ಚ ।
ಧರ್ಮಾದಿ ಕಾರ್ಯಮಪಿ ಯಸ್ಯ ಮಹೋಪಧಿಃ ಸ್ಯಾತ್
ಶ್ರೇಷ್ಠಃ ಸ ಏವ ನಿಖಿಲಾಸುರದೈತ್ಯಸಂಘಾತ್ ॥ ೩ ॥

---

೩. ಯತ್ರ = ಯಸ್ಯಾಂ ನೀತೌ ಧರ್ಮೈವ ಪರಮಂ = ಉತ್ತಮಮಿತಿ ಪ್ರತಿಪಾದ್ಯತೇ ತಾಂ ನೀತಿಮಾಧಾದಿತಿ ಪೂರ್ವೇಣಾನ್ವಯಃ। ಯಸ್ಯ ಪುರುಷಸ್ಯ ಸುರಾಶ್ಚ ಸ್ವಾರ್ಥೇನ= ಸ್ವಪ್ರಯೋಜನೇನ ನಿಮಿತ್ತೇನ ನ ಪೂಜ್ಯಾಃ ಅನ್ಯೇ ಕಿಮಿತಿ ಕೈಮುತ್ಯಂ ಚಶಬ್ದೇನ ಸೂಚಯತಿ । ಅಖಿಲಂ ಧರ್ಮಾದಿ ಕಾರ್ಯಮಪಿ ಸಂಧ್ಯಾವಂದನ-ಯಜ್ಞದಾನಾದಿಸುರಪೂಜಾರೂಪಧರ್ಮಾದಿಕಾರ್ಯಮಪಿ=ಜಗತೋವಂಚನಕೃತೇ ಕರ್ತವ್ಯಮ್। ''ಅಪಿಃ ಪದಾರ್ಥ-ಸಂಭಾವನಾನ್ವವಸರ್ಗಗರ್ಹಾಸಮುಚ್ಚಯೇಷು'' ಇತ್ಯನುಶಾಸನಾತ್ ಅವ್ಯಾಜತ್ವೇನ ಕಾರ್ಯತ್ವಸಂಭಾವನಾ-ಸೂಚನಾರ್ಥಮಪಿಶಬ್ದಃ। ಯಸ್ಯ ಮಹೋಪಧಿಃ = ಮಹಾನುಪಧಿಃ = ಕಪಟಂ ಯಸ್ಯ ಸ ಮಹೋಪಧಿಃ ಸ್ಯಾತ್ ''ಕಪಟೋಽಸ್ತ್ರೀ ವ್ಯಾಜದಂಭೋಪಧಯಶ್ಚದ್ಮ ಕೈತವೇ'' ಇತ್ಯಮರಃ। ಸ ಏವ ನಿಖಿಲಾಸುರದೈತ್ಯಸಂಘಾತ್ ಶ್ರೇಷ್ಠ ಇತಿ ಚ ಯಸ್ಯಾಂ ನೀತೌ ಪ್ರತಿಪಾದ್ಯತೇ ತಾಂ ನೀತಿಮಿತಿ ಪೂರ್ವೇಣಾನ್ವಯಃ ॥ –(ವಾ.)

ಅ: ಅವನು ಉಪದೇಶಿಸಿದ ನೀತಿಯಲ್ಲಿ ಕಪಟವೇ ಎಲ್ಲದಕ್ಕಿಂತ ದೊಡ್ಡದು. ದೇವತೆಗಳನ್ನು ಆರಾಧಿಸಕೂಡದು, ಎಲ್ಲ ಧರ್ಮಾದಿ ಕಾರ್ಯಗಳನ್ನೂ ಸ್ವಾರ್ಥದಿಂದ ಲೋಕದ ವಂಚನೆಗಾಗಿ ಆಚರಿಸಬೇಕು. ಅತ್ಯಂತ ಆಪತ್ಕಾಲದಲ್ಲಿ ಮಾತ್ರ ಧರ್ಮಕಾರ್ಯದಲ್ಲಿ ತೊಡಗಬೇಕು. ಆಂಥವನೇ ಸಕಲ ಅಸುರ ಹಾಗೂ ದೈತ್ಯ ಸಮುದಾಯದಲ್ಲಿ ಶ್ರೇಷ್ಠನೆನ್ನಿಸುವನು.

ಎ: ೧) ಮಹಾಭಾರತ ಮೂಲದಲ್ಲಿ ಒಂದು ಅಧ್ಯಾಯದಷ್ಟು ವಿಸ್ತಾರವಾಗಿ ಬಂದಿರುವ ಈ ಕೂಟನೀತಿಯನ್ನು ಒಂದೇ ಶ್ಲೋಕದಲ್ಲಿ ಸಂಗ್ರಹಿಸುವ ಅಪೂರ್ವ ಶ್ಲೋಕವಿದು. ಅಲ್ಲಿಯದು ವಿಸ್ತಾರದ ಕೌಶಲವಾದರೆ ಇಲ್ಲಿಯದು ಸಂಕ್ಷೇಪದ ಕೌಶಲ. ಸಮಗ್ರ ಬ್ರಹ್ಮಸೂತ್ರಭಾಷ್ಯದ ಸಾರವನ್ನು ಮೂವತ್ತೆರಡು ಶ್ಲೋಕಗಳ ಅಣುಭಾಷ್ಯದಲ್ಲಿ ಹೇಳಿರುವ ಆಚಾರ್ಯರು ನೂರಾರು ಶ್ಲೋಕಗಳ ಈ ಕೂಟ ನೀತಿಯನ್ನು ಹೀಗೆ ಒಂದೇ ಶ್ಲೋಕದಲ್ಲಿ ಸಂಗ್ರಹಿಸಿರುವರು.

೨) ಹರಿಯು ಸರ್ವೋತ್ತಮನಲ್ಲ, ವಂಚನೆಗೇ ಮೊದಲ ಸ್ಥಾನ, ದೇವತಾಪೂಜೆ ಸರ್ವಥಾ ನಿಷಿದ್ಧ, ಪ್ರತಿಯೊಂದು ಕಾರ್ಯದ ಹಿನ್ನೆಲೆಯಲ್ಲಿ ಸ್ವಾರ್ಥವಿರಬೇಕು, ಜನರನ್ನು ಮೋಸಗೊಳಿಸುತ್ತಿರಬೇಕು, ಅನಿವಾರ್ಯವಲ್ಲದ ಹೊರತು ಸತ್ಕಾರ್ಯಕ್ಕೆ ತೊಡಗಬಾರದು. ಹೀಗೆ ಮಾಡುತ್ತಾ ದುಷ್ಟರಲ್ಲಿ ಅಗ್ರೇಸರನೆನಿಸಬೇಕು – ಇದು ಕಲಿ ಮೊದಲಾದ ದುಷ್ಟರು ಕಲಿತ ಕಪಟನೀತಿ.

೩) ಕಲಿಯುಗ ದುರ್ಯೋಧನ ಯುಗ, ಎಂದರೆ ಈ ಕಪಟ ನೀತಿಯೇ ಇದರ ಪ್ರಧಾನ ಧರ್ಮ. ತೋರಿಕೆಗೆ ಧರ್ಮಿಷ್ಠನೆನ್ನಿಸಿ ಆಂತರ್ಯದಲ್ಲಿ ಪಾಪಕಾರ್ಯಗಳಲ್ಲಿ ತೊಡಗುವುದು ಕಲಿಯುಗದ ಮಹಾದುರಂತಗಳಲ್ಲೊಂದು. ಇದರಿಂದಾಗಿ ಕೌರವರ ಮುಂದಿನ ಬಾಳು ಮೊದಲಿಗಿಂತ ಮಿಗಿಲಾಗಿ ಸಮಸ್ತ ದುರ್ಗುಣಗಳ ಆಗರವಾಯಿತು ಎಂದರ್ಥ.

ಇತ್ಯಾದಿಕುತ್ಸಿತತಮಾಂ ಜಗೃಹುಃ ಸ್ಮ ವಿದ್ಯಾ-
ಮಜ್ಞಾತ ಏವ ಧೃತರಾಷ್ಟ್ರಮುಖೈಃ ಸಮಸ್ತೈಃ ।
ತೇಷಾಂ ಸ್ವಭಾವಬಲತೋ ರುಚಿತಾ ಚ ಸೈವ
ವಿಸ್ತಾರಿತಾ ಚ ನಿಜಬುದ್ಧಿಬಲಾದತೋಽಪಿ ॥ ೪ ॥

---

೩. ಯದಿ ಪೂಜ್ಯಾಸ್ತರ್ಹಿ ಸ್ವಾರ್ಥೇನ ನಿಮಿತ್ತೇನ ಪೂಜ್ಯಾಃ । ಜಗತಃ ವಂಚನಕೃತೇ ಅಖಿಲಂ ಧರ್ಮಾದಿವಿಹಿತಾನುಷ್ಠಾನಂ ಆದಿಶಬ್ದೇನ ನಿಷಿದ್ಧತ್ಯಾಗಃ ಏತದ್ವ್ಯಯಂ ಕಾರ್ಯಮಪಿ ಕರ್ತವ್ಯಮ್ । ಯಸ್ಯ ಪುಂಸಃ ಮಹೋಪಧಿಃ ಮಹಾನ್ ಉಪಾಧಿಃ ಕಪಟಂ ಸ್ಯಾತ್ ಸ ಮಹಚ್ಛಬ್ದವಾನ್ ಪುರುಷಃ । ಅಖಿಲಸುರದೈತ್ಯಸಂಘಾತ್ ಅಸುಭಿಃ ಪ್ರಾಣೈಭಿಃ ರಮಂತಿ ಭಕ್ಷಯಂತಿ ತೇ ಅಸುರಾಃ ರಾಕ್ಷಸಾ ಇತ್ಯರ್ಥಃ ॥ – (ಜ.)

ಅ: ಧೃತರಾಷ್ಟ್ರ ಮೊದಲಾದ ಸಕಲ ಹಿರಿಯರಿಗೂ ತಿಳಿಯದಂತೆ ಇದೇ ಮೊದಲಾದ ಅತ್ಯಂತ ಹೇಯವಾದ ಆ ವಿದ್ಯೆಯನ್ನು ಕೌರವರು ಕಲಿತರು. ಸ್ವಭಾವ ಬಲದಿಂದಾಗಿ ಅದು ಅವರಿಗೆ ಹಿಡಿಸಿತು. ಅದನ್ನೇ ಅವರು ತಮ್ಮ ಸ್ವಂತ ಬುದ್ಧಿಯ ಬಲದಿಂದ ಇನ್ನೂ ಹೆಚ್ಚಾಗಿ ಬೆಳೆಸಿಕೊಂಡರು.

ಎ: ೧) ತಾಮಸರಿಗೆ ತಾಮಸ ಕಾರ್ಯದಲ್ಲೇ ಅಭಿರುಚಿ. ಕೌರವರೆಲ್ಲಾ ಪರಮ ತಾಮಸರು. ಅವರಿಗೆ ಸಹಜವಾಗಿಯೇ ಈ ಕಪಟ ನೀತಿ ಹಿಡಿಸಿತು. ಅವರು ಇಂತಹ ದುರ್ವಿದ್ಯೆಯ ಅಭ್ಯಾಸದಲ್ಲಿ ತೊಡಗಿದ್ದುದನ್ನು ಧೃತರಾಷ್ಟ್ರಾದಿ ಹಿರಿಯರು ಗಮನಿಸದಂತೆ ಎಚ್ಚರ ವಹಿಸಿದ್ದರು.

೨) ಕಲಿಯುಗದ ರೀತಿಯೂ ಇಂತಹುದೇ. ಹಿರಿಯರಿಗೆ ತಿಳಿಯದಂತೆ ದುರ್ವಿದ್ಯೆಗಳಲ್ಲಿ ಮಕ್ಕಳು ತೊಡಗುವುದು ಇಂದಿನ ಜಾಗತಿಕ ಸಮಸ್ಯೆಗಳಲ್ಲೊಂದು. ಕಳಿಂಗ ಹೇಳಿದ್ದಕ್ಕಿಂತ ಬಹಳವಾಗಿಯೇ ದುರ್ಯೋಧನಾದಿಗಳು ಆ ದುರ್ನೀತಿಯನ್ನು ಬೆಳೆಸಿಕೊಂಡರು. ದೈತ್ಯತಾರ– ತಮ್ಯದಲ್ಲಿ ಕಲಿಯಾದ ದುರ್ಯೋಧನನದೇ ಅಗ್ರಸ್ಥಾನ. ಆದ್ದರಿಂದ ಕಳಿಂಗ ನೀತಿಗಿಂತಲೂ ಮಿಗಿಲಾದ ಹೇಯ ವಿಚಾರ ಅವನದಾಗಿತ್ತು; ಅದರಂತೆ ಅವನ ತಮ್ಮಂದಿರದೂ ಸಹ.

ದುರ್ಯೋಧನನ ದುಷ್ಟನೀತಿ

ಸಂಪೂರ್ಣದುರ್ಮತಿರಥೋ ಧೃತರಾಷ್ಟ್ರಸೂನು-
ಸ್ತಾತಪ್ಯಮಾನಹೃದಯೋ ನಿಖಿಲಾನ್ಯಹಾನಿ ।
ದೃಷ್ಟ್ವಾ ಶ್ರಿಯಂ ಪರಮಿಕಾಂ ವಿಜಯಂ ಚ ಪಾರ್ಥೇ-
ಷ್ವಾಹೇದಮೇತ್ಯ ಪಿತರಂ ಸಹ ಸೌಬಲೇನ ॥ ೫೫ ॥

ಅ: ಬಳಿಕ ಸಂಪೂರ್ಣ ದುರ್ಬುದ್ಧಿಯವನಾದ ದುರ್ಯೋಧನ ಪಾಂಡವರ ಪರಮ ಸಂಪತ್ತನ್ನೂ, ವಿಜಯವನ್ನೂ ನೋಡಿ ಪ್ರತಿನಿತ್ಯ ಮನಸ್ಸಿನಲ್ಲಿ ಬೇಯುತ್ತ ಶಕುನಿಯೊಂದಿಗೆ ಒಡಗೂಡಿ ತಂದೆಯಾದ ಧೃತರಾಷ್ಟ್ರನ ಬಳಿಗೆ ಹೋಗಿ ಮಾತನಾಡಿದ.

---

೪. ಅಜ್ಞಾತ ಏವಧೃತರಾಷ್ಟ್ರಮುಖೈಸ್ಸಮಸ್ತೈರಿತ್ಯತ್ರಅಜ್ಞಾತೇಪ್ರದೇಶಏವೇತ್ಯರ್ಥಃ। ನಿಜಬುದ್ಧಿಬಲಾದತೋಽ-ಪೀತ್ಯತ್ರ ಅತೋಽಪಿ ಗುರೂಕ್ತಾದಪಿ ॥ –(ವಾ.)

೪. ಸ್ಥಲ ಇತ್ಯಸ್ಯ ಶೇಷೇಣಾಜ್ಞಾತ ಇತ್ಯಸ್ಯಾಜ್ಞಾತಸ್ಥಲ ಇತ್ಯರ್ಥಃ । – (ಸ.)

ವಿಃ ೧) ಸ್ವಭಾವತಃ ದುಷ್ಟನಾಗಿದ್ದ ದುರ್ಯೋಧನನಿಗೆ ಕಣಿಕ ನೀತಿಯ ಅಧ್ಯಯನ ಪೂರ್ಣ ದುಷ್ಟತನವನ್ನು ಹೊಂದಲು ನೆರವಾಯಿತು. ಭೀಮಸೇನ ಪರಿಪೂರ್ಣಸನ್ಮತಿಯಾದರೆ, ಇವನು ಪರಿಪೂರ್ಣದುರ್ಮತಿ. ಅದರ ಫಲ ಪಾಂಡವರ ಬಗ್ಗೆ ಅಸೂಯೆ.

೨) ಇಂತಹ ಅಸೂಯೆಯನ್ನೇ ಶ್ರೀಮದ್ಭಾಗವತಪುರಾಣ ದೈತ್ಯರ ಪ್ರಧಾನ ಲಕ್ಷಣ ಎಂದು ಕರೆದಿದೆ. ಗೀತೆಯಲ್ಲೂ 'ಪ್ರದ್ವಿಷಂತೋಽಭ್ಯಸೂಯಕಾಃ' (೧೬/೧೮), ' ನ ಚ ಮಾಂ ಯೋ ಅಭ್ಯಸೂಯತಿ' (೧೮/೬೭) ಎಂಬ ಮಾತುಗಳು ಬಂದಿವೆ.

ಜ್ಯೇಷ್ಠಸ್ಯ ತೇಽಪಿ ಹಿ ವಯಂ ಹೃದಯಪ್ರಜಾತಾ
ನಾರ್ಹತ್ವಮೇವ ಗಮಿತಾ ಭವತೈವ ರಾಜ್ಯೇ ।
ಭ್ರಾತುಃ ಕನೀಯಸ ಉತಾಪಿ ಹಿ ದಾರಜಾತಾ
ಅನ್ಯೈಶ್ಚ ರಾಜ್ಯಪದವೀಂ ಭವತೈವ ನೀತಾಃ ॥ ೬ ॥

ಅ: ''ನಾವೆಲ್ಲಾ ಹಿರಿಯನಾದ ನಿನ್ನ ಔರಸಪುತ್ರರು. ಆದರೆ, ನೀನೇ ನಮಗೆ ರಾಜ್ಯ ನೀಡದೇ ಕಡೆಗಣಿಸಿರುವಿ. ತಮ್ಮನಿಗೆ ಅವನ ಹೆಂಡತಿಯಲ್ಲಿ ಬೇರೆಯವರಿಂದ ಜನಿಸಿದ ಪಾಂಡವರಿಗೆ ನೀನೇ ರಾಜ್ಯ ಪದವಿಯನ್ನು ನೀಡಿರುವಿ''.

ವಿಃ ೧) ದುರ್ಯೋಧನ ಧೃತರಾಷ್ಟ್ರನ ಮನಸ್ಸನ್ನು ನಿಧಾನವಾಗಿ ತನ್ನೆಡೆಗೆ ಸೆಳೆದುಕೊಳ್ಳಲು ಮಾಡುತ್ತಿರುವ ಪ್ರಯತ್ನದ ಮೊದಲ ಹೆಜ್ಜೆ ಇದು. ಶ್ರೀರಾಮನ ಬಗ್ಗೆ ಅತ್ಯಂತ ಪ್ರೀತಿಯಿಂದಿದ್ದ ಕೈಕೇಯಿಯ ಮನಸ್ಸನ್ನು ಮಂಥರೆ ಕೆಟ್ಟ ವಿಚಾರಗಳನ್ನು ತುಂಬಿ ಹಾಳು ಮಾಡಿದಂತೆ, ದುರ್ಯೋಧನ ಇಲ್ಲಿ ಪಾಂಡವರ ಬಗ್ಗೆ ಅತ್ಯಂತ ಪ್ರೀತಿಯಿಂದಿದ್ದ ಧೃತರಾಷ್ಟ್ರನ ಮನಸ್ಸನ್ನು ಹಾಳು ಮಾಡುತ್ತಿರುವನು. ಅಲ್ಲಿಯ ಮಂಥರೆ ಕಲಿಪತ್ನಿಯಾದ ಅಲಕ್ಷ್ಮಿ, ಇಲ್ಲಿಯ ದುರ್ಯೋಧನ ಸಾಕ್ಷಾತ್ ಕಲಿ. ಕಲಿಯ ಹೆಂಡತಿಯಾದ ಅಲಕ್ಷ್ಮಿಯ ಪಾತ್ರ ರಾಮಾಯಣಕ್ಕೆ ಕಾರಣವಾದರೆ, ಕಲಿಯ ಪಾತ್ರ ಕುರುಕ್ಷೇತ್ರಕ್ಕೆ ಕಾರಣವಾಗುತ್ತಿದೆ ಎಂಬುದು ವಿಶೇಷ. ಕಲಿ ಶಬ್ದದ ಅರ್ಥವೇ ಅದು, ನಿಷ್ಕಾರಣ–ವಾಗಿ ಸಾತ್ವಿಕರ ಮನಸ್ಸಿನಲ್ಲಿ ಒಡಕು ಹುಟ್ಟಿಸಿ ಕಲಹ ಏರ್ಪಡಿಸುವುದು ಅದರ ಮುಖ್ಯ ಲಕ್ಷಣ.

---

೬. ತೇಽಪಿ ಹಿ ವಯಂ ಹೃದಯಪ್ರಜಾತಾ ಇತ್ಯತ್ರ ತೇ = ತವ ಹೃದಯಪ್ರಜಾತಾ ಅಪೀತ್ಯಪಿಪದಸಂಬಂಧಃ। ಜ್ಯೇಷ್ಠಪುತ್ರಸ್ಯೈವ ರಾಜ್ಯಯೋಗ್ಯತ್ವಪ್ರಸಿದ್ಧಿಸೂಚನಾಯ ಹಿಶಬ್ದಃ। ಭವತೈವಾರ್ಹತ್ವಂ ನೈವ ಗಮಿತಾ ಇತ್ಯೇವಕಾರದ್ವಯಸಂಬಂಧಃ ॥ –(ವಾ.)

೨) ದುರ್ಯೋಧನ ಹೇಳುವಂತೆ ತಾವೆಲ್ಲಾ ಧೃತರಾಷ್ಟ್ರನ ಸಾಕ್ಷಾತ್ ಸಂತತಿ; ಪಾಂಡವರು ಪಾಂಡುರಾಜನಿಗೆ ನಿಯೋಗ ಪದ್ಧತಿಯಿಂದ ಹುಟ್ಟಿದವರು. ಆದರೆ, ನಿಯೋಗ ಪದ್ಧತಿ ಆಗಿನ ಕಾಲದಲ್ಲಿ ಅಂಗೀಕೃತವಾದ ಶಾಸ್ತ್ರೀಯ ಪದ್ಧತಿಯೇ ಆಗಿತ್ತು ಅದೇಕೆ, ಸ್ವತಃ ಕೌರವರ ತಂದೆಯಾದ ಧೃತರಾಷ್ಟ್ರ ಹುಟ್ಟಿದ್ದೂ ಸಹ ಅಂತಹ ನಿಯೋಗಪದ್ಧತಿಯಿಂದಲೇ ಅಲ್ಲವೆ. ಆದರೂ ದುರ್ಯೋಧನ ಹೀಗೆ ನಿಷ್ಕಾರಣವಾಗಿ ಪಾಂಡವರನ್ನು ದೂಷಿಸುವುದು ಅವನ ಸ್ವಭಾವಕ್ಕೆ ಸಹಜವಾಗಿದ್ದ ದುರ್ಗುಣ ಎಂದು ತಿಳಿಯಬೇಕು. ಅವನ ಸಕಲ ದುಷ್ಕಾರ್ಯಗಳಲ್ಲೂ ಶಕುನಿ ಅವನಿಗೆ ಆಪ್ತಸಚಿವ.

೩) ಪಾಂಡವರಿಗೆ ಶ್ರೀಕೃಷ್ಣನಿದ್ದಂತೆ ಕೌರವರಿಗೆ ಈ ಶಕುನಿ. ಶ್ರೀಕೃಷ್ಣ ಪಾಂಡವರಿಗೆ ಸೋದರಮಾವನ ಮಗನಾಗಿದ್ದ, ಶಕುನಿ ಕೌರವರಿಗೆ ಸೋದರಮಾವನೇ ಆಗಿದ್ದ. ಅವನು ಸಾಕ್ಷಾತ್ ಭಗವಂತನಾದರೆ ಇವನು ಮಹಾಭಗವದ್ದ್ವೇಷಿ ಎಂಬುದು ವಿಶೇಷ.

೪) ಶಕುನಿ ನಾಸ್ತಿಕ್ಯದ ಅಭಿಮಾನಿ ದೈತ್ಯ, ಕಲಿಯುಗಕ್ಕೆ ನಾಸ್ತಿಕ್ಯವೇ ಜೊತೆಗಾರ ಎಂಬುದು ಗಮನಾರ್ಹ. ಕಲಿಯುಗದ ಸಮಸ್ತ ಅಧರ್ಮಿಕ ಕಾರ್ಯಗಳಿಗೂ ನಾಸ್ತಿಕ್ಯದ ಹಿನ್ನೆಲೆಯೇ ಮೂಲ ಎಂಬುದನ್ನೂ ಗಮನಿಸಬೇಕು. ಧೃತರಾಷ್ಟ್ರ ನ್ಯಾಯಸಮ್ಮತವಾಗಿಯೇ ಯುಧಿಷ್ಠಿರನನ್ನು ಯುವ-ರಾಜನನ್ನಾಗಿ ಮಾಡಿದ್ದರೂ ದುರ್ಯೋಧನ ಅದನ್ನು ನಿಷ್ಕಾರಣವಾಗಿ ಆಕ್ಷೇಪಿಸಿದ್ದು ಮಾತ್ರ ಅನ್ಯಾಯವೇ ಸರಿ.

ರಾಜ್ಯಂ ಮಹಚ್ಚ ಸಮವಾಪ್ಸ್ಯತಿ ಧರ್ಮಸೂನು-
ಸ್ತ್ವತ್ತೋऽಥವಾऽನುಜಬಲಾತ್ ಪ್ರಸಭಂ ವಯಂ ತು ।
ದಾಸಾ ಭವೇಮ ನಿಜತಂತುಭಿರೇವ ಸಾಕಂ
ಕುಂತೀಸುತಸ್ಯ ಪರತೋऽಪಿ ತದನ್ವಯಸ್ಯ ॥ ೭ ॥

---

೭. ನಿಜತಂತುಭಿಃ ಸಾರ್ಧಂ ವಯಂ ಕುಂತೀಸುತಸ್ಯ ಪರತೋऽಪಿ= ಪಶ್ಚಾದಪಿ ತದನ್ವಯಸ್ಯ = ತಸ್ಯ ಕುಂತೀಸುತಸ್ಯ ಅನ್ವಯೋ ಯಸ್ಯ ಸಃ ತದನ್ವಯಃ ತತ್ಸಂತಾನಃ ತಸ್ಯ ಚ ದಾಸಾ ಭವೇಮೇತಿ ಯೋಜನಾ। ವಯಂ ತು ಕುಂತೀಸುತಸ್ಯ ಅಸ್ಮತ್ತಂತವಸ್ತತ್ತಂತೂನಾಂ ದಾಸಾ ಇತಿ ವಿವೇಕಃ ॥ – (ವಾ.)

೭. ಸ ಏಷ ಪಾಂಡೋರ್ದಾಯಾದ್ಯಂ ಯದಿ ಪ್ರಾಪ್ನೋತಿ ಪಾಂಡವಃ ।
ತಸ್ಯ ಪುತ್ರೋ ಧ್ರುವಂ ಪ್ರಾಪ್ತಃ ತಸ್ಯ ತಸ್ಯಾಪಿ ಚಾಪರಃ ॥
ತೇ ವಯಂ ರಾಜವಂಶೇನ ಹೀನಾಃ ಸಹ ಸುತೈರಪಿ ।
ಅವಜ್ಞಾತಾ ಭವಿಷ್ಯಾಮೋ ಲೋಕಸ್ಯ ಜಗತೀಪತೇ ॥ – ಭಾರತ (ಆದಿ. ೧೪೦/೩೫, ೩೬)

ಅ: ಮುಂದೆ ಯುಧಿಷ್ಠಿರನು ಮಹಾರಾಜ ಪದವಿಯನ್ನೂ ನಿನ್ನಿಂದಲೇ ಹೊಂದುವನು; ತನ್ನ ತಮ್ಮಂದಿರ ಬಲದಿಂದಾಗಿ ಬಲಾತ್ಕಾರದಿಂದಲಾದರೂ ಪಡೆಯುವನು. ಆಗ ನಾವೆಲ್ಲಾ ನಮ್ಮ ಸಂತತಿಯೊಂದಿಗೆ ಆ ಕುಂತೀಪುತ್ರನಿಗೂ, ಅವನ ಸಂತತಿಗೂ ಮುಂದೆಯೂ ಸಹ ದಾಸರೇ ಆಗಬೇಕಾಗುವುದು.

ವಿ: ೧) ಈಗ ಯುವರಾಜನಾಗಿರುವ ಧರ್ಮರಾಜ ಮುಂದೆ ಮಹಾರಾಜನೂ ಆಗುವನು. ಆಗ ನಾವೆಲ್ಲ ಅವನ ದಾಸರಾಗುವೆವು, ಮುಂದೆ ಅವನ ಸಂತತಿ ರಾಜ್ಯ ಪಡೆಯುವುದು. ನಮ್ಮ ಸಂತತಿ ದಾಸ ಸಂತತಿಯಾಗಿಯೇ ಮುಂದುವರಿಯುವುದು ಎಂಬುದು ದುರ್ಯೋಧನನ ಕೊರಗು.

೨) ಇದರಂತೆ ರಾಮಾಯಣದಲ್ಲೂ ಮಂಥರೆಯು ರಾಮ ರಾಜನಾದರೆ ಕೈಕೇಯಿಯ ಮಗ ರಾಮನ ದಾಸನಾಗುವನು, ಕೌಸಲ್ಯೆ ರಾಜಮಾತೆಯಾದರೆ, ಕೈಕೇಯಿ ದಾಸ ಮಾತೆಯಾಗುವಳು ಎಂಬ ದುರ್ವಿಚಾರವನ್ನೇ ಮುಂದಿರಿಸಿ ಕೈಕೇಯಿಯ ಮನಸ್ಸನ್ನು ಕೆಡಿಸಿದ್ದಳು ಎಂಬುದನ್ನು ಗಮನಿಸಬೇಕು :

ಏವಂ ಚ ತ್ವಂ ಸಹಾಸ್ಮಾಭಿಸ್ತ್ವಾಃ ಪ್ರೇಷ್ಯಾ ಭವಿಷ್ಯಸಿ ।
ಪುತ್ರಶ್ಚ ತವ ರಾಮಸ್ಯ ಪ್ರೇಷ್ಯತ್ವಂ ಹಿ ಗಮಿಷ್ಯತಿ ॥ – ವಾ.ರಾ. (೨/೮/೧೧)

ನಾತ್ಮಾರ್ಥಮಸ್ತಿ ಮಮ ದುಃಖಮಥಾತಿಶುದ್ಧ-
ಲೋಕಪ್ರಸಿದ್ಧಯಶಸಸ್ತವ ಕೀರ್ತಿನಾಶಃ ।
ಅಸ್ಮನ್ನಿಮಿತ್ತ ಇತಿ ದುಃಖಮತೋ ಹಿ ಸರ್ವೇ ೬-
ಪೀಚ್ಛಾಮ ಮರ್ತುಮಥ ನಃ ಕುರು ಚಾಪ್ಯನುಜ್ಞಾಮ್ ॥ ೮ ॥

ಅ: ನನಗೆ ನನಗೋಸ್ಕರ ದುಃಖವಾಗುತ್ತಿಲ್ಲ, ನಮ್ಮಿಂದಾಗಿ ಅತ್ಯಂತ ಪವಿತ್ರವಾದ ಲೋಕಪ್ರಸಿದ್ಧ ಕೀರ್ತಿಯುಳ್ಳ ನಿನಗೆ ಕೀರ್ತಿನಾಶವಾಗುವುದು ಎಂಬುದೇ ದುಃಖ. ಆದ್ದರಿಂದ ನಾವೆಲ್ಲರೂ ಈಗ ಸಾಯಲು ಬಯಸಿರುವೆವು. ನೀನು ಅದಕ್ಕೆ ನಮಗೆ ಅನುಜ್ಞೆ ನೀಡು''.

---

೮. ವಯಂ ನಿಮಿತ್ತಂ ಯಸ್ಯ ಸಃ ಅಸ್ಮನ್ನಿಮಿತ್ತಃ ತವ ಕೀರ್ತಿನಾಶಃ। ದುಃಖಂ ಜಾಯತ ಇತಿ ಕ್ರಿಯಾಧ್ಯಾಹಾರೇಣ ಯೋಜನಾ। ಅತೋ ಹೇತೋಃ ಅಥ= ತವ ವಿಜ್ಞಾಪನಾನಂತರಂ ವಯಂ ಮರ್ತುಮಿಚ್ಛಾಮಃ। ಪಿತುರ್ಯಶೋನಾಶಃ ಪುತ್ರಾಣಾಮಸಹ್ಯ ಇತಿ ಪ್ರಸಿದ್ಧಿಸೂಚನಾಯ ಹಿಶಬ್ದಃ। ಕುರ್ವಿತಿ ಮಧ್ಯಮಪುರುಷಪ್ರಯೋಗಪ್ರಾಪ್ತ್ವಂಪದೇನ ಅಪಿಪದಸಂಬಂಧಃ। ತ್ವಮಪಿ ಆಜ್ಞಾಂ ಕುರು ಚೇತಿ ಯೋಜನಾ। ಸ್ವೇಚ್ಛಾಯಾ ಆಜ್ಞಾಕರಣಸ್ಯ ಚ ಸಮುಚ್ಚಯಾರ್ಥಶ್ಚ ಶಬ್ದಃ ॥ – (ವಾ.)

ಏಃ ನಿಜಕ್ಕೂ ದುರ್ಯೋಧನನಿಗೆ ದುಃಖವಾಗುತ್ತಿರುವುದು ತನಗೆ ರಾಜ್ಯ ತಪ್ಪುತ್ತಿದೆಯಲ್ಲ ಎಂಬ ಸಂಕಟದಿಂದಲೇ. ಆದರೆ, ಹೇಳುವುದು ಮಾತ್ರ ಅದೇನೂ ಅಲ್ಲ, ತಮಗೆ ರಾಜ್ಯ ತಪ್ಪಿದರೆ ಅದರಿಂದಾಗಿ ಧೃತರಾಷ್ಟ್ರನಿಗೆ ಅಪಕೀರ್ತಿ ತಟ್ಟುವುದಲ್ಲ ಎಂಬ ಕಾರಣಕ್ಕೆ ಎಂದು. ಇದೂ ಸಹ ಆ ಕೂಟನೀತಿಯ ಒಂದು ಭಾಗವೇ. ತಮಗಾಗಿ ಮಾಡಿಕೊಳ್ಳುತ್ತಲೇ ಅದೆಲ್ಲ ಪರರಿಗಾಗಿ ಎಂಬ ಸೋಗು ದುಷ್ಟ ಜನತೆಯ ಸ್ವಭಾವ. ಇಂದು ನಡೆಯುತ್ತಿರುವುದೂ ಅದೇ.

ದುರ್ಯೋಧನನಿಗೆ ಧೃತರಾಷ್ಟ್ರನ ಹಿತವಚನ

ಏವಂ ಸ್ವಪುತ್ರವಚನಂ ಸ ನಿಶಮ್ಯ ರಾಜಾ
ಪ್ರೋವಾಚ ನಾನುಗುಣಮೇತದಹೋ ಮನಸ್ತೇ ।
ಕೋ ನಾಮ ಪಾಂಡುತನಯೇಷು ಗುಣೋತ್ತಮೇಷು
ಪ್ರೀತಿಂ ನ ಯಾತಿ ನಿಜವೀರ್ಯಭವೋಚ್ಚಯೇಷು ॥ ೯ ॥

ಅಃ ಇಂತಹ ತನ್ನ ಪುತ್ರನ ಮಾತನ್ನು ಕೇಳಿ ರಾಜನಾದ ಧೃತರಾಷ್ಟ್ರ ನುಡಿದ : ''ನಿನ್ನ ಮನಸ್ಸು ಈ ರೀತಿ ಆಲೋಚಿಸುವುದು ತರವಲ್ಲ. ಉತ್ತಮ ಗುಣಶಾಲಿಗಳಾಗಿರುವ, ಸ್ವಂತ ಸಾಮರ್ಥ್ಯ-ದಿಂದ ಅಭ್ಯುದಯ ಹೊಂದಿರುವ ಪಾಂಡವರ ಬಗ್ಗೆ ಯಾರು ತಾನೇ ಪ್ರೀತಿ ಹೊಂದರು''.

ಏಃ ಧೃತರಾಷ್ಟ್ರ ದುರ್ಯೋಧನನ ವಿಚಾರವನ್ನು ಒಪ್ಪದೇ ನುಡಿದ – ಪಾಂಡವರ ಬಗ್ಗೆ ತನ್ನದು ಪಕ್ಷಪಾತ ಧೋರಣೆಯೇನಲ್ಲ. ಅವರ ಅರ್ಹತೆಯನ್ನು ಗಮನಿಸಿಯೇ ತಾನು ಅವರಿಗೆ ರಾಜ್ಯ ನೀಡಿರುವುದು ಎಂದು ತಿಳಿಸಿ ದುರ್ಯೋಧನನ ವಿಚಾರ ಸರಿಯಾದ ಹಾದಿಯಲ್ಲಿ ಸಾಗಿಲ್ಲ ಎಂದು ಎಚ್ಚರಿಸಿದ.

ತೇ ಹಿ ಸ್ವಬಾಹುಬಲತೋಽಖಿಲಭೂಪಭೂತಿಂ
ಮಯ್ಯಾಕೃಷಂತಿ ನ ಚ ವಃ ಪ್ರತಿಷೇಧಕಾಸ್ತೇ ।
ತಸ್ಮಾಚ್ಛಮಂ ವ್ರಜ ಶುಭಾಯ ಕುಲಸ್ಯ ತಾತ
ಕ್ಷೇಮಾಯ ನೋ ಭವತಿ ವೋ ಬಲವದ್ವಿರೋಧಃ ॥ ೧೦ ॥

---

೯. ನಿಜವೀರ್ಯಭವೋಚ್ಚಯೇಷ್ವಿತ್ಯತ್ರ ನಿಜವೀರ್ಯಭವಃ ಉಚ್ಚ್ರಯಃ ಉತ್= ಉತ್ಕೃಷ್ಟಃ ಚಯಃ 'ಚಿಞ್ ಚಯ' ಇತಿ ಧಾತೋಃ ಚಯಃ= ದ್ರವ್ಯಸಂಗ್ರಹೋ ಯೇಷಾಂ ತೇ ತಥೋಕ್ತಾಃ ॥ – (ವಾ.)

೯. ನಿಜವೀರ್ಯಭವೋಚ್ಚಯೇಷು ಸ್ವವೀರ್ಯೇಣ ಸಂಪಾದಿತಃ ಉತ್ಕರ್ಷೋ ಯೈಸ್ತೇ ತಥಾ । – (ಜ.)

ಅ: 'ಅವರಾದರೋ ತಮ್ಮ ಬಾಹುಬಲದಿಂದ ಎಲ್ಲ ರಾಜರುಗಳ ಸಂಪತ್ತನ್ನೂ ನನ್ನ ಬಳಿಗೆ ತಂದು ಹಾಕುತ್ತಿರುವರು. ಅವರು ನಿಮಗೂ ಅಡ್ಡಿಪಡಿಸುವವರೇನಲ್ಲ. ಆದ್ದರಿಂದ, ಮಗು! ನೀನು ಶಾಂತನಾಗು. ಬಲಿಷ್ಠರೊಂದಿಗೆ ವಿರೋಧ ಕಟ್ಟಿಕೊಳ್ಳುವುದು ವಂಶದ ಕಲ್ಯಾಣಕ್ಕೂ ನಿಮ್ಮ ಕ್ಷೇಮಕ್ಕೂ ಖಂಡಿತ ಕಾರಣವಾಗದು''.

ವಿ: ಪಾಂಡವರ ಸಾಧನೆಯನ್ನು ವಿವರಿಸುತ್ತಾ ಧೃತರಾಷ್ಟ್ರ ದುರ್ಯೋಧನಾದಿಗಳು ಅಂತಹ ಸಾಧನೆ ಮಾಡಲು ಅವರೇನು ಅಡ್ಡಿ ಪಡಿಸುತ್ತಿಲ್ಲ ಎಂಬ ಅಂಶವನ್ನು ಅವನ ಗಮನಕ್ಕೆ ತರುವನು. ಪಾಂಡವರ ಬಗ್ಗೆ ವೈರ ತೊರೆದು ಶಾಂತಿಯಿಂದ ವರ್ತಿಸದಿದ್ದಲ್ಲಿ ಅಂತಹ ಬಲಿಷ್ಠರ ವಿರೋಧದಿಂದಾಗಿ ಇಡೀ ವಂಶವೇ ಹಾಳಾಗುವುದು ಎನ್ನುವನು. ಮುಂದೆ ನಡೆದದ್ದೂ ಹಾಗೆಯೇ ಎಂಬುದನ್ನು ಗಮನಿಸಬೇಕು.

ಏವಂ ಬ್ರುವತ್ಯಪಿ ನೃಪೇ ಪುನರಾಹ ಪಾಪಃ
ಆಶ್ರಿತ್ಯ ಸೌಬಲಮತಂ ಯದಿ ನೈವ ಪಾರ್ಥಾನ್ ।
ಅನ್ಯತ್ರ ಯಾಪಯಸಿ ನಾಗಪುರಾತ್ ಪರೇತಾನ್
ದೃಷ್ಟ್ವಾಽಖಿಲಾನಪಿ ಹಿ ನೋ ಮುದಮೇಹಿ ಪಾರ್ಥೈಃ ॥ ೧೧ ॥

ಅ: ಹೀಗೆ ಧೃತರಾಷ್ಟ್ರನು ಎಚ್ಚರಿಸಿದರೂ ಪಾಪಿಯಾದ ದುರ್ಯೋಧನ ಶಕುನಿಯ ಅಭಿಪ್ರಾಯವನ್ನು ಅವಲಂಬಿಸಿ ಮತ್ತೆ ನುಡಿದ : ''ನೀನು ಪಾಂಡವರನ್ನು ಹಸ್ತಿನಾಪುರದಿಂದ ಬೇರೆಡೆಗೆ ಕಳುಹಿಸದಿದ್ದಲ್ಲಿ ನಾವೆಲ್ಲಾ ಸತ್ತು ಹೋಗುವೆವು. ಅದನ್ನು ನೋಡಿ ಪಾಂಡವರೊಂದಿಗೆ ಸುಖವಾಗಿರು''.

ವಿ: ದುರ್ಯೋಧನ ತನ್ನ ಕುತಂತ್ರ ನಡೆಯದ್ದನ್ನು ನೋಡಿ ಬೇರೊಂದು ಬಗೆಯಲ್ಲಿ ಧೃತರಾಷ್ಟ್ರನನ್ನು ವಶಪಡಿಸಿಕೊಳ್ಳಲು ಆರಂಭಿಸಿದ. ಅವನೀಗ ನೇರವಾಗಿ ಪಾಂಡವರನ್ನು ರಾಜ್ಯಭ್ರಷ್ಟರನ್ನಾಗಿಸದಿದ್ದಲ್ಲಿ ತಾವೆಲ್ಲಾ ಸಾಯುವುದು ನಿಶ್ಚಿತ ಎಂಬ ಬೆದರಿಕೆಯನ್ನು ಒಡ್ಡಿದ. ಕಲಿಯುಗದಲ್ಲಿ ತಂದೆ ತಾಯಿಗಳನ್ನು ಮನವೊಲಿಸಲು ಮಕ್ಕಳು ಹೀಗೆ ಪ್ರಾಣತ್ಯಾಗದ ಬೆದರಿಕೆಯನ್ನು ಒಡ್ಡುವುದು ತೀರಾ ಸಾಮಾನ್ಯ.

---

೧೧. ಪರೇತಾನ್ ಪರಲೋಕಂ ಇತಾನ್ ಪ್ರಾಪ್ತಾನ್ ಮೃತಾನಿತ್ಯರ್ಥಃ। – (ಜ.)

ಏವಂ ನಿಶಮ್ಯ ಗದಿತಂ ಸುತಹಾರ್ದಪಾಶೈ-
ರಾಕೃಷ್ಯತಾಶು ಸ ನೃಪೋಽರಿಧರೇಚ್ಛಯೈವ ।
ಪ್ರೋವಾಚ ಪುತ್ರಮಪಿ ತೇ ಬಲಿನೋ ನ ಪಾರ್ಥಾಃ
ಶಕ್ಯಾಃ ಪುರಾತ್ ತನಯ ಯಾಪಯಿತುಂ ಕಥಂಚಿತ್ ॥ ೧೨ ॥

ಅ: ಅವನ ಮಾತನ್ನು ಕೇಳಿ ಧೃತರಾಷ್ಟ್ರ ಚಕ್ರಪಾಣಿಯಾದ ಶ್ರೀಹರಿಯ ಇಚ್ಛೆಯಿಂದಲೇ ಪುತ್ರವ್ಯಾಮೋಹದ ಬಲೆಗೆ ಸಿಲುಕಿದ. ಮಗನನ್ನು ಕುರಿತು ಹೇಳಿದ : ''ಪಾಂಡವರು ತುಂಬಾ ಬಲಿಷ್ಠರಲ್ಲವೇ. ಅವರನ್ನು ಪಟ್ಟಣದಿಂದ ಹೊರಗೆ ಹಾಕುವುದು ಯಾವ ರೀತಿಯಿಂದಲೂ ಶಕ್ಯವಾಗದು''.

ವಿ: ೧) ಸ್ವಭಾವತಃ ಸಾತ್ವಿಕನಾದ ಧೃತರಾಷ್ಟ್ರ ದುರ್ಯೋಧನನ ಮಾತಿಗೆ ವಶನಾಗಲು ಇಲ್ಲಿ ಎರಡು ಕಾರಣಗಳನ್ನು ನೀಡಿರುವರು; ಒಂದು ಪುತ್ರವ್ಯಾಮೋಹ ಮತ್ತೊಂದು ಭಗವದಿಚ್ಛೆ. ಇದ-ರಲ್ಲಿ ಭಗವದಿಚ್ಛೆ ಪ್ರಧಾನ ಎಂಬುದನ್ನು 'ಅರಿಧರೇಚ್ಛಯೈವ' ಎಂಬ ಮಾತಿನಿಂದ ತಿಳಿಸಿರುವರು.

೨) ಪಿತೃಭಕ್ತಿಗೆ ಎಲ್ಲ ಮಕ್ಕಳು ಒಳಗಾಗುವುದು ನಿಶ್ಚಿತವಲ್ಲ, ಆದರೆ ಪುತ್ರವ್ಯಾಮೋಹಕ್ಕೆ ತಂದೆತಾಯಿಗಳು ಒಳಗಾಗುವುದು ಮಾತ್ರ ಹೆಚ್ಚು ಖಚಿತ. ಕಲಿಯುಗದಲ್ಲಿ ಹೆಚ್ಚಿನ ತಂದೆ ತಾಯಿಗಳು ಧರ್ಮಭ್ರಷ್ಟರಾಗಲು ಮಕ್ಕಳು ತರುವ ಒತ್ತಡವೇ ಕಾರಣವಾಗುವುದು ಎಂಬುದು ಈ ನಿದರ್ಶನದಿಂದ ಸ್ಪಷ್ಟಪಡುವುದು.

ದುರ್ಯೋಧನನ ಕುತಂತ್ರ

ಇತ್ಯುಕ್ತ ಆಹ ಪಿತರಂ ಶಕುನಿಂ ನಿರೀಕ್ಷ್ಯ
ಸೃಷ್ಟೋ ಮಯಾ ವಿಧಿರಿಹಾದ್ಯ ಶೃಣುಷ್ವ ತಂ ಚ ।
ಅಸಂಸ್ಮೃಯೋದಶಸಮಾ ನಗರಂ ಪ್ರವಿಷ್ಟೇ-
ಷ್ವೇತೇಷು ತಾವದಯಮೇವ ವಿಧಿರ್ಮಯೇಷ್ಟಃ ॥ ೧೩ ॥

ಅ: ಧೃತರಾಷ್ಟ್ರ ಹೀಗೆನ್ನಲು ದುರ್ಯೋಧನ ಶಕುನಿಯನ್ನು ನೋಡಿ ತಂದೆಗೆ ಹೇಳಿದ: ''ಇದಕ್ಕೊಂದು ನಾನು ಉಪಾಯವನ್ನು ಹೂಡಿರುವೆ; ಅದನ್ನು ಕೇಳು. ಅವರು ನಗರಕ್ಕೆ ಆಗಮಿಸಿ ಹದಿಮೂರು ವರ್ಷಗಳು ಕಳೆದವು. ಅಂದಿನಿಂದಲೇ ನಾನು ಈ ಉಪಾಯವನ್ನು ಯೋಜಿಸಿರುವೆ''.

ವಿ: ತಮಗೆಲ್ಲ ಸಾಯಲು ಅನುಮತಿಕೊಡಲು ಬೇಡುವ ದುರ್ಯೋಧನ ತಾನು ಆಗಲೇ ಪಾಂಡವರನ್ನು ರಾಜ್ಯ ಭ್ರಷ್ಟರನ್ನಾಗಿಸಲು ಯೋಜಿಸಿದ ಉಪಾಯವನ್ನು ಮುಂದಿಡುತ್ತಿದ್ದಾನೆ.

ಎಂದರೆ ಪ್ರಾಣ ಕಳೆದುಕೊಳ್ಳುವ ಬೆದರಿಕೆಯ ಹಿನ್ನೆಲೆಯಲ್ಲಿ ತನ್ನ ಉಪಾಯವನ್ನು ಒಪ್ಪಿಕೊಳ್ಳುವಂತೆ ಮಾಡುವುದು ಅವನ ವಂಚನೆಯ ಕ್ರಮವಾಗಿತ್ತು ಎಂದಾಗುವುದು.

ದ್ರೌಣೇರ್ಹಿ ನಾಸ್ತಿ ಸದೃಶೋ ಬಲವಾನ್ ಪ್ರತಾಪೀ
ಸೋಽಯಂ ಮಯಾ ಬಹುವಿಧೈಃ ಪರಮೈರುಪಾಯೈಃ ।
ನೀತೋ ವಶಂ ವಶಗತೋಽಸ್ಯ ಚ ಮಾತುಲೇನ
ಸಾಕಂ ಪಿತಾ ತಮನು ಚೈಷ ನದೀಪ್ರಸೂತಃ ॥ ೧೪ ॥

ಅ: 'ದ್ರೋಣಪುತ್ರರಾದ ಅಶ್ವತ್ಥಾಮರಿಗೆ ಸದೃಶನಾದ ಬಲವಂತನೂ, ಪರಾಕ್ರಮಿಯೂ ಮತ್ತೊಬ್ಬನಿಲ್ಲ. ಅವನನ್ನು ನಾನು ಬಗೆಬಗೆಯ ಶ್ರೇಷ್ಠ ಉಪಾಯಗಳಿಂದ ವಶಮಾಡಿಕೊಂಡಿರುವೆ. ಅವರ ತಂದೆ ದ್ರೋಣ, ಸೋದರ ಮಾವ ಕೃಪ - ಅವರೂ ಸಹ ನನ್ನ [+]ವಶವಾಗಿರುವರು. ಭೀಷ್ಮರಂತೂ ಅವರೊಂದಿಗೇ ಇರುವವರು.

ವಿ: ೧) ದುರ್ಯೋಧನ ತನ್ನ ಕಾರ್ಯತಂತ್ರದ ಮೂಲವನ್ನಾಗಿ ಅಶ್ವತ್ಥಾಮರನ್ನು ವಶಪಡಿಸಿಕೊಂಡಿರುವುದನ್ನು ತಿಳಿಸುವನು. ಅಶ್ವತ್ಥಾಮ ಶಿವನ ಅವತಾರ, ದುರ್ಯೋಧನ ಅಸುರನಾದ ಕಲಿ. ಎಂದರೆ ಕಲ್ಯಾದಿ ಅಸುರರು ತಮ್ಮ ಕಾರ್ಯತಂತ್ರಗಳಿಗೆ ಪ್ರಧಾನವಾಗಿ ಶಿವನನ್ನು ಅವಲಂಬಿಸುವರು ಎಂಬುದಕ್ಕೆ ಇದು ಸೂಚಕ. 'ಉಗ್ರಕರ್ಮಾಣಃ' ಎಂಬ ಗೀತೆಯ ಮಾತಿನಲ್ಲಿ ಈ ವಿವರ ಸ್ಫುಟವಾಗುತ್ತದೆ.

೨) ಅಶ್ವತ್ಥಾಮರೊಂದಿಗೆ ಅವರ ತಂದೆ ದ್ರೋಣ, ಮಾವ ಕೃಪ ಬರುವುದನ್ನು ದುರ್ಯೋಧನ ತನ್ನ ನಿದರ್ಶನದಿಂದಲೇ ಸ್ಫುಟಪಡಿಸಿಕೊಂಡಿದ್ದಾನೆ. ಧೃತರಾಷ್ಟ್ರನಂತೆ ದ್ರೋಣಾಚಾರ್ಯರು ಪುತ್ರವ್ಯಾಮೋಹಕ್ಕೊಳಗಾಗಿ ತಮ್ಮ ಮಗ ಅಶ್ವತ್ಥಾಮನೊಂದಿಗೆ ತನ್ನ ವಶವಾಗಿರುವರು ಎಂದರ್ಥ. ಭೀಷ್ಮ, ದ್ರೋಣ, ಕೃಪ ಮೂವರೂ ಸಮ ವಯಸ್ಕರೂ ಹೌದು. ಅವರದ್ದು ಬಾಲ್ಯ ಸ್ನೇಹ ಸಹ. ಇದರಿಂದಾಗಿ ಅಶ್ವತ್ಥಾಮರೊಂದಿಗೆ ಈ ಮೂವರು ಪ್ರಮುಖರು ತನ್ನ ವಶವರ್ತಿಗಳು ಎಂದು ಅವನ ವಿಚಾರ.

+ ಮಧ್ಯಸ್ಥಃ ಸತತಂ ಭೀಷ್ಮೋ ದ್ರೋಣಪುತ್ರೋ ಮಯಿ ಸ್ಥಿತಃ ।
ಯತಃ ಪುತ್ರಸ್ತತೋ ದ್ರೋಣೋ ಭವಿತಾ ನಾತ್ರ ಸಂಶಯಃ ॥
ಕೃಪಃ ಶಾರದ್ವತಶ್ಚೈವ ಯತ ಏತೌ ತತೋ ಭವೇತ್ ॥
ದ್ರೋಣಂ ಚ ಭಾಗಿನೇಯಂ ಚ ನ ಸ ತ್ಯಕ್ಷ್ಯತಿ ಕರ್ಹಿಚಿತ್ ॥ – ಭಾರತ (ಆದಿ. ೧೪೧/೨೦,೨೧)

ಏವಂ ಹಿ ಸೈನಿಕಗಣಾ ಅಪಿ ದಾನಮಾನೈಃ
ಪ್ರಾಯೋ ವಶಂ ಮಮ ಗತಾ ಅಪಿ ಚೈಷ ಕರ್ಣಃ ।
ಅಸ್ತ್ರೇ ಬಲೇಽಪ್ಯಧಿಕ ಏವ ಸುರೇಂದ್ರಸೂನೋ-
ರ್ಜೀಷ್ಣೋ ಚ ಮಂತ್ರಬಲತಸ್ತ್ವಹಮೇವ ಭೀಮಮ್ ॥ ೧೫ ॥

ಅ: ಇದರಂತೆ ಸೈನಿಕರ ಗುಂಪುಗಳನ್ನು ಸಹ ನಾನು ದಾನ ಮಾನಗಳಿಂದ ಬಹುಮಟ್ಟಿಗೆ ವಶಕ್ಕೆ ತೆಗೆದುಕೊಂಡಿರುವೆ. ಅದರಂತೆ ಈ ಕರ್ಣನೂ ನನ್ನ ವಶವಾಗಿರುವನು. ಇವನು ಅಸ್ತ್ರ ಹಾಗೂ ಬಲಗಳಲ್ಲಿ ಇಂದ್ರಪುತ್ರನಾದ ಅರ್ಜುನನಿಗಿಂತ ಮಿಗಿಲಾದವನೇ ಸರಿ. ಇನ್ನು ಭೀಮನನ್ನು ಮಂತ್ರಬಲದಿಂದ ನಾನೇ ಗೆಲ್ಲುವೆ.

ಏ: ೧) ಸೈನಿಕರನ್ನು ವಶಪಡಿಸಿಕೊಳ್ಳಲು ದುರ್ಯೋಧನ ಹೂಡಿದ ಉಪಾಯ ದಾನ ಹಾಗೂ ಮಾನ. ದಾನ ಎಂಬುದು ಆಧುನಿಕ ಪರಿಭಾಷೆಯ ಲಂಚವೇ ಸರಿ. ಮಾನವೆಂದರೆ ಸನ್ಮಾನ; ವಸ್ತ್ರ, ಅಧಿಕಾರ ಮೊದಲಾದವುಗಳನ್ನು ನೀಡಿ ವಶಪಡಿಸಿಕೊಳ್ಳುವುದು ಎಂದರ್ಥ.

೨) ಕಲಿಯುಗದಲ್ಲಿ ಇಂದು ನಿತ್ಯ ಜನರ ವಶೀಕರಣಕ್ಕೆ ನಡೆಯುತ್ತಿರುವುದು ದುರ್ಯೋಧನ ಹೇಳಿರುವ ಈ ಎರಡು ಉಪಾಯಗಳೇ. ಸಾಮಾನ್ಯವಾಗಿ ಒಂದು ವರ್ಗದ ಜನ ಹಣಕಾಸುಗಳ ಆಮಿಷಕ್ಕೆ ವಶವಾದರೆ, ಮತ್ತೊಂದು ವರ್ಗದ ಜನ ಸನ್ಮಾನದ ಆಮಿಷಕ್ಕೆ ಬಲಿಯಾಗುವರು ಎಂದು ಭಾವ. ದುರ್ಯೋಧನ ಪ್ರಯೋಗಿಸಿದ ಈ ಉಪಾಯ ಕಲಿಯುಗದ ಸಕಲ ಕಪಟಗಳ ಪ್ರಧಾನ ಮಾರ್ಗಗಳು ಎಂಬುದು ಗಮನಾರ್ಹ.

೩) ಕರ್ಣನೂ ಇದಕ್ಕೆ ಬಲಿಯಾದವನೇ. ದುರ್ಯೋಧನ ನೀಡಿದ ಅಂಗರಾಜ್ಯ ಅವನನ್ನು ಜೀವನಪೂರ್ತಿ ಅವನ ಅಧೀನನ್ನಾಗಿಸಿತು ಎಂಬುದು ಜಗತ್ತೇ ಬಲ್ಲ ವಿಚಾರ. ಇನ್ನು ಭೀಮನ ವಿಚಾರ, ಅವನನ್ನು ಮಂತ್ರಬಲದಿಂದ ತಾನೇ ಗೆಲ್ಲಬಲ್ಲೆ ಎಂಬ ಭ್ರಮೆ ಅವನದು.

ದುರ್ಯೋಧನನ ಮಂತ್ರವಿದ್ಯೆ

ತ್ರಿಂಶಚ್ಛತಂ ಪರಮಕಾಃ ಸುರದುರ್ಲಭಾಶ್ಚ
ದುರ್ವಾಸಸೋ ಹಿ ಮನವೋಽದ್ಯ ಮಯಾ ಗೃಹೀತಾಃ ।
ಅನ್ಯತ್ರ ತೇ ಪ್ರವಿಹಿತಾ ನ ಹಿ ವೀರ್ಯವಂತಃ
ಸ್ಯುರ್ಭೀಮ ಇತ್ಯಹಮಮೂನ್ ನ ನಿಯೋಜಯಾಮಿ ॥ ೧೬ ॥

ಅ: ದೇವತೆಗಳಿಗೂ ದುರ್ಲಭವಾದ ಮೂರು ಸಾವಿರ ಶ್ರೇಷ್ಠಮಂತ್ರಗಳನ್ನು ನಾನು ದುರ್ವಾಸರಿಂದ ತಿಳಿದುಕೊಂಡಿರುವೆ. ಬೇರೆಡೆ ಪ್ರಯೋಗಿಸಿದರೆ ಅವುಗಳ ಶಕ್ತಿ ಕುಂದುವುದೆಂಬ ಕಾರಣದಿಂದ ಭೀಮನ ಮೇಲೆಯಷ್ಟೇ ಪ್ರಯೋಗಿಸಲೆಂದು ನಾನು ಅನ್ಯತ್ರ ಪ್ರಯೋಗಿಸದೇ ಅವುಗಳನ್ನು ಕಾದಿರಿಸಿರುವೆ.

ವಿ: ೧) ಭೀಮನ ಮೇಲೆ ವಿಷಪ್ರಯೋಗ ಮೊದಲಾದ ಇತರ ಉಪಾಯಗಳೆಲ್ಲಾ ವ್ಯರ್ಥವಾಗಿರುವುದನ್ನು ದುರ್ಯೋಧನ ಮನಗಂಡು ಕೊನೆಗೆ ಅವನು ಶರಣು ಹೊಕ್ಕಿರುವುದು ಈ ಮಂತ್ರಗಳನ್ನು. ಈ ಮಾತಿನಲ್ಲಿ ಭೀಮನ ಅಗಾಧಬಲ, ವಿಷ ಮೊದಲಾದ ಇತರ ಎಲ್ಲ ಉಪಾಯಗಳನ್ನೂ ಮೆಟ್ಟಿ ನಿಲ್ಲುವ ಸಾಮರ್ಥ್ಯ ಆ ಮಂತ್ರಗಳಿಗುಂಟು ಎಂದು ನಿರೂಪಿತವಾಗಿವೆ ಎಂಬುದನ್ನು ಗಮನಿಸಬೇಕು.

೨) ಆ ಮಂತ್ರಗಳನ್ನು ಅವನು ಕಲಿತದ್ದೂ ಸಹ ಶಿವನ ಅವತಾರರಾದ ದುರ್ವಾಸಮುನಿಗಳಿಂದ. ಎಂದರೆ ಒಂದರ್ಥದಲ್ಲಿ ಅವೆಲ್ಲವೂ ಅವೈಷ್ಣವ ಮಂತ್ರಗಳೇ. ಅವುಗಳ ಶಕ್ತಿಸಾಮರ್ಥ್ಯಗಳ ಬಗ್ಗೆ ವಿವರಗಳು ಮೂಂದೆ ಬಂದಿವೆ (೧೯/೧೭ ಹಾಗೂ ೨೮/೪೬). ಅದರಂತೆ ಆ ಮಂತ್ರಗಳನ್ನು ಏಳು ದಿವಸಗಳ ಕಾಲ ಸತತ ಜಪಿಸಿದರೆ ಸತ್ತವರೆಲ್ಲ ಮರಳಿ ಬದುಕುವರು. ಅದರಂತೆ ಪುನಃ ಅವರೆಂದೂ ಬೇರಾರಿಂದಲೂ ವಧ್ಯರಾಗುವುದೇ ಇಲ್ಲ. ಇದರಿಂದಾಗಿ ದುರ್ಯೋಧನನಿಗೆ ತನ್ನ ಜಯದ ಬಗ್ಗೆ ಅಪಾರ ವಿಶ್ವಾಸ ಎಂದು ತಿಳಿಯಬೇಕು.

೩) ಆದರೆ, ಅವನಿಗೆ ವಸ್ತುಸ್ಥಿತಿಯ ಪರಿಜ್ಞಾನವೇ ಇಲ್ಲ ಎಂಬುದು ಸ್ಪಷ್ಟ. ಇವನಿಗೆ ಗೊತ್ತಿರುವುದು ದುರ್ವಾಸರಿಂದ ಉಪದಿಷ್ಟವಾದ ಮೂರು ಸಾವಿರ ಮಂತ್ರಗಳು ಮಾತ್ರ. ಆದರೆ ಭೀಮ ವಾಯುವಿನ ಅವತಾರ. ವಾಯುದೇವರ ಮಂತ್ರ ಪರಿಜ್ಞಾನ ಎಷ್ಟು ಅಪೂರ್ವ ಎಂಬುದನ್ನು ಶ್ರೀರಾಘವೇಂದ್ರಸ್ವಾಮಿಗಳು ಪ್ರಾತಃಸಂಕಲ್ಪಗದ್ಯದಲ್ಲಿ ತಿಳಿಸಿರುವರು. **'ಸಂಸಿದ್ಧಸಪ್ತಕೋಟಿ–ಮಹಾಮಂತ್ರಾಣಾಂ.....'** ಎಂದರೆ ಏಳುಕೋಟಿ ಮಹಾಮಂತ್ರಗಳು ಭೀಮಸೇನನಿಗೆ ಕರತಲಾಮಲಕ. ದುರ್ಯೋಧನನಿಗೆ ಗೊತ್ತಿರುವುದು ಕೇವಲ ಮೂರುಸಾವಿರ ಮಂತ್ರಗಳು; ಅವೂ ಸಹ ಭೀಮನಿಗೆ ಗೊತ್ತಿರದ ಮಹಾಮಂತ್ರಗಳೇನಲ್ಲ.

---

೧೬. ತ್ರಿಂಶದಧಿಕಂ ಶತಂ ತ್ರಿಂಶಚ್ಛತಂ ಕೇಚಿತ್ ಸಹಸ್ರತ್ರಯಮಿತಿ ವ್ಯಾಚಕ್ಷತೇ। – (ಜ.)

ತ್ರಿಂಶಚ್ಛತಂ ತ್ರಿಸಹಸ್ರಮಿತಿ ಯಾವತ್। ತ್ರಿಂಶದಧಿಕಶತಮಿತ್ಯಪಿ ಸಂಭವತಿ। – (ವ.)

ತ್ರಿಂಶಚ್ಛತಾಸ್ತ್ರಿಂಶದಧಿಕಶತಾಃ ತ್ರಿಸಹಸ್ರಂ ವಾ। – (ತಾ.)

೪) ಎಂದರೆ ಕೇವಲ ಮಂತ್ರಸಿದ್ಧಿಯ ದೃಷ್ಟಿಯಲ್ಲೂ ಭೀಮಸೇನ ಅಪ್ರತಿಮ — 'ಭೀಮಸೇನಸಮೋ ನಾಸ್ತಿ'. ಅಂತೂ ದುರ್ಯೋಧನಾದಿ ದುಷ್ಟರ ತಂತ್ರವೆಲ್ಲ ಇಂತಹ ಕುತಂತ್ರವೇ ಹೊರತು ಶಾಸ್ತ್ರೋಕ್ತವಾದ ಪರಿಶುದ್ಧರಾಜನೀತಿಯಲ್ಲ ಎಂಬುದನ್ನು ಗಮನಿಸಬೇಕು.

ತೇ ವೀರ್ಯದಾ ವಿಜಯದಾ ಅಪಿ ವಾರಿವಹ್ನಿ-
ಸ್ತಂಭಾದಿದಾಃ ಸಕಲದೇವನಿಕಾಯರೋಧಾಃ।
ವೃಷ್ಟ್ಯಾದ್ಯಭೀಪ್ಸಿತಸಮಸ್ತಕರಾ ಅಮೂಭಿ-
ರ್ಜೀಷ್ಯಾಮಿ ಭೀಮಮಮುಮೇಕಮಯಾತಯಾಮ್ಯೈಃ ॥ ೧೭ ॥

ಅ: ಆ ಮಂತ್ರಗಳು ಸಾಮರ್ಥ್ಯ ನೀಡುವಂತಹವು, ವಿಜಯ ನೀಡುವಂತಹವು, ಜಲಸ್ತಂಭ, ಅಗ್ನಿಸ್ತಂಭ ಮೊದಲಾದ ಸಿದ್ಧಿಗಳನ್ನು ಕೊಡಬಲ್ಲಂತಹವು, ಸಕಲದೇವತೆಗಳ ಸಮೂಹಗಳನ್ನೂ ತಡೆಗಟ್ಟಬಲ್ಲಂತಹವು. ಮಳೆ ಮೊದಲಾದ ಸಕಲ ಕಾಮನೆಗಳನ್ನೂ ಈಡೇರಿಸಬಲ್ಲವು. ಅಂತಹ ಮಂತ್ರಗಳನ್ನು ನಾನು ಪ್ರತಿನಿತ್ಯ ಜಪಿಸುತ್ತಾ ಅವುಗಳ ಶಕ್ತಿ ಕುಂದದಂತೆ ನೋಡಿಕೊಂಡಿರುವೆ. ಅವುಗಳಿಂದ ನಾನು ಭೀಮನನ್ನು ಗೆಲ್ಲುವೆ.

ವಿ: ೧) ಆ ಮಂತ್ರಗಳ ಸಾಮರ್ಥ್ಯವನ್ನು ದುರ್ಯೋಧನ ಈ ಶ್ಲೋಕದಲ್ಲಿ ವಿವರಿಸುತ್ತಾ ಶಕ್ತಿ ಕುಂದದಿರಲೆಂದು ಅವುಗಳನ್ನು ತಾನು ಪ್ರತಿನಿತ್ಯ ತಪ್ಪದೇ ಜಪಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿರುವನು.

೨) ಒಂದು ದಿನದ ಜಪ ತಪ್ಪಿದರೂ, ಅವುಗಳಿಗೆ ಅಂಗವಾಗಿ ವಿಹಿತವಾದ ತರ್ಪಣಾದಿಗಳು ತಪ್ಪಿದರೂ ಮಂತ್ರಗಳ ಸಿದ್ಧಿ ಕುಂಠಿತವಾಗುವುದು ಎಂಬುದು ಶಾಸ್ತ್ರ ಪ್ರಮೇಯ. ಆದರೆ,

---

೧೭. ಆದಿಶಬ್ದೇನ ಮೃತಸಂಜೀವನಾದಿಕಂ ಗ್ರಾಹ್ಯಮ್। – (ಜ., ವ.)

೧೭. ಅಮೂಭಿಃ ಛಾಂದಸತ್ವಾದ್ಬಹುಲಂ ಅಕ್ಷಯಾವಿಷುಧೀ ದಿವ್ಯೇ ಇತಿವತ್। ಮನುಶಬ್ದಸ್ಯೋಭಯಲಿಂಗತಾಸೂಚನಾರ್ಥಂ ಅಮೂಭಿರಯಾತಯಾಮ್ಯೈರಿತ್ಯುಕ್ತಂ ಅತ ಏವ ಸ್ತ್ರೀಪುಲ್ಲಿಂಗಶೇಷೇ 'ಮುನಿರ್ವರಾಟಕಃ ಸ್ವಾತಿರ್ವರ್ಣಕಃ ಪಾಟಲಿರ್ಮನುಃ' ಇತ್ಯಮರಃ। – (ಜ.)

೧೭. ಅಯಾತಯಾಮ್ಯೈರಿತ್ಯತ್ರ ಯಾತಃ= ಜಪತರ್ಪಣಾದಿಕಂ ವಿನಾ ವೃಥಾಗತಃ ಯಾಮೋ ಯೇಷಾಂ ತೇ ತಥೋಕ್ತಾಃ ನೇತಿ ॥ – (ವಾ.)

ಅಯಾತಯಾಮ್ಯೈಃ ಅಗತಸಾರೈಃ। – (ವೇ., ಜ.)

'ಗತಸಾರಂ ಯಾತಯಾಮಂ ಯಾಮಃ ಸಾರ ಇಹೋಚ್ಯತ' ಇತಿ ನಾರದೀಯೇ ॥ – ಭಾ.ತಾ.(೩/೧೭/೩೫)

ದುರ್ಯೋಧನನಿಗೆ ವಾಸ್ತವವಾಗಿ *ಮಂತ್ರಾಧಿಕಾರವೇ ಇಲ್ಲ, ಅವನು ಅವೈಷ್ಣವ ಎಂಬುದು ಪ್ರಮುಖ ವಿಚಾರ. ಇದನ್ನೆಲ್ಲ ಶ್ರೀಮದಾಚಾರ್ಯರು 'ಅಮೀಭಿಃ' ಎಂಬ ಪುಲ್ಲಿಂಗದ ಪದವನ್ನು ಪ್ರಯೋಗಿಸಬೇಕಾದ ಸ್ಥಳದಲ್ಲಿ 'ಅಮೂಭಿಃ' ಎಂಬ ಸ್ತ್ರೀಲಿಂಗದ ಪದದಿಂದ ಸೂಚಿಸಿರುವರು ಎಂದು ತಿಳಿಯಬೇಕು ಎಂಬ ವಿಶೇಷಾಂಶ ವ್ಯಾಖ್ಯಾನಗಳಲ್ಲಿದೆ.

ಸೌಹಾರ್ದಮೇಷು ಯದಿ ವಾऽತಿತರಾಂ ಕರೋಷಿ
ತತ್ರಾಪಿ ನೈವ ಹಿ ಮಯಾ ಕ್ರಿಯತೇ ವಿರೋಧಃ ।
ವತ್ಸ್ಯಂತು ವಾರಣವತೇ ಭವತು ಸ್ಮ ರಾಷ್ಟ್ರಂ
ತೇಷಾಂ ತದೇವ ಮಮ ನಾಗಪುರಂ ತ್ವದರ್ಥೇ ॥ ೧೮ ॥

ಅ: ನೀನು ಪಾಂಡವರ ಬಗ್ಗೆ ಬಹಳ ಸೌಹಾರ್ದವನ್ನು ಮಾಡುವುದಿದ್ದಲ್ಲಿ ಅದರ ಬಗ್ಗೆ ನಾನು ಸರ್ವಥಾ ವಿರೋಧ ಮಾಡಲಾರೆ; ನಿನಗೋಸ್ಕರವಾಗಿ ಅವರು ವಾರಣವತದಲ್ಲಿ ನೆಲೆಸಲಿ. ಆ ರಾಜ್ಯ ಅವರದೇ ಆಗಲಿ. ಈ ಹಸ್ತಿನಾಪುರ ನನ್ನದಾಗಲಿ.'

ವಿ: ೧) ಇದು ದುರ್ಯೋಧನನ ಕಪಟದ ಮತ್ತೊಂದು ಮುಖ. ವಾರಣಾವತಕ್ಕೆ ಪಾಂಡವರನ್ನು ಕಳುಹಿಸುವ ಮೂಲಕ ಅಲ್ಲಿನ ಅರಗಿನ ಮನೆಯಲ್ಲಿ ಅವರನ್ನು ಸುಡಿಸುವ ಯೋಜನೆಯೊಂದನ್ನು ಈಗಾಗಲೇ ರೂಪಿಸಿಕೊಂಡಿರುವುದು ಇದರಿಂದ ಸ್ಫುಟಪಡುವುದು. ತನ್ನ ವಂಚನೆ ಧೃತರಾಷ್ಟ್ರನಿಗೆ ತಿಳಿಯದಿರಲು ಅವನು ಅಲ್ಲಿ ಅವರು ರಾಜ್ಯವಾಳಬಹುದೆಂಬ ವಿಚಾರವನ್ನು ಅವನ ತಲೆಗೆ ತುಂಬುವನು.

೨) ಅವನಿಗೆ ಪಾಂಡವರಿಗೆ ಯಾವ ರಾಜ್ಯವನ್ನು ಕೊಡುವ ಯೋಚನೆಯೂ ಇಲ್ಲ ಅಷ್ಟೇಕೆ ಅವರು ಬದುಕಿರುವುದೇ ಬೇಕಿಲ್ಲ ಎಂಬುದು ವಸ್ತುಸ್ಥಿತಿ.

೩) 'ತ್ವದರ್ಥೇ' ಎಂಬ ಇಲ್ಲಿಯ ಮಾತು ನಿನಗಾಗಿ ಪಾಂಡವರು ವಾರಣಾವತದಲ್ಲಿ ರಾಜ್ಯವಾಳಲಿ ಎಂದೂ, ನಿನ್ನ ಕೀರ್ತಿ ಮೊದಲಾದ ಕಾರಣಗಳಿಗಾಗಿ ನಾವೆಲ್ಲ ಹಸ್ತಿನಾಪುರದಲ್ಲಿ ರಾಜ್ಯವಾಳುವೆವು ಎಂದೂ ಎರಡಕ್ಕೂ ಅನ್ವಯ.

---

* 'ಅವೈಷ್ಣವಸ್ಯ ವೇದೇऽಪಿ ಹ್ಯಧಿಕಾರೋ ನ ವಿದ್ಯತೇ' – ಬ್ರಹ್ಮಸೂತ್ರಭಾಷ್ಯ (೩/೪/೧೨)

೧೮. ಕರ್ತ್ರಾಪೀತ್ಯಸ್ಯ ತರ್ಹ್ಯಪೀತ್ಯರ್ಥಃ। – (ಸ.)

೧೮. ವತ್ಸ್ಯಂತು ವಾರಣವತ ಇತ್ಯತ್ರ ''ವ್ಯತ್ಯಯೋ ಬಹುಲಮ್'' ಇತಿ ವಚನಾತ್ ಲೋಟ್ಯಪಿ ಷ್ಯಞ್ಪ್ರಯೋಗಃ ॥ – (ವಾ.)

ಏವಂ ಸ್ವಪುತ್ರಪರಿಪಾಲನತೋ ಯಶಸ್ತೇ
ಭೂಯಾದ್ವಿನಶ್ಯತಿ ಪರಪ್ರಸವಾತಿಪುಷ್ಟೌ।
ಜಾತೇ ಬಲೇ ತವ ವಿರೋಧಕೃತಶ್ಚ ತೇ ಸ್ಯುಃ
ಸ್ವಾರ್ಥಂ ಹಿ ತಾವದನುಯಾಂತ್ಯಪಿ ಕೇವಲಂ ತ್ವಾಮ್ ॥ ೧೯ ॥

ಅ: ಹೀಗೆ ನಿನ್ನ ಮಕ್ಕಳನ್ನು ಪರಿಪಾಲಿಸುವುದರಿಂದಾಗಿ ನಿನಗೆ ಕೀರ್ತಿ ಲಭಿಸುವುದು. ಮತ್ತೊಬ್ಬರ ಸಂತತಿಯನ್ನು ಬಹಳವಾಗಿ ಪೋಷಿಸಿದಲ್ಲಿ ಅದು ನಾಶವಾಗುವುದು. ಅವರು ತಮ್ಮ ಬಲ ಹೆಚ್ಚಿದ ಮೇಲೆ ನಿನಗೆ ವಿರೋಧ ಮಾಡುವವರೇ ಸರಿ. ಈಗ ಅವರು ನಿನ್ನನ್ನು ಅನುಸರಿಸಿಕೊಂಡಿರುವುದು ಕೇವಲ ಸ್ವಾರ್ಥಕ್ಕಾಗಿ.

ವಿ: ತನ್ನ ಸ್ವಾರ್ಥಕ್ಕೆ ಧೃತರಾಷ್ಟ್ರನ ಕೀರ್ತಿವೃದ್ಧಿಯ ಮೆರುಗಿನ ಸೋಗನ್ನು ದುರ್ಯೋಧನ ತೊಡಿಸುತ್ತಿರುವನು. ನಿಜಕ್ಕೂ ಅವನು ಈಗ ಧೃತರಾಷ್ಟ್ರನನ್ನು ಅನುಸರಿಸುತ್ತಿರುವುದು ತನ್ನ ಸ್ವಾರ್ಥಕ್ಕಾಗಿ. ಆದರೆ ಅದನ್ನು ಪರಮ ನಿಸ್ವಾರ್ಥಿಗಳಾದ ಪಾಂಡವರ ಮೇಲೆ ಆರೋಪಿಸು-ತ್ತಿರುವುದು ಮಾತ್ರ ದೊಡ್ಡ ವಿಪರ್ಯಾಸ.

ಕ್ಷತ್ತೈಕ ಏವ ಸತತಂ ಪರಿಪೋಷಕೋಽಲಂ
ತೇಷಾಂ ಮಮ ದ್ವಿಡಥ ಮಂತ್ರಬಲಾದಮುಷ್ಯ ।
ಪೌರಾಶ್ಚ ಜಾನಪದಿಕಾಃ ಸತತಂ ದ್ವಿಷಂತಿ
ಮಾಂ ತೇಷ್ವತೀವ ದೃಢಸೌಹೃದಚೇತಸಶ್ಚ ॥ ೨೦ ॥

ಅ: ಪಾಂಡವರಿಗೆ ವಿಶೇಷವಾಗಿ ಪರಿಪಾಲಕನಾಗಿರುವುದು ವಿದುರ ಒಬ್ಬನೇ, ಅವನು ನನ್ನ ವೈರಿ. ಅವನ ಉಪಾಯದ ಬಲದಿಂದಾಗಿಯೇ ಪಟ್ಟಣಿಗರೂ, ದೇಶೀಯರೂ ನನ್ನನ್ನು ಸದಾ ದ್ವೇಷಿಸುವರು. ಆ ಪಾಂಡವರಲ್ಲಿ ದೃಢವಾದ ಸೌಹಾರ್ದದಿಂದ ಕೂಡಿದ ಮನಸ್ಸನ್ನು ಹೊಂದಿರುವರು.

ವಿ: ೧) ವಿದುರ ಮಾತ್ರ ದುರ್ಯೋಧನನ ಯಾವುದೇ ಆಮಿಷಕ್ಕೂ ಒಳಗಾಗಿಲ್ಲ ಎಂಬ ಅಂಶ ಇಲ್ಲಿ ನಿರೂಪಿತವಾಗಿದೆ. ದಾನ, ಮಾನಗಳಿಗೆ ವಶವಾಗದ ಪವಿತ್ರ ಜೀವನ ವಿದುರನದ್ದು. ಅದಕ್ಕೆ ಅವನು ಪಾಂಡವರಲ್ಲಿಟ್ಟಿದ್ದ ಪೂರ್ಣನಿಷ್ಠೆಯೇ ಕಾರಣ.

---

೧೯. ಪರಪ್ರಸವಾತಿಪುಷ್ಟವಿತ್ಯತ್ರ ಪರೇಷಾಂ ಪ್ರಸವಃ ಸಂತಾನಃ ತಸ್ಯಾತಿಪುಷ್ಟೌ ಪರಪ್ರಸವಾತಿಪುಷ್ಟೌ॥ – (ವಾ.)

೨೦. ಅಥ ಮಂತ್ರಬಲಾದಮುಷ್ಯೇತ್ಯತ್ರ ಅಥ= ಅಥಾಪ್ಯೇಕ ಏವೇತ್ಯರ್ಥಃ ॥ – (ವಾ.)

೨) ವಾಯು ಮೊದಲಾದ ದೇವತೆಗಳಲ್ಲಿ ನಿಷ್ಠರಾಗಿರುವವರಿಗೆ ಕಲಿ ಒಡ್ಡುವ ಆಮಿಷ ಏನನ್ನೂ ಮಾಡಲಾರದು ಎಂಬುದು ಇದಕ್ಕೆ ನಿದರ್ಶನ. ಜನರೆಲ್ಲ ಪಾಂಡವರ ಬಗ್ಗೆ ಅನುರಕ್ತರಾಗಿರುವುದು ಅವರ ಸದ್ಗುಣಗಳಿಗೆ ಮೆಚ್ಚಿ. ಆದರೆ ದುರ್ಯೋಧನ ಅದೆಲ್ಲ ವಿದುರನ ಕುತಂತ್ರದ ಫಲ ಎಂದು ಆರೋಪಿಸುತ್ತಾನೆ. ವಾಸ್ತವವಾಗಿ ದುರ್ಯೋಧನನನ್ನು ಪ್ರಜೆಗಳು ಮೆಚ್ಚುತ್ತಿದ್ದಿಲ್ಲ ಎಂಬ ವಿಶೇಷಾಂಶ ಇಲ್ಲಿದೆ.

ಏತೇಷು ದೂರಗಮಿತೇಷು ನಿರಾಶ್ರಯತ್ವಾ-
ನ್ಮಾಮೇವ ದುರ್ಬಲತಯಾ ಪರಿತಃ ಶ್ರಯಂತೇ ।
ಭೀಷ್ಮಾದಯಶ್ಚ ನ ಹಿ ತನ್ನಿಕಟೇ ವಿರೋಧಂ
ಕುರ್ಯುರ್ವಿನಶ್ಯತಿ ಗತೇಷು ಹಿ ಸೌಹೃದಂ ತತ್ ॥ ೨೧ ॥

ಅ: ಪಾಂಡವರು ದೂರಕ್ಕೆ ಕಳುಹಿಸಲ್ಪಟ್ಟರೆ ಜನರಿಗೆಲ್ಲ ಅವರ ಆಸರೆ ತಪ್ಪುವುದರಿಂದ ಅವರು ದುರ್ಬಲರಾಗುವ ಮೂಲಕ ನನ್ನನ್ನೇ ಎಲ್ಲ ಬಗೆಯಲ್ಲೂ ಆಶ್ರಯಿಸುವರು. ಭೀಷ್ಮಾದಿಗಳೂ ಸಹ ಪಾಂಡವರು ಸನಿಹದಲ್ಲಿದ್ದರೆ ಅವರ ಬಗ್ಗೆ ವಿರೋಧ ಮಾಡಲಾರರು. ಅವರು ದೂರ ಹೋದಲ್ಲಿ ಅವರ ಬಗ್ಗೆ ಸೌಹಾರ್ದ ಅಳಿಯುವುದು.

ವಿ: ಪಾಂಡವರ ಮೇಲಿನ ಜನರ ಸ್ನೇಹ ಅವರು ದೂರ ತೆರಳಿದರೆ ಮರೆಯಾಗುವುದು ಎಂಬುದು ದುರ್ಯೋಧನನ ಕಲ್ಪನೆ. ರಾಮಾಯಣದಲ್ಲಿ ಮಂಥರೆಯೂ ಹೀಗೇ ಆಲೋಚಿಸಿದ್ದವಳು: 'ಕೈಕೇಯಿ! ರಾಮ ಹದಿನಾಲ್ಕು ವರ್ಷಗಳಷ್ಟು ಕಾಲ ದೂರ ತೆರಳಿದರೆ ಜನ ಅವನನ್ನು ಮರೆತು ನಿನ್ನ ಮಗ ಭರತನನ್ನೇ ಓಲೈಸತೊಡಗುವರು'.

ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇ ವನಮ್ ।
ರೂಢಶ್ಚ ಕೃತಮೂಲಶ್ಚ ಶೇಷಂ ಸ್ಥಾಸ್ಯತಿ ತೇ ಸುತಃ ॥ – ವಾ.ರಾ. (೨/೯/೩೧)

೩) ಹೀಗೆ ದುರ್ಯೋಧನ ಮತ್ತು ಮಂಥರೆಯರಲ್ಲಿನ ವಿಚಾರಸಾಮ್ಯ ಅವರಿಬ್ಬರೂ ಆದರ್ಶ ಧೂರ್ತದಂಪತಿಗಳು ಎಂಬುದನ್ನು ಸ್ಫುಟಪಡಿಸುವುದು.

ಭೇದಃ ಕುಲಸ್ಯ ಭವಿತಾ ಕುಲನಾಶಹೇತು-
ರಸ್ಮಾಭಿರೇಷು ಸಹಿತೇಷು ಪುರೇ ವಸತ್ಸು ।
ತಸ್ಮಾದುಪಾಯಬಲತಃ ಪ್ರತಿಯಾಪನೀಯಾ-
ಸ್ತೇ ವಾರಣಾವತಮಿತೋ ವಿಹಿತೋಽಪ್ಯುಪಾಯಃ ॥ ೨೨ ॥

ಅ: ಇವರು ನಮ್ಮೊಂದಿಗೆ ಇಲ್ಲಿಯೇ ಉಳಿದರೆ ಕುಲನಾಶಕ್ಕೆ ಕಾರಣವಾಗುವ ಮನೆತನದ ಒಡಕು ಹುಟ್ಟುವುದು ನಿಶ್ಚಯ. ಆದ್ದರಿಂದ ಉಪಾಯ ಬಲದಿಂದ ಅವರನ್ನು ಇಲ್ಲಿಂದ ವಾರಣಾವತಕ್ಕೆ ಕಳುಹಿಸುವುದೇ ಉಚಿತ. ಅದಕ್ಕೂ ನಾನೊಂದು ಉಪಾಯ ಹೂಡಿರುವೆ.

ಎ: ಪಾಂಡವರೊಂದಿಗೆ ತಾವು ಒಟ್ಟಾಗಿ ಬಾಳುವುದು ಅಸಾಧ್ಯ ಎಂಬುದು ದುರ್ಯೋಧನನ ವಿಚಾರ. ಅದು ನಿಜವೂ ಹೌದು. ಧರ್ಮಿಷ್ಠರಾಗಿ ಬೆಳಕಿನಂತಿರುವ ಪಾಂಡವರೊಂದಿಗೆ ಅಧರ್ಮಿಗಳಾಗಿ ಕತ್ತಲೆಯಂತಿರುವ ಕೌರವರು ಎಂತು ಕೂಡಿ ಬಾಳಲು ಸಾಧ್ಯ? ಬೆಳಕು ದೂರ ತೆರಳಿದರಷ್ಟೇ ಕತ್ತಲೆಗೆ ಅವಕಾಶ. ದುರ್ಯೋಧನ ಪ್ರಯತ್ನಿಸುತ್ತಿರುವುದು ಅದಕ್ಕಾಗಿಯೇ.

ವಿಷ್ಣುರ್ಜಯಂತ ಇತಿ ಶಂಭುಸಹಾಯ ಆಸ್ತೇ
ದೇವೋತ್ಸವಶ್ಚ ಸುಮಹಾನ್ ಭವಿತಾऽತ್ರ ಸುಷ್ಠು।
ಭಕ್ತಾಶ್ಚ ತೇ ಹಿ ನಿತರಾಮರಿಶಂಖಪಾಣೌ
ತ್ವಚ್ಚೋದಿತಾಃ ಸಮುಪಯಾಂತಿ ತಮುತ್ಸವಂ ದ್ರಾಕ್ ॥ ೨೩ ॥

ಅ: ವಿಷ್ಣುವು ಜಯಂತ ಎಂಬ ಹೆಸರಿನಿಂದ ಶಿವನೊಂದಿಗೆ ಆ ವಾರಣಾವತದಲ್ಲಿ ನೆಲೆಸಿರುವನು. ಅಲ್ಲಿ ಚೆನ್ನಾದ ದೊಡ್ಡ ದೇವತಾ ಉತ್ಸವವೊಂದು ನಡೆಯಲಿದೆ. ಪಾಂಡವರು ಚಕ್ರಶಂಖಪಾಣಿಯಾದ ವಿಷ್ಣುವಿನಲ್ಲಿ ತುಂಬಾ ಭಕ್ತರಾದವರು. ನೀನು ಹೇಳಿದರೆ ಅವರೆಲ್ಲ ಕೂಡಲೆ ಆ ಉತ್ಸವಕ್ಕೆ ತೆರಳುವರು.

ಎ: ೧) ವಾರಣಾವತ ಇಲ್ಲಿಯ ಉಲ್ಲೇಖದಂತೆ ಜಯಂತ ಎಂಬ ಹೆಸರಿನ ವಿಷ್ಣುವಿನ ಕ್ಷೇತ್ರ. ಅಲ್ಲಿ ಶಿವಾಲಯವೂ ಇದ್ದ ಉಲ್ಲೇಖ ಇದರಿಂದ ತಿಳಿಯುವುದು. ಚಕ್ರಶಂಖಪಾಣಿಯಾದ ವಿಷ್ಣು

---

೨೨. ಭೇದಃ ದ್ವೈಧೀಭಾವಃ ವಿರೋಧ ಇತ್ಯರ್ಥಃ – (ಜ.)

೨೨. ವಿಹಿತೋऽಪ್ಯಪಾಯ ಇತ್ಯತ್ರ ಅಯಮುಪಾಯಃ ವಿಹಿತೋऽಪಿ ಅಸ್ಮನ್ನಗರಸಮಾನನಗರದಾನಾದಿತ್ಯರ್ಥಃ ॥ – (ವಾ.)

೨೨. ಪಶುಪತೇರ್ನಗರೇ ವಾರಣಾವತೇ – ಇತಿ ಭಾರತೇ (ಆದಿ. ೧೪೨/೩)

೨೩. ವಿಷ್ಣುರ್ಜಯಂತ ಇತಿ ಶಂಭುಸಹಾಯ ಆಸ್ತ ಇತ್ಯತ್ರ ಅತ್ರ = ವಾರಣಾವತೇ ಶಂಭುಸಹಾಯಃ ಜಯಂತನಾಮಕಃ ವಿಷ್ಣುರಾಸ್ತೇ ವಿಷ್ಣೋರ್ದೇವಾಲಯಃ ಶಂಭೋರ್ದೇವಾಲಯಶ್ಚಾಸ್ತೀತ್ಯರ್ಥಃ ॥ – (ವಾ.)

೨೩. ಜಯಂತ ಇತಿ ಮೂರ್ತ್ಯಾ ಶಂಭುಃಸಹಾಯಃ ಶಿವಪ್ರತಿಮಾಸಹಾಯೋ ಯಸ್ಯ ಸ ತಥೋಕ್ತಃ – (ಜ.)

೨೩. ಶಿವಪ್ರತಿಮಾಸಹಾಯೋ ಯಸ್ಯ ಸ ತಥೋಕ್ತಃ। – (ವ.)

ಎಂಬ ಇಲ್ಲಿಯ ಮಾತಿನ ಮೂಲಕ ಅಲ್ಲಿಯ ವಿಷ್ಣುಮೂರ್ತಿ ಚಕ್ರ, ಶಂಖ ಧರಿಸಿದ ಮೂರ್ತಿ ಎಂದು ತಿಳಿಯುವಂತಿದೆ.

೨) ಇಷ್ಟೆಲ್ಲ ಯೋಜನೆಗೆ ರೂಪ ಕೊಡಬೇಕಾದ ಮುಖ್ಯ ವ್ಯಕ್ತಿ ಧೃತರಾಷ್ಟ್ರ ಎಂಬದು ದುರ್ಯೋಧನನ ವಿಚಾರ. ತನ್ನ ಮಾತಿನಿಂದ ಪಾಂಡವರೆಂದೂ ಹಾಗೆ ತೆರಳಲಾರರು. ದೊಡ್ಡಪ್ಪ–ನೆಂದ ಕಾರಣದಿಂದ ಪಾಂಡವರು ಧೃತರಾಷ್ಟ್ರನ ಮೇಲೆ ಗೌರವವಿರಿಸಿಕೊಂಡಿದ್ದರಿಂದ ಅವನು ಹೇಳಿದರೆ ಪಾಂಡವರು ನಿಶ್ಚಿತವಾಗಿ ಅಲ್ಲಿಗೆ ತೆರಳುವರು ಎಂಬುದು ಅವನ ಯೋಜನೆ. ಅದಕ್ಕಾಗಿಯೇ ಅವನು ಇಷ್ಟೆಲ್ಲಾ ಮಾತುಗಳನ್ನು ಆಡುತ್ತಿರುವನು ಎಂಬುದು ಸ್ಪಷ್ಟ.

೩) ಹಿರಿಯರನ್ನು ಹೇಗೆ ಇಂತಹ ಧೂರ್ತಜನ ತಮ್ಮ ಕಪಟೋಪಾಯಗಳಿಗೆ ದುರ್ಬಳಕೆ ಮಾಡಿಕೊಳ್ಳುವರು ಎಂಬುದಕ್ಕೆ ಇದು ಒಂದು ಉತ್ತಮ ನಿದರ್ಶನ.

ಅಜ್ಞಾಪ್ಯ ಮತ್ಪುರುಷತಾಂ ಪುರುಷೈರ್ಮದೀಯೈ–
ರ್ಮಧ್ಯಸ್ಥವದ್ಬಹುಗುಣಾ ಉದಿತಾಶ್ಚ ತತ್ರ ।
ತೇಷಾಂ ಪುರೋಽತ್ರ ಗಮನಾಭಿರುಚಿಶ್ಚ ಜಾತಾ
ದ್ರಷ್ಟುಂ ಪುರಂ ಬಹುಗುಣಂ ನನು ಪಾಂಡವಾನಾಮ್ ॥ ೨೪ ॥

ಅ: ನನ್ನವರೆಂಬುದನ್ನು ತಿಳಿಸಿಕೊಡದೆ ನನ್ನ ಜನ ಮಧ್ಯಸ್ಥರಂತೆ ಅವರ ಮುಂದೆ ಅಲ್ಲಿಯ ಉತ್ಸವದ ಬಗ್ಗೆ ಬಹಳವಾಗಿ ವರ್ಣಿಸಿರುವರು. ಅವರಿಗೆ ಅಂತಹ ಬಹುಗುಣ ಉಳ್ಳ ಪಟ್ಟಣವನ್ನು ನೋಡಲು ಈಗ ಅಭಿಲಾಷೆಯೂ ಹುಟ್ಟಿದೆ'.

ವಿ: ೧) ಆ ಉತ್ಸವದ ಬಗ್ಗೆ ತನ್ನ ಜನರ ಮೂಲಕ ಪಾಂಡವರ ಮುಂದೆ ಬಹಳವಾಗಿ ವರ್ಣಿಸಿ ಅವರಿಗೆ ಆ ಉತ್ಸವಕ್ಕೆ ತೆರಳಲೇಬೇಕೆಂಬ ಕಾತರ ಹುಟ್ಟುವಂತೆ ಮಾಡಿದ್ದೇನೆ ಎಂದು ದುರ್ಯೋ–ಧನ ಹೇಳಿಕೊಳ್ಳುತ್ತಿರುವನು. ಪಾಂಡವರ ದೈವಭಕ್ತಿ ಉತ್ಸವಾಭಿಲಾಷೆಗಳ ದುರ್ಲಾಭ ಪಡೆಯು–ವುದು ದುರ್ಯೋಧನನ ಯೋಜನೆ.

---

೨೪. ಅಜ್ಞಾಪ್ಯ ಮತ್ಪುರುಷತಾಮಿತ್ಯತ್ರ ಮತ್ಪುರುಷತಾಂ ಮಮ ಪುರುಷತಾಂ ಅಜ್ಞಾಪ್ಯ= ಪಾಂಡವಾನ್ ಪ್ರತ್ಯಜ್ಞಾಪಯಿತ್ವಾ ತೇಷಾಂ= ಪಾಂಡವಾನಾಂ ಪುರಃ= ಪುರತಃ ॥ – (ವಾ.)

ಅಜ್ಞಾಪ್ಯ ತೇ ಯಥಾ ನ ಜಾನಂತಿ ತಥಾ ಕೃತ್ವೇತಿ ಯಾವತ್ । – (ವ.)

೨) ಆಸ್ತಿಕರ ಆಸ್ತಿಕ್ಯವನ್ನೇ ತಮ್ಮ ವಿವಂಚನೆಗೆ ಗಾಳವನ್ನಾಗಿಸಿಕೊಳ್ಳುವುದು ಸಹ ಇಂತಹ ಧೂರ್ತರ ರೀತಿ. ಆದರೆ, ಪೂರ್ಣಪ್ರಜ್ಞನಾದ ಭೀಮ ಮೊದಲಾದ ಪಾಂಡವರು ಎಂದೂ ಇಂತಹ ಕುತಂತ್ರಗಳಿಗೆ ಬಲಿಯಾಗುವವರಲ್ಲ ಎಂಬುದನ್ನು ಮರೆಯಬಾರದು.

ಇತ್ಯುಕ್ತವತ್ಯಥ ಸುತೇ ಸ ತಥೇತ್ಯುವಾಚ
ಪ್ರಾಪ್ತೇಷು ಪಾಂಡುತನಯೇಷು ತಥೈವ ಚೋಚೇ ।
ಜ್ಞಾತ್ವೈವ ತೇಽಪಿ ನೃಪತೇರ್ಹೃದಯಂ ಸಮಸ್ತಂ
ಜಗ್ಮುಃ ಪಿತೇತಿ ಪೃಥಯಾ ಸಹ ನೀತಿಹೇತೋಃ ॥ ೨೫ ॥

ಅ: ಮಗನು ಹೀಗೆ ನುಡಿಯಲು ಧೃತರಾಷ್ಟ್ರ ಹಾಗೇ ಆಗಲಿ ಎಂದು ಹೇಳಿದ. ಪಾಂಡವರು ತನ್ನ ಬಳಿ ಬಂದಾಗ ಅವರ ಮುಂದೆ ಹಾಗೆಯೇ ಹೇಳಿದ ಸಹ; ಅವರು ಅವನ ಮನಸ್ಸನ್ನು ಚೆನ್ನಾಗಿ ತಿಳಿದು ಅವನು ತಮ್ಮ ದೊಡ್ಡಪ್ಪ ಎಂಬ ಗೌರವಭಾವದಿಂದ ನೀತಿಯ ರಕ್ಷಣೆಗಾಗಿ ತಾಯಿಯಾದ ಕುಂತಿಯೊಂದಿಗೆ ವಾರಣಾವತಕ್ಕೆ ಹೊರಟು ನಿಂತರು.

ವಿ: ೧) ದುರ್ಯೋಧನನ ವಂಚನೆಗೆ ಬಲಿಯಾದ ಧೃತರಾಷ್ಟ್ರ ಅವನ ಮಾತುಗಳಿಗೆ ಸಮ್ಮತಿಸಿದ. ಪಾಂಡವರು ಎಂದಿನಂತೆ ತನ್ನ ಬಳಿ ನಿತ್ಯದಂತೆ ಗೌರವ ಸಲ್ಲಿಸಲೆಂದು ಬಂದಾಗ ಅವರಿಗೆ ವಾರಣಾವತಕ್ಕೆ ತೆರಳಲು ತಿಳಿಸಿದ.

೨) ಜ್ಞಾನಿಗಳಾದ ಪಾಂಡವರಿಗೆ ಅದರ ಹಿಂದಿನ ದುರ್ಭಾವನೆ ಸ್ಪಷ್ಟ ತಿಳಿಯಿತು. ಆದರೂ ತಂದೆಯ ಮಾತನ್ನು ಗೌರವಿಸಬೇಕು ಎಂಬ ಲೋಕದ ನೀತಿಯನ್ನು ಪಾಲಿಸಲು ಅವನ ಮಾತನ್ನು ಅಂಗೀಕರಿಸಿ ಕುಂತಿಯೊಂದಿಗೆ ವಾರಣಾವತಕ್ಕೆ ಹೊರಟು ನಿಂತರು ಎಂದರ್ಥ.

೩) ಈ ರೀತಿ ಗುರುಹಿರಿಯರ ಆದೇಶವನ್ನು ಪರಿಪಾಲಿಸುವ ಕರ್ತವ್ಯವನ್ನು ಶ್ರೀರಾಮ ಸಾರಿರುವುದು ರಾಮಾಯಣದಲ್ಲಿದೆ.

೪) ಸ್ವಂತ ತಾಯಿಯಲ್ಲದ ಕೈಕೇಯಿಯ ಮಾತನ್ನು ಶ್ರೀರಾಮ ನಡೆಸಿದರೆ, ಸ್ವಂತ ತಂದೆಯಲ್ಲದ ಧೃತರಾಷ್ಟ್ರನ ಮಾತನ್ನು ಧರ್ಮರಾಜ ನಡೆಸಿದ. ಇನ್ನು ಸ್ವಂತ ತಂದೆತಾಯಿಗಳ ಮಾತು ಅತ್ಯಂತಮಾನ್ಯವೆಂಬುದು ಕೈಮುತ್ಯಸಿದ್ಧ.

---

೨೫. ನೀತಿಹೇತೋಃ = ಪಿತೃವ್ಯವಚನಂ ಕರ್ತವ್ಯಮಿತಿ ನೀತಿಹೇತೋಃ ॥ – (ವಾ.)

ಭೀಮಸೇನನ ದಿವ್ಯಜ್ಞಾನ

ಭೀಮಸ್ತದಾಹ ಭವಿತಾऽತ್ರ ಹಿ ಭೈಕ್ಷಚಾರ
ಇತ್ಯೇವ ಸಮ್ಯಗನುವಿದ್ಯ ನಿಜಂ ನ ಕರ್ಮ ।
ತ್ಯಾಜ್ಯಂ ತ್ವಿತಿ ಪ್ರತಿಜಗಾದ ನಿಜಾಗ್ರಜಾಯ
ಯಾಮೋ ವಯಂ ನ ತು ಗೃಹಾತ್ ಸ ಹಿ ನಃ ಸ್ವಧರ್ಮಃ ॥ ೨೬ ॥

ಅ: ಭೀಮ ಆಗ ನುಡಿದ ''ನಾವು ಹಾಗೆ ಮಾಡಿದರೆ ಭಿಕ್ಷಾಟನೆ ಮಾಡಬೇಕಾಗುವುದು ಎಂಬುದನ್ನು ಹೀಗೆ ಸರಿಯಾಗಿ ತಿಳಿದು ನಮ್ಮ ಸ್ವಧರ್ಮವನ್ನು ತೊರೆಯದಿರಬೇಕು'' ಎಂದು ಅಣ್ಣನಿಗೆ ತಿಳಿಸಿದನು ಸಹ: ''ನಾವು ಈ ಪಟ್ಟಣದಿಂದ ಅಲ್ಲಿಗೆ ಹೋಗುವುದು ಬೇಡ, ಅದೇ ನಮ್ಮ ಸ್ವಧರ್ಮ''.

ವಿ: ಧರ್ಮರಾಜ ದೊಡ್ಡಪ್ಪನೆಂಬ ಗೌರವದಿಂದ ಧೃತರಾಷ್ಟ್ರನ ಮಾತನ್ನು ನಡೆಸಲು ಸಿದ್ಧನಾದ. ಆದರೆ ಭೀಮಸೇನ ಇದು ದೊಡ್ಡಪ್ಪನ ಮಾತೇ ಆದರೂ ಧರ್ಮ +ಸಮ್ಮತವಾದುದಲ್ಲ; ಆದ್ದರಿಂದ ಅದನ್ನು ಪಾಲಿಸುವುದು ಬೇಡ. ನಾವು ಇಲ್ಲಿದ್ದೇ ನಮ್ಮ ಕರ್ತವ್ಯ ಪಾಲನೆಯನ್ನು ಪರಿಪಾಲಿಸಬೇಕು ಎಂದು ಯುಧಿಷ್ಠಿರನಿಗೆ ತಿಳಿಸಿದನು. ರಾಮಾಯಣದಲ್ಲೂ ಲಕ್ಷ್ಮಣನ ಮಾತು ಇದೇ ತೆರನಾಗಿದೆ :

---

೨೬. ಅತ್ರ = ವಾರಣಾವತೇ ಭೈಕ್ಷಚಾರ ಏವ । ಭೈಕ್ಷಮನ್ನಂ ತದರ್ಥಂ ಚಾರಃ ಚರಣಂ ಭಿಕ್ಷಾಟನಮಿತ್ಯರ್ಥಃ। ನಿಜಂ ಕ್ಷತ್ರಿಯಯೋಗ್ಯಂ ಕರ್ಮ ಪರಾನ್ನಾನುಪಜೀವನಂ ನ ತ್ಯಾಜ್ಯಮಿತಿ ಸಮ್ಯಗನುವಿದ್ಯ ನಿಜಾಗ್ರಜಾಯ ತದಾ ಪ್ರತಿಜಗಾದ ಹೇತಿ ಸಂಬಂಧಃ ॥ – (ವಾ.)

೨೬. ಭೈಕ್ಷಚಾರಃ ಭಿಕ್ಷಾಚರಣಂ ಭವಿತಾ ಭವಿಷ್ಯತಿ । ಕ್ಷತ್ರಾಯೋಗ್ಯೋ ಭೈಕ್ಷ್ಯಚಾರ ಇತ್ಯರ್ಥಃ । – (ಜ.)

'ಭೀಮಸ್ತದಾಹ ಭವಿತಾऽತ್ರ ಚ ಭೈಕ್ಷಚಾರ' ಇತ್ಯೇಕಃ ಪಾಠಃ, 'ಭೀಮಸ್ತದೈವ ಭವಿತಾತ್ರ ಚ' ಇತ್ಯಪರಃ ಇತಿ ಪಾಠದ್ವಯಮ್ । ದ್ವಯೋರಪಿ ಕೋಶೇಷು ದರ್ಶನಾತ್ ವ್ಯಾಕರಣಾದಿವಿರೋಧಾಭಾವಾಚ್ಚ ಆದ್ಯೇ ತದಾಹೇತ್ಯತ್ರ ಆಹೇತಿ ನ ಪದಚ್ಛೇದಃ । ಪ್ರತಿಜಗಾದೇತ್ಯನೇನ ಪೌನರುಕ್ತ್ಯಾತ್ । ಕಿಂತು ಹೇತ್ಯೇವ ಅಥವಾ ಆದ್ಯಪಾಠೇऽಪ್ಯಾಹೇತ್ಯೇವ ಪದಚ್ಛೇದಃ । ನ ಚ ಪೌನರುಕ್ತ್ಯಮ್ । ಭಿನ್ನವಾಕ್ಯತ್ವಾತ್ । ತತ್ರ ಪೂರ್ವವಾಕ್ಯಂ ಕಂಠತೋऽನುಕೂಲಮರ್ಥತಃ ಪ್ರತಿಕೂಲಮ್ । ಅಪರಂ ಕಂಠತೋऽಪಿ ಪ್ರತಿಕೂಲಂ ತ್ಯಾಜ್ಯಂ ತ್ವಿತೀತಿ ಮಧ್ಯಸ್ಥ ಇತಿ ಶಬ್ದ ಏವ ಪೃಥಗ್ವಾಕ್ಯದ್ವಯೇ ಹೇತುಃ । ತಸ್ಯ ಸಮಾರ್ಥತ್ವಾತ್ ಪ್ರಕಾರಾರ್ಥತ್ವೇ ಇತ್ಯುಚಿವಾಂಸಮಿತ್ಯನೇನ ಪೌನರುಕ್ತ್ಯಾತ್ ದೇಹಲೀಪ್ರದೀಪನ್ಯಾಯೇನೋಭಯವಾಕ್ಯಪರಿಸಮಾಪ್ತೌ ಮಧ್ಯಸ್ಥ ಇತಿ ಶಬ್ದಃ । ಅಥವಾ ಭೀಮಸ್ತದಾತ್ರ ವಾರಣಾವತೇ ಭೈಕ್ಷ್ಯಚಾರೋ ಭವಿತೇತ್ಯನೇನ ಸಮ್ಯಗನುವಿದ್ಯ ನಿಜಂ ಕರ್ಮ ನ ತ್ಯಾಜ್ಯಂ ತ್ವಿತಿ ಆಹ– ನ ಕೇವಲಮನ್ಯಾನ್ ಪ್ರತಿ ಉಕ್ತ್ವಾ ತೂಷ್ಣೀಮಾಸ । ಕಿಂತು ನಿಜಾಗ್ರಜಾಯ ಪ್ರತಿಜಗಾದ ಚೇತಿ ಕಥಮೇತದಿತಿ ಉತ್ತರವಾಕ್ಯಂ ಸರ್ವಂ ಚ ಶಬ್ದಬಲಲಭ್ಯಂ ಯಸ್ಮಿನ್ ಕೋಶೇ ಚ ಚಶಬ್ದಾಭಾವಸ್ತತ್ರ ಹಿಶಬ್ದಶ್ಚಶಬ್ದಾರ್ಥಃ। – (ತಿ.)

\+ ಗುರೂಕ್ತಮಪಿ ನ ಗ್ರಾಹ್ಯಂ ಯದನರ್ಥೇऽರ್ಥಕಲ್ಪನಮ್ ॥ – ಭಾಗವತ (೭/೬/೨)

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್ ॥ –ವಾ.ರಾ. (೨/೨೧/೧೩)

ನಿಷ್ಕಾಸಯಂತಿ ಯದಿ ನೋ ನಿಜಧರ್ಮಸಂಸ್ಥಾನ್
ಯೋತ್ಸ್ಯಾಮಹೇಽತ್ರ ನ ಹಿ ದಸ್ಯುವಧೋಽಪ್ಯಧರ್ಮಃ ।
ಇತ್ಯೂಚಿವಾಂಸಮಮುಮಾಹ ಸ ಧರ್ಮಸೂನುಃ
ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ ॥ ೨೭ ॥

ಅ: ''ಸ್ವಧರ್ಮದಲ್ಲಿ ನಿರತರಾದ ನಮ್ಮನ್ನು ಅವರು ದೂರ ಕಳುಹಿಸುವುದಿದ್ದಲ್ಲಿ ನಾವು ಇಲ್ಲಿಯೇ ಯುದ್ಧ ಮಾಡೋಣ. ಕಳ್ಳರನ್ನು ವಧಿಸುವುದು ಅಧರ್ಮವಲ್ಲವಷ್ಟೆ!'' - ಹೀಗೆ ನುಡಿದ ಭೀಮನಿಗೆ ಯುಧಿಷ್ಠಿರ ನುಡಿದ : ''ಗುರುಗಳೊಂದಿಗೆ ವಿರೋಧ ಮಾಡಿದರೆ ನಮ್ಮ ಕೀರ್ತಿಗೆ ಕಳಂಕ ತಟ್ಟುವುದಲ್ಲವೆ!''.

ವಿ: ೧) ಬಲಾತ್ಕಾರದಿಂದ ಅವರು ಕಳುಹಿಸಲು ಇಷ್ಟಪಟ್ಟಲ್ಲಿ ಆಗ ಅದನ್ನು ಪ್ರತಿಭಟಿಸಿ ಯುದ್ಧ ಮಾಡುವುದೇ ಸ್ವಧರ್ಮ. ದುಷ್ಟರ ವಧೆ ಅಧರ್ಮ ಎನ್ನಿಸದು ಎಂಬುದು ಭೀಮನ ವಿಚಾರಸರಣಿ.

೨) ಮುಂದೆ ಗೀತೆಯಲ್ಲಿ ಶ್ರೀಕೃಷ್ಣ ನೀಡುವ ಉಪದೇಶವೂ ಇಂತಹುದೇ. ಇದು ಶ್ರೀಕೃಷ್ಣ ಭೀಮರ ಅಭಿಪ್ರಾಯಸಾಮ್ಯಕ್ಕೆ ದ್ಯೋತಕ :

ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ। –ಗೀತಾ(೨/೩೧)

ಇತ್ಯುಕ್ತವಾಕ್ಯಮಮುಮಗ್ರಜಮನ್ವಗಾತ್ ಸ
ಭೀಮಃ ಪ್ರದರ್ಶ್ಯ ನಿಜಧರ್ಮಮಥಾನುವೃತ್ತ್ಯೈ ।
ದೋಷೋ ಭವೇದುಭಯತೋ ಯತ ಏವ ತೇನ
ವಾಚ್ಯಃ ಸ್ವಧರ್ಮ ಉತ ನ ಸ್ಥಿರತ್ರ ಕಾರ್ಯಾ ॥ ೨೮ ॥

---

೨೭. ಸ್ವಧರ್ಮಾನುಕ್ತೌ ಸ್ವಧರ್ಮಹಾನಿಃ । ಪುರ ಏವಾವಸ್ಥಾನೇಽಗ್ರಜಾನುವೃತ್ಯಭಾವದೋಷ ಇತ್ಯುಭಯತೋ ದೋಷೋ ಭವೇದಿತ್ಯರ್ಥಃ । –(ತಾ.)

೨೭. ನೋಽಸ್ಮಾನ್ನಿಷ್ಕಾಲಯಂತಿ ಬಲಾನ್ನಿಃಸಾರಯಿಷ್ಯಂತಿ । –(ಜ.)

೨೭. ಕೇವಲಂ ಕೀರ್ತ್ಯರ್ಥಂ ಗಮನೇ ನಿಜಧರ್ಮಹಾನಿಪ್ರಾಪ್ತೇಃ ಅಗ್ರಜವಚನಾದ್ಗಮನೇಽಧರ್ಮಕೀರ್ತಿಲಕ್ಷಣ-ದೋಷದ್ವಯಪರಿಹಾರಾತ್ । –(ತಾ.)

ಅ: ಹೀಗೆ ನುಡಿದ ಅಣ್ಣನನ್ನು ಭೀಮಸೇನ ಅನುಸರಿಸಿದ. ಭೀಮ ಮೊದಲು ಹೇಳಿದ್ದು ಸ್ವಧರ್ಮವನ್ನು ಪಾಲಿಸುವುದು ಕರ್ತವ್ಯ ಎಂದು. ಈಗ ಮಾಡಿದ್ದು ಅನುಸರಣೆಯನ್ನು. ಸ್ವಧರ್ಮವನ್ನು ಹೇಳದಿರುವುದೂ ತಪ್ಪು, ಅಣ್ಣನ ಅಪ್ಪಣೆಯನ್ನು ಮೀರುವುದೂ ಅಯುಕ್ತ. ಅದರಿಂದ ಸ್ವಧರ್ಮವನ್ನು ತಿಳಿಸಲೇ ಬೇಕು, ಆದರೆ ದೊಡ್ಡವರ ಮಾತಿಗೆ ವಿರುದ್ಧವಾಗಿ ವರ್ತಿಸಲೂ ಬಾರದು ಎಂಬುದು ಭೀಮನ ಚಿಂತನೆ.

ವಿ: ೧) ದೊಡ್ಡವರು ಧರ್ಮ ತಪ್ಪಿದಾಗ ನಡೆದುಕೊಳ್ಳಬೇಕಾದ ರೀತಿಯನ್ನು ಭೀಮ ಇಲ್ಲಿ ತಿಳಿಸಿಕೊಟ್ಟಿರುವನು. ಅಂತಹ ಪ್ರಸಂಗದಲ್ಲಿ ಸರಿಯಾದ ಧರ್ಮವನ್ನು ತಿಳಿಸುವುದು ಕರ್ತವ್ಯ. ಅದನ್ನು ಅವರು ಒಪ್ಪದೇ ತಮ್ಮನ್ನೇ ಅನುಸರಿಸಲು ಹಟ ಹಿಡಿದಲ್ಲಿ ಹಾಗೆ ಅನುಸರಿಸುವುದೇ ಕರ್ತವ್ಯ. ಇದೊಂದು ವಿಶಿಷ್ಟವಾದ ಧರ್ಮಸೂಕ್ಷ್ಮ ಎಂದು ತಿಳಿಯಬೇಕು.

೨) ಮುಂದೆ ದ್ಯೂತ ಸಂದರ್ಭದಲ್ಲೂ ಸಹ ಧರ್ಮರಾಜನ ತಪ್ಪನ್ನು ಭೀಮಸೇನ ತೋರಿಸುತ್ತಲೇ ಅವನ ರೀತಿಯನ್ನು ಅನುಸರಿಸಿ ನಡೆದದ್ದು ಸಹ ಇದೇ ಧರ್ಮಸೂಕ್ಷ್ಮದ ಹಿನ್ನೆಲೆಯಲ್ಲಿ ಎಂದು ತಿಳಿಯಬೇಕು.

ಧರ್ಮರಾಜ ಅಣ್ಣನೇಕೆ?

ಕೀರ್ತ್ಯರ್ಥಮೇವ ನಿಜಧರ್ಮಪರಿಪ್ರಹಾಣೇ
ಪ್ರಾಪ್ತೇऽಗ್ರಜಸ್ಯ ವಚನಾತ್ ಪ್ರತಿಹಾತುಮೇವ ।
ಭೀಮಸ್ಯ ದೋಷಮುಭಯಂ ಪ್ರತಿಹಾತುಮೀಶೋ
ಜ್ಯೇಷ್ಠಂ ಚಕಾರ ಹರಿರತ್ರ ಸುತಂ ವೃಷಸ್ಯ ॥ ೨೯ ॥

---

೨೮. ದೋಷೋ ಭವೇದುಭಯತ ಇತ್ಯತ್ರ ಉಭಯತಃ ಜ್ಞಾತಧರ್ಮಸ್ಯಾಕಥನಾತ್ ಅಗ್ರಜವಾಕ್ಯೋಲ್ಲಂಘನಾಚ್ಚ ದೋಷೋ ಭವೇದಿತ್ಯರ್ಥಃ ॥ – (ವಾ.)

೨೮. ಜ್ಞಾತ್ವಾ ಸ್ವಧರ್ಮಾನಿರೂಪಣಾತ್ ಜ್ಯೇಷ್ಠಾನನುವೃತ್ತೇಶ್ಚೇತ್ಯುಭಯತೋ .... । – (ಜ.)

೨೯. ಈಶೋ ಹರಿಃ ಅತ್ರಾಸ್ಮಿನ್ ಲೋಕೇ ನಿಜಧರ್ಮಪರಿಪ್ರಹಾಣೇ ಪ್ರಾಪ್ತೇ ಸತಿ ಭೀಮಸ್ಯ ಕೀರ್ತ್ಯರ್ಥಂ ಅಗ್ರಜಸ್ಯ ವಚನಾದೇವ ಪ್ರತಿಹಾತುಂ = ನಿಜಧರ್ಮಂ ಪ್ರತಿಹಾತುಂ ಅತ ಏವ ಭೀಮಸ್ಯೋಭಯಂ ದೋಷಂ= ಧರ್ಮಾತಿಕ್ರಮದೋಷಂ ಅಗ್ರಜಾತಿಕ್ರಮದೋಷಂ ಚ ಪ್ರತಿಹಂತುಂ ವೃಷಸ್ಯ = ಧರ್ಮಸ್ಯ ಸುತಂ ಜ್ಯೇಷ್ಠಮೇವ ಚಕಾರ ॥ – (ವಾ.)

೨೯. ಪಿತೃವ್ಯೋಲ್ಲಂಘನೇನ ಕೀರ್ತಿನಾಶಃ ಗಮನೇ ಸ್ವಧರ್ಮತ್ಯಾಗಃ ಇತ್ಯುಭಯಂ ದೋಷಮ್ .... । – (ಜ.)

ಅ: ಸ್ವಧರ್ಮ ತೊರೆಯುವ ಪ್ರಸಂಗ ಒದಗಿದಾಗ ಅದನ್ನು ಅಣ್ಣನ ಮಾತಿನಿಂದ ಪರಿಹರಿಸಿಕೊಂಡು ಭೀಮನಿಗೆ ಎರಡು ದೋಷವೂ ಬಾರದಿರಬೇಕು ಎಂದು ಶ್ರೀಹರಿಯು ಆತನಿಗೆ ಧರ್ಮರಾಜನನ್ನು ಅಣ್ಣನನ್ನಾಗಿ ಮಾಡಿದ.

ವಿ: ಭೀಮು ತಮ್ಮನಾಗದೇ ಅಣ್ಣನಾಗಿದ್ದು ಯುಧಿಷ್ಠಿರನೇ ತಮ್ಮನಾಗಿದ್ದಲ್ಲಿ ಏನಾಗುತ್ತಿತ್ತು ಎಂಬ ರೋಚಕ ಚಿಂತನೆಯನ್ನು ಇಲ್ಲಿ ವಿಶ್ಲೇಷಿಸಿರುವರು. ಚಿಕ್ಕವರಾದವರು ಧರ್ಮ ಹೇಳುವುದು ಕರ್ತವ್ಯ, ಆದರೆ ತೀರ್ಮಾನ ದೊಡ್ಡವರದೇ. ತಾನೇ ದೊಡ್ಡವನಾದಾಗ ಹಾಗಲ್ಲ, ತೀರ್ಮಾನ ಧರ್ಮಕ್ಕನುಗುಣವಾಗಿಯೇ ಇರುವಂತೆ ನೋಡಿಕೊಂಡು ಅದರಂತೆ ನಡೆಯಲೂ ಬೇಕಾಗುವುದು. ಎಂದರೆ ಭೀಮು ಅಣ್ಣನಾಗಿದ್ದರೆ ಸ್ವಧರ್ಮವನ್ನು ಹೇಳುವುದನ್ನು ಮಾತ್ರವಲ್ಲದೇ ಅನುಸರಿಸಿ ತೋರಿಸುವುದನ್ನೂ ಮಾಡಬೇಕಾಗುತ್ತಿತ್ತು, ಅದಕ್ಕೆಂದೇ ಶ್ರೀಹರಿ ಭೀಮನನ್ನು ತಮ್ಮನನ್ನಾಗಿ ಹುಟ್ಟಿಸಿದನು ಎಂದರ್ಥ. ಇದರ ವಿವರ ಮುಂದಿನ ಶ್ಲೋಕದಲ್ಲಿ ಬಂದಿದೆ.

ಹಂತವ್ಯತಾಮುಪಗತೇಷು ಸುಯೋಧನಾದಿ-
ಷ್ವನ್ಯೋ ವಧಾನ್ನ ಹಿ ಭವೇನ್ನಿಜಧರ್ಮ ಏವ ।
ಪೂರ್ವಂ ವಧೇ ನ ಹಿ ಸಮಸ್ತಶ ಏವ ದೋಷಾ-
ಸ್ತೇಷಾಂ ಪ್ರಯಾಂತಿ ವಿವೃತಿಂ ಚ ತದರ್ಥತೋಽಪಿ ॥ ೩೦ ॥

ಅ: ದುರ್ಯೋಧನಾದಿಗಳೆಲ್ಲ ವಧಾರ್ಹರೆನಿಸಿದಾಗ ಅವರನ್ನು ಕೊಲ್ಲುವುದರ ಹೊರತು ಬೇರಾವುದೂ ಸ್ವಧರ್ಮವೆನ್ನಿಸದು. ಹಾಗೆ ಆಗಲೇ ಕೊಂದು ಹಾಕಿದರೆ ಅವರ ಸಕಲದೋಷ-ಗಳೂ ಪ್ರಕಟವಾಗಲಾರವು ಎಂಬ ಕಾರಣದಿಂದಲೂ ಶ್ರೀಕೃಷ್ಣ ಧರ್ಮರಾಜನನ್ನೇ ಅಣ್ಣನಾಗಿಸಿದ.

ವಿ: ಭೀಮು ಅಣ್ಣನಾಗಿದ್ದರೆ ವಿಷಪ್ರಯೋಗಾದಿಗಳ ಮೂಲಕ ಆತತಾಯಿಗಳೆನ್ನಿಸಿದ ದುರ್ಯೋಧನಾದಿಗಳನ್ನು ಆಗಲೇ ಕೊಲ್ಲಬೇಕಾಗುತ್ತಿತ್ತು, ಹಾಗೆ ಕೊಂದು ಹಾಕಿದಲ್ಲಿ ಅವರ ಇನ್ನೂ ಅನೇಕಪಾಪಗಳು ಜಗತ್ತಿಗೆ ತಿಳಿಯದೇ ಕೆಲವರು ಅವರ ಬಗ್ಗೆ ಅನುಕಂಪವನ್ನು ಹೊಂದುವ

---

೩೦. ಸುಯೋಧನಾದಿಷು ಹಂತವ್ಯತಾಮುಪಗತೇಷು ಸತ್ಸು ತೇಷಾಂ ವಧಾದನ್ಯಃ ನಿಜಧರ್ಮೋ ನ ಭವೇದೇವ ಹಿ। ತಥಾಽಪಿ ಪೂರ್ವಮಿದಾನೀಂ ಅಸ್ಮದುಚ್ಚಾಟನಾಖ್ಯಾಪರಾಧಸಮಯೇ ತೇಷಾಂ ದುರ್ಯೋಧನಾದೀನಾಂ ವಧೇ ಸತಿ ತೇಷಾಂ ಸಮಸ್ತಶಃ ದೋಷಾಃ = ಉಪರಿ ಕರಿಷ್ಯಮಾಣಾಃ ಅಸ್ಮದ್ವಧಾರ್ಥಂ ಲಾಕ್ಷಾಗೃಹ-ನಿರ್ಮಾಣದ್ರೌಪದೀಕಚಗ್ರಹಣಕೃಷ್ಣಬಂಧನೋದ್ಯೋಗಾದಿವಿಷ್ಣುವೈಷ್ಣವದ್ರೋಹಾಖ್ಯದೋಷಾಃ ವಿವೃತಿಂ= ಲೋಕೇ ಪ್ರಸಿದ್ಧಿಂ ನ ಪ್ರಯಾಂತಿ ತದರ್ಥತೋಽಷ್ಟನ್ವಗಾದಿತಿ ಪೂರ್ವೇಣಾನ್ವಯಃ ॥ – (ವಾ.)

ಪ್ರಸಂಗ ಒದಗುತ್ತಿತ್ತು. ಪೂರ್ಣವಾಗಿ ಕ್ಷಮಿಸಿದ್ದಲ್ಲಿ ಅವರು ಮಾಡಿದ ಅಧರ್ಮಗಳು ಅಧರ್ಮಗಳೆಂದು ತಿಳಿಯುವುದು ಸಾಧ್ಯವಿರಲಿಲ್ಲ. ಎಂದರೆ ದುರ್ಯೋಧನಾದಿಗಳ ತಪ್ಪು ಜಗತ್ತಿಗೆ ತಿಳಿಯಲೇಬೇಕು. ಅದರೊಂದಿಗೆ ಅವರ ಪಾಪಕಾರ್ಯಗಳೆಲ್ಲಾ ಜಗತ್ತಿಗೆ ತಿಳಿಯುವಂತಾದ ಬಳಿಕವೇ ಅವರ ವಧೆ ನಡೆಯಬೇಕು. ಭೀಮ ಅಣ್ಣನಾಗಿದ್ದರೆ ಆಗಲೇ ಅವರನ್ನು ಶುದ್ಧಧರ್ಮಕ್ಕನುಗುಣವಾಗಿ ಸಂಹಾರ ಮಾಡಲೇಬೇಕಾಗುತ್ತಿತ್ತು. ಹಾಗಾಗದಿರಲಿ ಎಂಬ ಕಾರಣದಿಂದ ಶ್ರೀಹರಿ ಭೀಮನನ್ನು ತಮ್ಮನನ್ನಾಗಿ ಹುಟ್ಟಿಸಿದ. ಇದರಿಂದಾಗಿ ಕರ್ತವ್ಯ ತಿಳಿಸುವ ಪೂರ್ಣ ಅವಕಾಶವಿದ್ದರೂ ನಡೆಯುವುದು ಮಾತ್ರ ಅಣ್ಣನಾದ ಧರ್ಮರಾಜನ ಆದೇಶದಂತೆಯೇ ಎಂದಾಗುವುದು.

೨) ಇಲ್ಲವಾದಲ್ಲಿ ಆಗಲೆ ಭೀಮನಿಂದ ಕೌರವರ ವಧೆ ನಡೆದು ಮಹಾಭಾರತ ಆದಿಪರ್ವದ ಈ ಘಟ್ಟದಲ್ಲೇ ಮುಕ್ತಾಯವಾಗಿ ಹೋಗುತ್ತಿತ್ತು ಎಂದರ್ಥ. ಭೀಮನಿಗೆ ಈ ಬಗೆಯ ಹರಿಸಂಕಲ್ಪವನ್ನು ತಿಳಿಯುವ ಪರಿಜ್ಞಾನವೂ ಇದ್ದುದು ಮತ್ತೊಂದು ವಿಶೇಷ. ಇದರಿಂದಾಗಿಯೇ ಪೂರ್ಣಪ್ರಜ್ಞ ಎಂಬ ಹೆಸರು ಅವನಿಗೆ ಪೂರ್ಣವಾಗಿ ಅನ್ವಯಿಸುವುದು.

೩) ಕುಮಾರವ್ಯಾಸಭಾರತ ಕೆಲವು ಪ್ರತಿಗಳಲ್ಲಿನ ಪದ್ಯಗಳು ಇಲ್ಲಿಯ ಭಾವಾನುವಾದದಂತಿರುವುದು ಗಮನಾರ್ಹ.

ಹಿರಿಯನೀ ಧರ್ಮಜಗೆ ನೀನೆಲೆ । ನಿರುತಕಾರಣ ಪ್ರಕೃತಿಪುರುಷರ ।
ನೆಱವಣಿಗೆ ಹರಿಸಿರಿಯನಿಬ್ಬರನುಲಿದು ಭೂಗಣಕೆ ।
ಮರುತನಾತ್ಮಜ ನಿನಗೆ ಸರಿಯೀ । ಧರೆಯ ಜೀವರೊಳಾರು ಯೆಂದೊಡೆ ।
ಸರಸಿಜಾಸನಪಿತಗೆ ಬಿನ್ನಹ ಮಾಡಿದನು ಭೀಮ ॥
ಜನನ ಮೊದಲೆನಗಾಗದೇತ- । ಕ್ಕೆನಲು ಮುನಿಯಿಂತೆಂದ ಮೊದಲಲಿ ।
ಜನನವಾದರೆ ರಾಜಕಾರಿಯ ನಡೆವುದಿಲ್ಲೆಂದ ॥ – (ಆದಿ. ಸಂ.೨೨ ಶ್ಲೋ. ೨೯,೩೦)

ವಿದುರನ ಪಾಂಡವಪ್ರೇಮ

ಕ್ಷತ್ತಾಽಥ ಚಾಹ ಸುವಚೋಽಂತ್ಯಜಭಾಷಯೈವ
ಧರ್ಮಾತ್ಮಜಂ ವಿಷಹುತಾಶಭಯಾತ್ ಪ್ರತೀತಾಃ ।
ಆಧ್ವಂ ತ್ವಿತಿ ಸ್ಮ ಸ ತಥೇತಿ ವಚೋಽಭ್ಯುದೀರ್ಯ
ಪ್ರಾಯಾಚ್ಚ ವಾರಣವತಂ ಪೃಥಯಾಽನುಜೈಶ್ಚ ॥ ೩೧ ॥

ಅ: ಬಳಿಕ ವಿದುರ ಯುಧಿಷ್ಠಿರನನ್ನು ಕುರಿತು ''ಅಂತ್ಯಜಭಾಷೆಯಿಂದ ವಿಷ, ಅಗ್ನಿ ಮೊದಲಾದವುಗಳ ಭಯದಿಂದ ಸದಾ ಎಚ್ಚರದಿಂದ ಇರಿ'' ಎಂದು ತಿಳಿಸಿದ; ಯುಧಿಷ್ಠಿರನು

ಅದನ್ನು ಅರಿತು ಹಾಗೆಯೇ ಆಗಲಿ ಎಂಬ ಮಾತನ್ನಾಡಿ ತಮ್ಮಂದಿರೊಂದಿಗೂ, ತಾಯಿಯೊಂದಿಗೂ ವಾರಣಾವತಕ್ಕೆ ತೆರಳಿದ.

ವಿ: ೧) ಪಾಂಡವರು ಹಾಗೆ ಹೊರಟು ನಿಂತಾಗ ದುರ್ಯೋಧನನ ಸಂಚನ್ನೆಲ್ಲಾ ತಿಳಿದಿದ್ದ ವಿದುರ ಅದನ್ನು ಸೂಚ್ಯವಾಗಿ ಯುಧಿಷ್ಠಿರನಿಗೆ ತಿಳಿಸಿದ. ಅದನ್ನು ನೇರವಾಗಿ ತಿಳಿಸಿದ್ದಲ್ಲಿ ಅದನ್ನು ದುರ್ಯೋಧನನ ಕಡೆಯವರು ಕೇಳಿಸಿಕೊಂಡು ಅವನು ತನ್ನ ಸಂಚನ್ನು ಬದಲಾಯಿಸುವ ಸಂಭವ ಉಂಟಾಗುತ್ತಿತ್ತು; ಅಂತಹ ಸಂಚು ತನಗೆ ತಿಳಿಯದೇ ತನ್ನಿಂದಾದ ನೆರವನ್ನು ಸಲ್ಲಿಸುವುದು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಏನನ್ನೂ ತಿಳಿಸದಿದ್ದಲ್ಲಿ ಯುಧಿಷ್ಠಿರನಿಗೆ ಅಪಾಯದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವ ಅವಕಾಶ ಲಭಿಸುತ್ತಿರಲಿಲ್ಲ. ಅದಕ್ಕೇ ವಿದುರ ಹುಡುಕಿದ ಮಾರ್ಗ ಅಂತ್ಯಜಭಾಷೆ.

೨) ಇಲ್ಲಿ 'ಅಂತ್ಯಜಭಾಷೆ' ಎಂಬುದಕ್ಕೆ ಮ್ಲೇಂಛಭಾಷೆ ಎಂಬ ಅರ್ಥ ಜನಾರ್ದನೀಯದಲ್ಲಿದೆ. ಮಹಾಭಾರತದಲ್ಲಿ ಇರುವುದೂ ಹಾಗೆಯೇ. ಇಲ್ಲಿ ಮ್ಲೇಂಛಭಾಷೆ ಎಂದರೆ ಗುಹ್ಯಭಾಷೆ ಎಂದರ್ಥ. ಮೂಲಮಹಾಭಾರತದಲ್ಲಿ ಬಂದಿರುವಂತೆ ವಿದುರ ಹೇಳಿದ ಮಾತುಗಳು ಹೀಗಿವೆ :

---

೩೧. ವಿಷಹುತಾಶಭಯಾನ್ನಿಮಿತ್ತಾತ್ ಪ್ರತೀತಾಃ = ಪ್ರತೀತಿಮಂತಃ ಲಾಕ್ಷಾಗೃಹೇ ವಿಷಹುತಾಶಭಯಂ ಭವಿಷ್ಯತೀತಿ ಜಾನಾನಾಃ ಆಧ್ವಂ = ಲಾಕ್ಷಾಗೃಹೇ ಉಪವಿಶಧ್ವಂ ''ಆಸ ಉಪವೇಶನ'' ಇತಿ ಧಾತೋಃ ಲೋಟ್ಯಾತ್ಮನೇಪದೇ ಮಧ್ಯಮಪುರುಷಬಹುವಚನಮ್। ಇತಿ ಕ್ಷತ್ತಾ = ವಿದುರಃ ಅಂತ್ಯಜಭಾಷಯಾ = ಮ್ಲೇಚ್ಛಭಾಷಯಾ ಆಹೇತ್ಯನ್ವಯಃ ॥ – (ವಾ.)

೩೧. ಅಂತ್ಯಜಭಾಷಯಾ ಮ್ಲೇಂಛಭಾಷಯಾ। ತದುಕ್ತಮಾದಿಪರ್ವಣಿ –

'ಹಿತೋಪದೇಶಶ್ಚ ಪಥಿ ಧರ್ಮರಾಜಸ್ಯ ಧೀಮತಃ।
ವಿದುರೇಣ ಕೃತೋ ಯತ್ರ ಹಿತಾರ್ಥಂ ಮ್ಲೇಂಛಭಾಷಯಾ ॥' ಇತಿ। (೧/೨/೧೦೩)

ಅವದತ್ ಪಾಂಡವಾನಾಮಿತಿ ಶೇಷಃ । ದರ್ಶನಾದಿಭಾಷಾಸು ಅಂತೇ ಜಾತಾ ಅಂತ್ಯಜಾ ಅಂತಿಮಾ ಗುಹ್ಯಭಾಷಾನ್ಯಥಾ ಭವೇದಿತ್ಯುಕ್ತೇಃ ಆಪತತಃ ಪ್ರತೀತವಾಕ್ಯಾರ್ಥಾನ್ಯಾರ್ಥಯುಕ್ತಾ ಗುಹ್ಯಭಾಷಾ ನತು ಮ್ಲೇಂಛ-ಭಾಷಾ ನಹಿ ಕಕ್ಷಘ್ನಶಿರಘ್ನಶ್ಚೇತ್ಯಾದಿಮ್ಲೇಂಛಭಾಷಾ ಯತ್ತು ಭಾರತೇ ಹಿತಾರ್ಥಂ ಮ್ಲೇಂಛಭಾಷಯೇತಿ ತತ್ರ ಮ್ಲೇಂಛ ಅವ್ಯಕ್ತೇ ಶಬ್ದ ಇತಿ ಧಾತುವ್ಯಾಖ್ಯಾನಾತ್ ಅರ್ಥತೋ ಅವ್ಯಕ್ತಮ್ಲೇಂಛಭಾಷಯೇತಿ ಜ್ಞೇಯಮ್ । ಪ್ರತೀತಾಃ ಸಾವಧಾನಾಃ । ಆಧ್ವಂ ಭವದ್ಧಿತೇತ್ಯಾಹ ॥ – (ಜ.)

ಅಂತ್ಯಜಭಾಷಾ। ತದುಕ್ತಂ ಆದಿಪರ್ವಣಿ –

ಹಿತೋಪದೇಶಶ್ಚ ಪಥಿ ಧರ್ಮರಾಜಸ್ಯ ಧೀಮತಃ।
ವಿದುರೇಣ ಕೃತೋ ಯತ್ರ ಹಿತಾರ್ಥಂ ಮ್ಲೇಚ್ಛಭಾಷಯಾ ॥ ಇತಿ ಪ್ರತೀತಾಃ। – (ವ.)

೩೧. ಕಿಂಚಿಚ್ಚ ವಿದುರೇಣೋಕ್ತೋ ಮ್ಲೇಚ್ಛವಾಚಾऽಸಿ ಪಾಂಡವ ॥ – ಭಾರತ (ಆದಿ. ೧೬೪/೬)

ಕಕ್ಷಕ್ಷುಃ ಶಶಿರಘ್ನಶ್ಚ ಮಹಾಕಕ್ಷೇ ಬಲೌಕಸಃ ।
ನ ದಹೇದಿತಿ ಚಾತ್ಮಾನಂ ಯೋ ರಕ್ಷತಿ ಸ ಜೀವತಿ ॥
ನಾಚಕ್ಷುರ್ವೇತ್ತಿ ಪಂಥಾನಂ ನಾಚಕ್ಷುರ್ವಿಂದತೇ ದಿಶಃ ।
ನಾಧೃತಿರ್ಭೂತಿಮಾಪ್ನೋತಿ ಬುಧ್ಯಸ್ವೈವಂ ಪ್ರಬೋಧಿತಃ ॥
ಅನಾಪ್ತೈರ್ದತ್ತಮಾದತ್ತೇ ನರಃ ಶಸ್ತ್ರಮಲೋಹಜಮ್ ।
ಶ್ವಾವಿಚ್ಛರಣಮಾಸಾದ್ಯ ಪ್ರಮುಚ್ಯೇತ ಹುತಾಶನಾತ್ ॥...

– ಭಾರತ (ಆದಿ. ೧೪೪/೨೩-೨೫)

೩) ಅಂತ್ಯಜಭಾಷೆ ಎಂಬ ಪದವನ್ನು ಬಳಸುವ ಮೂಲಕ ಶ್ರೀಮದಾಚಾರ್ಯರು ಇದನ್ನು ಸ್ಪಷ್ಟ ಮಾಡಿರುವರು. ವಿದುರ ಹೇಳಿದ್ದು ಮ್ಲೇಂಛಭಾಷೆಯಲ್ಲೇ. ಅದರೊಂದಿಗೆ ಹೇಳುವ ಕ್ರಮ ಗುಹ್ಯಭಾಷೆಯದಾಗಿತ್ತು ಎಂದರ್ಥ.

೪) ಅಂತ್ಯಜ ಎಂದರೆ ಸಮಾಧಿ, ದರ್ಶನ ಮತ್ತು ಗುಹ್ಯ ಎಂಬ ಮೂರು ಭಾಷೆಗಳಲ್ಲಿ ಕೊನೆಯದು ಗುಹ್ಯ ಭಾಷೆ. 'ಅಂತ್ಯ' ಎಂದರೆ ಗುಹ್ಯ ಎಂದರ್ಥ, 'ಜ' ಎಂದರೆ ಅದರಿಂದ ಹುಟ್ಟುವ ಭಾಷೆ ಎಂದರ್ಥ. ಒಟ್ಟಾಗಿ ಗುಹ್ಯ ಭಾಷೆಗೆ ಸಂಬಂಧಿಸಿದ ಮಾತುಗಳು ಎಂದು ತಾತ್ಪರ್ಯ.

ವಾರಣಾವತದಲ್ಲಿ ಅರಗಿನ ಮನೆ

ತಾನ್ ಹಂತುಮೇವ ಚ ತದಾ ಧೃತರಾಷ್ಟ್ರಸೂನು-
ರ್ಲಾಕ್ಷಾಗೃಹಂ ಸಪದಿ ಕಾಂಚನರತ್ನಗೂಢಮ್ ।
ಕೃತ್ವಾಽಭ್ಯಯಾತಯದಮುತ್ರ ಚ ವಿಷ್ಣುಪದ್ಯಾಂ
ಸ್ವಾಮಾತ್ಯಮೇವ ಚ ಪುರೋಚನನಾಮಧೇಯಮ್ ॥ ೩೨ ॥

ಅ: ಅವರನ್ನೆಲ್ಲ ಕೊಲ್ಲಲೆಂದೇ ದುರ್ಯೋಧನ ಬೇಗನೆ ಚಿನ್ನ, ರತ್ನದಿಂದ ಅಡಗಿಸಲ್ಪಟ್ಟಿದ್ದ ಅರಗಿನ ಮನೆಯನ್ನು ಸಿದ್ಧಗೊಳಿಸಿ ಪಾಂಡವರನ್ನು ಅಲ್ಲಿಗೆ ಗಂಗಾನದಿಯ ಮೂಲಕ ಕಳುಹಿಸಿಕೊಟ್ಟ, ಅವರೊಂದಿಗೆ ಪುರೋಚನನೆಂಬ ತನ್ನ ಮಂತ್ರಿಯನ್ನೂ ಕಳುಹಿಸಿದ.

ವಿ: ಹಸ್ತಿನಾಪುರದಂತೆ ವಾರಣಾವತವೂ ಗಂಗಾತೀರದ ಪಟ್ಟಣ, ಅದರಿಂದ ಪಾಂಡವರನ್ನು ಅಲ್ಲಿಗೆ ಜಲಮಾರ್ಗದಲ್ಲಿ ಎಂದರೆ ನೌಕೆಯ ಮೂಲಕವಾಗಿ ಕಳುಹಿಸಿಕೊಟ್ಟ ಎಂದರ್ಥ.

---

೩೨. ಅಮುತ್ರ ಚ ವಿಷ್ಣುಪದ್ಯೇತ್ಯತ್ರ ಲಾಕ್ಷಾಗೃಹಂ ಕೃತ್ವಾ ಅಮುತ್ರ= ಲಾಕ್ಷಾಗೃಹೇ ಯದಪೇಕ್ಷಿತಂ ವಸ್ತು= ಧನಧಾನ್ಯಾದಿಕಂ ವಸ್ತು ತದಪಿ ಕೃತ್ವಾ= ಪೂರಿತಂ ಕೃತ್ವಾ ವಿಷ್ಣುಪದ್ಯಾ = ಗಂಗಯಾ ನೌಕಾದ್ವಾರಾ ಗಂಗಾಮಾರ್ಗೇಣ ಅಭ್ಯಯಾತಯತ್ = ಅಗಚ್ಛತೇತಿ ಕಾರುಭಃ ಸಹಿತಂ ಪುರೋಚನನಾಮಧೇಯಂ ಸ್ವಾಮಾತ್ಯಂ ಪ್ರೇಷಯಾಮಾಸೇತಿ ಯೋಗ್ಯಕ್ರಿಯಾಧ್ಯಾಹಾರೇಣ ಯೋಜನಾ ॥ – (ವಾ.)

ಪ್ರಹಸ್ತನೇ ಪುರೋಚನ

ಪೂರ್ವಂ ಪ್ರಹಸ್ತ ಇತಿ ಯಸ್ತ್ವಭವತ್ ಸುಪಾಪಃ
ಸೋಽಭ್ಯೇತ್ಯ ಪಾಂಡುತನಯಾನಭವಚ್ಚ ಮಂತ್ರೀ ।
ದುರ್ಯೋಧನಂ ಪ್ರತಿವಿಹಾಯ ಭವತ್ಸಕಾಶ-
ಮಾಯಾತ ಇತ್ಯವದದೇಷು ಸ ಕೂಟವಾಕ್ಯಮ್ ॥ ೩೩ ॥

ಅ: ಹಿಂದೆ ಪ್ರಹಸ್ತ ಎಂಬವನಾಗಿದ್ದ ಮಹಾಪಾಪಿ ಈಗ ಪಾಂಡವರ ಬಳಿಗೆ ಬಂದು ಅವರಿಗೆ ಮಂತ್ರಿಯಾದ. ''ದುರ್ಯೋಧನನನ್ನು ಬಿಟ್ಟು ನಿಮ್ಮಲ್ಲಿಗೆ ನಾನು ಬಂದಿರುವೆ'' ಎಂದು ಅವರ ಬಳಿ ಕಪಟ ವಾಕ್ಯವನ್ನು ನುಡಿದ.

ವಿ: ೧) ಪುರೋಚನ ರಾಮಾಯಣ ಕಾಲದಲ್ಲಿ ರಾವಣನಿಗೆ ಮಂತ್ರಿಯಾಗಿದ್ದವನು. ಇಲ್ಲಿ ದುರ್ಯೋಧನನಿಗೆ ಮಂತ್ರಿಯಾಗಿದ್ದ. ಎರಡೂ ಜನ್ಮಗಳಲ್ಲೂ ಅವನು ಆ ಕಾಲದ ಮಹಾಖಳ-ನಾಯಕರ ಮಂತ್ರಿಯಾಗಿದ್ದುದು ವಿಶೇಷ. ಇದು ಜೀವರ ಸ್ವಭಾವ ತ್ರೈವಿಧ್ಯಕ್ಕೂ ದ್ಯೋತಕ.

೨) ಪಾಂಡವರ ಬಳಿಗೆ ಬಂದ ಅವನು ದುರ್ಯೋಧನನನ್ನು ಬಿಟ್ಟು ಅವರ ಬಳಿಗೆ ಸೇವಾರ್ಥಿಯಾಗಿ ಬಂದಿರುವುದಾಗಿ ಸುಳ್ಳು ನುಡಿದು ಅವರ ಬಳಿ ಮಂತ್ರಿಯಾಗಿ ಸೇರಿಕೊಂಡ ಎಂದರ್ಥ.

೩) ರಾಮ ರಾವಣರ ಯುದ್ಧದಲ್ಲಿ ನೀಲ ಹಾಗೂ ವಿಭೀಷಣರಿಂದ ಶಿಲೆ ಹಾಗೂ ಶಕ್ತ್ಯಾಯುಧದಿಂದ ಹತನಾಗಿದ್ದ ಅವನು ಪ್ರಹಸ್ತನಾಗಿ ಹುಟ್ಟಿ ಪಾಂಡವರನ್ನು ಸಂಹರಿಸುವ ದುರ್ಯೋಧನನ ಕಾರ್ಯಕ್ಕೆ ನೆರವಾಗಲು ಪ್ರಯತ್ನಿಸುತ್ತಿದ್ದ ಎಂದು ತಿಳಿಯಬೇಕು.

ದಿವ್ಯಂ ಗೃಹಂ ಚ ಭವತಾಂ ಹಿ ಮಯೋಪನೀತಂ
ಪ್ರೀತ್ಯೈವ ಪಾಪಮನುಯಾತುಮಹಂ ನ ಶಕ್ತಃ ।
ಯುಷ್ಮಾಸು ಧರ್ಮಧೃತಿಮತ್ಸು ಸದಾ ನಿವತ್ಸ್ಯ
ಇತ್ಯೂಚಿವಾಂಸಮಮುಮಾಹುರಹೋ ಸುಭದ್ರಮ್ ॥ ೩೪ ॥

---

೩೩. ಸ ಕೂಟವಾಕ್ಯಮಿತ್ಯತ್ರ ಕೂಟವಾಕ್ಯಮ್ = ಛದ್ಮವಾಕ್ಯಮ್ 'ಕೈತವಂ ಕಪಟಂ ಕೂಟಮ್' ಇತಿ ಹಲಃ ॥ – (ಪಾ.)

೩೩ ಪರಿವಿಹಾಯ – (ಪಾಠಾಂತರ)

ಅ: ''ದಿವ್ಯವಾದ ಈ ಮನೆಯನ್ನು ನಾನು ನಿಮಗಾಗಿ ಪ್ರೀತಿಯಿಂದ ಸಿದ್ಧಪಡಿಸಿರುವೆ. ಆ ಪಾಪಿಯನ್ನು ಅನುಸರಿಸಿ ಬದುಕುವುದು ನನ್ನಿಂದ ಸಾಧ್ಯವಾಗಲಿಲ್ಲ, ಧರ್ಮದಲ್ಲಿ ಸದಾ ನಿರತರಾದ ನಿಮ್ಮ ಬಳಿ ಸದಾ ಇರುವೆ'' ಎಂದು ನುಡಿದ ಅವನಿಗೆ ಅವರು ''ಓಹೋ, ತುಂಬಾ ಒಳ್ಳೆಯದು'' ಎಂದರು.

ವಿ: ಪಾಂಡವರು ವಾರಣಾವತವನ್ನು ಪ್ರವೇಶಿಸಿ ಹತ್ತು ದಿನಗಳು ಕಳೆಯುವಷ್ಟರಲ್ಲಿ ಅರಗಿನ ಮನೆ ಸಿದ್ಧವಾಗಿ ಅದರೊಳಗೆ ಪಾಂಡವರು ಪ್ರವೇಶಿಸುವಂತೆ ವ್ಯವಸ್ಥೆಯನ್ನು ಮಾಡಲಾಗಿತ್ತು ಎಂದು ಮಹಾಭಾರತದಲ್ಲಿದೆ :

ದಶರಾತ್ರೋಷಿತಾನಾಂ ತು ತತ್ರ ತೇಷಾಂ ಪುರೋಚನಃ ।
ನಿವೇದಯಾಮಾಸ ಗೃಹಂ ಶಿವಾಖ್ಯಮಶಿವಂ ತದಾ ॥ – (ಆದಿ. ೧೪೫/೧೧)

ದೃಷ್ಟ್ವೈವ ಜಾತುಷಗೃಹಂ ವಸಯಾ ಸಮೇತಂ
ತದ್ಗಂಧತೋ ವೃಷಸುತಃ ಪವಮಾನಜಾತಮ್ ।
ತಂ ಚಾತಿಪಾಪಮವದತ್ ಸುಮುಖೈಷ ಪಾಪೋ
ಹಂತುಂ ನ ಇಚ್ಛತಿ ಸದಾ ಭವ ಚ ಪ್ರತೀತಃ ॥ ೩೫ ॥

ಅ: ಕೊಬ್ಬಿನೊಂದಿಗೆ ನಿರ್ಮಿತವಾಗಿದ್ದ ಅದನ್ನು ನೋಡುತ್ತಲೇ ಅದರ ವಾಸನೆಯಿಂದ ಧರ್ಮರಾಜ ಅದನ್ನು ಅರಗಿನಮನೆ ಎಂದು ಅರಿತು, ವಾಯುಪುತ್ರನಾದ ಭೀಮನಿಗೆ ನುಡಿದ ''ಈ ಪುರೋಚನ ಮಹಾಪಾತಕಿ, ಸುಮುಖನಾದ ಭೀಮನೇ! ಇವನು ನಮ್ಮನ್ನು ಕೊಲ್ಲಬಯಸಿರುವನು. ಸದಾ ಜಾಗರೂಕನಾಗಿರು''.

---

೩೫. ತಂ ಚಾತಿಪಾಪಂ ದೃಷ್ಟ್ವಾ ಜ್ಞಾತ್ವಾ ಪವಮಾನಜಾತಮವದತ್ । – (ವೇ.)

೩೫. ವಸಯಾ= ಮತ್ಸ್ಯೋದರಸ್ಥಪ್ಲುತೇನ ಸಮೇತಂ ಜತು= ಲಾಕ್ಷಾ ತದ್ವಿಕಾರರೂಪಂ ಗೃಹಂ= ಜಾತುಷಗೃಹಮ್ । ''ಜತು ತ್ರಪುವಿಕಾರೇ ತು ಜಾತುಷಂ ತ್ರಾಪುಷಂ ತ್ರಿಷು'' ಇತ್ಯಮರಃ। ತದ್ಗಂಧತ ಏವ ದೃಷ್ಟ್ವಾ ಪವಮಾನಜಾತಂ ಪ್ರತಿ ತಂ ಪುರೋಚನಮತಿಪಾಪಮವದತ್। ಹೇ ಸುಮುಖ ಏಷಃ ಪಾಪಃ ನಃ= ಅಸ್ಮಾನ್ ಹಂತುಮಿಚ್ಛತಿ ಇತಿ ಚಾವಾದೀತ್। ತ್ವಂ ಚ ಪ್ರತೀತಃ= ಜ್ಞಾನವಾನ್ ಭವ= ಸಾವಧಾನೋ ಭವೇತಿ ಚಾವದದಿತ್ಯರ್ಥಃ ॥ – (ವಾ.)

೩೫. ವಸಯಾ ಮೇದಸಾ ಸಮೇತಂ .... ಪ್ರತೀತಃ ಸಾವಧಾನೀ ಭವ । – (ಜ.)

ವಸಯಾ ಆಚ್ಛಾದನೇ – (ತಾ.)

ಏ: ೧) ವಿದುರ ಹೇಳಿದ ಸೂಚನೆಯನ್ನು ಮನಸ್ಸಿನಲ್ಲಿಟ್ಟಿದ್ದ ಯುಧಿಷ್ಠಿರನಿಗೆ ಆ ಮನೆಯನ್ನು ನೋಡುತ್ತಲೇ ಅದರ ಮೀನಿನ ಕೊಬ್ಬಿನ ವಾಸನೆಯಿಂದಲೇ ಅದು ಅರಗಿನ ಮನೆಯೆಂದು ಅರಿವಾಯಿತು. ಅದನ್ನು ಭೀಮನಿಗೆ ಸೂಚ್ಯವಾಗಿ ತಿಳಿಸುತ್ತಾ ತಮ್ಮೆಲ್ಲರ ರಕ್ಷಣೆಗೆ ಜಾಗರೂಕನಾಗಿರು ಎಂದು ಕೇಳಿಕೊಂಡ ಎಂದರ್ಥ.

೨) ಪ್ರಾಣರಕ್ಷಣೆಗಾಗಿ ಪ್ರಾಣಾವತಾರನಾದ ಭೀಮನನ್ನೇ ಕೇಳಿಕೊಂಡ ಎಂಬ ಔಚಿತ್ಯವನ್ನು 'ಪವಮಾನಜಾತಂ' ಎಂಬ ಪದದಿಂದ ತಿಳಿಸಿರುವರು.

ವಿದುರನಿಂದ ಸುರಂಗ ನಿರ್ಮಾಣ

ಕ್ಷತ್ತಾಽಥ ನೀತಿಬಲತೋಽಖಿಲಲೋಕವೃತ್ತಂ
ಜಾನನ್ ಸ್ವಚಾರಮುಖಿತಃ ಖನಕಾಯ ಚೋಚೇ ।
ಉಕ್ತ್ವೈವ ಧರ್ಮತನಯಾಯ ಮದೀಯವಾಕ್ಯಂ
ಪೂರ್ವೋಕ್ತಮಾಶು ಕುರು ತತ್ರ ಬಿಲಂ ಸುದೂರಮ್ ॥ ೩೬ ॥

ಅ: ವಿದುರ ತನ್ನ ನೀತಿಯ ಸಾಮರ್ಥ್ಯದಿಂದಲೂ, ತನ್ನ ಗೂಢಚಾರರ ಮುಖದಿಂದಲೂ ಸಕಲ ಲೋಕವಾರ್ತೆಯನ್ನು ತಿಳಿಯುತ್ತ ಒಬ್ಬ ಸುರಂಗ ತೋಡುವವನನ್ನು ಕರೆದು ಹೇಳಿದ: ''ನೀನು ಯುಧಿಷ್ಠಿರನಿಗೆ ಹಿಂದೆ ಹೇಳಿದ ನನ್ನ ಮಾತನ್ನು ತಿಳಿಸಿ ಅಲ್ಲಿ ಬಹುದೂರದ ವರೆಗೆ ಸುರಂಗವನ್ನು ನಿರ್ಮಿಸು''.

ವಿ: ೧) ವಿದುರ ಒಬ್ಬ ಸುರಂಗ ತೋಡುವವನನ್ನು ಕರೆದು ಪಾಂಡವರಿಗೆ ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋಗಲು ಅನುಕೂಲವಾಗುವಂತೆ ಅಲ್ಲಿಂದ ಬಹುದೂರದ ವರೆಗೆ ಸುರಂಗವೊಂದನ್ನು ತೋಡಲು ಆಪ್ಪಣೆ ಮಾಡಿ ಅವನನ್ನು ಪಾಂಡವರ ಬಳಿಗೆ ಕಳುಹಿಸಿಕೊಟ್ಟ.

೨) ಅವನು ತನ್ನ ಕಡೆಯವನೆಂದು ತಿಳಿಯಲಿಕ್ಕೆ ಅನುಕೂಲವಾಗಲೆಂದು ತಾನು ಹಿಂದೆ ಅವನಿಗೆ ತಿಳಿಸಿದ್ದ ಅಂತ್ಯಜಭಾಷೆಯ ಮಾತನ್ನು ಜ್ಞಾಪಿಸಲು ಹೇಳಿದ ಎಂದರ್ಥ.

---

೩೬. ಉಕ್ತ್ವೈವ ಧರ್ಮತನಯಾಯೇತ್ಯತ್ರ ವಿಶ್ವಾಸಜನನಾಯ ಧರ್ಮತನಯಂ ಪ್ರತಿ ಪೂರ್ವೋಕ್ತಂ ಮದೀಯಂ ವಾಕ್ಯಂ ತ್ವಮಪಿ ಧರ್ಮತನಯಾಯ ಉಕ್ತ್ವೈವ ಬಿಲಂ ಕುರ್ವಿತಿ ಸಂಬಂಧಃ ॥ – (ವಾ.)

\+ ಖನನಾಯ ಚೋಚೇ – (ಜ. ಪಾಠ)

ಚಕ್ರೇ ಸ ಚೈವಮಥ ವರ್ತ್ಮವೃತಿಚ್ಛಲೇನ
ದ್ವಾರಂ ಚ ತಸ್ಯ ಸ ಪಿಧಾಯ ಯಯೌ ಗೃಹಂ ಸ್ವಮ್ ।
ಭೀಮಃ ಪುರೋಚನ ಉಭಾವಪಿ ತೌ ವಧಾಯ
ಧಿದ್ರಾರ್ಥಿನೌ ಮಿಥ ಉತೋಷತುರಬ್ದಕಾರ್ಧಮ್ ॥ ೩೭ ॥

ಅ: ಅವನು ಪ್ರಾಕಾರವೊಂದನ್ನು ನಿರ್ಮಿಸುವ ನೆಪದಿಂದ ಅಂತಹ ಸುರಂಗ ಮಾರ್ಗವನ್ನು ನಿರ್ಮಾಣ ಮಾಡಿ ಅದರ ಪ್ರವೇಶದ್ವಾರವನ್ನು ಕಾಣದಂತೆ ಮುಚ್ಚಿ ತನ್ನ ಮನೆಗೆ ಮರಳಿದ. ಭೀಮ ಮತ್ತು ಪುರೋಚನ ಇಬ್ಬರು ಒಬ್ಬರನ್ನೊಬ್ಬರು ಕೊಲ್ಲಲು ಅವಕಾಶವನ್ನು ಕಾಯುತ್ತಾ ಅರ್ಧವರ್ಷ ಕಳೆದರು.

ವಿ: ೧) ಆ ಖನಕ ತನ್ನ ಸುರಂಗ ನಿರ್ಮಾಣ ಕಾರ್ಯವನ್ನು ಪೂರೈಸಿ ಅದರ ಪ್ರವೇಶ ದ್ವಾರವನ್ನು ಕಾಣದಂತೆ ಮರೆಯಾಗಿಸಿ ವಿಷಯವನ್ನು ಪಾಂಡವರಿಗೆ ಅರಿಕೆ ಮಾಡಿ ಹಿಂದಿರುಗಿದ. ಅಂದಿನಿಂದ ಭೀಮ ಪುರೋಚನ ಇಬ್ಬರೂ ಒಬ್ಬರನ್ನೊಬ್ಬರು ಕೊಲ್ಲಲೆಂದು ಹೊಂಚು ಹಾಕತೊಡಗಿದರು. ಪುರೋಚನನು ಎಲ್ಲರು ಮಲಗಿದಾಗ ಅರಗಿನ ಮನೆಗೆ ಬೆಂಕಿಯಿಡಲೆಂದು ಕಾಯುತ್ತಿದ್ದ. ಆದರೆ, ಭೀಮ ರಾತ್ರಿಯಿಡೀ ಎಚ್ಚೆತ್ತಿದ್ದು ಒಮ್ಮೆಯೂ ಮಲಗದೇ ಕಾಯುತ್ತಿದ್ದುದರಿಂದ ಪುರೋಚನನಿಗೆ ಆ ಅವಕಾಶ ಸಿಕ್ಕದಾಯಿತು.

೨) ಅದರಂತೆ ತಾನೇ ಅರಗಿನ ಮನೆಗೆ ಬೆಂಕಿಯಿಡಲು ಸಿದ್ಧನಾಗಿ ಅಲ್ಲಿಗೆ ಸಾಯಲೆಂದು ಬರಬೇಕಿದ್ದ ಇನ್ನು ಕೆಲವು ವ್ಯಕ್ತಿಗಳಿಗಾಗಿ ಕಾಯುತ್ತಿದ್ದರಿಂದ ಭೀಮಸೇನ ಆ ಮುಂಚೆ ಬೆಂಕಿಯಿಡಲಿಲ್ಲ. ಇದರಿಂದಾಗಿ ಆರು ತಿಂಗಳ ಕಾಲ ಅರಗಿನ ಮನೆಯಲ್ಲಿ ಕಳೆಯಿತು ಎಂದರ್ಥ. ಭೀಮಸೇನ ಒಂದು ದಿನವೂ ಮಲಗದ ಗುಡಾಕೇಶ ಎಂಬ ಮಾತು ಇಲ್ಲಿ ಸ್ಫುಟಪಡುತ್ತದೆ. ಅಂದು ಮಾತ್ರವಲ್ಲದೇ ಎಂದೆಂದೂ ಪ್ರಳಯ ಕಾಲದಲ್ಲಿಯೂ ಸಹ ನಿದ್ರಿಸದಿರುವುದು ಮುಖ್ಯಪ್ರಾಣನ ವೈಶಿಷ್ಟ್ಯ ಎಂದು ಶಾಸ್ತ್ರಗಳು ಸಾರಿವೆ : **'...ಪ್ರಲಯಕಾಲೇಽಪಿ ಪ್ರತಿಭಾತಪರಾವರಃ'.**

---

೩೭. ವರ್ತ್ಮವೃತಿಚ್ಛಲೇನೇತ್ಯತ್ರ ವೃತಿಃ= ಆವರಣಂ ಗ್ರಾಮಸ್ಯ ಪ್ರಾಂತತಃ ಪ್ರಾಕಾರಃ ತಂ ಕರೋಮೀತಿ ವ್ಯಾಜೇನ ॥ – (ವಾ.)

೩೭. ವೃತ್ತಿಚ್ಛಲೇನ ವಿವೃತ್ತಿವ್ಯಾಜೇನ ರಥ್ಯಾಜಲಗಮನೋಪಯುಕ್ತವಿವರವ್ಯಾಜೇನ ವರ್ತ್ಮ ಚಕ್ರೇ । 'ವಿದುರಪೂರ್ವವಚೋಭರ್ದಾಶೋದಿತಾಭಿಃ; ಇತಿ ಲಿಂಗವ್ಯತ್ಯಯಃ ತಸ್ಯ ಪರಮವೈದಿಕತ್ವಜ್ಞಾಪನಾರ್ಥಃ । – (ತಾ.)

೩೭. ಹಿತಾರ್ಥಂ ಮ್ಲೇಂಛಭಾಷಯೇತಿ ಭಾರತವಾಕ್ಯಾತ್ । ವರ್ತ್ಮ ವೃತ್ತಿಚ್ಛಲೇನೇತ್ಯಸ್ಯ ಪ್ರಾಕಾರನಿರ್ಮಾಣವ್ಯಾಜೇನೇತಿ ವದಂತಿ । ವರ್ತ್ಮ ವೃತ್ತಿಚ್ಛಲೇನ ಮಾರ್ಗನಿರ್ಮಾಣವ್ಯಾಜೇನೇತಿ ವಾ । – (ತಿ.)

ಪುರೋಚನನ ಸೋದರಿ ಮತ್ತು ಅವಳ ಮಕ್ಕಳು

ತಸ್ಯಾಗ್ರಜಾ ಚ ಸಹಿತಾ ಸುತಪಂಚಕೇನ
ತತ್ರಾಗಮತ್ ತದನು ಮಾರುತಿರೇಷ ಕಾಲಃ ।
ಇತ್ಥಂ ವಿಚಿಂತ್ಯ ಸ ನಿಶಾಮ್ಯ ಚ ತಾನ್ ಪ್ರಸುಪ್ತಾನ್
ಭ್ರಾತೄಂಶ್ಚ ಮಾತರಮಥಾಶು ಬಿಲೇ ನ್ಯಧಾತ್ ಪ್ರಾಕ್ ॥ ೩೮ ॥

ಅ: ಪುರೋಚನನ ಅಕ್ಕ ತನ್ನ ಐವರು ಪುತ್ರರೊಂದಿಗೆ ಅಲ್ಲಿಗೆ ಆಗಮಿಸಿದಳು. ಅದೇ ಸೂಕ್ತ ಸಮಯವೆಂದು ನಿಶ್ಚಯಿಸಿದ ಭೀಮಸೇನ ಅವರೆಲ್ಲಾ ಗಾಢ ನಿದ್ರೆಯಲ್ಲಿದ್ದುದನ್ನು ಗಮನಿಸಿ ಮೊದಲಿಗೆ ಸಹೋದರರನ್ನು, ತಾಯಿಯನ್ನು ಸುರಂಗದಲ್ಲಿ ಮುಂದಕ್ಕೆ ಕಳುಹಿಸಿದ.

ವಿ: ಭೀಮು ಕಾಯುತ್ತಿದ್ದ ವ್ಯಕ್ತಿ ಪುರೋಚನನ ಅಕ್ಕ ಹಾಗೂ ಅವಳ ಐವರು ಪುತ್ರರು. ಅವರು ಅಲ್ಲಿಗೆ ಬಂದದ್ದರಿಂದ ಇನ್ನು ಅರಗಿನ ಮನೆಗೆ ಬೆಂಕಿಯಿರಿಸಿ ಅವರನ್ನೆಲ್ಲ ಸಂಹರಿಸಬೇಕೆಂದು ನಿಶ್ಚಯಿಸಿದ ಎಂದರ್ಥ.

ಅರಗಿನ ಮನೆಯ ದಹನ

ತಂ ಭಾಗಿನೇಯಸಹಿತಂ ಭಗಿನೀಂ ಚ ತಸ್ಯ
ಪಾಪಾಂ ದದಾಹ ಸಗೃಹಾಂ ಪವಮಾನಸೂನುಃ ।
ಸಾಽಪ್ಯಾಗತಾ ಹಿ ಗರಳೇನ ನಿಹಂತುಮೇತಾನ್
ಭೀಮಸ್ಯ ಪೂರ್ವಭುಜಿತೋ ನ ಶಶಾಕ ಚೈತತ್ ॥ ೩೯ ॥

ಅ: ಅವಳ ಮಕ್ಕಳೊಂದಿಗೆ ಪಾಪಿಯಾಗಿದ್ದ ಅವನ ಅಕ್ಕನನ್ನು, ಅವನನ್ನೂ ವಾಯುಪುತ್ರನಾದ ಭೀಮಸೇನ ಅರಗಿನ ಮನೆಯ ಸಮೇತ ಸುಟ್ಟು ಹಾಕಿದ. ಅವಳಾದರೂ

---

೩೮. ನಿಷಾದೀ ಪಂಚಪುತ್ರಾ ತು ತಸ್ಮಿನ್ ಭೋಜ್ಯೇ ಯದೃಚ್ಛಯಾ ।
ಅನ್ವಾರ್ಥಿನೀ ಸಮಭ್ಯಾಗಾತ್ ಸಪುತ್ರಾ ಕಾಲಚೋದಿತಾ ॥ – ಭಾರತ (ಆದಿ. ೧೪೭/೭)

ಕಾಲಃ = ರುದ್ರಃ ।

೩೯. ಪೂರ್ವಭುಜಿತಃ ಭ್ರಾತೃಭೋಜನಾತ್ ಪೂರ್ವಂ ವಿಷಮಿಶ್ರಸರ್ವಾನ್ನಭೋಜನಾತ್ । – (ವೇ.)

೩೯. ಭೀಮಸ್ಯ ಪೂರ್ವಭುಜಿತ ಇತ್ಯತ್ರ ಭೀಮಸ್ಯ ಪೂರ್ವಂ ಭುಜಿತಃ= ವಿಷಮಿಶ್ರಭಕ್ಷ್ಯಭಕ್ಷಣಾನ್ನಿಮಿತ್ತಾತ್ ಏತತ್= ವಿಷಂ ಏತಾನ್ನಿಹಂತುಂ ನ ಶಶಾಕೇತಿ ಪೂರ್ವಪದಾವೃತ್ತ್ಯಾ ಯೋಜನಾ। ಭೀಮಃ ಸ್ವಯಂ ಭುಕ್ತ್ವಾ ವಿಷಮಸ್ತೀತಿ ಜಾನನ್ ಅನ್ಯೇಷಾಂ ನ ದದೌ। ಭೀಮಸ್ಯ ಜೀರ್ಣತ್ವಾತ್ ಅನ್ಯೇಷಾಂ ಭಕ್ಷಣಸ್ಯೈವಾಭಾವಾತ್ ತದ್ದತ್ತವಿಷೇಣ ಕೋಽಪಿ ನ ಹತ ಇತಿ ಭಾವಃ ॥ – (ವಾ.)

ವಿಷ ನೀಡಿ ಅವರನ್ನೆಲ್ಲ ಕೊಲ್ಲಲೆಂದು ಬಂದಿದ್ದವಳು. ಭೀಮಸೇನ ಎಲ್ಲವನ್ನೂ ಮುಂಚಿತವಾಗಿಯೇ ತಿಂದದ್ದರಿಂದ ಅದು ಅವಳಿಗೆ ಸಾಧ್ಯವಾಗಲಿಲ್ಲ.

ವಿ: ೧) ಅವಳು ಸ್ವರೂಪತಃ ಪಾಪಿಯೇ ಎಂಬುದು ಮುಖ್ಯ ಕಾರಣವಾದರೆ, ಅವಳು ಅವರನ್ನೆಲ್ಲ ಕೊಲ್ಲಲೆಂದು ವಿಷ ಹಾಕಿದ್ದಳು ಎಂಬುದು ಅನಂತರದ ಕಾರಣ. ಆದರೆ, ಅವಳು ಹಾಕಿದ ವಿಷದ ಪದಾರ್ಥವನ್ನು ಭೀಮ ಎಲ್ಲರಿಗಿಂತ ಮುಂಚಿವಾಗಿ ಪೂರ್ಣವಾಗಿ ತಿಂದು ಹಾಕುತ್ತಿದ್ದರಿಂದ ಅವರೆಲ್ಲ ಸುರಕ್ಷಿತವಾಗಿದ್ದರು ಎಂದರ್ಥ.

೨) ಇದು ಭೀಮ ವಿಷ ಜೀರ್ಣಿಸಿಕೊಂಡ ಮತ್ತೊಂದು ಪ್ರಸಂಗ. ಭೀಮನಂತೂ ಕಾಲಕೂಟವನ್ನೇ ಅರಗಿಸಿಕೊಂಡಿದ್ದ ಅಮೃತಸ್ವರೂಪಿ; ಹೀಗೆ ಅರ್ಜುನಾದಿಗಳನ್ನು ವಿಷದ ಆಪತ್ತಿನಿಂದ ಪಾಲಿಸಿದ ಹಿರಿಮೆ ಭೀಮಸೇನನದ್ದು. ಅವಳು ಈ ರೀತಿಯಾಗಿಯೂ ಪಾತಕಿ– ಯಾಗಿದ್ದರಿಂದ ಅವಳ ಸಂಹಾರ ಅತ್ಯಂತ ಯೋಗ್ಯವಾಯಿತು ಎಂದು ತಿಳಿಯಬೇಕು.

ತಪ್ತಂ ತಯಾ ಸಸುತಯಾ ಚ ತಪೋ ನಿತಾಂತಂ
ಸ್ಯಾಂ ಸೂನುಭಿಃ ಸಹ ಬಲಾದದಿತಿಸ್ತಥಾऽಬ್ದಾತ್ ।
ತಸ್ಯಾ ಅದಾಚ್ಚ ಗಿರಿಶೋ ಯದಿ ಪುತ್ರಕೈಸ್ತ್ವಂ
ಯುಕ್ತಾ ನ ಯಾಸಿ ಮೃತಿಮೇಷ ವರಸ್ತವೇತಿ ॥ ೪೦ ॥

ಅ: ತನ್ನ ಮಕ್ಕಳೊಂದಿಗೆ ತಾನು ಅದಿತಿಯಾಗಬೇಕು ಎಂದು ಬಯಸಿ ಅವಳು ತನ್ನ ಪುತ್ರರ ಸಮೇತ ಘೋರತಪಸ್ಸನ್ನು ಮಾಡಿದ್ದಳು. ಒಂದು ವರ್ಷ ಕಳೆದಾಗ ಶಿವ ಅವಳಿಗೆ ವರ ನೀಡಿದ್ದ: ''ನಿನ್ನ ಮಕ್ಕಳೊಂದಿಗೆ ನೀನು ಸಾಯದಿದ್ದಲ್ಲಿ ನಿನಗೆ ಅಭೀಷ್ಟಸಿದ್ಧಿಯಾಗುವುದು''.

ವಿ: ೧) ಅವಳಿಗೆ ವಿಚಿತ್ರ ಬಯಕೆ ಒಂದಿತ್ತು. ತನ್ನ ಐವರು ಮಕ್ಕಳೊಂದಿಗೆ ತಾನು ಅದಿತಿ ಪದವಿಯನ್ನು ಪಡೆಯಬೇಕೆಂದು. ಅದಕ್ಕಾಗಿ ಅವಳು ಆರಾಧಿಸಿದ್ದು ಶಿವನನ್ನು.

೨) ಆ ರೀತಿಯಾಗಿ ತಮಗೆ ಸಲ್ಲದ ಪದವಿಯನ್ನು ದೇವತೆಗಳು ಅಪೇಕ್ಷಿಸಿದರೂ ಅದು ಅನುಚಿತ ಎಂಬುದು ಗೌತಮರು ಹಾಗೂ ಅಣಿಮಾಂಡವ್ಯರ ಪ್ರಸಂಗದಲ್ಲಿ ಈಗಾಗಲೇ ಉಕ್ತವಾಗಿದೆ. ಇನ್ನು ರಾಕ್ಷಸಿಯಾದ ಇವಳು ದೇವಮಾತೆಯಾದ ಅದಿತಿ ಎಂತಾದಾಳು?. ಆದ್ದರಿಂದ ಅವಳದ್ದು ಅಯೋಗ್ಯಕಾಮನೆಯ ಕ್ರೂರತಪಸ್ಸು.

---

೪೦. ಸ್ಯಾಂ ಸೂನುಭಿಃ ಸಹ ಬಲಾದದಿತಿರಿತ್ಯತ್ರ ಬಲಾತ್= ತಪೋಬಲಾತ್ ಸೂನುಭಿಃ ಸಹ ಅದಿತಿಃ ಸ್ಯಾಮಿತಿ ಸಂಬಂಧಃ। ಸೂನವಸ್ತ್ವಾಪಿ ಮತ್ಸುತಾಃ ಸಂತಃ ದೇವಾ ಭವೇಯುಃ। ಅಹಮದಿತಿಃ ಸ್ಯಾಮಿತಿ ಭಾವಃ ॥ – (ವಾ.)

೩) ಶಿವ ಆ ಜನ್ಮದಲ್ಲಿ ಅವಳು ಹಾಗೂ ಅವಳ ಮಕ್ಕಳು ಒಟ್ಟಿಗೆ ಸಾಯದಿದ್ದಲ್ಲಿ ಆ ವರ ಲಭಿಸಲಿ ಎಂದು ವರ ನೀಡಿದ. ಎಂದರೆ ಅವಳು ಹಾಗೆ ಸಾಯಲೇಬೇಕು. ಅವಳಿಗೆ ಅದಿತಿಪದವಿ ಸಿಗದಿರಲಿ ಎನ್ನುವುದು ಅವನ ಉದ್ದೇಶ. ಭೀಮ ಸರ್ವಜ್ಞ, ಇದನ್ನೆಲ್ಲ ತಿಳಿದಿದ್ದರಿಂದ ಅವರನ್ನೆಲ್ಲ ಒಟ್ಟಿಗೆ ವಧಿಸಿದರೆ ಶಿವನ ವರಕ್ಕೂ ಗೌರವ ಸಲ್ಲುವುದು. ಇವರಿಗೆಲ್ಲ ಅಧೋಗತಿಯೂ ಆಗುವುದು ಎಂದು ನಿಶ್ಚಯಿಸಿ ಹಾಗೆ ಅವರನ್ನು ಕೊಲ್ಲಲು ಕಾಯುತ್ತಿದ್ದ. ಅದರಂತೆ ಆ ಪ್ರಸಂಗ ಒದಗಲು ಹಾಗೆ ಅರಗಿನ ಮನೆಯನ್ನು ದಹಿಸುವ ಮೂಲಕ ಅವರನ್ನೆಲ್ಲ ಸುಟ್ಟು ಹಾಕಿದ ಎಂದು ತಿಳಿಯಬೇಕು.

೪) ಹೀಗೆ ದೇವತೆಗಳ ವರವನ್ನು ಸತ್ಯಮಾಡುವುದೂ ಸಹ ಭಗವಂತನಿಗೆ ಪ್ರಿಯವಾದ್ದರಿಂದ ಅದೂ ಭಗವತ್ಕಾರ್ಯಸಾಧನೆ ಎನ್ನಿಸುವುದು. ಇನ್ನು ಅಸುರಸಂಹಾರವಂತೂ ಭಗವತ್ಕಾರ್ಯವೇ ಆಗಿದೆ. ಪುರೋಚನನ ಅಕ್ಕ ಒಬ್ಬ ಬೇಡಿತಿ. ಕುಂತಿಯೊಂದಿಗೆ ಸೇವೆ ಮಾಡುವ ನೆಪದಲ್ಲಿ ಆಪತ್ತ್ವ ಬೆಳೆಸಿಕೊಂಡು ವಿಷ ನೀಡಿ ಅವರನ್ನೆಲ್ಲ ಕೊಲ್ಲುವುದು ಅವಳ ಉದ್ದೇಶವಾಗಿತ್ತು:

ಪುರೋಚನಪ್ರಣಿಹಿತಾ ಪೃಥಾಂ ಯಾ ಸೇವತೇ ಸದಾ ।
ನಿಷಾದೀ ದುಷ್ಪ್ರದಯಾ ನಿತ್ಯಮಂತರಚಾರಿಣೀ ॥ – ಕೃ. ಭಾರತ (ಆದಿ. ೧೬೦/೯)

೫) ಭೀಮಸೇನ ಒಂದು ದಿನವೂ ನಿದ್ರಿಸದೇ ಎಚ್ಚೆತ್ತು ಇರುವುದನ್ನು ಕಂಡು ತನ್ನ ಕಾರ್ಯ ಸುಗಮವಾಗಿ ನಡೆಯಬೇಕೆಂದು ಪುರೋಚನನೇ ಅವಳನ್ನು ಹಾಗೆ ಕರೆಸಿಕೊಂಡಿದ್ದ.

೬) ತನಗೆ ಯೋಗ್ಯವಲ್ಲದ ಅಮೃತ ಕುಡಿಯಬಯಸಿದ ರಾಹು ಮೋಹಿನಿಯ ಚಕ್ರಕ್ಕೆ ಮಣಿದಂತೆ, ತನಗೆ ಯೋಗ್ಯವಲ್ಲದ ಅದಿತಿಪದವಿಯನ್ನು ಬಯಸಿ ಈ ರಾಕ್ಷಸಿ ವಾಯುದೇವನಾದ ಭೀಮನಿಟ್ಟ ಬೆಂಕಿಗೆ ಆಹುತಿಯಾದಳು.

೭) ಹನುಮದ್ರೂಪದಿಂದ ಲಂಕೆಗೆ ಬೆಂಕಿಯಿಟ್ಟಿದ್ದ ವಾಯು, ಈ ಭೀಮ ರೂಪದಿಂದ ಅರಗಿನ ಮನೆಗೆ ಬೆಂಕಿಯಿಡುವ ಮೂಲಕ ತಾನು ದುಷ್ಟರ ಕಾರ್ಯಗಳಿಗೆ ಬೆಂಕಿಯಿಡುವ ಭಗವದ್ಭಕ್ತ ಎಂದು ತಿಳಿಸಿದ. ಲಂಕೆ ರಾವಣನ ಪಟ್ಟಣವಾದರೆ, ಅರಗಿನ ಮನೆ ದುರ್ಯೋಧನನು ಕಟ್ಟಿಸಿದ್ದ ಮನೆ.

೮) ಅರಗಿನ ಮನೆ ಸಾಂಸಾರಿಕಸುಖದ ಸಂಕೇತವೂ ಆಗಿದೆ. ನೋಡಲು ಅದು ಚಿನ್ನ ರತ್ನಗಳಿಂದ ಮಾಡಿದ ಭವ್ಯಗೃಹದಂತೆ ಕಾಣುತ್ತಿದ್ದರೂ, ಒಳಗೆ ಅರಗಿನಿಂದ ಕೂಡಿದ, ತತ್ಕ್ಷಣವೇ ಉರಿದುಹೋಗುವಂತಹ ಅಪಾಯಕರವಾದ ಗೃಹ. ವಿಷಯಸುಖಗಳು ಹಾಗೆಯೇ. ಮೇಲ್ನೋಟಕ್ಕೆ ತುಂಬಾ ಆಕರ್ಷಕವಾಗಿ ಕಂಡರೂ, ಅದರ ಒಳಗೆ ಯಾವ ಕ್ಷಣದಲ್ಲಿಯೂ ಸಹ ನಾಶವಾಗುವ ನಶ್ವರತೆ ತುಂಬಿರುತ್ತದೆ. ಪಾಂಡವರು ಅಲ್ಲಿದ್ದರೂ ಭೀಮನಿಂದಾಗಿ ಸುರಕ್ಷಿತರಾದರು. ಇಂತಹ

ಲೌಕಿಕಸುಖಗಳಲ್ಲಿ ಮೈಮರೆಯದೇ ಪ್ರಾಣದೇವರ ಸಿದ್ಧಾಂತವನ್ನು ನಂಬಿ ಬದುಕಿದವರಿಗೆ ಇದು ಮಾರಕವಾಗದು.

೯) ಮದ್ಯಪಾನ ಮಾಡಿ ಮಲಗಿದ್ದ ಪುರೋಚನ ಹಾಗೂ ಅವನ ಅಕ್ಕ ಮತ್ತು ಅವಳ ಮಕ್ಕಳು ಅದರಲ್ಲಿ ಉರಿದು ಹೋದರು. ವಿಷಯಸುಖಗಳ ಅನುಭವದಿಂದ ಮೈಮರೆತವರಿಗೆ ಅರಗಿನ ಮನೆಯಂತೆ ಸಂಸಾರ ಮಾರಕ ಎಂದರ್ಥ. ಅರಗಿನಮನೆಗೆ ಧರ್ಮಾದಿಗಳ ದಹನ ಸಾಧ್ಯವಾಗಲಿಲ್ಲ. ವಿಷಯಸುಖಗಳಿಂದೂ ಧರ್ಮಾದಿಗಳ ನೈಜ ಸತ್ವವನ್ನು ನಾಶಮಾಡಲಾರವು ಎಂಬುದಕ್ಕೂ ಇದು ಸಂಕೇತ. ಅರಗಿನ ಮನೆಯ ಅಧ್ಯಾತ್ಮ ಮಹಾಭಾರತದ ಅತ್ಯುತ್ತಮ ದಾರ್ಶನಿಕ ಮಹತ್ತ್ವವನ್ನು ಬಿಂಬಿಸುವ ಅಪೂರ್ವಪ್ರಸಂಗ.

ಭೀಮನ ಭೀಮಪರಾಕ್ರಮ

ಜಾನನ್ನಿದಂ ಸಕಲಮೇವ ಚ ಭೀಮಸೇನೋ
ಹತ್ವಾ ಸುತೈಃ ಸಹ ಕುಬುದ್ಧಿಮಿಮಾಂ ಹಿ ತಂ ಚ ।
ಭ್ರಾತೄಂಶ್ಚ ಮಾತರಮುದೂಹ್ಯ ಯಯೌ ಬಿಲಾತ್ ಸ
ನಿರ್ಗತ್ಯ ಭೀತಿವಶತೋಽಬಲತಾಂ ಪ್ರಯಾತಾನ್ ॥ ೪೧ ॥

ಅ: ಇದನ್ನೆಲ್ಲ ಸಂಪೂರ್ಣವಾಗಿ ತಿಳಿದಿದ್ದ ಭೀಮಸೇನ ದುಷ್ಟಬುದ್ಧಿಯವಳಾದ ಅವಳನ್ನು ಅವಳ ಮಕ್ಕಳ ಸಮೇತವಾಗಿಯೂ, ಆ ಪುರೋಚನನೊಂದಿಗೂ ಸಂಹರಿಸಿ ಸೋದರರನ್ನು, ತಾಯಿಯನ್ನು ಹೊತ್ತುಕೊಂಡು ಬಿಲದಿಂದ ಹೊರಟ. ಅವರೆಲ್ಲ ಭಯದಿಂದಾಗಿ ಅಶಕ್ತರಾಗಿದ್ದರು.

ಜ್ಞಾತ್ವಾ ಪುರೋಚನವಧಂ ಯದಿ ಭೀಷ್ಮಮುಖ್ಯೈ ೃ-
ರ್ವೈಚಿತ್ರವೀರ್ಯತನಯಾ ಅಭಿಯೋಧಯೇಯುಃ ।
ಕಿಂ ನೋ ಭವೇದಿತಿ ಭಯಂ ಸುಮಹದ್ವಿವೇಶ
ಭೀಮಂ ತ್ವೃತೇ ಚ ತನಯಾನ್ ಸಕಲಾನ್ ಪೃಥಾಯಾಃ ॥ ೪೨ ॥

---

೪೧. ಭೀತಿವಶತೋಽಬಲತಾಮಿತ್ಯತ್ರ ಭೀತಿವಶತಃ ಅಬಲತಾಂ= ಬಲರಹಿತತಾಮ್ ॥ – (ವಾ.)

ಅ: ಪುರೋಚನನ ವಧೆಯನ್ನು ಕೇಳಿ ಭೀಷ್ಮ ಮೊದಲಾದವರೊಂದಿಗೆ ಕೌರವರು ಯುದ್ಧಕ್ಕೆ ತೊಡಗಿದರೆ ತಮಗೇನಾದೀತೋ ಎಂಬ ಮಹಾಭಯ ಭೀಮನನ್ನು ಬಿಟ್ಟು ಉಳಿದೆಲ್ಲ ಪಾಂಡವರನ್ನೂ ಆವರಿಸಿತ್ತು.

ಭೀಮೋಽಭಯೋಽಪಿ ಗುರುಭಿಃ ಸ್ವಮುಖೇನ ಯುದ್ಧ-
ಮಪ್ರೀಯಮಾಣ ಉತ ಧರ್ಮಜವಾಕ್ಯಹೇತೋಃ ।
ಊಹ್ಯೈವ ತಾನಪಿ ಯಯೌ ದ್ಯುನದೀಂ ಚ ತೀರ್ತ್ವಾ
ಕ್ಷತ್ತ್ರಾ ಽತಿಸೃಷ್ಟಮಧಿರುಹ್ಯ ಜಲಪ್ರಯಾಣಮ್ ॥ ೪೩ ॥

ಅ: ಭೀಮನು ಸದಾ ಭಯರಹಿತನಾಗಿದ್ದರೂ, ಗುರುಹಿರಿಯರೊಂದಿಗೆ ತನ್ನ ಮೂಲಕವೇ ನೇರವಾಗಿ ಯುದ್ಧವನ್ನು ಮಾಡಲು ಬಯಸಲಿಲ್ಲ. ಅದರೊಂದಿಗೆ ಧರ್ಮರಾಜನ ಮಾತಿನ ಕಾರಣದಿಂದಾಗಿಯೂ ಅವರನ್ನೆಲ್ಲ ಹೊತ್ತು ಗಂಗಾನದಿಯನ್ನು ದಾಟಿ ವಿದುರ ಏರ್ಪಡಿಸಿದ್ದ ನಾವೆಯನ್ನೇರಿ ಜಲಪ್ರಯಾಣ ಮಾಡಿ ಸಾಗಿದ.

ವಿ: ೧) ಅರಗಿನ ಮನೆಯಿಂದ ನೇರವಾಗಿ ಪಾಂಡವರು ಹಸ್ತಿನಾಪುರಕ್ಕೆ ತೆರಳದೇ ಕಾಡಿನತ್ತ ಏತಕ್ಕೆ ಪ್ರಯಾಣ ಬೆಳೆಸಿದರು ಎಂಬ ಶಂಕೆಗೆ ಇಲ್ಲಿ ಉತ್ತರವಿದೆ. ಅರಗಿನ ಮನೆಯ ಯೋಜನೆ ದುರ್ಯೋಧನನದಾದರೂ, ಅವನಿಗೆ ಧೃತರಾಷ್ಟ್ರಭೀಷ್ಮಾದಿಗಳ ಸಹಕಾರವಿದೆ. ಈಗ ಅವರು ಅದನ್ನು ಸುಟ್ಟು ಹಾಕಿದ ಅನಂತರ ಹಸ್ತಿನಾಪುರಕ್ಕೆ ತೆರಳಿದರೆ ತನ್ನ ಯೋಜನೆ ವಿಫಲವಾದ ಸಂಕಟದಿಂದ ದುರ್ಯೋಧನ ಸಮರ ಸಾರಬಹುದು. ಅವನಿಗೆ ಸಹಾಯಕರಾಗಿ ಭೀಷ್ಮಾದಿಗಳು

---

೪೩. ಅಭಯೋಽಪಿ ಭೀಮೋ ಗುರುಭಿರ್ಭೀಷ್ಮದ್ರೋಣಾದಿಭಿಃ ಸ್ವಮುಖೇನ ಸಾಕ್ಷಾತ್ ಸ್ವಯಂ ಯುದ್ಧಮಪ್ರೀಯಮಾಣೋ ನೇಚ್ಛತಿ ಯತೋಽತಃ ಕಂ ನೋ ಭವೇದಿತಿ ಭಯಂ ಪಾರ್ಥಾನ್ ವಿವೇಶೇತಿ ಪೂರ್ವೇಣಾನ್ವಯಃ । ಕೇಚಿತ್ತು ತರ್ಹಿ ಕಂ ನೋ ಭವೇದಿತಿ ಭಯಂ ಧರ್ಮಾದಿ ಚತುರೋ ವಿವೇಶ । ಅಭಯೋಽಪಿ ಭೀಮೋ ಗುರುಭಿಃ ಸ್ವಮುಖೇನ ಯುದ್ಧಮಪ್ರೀಯಮಾಣ ಉತ ಧರ್ಮಜವಾಕ್ಯಹೇತೋಃ ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ ಯತೋಽತೋ ಗುರುಭಿರ್ಯುದ್ಧಂ ನ ಕರ್ತವ್ಯಮಿತಿ ಧರ್ಮಜವಾಕ್ಯನಿಮಿತ್ತಾನ್ ಯುದ್ಧಮಪ್ರೀಯಮಾಣಸ್ತಾನುದೂಹ್ಯ ಯಯೌ । – (ಜ.).

೪೩. ಸ್ವಮುಖೇನ ಸಾಕ್ಷಾತ್ ಸ್ವದ್ವಾರಾದ್ಯುದ್ಧಂ ಅಪ್ರೀಯಮಾಣಃ ... । – (ವ.)

೪೩. ಗುರುಭಿಃ ಸ್ವಮುಖೇನ ಸ್ವಮುಖಂ ಸ್ವಪ್ರಧಾನಕಂ ಯುದ್ಧಮಪ್ರೀಯಮಾಣ ಇತ್ಯರ್ಥಃ । – (ಸ.)

೪೩. ದಗ್ಧ್ವಾ ಪುರಂ ಯೋಗಬಲಾತ್ ಸ ನಿರ್ಯಾನ್ ಧರ್ಮಾನಿವ ಸ್ವಾನ್ ಸಹಜಾನ್ ದಧಾನಃ ।
ಅದಾರಿಭಾವೇನ ಜಗತ್ಸು ಪೂಜ್ಯೋ ಯೋಗೀವ ನಾರಾಯಣಮಾಸಸಾದ ॥ – ಮಧ್ವವಿಜಯ (೧/೩೨).

ನಿಲ್ಲಬಹುದು. ಆಗ ಯುದ್ಧ ಅನಿವಾರ್ಯ; ಅದರಿಂದಾಗಿ ಯುಧಿಷ್ಠಿರಾದಿಗಳಿಗೆ ಭಯ; ಆದರೆ, ಭೀಷ್ಮ, ದ್ರೋಣರಂತಹ ಹಿರಿಯರೊಂದಿಗೆ ತನ್ನ ನೇತೃತ್ವದಲ್ಲೇ ಯುದ್ಧ ನಡೆಯುವುದು ಭೀಮನಿಗೆ ಪ್ರಿಯವಾದ ವಿಚಾರವಲ್ಲ. ಆದ್ದರಿಂದ ಅವರು ಹಸ್ತಿನಾಪುರಕ್ಕೆ ತೆರಳದೆ ಕಾಡಿನತ್ತ ತೆರಳಿದರು ಎಂದರ್ಥ.

೨) ಅದಕ್ಕೆ ಧರ್ಮರಾಜ ಕಾಡಿನತ್ತ ತೆರಳುವುದೇ ಉಚಿತ ಎಂದು ಅಪೇಕ್ಷಿಸಿದ್ದೂ ಸಹ ಮತ್ತೊಂದು ಬಗೆಯಲ್ಲಿ ಕಾರಣವಾಯಿತು. ಭೀಮ ಹೀಗೆ ಪ್ರತಿಬಾರಿಯೂ ಸಹ ಶಾಸ್ತ್ರದ ಮರ್ಮವನ್ನು ವಿವೇಚಿಸಿಯೇ ನಡೆಯುವ ಪರಿಶುದ್ಧ ಭಾಗವತಧರ್ಮನಿರತ ಎಂಬುದು ಇಲ್ಲಿಯ ಮುಖ್ಯಭಾವ.

೩) ಭೀಮಸೇನ ಅವರನ್ನೆಲ್ಲ ಹೊತ್ತು ನಡೆಯಲು ಆ ಅಂಧಕಾರಮಯವಾದ ರಾತ್ರಿಯಲ್ಲಿ ದೂರದ ಹಾದಿ ನಡೆಯುವ ಸಾಮರ್ಥ್ಯ ಅವರಿಗೆಲ್ಲ ಇಲ್ಲವಾಗಿದ್ದುದೇ ಮುಖ್ಯಕಾರಣ ಎಂದು ತಿಳಿಯಬೇಕು. ಭಯದಿಂದಾಗಿ ಅವರ ಬಲ ಇನ್ನೂ ಕುಗ್ಗಿತ್ತು. ಭೀಮಸೇನ ಅವರನ್ನೆಲ್ಲ ಹೊತ್ತ ಬಗೆಯನ್ನು ಮಹಾಭಾರತ ಹೀಗೆ ವರ್ಣಿಸಿದೆ :

ಸ್ಕಂಧಮಾರೋಪ್ಯ ಜನನೀಂ ಯಮಾವಂಕೇನ ವೀರ್ಯವಾನ್ ।
ಪಾರ್ಥೌ ಗೃಹೀತ್ವಾ ಪಾಣಿಭ್ಯಾಂ ಭ್ರಾತರೌ ಸುಮಹಾಬಲಃ ॥
ಉರಸಾ ಪಾದಪಾನ್ ಭಂಜನ್ ಮಹೀಂ ಪದ್ಭ್ಯಾಂ ವಿದಾರಯನ್ ॥
ಸ ಜಗಾಮಾಶು ತೇಜಸ್ವೀ ವಾತರಂಹಾ ವೃಕೋದರಃ ॥

– (ಆದಿ. ೧೪೭/೨೧, ೨೨)

ಆರ್ಯಾಮಂಕೇನ ವಾಮೇನ ರಾಜಾನಂ ದಕ್ಷಿಣೇನ ಚ ।
ಅಂಸಯೋಶ್ಚ ಯಮೌ ಕೃತ್ವಾ ಪೃಷ್ಠೇ ಬೀಭತ್ಸುಮೇವ ಚ ॥... – (ವನ. ೧೨/೯೪)

೪) ಭೀಮ ಹೊತ್ತಿದ್ದು ಯುಧಿಷ್ಠಿರಾದಿಗಳನ್ನು. ಅವರೆಲ್ಲ ಧರ್ಮಾದಿಗಳ ಸಂಕೇತ, ಎಂದರೆ ಧರ್ಮಾದಿಗಳ ಭಾರವನ್ನೆಲ್ಲ ಹೊರುವ ಜ್ಞಾನಸ್ವರೂಪಿ ಭೀಮಸೇನ ಎಂದರ್ಥ.

೫) ಭೀಮ ಅರ್ಜುನಾದಿ ಎಲ್ಲರನ್ನೂ ಸಹ ತನ್ನ ಮೇಲೆ ಏಕಕಾಲಕ್ಕೆ ಹೊತ್ತು ದುರ್ಗಮವಾದ ಹಾದಿಯಲ್ಲಿ ಅತ್ಯಂತ ಅನಾಯಾಸವಾಗಿ ಪ್ರಯಾಣ ಮಾಡಿದ ಅಪೂರ್ವ ಪ್ರಸಂಗವಿದು. ಎಂದರೆ ಭೀಮ ಅವರಿಗೆಲ್ಲ ಭಾರ ಹೊರುವ ಸಂರಕ್ಷಕ. ಹೀಗೆ ಮಾಡುವ ಮೂಲಕ ತಾನು ಇಡೀ ಬ್ರಹ್ಮಾಂಡವನ್ನೇ ಕೂರ್ಮರೂಪದಿಂದ ಹೊರುವ ಮುಖ್ಯಪ್ರಾಣನ ಅವತಾರ ಎಂಬುದನ್ನು ದೃಢಪಡಿಸಿದ ಎಂದು ತಿಳಿಯಬೇಕು.

೬) ಇದರಂತೆ ಅರ್ಜುನಾದಿಗಳು ಎಲ್ಲ ಸೇರಿಯೂ ಒಮ್ಮೆಯೂ ಭೀಮನನ್ನು ಹೊತ್ತಿಲ್ಲ ಎಂಬುದು ಮತ್ತೊಂದು ಗಮನಾರ್ಹವಾದ ಅಂಶ. ವಾಯುದೇವರು ಇತರ ದೇವತೆಗಳನ್ನು

ಹೊರುವಂತೆ, ಇತರ ದೇವತೆಗಳಾರೂ ವಾಯುದೇವರನ್ನು ಹೊರಲಾರರು, ಅವರಿಲ್ಲದೇ ಸ್ವತಃ ಬದುಕುವ ಸಾಮರ್ಥ್ಯವೂ ಅವರಿಗಿಲ್ಲ ಎಂಬ ವಿಶೇಷಾಂಶ ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಆ ತತ್ವಕ್ಕೆ ಇದೊಂದು ಅಪೂರ್ವ ನಿದರ್ಶನ. ಅದಕ್ಕೆಂದೇ ಮಹಾಭಾರತವನ್ನು ಶ್ರೀಮದಾಚಾರ್ಯರು ಸಮಸ್ತ ಶಾಸ್ತ್ರತತ್ವಗಳ ನಿದರ್ಶನರೂಪವಾದ ಅಪೂರ್ವಕೃತಿ ಎಂದು ಪರಿಚಯಿಸಿರುವರು — 'ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟ್ಯಾಂತೋ ಹಿ ಭಾರತೇ' (೨/೧೨).

ಪುರಜನರ ಶೋಕ

ವಿಶ್ವಾಸಿತಾ ವಿದುರಪೂರ್ವವಚೋಭಿರೇವ
ದಾಶೋದಿತಾಭಿರಧಿರುಹ್ಯ ಚ ಭೀಮಪೃಷ್ಠಮ್ ।
ಸರ್ವೇ ಯಯುರ್ವನಮಥಾಭ್ಯುದಿತೇ ಚ ಸೂರ್ಯೇ
ದೃಷ್ಟ್ವೈವ ಸಪ್ತ ಮೃತಕಾನರುದಂಶ್ಚ ಪೌರಾಃ ॥ ೪೪ ॥

ಅ: ಅಂಬಿಗರ ಬಾಯಿಂದ ವಿದುರ ಹಿಂದೆ ಹೇಳಿದ್ದ ಮಾತುಗಳಿಂದ ನಂಬಿಕೆ ಹುಟ್ಟಿದವರಾಗಿ ಅವರೆಲ್ಲ ನದಿಯನ್ನು ದಾಟಿ ಭೀಮನ ಬೆನ್ನೇರಿ ವನಕ್ಕೆ ತೆರಳಿದರು. ಮುಂದೆ ಸೂರ್ಯ ಹುಟ್ಟಿದ ಮೇಲೆ ಏಳು ಜನ ಸತ್ತಿದ್ದನ್ನು ಕಂಡು ಪಟ್ಟಣಿಗರು ಗೋಳಿಟ್ಟರು.

ವಿ: ೧) ನಾವೆಯೇರುವಾಗ ಅವರಿಗೆ ಸಂದೇಹಕ್ಕೆ ಅವಕಾಶವಾಗದಿರಲು ಆ ನಾವಿಕರೆಲ್ಲಾ ಧರ್ಮರಾಜನಿಗೆ ಹಿಂದೆ ಹೇಳಿದ್ದ ಅಂತ್ಯಜ ಭಾಷೆಯ ಮಾತುಗಳನ್ನು ಹೇಳಿದುದೇ ಕಾರಣವಾಯಿತು

---

೪೪. ದಾಶೋದಿತಾಭಃ ದಾಶೋದಿತೈಃ । – (ವೇ.)

೪೪. ದಾಶೋದಿತಾಭಃ ವಿದುರಪೂರ್ವವಚೋಭಿಃ ವಿಶ್ವಾಸಿತಾಃ ಜಲಪ್ರಯಾಣಮಧಿರುಹ್ಯ ದ್ಯುನದೀಂ ತೀರ್ತ್ವಾ ಅಥ= ನಾವಮಧಿರುಹ್ಯೇತಿ ಸಂಬಂಧಃ ॥ – (ವಾ.)

೪೪. ಉದಿತಾಭರುದಿತೈರಿತಿ ಲಿಂಗ ವ್ಯತ್ಯಾಸಃ । ಕೇಚಿತ್ತು ದಾಶೋದಿತಾಭಿರ್ವಾಗ್ಭಿರ್ವಿಜ್ಞಾಪಿತೈರ್ವಿದುರ-ಪೂರ್ವವಚೋಭಿಃ ಪಾರ್ಥಾರ್ಥೇ ಇದಂ ಜಲಪ್ರಮಾಣಂ ಸ್ಥಾಪ್ಯತ ಇತ್ಯೇವಂ ರೂಪೈಃ ಇತ್ಯಾಹುಃ । – (ಜ.)

೪೪. ... ಏವಂ ರೂಪೈರ್ವಿಶ್ವಾಸಿತಾಃ ಏವಂ ವಾಗ್ಭಿರ್ವಿಜ್ಞಾಪಿತೈರಿತ್ಯಧ್ಯಾಹಾರೇಣ ಯೋಜನೀಯಮ್ । ದಾಶೋದಿತಾಭಿರ್ವಿದುರಪೂರ್ವಕವಚೋಭಿರಿತಿ ಸ್ತ್ರೀನಪುಂಸಕಲಿಂಗಯೋಃ ಕಥಂ ಸಮಾನಾಧಿಕರಣ್ಯಮಿತಿ ಶಂಕಾ ನಿರಸ್ತಾ ಭವತಿ । ವೈಯ್ಯಧಿಕರಣ್ಯೇನೈವ ಯೋಜಿತತ್ವಾದಿತ್ಯಾಹುಃ ॥ – (ವ.)

೪೪. ವಿದುರಪೂರ್ವವಚೋಭಿಃ ದಾಶೋದಿತಾಭಿರಿತಿ ಲಿಂಗವ್ಯತ್ಯಯಃ ಸ್ವಸ್ಯ ಪರಮ ವೈದಿಕತ್ವ ಜ್ಞಾಪನಾರ್ಥಂ । – (ತಾ.)

ಎಂದರ್ಥ. (ಸಂಕೇತ ಪದಗಳಂತೆ ಅವರು ಆಡಿದ ವಿದುರನ ಮಾತುಗಳು ಕೆಲಸ ಮಾಡಿದವು ಎಂದು ತಿಳಿಯಬೇಕು.)

೨) ಇಲ್ಲಿ 'ದಾಶೋದಿತಾಭಿಃ' 'ವಿದುರಪೂರ್ವವಚೋಭಿಃ' ಎಂಬ ಎರಡು ಮಾತುಗಳಲ್ಲಿ 'ವಿದುರಪೂರ್ವವಚೋಭಿಃ' ಎಂಬುದು ನಪುಂಸಕ ಲಿಂಗದ ಮಾತು, 'ದಾಶೋಧಿತಾಭಿಃ' ಎಂಬುದು ಸ್ತ್ರೀಲಿಂಗದ ಮಾತು, ಅವೆರಡಕ್ಕೂ ಅನ್ವಯ ಹೊಂದುವುದಿಲ್ಲ. ಆದರೂ ಆಚಾರ್ಯರು ಹಾಗೆ ಪ್ರಯೋಗಿಸಿರುವುದು ತಾವು ಪರಮವೈದಿಕರು ಎಂಬುದನ್ನು ತಿಳಿಸಲು ಎಂದು ತಿಳಿಯಬೇಕು. ವೈಯಧಿಕರಣ್ಯದಿಂದ ಯೋಜನೆ ಎಂಬುದು ಮತ್ತೊಂದು ಬಗೆಯ ಪರಿಹಾರ ಎಂಬುದಾಗಿ ಜನಾರ್ದನೀಯದಲ್ಲಿದೆ.

೩) ಬೆಳಗಾದ ಮೇಲೆ ಜನರು ಬಂದ ಏಳು ಶವಗಳನ್ನು ಅಲ್ಲಿ ಕಂಡು ಅದರಲ್ಲಿ ಸ್ತ್ರೀ ಶವ ಕುಂತಿಯದೆಂದು, ಒಂದು ಪುರೋಚನನದೆಂದು, ಉಳಿದೈದು ಪಾಂಡವರದೆಂದು ತಿಳಿದು ಅವರ ಅಳಿವಿಗಾಗಿ ರೋದಿಸಿದರು ಎಂದರ್ಥ.

ಹಾ ಪಾಂಡವಾನದಹದೇಷ ಹಿ ಧಾರ್ತರಾಷ್ಟ್ರೋ
ಧರ್ಮಸ್ಥಿತಾನ್ ಕುಮತಿರೇವ ಪುರೋಚನೇನ ।
ಸೋಽಪ್ಯೇಷ ದಗ್ಧ ಇಹ ದೈವವಶಾತ್ ಸುಪಾಪಃ
ಕೋ ನಾಮ ಸತ್ಸು ವಿಷಮಃ ಪ್ರಭವೇತ್ ಸುಖಾಯ ॥ ೪೫ ॥

ಅ: 'ಅಯ್ಯೋ..! ಈ ದುರ್ಬುದ್ಧಿಯ ದುರ್ಯೋಧನ ಈ ಪುರೋಚನನ ಮೂಲಕ ಧರ್ಮಿಷ್ಠರಾದ ಪಾಂಡವರನ್ನು ಸುಟ್ಟು ಹಾಕಿಸಿದ, ದೈವವಶಾತ್ ಆ ಪರಮಪಾಪಿಯಾದ ಪುರೋಚನನೂ ಇಲ್ಲಿ ಸುಟ್ಟು ಹೋಗಿರುವನು. ಸಜ್ಜನರಿಗೆ ದ್ರೋಹ ಬಗೆಯುವ ಯಾವನು ತಾನೇ ಸುಖಿಯಾದಾನು!'.

ವಿ: ಪುರಜನರ ರೋದನ ಕ್ರಮವನ್ನೇ ಇಲ್ಲಿ ವಿವರಿಸಿರುವರು. ಅವರಿಗೆಲ್ಲ ಅದೆಲ್ಲ ದುರ್ಯೋಧನನ ಕುತಂತ್ರ ಎಂದು ಅರಿವಾಯಿತು. ಆ ಆರು ತಿಂಗಳ ಕಾಲದ ವಾಸದಲ್ಲಿ ಅವರೆಲ್ಲ ಪಾಂಡವರನ್ನು ಪರಮಧರ್ಮಿಷ್ಠರೆಂಬುದಾಗಿ ಅರ್ಥ ಮಾಡಿಕೊಂಡರು ಎಂಬುದೂ ಇದರಿಂದ ತಿಳಿಯುವುದು. ಅವರಿಗಾದ ಸಮಾಧಾನ – ಅವರನ್ನು ಸುಡುವ ಸಮಯದಲ್ಲಿ ಆ ಪಾಪಿಯಾದ ಪುರೋಚನ ತಾನೂ ಸುಟ್ಟು ಹೋಗಿದ್ದಾನೆ ಎಂಬುದೊಂದೇ. ಅವರೆಲ್ಲ ಅದರಲ್ಲಿ ಒಂದು ತತ್ವವನ್ನೂ ಗುರುತಿಸಿದರು – ಸಜ್ಜನರಿಗೆ ದ್ರೋಹವೆಸಗುವವನೆಂದಿಗೂ ಸುಖಿಯಾಗಲಾರ. ಇದೊಂದು ಅಮೂಲ್ಯವಾದ ಸೂಕ್ತಿ ಎಂಬುದನ್ನು ಗಮನಿಸಬೇಕು.

ಭೀಷ್ಮಾದಿಗಳ ವ್ಯಥೆ

ಪೌರೇಭ್ಯ ಏವ ನಿಖಿಲಂ ನನು ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಸ್ತು ನಿಶಮ್ಯ ಹೇತಿ ।
ಊಚುಃ ಸುದುಃಖಿತಧಿಯೋಽಥ ಸುಯೋಧನಾದ್ಯಾಃ
ಕ್ಷತ್ತಾ ಮೃಷೈವ ರುರುದುರ್ಯುಯುಜುಶ್ಚ ಕರ್ಮ ॥ ೪೬ ॥

ಅ: ಪೌರರಿಂದಲೇ ಭೀಷ್ಮಾದಿಗಳೆಲ್ಲ ಎಲ್ಲ ವಿವರಗಳನ್ನು ತಿಳಿದು ಧೃತರಾಷ್ಟ್ರನೊಂದಿಗೆ 'ಅಯ್ಯೋ!' ಎಂದರು. ಮನಸ್ಸಿನಲ್ಲಿ ಬಹಳವಾಗಿ ದುಃಖಿಸಿದರು. ದುರ್ಯೋಧನಾದಿಗಳು ಮತ್ತು ವಿದುರ ಸುಮ್ಮನೆ ಅತ್ತರು. ಅಂತ್ಯಕ್ರಿಯೆಗಳನ್ನು ಮಾಡಿದರು.

ವಿ: ೧) ಭೀಷ್ಮಾದಿ ಸಕಲ ಸಜ್ಜನರು ದುಃಖಪಟ್ಟರು. ದುರ್ಯೋಧನಾದಿಗಳು ತಮ್ಮ ಬಗ್ಗೆ ಸಂಶಯಬರದಿರಲಿ ಎಂಬುದಾಗಿ ದುಃಖಪಟ್ಟಂತೆ ನಟಿಸಿದರು. ವಿದುರ ತನಗೆ ವಿಷಯ ತಿಳಿದಿದ್ದರೂ ಅದು ಇತರರಿಗೆ ತಿಳಿಯಬಾರದೆಂಬ ಕಾರಣದಿಂದ ಅತ್ತಂತೆ ನಟಿಸಿದ.

೨) ಇಲ್ಲಿ ವಿದುರನ ವಿವೇಕ ಅಪೂರ್ವರೀತಿಯದ್ದು. ತಾನು ಮಾಡುವ ಪಾಂಡವಹಿತದ ಪ್ರತಿಯೊಂದು ಕಾರ್ಯವೂ ಕೇವಲ ನಿಷ್ಕಾಮನೆಯ ಕಾರ್ಯವಾಗಿತ್ತೇ ಹೊರತು ಬೇರಾವುದೂ ಅವನಿಗೆ ಬೇಕಾಗಿರಲಿಲ್ಲ. ನಿಜವಾದ ಕರ್ಮಯೋಗವೆಂದರೆ ಅದೇ.

೩) ಮುಂದೆ ವಿದುರನ ಮೂಲಕ ಭೀಷ್ಮ ಮೊದಲಾದ ಕೆಲವರಿಗೂ ಪಾಂಡವರು ಸತ್ತಿಲ್ಲವೆಂಬ ವಿಷಯ ತಿಳಿದು ಸಂತೋಷವಾಯಿತು. ಕೆಲವರು ಪಾಂಡವರಂತಹ ಧರ್ಮಿಷ್ಠರು ಸಾಯುವುದು ಸರ್ವಥಾ ಅಸಾಧ್ಯ ಎಂದು ಅದನ್ನು ನಂಬಲಾಗದೇ ಗೊಂದಲಕ್ಕೆ ಬಿದ್ದರು ಎಂಬ ವಿವರವು ಮೂಲದಲ್ಲಿದೆ (ಆದಿಪರ್ವ, ಅಧ್ಯಾಯ ೧೪೯) :

ಪರಾಸುತ್ವಂ ನ ಪಶ್ಯಾಮಿ ಪೃಥಾಯಾಃ ಸಹ ಪಾಂಡವೈಃ ।
ಸರ್ವಥಾ ವಿಕೃತಂ ನೀತಂ ಯದಿ ತೇ ನಿಧನಂ ಗತಾಃ ।...
ಕಥಂ ಕಾಲವಶಂ ಪ್ರಾಪ್ತಃ ಪಾಂಡವೇಯೋ ಯುಧಿಷ್ಠಿರಃ ।...
ಪೀನಸ್ಕಂಧಶ್ಚಾರುಬಾಹುರ್ಮೇರುಕೂಟಸಮೋ ಯುವಾ ।
ಮೃತೋ ಭೀಮ ಇತಿ ಶ್ರುತ್ವಾ ಮನೋ ನ ಶ್ರದ್ದಧಾತಿ ಮೇ ॥...
ಪುರಂದರಸಮೋ ಜಿಷ್ಣುಃ ಕಥಂ ಕಾಲವಶಂ ಗತಃ ।... – (ಆದಿ. ೧೪೯/೧೮)

---

೪೬. ಕರ್ಮ ಸ್ನಾನತಿಲಾಂ ಕುಲ್ಯಾದಿಕ್ರಿಯಾಂ ಚಕ್ರುಃ । – (ಜ.)

ಹಿಡಿಂಬ ವನದಲ್ಲಿ ಪಾಂಡವರು

ಭೀಮೋಽಪ್ಯದೂಹ್ಯ ವನಮಾಪ ಹಿಡಿಂಬಕಸ್ಯ
ಭ್ರಾತ್ಫ್ಸನ್ ಪೃಥಾಂ ಚ ತೃಷಿತೈರಭಿಯಾಚಿತಶ್ಚ ।
ಪಾನೀಯಮುತ್ತರಪಟೇಽಂಬುಜಪತ್ರನದ್ಧಂ
ದೂರಾದುದೂಹ್ಯ ದದೃಶೇ ಸ್ವಪತೋಽಥ ತಾಂಶ್ಚ ॥ ೪೭ ॥

ಅ: ಇತ್ತ ಭೀಮ ಸೋದರರನ್ನು, ಕುಂತಿಯನ್ನು ಹೊತ್ತುಕೊಂಡು ಹಿಡಿಂಬನ ವನವನ್ನು ಸೇರಿದ. ಬಾಯಾರಿದ ಅವರು ಬೇಡಿದಾಗ ದೂರದಿಂದ ತಾವರೆ ಎಲೆಗಳಲ್ಲಿ ತುಂಬಿಸಿಕೊಂಡು ಉತ್ತರೀಯದಲ್ಲಿ ನೀರನ್ನು ತಂದ. ಆ ವೇಳೆಗೆ ಅವರೆಲ್ಲ ಗಾಢ ನಿದ್ರೆಯಲ್ಲಿದ್ದುದನ್ನು ಕಂಡ.

ವಿ: ಅರಗಿನ ಮನೆಯಲ್ಲಿ ಎಚ್ಚೆತ್ತಿದ್ದೂ ಭೀಮಸೇನ; ಅವರನ್ನೆಲ್ಲ ಸುರಂಗ ಮಾರ್ಗದಲ್ಲಿ ಕಳುಹಿಸಿದ್ದೂ ಭೀಮಸೇನ; ಆ ಅರಗಿನ ಮನೆಗೆ ಬೆಂಕಿಯಿಟ್ಟದ್ದೂ ಭೀಮಸೇನ; ಮುಂದೆ ಅವರನ್ನೆಲ್ಲ ಹೊತ್ತು ನಡೆದದ್ದೂ ಭೀಮಸೇನ. ಆದರೆ ಆಯಾಸಗೊಂಡದ್ದು ಮಾತ್ರ ಅವನಲ್ಲ; ಉಳಿದ ಐದು ಜನ. ಎಂದರೆ ಅಷ್ಟೆಲ್ಲಾ ಕಾರ್ಯವನ್ನು ಭೀಮಸೇನ ಅನಾಯಾಸದಿಂದ ಮಾಡಿದ. ಇವರೆಲ್ಲ ಅದರಲ್ಲಿ ಏನನ್ನೂ ಮಾಡದೆಯೂ ಆಯಾಸಗೊಂಡರು. ವಾಯುದೇವರ ಕಾರ್ಯವೈಖರಿ ಇಂತಹುದು!

೨) ಉಪನಿಷತ್ತುಗಳಲ್ಲಿ ಬಂದಿರುವಂತೆ ಸಕಲ ಕಾರ್ಯಗಳನ್ನೂ ನಿರ್ವಹಿಸುವ ವಾಯು–ದೇವರು ಎಂದೂ ಆಯಾಸಗೊಳ್ಳುವುದೇ ಇಲ್ಲ. ಆ ತತ್ತ್ವಕ್ಕೆ ಇದೊಂದು ನಿದರ್ಶನ. ಆ ಸಮಯದಲ್ಲಿ ಅರ್ಜುನನಂತಹವನೂ ಸಹ ಬಳಲಿ ಬಾಯಾರಿದನೇ ಹೊರತು ತನ್ನಿಂದ ಏನಾದರೂ ಮಾಡಲು ಸಾಧ್ಯ ಎಂದು ಕರ್ತವ್ಯ ಪಾಲನೆಗೆ ಸಿದ್ಧನಾಗಲೇ ಇಲ್ಲ ಎಂಬುದು ಗಮನಿಸಬೇಕಾದ ಅಂಶ. ಹೀಗೆ ಭೀಮನೊಬ್ಬನಿಂದ ಅವರೆಲ್ಲಾ ಉಪಕೃತರಾದಂತೆ ಅವರಾರಿಂದಲೂ ಭೀಮಸೇನ ಉಪಕೃತನಾಗಿಲ್ಲ ಎಂಬುದನ್ನು ಗಮನಿಸಬೇಕು.

೩) ಭೀಮಸೇನನ ಆ ಮಧ್ಯರಾತ್ರಿಯಲ್ಲಿನ ಗೊಂಡಾರಣ್ಯದ ಪಯಣವನ್ನು ಮಹಾಭಾರತ ಅಪೂರ್ವವಾಗಿ ಬಣ್ಣಿಸಿದೆ. ಭೀಮಸೇನನ ವೇಗಕ್ಕೆ ಕಾಡಿನ ಮರಗಳು ಉರುಳಿ ರಾಜಮಾರ್ಗ ಸಿದ್ಧವಾಗುತ್ತಿತ್ತು : ದಿನ್ನೆಗಳು ಮೇಲೆದ್ದು ನೆಲ ಸಮತಟ್ಟಾಗುತ್ತಿದ್ದರೆ, ಎತ್ತರದ ದಿನ್ನೆಗಳು ಅವನ ಪಾದಾಘಾತಕ್ಕೆ ಸಿಕ್ಕಿ ನೆಲಕ್ಕೆ ಸಮನಾಗುತ್ತಿದ್ದವು :

ತೇನ ವಿಕ್ರಮಮಾಣೇನ ಊರುವೇಗಸಮೀರಿತಮ್ ।
ವನಂ ಸವೃಕ್ಷವಿಟಪಂ ವ್ಯಾಘೂರ್ಣಿತಮಿವಾಭವತ್ ॥
ಜಂಘಾವಾತೋ ವವೌ ಚಾಸ್ಯ ಶುಚಿಶುಕ್ರಾಗಮೇ ಯಥಾ ।
ಅವರ್ಜಿತಲತಾವೃಕ್ಷಂ ಮಾರ್ಗಂ ಚಕ್ರೇ ಮಹಾಬಲಃ ॥

ಸ ಮೃದ್ಗನ್ ಪುಷ್ಪಿತಾಂಶ್ಚೈವ ಫಲಿತಾಂಶ್ಚ ವನಸ್ಪತೀನ್ ।
ಅವರುಜ್ಯ ಯಯೌ ಗುಲ್ಮಾನ್ ಪಥಸ್ತಸ್ಯ ಸಮೀಪಜಾನ್ ॥ – (ಆದಿ. ೧೫೦/೧-೩)

ಹಿಡಿಂಬೆಯ ಪರಿಚಯ

ರಕ್ಷಾರ್ಥಮೇವ ಪರಿಜಾಗ್ರತಿ ಭೀಮಸೇನೇ
ರಕ್ಷಃ ಸ್ವಸಾರಮಭಿಯಾಪಯತೇ ಹಿಡಿಂಬೀಮ್ ।
ಸಾ ರೂಪಮೇತ್ಯ ಶುಭಮೇವ ದದರ್ಶ ಭೀಮಂ
ಸಾಕ್ಷಾತ್ಸಮಸ್ತಶುಭಲಕ್ಷಣಸಾರಭೂತಮ್ ॥ ೪೮ ॥

ಅ: ಅವರೆಲ್ಲರ ರಕ್ಷಣೆಗೆಂದು ಭೀಮ ಎಚ್ಚರದಿಂದಲೇ ಇದ್ದಾಗ ಹಿಡಿಂಬ ರಾಕ್ಷಸ ತನ್ನ ತಂಗಿ ಹಿಡಿಂಬಿಯನ್ನು ಅಲ್ಲಿಗೆ ಕಳುಹಿಸಿದ; ಅವಳು, ಸುಂದರ ರೂಪವನ್ನು ಧರಿಸಿ ಸಕಲ ಶುಭಲಕ್ಷಣಗಳ ಸಾರಭೂತನಾದ ಭೀಮಸೇನನನ್ನು ನೋಡಿದಳು.

ಎ: ಅದು ಹಿಡಿಂಬ ರಾಕ್ಷಸ ಆಕ್ರಮಿಸಿಕೊಂಡಿದ್ದ ವನ, ಅವನೊಬ್ಬ ನರಭಕ್ಷಕ. ಅಲ್ಲಿಗೆ ಮಾನವರು ಬಂದದ್ದನ್ನು ವಾಸನೆಯಿಂದಲೇ ಗ್ರಹಿಸಿ ಅವರನ್ನು ಹಿಡಿದು ತರಲು ತಂಗಿಯನ್ನು ಕಳುಹಿಸಿದ. ಅವಳು ಹಾಗೆ ತೆರಳಿದಾಗ ಕಂಡದ್ದು ಅವರೆಲ್ಲರನ್ನೂ ರಕ್ಷಿಸುತ್ತಿದ್ದ ಭೀಮನನ್ನು. ಆ ಭೀಮನಲ್ಲಿ ಸಮಸ್ತಸಲ್ಲಕ್ಷಣಗಳನ್ನೂ ಕಂಡು ಅಚ್ಚರಿಪಟ್ಟಳು ಎಂದರ್ಥ. ಭೀಮ ದ್ವಾತ್ರಿಂಶ–ಲ್ಲಕ್ಷಣೋಪೇತ ಎಂಬುದಕ್ಕೆ ಇದು ಮತ್ತೊಂದು ಆಧಾರ. ಅವಳು ತಳೆದದ್ದು ಒಳ್ಳೆಯ ರೂಪ ಮಾತ್ರವಲ್ಲದೇ ಸ್ವರೂಪತಃ ಸಹ ಅವಳು ಒಳ್ಳೆಯವಳೇ ಎಂಬ ವಿಚಾರ ಮುಂದೆ ಬಂದಿದೆ.

ಸಾ ರಾಕ್ಷಸೀತನುಮವಾಪ ಸುರೇಂದ್ರಲೋಕ–
ಶ್ರೀರೇವ ಶಕ್ರದಯಿತಾ ತ್ವಪರೈವ ಶಚ್ಯಾಃ ।
ಶಾಪಾತ್ ಸ್ಪೃಧಾ ಪತಿಮವಾಪ್ಯ ಚ ಮಾರುತಿಂ ಸಾ
ಪ್ರಾಪ್ತುಂ ನಿಜಾಂ ತನುಮಯಾಚತ ಭೀಮಸೇನಮ್ ॥ ೪೯ ॥

---

೪೮. ಅಭಿಯಾಪಯತೇ ಅಭ್ಯಯಾಪಯತ್ । – (ಜ.)

೪೯. ಸಾ ರಾಕ್ಷಸೀತನುಮವಾಪೇತ್ಯತ್ರ ಸಾ = ಹಿಡಿಂಬೀ ಸುರೇಂದ್ರಲೋಕಶ್ರೀಃ ಅಮರಾವತೀಸಂಪತ್ ಅಮರಾವತೀಸಂಪದಭಿಮಾನಿನೀ ಕಾಚನ ಶ್ರೀನಾಮಿಕಾ ಅಪ್ಸರಃಸ್ತ್ರೀ ನ ತು ಸಾಕ್ಷಾಲ್ಲಕ್ಷ್ಮೀಃ ಅಪರೈವ ಶಕ್ರದಯಿತಾ = ಶಕ್ರಸ್ಯ ಭಾರ್ಯಾ ಸತೀ। ಸ್ಪೃಧಾ = ಶಚ್ಯಾ ಸಹ ಸ್ಪರ್ಧಯಾ ಕಾರಣೇನ ಶಚ್ಯಾಃ ಶಾಪಾತ್ ರಾಕ್ಷಸೀತನುಂ = ರಾಕ್ಷಸ್ಯಾಸ್ತನುಮವಾಪ। ಸಾ ಮಾರುತಿಂ ಪತಿಮವಾಪ್ಯ ನಿಜಾಂ ತನುಂ ಪ್ರಾಪ್ತುಂ ಭೀಮಸೇನಮಯಾಚತೇತಿ ಯೋಜನಾ ॥– (ವಾ.)

ಅ: ಅವಳು ಇಂದ್ರಲೋಕದ ಸಂಪತ್ತಿಗೆ ಅಭಿಮಾನಿ ದೇವತೆಯಾದ ಶ್ರೀ ಎಂಬ ಒಬ್ಬ ಅಪ್ಸರೆ, ಇಂದ್ರನ ಪತ್ನಿ, ಶಚಿಯಿಂದ ಬೇರೆಯಾದ ಇಂದ್ರ ಪತ್ನಿ. ಶಚಿಯೊಂದಿಗೆ ಸ್ಪರ್ಧೆ ಮಾಡಿದ್ದರಿಂದಾಗಿ ಶಾಪದಿಂದ ರಾಕ್ಷಸ ಯೋನಿಯಲ್ಲಿ ಹುಟ್ಟಿದ್ದಳು. ಅವಳು ಭೀಮನನ್ನು ಪತಿಯನ್ನಾಗಿ ಹೊಂದಿ ತನ್ನ ನಿಜರೂಪವನ್ನು ಪಡೆಯಲೆಂದು ಭೀಮನನ್ನು ಬೇಡಿಕೊಂಡಳು.

ವಿ: ಪವನಪುತ್ರನ ಸ್ಪರ್ಶ ಪಾವನಕರ ಎಂಬುದನ್ನು 'ಮಾರುತಿಂ' ಎಂಬ ಪದದಿಂದ ಸೂಚಿಸಿರುವರು. ಅವಳು ರಾಕ್ಷಸಿಯಾಗಿದ್ದು ಶಚಿಯ ಶಾಪದಿಂದ ಎಂದು ವಾದಿರಾಜೀಯದಲ್ಲಿದೆ.

ತಾಂ ಭೀಮ ಆಹ ಕಮನೀಯತನುಂ ನ ಪೂರ್ವಂ
ಜ್ಯೇಷ್ಠಾದುಪೈಮಿ ವನಿತಾಂ ನ ಹಿ ಧರ್ಮ ಏಷಃ ।
ಸಾ ಚಾಹ ಕಾಮವಶಗಾ ಪುನರೇತದೇವ
ಸ್ವಾವೇಶಯುಗ್ ಹಿ ಮರುದಗ್ರ್ಯಪರಿಗ್ರಹಸ್ಯ ॥ ೫೦ ॥

ಅ: ಸುಂದರದೇಹದ ಅವಳನ್ನು ಕುರಿತು ಭೀಮ ನುಡಿದ: 'ನಾನು ಅಣ್ಣನಿಗಿಂತ ಮುಂಚಿತವಾಗಿ ಯಾವ ಹೆಣ್ಣನ್ನೂ ವಿವಾಹವಾಗಲಾರೆ. ಅದು ಸರ್ವಥಾ ಧರ್ಮವಲ್ಲ'. ಆದರೂ ಅವಳು ಕಾಮಪೀಡಿತಳಾಗಿ ಪುನಃ ಪುನಃ ಅದನ್ನೇ ಹೇಳತೊಡಗಿದಳು. ಅದಕ್ಕೆ ಅವಳು ವಾಯುಪತ್ನಿಯಾದ ಭಾರತಿಯ ಆವೇಶದಿಂದ ಕೂಡಿದವಳಾಗಿದ್ದುದೇ ಕಾರಣವಾಗಿತ್ತು.

ವಿ: ೧) ಹಿಡಿಂಬಿ ಬಂದಿದ್ದು ಅವರನ್ನೆಲ್ಲ ಹಿಡಿದೊಯ್ಯಲೆಂದು. ಆದರೆ, ಅಪ್ರತಿಮ ಸುಂದರನಾದ ಭೀಮನನ್ನು ಕಾಣುತ್ತಲೇ ಅವಳಿಗೆ ಅವನನ್ನು ವಿವಾಹವಾಗುವ ಬಯಕೆ ಹುಟ್ಟಿತು. ಅವಳು ಅದಕ್ಕಾಗಿ ಅವನನ್ನು ಪ್ರಾರ್ಥಿಸಿದಳು. ಭೀಮ ಒಪ್ಪಲಿಲ್ಲ, ಅಣ್ಣನಿಗಿಂತ ಮುಂಚೆ ತಮ್ಮ ವಿವಾಹವಾಗುವುದು ಧರ್ಮಬಾಹಿರ. ಹಾಗೆ ವಿವಾಹವಾಗುವನನ್ನು *ಪರಿವೇತ್ತಾ ಎನ್ನುವರು. ಅಂತಹ ವಿವಾಹಕ್ಕೆ ಪರಿವೇದನ ಎಂದೂ ಹೆಸರು. ಭೀಮ ಎಂತಹ ಸಮಯದಲ್ಲೂ ಧರ್ಮ ತಪ್ಪದ ಶುದ್ಧ-ಧರ್ಮರತ ಎಂಬುದಕ್ಕೆ ಇದು ಮತ್ತೊಂದು ನಿದರ್ಶನವಾಯಿತು ಎಂಬುದನ್ನು ಗಮನಿಸಬೇಕು.

---

೫೦. ಮರುದಗ್ರ್ಯಪರಿಗ್ರಹಸ್ಯೇತ್ಯತ್ರ ಮರುದಗ್ರ್ಯಃ= ಮುಖ್ಯಪ್ರಾಣಃ ತಸ್ಯ ಪರಿಗ್ರಹಃ= ಭಾರತೀ ತಸ್ಯಾಃ ಸ್ವಾವೇಶಯುಕ್ = ಸುಷ್ಠ್ವಾವೇಶಯುಕ್ ಸಾ ಪುನಃ ಏತದೇವ= ಪೂರ್ವೋಕ್ತಮೇವ ಆಹ ಹೀತ್ಯನ್ವಯಃ। ಹಿಶಬ್ದೇನ ಭಾರತ್ಯಾವೇಶಾತ್ ಅಸ್ಯಾ ಭೀಮಪ್ರಾರ್ಥನಾ ಯುಕ್ತೈವೇತಿ ಪ್ರಸಿದ್ಧಿಂ ಸೂಚಯತಿ। ''ಪತ್ನೀಸ್ವೀಕಾರಶಪಥಮೌಲ್ಯೇಷ್ವಪಿ ಪರಿಗ್ರಹಃ'' ಇತ್ಯಭಿಧಾನಮ್ ॥ – (ವಾ.)

೫೦. ರಾಕ್ಷಸೀ ಕಾಮಯಾಮಾಸ ರೂಪೇಣಾಪ್ರತಿಮಂ ಭುವಿ । – ಭಾರತ (ಆದಿ.೧೫೧/೭)

* ದಾರಾಗ್ನಿಹೋತ್ರಸಂಯೋಗಂ ಕುರುತೇ ಯೋऽಗ್ರಜೇ ಸ್ಥಿತೇ ।
ಪರಿವೇತ್ತಾ ಸ ವಿಜ್ಞೇಯಃ ಪರಿವಿತ್ತಿಸ್ತು ಪೂರ್ವಜಃ ॥ –ಮನುಸ್ಮೃತಿ (ಅ. ೩, ಶ್ಲೋ. ೧೭೧)

೨) ಅವಳಲ್ಲಿ ಭೀಮನ ಬಗ್ಗೆ ಕಾಮ ಹುಟ್ಟಲು ಅವಳೊಳಗೆ ವಾಯುಪತ್ನಿಯಾದ ಭಾರತಿಯ ಆವೇಶವಿದ್ದುದು ಕಾರಣ. ಅದರ ವಿವರ ಮುಂದೆ ಬಂದಿದೆ.

ಸಾ ಭಾರತೀ ವರಮಿಮಂ ಪ್ರದದಾವಮುಷ್ಯೈ
ಸ್ವಾವೇಶಮಾತ್ಮದಯಿತಸ್ಯ ಚ ಸಂಗಮೇನ ।
ಶಾಪಾದ್ವಿಮುಕ್ತಿಮತಿತೀವ್ರತಪಃಪ್ರಸನ್ನಾ
ತೇನಾಪ ಸಾ ನಿಜತನುಂ ಪವಮಾನಸೂನೋಃ ॥ ೫೧ ॥

ಅ: ಅವಳ ಅತ್ಯಂತ ಕಠೋರವಾದ ತಪಸ್ಸಿಗೆ ಮೆಚ್ಚಿದ ಆ ಭಾರತಿಯು ಅವಳಿಗೆ ತನ್ನ ಆವೇಶವನ್ನೂ, ತನ್ನ ಪತಿಯೊಂದಿಗೆ ಸಂಗಮವನ್ನೂ, ಶಾಪದಿಂದ ಬಿಡುಗಡೆಯನ್ನೂ ವರವನ್ನಾಗಿ ನೀಡಿದ್ದಳು. ಅದರಿಂದ ಅವಳು ವಾಯುಸ್ವರೂಪನಾದ ಭೀಮನನ್ನು ಬೇಡಿದಳು.

ವಿ: ೧) ಶಾಪವೊದಗಿದ ನಂತರ ಅವಳು ಆ ಶಾಪವಿಮೋಚನೆಗಾಗಿ ವಾಯುಪತ್ನಿಯಾಗಲು ಬಯಸಿದಳು. ವಾಯು ಪವನ, ಪವನ ಮುಟ್ಟಿದಾಗ ಪಾವನಳಾಗುವುದು ನಿಶ್ಚಿತ. ಅದರಿಂದಾಗಿ ತನ್ನ ನಿಜರೂಪ ಮರಳುವುದೆಂದು ಅವಳ ಚಿಂತನೆ. ಆದರೆ, ವಾಯುದೇವರು ಭಾರತೀದೇವಿಯ ಹೊರತು ಬೇರಾರನ್ನೂ ಪತ್ನಿಯನ್ನಾಗಿ ಸ್ವೀಕರಿಸಲಾರರು. ಅದರಿಂದ ಅವಳು ಭಾರತೀದೇವಿಯನ್ನು ಕುರಿತು ಘೋರ ತಪಸ್ಸು ಮಾಡಿ ಅವರ ಆವೇಶ ತನ್ನಲ್ಲಿ ಉಂಟಾಗುವಂತೆಯೂ, ಭಾರತೀ–ಪತಿಯಾದ ಮಾರುತಿಯ ಸಂಗಮ ಭಾಗ್ಯ ಒದಗುವಂತೆಯೂ, ಅದರೊಂದಿಗೆ ಶಾಪದಿಂದ ಬಿಡುಗಡೆ ದೊರೆಯುವಂತೆಯೂ ವರವನ್ನು ಪಡೆದಳು. ಅವಳೇ ಈಗ ಹಿಡಿಂಬಿಯಾಗಿ ಜನಿಸಿ ಭೀಮನನ್ನು ಹಾಗೆ ಪ್ರಾರ್ಥಿಸಿಕೊಂಡಳು ಎಂದರ್ಥ.

೨) ಮೊದಲು ಅವಳಿಗೆ ಭೀಮನನ್ನು ಕಂಡಾಗ ಉಂಟಾದದ್ದು ಕಾಮವಾದರೂ ಮುಂದೆ ಶಾಪವಿಮುಕ್ತಿಗಾಗಿ ಪ್ರಾರ್ಥನೆ ಮಾಡುವ ಶುದ್ಧ ಚಿಂತನೆ ಹುಟ್ಟಿತು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

---

೫೧. ಪವಮಾನಸೂನೋಃ ಸಕಾಶಾತ್ ನಿಜತನುಂ ಪ್ರಾಪ್ತುಮಾಹ ಪತಿರ್ಭವೇತ್ಯಾಹ । – (ವೇ.)

೫೧. ನಿಜತನುಂ ಪವಮಾನಸೂನೋರಿತ್ಯತ್ರ ತೇನ = ಶಾಪವಿಮೋಚನಾಖ್ಯಕಾರಣೇನ ಪವಮಾನಸೂನೋಃ ಸಕಾಶಾತ್ ನಿಜತನುಂ ಪ್ರಾಪ್ತುಂ ಇತ್ಯಧ್ಯಾಹಾರೇಣ ಪುನರಾಹೇತಿ ಸಂಬಂಧಃ। ಪೂರ್ವಂ ಕಾಮವಶತ್ವಾದೇವಾಹ। ಇದಾನೀಂ ಶಾಪವಿಮೋಚನಾರ್ಥಮೇವಾಹೇತಿ ವಿವೇಕಃ ॥ – (ವಾ.)

ಜ್ಞಾನಂ ಚ ನೈಜಮಭಿದರ್ಶಯಿತುಂ ಪುನಶ್ಚ
ಪ್ರಾಹೇಶ್ವರೋಽಖಿಲಜಗದ್ಗುರುರಿಂದಿರೇಶಃ ।
ವ್ಯಾಸಸ್ವರೂಪ ಇಹ ಚೇತ್ಯ ಪರಶ್ವ ಏವ
ಮಾಂ ತೇ ಪ್ರದಾಸ್ಯತಿ ತದಾ ಪ್ರಕರೋಷಿ ಮೇಽರ್ಥ್ಯಮ್ ॥ ೫೨ ॥

ಅ: ತನ್ನ ಸ್ವಾಭಾವಿಕವಾದ ದಿವ್ಯಜ್ಞಾನವನ್ನು ತೋರಲೆಂದು ಹಿಡಿಂಬಿ ಪುನಃ ನುಡಿದಳು 'ಅಖಿಲ ಲೋಕಗುರುವಾದ ಶ್ರೀವ್ಯಾಸರೂಪದ ನಾರಾಯಣನು ನಾಡಿದ್ದು ಇಲ್ಲಿಗೆ ಬಂದು ನನ್ನನ್ನು ನಿನಗೆ ನೀಡುವನು. ಆಗ ನೀನು ನನ್ನ ಬಯಕೆಯನ್ನು ಪೂರೈಸುವಿ'.

ಎ: ಹೀಗೆ ಹೇಳುವ ಮೂಲಕ ತಾನು ಕೇವಲ ಕಾಮುಕಳಾಗಿ ಬಂದವಳಲ್ಲ, ದೇವಕಾರ್ಯದ ಹಿನ್ನೆಲೆಯಲ್ಲಿ ಹಾಗೆ ಬೇಡುತ್ತಿರುವವಳು ಎಂದು ಸ್ಪಷ್ಟಪಡಿಸಲು ಪ್ರಯತ್ನಿಸಿದಳು ಎಂದರ್ಥ. ಮೂಲಮಹಾಭಾರತದಲ್ಲಿ ಅವಳ ಹೆಸರನ್ನು **ಸಾಲಕಟಂಕಟೀ** ಎಂದು ಉಲ್ಲೇಖಿಸಲಾಗಿದೆ.

ನ ಯಾತುಧಾನ್ಯಹಂ ತ್ವಾರ್ಯೇ ನ ಚಾಸ್ಮಿ ರಜನೀಚರೀ ।
ಕನ್ಯಾ ರಕ್ಷಸ್ಸು ಸಾಧ್ವ್ಯಸ್ಮಿ ರಾಜ್ಞಿ ಸಾಲಕಟಂಕಟೇ ॥ – (ಆದಿ. ೧೫೪/೧೧)

ಇದರೊಂದಿಗೆ ಅವಳು ಪಾಂಡವರು ಅರಗಿನ ಮನೆಯಿಂದ ವಿದುರನ ಯೋಜನೆಯಂತೆ ಹೊರಬಂದ ವಿಚಾರವನ್ನು ಸಹ ತಿಳಿಸಿದ ವಿವರ ಮೂಲದಲ್ಲಿದೆ.

ಭೀಮನಿಂದ ಹಿಡಿಂಬವಧೆ

ಕಾಲೇ ತದೈವ ಕುಪಿತಃ ಪ್ರಯಯೌ ಹಿಡಿಂಬೋ
ಭೀಮಂ ನಿಹಂತುಮಪಿ ತಾಂ ಚ ವಿಜಸ್ವಸಾರಮ್ ।
ಭಕ್ಷಾರ್ಥಮೇವ ಹಿ ಪುರಾ ಸ ತು ತಾಂ ನ್ಯಯುಂಕ್ತ
ನೇತುಂ ಚ ತಾನಥ ಸಮಾಸದದಾಶು ಭೀಮಮ್ ॥ ೫೩ ॥

---

೫೨. ದಿವ್ಯಜ್ಞಾನೇನ ಪಶ್ಯಾಮಿ ಅತೀತಾನಾಗತಾನಹಮ್ । ...
ವ್ಯಾಸಂ ಕಮಲಪತ್ರಾಕ್ಷಂ ದೃಷ್ಟ್ವಾ ಶೋಕಂ ವಿಹಾಸ್ಯಥ ॥ – ಕೃ. ಭಾರತ (ಆದಿ. ೧೬೭/೨೭, ೨೯)

೫೩. ಪುರಾ ಭಕ್ಷಾರ್ಥಂ= ಭಕ್ಷಣಾರ್ಥಮ್। ತಾನ್ = ಪಾಂಡವಾನ್ ನೇತುಂ= ಆನೇತುಮೇವ ತಾಂ= ಹಿಡಿಂಬೀಂ ನ್ಯಯುಂಕ್ತ ಅಥ ಸಮಾಸದತ್ ॥ – (ವಾ.)

ಅ: ಅದೇ ಕಾಲಕ್ಕೆ ಕೋಪಗೊಂಡ ಹಿಡಿಂಬ ಭೀಮನನ್ನು ತನ್ನ ತಂಗಿಯಾದ ಹಿಡಿಂಬಿಯನ್ನೂ ಕೊಲ್ಲಲು ಅಲ್ಲಿಗೆ ಧಾವಿಸಿದ. ಅವನು ಅವಳನ್ನು ಕಳಿಸಿದ್ದೇ ಅವರನ್ನೆಲ್ಲ ತಿನ್ನಲೋಸುಗ ಹಿಡಿದು ತರಲೆಂದು. ಅವನು ಭೀಮನ ಬಳಿಗೆ ನುಗ್ಗಿದ.

ವಿ: ಹಿಡಿಂಬ ವಿಚಿತ್ರ ರಾಕ್ಷಸ. ತಂಗಿಯ ಮೂಲಕ ಅನ್ನ ಸಂಪಾದಿಸಿ ಬದುಕುತ್ತಿದ್ದ. ಅವನು ನಿಜವಾದ ಅರ್ಥದಲ್ಲಿ ರಾಕ್ಷಸ. ಸ್ತ್ರೀಯರನ್ನು ಸಂಪಾದನೆಗೆ ತೊಡಗಿಸಿ ಅವರ ಮೂಲಕ ಹೊಟ್ಟೆ ಹೊರೆಯುವ ಜನರೆಲ್ಲ ಹಿಡಿಂಬನಂತೆ ರಾಕ್ಷಸ ಸ್ವಭಾವದವರು ಎಂಬ ವಿಷಯವೂ ಇದರಿಂದ ಸೂಚಿತ. ಅವನಿಗೆ ತಡವಾದದ್ದಕ್ಕೆ ವಿಚಾರದ ಬದಲು ಕೋಪ ಬೇರೆ. ಅವನೀಗ ತಂಗಿಯ ಮೇಲೆ ಕೋಪಗೊಂಡು ಭೀಮನೊಂದಿಗೆ ಅವಳನ್ನೂ ತಿನ್ನಲು ಧಾವಿಸಿದ.

ಸಾ ಭೀಮಮೇವ ಶರಣಂ ಪ್ರಜಗಾಮ ತಾಂ ಚ
ಭ್ರಾತೄಂಶ್ಚ ಮಾತರಮಥಾವಿತುಮಭ್ಯಯಾತ್ ತಮ್ ।
ಭೀಮಃ ಸುದೂರಮಪಕೃಷ್ಯ ಸಹೋದರಾಣಾಂ
ನಿದ್ರಾಪ್ರಭಂಗಭಯತೋ ಯುಯುಧೇಽಮುನಾ ಚ ॥ ೫೪ ॥

ಅ: ಹಿಡಿಂಬಿ ಆಗ ಭೀಮನನ್ನೇ ಶರಣು ಹೊಂದಿದಳು. ಭೀಮ ಅವಳನ್ನು, ಸೋದರರನ್ನು ಹಾಗೆ ತಾಯಿಯನ್ನು ರಕ್ಷಿಸಲೆಂದು ಹಿಡಿಂಬನ ಮೇಲೆ ಏರಿ ಹೋದ. ಸಹೋದರರಿಗೆ ನಿದ್ರಾಭಂಗವಾದೀತೆಂಬ ಭಯದಿಂದ ಭೀಮ ಅವನನ್ನು ತುಂಬಾ ದೂರಕ್ಕೆ ಎಳೆದುಕೊಂಡು ಹೋಗಿ ಯುದ್ಧಕ್ಕೆ ತೊಡಗಿದ.

ವಿ: ೧) ಹಿಡಿಂಬಿ ಭೀಮನ ಬಳಿಗೆ ಬಂದಾಗ ತನ್ನ ವಿಷಯವನ್ನು ತಿಳಿಸಿ ಅವನು ತನ್ನನ್ನು ಮದುವೆಯಾದರೆ ಅವರನ್ನೆಲ್ಲ ಕಾಪಾಡುವುದಾಗಿ ಪ್ರಲೋಭನೆ ಒಡ್ಡಿದ್ದಳು. ಈಗ ಹಿಡಿಂಬ ತಿನ್ನ ಬಂದಾಗ ತನ್ನನ್ನೂ ಕಾಪಾಡಬೇಕೆಂದು ಭೀಮನನ್ನೇ ಪ್ರಾರ್ಥಿಸಿಕೊಂಡಳು. ಭೀಮನಿಗೆ ಸಮ್ಮತಿಯಿಲ್ಲದ್ದು ವಿವಾಹಕ್ಕೆ ಹೊರತು ರಕ್ಷಣೆಯ ಕಾರ್ಯಕ್ಕಲ್ಲ. ಅದಕ್ಕೆಂದೇ ಅವಳಿಗೆ ರಕ್ಷಣೆಯ ಭರವಸೆಯನ್ನು ನೀಡಿದ.

೨) ಹಿಡಿಂಬನೊಂದಿಗೆ ಯುದ್ಧ ಮಾಡುವಾಗಲೂ ಭೀಮನದ್ದು ಯುಧಿಷ್ಠಿರಾದಿಗಳ ಬಗ್ಗೆ ಅಪಾರ ಕರುಣೆ. ಅವರ ಸುಖನಿದ್ರೆಗೆ ಅಡ್ಡಿಯಾಗಬಾರದೆಂಬ ಯೋಚನೆ. ಅದಕ್ಕಾಗಿ ಹಿಡಿಂಬನನ್ನು ದೂರಕ್ಕೆ ಎಳೆದುಕೊಂಡು ಹೋಗಿ ಯುದ್ಧಕ್ಕೆ ತೊಡಗಿದ.

ತೌ ಮುಷ್ಟಿಭಿಸ್ತರುಭಿರಶ್ಮಭಿರದ್ರಿಭಿಶ್ಚ
ಯುಧ್ವಾ ನಿತಾಂತರವತಃ ಪ್ರತಿಬೋಧಿತಾಂಸ್ತಾನ್ ।
ಸಂಚಕ್ರತುಸ್ತದನು ಸೋದರಸಂಭ್ರಮಂ ತಂ
ದೃಷ್ಟ್ವೈವ ಮಾರುತಿರಹನ್ನುರಸಿ ಸ್ಮ ರಕ್ಷಃ ॥ ೫೫ ॥

ಅ: ಅವರಿಬ್ಬರೂ ಮರಗಳಿಂದಲೂ, ಬಂಡೆಗಳಿಂದಲೂ, ಬೆಟ್ಟಗಳಿಂದಲೂ ಯುದ್ಧ ಮಾಡಿ ಭಾರೀ ಶಬ್ದದಿಂದ ಅವರೆಲ್ಲ ಎಚ್ಚರಗೊಳ್ಳುವಂತೆ ಮಾಡಿದರು. ಸೋದರರ ಕಾತರವನ್ನು ಕಂಡು ಭೀಮಸೇನ ಒಡನೆಯೇ ಆ ರಾಕ್ಷಸನ ಎದೆಯ ಮೇಲೆ ಗುದ್ದಿದ.

ಎ: ಭೀಮ ಹಿಡಿಂಬರ ಯುದ್ಧವನ್ನು ಇಂದ್ರ ವೃತ್ರಾಸುರರ ಯುದ್ಧದಂತೆ ಅವೋಫ ಎಂದು ಮಹಾಭಾರತ ವರ್ಣಿಸಿದೆ.

ತದಾऽऽಸೀತ್ ತುಮುಲಂ ಯುದ್ಧಂ ಭೀಮಸೇನಹಿಡಿಂಬಯೋಃ ।
ಸರ್ವಾಸ್ತ್ರವಿದುಷೋರ್ಘೋರಂ ವೃತ್ರವಾಸವಯೋರಿವ ॥ – (ವನ. ೧೨/೧೦೮)

ಐದು ಯೋಜನ ವಿಸ್ತಾರದ ಆ ಕಾಡೆಲ್ಲಾ ಕ್ಷಣ ಮಾತ್ರದಲ್ಲಿ ಬೋಳಾಯಿತೆಂಬ ಮಾತೂ ಅಲ್ಲಿದೆ (ಆದಿಪರ್ವ ಅಧ್ಯಾಯ ೧೫೨ ಶ್ಲೋಕ ೪೦–೪೫) :

ತದ್ವನಂ ಪರಿತಃ ಪಂಚ ಯೋಜನಂ ನಿರ್ಮಹೀರುಹಮ್ ।
ನಿರ್ಲತಾಗುಲ್ಮಪಾಷಾಣಂ ನಿರ್ಮೃಗಂ ಚಕ್ರತುರ್ಭೃಶಮ್ ॥
– ಕೃ.ಭಾರತ(ಆದಿ. ೧೬೫/೫೭)

ಅರ್ಜುನ 'ತಡವಾಡಿದಲ್ಲಿ ರಾಕ್ಷಸ ಮಾಯಾಯುದ್ಧ ಮಾಡಬಹುದು' ಎಂದು ಗಾಬರಿಪಟ್ಟಾಗ ಅವನ ಭಯವನ್ನು ಪರಿಹರಿಸಲೆಂದು ಭೀಮಸೇನ ಹಿಡಿಂಬನನ್ನು ಆ ಕ್ಷಣವೇ ಸಂಹರಿಸಲು ಅವನ ಎದೆಗೆ ಹೊಡೆದ ಎಂದರ್ಥ. ಇಲ್ಲಿಯ ಸೋದರ ಸಂಭ್ರಮ ಎಂಬುದಕ್ಕೆ ವಿಶೇಷವಾಗಿ ಅರ್ಜುನನ ಕಾತರ ಎಂದು ಅರ್ಥಮಾಡಿಕೊಳ್ಳಬೇಕು.

ತದ್ಭೀಮಬಾಹುಬಲತಾಡಿತಮೀಶವಾಕ್ಯಾತ್
ಸರ್ವೈರಜೇಯಮಪಿ ಭೂಮಿತಲೇ ಪಪಾತ ।
ವಕ್ತ್ರಪ್ರವದ್ಬಹುಲಶೋಣಿತಮಾಪ ಮೃತ್ಯುಂ
ಪ್ರಾಯಾತ್ ತಮೋऽಂಧಮಪಿ ನಿತ್ಯಮಥ ಕ್ರಮೇಣ ॥ ೫೬ ॥

---

೫೫. ತಂ ಸೋದರಸಂಭ್ರಮಂ ಭ್ರಾತೃಭಯಮ್ । ಸಂಭ್ರಮಶ್ಚಾದರೇ ಭಯ ಇತ್ಯಮರಃ । – (ಜ.)

ಅ: ಭೀಮನ ಬಾಹುಬಲದಿಂದ ಹೊಡೆಯಲ್ಪಟ್ಟ ಹಿಡಿಂಬ ಶಿವನ ವರದಿಂದಾಗಿ ಎಲ್ಲರಿಂದಲೂ ಅಜೇಯನಾಗಿದ್ದರೂ ನೆಲದ ಮೇಲೆ ಉರುಳಿದ. ಬಾಯಿಂದ ಬಹಳವಾಗಿ ರಕ್ತಕಾರಿ ಸತ್ತುಹೋದ. ಮುಂದೆ ಕ್ರಮವಾಗಿ ನಿತ್ಯವಾದ ಅಂಧಂತಮಸ್ಸಿಗೂ ತೆರಳಿದ.

ವಿ: ಶಿವನ ವರದಿಂದಾಗಿ ಬಲರಾಮನಿಂದಲೂ ಹತನಾಗದಿದ್ದ ಹಿಡಿಂಬ ಭೀಮನ ಒಂದೇ ಪೆಟ್ಟಿಗೆ ಯಮವಶನಾದ ಎಂದರ್ಥ. ಬಲರಾಮ ಹಿಡಿಂಬನನ್ನು ಎತ್ತಿ ಒಂದೂಕಾಲು ಯೋಜನ ದೂರಕ್ಕೆ ಬಿಸಾಡಿದ್ದ ವಿವರ ಹದಿನೇಳನೇ ಅಧ್ಯಾಯದಲ್ಲಿ ಬಂದಿದೆ (೧೭/೨೬೪).

ವ್ಯಾಸಾಗಮನ - ಭೀಮ ಹಿಡಿಂಬಿಯರ ವಿವಾಹ

ಹತ್ವೈವ ಶರ್ವವರರಕ್ಷಿತರಾಕ್ಷಸಂ ತಂ
ಸರ್ವೈರವಧ್ಯಮಪಿ ಸೋದರಮಾತೃಯುಕ್ತಃ ।
ಭೀಮೋ ಯಯೌ ತಮನು ಸಾ ಪ್ರಯಯೌ ಹಿಡಿಂಬೀ
ಕುಂತೀಂ ಯುಧಿಷ್ಠಿರಮಥಾಸ್ಯ ಕೃತೇ ಯಯಾಚೇ ॥ ೫೭ ॥

ಅ: ಶಿವವರದಿಂದ ಪಾಲಿತನಾಗಿದ್ದ, ಇತರರಿಂದ ಅವಧ್ಯನಾಗಿದ್ದ ಆ ರಾಕ್ಷಸನನ್ನು ಕೊಂದು ಭೀಮಸೇನ ತಾಯಿಯೊಂದಿಗೂ, ಸಹೋದರರೊಂದಿಗೂ ಕೂಡಿಕೊಂಡು ಹೊರಟು ನಿಂತ. ಹಿಡಿಂಬಿಯೂ ಅವರನ್ನು ಹಿಂಬಾಲಿಸಿದಳು, ಭೀಮನನ್ನು ಒಪ್ಪಿಸಲು ಕುಂತಿಯನ್ನು, ಯುಧಿಷ್ಠಿರನನ್ನು ಬೇಡಿಕೊಂಡಳು.

ತಾಭ್ಯಾಮನೂಕ್ತಮಪಿ ಯನ್ನ ಕರೋತಿ ಭೀಮಃ
ಪ್ರಾದುರ್ಬಭೂವ ನಿಖಿಲೋರುಗುಣಾಭಿಪೂರ್ಣಃ ।
ವ್ಯಾಸಾತ್ಮಕೋ ಹರಿರನಂತಸುಖಾಂಬುರಾಶಿ-
ರ್ವಿದ್ಯಾಮರೀಚಿವಿತತಃ ಸಕಲೋತ್ತಮೋऽಲಮ್ ॥ ೫೮ ॥

---

೫೬. ಬಾಹುಭ್ಯಾಂ ಯೋಧಯಿತ್ವಾ ತಂ ಬಲವಾನ್ ಪಾಂಡುನಂದನಃ ।
ಮಧ್ಯೇ ಭಂಕ್ತ್ವಾ ಮಹಾಬಾಹುರ್ಹರ್ಷಯಾಮಾಸ ಪಾಂಡವಾನ್ ॥ – ಭಾರತ (ಆದಿ. ೧೫೩/೩೨)

೫೮. ತಸ್ಯಾಂ ರಾತ್ರ್ಯಾಂ ವ್ಯತೀತಾಯಾಮಾಜಗಾಮ ಮಹಾವ್ರತಃ ।
ಪಾರಾಶರ್ಯೋ ಮಹಾಪ್ರಾಜ್ಞೋ ದಿವ್ಯದರ್ಶೀ ಮಹಾತಪಾಃ ॥ – ಕೃ. ಭಾರತ (ಆದಿ. ೧೬೮/೩೨)

೫೮. ಅವರಿಬ್ಬರೂ ಎಷ್ಟು ಹೇಳಿದರೂ ಭೀಮನು ಅದನ್ನು ನಡೆಸದಿದ್ದಾಗ ಸಕಲ ಶ್ರೇಷ್ಠ ಗುಣಗಳಿಂದ ಪರಿಪೂರ್ಣನಾದ, ಅನಂತ ಸುಖಸಾಗರನಾದ, ತನ್ನ ಜ್ಞಾನಕಿರಣಗಳಿಂದ ವ್ಯಾಪ್ತನಾದ, ಸರ್ವೋತ್ತಮನಾದ ವ್ಯಾಸರೂಪಿ ಶ್ರೀಹರಿ ಅಲ್ಲಿ ಪ್ರಾದುರ್ಭವಿಸಿದ.

ವಿ: ೧) ಆ ವೇಳೆಗೆ ಅಲ್ಲಿಗೆ ಶ್ರೀವೇದವ್ಯಾಸರು ಆಗಮಿಸಿದರು ಎಂದರ್ಥ. ಅವರು ಸಾಮಾನ್ಯ ಋಷಿಯಲ್ಲ, ಸಾಕ್ಷಾತ್ ನಾರಾಯಣ ಎಂಬುದನ್ನು ಹೀಗೆ ಅನೇಕ ವಿಶೇಷಣಗಳಿಂದ ಸ್ಫುಟಪಡಿಸಿರುವರು ಎಂದು ತಿಳಿಯಬೇಕು.

೨) ಕುಂತಿ ಯುಧಿಷ್ಠಿರರು ಸಂಬಂಧದ ದೃಷ್ಟಿಯಿಂದ ದೊಡ್ಡವರಾದರೂ ಅವರ ಮಾತಿಗೆ ಕರುಣೆ ಹಿನ್ನೆಲೆಯಾಗಿತ್ತೇ ಹೊರತು ಪರಿಜ್ಞಾನವಲ್ಲ. ಅದರಿಂದಾಗಿಯೇ ಅವರ ಮಾತನ್ನು ಭೀಮಸೇನ ನಡೆಸಲಿಲ್ಲ ಎಂದರ್ಥ.

೩) ಹಿರಿಯರು ತಮ್ಮ ಅಧಿಕಾರ ವ್ಯಾಪ್ತಿಯಿಂದ ಹೊರತಾದ ಆದೇಶ ನೀಡಿದಾಗ ಅದನ್ನು ಪಾಲಿಸದಿರುವುದು ಅಧರ್ಮವಾಗುವುದಿಲ್ಲ ಎಂಬ ತತ್ವವನ್ನು ಆ ಮೂಲಕ ತಿಳಿಸಿದ ಎಂದು ತಿಳಿಯಬೇಕು. ಶ್ರೀವ್ಯಾಸರು ಎಂದಿನಂತೆ ಕಣ್ಣಮುಂದೆ ಕಾಣಿಸಿಕೊಂಡರು. ವ್ಯಾಸರೂಪದ ಅಪೂರ್ವತೆಗಳಲ್ಲಿ ಇದೂ ಒಂದು.

ದೃಷ್ಟ್ವೈವ ತಂ ಪರಮಮೋದಿನ ಆಶು ಪಾರ್ಥಾ
ಮಾತ್ರಾ ಸಹೈವ ಪರಿಪೂಜ್ಯ ಗುರುಂ ವಿರಿಂಚೇಃ ।
ಉಲ್ಲಾಲಿತಾಶ್ಚ ಹರಿಣಾ ಪರಮಾತಿಹಾರ್ದ-
ಪ್ರೋತ್ಫುಲ್ಲಪದ್ಮನಯನೇನ ತದೋಪವಿಷ್ಟಾಃ ॥ ೫೯ ॥

ಅ: ಬ್ರಹ್ಮನಿಗೂ ಗುರುವಾದ ಅವರನ್ನು ಕಾಣುತ್ತಲೇ ಪಾಂಡವರು ಪರಮಾನಂದ ಹೊಂದಿದರು; ತಾಯಿಯೊಂದಿಗೆ ಕೂಡಿ ಅವರನ್ನು ಪರಿಪರಿಯಾಗಿ ಉಪಚರಿಸಿದರು. ಪರಮ ಪ್ರೀತಿಯಿಂದ ಅರಳಿದ ಕಮಲದಂತಹ ಕಣ್ಣುಗಳಿಂದ ಶ್ರೀವ್ಯಾಸರು ಅವರನ್ನು ಸಂತೋಷ-ಪಡಿಸಿದರು; ಅವರು ಆಗ ಕುಳಿತರು.

ವಿ: ಶ್ರೀವ್ಯಾಸರನ್ನು ಪಾಂಡವರೆಲ್ಲ ಪರಿಪರಿಯಾಗಿ ಉಪಚರಿಸಿ ಪೂಜಿಸಿದರೆ ಪ್ರತಿಯಾಗಿ ವ್ಯಾಸರು ಅವರನ್ನು ಕರುಣೆ ತುಂಬಿದ ಕಣ್ಣುಗಳಿಂದ ನೋಡಿ ಆನಂದಪಡಿಸಿದರು ಎಂದರ್ಥ. ಭೀಮ ಅವರನ್ನು ವಿಶೇಷವಾಗಿ ಆರಾಧಿಸಿದ ವಿವರ ಸುಮಧ್ವವಿಜಯದಲ್ಲಿ (೧/೩೩) ಬಂದಿದೆ :

ಸಮರ್ಪ್ಯ ಕೃತ್ಯಾನಿ ಕೃತೀ ಕೃತಾನಿ ವ್ಯಾಸಾಯ ಭೂಮ್ನೇ ಸುಕೃತಾಯ ತಾವತ್ ।
ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸ ಶುದ್ಧಬುದ್ಧಿಃ ॥

ತಾನ್ ಭಕ್ತಿನಮ್ರಶಿರಸಃ ಸಮುದೀಕ್ಷ್ಯ ಕೃಷ್ಣೋ
ಭೀಮಂ ಜಗಾದ ನತ ಆಶು ಹಿಡಿಂಬಯಾ ಚ ।
ಏತಾಂ ಗೃಹಾಣ ಯುವತೀಂ ಸುರಸದ್ಮಶೋಭಾಂ
ಜಾತೇ ಸುತೇ ಸಹಸುತಾ ಪ್ರತಿಯಾತು ಚೈಷಾ ॥ ೬೦ ॥

ಅ: ಪಾಂಡವರು ಭಕ್ತಿಯಿಂದ ತಲೆಬಾಗಿದರು; ಹಿಡಿಂಬಿಯೂ ನಮಸ್ಕರಿಸಿದಳು. ಅವರನ್ನು ಪ್ರೀತಿಯಿಂದ ನೋಡುತ್ತ ವೇದವ್ಯಾಸರು ಭೀಮನಿಗೆ ಹೇಳಿದರು: 'ಸುರಲೋಕಭೂಷಣ-ಳಾದ ಈ ತರುಣಿಯನ್ನು ನೀನು ವಿವಾಹವಾಗು. ಪುತ್ರ ಜನಿಸುತ್ತಲೇ ಇವಳು ಅವನೊಂದಿಗೆ ತೆರಳಲಿ'.

ವಿ: ಇವರಿಗೆ ಗಂಡು ಮಗುವೆ ಜನಿಸುವುದು ಎಂದು ಶ್ರೀವ್ಯಾಸರು ಇಲ್ಲಿ ತಿಳಿಸಿರುವುದು ಅವರ ಸರ್ವಜ್ಞತ್ವಕ್ಕೆ ದ್ಯೋತಕ.

ಏವಂ ಬ್ರುವತ್ಯಗಣಿತೋರುಗುಣೇ ರಮೇಶ
ಓಮಿತ್ಯುದೀರ್ಯ ಕೃತವಾಂಶ್ಚ ತಥೈವ ಭೀಮಃ ।
ಸ್ಕಂಧೇನ ಚೋಹ್ಯ ವಿಬುಧಾಚರಿತಪ್ರದೇಶಾನ್
ಭೀಮಂ ಪ್ರಯಾತ್ಯುದಯ ಏವ ರವೇರ್ಹಿಡಿಂಬೀ ॥ ೬೧ ॥

ಅ: ಹೀಗೆ ಅನಂತಗುಣನೂ, ರಮಾಪತಿಯೂ ಆದ ಶ್ರೀವೇದವ್ಯಾಸರು ನುಡಿಯುತ್ತಲೇ ಭೀಮಸೇನ ಆಗಲಿ ಎಂದು ಹಾಗೆಯೇ ನಡೆದುಕೊಂಡ. ಹಿಡಿಂಬಿ ಪ್ರತಿದಿನ ಸೂರ್ಯೋದಯ ಕಾಲದಲ್ಲೇ ಭೀಮನನ್ನು ಭುಜದ ಮೇಲೆ ಹೊತ್ತು ದೇವತೆಗಳು ಸಂಚರಿಸುವ ಪ್ರದೇಶಗಳಿಗೆ ತೆರಳಿ ಬಿಡುತ್ತಿದ್ದಳು.

ವಿ: ೧) ಕುಂತಿ ಯುಧಿಷ್ಠಿರರ ಮಾತಿಗೆ ಒಪ್ಪದಿದ್ದ ಭೀಮ, ಶ್ರೀವ್ಯಾಸರ ಮಾತಿಗೆ ತಕ್ಷಣ ಒಪ್ಪಿದ, ಹರಿಯಾಜ್ಞೆಯನ್ನು ಭೀಮಸೇನ ಪಾಲಿಸುತ್ತಿದ್ದ ರೀತಿಯಿದು, ಹರಿಯು ಸರ್ವಜ್ಞ. ಶಾಸ್ತ್ರಗಳೆಲ್ಲಾ ವ್ಯಾಸವಾಣಿ. ಎಂದಮೇಲೆ ಅವರ ಮಾತನ್ನು ನಡೆಸುವುದೇ ವಿಧಿ ಎಂದು ಭೀಮು ಆ

---

೬೦. ಸುರಸದ್ಮಶೋಭಾಂ = ಸ್ವರ್ಲೋಕಾಲಂಕಾರಭೂತಾಮ್ ... । – (ಜ.)

೬೧. ದೇವಸಂಚಾರಯುಕ್ತಪ್ರದೇಶಾನ್। ದೇವೋದ್ಯಾನವನಾನೀತ್ಯರ್ಥಃ। – (ಜ.)

ಮೂಲಕ ತೋರಿಸಿದ. ಕುಂತಿ ಮೊದಲಾದವರು ಕೇವಲ ಹಿಡಿಂಬಿಯ ಬಗ್ಗೆ ಅನುಕಂಪದಿಂದ ಮಾತನಾಡಿದರೆ, ವ್ಯಾಸರು ಸರ್ವಜ್ಞರಾಗಿ ಹೇಳುತ್ತಿರುವರು ಎಂಬುದನ್ನು ಪೂರ್ಣಪ್ರಜ್ಞನಾದ ಭೀಮು ತಿಳಿದು ಅದರಂತೆ ನಡೆದ ಎಂದರ್ಥ.

೨) ಎಲ್ಲ ಬಲ್ಲ ಭೀಮನಿಗೆ ಹಿಡಿಂಬಿಯ ಹಿನ್ನೆಲೆ ಎಲ್ಲ ಗೊತ್ತಿದ್ದರೂ, ಇತರರಿಗೆ ಗೊತ್ತಿಲ್ಲದ ಆ ವಿಷಯದಲ್ಲಿ ತಾನು ಹಾಗೆ ನಡೆದರೆ ಅವರೆಲ್ಲ ಭೀಮು ಸ್ತ್ರೀ ಮೋಹದಿಂದಾಗಿ ಧರ್ಮ ತಪ್ಪಿದ ಎಂದು ತಪ್ಪು ತಿಳಿಯುವ ಸಂಭವ ಇರುತ್ತಿತ್ತು ಎಂಬ ಕಾರಣದಿಂದ ಆ ಮುನ್ನ ವಿವಾಹವಾಗಲು ಒಪ್ಪಿರಲಿಲ್ಲ. ಧರ್ಮವನ್ನು ಆಚರಿಸುವಾಗ ಅದನ್ನು ಧರ್ಮಸಮ್ಮತ ಎಂದು ಇತರರು ಚೆನ್ನಾಗಿ ಅರಿಯುವಂತೆ ಆಚರಿಸಬೇಕೇ ಹೊರತು ಗೊಂದಲ ಹುಟ್ಟಿಸುವ ರೀತಿಯಲ್ಲಿ ಅಲ್ಲ ಎಂಬುದನ್ನು ಭೀಮು ಆ ಮೂಲಕ ತೋರಿಸಿದ ಎಂದು ತಿಳಿಯಬೇಕು.

೩) ಭೀಮು ಹೀಗೆ ಮೇಲ್ನೋಟಕ್ಕೆ ನಿಷಿದ್ಧವಾದ ಆ ಕಾರ್ಯವನ್ನು ವೇದವ್ಯಾಸರ ಅಪ್ಪಣೆಯಂತೆ ನಿಶ್ಶಂಕೆಯಿಂದ ನಡೆಸಿದನು. ಆದರೆ, ತಮ್ಮ ಗುರು ಸಾಕ್ಷಾತ್ ಪರಶುರಾಮ ರೂಪದ ಶ್ರೀಹರಿ ಅಂಬೆಯನ್ನು ಮದುವೆಯಾಗಲು ನೀಡಿದ ಆದೇಶವನ್ನು ಭೀಷ್ಮರು ನಡೆಸದೇ ಅದನ್ನು ಅಧರ್ಮವೆಂದು ಶಂಕಿಸಿ ಅವರೊಂದಿಗೆ ಯುದ್ಧಕ್ಕೇ ನಿಂತ ವಿವರ ಹಿಂದೆ ಬಂದಿದೆ. ಭೀಷ್ಮರಿಗೆ ಪರಶುರಾಮರ ಆದೇಶಕ್ಕಿಂತ ಶುಷ್ಕಧರ್ಮ ಪ್ರಧಾನವಾಯಿತು. ಆದರೆ, ಭೀಮನಿಗೆ ಶುಷ್ಕ ಧರ್ಮಕ್ಕಿಂತ ವ್ಯಾಸವಾಣಿ ಪ್ರಧಾನವಾಯಿತು. ಭೀಷ್ಮರು ಧರ್ಮ ತಪ್ಪಿದ ಪ್ರಸಂಗವಾಗಿ ಅಂಬೆಯ ಪ್ರಸಂಗ ನಡೆದರೆ, ಈ ಹಿಡಿಂಬಿಯ ಪ್ರಸಂಗ ಭೀಮಸೇನನ ಪರಿಶುದ್ಧ ಧರ್ಮನಿಷ್ಠೆಗೂ ಸಾಧಕವಾಗುವ ಪ್ರಸಂಗವಾಯಿತು.

೪) ಭೀಮು ಭೀಷ್ಮರ ವ್ಯತ್ಯಾಸವೆಂದರೆ ಇದೇ. ಹೆಸರಿಗೆ ಭೀಷ್ಮ ಪಿತಾಮಹ, ಭೀಮು ಪೌತ್ರ. ಆದರೆ, ತಾತ ಸಾಧಿಸಲಾಗದ್ದನ್ನು ಮೊಮ್ಮಗ ಸಾಧಿಸಿದ. ಇದು ಮುಂದೆ ಭೀಮು ಕುರುಕ್ಷೇತ್ರ ಸಮರದಲ್ಲಿ ಅದ್ಭುತ ಜಯಗಳಿಸುವುದಕ್ಕೂ ಭೀಷ್ಮರು ಶರಮಂಚದ ಮೇಲೆ ಮಲಗುವುದಕ್ಕೂ ಮುನ್ಸೂಚನೆಯಾಯಿತು ಎಂದು ಭಾವಿಸಬಹುದು. ವ್ಯಾಸರೂಪ ಭೀಮನಿಗೆ ಗುರುವಾದರೆ, ಪರಶುರಾಮ ರೂಪ ಭೀಷ್ಮರಿಗೆ ಗುರು.

೫) ದೈವಾಜ್ಞೆಯೊಂದಿಗೆ ಗುರ್ವಾಜ್ಞೆಯನ್ನೂ ಮೀರಿದ ಅಪರಾಧ ಭೀಷ್ಮರದಾಯಿತು ಎಂದೂ ಭಾವಿಸಬಹುದು. ಭೀಷ್ಮರು ನಿರಾಕರಿಸಿದ್ದು ತಮ್ಮ ಸ್ವರೂಪದ ಪತ್ನಿಯಾಗಿದ್ದ ಕ್ಷತ್ರಿಯಳಾಗಿ ಜನಿಸಿದ್ದ ಅಂಬೆಯನ್ನು, ಭೀಮು ವ್ಯಾಸರ ಮಾತಿನಂತೆ ಸ್ವೀಕರಿಸಿದ್ದು ಸ್ವರೂಪದಲ್ಲಿ ತನ್ನ ಪತ್ನಿಯೂ ಅಲ್ಲದ, ಈ ಲೋಕದಲ್ಲಿ ರಾಕ್ಷಸ ಯೋನಿಯ ಒಬ್ಬ ಸ್ತ್ರೀಯನ್ನು ಎಂಬುದರಲ್ಲೂ ಭೀಮನ ವ್ಯಾಸಭಕ್ತಿ ಎದ್ದು ಕಾಣುತ್ತದೆ.

ಘಟೋತ್ಕಚನ ಜನನ

ಸಾ ನಂದನಾದಿಷು ವನೇಷು ವಿಹೃತ್ಯ ತೇನ
ಸಾಯಂ ಪ್ರಯಾತಿ ಪೃಥಯಾ ಸಹಿತಾಂಶ್ಚ ಪಾರ್ಥಾನ್ ।
ಏವಂ ಯಯಾವಪಿ ತಯೋರಿಹ ವತ್ಸರಾರ್ಧೋ
ಜಾತಶ್ಚ ಸೂನುರತಿವೀರ್ಯಬಲೋಪಪನ್ನಃ ॥ ೬೨ ॥

ಅ: ಅವಳು ನಂದನಾದಿವನಗಳಲ್ಲಿ ಭೀಮನೊಂದಿಗೆ ವಿಹಾರ ಮಾಡಿ ಅವರೊಂದಿಗೆ ಪ್ರತಿನಿತ್ಯ ಸಾಯಂಕಾಲದ ಹೊತ್ತಿಗೆ ಕುಂತಿ ಹಾಗೂ ಇತರ ಪಾಂಡವರಿದ್ದಲ್ಲಿಗೆ ಮರಳುತ್ತಿದ್ದಳು. ಹೀಗೆ ಅರ್ಧವರ್ಷ ಕಳೆಯಿತು. ಅವರಿಗೆ ಅತ್ಯಂತವೀರ್ಯಬಲಗಳಿಂದ ಕೂಡಿದ್ದ ಪುತ್ರ ಜನಿಸಿದ.

ದೇವೋಽಪಿ ರಾಕ್ಷಸತನುರ್ನಿರ್ಋತಿಃ ಪುರಾ ಯ
ಆವೇಶಯುಕ್ ಚ ಗಿರಿಶಸ್ಯ ಘಟೋತ್ಕಚಾಖ್ಯಃ ।
ಪೂರ್ವಂ ಘಟೋಪಮಮಮುಷ್ಯ ಶಿರೋ ಬಭೂವ
ಕೇಶಾ ನಿಮೇಷತ ಉದಾಸುರತೋ ಹಿ ನಾಮ ॥ ೬೩ ॥

---

೬೨. ಏವಂ ಯಯಾವಪೀತ್ಯತ್ರ ವತ್ಸರಾರ್ಧೋಽಷ್ಟೇವಂ ಯಯಾವಿತಿ ಸಂಬಂಧಃ ॥ –(ವಾ.)

೬೨. ಸಾ ನಂದನಾದಿಷು ವನೇಷು ವಿಹೃತ್ಯ ತೇನೇತ್ಯನೇನ ದಿವಾರಮಣಂ ಭೀಮಸ್ಯೋಚ್ಯತೇ । ತತ್ ತು – 'ಯೇ ದಿವಾ ರತ್ಯಾ ಸಂಯುಜ್ಯಂತೇ'ತ್ಯಾದಿಶ್ರುತ್ಯಾ ನಿಷಿದ್ಧಂ ಭೀಮಸ್ಯ ಕಥಮುಪಪನ್ನಂ ಭವೇತ್ । ತಸ್ಯ ಪರಶುಕ್ಷತ್ರಯಾಂತರ್ಗತತ್ವಾತ್ ಇತ್ಯಾಶಂಕಾ ಬ್ರಹ್ಮವಾಯ್ವೋಃ ಹರೇರಾಜ್ಞಾಂ ವಿನಾ ಕಾರ್ಯಮಾತ್ರಾಕರಣತ್ವಾತ್ ನಿರಸ್ತಾ ಜ್ಞಾತವ್ಯಾ । ಕೇಚಿತ್ ತು 'ಯೇ ದಿವಾ ರತ್ಯಾ ಸಂಯುಜ್ಯಂತೇ' ಇತಿ ಶ್ರುತಿವಾಕ್ಯೇನ ದಿವಾರಮಣಸ್ಯ ಪಾಪಹೇತುತ್ವಾತ್ ಭೂಮೌ ರಮಣೇ ಪಾಪಸಂಬಂಧಭೀತ್ಯಾ ನಂದನಾದಿಷು ವಿಹಾರ ಇತಿ ವರ್ಣಯಂತಿ । ತೇಷಾಂ ತತ್ರ ಪಾಪಾದಿಚರಣಂ ನ ದೋಷ ಇತ್ಯಭಿಪ್ರಾಯಶ್ಚೇತ್ 'ಪೂರ್ವಂ ಶಚೀರಮಣಮಿಚ್ಛತ ಏಷ ವಿಷ್ಣಂ ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ । ತೇನೈವ ಮಾನುಷಮವಾಪ ರತಿಸ್ಥ ಏವ ಪಂಚತ್ವಮಾಪ ರತಿವಿಷ್ಣಮಪುತ್ರತಾಂ ಚ॥' ಇತ್ಯಾದಿನಾ ತತ್ರಸ್ಥಾನಾಮಪಿ ಪಾಪಶ್ರವಣಾತ್ ಕಥಂ ತತ್ರತ್ಯಾನಾಂ ಪಾಪಸಂಬಂಧಾಭಾವ ಇತಿ ತೇ ಪ್ರಷ್ಟವ್ಯಾಃ । ತಸ್ಯೋತ್ತಮತ್ವಮಿತ್ಯಭಿಪ್ರಾಯಶ್ಚೇತ್ 'ಶ್ರುತಿಸ್ಮೃತೀ ಹರೇರಾಜ್ಞೇ' ಇತ್ಯುಕ್ತತ್ವಾತ್ ಶ್ರುತ್ಯಾ ನಿಷಿದ್ಧೋ ದಿವಾರಮಣಂ ಕಥಂ ಸ್ವೋತ್ತಮದ್ರೋಹೋ ನ ಸ್ಯಾತ್? –(ಮ.)

ಜಾತಶ್ಚ ಸೂನುರಿತಿ –

'ಸದ್ಯೋ ಹಿ ಗರ್ಭಂ ರಾಕ್ಷಸ್ಯೋ ಲಭಂತೇ ಪ್ರಸವಂತಿ ಚ' ಇತಿ । –(ಮ.)

೬೩. ಪೂರ್ವಂ ಘಟವದ್ವಿದ್ಯಮಾನಂ ಪಶ್ಚಾದುದ್ಗತ ಕಚಂ ಶಿರೋ ಯಸ್ಯ ಸ ಘಟೋತ್ಕಚ ಇತಿ ವಿಗ್ರಹೋ ದ್ರಷ್ಟವ್ಯಃ। –(ತಾ.)

ಅ: ಹಿಂದೆಯೂ ರಾಕ್ಷಸರೂಪದ ನಿರ್ಋತಿ ಎಂಬ ದೇವತೆ ಶಿವನ ಆವೇಶದಿಂದ ಕೂಡಿ ಘಟೋತ್ಕಚನಾಗಿ ಜನಿಸಿದ. ಮೊದಲಿಗೆ ಅವನ ತಲೆ ಗಡಿಗೆಯಂತೆ ಇದ್ದಿತು. ಮರು ನಿಮಿಷದಲ್ಲಿ ಅವನ ತಲೆತುಂಬ ಕೂದಲುಗಳು ಒಡಮೂಡಿದವು. ಅದಕ್ಕೆಂದೇ ಅವನಿಗೆ ಆ ಹೆಸರು.

ವಿ: ೧) ನಿರ್ಋತಿ ಎಂಬ ದಿಕ್ಪಾಲಕ ರುದ್ರಾವೇಶದಿಂದ ಕೂಡಿ ಘಟೋತ್ಕಚನಾಗಿ ಜನಿಸಿದ. ಹುಟ್ಟುವಾಗ ಗಡಿಗೆಯಂತೆ ಬೋಳಾಗಿದ್ದ ಅವನ ತಲೆಯಲ್ಲಿ ಮರುಕ್ಷಣದಲ್ಲೇ ತಲೆತುಂಬ ಕೂದಲುಗಳು ಕಾಣಿಸಿಕೊಂಡದ್ದರಿಂದ ಅವನಿಗೆ ಘಟೋತ್ಕಚ ಎಂದು ಹೆಸರಾಯಿತು ಎಂದರ್ಥ.

೨) ಭೀಮ ಹಿಡಿಂಬಿ ಎಂಬ ರಾಕ್ಷಸ ಕನ್ಯೆಯನ್ನು ವಿವಾಹವಾಗಿ ಪುತ್ರನನ್ನು ಪಡೆದ ಈ ಪ್ರಸಂಗ ಶ್ರೀಕೃಷ್ಣನು ಕರಡಿರೂಪದ ಜಾಂಬವಂತನ ಪುತ್ರಿಯಾದ ಜಾಂಬವತಿಯನ್ನು ವಿವಾಹವಾಗಿ ಸಾಂಬನನ್ನು ಪುತ್ರನನ್ನಾಗಿ ಪಡೆದ ಪ್ರಸಂಗವನ್ನು ಜ್ಞಾಪಿಸುವಂತಿದೆ. ಶ್ರೀಹರಿವಾಯುಗಳಿಗೆ ಸಾಕ್ಷಾತ್ ಬಿಂಬಪ್ರತಿಬಿಂಬಭಾವ ಎಂಬುದಕ್ಕೂ ಇದು ನಿದರ್ಶನ ಎಂದು ತಿಳಿಯಬಹುದು.

೩) ಇಲ್ಲಿ ಮತ್ತೊಂದು ವಿಶೇಷವೂ ಉಂಟು. ಶ್ರೀಕೃಷ್ಣ ಅಣ್ಣನಾದ ಬಲರಾಮನಿಗಿಂತ ಮುಂಚಿತವಾಗಿ ನೀಲಾದೇವಿಯನ್ನು ವಿವಾಹವಾಗಿದ್ದ, ಅದರಂತೆ ಭೀಮ ಅಣ್ಣನಾದ ಯುಧಿಷ್ಠಿರನಿಗಿಂತ ಮುಂಚಿತವಾಗಿ ಹಿಡಿಂಬೆಯನ್ನು ಮದುವೆಯಾದ. ಇದೂ ಸಹ ಅವರ ಸಾಕ್ಷಾತ್ ಬಿಂಬ–ಪ್ರತಿಬಿಂಬ ಭಾವಕ್ಕೆ ನಿದರ್ಶನವಾಗಿದೆ.

ಜಾತೇ ಸುತೇ ಸಮಯತೋ ಭಗವತ್ಕೃತಾತ್ ಸ
ಭೀಮೋ ಜಗಾದ ಸಸುತಾಂ ಗಮನಾಯ ತಾಂ ಚ ।
ಸ್ಮೃತ್ಯಾಽಭಿಯಾನ ಉಭಯೋರಪಿ ಸಾ ಪ್ರತಿಜ್ಞಾಂ
ತೇಷಾಂ ವಿಧಾಯ ಚ ಯಯೌ ಸುರಲೋಕಮೇವ ॥ ೬೪ ॥

ಅ: ಪುತ್ರ ಜನಿಸುತ್ತಲೆ ಭಗವಂತನಾದ ವೇದವ್ಯಾಸರು ಮಾಡಿದ ನಿಯಮದಂತೆ ಭೀಮನು ಪುತ್ರ ಸಮೇತಳಾಗಿ ಅಲ್ಲಿಂದ ತೆರಳಲು ಹಿಡಿಂಬೆಗೆ ಆದೇಶಿಸಿದ. ಸ್ಮರಿಸುತ್ತಲೇ ತಾವಿಬ್ಬರೂ ಬರುವುದಾಗಿ ಪಾಂಡವರಿಗೆ ವಚನವಿತ್ತು ಅವಳು ದೇವಲೋಕಕ್ಕೇ ತೆರಳಿದಳು.

---

೬೩. ದರ್ಪಣೇ ವಿಕಚಂ ರಕ್ತಘಟೋಪಮಂ ಸ್ವಶಿರಃ ಪ್ರಾಕ್ ಪಶ್ಯನ್ ತತ್ಕ್ಷಣ ಏವ ತತ್ರ ಊರ್ಧ್ವೀಭೂತ ಕೇಶೋತ್ಪತ್ತಿಂ ಚ ಪಶ್ಯನ್ ಸ ಬಾಲಃ ಬಾಲ್ಯಾದೇವ ಸ್ವಶಿರೋ ರಕ್ತಘಟಂ ಮನ್ವಾನಃ ತತ್ರೈವ ಕಚೋತ್ಪತ್ತಿಂ ಚ ಮನ್ವಾನಃ ಅಹಮುತ್ಕಚೋ ಘಟೋಽಸ್ಮೀತಿ ಮಾತರಮಭ್ಯಭಾಷತ । – ಲಕ್ಷಾಲಂಕಾರ

ವಿ: ೧) ಪುತ್ರೋತ್ಸವವಾದದ್ದು ಹಿಡಿಂಬೆಗೆ ವಾಯುಸ್ಪರ್ಶದಿಂದ ಪಾವನಳಾಗಿದ್ದಕ್ಕೆ ನಿದರ್ಶನ-ವಾಯಿತು. ಅದರಿಂದಾಗಿ ಶಾಪದಿಂದ ಬಿಡುಗಡೆ ಹೊಂದಿದ ಅವಳು ಸ್ವರ್ಗಕ್ಕೆ ಮರಳುವ ಅರ್ಹತೆಯನ್ನೂ ಪಡೆದುಕೊಂಡಳು. ಅದನ್ನೆಲ್ಲ ಬಲ್ಲ ಭೀಮ ಶ್ರೀವ್ಯಾಸರ ಆದೇಶದಂತೆ ಅವಳನ್ನು ಬೀಳ್ಕೊಟ್ಟ ಎಂದರ್ಥ.

೨) ಘಟೋತ್ಕಚ ಭೀಮಪುತ್ರನಾದರೂ ರಾಕ್ಷಸಜಾತಿಗೆ ಸೇರಿದವನು. ಅದಕ್ಕೆ ಅವನ ತಾಯಿಯಾದ ಹಿಡಿಂಬಿ ರಾಕ್ಷಸಯೋನಿಗೆ ಸೇರಿದ್ದು ಕಾರಣವಾಯಿತು — 'ಗುಣಾಃ ಪಿತುರ್ಮಾತೃ-ಜಾತಿಃ' (೨೦/೧೫೭).

೩) ಪಾಂಡವರು ಕರೆದಾಗ ಘಟೋತ್ಕಚ ಬಂದ ಎವರ ಮುಂದೆ ಬಂದಿದೆ (೨೧/೨೧೩, ೨೨/೨೭೩).

ಏಕಚಕ್ರನಗರದಲ್ಲಿ ಪಾಂಡವರು

ವ್ಯಾಸೋಽಪಿ ಪಾಂಡುತನಯೈಃ ಸಹಿತೋ ಬಕಸ್ಯ
ರೌದ್ರಾದ್ವರಾಜ್ಜಯವಧಾಪಗತಸ್ಯ ನಿತ್ಯಮ್ ।
ಯಾತೋ ವಧಾಯ ಪರಮಾಗಣಿತೋರುಧಾಮಾ
ಪೂರ್ಣಾಕ್ಷಯೋರುಸುಖ ಆಶು ತದೈಕಚಕ್ರಾಮ್ ॥ ೬೫ ॥

ಅ: ಶ್ರೇಷ್ಠವಾದ ಅನಂತ ಉತ್ತಮ ಗುಣಗಳಿಗೆ ನೆಲೆಯೂ, ಪರಿಪೂರ್ಣವಾದ ಅನಂತ ಮಹಾಸುಖಪೂರ್ಣರೂ ಆದ ಶ್ರೀವ್ಯಾಸರು ಸಹ ಆಗ ಪಾಂಡವರನ್ನು ತಮ್ಮೊಂದಿಗೆ ಕರೆದುಕೊಂಡು ಶಿವನ ವರದಿಂದಾಗಿ ಸೋಲು ಸಾವುಗಳು ಇಲ್ಲವಾಗಿದ್ದ ಬಕನ ವಧೆಗೋಸ್ಕರ ತ್ವರೆಯಿಂದ ಆಗ ಏಕಚಕ್ರಕ್ಕೆ ತೆರಳಿದರು.

ವಿ: ಪಾಂಡವರು ಆವರೆಗೆ ನೆಲೆಸಿದ್ದ ಸ್ಥಳ ಶಾಲಿಹೋತ್ರ ಎಂಬ ಮುನಿಯ ಆಶ್ರಮ. ಪಾಂಡವರು ಅಲ್ಲಿದ್ದಾಗ ವೇದ ವೇದಾಂಗ, ನೀತಿಶಾಸ್ತ್ರ ಮೊದಲಾದವುಗಳನ್ನು ಲೋಕದೃಷ್ಟಿ-ಯಿಂದ ಅಧ್ಯಯನ ಮಾಡಿದರು :

ಬ್ರಾಹ್ಮಂ ವೇದಮಧೀಯಾನಾ ವೇದಾಂಗಾನಿ ಚ ಸರ್ವಶಃ ।
ನೀತಿಶಾಸ್ತ್ರಂ ಚ ಸರ್ವಜ್ಞಾ ದದೃಶುಸ್ತೇ ಪಿತಾಮಹಮ್ ॥ – (ಆದಿ.೧೫೫/೫)

ಏಕಚಕ್ರನಗರಕ್ಕೆ ವ್ಯಾಸರು ಅವರನ್ನು ಕರೆದೊಯ್ದದ್ದು ಶಿವವರದಿಂದ ರಕ್ಷಿತರಾಗಿದ್ದ ಬಕಾಸುರನ ಪೀಡೆಯಿಂದ ಆ ಊರನ್ನು ರಕ್ಷಿಸಲೆಂದು.

ತಾನ್ ಬ್ರಾಹ್ಮಣಸ್ಯ ಚ ಗೃಹೇ ಪ್ರಣಿಧಾಯ ಕೃಷ್ಣಃ
ಶಿಷ್ಯಾ ಮಮೈತ ಇತಿ ವಿಪ್ರಕುಮಾರರೂಪಾನ್ ।
ಆಯಾಮಿ ಕಾಲ ಇತಿ ತಾನನುಶಾಸ್ಯ ಚಾಯಾತ್
ತೇ ತತ್ರ ವಾಸಮಥ ಚಕ್ರುರನೂಚ್ಯ ವೇದಾನ್ ॥ ೬೬ ॥

ಅ: ಬ್ರಾಹ್ಮಣಕುಮಾರರ ವೇಷದಲ್ಲಿದ್ದ ಅವರನ್ನು ಶ್ರೀವೇದವ್ಯಾಸರು ಬ್ರಾಹ್ಮಣನೊಬ್ಬನ ಮನೆಯಲ್ಲಿ ''ಇವರು ನನ್ನ ಶಿಷ್ಯರು'' ಎಂದು ಇರಿಸಿದರು. ''ಸಕಾಲದಲ್ಲಿ ಮತ್ತೆ ಬರುವೆ'' ಎಂದು ಪಾಂಡವರಿಗೆ ತಿಳಿಸಿ ತೆರಳಿದರು. ಪಾಂಡವರು ಅಲ್ಲಿ ವೇದಪಠನ ಮಾಡುತ್ತಾ ನೆಲೆಸಿದರು.

ಭೀಮನ ಭಿಕ್ಷಾಟನೆಯ ಪರಿ

ಭಿಕ್ಷಾಮಟತ್ಸು ಸತತಂ ಪ್ರತಿಹುಂಕೃತೇನ
ಭೀಮೋ ವಿಶಾಂಸದನ ಏವ ಗೃಹಪ್ರಮಾಣಮ್ ।
ಭಾಂಡಂ ಕುಲಾಲವಿಹಿತಂ ಪ್ರತಿಗೃಹ್ಯ ಗಚ್ಛ-
ತ್ಯಾಶಂಕಯಾऽವಗಮನಸ್ಯ ತಮಾಹ ಧರ್ಮಃ ॥ ೬೭ ॥

ಅ: ಅವರು ಭಿಕ್ಷಾಟನೆ ಮಾಡುವಾಗ ಭೀಮ ಸದಾ ಕುಂಬಾರ ಮಾಡಿಕೊಟ್ಟಿದ್ದ ಮನೆಯ ಗಾತ್ರದ ಪಾತ್ರೆಯನ್ನು ಹಿಡಿದು ಭಿಕ್ಷೆಗೆ ವೈಶ್ಯರ ಮನೆಗಳಿಗೆ ತೆರಳುತ್ತಿದ್ದ. ಆತನ ಪ್ರತಿ ಹುಂಕಾರದಿಂದ ತಾವು ಪಾಂಡವರೆಂದು ಜನಕ್ಕೆ ತಿಳಿಯಬಹುದೆಂಬ ಭಯದಿಂದ ಯುಧಿಷ್ಠಿರ ಭೀಮನಿಗೆ ಹೇಳಿದ :

ವಿ: ೧) ಭೀಮ ಬ್ರಾಹ್ಮಣ ವೇಷದಲ್ಲಿದ್ದುದರಿಂದ ಭಿಕ್ಷೆ ಬೇಡಲು ತೆರಳುವುದು ವಿಹಿತವಾಗಿತ್ತು. ಆದರೆ, ಒಬ್ಬ ಕ್ಷತ್ರಿಯ ಬ್ರಾಹ್ಮಣರಲ್ಲಾಗಲೀ, ತಮ್ಮದೇ ವರ್ಣದ ಕ್ಷತ್ರಿಯರಲ್ಲಾಗಲೀ ಭಿಕ್ಷೆ ಬೇಡುವುದು ಅನುಚಿತ. ಅದಕ್ಕೆಂದು ಅನಂತರ ವರ್ಣದ ವೈಶ್ಯರಿಂದ ಭೀಮ ಭಿಕ್ಷೆ ಸ್ವೀಕರಿಸುತ್ತಿದ್ದ. ಭಾರತದಲ್ಲೂ ಈ ಮಾತು ಬಂದಿದೆ: 'ಭಿಕ್ಷಿತ್ವಾ ದ್ವಿಜಗೇಹೇಷು'. ಹಾಗೆ ಭಿಕ್ಷೆ ಬೇಡುವಾಗಲೂ 'ಭಿಕ್ಷಾಂ ದೇಹಿ' ಎಂದು ಕೇಳುವುದು ಶುದ್ಧಕ್ಷತ್ರಿಯ ಧರ್ಮಕ್ಕೆ ಯೋಗ್ಯವಲ್ಲ. ಅದಕ್ಕೆಂದು ಭೀಮ

---

೬೬. ಅನೂಚ್ಯ ಅಧೀಯಾನಾ – (ಜ.)

೬೬. ತೇ ಪಾರ್ಥಾ ವೇದಾನನೂಚ್ಯಾಭ್ಯಸ್ಯ ತತ್ರ ವಾಸಂ ಚಕ್ರುಃ । ಪ್ರಾಗಧೀತ ವೇದಾನಾವರ್ತಯಂತೋऽವಸನ್ನಿತಿ ಭಾವಃ । ಅನ್ಯೇತು ವೇದಾನನೂಚ್ಯಾಧ್ಯಾಪಯಿತ್ವಾ ಕಾಲೇऽಪೇಕ್ಷಿತಕಾಲೇ ಆಯಾಮೀತಿ ಸಂಬಂಧಮಾಹುಃ । –(ತಾ.)

ಹುಂಕಾರ ಮಾಡಿ ಭಿಕ್ಷೆ ಪಡೆಯುತ್ತಿದ್ದನೇ ಹೊರತು ಯಾಚನೆಯಿಂದಲ್ಲ. ಆದ್ದರಿಂದ ಅಂತಹ ಆಪತ್ಕಾಲದಲ್ಲೂ ಧರ್ಮಲೋಪವಾಗಲಿಲ್ಲ ಎಂಬುದು ವಿಶೇಷ.

೨) ಭೀಮ ಹಾಗೆ ಹುಂಕಾರದಿಂದ ಭಿಕ್ಷೆ ಬೇಡುವಾಗಲೂ ಭಯಹುಟ್ಟಿಸುತ್ತಿರಲಿಲ್ಲ ಎಂಬುದು ಇನ್ನೊಂದು ವಿಶೇಷ :

ತದಾದಾಯಾಗತಂ ದೃಷ್ಟ್ವಾ ಹಸಂತಿ ಪ್ರಹಸಂತಿ ಚ ।
ಭಕ್ಷಭೋಜ್ಯಾನಿ ದಿವ್ಯಾನ್ಯಾದಾಯ ಪ್ರಕ್ಷಿಪಂತಿ ಚ ॥ – ಕೃ.ಭಾರತ (ಆದಿ. ೧೭೧/೨೨)

ಸ್ಥೂಲಂ ಹಿ ಸದ್ಮ ಪೃಥಿವೀಸಹಿತಂ ತ್ವರಕ್ಷ
ಉದ್ಧೃತ್ಯ ವಹ್ನಿಮುಖಿತಸ್ತದು ಚೈಕದೋಷ್ಣಾ ।
ಭಾಂಡಂ ತದರ್ಥಮುರುಕುಂಭಕರೇಣ ದತ್ತಂ
ಭಿಕ್ಷಾಂ ಚ ತೇನ ಚರಸಿ ಪ್ರತಿಹುಂಕೃತೇನ ॥ ೬೮ ॥

ಅ: ''ಕುಂಬಾರನ ದೊಡ್ಡ ಮನೆಯನ್ನು ನೆಲದ ಸಮೇತವಾಗಿ ಒಂದೇ ಕೈಯಿಂದ ಮೇಲೆತ್ತಿ ಬೆಂಕಿಯ ಬಾಯಿಂದ ಅದನ್ನು ರಕ್ಷಿಸಿದಿ, ಅದಕ್ಕಾಗಿ ಆ ಕುಂಬಾರ ನೀಡಿದ ದೊಡ್ಡ ಪಾತ್ರೆಯನ್ನು ತೆಗೆದುಕೊಂಡು ಹುಂಕಾರ ಮಾಡುತ್ತಾ ಅದರಿಂದ ಭಿಕ್ಷೆ ಬೇಡುತ್ತಿರುವಿ.

ವಿ: ೧) ಕುಂಬಾರ ಮಾಡಿಕೊಟ್ಟ ಗೃಹಪ್ರಮಾಣ ಮಡಿಕೆಯ ಹಿನ್ನೆಲೆಯನ್ನು ಇಲ್ಲಿ ತಿಳಿಸಿರುವರು. ಒಮ್ಮೆ ಕುಂಬಾರನ ಮನೆಯ ಸುತ್ತ ಬೆಂಕಿ ಕಾಣಿಸಿಕೊಂಡಾಗ ಅವನು ರಕ್ಷಣೆಗಾಗಿ ಕೂಗಿಕೊಂಡ. ಭೀಮ ತಕ್ಷಣ ಅಲ್ಲಿಗೆ ಧಾವಿಸಿ ಆ ಮನೆಯನ್ನು ಅದರ ಬುನಾದಿಯ ಸಮೇತ ಮೇಲೆತ್ತಿ ಸುರಕ್ಷಿತ ಸ್ಥಳದಲ್ಲಿರಿಸಿ ಆ ಕುಂಬಾರನನ್ನು ಸಂರಕ್ಷಿಸಿದ. ಅವನು ತನ್ನ ಕೃತಜ್ಞತೆಯ ಕಾಣಿಕೆಯನ್ನಾಗಿ ತನ್ನ ವೃತ್ತಿಗೆ ತಕ್ಕಂತೆ ಭೀಮ ಎತ್ತಿದ ಮನೆಯ ಪ್ರಮಾಣದ ಗಡಿಗೆಯೊಂದನ್ನು ಮಾಡಿ ಕಾಣಿಕೆಯನ್ನಾಗಿ ನೀಡಿದ. ಭೀಮ ಅದನ್ನೇ ಭಿಕ್ಷಾಪಾತ್ರೆಯನ್ನಾಗಿ ಉಪಯೋಗಿಸಿ ಹುಂಕಾರದಿಂದ ಭಿಕ್ಷೆಗೆ ತೆರಳುತ್ತಿದ್ದ ಎಂದರ್ಥ :

ಕುಂಭಕಾರೇಣ ಸಂಬಂಧಾಲ್ಲೇಭೇ ಪಾತ್ರಂ ಮಹತ್ತರಮ್ ।
ಕುಂಭಕಾರೋಽದದಾತ್ ಪಾತ್ರಂ ಮಹತ್ಯುತ್ಪಾತಿಮಾತ್ರಕಮ್ ॥
ಪ್ರಹಸನ್ ಭೀಮಸೇನಾಯ ವಿಸ್ಮಿತಸ್ತಸ್ಯ ಕರ್ಮಣಾ ।
ತಸ್ಯಾದ್ಭುತಂ ಕರ್ಮ ಕುರ್ವನ್ ಮೃದ್ಭಾರಂ ಮಹದಾದದೇ ॥

– ಕೃ.ಭಾರತ (ಆದಿ.೧೭೧/೧೮)

೨) ಸಂಜೀವನ ಪರ್ವತದಂತಹ ದೊಡ್ಡ ಪರ್ವತವನ್ನೇ ಒಂದೇ ಕೈಯಿಂದ ಒಂದು ಹೂವಿನಂತೆ ಲೀಲಾಜಾಲವಾಗಿ ಎತ್ತಿ ತಂದಿದ್ದ ಹನುಮಂತನೇ ಆದ ಭೀಮನಿಗೆ ಆ ಮನೆಯನ್ನು ಹಾಗೆ ರಕ್ಷಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಭೀಮನ ಪರಾಕ್ರಮ ಹೀಗೆ ಪ್ರತಿಯೊಂದು ಹಂತದಲ್ಲೂ ದುಃಖಿಗಳ ದುಃಖ ಪರಿಹಾರಕ್ಕೆ ಉಪಯೋಗವಾಗುತ್ತಿದ್ದುದು ದೊಡ್ಡ ವಿಶೇಷ. ಅದರೊಂದಿಗೆ ಆ ಕುಂಬಾರನಿಗೆ ನೂರು ಸಾವಿರ ಮಣ ಮಣ್ಣನ್ನೂ ಸಹ ಭೀಮಸೇನ ಕೊಟ್ಟು ಅವನ ಮಡಿಕೆ ನಿರ್ಮಾಣದ ಕಾರ್ಯದಲ್ಲೂ ಸಹಕರಿಸಿದ್ದ ಎಂಬ ಮಾತು ಮೂಲಮಹಾಭಾರತದಲ್ಲಿ ಬಂದಿದೆ: **'ಮೃದ್ಭಾರೈಃ ಶತಸಾಹಸ್ರೈಃ ಕುಂಭಕಾರಮತೋಷಯತ್'** (ಆದಿ ೧೭೧/೨೦).

ಧರ್ಮಸ್ಯ ತೇ ಸುನಿಯತೇರ್ಬಲತಶ್ಚ ಬೋಧೋ
ಭೂಯಾತ್ ಸುಯೋಧನಜನಸ್ಯ ತತೋ ಭಯಂ ಮೇ ।
ಮಾತ್ರಾ ಸಹೈವ ವಸ ಫಲ್ಗುನಪೂರ್ವಕೈಸ್ತ್ವ-
ಮಾನೀತಮೇವ ಪರಿಭುಂಕ್ಷ್ವ ನ ತು ವ್ರಜೇಥಾಃ ॥ ೬೯ ॥

ಅ: 'ನಿನ್ನ ಅಪಾರ ಧರ್ಮನಿಷ್ಠೆ ಹಾಗೂ ಅಪೂರ್ವ ಬಲದಿಂದಾಗಿ ದುರ್ಯೋಧನನ ಕಡೆಯವರಿಗೆ ನಮ್ಮ ಸುಳಿವು ಸಿಕ್ಕೀತೆಂಬ ಭಯ ನನಗೆ. ಆದ್ದರಿಂದ ನೀನು ತಾಯಿಯೊಂದಿಗೆ ಇದ್ದುಬಿಡು. ಅರ್ಜುನ ಮೊದಲಾದವರು ತರುವುದನ್ನೇ ಉಣ್ಣು. ನೀನು ಮಾತ್ರ ಭಿಕ್ಷೆಗೆ ತೆರಳಬೇಡ'.

ವಿ: ಯುಧಿಷ್ಠಿರನ ಈ ಮಾತಿನಲ್ಲಿ ಭೀಮನ ಧರ್ಮನಿಷ್ಠೆ ಹಾಗೂ ಬಲದ ಬಗ್ಗೆ ಆದರವಿದ್ದರೂ ಅದರಿಂದಾಗಿ ತಮ್ಮ ಸುಳಿವು ಕೌರವರಿಗೆ ಎಲ್ಲಿ ತಿಳಿದೀತೋ ಎಂಬ ಭಯವೂ ಇರುವುದು ಕಾಣುತ್ತದೆ. ಅದಕ್ಕಾಗಿ ಭೀಮನನ್ನು ಹೀಗೆ ಪ್ರಾರ್ಥಿಸಿಕೊಂಡ ಎಂದು ತಿಳಿಯಬೇಕು.

---

೬೯. 'ಮಾತ್ರಾ ಸಹೈವ ನ ಸ ಫಲ್ಗುನಪೂರ್ವಕೈಸ್ತ್ವಮಾನೀತಮೇವ ಪರಿಭುಂಕ್ಷ್ವ ನ ತು ವ್ರಜೇಥಾಃ' ಇತ್ಯತ್ರ ಫಲ್ಗುನಪೂರ್ವಕೈರ್ನಕುಲಾದಿಭರಾನೀತಂ ಭುಂಕ್ಷ್ವೇತಿ ಧರ್ಮಾತ್ಮಜೇನ ಭೀಮಂ ಪ್ರತ್ಯುಚ್ಯತೇ । ನಕುಲಸಹದೇವಯೋರೇವ ಫಲ್ಗುನಪೂರ್ವಕಾಭ್ಯಾಮಿತಿ ವಕ್ತವ್ಯಮ್ । ಫಲ್ಗುನಪೂರ್ವಕೈರಿತಿ ಕಥಮುಕ್ತಮಿತಿ ಚೇತ್ ಅತ್ರ ಕೇಚಿತ್ ತು ಫಲ್ಗುನಃ ಪೂರ್ವೋ ಯಯೋಸ್ತಾವಿತಿ ಸಮಾಸೇನ ಫಲ್ಗುನಸ್ಯಾಪಿ ಲಾಭಾತ್ ಬಹುವಚನೋಪಪತ್ತಿರಿತಿ । ಕೇಚಿತ್ ತು ಫಲ್ಗುನಃ ಪೂರ್ವೋ ಯಯೋಸ್ತೌ ಫಲ್ಗುನಪೂರ್ವೌ ಇತಿ ವಿಗೃಹ್ಯಾನಂತರಂ ಫಲ್ಗುನಶ್ಚ ಫಲ್ಗುನಪೂರ್ವಕೌ ಚೇತಿ ಇತರೇತರದ್ವಂದ್ವಂ ವಿಧಾಯ, ತೈಃ ಫಲ್ಗುನಪೂರ್ವಕೈರಿತಿ ವದಂತಿ । ವಸ್ತುತಸ್ತು ನಾತ್ರ ಪೂರ್ವಶಬ್ದಃ ಪೂರ್ವೋತ್ಪನ್ನವಾಚಕಃ । ಕಿಂತು ಪ್ರಾಧಾನ್ಯವಾಚಕಃ । ಪ್ರಾಧಾನ್ಯಂ ತು ಅರ್ಜುನಸ್ಯ ಧರ್ಮಾದ್ಯಪೇಕ್ಷಯಾಽಸ್ತೀತಿ ಫಲ್ಗುನಪೂರ್ವಕೈರಿತಿ ಬಹುವಚನೋಪಪತ್ತಿರಿತಿ ॥ – (ತಿ.)

ಬಕಾಸುರವಧೆಯ ಹಿನ್ನೆಲೆ

ಇತ್ಯುಕ್ತ ಆಶು ಸ ಚಕಾರ ತಥೈವ ಭೀಮ-
ಸ್ತೇऽಪಿ ಸ್ವಧರ್ಮಪರಿರಕ್ಷಣಹೇತುಮೌನಾಃ ।
ಭಿಕ್ಷಾಂ ಚರಂತ್ಯಥ ಚತುರ್ಷ್ವಪಿ ತೇಷು ಯಾತೇ-
ಷ್ವೇಕತ್ರ ಮಾತೃಸಹಿತಃ ಸ ಕದಾಚಿದಾಸ್ತೇ ॥ ೭೦ ॥

ಅ: ಧರ್ಮರಾಜ ಹೀಗೆ ನುಡಿಯುತ್ತಲೇ ಭೀಮ ಒಡನೆಯೇ ಅದರಂತೆಯೇ ಮಾಡಿದ. ಉಳಿದವರು ತಮ್ಮ ಧರ್ಮದ ರಕ್ಷಣೆಗಾಗಿ ಮೌನದಿಂದಿದ್ದೇ ಭಿಕ್ಷೆ ಬೇಡುತ್ತಿದ್ದರು. ನಾಲ್ಕು ಜನ ಹಾಗೆ ಭಿಕ್ಷೆಗೆ ತೆರಳಿದ್ದಾಗ ಒಮ್ಮೆ ಭೀಮ ತಾಯಿಯೊಂದಿಗೆ ಮನೆಯಲ್ಲೇ ಇದ್ದ.

ಎ: ಭೀಮನ ಭಿಕ್ಷಾಟನೆಯ ವೈಖರಿ ಹಾಗಿದ್ದರೆ, ಉಳಿದವರದು ಮತ್ತೊಂದು ಬಗೆಯಾಗಿತ್ತು. ಅವರೂ ಸಹ ತಮ್ಮ ಧರ್ಮರಕ್ಷಣೆಗಾಗಿ ಯಾಚನೆ ಮಾಡದೇ ಮನೆಗಳ ಮುಂದೆ ಮೌನದಿಂದ ನಿಂತೇ ಭಿಕ್ಷೆಪಡೆದು ತೆರಳುತ್ತಿದ್ದರು. ಭೀಮನ ಧರ್ಮ ಅವರಿಗಿಂತ ಮಿಗಿಲಾಗಿತ್ತು ಎಂಬುದು ವಿಶೇಷ. ಹಾಗಿದ್ದಾಗಲೊಮ್ಮೆ ಕುಂತಿ ಭೀಮರಿಬ್ಬರೇ ಮನೆಯಲ್ಲಿದ್ದಾಗ ನಡೆದ ಅಪೂರ್ವಪ್ರಸಂಗ-ವೊಂದನ್ನು ತಿಳಿಸುತ್ತಿರುವರು.

ತತ್ಕಾಲ ಏವ ರುದಿತಂ ನಿಜವಾಸಹೇತೋ-
ರ್ವಿಪ್ರಸ್ಯ ದಾರಸಹಿತಸ್ಯ ನಿಶಮ್ಯ ಭೀಮಃ ।
ಸ್ತ್ರೀಬಾಲಸಂಯುತಗೃಹೇ ಸುತಲಾಲನಾದೌ
ಲಜ್ಜೇದಿತಿ ಸ್ಮ ಜನನೀಮವದನ್ನ ಚಾಗಾತ್ ॥ ೭೧ ॥

ಅ: ಅದೇ ಕಾಲದಲ್ಲೇ ತಾವು ವಾಸವಾಗಿದ್ದ ಮನೆಯ ಬ್ರಾಹ್ಮಣ ಮತ್ತು ಅವನ ಪತ್ನಿ ರೋದಿಸುತ್ತಿದ್ದುದನ್ನು ಕೇಳಿ ಭೀಮ ತಾಯಿಗೆ ಹೇಳಿದ; ಹೆಂಗಸರು ಮಕ್ಕಳಿರುವ ಮನೆಯಲ್ಲಿ ಮಗುವನ್ನು ಲಾಲಿಸುವುದು ಮೊದಲಾದವರಲ್ಲಿ ತೊಡಗಿದವರು ನಾಚಿಯಾರು ಎಂಬ ಕಾರಣದಿಂದ ತಾನೇ ಹೋಗಲಿಲ್ಲ.

---

೭೦. ಸ್ವಧರ್ಮಪರಿರಕ್ಷಣಹೇತುಮೌನಾಃ ಅಯಾಚನಂ ಸ್ವಧರ್ಮಃ ತದ್ರಕ್ಷಣಹೇತುತಃ ಭಿಕ್ಷಾಂ ದೇಹೀತಿವಚನರಹಿತಾಃ ಏಕತ್ರ ಏಕಸ್ಥಲೇ ಆಸ್ತೇ ಆಸೀತ್ । – (ಜ.)

೭೦. 'ಅರ್ಧಂ ತಂ ಭುಂಜತೇ ಪಂಚ ಸಹ ಮಾತ್ಯಾ ಪರಂತಪ ।
ಅರ್ಧಂ ಭೈಕ್ಷ್ಯಸ್ಯ ಸರ್ವಸ್ಯ ಭೀಮೋ ಭುಂಕ್ತೇ ಮಹಾಬಲಃ ॥' ಇತ್ಯಾದಿಪರ್ವಣಿ ॥ – (ಮ.)

ವಿ: ೧) ಅವರು ವಾಸವಾಗಿದ್ದ ಮನೆಯ ಬ್ರಾಹ್ಮಣ ದಂಪತಿಗಳು ಅಳುತ್ತಿದ್ದುದು ಭೀಮನ ಕಿವಿಗೆ ಬಿತ್ತು; ಭೀಮ, ಕುಂತಿ ಇಬ್ಬರೂ ಅಲ್ಲಿಯೇ ಇದ್ದರೂ ಅದು ಕೇಳಿಸಿದ್ದು ಮೊದಲು ಭೀಮನ ಕಿವಿಗೆ ಎಂಬುದು ಗಮನಾರ್ಹ. ಎಂದರೆ ಕುಂತಿಯ ಅವಧಾನಕ್ಕಿಂತ ಭೀಮಸೇನನ ಅವಧಾನವೇ ಮಿಗಿಲಾಗಿತ್ತು ಎಂದಾಗುವುದು. ಆದ್ದರಿಂದಲೇ ಇತರ ದೇವತಾ ಸ್ತೋತ್ರಕ್ಕಿಂತ ವಾಯುಸ್ತುತಿ ಹೆಚ್ಚು ಫಲಪ್ರದ ಎಂದು ಸಿದ್ಧವಾಗುವುದು.

೨) ಭೀಮ ಆಗ ತಾನು ಹೋಗದೇ ಕುಂತಿಯನ್ನು ಕಳಿಸಲು ಕಾರಣವನ್ನು ಇಲ್ಲಿ ತಿಳಿಸಿರುವರು, ಹೆಂಗಸರು ಮಕ್ಕಳಿರುವ ಮನೆಯಲ್ಲಿ ಪರಪುರುಷ ಇದ್ದಕ್ಕಿದ್ದಂತೆಯೇ ತೆರಳಿದರೆ ಮಕ್ಕಳ ಲಾಲನೆ ಪಾಲನೆಗಳಲ್ಲಿ ತೊಡಗಿದ ಅವರಿಗೆ ಸಂಕೋಚವಾದೀತು ಎಂಬುದೇ ಆ ಕಾರಣ. ಇಲ್ಲಿಯೂ ಭೀಮನ ವ್ಯವಹಾರಪ್ರಜ್ಞೆ ಎಷ್ಟು ಅಪೂರ್ವ ಎಂಬುದನ್ನು ಗುರುತಿಸಬಹುದು.

ಜಾನೀಹಿ ವಿಪ್ರರುದಿತಂ ಕುತ ಇತ್ಯತಶ್ಚ
ಯೋಗ್ಯಂ ವಿಧಾಸ್ಯ ಇತಿ ಸಾ ಪ್ರಯಯೌ ಚ ಶೀಘ್ರಮ್ ।
ಸಾ ಸಂವೃತೈವ ಸಕಲಂ ವಚನಂ ಗೃಹೇऽಸ್ಯ
ಶುಶ್ರಾವ ವಿಪ್ರವರ ಆಹ ತದಾ ಪ್ರಿಯಾಂ ಸಃ ॥ ೭೨ ॥

ಅ: ''ಬ್ರಾಹ್ಮಣನು ಅಳುತ್ತಿರುವುದೇತಕೆ ಎಂದು ತಿಳಿದು ಬಾ; ನಾನು ಅದಕ್ಕೆ ತಕ್ಕ ಪರಿಹಾರ ನೀಡುವೆ'' ಎಂದು ಹೇಳಲು ಕುಂತಿಯು ಕೂಡಲೆ ಹೊರಟಳು. ಮರೆಯಲ್ಲಿದ್ದೇ ಆ ಮನೆಯಲ್ಲಿ ನಡೆದ ಮಾತುಕಥೆಗಳನ್ನು ಕೇಳಿಸಿಕೊಂಡಳು. ಬ್ರಾಹ್ಮಣ ತನ್ನ ಹೆಂಡತಿಗೆ ಹೀಗೆಂದು ಹೇಳುತ್ತಿದ್ದ.

ವಿ: ಭೀಮನ ಮಾತಿನಂತೆ ಕುಂತಿ ತಕ್ಷಣ ತೆರಳಿದರೂ ಅವರ ಮನೆಯೊಳಗೆ ಕಾಲಿಡುವ ಮುನ್ನ ಸ್ವಲ್ಪ ಮರೆಯಲ್ಲೇ ಇದ್ದು ಒಳಗೆ ನಡೆಯುತ್ತಿದ್ದ ಅಲ್ಲಿಯ ಮಾತುಕತೆಗಳನ್ನು ಕೇಳಿಸಿಕೊಂಡಳು ಎಂದರ್ಥ.

---

೭೧. ನಿಜವಾಸಹೇತೋರ್ವಿಪ್ರಸ್ಯೇತ್ಯತ್ರ ನಿಜಃ ಯೋ ವಾಸಃ ತಸ್ಯ ಹೇತೋಃ= ಕಾರಣಭೂತಸ್ಯ ವಿಪ್ರಸ್ಯೇತಿ ಸಂಬಂಧಃ। ಸ್ತ್ರೀಬಾಲಸಂಯುತಗೃಹೇ ಸುತಲಾಲನಾದೌ ಸುತಸ್ಯ ಲಾಲನಂ ಆದಿಪದೇನ ಸುತಸ್ಯ ಕ್ಷೀರದಾನಾರ್ಥಂ ಸ್ತನಪಾನಾದಿಕಂ ಗೃಹ್ಯತೇ ತಸ್ಮಿನ್ ಲಜ್ಜೇದಿತಿ ಸಂಬಂಧಃ ॥ – (ವಾ.)

೭೧. ಶಿಶುಲಾಲನಾದಾವಿತ್ಯಸ್ಯ ಶಿಶುಪರಾಮರ್ಶಾದಾವಿತ್ಯರ್ಥಃ। – (ಸ.)

೭೨. ಜ್ಞಾಯತಾಮಸ್ಯ ಯದ್ದುಃಖಂ ಯತಶ್ಚೈವ ಸಮುತ್ಥಿತಮ್ ।
ವಿದಿತ್ವಾ ವ್ಯವಸಿಷ್ಯಾಮಿ ಯದ್ಯಪಿ ಸ್ಯಾತ್ಸುದುಷ್ಕರಮ್ ॥ – ಭಾರತ (ಆದಿ. ೧೫೬/೧೬)।

೭೨. ಸಂವೃತಾ ಲೀನಾ – (ಜ.)

ಬ್ರಾಹ್ಮಣ ಕುಟುಂಬದ ಶೋಕ

ದಾತವ್ಯ ಏವ ಹಿ ಕರೋಽದ್ಯ ಚ ರಾಕ್ಷಸಸ್ಯ
ಸಾಕ್ಷಾದ್ಬಕಸ್ಯ ಗಿರಿಸನ್ನಿಭಭಕ್ಷ್ಯಭೋಜ್ಯಃ ।
ಪುಂಸಾಽನಸಾ ಚ ಸಹಿತಾಽನಡುಹಾ ಪುಮಾಂಸ್ತು
ನೈವಾಸ್ತಿ ನೋಽಪ್ರದದತಾಂ ಚ ಸಮಸ್ತನಾಶಃ ॥ ೭೩ ॥

ಅ: 'ಆ ಬಕರಾಕ್ಷಸನಿಗೆ ಇಂದು ಬೆಟ್ಟದಷ್ಟು ಭಕ್ಷ ಭೋಜ್ಯಗಳ ಕಪ್ಪವನ್ನು, ಎತ್ತು ಹಾಗೂ ಒಬ್ಬ ಮನುಷ್ಯನೊಂದಿಗೆ ಕೊಡಲೇ ಬೇಕಿದೆ. ನಮ್ಮಲ್ಲೀಗ ಮನುಷ್ಯನಿಲ್ಲ, ಕೊಡದಿದ್ದರೆ ಮಾತ್ರ ನಮಗೆ ಸರ್ವನಾಶವೇ'.

ಎ: ಬಕನೆಂಬ ರಾಕ್ಷಸನಿಗೆ ಬಂಡಿಯ ತುಂಬ ಅನ್ನ, ಎತ್ತು ಹಾಗೂ ಒಬ್ಬ ಮನುಷ್ಯನನ್ನು ಕೊಡುವುದು ಆ ಊರಿನ ಜನರ ಕರ್ತವ್ಯವಾಗಿತ್ತು. ಅವರು ಉಳಿದೆಲ್ಲವನ್ನೂ ಸಿದ್ಧಪಡಿಸಿ-ಕೊಂಡಿದ್ದರೂ ಮನುಷ್ಯನನ್ನು ಮಾತ್ರ ಹೊಂದಿಸಲಾಗಿರಲಿಲ್ಲ. ಬೇರೆ ಯಾರನ್ನಾದರೂ ಕೊಂಡು ತರಲು ಅವರಲ್ಲಿ ಹಣವೂ ಇರಲಿಲ್ಲ ಎಂಬ ಮಾತು ಮಹಾಭಾರತದಲ್ಲಿದೆ(೧೭೪/೭೮):

ನ ಚ ಮೇ ವಿದ್ಯತೇ ವಿತ್ತಂ ಸಂಕ್ರೀತುಂ ಪುರುಷಂ ಕ್ವಚಿತ್ ।

ಅನ್ಯತ್ರ ಯಾಮ ಇತಿ ಪೂರ್ವಮುದಾಹೃತಂ ಮೇ
ನೈತತ್ ಪ್ರಿಯೇ ತವ ಮನೋಗತಮಾಸ ತೇನ ।
ಯಾಸ್ಯಾಮಿ ರಾಕ್ಷಸಮುಖಂ ಸ್ವಯಮೇವ ಮರ್ತುಂ
ಭಾರ್ಯೇನಮಾಹ ನ ಭವಾನಹಮತ್ರ ಯಾಮಿ ॥ ೭೪ ॥

---

೭೩. ಗಿರಿಸನ್ನಿಭಭಕ್ಷ್ಯಭೋಜ್ಯ ಇತ್ಯತ್ರ ಸಾಕ್ಷಾದ್ಗಿರಿಸನ್ನಿಭಂ ಭಕ್ಷ್ಯಂ ಭೋಜ್ಯಂ= ಅನ್ನಂ ಯಸ್ಮಿನ್ನಿತಿ ವಿಗ್ರಹಃ। ಸಹಿತೌ ಅನಡ್ವಾಹೌ ಯಸ್ಯ ತೇನ ಅನಸಾ ಪುಂಸಾ ಚ ಸಹಿತಃ ॥ – (ವಾ.)

೭೩. ಅನುಪಚರಿತಪರ್ವತಸಮಾನಭಕ್ಷಭೋಜ್ಯಃ – (ಜ.)

೭೩. 'ದಾತವ್ಯ ಏವ ಚ(ಹಿ) ಕರೋಽದ್ಯ ಚ ರಾಕ್ಷಸಸ್ಯ ಸಾಕ್ಷಾದ್ಬಕಸ್ಯ ಗಿರಿಸನ್ನಿಭಭಕ್ಷ್ಯಭೋಜ್ಯಃ' ಇತ್ಯತ್ರ ಜನಾಃ ಅತಿಭಕ್ಷಣಶೀಲಂ ದೃಷ್ಟ್ವಾ ಯಂ ಬಕ ಇತಿ ವದಂತಿ ತಥಾ ನಾಯಮಿತಿ ಸೂಚನಾರ್ಥಂ ಸಾಕ್ಷಾದಿತ್ಯುಕ್ತಮ್ । ಸಾಕ್ಷಾತ್ ಮುಖ್ಯ ಇತಿ ವಾ । – (ತಿ.)

ಅ: 'ಬೇರೆಡೆಗೆ ಹೋಗೋಣ ಎಂದು ನಾನು ಹಿಂದೆಯೇ ಹೇಳಿದ್ದೆ. ಪ್ರಿಯಳೆ, ಅದು ನಿನ್ನ ಮನಸ್ಸಿಗೆ ಬರಲಿಲ್ಲ. ರಾಕ್ಷಸನ ಬಾಯಿಗೆ ಬಿದ್ದು ಸಾಯಲು ಸ್ವತಃ ನಾನೇ ತೆರಳುವೆ'. 'ನೀವು ತೆರಳಬಾರದು, ನಾನು ಅಲ್ಲಿಗೆ ತೆರಳುವೆ' ಎಂದು ಅವನ ಪತ್ನಿ ನುಡಿದಳು.

ವಿ: ೧) ಆ ಸಮಸ್ಯೆ ಕೋಟ್ಯಂತರ ವರ್ಷಗಳಿಂದ ಆ ಊರಿಗೆ ಗಂಟುಬಿದ್ದದ್ದು. ಅದನ್ನು ತಿಳಿದಿದ್ದ ಬ್ರಾಹ್ಮಣ ಆ ಊರನ್ನೇ ತೊರೆದು ಬೇರೆಡೆಗೆ ತೆರಳುವ ಪ್ರಸ್ತಾಪವನ್ನು ಹೆಂಡತಿಯ ಮುಂದಿಟ್ಟಿದ್ದ. ಆದರೆ ಅದಕ್ಕೆ ಅವರು ತನ್ನ ಹಿಂದಿನವರೆಲ್ಲಾ ಇದ್ದ ಊರು ಎಂಬ ಅಭಿಮಾನದಿಂದ ಅದನ್ನು ತೊರೆಯುವುದು ಬೇಡ ಎಂದು ತಡೆದಿದ್ದಳು. ಅದನ್ನು ತಿಳಿಸುತ್ತಾ ಬ್ರಾಹ್ಮಣ ''ಪ್ರಿಯೆ'' ಎನ್ನುವ ಮೂಲಕ ಮತ್ತೊಂದು ವಿಚಾರವನ್ನು ಹೇಳಿರುವನು. ಅವಳು ಹಾಗೆ ಹೇಳಿದ್ದರೂ ಅವಳ ಮಾತಿನಂತೆ ತಾನು ವಿರೋಧಿಸದೆ ಅದರಂತೆ ನಡೆದದ್ದು ಅವಳ ಮೇಲಿನ ಪ್ರೀತಿಯಿಂದಾಗಿ ಎಂದು ಅದರ ಭಾವ. ಇದರಿಂದ ಅದರಲ್ಲಿ ತನ್ನ ತಪ್ಪೂ ಇದೆ ಎಂಬ ಸೂಚನೆಯನ್ನೂ ಅವನು ನೀಡಿರುವನು. ಆ ತಪ್ಪಿಗಾಗಿ ತಾನೇ ಆ ರಾಕ್ಷಸನ ಬಾಯಿಗೆ ಬೀಳಲು ತೆರಳುವುದಾಗಿ ನುಡಿದ. ಆದರೆ, ಅವನ ಪತ್ನಿ ಧರ್ಮಿಷ್ಠಳು, ಆಪತ್ತು ಒದಗಿದಾಗ ಸಹಧರ್ಮಿಣಿಯಾದ ತಾನು ಅದರಲ್ಲಿ ಭಾಗಿಯಾಗದಿರುವುದು ಉಚಿತವಲ್ಲವೆಂದು ಭಾವಿಸಿ ಅವನು ಹೋಗುವುದು ಬೇಡ, ತಾನೇ ತೆರಳುವುದಾಗಿ ತಿಳಿಸಿದಳು ಎಂದರ್ಥ. ಅವಳು ಅದಕ್ಕೆ ಅನೇಕ ಕಾರಣಗಳನ್ನೂ ಸಹ ನೀಡುವ ವಿವರ ಮಹಾಭಾರತದಲ್ಲಿ ಬಂದಿದೆ. ಅದರಂತೆ ಅವರಿಬ್ಬರಲ್ಲಿ ಯಾರಾದರೊಬ್ಬರು ತೆರಳಲೇ ಬೇಕು. ಅವನು ತೆರಳಿದರೆ ಅನಾಥರಾಗುವ ಮಕ್ಕಳನ್ನಾಗಲೀ, ತನ್ನನ್ನಾಗಲೀ ದುಷ್ಟರು ಬದುಕಲು ಬಿಡಲಾರರು, ಪರಿಸ್ಥಿತಿಯ ದುರ್ಲಾಭ ಪಡೆದ ಜನ ಮಾಂಸದ ತುಣುಕಿಗೆ ಹದ್ದುಗಳು ಮುತ್ತುವಂತೆ ತನ್ನನ್ನು ಮುತ್ತಿ ಹಾಳುಮಾಡುವುದು ನಿಶ್ಚಿತ. ಅದರ ಬದಲಾಗಿ ತಾನು ತೆರಳಿ ಅವನು ಉಳಿದಲ್ಲಿ ಮಕ್ಕಳ ಸಂರಕ್ಷಣೆ ಸಾಧ್ಯ. ಈ ಮಾತಿನಲ್ಲಿ ಅವಳ ವಿವೇಕ ಎದ್ದು ಕಾಣುವುದು :

ಉತ್ಸೃಷ್ಟಮಾಶಿಷಂ ಭೂಮೌ ಪ್ರಾರ್ಥಯಂತಿ ಯಥಾ ಖಗಾಃ ।
ಪ್ರಾರ್ಥಯಂತಿ ಜನಾಃ ಸರ್ವೇ ಪತಿಹೀನಾಂ ತಥಾ ಸ್ತ್ರಿಯಮ್ ॥...

– (ಆದಿ. ೧೫೭/೧೨)

ಅರ್ಧೇ ತವಾದ್ಯ ತನುಸಂತ್ಯಜನಾದಹಂ ಸ್ಯಾಂ
ಲೋಕೇ ಸತೀಪ್ರಚರಿತೇ ತದೃತೇ ತ್ವದಗ್ರ್ಯಶ್ಚ ।
ಕನ್ಯಾऽऽಹ ಚೈನಮಹಮೇಮಿ ನ ಕನ್ಯಯಾऽರ್ಥ
ಇತ್ಯುಕ್ತ ಆಹ ಧಿಗಿತಿ ಸ್ಮ ಸ ವಿಪ್ರವರ್ಯಃ ॥ ೭೫ ॥

ಅ: 'ನಿನಗೋಸ್ಕರ ದೇಹ ತೊರೆಯುವುದರಿಂದಾಗಿ ನಾನು ಪತಿವ್ರತಾಸ್ತ್ರೀಯರಿಗೆ ಲಭಿಸುವ ಲೋಕವನ್ನು ಪಡೆಯುವೆ. ಇಲ್ಲವಾದಲ್ಲಿ ಅಧೋಗತಿಯೇ ನಿಶ್ಚಿತ'. ಮಗಳು ನುಡಿದಳು 'ನಾನು ತೆರಳುವೆ, ಕನ್ಯೆಯಿಂದ ಪ್ರಯೋಜನವೇನು?' ಅವಳು ಹೀಗೆನ್ನಲು ಬ್ರಾಹ್ಮಣ 'ಧಿಕ್ಕಾರ' ಎಂದ.

ವಿ: ೧) ಇಹಲೋಕದ ಕ್ಷೇಮ ಮಾತ್ರವಲ್ಲದೇ ಪರಲೋಕದಲ್ಲೂ ತನಗೆ ಪತಿವ್ರತೆಯರಿಗೆ ದೊರೆಯುವ ಸದ್ಗತಿ ದೊರೆಯುವುದು ಎಂಬುದು ಅವಳ ಮಾತಿನ ಮತ್ತೊಂದು ಅಂಶ. ಗಂಡನ ಆಪತ್ತಿಗೆ ನೆರವಾಗದಿದ್ದಲ್ಲಿ ಅಂತಹ ಸತಿಗೆ ಅಧೋಗತಿಯೇ ನಿಶ್ಚಿತ ಎಂಬ ವಿಷಯವನ್ನು ಅವಳು ತಿಳಿಸುವಳು. ಆ ವೇಳೆಗೆ ಅವರ ಚಿಕ್ಕ ಮಗಳು ನುಡಿದಳು : ''ನೀವಿಬ್ಬರೂ ತೆರಳಬೇಕಿಲ್ಲ, ಕನ್ಯೆಯಾದ ನಾನೇ ತೆರಳುವೆ. ನನ್ನಿಂದೇನು ಪ್ರಯೋಜನ?''. ಹೀಗೆನ್ನುವ ಮೂಲಕ ಅವಳು ತಾನೆಂದೂ ಮನೆಯಿಂದ ಕಳುಹಿಸಲ್ಪಡಬೇಕಾದವಳೇ, ಅದು ಇಂದೇ ಆಗಲಿ ಎಂಬ ಅಭಿಪ್ರಾಯವನ್ನು ತಿಳಿಸಿದರು.

೨) ಅವಳು ಕನ್ಯೆ ಎಂಬ ಪದದ ಮೂಲಕ ಇನ್ನೂ ವಿವಾಹವಾಗದವಳು; ಎಂದರೆ ಎಂಟರ ಪ್ರಾಯವನ್ನೂ ತಲುಪದೇ ಇದ್ದ ಚಿಕ್ಕ ಹುಡುಗಿ ಎಂಬ ವಿಷಯ ಸ್ಪಷ್ಟವಾಗುವುದು. ಆ ವಯಸ್ಸಿನಲ್ಲೂ ಅವಳಿಗಿದ್ದ ಪರಿಜ್ಞಾನ ಅಪಾರವಾದುದು. ಆದರೆ, ಬ್ರಾಹ್ಮಣ ಅವಳ ಮಾತನ್ನು ಒಪ್ಪದೆ ಗದರಿದ.

ಕನ್ಯೋದಿತಾ ಬತ ಕುಲದ್ವಯತಾರಿಣೀತಿ
ಜಾಯಾ ಸಖೀತಿ ವಚನಂ ಶ್ರುತಿಗಂ ಸುತಶ್ಚ।
ಆತ್ಮೈವ ತೇನ ನ ತು ಜೀವನಹೇತುತೋಽಹಂ
ಧೀಪೂರ್ವಕಂ ನ್ರಶನಕೇ ಪ್ರತಿಪಾದಯಾಮಿ ॥ ೭೬ ॥

---

೭೫. ಸತೀಭಃ ಪರಿವ್ರತಾಭಃ ಪ್ರಚರಿತೇ ಪ್ರಾಪ್ತೇ ಲೋಕೇ। – (ಜ.)

೭೫. ಲೋಕೇ ಸತೀಪ್ರಚರಿತ ಇತ್ಯತ್ರ ಲೋಕೇ ಪ್ರಕೃಷ್ಟಚರಿತೇ ಸತೀ = ವಿದ್ಯಮಾನಾ ಸ್ಯಾಂ= ಅಹಮಪಿ ತನ್ಮಧ್ಯೇ ಪಠ್ಯಮಾನಾ ಸ್ಯಾಮಿತಿ ಸಂಬಂಧಃ। ಯದ್ವಾ ಸತೀಪ್ರಚರಿತೇ ಸತ್ಯಾ= ಪತಿವ್ರತಯಾ ಪ್ರಕರ್ಷೇಣ ಚರಿತೇ ಗತೇ ''ಚರ ಗತಿಭಕ್ಷಣಯೋಃ'' ಇತಿ ಧಾತೋಃ ಲೋಕೇ= ಸ್ವರ್ಗಲೋಕೇ ಸ್ಯಾಮಿತಿ ಸಂಬಂಧಃ ॥ – (ವಾ.)

೭೫. 'ಲೋಕೇ ಸತಿ ಪ್ರಚರಿತೇ' ಇತಿ –

'ಪತಿವ್ರತಾನಾಂ ಲೋಕಂ ಚ ವ್ರಜಂತಂ ಸೋನ್ವಪಸ್ಯತೇ'

ಇತಿ ವಚನಾತ್ ಪತಿವ್ರತಾಗಮ್ಯಕಶ್ಚಿಲ್ಲೋಕೋಽಸ್ತೀತಿ ಜ್ಞಾಯತೇ। – (ಮ.)

ಅ: ''ಕನ್ಯೆ ಎರಡು ಕುಲಗಳನ್ನು ಉದ್ಧರಿಸುವವಳು ಎನ್ನಿಸಿರುವಳು ಅಲ್ಲವೇ!. ಪತ್ನಿ ಎಂದರೆ ಗೆಳತಿ ಎಂದು ಶ್ರುತಿಯ ಮಾತು. ಮಗನಂತೂ ತನ್ನ ಇನ್ನೊಂದು ರೂಪವೇ. ಆದ್ದರಿಂದ ನಾನು ನನ್ನ ಬದುಕಿಗಾಗಿ ಬುದ್ಧಿಪೂರ್ವಕವಾಗಿ ನಿಮ್ಮನ್ನೆಂದೂ ಆ ನರಭಕ್ಷಕನ ಬಾಯಿಗೆ ಒಪ್ಪಿಸಲಾರೆ''.

ಏ: ೧) ಕನ್ಯೆ ಎರಡು ಕುಲಗಳನ್ನು ಉದ್ಧರಿಸುವಳು ಎಂಬ ಇಲ್ಲಿನ ಮಾತು ವೈದಿಕ ಸಂಸ್ಕೃತಿಯಲ್ಲಿನ ಸ್ತ್ರೀಯರ ಸ್ಥಾನಮಾನವನ್ನು ನಿರ್ದೇಶಿಸುವುದು. ಮಗ ತಾನು ಹುಟ್ಟಿದ ಮನೆಯನ್ನು ಮಾತ್ರ ಉದ್ಧರಿಸಿದರೆ, ಮಗಳು ತಾನು ಹುಟ್ಟಿದ ಮನೆಯೊಂದಿಗೆ ಸೇರುವ ಮನೆಯನ್ನೂ ಉದ್ಧರಿಸುವಳು ಎಂದರ್ಥ. ಸ್ತ್ರೀಸಂಕುಲಕ್ಕೆ ಸೂಕ್ತ ಮನ್ನಣೆ ಸಲ್ಲುವ ಇಂತಹ ಮೌಲಿಕ ಮಾತನ್ನು ಹೀಗೆ ಪ್ರಕಟಪಡಿಸಿದ ಹಿರಿಮೆ ಶ್ರೀಮನ್ಮಧ್ವಾಚಾರ್ಯರದು. 'ನೂನಂ ಪುತ್ರಶತಾತ್ ಪುತ್ರೀ ಯದಿ ಪಾತ್ರೇ ಪ್ರದೀಯತೇ' ಎಂಬ ಪುರಾಣವಚನ ಇದಕ್ಕೆ ಪೂರಕವಾಗಿದೆ.

---

೭೬. ಜಾಯಾ ಸಖೇತಿ ವಚನಂ ಶ್ರುತಿಗಮಿತ್ಯನೇನ ''ಸಖಾ ಹ ಜಾಯಾ ಕೃಪಣಂ ಹ ದುಹಿತಾ ಜ್ಯೋತಿರ್ಹ ಪುತ್ರಃ'' (ಐತರೇಯಬ್ರಾಹ್ಮಣ ೭/೧೩/೮) ಇತಿ ಶ್ರುತಿಂ ಗೃಹ್ಣಾತಿ। ದುಹಿತಾ ಕೃಪಣಂ ದುಹಿತಾ ಪುತ್ರೀ ಸ್ವಕುಲಸ್ಯ ಭರ್ತೃಕುಲಸ್ಯ ಚ ತಾರಕತ್ವಾತ್ ಕೃಪಾಪಾತ್ರಮಿತ್ಯರ್ಥಃ। ಅತ ಏವ ಬತೇತ್ಯನುಕಂಪಾವಾಚಕಂ ಪದಂ ಪ್ರಯುಕ್ತಮ್। ಸುತಶ್ಚಾತ್ಮೈವೇತ್ಯನೇನ ''ಆತ್ಮಾ ವೈ ಪುತ್ರನಾಮಾಸೀ ಸ ಜೀವ ಶರದಃ ಶತಮ್'' ಇತಿ ಶ್ರುತಿಂ ಗೃಹ್ಣಾತಿ। ಮಧ್ಯಮಪುರುಷಪ್ರಯೋಗಾತ್ ಸಃ ತ್ವಂ ಜೀವೇತ್ಯರ್ಥಃ। ನಾ ಅಶನಂ ಯಸ್ಯ ಸ ನ್ರಶನಃ ನ್ರಶನ ಏವ ನ್ರಶನಕಃ ಸ್ವಾರ್ಥೇ ಕಪ್ರತ್ಯಯಃ। ನೈವ ಅಶನಂ ನ್ರಶನಂ ತೇನ ಕಂ ಸುಖಂ ಯಸ್ಮೇತಿ ವಾ। ಪ್ರತಿಪಾದಯಾಮಿ ಏತತ್ತ್ರಿತಯಂ ಚ ನ ದಿಶಾನೀತ್ಯರ್ಥಃ॥ – (ವಾ.)

೭೬. ಕುಲದ್ವಯಸ್ಯ ಮಾತಾಪಿತೃಕುಲದ್ವಯಸ್ಯ ತಾರಿಣೀ ನರಕಾತ್ ತಾರಿಣೀ। – (ಜ.)

೭೬. ಆತ್ಮಾ ವೈ ಪುತ್ರನಾಮಾಸೀತಿ ಶ್ರುತ್ಯನುವಾದಃ। – (ಜ.)

'ಸಖಾ ಹ ಜಾಯಾ ಕೃಪಣಂ ದುಹಿತಾ ಜ್ಯೋತಿರ್ಹ ಪುತ್ರ' ಇತಿ ಶ್ರುತೇರನೇನ ಗೃಹೀತೇತಿ ಜ್ಞೇಯಮ್। ಸುತಶ್ಚಾತ್ಮೇತ್ಯನೇನ 'ಆತ್ಮಾ ವೈ ಪುತ್ರನಾಮಾಸಿಃ' ಇತಿ ಶ್ರುತಿರುಪಾತ್ತಾ। – (ತಾ.)

೭೬. 'ಕನ್ಯೋದಿತಾ ಬತ ಕುಲದ್ವಯತಾರಿಣೀ' ಇತಿ ಕುಲದ್ವಯಮುಚ್ಯತೇ। ತತ್ ತ್ವಯುಕ್ತಮ್।

'ಪಿತೄಣಾಂ ಚ ಚತುರ್ವಿಂಶೋ ಮಾತೄಣಾಂ ವಿಂಶತಿಸ್ತಥಾ।
ಷೋಡಶೈವ ಭಗಿನ್ಯಾಸ್ತು ದುಹಿತುಃ ದ್ವಾದಶಸ್ತಥಾ।
ಯಾ ಏಕಾದಶಸ್ತು ಶ್ವಶುರೇ ಪಿತೃಷ್ವಸ್ಯಾಃ ದಶೈವ ತು।
ಅಷ್ಟೌ ಚ ಮಾತೃಭಗಿನೀಕುಲಮೇಕೋತ್ತರಂ ಶತಮ್।'

ಇತಿ ಕುಲಾನಾಮೇಕೋತ್ತರಶತತ್ವಾತ್ ಕುಲದ್ವಯತಾರಿಣೀತಿ ಕಥಮುಕ್ತಮಿತಿ ಚೇತ್, ನ। ಕುಲದ್ವಯ ಏವಾಂತರ್ಭಾವಮಭಿಪ್ರೇತ್ಯ ತಥೋಕ್ತಿರಿತ್ಯದೋಷಃ। ಯದ್ವಾ ಮಾತೃಮುಖ್ಯಾಸ್ತು ಯಾ ಸ್ತ್ರಿಯಃ ಮಾತಾಮಹ್ಯಾದಿಭಸ್ತ್ರಿಯಃ ಆತ್ಮಗೋತ್ರೇಣ ಸಂಯುಕ್ತಂ ಸಪ್ತಗೋತ್ರಂ ಪ್ರಕೀರ್ತಿತಮ್। ಆತ್ಮಗೋತ್ರಂ ಸಮಾರಭ್ಯ ಏಕೈಕಸ್ಯ ಚತುರ್ದಶಮಿತ್ರಸ್ವಾಮಿಗುರೂಣಾಂ ಚ ಕುಲಮೇಕೋತ್ತರಂ ಶತಮಿತಿ॥ – (ತಿ.)

ಇನ್ನೊಬ್ಬರ ಮನೆಗೆ ಸೇರಬೇಕಿದ್ದ ಹೆಣ್ಣನ್ನು ನ್ಯಾಸದಂತೆ ಎಚ್ಚರದಿಂದ ಪಾಲಿಸಬೇಕು. ಅವಳ ಮೇಲೆ ಹೆಚ್ಚಿನ ಅಧಿಕಾರ ಹೆತ್ತವರಿಗೆ ಎಂದೂ ಇರದು ಎಂಬ ಮಾತೂ ಅಲ್ಲಿ ಬಂದಿದೆ.

೨) ಇಲ್ಲಿ ಸ್ತ್ರೀಯರ ಬಗ್ಗೆ ಎಚ್ಚರ ವಹಿಸಬೇಕಾದ ಅನೇಕ ವಿಚಾರಗಳು ಸಂಗೃಹೀತವಾಗಿವೆ. ಕನ್ಯೆ ಎರಡು ಕುಲವನ್ನು ಉದ್ಧರಿಸುವುದು ಅವಳು ಯೋಗ್ಯಳಾಗಿದ್ದಾಗ ಮಾತ್ರ, ತಪ್ಪಿದಲ್ಲಿ ಅವಳು ಹುಟ್ಟಿದ ಮನೆಯನ್ನು ಮಾತ್ರ ಹಾಳುಮಾಡದೇ ಸೇರಿದ ಮನೆಯನ್ನೂ ಹಾಳು ಮಾಡುವ ಮೂಲಕ ಎರಡು ಮನೆತನಗಳನ್ನೂ ನಾಶಮಾಡುವ ಮಹಾಪಾತಕಿಯೂ ಆಗಬಹುದು ಎಂಬ ಸೂಚನೆಯೂ ಇಲ್ಲಿದೆ.

೩) ಇನ್ನು ಪತ್ನಿಯ ವಿಚಾರ. ಅವಳನ್ನು ಗುಲಾಮಳಂತೆ ಕಾಣಲು ಸಾಧ್ಯವಿಲ್ಲ, ಅವಳೆಂದಿದ್ದರೂ ಆತ್ಮೀಯಳಾದ ಗೆಳತಿ, ಸಹಧರ್ಮಿಣಿ. ಇದೂ ಸಹ ಭಾರತೀಯ ಸಂಸ್ಕೃತಿಯ ದೃಷ್ಟಿಯಲ್ಲಿ ಸ್ತ್ರೀಯರ ಹಿರಿಮೆಯನ್ನು ಸಾರುವ ಮಾತು. ವೇದಗಳಲ್ಲಿ ಸಖಾ ಜಾಯಾ ಎಂಬ ಮಾತಿದೆ. ಯಕ್ಷಪ್ರಶ್ನೆಯಲ್ಲೂ ಧರ್ಮರಾಜ ಮನೆಯಲ್ಲಿ ಗೆಳತಿಯಾರು ಎಂಬ ಪ್ರಶ್ನೆಗೆ ಹೀಗೆ ಹೆಂಡತಿಯೆಂದೇ +ಉತ್ತರಿಸುವುದನ್ನು ಗಮನಿಸಬೇಕು.

೪) ಇನ್ನು ಮಗನನ್ನು ಕಳುಹಿಸುವ ವಿಚಾರ, ಅದೂ ಅಸಾಧ್ಯವೇ. ತಾನು ಹೋಗುವುದು ಆತ್ಮಹತ್ಯೆ ಎನ್ನಿಸಿದರೆ, ಮಗನನ್ನು ಕಳಿಸುವುದು ಮತ್ತೊಂದು ಬಗೆಯಲ್ಲಿ ಆತ್ಮಹತ್ಯೆಯೇ. ಏಕೆಂದರೆ ಮಗನನ್ನು ಶಾಸ್ತ್ರಗಳು ತಂದೆಯ ಪ್ರತಿರೂಪ ಎಂದೇ ಬಣ್ಣಿಸಿವೆ : **'ಆತ್ಮಾ ವೈ ಪುತ್ರನಾಮಾಸಿ'**.

ಏವಂ ರುದತ್ಸು ಸಹಿತೇಷು ಕುಮಾರಕೋಽಸ್ಯ
ಪ್ರಾಹ ಸ್ವಹಸ್ತಗತತೃಣಂ ಪ್ರತಿದರ್ಶ್ಯ ಚೈಷಾಮ್ ।
ಏತೇನ ರಾಕ್ಷಸಮಹಂ ನಿಹನಿಷ್ಯ ಏವೇ-
ತ್ಯುಕ್ತೇ ಸುವಾಕ್ಯಮನು ಸಾ ಪ್ರವಿವೇಶ ಕುಂತೀ ॥ ೭೭ ॥

\+ ಯುಧಿಷ್ಠಿರ ಉವಾಚ– ... **ಭಾರ್ಯಾ ಮಿತ್ರಂ ಗೃಹೇ ಸತಃ** । – ಭಾರತ (ವನ. ೩೧೩/೬೩,೬೪)

ಯುಧಿಷ್ಠಿರ ಉವಾಚ– ... **ಭಾರ್ಯಾ ದೈವಕೃತಃ ಸಖಾ** । – ಭಾರತ (ವನ. ೩೧೩/೭೧,೭೨)

೭೭. ಸುವಾಕ್ಯಮನು ಸಾ ಪ್ರವಿವೇಶೇತ್ಯತ್ರ ಸುವಾಕ್ಯಮಿತ್ಯನೇನ ತೃಣೇನ ಹನ್ಮೀತಿ ಬಾಲಕವಾಕ್ಯಸ್ಯ ಶೋಭನವಾಕ್ಯ-ತಯಾ ಶಕುನರೂಪತ್ವಾತ್ ಭೀಮೋಽಪಿ ಬಕಂ ತೃಣೇಕೃತ್ಯ ಹಂತೀತಿ ನಿಶ್ಚಿತ್ಯ ಪ್ರವಿವೇಶೇತಿ ಸೂಚಯತಿ ॥ – (ವಾ.)

೭೭. ತತಃ ಸ ತೃಣಮಾದಾಯ ಪ್ರಹೃಷ್ಟಃ ಪುನರಬ್ರವೀತ್ ।
ಅನೇನಾಹಂ ಹನಿಷ್ಯಾಮಿ ರಾಕ್ಷಸಂ ಪುರುಷಾದಕಮ್ ॥ – ಭಾರತ (೧೧೮/೨೨)

ಅ: ಹೀಗೆ ಅವರು ದುಃಖಿಸುತ್ತಿದ್ದಾಗ ಅವರ ಮಗು ತನ್ನ ಕೈಯಲ್ಲಿದ್ದ ಹುಲ್ಲು ಕಡ್ಡಿಯನ್ನು ಅವರಿಗೆ ತೋರಿಸುತ್ತಾ ನುಡಿಯಿತು ''ನಾನು ಇದರಿಂದ ಆ ರಾಕ್ಷಸನನ್ನು ಕೊಂದೇಬಿಡುವೆ''. ಆ ಶುಭವಚನದೊಂದಿಗೆ ಕುಂತಿ ಕೂಡಲೆ ಒಳಗೆ ಧಾವಿಸಿದಳು.

ವಿ: ೧) ಹೀಗೆ ಮಾತುಕತೆ ನಡೆಯುತ್ತಿದ್ದಾಗ ಚಿಕ್ಕ ಮಗು ನುಡಿಯಿತು – ''ಯಾರೂ ಹೋಗುವುದು ಬೇಡ, ಇಗೋ ಈ ಹುಲ್ಲುಕಡ್ಡಿಯಿಂದ ಅವನನ್ನು ನಾನು ಕೊಂದೇಹಾಕುವೆ''. ಅಲ್ಲಿಯ ದುಃಖದ ವಾತಾವರಣದಲ್ಲಿ ಒಂದು ಆಶಾಕಿರಣವಾಗಿ ಆ ಮಗುವಿನ ಮಾತು ಕಂಡಿತು. ಅದನ್ನು ಶುಭಶಕುನವೆಂದು ಭಾವಿಸಿದ ಕುಂತಿ ತಕ್ಷಣ ಒಳಕ್ಕೆ ಪ್ರವೇಶಿಸಿದಳು ಎಂದರ್ಥ :

ಮಾ ಪಿತಾ ರುದ ಮಾ ಮಾತರ್ಮಾ ಸ್ವಸಸ್ತ್ವಿತಿ ಚಾಬ್ರವೀತ್ ।
ಪ್ರಹಸನ್ನಿವ ಸರ್ವಾಂಸ್ತಾನೇಕೈಕಮನುಸರ್ಪತಿ ॥
ತತಃ ಸ ತೃಣಮಾದಾಯ ಪ್ರಹೃಷ್ಟಃ ಪುನರಬ್ರವೀತ್ ।
ಅನೇನಾಹಂ ಹನಿಷ್ಯಾಮಿ ರಾಕ್ಷಸಂ ಪುರುಷಾದಕಮ್ ॥ –(ಆದಿ. ೧೫೮/೨೧,೨೨)

೨) ಇಲ್ಲಿ 'ಸುವಾಕ್ಯ' ಎನ್ನುವ ಮೂಲಕ ಶ್ರೀಮದಾಚಾರ್ಯರು ಶಕುನಗಳ ಬಗ್ಗೆಯೂ ಬೆಳಕು ಚೆಲ್ಲಿದಂತಾಗಿದೆ. ಶುಭಶಕುನಗಳು ಸತ್ಫಲವನ್ನೂ, ಅಶುಭಶಕುನಗಳು ದುಷ್ಫಲವನ್ನೂ ಸೂಚಿಸುವವು ಎಂಬುದು ಶಾಸ್ತ್ರವಚನ. ಆ ಮಗುವಿನ ಮಾತು ತನ್ನ ಮಗ ಭೀಮಸೇನ ಆ ಬಕಾ–ಸುರನನ್ನು ಕೊಂದು ಹಾಕುವುದಕ್ಕೆ ಸಂಕೇತ ಎಂದು ಗ್ರಹಿಸಿದ ಕುಂತಿ ಒಳನಡೆದಳು ಎಂದರ್ಥ.

ಬಕಾಸುರನ ಪರಿಚಯ

ಪೃಷ್ಟಸ್ತಯಾऽऽಹ ಸ ತು ವಿಪ್ರವರೋ ಬಕಸ್ಯ
ವೀರ್ಯಂ ಬಲಂ ಚ ದಿತಿಜಾರಿಭಿರಪ್ಯಸಹ್ಯಮ್ ।
ಸಂವತ್ಸರತ್ರಯಯುತೇ ದಶಕೇ ಕರಂ ಚ
ಪ್ರಾತಿಸ್ವಿಕಂ ದಶಮುಖಸ್ಯ ಚ ಮಾತುಲಸ್ಯ ॥ ೭೮ ॥

---

೭೮. ವೀರ್ಯಂ ಬಲಂ ಚೇತ್ಯತ್ರ ವೀರ್ಯಂ ಬಲಂ ಚ ಪ್ರಾತಿಸ್ವಿಕಂ ಗೃಹಂ ಗೃಹಂ ಪ್ರತಿ ದೀಯಮಾನಂ ಕರಂ ಚ ತಯಾ ಪೃಷ್ಟಃ ಆಹ ಚೇತಿ ಚಶಬ್ದಸಂಬಂಧಃ। ತುಶಬ್ದೇನ ಬಕೀಯಸಕಲಕಥಾಯಾಃ ವಿಶಿಷ್ಯ ಕಥನಂ ಸೂಚಯತಿ ॥ –(ವಾ.)

೭೮ ತ್ರಯೋದಶವರ್ಷಾನಂತರಂ ಏಕೈಕೇನ ಗೃಹಸ್ವಾಮಿನಾ ಏಕೈಕಸ್ಮಿನ್ ದಿವಸೇ ಅನ್ನಾತ್ಮಕಂ ಕರಂ ದಾತವ್ಯಮಿತ್ಯಾಹೇತ್ಯರ್ಥಃ। –(ಜ.)

೭೮. ತ್ರಯೋದಶವರ್ಷಾನಂತರಂ ಏಕೈಕೇನ ಗೃಹಸ್ವಾಮಿನಾ ಏಕೈಕಸ್ಮಿನ್ ದಿವಸೇ ...। –(ವ.)

ಅ: ಅವಳು ಕೇಳಿದಾಗ ಆ ವಿಪ್ರೋತ್ತಮ ನುಡಿದ: ''ಬಕನ ವೀರ್ಯ ಸಾಮರ್ಥ್ಯಗಳು ಅಸುರವೈರಿಗಳಾದ ದೇವತೆಗಳಿಗೂ ನೀಗಲಾರದಂಥವು. ಅವನು ರಾವಣನ ಸೋದರಮಾವ. ಹದಿಮೂರು ವರ್ಷಗಳಿಗೆ ಒಮ್ಮೆಯಂತೆ ಪ್ರತಿಯೊಬ್ಬರೂ ಅವನಿಗೆ ಕಪ್ಪ ನೀಡಲೇ ಬೇಕಿದೆ.

ಏ: ೧) ಬಕಾಸುರ ರಾವಣನ ಸೋದರಮಾವ, ಅನೇಕರು ಅವನನ್ನು ಮಾರೀಚನ ಅವತಾರ ಎಂದು ಹೇಳುವುದುಂಟು. ಅದು ಸರಿಯಲ್ಲ. ಮಾರೀಚ ರಾವಣನಿಗೆ ಯಾವುದೇ ದೃಷ್ಟಿಯಿಂದ ಸಂಬಂಧಿ ಅಲ್ಲವೇ ಅಲ್ಲ. ಅದಕ್ಕೆ ಅವನು ಮೂಲತಃ ಸುಕೇತು ಎಂಬ ಯಕ್ಷನ ಮಗನಾಗಿದ್ದುದೇ ಕಾರಣ. ಯಾವ ಸಂಬಂಧವೂ ಇಲ್ಲದ ಮಾರೀಚ ರಾವಣನ ಸೋದರಮಾವನಾಗುವ ಸಂಭವವೇ ಇಲ್ಲ. ರಾವಣನ ಸೋದರ ಮಾವನೊಬ್ಬ ಈಗ ಹುಟ್ಟಿ ಬಂದಿದ್ದಾನೆ ಎಂದು ಈ ವಾಕ್ಯದ ಅರ್ಥ ಆಗುವುದೂ ಇಲ್ಲ. ರಾವಣನ ಸೋದರಮಾವನೇ ಬಕಾಸುರ, ಎಂದರೆ ರಾಮಾಯಣ ಕಾಲದಿಂದಲೂ ಅವನು ಆ ಏಕಚಕ್ರ ನಗರಕ್ಕೆ ಪೀಡೆಯಾಗಿ ಗಂಟುಬಿದ್ದಿದ್ದ ಮಹಾಪಾಪಿ ಎಂದರ್ಥ.

೨) ಬಕಾಸುರ ಜನಗಳನ್ನು ಮನಸ್ಸಿಗೆ ಬಂದಂತೆ ತಿನ್ನುವುದನ್ನು ತಪ್ಪಿಸಲು ಆ ಊರಿನ ಜನ ಅವನೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿದ್ದರು. ಅದರಂತೆ ಆ ಊರಿನ ಪ್ರತಿಯೊಂದು ಮನೆಯವರು ಪ್ರತಿ ಹದಿಮೂರು ವರ್ಷಕ್ಕೆ ಒಮ್ಮೆ ಅವನಿಗೆ ಒಂದು ಗಾಡಿ, ಅದರ ತುಂಬ ಅನ್ನ, ಅದನ್ನು ಎಳೆಯುವ ಎತ್ತು, ಹೊಡೆಯುವ ಮನುಷ್ಯ – ಅಷ್ಟನ್ನು ಕಾಣಿಕೆಯಾಗಿ ಒಪ್ಪಿಸತಕ್ಕದ್ದು. ಅವನು ಊರೊಳಗೆ ಪ್ರವೇಶಿಸದೇ ಅಷ್ಟರಿಂದಲೇ ಸಂತೃಪ್ತನಾಗಿ ಇರತಕ್ಕದ್ದು ಎಂದು. ಎಂದರೆ ಈ ರೀತಿ ಆ ಊರಿನ ಪ್ರತಿ ಮನೆಗೆ ಹದಿಮೂರು ವರ್ಷಕ್ಕೆ ಒಂದುಸಲ ಅಂತಹ ಪ್ರಸಂಗ ಒದಗುತ್ತಿತ್ತು ಅಂದು ಆ ಬ್ರಾಹ್ಮಣನ ಪಾಲಿಗೆ ಒದಗಿತ್ತು ಎಂದರ್ಥ. ಹದಿಮೂರು ವರ್ಷಕ್ಕೊಮ್ಮೆ ಎಂಬ ಭಾವನೆಯಿಂದ ಜನರು ಸ್ವಲ್ಪ ಔದಾಸೀನ್ಯ ತೋರುವುದರ ಫಲವಾಗಿ ಹಾಗೆ ಅನಿವಾರ್ಯವಾಗಿ ಒಬ್ಬರು ಪ್ರಾಣ ಕಳೆದುಕೊಳ್ಳಲೇ ಬೇಕಾಗುತ್ತಿತ್ತು ಎಂದರ್ಥ :

ವೇತನಂ ತಸ್ಯ ವಿಹಿತಂ ಶಾಲಿವಾಹಸ್ಯ ಭೋಜನಮ್ ।
ಮಹಿಷೌ ಪುರುಷಶ್ಚೈಕೋ ಯಸ್ತದಾದಾಯ ಗಚ್ಛತಿ ॥
ಏಕೈಕಶ್ಚಾಪಿ ಪುರುಷಸ್ತತ್ ಪ್ರಯಚ್ಛತಿ ಭೋಜನಮ್ ।
ಸ ವಾರೋ ಬಹುಭಿರ್ವರ್ಷೈರ್ಭವತ್ಯಸುಕರೋ ನರೈಃ ॥ – (ಆದಿ. ೧೫೯/೬,೭)

ಶ್ರುತ್ವಾ ತಮುಗ್ರಬಲಮತ್ಯುರುವೀರ್ಯಮೇವ
ರಾಮಾಯಣೇ ರಘುವರೋರುಶರಾತಿಭೀತಮ್ ।
ವಿಷ್ಟಂ ಬಲೇಷ್ವಥ ನೃಪಾನ್ ವಶಮಾಶು ಕೃತ್ವಾ
ಭೀತ್ಯೈವ ತೈಸ್ತದನು ದತ್ತಕರಂ ನನಂದ ॥ ೭೯ ॥

ಅ: ಭಯಂಕರ ಬಲದ, ಅತ್ಯಂತ ಮಹಾಪರಾಕ್ರಮದ ಆ ಬಕಾಸುರ ರಾಮಾಯಣ ಕಾಲದಲ್ಲಿ ಶ್ರೀರಾಮಚಂದ್ರನ ಅಮೋಘ ಬಾಣಕ್ಕೆ ಬಹಳವಾಗಿ ಅಂಜಿ ಗುಹೆಗಳೊಳಗೆ ಅಡಗಿಬಿಟ್ಟಿದ್ದವನು; ಶ್ರೀರಾಮ ಪರಂಧಾಮಕ್ಕೆ ತೆರಳಿದ ಅನಂತರ ರಾಜರುಗಳನ್ನು ತನ್ನ ವಶಮಾಡಿಕೊಂಡು ಭೀತರಾದ ಅವರಿಂದ ಕಪ್ಪ ಪಡೆದುಕೊಂಡು ಬದುಕಿದ್ದವನು'' - ಇದನ್ನು ಕೇಳಿ ಕುಂತಿ ಸಂತೋಷಪಟ್ಟಳು.

ವಿ: ೧) ರಾಮಾಯಣ ಕಾಲದಲ್ಲಿ ಅವನು ಶ್ರೀರಾಮ ದೇವರಿಂದಲೇ ಸಾಯಬೇಕಿದ್ದವನು. ಆದರೆ, ರಾಮನ ಬಾಣಕ್ಕಂಜಿದ್ದ ಅವನು ರಾಮದೇವರು ಪರಂಧಾಮಕ್ಕೆ ತೆರಳುವ ವರೆಗೂ ಗುಹೆಗಳೊಳಗೆ ಅಡಗಿ ತಲೆಮರೆಸಿಕೊಂಡಿದ್ದ. ಅನಂತರ ಪುನಃ ಹೊರಗೆ ಬಂದು ಜನಗಳನ್ನು ಪೀಡಿಸತೊಡಗಿದ್ದ ಎಂದರ್ಥ.

೨) ಭಯಪಟ್ಟ ಹೇಡಿಗಳನ್ನು ಕೊಲ್ಲುವುದು ವೀರಧರ್ಮವಲ್ಲ ಎಂಬ ಕಾರಣದಿಂದ ರಾಮದೇವರು ಅವನನ್ನು ಕೊಲ್ಲದೇ ಬಿಟ್ಟಿದ್ದರು. ಅವನು ಭೀಮನಿಂದ ಸಾಯಬೇಕಾದವನು ಎಂಬುದೇ ಹಾಗೆ ಬಿಡಲು ಮುಖ್ಯವಾದ ಕಾರಣ ಎಂಬುದನ್ನೂ ತಿಳಿಯಬೇಕು. ಅಂತೂ ಆಗ ಶ್ರೀರಾಮನಿಂದ ಉಳಿದಿದ್ದವನು ಈಗ ಭೀಮನಿಂದ ಸಾಯುವ ಕಾಲ ಬಂದಿದೆ ಎಂದು ಕುಂತಿ ಆನಂದಿಸಿದಳು ಎಂದರ್ಥ.

ಕುಂತಿಯಿಂದ ಬ್ರಾಹ್ಮಣ ಕುಟುಂಬಕ್ಕೆ ಆಶ್ವಾಸನೆ

ಏವಂ ಬಲಾಢ್ಯಮಮುಮಾಶು ನಿಹತ್ಯ ಭೀಮಃ
ಕೀರ್ತಿಂ ಚ ಧರ್ಮಮಧಿಕಂ ಪ್ರತಿಯಾಸ್ಯತೀಹ ।
ಸರ್ವೇ ವಯಂ ಚ ತಮನು ಪ್ರಗೃಹೀತಧರ್ಮಾ
ಯಾಸ್ಯಾಮ ಇತ್ಯವದದಾಶು ಧರಾಸುರಂ ತಮ್ ॥ ೮೦ ॥

---

೭೯. ರಾಮಾಯಣೇ ಶ್ರೀರಾಮವಿಕ್ರಾಂತಿಕಾಲೇ। – (ವೇ., ಜ.)

೭೯. ರಾಮಾಯಣೇ ರಾಮವಿಕ್ರಾಂತೌ। – (ತಾ.)

೭೯. ವಿಷ್ಟಂ ಬಲೇಷ್ವಿತಿ ಇತೋ ಗವ್ಯೂತಿಮಾತ್ರೇತಿ ಯಮುನಾಗಹ್ವರೇ ಗುಹಾ ದಶಯೋಜನ ಯಸ್ಯಾಸ್ಯ ಪುರಸ್ಯ ಚ ಮಹಾಬಲಃ। – (ಮ.)

೮೦. ಯಾಸ್ಯಾಮ ಇತ್ಯವದದಿತ್ಯತ್ರ ಇತ್ಯಾಲೋಚ್ಯೇತಿ ಯೋಗ್ಯಪದಾಧ್ಯಾಹಾರೋ ಜ್ಞೇಯಃ ॥ – (ವಾ.)

೮೦. ಕುಂತೀ ಪ್ರಗೃಹೀತಧರ್ಮಾಃ ವಯಂ ಕೀರ್ತಿಂ ಯಾಸ್ಯಾಮ ಇತಿ ನನಂದೇತ್ಯನ್ವಯಃ। – (ತಾ.)

ಅ: ''ಇಂತಹ ಬಲಾಢ್ಯನಾದ ಅವನನ್ನು ಕೊಂದು ಭೀಮ ಅಪಾರಕೀರ್ತಿಯನ್ನು, ಪುಣ್ಯವನ್ನೂ ಇಲ್ಲಿ ಹೊಂದುವನು. ಅವನಿಂದ ನಾವೂ ಪುಣ್ಯಭಾಗಿಗಳಾಗಿ ಆಗಬಹುದು'' ಎಂದು ಭಾವಿಸಿ ಆಗಲೇ ಆ ಬ್ರಾಹ್ಮಣನಿಗೆ ಹೇಳಿದಳು.

ವಿ: ಬಕ ಅಂತಹ ಬಲಾಢ್ಯ ಎಂಬುದನ್ನು ಕೇಳಿ ಕುಂತಿಗೆ ಸ್ವಲ್ಪವೂ ಭಯವೆನ್ನಿಸದೇ ತನ್ನ ಪುತ್ರ ಭೀಮ ಅವನನ್ನು ಕೊಂದು ಧರ್ಮರಕ್ಷಕನಾಗುವನು ಎಂದು ಆನಂದಿಸಿದ್ದು ಅವಳು ಭೀಮನ ಬಗ್ಗೆ ಹೊಂದಿದ್ದ ಪರಿಪೂರ್ಣಜ್ಞಾನ ಹಾಗೂ ವಿಶ್ವಾಸಗಳನ್ನು ಸ್ಫುಟಪಡಿಸುವುದು.

ಸಂತಿ ಸ್ಮ ವಿಪ್ರವರ ಪಂಚ ಸುತಾ ಮಮಾದ್ಯ
ತೇಷ್ವೇಕ ಏವ ನರವೈರಿಮುಖಾಯ ಯಾತು ।
ಇತ್ಯುಕ್ತ ಆಹ ಸ ನ ತೇ ಸುತವಧ್ಯಯಾಽಹಂ
ಪಾಪೋ ಭವಾಮಿ ತವ ಹಂತ ಮನೋಽತಿಧೀರಮ್ ॥ ೮೧ ॥

ಅ: 'ವಿಪ್ರೋತ್ತಮ, ನನಗೀಗ ಐವರು ಪುತ್ರರಿರುವರು. ಅವರಲ್ಲೊಬ್ಬ ರಾಕ್ಷಸನ ಬಾಯಿಗೆ ಬೀಳಲಿ'. ಅವಳು ಹೀಗೆಂದಾಗ ಬ್ರಾಹ್ಮಣ ನುಡಿದ 'ನಿನ್ನ ಮಗನನ್ನು ಕೊಲ್ಲಿಸಿ ನಾನು ಪಾಪಿಯಾದೇನು. ಅಬ್ಬ! ನಿನ್ನ ಮನಸ್ಸು ಅದೆಷ್ಟು ಗಟ್ಟಿ'.

ವಿ: ೧) ಕುಂತಿ ಹೇಳಿದ ಮಾತು ಬ್ರಾಹ್ಮಣನಿಗೆ ಅಪಾರ ಆಶ್ಚರ್ಯವನ್ನುಂಟು ಮಾಡಿತು. ಹಾಗೆ ತನ್ನ ಒಬ್ಬ ಮಗನನ್ನೇ ನಿಶ್ಚಿಂತೆಯಿಂದ ಅಸುರನ ಬಳಿಗೆ ಕಳಿಸಿಕೊಡುವ ಅವಳ ಮನಸ್ಸು ಅದೆಷ್ಟು ಗಟ್ಟಿ ಎಂದು ಅವನು ತಬ್ಬಿಬ್ಬಾದ. ಆದರೆ, ಅವನದೂ ದೃಢ ನಿಶ್ಚಯವೇ. ತನ್ನ ಉಳಿವಿಗಾಗಿ ಇನ್ನೊಬ್ಬರನ್ನು ಕೊಲ್ಲಿಸುವ ಪಾತಕಕ್ಕೆ ತಾನೆಂದೂ ಗುರಿಯಾಗಲು ಬಯಸೆನು ಎಂದು ನುಡಿದುಬಿಟ್ಟ.

೨) ಬಾಹ್ಮಣನ ಇಂತಹ ಧರ್ಮಪ್ರಜ್ಞೆ ಅವನಿಗೆ ಭೀಮಾದಿಪಾಂಡವರ ಕೃಪೆಗೆ ಪಾತ್ರನಾಗಲು ಕಾರಣವಾಯಿತು ಎಂದು ತಿಳಿಯಬೇಕು. ಪರರನ್ನು ಸಂಕಟಕ್ಕೆ ಗುರಿಮಾಡಿ ಸುಖಪಡುವ ಪ್ರವೃತ್ತಿ ಎಂದೂ ಧರ್ಮಸಮ್ಮತವೆನ್ನಿಸದು ಎಂಬ ಪ್ರಮೇಯ ಇಲ್ಲಿದೆ.

೩) ಮಕ್ಕಳು ಎಷ್ಟಿದ್ದರೂ ಅವರಲ್ಲಿ ಒಬ್ಬರೂ ತಾಯಿಗೆ ಭಾರವೆನ್ನಿಸರು. ಆದರೆ, ಅಷ್ಟು ಮಕ್ಕಳಿಗೂ ತಂದೆ ತಾಯಿ ಇಬ್ಬರೇ ಭಾರವೆನ್ನಿಸುವುದು ಮಾತ್ರ ಲೋಕದ ವಿಚಿತ್ರ ಪ್ರವೃತ್ತಿ ಎಂಬ ಧ್ವನಿಯೂ ಇಲ್ಲಿದೆ.

ಅ: ಭಯಂಕರ ಬಲದ, ಅತ್ಯಂತ ಮಹಾಪರಾಕ್ರಮದ ಆ ಬಕಾಸುರ ರಾಮಾಯಣ ಕಾಲದಲ್ಲಿ ಶ್ರೀರಾಮಚಂದ್ರನ ಅಮೋಘ ಬಾಣಕ್ಕೆ ಬಹಳವಾಗಿ ಅಂಜಿ ಗುಹೆಗಳೊಳಗೆ ಅಡಗಿಬಿಟ್ಟಿದ್ದವನು; ಶ್ರೀರಾಮ ಪರಂಧಾಮಕ್ಕೆ ತೆರಳಿದ ಅನಂತರ ರಾಜರುಗಳನ್ನು ತನ್ನ ವಶಮಾಡಿಕೊಂಡು ಭೀತರಾದ ಅವರಿಂದ ಕಪ್ಪ ಪಡೆದುಕೊಂಡು ಬದುಕಿದ್ದವನು'' - ಇದನ್ನು ಕೇಳಿ ಕುಂತಿ ಸಂತೋಷಪಟ್ಟಳು.

ವಿ: ೧) ರಾಮಾಯಣ ಕಾಲದಲ್ಲಿ ಅವನು ಶ್ರೀರಾಮ ದೇವರಿಂದಲೇ ಸಾಯಬೇಕಿದ್ದವನು. ಆದರೆ, ರಾಮನ ಬಾಣಕ್ಕಂಜಿದ್ದ ಅವನು ರಾಮದೇವರು ಪರಂಧಾಮಕ್ಕೆ ತೆರಳುವ ವರೆಗೂ ಗುಹೆಗಳೊಳಗೆ ಅಡಗಿ ತಲೆಮರೆಸಿಕೊಂಡಿದ್ದ. ಅನಂತರ ಪುನಃ ಹೊರಗೆ ಬಂದು ಜನಗಳನ್ನು ಪೀಡಿಸತೊಡಗಿದ್ದ ಎಂದರ್ಥ.

೨) ಭಯಪಟ್ಟ ಹೇಡಿಗಳನ್ನು ಕೊಲ್ಲುವುದು ವೀರಧರ್ಮವಲ್ಲ ಎಂಬ ಕಾರಣದಿಂದ ರಾಮದೇವರು ಅವನನ್ನು ಕೊಲ್ಲದೇ ಬಿಟ್ಟಿದ್ದರು. ಅವನು ಭೀಮನಿಂದ ಸಾಯಬೇಕಾದವನು ಎಂಬುದೇ ಹಾಗೆ ಬಿಡಲು ಮುಖ್ಯವಾದ ಕಾರಣ ಎಂಬುದನ್ನೂ ತಿಳಿಯಬೇಕು. ಅಂತೂ ಆಗ ಶ್ರೀರಾಮನಿಂದ ಉಳಿದಿದ್ದವನು ಈಗ ಭೀಮನಿಂದ ಸಾಯುವ ಕಾಲ ಬಂದಿದೆ ಎಂದು ಕುಂತಿ ಆನಂದಿಸಿದಳು ಎಂದರ್ಥ.

ಕುಂತಿಯಿಂದ ಬ್ರಾಹ್ಮಣ ಕುಟುಂಬಕ್ಕೆ ಆಶ್ವಾಸನೆ

ಏವಂ ಬಲಾಢ್ಯಮಮುಮಾಶು ನಿಹತ್ಯ ಭೀಮಃ
ಕೀರ್ತಿಂ ಚ ಧರ್ಮಮಧಿಕಂ ಪ್ರತಿಯಾಸ್ಯತೀಹ ।
ಸರ್ವೇ ವಯಂ ಚ ತಮನು ಪ್ರಗೃಹೀತಧರ್ಮಾ
ಯಾಸ್ಯಾಮ ಇತ್ಯವದದಾಶು ಧರಾಸುರಂ ತಮ್ ॥ ೮೦ ॥

---

೭೯. ರಾಮಾಯಣೇ ಶ್ರೀರಾಮವಿಕ್ರಾಂತಿಕಾಲೇ। – (ವೇ., ಜ.)

೭೯. ರಾಮಾಯಣೇ ರಾಮವಿಕ್ರಾಂತೌ। – (ತಾ.)

೭೯. ವಿಷ್ಣಂ ಬಲೇಷ್ವಿತಿ ಇತೋ ಗವ್ಯೂತಿಮಾತ್ರೇತಿ ಯಮುನಾಗಹ್ವರೇ ಗುಹಾ ದಶಯೋಜನ ಯಸ್ಯಾಸ್ಯ ಪುರಸ್ಯ ಚ ಮಹಾಬಲಃ। – (ಮ.)

೮೦. ಯಾಸ್ಯಾಮ ಇತ್ಯವದದಿತ್ಯತ್ರ ಇತ್ಯಾಲೋಚ್ಯೇತಿ ಯೋಗ್ಯಪದಾಧ್ಯಾಹಾರೋ ಜ್ಞೇಯಃ ॥ – (ವಾ.)

೮೦. ಕುಂತೀ ಪ್ರಗೃಹೀತಧರ್ಮಾಃ ವಯಂ ಕೀರ್ತಿಂ ಯಾಸ್ಯಾಮ ಇತಿ ನನಂದೇತ್ಯನ್ವಯಃ। – (ತಾ.)

ಅ: ''ಇಂತಹ ಬಲಾಢ್ಯನಾದ ಅವನನ್ನು ಕೊಂದು ಭೀಮ ಅಪಾರಕೀರ್ತಿಯನ್ನು, ಪುಣ್ಯವನ್ನೂ ಇಲ್ಲಿ ಹೊಂದುವನು. ಅವನಿಂದ ನಾವೂ ಪುಣ್ಯಭಾಗಿಗಳಾಗಿ ಆಗಬಹುದು'' ಎಂದು ಭಾವಿಸಿ ಆಗಲೇ ಆ ಬ್ರಾಹ್ಮಣನಿಗೆ ಹೇಳಿದಳು.

ವಿ: ಬಕ ಅಂತಹ ಬಲಾಢ್ಯ ಎಂಬುದನ್ನು ಕೇಳಿ ಕುಂತಿಗೆ ಸ್ವಲ್ಪವೂ ಭಯವೆನ್ನಿಸದೇ ತನ್ನ ಪುತ್ರ ಭೀಮ ಅವನನ್ನು ಕೊಂದು ಧರ್ಮರಕ್ಷಕನಾಗುವನು ಎಂದು ಆನಂದಿಸಿದ್ದು ಅವಳು ಭೀಮನ ಬಗ್ಗೆ ಹೊಂದಿದ್ದ ಪರಿಪೂರ್ಣಜ್ಞಾನ ಹಾಗೂ ವಿಶ್ವಾಸಗಳನ್ನು ಸ್ಫುಟಪಡಿಸುವುದು.

ಸಂತಿ ಸ್ಮ ವಿಪ್ರವರ ಪಂಚ ಸುತಾ ಮಮಾದ್ಯ
ತೇಷ್ವೇಕ ಏವ ನರವೈರಿಮುಖಾಯ ಯಾತು ।
ಇತ್ಯುಕ್ತ ಆಹ ಸ ನ ತೇ ಸುತವಧ್ಯಯಾऽಹಂ
ಪಾಪೋ ಭವಾಮಿ ತವ ಹಂತ ಮನೋऽತಿಧೀರಮ್ ॥ ೮೧ ॥

ಅ: 'ವಿಪ್ರೋತ್ತಮ, ನನಗೀಗ ಐವರು ಪುತ್ರರಿರುವರು. ಅವರಲ್ಲೊಬ್ಬ ರಾಕ್ಷಸನ ಬಾಯಿಗೆ ಬೀಳಲಿ'. ಅವಳು ಹೀಗೆಂದಾಗ ಬ್ರಾಹ್ಮಣ ನುಡಿದ 'ನಿನ್ನ ಮಗನನ್ನು ಕೊಲ್ಲಿಸಿ ನಾನು ಪಾಪಿಯಾದೇನು. ಅಬ್ಬ! ನಿನ್ನ ಮನಸ್ಸು ಅದೆಷ್ಟು ಗಟ್ಟಿ'.

ವಿ: ೧) ಕುಂತಿ ಹೇಳಿದ ಮಾತು ಬ್ರಾಹ್ಮಣನಿಗೆ ಅಪಾರ ಆಶ್ಚರ್ಯವನ್ನುಂಟು ಮಾಡಿತು. ಹಾಗೆ ತನ್ನ ಒಬ್ಬ ಮಗನನ್ನೇ ನಿಶ್ಚಿಂತೆಯಿಂದ ಅಸುರನ ಬಳಿಗೆ ಕಳಿಸಿಕೊಡುವ ಅವಳ ಮನಸ್ಸು ಅದೆಷ್ಟು ಗಟ್ಟಿ ಎಂದು ಅವನು ತಬ್ಬಿಬ್ಬಾದ. ಆದರೆ, ಅವನದೂ ದೃಢ ನಿಶ್ಚಯವೇ. ತನ್ನ ಉಳಿವಿಗಾಗಿ ಇನ್ನೊಬ್ಬರನ್ನು ಕೊಲ್ಲಿಸುವ ಪಾತಕಕ್ಕೆ ತಾನೆಂದೂ ಗುರಿಯಾಗಲು ಬಯಸೆನು ಎಂದು ನುಡಿದುಬಿಟ್ಟ.

೨) ಬಾಹ್ಮಣನ ಇಂತಹ ಧರ್ಮಪ್ರಜ್ಞೆ ಅವನಿಗೆ ಭೀಮಾದಿಪಾಂಡವರ ಕೃಪೆಗೆ ಪಾತ್ರನಾಗಲು ಕಾರಣವಾಯಿತು ಎಂದು ತಿಳಿಯಬೇಕು. ಪರರನ್ನು ಸಂಕಟಕ್ಕೆ ಗುರಿಮಾಡಿ ಸುಖಪಡುವ ಪ್ರವೃತ್ತಿ ಎಂದೂ ಧರ್ಮಸಮ್ಮತವೆನ್ನಿಸದು ಎಂಬ ಪ್ರಮೇಯ ಇಲ್ಲಿದೆ.

೩) ಮಕ್ಕಳು ಎಷ್ಟಿದ್ದರೂ ಅವರಲ್ಲಿ ಒಬ್ಬರೂ ತಾಯಿಗೆ ಭಾರವೆನ್ನಿಸರು. ಆದರೆ, ಅಷ್ಟು ಮಕ್ಕಳಿಗೂ ತಂದೆ ತಾಯಿ ಇಬ್ಬರೇ ಭಾರವೆನ್ನಿಸುವುದು ಮಾತ್ರ ಲೋಕದ ವಿಚಿತ್ರ ಪ್ರವೃತ್ತಿ ಎಂಬ ಧ್ವನಿಯೂ ಇಲ್ಲಿದೆ.

ಉಕ್ತೈನಮಾಹ ಚ ಪೃಥಾ ತನಯೇ ಮದೀಯೇ
ವಿದ್ಯಾಽಸ್ತಿ ದಿಕ್ಪತಿಭಿರಪ್ಯವಿಷಹ್ಯರೂಪಾ ।
ಉಕ್ತೋಽಪಿ ನೋ ಗುರುಭಿರೇಷ ನಿಯುಂಕ್ತ ಏತಾಂ
ವಧ್ಯಸ್ತಥಾಽಪಿ ನ ಸುರಾಸುರಪಾಲಕೈಶ್ಚ ॥ ೮೨ ॥

ಆ: ಬ್ರಾಹ್ಮಣ ಹೀಗೆಂದಾಗ ಕುಂತಿ ತಿಳಿಸಿದಳು: ''ನನ್ನ ಮಗನಲ್ಲಿ ದಿಕ್ಪಾಲಕರೂ ಸಹ ಸಹಿಸಿಕೊಳ್ಳಲಾಗದಂತಹ ವಿದ್ಯೆ ಇದೆ. ಅವನು ಹಿರಿಯರು ಹೇಳಿದರೂ ಸಹ ಆತ್ಮರಕ್ಷಣೆಗೆ ಅದನ್ನು ಬಳಸಿಕೊಳ್ಳನು. ಹಾಗಿದ್ದರೂ ಅವನನ್ನು ಸುರಾಧಿಪತಿಗಳಾಗಲೀ, ಅಸುರಾಧಿಪತಿಗಳಾಗಲೀ ಎಂದೂ ಕೊಲ್ಲಲಾರರು''.

ವಿ: ಭೀಮನನ್ನು ಸುರಾಸುರರು ಸಹ ಏನೂ ಮಾಡಲಾರರು. ಅಂತಹ ಅಪೂರ್ವವಿದ್ಯೆ ಅವನಲ್ಲಿದೆ. ಅದನ್ನು ಅವನು ಎಂದೂ ಆತ್ಮರಕ್ಷಣೆಗೆ ಬಳಸಲಾರನಾದರೂ ಅವನು ಅದನ್ನು ಬಳಸದೆಯೂ ಸರ್ವರಿಂದಲೂ ಅವಧ್ಯನಾದ ಅದ್ಭುತ ಪರಾಕ್ರಮಿ ಎಂದು ಇದರ ಭಾವ. ಎಂದರೆ ಸಹಜಸಾಮರ್ಥ್ಯ ಹಾಗೂ ವಿದ್ಯಾಬಲ ಎರಡರಿಂದಾಗಿಯೂ ಭೀಮ ಸರ್ವರಿಂದಲೂ ಅಜೇಯ ಎಂದರ್ಥ. ಅಂಥವನು ಮತ್ತೇಕೆ ಭಿಕ್ಷೆ ಬೇಡುತ್ತಿರುವನು ಎಂಬುದಕ್ಕೆ ಉತ್ತರವಾಗಿ ಕುಂತಿ ಅವನು ಹಿರಿಯರು ಎಷ್ಟು ಹೇಳಿದರೂ ತನ್ನ ವಿದ್ಯೆಯನ್ನು ಜೀವನೋಪಾಯಕ್ಕಾಗಿ ಉಪಯೋಗಿಸದ ಮಹಾಧರ್ಮಿಷ್ಠ ಎಂಬ ಹಿರಿಮೆಯನ್ನು ಸಾರಿದಳು ಎಂಬ ವಿಶೇಷ ವಿವರ ತಾಮ್ರಪರ್ಣೀಯದಲ್ಲಿದೆ.

---

೮೨. ಉಕ್ತೋಽಪಿ ನೋ ಗುರುಭಿರಿತ್ಯತ್ರ ಗುರುಭಿರುಕ್ತೋಽಪಿ ಏಷಃ = ಭೀಮಃ ಏತಾಂ = ವಿದ್ಯಾಂ ನ ನಿಯುಕ್ತೇ= ಮಹಾಸಂಕಟೇ ಪ್ರಾಪ್ತೇಽಪಿ ನ ನಿಯುಂಕ್ತೇ ವಿ= ವಜ್ರಕಾಯತ್ವಾತ್ ಸ್ವಭಾವತ ಏವ ವಧಯೋಗ್ಯೋ ನ। ಅತೋಽಸ್ಯ ನರಾಶನಮುಖೇ ದಾನೇಽಪಿ ನ ಭೀತಿರಿತಿ ಭಾವಃ ॥ – (ವಾ.)

೮೨. ಗುರುಭಿರುಕ್ತೋಽಪಿ ಪ್ರೇರಿತೋಽಪಿ ಏತಾಂ ವಿದ್ಯಾಂ ನೋ ನಿಯುಂಕ್ತೇ ನ ಪ್ರಯೋಜಯತಿ । ತಥಾಽಪ್ಯಪ್ರಯೋಗೇಽಪಿ ಸ್ವಬಾಹುಬಲೇನಾಪಿ... । – (ಜ.)

೮೨. ಗುರುಭಿರಸ್ಮದಾಭಿರುಕ್ತೋಽಪಿ ಪ್ರೇರಿತೋಽಪ್ಯೇತಾಂ ಸ್ವಸ್ಮಿನ್ ವಿದ್ಯಮಾನಾಮೇತಾಂ ನೋ ನಿಯುಂಕ್ತೇ । ನ ಪ್ರಯೋಜಯತಿ । ವಿದ್ಯೋಪಜೀವನಸ್ಯ ಶುಭಕ್ಷತ್ರಿಯಧರ್ಮತ್ವಾಭಾವಾತ್ । – (ವ.)

೮೨. ತವ ತನಯೋ ಯದಿ ತರ್ಹಿ ಕಥಂ ಭಿಕ್ಷುಸ್ತಿಷ್ಠತೀತ್ಯತ ಆಹ ಉಕ್ತ ಇತಿ । ಅಪಿ ತಥಾಪಿ । ವಿದ್ಯೋಪಜೀವನಂ ನ ಧರ್ಮ ಇತಿ ಗುರುಭಿರ್ಯತ ಉಕ್ತೋಽತ ಏತಾಂ ವಿದ್ಯಾಂ ನೋ ನಿಯುಂಕ್ತ ಇತ್ಯರ್ಥಃ । ವಿದ್ಯಾಯಾ ಅಪ್ರಯೋಗೇ ವಧ್ಯಃ ಸ್ಯಾದಿತ್ಯತ ಆಹ ತಥಾಪೀತಿ । ಸ್ವರೂಪಸತೀ ವಿದ್ಯಾ ಪ್ರಯೋಜಿಕಾ । ನ ಪ್ರಯೋಗೋಽಪೇಕ್ಷಿತ ಇತಿ ಭಾವಃ । – (ತಾ.)

೮೨. ವೀರ್ಯವಾನ್ ಮಂತ್ರಸಿದ್ಧಶ್ಚತೇಜಸ್ವೀ ಚ ಸುತೋ ಮಮ ।
ಗುರುಣಾ ಚಾನನುಜ್ಞಾತೋ ಗ್ರಾಹಯೇತ್ ಯತ್ಸುತೋ ಮಮ ।
ನ ಸ ಕುರ್ಯಾತ್ ತಥಾ ಕಾರ್ಯಂ ವಿದ್ಯಯೇತಿ ಸತಾಂ ಮತಮ್ ॥ – ಭಾರತ (ಆದಿ. ೧೬೦/೧೪)

ಯುಧಿಷ್ಠಿರನ ವಿಷಾದ

ಉಕ್ತ್ವೈವಮೇತ್ಯ ನಿಖಿಲಂ ಚ ಜಗಾದ ಭೀಮ
ಉದ್ಧರ್ಷ ಆಸ ಸ ನಿಶಮ್ಯ ಮಹಾಸ್ವಧರ್ಮಮ್ ।
ಪ್ರಾಪ್ತಂ ವಿಲೋಕ್ಯ ತಮತೀವ ವಿಘೂರ್ಣನೇತ್ರಂ
ದೃಷ್ಟ್ವಾ ಜಗಾದ ಯಮಸೂನುರುಪೇತ್ಯ ಚಾನ್ಯೈಃ ॥ ೮೩ ॥

ಅ: ಹೀಗೆಂದು ಹೇಳಿ ಭೀಮನ ಬಳಿಗೆ ತೆರಳಿ ಕುಂತಿ ಎಲ್ಲವನ್ನೂ ತಿಳಿಸಿದಳು. ಭೀಮ ಅದನ್ನು ಕೇಳಿ ತನ್ನ ಪಾಲಿಗೆ ಮಹಾ ಸ್ವಧರ್ಮಸಾಧನೆಯ ಅವಕಾಶ ಲಭಿಸಿತೆಂದು ತಿಳಿದು ಬಹಳವಾಗಿ ಹರ್ಷಿಸಿದ. ಧರ್ಮರಾಜ ಅರ್ಜುನಾದಿಗಳೊಂದಿಗೆ ಬಂದು ಭೀಮನ ಅರಳಿದ ಕಣ್ಣುಗಳನ್ನು ಕಂಡು ತಾಯಿಯನ್ನು ಕೇಳಿದ :

ಎ: ಆ ವಿಷಯ ಕೇಳಿದ ಭೀಮನಿಗೆ ದುಷ್ಟಸಂಹಾರ ಹಾಗೂ ಶಿಷ್ಟರಕ್ಷಣೆಯ ಭಗವತ್ಕಾರ್ಯಸಾಧನೆಯ ಅವಕಾಶ ಒದಗಿದ್ದಕ್ಕಾಗಿ ಅಪಾರ ಸಂತೋಷವಾಯಿತು. ಆ ವೇಳೆಗೆ ಅರ್ಜುನಾದಿಗಳೊಂದಿಗೆ ಮನೆಗೆ ಮರಳಿದ ಧರ್ಮರಾಜ ಭೀಮನ ಆನಂದ ಸಂಭ್ರಮವನ್ನು ಕಂಡು ಅದರ ಕಾರಣವನ್ನು ತಿಳಿಯಲು ಕುಂತಿಯನ್ನು ಕೇಳಿದ ಎಂದರ್ಥ. ಭೀಮಸೇನ ಹರ್ಷತೀರ್ಥ ಎಂಬ ವಿಷಯ ಇಲ್ಲಿ ಸೂಚಿತವಾಗಿರುವುದನ್ನು ಗಮನಿಸಬೇಕು. ಆಪತ್ತಿನಿಂದ ಸಜ್ಜನರನ್ನು ಪಾರು ಮಾಡುವುದು ಕ್ಷತ್ರಿಯನ ಸ್ವಧರ್ಮ, ಮಹಾಪತ್ತಿನಿಂದ ಪಾರುಮಾಡುವುದು ಮಹಾಸ್ವಧರ್ಮ ಎಂಬುದೂ ಇಲ್ಲಿ ಸೂಚಿತ.

ಮಾತಃ ಕಿಮೇಷ ಮುದಿತೋ ನಿತರಾಮಿತಿ ಸ್ಮ
ತಸ್ಮೈ ಚ ಸಾ ನಿಖಿಲಮಾಹ ಸ ಚಾಬ್ರವೀತ್ ತಾಮ್ ।
ಕಷ್ಟಂ ತ್ವಯಾ ಕೃತಮಹೋ ಬಲಮೇವ ಯಸ್ಯ
ಸರ್ವೇ ಶ್ರಿತಾ ವಯಮಮುಂ ಚ ನಿಹಂಸಿ ಭೀಮಮ್ ॥ ೮೪ ॥

---

೮೩. ಸಃ= ಭೀಮಃ ನಿಶಮ್ಯ= ಮಾತುರ್ವಚನಂ ನಿಶಮ್ಯ ಮಹಾಸ್ವಧರ್ಮಂ ಪ್ರಾಪ್ತಂ ವಿಲೋಕ್ಯ= ವಿಚಾರ್ಯ ಉದ್ಧರ್ಷ ಆಸೇತ್ಯೇಕೋಽನ್ವಯಃ। ಅನ್ಯೈರರ್ಜುನಾದಿಭಿಶ್ಚ ಸಹೋಪೇತ್ಯ ಭೀಮಂ ವಿಘೂರ್ಣನೇತ್ರಂ ದೃಷ್ಟ್ವಾ ಜಗಾದ= ಮಾತರಂ ಪ್ರತಿ ಯಮಸೂನುರ್ಜಗಾದೇತ್ಯಪರೋಽನ್ವಯಃ। ತೇನ ಲ್ಯಬಂತಾವ್ಯಯಪದಸ್ಯ ತ್ವಾಪ್ರತ್ಯಯಾಂತಸ್ಯ ಚ ನ ವೈಯರ್ಥ್ಯಮಿತಿ ಜ್ಞೇಯಮ್ ॥ – (ವಾ.)

೮೩. ಉದ್ಧರ್ಷಃ ಉತ್ಕೃಷ್ಟಸಂತೋಷಃ । ... ಹರ್ಷಾದ್ವಿಕಸಿತನೇತ್ರಂ ದೃಷ್ಟ್ವಾ । – (ಜ.)

೮೩. ವಿಘೂರ್ಣನೇತ್ರಂ ಹರ್ಷಾದ್ವಿಕಸಿತನೇತ್ರಮ್ । – (ಜ.)

ಅ: ''ಅಮ್ಮ, ಇವನೇಕೆ ಬಹಳವಾಗಿ ಹಿಗ್ಗಿರುವನು?''. ಯುಧಿಷ್ಠಿರನಿಗೆ ಕುಂತಿ ನಡೆದದನ್ನೆಲ್ಲ ತಿಳಿಸಿದಳು. ಅವನು ಅವಳನ್ನು ಕೇಳಿದ ''ನೀನು ಅಪಾಯದ ಕಾರ್ಯ ಮಾಡಿದೆ. ಯಾರ ಬಲವನ್ನೇ ನಾವೆಲ್ಲ ನೆಚ್ಚಿರುವೆವೋ ಅಂತಹ ಭೀಮನನ್ನೇ ನೀನೀಗ ಕೊಲ್ಲುತ್ತಿರುವಿ?

ವಿ: ಭೀಮು ಬಕಾಸುರನ ವಿಷಯ ಕೇಳಿ ಅವನನ್ನು ನಿಗ್ರಹಿಸುವ ಪ್ರಸಂಗ ಒದಗಿದ್ದಕ್ಕಾಗಿ ಹರ್ಷಪಟ್ಟಿದ್ದರೆ, ಧರ್ಮರಾಜ ಹರ್ಷಪಡುವ ಬದಲು ಆತಂಕಪಟ್ಟದ್ದು ಆತನ ಇತಿಮಿತಿಗೆ ದ್ಯೋತಕ ಎಂದು ತಿಳಿಯಬೇಕು. ಹಾಗೆ ಭೀಮನನ್ನು ಕಳಿಸುವ ಮೂಲಕ ಕುಂತಿ ತಮ್ಮನ್ನೆಲ್ಲ ನಿರ್ಗತಿಕರನ್ನಾಗಿ ಮಾಡುತ್ತಿರುವಳು ಎಂಬ ಭೀತಿಯಿಂದ ಅವನು ಹೀಗೆ ಮಾತನಾಡಿದ ಎಂದರ್ಥ. ಭೀಮು ಧರ್ಮಾದಿ ಸಕಲರಿಗೂ ರಕ್ಷಕನಾಗಿದ್ದ ವಿವರ ಇದರಿಂದ ಸ್ಫುಟಪಡುವುದು.

+
ಯದ್ಬಾಹುವೀರ್ಯಪರಮಾಶ್ರಯತೋ ಹಿ ರಾಜ್ಯ-
ಮಿಚ್ಛಾಮ ಏವ ನಿಖಿಲಾರಿವಧಂ ಸ್ವಧರ್ಮಮ್ ।
ಸೋಽಯಂ ತ್ವಯಾಽದ್ಯ ನಿಶಿಚಾರಮುಖಾಯ ಮಾತಃ
ಪ್ರಸ್ಥಾಪ್ಯತೇ ವದ ಮಮಾಶು ಕಯೈವ ಬುದ್ಧ್ಯಾ ॥ ೮೫ ॥

ಅ: ಯಾರ ಬಾಹುಬಲದ ಮುಖ್ಯ ಆಸರೆಯಿಂದ ನಾವು ರಾಜ್ಯವನ್ನು ನಮ್ಮ ಸಕಲ ಶತ್ರುವಧರೂಪವಾದ ಸ್ವಧರ್ಮವನ್ನು ಹೊಂದಬಯಸಿರುವೆವೋ ಅಂತಹ ಭೀಮನನ್ನೇ ನೀನೀಗ ಆ ರಾಕ್ಷಸನ ಬಾಯಿಗೆ ಕಳಿಸಿಕೊಡುತ್ತಿರುವೆಯಲ್ಲ..! ನೀನು ಹೀಗೆ ಯಾವ ಬುದ್ಧಿಯಿಂದ ಮಾಡುತ್ತಿರುವೆ, ನನಗೆ ಬೇಗ ತಿಳಿಸು''.

ವಿ: ತಮ್ಮ ಬದುಕಿಗೆ ಮುಖ್ಯ ಆಸರೆಯಾದ ಭೀಮನನ್ನು ಹೀಗೆ ಕಳಿಸುವ ಅವಳ ನಿಶ್ಚಯದ ಹಿನ್ನೆಲೆಯಾದರೂ ಏನು ಎಂದು ಧರ್ಮರಾಜ ಗೊಂದಲಕ್ಕೊಳಗಾಗಿ ಕೇಳುತ್ತಿರುವನು ಎಂದು ತಿಳಿಯಬೇಕು.

---

೮೫. ಕಿಮಿದಂ ಸಾಹಸಂ ತೀಕ್ಷ್ಣಂ ಭವತ್ಯಾ ದುಷ್ಕರಂ ಕೃತಮ್ ।
ಯಸ್ಯ ಬಾಹೂ ಸಮಾಶ್ರಿತ್ಯ ಸುಖಿಂ ಸರ್ವೇ ಶಯಾಮಹೇ ॥
ರಾಜ್ಯಂ ಚಾಪಹೃತಂ ದುಷ್ಪ್ರೈರಾಜೇಹೀರ್ಷಾಮಹೇ ಪುನಃ ।
ಯಸ್ಯ ವೀರ್ಯಂ ಸಮಾಶ್ರಿತ್ಯ ವಸುಪೂರ್ಣಾಂ ವಸುಂಧರಾಮ್ ।
ಇಮಾಂ ಮನ್ಯಾಮಹೇ ಪ್ರಾಪ್ತಾಂ ನಿಹತ್ಯ ಧೃತರಾಷ್ಟ್ರಜಾನ್ ॥
ತಸ್ಯ ವ್ಯವಸಿತಸ್ಯಾಗ್ರೋ ಬುದ್ಧಿಮಾಸ್ಥಾಯ ಕಾಂ ತ್ವಯಾ ॥ – ಭಾರತ (ಆದಿ. ೧೬೧/೫,೬)

ಕುಂತಿ ತಿಳಿಸಿದ ಭೀಮನ ಮಹಿಮೆ

ಇತ್ಯುಕ್ತವಂತಮಮುಮಾಹ ಸುಧೀರಬುದ್ಧಿಃ
ಕುಂತೀ ನ ಪುತ್ರಕ ನಿಹಂತುಮಯಂ ಹಿ ಶಕ್ಯಃ ।
ಸರ್ವೈಃ ಸುರೈರಸುರಯೋನಿಭಿರಪ್ಯನೇನ
ಚೂರ್ಣೀಕೃತೋ ಹಿ ಶತಶೃಂಗಗಿರಿಃ ಪ್ರಸೂತ್ಯಾಮ್ ॥ ೮೬ ॥

ಅ: ಹೀಗೆ ನುಡಿದ ಅವನಿಗೆ ತುಂಬಾ ವಿವೇಚನಾಶೀಲವಾದ ಬುದ್ಧಿಯ ಕುಂತಿ ಹೇಳಿದಳು: 'ಮಗನೇ, ಇವನನ್ನು ಕೊಲ್ಲುವುದು ಸಕಲ ಸುರರಿಗೂ, ಅಸುರರಿಗೂ ಎಂದೂ ಅಶಕ್ಯ. ಇವನು ಹುಟ್ಟಿದಾಗಲೇ ಶತಶೃಂಗಪರ್ವತವನ್ನು ಪುಡಿಗೈದವನಲ್ಲವೇ'.

ವಿ: ೧) ಕುಂತಿಯ ಕೈಯಿಂದ ಜಾರಿದ ಶಿಶುಭೀಮನ ಸ್ಪರ್ಶಕ್ಕೆ ಶತಶೃಂಗ ಪರ್ವತದಂತಹ ದೊಡ್ಡ ಪರ್ವತ ನೂರಾರು ಹೋಳಾಗಿ ಸೀಳಿ ಹೋದ ಘಟನೆ ಈಗಾಗಲೇ ಬಂದಿದೆ (೧೨/೫೫). ನವಜಾತ ಶಿಶುವಾದ ಭೀಮನೇ ಅಷ್ಟು ಬಲಾಢ್ಯನಾಗಿದ್ದಾಗ, ಇನ್ನು ಅವನ ಬಗ್ಗೆ ತಿಳಿಸಬೇಕಾ–ದ್ದೇನಿದೆ ಎಂದರ್ಥ. ಕುಂತಿ ಭೀಮನ ಆ ಸಾಮರ್ಥ್ಯವನ್ನು ಕಣ್ಣಾರೆ ಕಂಡವಳು. ಅದರ ಫಲಶ್ರುತಿ–ಯಿಂದಾಗಿ ಅವಳಿಗೆ ಭೀಮನ ಅಪಾರ ಹಿರಿಮೆ ಅರ್ಥವಾಗಿತ್ತು, ಅಂದೇ ಅವಳು ತಿಳಿದಳು : ''ಇವನನ್ನು ಯಾರೂ, ಎಂದೂ, ಹೇಗೂ ಕೊಲ್ಲಲು ಸಾಧ್ಯವಿಲ್ಲ''. ಅಂದಿನಿಂದ ಇಡೀ ಜೀವನದಲ್ಲಿ ಅವಳು ಭೀಮನ ಬಗ್ಗೆ ಅಪಾಯದ ಶಂಕೆಯನ್ನೇ ಹೊಂದಲಿಲ್ಲ ಎಂಬುದು ಗಮನಾರ್ಹ.

೨) ಮುಖ್ಯಪ್ರಾಣನ ಮಹಿಮೆಯನ್ನು ಹಾಗೆ ತಿಳಿದಿದ್ದುದರ ಫಲವಾಗಿಯೇ ಬಾಲ್ಯ–ದಲ್ಲಿಯೇ ಅವಳು ಪತಿವಿರಹವನ್ನು ಹೊಂದಿದರೂ, ಚಿಕ್ಕ ಮಕ್ಕಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತರೂ, ಕೌರವರು ಬಗೆಬಗೆಯ ಸಂಚಿನಿಂದ ಅವರನ್ನು ಕೊಲ್ಲಲು ಪ್ರಯತ್ನಿಸಿದರೂ, ಭೀಷ್ಮಾದಿಹಿರಿಯರೂ ಸಹ ಕೌರವರ ಪಕ್ಷಕ್ಕೆ ವಾಲಿದರೂ ಧೈರ್ಯದಿಂದ ಬದುಕಿ ಅತ್ಯಂತ ಶ್ರೇಷ್ಠಸಾಧನೆ ಮಾಡಲು ಸಾಧ್ಯವಾಯಿತು ಎಂದು ತಿಳಿಯಬೇಕು. ವಾಯುಮಹಿಮೆಯ ಪರಿಜ್ಞಾನ ಜೀವನಕ್ಕೆ ನೀಡುವ ಭರವಸೆ ಎಷ್ಟು ಅಪೂರ್ವ ಎಂಬುದಕ್ಕೆ ಇದು ಶ್ರೇಷ್ಠ ನಿದರ್ಶನ.

ಏಷ ಸ್ವಯಂ ಹಿ ಮರುದೇವ ನರಾತ್ಮಕೋಽಭೂತ್
ಕೋ ನಾಮ ಹಂತುಮಿಮಮಾಪ್ತಬಲೋ ಜಗತ್ಸು ।
ಇತ್ಯೇವಮಸ್ತ್ವಿತಿ ಸ ತಾಮವದತ್ ಪರೇದ್ಯು-
ರ್ಭೀಮೋ ಜಗಾಮ ಶಕಟೇನ ಕೃತೋರುಭೋಗಃ ॥ ೮೭ ॥

ಅ: ''ಇವನು ಸಾಕ್ಷಾತ್ ವಾಯುದೇವ, ಮಾನವರೂಪದಲ್ಲಿ ಜನಿಸಿರುವನು. ಇವನನ್ನು ಕೊಲ್ಲುವ ಶಕ್ತಿಸಂಪನ್ನ ಈ ಜಗತ್ತಿನಲ್ಲಿ ಯಾವನು ತಾನೇ ಇರುವನು?''. ಅವಳು ಹೀಗೆನ್ನಲು ಧರ್ಮರಾಜ ''ಹಾಗಿದ್ದರೆ ಆಗಲಿ'' ಎಂದು ಅವಳಿಗೆ ತಿಳಿಸಿದ. ಮಾರನೆಯ ದಿನ ಭೀಮಸೇನ ಗಂಧಮಾಲ್ಯಾದಿ ಭೋಗಸಾಮಗ್ರಿಗಳಿಂದ ಕೂಡಿದವನಾಗಿ ಗಾಡಿಯೊಂದಿಗೆ ತೆರಳಿದ.

ವಿ: ಭೀಮಸೇನ ಪ್ರಾಣದೇವ; ಸಾಕ್ಷಾತ್ ಪ್ರಾಣದೇವನ ಪ್ರಾಣವನ್ನು ತೆಗೆಯಲು ಯಾರಿಂದಾದೀತು ಎಂದು ಕುಂತಿಯ ನಿಶ್ಚಯ. ಕುಂತಿಗೆ ಭೀಮನ ಮಾಹಾತ್ಮ್ಯವನ್ನು ಕಣ್ಣಾರೆ ಕಂಡು ನಂಬಿಕೆ ಹುಟ್ಟಿದ್ದರೆ, ಅದನ್ನೆಲ್ಲ ಕೇಳಿದ ಯುಧಿಷ್ಠಿರನಿಗೂ ಭೀಮನ ಬಗ್ಗೆ ಅಂತಹ ನಂಬಿಕೆ ಹುಟ್ಟಿತು. ವಾಯುದೇವರ ಮಹಿಮೆಯನ್ನು ಕೇಳುವುದು ಸಹ ಚಿಂತಾಪರಿಹಾರಕ್ಕೆ ಸಾಧನ ಎಂಬ ತತ್ವ ಇದರಿಂದ ಸೂಚಿತ.

ಗತ್ವಾ ತ್ವರನ್ ಬಕವನಸ್ಯ ಸಕಾಶಮಾಶು
ಭೀಮಃ ಸಪಾಯಸಸುಭಕ್ಷ್ಯಪಯೋಘಟಾದ್ಯೈಃ।
ಯುಕ್ತಂ ಚ ಶೈಲನಿಭಮುತ್ತಮಮನ್ನರಾಶಿಂ
ಸ್ಪರ್ಶಾತ್ ಪುರೈವ ನರಭಕ್ಷಿತುರತ್ತುಮೈಚ್ಛತ್ ॥ ೮೮ ॥

ಅ: ತ್ವರೆಯಿಂದ ಬಕವನದ ಬಳಿಗೆ ತೆರಳಿದ ಭೀಮ ಉತ್ತಮ ಪಾಯಸ, ಒಳ್ಳೆಯ ಭಕ್ಷ್ಯ-ಗಳು, ಹಾಲು ತುಂಬಿದ ಗಡಿಗೆಗಳು ಮೊದಲಾದವುಗಳಿಂದ ಕೂಡಿದ ಪರ್ವತಪ್ರಾಯವಾದ ಉತ್ತಮ ಅನ್ನರಾಶಿಯನ್ನು ನರಭಕ್ಷಕನಾದ ಬಕನು ಮುಟ್ಟುವ ಮುನ್ನವೇ ತಿನ್ನಲು ಬಯಸಿದ.

ವಿ: ೧) ಭೀಮಸೇನ ಗಾಡಿಯಲ್ಲಿ ಒಯ್ದಿದ್ದ ಭಕ್ಷಭೋಜ್ಯಗಳ ವಿವರ ಇಲ್ಲಿದೆ. ಅಂತಹ ಉತ್ತಮ ಭೋಜನವನ್ನು ಭೀಮ ತಿನ್ನಲು ಇಷ್ಟಪಟ್ಟ ಎನ್ನುವುದು ಮೇಲ್ನೋಟದ ಅರ್ಥ. ಅಂತಹ ಉತ್ತಮ ಭಕ್ಷಭೋಜ್ಯಗಳನ್ನು ಆ ಬ್ರಾಹ್ಮಣ ತನಗೆ ಕೊಟ್ಟಾಗಲೇ ಕೃಷ್ಣಾರ್ಪಣವೆಂದು ಅದನ್ನು ಶ್ರೀಹರಿಗೆ

---

೮೭. ಇತ್ಯೇವಮಸ್ತ್ವಿತಿ ಸ ತಾಮವದದಿತ್ಯತ್ರ ಇತೀತ್ಯಸ್ಯ ಚ ಕುಂತೀ ಆಹೇತಿ ಪೂರ್ವೇಣಾನ್ವಯಃ ॥ – (ವಾ.)

೮೭. ವೃಕೋದರೇಣ ಸದೃಶೋ ಬಲೇನಾನ್ಯೋ ನ ವಿದ್ಯತೇ।
ಯೋಽಭ್ಯದೀಯಾದ್ಯುಧಿ ಶ್ರೇಷ್ಠಮಪಿ ವಜ್ರಧರಂ ಸ್ವಯಮ್ ॥ – ಭಾರತ (ಆದಿ. ೧೬೧/೧೭)

ನರಾತ್ಮಕ ಇತ್ಯಸ್ಯ ನರದೇಹವಾನಿತ್ಯರ್ಥಃ। – (ಸ.)

೮೮. ಸಪಾಯಸಸುಭಕ್ಷ್ಯಪಯೋಘಟಾದ್ಯೈಃ ಪಾಯಸೇನ ಸುಭಕ್ಷ್ಯೈಃ ಪಯೋಘಟ್ಯೈಃ ದುಗ್ಧಪೂರ್ಣಘಟ್ಯೈಃ ಸಹಿತಾ ಪಾಯಸಸುಭಕ್ಷಪಯೋಘಟಾಸ್ತ ಏವ ಆದ್ಯಾ ಏಷಾಂ ದಧಿಮಧುಘೃತಪೂರ್ಣಘಟಾದ್ಯಾಸ್ತೈಸ್ತಥೋಕ್ತೈಃ। – (ಜ.)

ಸಮರ್ಪಿಸಿದ್ದ. ಅದೆಲ್ಲ ಇನ್ನು ನೈವೇದ್ಯಶೇಷ. ಅದನ್ನು ಆ ಬಕಾಸುರನಂತಹ ರಾಕ್ಷಸ ಮುಟ್ಟಿ ಅಪವಿತ್ರಗೊಳಿಸುವುದು ತರವಲ್ಲ. ಆದ್ದರಿಂದ ಅದನ್ನು ತಾನು ಪ್ರಸಾದರೂಪವಾಗಿ ತಿನ್ನುವುದು ಸೂಕ್ತ ಎಂದು ಭೀಮಸೇನ ಭಾವಿಸಿ ತಿನ್ನಲು ಇಚ್ಛಿಸಿದ ಎಂದರ್ಥ.

೨) ಎಂದರೆ ಭೀಮನಿಗೆ ಇದ್ದುದು ಆಹಾರದ ಬಯಕೆಯಲ್ಲ, ಆ ಹರಿಪ್ರಸಾದದ ಸದ್ವಿನಿಯೋಗದ ಬಯಕೆಯಷ್ಟೇ; ವಾಯುದೇವರ ಚಿಂತನೆ ಇಂತಹುದು. ಅದಕ್ಕೆಂದೇ ಅವರನ್ನು ಶುದ್ಧಭಾಗವತಧರ್ಮರತ ಎಂದು ಬಣ್ಣಿಸಿರುವುದು. ಈ ಮೂಲಕ ಅಯೋಗ್ಯರು ಸ್ಪರ್ಶಿಸಿದ ಅನ್ನಾದಿಗಳನ್ನು ತಿನ್ನುವುದು ಧರ್ಮವಲ್ಲ ಎಂಬ ತತ್ವವೂ ಸೂಚಿತ ಎಂದು ತಿಳಿಯಬೇಕು.

'ಬಂಡಿಯನ್ನವ ಉಂಡಿತು ಕೂಸು'

ತೇನೈವ ಚಾನ್ನಸಮಿತೌ ಪರಿಭುಜ್ಯಮಾನ
ಉತ್ಪಾಟ್ಯ ವೃಕ್ಷಮಮುಮಾದ್ರವದಾಶು ರಕ್ಷಃ ।
ವಾಮೇನ ಮಾರುತಿರಪೋಹ್ಯ ತದಾ ಪ್ರಹಾರಾನ್
ಹಸ್ತೇನ ಭೋಜ್ಯಮಖಿಲಂ ಸಹಭಕ್ಷ್ಯಮಾದತ್ ॥ ೮೯ ॥

ಅ: ಭೀಮ ಅನ್ನದ ರಾಶಿಯನ್ನು ಉಣ್ಣತೊಡಗಲು ಆ ಬಕಾಸುರ ವೃಕ್ಷವೊಂದನ್ನು ಕಿತ್ತಿಕೊಂಡು ಭೀಮನ ಬಳಿಗೆ ತ್ವರೆಯಿಂದ ನುಗ್ಗಿದ. ತನ್ನ ಎಡಗೈಯಿಂದ ಅವನ ಮರದ ಹೊಡೆತವನ್ನೆಲ್ಲ ತಡೆದ ಭೀಮ ಸಕಲ ಭಕ್ಷ್ಯಭೋಜ್ಯಗಳನ್ನು ತಿಂದ.

ವಿ: ೧) ಭೀಮ ಹಾಗೆ ತಿನ್ನುವುದು ತನ್ನ ಪಾಲಿನ ಅನ್ನ ಎಂಬ ಭ್ರಮೆಯಿಂದ ಬಕಾಸುರ ಅದನ್ನು ತಡೆಯಲೆಂದು ವೃಕ್ಷಗಳನ್ನೇ ಕಿತ್ತಿ ಅವನ ಮೇಲೆ ಎಸೆಯತೊಡಗಿದ. ಆದರೆ ಭೀಮ ಅವುಗಳನ್ನೆಲ್ಲ ತನ್ನ ಎಡಗೈಯಿಂದಲೇ ತಡೆದು ನಿಶ್ಚಿಂತೆಯಿಂದ ಭೋಜನವನ್ನು ಪೂರೈಸಿದ ಎಂದರ್ಥ.

೨) ಅಸುರರಿಗೆ ಹರಿನೈವೇದ್ಯ ಸರ್ವಥಾ ತಲುಪದಂತೆ ವರ್ತಿಸುವುದೂ ಸಹ ಶ್ರೇಷ್ಠ ಧರ್ಮ ಎಂಬುದು ಇಲ್ಲಿ ಪ್ರತಿಪಾದಿತವಾದ ಮತ್ತೊಂದು ತತ್ವ — 'ಅವೈಷ್ಣವಾಯ ದಾತವ್ಯಂ ನೋದಬಿಂದುಂ ನ ತಂಡುಲಂ'. ಅಂತಹ ಭಯಂಕರ ರಾಕ್ಷಸನ ಪೆಟ್ಟುಗಳನ್ನು ಎಡಗೈಯಿಂದಲೇ ನಿವಾರಿಸಿಕೊಂಡ ಭೀಮನ ಅಪಾರ ಪರಾಕ್ರಮವನ್ನೂ ಇಲ್ಲಿ ತಿಳಿಯಬೇಕು.

---

೮೯. ತೇನೈವ ಚಾನ್ನಸಮಿತಾವಿತ್ಯತ್ರ ಚಶಬ್ದೇನ ಭಕ್ಷ್ಯಪರಮಾನ್ನಪಯೋಘೃತಾದಿರಾಶೌ ಚ ಪರಿಭುಜ್ಯಮಾನೇ ಸತೀತ್ಯರ್ಥಃ ಸೂಚಿತಃ। ಅಥವಾ ಅನ್ನಸ್ಯ ಸಮಿತಿಃ= ಸಮುದಾಯೋ ಯಸ್ಯ ಭಕ್ಷ್ಯಾದೇಸ್ತಸ್ಮಿನ್ನಿತ್ಯರ್ಥಃ ॥ – (ವಾ.)

ಭೀಮನಿಂದ ಬಕನ ವಧೆ

ಪೀತ್ವಾ ಪಯೋ ತ್ವರಿತ ಏನಮವೀಕ್ಷಮಾಣ
ಆಚಮ್ಯ ತೇನ ಯುಯುಧೇ ಗುರುವೃಕ್ಷಶೈಲೈಃ ।
ತೇನಾಹತೋಽಥ ಬಹುಭಿರ್ಗಿರಿಭಿರ್ಬಲೇನ
ಜಗ್ರಾಹ ಚೈನಮಥ ಭೂಮಿತಲೇ ಪಿಪೇಷ ॥ ೯೦ ॥

ಅ: ಭೀಮ ರಾಕ್ಷಸನತ್ತ ನೋಡದೇ ಬೇಗನೆ ಹಾಲನ್ನು ಕುಡಿದು ಅನಂತರ ಆಚಮನ ಮಾಡಿ ತ್ವರೆಯಿಂದ ಅವನೊಂದಿಗೆ ಯುದ್ಧಕ್ಕೆ ತೊಡಗಿದ. ಬಹುಸಂಖ್ಯಾಕವಾದ ದೊಡ್ಡದಾದ ಮರಗಳಿಂದಲೂ, ಬಂಡೆಗಳಿಂದಲೂ, ಬೆಟ್ಟಗಳಿಂದಲೂ ಬಕಾಸುರ ಹೊಡೆಯತೊಡಗಲು ತನ್ನ ಬಲದಿಂದ ಭೀಮ ಅವನನ್ನು ಹಿಡಿದು ನೆಲದ ಮೇಲೆ ಕೆಡವಿ ಹೊಸಕಿದ.

ವಿ: ೧) ಅಯೋಗ್ಯರು ಮುಟ್ಟಿದ ಅನ್ನವನ್ನು ತಿನ್ನುವುದಷ್ಟೇ ಅಲ್ಲ, ಅವರು ನೋಡಿದ ಅನ್ನವನ್ನು ತಿನ್ನುವುದೂ, ಅವರನ್ನು ನೋಡುತ್ತಾ ತಿನ್ನುವುದೂ ಸಹ ಮಹಾಪಾಪ ಎಂಬುದನ್ನು ತೋರಿಸಲು ಭೀಮಸೇನ ಅವನತ್ತ ನೋಡದೆಯೇ ಭೋಜನ ಪೂರೈಸಿದ ಎಂಬ ಸೂಕ್ಷ್ಮ ವಿವರವನ್ನು ನೀಡಿರುವರು.

---

೯೦. ಅತ್ವರಿತಃ ವೇಗರಹಿತಃ ಭಯರಹಿತ ಇತಿ ಭಾವಃ। 'ತತೋ ಭೀಮಃ ಶನೈರ್ಭುಕ್ತ್ವಾ ತದನ್ನಂ ಪುರುಷರ್ಷಭಃ' ಇತಿ ಭಾರತೇ(ಆದಿ.೧೬೨/೧೭)। – (ಜ.)

೯೦. ತಥಾऽಪಿ ಪರಿಭೂಯೈನಂ ಪ್ರೇಕ್ಷಮಾಣೋ ವೃಕೋದರಃ।
ರಾಕ್ಷಸಂ ಭುಂಕ್ತ ಏವಾನ್ನಂ ಪಾಂಡವಃ ಪರವೀರಹಾ ॥
ಅಮರ್ಷೇಣ ತು ಸಂಪೂರ್ಣಃ ಕುಂತೀಪುತ್ರಂ ವೃಕೋದರಮ್।
ಜಘಾನ ಪೃಷ್ಠೇ ಪಾಣಿಭ್ಯಾಂ ಉಭಾಭ್ಯಾಂ ಪೃಷ್ಠತಃ ಸ್ಥಿತಃ।
ತಥಾ ಬಲವತಾ ಭೀಮಃ ಪಾಣಿಭ್ಯಾಂ ಭೃಶಮಾಹತಃ।
ನೈವಾವಲೋಕಯಾಮಾಸ ರಾಕ್ಷಸಂ ಭುಂಕ್ತ ಏವ ಸಃ ॥ – ಭಾರತ (ಆದಿ.೧೬೨/೧೩-೧೫)

೯೦. ಆಚಮ್ಯ ಹಸ್ತಮುಖಪ್ರಕ್ಷಾಲನಸ್ಯೋಪಲಕ್ಷಣಮೇತತ್। – (ಜ.)

ಶ್ರಾದ್ಧ ಪಂಕ್ತ್ಯುಪವಿಷ್ಟಸ್ತು ಬ್ರಾಹ್ಮಣೋ ಬ್ರಾಹ್ಮಣಂ ಸ್ಪೃಶೇತ್।
ತದನ್ನಮತ್ಯಜನ್ ಭುಕ್ತ್ವಾ ಗಾಯತ್ರ್ಯಷ್ಟಶತಂ ಜಪೇತ್ ॥ - ಕೃಷ್ಣಾಚಾರ್ಯಸ್ಮೃತಿಮುಕ್ತಾವಲೀ

೯೦. ತತೋ ಭೀಮಃ ಶನೈರ್ಭುಕ್ತ್ವಾ ತದನ್ನಂ ಪುರುಷರ್ಷಭಃ।
ವಾರ್ಯುಪಸ್ಪೃಶ್ಯ ಸಂಹೃಷ್ಟಸ್ತಸ್ಥೌ ಯುಧಿ ಮಹಾಬಲಃ ॥ - ಇತಿ ಭಾರತೇ (ಆದಿ. ೧೬೨/೧೭)

ಆಚಮ್ಯ ಮೂಲಮಂತ್ರೇಣ ಕೋಷ್ಠಂ ಸಮಭಿಮಂತ್ರಯೇತ್ ॥ – ಸದಾಚಾರಸ್ಮೃತಿ

೨) ಭೋಜನ ಪೂರೈಸಿದ ಮೇಲೆ ಕೈತೊಳೆದು ಆಚಮನ ಮಾಡಬೇಕು ಎಂಬುದು ಸದಾಚಾರ. ಸದಾಚಾರಸ್ಮೃತಿಯಲ್ಲಿ ಸ್ವತಃ ಶ್ರೀಮದಾಚಾರ್ಯರೇ ಹಾಗೆ ತಿಳಿಸಿರುವರು. ಭೀಮನೇ ಶ್ರೀಮದಾಚಾರ್ಯರು; ತಾವು ಸ್ವತಃ ಹೇಳಿದಂತೆ ಅನುಷ್ಠಾನ ಮಾಡಿದವರು. ಬಕಾಸುರನಂತಹ ರಾಕ್ಷಸ ಹಾಗೆ ಆಕ್ರಮಣ ನಡೆಸಿದಾಗಲೂ ಆಚಮನಾದಿ ಕೃತ್ಯವನ್ನು ಸಾಂಗೋಪಾಂಗವಾಗಿ ಸಾವಧಾನದಿಂದ ಮಾಡಿದ ಹಿರಿಮೆ ಭೀಮಸೇನನದ್ದು. ಅದಕ್ಕೆ ಆಖಣಾಶ್ಮಸಮ ಎಂಬ ಹೆಸರು ವಾಯುದೇವರಿಗೆ ಉಪನಿಷತ್ತಿನಲ್ಲಿ ಉಕ್ತವಾಗಿದೆ.

೩) ಭೋಜನಾನಂತರ ಆಚಮನ ಮಾಡದಿರುವುದು ಮಹಾದೋಷ ಎಂಬ ವಿಶೇಷಾಂಶ ಮಹಾಭಾರತದ ಉದಂಕಮುನಿಯ ಪ್ರಸಂಗದಲ್ಲಿ ಬಂದಿದೆ. ಹಾಗೆ ಆಚಮನ ಮಾಡದಿದ್ದ ಉದಂಕನಿಗೆ ಮಹಾರಾಣಿ ಎದುರಿಗಿದ್ದರೂ ಕಣ್ಣಿಗೆ ಬೀಳದಂತಾಯಿತು. ಆಚಮನ ಮಾಡಿದ ಮೇಲೆ ಅವಳನ್ನು ನೋಡುವ ಸಾಮರ್ಥ್ಯ ಒದಗಿತು ಎಂಬ ಅಲ್ಲಿಯ ವಿವರ ಅತ್ಯಂತ ಗಮನಾರ್ಹವಾದುದು (ಆದಿಪರ್ವ, ಅಧ್ಯಾಯ ೩, ಶ್ಲೊ. ೧೦೮–೧೧೦):

.... ಪ್ರಾಙ್ಮುಖ ಉಪವಿಶ್ಯಸುಪ್ರಕ್ಷಾಲಿತಪಾಣಿಪಾದವದನೋ ನಿಃಶಬ್ದಾಭಿರ-ಫೇನಾಭಿರನುಷ್ಣಾಭಿರ್ಹೃದ್ಗತಾಭಿರದ್ಭಿಸ್ತ್ರಿಃ ಪೀತ್ವಾ ದ್ವಿಃ ಪರಿಮೃಜ್ಯ ಖಾನ್ಯದ್ಭಿರುಪಸ್ಪೃಶ್ಯ ಚಾಂತಃಪುರಂ ಪ್ರವಿವೇಶ ॥ ತತಸ್ತಾಂ ಕ್ಷತ್ರಿಯಾಮಪಶ್ಯತ್ ....॥

ಬಕವಧೆಯ ವೈಖರಿ

ಆಕ್ರಮ್ಯ ಪಾದಮಪಿ ಪಾದತಲೇನ ತಸ್ಯ
ದೋರ್ಭ್ಯಾಂ ಪ್ರಗೃಹ್ಯ ಚ ಪರಂ ವಿದದಾರ ಭೀಮಃ ।
ಮೃತ್ವಾ ಸ ಚೋರುತಮ ಏವ ಜಗಾಮ ಪಾಪೋ
ವಿಷ್ಣುದ್ವಿಡೇವ ಹಿ ಶನೈರನಿವೃತ್ತಿ ಚೋಗ್ರಮ್ ॥ ೯೧ ॥

ಅ: ಅವನ ಒಂದು ಪಾದವನ್ನು ತನ್ನ ಅಂಗಾಲಿನಿಂದ ಒತ್ತಿ ಹಿಡಿದು ಮತ್ತೊಂದು ಕಾಲನ್ನು ತನ್ನ ಎರಡೂ ಕೈಗಳಿಂದ ಹಿಡಿದು ಭೀಮ ಬಕಾಸುರನನ್ನು ಸೀಳಿ ಹಾಕಿದ. ವಿಷ್ಣುದ್ವೇಷಿಯಾದ ಆ ಪಾಪಿ ಬಕಾಸುರ ಸತ್ತು ಮರಳಿ ಬಾರದ ಭಯಂಕರವಾದ ಅಂಧಂತಮಸ್ಸಿಗೇ ಕ್ರಮವಾಗಿ ತೆರಳಿದ.

---

೯೧. ವಿದದಾರ ಭೀಮ ಇತ್ಯತ್ರ ವಿದದಾರ = ಆಕಂಠಂ ವಿದದಾರ । ವಿಷ್ಣುದ್ವಿಡೇವೇತ್ಯತ್ರ ಏವಶಬ್ದೇನ ಕಂಸಾದಿವಜ್ಜೀವದ್ವಯವಾನ್ನೇತಿ ಸೂಚಿತಮ್। ಅತ ಏವ ತಮ ಏವೇತ್ಯುಕ್ತಮ್। ಹಿಶಬ್ದೇನ ಪ್ರಮಾಣಪ್ರಸಿದ್ಧಿಂ ಸೂಚಯತಿ ॥ –(ವಾ.)

ವಿ: ೧) ಭೀಮ ಬಕಾಸುರನನ್ನು ಕೊಂದ ಬಗೆ ಇಲ್ಲಿ ವರ್ಣಿತವಾಗಿದೆ. ಅವನ ಒಂದು ಕಾಲನ್ನು ತನ್ನ ಅಂಗಾಲಿನಿಂದ ತುಳಿದು ಮತ್ತೊಂದನ್ನು ಎರಡು ಕೈಗಳಿಂದ ಹಿಡಿದು ಅವನನ್ನು ಸೀಳಿ ಹಾಕಿದ. ಶ್ರೀಕೃಷ್ಣ ಬಕಪಕ್ಷಿಯ ರೂಪದಲ್ಲಿ ಬಂದಿದ್ದ ಕಂಸಭೃತ್ಯನಾದ ಒಬ್ಬ ರಾಕ್ಷಸನನ್ನೂ ಸಹ ಹೀಗೆ ಕೊಕ್ಕನ್ನು ಹಿಡಿದು ಎರಡು ಭಾಗವಾಗಿ ಸೀಳಿದ ವಿವರ [+]ಶ್ರೀಮದ್ಭಾಗವತದಲ್ಲಿದೆ.

೨) ಇಬ್ಬರು ರಾಕ್ಷಸರೂ ಬಕಾಸುರರೇ. ಇವನ ಹೆಸರೇ ಬಕಾಸುರನಾದರೆ, ಅವನು ಬಕಪಕ್ಷಿಯ ರೂಪದ ರಾಕ್ಷಸ. ಅವನನ್ನು ಕೊಂದಿದ್ದು ಸರ್ವೋತ್ತಮನಾದ ಶ್ರೀಕೃಷ್ಣನಾದರೆ, ಇವನನ್ನು ಕೊಂದಿದ್ದು ಜೀವೋತ್ತಮನಾದ ಭೀಮಸೇನ. ಇಬ್ಬರೂ ಸೀಳಿಹಾಕಿ ಕೊಂದವರೇ ಎಂಬುದು ಮತ್ತೊಂದು ವಿಶೇಷ. ಬಕಾಸುರಸಂಹಾರ ಆಷಾಢಭೂತಿಗಳ ನಿಗ್ರಹಕ್ಕೆ ಸಂಕೇತ. ಹೊರಗೆ ಬೆಳ್ಳಗಿದ್ದರೂ ಒಳಗೆ ಕಪಟದಿಂದಿರುವುದು ಬಕಪಕ್ಷಿಯ ಲಕ್ಷಣ. ತೋರಿಕೆಗೆ ಸದಾಚಾರಿಯಂತಿದ್ದರೂ ಒಳಗೆ ಭ್ರಷ್ಟಾಚಾರಿಯಾಗಿರುವ ಇಂತಹ ಜನರನ್ನು ಬಕವೃತ್ತಿಯ ಜನ ಎಂದು [*]ಮನುಸ್ಮೃತಿ ಕರೆದಿದೆ. ಅವನನ್ನು 'ವಿಷ್ಣುದ್ವಿಡೇವ' ಎಂದು ಕರೆಯುವ ಮೂಲಕ ಅವನು ಕೇವಲ ತಾಮಸ; ಕಂಸಾದಿಗಳಂತೆ ಜೀವದ್ವ್ಯಾವೇಶದಿಂದ ಕೂಡಿದವನಲ್ಲ ಎಂಬ ಪ್ರಮೇಯವನ್ನೂ ತಿಳಿಸಿರುವರು ಎಂದು ವಾದಿರಾಜೀಯದಲ್ಲಿದೆ.

ಹತ್ವಾ ತಮಕ್ಷತಬಲೋ ಜಗದಂತಕಂ ಸ
ಯೋ ರಾಕ್ಷಸೋ ನ ವಶ ಆಸ ಜರಾಸುತಸ್ಯ ।
ಭೌಮಸ್ಯ ಪೂರ್ವಮಪಿ ನೋ ಭರತಸ್ಯ ರಾಜ್ಞೋ
ಭೀಮೋ ನ್ಯಧಾಪಯದಮುಷ್ಯ ಶರೀರಮಗ್ರೇ ॥ ೯೨ ॥

\+ ತಮಾಪತಂತಂ ಸ ನಿಗೃಹ್ಯ ತುಂಡಯೋರ್ದೋರ್ಭ್ಯಾಂ ಬಕಂ ಕಂಸಸಖಂ ಸತಾಂಪತಿಃ ।
ಪಶ್ಯತ್ಸು ಬಾಲೇಷು ದದಾರ ಲೀಲಯಾ ಮುದಾವಹೋ ವೀರಣವದ್ದಿವೌಕಸಾಮ್ ॥
– ಭಾಗವತ (೦೧/೧೧/೫೧)

* ಅಧೋದೃಷ್ಟಿರ್ನೈಷ್ಕೃತಿಕಃ ಸ್ವಾರ್ಥಸಾಧನತತ್ಪರಃ ।
ಶಠೋ ಮಿಥ್ಯಾವಿನೀತಶ್ಚ ಬಕವ್ರತಚರೋ ದ್ವಿಜಃ ॥ – ಮನುಸ್ಮೃತಿ (ಅ.೪, ಶ್ಲೋ. ೧೯೬)

೯೨. ಪೂರ್ವಂ ರಾಮಾವತಾರೇ ಭರತಸ್ಯ ಶ್ರೀರಾಮಾನುಜಸ್ಯ ರಾಜ್ಞೋಽಪಿ ವಶೇ ನಾಸ । – (ಜ.)

೯೨. ಪೂರ್ವಂ ರಾಮಾವತಾರೇ ಭರತಸ್ಯ ಶ್ರೀರಾಮಾನುಜಸ್ಯ ಚಾಪಿ ವಶೇ ನಾಸ । – (ವ.)

೯೨. ಭರತಸ್ಯ ದೌಷ್ಮಂತಿಭರತಸ್ಯ । – (ತಾ.)

೯೨. ಅಗ್ರೇ ಶಕಟಾಗ್ರೇ ತಚ್ಛಕಟಂ ದ್ವಾರಿ ಪ್ರವಿಧಾಯೇತಿ ಕೇಚಿತ್ । ವಸ್ತುತಸ್ತು ಶರೀರಂ ಶಕಟಾಗ್ರೇ ವ್ಯಧಾಪಯತ್ ತಚ್ಛಕಟಸ್ಥಂ ಶರೀರಂ ದ್ವಾರಿ ಪ್ರವಿಧಾಯೇತ್ಯರ್ಥಃ । – (ತಾ.)

ಅ: ಅಕ್ಷಯ ಬಲಶಾಲಿಯಾದ ಭೀಮಸೇನ ಜಗನ್ನಾಶಕನಾಗಿದ್ದ ಆ ಬಕಾಸುರನನ್ನು ಸಂಹರಿಸಿದ. ಅವನು ಜರಾಸಂಧನಿಗೂ ವಶನಾಗದಿದ್ದ ರಾಕ್ಷಸ. ಆ ಹಿಂದೆ ನರಕಾಸುರನಿಗಾಗಲೀ, ರಾಜನಾದ ಭರತನಿಗಾಗಲೀ ಅವನು ವಶವಾಗಿರಲಿಲ್ಲ. ಅವನನ್ನು ಕೊಂದ ಭೀಮಸೇನ ಅವನ ದೇಹವನ್ನು ಊರ ಮುಂಭಾಗದಲ್ಲಿ ತಂದು ನಿಲ್ಲಿಸಿದ.

ವಿ: ೧) ಬಕಾಸುರವಧೆ ಅನನ್ಯಸಾಧ್ಯವಾದ ಕಾರ್ಯ ಎಂಬುದನ್ನು ಇಲ್ಲಿ ವಿವರಿಸಿರುವರು. ಆ ಮುಂಚಿನ ಬಲಾಢ್ಯ ರಾಜನೆನ್ನಿಸಿದ್ದ ಭರತನಿಗೂ ಅವನನ್ನು ಹಿಡಿಯಲಾಗಿರಲಿಲ್ಲ. ಅದರಂತೆ ಜರಾಸಂಧ, ನರಕಾಸುರರಂತಹ ಬ್ರಹ್ಮವರವಿದ್ದ ರಾಕ್ಷಸರಿಂದಲೂ ಅವನನ್ನು ಸೋಲಿಸಲಾಗಿರಲಿಲ್ಲ. ಅಂತಹವನನ್ನು ಅನಾಯಾಸವಾಗಿ ನಿಗ್ರಹಿಸಿದ ಭೀಮಸೇನ ಭಾವಿಬ್ರಹ್ಮ ಎಂದರ್ಥ.

೨) ಇಲ್ಲಿ ಭರತ ಎಂಬ ಪದಕ್ಕೆ ರಾಮನ ತಮ್ಮ ಭರತ, ದುಷ್ಯಂತಪುತ್ರ ಭರತ ಎಂಬ ಎರಡು ಬಗೆಯ ಅರ್ಥವನ್ನೂ ಇಟ್ಟುಕೊಳ್ಳಬಹುದು. ಭೀಮಸೇನ ಬಕಾಸುರನ ಶವವನ್ನು ಅಲ್ಲಿಯೇ ಬಿಡದೇ ಊರ ಬಾಗಿಲಿನ ಬಳಿ ತಂದು ನಿಲ್ಲಿಸಿದ್ದು ಅವನು ಸತ್ತಿದ್ದು ಖಚಿತವಾಗಿ ತಿಳಿದು ಜನರೆಲ್ಲ ಆನಂದಿಸಲಿ ಎಂಬ ಕಾರಣದಿಂದ ಎಂದು ತಿಳಿಯಬೇಕು. ಸತ್ತಿದ್ದು ಖಚಿತವಾಗುವುದು ಶವ ಸಿಕ್ಕ ಮೇಲೆಯೇ ಎಂಬುದು ಎಲ್ಲರೂ ಬಲ್ಲ ವಿಷಯವಲ್ಲವೇ. ಬಂಡಿ ಮತ್ತು ಎತ್ತುಗಳನ್ನು ಭೀಮ ಬ್ರಾಹ್ಮಣನಿಗೆ ಹಿಂದಿರುಗಿಸಿದ ಎಂದು +ಭಾರತದಲ್ಲಿದೆ.

ದ್ವಾರ್ಯೇವ ತತ್ಕೃತಿನಿಧಾಯ ಪುರಃ ಸ ಭೀಮಃ
ಸ್ನಾತ್ವಾ ಜಗಾಮ ನಿಜಸೋದರಪಾರ್ಶ್ವಮೇವ ।
ಶ್ರುತ್ವಾಽಸ್ಯ ಕರ್ಮ ಪರಮಂ ತುತುಷುಃ ಸಮೇತಾಃ
ಮಾತ್ರಾ ಚ ತೇ ತದನು ಭೀತಿಯುತಾಃ ಪುರಸ್ಥಾಃ ॥ ೯೩ ॥

ಅ: ಊರ ಹೆಬ್ಬಾಗಿಲ ಬಳಿಯೇ ಅವನ ಶವವನ್ನು ನಿಲ್ಲಿಸಿ ಭೀಮಸೇನ ಸ್ನಾನ ಮಾಡಿ ತನ್ನ ಸಹೋದರರ ಬಳಿಗೆ ತೆರಳಿದ. ಅವನ ಮಹತ್ತರವಾದ ಕಾರ್ಯವನ್ನು ಕೇಳಿ ತಾಯಿಯೊಂದಿಗೆ ಅವರೆಲ್ಲ ಪರಮಾನಂದಪಟ್ಟರು. ಅದರಂತೆ ಪಟ್ಟಣಿಗರೆಲ್ಲ ಭೀತಿಯಿಂದ ಕೂಡಿದರು.

+ 'ಬಲೀವರ್ದೌ ಚ ಶಕಟಂ ಬ್ರಾಹ್ಮಣಾಯ ನ್ಯವೇದಯತ್' ಇತಿ। –(ತಾ.)

೯೩. ಪೂರ್ವಂ ಭೀತಿಯುಕ್ತಾ ಮಾತ್ರಾ ಸಹಿತಾಸ್ತೇ ತದನು ತದಾಗಮನಾನಂತರಂ ಅಸ್ಯ ಪರಮಂ ಕರ್ಮ ಶ್ರುತ್ವಾತುತುಷುರಿತ್ಯನ್ವಯಃ । ಬಕಾಸುರಭೀತಿಯುಕ್ತಾಃ ಪುರಸ್ಥಾಸ್ತಸ್ಯ ದೇಹಂ ದೃಷ್ಟ್ವಾ ಅತ್ಯಂತ ಭೀತಾ ಇತಿ ವಾ । ತದನು ಬಕವಧಾನಂತರಂ ಪುರಸ್ಥಾ ಭೀಮೇ ಭೀತಿಯುಕ್ತಾ ಇತಿ ಕೇಚಿತ್ । ತದನು ತೇ ಪಾರ್ಥಾಃ ಭೀಮೇ ಭೀತಿಯುಕ್ತಾ ಬಭೂವುರಿತ್ಯನ್ಯೇ। –(ತಾ.)

ವಿ: ೧) ಶವವನ್ನು ಅಲ್ಲಿಟ್ಟು ಮೇಲೆ ಭೀಮಸೇನ ಸ್ನಾನ ಮಾಡಿ ತೆರಳಿದ ಎಂಬುದು ಮತ್ತೊಂದು ಧರ್ಮಸೂಕ್ಷ್ಮ. ಶವಸ್ಪರ್ಶಾದಿಗಳ ಅನಂತರ ಸ್ನಾನವಿಲ್ಲದೇ ಸರ್ವಥಾ ಶುದ್ಧಿಯಿಲ್ಲ ಎಂಬುದನ್ನು ಲೋಕಕ್ಕೆ ಆ ಮೂಲಕ ಸಾರಿದ ಎಂದರ್ಥ. ಬಕವಧೆಯನ್ನು ಮಾಡಿದ ಭೀಮಸೇನ ಅದರ ಪರಿಯನ್ನು ಸ್ವತಃ ತಾನೇ ಧರ್ಮರಾಜಾದಿಗಳಿಗೆ ತಿಳಿಸಿದ. ಹಾಗೆ ತಿಳಿಸಿದ ಭೀಮಸೇನ ಮಧ್ವರೂಪದಿಂದ ಅದನ್ನೆಲ್ಲ ಬರವಣಿಗೆಯ ಮೂಲಕವೂ ದಾಖಲಿಸಿದ ಎಂಬುದು ಮತ್ತೊಂದು ವಿಶೇಷ. ಪಟ್ಟಣಿಗರು ಭಯಪಡಲು ಬಕಾಸುರನ ಶವವೇ ಕಾರಣ. ಊರ ಬಾಗಿಲಲ್ಲಿ ಬೆಳಗಿನ ಜಾವವೇ ಅವನ ನಿಂತ ಶವ ಕಂಡಾಗ ಜನರೆಲ್ಲ ಬಕಾಸುರ ಜನರನ್ನು ತಿನ್ನಲೆಂದು ಊರಿನ ಬಳಿಯೇ ಧಾಎಸಿರುವನು ಎಂದು ತಿಳಿದು ಭಯಪಟ್ಟರು ಎಂದರ್ಥ.

೨) ಪಟ್ಟಣಿಗರು ಮಾತ್ರವಲ್ಲದೇ ಭೀಮನ ಅಂತಹ ಅಗಾಧಬಲವನ್ನು ಕಂಡು ಉಳಿದ ಪಾಂಡವರಿಗೆ ಭಯಹುಟ್ಟಿತು ಎಂಬ ಅರ್ಥವನ್ನೂ ಕೆಲವರು ಬರೆದಿರುವರು (ತಾ.). ಈ ಭಯ ಭೀಮನ ಅಗಾಧ ವ್ಯಕ್ತಿತ್ವವನ್ನು ಕಂಡ ಸಾತ್ತ್ವಿಕಭಯ ಎಂದು ತಿಳಿಯಬೇಕು.

ದೃಷ್ಟ್ವೈವ ರಾಕ್ಷಸಶರೀರಮುರು ಪ್ರಭೀತಾಃ
ಜ್ಞಾತ್ವೈವ ಹೇತುಭಿರಥ ಕ್ರಮಶೋ ಮೃತಂ ಚ ।
ವಿಪ್ರಸ್ಯ ತಸ್ಯ ವಚನಾದಪಿ ಭೀಮಸೇನ-
ಭಗ್ನಂ ನಿಶಮ್ಯ ಪರಮಂ ತುತುಷುಶ್ಚ ತಸ್ಮೈ ॥ ೯೪ ॥

ಅ: ರಾಕ್ಷಸನ ದೊಡ್ಡ ದೇಹವನ್ನು ಕಾಣುತ್ತಲೇ ಬಹಳವಾಗಿ ಭೀತರಾದ ಪಟ್ಟಣಿಗರು ಅನೇಕ ಗುರುತುಗಳಿಂದ ಕ್ರಮವಾಗಿ ಅವನು ಸತ್ತಿದ್ದಾನೆ ಎಂದು ಅರಿತರು. ಆ ಬ್ರಾಹ್ಮಣನ ಮಾತಿನಿಂದ ಅವನು ಹಾಗೆ ಸತ್ತಿದ್ದು ಭೀಮನಿಂದ ಎಂದು ಕೇಳಿ ಭೀಮನ ಬಗ್ಗೆ ಬಹಳವಾಗಿ ಸಂಭ್ರಮಪಟ್ಟರು.

ವಿ: ರಾಕ್ಷಸನ ದೇಹವನ್ನು ಕಂಡು ಮೊದಲಿಗೆ ಅಂಜಿದ ಪಟ್ಟಣದ ಜನ ಅದು ನಿಶ್ಚಲ-ವಾಗಿರುವುದನ್ನು ಕಂಡು, ಕಲ್ಲು ಹೊಡೆಯುವುದು ಮೊದಲಾದ ಪರೀಕ್ಷೆಗಳ ಮೂಲಕ ಅದು ಶವ ಎಂದು ನಿಶ್ಚಯಿಸಿಕೊಂಡು, ಅದಕ್ಕೆ ಕಾರಣ ಭೀಮಸೇನನೆಂದು ಬ್ರಾಹ್ಮಣನ ಮೂಲಕ ತಿಳಿದು, ಅಂತಹ ಲೋಕಕಂಟಕನನ್ನು ಸಂಹರಿಸಿ ತಮ್ಮನ್ನೆಲ್ಲ ಪಾಲಿಸಿದ ಅವನ ಬಗ್ಗೆ ತುಂಬಾ ಆದರಭಾವವನ್ನು ತಳೆದರು ಎಂದರ್ಥ.

---

೯೪. ಜ್ಞಾತ್ವೈವ ಹೇತುಭಿರಿತ್ಯತ್ರ ಹೇತುಭಿಃ= ಅಂಗಚಲನಶ್ವಾಸಾಭಾವಾದಿಭಿಃ ಹೇತುಭಿಃ ॥ – (ವಾ.)

೯೪. ಹೇತುಭಿಃ ಪಾಷಾಣಕ್ಷೇಪಣಾದಿಭಿಃ । – (ಜ.)

ಪುರವಾಸಿಗಳಿಂದ ಭೀಮನ ಪೂಜೆ

ಅನ್ನಾತ್ಮಕಂ ಕರಮಮುಷ್ಯ ಚ ಸಂಪ್ರಚಕ್ರುಃ
ಸೋಽಪ್ಯೇನಮಾಶು ನರಸಿಂಹವಪುರ್ಧರಸ್ಯ ।
ಚಕ್ರೇ ಹರೇಸ್ತದನು ಸತ್ಯವತೀಸುತಸ್ಯ
ವಿಷ್ಣೋರ್ಹಿ ವಾಕ್ಪ್ರಮುದಿತಾಃ ಪ್ರಯಯುಸ್ತತಶ್ಚ ॥ ೯೫ ॥

ಅ: ಅವರೆಲ್ಲ ಅನ್ನದ ರೂಪದಲ್ಲಿ ಭೀಮನಿಗೆ ಕಾಣಿಕೆಯನ್ನು ಸಮರ್ಪಿಸಿದರು. ಭೀಮ ಅದನ್ನು ನರಸಿಂಹ ರೂಪವನ್ನು ಧರಿಸಿದ ಶ್ರೀಹರಿಗೆ ಸಮರ್ಪಿಸಿದ. ಬಳಿಕ ವೇದವ್ಯಾಸರೂಪದ ಶ್ರೀಹರಿಯ ಮಾತಿನಿಂದ ಸೂಚಿತರಾಗಿ ಪಾಂಡವರು ಆ ಪಟ್ಟಣದಿಂದ ಹೊರಟರು.

ವಿ: ೧) ಇಲ್ಲಿ ಅಷ್ಟು ದಿನ ಪಾಪಿಯಾದ ಬಕಾಸುರನಿಗೆ ಅನ್ನ ನೀಡಿದ ಅಪರಾಧವನ್ನು ಕಳೆದುಕೊಳ್ಳಲು ಆ ಊರಿನ ಜನ ಭೀಮನಿಗೆ ಅನ್ನದ ಕಾಣಿಕೆಯನ್ನು ನೀಡಿ ಸಂತೃಪ್ತರಾದರು ಎಂದರ್ಥ. ಆವರೆಗೆ ಕಂಸನಿಗೆ ಗಂಧ ನೀಡಿದ ಪಾಪವನ್ನು ಕಳೆದುಕೊಳ್ಳಲು ತ್ರಿವಕ್ರೆ ಕೃಷ್ಣನಿಗೆ ಗಂಧಸಮರ್ಪಣೆ ಮಾಡಿದ ವಿವರ ಭಾಗವತದಲ್ಲಿದೆ. ಕಾರಣಾಂತರದಿಂದ ಅಯೋಗ್ಯರಿಗೆ ಏನನ್ನಾದರೂ ನೀಡಿದ ಪಾಪ ಯೋಗ್ಯರಿಗೆ ನೀಡಿದಾಗ ಪರಿಹಾರವಾಗುವುದು ಎಂಬ ತತ್ವವೂ ಇದರಿಂದ ಸೂಚಿತ.

೨) ತನಗೆ ಸಮರ್ಪಿಸಿದ ಅನ್ನವನ್ನೆಲ್ಲ ಶ್ರೀಭೀಮಸೇನ ನರಸಿಂಹದೇವರಿಗೆ ಸಮರ್ಪಿಸಿ ಅದನ್ನು ಅನಂತರ ಊರಿನ ಜನರೆಲ್ಲ ನರಸಿಂಹದೇವರ ಉತ್ಸವವನ್ನಾಗಿ ಆಚರಿಸುವಂತೆ ತಿಳಿಸಿದ ಎಂದು ಭಾವ. ದುಷ್ಟವಧೆ ನರಸಿಂಹರೂಪದ ಶ್ರೀಹರಿಗೆ ಸಮರ್ಪಿತವಾಗಬೇಕಾದ ಪುಣ್ಯಕಾರ್ಯ ಎಂಬುದನ್ನೂ ಆ ಮೂಲಕ ಸೂಚಿಸಿದ ಎಂದೂ ತಿಳಿಯಬಹುದು. ಇದರಂತೆ ದುಶ್ಶಾಸನನ ವಧೆಯ

---

೯೫. ಸೋಽಪ್ಯೇತಮಾಶ್ವಿತ್ಯತ್ರ ಸಃ = ಭೀಮಸೇನೋಽಪಿ ಏತಂ = ಬ್ರಾಹ್ಮಣದತ್ತಕರಂ ನರಸಿಂಹವಪುರ್ಧರಸ್ಯ = ತದ್ಗ್ರಾಮಸ್ಥಸ್ಯ ಹರೇಃ ನರಸಿಂಹಸ್ಯ ಚಕ್ರೇ = ಪೂಜಾರ್ಥಂ ಕಟ್ಟಲಿಕಾಂ ಚಕ್ರೇ। ವಿಷ್ಣೋರ್ಹಿ ವಾಕ್ಪ್ರಚುದಿತಾ ಇತ್ಯತ್ರ ''ಚುದ ಪ್ರೇರಣ'' ಇತಿ ಧಾತೋಃ ವಾಕ್ಯಪ್ರೇರಿತಾ ಇತ್ಯರ್ಥಃ ॥ – (ವಾ.)

೯೫. ನರಸಿಂಹಾವತಾರಸ್ಯ ಹರೇಃ ಸ್ವಸ್ಮಿನ್ ಸ್ಥಿತಸ್ಯ ನಗರೇ ಸ್ಥಿತಸ್ಯೇತಿ ವಾ ಪೂಜಾರ್ಥಂ ಚಕ್ರೇ। – (ವ.)

೯೫. ವಾಕ್ಪ್ರಚುದಿತಾಃ (ವೇ. ಪಾಠ); ಪ್ರಚುದಿತಾಃ ಪ್ರೇರಿತಾಃ – (ವೇ.)

೯೫. ವಾಕ್ಪ್ರಣುದಿತಾಃ – (ಜ. ಪಾಠ)

೯೫. ತತಸ್ತೇ ಬ್ರಾಹ್ಮಣಾಃ ಸರ್ವೇ ಕ್ಷತ್ರಿಯಾಶ್ಚ ಸುವಿಸ್ಮಿತಾಃ ।
ವೈಶ್ಯಾಃ ಶೂದ್ರಾಶ್ಚ ಮುದಿತಾಶ್ಚಕ್ರುರ್ಬ್ರಹ್ಮಮಹಂ ತದಾ ॥ – ಭಾರತ (ಆದಿ. ೧೬೩/೨೦)

ಕಾಲಕ್ಕೂ ನರಸಿಂಹನಿಗೆ ಆ ಪುಣ್ಯವನ್ನು ಸಮರ್ಪಿಸಿದ ವಿವರ ಮುಂದೆ ಬರುವುದು. ಬಕಾಸುರ ವಧೆ ಪೂರೈಸುವ ವೇಳೆಗೆ ತಮ್ಮ ಸಂಕಲ್ಪ ಪೂರೈಸಿತೆಂದು ಶ್ರೀವೇದವ್ಯಾಸರು ಅಲ್ಲಿಗೆ ಆಗಮಿಸಿ ಪಾಂಡವರಿಗೆ ಅಲ್ಲಿಂದ ಮುಂದಕ್ಕೆ ತೆರಳಲು ತಿಳಿಸಿದರು ಎಂದರ್ಥ.

ದ್ರೌಪದಿ ಸ್ವಯಂವರಕ್ಕೆ ಪಯಣ

ಉತ್ಪತ್ತಿಪೂರ್ವಕಕಥಾಂ ದ್ರುಪದಾತ್ಮಜಾಯಾ
ವ್ಯಾಸೋ ಹ್ಯನೂಚ್ಯ ಜಗತಾಂ ಗುರುರೀಶ್ವರಶ್ಚ ।
ಯಾತೇತ್ಯಚೋದಯದಥಾಪ್ಯಪರೇ ದ್ವಿಜಾಗ್ರ್ಯಾ-
ಸ್ತಾನ್ ಬ್ರಾಹ್ಮಣಾ ಇತಿ ಭುಜಿರ್ಭವಿತೇತಿ ಚೋಚುಃ ॥ ೯೬ ॥

ಅ: ಜಗದ್ಗುರುಗಳೂ, ಪ್ರಭುವೂ ಆದ ಶ್ರೀವೇದವ್ಯಾಸರು ದ್ರೌಪದಿಯ ಉತ್ಪತ್ತಿ ಮೊದಲಾದ ವಿವರಗಳನ್ನು ತಿಳಿಸಿ 'ನೀವು ಅಲ್ಲಿಗೆ ತೆರಳಿರಿ' ಎಂದು ತಿಳಿಸಿದರು. ಬಳಿಕ ಇತರ ಬ್ರಾಹ್ಮಣ ಶ್ರೇಷ್ಠರೂ ಸಹ ಅವರನ್ನು ಬ್ರಾಹ್ಮಣರೆಂದೇ ತಿಳಿದು 'ಬನ್ನಿ, ಅಲ್ಲಿ ಭೋಜನ ಲಭಿಸುವುದು' ಎಂದೂ ನುಡಿದರು.

ವಿ: ೧) ಶ್ರೀವೇದವ್ಯಾಸರು ಅಲ್ಲಿಗೆ ಆಗಮಿಸಿ ದ್ರೌಪದಿಯ ಹುಟ್ಟು ಮೊದಲಾದವುಗಳನ್ನು ವಿವರಿಸಿ ಆಕೆಯ ಸ್ವಯಂವರ ನಡೆಯಲಿರುವುದನ್ನು ತಿಳಿಸಿ, ಅಲ್ಲಿಗೆ ನೀವು ಹೋಗಿರಿ ಎಂದು ಅಪ್ಪಣೆ ಮಾಡಿದರು ಎಂದರ್ಥ. ಹಾಗೆ ಹೇಳುವ ಮೂಲಕ ಸ್ವಯಂವರ ನಡೆಯುವುದು ಇವರೊಂದಿಗೇ ಎಂಬ ಪ್ರಮೇಯವನ್ನು ತಿಳಿಸಿದರು ಎಂದೂ ತಿಳಿಯಬೇಕು.

೨) ಸ್ವಯಂವರಕ್ಕೆ ತೆರಳುತ್ತಿದ್ದ ವಿಪ್ರೋತ್ತಮರು ಇವರನ್ನೂ ಸಹ ತಮ್ಮಂತೆಯೇ ಬ್ರಾಹ್ಮಣರೆಂದು ತಿಳಿದು ಅಲ್ಲಿ ಒಳ್ಳೆಯ ಭೋಜನ ದೊರೆಯುವುದು ಬನ್ನಿ ಎಂದು ಆಹ್ವಾನಿಸಿದರು ಎಂದರ್ಥ. ಇದರಿಂದ ಬ್ರಾಹ್ಮಣರು ಕನ್ಯಾಪೇಕ್ಷಿಯಾಗಿ ಅಲ್ಲಿಗೆ ತೆರಳದೇ, ಭೋಜನಾಪೇಕ್ಷಿಗಳಾಗಿ ತೆರಳುತ್ತಿದ್ದರು ಎಂದಾಗುವುದು. ಇಲ್ಲಿ ಭೋಜನವೆಂದರೆ ಜನ ತಿಳಿದ ಸಾಮಾನ್ಯ ಭೋಜನವೆಂದು

---

೯೬. ಅಥಾಪ್ಯಪರೇ ದ್ವಿಜಾಗ್ರ್ಯಾ ಅಥಾಪಿ= ವ್ಯಾಸೋಕ್ತೈವ ಪಾರ್ಥಾನಾಂ ಗಮನೇ ಸತ್ಯಪಿ ಅಪರೇ ದ್ವಿಜಾಗ್ರ್ಯಾಶ್ಚ ತಾನ್ ಬ್ರಾಹ್ಮಣಾ ಇತಿ ಹೇತೋಃ 'ಇತಿ ಹೇತುಪ್ರಕರಣಪ್ರಕಾರಾದಿಸಮಾಪ್ತಿಷು' ಇತ್ಯನುಶಾಸನಮ್। ಭುಜಿಃ= ಭೋಜನಂ ಭವಿತೇತ್ಯೂಚುಃ। ಶ್ವೋ ಭಾವಿನ್ಯಲುಟ್ ಇತ್ಯನುಶಾಸನಾತ್ ಶ್ವೋ ಭೋಜನಂ ಭವಿಷ್ಯತೀತ್ಯೂಚುರಿತಿ ಭಾವಃ ॥ –(ವಾ.)

ತಿಳಿಯದೇ ಜ್ಞಾನಭೋಜನ ಎಂದೂ, ಭೋಜನನಾಮಕ ಭಗವದ್ದರ್ಶನರೂಪ ಆನಂದಭೋಜನ ಎಂದೂ ಅರ್ಥಮಾಡಿಕೊಳ್ಳಬೇಕು. ಹಿಂದಿನ ಕಾಲದಲ್ಲಿ ಅಂತಹ ಪ್ರಮುಖ ಉತ್ಸವಗಳಲ್ಲಿ ನಿಯಮೇನ ಜ್ಞಾನಕಾರ್ಯ ನಡೆಯುತ್ತಿದ್ದುದನ್ನು ಇದು ಸೂಚಿಸುವುದು. ಅಲ್ಲಿಯ ವಾಕ್ಯಾರ್ಥ-ಗೋಷ್ಠಿಗಳ ಮೂಲಕ ಜ್ಞಾನಭೋಜನ ಪಡೆಯುವುದು ಒಂದು ಗುರಿ. ಅಲ್ಲಿಗೆ +ಭೋಜನ-ನಾಮಕನಾದ ಶ್ರೀಕೃಷ್ಣನೇ ಆಗಮಿಸಿ ದರ್ಶನ ನೀಡುವುದರಿಂದ ಭಗವದ್ದರ್ಶನರೂಪ ಭೋಜನವೂ ಆಯಿತು ಎಂದು ಮುಂದೆ ತಿಳಿಯುವುದು. ಇಲ್ಲಿ ವೇದವ್ಯಾಸರು ವಿವಾಹ ಸೂಚನೆಗೋಸ್ಕರ ಆಗಮಿಸಿರುವರು ಎಂಬುದನ್ನು 'ಇಂದಿರೇಶಃ' ಎಂಬ ಪದಪ್ರಯೋಗದ ಮೂಲಕ ಸೂಚಿಸಿರುವರು ಎಂದೂ ತಿಳಿಯಬಹುದು.

ದ್ರೌಪದೀ ಸ್ವಯಂವರದ ಹಿನ್ನೆಲೆ

ಪೂರ್ವಂ ಹಿ ಪಾರ್ಷತ ಇಮಾನ್ ಜತುಗೇಹದಗ್ಧಾನ್
ಶ್ರುತ್ವಾತಿದುಃಖಿತಮನಾಃ ಪುನರೇವ ಮಂತ್ರಃ ।
ಯಾಜೋಪಯಾಜಮುಖನಿಃ ಸೃತ ಏವಮೇಷ
ನಾಸತ್ಯತಾರ್ಹ ಇತಿ ಜೀವನಮೇಷು ಮೇನೇ ॥ ೯೭ ॥

ಅ: ಮೊದಲಿಗೆ ದ್ರುಪದರಾಜ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟ ವಾರ್ತೆಯನ್ನು ಕೇಳಿ ಮನಸ್ಸಿನಲ್ಲಿ ತುಂಬಾ ದುಃಖಿಸಿದ. ಬಳಿಕ ಯಾಜೋಪಜಾಯರ ಮುಖದಿಂದ ಬಂದ ಮಂತ್ರ ಎಂದೂ ಅಪನಂಬಿಕೆಗೆ ಯೋಗ್ಯವಲ್ಲ ಎಂದು ಯೋಚಿಸಿ ಅವರಿನ್ನೂ ಬದುಕಿರುವರು ಎಂದು ತೀರ್ಮಾನಿಸಿದ.

ವಿ: ಅರಗಿನ ಮನೆಯಲ್ಲಿ ಪಾಂಡವರು ಸುಟ್ಟು ಹೋದರು ಎಂಬ ವಾರ್ತೆ ದ್ರುಪದನ ಕಿವಿಗೂ ಬಿದ್ದಿತ್ತು ಅದರಿಂದ ಅವನಿಗಾದ ದುಃಖ ಅಷ್ಟಿಷ್ಟಲ್ಲ. ಕಾರಣ ಅವನು ದ್ರೌಪದಿಯನ್ನು ಪಡೆದದ್ದೇ ಪಾಂಡವರಲ್ಲಿ ಒಬ್ಬನಾದ ಅರ್ಜುನನಿಗೆ ವಿವಾಹಮಾಡಿಕೊಡಲೆಂದು. ಅದೀಗ ತಪ್ಪಿತಲ್ಲ ಎಂದು

\+ 'ಭ್ರಾಜಿಷ್ಣುರ್ಭೋಜನಂ ಭೋಕ್ತಾ' – ವಿಷ್ಣುಸಹಸ್ರನಾಮ

೯೭. ಪುನರೇವ ಮಂತ್ರ ಇತ್ಯತ್ರ ಪೂರ್ವಂ ದುಃಖಿತಮನಾಃ ಸನ್ ಪುನಃ ಯಾಜೋಪಯಾಜಮುಖನಿಸ್ಸೃತಃ ಏಷಃ ಮಂತ್ರಃ= ಪಾರ್ಥಾಯ ದಾತುಂ ಕನ್ಯಾ ಭೂಯಾದಿತಿ ಮಂತ್ರಃ ಏವಂ ಜತುಗೃಹಮರಣೇನ ಅಸತ್ಯತಾರ್ಹೋ ನೈವೇತಿ ಹೇತೋಃ ಏಷು ಜೀವನಂ ಮೇನ ಇತ್ಯನ್ವಯಃ ॥ – (ವಾ.)

ಮೊದಲಿಗೆ ಅವನು ಚಿಂತಾಕ್ರಾಂತನಾದ. ಆದರೆ, ಆ ಯಜ್ಞ ನಡೆದದ್ದು ಯಾಜೋಪಯಾಜರಂತಹ ಸಿದ್ಧಿ ಪಡೆದ ಶ್ರೇಷ್ಠ ಪುರೋಹಿತರಿಂದ. ಅಂತಹವರ ಬಾಯಿಂದ ಬಂದ ಮಂತ್ರಗಳು ಎಂದೂ ಸುಳ್ಳಾಗಲು ಸಾಧ್ಯವಿಲ್ಲ. ಎಂದರೆ ತಾನು ದ್ರೌಪದಿಯನ್ನು ಪಡೆದದ್ದು ಅರ್ಜುನನಿಗೋಸ್ಕರ ಆ ಮಂತ್ರದಿಂದಲೇ ಎಂದಮೇಲೆ ಅರ್ಜುನನೊಂದಿಗೆ ದ್ರೌಪದಿಯ ವಿವಾಹ ಖಚಿತ. ಎಂದಮೇಲೆ ಅವನು ಬದುಕಿರಲೇ ಬೇಕು. ಆದ್ದರಿಂದ ಎಲ್ಲ ಪಾಂಡವರೂ ಬದುಕಿರಲೇಬೇಕು ಎಂಬುದು ಅವನ ತೀರ್ಮಾನವಾಯಿತು ಎಂದರ್ಥ. ಮುಂದೆ ನಡೆದದ್ದೂ ಹಾಗೆಯೇ ಎಂದು ತಿಳಿದರೆ ಮಂತ್ರಗಳ ಸಿದ್ಧಿಯ ಮಹತ್ವ ತಿಳಿಯುವುದು. ಇದರಿಂದ ಯೋಗ್ಯ ಪುರೋಹಿತರಿಂದ ನಡೆದಾಗಲೇ ಯಜ್ಞ–ಯಾಗಗಳು ಸಿದ್ಧಿಸುವವು; ಇಲ್ಲವಾದರೆ ಸಿದ್ಧಿಸವು ಎಂಬ ಪ್ರಮೇಯವೂ ಸೂಚಿತ.

ಯತ್ರ ಕ್ವಚಿತ್ ಪ್ರತಿವಸಂತಿ ನಿಲೀನರೂಪಾಃ
ಪಾರ್ಥಾ ಇತಿ ಸ್ಮ ಸ ತು ಫಲ್ಗುನಕಾರಣೇನ ।
ಚಕ್ರೇ ಸ್ವಯಂವರವಿಘೋಷಣಮಾಶು ರಾಜ–
ಸ್ವನ್ಯೈರಧಾರ್ಯಧನುರೀಶವರಾಚ್ಚ ಚಕ್ರೇ ॥ ೯೮ ॥

ಅ: ಪಾಂಡವರೆಲ್ಲೋ ಒಂದೆಡೆ ಗುಪ್ತವಾಗಿ ನೆಲೆಸಿರುವರು ಎಂದು ಯೋಚಿಸಿ, ಅರ್ಜುನನಿಗೋಸ್ಕರವಾಗಿ ಅವನು ಬೇಗನೆ ಸ್ವಯಂವರದ ಘೋಷಣೆಯನ್ನು ಮಾಡಿದ. ಬೇರಾರಿಂದಲೂ ಧರಿಸಲಾಗದ ಧನುಸ್ಸನ್ನು ಶಿವನ ವರದಿಂದ ಯೋಜಿಸಿದ.

ವಿ: ಪಾಂಡವರು ಬದುಕಿರುವುದು ನಿಶ್ಚಯವಾದರೂ ಅವರನ್ನು ಹುಡುಕುವುದೆಂತು? ಅದಕ್ಕಾಗಿ ದ್ರುಪದ ಸ್ವಯಂವರವೊಂದನ್ನು ಏರ್ಪಡಿಸಿದ್ದ. ಆಗಲೂ ಅರ್ಜುನನೇ ದ್ರೌಪದಿಯನ್ನು ವರಿಸುವಂತಾಗಲು ಮತ್ತೊಂದು ಯೋಜನೆ ಮಾಡಿದ. ಶಿವನನ್ನು ಆರಾಧಿಸಿ, ಅವನಿಂದ ಧನುಸ್ಸೊಂದನ್ನು ಪಡೆದ. ಅದಕ್ಕೆ ಅರ್ಜುನನ ಹೊರತು ಬೇರಾರೂ ಕಟ್ಟಲು ಸಾಧ್ಯವಾಗದಿರಲಿ ಎಂಬ ವರವನ್ನೂ ಶಿವನಿಂದಲೇ ಪಡೆದುಕೊಂಡ ಎಂದರ್ಥ.

---

೯೮. ಪುಷ್ಯಮಾಸೇ ತು ರೋಹಿಣ್ಯಾಂ ಶುಕ್ಲಪಕ್ಷೇ ಶುಭೇ ತಿಥೌ ।
ದಿವಸೈಃ ಪಂಚಸಪ್ತತ್ಯಾ ಭವಿಷ್ಯತಿ ಸ್ವಯಂವರಃ ॥ – ಭಾರತ (ಆದಿ. ೧೭೬/೫೬)

೯೮. ಅನ್ಯೈಃ ಪಾರ್ಥಾದಿತಿ ಶೇಷಃ । ಸು ಇತಿ ಪೃಥಕ್ ಪದಮ್ । ಅಧಾರ್ಯಮಿತ್ಯನೇನ ಸಂಬಧ್ಯತೇ । – (ವೇ.)

೯೮. ಅನ್ಯೈರಧಾರ್ಯಂ ಅನಾರೋಪಿತಮಿತಿ ಭಾವಃ । – (ಜ.)

೯೮. ಚಕ್ರೇ ಸಂಪಾದಯಾಮಾಸ – (ಜ.)

ಹಸ್ತಿನಾಪುರದಲ್ಲಿ ಶ್ರೀಕೃಷ್ಣ

ತತ್ಕಾಲ ಏವ ವಸುದೇವಸುತೋಽಪಿ ಕೃಷ್ಣಃ
ಸಂಪೂರ್ಣನೈಜಪರಿಬೋಧತ ಏವ ಸರ್ವಮ್ ।
ಜಾನನ್ನಪಿ ಸ್ಮ ಹಲಿನಾ ಸಹಿತೋ ಜಗಾಮ
ಪಾರ್ಥಾನ್ ನಿಶಮ್ಯ ಚ ಮೃತಾನಥ ಕುಲ್ಯಹೇತೋಃ ॥ ೯೯ ॥

ಅ: ಅದೇ ಕಾಲದಲ್ಲಿಯೇ ವಸುದೇವಪುತ್ರನಾದ ಶ್ರೀಕೃಷ್ಣ ಪರಿಪೂರ್ಣವಾದ ಸಹಜ ಜ್ಞಾನದಿಂದ ಎಲ್ಲವನ್ನೂ ಬಲ್ಲವನಾದರೂ ಪಾಂಡವರು ಸತ್ತರೆಂಬ ವಾರ್ತೆಯನ್ನು ಕೇಳಿದ ತಕ್ಷಣವೇ ಕುಲೋಚಿತಧರ್ಮದ ಸಲುವಾಗಿ ಬಲರಾಮನೊಂದಿಗೆ ಹಸ್ತಿನಾವತಿಗೆ ತೆರಳಿದ.

ವಿ: ೧) ಈ ಮುಂಚೆ ನಡೆದ ಪ್ರಸಂಗವನ್ನು ತಿಳಿಸುತ್ತಿರುವರು. ಪಾಂಡವರು ಅರಗಿನ ಮನೆಯಲ್ಲಿ ಸುಟ್ಟುಹೋದರು ಎಂಬ ವಾರ್ತೆಯನ್ನು ಶ್ರೀಕೃಷ್ಣನೂ ಕೇಳಿದ. ಸದಾ ಸರ್ವಜ್ಞನಾದ ಅವನಿಗೆ ಪಾಂಡವರು ಸುರಕ್ಷಿತವಾಗಿ ಇರುವುದು ತಿಳಿದಿತ್ತು, ಆದರೂ ಅಸುರಮೋಹನಕ್ಕಾಗಿ ಹಸ್ತಿನಾಪುರಕ್ಕೆ ಕುಲ್ಯಧರ್ಮವನ್ನು ತಿಳಿಸಲೆಂದೂ ಸಹ ತೆರಳಿದ.

೨) ಇಲ್ಲಿ ಕುಲ್ಯ ಎಂದರೆ ಬಂಧುಗಳು ಮೃತರಾದಾಗ ಹೋಗಿ ಮಾತನಾಡಿಸಿ, ಸಮಾಧಾನ ಹೇಳಿ ಬರುವ ಕಾರ್ಯ ಎಂಬ ಅರ್ಥ ವಾದಿರಾಜೀಯದಲ್ಲಿದೆ.

ಸಂಪ್ರಾಪ್ಯ ಹಸ್ತಿನಪುರಂ ಧೃತರಾಷ್ಟ್ರಪುತ್ರಾನ್
ಸಂವಂಚಯಂಸ್ತದನುಸಾರಿಕಥಾಶ್ಚ ಕೃತ್ವಾ ।
ಭೀಷ್ಮಾದಿಭಿಃ ಪರಿಗತೋಽಪ್ರಿಯವಜ್ಜಗಾಮ
ದ್ವಾರಾವತೀಮುದಿತಪೂರ್ಣಸುನಿತ್ಯಸೌಖ್ಯಃ ॥ ೧೦೦ ॥

ಅ: ಶ್ರೀಕೃಷ್ಣ ಹಸ್ತಿನಾಪುರವನ್ನು ತಲುಪಿ ಕೌರವರನ್ನು ಮೋಸಗೊಳಿಸಲೆಂದು ಅವರಿಗೆ ಅನುಕೂಲವಾಗುವ ಮಾತುಗಳನ್ನಾಡಿದ. ಭೀಷ್ಮಾದಿಗಳೊಂದಿಗೆ ಒಡಗೂಡಿದವನಾಗಿ ತಾನು

---

೯೯. ಮೃತಾನಥ ಕುಲ್ಯಹೇತೋರಿತ್ಯತ್ರ ಕುಲ್ಯಹೇತೋಃ = ಬಂಧುಷು ಮೃತೇಷು ಸತ್ಸು ಗತ್ವಾ ವಿಚಾರಣಂ ಕಾರ್ಯಮಿತಿ ಕುಲೋಚಿತಕರ್ಮಕರಣಾರ್ಥಮಿತ್ಯರ್ಥಃ ॥ – (ವಾ.)

೯೯. ಮೃತಸ್ಯ ಪುಂಸೋ ಬಂಧೂನಾಂ ಸಾಂತ್ವನಂ ಕುಲ್ಯಮ್ । – (ಜ.)

ಪಾಂಡವರ ಬಗ್ಗೆ ಅಪ್ರೀತಿಯಿಂದಿರುವಂತೆ ತೋರಿಸಿಕೊಂಡು ಆನಂದಪೂರ್ಣನೂ, ನಿತ್ಯಸುಖಿಯೂ ಆದ ಅವನು ದ್ವಾರಕೆಗೆ ಮರಳಿದ.

ವಿ: ಕೌರವರ ವಂಚನೆಗೆಂದು ಶ್ರೀಕೃಷ್ಣ ಅವರಿಗೆ ಪ್ರಿಯವಾಗುವಂತೆಯೇ ಮಾತುಕತೆ–ಗಳನ್ನಾಡಿ, ಅಪ್ರೀತಿಗೊಂಡಂತೆ ನಟಿಸಿ, ದ್ವಾರಕೆಗೆ ಮರಳಿದ.

ಶತಧನ್ವನಿಂದ ಸತ್ರಾಜಿತನ ಹತ್ಯೆ

ತಸ್ಯಾಂತರೇ ಹೃದಿಕಸೂನುರನಂತರಂ ಸ್ವಂ
ಶ್ವಫಲ್ಕಿಬುದ್ಧಿಬಲಮಾಶ್ರಿತ ಇತ್ಯುವಾಚ ।
ಸತ್ರಾಜಿದೇಷ ಹಿ ಪುರಾ ಪ್ರತಿಜಜ್ಞ ಏನಾ–
ಮಸ್ಮತ್ಕೃತೇ ಸ್ವತನಯಾಂ ಮಣಿನಾ ಸಹೈವ ॥ ೧೦೧ ॥

ಅ: ಈ ಮಧ್ಯೆ ಹೃದಿಕನ ಮಗನಾದ ಕೃತವರ್ಮ ತನ್ನ ತಮ್ಮನಾದ ಶತಧನ್ವನಿಗೆ ಅಕ್ರೂರನ ಬುದ್ಧಿಬಲವನ್ನು ನೆಚ್ಚಿ ಹೇಳಿದ 'ಈ ಸತ್ರಾಜಿತ ಹಿಂದೆ ಸತ್ಯಭಾಮೆಯನ್ನು ಸ್ಯಮಂತಕ ಮಣಿಯೊಂದಿಗೆ ನಮಗೇ ಕೊಡುವುದಾಗಿ ವಚನವಿತ್ತಿದ್ದ.

ಸರ್ವಾಂ ನಃ ಪುನರಸಾವವಮತ್ಯ ಕೃಷ್ಣಾ–
ಯಾದಾತ್ ಸುತಾಂ ಜಹಿ ಚ ತಂ ನಿಶಿ ಪಾಪಬುದ್ಧಿಮ್ ।
ಆದಾಯ ರತ್ನಮುಪಯಾಹಿ ಚ ನೌ ವಿರೋಧೇ
ಕೃಷ್ಣಸ್ಯ ದಾನಪತಿನಾ ಸಹ ಸಾಹ್ಯಮೇಮಿ ॥ ೧೦೨ ॥

---

೧೦೦. ತದನುಸಾರಿಕಥಾಶ್ಚ ಕೃತ್ವೇತ್ಯತ್ರ ಭೀಷ್ಮಾದಿಭಿಃ ಪರಿವೃತಃ ಸನ್ ಸಂವಂಚಯನ್ನಿತಿ ವಚನಾತ್ ಅಪ್ರಿಯವತ್ = ಪಾಂಡವಾನಾಮಪ್ರಿಯವತ್ ತದನುಸಾರಿಕಥಾಃ= ತತ್ಕಾಲಾನುಸಾರಿಕಥಾಃ ದೈವಹೀನಾಃ ಪಾಂಡವಾ ಮೃತಾ ಇತ್ಯಾದಿಕಥಾ ಇತಿ ಯಾವತ್। ಕೃತ್ವಾ ದ್ವಾರಾವತೀಂ ಜಗಾಮೇತ್ಯನ್ವಯಃ। ಯದ್ವಾ ಅರ್ಶವಾನಿತಿವತ್ ಅಪ್ರಿಯವತ್ ಪಾಂಡವಾನಾಂ ಅಪ್ರಿಯವದಪ್ರಿಯವಾನಿವ ಜಗಾಮೇತಿ ಯಥಾಶ್ರುತೈವ ಯೋಜನಾ ॥ – (ವಾ.)

೧೦೦. ಪರಿಗತಾ ಪ್ರಿಯವದಿತಿ ಪಾಠೇ ಭೀಷ್ಮಾದಿಭಿಃ ಸಹ ಪ್ರಾಪ್ತಪ್ರಿಯವದಿತ್ಯರ್ಥಃ। – (ಜ.)

೧೦೦. ಪ್ರಿಯವಜ್ಜಗಾಮೇತ್ಯಪಿ ಕ್ವಚಿತ್ ಪಾಠಃ । ತದಾ ಭೀಷ್ಮಾದಿಭಿಶ್ಚ ತದನುಸಾರಿಕಥಾಶ್ಚ ಕೃತ್ವಾ ಪರಿಗತಂ ಪ್ರಾಪ್ತಮಪಿ ಯಂ ದುಃಖಂ ತಸ್ಯ ಪರಿಗತಾಪ್ರಿಯಃ। ತದ್ವಜ್ಜಗಾಮ। – (ತಾ.)

ಅ: ಆದರೆ ಅವನು ನಮ್ಮನ್ನೆಲ್ಲಾ ಕಡೆಗಣಿಸಿ, ಶ್ರೀಕೃಷ್ಣನಿಗೇ ಮಗಳನ್ನು ಧಾರೆಯೆರೆದ. ಪಾಪಬುದ್ಧಿಯ ಅವನನ್ನು ನೀನು ರಾತ್ರಿಯಲ್ಲಿ ಕೊಂದುಹಾಕು. ಮಣಿಯನ್ನು ತೆಗೆದುಕೊಂಡು ಬಾ. ನಮಗೆ ಶ್ರೀಕೃಷ್ಣನೊಂದಿಗೆ ಯುದ್ಧ ಒದಗಿದರೆ ಅಕ್ರೂರನೊಂದಿಗೆ ನಾನೂ ಸಹ ನಿನ್ನ ಸಹಾಯಕ್ಕೆ ಬರುವೆ'.

ಇತ್ಯುಕ್ತ ಆಶು ಕುಮತಿಃ ಸ ತು ಪೂರ್ವದೇಹೇ
ದೈತ್ಯೋ ಯತಸ್ತದಕರೋದಥ ಸತ್ಯಭಾಮಾ ।
ಆನಂದಸಂವಿದಪಿ ಲೋಕವಿಡಂಬನಾಯ
ತದ್ದೇಹಮಸ್ಯ ತಿಲಜೇ ಪತಿಮಭ್ಯುಪಾಯಾತ್ ॥ ೧೦೩ ॥

ಅ: ಅವನು ಹೀಗೆ ಹೇಳುತ್ತಲೇ ದುರ್ಬುದ್ಧಿಯ ಆ ಶತಧನ್ವ ಅದನ್ನು ಮಾಡಿಯೇಬಿಟ್ಟ. ಅವನು ಹಿಂದಿನ ಜನ್ಮದಲ್ಲೂ ದೈತ್ಯನಾಗಿದ್ದುದೇ ಅದಕ್ಕೆ ಕಾರಣ. ಸತ್ಯಭಾಮೆಯು ಜ್ಞಾನಾನಂದ ಸ್ವರೂಪಳಾದರೂ ಲೋಕವಿಡಂಬನೆಗೆಂದು ಆ ದೇಹವನ್ನು ಎಳ್ಳಿನ ಎಣ್ಣೆಯಲ್ಲಿರಿಸಿ ಪತಿಯಾದ ಶ್ರೀಕೃಷ್ಣನ ಬಳಿಗೆ ತೆರಳಿದಳು.

ವಿ: ೧) ಈ ಮೂರು ಶ್ಲೋಕಗಳಲ್ಲಿ ಅಕ್ರೂರ, ಕೃತವರ್ಮ ಇಬ್ಬರೂ ಸೇರಿ ಶತಧನ್ವನ ಮೂಲಕ ಸತ್ರಾಜಿತನನ್ನು ಕೊಲ್ಲಿಸಿದ ವಿವರ ಬಂದಿದೆ. ಸತ್ಯಭಾಮೆಯನ್ನು ತಮಗೆ ನೀಡದೇ ಶ್ರೀಕೃಷ್ಣನಿಗೆ ನೀಡಿದ ಕೋಪದಿಂದ ಅವರು ಸತ್ರಾಜಿತನ ಕೊಲೆಯನ್ನೇ ಮಾಡಿಸಿದರು.

೨) ಸತ್ಯಭಾಮಾದೇವಿ ಸತ್ರಾಜಿತನ ವಧೆಯ ನಂತರ ಅವನ ದೇಹವನ್ನು ಕೆಡದಂತೆ ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ ಶ್ರೀಕೃಷ್ಣನ ಬಳಿಗೆ ಹಸ್ತಿನಾವತಿಗೆ ಧಾವಿಸಿದಳು ಎಂದರ್ಥ.

---

೧೦೨. ನೌ ವಿರೋಧ ಇತ್ಯತ್ರ ನೌ ತವಾನುಜಃ ಮಮ ಶ್ವಶುರಂ ಹತ್ವಾ ರತ್ನಂ ನೀತವಾನಿತಿ ನೌ = ಆವಾಭ್ಯಾಂ ಕೃಷ್ಣಸ್ಯ ವಿರೋಧೇ ಸತಿ ದಾನಪತಿನಾ = ಅಕ್ರೂರೇಣ ಸಹ ಸಾಹ್ಯಂ= ಸಹೇತ್ಯಸ್ಯ ಭಾವಃ ಸಾಹ್ಯಂ ಸಾಹಾಯ್ಯಮಿತ್ಯರ್ಥಃ ॥ – (ವಾ.)

೧೦೩. ತದ್ದೇಹಮಸ್ಯ ತಿಲಜ ಇತ್ಯತ್ರ ತಿಲಜೇ= ತೈಲಮಂಜೂಷಾಸ್ಥಿತತೈಲೇ ಅಸ್ಯ="ಅಸು ನಿರಸನ" ಇತಿ ಧಾತೋಃ ಪ್ರಕ್ಷಿಪ್ತ ಪತಿಮಭ್ಯುಪಾಗಾದಿತ್ಯನ್ವಯಃ ॥ – (ವಾ.)

೧೦೩. ತಿಲಜೇ ತಿಲತೈಲೇ । – (ಜ.)

ಮಾಂಗಲ್ಯಮೇತದತುಲಂ ಪ್ರತಿಯಾತ ಶೀಘ್ರಂ
ಪಾಂಚಾಲಕಾನ್ ಪರಮಭೋಜನಮತ್ರ ಸಿದ್ಧ್ಯೇತ್ ।
ವಿಪ್ರೈರಿತಸ್ತತ ಇತೀರಿತವಾಕ್ಯಮೇತೇ
ಶೃಣ್ವಂತ ಏವ ಪರಿಚಕ್ರಮುರುತ್ತರಾಶಾಮ್ ॥ ೧೦೬ ॥

ಅ: 'ಅದೊಂದು ಅನುಪಮವಾದ ಮಂಗಳ ಕಾರ್ಯ. ಅದರಿಂದ ಪಾಂಚಾಲದೇಶಕ್ಕೆ ಬೇಗನೆ ನಡೆಯಿರಿ. ಅಲ್ಲಿ ಉತ್ತಮವಾದ ಭೋಜನ ದೊರೆಯುವುದು' ಎಂಬುದಾಗಿ ಅಲ್ಲಲ್ಲಿ ಬ್ರಾಹ್ಮಣರು ನುಡಿಯುತ್ತಿದ್ದ ಮಾತನ್ನು ಕೇಳಿಕೊಳ್ಳುತ್ತಲೇ ಪಾಂಡವರು ಉತ್ತರ ದಿಕ್ಕಿನತ್ತ ನಡೆದರು.

ಬ್ರಾಹ್ಮಣರು ನುಡಿದ ಸ್ವಯಂವರದ ಭವಿಷ್ಯ

ಷಣ್ಣಾಂ ಚ ಮಧ್ಯಗಮುದೀರ್ಣಭುಜಂ ವಿಶಾಲ-
ವಕ್ಷಃಸ್ಥಲಂ ಬಹುಲಪೌರುಷಲಕ್ಷಣಂ ಚ ।
ದೃಷ್ಟ್ವೈವ ಮಾರುತಿಮಸಾವುಪಲಪ್ಸ್ಯತೀಹ
ಕೃಷ್ಣಾಮಿತಿ ಸ್ಮ ಚ ವಚಃ ಪ್ರವದಂತಿ ವಿಪ್ರಾಃ ॥ ೧೦೭ ॥

ಅ: ಆ ಆರುಜನರ ಮಧ್ಯದಲ್ಲಿ ತುಂಬಿದ ತೋಳುಗಳು, ವಿಶಾಲವಾದ ವಕ್ಷಸ್ಥಳ ಮತ್ತು ಪೂರ್ಣವಾದ ಪುರುಷ ಲಕ್ಷಣಗಳನ್ನು ಹೊಂದಿದ್ದ ಭೀಮನನ್ನು ಕಾಣುತ್ತಲೇ ವಿಪ್ರರುಗಳು ದ್ರೌಪದಿಯನ್ನು ಇವನೇ ಪಡೆಯುವನು ಎಂದು ನುಡಿಯುತ್ತಿದ್ದರು.

ವಿ: ಪಾಂಡವರ ಮಧ್ಯದಲ್ಲಿ ಭೀಮನ ದ್ವಾತ್ರಿಂಶಲ್ಲಕ್ಷಣಭರಿತವಾದ ಆಕೃತಿಯನ್ನು ಕಂಡ ವಿಪ್ರರೆಲ್ಲ ನಿಶ್ಚಿತವಾಗಿಯೂ ಅವನೇ ದ್ರೌಪದಿಯನ್ನು ವಿವಾಹವಾಗುವನು ಎಂಬುದಾಗಿ ನುಡಿಯುತ್ತಿದ್ದರು. ಪರಿಪೂರ್ಣವಾದ ಲಕ್ಷಣ ಪೂರ್ಣಸಿದ್ಧಿಯ ಸಂಕೇತ. ಅದರಿಂದ ಭೀಮನಿಗೆ ಕಾರ್ಯಸಿದ್ಧಿಯಾಗುವುದು ಖಚಿತ ಎಂಬುದು ಒಂದರ್ಥ. ಮತ್ತೊಂದು ರೀತಿಯಲ್ಲಿ ದ್ರೌಪದಿ ಪರಿಪೂರ್ಣಲಕ್ಷಣವತಿ ಎಂದು ಪ್ರಸಿದ್ಧಳಾದವಳು. ಭೀಮನೂ ಪರಿಪೂರ್ಣಲಕ್ಷಣ ಉಳ್ಳವನು

---

೧೦೬. ಮಾಂಗಲ್ಯಮೇತದತುಲಮಿತ್ಯತ್ರ ಮಾಂಗಲ್ಯಂ ಭವಿಷ್ಯತಿ ಅತಃ ಪ್ರತಿಯಾತೇತಿ ಯೋಗ್ಯಪದಾಧ್ಯಾಹಾರಃ। ತದ್ಭ್ರಾಮೀಣಜನಾನಾಂ ವಚನಸ್ಯ ಭುಜಿರ್ಭವಿತೇತಿ ಪ್ರಾಗೇವೋಕ್ತತ್ವಾತ್ ಇತಸ್ತತೋ ವಿಪ್ರೈರುದೀರಿತಾಮಿತ್ಯುಕ್ತಮ್। ಮಧ್ಯೇಮಾರ್ಗಮುಭಯತ ಆಗತ್ಯ ಮಿಲಿತೈರ್ವಿಪ್ರೈರಿತ್ಯರ್ಥಃ ॥ – (ವಾ.)

೧೦೭. ಅಯಂ ಭ್ರಾತಾ ತವ ಶ್ರೀಮಾನ್ ದರ್ಶನೀಯೋ ಮಹಾಭುಜಃ। - ಭಾರತ (ಆದಿ. ೧೮೩/೧೯)

ಎಂಬುದನ್ನು ಕಂಡ ಅವರಿಗೆ ಅವರಿಬ್ಬರ ವಿವಾಹ ಖಚಿತ ಎಂಬ ಭಾವನೆ ಮೂಡುತ್ತಿತ್ತು ಎಂದರ್ಥ. ಇದು ಶ್ರೀಕೃಷ್ಣ ರುಕ್ಮಿಣಿಯರಿಬ್ಬರು ಒಬ್ಬರನ್ನೊಬ್ಬರು ನಿಶ್ಚಿತವಾಗಿಯೂ ಮೆಚ್ಚಿ ವಿವಾಹವಾಗುವರು ಎಂದು ಜರಾಸಂಧ ಮೊದಲಾದ ರಾಜವೃಂದ ಚಿಂತಿಸುತ್ತಿದ್ದ ಪ್ರಸಂಗದಂತಿರುವುದನ್ನು ಗಮನಿಸಬೇಕು (೧೭/೨೩,೨೪).

ಪಾಂಡವರ ಪ್ರಯಾಣ ವೈಖರಿ

ರಾತ್ರೌ ದಿವಾ ಚ ಸತತಂ ಪಥಿ ಗಚ್ಛಮಾನಾಃ
ಪ್ರಾಪುಃ ಕದಾಚಿದಥ ವಿಷ್ಣುಪದೀಂ ನಿಶಾಯಾಮ್ ।
ಸರ್ವಾಂಶ್ಚ ರಕ್ಷಿತುಮಗಾದಿಹ ಪೃಷ್ಠತಶ್ಚ
ಭೀಮೋಽಗ್ರ ಏವ ಶತಮನ್ಯುಸುತೋಽಂತರೇಽನ್ಯೇ ॥ ೧೦೮ ॥

ಅ: ಹಗಲು, ರಾತ್ರಿ ಎಡೆಬಿಡದೇ ದಾರಿಯಲ್ಲಿ ಸಾಗುತ್ತಾ ಅವರು ಒಮ್ಮೆ ರಾತ್ರಿಯಲ್ಲಿ ಗಂಗಾನದಿಯನ್ನು ತಲುಪಿದರು. ಆಗ ಎಲ್ಲರ ರಕ್ಷಣೆಗೆಂದು ಭೀಮ ಹಿಂದಿನಿಂದ ನಡೆಯುತ್ತಿದ್ದ, ಎಲ್ಲರ ಮುಂದೆ ಅರ್ಜುನ, ನಡುವೆ ಇತರ ಎಲ್ಲರೂ.

ವಿ: ೧) ಆಗ ಸ್ವಯಂವರಕ್ಕೆ ಕೆಲವೇ ದಿನಗಳು ಉಳಿದಿದ್ದರಿಂದ ಅವರು ಹಾಗೆ ತ್ವರೆಯಿಂದ ನಡೆದರು ಎಂದರ್ಥ. ಪುಷ್ಯಶುಕ್ಲ ರೋಹಿಣೀ ನಕ್ಷತ್ರದಂದು ಸ್ವಯಂವರವೆಂದು ಘೋಷಿತವಾಗಿತ್ತು.

೨) ಪಾಂಡವರ ಆ ಬಗೆಯ ಸಂಚಾರದಲ್ಲೂ ಅಧ್ಯಾತ್ಮ ಅಡಗಿದೆ. ಅವರ ಗುರಿ ದ್ರೌಪದೀ ಪ್ರಾಪ್ತಿ ಎಂದರೆ ವಿದ್ಯಾಪ್ರಾಪ್ತಿ. ಅದಕ್ಕಾಗಿ ಗಂಗಾತೀರದಲ್ಲಿ ಪ್ರಯಾಣ. ಗಂಗೆ ಸಚ್ಛಾಸ್ತ್ರದ ಸಂಕೇತ, ಪ್ರಯಾಣ ಅಧ್ಯಯನದ ಸಂಕೇತ. *ಉತ್ತರದಿಕ್ಕಿನತ್ತ ಪಯಣ ಎಂಬುದು ಶ್ರೀಹರಿಪ್ರೀತಿಗಾಗಿ ಅಧ್ಯಯನ ಎಂಬುದಕ್ಕೂ ಸೂಚಕ. ಐವರು ಪಾಂಡವರು ಎರಡನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ ಧರ್ಮ, ಜ್ಞಾನಾದಿ ಹತ್ತು ಗುಣಗಳು, ಶ್ರವಣ, ಮನನ, ಧ್ಯಾನ ಹಾಗೂ ಶೀಲ, ವಿನಯಗಳ ಸಂಕೇತ. ಇಂಥವರಿಗೆ ಮಾತ್ರ ವಿದ್ಯಾಪ್ರಾಪ್ತಿ ಎಂದರ್ಥ. ಎಲ್ಲರ ಮುಂದೆ ಅರ್ಜುನ ಎಂದರೆ ಶ್ರವಣಾದಿಗಳಿಗೆ ಸಾಧನೆಯಲ್ಲಿ ಪ್ರಧಾನಪಾತ್ರ ಎಂದರ್ಥ. ಹಿಂಭಾಗದಲ್ಲಿ ಭೀಮಸೇನ

---

೧೦೮. ತೇ ತ್ವಗಚ್ಛನ್ಸಹೋರಾತ್ರಾತ್ ತೀರ್ಥಂ ಸೋಮಾಶ್ರಯಾಯಣಮ್ ।
ಆಸೇದುಃ ಪುರುಷವ್ಯಾಘ್ರಾ ಗಂಗಾಯಾಂ ಪಾಂಡುನಂದನಾಃ ॥ ... – ಭಾರತ (ಆದಿ. ೧೬೯/೩)

* ಉತ್ತರೋ ಗೋಪತಿರ್ಗೋಪ್ತಾ – ವಿಷ್ಣುಸಹಸ್ರನಾಮ

ಎಂದರೆ ತತ್ವಜ್ಞಾನ ಸರ್ವಬಗೆಯಲ್ಲೂ ಸಂರಕ್ಷಕ ಎಂದು ಭಾವ. ಮಧ್ಯದಲ್ಲಿ ಇತರರು ಎಂದರೆ ಕುಂತಿ ಮತ್ತು ಇತರ ಮೂವರು. ಕುಂತಿ ಶ್ರುತಿಯ ಸಂಕೇತ, ಧರ್ಮರಾಜ ಧರ್ಮಕ್ಕೂ, ನಕುಲ ಸಹದೇವರು ಶೀಲ, ವಿನಯಗಳಿಗೂ ಸಂಕೇತ. ಹಗಲು ರಾತ್ರಿಯ ಪ್ರಯಾಣ ಸತತ +ಅಧ್ಯಯನಕ್ಕೆ ಸಂಕೇತ. ಅವರ ಬ್ರಾಹ್ಮಣ ವೇಷ ಬ್ರಾಹ್ಮಣ ಜನ್ಮ ಜ್ಞಾನಾರ್ಜನೆಗೆ ಅತ್ಯಂತ ವಿಹಿತ ದೇಹ ಎಂದೂ, ಬ್ರಹ್ಮಚಾರಿವೇಷ ಬ್ರಹ್ಮಚರ್ಯಾದಿಗುಣಗಳು ವಿದ್ಯಾದಾಯಕ ಎಂದೂ ಸೂಚಕ. ಹೀಗೆ ಪಾಂಡವರ ಪಯಣ ಅಧ್ಯಾತ್ಮವಿದ್ಯಾಪ್ರಾಪ್ತಿಯ ಸಾರಸರ್ವಸ್ವವನ್ನೇ ಸೆರೆಹಿಡಿಯುವ ಆಧ್ಯಾತ್ಮಿಕಸಾಧನೆಯ ಸಂಕೇತ ಎಂಬುದನ್ನು ಗಮನಿಸಬೇಕು. ಇದರಿಂದಾಗಿಯೇ ಶ್ರೀಮನ್ಮಹಾಭಾರತ ಸರ್ವೋನ್ನತ ಆಧ್ಯಾತ್ಮಿಕ ಕೃತಿಯೆಂದು ಮಾನ್ಯವಾಗಿದೆ :

ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥ – (೨/೧೪೬)

ಚಿತ್ರರಥ ಅಂಗಾರವರ್ಣನಾದ

ಪ್ರಾಪ್ತೇ ತದೋಲ್ಮುಕಧರೇಽರ್ಜುನ ಏವ ಗಂಗಾಂ
ಗಂಧರ್ವರಾಜ ಇಹ ಚಿತ್ರರಥೋಽರ್ಧರಾತ್ರೇ ।
ದೃಷ್ಟ್ವೈವ ವಿಪ್ರರಹಿತಾನುದಕಾಂತರಸ್ಥಃ
ಕ್ಷತ್ರಾತ್ಮಜಾ ಇತಿ ಹಿ ಧರ್ಷಯಿತುಂ ಸ ಚಾಗಾತ್ ॥ ೧೦೯ ॥

ಅ: ಮುಂದೆ ಪಂಜುಹಿಡಿದು ಸಾಗುತ್ತಿದ್ದ ಅರ್ಜುನ ಗಂಗೆಯನ್ನು ಸಮೀಪಿಸಿದಾಗ ಅಲ್ಲಿ ಅರ್ಧರಾತ್ರಿಯ ವೇಳೆಯಲ್ಲಿ ನೀರಿನಲ್ಲಿದ್ದ ಗಂಧರ್ವರಾಜನಾದ ಚಿತ್ರರಥ, ಜೊತೆಗೆ ಬ್ರಾಹ್ಮಣರಾರೂ ಇರದಿದ್ದ ಇವರನ್ನು ಕಾಣುತ್ತಲೇ ಅವರು ಕ್ಷತ್ರಿಯರೆಂದು ತಿಳಿದು ಹೋರಾಟ ನಡೆಸಲೆಂದು ಸಿದ್ಧನಾದ.

ವಿ: ಮಧ್ಯರಾತ್ರಿ ಮಾನವ ಸಂಚಾರಕ್ಕೆ ವಿಹಿತವಾದ ಕಾಲವಲ್ಲ. ಆದರೆ, ಪಾಂಡವರು ಹಾಗೆ ಹೋಗುವ ಮೂಲಕ ತಾವು ಮಾನವರಲ್ಲ ಎಂಬುದನ್ನು ಸೂಚಿಸುತ್ತಿದ್ದರು. ಅವರ ಜೊತೆಗೆ

\+ ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್ ।
ಅತ್ಯಶಕ್ತೇ ತು ನಿದ್ರಾದೌ ಪುನರೇವ ಸಮಾಚರೇತ್ ॥ – ಅನುವ್ಯಾಖ್ಯಾನ (೩/೩/೭೮, ೭೯)

೧೦೯. ಸಹಾಗತಾನಾಂ ವಿಪ್ರಾಣಾಮಂಧಕಾರವಶಾತ್ ಕಿಂಚಿದ್ದೂರಸ್ಥತ್ವಾತ್ ತಥಾ ನಿದ್ರಾವಶಾತ್ ಕ್ವಚಿನ್ನಿದ್ರಿತತ್ವಾದ್ವಾ ವಿಪ್ರರಹಿತಾನಿತ್ಯುಕ್ತಮ್ ॥ – (ವಾ.)

೧೦೯. ಉಲ್ಮುಕಧರೇ ಜ್ವಲತ್ಕಾಷ್ಠಧರೇ ... । – (ವ.)

ಬ್ರಾಹ್ಮಣರು ಇದ್ದರೂ ಅವರೆಲ್ಲ ಇವರಂತಹ ದೇವತೆಗಳಲ್ಲವಾದ್ದರಿಂದ ಮಧ್ಯೆ ಆಯಾಸಾದಿ ಕಾರಣಗಳಿಂದ ಅಲ್ಲಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಇವರು ಸತತ ಪ್ರಯಾಣ ಮಾಡುತ್ತಿದ್ದುದರಿಂದ ಅವರ ಜೊತೆ ಬ್ರಾಹ್ಮಣರ ಗುಂಪು ಆಗ ಇರಲಿಲ್ಲ. ಕೆಲವರು ರಾತ್ರಿಕಾಲ ಎಂಬ ಕಾರಣಕ್ಕಾಗಿ ದೂರವೇ ಉಳಿದುಬಿಟ್ಟಿದ್ದರು. ಇದನ್ನೆಲ್ಲ ಅರಿಯದ ಚಿತ್ರರಥ ಅವರು ಕ್ಷತ್ರಿಯರೇ ಇರಬೇಕೆಂದು ನಿಶ್ಚಯಿಸಿ ಹೋರಾಟಕ್ಕೆ ತೊಡಗಿದ. ಅಂದು ಶುಕ್ಲಪಕ್ಷ ಅಷ್ಟಮಿ ಚಂದ್ರಾಸ್ತದ ಕಾಲ ಎಂದು ಭಾರತದಲ್ಲಿದೆ. ಸುಮಧ್ವವಿಜಯದಲ್ಲಿ ಮಧ್ಯರಾತ್ರಿ ಪ್ರಯಾಣಕಾಲದಲ್ಲಿ ಮಧ್ಯಗೇಹಾದಿ ಜನರನ್ನು ಮಾರ್ಗಮಧ್ಯದಲ್ಲಿ ಒಂದು ಮಹಾಭೂತ ಆಕ್ರಮಿಸಲು ಬಂದ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಲ್ಲಿ ಅವರೊಂದಿಗೆ ಬಾಲ ಮಧ್ವರಿದ್ದದ್ದರಿಂದ ಅವರು ಅಪಾಯದಿಂದ ಪಾರಾದರು, ಇಲ್ಲಂತೂ ಯುವ ಭೀಮನೇ ರಕ್ಷಕನಾಗಿ ನಿಂತಿದ್ದ.

ಹಂತಾऽಸ್ಮಿ ವೋ ಹ್ಯುಪಗತಾನುದಕಾಂತಮಸ್ಯಾ
ನದ್ಯಾಶ್ಚ ಮರ್ತ್ಯಚರಣಾಯ ನಿಷಿದ್ಧಕಾಲೇ ।
ಇತ್ಥಂ ವದಂತಮಮುಮಾಹ ಸುರೇಂದ್ರಸೂನು-
ರ್ಗಂಧರ್ವ ನಾಸ್ತ್ರವಿದುಷಾಂ ಭಯಮಸ್ತಿ ತೇऽದ್ಯ ॥ ೧೧೦ ॥

ಅ: ''ಮನುಷ್ಯ ಸಂಚಾರಕ್ಕೆ ವಿಹಿತವಲ್ಲದ ಈ ರಾತ್ರಿ ಕಾಲದಲ್ಲಿ ಈ ನದಿಯ ನೀರಿನ ಬಳಿಗೆ ಬಂದಿರುವ ನಿಮ್ಮನ್ನು ನಾನು ಕೊಂದುಹಾಕುವೆ'' ಎಂದು ನುಡಿಯುತ್ತಿದ್ದ ಅವನಿಗೆ ಇಂದ್ರಪುತ್ರನಾದ ಅರ್ಜುನ ನುಡಿದ ''ಗಂಧರ್ವ! ಅಸ್ತ್ರಬಲ್ಲ ನಮಗೆ ನಿನ್ನ ಭಯವಿಲ್ಲ''.

ವಿ: ಗಂಗೆಯನ್ನು ರಾತ್ರಿ ಕಾಲದಲ್ಲಿ ಸ್ಪರ್ಶಿಸಬಾರದು ಎಂಬ ಅವನ ಆಕ್ಷೇಪಕ್ಕೆ ಅರ್ಜುನ ತಕ್ಷಣ ಉತ್ತರಿಸಿದ್ದಾನೆ:

ಭುಕ್ತೋ ವಾऽಪ್ಯಥವಾ ಭುಕ್ತೋ ರಾತ್ರಾವಹನಿ ವೇ ಚರ ।
ನ ಕಾಲ ನಿಯಮೋ ಹ್ಯಸ್ತಿ ಗಂಗಾಂ ಪ್ರಾಪ್ಯ ಸರಿದ್ವರಾಮ್ ॥

ಉಂಡಿರಲಿ, ಹಸಿದಿರಲಿ, ಹಗಲಿರಲಿ, ರಾತ್ರಿಯಿರಲಿ ಗಂಗಾಸ್ನಾನಕ್ಕೆ ನಿರ್ಬಂಧವಿಲ್ಲ. ಮನುಷ್ಯರು ರಾತ್ರಿ ಸಂಚರಿಸಲು ನಿಷಿದ್ಧವಾದ ಕಾಲ ಎಂಬುದನ್ನು ಮಹಾಭಾರತ ಹೀಗೆ ಹೇಳಿದೆ:

'ಸಂಧ್ಯಾ ಸಂರಜ್ಯತೇ ಘೋರಾ ಪರ್ವರಾತ್ರಾಗಮೇಷು ಯಾ ।
ಅಶೀತಿತ್ರುಟಿಭಿರ್ಹೀನಾನ್ ತ್ರೀನ್ ಮುಹೂರ್ತಾನ್ ಪ್ರಚಕ್ಷತೇ ॥'

ಅದರಂತೆ ಮಧ್ಯರಾತ್ರಿ ಪ್ರಯಾಣ ನಿಷಿದ್ಧವೆಂದು ಭಾವ. ಆಚಾರ್ಯರು 'ಅರ್ಧರಾತ್ರೇ' ಎಂಬ ಪದದಿಂದ ಅದನ್ನು ತಿಳಿಸಿರುವರು. ಸುಮಧ್ವವಿಜಯದಲ್ಲಿ 'ಅಸ್ಮದ್ವಿಹಾರಸಮಯೇ'(೨/೩೪) ಎಂದಿರುವುದನ್ನು ಗಮನಿಸಬೇಕು.

ಸರ್ವಂ ಹಿ ಫೇನವದಿದಂ ಬಹುಲಂ ಬಲಂ ತೇ
ನಾರ್ಥಪ್ರದಂ ಭವತಿ ಚಾಸ್ತ್ರವಿದಿ ಪ್ರಯುಕ್ತಮ್ ।
ಇತ್ಯುಕ್ತವಂತಮಮುಮುತ್ತಮಯಾನಸಂಸ್ಥೋ
ಬಾಣಾನ್ ಕ್ಷಿಪನ್ನಭಿಸಸಾರ ಸುರೇಂದ್ರಭೃತ್ಯಃ ॥ ೧೧೧ ॥

ಅ: ''ನಿನ್ನ ಅಪಾರ ಬಲವೆಲ್ಲ ಅಸ್ತ್ರಜ್ಞರಲ್ಲಿ ಪ್ರಯೋಗಿಸಿದಾಗ ನೀರಿನ ಮೇಲಿನ ನೊರೆಯಂತೆ ವ್ಯರ್ಥವಾಗುವುದು'' ಎಂದು ಅರ್ಜುನ ನುಡಿದ. ಅವನ ಮೇಲೆ ಉತ್ತಮವಾದ ರಥದಲ್ಲಿ ಕುಳಿತಿದ್ದ ಇಂದ್ರಭೃತ್ಯನಾದ ಗಂಧರ್ವ ಬಾಣಗಳನ್ನು ಎಸೆಯುತ್ತಾ ಎದುರಿಸಿಬಂದ.

ಆಗ್ನೇಯಮಸ್ತ್ರಮಭಿಮಂತ್ರ್ಯ ತದೋಲ್ಮುಕೇ ಸ
ಚಿಕ್ಷೇಪ ಶಕ್ರತನಯೋಽಸ್ಯ ರಥಶ್ಚ ದಗ್ಧಃ ।
ತಂ ಚಾಗ್ನಿನಾ ಪರಿಗೃಹೀತಮಭಿಪ್ರಗೃಹ್ಯ
ಕೇಶೇಷು ಸಂಚಕರ್ಷಾಶು ಸುರೇಂದ್ರಸೂನುಃ ॥ ೧೧೨ ॥

ಅ: ಆಗ ಪಂಜಿನಲ್ಲಿ ಆಗ್ನೇಯಾಸ್ತ್ರವನ್ನು ಅಭಿಮಂತ್ರಿಸಿ ಅರ್ಜುನ ಅವನ ಮೇಲೆ ಎಸೆದ. ಆ ಗಂಧರ್ವನ ರಥ ಸುಟ್ಟು ಹೋಯಿತು. ಅಗ್ನಿ ಅವನಿಗೂ ಹೊತ್ತಿಕೊಂಡಿತು. ಅವನ ತಲೆಗೂದಲುಗಳನ್ನು ಹಿಡಿದು ಅರ್ಜುನ ಕೂಡಲೆ ಎಳೆದಾಡಿದ.

ವಿ: ಪಂಜಿನಲ್ಲಿ ಆಗ್ನೇಯಾಸ್ತ್ರವನ್ನು ಅಭಿಮಂತ್ರಿಸಿ ಎಸೆದಾಗ ಅದು ಅದ್ಭುತವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಅವನ ರಥವನ್ನು ಸುಟ್ಟು ಹಾಕಿತು. ಅವನ ಮೈಗೂ ಬೆಂಕಿ ತಗುಲಿತು. ಅರ್ಜುನ ಅವನನ್ನು ಹಿಡಿದು ಎಳೆಯತೊಡಗಿದ. ಅರ್ಜುನನ ಅಪಾರ ಅಸ್ತ್ರಕೌಶಲಕ್ಕೆ ಇದು ಮತ್ತೊಂದು ನಿದರ್ಶನ.

---

೧೧೨. ಚಶಬ್ದಾತ್ ಸ್ವಯಂ ಚ ದಗ್ಧ ಇತ್ಯರ್ಥಃ। – (ಜ.)

೧೧೨. ಸಂಚಕರ್ಷಾಶು ಸುರೇಂದ್ರಸೂನುರಿತ್ಯತ್ರ ಕರ್ಷಣಂ ಧರ್ಷಣಂ ಚ ಅಧಿಕಂ ನೇತಿ ಸೂಚನಾಯ ಉಭಯತ್ರಾಪಿ ವಿಶ್ಲಿಷ್ಟೋಚ್ಚಾರಣಮ್ ॥ – (ವಾ.)

೧೧೨. .... ಇತ್ಯುಕ್ತ್ವಾ ಪಾಂಡವಃ ಕ್ರುದ್ಧೋ ಗಂಧರ್ವಾಯ ಮುಮೋಚ ಹ।
ಪ್ರದೀಪ್ತಮಸ್ತ್ರಮಾಗ್ನೇಯಂ ದದಾಹಾಸ್ಯ ರಥಂ ತು ತತ್ ॥
ವಿರಥಂ ವಿಪ್ಲುತಂ ತಂ ತು ಸ ಗಂಧರ್ವಂ ಮಹಾಬಲಃ।
ಅಸ್ತತೇಜಃಪ್ರಮೂಢಂ ಚ ಪ್ರಪತಂತಮವಾಙ್ಮುಖಮ್ ॥
ಶಿರೋರುಹೇಷು ಜಗ್ರಾಹ ಮಾಲ್ಯವತ್ಸು ಧನಂಜಯಃ। – ಭಾರತ (ಆದಿ. ೧೬೯/೩೧-೩೩)

ಪಾರ್ಥೇನ ಸಂಧರ್ಷಿತಃ ಶರಣಂ ಜಗಾಮ
ಧರ್ಮಾತ್ಮಜಂ ತಮಪಿ ಸೋಽಥ ನಿಜಾಸ್ತ್ರಮುಗ್ರಮ್ ।
ಸಂಜಹ್ರ ಏವ ತತ ಆಸ ಚ ನಾಮತೋಽಸಾ-
ವಂಗಾರವರ್ಣ ಇತಿ ವರ್ಣವಿಪರ್ಯಯೇಣ ॥ ೧೧೩ ॥

ಅ: ಅರ್ಜುನನಿಂದ ಹಾಗೆ ಪರಾಭವಗೊಂಡ ಚಿತ್ರರಥ ಧರ್ಮರಾಜನನ್ನು ಅರ್ಜುನನನ್ನು ಶರಣುಹೊಕ್ಕ. ಆಗ ಅರ್ಜುನ ತನ್ನ ಉಗ್ರವಾದ ಅಸ್ತ್ರವನ್ನು ಹಿಂತೆಗೆದುಕೊಂಡ. ಚಿತ್ರರಥನ ಮೈಬಣ್ಣ ಪೂರ್ಣ ಬದಲಾದ್ದರಿಂದ ಅವನು ಅಂಗಾರವರ್ಣ ಎಂಬ ಹೆಸರನ್ನು ಪಡೆದ.

ವಿ: ಅರ್ಜುನ ಗಂಧರ್ವನನ್ನು ಬಹಳ ಮೆಲ್ಲಗೆ ಎಳೆದಾಡಿದ ಎಂಬುದನ್ನು ಸೂಚಿಸಲು **'ಸಂಚಕರ್ಷ'** ಮತ್ತು **'ಸಂಧರ್ಷಿತ'** ಎಂಬ ಶಿಥಿಲ ಪ್ರಯೋಗವನ್ನು ಬಳಸಿರುವರು ಎಂಬ ವಿವರಣೆ ವಾದಿರಾಜೀಯದಲ್ಲಿದೆ. ಆ ಗಂಧರ್ವ ಶರಣು ಹೊಕ್ಕಾಗ ಅರ್ಜುನ ಅಸ್ತ್ರವನ್ನು ಉಪಸಂಹರಿಸಿದ. ಚಿನ್ನದಂತೆ ಹೊಳೆಯುವ ಮೈಬಣ್ಣದ ಗಂಧರ್ವ ಆ ಅಸ್ತ್ರದಿಂದಾಗಿ ಚರ್ಮ ಸುಟ್ಟು ಕಪ್ಪುಬಣ್ಣದವನಾದ. ಅಂದಿನಿಂದ ಅವನಿಗೆ **ಅಂಗಾರವರ್ಣ** ಎಂದೇ ಹೆಸರಾಯಿತು. ಅಂಗಾರ ಎಂಬುದಕ್ಕೆ ಉರಿಯುವ ಬೆಂಕಿ ಮತ್ತು ಆರಿದ ಬೆಂಕಿ ಎಂಬ ಎರಡು ಅರ್ಥಗಳು ಉಂಟು. ಮೊದಲು ಅವನು ಉರಿಯುವ ಬೆಂಕಿಯಂತೆ ಹೊಳೆಯುವ ಮೈಬಣ್ಣವನ್ನು ಹೊಂದಿದ್ದರಿಂದಾಗಿ ಅಂಗಾರವರ್ಣ ಎನ್ನಿಸಿದ್ದರೆ, ಈಗ ಆರಿದ ಇದ್ದಲಿನಂತಹ ಕಪ್ಪಾದ ಮೈಬಣ್ಣವನ್ನು ಹೊಂದಿದ್ದರಿಂದ ಅಂಗಾರವರ್ಣ ಎನ್ನಿಸಿದ ಎಂದು ತಿಳಿಯಬೇಕು.

ಗಂಧರ್ವನಿಗೆ ಅರ್ಜುನನಿಂದ ಆಗ್ನೇಯಾಸ್ತ್ರದ ಉಪದೇಶ

ಗಂಧರ್ವ ಉಲ್ಬಣಸುರಕ್ತತನುಃ ಸ ಭೂತ್ವಾ
ಸ್ವರ್ಣಾವದಾತ ಉತ ಪೂರ್ವಮುಪೇತ್ಯ ಸಖ್ಯಮ್ ।
ಪಾರ್ಥೇನ ದುರ್ಲಭಮಹಾಸ್ತ್ರಮಿದಂ ಯಯಾಚೇ
ಜಾನನ್ನಪಿ ಸ್ಮ ನ ಹಿ ತಾದೃಶಮೇಷ ವೇದ ॥ ೧೧೪ ॥

---

೧೧೩. ತ್ವಯಾ ಜಿತೋಽಹಂ ಜನಸಂಸದಿ ನ ಶ್ಲಾಘ್ಯಂ ಯಶೋಹೀನಂ ಚ ಚಿತ್ರರಥ ಇತಿ ಪೂರ್ವಕಂ ನಾಮ ಮುಂಚಾಮಿ । ತ್ವದಸ್ತ್ರೇಣ ದಗ್ಧರಥಸ್ಯ ಮಮ ಚಿತ್ರರಥತ್ವಂ ಹಾಸ್ಯಮಿತಿ ಭಾವಃ । ಸ್ವನಾಮ್ನಾ ಅಂಗಾರವರ್ಣತಾಂ ಅಂಗಾರವರ್ಣಾಖ್ಯತಾಂ ನ ಮುಂಚಾಮೀತ್ಯರ್ಥಾನುಸಾರಾನ್ನಞಧ್ಯಾಹಾರೇಣ ಕ್ರಿಯಾವೃತ್ತಿಃ । – ಲಕ್ಷಾಲಂಕಾರ

ಅ: ಆ ಗಂಧರ್ವ ಹಿಂದೆ ಕಡುಕೆಂಪಾದ ಮೈಯ್ಯವನಾಗಿದ್ದು ಚಿನ್ನದಂತೆ ಸ್ವಚ್ಛವರ್ಣ-ದವನಾಗಿದ್ದ. ಬಳಿಕ ಅರ್ಜುನನೊಂದಿಗೆ ಸಖ್ಯ ಹೊಂದಿ ದುರ್ಲಭವಾದ ಆ ಮಹಾಸ್ತ್ರವನ್ನು ತನಗೂ ತಿಳಿಸಿಕೊಡಲು ಬೇಡಿದ. ಅವನಿಗೆ ಆಗ್ನೇಯಾಸ್ತ್ರ ತಿಳಿದಿದ್ದಿತಾದರೂ ಅಂತಹುದು ತಿಳಿದಿರಲಿಲ್ಲ.

ವಿ: ೧) ಇದರಲ್ಲಿ ಗಂಧರ್ವನ ಮುಂಚಿನ ಮೈಬಣ್ಣ ಚಿನ್ನದಂತೆ ಹೊಳೆಯುವ ಮೈಬಣ್ಣ ಎಂಬ ವಿವರ ಬಂದಿದೆ. ಅರ್ಜುನ ಪ್ರಯೋಗಿಸಿದ ಆಗ್ನೇಯಾಸ್ತ್ರ ಎಲ್ಲರಿಗೂ ತಿಳಿದಿದ್ದ ಆಗ್ನೇಯಾಸ್ತ್ರವೇ. ಗಂಧರ್ವನಿಗೂ ಅದು ತಿಳಿದಿತ್ತು, ಆದರೆ ಅರ್ಜುನ ಪ್ರಯೋಗಿಸಿದ ಅಸ್ತ್ರ ವೈಖರಿ ಅವನಿಗೆ ಆಶ್ಚರಿ ಹುಟ್ಟಿಸಿತ್ತು, ಅದೊಂದು ಪ್ರತ್ಯೇಕವಾದ ಮಹಾಸ್ತ್ರವೆಂಬಂತಹ ಕಾರ್ಯವನ್ನು ಮಾಡಿತ್ತು, ಅದಕ್ಕಾಗಿ ಆ ಗಂಧರ್ವ ಅದನ್ನು ತನಗೆ ತಿಳಿಸಿಕೊಡಲು ಕೇಳಿಕೊಂಡ ಎಂದರ್ಥ.

೨) ಏಕಲವ್ಯ ಬೊಗಳುವ ನಾಯಿಯ ಬಾಯಿಯಲ್ಲಿ ಗಾಯವಾಗದಂತೆ ಬಾಣಗಳನ್ನು ತುಂಬಿಸಿದ್ದ ವಿವರ ಹಿಂದೆ ಬಂದಿದೆ. ಅರ್ಜುನ ಇಲ್ಲಿ ಗಂಧರ್ವನ ಹೊರಚರ್ಮ ಮಾತ್ರ ಸುಡುವಂತೆ ಬಾಣ ಪ್ರಯೋಗಿಸಿ ಒಳಗೆ ಯಾವುದೇ ರೀತಿಯಲ್ಲೂ ಅದು ಹರಡದಂತೆ ನೋಡಿಕೊಂಡಿದ್ದ. ಏಕಲವ್ಯನಿಗಿಂತ ಮಿಗಿಲಾದ ಅಸ್ತ್ರಕೌಶಲ ಅರ್ಜುನನದು ಎಂಬುದು ಇಲ್ಲಿ ಸ್ಫುಟಪಡುವುದು.

ವಿದ್ಯಾ ಸುಶಿಕ್ಷಿತತಮಾ ಹಿ ಸುರೇಂದ್ರಸೂನೌ
ತಾಮಸ್ಯ ಚಾವದದಸಾವಪಿ ಕಾಲತೋಽಸ್ಮೈ ।
ಗಂಧರ್ವಗಾಮವದದನ್ವಗದೃಶ್ಯವಿದ್ಯಾಂ
ಪಶ್ಚಾದಿತಿ ಸ್ಮ ಪುರುಹೂತಸುತಸ್ಯ ವಾಕ್ಯಾತ್ ॥ ೧೧೫ ॥

---

೧೧೪. ಸ್ವರ್ಣಾವದಾತ ಇತ್ಯತ್ರ ಪೂರ್ವಂ ಸ್ವರ್ಣಾವದಾತಃ ಉತ ಸ್ವರ್ಣವತ್ ಸ್ವಚ್ಛವರ್ಣಶ್ಚ ಸಃ ಗಂಧರ್ವಃ ಇದಾನೀಮುಲ್ಬಣಸುರಕ್ತತನುರ್ಭೂತ್ವಾ ಪಾರ್ಥೇನ ಸಖ್ಯಮುಪೇತ್ಯೇತಿ ಯೋಜನಾ ॥ – (ವಾ.)

೧೧೪. ಅಗ್ನ್ಯಸ್ತ್ರಮಿತಿ ಶೇಷಃ । – (ವ.)

೧೧೫. ಅಸಾವಪಿ ಕಾಲತೋಽಸ್ಮಾ ಇತ್ಯತ್ರ ಪಶ್ಚಾತ್ = ಕಾಲಾಂತರೇ ಭವಿಷ್ಯತೀತಿ ಪುರುಹೂತಸುತಸ್ಯ ವಾಕ್ಯಾತ್ ಅಸೌ = ಗಂಧರ್ವೋಽಪಿ ಕಾಲತಃ = ಕಿಂಚಿತ್ಕಾಲಾತ್ ಅನ್ವಕ್ = ಅನಂತರಂ ಗಂಧರ್ವಗಾಂ = ಅದೃಶ್ಯವಿದ್ಯಾಂ ಅಸ್ಮೈ = ಅರ್ಜುನಾಯ ಅವದದಿತಿ ಯೋಜನಾ ॥ – (ವಾ.)

೧೧೫. ಅನ್ವಗನುಕೂಲತಯಾ – (ವೇ., ಜ.)

ಅ: ಅರ್ಜುನನಿಗೆ ವಿದ್ಯೆ ಅತ್ಯಂತ ಮಿಗಿಲಾಗಿ ಸಿದ್ಧಿಸಿತ್ತು. ಅದನ್ನು ಅವನು ಗಂಧರ್ವನಿಗೆ ಉಪದೇಶಿಸಿದ. ಅವನೂ ಸಹ ಮುಂದೊಂದು ಸಮಯದಲ್ಲಿ ಅರ್ಜುನನಿಗೆ ಗಂಧರ್ವರಲ್ಲಿನ ಅದೃಶ್ಯ ವಿದ್ಯೆಯನ್ನು ನೀಡಿದ. ಆಗಲೇ ಬೇಡ ಮುಂದೊಮ್ಮೆ ಎಂದು ಅರ್ಜುನ ಹೇಳಿದ್ದರಿಂದಾಗಿ ಅವನು ಆಗ ನೀಡಲಿಲ್ಲ.

ವಿ: ೧) ಅರ್ಜುನ ಅಸ್ತ್ರವಿದ್ಯೆಯನ್ನು ವಿಶೇಷವಾಗಿ ಸಾಧಿಸಿ ಅಪಾರ ನೈಪುಣ್ಯವನ್ನು ಗಳಿಸಿದ್ದ. ಆಗ್ನೇಯಾಸ್ತ್ರವೂ ಅವನಿಗೆ ಹಾಗೆಯೇ ಸಿದ್ಧಿಸಿತ್ತು. ಇದು 'ಅಭ್ಯಾಸಾನುಸಾರಿಣೀ ವಿದ್ಯಾ' ಎಂಬ ಮಾತಿಗೆ ನಿದರ್ಶನ. ವಿದ್ಯೆಯ ಗುಣಮಟ್ಟ ಹೆಚ್ಚುವುದು ಅದನ್ನು ಅಭ್ಯಾಸ ಮಾಡುವ ಕ್ರಮದ ಮೂಲಕ ಎಂದರ್ಥ. ಅರ್ಜುನನಲ್ಲಿ ಇದು ಸ್ಪಷ್ಟವಾಗಿ ಕಂಡಿದೆ. ಮಂತ್ರೋಪದೇಶವೂ ಅದರಂತೆಯೇ, ವಿಶೇಷರೀತಿಯಲ್ಲಿ ಜಪ ಮಾಡಿದವರಿಗೆ ಬರುವ ಮಂತ್ರಸಿದ್ಧಿ ಅಪಾರ. ಅಂಥವರು ಮಂತ್ರೋಪದೇಶ ಮಾಡಿದಾಗ ಉಪದೇಶ ಹೊಂದುವವರಿಗೂ ವಿಶೇಷ ಸಿದ್ಧಿ ಲಭಿಸಲು ಸಾಧ್ಯವಾಗುವುದು ಎಂದು ತಿಳಿಯಬೇಕು.

೨) ಅರ್ಜುನ ಹಾಗೆ ಆಗ್ನೇಯಾಸ್ತ್ರವನ್ನು ಉಪದೇಶಿಸಿದಾಗ ಆ ಗಂಧರ್ವ ಅದಕ್ಕೆ ಪ್ರತಿಯಾಗಿ ಗಂಧರ್ವರ ಅದೃಶ್ಯ ವಿದ್ಯೆಯನ್ನು ಉಪದೇಶಿಸಲು ಬಯಸಿದ ಆದರೆ ಅರ್ಜುನ ''ಅದೀಗ ಬೇಡ, ಮುಂದೊಮ್ಮೆ ಹೇಳುವೆಯಂತೆ'' ಎಂದು ಹೇಳಿ ಆಗ ಉಪದೇಶ ಹೊಂದಲು ಬಯಸಲಿಲ್ಲ. ಮುಂದೆ ಅದನ್ನು ಅರ್ಜುನ ವನಪರ್ವದಲ್ಲಿ ಇಂದ್ರಲೋಕಕ್ಕೆ ತೆರಳಿದ್ದಾಗ ಅವನಿಂದ ಕಲಿತ ಎಂಬ ವಿವರ ಮುಂದೆ ಬಂದಿದೆ (೨೨/೧೪೯). ಆ ಗಂಧರ್ವ ವಿದ್ಯೆಯನ್ನು **ಚಾಕ್ಷುಷೀ**ವಿದ್ಯೆಯೆಂದು [+]ಮಹಾಭಾರತ ಕರೆದಿದೆ. ಒಂದೆಡೆ ಕುಳಿತೇ ಮೂರು ಲೋಕದಲ್ಲಿನ ಯಾವುದೇ ವಸ್ತುವನ್ನು ಕಾಣಲು ಸಾಧ್ಯಮಾಡಿಕೊಡುವ ವಿದ್ಯೆಯೆಂಬುದು ಆದರ ಹಿರಿಮೆ.

ಆಧಿಕ್ಯತಃ ಸ್ವಗತಸಂವಿದ ಏವ ಸಾಮ್ಯೇ
ನೈವೇಚ್ಛತಿ ಸ್ಮ ನಿಮಯಂ ಸ ಧನಂಜಯೋಽತ್ರ ।
ಧರ್ಮಾರ್ಥಮೇವ ಸ ತು ತಾಂ ಪರಿದಾಯ ತಸ್ಮೈ
ಕಾಲೇನ ಸಂವಿದಮಮುಷ್ಯ ಚ ಧರ್ಮತೋಽಯಾತ್ ॥ ೧೧೬ ॥

+ ಚಾಕ್ಷುಷೀ ನಾಮ ವಿದ್ಯೇಯಂ ಯಾಂ ಸೋಮಾಯ ದದೌ ಮನುಃ । ...
ಯಚ್ಚಕ್ಷುಷಾ ದ್ರಷ್ಟುಮಿಚ್ಛೇತ್ ತ್ರಿಷು ಲೋಕೇಷು ಕಿಂಚನ ।
ತತ್ ಪಶ್ಯೇದ್ ಯಾದೃಶಂ ಚೇಚ್ಛೇತ್ ತಾದೃಶಂ ದ್ರಷ್ಟುಮರ್ಹತಿ ॥ – ಭಾರತ (ಆದಿ. ೧೬೯/೪೩, ೪೫)

ಅ: ತನ್ನಲ್ಲಿನ ವಿದ್ಯೆ ಅವನ ವಿದ್ಯೆಗಿಂತ ಮಿಗಿಲಾದ್ದರಿಂದ ಸಾಮ್ಯವಿದ್ದಲ್ಲಿ ಮಾತ್ರ ಮಾಡಬಹುದಾದಂತಹ ಅಂತಹ ವಿನಿಮಯಕ್ಕೆ ಅರ್ಜುನ ಸಮ್ಮತಿಸಲಿಲ್ಲ. ಅದರಿಂದ ಕೇವಲ ಪುಣ್ಯಕ್ಕೋಸ್ಕರವಾಗಿ ಅರ್ಜುನ ತನ್ನ ವಿದ್ಯೆಯನ್ನು ಅವನಿಗೆ ನೀಡಿ, ಅವನ ವಿದ್ಯೆಯನ್ನು ಧರ್ಮಾರ್ಥವಾಗಿಯೇ ಮುಂದೊಂದು ಕಾಲದಲ್ಲಿ ಪಡೆದ.

ವಿ: ೧) ಅರ್ಜುನ ಆಗ ತನ್ನ ವಿದ್ಯೆಗೆ ಪ್ರತಿಯಾಗಿ ಅವನ ಅದೃಶ್ಯ ವಿದ್ಯೆಯನ್ನು ಪಡೆಯಲು ಒಪ್ಪದಿದ್ದುದಕ್ಕೆ ಕಾರಣವನ್ನು ಇಲ್ಲಿ ಹೇಳಲಾಗಿದೆ. ಎರಡು ವಿದ್ಯೆಗಳು ಪರಸ್ಪರ ಸಮಾನವಾಗಿದ್ದರೆ ಅಂತಹ ವಿನಿಮಯ ಉಚಿತ, ಇಲ್ಲವಾದಾಗ ಅಂತಹ ವಿನಿಮಯ ಯೋಗ್ಯವಲ್ಲ; ಇಲ್ಲಿ ನಡೆದದ್ದೂ ಹಾಗೆಯೇ. ಅರ್ಜುನ ನೀಡಿದ ವಿದ್ಯೆ ಗಂಧರ್ವ ನೀಡಿದ ವಿದ್ಯೆಗಿಂತ ತುಂಬಾ ಮಿಗಿಲಾದದ್ದು; ಪರಸ್ಪರ ವಿನಿಮಯ ಮಾಡಿಕೊಂಡಲ್ಲಿ ವಿದ್ಯೆಯ ಬೆಲೆಗೆ ಸರಿಯಾದ ಮಹತ್ವ ಬರದೇ ಹೋಗುವುದು. ಚಿನ್ನದ ಹಾರವನ್ನು, ಬೆಳ್ಳಿಯ ಹಾರಕ್ಕೆ ಪ್ರತಿಯಾಗಿ ಮತ್ತೊಂದನ್ನು ವಿನಿಮಯ ಮಾಡಿಕೊಳ್ಳುವುದು ಉಚಿತವಾಗದಲ್ಲವೇ?. ಆದರಿಂದ ಅರ್ಜುನ ಚಿತ್ರರಥ ಹೇಳಿದರೂ ಅದಕ್ಕೆ ಒಪ್ಪದೇ ಕೇವಲ ವಿದ್ಯೋಪದೇಶದ ಪುಣ್ಯಕ್ಕಾಗಿ ತನ್ನ ವಿದ್ಯೆಯನ್ನು ಅವನಿಗೆ ನೀಡಿದ.

೨) ಆದರಂತೆ ಮುಂದೆ ಅವನು ನೀಡಿದ ವಿದ್ಯೆಯನ್ನು ಕೇವಲ ಪುಣ್ಯ ಕಾರ್ಯವನ್ನಾಗಿಯೇ ಸ್ವೀಕರಿಸಿದ. ಈ ಮೂಲಕ ಅರ್ಜುನ ಜಗತ್ತಿಗೆ ವಿನಿಮಯ ತತ್ವದ ಹಿನ್ನೆಲೆಯನ್ನು ಸಾರಿದಂತಾಯಿತು ಎಂದು ತಿಳಿಯಬೇಕು. ಅಪೂರ್ವವಾದ ಶಾಸ್ತ್ರಜ್ಞಾನವನ್ನು ಅಲ್ಪವಾದ ಲೌಕಿಕ ಪ್ರಯೋಜನಕ್ಕೆ ಬಳಸಿಕೊಳ್ಳುವ ಜನ ಇದನ್ನು ಅರಿತಲ್ಲಿ ವಿದ್ಯೆ ಸಾರ್ಥಕವಾದೀತು. ಸುಮಧ್ವವಿಜಯದಲ್ಲಿ ಅಪೂರ್ವವಾದ ಬಲಮುರಿ ಶಂಖವೊಂದನ್ನು ಕೇವಲ ದ್ರವ್ಯದಾಸೆಯಿಂದ ಮಾರಿದವನ ಪ್ರಸಂಗ ಅವಿವೇಕದ್ದು ಎಂದು ತಿಳಿಯಬೇಕು. ಆದಕ್ಕೆಂದೇ ಸಾಲಿಗ್ರಾಮಾದಿಗಳನ್ನು ಹಣಕ್ಕೆ ಮಾರಕೂಡದು ಎಂದು ಮಾರುವವರಿಗೂ, ಕೊಳ್ಳಕೂಡದು ಎಂದು ಕೊಳ್ಳುವವರಿಗೂ ಶಾಸ್ತ್ರ ಎಚ್ಚರ ನೀಡಿದೆ.

---

೧೧೬. ತತ್ರ ನಿಮಿತ್ತಮಾಹ ಆಧಿಕ್ಯತ ಇತಿ। ಸಃ = ಧನಂಜಯಃ ಸ್ವಗತಸಂವಿದಃ ಆಧಿಕ್ಯತಃ = ಆಧಿಕ್ಯಾದ್ಧೇತೋಃ। ಸಾಮ್ಯ ಏವ ನಿಮಯಂ ಕರ್ತುಂ ಯೋಗ್ಯಮ್। ವಿನಿಮಯಂ ಸ್ವಕೀಯಂ ದತ್ವಾ ಪರಕೀಯಗ್ರಹಣಮಿತ್ಯರ್ಥಃ। ನೈವೇಚ್ಛತಿ ಸ್ಮ ಸಃ = ಅರ್ಜುನಃ। ಅತ್ರ = ಅಸ್ಮಿನ್ ಸಮಯೇ ಧರ್ಮಾರ್ಥಮೇವ = ಪ್ರತ್ಯುಪಕಾರಂ ವಿನಾ ದಾನೇನ ಸ್ವಸ್ಯ ಪುಣ್ಯಸಿದ್ಧ್ಯರ್ಥಮೇವ। ತಾಂ = ಅಗ್ನಿವಿದ್ಯಾಂ ತಸ್ಮೈ ಪರಿದಾಯ ಅಮುಷ್ಯ = ಗಂಧರ್ವಸ್ಯ ಧರ್ಮತಃ= ಪುಣ್ಯಾಯ। ಯತೇರ್ಭಿಕ್ಷಾದಾತುರ್ಗ್ರಹಸ್ಥಸ್ಯೇವ ಸ್ವಸ್ಯಾಸ್ತ್ರದಾನೇನ ತಸ್ಯೈವ ಪುಣ್ಯದಾನಾಯೇತಿ ಯಾವತ್। ಕಾಲೇನ= ಕಾಲಾಂತರೇಣ ಸಂವಿದಂ= ಅಸ್ತ್ರಂ ದಿಶಾಮೀತಿ ಗಂಧರ್ವವಾಚಂ ಅಯಾತ್= ಪ್ರಾಪ। ವಿನಿಮಯೋ ಹಿ ಸಾಮ್ಯೇ ಸತ್ಯೇವ ಸ್ಯಾತ್। ತಚ್ಚ ಗಂಧರ್ವಾದುತ್ತಮಸ್ಯಾರ್ಜುನಸ್ಯ ನಾಸ್ತಿ। ಏಕಂ ತಸ್ಮೈ ದತ್ವಾ ತಸ್ಮಾದೇಕಸ್ಯ ಗ್ರಹಣೇ ವಣಿಜ ಇವ ಪುಣ್ಯಂ ಚ ನಾಸ್ತಿ। ಅತೋ ಹೇತುದ್ವಯೇನಾಪಿ ವಿನಿಮಯಂ ನೈಚ್ಛದಿತಿ ಭಾವಃ ॥ – (ವಾ.)

೧೧೬. ಅತ್ರ ಗಂಧರ್ವಸ್ವವಿದ್ಯಯೋಃ ನಿಮಯಂ ದಾನಾದಾನರೂಪಂ ವ್ಯತ್ಯಾಸಂ ನೈವೇಚ್ಛತಿ ಸ್ಮ। – (ಜ.)

ಪಾಂಡವ ಪುರೋಹಿತರಾಗಿ ಧೌಮ್ಯರು

ಪಾರ್ಥೇನ ಸೋಽಪಿ ಬಹುಲಾಶ್ಚ ಕಥಾಃ ಕಥಿತ್ವಾ
ಧೌಮ್ಯಸ್ಯ ಸಂಗ್ರಹಣಮಾಹ ಪುರೋಹಿತತ್ವೇ ।
ದಾಸ್ಯಾಮಿ ದಿವ್ಯತುರಗಾನಿತಿ ಸೋಽರ್ಜುನಾಯ
ವಾಚಂ ನಿಗದ್ಯ ದಿವಮಾರುಹದಪ್ಯಗುಸ್ತೇ ॥ ೧೧೭ ॥

ಅ: ಪಾರ್ಥನೊಂದಿಗೆ ಚಿತ್ರರಥ ಬಗೆಬಗೆಯ ಕಥೆಗಳನ್ನು ತಿಳಿಸಿ ಧೌಮ್ಯರನ್ನು ಪೌರೋಹಿತ್ಯ ಕಾರ್ಯಕ್ಕೆ ನಿಯೋಜಿಸಿಕೊಳ್ಳಲು ತಿಳಿಸಿದ; ಮುಂದೊಮ್ಮೆ ದಿವ್ಯವಾದ ಕುದುರೆಗಳನ್ನು ನೀಡುವೆ ಎಂದು ಅರ್ಜುನನಿಗೆ ಮಾತುಕೊಟ್ಟು ದೇವಲೋಕಕ್ಕೆ ತೆರಳಿದ. ಪಾಂಡವರು ಮುಂದೆ ಸಾಗಿದರು.

ವಿ: ಮಾತನಾಡುವಾಗ ಚಿತ್ರರಥ ಅರ್ಜುನನನ್ನು ತಾಪತ್ಯ ಎಂದು ಸಂಬೋಧಿಸುತ್ತಾನೆ. ಅರ್ಜುನ ಅದಕ್ಕೆ ಕಾರಣವನ್ನು ತಿಳಿಯಬಯಸಿದಾಗ ವಸಿಷ್ಠಾಖ್ಯಾನ ತಪತಿಸಂವರ್ಣರ ಕಥೆ ಮೊದಲಾದ ಅನೇಕ ಅಪೂರ್ವ ಉಪಾಖ್ಯಾನಗಳನ್ನು ಅವನಿಗೆ ತಿಳಿಸುತ್ತಾನೆ; ಇವನ್ನು ಶ್ರೀಮದಾಚಾರ್ಯರು **'ಬಹುಲಾಶ್ಚ ಕಥಾಃ ಕಥಿತ್ವಾ'** ಎಂಬ ಪದಗಳಿಂದ ಸೂಚಿಸಿರುವರು. ಕೌರವರ ಮೂಲಪುರುಷನಾದ ಕುರುರಾಜ ಆ ತಪತಿ ಸಂವರ್ಣರ ಮಗ, ತಪತಿ ಸೂರ್ಯಪುತ್ರಿ. ಅದನ್ನೆಲ್ಲ ತಿಳಿಸುತ್ತಾ ರಾಜರು 'ತಮ್ಮ ಯಶಸ್ಸಿಗಾಗಿ ಒಬ್ಬ ಉತ್ತಮ ಪುರೋಹಿತನನ್ನು ಹೊಂದುವುದು ಕರ್ತವ್ಯವಾದ್ದರಿಂದ ದೇವಲಮುನಿಯ ತಮ್ಮನಾದ ಧೌಮ್ಯಮುನಿಯನ್ನು ಪುರೋಹಿತರನ್ನಾಗಿ ಮಾಡಿಕೊಳ್ಳಲು ತಿಳಿಸಿ ಅಲ್ಲಿಂದ ತೆರಳಿದ.

ತೇ ಧೌಮ್ಯಮಾಪ್ಯ ಚ ಪುರೋಧಸಮುತ್ತಮಜ್ಞಂ
ವಿಪ್ರಾತ್ಮಜೋಪಮತಯಾ ವಿವಿಶುಃ ಪುರಂ ಚ ।
ಪಾಂಚಾಲಕಸ್ಯ ನಿಖಿಲಾಂ ದದೃಶುಶ್ಚ ತೇಽತ್ರ
ಮೂರ್ಧಾಭಿಷಿಕ್ತಸಮಿತಿಂ ಸಮಲಂಕೃತಾಂ ಚ ॥ ೧೧೮ ॥

---

೧೧೭. ಬಹುಲಾಶ್ಚ ಕಥಾಃ ಕಥಿತ್ವೇತ್ಯತ್ರ ಕಥಾಃ= ಪುರೋಹಿತಸಂಗ್ರಹಾಯ ಸಂವರಣಾಖ್ಯನೃಪಸ್ಯ ಕಥಾ ಇತ್ಯರ್ಥಃ ॥ – (ವಾ.)

ಅ: ಪಾಂಡವರು ಉತ್ತಮ ಜ್ಞಾನಿಯಾದ ಧೌಮ್ಯನನ್ನು ಪುರೋಹಿತನನ್ನಾಗಿ ಮಾಡಿಕೊಂಡು ಬ್ರಾಹ್ಮಣ ಪುತ್ರರ ವೇಷದಲ್ಲಿ ಪಾಂಚಾಲಪುರವನ್ನು ಹೊಕ್ಕರು. ಅಲ್ಲಿ ಚೆನ್ನಾಗಿ ಅಲಂಕೃತವಾಗಿದ್ದ ಸಕಲ ರಾಜರುಗಳ ಸಮೂಹವನ್ನು ಕಂಡರು.

ವಿ: ಪಾಂಡವರು ಚಿತ್ರರಥ ಹೇಳಿದಂತೆ ಧೌಮ್ಯರನ್ನು ಅಗ್ನಿಸಾಕ್ಷಿಕರಾಗಿ ಪುರೋಹಿತರನ್ನಾಗಿ ಮಾಡಿಕೊಂಡು ಪಾಂಚಾಲನಗರವನ್ನು ಸೇರಿ ಅಲ್ಲಿ ಒಬ್ಬ ಕುಂಬಾರನ ಮನೆಯಲ್ಲಿ ನೆಲೆಸಿದರು. ಕೆಲವು ದಿನ ಕಳೆಯುತ್ತಿದ್ದಂತೆ ಸ್ವಯಂವರದ ದಿನ ಬಂದಿತು. ಅಂದು ಸ್ವಯಂವರ ಮಂಟಪದಲ್ಲಿ ಸಕಲ ರಾಜರು ವೈಭವದ ವೇಷಭೂಷಣಗಳೊಂದಿಗೆ ನೆರೆದಿದ್ದರು. ಪಾಂಡವರು ಸಹ ಅಲ್ಲಿಗೆ ತೆರಳಿದರು.

ದ್ರೌಪದೀ ಸ್ವಯಂವರದ ನಿಬಂಧನೆ

ರಾಜನ್ಯಮಂಡಲಮುದೀಕ್ಷ್ಯ ಸುಪೂರ್ಣಮತ್ರ
ಕೃಷ್ಣಾಂ ಪ್ರಗೃಹ್ಯ ಸಹಜಃ ಪ್ರಗೃಹೀತಮಾಲಾಮ್ ।
ತೇಷಾಂ ಚ ಮಧ್ಯಮಗಮತ್ ಕುಲವೀರ್ಯಸಂಪ-
ದ್ಯುಕ್ತಾಂ ವಿಭೂತಿಮಥ ಚಾಹ ಸಮಸ್ತರಾಜ್ಞಾಮ್ ॥ ೧೧೯ ॥

ಅ: ಧೃಷ್ಟದ್ಯುಮ್ನ ಕಿಕ್ಕಿರಿದು ತುಂಬಿದ್ದ ರಾಜರುಗಳ ಗುಂಪನ್ನು ಕಂಡು ಕೈಯಲ್ಲಿ ಮಾಲೆ ಹಿಡಿದಿದ್ದ ತಂಗಿ ದ್ರೌಪದಿಯನ್ನು ಕರೆದುಕೊಂಡು ಅವರ ಮಧ್ಯಕ್ಕೆ ತೆರಳಿದ. ಕುಲ, ಬಲ ಮೊದಲಾದ ಸಂಪತ್ತಿನಿಂದ ಕೂಡಿದ ಎಲ್ಲ ರಾಜರುಗಳ ವೈಭವವನ್ನು ಅವಳಿಗೆ ಬಣ್ಣಿಸಿದ.

---

೧೧೮. ಮೂರ್ಧಾಭಿಷಿಕ್ತಸಮಿತಿಂ= ರಾಜಸಭಾಮ್। 'ಮೂರ್ಧಾಭಿಷಿಕ್ತೋ ರಾಜನ್ಯ' ಇತ್ಯನುಶಾಸನಮ್॥ – (ವಾ.)

೧೧೮. ಉತ್ತಮಶ್ಚಾಸೌ ಜ್ಞಶ್ಚ ಉತ್ತಮಜ್ಞಃ। ತಮ್ । – (ತಾ.)

೧೧೮. ಸಖೀವರಣವತ್ ಪುರೋಹಿತವರಣಮಪಿ ಹೋಮಪೂರ್ವಕಂ ಕರ್ತವ್ಯಮಿತಿ ಸೂಚನಾಯ ಸಮಿತ್ಯುಪ-ಸರ್ಗಃ। 'ಸಖ್ಯಂ ಚಕಾರ ಹುತಭುಕ್ಮುಖೇ ಚ ತಸ್ಯ' ಇತ್ಯುಕ್ತತ್ವಾತ್ (೬/೨)। – (ರಾ.)

೧೧೮. 'ತೇ ಧೌಮ್ಯಮಾಪ' ಇತ್ಯತ್ರ ಹೋಮಪೂರ್ವಕಂ ಪುರೋಧಸಮಾಪ್ಯೇತಿ ಸೂಚನಾಯ ಚಶಬ್ದಃ। – (ರಾ.)

೧೧೯. ಪ್ರಗೃಹೀತಮಾಲಾಮಿತ್ಯತ್ರ ಪ್ರಗೃಹೀತರುದ್ರದತ್ತಾಮ್ಲಾನನವಕಂಜಮಾಲಾಮಿತ್ಯರ್ಥಃ (೧೧/೧೦೨) ॥ – (ವಾ.)

೧೧೯. ಕುಲವೀರ್ಯಸಂಪದ್ಯುಕ್ತಾಂ ವಿಭೂತಿಮಿತ್ಯಸ್ಯ ಕುಲಂ ಚ ವೀರ್ಯಂ ಚ ಧನಾದಿಸಂಪಚ್ಚ ತಾಭಿರ್ಯುಕ್ತಾಂ ಗಜತುರಗಾದ್ಯೈಶ್ವರ್ಯಮಿತ್ಯರ್ಥಃ। – (ಸ.)

ವಿ: ಸ್ವಯಂವರದ ದಿನ ಧೃಷ್ಟದ್ಯುಮ್ನ ತಂಗಿ ದ್ರೌಪದಿಯನ್ನು ರಾಜ ಸಭೆಯ ಮಧ್ಯೆ ಕರೆತಂದು ಎಲ್ಲರ ಪರಿಚಯವನ್ನೂ ಅವಳಿಗೆ ಮಾಡಿಸಿದ ಎಂದರ್ಥ. ದ್ರೌಪದಿ ಕೈಯಲ್ಲಿ ಹಿಡಿದಿದ್ದ ಮಾಲೆ ಹಿಂದೆ ಹೇಳಿದಂತೆ ಅಂಬೆಗೆ ರುದ್ರದೇವರು ಅನುಗ್ರಹಿಸಿದ್ದ ಸದಾ ಅರಳಿದ ಕಮಲಪುಷ್ಪಗಳ ಮಾಲೆಯಾಗಿತ್ತು.

ತಾಂಶ್ಚ ಪ್ರದರ್ಶ್ಯ ಸಕಲಾನ್ ಸ ಹುತಾಶನಾಂಶ-
ಶ್ಚಾಪಂ ಚ ತತ್ ಪ್ರತಿನಿಧಾಯ ಸಪಂಚಬಾಣಮ್ ।
ಆಹಾಭಿಭಾಷ್ಯ ಸಕಲಾನ್ ನೃಪತೀಂಸ್ತಥೋಚ್ಚೈಃ
ದೀಪ್ಯದ್ಧುತಾಶನವಪುರ್ಘನತುಲ್ಯಘೋಷಃ ॥ ೧೨೦ ॥

ಅ: ಎಲ್ಲರನ್ನೂ ದ್ರೌಪದಿಗೆ ತೋರಿಸಿ ಐದು ಬಾಣಗಳೊಂದಿಗೆ ಆ ಬಿಲ್ಲನ್ನು ತಂದಿರಿಸಿ, ಎಲ್ಲ ರಾಜರನ್ನೂ ಕುರಿತು ಜ್ವಲಿಸುವ ಅಗ್ನಿಯಂತೆ ಹೊಳೆಯುವ ಶರೀರವುಳ್ಳವನೂ, ಮೇಘದಂತೆ ಗಂಭೀರ ಧ್ವನಿಯುಳ್ಳವನೂ, ಅಗ್ನಿಯ ಅವತಾರನೂ ಆದ ಧೃಷ್ಟದ್ಯುಮ್ನ ತಿಳಿಸಿದ.

ವಿ: ಇಲ್ಲಿ ಆ ಧನುಸ್ಸು ಎಂದರೆ ದ್ರುಪದ ರಾಜ ಅರ್ಜುನನ ಹೊರತು ಬೇರಾರಿಗೂ ಕಟ್ಟಲು ಸಾಧ್ಯವಾಗದಿರಲಿ ಎಂದು ಶಿವನ ವರದಿಂದ ಪಡೆದಿದ್ದ ಧನುಸ್ಸು ಎಂದರ್ಥ(೧೯/೯೮).

ಏತೇನ ಕಾರ್ಮುಕವರೇಣ ತರೂಪರಿಸ್ಥ-
ಮತ್ಸ್ಯಾವಭಾಸಮುದಕೇ ಪ್ರತಿವೀಕ್ಷ್ಯ ಯೇನ ।
ಏತೈಃ ಶರೈಃ ಪ್ರತಿಹತೋ ಭವತೀಹ ಮತ್ಸ್ಯಃ
ಕೃಷ್ಣಾನುಯಾಸ್ಯತಿ ತಮದ್ಯ ನರೇಂದ್ರವೀರಾಃ ॥ ೧೨೧ ॥

ಅ: ''ಎಲೈ ನರೇಂದ್ರವೀರರೇ! ಈ ಶ್ರೇಷ್ಠವಾದ ಬಿಲ್ಲಿನಿಂದ ಮರದ ಮೇಲಿನ ಮತ್ಸ್ಯದ ಪ್ರತಿಬಿಂಬವನ್ನು ನೀರಿನಲ್ಲಿ ನೋಡಿ ಈ ಐದು ಬಾಣಗಳಿಂದ ಯಾರು ಮತ್ಸ್ಯವನ್ನು ಹೊಡೆದು ಬೀಳಿಸುವನೋ, ಅವನನ್ನು ಇಂದು ದ್ರೌಪದಿ ಹಿಂಬಾಲಿಸುವಳು''.

---

೧೨೦. ಆಹಾಭಿಭಾಷ್ಯೇತ್ಯತ್ರ ಅಭಿಭಾಷ್ಯ = ಅಭಿತಃ ಸ್ವಭಾಷಣಶ್ರವಣಾನುಕೂಲಾನ್ ಕೃತ್ವೇತ್ಯರ್ಥಃ ॥ – (ವಾ.)

೧೨೦. ಕೃಷ್ಣಾಮಾದಾಯ ವಿಧಿವನ್ಮೇಘದುಂದುಭಿನಿಸ್ವನಃ ॥ – ಭಾರತ (ಆದಿ. ೧೮೩/೩೩)

ವಿ: ಕೆಳಗೆ ದೊಡ್ಡದೊಂದು ಪಾತ್ರೆ, ಅದರ ತುಂಬಾ ನೀರು. ಬಳಿಯಲ್ಲಿ ಒಂದು ವೃಕ್ಷ, ಅದರಲ್ಲಿ ಒಂದು ಮೀನಿನ ಆಕೃತಿ. ಅದನ್ನು ಆ ಬಿಲ್ಲಿನಲ್ಲಿ ಐದು ಬಾಣಗಳನ್ನು ಹೂಡಿ ಹೊಡೆದು ಬೀಳಿಸುವವನನ್ನು ದ್ರೌಪದಿ ವರಿಸುವಳು ಎಂದರ್ಥ.

ರಾಜರುಗಳ ಪರಾಭವ

ಇತ್ಯಸ್ಯ ವಾಕ್ಯಮನು ಸರ್ವನರೇಂದ್ರಪುತ್ರಾ
ಉತ್ತಸ್ಥುರುದ್ಧತಮದಾಶ್ಚಲಕುಂಡಲಾಸ್ಯಾಃ ।
ಅಸ್ತ್ರಂ ಬಲಂ ಚ ಬಹು ನೈಜಮಭೀಕ್ಷ್ಣಮಾಣಾಃ
ಸ್ಪರ್ಧಂತ ಏವ ಚ ಮಿಥಃ ಸಮಲಂಕೃತಾಂಗಾಃ ॥ ೧೨೨ ॥

ಅ: ಧೃಷ್ಟದ್ಯುಮ್ನ ಹೀಗೆ ಮಾತನಾಡುತ್ತಲೇ ಸಕಲ ರಾಜಪುತ್ರರುಗಳು ಮೇಲೆದ್ದರು. ಅವರು ಬಲದಿಂದ ಕೊಬ್ಬಿದ್ದರು, ಅವರು ಎದ್ದಾಗ ಅವರ ಕರ್ಣಕುಂಡಲಗಳು ಓಲಾಡುತ್ತಿದ್ದವು. ತಮ್ಮ ಅಸ್ತ್ರಹಾಗೂ ಬಲ ಎರಡೂ ಸಹಜವೆಂದು ಭಾವಿಸುತ್ತಾ ಚೆನ್ನಾಗಿ ಅಲಂಕರಿಸಿಕೊಂಡಿದ್ದ ಅವರೆಲ್ಲ ಪರಸ್ಪರ ಸ್ಪರ್ಧೆಗಿಳಿದರು.

ವಿ: ಧೃಷ್ಟದ್ಯುಮ್ನ ಹಾಗೆ ತಿಳಿಸುತ್ತಲೆ ಕಾತರದಿಂದ ರಾಜಕುಮಾರರ ಗುಂಪು ಎದ್ದೇಬಿಟ್ಟಿತು. ಅವರು ಹಾಗೆ ಎದ್ದ ರಭಸಕ್ಕೆ ಅವರ ಕರ್ಣಕುಂಡಲಗಳು ಚಲಿಸುತ್ತಿದ್ದವು. ಅವರಿಗೆಲ್ಲ ತಮ್ಮ ಅಸ್ತ್ರ ಹಾಗೂ ಬಲಗಳ ಕೊಬ್ಬು ತುಂಬಿತ್ತು ಎಂದರ್ಥ.

ಶಿಶುಪಾಲ ಪರಾಭವ

ಕೇಚಿನ್ನಿರೀಕ್ಷ್ಯ ಧನುರೇತ್ಯ ನ ಮೇ ಸುಶಕ್ಯ-
ಮಿತ್ಯೇವ ಚಾಪಯಯುರನ್ಯ ಉತ ಪ್ರಚಾಲ್ಯ ।
ತತ್ರಾಸಸಾದ ಶಿಶುಪಾಲ ಉರುಪ್ರತಾಪಃ
ಸಂಗೃಹ್ಯ ತತ್ ಸಮಧಿರೋಪಣಯತ್ನ ಆಸೀತ್ ॥ ೧೨೩ ॥

ಅ: ಕೆಲವರು ಧನುಸ್ಸನ್ನು ನೋಡಿಯೇ ಅದು ತಮಗೆ ನೀಗದು ಎಂದು ಮರಳಿಬಿಟ್ಟರು. ಮತ್ತೆ ಕೆಲವರು ಅದನ್ನು ಅಲುಗಿಸಿನೋಡಿ ಅಸಾಧ್ಯವೆಂದು ಭಾವಿಸಿ ಮರಳಿದರು. ಆಗ ಮಹಾಪ್ರತಾಪಿಯಾದ ಶಿಶುಪಾಲ ಅದರ ಬಳಿ ಬಂದು ಅದನ್ನು ಎತ್ತಿ ಅದನ್ನು ಬಾಗಿಸಿ ಕಟ್ಟುವ ಯತ್ನದಲ್ಲಿ ತೊಡಗಿದನು.

ವಿ: ಅಷ್ಟೆಲ್ಲ ಸಂಭ್ರಮದಿಂದ ಎದ್ದ ರಾಜಕುಮಾರರಲ್ಲಿ ಕೆಲವರಿಗೆ ಆ ಧನುಸ್ಸಿನ ದರ್ಶನವೇ ಭಯಹುಟ್ಟಿಸಿತು. ಮತ್ತೆ ಕೆಲವರು ಅಲುಗಾಡಿಸಲು ಯತ್ನಿಸಿ ವಿಫಲರಾದರು. ಅಂತೂ ಮೊದಲಿದ್ದ ಸಂಭ್ರಮ ಒಂದು ಕ್ಷಣದಲ್ಲೇ ಅಲ್ಲಿ ಕಾಣೆಯಾಗುವ ಸನ್ನಿವೇಶ ಒದಗಿತು ಎಂದರ್ಥ. ಆ ವೇಳೆಗೆ ಅಲ್ಲಿಗೆ ಧಾವಿಸಿ ಅದನ್ನು ಎತ್ತಿ ಅದರ ಹಗ್ಗವನ್ನು ಕಟ್ಟಲು ಯತ್ನಿಸಿದವನು ಶಿಶುಪಾಲ.

ಮಾಷಾಂತರಾಯ ಸ ಚಕರ್ಷ ಯದೈವ ಕೋಟ್ಯಾ
ಉನ್ನಮ್ಯ ತತ್ ಪ್ರತಿಜಘಾನ ತಮೇವ ಚಾಶು ।
ಅನ್ಯತ್ರ ಫಲ್ಗುನತ ಏತದಶಕ್ಯಮೇವೇ-
ತ್ಯಂಜೋ ಗಿರೀಶವರತಃ ಸ ಯಯೌ ಚ ಭಗ್ನಃ ॥ ೧೨೪ ॥

ಅ: ಅವನು ಬಿಲ್ಲಿನ ತುದಿಯನ್ನು ಎಳೆಯತೊಡಗಿದ. ಹೆದೆಗೂ ಬಿಲ್ಲಿನ ತುದಿಗೂ ಉದ್ದಿನ ಕಾಳಿನಷ್ಟೇ ಅಂತರ ಉಳಿದಿದ್ದಾಗ ಬಿಲ್ಲು ಸೆಟೆದು ಅವನನ್ನೇ ಅಪ್ಪಳಿಸಿತು. ಹಾಗಾಗಲು ಅರ್ಜುನನ ಹೊರತು ಇತರರಿಗೆ ಅದು ಸರ್ವಥಾ ಅಶಕ್ಯ ಎಂಬ ಶಿವನ ವರವೇ ಕಾರಣ. ಸೋತ ಶಿಶುಪಾಲ ಹಿಂದಿರುಗಿದ.

ವಿ: ಶಿಶುಪಾಲನಿಗೆ ಅದನ್ನು ಕಟ್ಟಿ ಪೂರೈಸಲು ಅಶಕ್ಯವಾದದ್ದಕ್ಕೆ ಅದಕ್ಕೆ ಶಿವ ನೀಡಿದ್ದ ವರವೇ ಕಾರಣವಾಯಿತು ಎಂದರ್ಥ. ಅದರೊಂದಿಗೆ ನೀನು ಭೂಮಿಯಲ್ಲಿ ಹುಟ್ಟು,, ಆಗ ಇವಳು ನಿನ್ನನ್ನೇ ವರಿಸುವಳು ಎಂದು ಇಂದ್ರನಿಗೆ ಶಿವ ನೀಡಿದ್ದ ಶಾಪವೂ ಅಲ್ಲಿ ಮತ್ತೊಂದು ವರದಂತೆ ಕೆಲಸ ಮಾಡಿತು ಎಂದೂ ತಿಳಿಯಬಹುದು (೧೮/೧೪೦). ಮಹಾಪರಾಕ್ರಮಿಯೆಂದು ಖ್ಯಾತಿಗಳಿಸಿದ್ದ ಶಿಶುಪಾಲನಂತಹವನ ಸ್ಥಿತಿ ಹೀಗಾದಾಗ ಅದನ್ನು ಸಾಧಿಸುವೆವೆಂಬ ರಾಜರುಗಳ ಸಂಖ್ಯೆ ಇಳಿಯುತ್ತಾ ಹೋಯಿತು ಎಂದು ತಿಳಿಯಬೇಕು.

ಶಲ್ಯ ಪರಾಭವ

ಮದ್ರೇಶ ಏತ್ಯ ಚಕೃಷೇ ಸ್ಥವಿರೋಽಪಿ ವೀರ್ಯಾ-
ಚ್ಚೇದೀಶತೋಽಪ್ಯಧಿಕಮೇವ ಸ ಮುದ್ಗಮಾತ್ರೇ ।
ಶಿಷ್ಟೇಽಮುನಾ ಪ್ರತಿಹತಃ ಸ ಯಯಾವಶಕ್ಯಂ
ಮತ್ವಾಽತ್ಮನಸ್ತದನು ಭೂಪತಯೋ ವಿಷಣ್ಣಾಃ ॥ ೧೨೫ ॥

---

೧೨೪. ....ಮಾಷಾಂತರಾಯ ಮಾಷಪರಿಮಾಣವ್ಯವಹಿತಜ್ಯಾಪ್ರವೇಶಾರ್ಥಂ ಯದಾತ್ತಧನುಶ್ಚಕರ್ಷ ಚ ತದಾ ಧನುಸ್ತಮೇವಾಶು ಪ್ರತಿಜಘಾನ ಸಮ್ಯಕ್ ಜಘಾನೇತಿ .... – (ಸ.)

೧೨೪. ತತ್ಪ್ರತಿಜಘಾನೇತ್ಯತ್ರ ತತ್ = ಧನುರಿತ್ಯರ್ಥಃ ॥ – (ವಾ.)

ಅ: ಬಳಿಕ ಮದ್ರರಾಜನಾದ ಶಲ್ಯ ವೃದ್ಧನಾಗಿದ್ದರೂ ತನ್ನ ಸಾಮರ್ಥ್ಯಪ್ರದರ್ಶನಕ್ಕೆಂದು ಅದರ ಬಳಿಗೆ ಧಾವಿಸಿ ಶಿಶುಪಾಲನಿಗಿಂತ ಸ್ವಲ್ಪ ಮಿಗಿಲಾಗಿಯೇ ಅದನ್ನು ಬಗ್ಗಿಸಿದ. ಹೆಸರು ಕಾಳಿನಷ್ಟು ಅಂತರ ಇದ್ದಾಗ ಬಿಲ್ಲು ಅವನನ್ನು ಅಪ್ಪಳಿಸಿತು. ಅವನು ತನಗೆ ಅದು ಆಗುವಂತಹುದಲ್ಲ ಎಂದು ಭಾವಿಸಿ ಹಿಂದಿರುಗಿದ. ಬಳಿಕ ರಾಜರುಗಳು ಖಿನ್ನರಾದರು.

ವಿ: ಮದ್ರರಾಜ ಆ ಧನುಸ್ಸನ್ನು ಪೂರೈಸಲು ಧಾವಿಸಿದ್ದು ಕಾಮದಿಂದಲ್ಲ, ತನ್ನ ಸಾಮರ್ಥ್ಯವನ್ನು ತೋರಲೆಂದು ಮಾತ್ರ. ಅದರಿಂದಾಗಿ ಅವನಿಗೆ ಸ್ಪೋತ್ತಮಸ್ತ್ರೀ ಕಾಮನೆಯ ಪಾಪ ತಟ್ಟಲಿಲ್ಲ ಎಂಬುದನ್ನು ಇಲ್ಲಿಯ **ವೀರ್ಯಾತ್** ('ಮದ್ರರಾಜಶ್ಚ ವೀರ್ಯವಾನ್' – ೨/೧೬೫) ಎಂಬ ಪದದಿಂದ ತಿಳಿಸಿರುವರು. ಶಿಶುಪಾಲನಿಗಿಂತ ಬಲಾಢ್ಯನೆಂದು ಖ್ಯಾತನಾಗಿದ್ದ ಮದ್ರರಾಜನಿಗೂ ಅದು ಆಗದಾಗ ಸಹಜವಾಗಿಯೇ ಉಳಿದಿದ್ದ ರಾಜರುಗಳ ಖಿನ್ನತೆ ಹೆಚ್ಚಿತು ಎಂದರ್ಥ. ಅದು ಮದ್ರರಾಜನ ಬಗ್ಗೆ ಅನುಕಂಪವಾಗಿರದೇ ತಮಗೆ ಆಗಲಾರದು ಎಂಬ ನಿರಾಶೆಯಿಂದಾಗಿ ಎಂದೂ ತಿಳಿಯಬೇಕು. ಮದ್ರರಾಜನ ಸೋಲಿಗೂ, ಹಿಂದೆ ಹೇಳಿದಂತೆ ಶಿವನ ವರಶಾಪಗಳೇ ಕಾರಣ.

ಜರಾಸಂಧ ಪರಾಭವ

ಸನ್ನೇಷು ಭೂಪತಿಷು ಮಾಗಧ ಆಸಸಾದ
ಸೋಽವಜ್ಞಯೈವ ಬಲವೀರ್ಯಮದೇನ ದೃಪ್ತಃ ।
ಚಾಪಂ ಚಕರ್ಷ ಚಲಪಾದತಲೋ ಬಲೇನ
ಶಿಷ್ಟೇ ಸ ಸರ್ಷಪಮಿತೇಽಭಿಹತೋಽಮುನೈವ ॥ ೧೨೬ ॥

ಅ: ರಾಜರುಗಳು ಶ್ರಾಂತರಾಗಲು ಜರಾಸಂಧ ಧಾವಿಸಿದ. ಬಲ ಹಾಗೂ ಸಾಮರ್ಥ್ಯಗಳ ಸೊಕ್ಕಿನಿಂದಾಗಿ ಕೊಬ್ಬಿದ್ದ ಅವನು ಅವಜ್ಞೆಯಿಂದಲೇ ಬಿಲ್ಲನ್ನು ಎಳೆಯತೊಡಗಿದ. ಅವನ ಅಂಗಾಲುಗಳು ಅದುರಿದವು. ಆದರೆ ಸಾಸಿವೆ ಕಾಳಿನಷ್ಟು ಅಂತರವಿದ್ದಾಗ ಬಿಲ್ಲು ಅವನನ್ನು ಜೋರಾಗಿ ಅಪ್ಪಳಿಸಿತು.

ಜಾನುನ್ಯಮುಷ್ಯ ಧರಣೀಂ ಯಯತುಸ್ತದೈವ
ದರ್ಪೇಣ ಚಾಸ್ಥಿರಪದಃ ಸ್ಥಿತಿಮಾತ್ರಹೇತೋಃ ।
ರೌದ್ರಾದ್ವರಾತ್ ಸ ಜಳತಾಂ ಗಮಿತೋಽಥ ರಾಜಾ
ರಾಜ್ಞಾಂ ಮುಖಾನ್ಯನಭಿವೀಕ್ಷ್ಯ ಯಯೌ ಸ್ವರಾಷ್ಟ್ರಮ್ ॥ ೧೨೭ ॥

---

೧೨೬. ಸನ್ನೇಷು ಶ್ರಾಂತೇಷು .... ಚಲೇ ಚಂಚಲೇ ಪಾದತಲೇ ಯಸ್ಯ ಸ ತಥಾ । .... ಸರ್ಷಪಪರಿಮಿತೇ । – (ಜ.)

ಅ: ಆಗಲೇ ಅವನು ಕಾಲು ಜಾರಿದವನಾದರೂ, ಸೊಕ್ಕಿನಿಂದಾಗಿ ನಿಲ್ಲಲು ಮಾತ್ರ ಯತ್ನಿಸಿದ. ಅವನ ಎರಡು ಮೊಳಕಾಲುಗಳೂ ಭೂಮಿಗೆ ಕುಸಿದವು. ಶಿವನ ವರದಿಂದಾಗಿ ಜಡದಂತಾದ ಅವನು ರಾಜರ ಮುಖ ನೋಡದೆ ತನ್ನ ದೇಶಕ್ಕೆ ತೆರಳಿದ.

ವಿ: ೧) ಬಳಿಕ ಬಂದವನು ಜರಾಸಂಧ. ಬಲಶಾಲಿಗಳಲ್ಲಿ ಮೊದಲಿಗನೆಂದು ದುಷ್ಪರಲ್ಲೆಲ್ಲಾ ಖ್ಯಾತಿ ಪಡೆದಿದ್ದವನು. ಅವನು ಅದು ತನಗಾವ ಮಹತ್ಕಾರ್ಯ ಎಂದು ಭಾವಿಸಿ ಅವಜ್ಞೆಯಿಂದಲೇ ಧನುಸ್ಸನ್ನು ಕಟ್ಟಲು ತೊಡಗಿದ. ಶಲ್ಯರಾಜನಿಗಿಂತ ಹೆಚ್ಚಾಗಿ ಅದನ್ನು ಬಾಗಿಸಿದ, ಆದರೆ, ಶಿವನ ವರ ಅವನು ಅದನ್ನು ಪೂರ್ಕೆಸಲು ಅವಕಾಶ ಮಾಡಿಕೊಡಲಿಲ್ಲ. ಇತರರಂತೆ ಅವನೂ ಕಟ್ಟಲು ವಿಫಲನಾದ, ಆದರೆ ಕೆಳಕ್ಕೆ ಬೀಳುವ ಬದಲು ಬಹಳ ಪ್ರಯತ್ನ ಮಾಡಿ ಮೊಳಕಾಲುಗಳ ಮೇಲೆ ಕುಸಿದು ಉರುಳದಂತೆ ಯತ್ನಿಸಿ ಯಶಸ್ವಿಯಾದ. ಅಷ್ಟು ಜನರ ಮಧ್ಯೆ ತನಗಾದ ಆ ಸೋಲಿನಿಂದ ಲಜ್ಜಿತನಾದ ಅವನು ಬೇರಾರ ಮುಖವನ್ನೂ ನೋಡದೇ ತನ್ನ ರಾಷ್ಟ್ರಕ್ಕೆ ತೆರಳಿದ ಎಂದರ್ಥ.

೨) ಅವನು ಹಾಗೆ ತೆರಳಿದ್ದರಿಂದ ಮುಂದೆ ನಡೆಯುವ ಸ್ವಯಂವರವನ್ನು ನೋಡುವ ಭಾಗ್ಯವನ್ನೂ ಸಹ ಕಳೆದುಕೊಂಡ ಎಂದಾಯಿತು. ತುಂಬಾ ಅಯೋಗ್ಯರಿಗೆ ಸತ್ಕಾರ್ಯಗಳನ್ನು ಮಾಡುವುದಿರಲಿ, ಇತರರು ಮಾಡುವುದನ್ನು ನೋಡುವ ಯೋಗವೂ ಇರುವುದಿಲ್ಲ ಎಂಬುದಕ್ಕೆ ಇದು ಸೂಚಕ.

ಕರ್ಣ ಪರಾಭವ

ಪ್ರಾಯೋ ಗತಾಸ್ತದನು ಭೂಪತಯೋऽಥ ಕರ್ಣೋ
ದುರ್ಯೋಧನಾರ್ಥಮನುಗೃಹ್ಯ ಧನುಶ್ಚಕರ್ಷ ।
ರಾಮಾದುಪಾತ್ತಶುಭಶಿಕ್ಷಿತಮಾತ್ರತೋऽಸೌ
ರೋಮಾವಶಿಷ್ಟಮಕರೋದ್ಧನುಷೋऽಂತಮಾಶು ॥ ೧೨೮ ॥

---

೧೨೭. ಜಾನುನ್ಯಮುಷ್ಮೇತ್ಯತ್ರ ಅಮುನೈವ ಧನುಷಾ ಯದಾ ಜರಾಸಂಧೋ ನಿಹತಃ ತದಾ ಅಸ್ಥಿರಪದಃ ಅಮುಷ್ಯ= ಜರಾಸಂಧಸ್ಯ ಜಾನುನೀ ಸ್ಥಿತಿಮಾತ್ರಹೇತೋಃ ಕೇವಲಂ ಸ್ವಸ್ಯಾವಸ್ಥಾನಾಯ ಧರಣೀಂ ಯಯತುರಿತಿ ಯೋಜನಾ। ಪದಾ ಸ್ಥಾತುಮಶಕ್ತಃ ಸನ್ ಜಾನುಭ್ಯಾಂ ಧರಣೀಂ ಪ್ರಾಪೇತಿ ಭಾವಃ। ವರಾತ್="ಅಸ್ಯಾಶ್ಚ ಭರ್ತಾ ಭವಸಿ ತ್ವಾಮೇವೈಷಾ ವರಿಷ್ಯತಿ" (೧೮/೧೪೦) ಇತಿ ರುದ್ರದತ್ತವರಾತ್ ॥ – (ವಾ.)

೧೨೮. ಸ್ವಸ್ಯ ಸೂತತ್ವಾದಾಮಾತ್ । .... ಅಂತಂ ಅಗ್ರಮ್ । – (ಜ.)

೧೨೮. ರೋಮಪರಿಮಿತದೇಶಃ ಅವಶಿಷ್ಟೋ ಯಸ್ಯ ಸ ರೋಮಾವಶಿಷ್ಟಃ ತಮಿತ್ಯರ್ಥಃ । – (ಸ.)

ಅ: ಅವನೊಂದಿಗೆ ಇತರ ರಾಜರುಗಳು ಸ್ಪರ್ಧೆಯಲ್ಲಿ ಉಳಿಯದೆಹೋದರು. ಆಗ ಕರ್ಣ ದುರ್ಯೋಧನನ ಸಲುವಾಗಿ ಆ ಧನುಸ್ಸನ್ನು ಎತ್ತಿ ಎಳೆದ. ಪರಶುರಾಮ ದೇವರಿಂದ ಪಡೆದ ಶುಭ ಶಿಕ್ಷಣದ ಫಲದಿಂದಾಗಿ ಅವನು ಕಟ್ಟಲು ಒಂದು ಕೂದಲೆಳೆಯಷ್ಟು ಅಂತರ ಮಾತ್ರ ಇರುವವರೆಗೂ ಅದನ್ನು ಬಾಗಿಸಿದ.

ವಿ: ೧) ಬಲಿಷ್ಠರೆಲ್ಲ ಹಾಗೆ ಪರಾಜಿತರಾದಾಗ ಅಸ್ಪೃಷ್ಟನೆನ್ನಿಸಿದ ಕರ್ಣ ಅದನ್ನು ಪೂರೈಸಲು ಧಾವಿಸಿದ. ಇವನಿಗೂ ಸಹ ದ್ರೌಪದಿಯ ಬಗ್ಗೆ ಕಾಮನೆ ಇರಲಿಲ್ಲ ಎಂಬುದು ವಿಶೇಷ. ಸ್ವಯಂವರದಲ್ಲಿ ಗೆದ್ದರೆ ದ್ರೌಪದಿಯನ್ನು ಸುಯೋಧನನಿಗೆ ಕೊಡುವ ವಿಚಾರ ಅವನ ತಲೆಯಲ್ಲಿತ್ತು. ಇತರ ಎಲ್ಲರಿಗಿಂತ ಕರ್ಣ ಹೆಚ್ಚು ಯಶಸ್ವಿಯಾದ. ಕೂದಲೆಳೆಯಷ್ಟು ಅಂತರ ಇರುವವರೆಗೂ ಧನುಸ್ಸನ್ನು ಸೆಳೆಯಲು ಅವನಿಗೆ ಪರಶುರಾಮರು ನೀಡಿದ ವಿದ್ಯೆಯ ಫಲದಿಂದಾಗಿ ಸಾಧ್ಯವಾಯಿತು.

೨) ಕರ್ಣ ಹಾಗೆ ಎದ್ದು ಬಂದಾಗ ದ್ರೌಪದಿ 'ನಾಹಂ ವರಯಾಮಿ ಸೂತಮ್' ('ಸೂತನಾದ ಇವನನ್ನು ನಾನು ವರಿಸೆನು') ಎಂದು ನುಡಿದುದಾಗಿ ಮಹಾಭಾರತದ ಕೆಲವು ಪಾಠಗಳಲ್ಲಿ ಉಂಟು. ಆದರೆ ಪೂನಾ ಭಂಡಾರಕರ್ ಸಂಸ್ಥೆಯ ಸಂಶೋಧಿತಪಾಠದಂತೆ ಅದು ಪ್ರಕ್ಷಿಪ್ತ. ಇದು ಶ್ರೀಮದಾಚಾರ್ಯರು ತಿಳಿಸಿರುವ ನಿರ್ಣಯ ಅತ್ಯಂತ ಸಮರ್ಪಕ ಎಂಬುದಕ್ಕೆ ಗಮಕ.

ಮತ್ಸ್ಯಯಂತ್ರ ಭೇದನಕ್ಕೆ ಭೀಮಾರ್ಜುನರು

ತಸ್ಮಿಂಶ್ಚ ತೇನ ವಿಹತೇ ಪ್ರತಿಸನ್ನಿವೃತ್ತೇ
ಭೀಮಾರ್ಜುನೌ ದ್ವಿಜಸದಸ್ಯುಪಸನ್ನಿವಿಷ್ಟೌ।
ಉತ್ತಸ್ಥತೂ ರವಿಶಶಿಪ್ರತಿಮಾನರೂಪೌ
ವಿಪ್ರೇಷು ತತ್ರ ಚ ಭಿಯಾ ವಿನಿವಾರಯತ್ಸು ॥ ೧೨೯ ॥

ಅ: ಕರ್ಣನು ಸಹ ಬಿಲ್ಲಿನ ಪೆಟ್ಟು ತಿಂದು ಹಿಂದಿರುಗಲು ಬ್ರಾಹ್ಮಣರ ಸಭೆಯಲ್ಲಿ ಕುಳಿತಿದ್ದ ಸೂರ್ಯಚಂದ್ರರಂತೆ ಕಂಗೊಳಿಸುತ್ತಿದ್ದ ಭೀಮಾರ್ಜುನರು ಮೇಲೆದ್ದರು. ಅವರನ್ನು ಬ್ರಾಹ್ಮಣರು ಭಯದಿಂದ ತಡೆಯತೊಡಗಿದರು.

---

೧೨೯. ಮಾನಹಾನಿಭಯಾ ಭಯೇನ। – (ಜ.)

ವಿ: ೧) ಶಿವನ ವಿಶೇಷ ವರದಿಂದಾಗಿ ಕರ್ಣನಿಗೂ ಧನುಸ್ಸನ್ನು ಕಟ್ಟುವುದು ಅಸಾಧ್ಯವಾದಾಗ ಅದನ್ನು ಪೂರ್ಣ ಮಾಡಲೆಂದು ಮೇಲೆದ್ದವರು ಬ್ರಾಹ್ಮಣ ವೇಷದಲ್ಲಿ ಕಂಗೊಳಿಸುತ್ತಿದ್ದ ಭೀಮಾರ್ಜುನರು. ಅವರನ್ನು ಸೂರ್ಯ, ಚಂದ್ರರಿಗೆ ಹೋಲಿಸುವುದರಲ್ಲಿ ಔಚಿತ್ಯವಿದೆ. ಇಬ್ಬರೂ ತೇಜಸ್ವಿಗಳಾದ್ದರಿಂದ ಆ ಹೋಲಿಕೆ. ಆದರೆ, ಚಂದ್ರ ಸೂರ್ಯನಂತೆ ಸ್ವಪ್ರಕಾಶನಲ್ಲ, ಸೂರ್ಯನ ಪ್ರಕಾಶದಿಂದ ಬೆಳಗುವನು. ಅದರಂತೆ ಅರ್ಜುನ ಭೀಮನ ಬಲದಿಂದ ಜಯಿಸುವವನು ಎಂಬುದನ್ನು ಅವರಿಬ್ಬರನ್ನು ಕ್ರಮವಾಗಿ ಸೂರ್ಯ, ಚಂದ್ರರಿಗೆ ಹೋಲಿಸುವ ಮೂಲಕ ಸ್ಫುಟಪಡಿಸಿರುವರು ಎಂದು ತಿಳಿಯಬಹುದು.

೨) ಕೆಲವು ಬ್ರಾಹ್ಮಣರಿಗೆ ಅವರಿಬ್ಬರು ಎದ್ದದ್ದು ಅಂಜಿಕೆಯ ವಿಷಯವಾಯಿತು. ಅಂತಹ ಮಹಾ ಕ್ಷತ್ರಿಯರಿಗೇ ಆಗದ್ದನ್ನು ಇವರೆಂತು ಸಾಧಿಸಿಯಾರು ಎಂಬುದು ಅವರ ಅಂಜಿಕೆಗೆ ಕಾರಣವಾಗಿತ್ತು. ಇದರಿಂದ ದ್ರೌಪದಿ ಹಾಗೆ ಅವಮಾನಿಸಿದ್ದರಿಂದ ಕರ್ಣ ಕೋಪಗೊಂಡು ಅವಳ ಮೇಲೂ, ಪಾಂಡವರ ಮೇಲೂ ದ್ವೇಷ ಸಾಧಿಸಿದ ಎಂಬ ಕಲ್ಪನೆ ನಿರ್ಮೂಲ ಎಂದಾಗುವುದು. ಮಹಾಭಾರತ ಸ್ಪಷ್ಟ ತಿಳಿಸಿರುವಂತೆ ಆ ಸ್ವಯಂವರಕ್ಕೆ ಅರ್ಹತೆ ಅಸ್ತ್ರವಿದ್ಯಾಕೌಶಲವೇ ಹೊರತು ಜಾತಿಯಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಭೀಮಾರ್ಜುನರಿಬ್ಬರೂ ಹಾಗೆ ಏಳುವ ಮೂಲಕ ತಾವಿಬ್ಬರೂ ಮತ್ಸ್ಯಯಂತ್ರಭೇದನಕ್ಕೆ ಸುಸಮರ್ಥರು ಎಂದು ನಿರೂಪಿಸಿದರು ಎಂದು ತಿಳಿಯಬೇಕು.

ವಿಪ್ರಾಶ್ಚ ಕೇಚಿದತಿಯುಕ್ತಮಿಮೌ ಚ ವೀರೌ
ದೇವೋಪಮಾವಿತಿ ವಚೋ ಜಗದುಸ್ತತಸ್ತೌ।
ದೃಷ್ಟ್ವೈವ ಕೃಷ್ಣಮುಖಪಂಕಜಮಾಶು ಚಾಪ-
ಸಾನ್ನಿಧ್ಯಮಾಯಯತುರುತ್ತಮವೀರ್ಯಸಾರೌ ॥ ೧೩೦ ॥

ಅ: ಕೆಲವು ಬ್ರಾಹ್ಮಣರು 'ಇದು ಅತ್ಯಂತ ಯುಕ್ತವಾಗಿದೆ, ಇವರಿಬ್ಬರೂ ದೇವತೆಗಳಂತಹ ಮಹಾವೀರರು' ಎಂಬ ಮಾತನ್ನಾಡಿದರು. ಆಗ ಉತ್ತಮ ವೀರ್ಯಶಾಲಿಗಳಾದ ಭೀಮಾರ್ಜುನರು ಕೃಷ್ಣನ ಮುಖಕಮಲವನ್ನು ನೋಡಿ ಬಿಲ್ಲಿನ ಬಳಿಗೆ ನಡೆದರು.

ವಿ: ಕೆಲವು ಬ್ರಾಹ್ಮಣರು ಅಂಜಿಕೆಯಿಂದ ಅವರನ್ನು ತಡೆದರೆ, ಮತ್ತೆ ಕೆಲವು ಬ್ರಾಹ್ಮಣರು ಅವರ ಲಕ್ಷಣಗಳನ್ನು ಗಮನಿಸಿ ಅವರು ಯಶಸ್ವಿಯಾಗುವುದು ಖಚಿತ ಎಂದು ಪ್ರೋತ್ಸಾಹಿಸಿದರು ಎಂದರ್ಥ. ಹಾಗೆ ಹೇಳಿದವರು ಪರಶುರಾಮ ಅಗಸ್ತ್ಯ ಮೊದಲಾದ ವಿಪ್ರಶ್ರೇಷ್ಠರುಗಳ ನಿದರ್ಶನ-ವನ್ನು ನೀಡಿ ಅವರೆಲ್ಲ ಕ್ಷತ್ರಿಯರಿಗೂ ಆಗದ ಕಾರ್ಯಗಳನ್ನು ಮಾಡಿದ ಮಹಾನುಭಾವರು.

ಎಂದಮೇಲೆ ಕ್ಷತ್ರಿಯರಿಗಾಗದ್ದು ಬ್ರಾಹ್ಮಣರೆಂತು ಮಾಡಿಯಾರು ಎಂಬ ಶಂಕೆ ಬೇಕಿಲ್ಲ ಎಂದು ಹುರಿದುಂಬಿಸಿದರು ಎಂದು ಮಹಾಭಾರತದಲ್ಲಿದೆ :

ಸಂಭಾವ್ಯಮಸ್ಮಿನ್ ಕರ್ಮೇದಮುತ್ಸಾಹಾಚ್ಚಾನುಮೀಯತೇ ॥ ...
ದುರ್ಬಲಾ ಅಪಿ ವಿಪ್ರಾ ಹಿ ಬಲೀಯಾಂಸಃ ಸ್ವತೇಜಸಾ ।
ಬ್ರಾಹ್ಮಣೋ ನಾವಮಂತವ್ಯಃ ಸದಸದ್ವಾ ಸಮಾಚರನ್ ॥ ...

–(ಆದಿ. ೧೮೭/೧೦,೧೩)

ಅವರಿಬ್ಬರು ಬಿಲ್ಲಿನ ಬಳಿ ತೆರಳುವ ಮುನ್ನ ಶ್ರೀಕೃಷ್ಣನ ಮುಖಕಮಲವನ್ನು ನೋಡಿದ್ದು ಅವನ ಆಜ್ಞೆಯನ್ನು ಪಡೆಯಲೆಂದು ಎಂದು ತಿಳಿಯಬೇಕು. ಶ್ರೀಕೃಷ್ಣನ ಮುಖದರ್ಶನ ಮಂಗಳಕರ ಎಂಬ ತತ್ವವನ್ನು ಸಹ ಆ ಮೂಲಕ ಸೂಚಿಸಿದರು ಎಂದೂ ತಿಳಿಯಬಹುದು.

ಅರ್ಜುನನಿಂದ ಮತ್ಸ್ಯಯಂತ್ರ ಭೇದ

ತತ್ರಾರ್ಜುನಃ ಪವನಜಾತ್ ಪ್ರಿಯತೋಽಪ್ಯನುಜ್ಞಾ-
ಮಾದಾಯ ಕೇಶವಮಜಂ ಮನಸಾ ಪ್ರಣಮ್ಯ ।
ಕೃತ್ವಾ ಗುಣಾನ್ವಿತಮದೋ ಧನುರಶ್ರಮೇಣ
ಯಂತ್ರಾಂತರೇಣ ಸ ಶರೈರಧುನೋಚ್ಚ ಲಕ್ಷ್ಯಮ್ ॥ ೧೩೧ ॥

ಅ: ಅಲ್ಲಿ ಅರ್ಜುನ ಪ್ರಿಯನಾದ ಭೀಮಸೇನನಿಂದ ಅನುಮತಿ ಪಡೆದುಕೊಂಡ. ಅಜನಾದ ಶ್ರೀಕೃಷ್ಣನನ್ನು ಮನಸ್ಸಿನಲ್ಲೇ ವಂದಿಸಿದ. ಅನಾಯಾಸವಾಗಿ ಬಿಲ್ಲಿಗೆ ಹೆದೆಯೇರಿಸಿದ. ಯಂತ್ರದ ಮಧ್ಯದ ರಂಧ್ರದ ಮೂಲಕ ಐದೂ ಬಾಣಗಳಿಂದ ಲಕ್ಷ್ಯವನ್ನು ಹೊಡೆದ.

ವಿ: ೧) ಭೀಮಸೇನ ಏಕೆ ಮತ್ಸ್ಯ ಯಂತ್ರ ಭೇದನ ಮಾಡಲಿಲ್ಲ ಎಂಬುದಕ್ಕೆ ಇಲ್ಲಿ ಉತ್ತರವಿದೆ. ಅರ್ಜುನ ತಾನೇ ಮಾಡುವುದಾಗಿ ಅನುಮತಿ ಬೇಡಿದುದರಿಂದ ಭೀಮ ಆ ಅವಕಾಶವನ್ನು ಅವನಿಗಿತ್ತ ಎಂದರ್ಥ. ಅದರಂತೆ ಪೂರ್ಣಪ್ರಜ್ಞನಾದ ಭೀಮನಿಗೆ ಆ ಧನುಸ್ಸಿಗೆ ವರವಿದ್ದ ವಿವರ, ಅರ್ಜುನನಿಗೆ ಶಿವನಿತ್ತ ಶಾಪದ ವಿವರ ಎಲ್ಲ ತಿಳಿದಿದ್ದುದು ಮತ್ತೊಂದು ಕಾರಣ ಎಂದು ತಿಳಿಯಬೇಕು.

---

೧೩೧. ಯಂತ್ರಾಂತರೇಣ ಸ ಶರೈರಿತ್ಯತ್ರ ಮತ್ಸ್ಯಾದಧೋಭಾಗಸ್ಥಿತದಾರುಯಂತ್ರಚ್ಛಿದ್ರೇಣೇತ್ಯರ್ಥೋ ಜ್ಞೇಯಃ ॥ –(ವಾ.)

೧೩೧. ಅಧುನೋತ್ ವಿವ್ಯಾಧ । –(ಜ.)

೨) ಚಿಕ್ಕವರು ಮಾಡಿದ್ದನ್ನು ದೊಡ್ಡವನು ಮಾಡಬಲ್ಲ ಎಂಬ ಕೈಮುತ್ಯನ್ಯಾಯ ಇದಕ್ಕೆ ಮತ್ತೊಂದು ಕಾರಣ ('ಮತ್ಕೃತಂ ತ್ವತ್ಕೃತಂ ಭವೇತ್' – ೨೬/೧೮೨). ಅಸಾಧಾರಣಖ್ಯಾತಿಗೆ ಕಾರಣವಾಗುವ ಆ ಮತ್ಸ್ಯಯಂತ್ರ ಭೇದನ ಕಾರ್ಯವನ್ನು ಅರ್ಜುನನಿಗೆ ಬಿಟ್ಟುಜಕೊಡುವ ಮೂಲಕ ಭೀಮಸೇನ ಮಾಡಿದ ತ್ಯಾಗ, ಅರ್ಜುನನ ಬಗ್ಗೆ ತೋರಿದ ಕರುಣೆ ಅನುಪಮ ಎಂಬುದನ್ನು ಗಮನಿಸಬೇಕು. ಭೀಮಸೇನ ಅರ್ಜುನನಂತೆ ಗಾಂಡೀವವನ್ನು ಸಹ +ಉಪ–ಯೋಗಿಸಬಲ್ಲ ಎಂಬ ಮಾತು ವನಪರ್ವದಲ್ಲಿ ದ್ರೌಪದಿಯ ಬಾಯಿಂದಲೇ ಬಂದಿದೆ:

ತಥೈವ ದ್ರೌಪದೀವಾಕ್ಯಂ ವಾಸುದೇವಂ ಪ್ರತೀರಿತಮ್ ।
ಅಧಿಜ್ಯಮಪಿ ಯತ್ಕರ್ತುಂ ಶಕ್ಯತೇ ನೈವ ಗಾಂಡಿವಮ್ ।
ಅನ್ಯತ್ರ ಭೀಮಪಾರ್ಥಾಭ್ಯಾಂ ಭವತಶ್ಚ ಜನಾರ್ದನ ॥

– ಮ.ಭಾ.ತಾ.ನಿ. (೨/೧೭೬); ಭಾರತ (ವನ.)

೩) ಬ್ರಹ್ಮಧನುಸ್ಸಾದ ಗಾಂಡೀವವನ್ನೇ ಎತ್ತಿ ಉಪಯೋಗಿಸಬಲ್ಲ ಭೀಮನಿಗೆ ಕೇವಲ ಶಿವವರವಿದ್ದ ಈ ಧನುಸ್ಸನ್ನು ಪೂರೈಸಿದ್ದು ಯಾವ ಲೆಕ್ಕ ಎಂಬುದನ್ನೂ ಗಮನಿಸಬೇಕು. ಶಿವನ ವರವನ್ನು ಭೀಮ ಮನ್ನಿಸಿದ್ದು ಅನುಗ್ರಹ ಬುದ್ಧಿಯಿಂದಲೇ ಹೊರತು ಅಸಾಮರ್ಥ್ಯದಿಂದಲ್ಲ; ಶಿವೋತ್ತಮನಾದ ಅವನಿಗೆ ಶಿವನ ವರ ಹೇಗೆ ಅಡ್ಡಿಯಾದೀತು ಎಂಬ ವಿವರ ಎರಡನೆಯ ಅಧ್ಯಾಯದಲ್ಲೇ ಬಂದಿದೆ.

೪) ಈ ದ್ರೌಪದಿಯ ಸ್ವಯಂವರದ ಪ್ರಸಂಗ ಅಪೂರ್ವ ಅಧ್ಯಾತ್ಮವನ್ನು ಸಾರುವ ಮತ್ತೊಂದು ವಿಶೇಷ ಘಟ್ಟ. ಇಲ್ಲಿಯ ಧನುಸ್ಸು ಶಿವ ನೀಡಿದ್ದು, ಲಕ್ಷ್ಯ ಮತ್ಸ್ಯಯಂತ್ರ, ಅದನ್ನು ನೋಡಬೇಕಾದದ್ದು, ಪಾತ್ರೆಯಲ್ಲಿನ ನೀರಿನಲ್ಲಿ, ಧನುಸ್ಸಿನಲ್ಲಿ ಹೂಡಬೇಕಾದದ್ದು ಪಂಚ ಬಾಣಗಳನ್ನು, ಹೊಡೆಯಬೇಕಾದದ್ದು ಆ ಐದೂ ಬಾಣಗಳಿಂದ ಒಟ್ಟಾಗಿ. ಮತ್ಸ್ಯಯಂತ್ರ ಭೇದಿಸಿ ಕೆಳಕ್ಕೆ ಬಿದ್ದಾಗ ಮಾತ್ರ ದ್ರೌಪದೀ ಸ್ವಯಂವರ. ಇಲ್ಲಿಯ ಮತ್ಸ್ಯಯಂತ್ರ ಮತ್ಸ್ಯಾದಿ ರೂಪನಾದ ಪರಬ್ರಹ್ಮನಾದ ಶ್ರೀಹರಿಯ ಸಂಕೇತ. ಪಾತ್ರೆಯಲ್ಲಿನ ನೀರು ಶಾಸ್ತ್ರದ ಸಂಕೇತ, ಮತ್ಸ್ಯದ

\+ ಕೃಷ್ಣಭಕ್ತಸ್ಯ ಪಾರ್ಥಸ್ಯ ಕೀರ್ತ್ಯರ್ಥಂ ದ್ರುಪದಾಲಯೇ ।
ಶಕ್ತೋऽಪಿ ತದ್ಧನುರ್ಧರ್ತುಂ ನೋದತಿಷ್ಠದ್ವೃಕೋದರಃ ॥
ಅತಃ ಕೃಷ್ಣಮತಾಭಿಜ್ಞೋ ಭೀಮ ಏವ ನ ಸಂಶಯಃ ।
ಭೀಮಸ್ಯ ಹಿತಕಾರೀ ಚ ಕೃಷ್ಣ ಏವ ನ ಸಂಶಯಃ ॥
ಪಶ್ಯ ಶ್ರೀಭೀಮಸೇನಸ್ಯ ಕೃಷ್ಣೇ ಭಕ್ತಿಮಚಂಚಲಾಮ್ ।
ನಾವಧೀತ್ ವೈಷ್ಣವಂ ಯೋऽಸೌ ನಾಶೇಷಯದವೈಷ್ಣವಮ್ ॥

– ಸರಸಭಾರತೀವಿಲಾಸ. (೬/೨೪-೨೬)

ಪ್ರತಿಬಿಂಬವನ್ನು ಅದರಲ್ಲಿ ನೋಡುವುದು ಎಂದರೆ ಭಗವಂತನ ಮಹಿಮೆಯನ್ನು ಶಾಸ್ತ್ರದ ಮೂಲಕ ಕಾಣುವುದು ಎಂದರ್ಥ. ಧನುಸ್ಸು ಎಂದರೆ ಮನಸ್ಸು, ಐದು ಬಾಣಗಳು ಎಂದರೆ ಪಂಚ ಜ್ಞಾನೇಂದ್ರಿಯಗಳು. ಧನುಸ್ಸನ್ನು ಕಟ್ಟುವುದು ಎಂದರೆ ಮನಸ್ಸನ್ನು ನಿಗ್ರಹಿಸಿ ಹತೋಟಿಯಲ್ಲಿಟ್ಟು– ಕೊಳ್ಳುವುದು ಎಂದರ್ಥ. ಬಾಣಗಳನ್ನು ಧನುಸ್ಸಿನಲ್ಲಿ ಹೂಡುವುದು ಎಂದರೆ ಪಂಚ ಜ್ಞಾನೇಂದ್ರಿಯಗಳನ್ನು ಮನಃಪೂರ್ವಕವಾಗಿ ಲಕ್ಷ್ಯದಕಡೆಗೆ ತೊಡಗಿಸುವುದು ಎಂದರ್ಥ. ಹಾಗೆ ಧನುಸ್ಸಿನಲ್ಲಿ ಇಟ್ಟು ಐದು ಬಾಣಗಳಿಂದ ಮತ್ಸ್ಯಯಂತ್ರವನ್ನು ಹೊಡೆಯುವುದು ಎಂದರೆ ಪಂಚೇಂದ್ರಿಯಗಳನ್ನು ಶ್ರೀಹರಿಯತ್ತ ಕೇಂದ್ರೀಕರಿಸಿ ಚಿಂತಿಸುವುದು ಎಂದರ್ಥ (**'ಬ್ರಹ್ಮತಲ್ಲಕ್ಷ್ಯ– ಮುಚ್ಯತೇ'** – ಕಾಠಕೋಪಪನಿಷದ್ಭಾಷ್ಯ). ಹೊಡೆಯುವುದು ಎಂದರೆ ಚೆನ್ನಾಗಿ ಅರಿಯುವುದು ಎಂದರ್ಥ. ಮತ್ಸ್ಯಯಂತ್ರ ಕೆಳಗೆ ಬೀಳುವುದು ಎಂದರೆ ಶ್ರೀಹರಿಯ ವ್ಯಾಪ್ತರೂಪವನ್ನು ಮನಸ್ಸಿನಲ್ಲಿ ತುಂಬಿಕೊಂಡು ಬಿಂಬರೂಪದ ಅವನನ್ನು ಧ್ಯಾನಿಸುವುದು ಎಂದರ್ಥ. ಹಾಗೆ ಮಾಡಿದಾಗ ದ್ರೌಪದಿ ಮಾಲೆ ಹಾಕುವಳು ಎಂದರೆ ಅಪರೋಕ್ಷಜ್ಞಾನ ಸಿದ್ಧಿಸುವುದು ಎಂದರ್ಥ.

೫) ಈ ಕಾರ್ಯ ಶಿಶುಪಾಲ ಮೊದಲಾದ ನಾಲ್ವರಿಗೂ ಆಗಲಿಲ್ಲ, ಅವರು ಧನುಸ್ಸನ್ನು ಹೆದೆಯೇರಿಸುವುದರಲ್ಲೇ ಸೋತು ಹೋದವರು. ಎಂದರೆ ಮನೋನಿಗ್ರಹ ಸಾಧ್ಯವಾಗದೇ ವಿಫಲರಾದವರು. ಶಿಶುಪಾಲನಿಗೆ ಸಲ್ಲದ ಕಾಮ, ಶಲ್ಯನಿಗೆ ಸಲ್ಲದ ಬಲಪ್ರದರ್ಶನದ ಮೋಹ, ಜರಾಸಂಧನಿಗಂತೂ ಬಲುಬಗೆಯ ಮದ, ಕರ್ಣನಿಗೆ ದುರ್ಯೋಧನನ ವ್ಯಾಮೋಹ. ಆದ್ದರಿಂದ ಅವರಾರಿಗೂ ಧನುಸ್ಸನ್ನು ಪೂರ್ಣಮಾಡಲು ಸಾಧ್ಯವಾಗಲೇ ಇಲ್ಲ. ಬಳಿಕ ಬಂದಿದ್ದು ಭೀಮಾರ್ಜುನರು. ಭೀಮನಂತೂ ಭಾರತೀಪತಿಯೇ; ಅರ್ಜುನ ಮತ್ಸ್ಯಯಂತ್ರ ಭೇದನ ಮಾಡಿದ್ದು ಲೋಕಪ್ರಸಿದ್ಧ. ಅವನ ಯಶಸ್ಸಿಗೆ ಮೊದಲ ಕಾರಣ, ಅಣ್ಣನಾದ ವಾಯುದೇವರ ಅವತಾರನಾದ ಭೀಮನಿಂದ ಅನುಮತಿ ಪಡೆದದ್ದು, ಇದು **ಶ್ರೀಗುರುಭ್ಯೋನಮಃ** ಎನ್ನುವುದಕ್ಕೆ ಸಂಕೇತ. ಅನಂತರ ಭಗವಂತನಾದ ಕೃಷ್ಣನನ್ನು ನೋಡಿ ಭಕ್ತಿಯಿಂದ ಮನಸ್ಸಿನಲ್ಲೇ ವಂದಿಸಿದ್ದು, ಇದು 'ಹರಿಃ ಓಂ' ಎನ್ನುವುದಕ್ಕೆ ಸಂಕೇತ. ಅಂತೂ ಹರಿವಾಯುಗಳ ಅನುಗ್ರಹ ಪಡೆದದ್ದು ಅವನ ಮೊದಲ ಅರ್ಹತೆ ಎಂದಾಯಿತು. ಬಳಿಕ ಅವನು ಧನುಸ್ಸನ್ನು ವಂದಿಸಿ ಅದನ್ನು ಕೈಗೆತ್ತಿಕ್ಕೊಂಡ. ಇಲ್ಲಿ ಧನುಸ್ಸನ್ನು ವಂದಿಸುವುದು ಎಂದರೆ ಧನುಸ್ಸನ್ನು ನೀಡಿದ ಶಿವನನ್ನು ವಂದಿಸುವುದು. ಧನುಸ್ಸನ್ನು ನೀಡಿದ ಶಿವ ಮನಸ್ಸಿನ ಅಭಿಮಾನಿ ದೇವತೆಯೂ ಹೌದು. ಮನೋನಿಗ್ರಹ ಸಾಧ್ಯವಾಗುವುದು ಮನೋಭಿಮಾನಿ ದೇವತೆಯಾದ ಶಿವನಿಗೆ ಮಣಿದಾಗಲೇ ಎಂದರ್ಥ. ಬಳಿಕ ಅರ್ಜುನ ಪ್ರತಿಬಿಂಬವನ್ನು ನೋಡುತ್ತಾ ಧನುಸ್ಸಿನಲ್ಲಿ ಐದು ಬಾಣಗಳನ್ನು ಹೂಡಿದ್ದು ಶಾಸ್ತ್ರಾಧ್ಯಯನವನ್ನು ಮಾಡುತ್ತಾ ಪಂಚೇದ್ರಿಯಗಳನ್ನು ಭಗವಂತನ ಕಡೆಗೆ ಕೇಂದ್ರೀಕರಿಸಿದ್ದಕ್ಕೆ ಸಂಕೇತ. ಐದೂ

ಬಾಣಗಳು ಒಟ್ಟಾಗಿ ಮತ್ಸ್ಯಯಂತ್ರಕ್ಕೆ ತಾಗಿದ್ದು ಧ್ಯಾನದ ಸಿದ್ಧಿಯ ಸಂಕೇತ. ಮತ್ಸ್ಯಯಂತ್ರ ಭೇದನವಾಗಿದ್ದು ಬಿಂಬರೂಪ ದರ್ಶನಕ್ಕೆ ಸೂಚಕ. ದ್ರೌಪದಿ ಮಾಲೆ ಹಾಕಿದ್ದು ಅರ್ಜುನನಿಗೆ ವಿದ್ಯಾಭಿಮಾನಿನಿಯಾದ ಸರಸ್ವತಿ ಒಲಿದು ಅಪರೋಕ್ಷಜ್ಞಾನವಾಗಿದ್ದಕ್ಕೆ ಸಂಕೇತ. ಹೀಗೆ ಇಡೀ ಪ್ರಸಂಗ ಅಪರೋಕ್ಷಜ್ಞಾನ ಸಾಧನೆಯ ಪರಿಯನ್ನು ಬಣ್ಣಿಸುವ ಅಧ್ಯಾತ್ಮದ ಸಾರಸರ್ವಸ್ವವಾಗಿದೆ. ಹೀಗೆ ಮೇಲ್ನೋಟಕ್ಕೆ ಕಾಣುವ ರೋಚಕ ಕಥೆ ಒಳನೋಟಕ್ಕೆ ಮೋಚಕವಾದ ತತ್ವಶಾಸ್ತ್ರವಾಗುವುದು ಶ್ರೀವ್ಯಾಸರ ಅದ್ಭುತವಾದ ರಚನಾಕೌಶಲಕ್ಕೆ ಹಿಡಿದ ಕನ್ನಡಿ.

ಇಲ್ಲಿ ದ್ರೌಪದಿ ಮಾಲೆ ಹಾಕಿದ್ದು ಸರಸ್ವತಿ ಒಲಿಯುವುದಕ್ಕೆ ಸಂಕೇತ. ಅರ್ಜುನ ಇಂದ್ರಾವತಾರ, ಇಂದ್ರ ವಾಯು–ಭಾರತಿಯರ ನಾಲ್ವರು ಪುತ್ರರಲ್ಲಿ ಒಬ್ಬ. ಎಂದರೆ ಭೀಮ ಭಾರತೀಪತಿಯಾದರೆ, ಅರ್ಜುನ ಭಾರತೀಪುತ್ರ. ದ್ರೌಪದಿ ಅವನ ಕೊರಳಿಗೆ ಮಾಲೆ ಹಾಕಿದ್ದು ತಾಯಿ ಮಗನ ಕೊರಳಿಗೆ ಹಾಕಿದ ಅನುಗ್ರಹಮಾಲೆಯ ಸಂಕೇತ.

ಕೃಷ್ಣಾ ತದಾಽಸ್ಯ ವಿದಧೇ ನವಕಂಜಮಾಲಾಂ
ಮಧ್ಯೇ ಚ ತಾಂ ಪ್ರತಿನಿಧಾಯ ನರೇಂದ್ರಪುತ್ರೌ ।
ಭೀಮಾರ್ಜುನೌ ಯಯತುರಚ್ಯುತಮಾಭಿನಮ್ಯ
ಕ್ಷುಬ್ಧಸ್ತದಾ ನೃಪವರಾಬ್ಧಿರಿಮಾವಧಾವತ್ ॥ ೧೩೨ ॥

ಅ: ಆಗ ದ್ರೌಪದಿ ನೂತನ ಕಮಲಮಾಲೆಯನ್ನು ಅವನಿಗೆ ಹಾಕಿದಳು. ಅವಳನ್ನು ತಮ್ಮ ನಡುವೆ ಇರಿಸಿಕೊಂಡು ರಾಜಪುತ್ರರಾದ ಭೀಮಾರ್ಜುನರು ಶ್ರೀಕೃಷ್ಣನಿಗೆ ವಂದಿಸಿ ತೆರಳಿದರು. ಆಗ ಕ್ಷೋಭೆಗೊಂಡ ರಾಜಶ್ರೇಷ್ಠರುಗಳೆಂಬ ಸಾಗರ ಅವರೆಡೆಗೆ ಧಾವಿಸಿತು.

ವಿ: ದ್ರೌಪದಿ ಮಾಲೆ ಹಾಕಿದ್ದು ಅರ್ಜುನನ ಯಶಸ್ಸನ್ನು ಗುರುತಿಸಲು ಮಾತ್ರ. ಇದು ವಿವಾಹದ ಸಂಕೇತವಲ್ಲ ಎಂಬುದನ್ನು ಗಮನಿಸಬೇಕು. ಅದು ವಿವಾಹದ ಸಂಕೇತವಾಗಿದ್ದಲ್ಲಿ ಮುಂದೆ ದ್ರೌಪದಿಯನ್ನು ವಿವಾಹವಾಗುವುದು ಯಾರು ಎಂದು ದ್ರುಪದ ಯುಧಿಷ್ಠಿರನನ್ನು ಪ್ರಶ್ನಿಸುವ ಪ್ರಸಂಗ ಒದಗುತ್ತಿರಲಿಲ್ಲ. ಧನುಸ್ಸನ್ನು ಪೂರೈಸುವ ಮುನ್ನ ಶ್ರೀಕೃಷ್ಣನಿಗೆ ನಮಸ್ಕರಿಸಿದಂತೆ ಅದನ್ನು ಪೂರೈಸಿದ ನಂತರವೂ ಶ್ರೀಕೃಷ್ಣನಿಗೆ ವಂದಿಸಿದರು. ಇದು ಆದ್ಯಂತಗಳಲ್ಲಿ ಶ್ರೀಹರಿಸ್ಮರಣೆಯ ವಿಧಿಯನ್ನು ವಿವರಿಸುವ ಪ್ರಸಂಗ. ಇತರ ರಾಜರು ತಮಗಾಗದ್ದನ್ನು ಅವರು ಸಾಧಿಸಿದ್ದಕ್ಕೆ ಸಂತೋಷಪಡದೇ ಅಸೂಯೆಪಟ್ಟು ಘರ್ಷಣೆಗೆ ತೊಡಗಿದ್ದು ಅವರ ಅವಿವೇಕಕ್ಕೆ ದ್ಯೋತಕ.

ಸ್ವಯಂವರದಲ್ಲಿ ಯಾದವರ ಪಾತ್ರ

ದ್ರಷ್ಟುಂ ಚ ಕೇವಲಗತಿರ್ನ ತು ಕನ್ಯಕಾಯಾ
ಅರ್ಥೇ ನ ಚಾಪಮಿಹ ವೃಷ್ಣಿವರಾಃ ಸ್ಪೃಶಂತು ।
ಇತ್ಯಾಜ್ಞಯೈವ ವರಚಕ್ರಧರಸ್ಯ ಲಿಪ್ಸಾ-
ಮಪ್ಯತ್ರ ಚಕ್ರುರಿಹ ನೈವ ಯದುಪ್ರವೀರಾಃ ॥ ೧೩೩ ॥

ಅ: ತಾವು ತೆರಳುತ್ತಿರುವುದು ಕೇವಲ ಸ್ವಯಂವರ ನೋಡಲೆಂದೇ ಹೊರತು ಕನ್ಯೆಗೋಸ್ಕರ ಅಲ್ಲ. ಆದ್ದರಿಂದ ಯಾದವವೀರರಾರೂ ಆ ಬಿಲ್ಲನ್ನು ಮುಟ್ಟಕೂಡದು ಎಂದು ಶ್ರೀಕೃಷ್ಣ ಆದೇಶ ನೀಡಿದ್ದರಿಂದ ಯಾದವವೀರರು ಆ ಧನುಸ್ಸನ್ನು ಪೂರೈಸಿ ಪಣವನ್ನು ಗೆಲ್ಲುವ ಬಯಕೆಯನ್ನು ಸರ್ವಥಾ ಹೊಂದಿರಲಿಲ್ಲ.

ವಿ: ೧) ಆ ಸ್ವಯಂವರದಲ್ಲಿ ಬಲರಾಮ, ಪ್ರದ್ಯುಮ್ನ ಮೊದಲಾದ ಯಾದವವೀರರೇಕೆ ಪಾಲ್ಗೊಳ್ಳಲಿಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಕೃಷ್ಣ ಸ್ವಯಂವರಕ್ಕೆ ತೆರಳುವ ಮುನ್ನವೇ ಯಾದವರಿಗೆಲ್ಲ ಆಜ್ಞೆ ಮಾಡಿದ್ದ ''ನಾವು ಹೋಗುತ್ತಿರುವುದು ಸ್ವಯಂವರ ನೋಡಲೇ ಹೊರತು ಪಾಲ್ಗೊಳ್ಳಲಲ್ಲ'' :

ಪ್ರೇಕ್ಷಾಂ ಸ್ಮ ಚಕ್ರುರ್ಯದುಪುಂಗವಾಸ್ತೇ ಸ್ಥಿತಾಶ್ಚ ಕೃಷ್ಣಸ್ಯ ಮತೇ ಮಹಾಂತಃ ।
– (ಆದಿ. ೧೮೬/೮)

೨) ಇದು ಶ್ರೀಕೃಷ್ಣನ ಸರ್ವಜ್ಞತ್ವಕ್ಕೂ ದ್ಯೋತಕ. ಹಾಗೆ ಮಾಡುವ ಮೂಲಕ ಶ್ರೀಕೃಷ್ಣ ಯಾದವವೀರರಿಗೆ ಆಗಬಹುದಿದ್ದ ಮುಖಭಂಗವನ್ನೂ ತಪ್ಪಿಸಿದ ಎಂದು ತಿಳಿಯಬೇಕು.

ಭೀಮ ಪರಾಕ್ರಮ

ಭೀಮಸ್ತು ರಾಜಸಮಿತಿಂ ಪ್ರತಿಸಂಪ್ರಯಾತಾಂ
ದೃಷ್ಟ್ವೈವ ಯೋಜನದಶೋಚ್ಛ್ರಯಮಾಶು ವೃಕ್ಷಮ್ ।
ಆರುಜ್ಯ ಸರ್ವನೃಪತೀನಭಿತೋ ಹ್ಯತಿಷ್ಠತ್
ದೃಷ್ಟ್ವಾಪಲಾಯನಪರಾಶ್ಚ ಬಭೂವುರೇತೇ ॥ ೧೩೪ ॥

ಅ: ಭೀಮನು ರಾಜರ ಗುಂಪು ತಮ್ಮ ಮೇಲೆ ನುಗ್ಗಿ ಬರುವುದನ್ನು ಕಾಣುತ್ತಲೇ ಹತ್ತು ಯೋಜನ ಎತ್ತರವಿದ್ದ ಒಂದು ವೃಕ್ಷವನ್ನು ತಕ್ಷಣ ಕಿತ್ತು ಅವರೆದುರಿಗೆ ನಿಂತ. ಅದನ್ನು ಕಾಣುತ್ತಲೇ ಆ ರಾಜರುಗಳೆಲ್ಲ ಪಲಾಯನ ಮಾಡಿದರು.

ವಿ: ೧) ಭೀಮನ ಅತ್ಯದ್ಭುತವಾದ ಬಾಹುಬಲವನ್ನು ನಿರೂಪಿಸುವ ಅಪೂರ್ವ ಪ್ರಸಂಗವಿದು. ಹತ್ತು ಯೋಜನ ವೃಕ್ಷವನ್ನು ಒಂದು ಹುಲ್ಲುಕಡ್ಡಿಯಂತೆ ಅನಾಯಾಸವಾಗಿ ಕಿತ್ತಿ ಎತ್ತಿ ಹಿಡಿಯುವ ಅಂತಹ ಶಕ್ತಿ ಹನುಮಂತನ ಹೊರತು ಬೇರಾವ ಜೀವರಲ್ಲೂ ಕಂಡಿಲ್ಲ. ಭೀಮನಂತು ಹನುಮಂತನೇ. ಅರ್ಜುನಾದಿಗಳ ಬಗ್ಗೆಯೂ ಇಂತಹ ಉಲ್ಲೇಖ ಎಲ್ಲೂ ಬಂದಿಲ್ಲ ಎಂಬುದು ಗಮನಾರ್ಹ. ಅಂತಹ ಭೀಮನ ಪರಾಕ್ರಮವನ್ನು ಕಂಡ ರಾಜರು ಯುದ್ಧ ಮಾಡುವುದಿರಲಿ, ಅದನ್ನು ನೋಡಲೂ ಅಸಮರ್ಥರಾಗಿ ದಿಕ್ಕೆಟ್ಟು ಓಡಿದರು ಎಂದು ಭಾವ.

೨) ಭೀಮ ಹಾಗೆ ವೃಕ್ಷವನ್ನು ಎತ್ತಿ ಹಿಡಿದದ್ದರಲ್ಲೂ ಅಧ್ಯಾತ್ಮ ತುಂಬಿದೆ. ರಾಜರುಗಳು ಪ್ರತಿವಾದಿಗಳ ಸಂಕೇತ. ವೃಕ್ಷ ವೇದಾದಿ ಶಾಸ್ತ್ರಗಳ [+]ಸಂಕೇತ. ಪ್ರತಿವಾದಿಗಳನ್ನು ಮೊದಲಿಗೆ [*]ಆಗಮಗಳಿಂದ ಎದುರಿಸಬೇಕೆಂಬುದು ಅದರ ಅರ್ಥ.

ಭೀಮೋಽಯಮೇಷ ಪುರುಹೂತಸುತೋಽನ್ಯ ಏತೇ
ಪಾರ್ಥಾ ಇತಿ ಸ್ಮ ಹಲಿನೇ ಹರಿರಭ್ಯವೋಚತ್ ।
ದೃಷ್ಟ್ವೈವ ಸೋಽಪಿ ಮುದಮಾಪ ಶಿನೇಶ್ಚ ಪೌತ್ರಃ
ಖಡ್ಗಂ ಪ್ರಗೃಹ್ಯ ಹರ್ಷಾತ್ ಪರಿಪುಪ್ಲುವೇಽತ್ರ ॥ ೧೩೫ ॥

ಅ: ಆಗ ಶ್ರೀಕೃಷ್ಣ ಬಲರಾಮನಿಗೆ ತಿಳಿಸಿದ 'ಇವನು ಭೀಮ, ಇವನು ಅರ್ಜುನ, ಇವರು ಇತರ ಪಾಂಡವರು'. ಬಲರಾಮ ಅವರನ್ನು ಕಂಡು ಆನಂದಿಸಿದ. ಶಿನಿಯ ಮೊಮ್ಮಗನಾದ ಸಾತ್ಯಕಿಯಂತೂ ಖಡ್ಗಹಿಡಿದು ಅಲ್ಲಿ ಆನಂದದಿಂದ ಕುಣಿದಾಡತೊಡಗಿದ.

ವಿ: ಆ ಸಂದರ್ಭದಲ್ಲೂ ಸಹ ಬಲರಾಮ ಮೊದಲಾದವರಿಗೆ ಪಾಂಡವರ ಗುರುತು ಸಿಕ್ಕಿರಲಿಲ್ಲ. ಎಂದಿನಂತೆ ಸರ್ವಜ್ಞನಾದ ಕೃಷ್ಣನೇ ಅವರಿಗೆಲ್ಲ ಅವರನ್ನು ತಿಳಿಸಿಕೊಟ್ಟ. ಧರ್ಮಜ್ಞಾನಾದಿಗಳ ಗುರುತನ್ನು ತಿಳಿಸಿಕೊಡಲು ಶೇಷಾದಿ ದೇವತೆಗಳಿಗೂ ಶ್ರೀಹರಿಯೇ ಅನುಗ್ರಹಿಸಬೇಕು ಎಂಬುದಕ್ಕೂ ಇದು ಸೂಚಕ. ಪಾಂಡವರು ಸುಟ್ಟು ಹೋದರೆಂದು ತಿಳಿದಿದ್ದ ಅವರಿಗೆ ಅವರು ಹಾಗೆ ಸುರಕ್ಷಿತವಾಗಿ ಬದುಕಿರುವುದನ್ನು ಕಂಡು ಆದ ಸಂಭ್ರಮಕ್ಕೆ ಮಿತಿಯೇ ಇರಲಿಲ್ಲ.

---

೧೩೪. ವೃಕ್ಷಮಾರುಜ್ಯೇತ್ಯತ್ರ 'ರುಜೋ ಭಂಗ' ಇತಿ ಧಾತೋಃ ಆರುಜ್ಯ = ಭಂಕ್ತ್ವೋತ್ಯರ್ಥಃ ॥ – (ವಾ.)

೧೩೪. 'ರುಜೋ ಭಂಗ' ಇತಿ ಧಾತೋಃ ವೃಕ್ಷಂ ಭಂಕ್ತ್ವೋತ್ಯರ್ಥಃ । – (ತಾ.)

\+ ನಿಗಮಕಲ್ಪತರೋರ್ಗಲಿತಂ ಫಲಂ ಶುಕಮುಖಾದಮೃತದ್ರವಸಂಯುತಮ್ . ಭಾಗವತ(೧/೧/೩)

* ಪೃಷ್ಟೇನಾಗಮ ಏವಾದೌ ವಕ್ತವ್ಯಃ ಸಾಧ್ಯಸಿದ್ಧಯೇ । – ಕಥಾಲಕ್ಷಣ (ಶ್ಲೋ. ೮)

ಪ್ರೀತೇಷು ಸರ್ವಯದುಷು ಪ್ರಪಲಾಯಿತೇಷು
ದುರ್ಯೋಧನಾದಿನೃಪತಿಷ್ವಖಿಲೇಷು ಭೀಮಾತ್ ।
ಕರ್ಣೋಽಭ್ಯಯಾದ್ದರಿಹಯಾತ್ಮಜಮಾಶು ಮದ್ರ-
ರಾಜೋ ಜಗಾಮ ಪವನಾತ್ಮಜಮೇವ ವೀರಃ ॥ ೧೩೬ ॥

ಅ: ಯಾದವರೆಲ್ಲ ಸಂತುಷ್ಟರಾದರು; ದುರ್ಯೋಧನಾದಿ ಸಕಲ ರಾಜರುಗಳೆಲ್ಲ ಭೀಮನನ್ನು ಕಂಡು ದಿಕ್ಕೆಟ್ಟು ಓಡಿದರು; ಆಗ ಕರ್ಣ ಇಂದ್ರಪುತ್ರನಾದ ಅರ್ಜುನನನ್ನು ಎದುರಿಸಿದ. ಮದ್ರರಾಜನಾದ ವೀರ ಶಲ್ಯ ಭೀಮನ ಮೇಲೆಯೇ ಎರಗಿದ.

ವಿ: ಬಲಾಢ್ಯರಲ್ಲಿ ಶಲ್ಯ, ಅಸ್ತ್ರಜ್ಞರಲ್ಲಿ ಕರ್ಣ ಮಾತ್ರ ಅಲ್ಲಿ ಉಳಿದು ಅವರ ಮೇಲೆ ಹೋರಾಟಕ್ಕೆ ನಿಂತರು ಎಂದರ್ಥ.

ಭೀಮನಿಂದ ಶಲ್ಯನಪರಾಭವ

ವಿಪ್ರೇಷು ದಂಡಪಟದರ್ಭಮಹಾಜಿನಾನಿ
ಕೋಪಾತ್ ಕ್ಷಿಪತ್ಸು ನ ವಿನಾಶನಮತ್ರ ಭೂಯಾತ್ ।
ಕ್ಷತ್ರಸ್ಯ ವೈರತ ಇತಿ ದ್ರುಪದೇ ಚ ಕೃಷ್ಣಂ
ವಿಪ್ರಾಂಶ್ಚ ಯಾಚತಿ ಸ ಮಾರುತಿರಾರ ಶಲ್ಯಮ್ ॥ ೧೩೭ ॥

ಅ: ಬ್ರಾಹ್ಮಣರು ಕೋಪದಿಂದ ದಂಡ, ಪಂಚೆ, ದರ್ಭೆ, ಮಹಾ ಕೃಷ್ಣಾಜಿನಗಳನ್ನೆಲ್ಲ ಎಸೆಯತೊಡಗಿದರು. ಆಗ ದ್ರುಪದನು ಕ್ಷತ್ರಿಯರ ವೈರದಿಂದಾಗಿ ಲೋಕನಾಶವಾಗ-ದಿರಲೆಂದು ಕೃಷ್ಣನನ್ನು ಬ್ರಾಹ್ಮಣರನ್ನು ಬೇಡತೊಡಗಿದ. ಅತ್ತ ಭೀಮ ಶಲ್ಯನತ್ತ ಸಾಗಿದ.

ವಿ: ಶಾಂತಿಪ್ರಿಯರಾದ ಬ್ರಾಹ್ಮಣರೂ ಸಹ ತಮ್ಮಲ್ಲೊಬ್ಬ ಮತ್ಸ್ಯಯಂತ್ರ ಭೇದನ ಮಾಡಿ ಯಶಸ್ವಿಯಾಗಿರುವಾಗ ಕ್ಷತ್ರಿಯರು ಅದನ್ನು ಸಹಿಸುತ್ತಿಲ್ಲ ಎಂಬ ಭಾವನೆಯಿಂದ ಸಿಡಿದೆದ್ದರು. ಅವರು ತಮ್ಮ ಬಳಿಯಿದ್ದ ದಂಡ ಮೊದಲಾದವುಗಳಿಂದಲೇ ಆ ಹೋರಾಟದಲ್ಲಿ ಪಾಲ್ಗೊಳ್ಳ-ತೊಡಗಿದರು. ಅದೊಂದು ರೀತಿಯ ಬ್ರಾಹ್ಮಣ ಕ್ಷತ್ರಿಯ ಸಂಘರ್ಷವಾಗಿ ಲೋಕವಿನಾಶಕ್ಕೆ ಕಾರಣವಾದೀತು ಎಂಬ ಭಯದಿಂದ ದ್ರುಪದ ಕೃಷ್ಣನನ್ನೂ ಅವರನ್ನೂ ಬೇಡಿಕೊಂಡ ಎಂದರ್ಥ. ಬ್ರಾಹ್ಮಣರ ದರ್ಭೆ ಮೊದಲಾದವುಗಳು ಅಸ್ತ್ರದಂತೆ ಬಾಧಕವಾಗುವದು ಅವರ ತಪಸ್ಸಿದ್ಧಿಯಿಂದ

---

೧೩೭. ಬ್ರಹ್ಮಚಾರಿಣಾಮಪ್ಯಾಗತತ್ವಾತ್ ದಂಡಪಟದರ್ಭಮಹಾಜಿನಾನೀತ್ಯತ್ರ ದಂಡಪಟಯೋರ್ಗ್ರಹಣಮ್ ॥ – (ವಾ.)

ಸಾಧ್ಯ ಎಂಬುದು ಅನೇಕ ಪ್ರಸಂಗಗಳಲ್ಲಿ ಕಂಡಿದೆ. ಬ್ರಹ್ಮಚಾರಿಗಳೂ ಆ ಗುಂಪಿನಲ್ಲಿದ್ದರು ಎಂಬುದು '**ದಂಡಪಟದರ್ಭಮಹಾಜಿನಾನಿ**' ಎಂಬ ಪದದಿಂದ ಸೂಚಿತ.

ವೃಕ್ಷಂ ತ್ವಸೌ ಪ್ರತಿನಿಧಾಯ ಚ ಮದ್ರರಾಜಂ
ದೋರ್ಭ್ಯಾಂ ಪ್ರಗೃಹ್ಯ ಜವತೋ ಗಗನೇ ನಿಧಾಯ ।
ಬಂಧುತ್ವತೋ ಭುವಿ ಶನೈರದಧಾತ್ ಸ ತಸ್ಯ
ವಿಜ್ಞಾಯ ವೀರ್ಯಮಗಮನ್ನಿಜರಾಜಧಾನೀಮ್ ॥ ೧೩೮ ॥

ಅ: ಭೀಮಸೇನ ವೃಕ್ಷವನ್ನು ಮುಂಚಿನಂತೆ ನೆಲದಲ್ಲಿ ಸ್ಥಾಪಿಸಿ ಶಲ್ಯರಾಜನನ್ನು ಎರಡೂ ಕೈಗಳಿಂದ ಹಿಡಿದು ಗಗನಕ್ಕೆ ತೂರಿದ. ಕೆಳಕ್ಕೆ ಬೀಳುವ ಮುನ್ನ ಬಂಧುವೆಂಬ ಕಾರಣದಿಂದ ಪುನಃ ಅವನನ್ನು ಹಿಡಿದು ಮೆಲ್ಲನೆ ನೆಲದ ಮೇಲಿರಿಸಿದ. ಅವನ ಸಾಮರ್ಥ್ಯವನ್ನು ತಿಳಿದ ಶಲ್ಯ ತನ್ನ ರಾಜಧಾನಿಗೆ ತೆರಳಿದ.

ವಿ: ೧) ಭೀಮ ವೃಕ್ಷವನ್ನು ಹಾಗೆ ಎತ್ತಿ ಹಿಡಿದರೂ ಅದನ್ನು ಕಂಡು ರಾಜರೆಲ್ಲ ಪಲಾಯನ ಮಾಡಿದ್ದರಿಂದ ಅದನ್ನು ಉಪಯೋಗಿಸುವ ಪ್ರಸಂಗ ಬರಲೇ ಇಲ್ಲ. ಆ ವೃಕ್ಷವನ್ನು ಪುನಃ ಅದಿದ್ದ ಸ್ಥಳದಲ್ಲಿಯೇ ಇರಿಸಿ ಸಂರಕ್ಷಿಸಿದ. ಇದು ಆತನು ಹನುಮಂತನಾಗಿ ಗಂಧಮಾದನದಿಂದ ಎತ್ತಿ ತಂದಿದ್ದ ಸಂಜೀವನ ಪರ್ವತವನ್ನು ಪುನಃ ಅಲ್ಲಿಯೇ ಇರಿಸಿದ ಪ್ರಸಂಗವನ್ನು ಜ್ಞಾಪಿಸುವುದು ಎಂಬುದನ್ನು ಗಮನಿಸಬೇಕು(೮/೧೫೯, ೧೬೦). ಶಲ್ಯ ಆ ಕಾಲದ ಮಹಾಬಲಿಷ್ಠರಲ್ಲಿ ಒಬ್ಬ. ಅಂಥವನನ್ನು ಭೀಮಸೇನ ಚಿಕ್ಕ ಮಗುವಿನಂತೆ ಮೇಲೆತ್ತಿ ತೂರುವ ಮೂಲಕ ತನ್ನ ಅಗಾಧ ಶಕ್ತಿಯ ಪರಿಚಯವನ್ನು ಇನ್ನೊಮ್ಮೆ ಮಾಡಿಕೊಟ್ಟ. ಅವನನ್ನು ಬಂಧುವೆಂದು ರಕ್ಷಿಸಿದ ಎಂದರೆ ಮೇಲ್ನೋಟಕ್ಕೆ ಅವನು ತನ್ನ ತಮ್ಮಂದಿರಾದ ನಕುಲ, ಸಹದೇವರ ಸೋದರ ಮಾವ ಎಂಬ ಕಾರಣದಿಂದ ರಕ್ಷಿಸಿದ ಎಂದು ಕಾಣುವುದು. ಅದು ಸರಿಯಲ್ಲ. ಮುಖ್ಯವಾಗಿ ಅವನು ಬಂಧುವೆಂದರೆ ವಿಷ್ಣುಭಕ್ತ ಎಂದೇ ಆಗಿತ್ತು – 'ಬಾಂಧವಾ ವಿಷ್ಣುಭಕ್ತಾಶ್ಚ'. ಪ್ರಹ್ಲಾದನ ಸಹೋದರನಾದ ಸಹ್ಲಾದನ ಅವತಾರನಾದ ಶಲ್ಯ ಮಹಾವಿಷ್ಣುಭಕ್ತನೇ ಅಲ್ಲವೆ!

ಅರ್ಜುನನಿಂದ ಕರ್ಣನ ಪರಾಭವ

ಪಾರ್ಥೋಽಪಿ ತೇನ ಧನುಷಾ ಯುಯುಧೇ ಸ್ಮ ಕರ್ಣಂ
ಸೋಽಪ್ಯತ್ರಬಾಹುಬಲಮಾವಿರಮುತ್ರ ಚಕ್ರೇ ।
ತೌ ಧನ್ವಿನಾಮನುಪಮೌ ಚಿರಮಸ್ಯತಾಂ ಚ
ಸೂರ್ಯಾತ್ಮಜೋಽತ್ರ ವಚನಂ ವ್ಯಥಿತೋ ಬಭಾಷೇ ॥ ೧೩೯ ॥

ಅ: ಅರ್ಜುನನು ಕರ್ಣನೊಂದಿಗೆ ಆ ಧನುಸ್ಸಿನಿಂದಲೇ ಯುದ್ಧ ಮಾಡಿದ. ಕರ್ಣನೂ ಅಲ್ಲಿ ತನ್ನ ಅಸ್ತ್ರಬಲ, ಬಾಹುಬಲಗಳನ್ನು ತೋರಿಸಿದ. ಅನುಪಮ ಬಿಲ್ಲುಗಾರರಾದ ಇಬ್ಬರು ಬಹುಕಾಲ ಬಾಣಗಳಿಂದ ಹೋರಾಡಿದರು. ಕರ್ಣ ವ್ಯಥೆಗೊಂಡು ನುಡಿದ:

ವಿ: ಇಲ್ಲಿ 'ತೇನ' ಎಂಬುದಕ್ಕೆ ಕರ್ಣನೊಂದಿಗೆ ಎಂಬ, 'ತೇನ ಧನುಷಾ' ಸ್ವಯಂವರ ಕಾಲದಲ್ಲಿ ಉಪಯೋಗಿಸಿದ ಬಿಲ್ಲು ಎಂಬ ಎರಡು ಅರ್ಥಗಳೂ ವಿಹಿತ.

ತ್ವಂ ಫಲ್ಗುನೋ ಹರಿಹಯೋ ದ್ವಿಜಸತ್ತಮೋ ವಾ
ಮೂರ್ತಂ ನ ಮೇ ಪ್ರಮುಖಿತಃ ಸ್ಥಿತಿಮನ್ಯ ಈಷ್ಟೇ ।
ಯೋ ವಾಽಸ್ಮಿ ಕೋಽಪಿ ಯದಿ ತೇ ಕ್ಷಮಮದ್ಯ ಬಾಣಾನ್
ಮುಂಚಾನ್ಯಥೈಹಿ ರಣತಸ್ತ್ವಿತಿ ಪಾರ್ಥ ಆಹ ॥ ೧೪೦ ॥

ಅ: 'ನೀನು ×ಅರ್ಜುನನೋ, ಇಂದ್ರನೋ, ಮೂರ್ತಿಮತ್ತಾಗಿ ನಿಂತಿರುವ ವಿಪ್ರರ ತಪಸ್ಸೋ? ಇತರರಾರೂ ನನ್ನ ಮುಂದೆ ನಿಲ್ಲಲು ಸಮರ್ಥರಾಗಲಾರರು'. ಅರ್ಜುನ ನುಡಿದ

---

೧೩೯. ಅಸ್ಯತಾಂ= ಅನ್ಯೋನ್ಯಶರವಿಕ್ಷೇಪಮಕುರುತಾಮ್ ॥ – (ವಾ.)

೧೩೯. ಅಸುಕ್ಷೇಪಣ ಇತಿ ಧಾತುಃ । – (ಜ.)

೧೩೯ ಬಾಣಾನ್ ಕ್ಷಿಪತಾಮಿತ್ಯರ್ಥಃ । 'ಅಸು ಕ್ಷೇಪಣ' ಇತಿ ಧಾತುಃ । – (ವ.)

೧೪೦. ಹರಿನಾಮಕಾಃ ಹಯಾಃ ಅಶ್ವಾಃ ಯಸ್ಯಾಸೌ ಹರಿಹಯಃ ಇಂದ್ರಸ್ತಸ್ಯಾತ್ಮಜಮರ್ಜುನಮಿತ್ಯರ್ಥಃ । ಇಂದ್ರಸ್ಯ ಹರಿನಾಮಕಾಶ್ವವತ್ವಂ ಇಂದ್ರ ಆಯಾಹಿ ತೂತುಜಾನ ಇತಿ ಋಗ್ಭಾಷ್ಯಟೀಕಾವಾಕ್ಯೇನ ಸಿದ್ಧಮ್ ॥ – (ಸ.)

೧೪೦. ಮೂರ್ತಂ = ಮೂರ್ತಿಮತ್ ದ್ವಿಜಸತ್ತಮೋ ವೇತಿ ಸಂಬಂಧಃ । – (ವಾ.)

೧೪೦. ಮರ್ತ್ಯ ಇತಿ ಪಾಠೇ ಮನುಷ್ಯಃ .... । – (ಜ.)

೧೪೦. ಮುಂಚಾನ್ಯಥೇಹಿ (ವೇ. ಪಾಠ) । ಅನ್ಯಥಾ ನ ಕ್ಷಮಂ ಚೇತ್ ರಣತ ಇಹಿ ಗಚ್ಛ । – (ವೇ.)

× ಕಿಂ ತ್ವಂ ಸಾಕ್ಷಾದ್ಧನುರ್ವೇದೋ ರಾಮೋ ವಾ ವಿಪ್ರಸತ್ತಮ ।
ಅಥ ಸಾಕ್ಷಾದ್ಧರಿಹಯಃ ಸಾಕ್ಷಾದ್ವಾ ವಿಷ್ಣುರಚ್ಯುತಃ ॥
ಆತ್ಮಪ್ರಚ್ಛಾದನಾರ್ಥಂ ವೈ ಬಾಹುವೀರ್ಯಮುಪಾಶ್ರಿತಃ ।
ವಿಪ್ರರೂಪಂ ವಿಧಾಯೇದಂ ಮನ್ಯೇ ಮಾಂ ಪ್ರತಿಯುದ್ಧ್ಯಸೇ ॥
ನ ಹಿ ಮಾಮಾಹವೇ ಕ್ರುದ್ಧಮನ್ಯಃ ಸಾಕ್ಷಾಚ್ಛಚೀಪತೇಃ ।
ಪುಮಾನ್ ಯೋಧಯಿತುಂ ಶಕ್ತಃ ಪಾಂಡವಾದ್ ವಾ ಕಿರೀಟಿನಃ ॥ – ಭಾರತ (ಆದಿ. ೧೮೯/೧೭-೨೧)

'ನಾನು ಯಾರಾದರೇನಂತೆ, ಶಕ್ತನಾಗಿದ್ದರೆ ಬಾಣಗಳನ್ನು ಬಿಡು, ಇಲ್ಲವಾದರೆ ಯುದ್ಧದಿಂದ ಹಿಂತಿರುಗು'.

ವಿ: ೧) 'ನೀನು ಅರ್ಜುನನೋ!' ಎನ್ನುವ ಕರ್ಣನ ಮಾತಿನಲ್ಲಿ ಅವನಿಗೆ ಅರ್ಜುನನೊಂದಿಗೆ ಯುದ್ಧ ಮಾಡುವಾಗ ಅವನು ಬದುಕಿರಬಹುದೇ ಎಂಬ ಸಂಶಯ ಹುಟ್ಟಿರುವುದು ವ್ಯಕ್ತವಾಗಿರುವುದನ್ನು ಗಮನಿಸಬೇಕು.

೨) ಕರ್ಣನು ಹಾಗೆ ಸೋಲಲು ಪರಶುರಾಮರು ನೀಡಿದ್ದ ಶಾಪ ಕಾರಣ. ಅವನು ಮನಸ್ಸಿನಲ್ಲಿ ನಾನು ಅರ್ಜುನನನ್ನು ಮೀರಿಸುವಂತೆ ಯುದ್ಧ ಮಾಡಬೇಕು ಎಂಬ ಸ್ಪರ್ಧೆಯ ಮನೋಭಾವವನ್ನು ಹೊಂದಿದ್ದೇ ಸೋಲಿಗೆ ಕಾರಣವಾಯಿತು ಎಂದು ತಿಳಿಯಬೇಕು.

ಕಾರ್ಯಂ ನ ಮೇ ದ್ವಿಜವರೈಃ ಪ್ರತಿಯೋಧನೇನೇ-
ತ್ಯುಕ್ತ್ವಾ ಯಯೌ ರವಿಸುತಃ ಸ ಸುಯೋಧನಾದ್ಯೈಃ ।
ನಾಗಾಹ್ವಯಂ ಪುರಮಥ ದ್ರುಪದಾತ್ಮಜಾಂ ತಾ-
ಮಾದಾಯ ಚಾರ್ಜುನಯುತಃ ಪ್ರಯಯೌ ಸ ಭೀಮಃ ॥ ೧೪೧ ॥

ಅ: 'ವಿಪ್ರೋತ್ತಮರೊಂದಿಗೆ ಕಾದಿ ನನಗೇನು ಆಗಬೇಕಿಲ್ಲ' ಎಂದು ನುಡಿದು ಕರ್ಣ ದುರ್ಯೋಧನಾದಿಗಳೊಂದಿಗೆ ಹಸ್ತಿನಾಪುರಕ್ಕೆ ಹೊರಟ; +ದ್ರೌಪದಿಯನ್ನು ಕರೆದುಕೊಂಡು ಭೀಮ ಅರ್ಜುನನೊಂದಿಗೆ ಹೊರಟ.

ವಿ: ಭೀಮ ದ್ರೌಪದಿಯನ್ನು ಕರೆದೊಯ್ದ ಎಂಬ ಮಾತಿನಲ್ಲಿ ಅವನ ಅನುಮತಿಯಿಂದ ಅರ್ಜುನ ಗೆದ್ದದ್ದರಿಂದ ದ್ರೌಪದಿಯನ್ನು ನಿಜವಾಗಿ ಪಡೆದ ಶ್ರೇಯಸ್ಸು ಭೀಮನದೇ ಎಂಬ ವಿಷಯ ಸೂಚಿತವಾಗಿರುವುದನ್ನು ಗಮನಿಸಬಹುದು.

ಕುಂತಿಯ ವಿಚಿತ್ರ ಸಂದೇಶ

ಅಗ್ರೇಽಶ್ವಿಪುತ್ರಸಹಿತಃ ಸ ತು ಧರ್ಮಸೂನುಃ
ಪ್ರಾಯಾತ್ ಕುಲಾಲಗೃಹಮನ್ವಪಿ ಭೀಮಪಾರ್ಥೌ ।
ಭಿಕ್ಷೇತಿ ತೈರಭಿಹಿತೇ ಪ್ರಜಗಾದ ಕುಂತೀ
ಭುಙ್ಕ್ಷ್ವೇ ಸಮಸ್ತಶ ಇತಿ ಪ್ರದದರ್ಶ ಕನ್ಯಾಮ್ ॥ ೧೪೨ ॥

\+ ..... ಭೀಮಸೇನಧನಂಜಯೌ ।
..... ಕೃಷ್ಣಯಾನುಗತೌ ತತ್ರ ನೃವೀರೌ ತೌ ವಿರೇಜತುಃ ॥ – ಭಾರತ (ಆದಿ. ೧೮೯/೪೧, ೪೨)

ಅ: ಮುಂಚಿತವಾಗಿ ನಕುಲಸಹದೇವರೊಂದಿಗೆ ಧರ್ಮರಾಜ ಕುಂಬಾರನ ಮನೆಗೆ ತೆರಳಿದ್ದ. ಹಿಂದಿನಿಂದ ಭೀಮಾರ್ಜುನರು ಹೊರಟರು. 'ಭಿಕ್ಷೆ' ಎಂದು ಅವರು ಹೇಳಿದಾಗ ಕುಂತಿಯು ಎಲ್ಲರೂ ಉಣ್ಣಿರಿ ಎಂದಳು. ಅನಂತರ ಕನ್ಯೆಯನ್ನು ಕಂಡಳು.

ಎ: ೧) ಪಾಂಡವರೆಲ್ಲರೂ ಮನೆಗೆ ತೆರಳಿ ಎಂದಿನಂತೆ ಕುಂತಿಗೆ ''ಭಿಕ್ಷೆ ತಂದಿರುವೆವು'' ಎಂದು ನುಡಿದರು. ಕುಂತಿ ತಕ್ಷಣವೇ ಎಂದಿನಂತೆ ಎಲ್ಲರೂ ಉಣ್ಣಿರಿ ಎಂದು ನುಡಿದುಬಿಟ್ಟಳು. ಒಂದು ರೀತಿಯಲ್ಲಿ ಅದು ಪ್ರತಿದಿನದ ಸಂಗತಿಯಾಗಿತ್ತು. ಆದರೆ, ಇಂದು ನಡೆದದ್ದೇ ಬೇರೆ. ಅವಳು ಹಾಗೆಂದ ಮೇಲೆ ಪಾಂಡವರು ತೋರಿಸಿದ್ದು ದ್ರೌಪದಿಯನ್ನು.

೨) ಕುಮಾರವ್ಯಾಸ ಇಲ್ಲಿ ನಾವು ಒಂದು ಮೌಕ್ತಿಕವನ್ನು ತಂದಿರುವೆವು ಎಂದು ಪಾಂಡವರಿಂದ ಹೇಳಿಸುತ್ತಾನೆ; ಅದು ಅಸಂಗತ.

ತಾಯೆ ಬಿನ್ನಹವಿಂದು ಧರಣೀ । ರಾಯರೆಲ್ಲರ ಗೆಲಿದು ತಂದೆನು ।
ನಾಯಕವನನುಪಮಿತಮೌಲ್ಯವನಮಲಮೌಕ್ತಿಕವ ॥ – (ಆದಿ. ೧೬/೬)

ಎಂದಿನಂತೆ ಭಿಕ್ಷೆಗೆ ತೆರಳಿದ್ದವರು ಮುತ್ತಿನ ಮಾಲೆಯನ್ನು ತಂದಿರುವೆವು ಎಂಬುದು ಹೇಗೆ ಉಚಿತ? ಒಂದು ಮಾಲೆಯನ್ನು ಎಲ್ಲರು ಸರಿಯಾಗಿ ಹಂಚಿಕೊಳ್ಳಿರಿ ಎಂಬ ಮಾತೂ ಸಹ ಹೇಗೆ ಸರಿಯಾದೀತು? ಎಲ್ಲಕ್ಕಿಂತ ಹೆಚ್ಚಾಗಿ ಮೂಲದಲ್ಲಿ ಭಿಕ್ಷೆ ಎಂದು ಸ್ಪಷ್ಟವಾಗಿ ಇರುವ ಪದವನ್ನು ನಿಷ್ಕಾರಣವಾಗಿ ಹಾಗೆ ಬದಲಾಯಿಸಿಕೊಳ್ಳುವುದರಲ್ಲಿ ಔಚಿತ್ಯವಾದರೂ ಏನು?

ಪಾಂಡವರ ಬಳಿಗೆ ಶ್ರೀಕೃಷ್ಣ

ಪ್ರಾಮಾದಿಕಂ ಚ ವಚನಂ ನ ಮೃಷಾ ತಯೋಕ್ತಂ
ಪ್ರಾಯೋ ಹಿ ತೇನ ಕಥಮೇತದಿತಿ ಸ್ಮ ಚಿಂತಾ ।
ತೇಷಾಂ ಬಭೂವ ವಸುದೇವಸುತೋ ಹರಿಶ್ಚ
ತತ್ರಾಜಗಾಮ ಪರಮೇಣ ಹಿ ಸೌಹೃದೇನ ॥ ೧೪೩ ॥

---

೧೪೨. ಗತ್ವಾ ತು ತಾಂ ಭಾರ್ಗವಕರ್ಮಶಾಲಾಂ ಪಾರ್ಥೌ ಪೃಥಾಂ ಪ್ರಾಪ್ಯ ಮಹಾನುಭಾವೌ ।
ತಾಂ ಯಜ್ಞಸೇನೀಂ ಪರಮಪ್ರತೀತೌ ಭಿಕ್ಷೇತ್ಯಥಾವೇದಯತಾಂ ನರಾಗ್ರ್ಯೌ ॥
ಕುಟೀಗತಾ ಸಾ ತ್ವನವೇಕ್ಷ್ಯ ಪುತ್ರೌ ಪ್ರೋವಾಚ ಭುಂಕ್ತೇತಿ ಸಮೇತ್ಯ ಸರ್ವೇ ।
ಪಶ್ಚಾಚ್ಚ ಕುಂತೀ ಪ್ರಸಮೀಕ್ಷ್ಯ ಕೃಷ್ಣಾಂ ಕಷ್ಟಂ ಮಯಾ ಭಾಷಿತಮಿತ್ಯುವಾಚ ॥ – ಭಾರತ (ಆದಿ.೧೯೦/೧೨)

ಅ: ಸಾಮಾನ್ಯವಾಗಿ ಕುಂತಿ ಪ್ರಾಮಾದಿಕವಾಗಿಯೂ ತಪ್ಪನುಡಿಯುತ್ತಿದ್ದವಳಲ್ಲ. ಅದರಿಂದ ಇದು ಹೇಗೆ ಎಂಬ ಚಿಂತೆ ಅವರಿಗೆ ಉಂಡಾಯಿತು. ಅಷ್ಟರಲ್ಲಿ ವಾಸುದೇವನಾದ ಶ್ರೀಕೃಷ್ಣನು ಪರಮ ಸ್ನೇಹದಿಂದ ಅಲ್ಲಿಗೆ ಆಗಮಿಸಿದ.

ವಿ: ಕುಂತಿಯ ಮಾತಿನ ಮಹತ್ವ ಇಲ್ಲಿ ನಿರೂಪಿತವಾಗಿದೆ. ಪ್ರಮಾದವಶಾತ್ ಸಹ ಸುಳ್ಳಾಡದ ಮಹಾಮಹಿಳೆ ಅವಳು. ಅದರಿಂದಾಗಿ ಅವಳ ಮಾತಿನಿಂದ ಅವರೆಲ್ಲ ಯೋಚಿಸುವಂತಾಯಿತು ಎಂದರ್ಥ. ಹರಿ ಎಂಬುದು ವೇದವ್ಯಾಸರಿಗೂ ಅನ್ವಯವಾಗುವುದರಿಂದ ಇಲ್ಲಿ ವಸುದೇವಸುತಃ ಎಂದು ವಿಶೇಷಣ ಹಾಕಿರುವರು ಎಂದು ತಿಳಿಯಬೇಕು. ಅವಳ ಮಾತನ್ನು ತೊರೆಯುವಂತೆಯೂ ಇಲ್ಲ, ಒಬ್ಬಳನ್ನೇ ಎಲ್ಲರು ವಿವಾಹವಾಗುವ ಮೂಲಕ ನಡೆಸುವಂತೆಯೂ ಇಲ್ಲ ಎಂಬುದು ಅವಳ ಚಿಂತೆಗೆ ಕಾರಣವಾಯಿತು ಎಂದರ್ಥ. ಈ ಚಿಂತೆ ಪೂರ್ಣಪ್ರಜ್ಞನಾದ ಭೀಮನ ಹೊರತು ಇತರರಿಗೆ ಮಾತ್ರ ಎಂದು ತಿಳಿಯಬೇಕು.

ದ್ರುಪದನ ಜಿಜ್ಞಾಸೆ – ಪಾಂಡವಪರೀಕ್ಷಣ

ಸಂಭಾಷ್ಯ ತೈಃ ಸ ಭಗವಾನಮಿತಾತ್ಮಶಕ್ತಿಃ
ಪ್ರಾಯಾನ್ನಿಜಂ ಪುರಮಮಾ ಯದುಭಿಃ ಸಮಸ್ತೈಃ ।
ಜ್ಞಾತುಂ ಚ ತಾನ್ನಿಶಿ ಸ ತು ದ್ರುಪದಃ ಸ್ವಪುತ್ರಂ
ಪ್ರಸ್ಥಾಪಯತ್ ಸ ಚ ನಿಲೀನ ಇಮಾನಪಶ್ಯತ್ ॥ ೧೪೪ ॥

ಅ: ಅವರೊಂದಿಗೆ ಚೆನ್ನಾಗಿ ಮಾತನಾಡಿ ಅಪರಿಮಿತ ಸಹಜ ಶಕ್ತಿಸಂಪನ್ನನಾದ ಭಗವಾನ್ ಶ್ರೀಕೃಷ್ಣ ಯಾದವರೊಂದಿಗೆ ತನ್ನ ದ್ವಾರಕಾಪಟ್ಟಣಕ್ಕೆ ತೆರಳಿದ. ಅವರನ್ನು ಯಾರೆಂದು ತಿಳಿದುಬರಲೆಂದು ದ್ರುಪದ ರಾತ್ರಿಯಲ್ಲಿ ತನ್ನ ಮಗನಾದ ಧೃಷ್ಟದ್ಯುಮ್ನನನ್ನು ಕಳಿಸಿಕೊಟ್ಟ. ಅವನು ಅಡಗಿಕೊಂಡಿದ್ದೇ ಇವರನ್ನು ಗಮನಿಸಿದ.

ವಿ: ೧) ಹಾಗೆ ಸ್ವತಃ ಶ್ರೀಕೃಷ್ಣ ಬಂದಾಗಲೂ ತಮ್ಮ ಸಮಸ್ಯೆಯನ್ನು ಪಾಂಡವರು ಅವನ ಮುಂದೆ ಹೇಳಿಕೊಳ್ಳಲಿಲ್ಲ. ಸರ್ವಜ್ಞನಾದ ಅವನಾದರೂ ಅದನ್ನು ಪ್ರಸ್ತಾಪಿಸಿ ಪರಿಹರಿಸಲಿಲ್ಲ ಎಂಬುದು ಇಲ್ಲಿಯ ಮತ್ತೊಂದು ವಿಶೇಷ. ಅದಕ್ಕೆ ಅವರಿಗೆಲ್ಲ ಆ ವೇಳೆಗೆ ಸಂಶಯ ಪರಿಹಾರವಾಗಿದ್ದಿತೆಂದೇ ಭಾವ. ಮೂಲದಲ್ಲೂ ಆ ವಿಷಯ ಬಂದಿದೆ. ಕುಂತಿಯ ಮಾತಿನಂತೆ ಆ

---

೧೪೪. ಸ ತು ದ್ರುಪದ ಇತ್ಯತ್ರ ತುಶಬ್ದೇನ ಸಾಮಾನ್ಯತಃ ಯಾಜೋಪಯಾಜಯೋರ್ವಚನೇನ ಜ್ಞಾತತ್ವಾತ್ ವಿಶೇಷೇಣ ಜ್ಞಾತುಮಿತ್ಯರ್ಥೋ೭ಭಿಹಿತಃ ॥ – (ವಾ.)

ವೇಳೆಗೆ ಅವರೆಲ್ಲರಿಗೂ ದ್ರೌಪದಿಯನ್ನು ವಿವಾಹವಾಗುವ +ಅಭಿಲಾಷೆ ಉಂಟಾಗಿತ್ತು. ನಿಶ್ಚಿತವಾದ ವಿಷಯದ ಬಗ್ಗೆ ಪ್ರಶ್ನೆ ಕೇಳುವುದು ತರವಲ್ಲ ಎಂಬುದೇ ಶಾಸ್ತ್ರವಚನ:

ಪ್ರಶ್ನದೋಷಾ ಹಿ ಚತ್ವಾರಃ ಸ್ವವ್ಯಾಹತಿರಸಂಗತಿಃ ।
ಸಿದ್ಧಾರ್ಥತಾ ಚ ವೈಫಲ್ಯಂ ನ ತೈಃ ಸ್ಯಾತ್ ತತ್ತ್ವನಿರ್ಣಯಃ ॥

– ಅನುವ್ಯಾಖ್ಯಾನ (೩/೨/೧೩)

೨) ದ್ರುಪದನಿಗೆ ಆ ವೇಳೆಗಾಗಲೇ ಚಿಂತೆ ಪ್ರಾರಂಭವಾಗಿತ್ತು. ತಾನು ನಿರೀಕ್ಷಿಸಿದ್ದು ಅರ್ಜುನನಿಂದ ಮತ್ಸ್ಯಯಂತ್ರಭೇದನವನ್ನು; ಆದರೆ ಅದನ್ನು ಪೂರೈಸಿದ್ದು ಒಬ್ಬ ಬ್ರಾಹ್ಮಣಕುಮಾರ. ಶಿವನ ವರ ಸುಳ್ಳಾಗುವಂತಿಲ್ಲ; ಕಣ್ಣಾರೆ ಕಂಡದ್ದನ್ನು ಅಲ್ಲಗಳೆಯುವಂತೆಯೂ ಇಲ್ಲ. ಅದರಿಂದ ಅವರು ಶಿವ ಹೇಳಿದಂತೆ ಅರ್ಜುನಾದಿಗಳಾಗಿರಬೇಕು ಎಂದು ಅವನಿಗೆ ಎನ್ನಿಸಿದರೂ, ಅದನ್ನು ಖಚಿತಪಡಿಸಿಕೊಳ್ಳಲೆಂದು ಅವರು ಯಾರೆಂದು ತಿಳಿದುಬರಲೆಂದು ಧೃಷ್ಟದ್ಯುಮ್ನನನ್ನು ಕಳಿಸಿದ ಎಂದರ್ಥ.

ಭಿಕ್ಷಾನ್ನಭೋಜಿನ ಉತೋ ಭಗಿನೀಂ ನಿಜಾಂ ಚ
ತತ್ರಾಪಿ ತೃಪ್ತಹೃದಯಾಮಥ ಯುದ್ಧವಾರ್ತಾಮ್ ।
ತೇಷಾಂ ನಿಶಮ್ಯ ನದತಾಂ ಘನವದ್ಗಭೀರಂ
ಕ್ಷತ್ತ್ರೋತ್ತಮಾ ಇತಿ ಮತಿಂ ಸ ಚಕಾರ ವೀರಃ ॥ ೧೪೫ ॥

ಅ: ಅವರೆಲ್ಲ ಭಿಕ್ಷಾನ್ನ ಉಣ್ಣುವುದನ್ನೂ ತನ್ನ ತಂಗಿ ಅಲ್ಲಿ ಅತ್ಯಂತ ನೆಮ್ಮದಿಯಿಂದಿರುವುದನ್ನೂ, ಅವರೆಲ್ಲ ಮೇಘಗಂಭೀರವಾದ ಧ್ವನಿಯಿಂದ ಯುದ್ಧದ ವಾರ್ತೆಯನ್ನು

\+ ದೃಷ್ಟಿಂ ನಿವೇಶಯಾಮಾಸುಃ ಪಾಂಚಾಲ್ಯಾಂ ಪಾಂಡುನಂದನಾಃ ॥
ದೃಷ್ಟ್ವಾ ತೇ ತತ್ರ ಪಶ್ಯಂತೀಂ ಸರ್ವೇ ಕೃಷ್ಣಾಂ ಯಶಸ್ವಿನೀಮ್ ।
ಸಂಪ್ರೇಕ್ಷ್ಯಾನ್ಯೋನ್ಯಮಾಸೀನಾ ಹೃದಯೈಸ್ತಾಮಧಾರಯನ್ ॥
ತೇಷಾಂ ತು ದ್ರೌಪದೀಂ ದೃಷ್ಟ್ವಾ ಸರ್ವೇಷಾಮಮಿತೌಜಸಾಮ್ ।
ಸಂಪ್ರಮಥ್ಯೇಂದ್ರಿಯಗ್ರಾಮಂ ಪ್ರಾದುರಾಸೀನ್ಮನೋಭವಃ ॥
ಕಾಮ್ಯಂ ಹಿ ರೂಪಂ ಪಾಂಚಾಲ್ಯಾ ವಿಧಾತ್ರಾ ವಿಹಿತಂ ಸ್ವಯಮ್ ।
ಬಭೂವಾಧಿಕಮನ್ಯಾಭ್ಯಃ ಸರ್ವಭೂತಮನೋಹರಮ್ ॥
ತೇಷಾಮಾಕಾರಭಾವಜ್ಞಃ ಕುಂತೀಪುತ್ರೋ ಯುಧಿಷ್ಠಿರಃ ।
ದ್ವೈಪಾಯನವಚಃ ಕೃತ್ಸ್ನಂ ಸಸ್ಮಾರ ಮನುಜರ್ಷಭಃ ॥
ಅಬ್ರವೀತ್ ಸಹಿತಾನ್ ಭ್ರಾತೄನ್ ಮಿಥೋಭೇದಭಯಾನ್ನೃಪಃ ।
ಸರ್ವೇಷಾಂ ದ್ರೌಪದೀ ಭಾರ್ಯಾ ಭವಿಷ್ಯತಿ ಹಿ ನಃ ಶುಭಾ । – ಭಾರತ (ಆದಿ. ೧೯೦/೧೧-೧೬)

ಮಾತನಾಡಿಕೊಳ್ಳುವುದನ್ನೂ ಕೇಳಿಸಿಕೊಂಡು ಅವರು ಕ್ಷತ್ರಿಯೋತ್ತಮರು ಎಂದು ವೀರನಾದ ಧೃಷ್ಟದ್ಯುಮ್ನನು ತೀರ್ಮಾನಿಸಿದ.

ವಿ: ತನ್ನ ತಂಗಿಯ ಸಂತೃಪ್ತ ರೀತಿ, ಅವರ ಮೇಘಗಂಭೀರವಾದ ಧ್ವನಿ ಹಾಗೂ ಯುದ್ಧದ ವಾರ್ತೆಯ ಮಾತುಕಥೆಗಳನ್ನು ಕೇಳಿ ಅವರು ಕ್ಷತ್ರಿಯರೇ ಸರಿ ಎಂಬ ತೀರ್ಮಾನಕ್ಕೆ ಧೃಷ್ಟದ್ಯುಮ್ನ ಬಂದ ಎಂದರ್ಥ.

ಪ್ರಾತಸ್ತು ತಸ್ಯ ಜನಿತುರ್ವಚಸಾ ಪುರೋಧಾ-
ಸ್ತಾನ್ ಪ್ರಾಪ್ಯ ಮಂತ್ರವಿಧಿನಾ ಮರುದಾತ್ಮಜೇನ ।
ಸಂಪೂಜಿತೋಽತಿವಿದುಷಾ ಪ್ರತಿಗೃಹ್ಯ ತಾಂಶ್ಚ
ಪ್ರಾವೇಶಯನ್ ನೃಪತಿಗೇಹಮಮೈವ ಮಾತ್ರಾ ॥ ೧೪೬ ॥

ಅ: ಬೆಳಿಗ್ಗೆ ಅವನ ತಂದೆಯ ಮಾತಿನಂತೆ ಪುರೋಹಿತ ಅವರ ಬಳಿಗೆ ಬಂದ. ಮಹಾಜ್ಞಾನಿಯಾದ ಭೀಮಸೇನ ಶಾಸ್ತ್ರೋಕ್ತ ವಿಧಿಯಂತೆ ಅವನನ್ನು ಸತ್ಕರಿಸಿದ. ಅವರನ್ನು ಕರೆದುಕೊಂಡು ಆ ಪುರೋಹಿತ ಅವರ ತಾಯಿಯೊಂದಿಗೆ ಅರಮನೆಗೆ ಪ್ರವೇಶ ಮಾಡಿಸಿದ.

ತಾನಾಗತಾನ್ ಸಮಭಿಪೂಜ್ಯ ನಿಜಾತ್ಮಜಾಂ ಚ
ವಿಪ್ರಾದಿಯೋಗ್ಯಪೃಥಗುಕ್ತಪದಾರ್ಥಜಾತೈಃ ।
ಪೂರ್ಣಾನ್ ಗೃಹಾಂಶ್ಚತುರ ಏವ ದಿದೇಶ ರಾಜಾ
ತತ್ರಾಯುಧಾದಿಪರಿಪೂರ್ಣಗೃಹಂ ಚ ತೇಽಗುಃ ॥ ೧೪೭ ॥

---

೧೪೬. ತಸ್ಯ = ಧೃಷ್ಟದ್ಯುಮ್ನಸ್ಯ ಜನಿತುಃ = ಜನಕಸ್ಯ ದ್ರುಪದಸ್ಯ। 'ಜನಿತಾ ಮಂತ್ರ,' ಇತಿ ಹ್ಯನುಶಾಸನಮ್ ॥ – (ವಾ.)

೧೪೭. ವಿಪ್ರಾದಿಯೋಗ್ಯಪೃಥಗುಕ್ತಪದಾರ್ಥಜಾತೈರಿತ್ಯತ್ರ ವಿಪ್ರೋ = ಬ್ರಾಹ್ಮಣಃ ಆದಿಪದೇನ ಕ್ಷತ್ರಿಯವೈಶ್ಯಶೂದ್ರಾ ಗೃಹ್ಯಂತೇ। ತೇಷಾಂ ಯೋಗ್ಯಾನಿ ಪೃಥಗುಕ್ತಾನಿ = ಸ್ವಭಾವಶೋಧನಾಯ ದ್ರುಪದೇನ ಪೃಥಕ್ಪೃಥಗುಕ್ತಾನಿ ಪದಾರ್ಥಜಾತಾನಿ ತೈಃ ಅನ್ನಭಕ್ಷಾದ್ಯೈರೇಕತ್ರ ಆಯುಧೈರಪರತ್ರ, ವಸ್ತುಫಲಾದ್ಯೈರನ್ಯತ್ರ ಲಗುಡಲಾಂಗಲಾದ್ಯೈಶ್ಚೈಕತ್ರ ಪೂರ್ಣಾನ್ ಗೃಹಾನಿತ್ಯರ್ಥಃ ॥ – (ವಾ.)

೧೪೭. ದರ್ಭಾದಿಬ್ರಾಹ್ಮಣವರ್ಣಯೋಗ್ಯಮ್ । ಶಸ್ತ್ರಕವಚಾದಿಕ್ಷತ್ರಿಯಯೋಗ್ಯಮ್ । ಧನಾದಿವೈಶ್ಯಯೋಗ್ಯಮ್ । ಲಾಂಗಲಾದಿಕಂ ಶೂದ್ರಸ್ಯೇತಿ ಪೃಥಗುಕ್ತಾ ಏತೇ ಬ್ರಾಹ್ಮಣಸ್ಯ ಯೋಗ್ಯಾಃ । – (ಜ.)

ಅ: ಆಗಮಿಸಿದ ಅವರನ್ನೂ ತನ್ನ ಮಗಳನ್ನೂ ಚೆನ್ನಾಗಿ ಆದರಿಸಿ, ಬ್ರಾಹ್ಮಣಾದಿಗಳಿಗೆ ಯೋಗ್ಯವೆಂಬುದಾಗಿ ಪ್ರತ್ಯೇಕವಾಗಿ ವಿಹಿತವಾದ ಪದಾರ್ಥಗಳ ಗುಂಪುಗಳಿಂದ ತುಂಬಿದ ನಾಲ್ಕು ಮನೆಗಳನ್ನು ಅವರಿಗೆ ತೋರಿಸಿದ. ಅವರು ಅವುಗಳಲ್ಲಿ ಆಯುಧಾದಿಗಳಿಂದ ತುಂಬಿದ್ದ ಮನೆಯನ್ನು ಹೊಕ್ಕರು.

ವಿ: ದ್ರುಪದ ಅವರನ್ನು ಪರೀಕ್ಷಿಸಲೆಂದು ಮತ್ತೊಂದು ವ್ಯವಸ್ಥೆಯನ್ನು ಮಾಡಿದ್ದ. ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ ಉಚಿತವಾದ ಪದಾರ್ಥಗಳಿಂದ ತುಂಬಿದ ನಾಲ್ಕು ಮನೆಗಳನ್ನು ಸಿದ್ಧಪಡಿಸಿ ಅವುಗಳಲ್ಲಿ ಅವರು ಯಾವ ವರ್ಣದವರಿಗೆ ವಿಹಿತವಾದ ಮನೆಯನ್ನು ಪ್ರವೇಶಿಸುವರೋ ಅವರು ಆ ವರ್ಣದವರು ಎಂದು ಬಗೆಯುವುದು ಅವನ ವಿಚಾರ. ಪಾಂಡವರು ಕ್ಷತ್ರಿಯೋಚಿತವಾದ ಅಸ್ತ್ರಾದಿಗಳಿಂದ ಕೂಡಿದ್ದ ಮನೆಯನ್ನೇ ಪ್ರವೇಶಿಸಿದ್ದು ಅವನಿಗೆ ಇನ್ನಷ್ಟು ನಂಬಿಕೆ ಹೆಚ್ಚುವಂತೆ ಮಾಡಿತು.

ಚೇಷ್ಟಾಸ್ವರಾಕೃತಿವಿವಕ್ಷಿತವೀರ್ಯಶೌರ್ಯ-
ಪ್ರಾಗಲ್ಭ್ಯಪೂರ್ವಕಗುಣೈಃ ಕ್ಷಿತಿಭರ್ತೃಪುತ್ರಾನ್ ।
ವಿಜ್ಞಾಯ ತಾನ್ ದ್ರುಪದ ಏತ್ಯ ಚ ಧರ್ಮಸೂನುಂ
ಪಪ್ರಚ್ಛ ಕೋಽಸಿ ನರವರ್ಯ ವದಸ್ವ ಸತ್ಯಮ್ ॥ ೧೪೮ ॥

ಅ: ಅವರ ನಡವಳಿಕೆ, ಧ್ವನಿ, ಆಕಾರ, ಸಾಮರ್ಥ್ಯ, ಶೌರ್ಯ, ಧೈರ್ಯ ಮುಂತಾದ ಕ್ಷತ್ರಿಯೋಚಿತವಾದ ಗುಣಗಳಿಂದಾಗಿ ಅವರನ್ನು ರಾಜಕುಮಾರರೆಂದು ದ್ರುಪದ ನಿಶ್ಚಯಿಸಿದ. ಧರ್ಮರಾಜನ ಬಳಿಗೆ ಬಂದು ಕೇಳಿದ ''ನರೋತ್ತಮ, ನೀನು ಯಾರು? ನಿಜ ಹೇಳು''.

ವಿ: ದ್ರುಪದನು ನಡೆ ನುಡಿಗಳು ಮೊದಲಾದ ಇತರ ವಿವರಗಳನ್ನು ಪರಿಶೀಲಿಸಿ ಅವರನ್ನು ರಾಜಪುತ್ರರೆಂದು ನಿಶ್ಚಯಿಸಿ ಕೊನೆಗೆ ಧರ್ಮರಾಜನನ್ನು ನೇರವಾಗಿ ಆ ಬಗ್ಗೆ ಕೇಳಿಯೇಬಿಟ್ಟ

---

೧೪೮. ಚೇಷ್ಟಾ ಕ್ಷತ್ರಿಯಯೋಗ್ಯಗತಿವ್ಯಾಪಾರವಿಶೇಷಃ । ಸ್ವರಃ ಗಂಭೀರತ್ವಾದಿವಿಶೇಷಯುಕ್ತಾಃ । ಆಕೃತಿಃ ಕ್ಷತ್ರಿಯತ್ವಜ್ಞಾಪಕವಿಶೇಷಯುಕ್ತಾ ವಿವಕ್ಷಿತಮ್ ..... । – (ಜ.)

೧೪೮. ವಿವಕ್ಷಿತವೀರ್ಯಶೌರ್ಯೇತ್ಯತ್ರ ವಿವಿಕ್ಷಿತಂ = ವಕ್ತುಮಭೀಷ್ಟಂ ವಚನಮ್ ॥ – (ವಾ.)

೧೪೯. ಕಿಮಿಹಾದ್ಯ ರಾಜನ್ನಿತ್ಯತ್ರ ಹೇ ರಾಜನ್ ಪುತ್ರೀಕೃತೇ= ತವ ಪುತ್ರ್ಯರ್ಥಂ ವರ್ಣವಿಷಯೇ = ವಿಪ್ರಕ್ಷತ್ರಿಯಾದಿವರ್ಣವಿಷಯೇ ವಿಶೇಷಃ ಪೂರ್ವಂ ನರೇಂದ್ರಸಮಿತೌ ತವ ಸುತೇನ ನೋಕ್ತಃ। ಅ = ಇದಾನೀಂ ವರ್ಣವಿಶೇಷವಿಷಯೇ ಕಿಂ = ಕಿಮರ್ಥಂ ಪೃಚ್ಛಸೀತಿ ಯೋಜನಾ ॥ – (ವಾ.)

ಎಂದರ್ಥ. ಮೊದಲೇ ಹಾಗೆ ಕೇಳದಿದ್ದುದು ತನ್ನ ಮನಸ್ಸಿಗೆ ನಿಧಾನವಾಗಿ ಧೈರ್ಯ ತಂದುಕೊಳ್ಳುವ ಪ್ರಯತ್ನವಾಗಿತ್ತು ಎಂದು ತಿಳಿಯಬೇಕು. ಈ ಪರೀಕ್ಷಾಪ್ರಸಂಗ ಮನಃಶಾಸ್ತ್ರದ ದೃಷ್ಟಿಯಿಂದಲೂ ಅತ್ಯಂತರೋಚಕ. ದಮಯಂತಿ ನಳನನ್ನು ಗುರುತಿಸಲು ಸಹ ಇಂತಹ ಬಗೆಬಗೆಯ ಉಪಾಯ–ಗಳನ್ನು ಕೈಕೊಂಡ ವಿವರ ಮಹಾಭಾರತದಲ್ಲಿದೆ.

ಸ ಪ್ರಾಹ ಮಂದಹಸಿತಃ ಕಿಮಿಹಾದ್ಯ ರಾಜನ್
ಪೂರ್ವಂ ಹಿ ವರ್ಣವಿಷಯೇ ನ ವಿಶೇಷ ಉಕ್ತಃ ।
ಪುತ್ರೀಕೃತೇ ತವ ಸುತೇನ ತು ಲಕ್ಷ್ಯವೇಧ
ಉಕ್ತೋ ನರೇಂದ್ರಸಮಿತೌ ಸ ಕೃತೋಽಪ್ಯನೇನ ॥ ೧೪೯ ॥

ಅ: ಧರ್ಮರಾಜ ನಸುನಗುತ್ತಾ ನುಡಿದ 'ಅದೆಲ್ಲಾ ಈಗೇಕೆ, ಹಿಂದೆ ವರ್ಣದ ವಿಷಯದಲ್ಲಿ ವಿಶೇಷವನ್ನೇನೂ ತಿಳಿಸಿರಲಿಲ್ಲವಷ್ಟೆ. ನಿನ್ನ ಮಗಳಿಗಾಗಿ ನಿನ್ನ ಮಗ ರಾಜಸಭೆಯಲ್ಲಿ ಲಕ್ಷ್ಯವೇಧವನ್ನು ಮಾತ್ರ ತಿಳಿಸಿದ್ದ; ಅದನ್ನು ಈ ನನ್ನ ತಮ್ಮ ಮಾಡಿದ'.

ವಿ: ಧರ್ಮರಾಜ ವಿನೋದ ಮಾಡಿದ ಅಪೂರ್ವ ಪ್ರಸಂಗವಿದು. ಇದರಿಂದ ಮತ್ಸ್ಯಯಂತ್ರ ಭೇದ ಜಾತ್ಯಾಧರಿತವಾಗಿರಲಿಲ್ಲ ಎಂಬುದು ಸ್ಫುಟಪಡುವುದು. ಸೂತಪುತ್ರನಾದ್ದರಿಂದ ಕರ್ಣನನ್ನು ವರಿಸಲಾರೆ ಎಂದು ದ್ರೌಪದಿ ನಿರಾಕರಿಸಿದ ವಿವರ ನೀಡುವ ಪಾಠ ಪ್ರಕ್ಷಿಪ್ತವೆನ್ನಲು ಇದು ಮತ್ತೊಂದು ಗಮಕ.

ಏವಂ ಬ್ರುವಾಣಮಥ ತಂ ಪೃಥಯಾ ಸಹೈವ
ರಾಜಾ ವದೇತಿ ಪುನರೇವ ಯಯಾಚ ಏಷಃ ।
ಸರ್ವಂ ಪೃಥಾऽಪ್ಯವದತಾಂ ಸ ಚ ತೇನ ತುಷ್ಟೋ
ವಾಚಂ ಜಗಾದ ಕೃತಕೃತ್ಯ ಇಹಾಸಮದ್ಯ ॥ ೧೫೦ ॥

ಅ: ಅವನು ಹೀಗೆನ್ನಲು ದ್ರುಪದ ಅವನನ್ನು, ಕುಂತಿಯನ್ನು ಮತ್ತೆ ಮತ್ತೆ ನಿಜ ತಿಳಿಸಿರೆಂದು ಬೇಡಿಕೊಂಡ. ಆಗ ಅವನು ಹಾಗೂ ಕುಂತಿ ಇಬ್ಬರು ಎಲ್ಲವನ್ನೂ ತಿಳಿಸಿದರು. ಅದರಿಂದ ದ್ರುಪದ ಸಂತುಷ್ಟನಾದ. 'ನಾನೀಗ ಕೃತಕೃತ್ಯನಾದೆ' ಎಂಬ ಮಾತನ್ನು ಆಡಿದ.

---

೧೪೯. ಪೂರ್ವೇ ಉದ್ಘೋಷಣಕಾಲೇ । – (ಜ.)

೧೫೦. ಅವದತಾಂ ಸ ಚೇತ್ಯತ್ರ ಪೃಥಾऽಪಿ= ಪೃಥಾ ಚ ಸ = ರಾಜಾ ಚ ಸರ್ವಮವದತಾಮಿತಿ ಸಂಬಂಧಃ ॥ – (ವಾ.)

ವಿ: ಅಂತೂ ಸ್ವಲ್ಪ ಹೊತ್ತು ಅವನೊಂದಿಗೆ ವಿನೋದ ಮಾಡಿದ ಕುಂತಿ ಧರ್ಮರಾಜರು ಕೊನೆಗೆ ತಮ್ಮ ವಿಚಾರವನ್ನು ತಿಳಿಸಿದರು. ದ್ರುಪದ ತನ್ನ ಸಂಕಲ್ಪ ಈಡೇರಿದ್ದಕ್ಕಾಗಿ ಅಪಾರವಾಗಿ ಹರ್ಷಿಸಿದ. ಅವನು ಶಿಖಂಡಿಯನ್ನು ಪುತ್ರನನ್ನಾಗಿ ಪಡೆದಾಗಲೂ ಇಂತಹುದೇ ಸಮಸ್ಯೆಗೆ ಒಳಗಾಗಿದ್ದುದನ್ನು ಸ್ಮರಿಸಿಕೊಳ್ಳಬಹುದು. ತಾನು ಶಿವನನ್ನು ಕೇಳಿದ್ದು ಗಂಡುಮಗುವನ್ನಾದರೂ, ಅವನು ಹೆಣ್ಣು ಹುಟ್ಟಿ ಗಂಡಾಗುವುದು ಎಂದು ನುಡಿದಿದ್ದ. ಅದರಂತೆ ಹೆಣ್ಣು ಹುಟ್ಟಿ ಅದನ್ನು ಗಂಡಿನಂತೆ ಬೆಳೆಸಿ ಕೊನೆಗೆ ಹೆಣ್ಣೊಂದನ್ನು ತಂದು ಮದುವೆ ಮಾಡಿದಾಗ ಸಮಸ್ಯೆ ಪೂರ್ಣಪ್ರಮಾಣದಲ್ಲಿ ತೆರೆದುಕೊಂಡಿತು. ಆಗ ತುಂಬುರು ಗಂಧರ್ವ ನೀಡಿದ ದೇಹದಿಂದಾಗಿ ಶಿಖಂಡಿನಿ ಶಿಖಂಡಿಯಾಗಿ ಅವನ ಅಭಿಲಾಷೆ ಪೂರೈಸಿದಳು. ಅಂತೂ ಅವನು ಶಿವನನ್ನು ಮೆಚ್ಚಿಸಿ ಯಶಸ್ವಿಯಾದ ಎರಡನೇ ಪ್ರಸಂಗ ಇದಾಯಿತು ಎಂದು ತಿಳಿಯಬೇಕು.

ದ್ರೌಪದಿಯ ಪಂಚಪತಿತ್ವ

ಪಾರ್ಥಾರ್ಥಮೇವ ಹಿ ಮಯೈಷ ಕೃತಃ ಪ್ರಯತ್ನ-
ಸ್ತ್ವಂ ಫಲ್ಗುನೋಽನ್ಯ ಉತ ವಾಽದ್ಯ ಕರಂ ಸುತಾಯಾಃ ।
ಗೃಹ್ಣಾತ್ವಿತೀರಿತ ಇಮಂ ಸ ತು ಧರ್ಮಸೂನು-
ರಾಹ ಸ್ಮ ಸರ್ವ ಇತಿ ಮೇ ಮನಸಿ ಪ್ರರೂಢಮ್ ॥ ೧೫೧ ॥

ಅ: ''ಈ ಪ್ರಯತ್ನವನ್ನೆಲ್ಲಾ ನಾನು ಮಾಡಿದ್ದು ಅರ್ಜುನನಿಗಾಗಿ, ನೀನೋ, ಅರ್ಜುನನೋ ಅಥವಾ ಇತರರೋ ನನ್ನ ಮಗಳ ಕೈಯನ್ನು ಇಂದು ಹಿಡಿಯಬೇಕು'' - ಅವನು ಹೀಗೆನ್ನಲು ಧರ್ಮರಾಜ ನುಡಿದ ''ಸರ್ವರೂ ಪಾಣಿಗ್ರಹಣ ಮಾಡುವುದೆಂದು ನನ್ನ ಮನಸ್ಸಿನ ನಿಶ್ಚಯ''.

ವಿ: ದ್ರುಪದ ಹೀಗೆ ಮಾತನಾಡಿದ್ದು ದ್ರೌಪದಿ ಸ್ವಯಂವರದಲ್ಲಿ ಅರ್ಜುನನ ಕೊರಳಲ್ಲಿ ಹಾಕಿದ ಮಾಲೆ ವಿವಾಹ ಕ್ರಿಯೆಯಲ್ಲ ಎಂಬುದನ್ನು ಸ್ಪಷ್ಟಪಡಿಸುವುದು. ದ್ರುಪದ ಹೀಗೆ ಧರ್ಮರಾಜ ಅಥವಾ ಬೇರೆಯವರು ಮದುವೆಯಾಗಬಹುದು ಎನ್ನುವ ಮಾತಿಗೆ ಹಿರಿಯನಾದ ಧರ್ಮರಾಜನಿಗೆ ಮದುವೆಯಾಗಿಲ್ಲವಾದ್ದರಿಂದ ಅವರಿಗಿಂತ ಕಿರಿಯನಾದ ಅರ್ಜುನನ ಮದುವೆಗೆ ಪ್ರಸ್ತಾಪಿಸುವುದು ಅಷ್ಟು ಸರಿಯಾಗದೆಂಬ ಭಾವನೆಯಿಂದ ಎಂದು ಊಹಿಸಬೇಕಾಗುವುದು. ಭೀಮಸೇನ ಹಿಡಿಂಬೆಯ

---

೧೫೧. ತ್ವಂ ವಾ ಗೃಹಾಣ ಫಲ್ಗುನೋ ವಾ ಅನ್ಯೋ ವಾ ಗೃಹ್ಣಾತ್ವಿತಿ ಯೋಗ್ಯವಿಭಕ್ತ್ಯಧ್ಯಾಹಾರೇಣ ಸಂಬಂಧಃ। ಸರ್ವೇ ಗೃಹ್ಣೀಮ ಇತಿ ಮೇ ಮನಸಿ ಪ್ರರೂಢಂ = ಅಂಕುರಿತಂ ಇತಿ ಧರ್ಮಸೂನುರಿಮಂ ದ್ರುಪದಮಾಹೇತಿ ಯೋಗ್ಯವಿಭಕ್ತ್ಯಧ್ಯಾಹಾರೇಣ ಯೋಜನಾ ॥ – (ವಾ.)

೧೫೧ ಸರ್ವೇಷಾಂ ಮಹಿಷೀ ರಾಜನ್ ದ್ರೌಪದೀ ನೋ ಭವಿಷ್ಯತಿ ॥ – ಭಾರತ (ಆದಿ. ೧೯೪/೨೩)

ಪ್ರಸಂಗದಲ್ಲಿ ಅಣ್ಣನಿಗಿಂತ ಮುಂಚೆ ನಾನು ಮದುವೆಯಾಗಲಾರೆ ಎಂದು ಹೇಳಿದ್ದನ್ನು ಇಲ್ಲಿ ಗಮನಿಸಬಹುದು. ಆದರೆ, ಅದಕ್ಕೆ ಧರ್ಮರಾಜ ನೀಡಿದ ಉತ್ತರ ದ್ರುಪದನನ್ನು ಮತ್ತೊಮ್ಮೆ ಗೊಂದಲದಲ್ಲಿ ಬೀಳಿಸಿತು.

ವ್ಯಾಸಾಗಮನ

ನಾತ್ರ ಪ್ರಮಾ ಮಮ ಹೃದಿ ಪ್ರತಿಭಾತ್ಯಥಾಪಿ
ಧರ್ಮಾಚಲಾ ಮಮ ಮತಿರ್ಹಿ ತದೇವ ಮಾನಮ್ ।
ಇತ್ಯುಕ್ತವತ್ಯಪಿ ಸಹೈವ ಸುತೇನ ರಾಜಾ
ನೈವೈಚ್ಛದತ್ರ ಭಗವಾನಗಮಚ್ಚ ಕೃಷ್ಣಃ ॥ ೧೫೨ ॥

ಅ: 'ಈ ವಿಷಯದಲ್ಲಿ ಪ್ರಮಾಣವೇನೂ ನನ್ನ ಮನಸ್ಸಿಗೆ ತೋಚುತ್ತಿಲ್ಲ. ಆದರೂ ನನ್ನ ಬುದ್ಧಿ ಧರ್ಮದಲ್ಲಿ ಸ್ಥಿರವಾದುದು. ಅದೇ ಇದಕ್ಕೆ ಆಧಾರ' ಧರ್ಮರಾಜ ಹೀಗೆಂದರೂ ಮಗನೊಂದಿಗೆ ದ್ರುಪದ ರಾಜ ಮತ್ತು ಧೃಷ್ಟದ್ಯುಮ್ನ ಅದಕ್ಕೆ ಸರ್ವಥಾ ಸಮ್ಮತಿಸಲಿಲ್ಲ. ಅಲ್ಲಿಗೆ ಸಾಕ್ಷಾತ್ ಭಗವಂತನಾದ ಶ್ರೀವೇದವ್ಯಾಸರು ಆಗಮಿಸಿದರು.

ವಿ: ಧರ್ಮರಾಜ ತನ್ನ ಮಾತಿಗೆ ಬೇರಾವ ಆಧಾರವೂ ಇಲ್ಲ, ಆದರೆ ಆ ವಿವಾಹದ ಮಟ್ಟಿಗೆ ಯಾವ ಧರ್ಮವಿರೋಧವೂ ಇಲ್ಲ ಎನ್ನಲು ತನ್ನ ಶುದ್ಧ ಬುದ್ಧಿಯೇ ಆಧಾರ ಎಂದು ನುಡಿದ. ಹೀಗೆ ತಮ್ಮ ಮನಸ್ಸನ್ನೇ ಆಧಾರವಾಗಿ ಕೊಡುವ ಅರ್ಹತೆ ವಿಶೇಷ ಸಿದ್ಧಿ ಪಡೆದ ಧರ್ಮರಾಜನಂತಹ ಮಹಾಸಾಧಕರಿಗೆ ಮಾತ್ರ. ದುಷ್ಯಂತ ಶಕುಂತಲೆಯನ್ನು ಕಂಡಾಗ ಅವಳು ನಿಜಕ್ಕೂ ತನ್ನ ಪರಿಗ್ರಹಕ್ಕೆ ಯೋಗ್ಯಳಾದ +ಕ್ಷತ್ರಿಯಕನ್ಯೆಯೇ ಇರಬೇಕು, ಅದಕ್ಕೆ ತನ್ನ ಮನಸ್ಸು ಅವಳಲ್ಲಿ

---

೧೫೨. ನಾತ್ರ ಪ್ರಮೇತ್ಯತ್ರ ಅತ್ರ= ಪಂಚಭಿರೇಕಸ್ಯಾಃ ಪಾಣಿಗ್ರಹಣೇ ಪ್ರಮಾ= ಪ್ರಮಾಣಂ ಮಮ ಹೃದಿ ನ ಪ್ರತಿಭಾತಿ। ಅಥಾಪಿ= ತಥಾऽಪಿ ಮಮ ಮತಿಃ ಧರ್ಮಾಚಲಾ ಹಿ ಧರ್ಮೇ ನ ಚಲತೀತಿ ಧರ್ಮಾಚಲಾ= ಧರ್ಮ ಏವ ದೃಢೇತ್ಯರ್ಥಃ। ಹೀತ್ಯನೇನ ಸ್ವಸ್ಯ ಧರ್ಮರಾಜತ್ವಪ್ರಸಿದ್ಧಿಂ ಸೂಚಯತಿ। ತದೇವ= ಮಮ ಮತೇ ಧರ್ಮಾಚಲತ್ವಮೇವ ಮಾನಂ= ಪ್ರಮಾಣಮ್ । – (ವಾ.)

೧೫೨. ಪ್ರಮಾ ಪ್ರಮಾಣಮ್ । – (ಜ.)

೧೫೨. ಸೂಕ್ಷ್ಮೋ ಧರ್ಮೋ ಮಹಾರಾಜ ನಾಸ್ಯ ವಿದ್ಮೋ ವಯಂ ಗತಿಮ್ ।
ನ ಮೇ ವಾಗನೃತಂ ಪ್ರಾಹ ನಾಧರ್ಮೇ ಧೀಯತೇ ಮತಿಃ ।
ಏವಂ ಚೈವ ವದತ್ಯಂಬಾ ಮಮ ಚೈತನ್ಮನೋಗತಮ್ ॥ – ಭಾರತ (ಆದಿ. ೧೯೪/೨೯, ೩೦)

\+ 'ನ ಮೇऽನ್ಯತ್ ಕ್ಷತ್ರಿಯಾಯಾಂ ಮನೋ ಜಾತು ಪ್ರವರ್ತತೇ' । – ಭಾರತ (ಆದಿ. ೭೦/೧೪)

ಅನುರಕ್ತವಾದದ್ದೇ ಕಾರಣ ಎಂದು ನಿಶ್ಚಯಿಸಿದ್ದು ಇದಕ್ಕೆ ಮತ್ತೊಂದು ನಿದರ್ಶನ. ಧರ್ಮದ ಲಕ್ಷಣವನ್ನು ಹೇಳುವ ಶಾಸ್ತ್ರದ ಮಾತೂ ಇದನ್ನು ಒಪ್ಪಿದೆ :

'ಆಚಾರಶ್ಚೈವ ಸಾಧೂನಾಂ ಸ್ವಾತ್ಮನಸ್ತುಷ್ಟಿರೇವ ಚ'

ಆದರೆ, ಇದನ್ನು ಸಾಮಾನ್ಯಜನ ಧರ್ಮನಿರ್ಣಯಕ್ಕೆ ದುರ್ಬಳಕೆ ಮಾಡುವುದು ಸರ್ವಥಾ ತರವಲ್ಲ. ಸದಾ ತಪ್ಪುವ ಜನರಿಗೆ ಈ ರೀತಿಯಾಗಿ ತಮ್ಮ ಮನಸ್ಸನ್ನೇ ಆಧಾರವನ್ನಾಗಿ ನೀಡುವುದು ಸಲ್ಲದು. ಇದು ದ್ರುಪದ, ಧೃಷ್ಟದ್ಯುಮ್ನರಿಗೆ ಒಪ್ಪಿಗೆಯಾಗಲಿಲ್ಲ. ಆ ವೇಳೆಗೆ ಆ ಸಮಸ್ಯೆಯ ಪರಿಹಾರಕ್ಕಾಗಿ ಸ್ವತಃ +ಶ್ರೀವೇದವ್ಯಾಸರೇ ಆಗಮಿಸಿದರು. ಸಮಸ್ಯೆಯ ಪರಿಹಾರಕ್ಕೆಂದೇ ವೇದವ್ಯಾಸಾವತಾರ ಎಂಬ ವಿಷಯ ಈಗಾಗಲೇ ಬಂದಿದೆ. ಅವರು ಹೀಗೆ ಬರುವ ಮೂಲಕ ಆ ವಿವಾಹ ತಮಗೆ ಪ್ರಿಯ ಎಂದು ಜಗತ್ತಿಗೆ ಸಾರುವುದೂ ಬೇಕಿತ್ತು ಎಂದೂ ತಿಳಿಯಬಹುದು.

ವ್ಯಾಸಂ ತಮೀಕ್ಷ್ಯ ಭಗವಂತಮಗಣ್ಯಪೂರ್ಣ-
ನಿತ್ಯಾವ್ಯಯಾತ್ಮಗುಣಮಾಶು ಸಮಸ್ತ ಏವ ।
ನತ್ವಾಽಭಿಪೂಜ್ಯ ವರಪೀಠಗತಸ್ಯ ಚಾಜ್ಞಾ-
ಮಾದಾಯ ಚೋಪವಿವಿಶುಃ ಸಹಿತಾಸ್ತದಂತೇ ॥ ೧೫೩ ॥

ಅ: ಅನಂತವೂ, ಪರಿಪೂರ್ಣವೂ, ಅವ್ಯಯವೂ ಆದ ಸ್ವರೂಪ ಗುಣಗಳನ್ನು ಉಳ್ಳವರೂ ಭಗವಂತನೂ ಆದ ಶ್ರೀವೇದವ್ಯಾಸರನ್ನು ಎಲ್ಲರೂ ನಮಸ್ಕರಿಸಿ ಪೂಜಿಸಿದರು. ಶ್ರೇಷ್ಠವಾದ ಪೀಠದಲ್ಲಿ ಅವರು ಕುಳಿತ ಮೇಲೆ ಅವರ ಅಪ್ಪಣೆ ಪಡೆದು ಎಲ್ಲರೂ ಜೊತೆಯಾಗಿ ಕುಳಿತರು.

\+ ಅಥ ದ್ವೈಪಾಯನೋ ರಾಜನ್ನಭ್ಯಗಚ್ಛದ್ ಯದೃಚ್ಛಯಾ । – ಭಾರತ (ಆದಿ. ೧೯೪/೩೩)

೧೫೩. ನಿತ್ಯಾವ್ಯಯೇತ್ಯತ್ರ ನಿತ್ಯಾಃ = ನಾಶರಹಿತಾಃ ಅವ್ಯಯಾಃ = ಹ್ರಾಸರಹಿತಾಃ । .... ಸಮಸ್ತೇ ಜಗತಿ ಭಗವಂತಂ ಪೂಜ್ಯಮಿತಿ ವಾ । ''ಅತ್ರಭವಾನ್ ಭಗವಾನಿತಿ ಶಬ್ದೋ ವೃದ್ಧೈಃ ಪ್ರಯುಜ್ಯತೇ ಪೂಜ್ಯ'' ಇತಿ ಹಲಃ ॥ – (ವಾ.)

೧೫೩. ಸಮಸ್ತಃ ಸರ್ವೇ । – (ವೇ.)

೧೫೩. ಸಮಸ್ತೇ ಛಾಂದಸತ್ವಾತ್ । – (ಜ.)

೧೫೩. ಸಮಃ ತೇ ಏವೇತಿ ಪದತ್ರಯಂ ಸಮಃ ಸಮೀಚೀನಾ ಇತ್ಯರ್ಥಃ । ಅಯಂ ಸಮಶಬ್ದಃ 'ಸಮಭೇದೇ ಸಮೀಚೀನೇ ಸುಷ್ಠು ಪೂಜಾಸುಖೇಷು ಚ' ಇತಿ ಯಾದವಃ । ಅಥವಾ ಯತ್ತದೋರ್ನಿತ್ಯಸಂಬಂಧಾತ್ ಯಃ ಸಮಃ ತಂ ವ್ಯಾಸಮೀಕ್ಷೇತಿ ಮೂಲರೂಪಾದಿನಾ ಗುಣಾದೌ ಸಮಾನ ಇತ್ಯರ್ಥಃ । ಸಮಾ ಜ್ಞಾನಂ ರಮಾ ವಾ ತಯಾ ಸಹಿತಃ ಸಮಾ ಇತಿ ವಾ । ಅಥ ವಾ ಸಮಃ ಅವಿಕ್ರಯಃ ಸಮ್ ಅವೈಕ್ಲವ್ಯೈ ಇತಿ ಧಾತೋಃ ।... – (ತಿ.)

ವಿ: 'ಸಮಸ್ತ' ಎಂಬುದನ್ನು 'ಸಮಃ ತೇ' ಎಂದು ವಿಭಾಗಿಸಿ, ಅಲ್ಲಿನ 'ಸಮ' ಶಬ್ದಕ್ಕೆ ಸಮೀಚೀನ, ಮೂಲರೂಪ ಅವತಾರರೂಪಗಳಲ್ಲಿ ಗುಣಾದಿಗಳಲ್ಲಿ ಸರ್ವಸಮನಾದ ಶ್ರೀವ್ಯಾಸ–ರೂಪದ ಶ್ರೀಹರಿ ಎಂದೂ, ಲಕ್ಷ್ಮೀಸಮೇತನಾದ ಶ್ರೀಹರಿ ಎಂದೂ ಸಹ ಅರ್ಥಮಾಡಿ–ಕೊಳ್ಳಬಹುದು.

ಪಾಂಡವ ದ್ರೌಪದಿಯರ ಸ್ವರೂಪ ಪರಿಚಯ

ಕೃಷ್ಣಸ್ತದಾऽऽಹ ನೃಪತಿಂ ಪ್ರತಿದೇಹಿ ಕನ್ಯಾಂ
ಸರ್ವೇಭ್ಯ ಏವ ವೃಷವಾಯುಪುರಂದರಾ ಹಿ ।
ನಾಸತ್ಯದಸ್ರಸಹಿತಾ ಇಮ ಏವ ಇಂದ್ರಾಃ
ಪೂರ್ವೇ ಚ ಸಂಪ್ರತಿತನಶ್ಚ ಹರೇರ್ಹಿ ಪಶ್ಚಾತ್ ॥ ೧೫೪ ॥

ಅ: ಶ್ರೀವೇದವ್ಯಾಸರು ಆಗ ದ್ರುಪದನಿಗೆ ಹೇಳಿದರು 'ನೀನು ಇವರೆಲ್ಲರಿಗೂ ಕನ್ಯೆಯನ್ನು ನೀಡು, ಇವರು ಯಮ, ವಾಯು, ಇಂದ್ರ ಮತ್ತು ಅಶ್ವಿನೀ ದೇವತೆಗಳು. ಇವರೆಲ್ಲ ಯಜ್ಞನಾಮಕನಾದ ಶ್ರೀಹರಿಯ ಹಿಂದೆಯೂ, ಮುಂದೆಯೂ ಮತ್ತು ಈಗಲೂ ಇಂದ್ರರಾದವರು'.

ವಿ: ಶ್ರೀವೇದವ್ಯಾಸರು ಪಾಂಡವರ ಸ್ವರೂಪವನ್ನು ಅವರೆಲ್ಲ [+]ಇಂದ್ರಪದವಿಯಲ್ಲಿದ್ದವರು ಎಂದು ತಿಳಿಸಿಕೊಡುವರು. ಅರ್ಜುನನಂತೂ ಈಗ ಇಂದ್ರಪದವಿಯಲ್ಲಿರುವವನು. ಉಳಿದೆಲ್ಲರೂ

---

೧೫೪. ಸಂಪ್ರತಿತನಶ್ಚ ಹರೇರಿತ್ಯತ್ರ ಹರೇಃ = ಯಜ್ಞನಾಮಪ್ರಾಥಮಿಕೇಂದ್ರಾತ್ ಪಶ್ಚಾತ್ ನಾಸತ್ಯದಸ್ರಸಹಿತಾಃ ವೃಷವಾಯುಪುರಂದರಾದ್ಯಾಃ ಏತದಾಖ್ಯಾ ಇತ್ಯರ್ಥಃ। ಯೇ ಪೂರ್ವೇಂದ್ರಾಃ ಯೋ ಹಿ ಸಂಪ್ರತಿತನಃ= ಇದಾನೀಂತನ ಇಂದ್ರಶ್ಚ ಇಮ ಏವ= ಪಂಚಪಾಂಡವಾ ಹೀತಿ ಸಂಬಂಧಃ। ಪುರಂದರಪದೇನಾತೀತೇಂದ್ರಃ ಕಥ್ಯತೇ ತಸ್ಯೈವೇದಾನೀಂ ಐಂದ್ರಪದಪ್ರಾಪ್ತೇಃ ಸಂಪ್ರತಿತನಶ್ಚೇತ್ಯುಕ್ತಮ್। ಏವಂ ಸಂಖ್ಯಯಾ ಷಡಿಂದ್ರಾ ಅಪಿ ದ್ವಯೋರೇಕತ್ವಾತ್ ಪಂಚೇಂದ್ರಾ ಏವ। ಆಕಾರವೈರೂಪ್ಯಮಾತ್ರಸೂಚನಾಯ ಇಮ ಏವ ಇಂದ್ರಾ ಇತಿ ವಿಸಂಧಿಕರಣಮ್। ಅಥವಾ ''ತೇऽವರ್ಧಂತ ಸ್ವತವಸೋ ಮಹಿತ್ವನೇ''ತಿ ಛಂದಃ ಪ್ರಸಿದ್ಧಿಂ ಸೂಚಯಿತುಂ ಛಾಂದಸಃ ಪ್ರಯೋಗಃ। ಅನ್ಯಥಾ ಇಮ ಏವ ಚೇಂದ್ರಾ ಇತಿ ಸ್ಪಷ್ಟಂ ವಕ್ತುಂ ಶಕ್ಯತ್ವೇऽಪಿ ಕುತೋ ನಾವಕ್ಷ್ಯತ್। ಮೂಲರೂಪಾಣಾಮವತಾರರೂಪಾಣಾಂ ಚ ಪ್ರತ್ಯೇಕಂ ಭಾರತಾದಿಷು ಪ್ರಸಿದ್ಧಿಂ ಸೂಚಯಿತುಂ ಉಭಯತ್ರಾಪಿ ಹಿಶಬ್ದಃ ॥ – (ವಾ.)

\+ ಇಹೈವ ತೇ ಪಾಂಡವಾ ವೀರ್ಯವಂತಃ ಶಕ್ರಸ್ಯಾಂಶಃ ಪಾಂಡವಃ ಸವ್ಯಸಾಚೀ ॥
ಏವಮೇತೇ ಪಾಂಡವಾಃ ಸಂಬಭೂವುರ್ಯೇ ತೇ ರಾಜನ್ ಪೂರ್ವಮಿಂದ್ರಾ ಬಭೂವುಃ ।
ಲಕ್ಷ್ಮೀಶ್ಚೈಷಾಂ ಪೂರ್ವಮೇವೋಪದಿಷ್ಟಾ ಭಾರ್ಯಾ ಯೈಷಾ ದ್ರೌಪದೀ ದಿವ್ಯರೂಪಾ ॥
– ಭಾರತ (ಆದಿ. ೧೯೬/೩೪, ೩೫)

ಹಿಂದೊಮ್ಮೆ ಇಂದ್ರಪದವಿಯಲ್ಲಿದ್ದವರೇ. ಹೀಗೆ ಅವರು ಐವರೂ ಇಂದ್ರರು ಎಂದು ತಿಳಿಸುವ ಈ ಭಾಗ(ಆದಿಪರ್ವ ಅಧ್ಯಾಯ ೧೯೬) ಮಹಾಭಾರತದಲ್ಲಿ **ಪಂಚೇಂದ್ರೋಪಾಖ್ಯಾನ** ಎಂದೇ ಪ್ರಸಿದ್ಧವಾಗಿದೆ.

ಏಷಾಂ ಸ್ತ್ರಿಯಶ್ಚ ನಿಖಿಲಾ ಅಪಿ ಚೈಕದೇಹಾಃ
ಪುತ್ರೀ ತವೈವ ನ ತತೋಽತ್ರ ವಿರುದ್ಧತಾ ಹಿ ।
ಇತ್ಯುಕ್ತವತ್ಯಪಿ ತದಾ ದ್ರುಪದಶ್ಚಕಾರ
ಸಂವಾದಿನೀಂ ನ ಧಿಯಮೇನಮಥಾಹ ಕೃಷ್ಣಃ ॥ ೧೫೫ ॥

ಅ: 'ಇವರ ಪತ್ನಿಯರೆಲ್ಲ ಒಂದೇ ದೇಹದಲ್ಲಿ ಸೇರಿ ನಿನ್ನ ಮಗಳಾಗಿರುವರು; ಆದ್ದರಿಂದ ಇದರಲ್ಲಿ ವಿರೋಧ ಸರ್ವಥಾ ಇಲ್ಲ'. ಅವರು ಹೀಗೆ ತಿಳಿಸಿದರೂ ದ್ರುಪದ ರಾಜ ಒಪ್ಪುವ ಮನಸ್ಸು ಮಾಡಲಿಲ್ಲ. ಆಗ ವೇದವ್ಯಾಸರು ಮತ್ತೆ ಹೀಗೆಂದರು :

ವಿ: ೧) ಯಮ ಮೊದಲಾದವರ ಪತ್ನಿಯರಾದ ಶ್ಯಾಮಲಾ, ಭಾರತೀ, ಶಚಿ ಹಾಗೂ ಉಷಾದೇವಿಯರು ಒಟ್ಟಾಗಿ ಒಂದೇ ದೇಹದಲ್ಲಿ ದ್ರುಪದನಿಗೆ ಮಗಳಾಗಿ ಜನಿಸಿರುವರು ಎಂದರ್ಥ. ಅವರು ಹಾಗೆ ಜನಿಸಲು ಕಾರಣ ಮೊದಲಾದ ವಿವರಗಳು ಹದಿನೆಂಟನೇ ಅಧ್ಯಾಯದಲ್ಲಿ ಈಗಾಗಲೇ ನಿರೂಪಿತವಾಗಿವೆ (೧೮/೧೦೭–೧೩೦).

೨) ಪ್ರಸಕ್ತಿಯಿಲ್ಲವಾದ್ದರಿಂದ ದ್ರೌಪದಿ ದೇಹದಲ್ಲಿ ಪಾರ್ವತಿ ಇರುವ ವಿವರವನ್ನು ಪ್ರಸ್ತಾಪಿಸಿಲ್ಲ ಎಂದು ತಿಳಿಯಬೇಕು. ಅದರಂತೆ ಅದು ಒಬ್ಬಳು ಕನ್ಯೆಗೆ ಐದು ಪುರುಷರೊಂದಿಗೆ ನಡೆಯುವ ವಿವಾಹವಲ್ಲ, ಆ ದೇಹದೊಳಗಿರುವ ಒಬ್ಬೊಬ್ಬ ದೇವತಾಸ್ತ್ರೀಗೂ ಅವರವರ ನಿಯತ ಪತಿಯೊಂದಿಗೆ ನಡೆಯುವ ಶಾಸ್ತ್ರೋಕ್ತ ವಿವಾಹವಾದ್ದರಿಂದ ಅದರಲ್ಲಿ ಯಾವುದೇ ವಿಧವಾದ ಧರ್ಮವಿರೋಧಕ್ಕೂ ಅವಕಾಶವಿಲ್ಲ ಎಂದು ಭಾವ.

ವ್ಯಾಸರಿಂದ ದ್ರುಪದನಿಗೆ ದಿವ್ಯದೃಷ್ಟಿ

ದಿವ್ಯಂ ಹಿ ದರ್ಶನಮಿದಂ ತವ ದತ್ತಮದ್ಯ
ಪಶ್ಯಾಶು ಪಾಂಡುತನಯಾನ್ ದಿವಿ ಸಂಸ್ಥಿತಾಂಸ್ತ್ವಮ್ ।
ಏತಾಂ ಚ ತೇ ದುಹಿತರಂ ಸಹ ತೈಃ ಪೃಥಕ್ಸ್ಥಾಂ
ತಲ್ಲಕ್ಷಣೈಃ ಸಹ ತತಃ ಕುರು ತೇ ಯಥೇಷ್ಟಮ್ ॥ ೧೫೬ ॥

ಆ: ''ನಿನಗೀಗ ನಾನು ದಿವ್ಯ ದೃಷ್ಟಿಯನ್ನು ನೀಡುವೆ, ಪಾಂಡವರೆಲ್ಲ ದೇವಲೋಕದಲ್ಲಿರುವ ದೇವತೆಗಳು ಎಂಬುದನ್ನು ನಿನ್ನ ಈ ಮಗಳು ಅವರೊಂದಿಗೆ ಪ್ರತ್ಯೇಕವಾಗಿ ಜೊತೆಗಿರುವುದನ್ನು ನೀನು ನೋಡು, ಬಳಿಕ ನಿನಗೆ ಇಷ್ಟ ಬಂದಂತೆ ಮಾಡು''.

ವಿ: ಅರ್ಜುನನಿಗೆ ತನ್ನ ವಿಶ್ವರೂಪವನ್ನು ನೋಡಲು ಶ್ರೀಕೃಷ್ಣ ದಿವ್ಯದೃಷ್ಟಿಯನ್ನು ನೀಡಿದಂತೆ ವಾಸಿಷ್ಠಕೃಷ್ಣರಾದ ಶ್ರೀವೇದವ್ಯಾಸರು ದ್ರುಪದನಿಗೆ ದ್ರೌಪದಿಯ ಹಾಗೂ ಪಾಂಡವರ ಸ್ವರೂಪವನ್ನು ತಿಳಿಯಲು ದಿವ್ಯ ದೃಷ್ಟಿಯನ್ನು ನೀಡುವರು. ದಿವ್ಯವಾಕ್ಯಗಳನ್ನು ಮಾತ್ರವಲ್ಲದೇ ದಿವ್ಯದೃಷ್ಟಿಯನ್ನೂ ಹೀಗೆ ನೀಡುವುದು ವೇದವ್ಯಾಸರ ಪರಮಾತ್ಮತ್ವಕ್ಕೆ ದ್ಯೋತಕ. ವಾಯು ಮೊದಲಾದವರ ಸ್ವರೂಪವನ್ನು ಹಾಗೆ ಸ್ಪಷ್ಟ ತೋರುವಂತಹ ದಿವ್ಯದೃಷ್ಟಿಯನ್ನು ನೀಡುವಂತಹ ಇವರು ಅವರೆಲ್ಲರಿಗಿಂತ ಮಿಗಿಲಾದವರು ಎಂಬುದು ಕೈಮುತ್ಯಸಿದ್ಧ. ಶ್ರೀಕೃಷ್ಣ ಗೀತೋಪದೇಶ ನೀಡಿದ ಅನಂತರ 'ಯಥೇಚ್ಛಸಿ ತಥಾ ಕುರು' ಎಂದು ನುಡಿದಂತೆ, ಇಲ್ಲಿಯೂ ಶ್ರೀವೇದವ್ಯಾಸರು 'ಕುರು ತೇ ಯಥೇಷ್ಟಂ' ಎಂದಿರುವುದು ಗಮನಾರ್ಹ. ಹೀಗೆ ವಿಚಾರ ಸ್ವಾತಂತ್ರ್ಯವನ್ನು ನೀಡುವುದು ನಮ್ಮ ಶಾಸ್ತ್ರ ಪರಂಪರೆಯ ವೈಶಿಷ್ಟ್ಯ.

ವಿವಾಹಕ್ಕೆ ದ್ರುಪದನ ಸಮ್ಮತಿ

ಇತ್ಯುಕ್ತವಾಕ್ಯಮನು ತಾನ್ ಸ ದದರ್ಶ ರಾಜಾ
ಕೃಷ್ಣಪ್ರಸಾದಬಲತೋ ದಿವಿ ತಾದೃಶಾಂಶ್ಚ ।
ಏತಾನ್ ನಿಶಾಮ್ಯ ಚರಣೌ ಜಗದೀಶಿತುಶ್ಚ
ಭೀತೋ ಜಗಾಮ ಶರಣಂ ತದನಾದರೇಣ ॥ ೧೫೭ ॥

---

೧೫೬. ತೈಃ = ಪಾಂಡವೈಃ ಪೃಥಕ್ತ್ವಂ ತಲ್ಲಕ್ಷಣೈಃ= ತಾಸಾಂ ಭಾರತೀಶ್ಯಾಮಲಾಶಚ್ಯುಷಾಂ ಲಕ್ಷಣೈಃ ಸಹಪೃಥಕ್ತ್ವಮಿತಿ ಸಂಬಂಧಃ ॥ – (ವಾ.)

೧೫೬. ಇದಂ ಚಾನ್ಯತ್ ಪ್ರೀತಿಪೂರ್ವಂ ನರೇಂದ್ರ ದದಾನಿ ತೇ ವರಮತ್ಯದ್ಭುತಂ ಚ ।
ದಿವ್ಯಂ ಚಕ್ಷುಃ ಪಶ್ಯ ಕುಂತೀಸುತಾಂಸ್ತ್ವಂ ಪುಣ್ಯೈರ್ದಿವ್ಯೈಃ ಪೂರ್ವದೇಹೈರುಪೇತಾನ್ ॥
– ಭಾರತ (ಆದಿ. ೧೯೬/೩೭)

೧೫೭. ತದನಾದರೇಣ = ಪೂರ್ವಂ ವ್ಯಾಸವಾಕ್ಯಾನಾದರೇಣ ಭೀತ ಇತಿ ಸಂಬಂಧಃ ॥ – (ವಾ.)

೧೫೭. ಯದ್ವಾ ದಿವಿ ತಾದೃಶಾನ್ ಇಂದ್ರಾದಿಲಕ್ಷಣಸಹಿತಾನ್ ರೋಚನಾದೀಂಸ್ತಾಂಶ್ಚ ಪಾಂಡವಾಂಶ್ಚ ದದರ್ಶ ಭೂಮಾವೇತಾನ್ ಪಾಂಡವಾನಪಿ ನಿಶಮ್ಯ ಭೀತಃ ಶರಣಂ ಜಗಾಮೇತಿ । – (ರಾ.)

ಅ: ಶ್ರೀವ್ಯಾಸರು ಹೀಗೆ ಹೇಳುತ್ತಿದ್ದಂತೆಯೇ ಅವರೆಲ್ಲರನ್ನು ದ್ರುಪದ ರಾಜ ಅವರ ಅನುಗ್ರಹದ ಬಲದಿಂದ ಕಂಡ; ಅವರು ಹೇಳಿದಂತೆ ದೇವಲೋಕದಲ್ಲೂ ಕಂಡ. ಅವರನ್ನು ಕಾಣುತ್ತಲೇ ಜಗದೀಶನಾದ ಅವರ ಬಗ್ಗೆ ಅನಾದರ ತೋರಿದ್ದಕ್ಕಾಗಿ ಭಯಗೊಂಡು ಎರಡೂ ಪಾದಗಳಲ್ಲಿ ಶರಣಾದ.

ಏ: ದ್ರುಪದ ವ್ಯಾಸರಿತ್ತ ದಿವ್ಯದೃಷ್ಟಿಯ ಬಲದಿಂದ ಪಾಂಡವರನ್ನೂ, ಅವರ ಮೂಲ ರೂಪವನ್ನೂ, ದ್ರೌಪದಿಯನ್ನೂ ಹಾಗೂ ಅವರ ದೇಹದಲ್ಲಿದ್ದ ದೇವತಾಸ್ತ್ರೀಯರನ್ನೂ ಕಂಡು ವ್ಯಾಸವಾಣಿ ಸಂಪೂರ್ಣವಾಗಿ ಯಥಾರ್ಥ ಎಂದು ಮನಗಂಡ. ಅವರು ಹೇಳಿದಾಗ ಅದನ್ನು ಆದರಿಸದಿದ್ದ ತನ್ನ ಅಪರಾಧಕ್ಕಾಗಿ ಭಯಪಟ್ಟ. ಕ್ಷಮೆಯಾಚಿಸಿ ಅವರ ಪಾದಗಳಿಗೆ ಎರಗಿದ.

ದ್ರೌಪದಿಯ ವಿವಾಹ ವೈಭವ

ದತ್ತ್ವಾಽಭಯಂ ಸ ಭಗವಾನ್ ದ್ರುಪದಸ್ಯ ಕಾರ್ಯೇ
ತೇನೋಮಿತಿ ಸ್ಮ ಕಥಿತೇ ಸ್ವಯಮೇವ ಸರ್ವಾಮ್ ।
ವೈವಾಹಿಕೀಂ ಕೃತಿಮಥ ವ್ಯದಧಾಚ್ಚ ಧೌಮ್ಯ-
ಯುಕ್ತಃ ಕ್ರಮೇಣ ಜಗೃಹುರ್ನಿಖಿಲಾಶ್ಚ ಪಾಣಿಮ್ ॥ ೧೫೮ ॥

೧೫೮. ಭಗವಂತನಾದ ಶ್ರೀವೇದವ್ಯಾಸರು ಅವನಿಗೆ ಅಭಯ ನೀಡಿ ದ್ರುಪದನು ವಿವಾಹಕಾರ್ಯಕ್ಕೆ ಸಮ್ಮತಿಸಲು ಸ್ವತಃ ತಾವೇ ನಿಂತು ಧೌಮ್ಯರೊಂದಿಗೆ ಸಕಲ ವಿವಾಹಕಾರ್ಯಗಳನ್ನೂ ನಡೆಸಿಕೊಟ್ಟರು. ಪಾಂಡವರೆಲ್ಲರೂ ಕ್ರಮವಾಗಿ ದ್ರೌಪದಿಯ ಪಾಣಿಗ್ರಹಣ ಮಾಡಿದರು.

---

೧೫೭. ತತೋ ದಿವ್ಯಾನ್ ಹೇಮಕಿರೀಟಮಾಲಿನಃ ಶಕ್ರಪ್ರಖ್ಯಾನ್ ಪಾವಕಾದಿತ್ಯವರ್ಣಾನ್ ।
ಬದ್ಧಾಪೀಡಾಂಶ್ಚಾರುರೂಪಾಂಶ್ಚ ಯೂನೋ ವ್ಯೂಢೋರಸ್ಕಾಂಸ್ತಾಲಮಾತ್ರಾನ್ ದದರ್ಶ ॥ ....
ತಾನ್ ಪೂರ್ವೇಂದ್ರಾನಭಿವೀಕ್ಷ್ಯಾಭರೂಪಾನ್ ಶಕ್ರಾತ್ಮಜಂ ಚೇಂದ್ರರೂಪಂ ನಿಶಮ್ಯ ।
ಪ್ರೀತೋ ರಾಜಾ ದ್ರುಪದೋ ವಿಸ್ಮಿತಶ್ಚ ದಿವ್ಯಾಂ ಮಾಯಾಂ ತಾಮವೇಕ್ಷ್ಯಾ ಽಪ್ರಮೇಯಮ್ ॥
ತಾಂ ಚೈವಾಗ್ರ್ಯಾಂ ಸ್ತ್ರಿಯಮತಿರೂಪಯುಕ್ತಾಂ ದಿವ್ಯಾಂ ಸಾಕ್ಷಾತ್ ಸೋಮವಹ್ನಿಪ್ರಕಾಶಾಮ್ ।
ಯೋಗ್ಯಾಂ ತೇಷಾಂ ರೂಪತೇಜೋಯಶೋಭಿಃ ಪತ್ನೀಂ ಮತ್ವಾ ಹೃಷ್ಟವಾನ್ ಪಾರ್ಥಿವೇಂದ್ರಃ ॥
– ಭಾರತ (ಆದಿ. ೧೯೬/೩೯, ೪೧, ೪೨)

೧೫೮. ಸ ತದ್ದೃಷ್ಟ್ವಾ ಮಹದಾಶ್ಚರ್ಯರೂಪಂ ಜಗ್ರಾಹ ಪಾದೌ ಸತ್ಯವತ್ಯಾಃ ಸುತಸ್ಯ ।
ನೈತಚ್ಚಿತ್ರಂ ಪರಮರ್ಷೇ ತ್ವಯೀತಿ ಪ್ರಸನ್ನಚೇತಾಃ ಸ ಉವಾಚ ಚೈನಮ್ ॥ – ಭಾರತ (ಆದಿ. ೧೯೬/೪೩)

ವಿ: ೧) ಪಾಂಡವರಲ್ಲಿ ದಿನಕ್ಕೆ ಒಬ್ಬರೊಂದಿಗೆ ದ್ರೌಪದಿಯ ವಿವಾಹ ನಡೆಯಿತು. ಮೊದಲಿಗೆ ಧರ್ಮರಾಜನೊಂದಿಗೆ ದ್ರೌಪದಿ ಶರೀರದಲ್ಲಿದ್ದ ಶ್ಯಾಮಲಾದೇವಿಗೂ, ಅನಂತರ ಭೀಮಸೇನನೊಂದಿಗೆ ದ್ರೌಪದಿಯಲ್ಲಿ ಪ್ರಧಾನವಾಗಿ ನೆಲೆಸಿದ್ದ ಭಾರತೀದೇವಿಗೂ, ಮುಂದೆ ಅರ್ಜುನ ಹಾಗೂ ದ್ರೌಪದಿ ದೇಹದಲ್ಲಿದ್ದ ಶಚೀ ದೇವಿಗೂ, ಅನಂತರ ನಕುಲ ಸಹದೇವರು ಹಾಗೂ ದ್ರೌಪದೀ ದೇಹದಲ್ಲಿನ ಉಷಾದೇವಿಯೊಂದಿಗೂ ವಿವಾಹ ನಡೆಯಿತು ಎಂದರ್ಥ.

೨) ಕೆಲವರು ದ್ರೌಪದೀ ವಿವಾಹವನ್ನು ಬಹುಪತಿತ್ವದ ಒಂದು ಜನಾಂಗದ ವಿವಾಹ ಪದ್ಧತಿಗೆ ಹೋಲಿಸುವುದುಂಟು. ಅದು ಸರಿಯಲ್ಲ. ಆ ಬಹುಪತಿತ್ವ ಪದ್ಧತಿಯಲ್ಲಿ ಮನೆಯ ಹಿರಿಯನೊಂದಿಗೆ ಮಾತ್ರ ವಿವಾಹವಾಗಿ, ಉಳಿದೆಲ್ಲರೂ ಅವಳೊಂದಿಗೆ ಗಂಡನಂತೆ ಬದುಕುವರು. ಅದು ಶಾಸ್ತ್ರೀಯವಾಗಿ ಅತ್ಯಂತ ನಿಂದಿತವಾದ ಕಾರ್ಯ. ದ್ರೌಪದೀ ವಿವಾಹಕ್ಕೂ ಅದಕ್ಕೂ ಯಾವುದೇ ರೀತಿಯಲ್ಲೂ ಸಹ ಹೋಲಿಕೆ ಸರ್ವಥಾ ಕೂಡದು. ಅವರೆಲ್ಲರಿಗೂ ಪ್ರತ್ಯೇಕವಾಗಿ ವಿವಾಹವಾಯಿತು ಎಂಬ ಇಲ್ಲಿಯ ಮಾತನ್ನು ಗಮನಿಸಬೇಕು. ಪಾಂಚಾಲರ ಸಂತತಿ ಯಾವುದೂ ಉಳಿಯಲಿಲ್ಲವಾದ್ದರಿಂದ, (೨೬/೨೮೧; ೨೮/೧೩೭,೧೩೮) ಬಹುಪತಿತ್ವ ಪದ್ಧತಿಯ ಜನ ತಮ್ಮನ್ನು ದ್ರೌಪದಿಯ ಸಂತತಿಯವರು ಎಂದು ಹೇಳಿಕೊಳ್ಳುವುದು ಅಪ್ರಾಮಾಣಿಕ.

ಪಾಂಚಾಲಕೇಷು ಚ ಮಹೋತ್ಸವ ಆಸ ರಾಜಾ
ತುಷ್ಟೋಽಭವತ್ ಸಹ ಸುತೈಶ್ಚ ನಿಜೈಶ್ಚ ಸರ್ವೈಃ ।
ಪೌರೈಶ್ಚ ಜಾನಪದಿಕೈಶ್ಚ ಯಥೈವ ರಾಮೇ
ದತ್ವಾ ಸುತಾಂ ಜನಕ ಆಪ ಮುದಂ ತತೋಽನು ॥ ೧೫೯ ॥

---

೧೫೮. 'ವೈವಾಹಿಕೀಂ ಕೃತಿಮಥ ವ್ಯದಧಾಚ್ಚ ಧೌಮ್ಯಯುಕ್ತಃ ಕ್ರಮೇಣ ಜಗೃಹುರ್ನಿಖಿಲಾಶ್ಚ ಪಾಣಿಮ್' ಇತ್ಯತ್ರೈಕವೈವಾಹಿಕಕ್ರಿಯಾಪೂರ್ತ್ಯನಂತರಮನ್ಯಸ್ಯ ವೈವಾಹಿಕಕ್ರಿಯಾರಂಭಸ್ತತ್ಪೂರ್ತ್ಯನಂತರಮನ್ಯಸ್ಯೇತಿ ಸೂಚನಾಯ ಚಶಬ್ದಃ । ಕ್ರಮೇಣ ಜ್ಯೇಷ್ಠಕ್ರಮೇಣ । ನತು ಜ್ಯೇಷ್ಠೇನ ವಿವಾಹಿತಾಯಾ ದ್ರೌಪದ್ಯಾ ಅನ್ಯೈರ್ವಿವಾಹಃ ಕಥಮಿತ್ಯತೋ ದೇಹಸ್ಯೈಕತ್ವೇಽಪಿ ಅಭಿಮಾನಿಭೇದಾತ್ ಪ್ರತಿದಿನಂ ಜನನಂ ಸಂಭವತೀತಿ ಸಾ ಪ್ರತಿದಿನಂ ಕನ್ಯೈವ ಭವತ್ವಿತಿ ವ್ಯಾಸದತ್ತವರಸ್ಯ ಸೂಚನಾಯ ಚಶಬ್ದಃ । ಉಕ್ತಪ್ರಮಾಣಸದ್ಭಾವಸೂಚನಾಯಾನ್ಯಶ್ಚಶಬ್ದಃ । ತದೇತದುಕ್ತಮಾದಿಪರ್ವಣಿ (೧೯೭/೧೩,೧೪)–

ಕ್ರಮೇಣ ಚಾನೇನ ನರಾಧಿಪಾತ್ಮಜಾ ವರಸ್ತ್ರಿಯಸ್ತೇ ಜಗೃಹುಸ್ತದಾ ಕರಮ್ ।
ಅಹನ್ಯಹನ್ಯುತ್ತಮರೂಪಧಾರಿಣೋ ಮಹಾರಥಾಃ ಕೌರವವಂಶವರ್ಧನಾಃ ॥
ಇದಂ ಚ ತತ್ರಾದ್ಭುತರೂಪಮುತ್ತಮಂ ಜಗಾದ ದೇವರ್ಷಿರತೀತಮಾನುಷಮ್ ।
ಮಹಾನುಭಾವಾ ಕಿಲ ಸಾ ಸುಮಧ್ಯಮಾ ಬಭೂವ ಕನ್ಯೈವ ಗತೇ ಗತೇಽಹನಿ ॥' ಇತಿ – (ರಾ.)

ಅ: ಪಾಂಚಾಲದೇಶದಲ್ಲಿ ಮಹೋತ್ಸವ ನಡೆಯಿತು. ದ್ರುಪದರಾಜ ತನ್ನ ಎಲ್ಲ ಮಕ್ಕಳೊಂದಿಗೂ, ಬಂಧುಗಳೊಂದಿಗೂ, ಪಟ್ಟಣಿಗರು ದೇಶವಾಸಿಗಳೊಂದಿಗೂ, ಜನಕರಾಜ ರಾಮನಿಗೆ ಮಗಳನ್ನು ನೀಡಿ ಹೇಗೋ ಹಾಗೆ ಆನಂದಹೊಂದಿದ.

ವಿ: ದ್ರೌಪದಿಯ ಸ್ವಯಂವರದಿಂದ ದ್ರುಪದರಾಜನಿಗೆ ಆದ ಆನಂದ ಸೀತಾ ಸ್ವಯಂವರದಿಂದ ಜನಕರಾಜನಿಗೆ ಆದ ಆನಂದದಂತಿದ್ದಿತು ಎಂದರ್ಥ.

ದ್ರೌಪದೀ ವಿವಾಹದಲ್ಲಿ ಕೃಷ್ಣ ವ್ಯಾಸರು

ಉದ್ವಾಹ್ಯ ತತ್ರ ನಿವಸತ್ಸು ಚ ಪಾಂಡವೇಷು
ಶ್ರುತ್ವೈವ ರಾಮಸಹಿತಃ ಸಹ ಯಾದವೈಶ್ಚ ।
ಆದಾಯ್ಯ ಪಾರಿಬರ್ಹಂ ಬಹುಲಂ ಸ ಕೃಷ್ಣ
ಆಯಾನ್ಮೃದೈವ ಪೃಥಯಾ ಸಹಿತಾಂಶ್ಚ ಪಾರ್ಥಾನ್ ॥ ೧೬೦ ॥

ಅ: ಪಾಂಡವರು ವಿವಾಹವಾಗಿ ಅಲ್ಲಿ ನೆಲೆಸಿದ್ದಾಗ ಅದನ್ನು ಕೇಳಿ ಶ್ರೀಕೃಷ್ಣ ಬಲರಾಮನೊಂದಿಗೂ, ಯಾದವರೊಂದಿಗೂ ಸಮೇತವಾಗಿ ಬಹಳ ಉಡುಗೊರೆಗಳನ್ನು ತೆಗೆದುಕೊಂಡು ಕುಂತೀಸಹಿತರಾದ ಪಾಂಡವರಲ್ಲಿಗೆ ಆನಂದದಿಂದ ಆಗಮಿಸಿದ.

ದೃಷ್ಟೈವ್ವೈವ ತಂ ಮುಮುದುರಾಶು ಕುರುಪ್ರವೀರಾ
ಆಶ್ಲಿಷ್ಯ ಕೃಷ್ಣಮಥ ನೇಮುರಸೌ ಚ ಕೃಷ್ಣಾಮ್ ।
ದೃಷ್ಟ್ವಾವ್ವಪ್ರದಾಯ ಗೃಹಯೋಗ್ಯಸಮಸ್ತಭಾಂಡಂ
ಸೌವರ್ಣಮೇಭ್ಯ ಉರುಭೂಷಣಮಚ್ಯುತೋಽದಾತ್ ॥ ೧೬೧ ॥

ಅ: ಶ್ರೀಕೃಷ್ಣನನ್ನು ಕಾಣುತ್ತಲೇ ಪಾಂಡವರು ಆನಂದಿಸಿದರು. ತ್ವರೆಯಿಂದ ಅವನನ್ನು ಆಲಿಂಗಿಸಿ ವಂದಿಸಿದರು. ಶ್ರೀಕೃಷ್ಣನು ದ್ರೌಪದಿಯನ್ನು ನೋಡಿ ಮನೆಗೆ ಬೇಕಾಗುವ ಸಕಲ ಪಾತ್ರೆಗಳನ್ನು ನೀಡಿದ; ಅವರಿಗೆ ಚಿನ್ನದ ಶ್ರೇಷ್ಠ ಆಭರಣಗಳನ್ನು ನೀಡಿದ.

---

೧೫೯. ಯಥೈವೇತ್ಯುಕ್ತ್ಯಾ ಜನಕದ್ರುಪದಯೋಃ ಸಂತೋಷಸಾಮ್ಯಪ್ರತೀತಿಂ ನಿವಾರಯತಿ । ತತೋಽನ್ವಿತಿ । ತತಃ ಜನಕಾದನು। – (ಜ.)

೧೬೦. ಪಾರಿಬರುಹಂ ಉತ್ಸವಕಾಲೇ ಸ್ವಕೀಯಾನಾಂ ದಾತುಂ ಯೋಗ್ಯಂ ವಸ್ತು। – (ವ., ಜ.)

೧೬೧. ಜಲಧಾನ್ಯಸ್ಥಾಪನಾದಿಪಾತ್ರಮ್ – (ಜ.)

ವಿ: ಶ್ರೀಕೃಷ್ಣ ಪಾಂಡವರಿಗೆ ಹಾಗೆ ಉಡುಗೊರೆಗಳನ್ನು ನೀಡುವ ಮೂಲಕ ವಿವಾಹಾದಿ ಉತ್ಸವಗಳಲ್ಲಿ ಉಡುಗೊರೆ ನೀಡುವುದನ್ನು ಧರ್ಮವೆಂದು ಸಾರಿದ.

ದೇವಾಂಗಯೋಗ್ಯಶುಭಕುಂಡಲಹಾರಮೌಲಿ-
ಕೇಯೂರವಸ್ತ್ರಸಹಿತಾನ್ಯುರುಭೂಷಣಾನಿ ।
ಷಣ್ಣಾಂ ಪೃಥಕ್ ಪೃಥಗದಾತ್ ಪೃಥಗೇವ ಯೋಗ್ಯಾ-
ನ್ಯನ್ಯದ್ದದಾವಥ ಪಿತೃಷ್ವಸುರಾತ್ಮಯೋಗ್ಯಮ್ ॥ ೧೬೨ ॥

ಅ: ದೇವತೆಗಳ ದೇಹಕ್ಕೆ ಒಪ್ಪುವಂತಹ ಮಂಗಳಕರವಾದ ಕರ್ಣಕುಂಡಲ, ಹಾರ, ಕಿರೀಟ, ಕೇಯೂರ, ವಸ್ತ್ರಗಳೊಂದಿಗೆ ಅನೇಕ ಆಭರಣಗಳನ್ನೂ ಶ್ರೀಕೃಷ್ಣ ಆ ಆರು ಜನರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ನೀಡಿದ. ಅನಂತರ ಸೋದರತ್ತೆಯಾದ ಕುಂತಿಗೂ ಅವಳ ದೇಹಕ್ಕೊಪ್ಪುವ ಉಡುಗೊರೆಯನ್ನಿತ್ತ.

ವಿ: ಕುಂತಿ ವಿಧವೆ; ಅವಳಿಗೂ ಉಚಿತವಾದ ಉಡುಗೊರೆ ನೀಡುವ ಮೂಲಕ ಶ್ರೀಕೃಷ್ಣ ಅಂತಹ ಸಮಾರಂಭಗಳಲ್ಲಿ ವಿಧವೆಯರಿಗೂ ಸಹ ಯೋಗ್ಯವಾದ ಉಡುಗೊರೆಯನ್ನು ತಪ್ಪದೇ ನೀಡಬೇಕು ಎಂಬ ಸಂದೇಶವನ್ನು ನೀಡಿದ ಎಂದು ತಿಳಿಯಬಹುದು.

---

೧೬೨. ವೈದೂರ್ಯಮಣಿಚಿತ್ರಾಣಿ ಹೈಮಾನ್ಯಾಭರಣಾನಿ ಚ ।
ವಾಸಾಂಸಿ ಚ ಮಹಾರ್ಹಾಣಿ ನಾನಾದೇಶ್ಯಾನಿ ಮಾಧವಃ ।
ಕಂಬಲಾಜಿನರತ್ನಾನಿ ಸ್ಪರ್ಶವಂತಿ ಶುಭಾನಿ ಚ ॥
ಶಯಾನಾಸನಯಾನಾನಿ ವಿವಿಧಾನಿ ಮಹಾಂತಿ ಚ ।
ವೈದೂರ್ಯವಜ್ರಚಿತ್ರಾಣಿ ಶತಶೋ ಭಾಜನಾನಿ ಚ ॥
ರೂಪಯೌವನದಾಕ್ಷಿಣ್ಯೈರುಪೇತಾಶ್ಚ ಸ್ವಲಂಕೃತಾಃ ।
ಪ್ರೇಷ್ಯಾಃ ಸಂಪ್ರದದೌ ಕೃಷ್ಣೋ ನಾನಾದೇಶ್ಯಾಃ ಸ್ವಲಂಕೃತಾಃ ॥
ಗಜಾನ್ ವಿನೀತಾನ್ ಭದ್ರಾಂಶ್ಚ ಸದಶ್ವಾಂಶ್ಚ ಸ್ವಲಂಕೃತಾನ್ ।
ರಥಾಂಶ್ಚ ದಾಂತಾನ್ ಸೌವರ್ಣೈಃ ಶುಭ್ರೈಃ ಪಟ್ಟೈರಲಂಕೃತಾನ್ ॥
ಕೋಟಿಶಶ್ಚ ಸುವರ್ಣಂ ಚ ತೇಷಾಮಕೃತಕಂ ತಥಾ ।
ವೀಥೀಕೃತಮಮೇಯಾತ್ಮಾ ಪ್ರಾಹಿಣೋನ್ಮಧುಸೂದನಃ ॥ – ಭಾರತ (ಆದಿ. ೧೯೮/೧೩-೧೮)

೧೬೨. ಆತ್ಮಯೋಗ್ಯಂ ಮೃತಭರ್ತೃಕಾಯಾಸ್ತ್ಯಾಃ ಯೋಗ್ಯಂ ಅನ್ಯದ್ಭೂಷಣಂ ದದೌ । – (ಜ.)

೧೬೨. ಆತ್ಮಯೋಗ್ಯಂ ದೇಹಯೋಗ್ಯಂ ಭೂಷಣಾದಿಕಂ ದದಾವಿತ್ಯರ್ಥಃ । – (ಸ.)

ರತ್ನಾನಿ ಗೋಗಜತುರಂಗರಥಾನ್ ಸುವರ್ಣ-
ಭಾರಾನ್ ಬಹೂನಪಿ ದದಾವಥ ಚಾಶಿಷೋಽಗ್ಯಾಃ ।
ವ್ಯಾಸೋಽಪ್ಯದಾದಿಹ ಪರತ್ರ ಚ ಪಾರ್ಷತೋಽಪಿ
ಭೂಷಾರಥಾಶ್ವಗಜರತ್ನಸುಕಾಂಚನಾನಿ ॥ ೧೬೩ ॥

ಅ: ಶ್ರೀಕೃಷ್ಣ ಅವರಿಗೆ ಬಹುಬಗೆಯ ರತ್ನಗಳನ್ನು, ಗೋವು, ಗಜ, ಕುದುರೆ, ರಥಗಳನ್ನು, ಸುವರ್ಣ ಭಾರಗಳನ್ನು ಸಹ ನೀಡಿದ. ಶ್ರೀವೇದವ್ಯಾಸರು ಸಹ ಅವರಿಗೆಲ್ಲ ಶ್ರೇಷ್ಠವಾದ ಹಾರೈಕೆಗಳನ್ನು ನೀಡಿದರು. ದ್ರುಪದ ಸಹ ಭೂಷಣ, ರಥ, ಕುದುರೆ, ಆನೆ, ರತ್ನ ಹಾಗೂ ಒಳ್ಳೆಯ ಚಿನ್ನಗಳನ್ನು ಕೊಟ್ಟ.

ವಿ: ೧) ಶ್ರೀಕೃಷ್ಣ ಕ್ಷತ್ರಿಯರೂಪ, ಅದಕ್ಕೆ ಉಚಿತವಾದ ರತ್ನಾದಿ ಕಾಣಿಕೆಗಳನ್ನು ಆ ರೂಪದಿಂದ ನೀಡಿದ. ಶ್ರೀವೇದವ್ಯಾಸರು ಬ್ರಾಹ್ಮಣ ರೂಪ, ಅದರಿಂದ ಶ್ರೇಷ್ಠವಾದ ಆಶೀರ್ವಚನವನ್ನು ಇತ್ತ. ಶುಭಸಮಾರಂಭಗಳಲ್ಲಿ ಬ್ರಾಹ್ಮಣರು ವೇದಮಂತ್ರಗಳಿಂದ ಆಶೀರ್ವದಿಸುವುದೇ ಅವರು ನೀಡಬಹುದಾದ ಶ್ರೇಷ್ಠ ಉಡುಗೊರೆ ಎಂದೂ ಆ ಮೂಲಕ ತಿಳಿಸಿದ.

ರತ್ನಮಾಲೆಗಳೊಂದಿಗೆ ದಾಸದಾಸಿಯರ ಉಡುಗೊರೆ

ದಾಸೀಶ್ಚ ದಾಸಸಹಿತಾಃ ಶುಭರೂಪವೇಷಾಃ
ಸಾಹಸ್ರಶೋ ದದತುರತ್ರ ಹರಿರ್ನೃಪಶ್ಚ ।
ತಾಸಾಂ ವಿಚಿತ್ರವಸನಾನ್ಯುರುರತ್ನಮಾಲಾಃ
ಪ್ರತ್ಯೇಕಶೋ ದದತುರಪ್ಯುರುಭೂಷಣಾನಾಮ್ ॥ ೧೬೪ ॥

ಅ: ಉತ್ತಮ ರೂಪದಿಂದಲೂ, ವೇಷದಿಂದಲೂ ಕೂಡಿದ ಸಾವಿರಗಟ್ಟಲೆ ದಾಸರನ್ನು, ದಾಸಿಯರನ್ನು ಶ್ರೀಕೃಷ್ಣ ಹಾಗೂ ದ್ರುಪದರು ಪಾಂಡವರಿಗೆ ನೀಡಿದರು. ಅವರೆಲ್ಲರಿಗೂ ಸಹ ಬಗೆಬಗೆಯ ವಸ್ತ್ರಗಳನ್ನು, ಅನೇಕ ರತ್ನಹಾರಗಳನ್ನು, ಶ್ರೇಷ್ಠ ಆಭರಣಗಳನ್ನು ಪ್ರತ್ಯೇಕವಾಗಿ ನೀಡಿದರು.

---

೧೬೩. ತತಸ್ತು ಕೃತದಾರೇಭ್ಯಃ ಪಾಂಡುಭ್ಯಃ ಪ್ರಾಹಿಣೋದ್ಧರಿಃ ।
ವೈದೂರ್ಯಮಣಿಚಿತ್ರಾಣಿ ಹೈಮಾನ್ಯಾಭರಣಾನಿ ಚ ॥ – ಭಾರತ (ಆದಿ. ೧೯೮/೧೩-೧೯)

೧೬೩. ವಿಂಶತಿತುಲಾಪರಿಮಿತಂ ಸುವರ್ಣಭಾರಮಿತ್ಯುಚ್ಯತೇ। ಭಾರಃ ಸ್ಯಾದ್ವಿಂಶತಿಸ್ತುಲಾ ಇತ್ಯಮರಃ। – (ಜ.)

ವಿ: ೧) ಕೇವಲ ದ್ರವ್ಯಗಳನ್ನಲ್ಲದೇ ಸೇವಾಕಾರ್ಯಕ್ಕೆಂದು ದಾಸದಾಸಿಯರನ್ನೂ ಸಹ ಕೃಷ್ಣ, ಹಾಗೂ ದ್ರುಪದರು ನೀಡಿದರು. ಇದೊಂದು ಅಪೂರ್ವ ಉಲ್ಲೇಖ.

೨) ದಂಪತಿಗಳ ಸುಖಸಂಸಾರಕ್ಕೆ ಹಣಕಾಸುಗಳು ಮಾತ್ರವಲ್ಲದೇ, ಪರಿಚರ್ಯೆಗೆ ಆಳುಕಾಳುಗಳು ಸಹ ಆವಶ್ಯಕವಾದ್ದರಿಂದ ಅವರನ್ನೆಲ್ಲ ಅವರು ನೀಡಿದರು ಎಂದರ್ಥ. ದಾಸದಾಸಿಯರಿಗೂ ವಸ್ತ್ರಾಭರಣಗಳನ್ನು ನೀಡಿದ್ದು ಮತ್ತೊಂದು ವಿಶೇಷ. ಸೇವಕರಿಗೂ ಉಚಿತವಾದ ಸಮವಸ್ತ್ರಗಳನ್ನು ನೀಡುವ ಪರಂಪರೆ ಇದಕ್ಕೆ ಜ್ಞಾಪಕ ಎಂದು ಭಾವಿಸಬಹುದು.

ಮಾಸಾನ್ ಬಹೂನಪಿ ವಿಹೃತ್ಯ ಸಹೈವ ಪಾರ್ಥೈಃ
ಕೃಷ್ಣೋ ಯಯೌ ಯದುಪುರೀಂ ಸಹಿತೋಽಗ್ರಜೇನ ।
ಅಂತರ್ಹಿತೇ ಭಗವತಿ ಪ್ರತತೋರುಶಕ್ತೌ
ವ್ಯಾಸೇ ಚ ವತ್ಸರಮಿಹೋಷುರಿಮೇ ಚ ಪಾರ್ಥಾಃ ॥ ೧೬೫ ॥

ಅ: ಅನೇಕ ತಿಂಗಳುಗಳ ಕಾಲ ಶ್ರೀಕೃಷ್ಣ ಪಾಂಡವರೊಂದಿಗೆ ವಿಹರಿಸಿ ಅಣ್ಣನೊಂದಿಗೆ ದ್ವಾರಕೆಗೆ ಮರಳಿದ. ಪರಿಪೂರ್ಣಮಹಾಶಕ್ತಿಯ ಭಗವಾನ್ ವೇದವ್ಯಾಸರೂ ಸಹ ಅಂತರ್ಧಾನ ಹೊಂದಿದರು. ಪಾಂಡವರು ಹೀಗೆ ಅಲ್ಲಿ ಒಂದು ವರ್ಷಕಾಲ ನೆಲೆಸಿದರು.

ವಿ: ಶ್ರೀಕೃಷ್ಣ ಪಾಂಡವರ ವಿವಾಹಕ್ಕೆ ಹಾಗೆ ಆಗಮಿಸುವ ಮೂಲಕ ಶಾಸ್ತ್ರೋಕ್ತ ವಿವಾಹಗಳಲ್ಲಿ ತನ್ನ ಸನ್ನಿಧಾನವಿರುವುದನ್ನು ಸೂಚಿಸಿದ. ಶ್ರೀವೇದವ್ಯಾಸರು ಎಲ್ಲರು ನೋಡುತ್ತಿದ್ದಂತೆಯೇ ಆಗಮಿಸುವುದು, ಹಾಗೆಯೇ ಮರೆಯಾಗುತ್ತ ನಿರ್ಗಮಿಸುವುದು ಮಹಾಭಾರತ ನಿರೂಪಿಸಿರುವ ವೈಚಿತ್ರ್ಯಗಳಲ್ಲೊಂದು. ವಿವಾಹಾನಂತರ ಪಾಂಡವರು ಒಂದು ವರ್ಷಕಾಲ ಪಾಂಚಾಲ ಪಟ್ಟಣ–ದಲ್ಲೇ ಉಳಿದರು ಎಂದರ್ಥ.

ಪಾಂಚಾಲನಗರದ ಮೇಲೆ ಕೌರವರ ದಾಳಿ

ವೈಚಿತ್ರವೀರ್ಯತನಯಾಃ ಸಹ ಸೌಬಲೇನ
ಕರ್ಣೇನ ಸಿಂಧುಪತಿನಾ ರಥಹಸ್ತಿಯೌಧೈಃ ।
ಭೂರಿಶ್ರವಃಪ್ರಭೃತಿಭಿಶ್ಚ ಸಹೈವ ಹಂತುಂ
ಪಾಂಚಾಲರಾಜಮಗುರೇತ್ಯ ಪುರೀಂ ಪುನಸ್ತೇ ॥ ೧೬೬ ॥

---

೧೬೬. ಪಾಂಚಾಲರಾಜಮಗುರೇತ್ಯೇತ್ಯತ್ರ ವೈಚಿತ್ರವೀರ್ಯತನಯಾಃ ಏತ್ಯ= ಸ್ವಪುರೀಮೇತ್ಯ ಪಾಂಚಾಲರಾಜಂ ಹಂತುಂ ಪುನಃ ಪುರೀಂ= ದ್ರುಪದಪುರೀಂ ಅಗುರಿತಿ ಸಂಬಂಧಃ ॥ – (ವಾ.)

ಅ: ಕೌರವರು ಶಕುನಿ, ಕರ್ಣ, ಜಯದ್ರಥ, ಭೂರಿಶ್ರವಸ್ ಮೊದಲಾದವರೊಂದಿಗೆ ರಥ, ಆನೆ, ಪದಾತಿಗಳೊಂದಿಗೆ ಕೂಡಿ ದ್ರುಪದ ರಾಜನನ್ನು ಕೊಲ್ಲಲೆಂದು, ತಮ್ಮ ಪಟ್ಟಣದಿಂದ ಪುನಃ ಬಂದು ಆಕ್ರಮಣ ನಡೆಸಿದರು.

ವಿ: ಸ್ವಯಂವರ ಕಾಲದಲ್ಲಿ ನಡೆದ ಯುದ್ಧದಲ್ಲಿ ಕೌರವರು ಪರಾಜಿತರಾಗಿ ಬಂದಿದ್ದರೂ, ಅವರಿಗೆ ವಿವೇಕ ಮೂಡಿರಲಿಲ್ಲ. ಆಗಿನ ಯಾದವ ಸೈನ್ಯ ಮೊದಲಾದ ಬಲ ಈಗ ಇರಲಾರದು ಎಂದು ಭಾವಿಸಿ ಅವರು ದ್ರುಪದನ್ನು ಕೊಂದೇಬಿಡುವ ಸಂಕಲ್ಪದಿಂದ ಅಪಾರ ಸೈನ್ಯದೊಂದಿಗೂ, ಮಹಾವೀರರೊಂದಿಗೂ ಆಕ್ರಮಣ ನಡೆಸಿದರು ಎಂದರ್ಥ.

ಇಬ್ಬರು ದ್ರುಪದ ಪುತ್ರರ ಮರಣ

ತೈರರ್ದಿತೇ ಸ್ವಪುರ ಆಶು ಸ ಸೋಮಕಾನಾಂ
ರಾಜಾ ಸುತೈಃ ಸಹ ಸಸೈನಿಕ ಉದ್ಗತೋಽಭೂತ್ ।
ತೇಷಾಂ ಚ ತಸ್ಯ ಚ ಬಭೂವ ಮಹಾನ್ ವಿಮರ್ದಃ
ಪುತ್ರೌ ಚ ತಸ್ಯ ನಿಹತೌ ವಿಧುತಾಶ್ಚ ಸೇನಾಃ ॥ ೧೬೭ ॥

ಅ: ಅವರು ತಮ್ಮ ಪಟ್ಟಣವನ್ನು ಹಾಳುಗೆಡವುದನ್ನು ಕಂಡು ಸೋಮಕರ ದೊರೆಯಾದ ದ್ರುಪದ ತನ್ನ ಮಕ್ಕಳೊಂದಿಗೂ ಹಾಗೂ ಸೈನಿಕರೊಂದಿಗೂ ಹೊರಬಂದ. ಅವರಿಗೂ ಅವನಿಗೂ ಮಹಾಸಮರ ನಡೆಯಿತು. ಅವನ ಇಬ್ಬರು ಪುತ್ರರೂ ಮಡಿದರು, ಸೇನೆಗಳೂ ನಾಶಹೊಂದಿದವು.

ವಿ: ದ್ರುಪದ ತನ್ನ ಪಟ್ಟಣದಿಂದ ಯೋಜನ ದೂರ ಹೊರಬಂದು ಯುದ್ಧ ಮಾಡಿದ್ದರಿಂದ ಅವನಿಗಿದ್ದ ಸೂರ್ಯನ ವರ ಪ್ರಯೋಜನಕ್ಕೆ ಬಾರದಂತಾಗಿ ಅವನು ಸೋಲಲು ಕಾರಣವಾಯಿತು ಎಂಬ ವಿಶೇಷಾಂಶ ಭಾವವಿವೃತಿಯಲ್ಲಿದೆ (೧೮/೬೨). ಅಲ್ಲಿ ಸತ್ತ ಅವನ ಇಬ್ಬರು ಪುತ್ರರು ಚಿತ್ರ ಮತ್ತು ಚಿತ್ರಕೇತು ಎಂಬವರು ಎಂದು ಮುಂದಿನ ಶ್ಲೋಕದಲ್ಲಿದೆ.

---

೧೬೬. ಸ್ವಯಂವರಗಮನಾಪೇಕ್ಷಯಾ ಪುನರಿತ್ಯುಕ್ತಮ್ । ನ ಹಂತುಂ ಪುನರಗುರಿತಿ ಹನನಾರ್ಥ ದ್ವಿವಾರಮಾಗಮನಾ- ಭಾವಾತ್ । – (ಜ.)

೧೬೭. ವಿಧುತಾಶ್ಚ ಸೇನಾ ಇತ್ಯತ್ರ ''ಧೂಞ್ ಪರಿಕಂಪನ'' ಇತಿ ಧಾತೋಃ ಔಣಾದಿಕೇ ಡುತಚ್ ಪ್ರತ್ಯಯೇ ಕೃತೇ ವಿಧುತಾ ಇತಿ ಪದಂ ಭವತಿ। ಪಲಾಯಿತಾ ಇತ್ಯರ್ಥಃ ॥ – (ವಾ.)

ಚಿತ್ರೇ ಹತೇ ಸಮರ ಆಶು ಸಚಿತ್ರಕೇತೌ
ಧಾವತ್ಸು ಸೈನಿಕವರೇಷು ಚ ಪಾರ್ಷತಸ್ಯ ।
ಪಾರ್ಥಾ ರಥೈರಭಿಯಯುರ್ಧೃತಚಾಪಬಾಣಾ
ವೈಚಿತ್ರವೀರ್ಯತನಯಾನ್ ರವಿಸೂನುಯುಕ್ತಾನ್ ॥ ೧೬೮ ॥

ಅ: ಆ ಯುದ್ಧದಲ್ಲಿ ಚಿತ್ರಕೇತುವಿನೊಂದಿಗೆ ಚಿತ್ರನು ಮಡಿದಾಗ ದ್ರುಪದನ ಶ್ರೇಷ್ಠ ಸೈನಿಕರೂ ಸಹ ಓಡ ತೊಡಗಿದಾಗ ಪಾಂಡವರು ಬಿಲ್ಲು ಬಾಣಗಳನ್ನು ಹಿಡಿದು ಕರ್ಣನೊಂದಿಗೆ ಕೂಡಿದ ಕೌರವರನ್ನು ರಥಗಳಿಂದ ಎದುರಿಸಿದರು.

ವಿ: ಪಾಂಡವರ ಸಹಾಯ ತೆಗೆದುಕೊಳ್ಳದೆ ಬಂದಿದ್ದ ದ್ರುಪದ ಹಾಗೆ ಸೋಲುವಂತಾಯಿತು. ಅದನ್ನು ಗಮನಿಸಿದ ಪಾಂಡವರು ಆಗ ಅವನ ಸಹಾಯಕ್ಕೆ ತಾವಾಗಿ ಧಾವಿಸಿದರು ಎಂದರ್ಥ. ರಥದಿಂದ ಎದುರಿಸಿದನು ಎಂದರೆ ರಥಾರೂಢರಾಗಿ ಎದುರಿಸಿದರು ಎಂದರ್ಥ.

ಮತ್ತೊಮ್ಮೆ ಭೀಮಪರಾಕ್ರಮ

ತೈಸ್ತೇಷು ಪಂಚಸು ಸಮಂ ಪ್ರತಿಯೋಧಯತ್ಸು
ಭೂರಿಶ್ರವಾಃ ಸರವಿಜೋ ವಿರಥಂ ಚಕಾರ ।
ಶಕ್ರಾತ್ಮಜಂ ತದನು ಪರ್ವತಸನ್ನಿಕಾಶಂ
ದೋರ್ಭ್ಯಾಂ ತು ಮಾರುತಿರುರುಂ ತರುಮುದ್ಬಬರ್ಹ ॥ ೧೬೯ ॥

ಅ: ಅವರೊಂದಿಗೆ ಆ ಐದು ಜನ ಯುದ್ಧ ಮಾಡುತ್ತಿದ್ದಾಗ ಭೂರಿಶ್ರವಸ್ ಮತ್ತು ಕರ್ಣ ಇಬ್ಬರೂ ಸೇರಿ ಅರ್ಜುನನನ್ನು ವಿರಥನನ್ನಾಗಿಸಿದರು. ಆ ಕ್ಷಣದಲ್ಲೇ ಭೀಮಸೇನ ಬೆಟ್ಟದಂತಹ ದೊಡ್ಡ ಮರವನ್ನು ತನ್ನ ಎರಡು ಕೈಗಳಿಂದ ಕಿತ್ತಿನಿಂತ.

ವಿ: ಅರ್ಜುನ ವಿರಥನಾದ ಅಪರೂಪದ ಪ್ರಸಂಗಗಳಲ್ಲಿ ಇದೊಂದು. ಆಗ ಭೀಮ ತನ್ನ ಶೈಲಿಯಂತೆ ದೊಡ್ಡ ವೃಕ್ಷವನ್ನು ಕಿತ್ತಿ ಕೈಗೆತ್ತಿಕೊಂಡ ಎಂದರ್ಥ.

ಆಯಾಂತಮೀಕ್ಷ್ಯ ತರುಹಸ್ತಮಿಮಂ ಸಮೀರ-
ಸೂನುಂ ಸುಯೋಧನಮುಖಾ ನಿಖಿಲಾಃ ಸಕರ್ಣಾಃ ।
ಭೂರಿಶ್ರವಾಃ ಶಕುನಿಭೂರಿಜಯದ್ರಥಾಶ್ಚ
ಸರ್ವೇಽಪಿ ದುದ್ರುವುರಥೋ ವಿವಿಶುಃ ಪುರಂ ಸ್ವಮ್ ॥ ೧೭೦ ॥

೧೭೦. ಮರವನ್ನು ಕೈಗೆತ್ತಿಕೊಂಡು ಧಾವಿಸುತ್ತಿದ್ದ ಭೀಮನನ್ನು ನೋಡುತ್ತಲೇ ದುರ್ಯೋಧನ, ಭೂರಿಶ್ರವಸ್, ಶಕುನಿ, ಭೂರಿ, ಜಯದ್ರಥ ಮೊದಲಾದವರೆಲ್ಲರೂ ಕರ್ಣನೊಂದಿಗೆ ಸೇರಿ ಪಲಾಯನ ಮಾಡತೊಡಗಿದರು. ತಮ್ಮ ಪಟ್ಟಣವನ್ನು ಪ್ರವೇಶಿಸಿದರು ಸಹ.

ವಿ: ಭೀಮನೊಂದಿಗೆ ಕಾದಲಿರಲಿ ಅವನ ಉಗ್ರರೂಪವನ್ನು ನೋಡಿ ಯುದ್ಧರಂಗದಲ್ಲಿ ನಿಲ್ಲುವ ಸಾಮರ್ಥ್ಯವೂ ಕರ್ಣಾದಿ ಯಾರಿಗೂ ಇರಲಿಲ್ಲ ಎಂಬುದಕ್ಕೆ ಇದೊಂದು ಅಪೂರ್ವ ನಿದರ್ಶನ.

ಧೃತರಾಷ್ಟ್ರನ ಖೇದಮೋದಗಳು

ಜ್ಞಾತ್ವಾ ಸಮಸ್ತಮಪಿ ತದ್ವಿದುರೋಽಗ್ರಜಂ ಸ್ವಂ
ವರ್ಧಂತ ಏವ ತನಯಾ ಭವತೋ ನರೇಂದ್ರ ।
ಇತ್ಯಾಹ ಸೋಽಪಿ ಮುದಿತಃ ಸ್ವಸುತೇನ ಕೃಷ್ಣಾ
ಪ್ರಾಪ್ತೇತಿ ಭೂಷಣವರಾಣ್ಯದಿಶಚ್ಚ ವಾಸಃ ॥ ೧೭೦ ॥

ಅ: ಅದೆಲ್ಲವನ್ನೂ ತಿಳಿದು ವಿದುರ ತನ್ನ ಅಣ್ಣನಾದ ಧೃತರಾಷ್ಟ್ರನಿಗೆ ''ರಾಜ, ನಿನ್ನ ಪುತ್ರರು ಜಯಶಾಲಿಗಳಾಗಿ ಶೋಭಿಸುತ್ತಿರುವರು'' ಎಂದು ನುಡಿದ. ಅವನಾದರೋ ತನ್ನ ಮಗ ದುರ್ಯೋಧನ ದ್ರೌಪದಿಯನ್ನು ಪಡೆದ ಎಂದು ತಿಳಿದು ವಿದುರನಿಗೆ ಶ್ರೇಷ್ಠ ಭೂಷಣಗಳನ್ನು, ವಸ್ತ್ರಗಳನ್ನು ನೀಡಿದ.

ವಿ: ೧) ತನ್ನ ಮಕ್ಕಳು ಎಂದ ಮಾತನ್ನು ಧೃತರಾಷ್ಟ್ರ ಕೌರವರು ಎಂದು ತಪ್ಪಾಗಿ ತಿಳಿದು ಸ್ವಯಂವರದಲ್ಲಿ ಅವರೇ ಜಯ ಸಾಧಿಸಿದರು ಎಂದು ಭಾವಿಸಿ ಅಂತಹ ಶುಭವಾರ್ತೆಯನ್ನು ತಿಳಿಸಿದ್ದಕ್ಕಾಗಿ ವಿದುರನಿಗೆ ಅಪಾರ ಕಾಣಿಕೆಗಳನ್ನು ನೀಡಿದ ಎಂದರ್ಥ. ಪಾಂಡವಪಕ್ಷಪಾತಿ–ಯಾದ್ದರಿಂದ ವಿದುರನಿಗೆ ದ್ರವ್ಯಪ್ರಾಪ್ತಿಯಾಯಿತು (ವಾ.). ಅವನಿಗೆ ಪಾಂಡವರು ಬದುಕಿರುವುದು ಇನ್ನೂ ತಿಳಿಯದಿದ್ದದ್ದು ಹಾಗೆ ಭ್ರಮಿಸಲು ಮತ್ತೊಂದು ಕಾರಣವಾಯಿತು ಎಂದು ತಿಳಿಯಬೇಕು. ವಿದುರ ಬೇಕೆಂದೇ ಹಾಗೆ ಭ್ರಮೆ ಹುಟ್ಟುವಂತೆ ತಿಳಿಸಿ ವಿನೋದ ನೋಡಿದ.

---

೧೭೦. ಭ್ರಾತೃತನಯಾನಾಮಪಿ ತನಯತ್ವಾಭಿಪ್ರಾಯೇಣ ತವ ತನಯಾ ವರ್ಧಂತ ಇತಿ ವಿದುರೇಣೋಕ್ತಮ್। ಸ್ವತನಯಾ ಏವೇತಿ ಭ್ರಾಂತ್ಯಾ ಸೋಽಪಿ ಮುದಿತ ಇತ್ಯಾದ್ಯುಕ್ತಮ್ ॥ – (ವಾ.)

೧೭೦. ದುರ್ಯೋಧನಾದೀನಾಂ ಸ್ವಪುರಪ್ರಾಪ್ತೇಃ ಪ್ರಾಕ್ ಪ್ರವೃತ್ತಾಂ ಕಥಾಮಾಹ। – (ಜ.)

೧೭೦. ಪ್ರತಿಭಾಬಲೇನ ವಾ ಜ್ಞಾತ್ವಾ। – (ವ.)

೨) ವಿದುರ ಧೃತರಾಷ್ಟ್ರನಿಂದ ಹಾಗೆ ಬಹುಮಾನ ಸ್ವೀಕರಿಸಿದ್ದನ್ನು ವಾದಿರಾಜರು 'ಆ ಮಂಗಳಕರ ಸಮಾರಂಭದಲ್ಲಿ ಹಾಗೆ ಬಹುಮಾನ ಸ್ವೀಕರಿಸುವುದು ವಿಹಿತ. ಅದರಿಂದ ಅವುಗಳನ್ನು ನೀಡಿದ ಧೃತರಾಷ್ಟ್ರನಿಗೂ ಕಿಂಚಿತ್ ಒಳಿತಾಗಲಿ ಎಂದು ವಿದುರನ ಭಾವವಾಗಿತ್ತು ಎಂದು ವಿವರಿಸಿರುವರು.

೩) ವಿದುರನ ಮಾತನ್ನು ಕೇಳಿ ಧೃತರಾಷ್ಟ್ರ ದ್ರೌಪದಿಗೆ ಆಭರಣ ವಸ್ತ್ರಗಳನ್ನು ನೀಡಿದ' ಎಂದೂ ಮಹಾಭಾರತದಲ್ಲಿದೆ:

ತತೋ ಜಗಾಮ ವಿದುರೋ ಧೃತರಾಷ್ಟ್ರಸ್ಯ ಶಾಸನಾತ್ ।
ಸಕಾಶಂ ಯಜ್ಞಸೇನಸ್ಯ ಪಾಂಡವಾನಾಂ ಚ ಭಾರತ ॥
ಸಮುದಾಯ ರತ್ನಾನಿ ವಸೂನಿ ವಿವಿಧಾನಿ ಚ ।
ದ್ರೌಪದ್ಯಾಃ ಪಾಂಡವಾನಾಂ ಚ ಯಜ್ಞಸೇನಸ್ಯ ಚೈವ ಹ ॥... – (೧/೨೦೫/೭,೮)

ಪಾರ್ಥಾ ಇತಿ ಸ್ಮ ವಿದುರೋಽವದದಾಶು ಸೋಽಪಿ
ಸ್ವಾಕಾರಗೂಹನಪರೋ ಯದಿ ತರ್ಹ್ಯತೀವ ।
ಭದ್ರಂ ಮೃತಾ ನ ಹಿ ಪೃಥಾಸಹಿತಾಃ ಸ್ಮ ಪಾರ್ಥಾ-
ಸ್ತೇಷಾಂ ಪ್ರವೃತ್ತಿಮಪಿ ಮೇ ವದ ಸರ್ವಶಸ್ತ್ವಮ್ [೧] ॥ ೧೭೨ ॥

---

೧೭೨. ಪುನಃ ಪಾರ್ಥಾ ಇತಿ ವಿದುರೇಣೋಕ್ತೇ ಸ್ವಾಕಾರಗೂಹನಪರಃ = ಸ್ವಸ್ಯಾಂತರ್ಹೃದಿ ಅಸಂತುಷ್ಟಾಕಾರ-ಗೂಹನಪರಃ ಧೃತರಾಷ್ಟ್ರಃ ಯದಿ ತರ್ಹ್ಯತೀವ ಭದ್ರಮಿತ್ಯಾಹೇತಿ ಯೋಜನಾ। ಮಧ್ಯೇ ವಿದುರಸ್ಯ ದ್ರವ್ಯಪ್ರಾಪ್ತಿಃ ಪಾಂಡವಪಕ್ಷಪಾತಿತ್ವಾದಿತಿ ಜ್ಞೇಯಮ್ ॥ – (ವಾ.)

೧೭೨. ಪಾರ್ಥಾ ಇತಿ ವಿದುರಾಭಿಪ್ರಾಯಮಜಾನನ್ ಸ್ವಸುತೇನ ದುರ್ಯೋಧನೇನ ಕೃಷ್ಣಾ ಪ್ರಾಪ್ತೇತಿ ಜ್ಞಾತ್ವಾ ಮುದಿತಃ ಸನ್ ಭೂಷಣವರಾಣಿ ವಾಸಶ್ಚಾದಿಶತ್ । ವಿದುರಾಯೇತಿ ಶೇಷಃ । ಕೃಷ್ಣಾಯಾ ಇತಿ ಶೇಷಃ। 'ಅಥ ಚಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ಬಹು' ಇತಿ ಆದಿಪರ್ವಣಿ। – (ಜ.)

೧೭೨. ಆದಿಶದಿತಿ। ದ್ರೌಪದ್ಯೈ ಪ್ರೇಷಯಾಮಾಸೇತ್ಯರ್ಥಃ। ತದುಕ್ತಂ ಭಾರತೇ–

ಮನ್ಯತೇ ಹಿ ವೃತಂ ಪುತ್ರಂ ಜ್ಯೇಷ್ಠಂ ದ್ರುಪದಕನ್ಯಯಾ ।
ದುರ್ಯೋಧನಮವಿಜ್ಞಾನಾತ್ ಪ್ರಜ್ಞಾಚಕ್ಷುರ್ನರೇಶ್ವರಃ ।
ತದಾ ತ್ವಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ಬಹು ।
'ಆನೀಯತಾಂ ವೈ ಕೃಷ್ಣೇತಿ' ಇತಿ ।

ಕೇಚಿತ್ ವಿದುರಾಯಾದಿಶದಿತ್ಯರ್ಥಮಾಹುಃ । – (ತಾ.)

೧೭೨. ಆಕಾರಾಚ್ಛಾದನಾರ್ಥಂ ತು ದಿಷ್ಟ್ಯಾದಿಷ್ಟ್ಯೇತಿ ಚಾಬ್ರವೀತ್ ॥ – ಭಾರತ (ಆದಿ. ೧೯೯/೨೨)

ಅ: ಕೂಡಲೆ ವಿದುರ 'ಪಾಂಡವರು' ಎಂದ. ಆಗ ಧೃತರಾಷ್ಟ್ರ ತನ್ನ ಮನಸ್ಸಿನ ಕೆಟ್ಟ ಭಾವವನ್ನು ಮರೆಮಾಚಿಕೊಳ್ಳಲೆಂದು ನುಡಿದ: 'ಹಾಗಿದ್ದಲ್ಲಿ ಇನ್ನೂ ಹೆಚ್ಚಿನ ಸಂತೋಷವೇ. ಹಾಗಿದ್ದರೆ ಪಾಂಡವರು ಕುಂತಿಯೊಂದಿಗೆ ಸಾಯಲಿಲ್ಲವೇ? ಅವರ ವೃತ್ತಾಂತವನ್ನೆಲ್ಲಾ ನನಗೆ ನೀನು ತಿಳಿಸು'.

ಇತ್ಯುಕ್ತ ಆಹ ವಿದುರಃ ಸ ಹಿಡಿಂಬವಧ್ಯಾ-
ಪೂರ್ವಾಂ ಪ್ರವೃತ್ತಿಮಖಿಲಾಮಪಿ ಲಕ್ಷ್ಯವೇಧಮ್ ।
ಉದ್ವಾಹಮಪ್ಯಥ ನದೀಜಮುಖಾಶ್ಚ ಸರ್ವೇ
ತುಷ್ಟಾ ಬಭೂವುರಪಿ ವತ್ಸರಮೂಷುರೇವಮ್ ॥ ೧೭೩ ॥

ಅ: ಅವನು ಹೀಗೆ ಕೇಳಲು ವಿದುರ ಹಿಡಿಂಬವಧೆಯಿಂದ ಪ್ರಾರಂಭಿಸಿ ಲಕ್ಷ್ಯವೇಧದ ವರೆಗಿನ ಪಾಂಡವರ ವೃತ್ತಾಂತವನ್ನೆಲ್ಲಾ ತಿಳಿಸಿದ. ವಿವಾಹವನ್ನೂ ಬಣ್ಣಿಸಿದ. ಅದನ್ನೆಲ್ಲ ತಿಳಿದ ಭೀಷ್ಮ ಮೊದಲಾದವರೆಲ್ಲರೂ ತುಂಬಾ ಆನಂದಪಟ್ಟರು. ಹೀಗೆ ಪಾಂಡವರು ಒಂದು ವರ್ಷ ಕಾಲ ದ್ರುಪದನ ಪಟ್ಟಣದಲ್ಲಿ ವಾಸಿಸಿದರು.

ವಿ: ಪಾಂಡವರ ವಿವರಗಳು ಭೀಷ್ಮಾದಿಗಳಿಗೂ ತುಂಬಾ ಆನಂದ ನೀಡಿದವು. ಪಾಂಡವರು ಒಂದು ವರ್ಷವನ್ನು ಹೀಗೆ ಕಳೆದರು ಎಂದರ್ಥ. ಹಿಂದೆ ಒಂದು ವರ್ಷ ವಾಸಿಸಿದರು (ಶ್ಲೋ. ೧೬೫) ಎಂದು ತಿಳಿಸಿದ್ದ ಆಚಾರ್ಯರು ಆ ಒಂದು ವರ್ಷ ಕಾಲದಲ್ಲಿ ನಡೆದ ಘಟನೆಗಳನ್ನು ವಿವರಿಸಿ ಅವರು ಹೀಗೆ ಒಂದು ವರ್ಷ ಕಳೆದರು ಎಂದು ಇಲ್ಲಿ ತಿಳಿಸಿರುವರು.

ವಿದುರನ ಹಿತೋಕ್ತಿ

ಶ್ರುತ್ವಾಽಥ ಕೃಷ್ಣಮುಪಯಾತಮುರು ಪ್ರದಾಯ
ರತ್ನಂ ಚ ಪಾಂಡುತನಯೇಷು ಗತಂ ಪುನಶ್ಚ ।
ತಾತಪ್ಯಮಾನಹೃದಯಾಸ್ತು ಸುಯೋಧನಾದ್ಯಾ
ಮಂತ್ರಂ ಪ್ರಚಕ್ರುರಥ ಕರ್ಣಮುಖಾ ಯಯುಶ್ಚ ॥ ೧೭೪ ॥

ಅ: ಶ್ರೀಕೃಷ್ಣ ಪಾಂಡವರ ಬಳಿಗೆ ಬಂದು ಬಹಳವಾಗಿ ಅವರಿಗೆ ರತ್ನಗಳನ್ನು ನೀಡಿ ತೆರಳಿದನೆಂಬುದನ್ನು ಕೇಳಿ ದುರ್ಯೋಧನಾದಿಗಳು ಮನಸ್ಸಿನಲ್ಲಿ ಬೇಯುತ್ತಾ ಮಂತ್ರಾ-ಲೋಚನೆ ಮಾಡಿದರು. ಕರ್ಣನನ್ನು ಮುಂದಿಟ್ಟುಕೊಂಡು ಯುದ್ಧಕ್ಕೆ ಹೊರಟು ನಿಂತರು.

ವಿ: ೧) ಶ್ರೀಕೃಷ್ಣ ಪಾಂಡವರ ಬಳಿಗೆ ಬಂದು ಸನ್ಮಾನಿಸಿ ತೆರಳಿದ ವಿಷಯ ದುರ್ಯೋಧನಾದಿಗಳಿಗೆ ಇನ್ನು ಹೆಚ್ಚಿನ ಸಂಕಟದ ವಿಷಯವಾಯಿತು ಎಂದರ್ಥ. ಶ್ರೀಕೃಷ್ಣ ಹಾಗೆ ಸ್ಪಷ್ಟವಾಗಿಯೇ ತಾನು ಪಾಂಡವಪಕ್ಷಪಾತಿ ಎಂದು ನಿರೂಪಿಸಿದ. ಅದನ್ನು ಸಹಿಸದ ಕೌರವರು ಮತ್ತೊಮ್ಮೆ ದ್ರುಪದನ ಮೇಲೆ ದಾಳಿಯಿಟ್ಟರು.

೨) ಹಾಗೆ ನಡೆದ ಮಂತ್ರಾಲೋಚನೆಯಲ್ಲಿ ಕರ್ಣನ ಮುಂದೆ ಅರ್ಜುನ ಅಂತಹ ಪರಾಕ್ರಮಿಯೇನಲ್ಲ, ಆದರೆ ಭೀಮನ ರಕ್ಷಣೆ ಇದ್ದಾಗ ಮಾತ್ರ ಅರ್ಜುನನನ್ನು ಗೆಲ್ಲಲು ಯಾರಿಗೂ ಆಗದು ಎಂಬ ಅಪೂರ್ವ ವಿಷಯದ ಪ್ರಸ್ತಾಪ ಬಂದಿದೆ :

ಅಜೇಯೋ ಹ್ಯರ್ಜುನಃ ಸಂಖ್ಯೇ ಪೃಷ್ಠಗೋಪೇ ವೃಕೋದರೇ ।
ತಮೃತೇ ಸ ತು ಕೌಂತೇಯಃ ರಾಧೇಯಸ್ಯ ನ ಪಾದಭಾಕ್ ॥

– ಭಾರತ (ಆದಿ. ೨೦೦/೧೩)

ಯುದ್ಧಾಯ ತೇಷು ಪುನರೇವ ರಥೈಃ ಪ್ರಯಾತೇ-
ಷ್ವಾಹಾಗ್ರಜಂ ಸ ವಿದುರೋಽಪಿ ನದೀಜಮುಖ್ಯಾನ್ ।
ಏತೇ ಹಿ ಪಾಪತಮಚೇತಸ ಏತ್ಯ ಪಾರ್ಥಾನ್
ಯುದ್ಧಾಯ ಮೃತ್ಯುಮುಪಯಾಂತಿ ನ ಸಂಶಯೋಽತ್ರ ॥ ೧೭೫ ॥

ಅ: ಅವರು ಮತ್ತೆ ಹಾಗೆ ರಥಗಳೊಂದಿಗೆ ಯುದ್ಧಕ್ಕೆ ಹೊರಟು ನಿಂತುದನ್ನು ಕಂಡು ವಿದುರ ಅಣ್ಣನಾದ ಧೃತರಾಷ್ಟ್ರನಿಗೂ, ಭೀಷ್ಮಾದಿಗಳಿಗೂ ತಿಳಿಸಿದ: ''ಈ ಅತ್ಯಂತ ಕೆಟ್ಟ ಮನಸ್ಸಿನ ಇವರೆಲ್ಲ ಪಾಂಡವರೊಂದಿಗೆ ಯುದ್ಧಕ್ಕೆ ತೆರಳಿ ಸಾಯುವರು. ಇದರಲ್ಲಿ ಸಂಶಯವಿಲ್ಲ.

ಭೀಮಾರ್ಜುನೌ ವಿಷಹಿತುಂ ನ ಹಿ ಕಶ್ಚನಾಸ್ತಿ
ಸಾಮರ್ಥ್ಯಯುಕ್ ಸುರವರೇಷ್ವಪಿ ವರ್ಧಿತಾಸ್ತೇ ।
ಜ್ಞಾತ್ವೈವ ವತ್ಸರತ ಏವ ಮಹಾನಧರ್ಮ-
ಸ್ತೇಷಾಮುಪೇಕ್ಷಣಕೃತಸ್ತದಲಂ ನಿಯುಂಕ್ಷ್ವ ॥ ೧೭೬ ॥

---

೧೭೫. ಪುನರೇವೇತಿ । ಸ್ವಯಂವರಾರ್ಥೇ ಪೂರ್ವಂ ಗಮನಾತ್ ಪುನರೇವೇತ್ಯುಕ್ತಂ । – (ತಾ.)

೧೭೬. ತದಲಂ ನಿಯುಂಕ್ಷ್ವೇತ್ಯತ್ರ ದೂತಮಿತಿ ಯೋಗ್ಯಪದಾಧ್ಯಾಹಾರಃ ॥ – (ವಾ.)

ಆನೀತಯೇ ಚ ವಿನಿಯುಜ್ಯ ಸುಸಾಂತ್ವಪೂರ್ವ-
ಮಾನೀಯ ಯೋಜಯ ನೃಪೇಷು ತಥಾऽರ್ಧರಾಜ್ಯಮ್ ।
ಏವಂ ಕೃತೇ ತವ ಭವೇತ್ ಕುಲವೃದ್ಧಯೇ ಹಿ
ಧರ್ಮಾಯ ಚೋಭಯವಿನಾಶಕರೋऽನ್ಯಥಾ ಸ್ಯಾಃ ॥ ೧೭೭ ॥

ಅ: ಭೀಮಾರ್ಜುನರನ್ನು ಎದುರಿಸುವ ಶಕ್ತರು ದೇವಶ್ರೇಷ್ಠರುಗಳಲ್ಲೂ ಯಾರೂ ಇಲ್ಲ. ಅವರೀಗ ತುಂಬಾ ಬೆಳೆದಿರುವರು. ಅವರ ವಿಚಾರವನ್ನು ತಿಳಿದು ಒಂದು ವರ್ಷಕಾಲವಾದರೂ ಅವರನ್ನು ಉಪೇಕ್ಷಿಸಿರುವುದು ದೊಡ್ಡ ಅಧರ್ಮ. ಇನ್ನು ಸಾಕು, ಅವರನ್ನು ಕರೆತರುವ ವ್ಯವಸ್ಥೆ ಮಾಡು. ರಾಜನೇ! ಅವರನ್ನು ಒಳ್ಳೆಯ ಮಾತುಗಳ ಮೂಲಕ ಇಲ್ಲಿಗೆ ಕರೆಸಿ ಅವರಿಗೆ ಅರ್ಧರಾಜ್ಯವನ್ನು ನೀಡು. ಹೀಗೆ ಮಾಡುವುದು ನಿನ್ನ ವಂಶದ ಅಭಿವೃದ್ಧಿಗೆ ಸಾಧಕ. ನಿನಗೆ ಪುಣ್ಯವೂ ಬರುವುದು. ಇಲ್ಲವಾದಲ್ಲಿ ಅವೆರಡನ್ನೂ ಹಾಳು ಮಾಡಿಕೊಳ್ಳುವಿ''.

ವಿ: ೧) ವಿದುರ ಅತ್ಯಂತ ವಿವೇಕದಿಂದ ವರ್ತಿಸುವುದನ್ನು ಇಲ್ಲಿ ಗಮನಿಸಬೇಕು. ಭೀಷ್ಮಾದಿಗಳಿಗೂ ಆಗದ ಧರ್ಮೋಪದೇಶದ ಕಾರ್ಯವನ್ನು ವಿದುರ ಹೀಗೆ ನಿರ್ಭೀತಿಯಿಂದ ಮಾಡುವ ಮೂಲಕ ಶ್ರೇಷ್ಠ ಆದರ್ಶವನ್ನು ಮೆರೆದಿದ್ದಾನೆ.

೨) ಇಂತಹ ಧರ್ಮೋಪದೇಶಕರು ಇದ್ದಾಗ ಅನರ್ಥ ತಪ್ಪುವುದು. ಅನಿವಾರ್ಯವಾದಲ್ಲಿ ಕೆಲವು ದಿನಗಳ ಕಾಲ ಅದನ್ನು ಮುಂದೂಡಲಾದರೂ ಸಾಧ್ಯವಾಗುವುದು ಎಂದು ತಿಳಿಯಬೇಕು.

ಹಸ್ತಿನಾಪುರಕ್ಕೆ ಪಾಂಡವರು

ಇತ್ಯುಕ್ತವತ್ಯನು ತಥೇತ್ಯವದನ್ನದೀಜೋ
ದ್ರೋಣಃ ಕೃಪಶ್ಚ ವಿದುರಂ ಸ ನೃಪೋऽಪ್ಯುವಾಚ ।
ಯಾಹ್ಯಾನಯೇತಿ ಸ ಚ ವೇಗವತಾ ರಥೇನ
ತತ್ರಾಗಮತ್ ತದನು ತೈರಭಿಪೂಜಿತಶ್ಚ ॥ ೧೭೮ ॥

---

೧೭೭. ಆನೀತಯೇ ಚ ವಿನಿಯುಜ್ಯೇತ್ಯತ್ರ ಸಾಂತ್ವಪೂರ್ವಮಾನೀತಯೇ= ಪಾಂಡವಾನಾಮಾನಯನಾಯ ವಿನಿಯುಜ್ಯ= ದೂತಂ ಸಂಪ್ರೇಷ್ಯ ಆನೀಯ ಚ ನೃಪೇಷು। ನಿರ್ಧಾರಣೇ ಸಪ್ತಮೀ। ನೃಣಾಂ ಮಧ್ಯೇ ಯಥಾ ಭವತಿ ತಥಾ ಯೋಜಯೇತ್ಯನ್ವಯಃ ॥ –(ವಾ.)

ಅ: ವಿದುರ ಹೀಗೆನ್ನುತ್ತಲೇ ಭೀಷ್ಮ, ದ್ರೋಣ ಮತ್ತು ಕೃಪರು ಸಹ ಹಾಗೆಯೇ ಸರಿ ಎಂದು ನುಡಿದರು. ಆಗ ಧೃತರಾಷ್ಟ್ರ ವಿದುರನಿಗೆ ಹೇಳಿದ 'ನೀನು ಹೋಗಿ ಅವರನ್ನು ಕರೆದು ತಾ'. ಒಡನೆಯೇ ವಿದುರ ವೇಗದ ರಥವನ್ನೇರಿ ಅಲ್ಲಿಗೆ ತೆರಳಿದ. ಅವರೆಲ್ಲ ಅವನನ್ನು ಚೆನ್ನಾಗಿ ಆದರಿಸಿದರು.

ವಿ: ೧) ವಿದುರನ ಮಾತಿಗೆ ಭೀಷ್ಮ, ದ್ರೋಣಾದಿಗಳು ಸಹಮತ ವ್ಯಕ್ತಪಡಿಸಿದರು. ಪಾಂಡವರನ್ನು ಕರೆತರುವ ಜವಾಬ್ದಾರಿಯನ್ನು ವಿದುರನಿಗೆ ಒಪ್ಪಿಸಿದಾಗ ಅವನು ಸಂಭ್ರಮದಿಂದ ಹೊರಟಿದ್ದನ್ನು 'ವೇಗವತಾ ರಥೇನ' ಎಂಬ ಪದದಿಂದ ಸೂಚಿಸಿರುವರು.

೨) ಕೃಷ್ಣನನ್ನು ಕರೆತರಲು ಕಂಸಪ್ರೇಷಿತನಾದ ಅಕ್ರೂರ ಹರ್ಷಿಸಿದಂತೆ, ಭೀಮಾದಿಗಳನ್ನು ಕರೆತರಲು ಧೃತರಾಷ್ಟ್ರಪ್ರೇಷಿತ ವಿದುರ ಹರ್ಷಿಸಿದ ಎಂಬುದನ್ನು ಗಮನಿಸಬೇಕು.

ತತ್ಕಾಲ ಏವ ವಸುದೇವಸುತಶ್ಚ ಕೃಷ್ಣೋ
ವ್ಯಾಸಶ್ಚ ತಾನುಪಸಮೇತ್ಯ ದುರಂತಶಕ್ತೀ ।
ಆದಾಯ ಕುಂತಿಸಹಿತಾನ್ ವಿದುರೇಣ ಯುಕ್ತೌ
ನಾಗಾಹ್ವಯಂ ಪುರಮಿತಾಂ ಸಹ ಭಾರ್ಯಯೈವ ॥ ೧೭೯ ॥

ಅ: ಅದೇ ಸಮಯದಲ್ಲಿ ಕೊನೆ ಇರದ ಯಾದವಕೃಷ್ಣ ಹಾಗೂ ವಾಸಿಷ್ಠಕೃಷ್ಣ ರೂಪಗಳ ಶ್ರೀಹರಿಯೂ ಸಹ ಪಾಂಡವರ ಬಳಿಗೆ ಆಗಮಿಸಿದ. ಅವರಿಬ್ಬರೂ ಕುಂತಿಯೊಂದಿಗೆ ವಿದುರನ ಸಮೇತವಾಗಿ ಅವರನ್ನು ದ್ರೌಪದಿಯೊಂದಿಗೆ ಹಸ್ತಿನಾಪುರಕ್ಕೆ ಕರೆತಂದರು.

ವಿ: ವಿದುರ ಅಲ್ಲಿಗೆ ಬರುವ ವೇಳೆಗೆ ಶ್ರೀಕೃಷ್ಣ, ವ್ಯಾಸರೂ ಆಗಮಿಸಿದರು. ಭಗವಂತನ ಭಕ್ತವಾತ್ಸಲ್ಯವೆಂದರೆ ಇದೇ. ಪಾಂಡವರೊಂದಿಗೆ ತಾವೂ ಹಸ್ತಿನಾಪುರಕ್ಕೆ ತೆರಳಿದರು. ಭಕ್ತರೊಂದಿಗೆ ಭಗವಂತ ಧಾವಿಸುವುದಕ್ಕೂ ಇದು ಸೂಚಕವಾಯಿತು.

---

೧೭೯. ಇತಾಂ ಪ್ರಾಪ್ತೌ। – (ಜ.)

೧೭೯. ನಾಗಾಹ್ವಯಂ ಪುರಮಿತ್ಯತ್ರ ದುರಂತಶಕ್ತೀ = ವ್ಯಾಸಕೃಷ್ಣೌ ಇತಾಂ= ಪ್ರಾಪ್ತವಂತೌ । ''ಇಣ್ ಗತಾ''ವಿತಿ ಧಾತೋಃ ಲೋಟಿ ಪ್ರಥಮಪುರುಷದ್ವಿವಚನಮ್ ॥ – (ವಾ.)

ಪುರಜನರ ಸಂಭ್ರಮ

ತೇಷ್ವಾಗತೇಷು ಸುಮಹಾನಭವತ್ ಪ್ರಹರ್ಷಃ
ಪೌರಸ್ಯ ಜಾನಪದಿಕಸ್ಯ ಜನಸ್ಯ ಚೋಚ್ಚೈಃ ।
ಭೀಷ್ಮಾದಿಕಾಶ್ಚ ಮುದಿತಾಃ ಪ್ರತಿಪೂಜ್ಯ ಗೇಹ-
ಮಾವೇಶಯನ್ ಸಹ ನೃಪೇಣ ಮಹೋತ್ಸವೇನ ॥ ೧೮೦ ॥

ಅ: ಅವರು ಆಗಮಿಸುತ್ತಲೆ ಪಟ್ಟಣಿಗರಿಗೂ, ಕುರುದೇಶದವರಿಗೂ ಅತ್ಯಂತ ಮಹತ್ತರ-ವಾದ ಸಂತೋಷವುಂಟಾಯಿತು. ಭೀಷ್ಮಾದಿಗಳೂ ಆನಂದಿಸಿದರು; ಅವರು ಧೃತರಾಷ್ಟ್ರ-ನೊಂದಿಗೆ ಕೂಡಿ ಪಾಂಡವರನ್ನು ಆದರಿಸಿ ಮಹಾಸಂಭ್ರಮದಿಂದ ಅರಮನೆಯೊಳಗೆ ಪ್ರವೇಶ ಮಾಡಿಸಿದರು.

ಗಾಂಧಾರಿಯ ಪ್ರತಿಕ್ರಿಯೆ

ಕೃಷ್ಣಾಮಪೂಜಯದತೀವ ಚ ಸೌಬಲೀ ಸಾ
ದುರ್ಯೋಧನಸ್ಯ ದಯಿತಾಸಹಿತಾऽತ್ರ ತೇऽಪಿ ।
ಊಷುಸ್ತತಶ್ಚ ನಿಜಪುತ್ರಕದುರ್ವಿನೀತ್ಯಾ
ಕೃಷ್ಣಾನಿಮಿತ್ತಮುರುಭೀತಿತ ಆಹ ಭೀಮಾತ್ ॥ ೧೮೧ ॥

ಅ: ಗಾಂಧಾರಿಯೂ ಸಹ ದುರ್ಯೋಧನನ ಮಡದಿಯೊಂದಿಗೆ ಕೂಡಿ ದ್ರೌಪದಿಯನ್ನು ಬಹಳವಾಗಿ ಉಪಚರಿಸಿದಳು. ಪಾಂಡವರು ಅಲ್ಲಿ ವಾಸಿಸತೊಡಗಿದರು. ಗಾಂಧಾರಿ ತನ್ನ ಮಗನ ದುರ್ನಡತೆಯಿಂದ ದ್ರೌಪದಿಯ ಕಾರಣದಿಂದಾಗಿ ಭೀಮನಿಂದ ಒದಗುವ ಮಹಾಭಯದಿಂದ ನುಡಿದಳು:

ವಿ: ೧) ಗಾಂಧಾರಿ ಸ್ವತಃ ತುಂಬಾ ಸಾತ್ವಿಕಳು. ದ್ರೌಪದಿಯನ್ನು ಆದರದಿಂದಲೇ ಸ್ವಾಗತಿಸಿ-ದಳು. ಆ ವೇಳೆಗೆ ದುರ್ಯೋಧನನಿಗೆ ವಿವಾಹವಾಗಿತ್ತು ಅವನ ಹೆಂಡತಿಯೂ ದ್ರೌಪದಿಯನ್ನು ಆದರಿಸಿದಳು*.

---

೧೮೦. ಗೇಹಮಾವೇಶಯನ್ನಿತ್ಯತ್ರ ಗೇಹಂ = ಧೃತರಾಷ್ಟ್ರಗೇಹಮ್ ॥ – (ವಾ.)

* ದುರ್ಯೋಧನಸ್ಯ ಮಹಿಷೀ ಕಾಶಿರಾಜಸುತಾ ತದಾ ।
ಧೃತರಾಷ್ಟ್ರಸ್ಯ ಪುತ್ರಾಣಾಂ ವಧೂಭಿಃ ಸಹಿತಾ ತದಾ ॥
ಪಾಂಚಾಲೀಂ ಪ್ರತಿಜಗ್ರಾಹ ದ್ರೌಪದೀಂ ಶ್ರೀಮಿವಾಪರಾಮ್ ।
ಪೂಜಯಾಮಾಸ ಪೂಜಾರ್ಹಾಂ ಶಚೀದೇವೀಮಿವಾಗತಾಮ್ ॥ – ಭಾರತ (ಆದಿ. ೨೦೬/೨೨)

೨) ಪಾಂಡವರು ಅಲ್ಲಿ ವಾಸಿಸತೊಡಗಿದಾಗ ಗಾಂಧಾರಿ ದುರ್ಯೋಧನನ ದುರ್ನಡತೆ–ಯಿಂದ ಭೀಮು ಕೆರಳಿ ಅವರನ್ನೆಲ್ಲ ಶಿಕ್ಷಿಸಬಹುದು ಎಂಬ ಭಯದಿಂದ ಕುಂತಿಗೆ ಹೀಗೆ ಹೇಳಿದಳು ಎಂದರ್ಥ.

ಕುಂತಿ ಪ್ರಯಾಹಿ ಸಹಿತಾ ಸ್ನುಷಯಾ ಗೃಹಂ ಸ್ವಂ
ಭೀಮಾದ್ಬಿಭೇಮಿ ನಿಜಪುತ್ರಕದುರ್ವಿನೀತ್ಯಾ ।
ಕೃಷ್ಣಾ ತ್ರಿಲೋಕವನಿತಾऽಧಿಕರೂಪಸಾರಾ
ಯಸ್ಮಾದಿತಿ ಸ್ಮ ಸಸುತಾ ಪ್ರಯಯೌ ಗೃಹಂ ಸಾ ॥ ೧೮೨ ॥

ಅ: ''ಕುಂತೀ, ನಿನ್ನ ಸೊಸೆಯೊಂದಿಗೆ ನೀನು ನಿನ್ನ ಮನೆಗೇ ತೆರಳು. ನನ್ನ ಮಗನ ದುರ್ನಡತೆಯಿಂದಾಗಿ ನಾನು ಭೀಮನಿಗೆ ಅಂಜುವೆ. ಏಕೆಂದರೆ ದ್ರೌಪದಿ ಮೂರು ಲೋಕದ ಸ್ತ್ರೀಯರಲ್ಲೂ ಅತ್ಯಂತ ರೂಪ ಸೌಂದರ್ಯಗಳಿಂದ ಮಿಗಿಲೆನ್ನಿಸಿದವಳು''. ಕುಂತಿ ಅದರಂತೆ ತನ್ನ ಮಕ್ಕಳೊಂದಿಗೆ ತನ್ನ ಮನೆಗೆ ಹೊರಟಳು.

ವಿ: ೧) ಇಲ್ಲಿ ಕುಂತಿಯ ಮನೆಯೆಂದರೆ ಪಾಂಡುರಾಜ ವಾಸವಾಗಿದ್ದ ಮನೆಯೆಂದರ್ಥ. ಪಾಂಡವರು ದೂರ ಇದ್ದಲ್ಲಿ ದುರ್ಯೋಧನ ದ್ರೌಪದಿಯ ಬಗ್ಗೆ ಕೆಟ್ಟದಾಗಿ ನಡೆದುಕೊಳ್ಳುವ ಸಂಭವ ಕಡಿಮೆ. ಅದರಿಂದಾಗಿ ಅವರ ಸಾವು ಸ್ವಲ್ಪವಾದರೂ ಮುಂದಾಗಬಹುದು ಎಂಬ ಕಳಕಳಿ ಗಾಂಧಾರಿಯದಾಗಿತ್ತು ಎಂದರ್ಥ.

೨) ಗಾಂಧಾರಿಯು ದ್ರೌಪದಿ ತ್ರಿಲೋಕ ಸುಂದರಿ ಎಂಬುದನ್ನು ತಾನು ಕಣ್ಣಿಗೆ ಬಟ್ಟೆ ಕಟ್ಟಿಕೊಂಟಿದ್ದರೂ ಸಹ ಅವಳ ಕಾಲ್ಗೆಜ್ಜೆಗಳ ಧ್ವನಿಯಿಂದಲೇ ಅರಿತುಕೊಂಡ ಉಲ್ಲೇಖ ಮಹಾಭಾರತದಲ್ಲಿದೆ.

---

೧೮೨. ತ್ರಿಲೋಕೇಷು ವಿದ್ಯಮಾನಸ್ತ್ರೀಭ್ಯಃ ಅಧಿಕರೂಪೇಣ = ಅಧಿಕಸೌಂದರ್ಯೇಣ ಸಾರಾ = ಶ್ರೇಷ್ಠಾ। – (ಜ.)

೧೮೨. ಪರಿಷ್ವಜ್ಯೈವ ಗಾಂಧಾರೀ ಕೃಷ್ಣಾಂ ಕಮಲಲೋಚನಾಂ।
ಪುತ್ರಾಣಾಂ ಮಮ ಪಾಂಚಾಲೀ ಮೃತ್ಯುರೇವೇತ್ಯಮನ್ಯತ।
ಸಂಚಿಂತ್ಯ ವಿದುರಂ ಪ್ರಾಹ ಯುಕ್ತಿತಃ ಸುಬಲಾತ್ಮಜಾ।
ಕುಂತೀಂ ರಾಜಸುತಾಂ ಕ್ಷತ್ತಃ ಸವಧೂಂ ಸಪರಿಚ್ಛದಾಮ್।
ಪಾಂಡೋರ್ನಿವೇಶನಂ ಶೀಘ್ರಂ ನೀಯತಾಂ ಯದಿ ರೋಚತೇ। – ಭಾರತ (ಆದಿ. ೨೦೬/೨೨)

ಭೀಮಸ್ಯ ಭೀತಿತಃ ಕುಂತೀಮಾಹ ಗಾಂಧಾರೀತಿ ವಾ ಧೃತರಾಷ್ಟ್ರ ಇತಿ ವಾ ಶೇಷಃ। – (ವ.)

ಪಾಂಡವ ದ್ರೌಪದಿಯರ ವಿಚಿತ್ರ ದಾಂಪತ್ಯ

ಊಷುಸ್ತಥೈವ ಪರಿವತ್ಸರಪಂಚಕಂ ತೇ
ಪಾಂಡೋರ್ಗೃಹೇ ಸುಸುಖಿನೋಽಖಿಲಭೋಗಯುಕ್ತಾಃ ।
ಕೃಷ್ಣಾ ಚ ತೇಷು ಪೃಥಗೇವ ಚತುಃಸ್ವರೂಪಾ
ರೇಮೇ ತಥೈಕತನುರಪ್ಯಭಿಮಾನಿಭೇದಾತ್ ॥ ೧೮೩ ॥

ಅ: ಪಾಂಡವರು ಹಾಗೆ ಪಾಂಡುರಾಜನ ಮನೆಯಲ್ಲಿ ಐದು ಪರಿವತ್ಸರಗಳ ಕಾಲ ಅತ್ಯಂತ ಸುಖಿಗಳಾಗಿ, ಸಕಲ ಭೋಗಗಳಿಂದ ಕೂಡಿದವರಾಗಿ ವಾಸಿಸಿದರು. ದ್ರೌಪದಿಯೂ ಒಂದೇ ದೇಹದವಳಾದರೂ ಸಹ ಅಭಿಮಾನಿ ಭೇದದಿಂದಾಗಿ ನಾಲ್ಕು ರೂಪಗಳನ್ನು ಧರಿಸಿ ಪಾಂಡವರೊಂದಿಗೆ ರಮಿಸಿದಳು.

ವಿ: ಪರಿವತ್ಸರ ಎಂದರೆ ಬಾರ್ಹಸ್ಪತ್ಯಮಾನದ ಒಂದು ವರ್ಷ ಎಂದರ್ಥ. ಬೃಹಸ್ಪತಿ ಒಂದೊಂದು ರಾಶಿಯಲ್ಲಿ ಒಂದೊಂದು ವರ್ಷಕಾಲ ಇರುವನು, ಮತ್ತೊಂದು ರಾಶಿಗೆ ತೆರಳಿದಾಗ ನೂತನ ವರ್ಷದ ಆರಂಭ. ದ್ರೌಪದಿಯ ದೇಹ ಒಂದೇ ಆಗಿದ್ದರೂ, ಅದರಲ್ಲಿ ಶ್ಯಾಮಲಾ, ಶಚೀ, ಉಷಾ ಎಂಬ ಮೂವರು ದೇವತಾ ಸ್ತ್ರೀಯರ ಸನ್ನಿಧಾನ. ಪ್ರಧಾನವಾಗಿ ದ್ರೌಪದಿ ಭಾರತಿಯೇ. ಹೀಗೆ ನಾಲ್ಕು ರೂಪಗಳಿಂದ ಐದು ಜನರೊಂದಿಗೆ ವಿಹರಿಸಿದಳು ಎಂದರ್ಥ. ಆ ದೇಹದೊಳಗಿದ್ದ ಪಾರ್ವತಿಗೆ ಉಳಿದ ವ್ಯವಹಾರ ಕಾಲದಲ್ಲಿ ಮಾತ್ರ ಅಭಿವ್ಯಕ್ತಿ ರಮಣ ಕಾಲದಲ್ಲಿ ಅಲ್ಲ ಎಂಬ ವಿಶೇಷಾಂಶ ಈಗಾಗಲೇ ಬಂದಿದೆ.

ಕನ್ಯೈವ ಸಾಽಭವದತಃ ಪ್ರತಿವಾಸರಂ ಚ
ಜನ್ಮಾಭವದ್ಭ್ಯಭಿಮತೇಃ ಪೃಥಗೇವ ನಾಶಾತ್ ।
ಪ್ರಾಯೋ ಹಿ ನಾಭಿಮತಿನಾಶಮವಾಪ ವಾಣೀ
ತಸ್ಮಾನ್ಮರುಚ್ಚ ಸಕಲೇಷ್ವಭವಿಷ್ಟ ಆಸೀತ್ ॥ ೧೮೪ ॥

ಅ: ದ್ರೌಪದಿ ಪ್ರತಿದಿನವೂ ಕನ್ಯೆಯೇ ಆಗುತ್ತಿದ್ದಳು. ಪ್ರತಿದಿನದಲ್ಲೂ ದೇಹಾಭಿಮಾನಿಗಳು ಪ್ರತ್ಯೇಕವಾಗಿ ನಾಶಗೊಂಡು ಮತ್ತೆ ಹುಟ್ಟುತ್ತಿದ್ದುದರಿಂದ ಆ ದೇಹಕ್ಕೆ ಪ್ರತಿನಿತ್ಯ ಮರಣ

---

೧೮೩. ಬೃಹಸ್ಪತೇರೇಕೈಕರಾಶಿಷು ಸಂಚಾರೇಣ ಯೋ ವತ್ಸರಪರಿಮಿತಃ ಕಾಲಃ ಸ ಪರಿವತ್ಸರ ಇತ್ಯುಚ್ಯತೇ । ತಾದೃಶಪರಿವತ್ಸರಪಂಚಕಂ ಕೃಷ್ಣಾಯಾಃ ಪಾಂಡವೇಷು ರಮಣಪ್ರಕಾರಮಾಹ .... । – (ಜ.)

೧೮೩. ದುರ್ಯೋಧನಾದಿಭಿಃ ಸಾರ್ಧಂ ನ್ಯವಸತ್ ಪಂಚವತ್ಸರಾನ್ । – ಇತಿ ಸ್ಕಾಂದೇ (ವೇಂ. ೨೯/೮)

ಜನನಗಳು ಉಂಟಾಗುತ್ತಿದ್ದವು. ಭಾರತಿ ಮಾತ್ರ ಎಂದೂ ಪೂರ್ಣವಾಗಿ ದೇಹಾಭಿಮಾನವನ್ನು ತೊರೆಯುತ್ತಿರಲಿಲ್ಲ ಆದ್ದರಿಂದ ವಾಯುವೂ ಸಹ ಇತರ ನಾಲ್ಕು ಜನಗಳಲ್ಲೂ ಪ್ರವೇಶಿಸಿದ್ದ.

ವಿ: ೧) ಪಾಂಡವರೊಂದಿಗೆ ದ್ರೌಪದಿಯ ರಮಣದ ಬಗ್ಗೆ ಇಲ್ಲಿ ಅಪೂರ್ವ ರೀತಿಯ ವಿವರಣೆ ಬಂದಿದೆ. ಧರ್ಮರಾಜ, ಭೀಮಸೇನ, ಅರ್ಜುನ, ನಕುಲ ಮತ್ತು ಸಹದೇವರು ಕ್ರಮವಾಗಿ ದಿನಕ್ಕೊಬ್ಬರಂತೆ ದ್ರೌಪದಿಯೊಂದಿಗೆ ರಮಿಸುತ್ತಿದ್ದರು. ಯುಧಿಷ್ಠಿರ ದ್ರೌಪದಿಯೊಂದಿಗಿದ್ದಾಗ ದ್ರೌಪದೀ ದೇಹದಲ್ಲಿ ಶ್ಯಾಮಲಾ ದೇವಿಯ ಅಭಿವ್ಯಕ್ತಿಯಾಗುತ್ತಿತ್ತು, ಭೀಮನೊಂದಿಗಿದ್ದಾಗ ಸಾಕ್ಷಾತ್ ಭಾರತಿಯೇ ಅಲ್ಲಿರುತ್ತಿದ್ದರು, ಅರ್ಜುನನೊಂದಿಗಿದ್ದಾಗ ಶಚೀದೇವಿಯ ಅಭಿವ್ಯಕ್ತಿ, ನಕುಲ ಸಹದೇವರೊಂದಿಗೆ ಉಷಾದೇವಿಯ ಅಭಿವ್ಯಕ್ತಿ ಎಂದರ್ಥ. ಆದರೆ, ಅಂತಹ ಅಭಿವ್ಯಕ್ತಿಯನ್ನು ಸ್ವತಃ ಹೊಂದುವ ಸಾಮರ್ಥ್ಯ ಭಾರತಿಯ ಹೊರತು ಇತರ ಮೂವರಿಗೆ ಸರ್ವಥಾ ಇರಲಿಲ್ಲ. ಅದಕ್ಕಾಗಿ ಅವರವರ ಅಭಿವ್ಯಕ್ತಿಗಾಗಿ ಸ್ವತಃ ಭಾರತೀದೇವಿಯೇ ಆ ದೇಹದಲ್ಲಿ ನೆಲೆಸಿದ್ದು ಆ ಕಾರ್ಯವನ್ನು ಅವರಿಂದ ಮಾಡಿಸುತ್ತಿದ್ದಳು. ಹೀಗಾಗಿ ಭಾರತಿ ಸದಾ ಆ ದೇಹದಲ್ಲಿ ಸನ್ನಿಹಿತಳಾಗಿಯೇ ಇರುತ್ತಿದ್ದಳು. ಅದರಿಂದಾಗಿ ಯುಧಿಷ್ಠಿರಾದಿಗಳಲ್ಲೂ ಸಹ ಭಾರತೀಪತಿತ್ವಕ್ಕಾಗಿ ವಾಯುದೇವರು ಒಂದೊಂದು

---

೧೮೪. ಅಭಿಮತೇಃ ಪೃಥಗೇವ ನಾಶಾದಿತ್ಯತ್ರ ಹಿ = ಯಸ್ಮಾತ್ ಅಭಿಮತೇಃ = ದೇಹಾಭಿಮಾನಸ್ಯ ಪೃಥಗೇವ = ಪೃಥಕ್ಪೃಥಗೇವ ಅನ್ಯೇಷಾಂ ರಮಣದಿನೇ ನಾಶಾತ್ ಸ್ವಸ್ವಪತಿನಾ ರಮಣದಿನೇ ಉತ್ಪತ್ತೇಶ್ಚ ಪ್ರತಿವಾಸರಂ ಜನ್ಮ ಅಭವತ್। ಜನ್ಮೇತ್ಯುಪಲಕ್ಷಣಂ ಪೂರ್ವದಿನೇ ಅಭಿಮಾನನಾಶಾನ್ನಾಶಃ। ಅಪರದಿನೇ ಅಭಿಮಾನೋತ್ಪತ್ತೇರುತ್ಪತ್ತಿಶ್ಚೇತಿ ಜ್ಞೇಯಮ್। ಲೋಕೇऽಪಿ ವಿದ್ಯಮಾನದೇಹಾಭಿಮಾನನಾಶ ಏವ ನಾಶಃ, ತದುತ್ಪತ್ತಿರೇವ ಜನ್ಮೇತಿ ಪ್ರಸಿದ್ಧಮ್। ಅತಃ ಸಾ= ದ್ರೌಪದೀ ಪ್ರತಿವಾಸರಂ ಕನ್ಯೈವ = ಸ್ವಸ್ವದಿನೇ ರಮಮಾಣಪತಿನಾ ಸಹ ಮಾನಸವಿವಾಹಯೋಗ್ಯಾ ಕನ್ಯೈವಾಭವತ್। ಏವಂ ಚ ಸರ್ವೇಷಾಂ ಪಾರ್ಥಾನಾಂ ಸ್ವಸ್ವರಮಣದಿನೇ ಸ್ವಸ್ವವಧೂಭಿರೇವ ಸಂಗಮಃ। ತಾಸಾಂ ಚ ಸ್ವಸ್ವಪತಿವ್ಯತಿರಿಕ್ತಾನಾಂ ರಮಣದಿನೇ ದೇಹಾಭಿಮಾನನಾಶಾನ್ನಾಪರಸಂಗದೋಷಃ। ಸ್ವಪತಿನಾ ಸಹ ರಮಣೇ ಚ ಅಭಿನವಜನ್ಮನಾ ಕನ್ಯಾತ್ವಂ ಪ್ರಾಪ್ಯ ಮಾನಸವಿವಾಹವಿಧಿನಾ ಪುನರುದ್ವಾಹ್ಯ ಸ್ವಪತ್ಯಾ ಸಹ ರಮಣಾತ್ ನ ತಸ್ಯ ಕನ್ಯಾಗಮನದೋಷಃ। ಕನ್ಯಾಯಾಶ್ಚ ಮಾನಸವಿವಾಹವಿಧಿನಾ ಸ್ವಪತಿನಾ ಸಹ ರಮಣೇನ ನಿಮಿತ್ತೇನ ನಾಸಂಸ್ಕೃತಪುರುಷಗಮನದೋಷ ಇತಿ ಜ್ಞೇಯಮ್। ವಾಣೇ ತು ಭೀಮಸೇನರಮಣದಿವಸೇ ಸಂಪೂರ್ಣ-ದೇಹಾಭಿಮಾನಂ ಕರೋತಿ।''ತತ್ಪಾನ್ಯಗಾಶ್ಚ ಭವತ'' ಇತಿ ಬ್ರಹ್ಮದತ್ತಶಾಪಸ್ಯ ಸ್ವಪತಿಯೋಗವರಂ ದದತಾ ಶಿವೇನೈವ ಪರಿಹೃತತ್ವಾತ್ 'ರಮತೇ ಸತತಂ ತಯಾ ಯತ್' ಇತಿ ಗ್ರಂಥಕೃತೈವೋತ್ತರಶ್ಲೋಕೇ ವಕ್ಷ್ಯಮಾಣತ್ವಾಚ್ಚ ಭಾರತ್ಯೈವ ರಮಣಮ್। ಇತರಾಸಾಂ ತದಾ ಅಭಿಮಾನ ಏವ ನಾಸ್ತಿ! ಅನ್ಯಥಾ ತಾಭಿರಿತ್ಯವಕ್ಷ್ಯತ್। ಅನ್ಯಾಸಾಂ ದಿನೇಷ್ವಪಿ ವಾಣೇ ''ಕೃಷ್ಣಾ ತ್ರಿಲೋಕವನಿತಾऽಧಿಕರೂಪಸಾರಾ'' ಇತಿ ವಚನಾತ್ ಭಾರತೀಯೋಗ್ಯದಿವ್ಯಸೌಂದರ್ಯಾದಿ-ಲಕ್ಷಣಭರಿತಯೋಗ್ಯತಾಯಾಃ ಸ್ವಾತಂತ್ರ್ಯೇಣೇತರಾಸ್ವಸಂಭವಾತ್ ವಿವಾಹಸಂಭ್ರಮಾರ್ಥಂ ಗಜೇ ದತ್ತೇऽಪಿ ತನ್ನಿಯಮನಾರ್ಥಂ ಯಂತುಃ ಸಹೈವ ಗಮನವತ್ ಪ್ರಾಯಃ ಅಭಿಮಾನನಾಶಂ ನಾವಾಪ। ಈಷದಭಿಮಾನಂ ಸರ್ವದಾ ಕರೋತ್ಯೇವ। ಅತಸ್ತಸ್ಯಾ ಏವ ರಮಣಾರ್ಥಂ ಭೀಮೋऽಪಿ ಧರ್ಮಾದಿಷು ಚತುರ್ಷ್ವಪಿ ಅಭಿವಿಷ್ಟಃ। ಏಕೈಕಕಲಯಾ ಪ್ರವಿಷ್ಟ ಆಸೀತ್। ತೇನ ಕಾರಣೇನ ಭೀಮಸ್ಯಾಪಿ ನ ಪರಸ್ತ್ರೀಗಮನಶಂಕಾ। ನಾಪಿ ಭಾರತ್ಯಾಃ ಪರಪುರುಷಗಮನಶಂಕೇತಿ ಸರ್ವಮವದಾತಮ್। ತದುಕ್ತಂ ಭಾರತೇ —

ರೂಪದಿಂದ ಆ ಕಾಲದಲ್ಲಿ ವಿಶೇಷವಾಗಿ ಸನ್ನಿಹಿತರಾಗುತ್ತಿದ್ದರು. ಅವರೆಲ್ಲರಲ್ಲೂ ಕ್ರಮವಾಗಿ ಸೌಮ್ಯ, ವೀರ, ಶೃಂಗಾರ ಮತ್ತು ಸುನೀತಿ ಎಂಬ ನಾಮದ ರೂಪಗಳಿಂದ ವಾಯುದೇವರು ಸದಾ ಆವೇಶ ಹೊಂದಿದ್ದ ವಿವರ ಈಗಾಗಲೇ ಬಂದಿದೆ (ಅ.೧೨ ಶ್ಲೋ. ೧೩೦–೧೩೨).

೨) ಜೀವರಿಗೆ ದೇಹೋತ್ಪತ್ತಿಯೆಂದರೆ ದೇಹಾಭಿಮಾನವೇ; ಅದರಂತೆ ಅಭಿಮಾನ–ನಾಶವೇ ಮರಣ. ಅದರಿಂದಾಗಿ ಪ್ರತಿದಿನ ಇತರ ದೇವಿಯರು ಅಲ್ಲಿ ಅಭಿಮಾನವನ್ನು ಹೊಂದಿ ತೆರಳುತ್ತಿದ್ದರು. ಹೀಗಾಗಿ ಅವರಿಗೆ ಪ್ರತಿದಿನ ಜನನ ನಡೆದು ಅವರು ಕನ್ಯೆಯರಾಗುತ್ತಿದ್ದರು. ಆಗ ಪ್ರತಿನಿತ್ಯ ಮಾನಸವಿಧಿಯಿಂದ ಅವರಿಗೆ ಅವರ ನಿಯತ ಪತಿಗಳೊಂದಿಗೆ ವಿವಾಹಸಂಸ್ಕಾರ ನಡೆಯುತ್ತಿತ್ತು; ಹೀಗಾಗಿ ಅವರಿಗೆ ಪರಪುರುಷ ಸಂಸ್ಕಾರವಾಗುತ್ತಿರಲಿಲ್ಲ. ಪಾಂಡವರಲ್ಲಿ ಯುಧಿಷ್ಠಿರಾದಿಗಳಿಗೂ ಕನ್ಯಾಗಮನದೋಷ ಒದಗುತ್ತಿರಲಿಲ್ಲ ಎಂಬ ವಿಶೇಷಾಂಶವನ್ನು ಶ್ರೀವಾದಿರಾಜಸ್ವಾಮಿಗಳು ನಿರೂಪಿಸಿರುವರು. ಮಹಾಭಾರತದಲ್ಲಿನ —

ಇದಂ ಚ ತತ್ಕಾರ್ದ್ಯುತಮುತ್ತಮಂ ತದಾ ದಧಾತಿ ಕೃಷ್ಣಾ ವಪುಷಾऽತಿಮಾನುಷಮ್।
ಮಹಾನುಭಾವಾ ಕಿಲ ಸಾಧುಮಧ್ಯಮಾ ಬಭೂವ ಕನ್ಯೈವ ಗತೇ ಗತೇऽಹನಿ ॥

— ಎಂಬ ಶ್ಲೋಕದ ವ್ಯಾಖ್ಯಾನರೂಪವಾಗಿ ಶ್ರೀಮದಾಚಾರ್ಯರ ಇಲ್ಲಿಯ ಶ್ಲೋಕಗಳು ಉಂಟು ಎಂಬುದನ್ನೂ ಸಹ ಅವರು ವಿವರವಾಗಿ ವಿಶ್ಲೇಷಿಸಿ ತೋರಿಸಿರುವರು. ಮಹಾಭಾರತದ

''ಇದಂ ಚ ತತ್ಕಾರ್ದ್ಯುತಮುತ್ತಮಂ ತದಾ ದಧಾತಿ ಕೃಷ್ಣಾ ವಪುಷಾऽತಿಮಾನುಷಮ್।
ಮಹಾನುಭಾವಾ ಕಿಲ ಸಾಧುಮಧ್ಯಮಾ ಬಭೂವ ಕನ್ಯೈವ ಗತೇ ಗತೇऽಹನಿ'' ॥ ಇತಿ ॥ (೧/೧೯೭/೧೪)

ಏವಂ ಚಾಸ್ಮಿನ್ ಶ್ಲೋಕೇ ಮಹಾನುಭಾವಾ ಕೃಷ್ಣಾ ಅತಿಮಾನುಷಂ ಮಾನುಷಾಯೋಗ್ಯಂ ಉತ್ತಮಮದ್ಭುತಂ ಕರ್ಮ ವಪುಷಾ ಏಕೇನ ದೇಹೇನ ದಧಾತಿ। ಕಿಂ ತತ್ ಅಹನಿ ಏಕೈಕರಂತುರಹನಿ ಗತೇ ಗತೇ ಸತಿ ಮಧ್ಯೇ ಸರ್ವಾಸಾಂ ಪಾತಿವ್ರತ್ಯರಕ್ಷಣಾಯ ತತ್ತತ್ಪತೀನಾಂ ದೇಹಾಭಿಮಾನಾಖ್ಯಜನ್ಮ ದತ್ತ್ವಾ ಕನ್ಯೈವ ಬಭೂವೇತಿ ವದತಾ ವ್ಯಾಸೇನೈವ ಮಹಾಸಾಮರ್ಥ್ಯವತ್ತ್ವಾತ್ ಅತಿಮಾನುಷಂ ಮಾನುಷಾಯೋಗ್ಯಮುತ್ತಮಂ ಏಕಸ್ಯಾಃ ಪಂಚಪುರುಷಸಂಗನಿಮಿತ್ತ-ದೋಷಪರಿಹಾರರೂಪತ್ವಾತ್ ಉತ್ತಮಂ ಅದ್ಭುತಂ ಏಕಸ್ಯೈವ ದೇಹಸ್ಯ ಪಂಚಸ್ತ್ರೀರೂಪತ್ವಂ ತತ್ರಾಪಿ ಸ್ವಪತಿನಾ ಸಹ ಸಂಬಂಧೇ ಅಭಿನವೋತ್ಪತ್ತ್ಯಾಽಹನ್ಯಹನ್ಯಭಿನವಕನ್ಯಾತ್ವಂ, ಕನ್ಯಾತ್ವಾದೇವ ಗಾಂಧರ್ವೋ ವಿವಾಹಃ, ಸ್ವಪತಿನೈವ ಸಹ ರಮಣಂ, ಅನ್ಯರಮಣದಿನೇ ದೇಹಾಭಿಮಾನನಾಶಾತ್ ತದೀಯರಮಣಾನನುಭವಶ್ಚೇತ್ಯಾದ್ಯದ್ಭುತತಮಂ ಕರ್ಮ ವಪುಷಾ ಏಕೇನೈವ ದೇಹೇನ ದಧಾತೀತಿ ಸ್ಫುಟಂ ಸಮಸ್ತಶಂಕಾನಾಂ ಪರಿಹೃತತ್ವಾತ್ ಆಚಾರ್ಯನಿರೂಪಿತಪಂಚ-ದ್ರೌಪದೀವ್ಯಾಖ್ಯಾನೇ ನ ಕಶ್ಚಿತ್ತುದ್ಭ್ರೋಪದ್ರವಃ। ಕಿಂ ಬಹುನಾ ''ಬಭೂವ ಕನ್ಯೈವ ಗತೇ ಗತೇऽಹನಿ'' ಇತಿ ''ಕನ್ಯೈವ ಸಾऽಭವದತಃ ಪ್ರತಿವಾಸರಂ ಚ'' ಇತಿ ಪದವಿನ್ಯಾಸಯೋರಪ್ಯೈಕವಿಧ್ಯಾತ್ ಪ್ರಾಮಾಣಿಕಶಿರೋಮಣಿರ್ಗ್ರಂಥಕಾರ ಇತಿ ಜ್ಞೇಯಮ್ ॥ – (ವಾ.)

೧೮೪. ಅಭಿಮಾನೋತ್ಪತ್ತ್ಯಪೇಕ್ಷಯಾ ದೇಹಸ್ಯ ಪ್ರತಿದಿನಮುತ್ಪತ್ತೇಃ ದೇಹಾಪೇಕ್ಷಯಾಪಿ ನ ವ್ಯಭಿಚಾರ ಇತಿ ಭಾವಃ। – (ಜ.)

ಮೂಲಶ್ಲೋಕದಲ್ಲಿ ದ್ರೌಪದೀದೇಹದ ಹಿರಿಮೆಯನ್ನು ಅದ್ಭುತ, ಉತ್ತಮ, ಅತಿಮಾನುಷ ('ಇದಂ ಚ ತತ್ಸಾದ್ಭುತಂ ....')ಎಂದು ಬಣ್ಣಿಸಿರುವರು; ಮಹಾನುಭಾವಳು ಎಂದು ಕೊಂಡಾಡಿರುವರು. ಜೊತೆಗೆ ಪ್ರತಿನಿತ್ಯದಲ್ಲೂ ಕನ್ಯೆಯಾಗುತ್ತಿದ್ದಳು ಎಂಬುದನ್ನೂ ನಿರೂಪಿಸಿರುವರು.

ಧರ್ಮಾತ್ಮಜಾದಿಷು ಮರುತ್ ಪ್ರತಿವಿಷ್ಟ ಏಷಾಂ
ಬುದ್ಧಿಂ ವಿಮೋಹ್ಯ ರಮತೇ ಸತತಂ ತಯಾ ಯತ್ ।
ಶುದ್ಧೈವ ಸಾ ಹಿ ತತ ಏವ ದಿನೇ ದಿನೇ ಚ
ಸಂಮೋಹತೋ ಮರಣವದ್ಭವತೀಹ ಕನ್ಯಾ ॥ ೧೮೫ ॥

ಅ: ಯುಧಿಷ್ಠಿರಾದಿಗಳಲ್ಲಿ ವಾಯುದೇವರು ಪ್ರವೇಶಿಸಿ ಅವರ ಬುದ್ಧಿಗೆ ಮೋಹ ಕವಿಸಿ ಭಾರತೀದೇವಿಯೊಂದಿಗೆ ಸದಾ ರಮಿಸುತ್ತಿದ್ದರು. ಅದರಿಂದ ದಿನದಿನದಲ್ಲೂ ಅವರು ಶುದ್ಧರೇ ಆಗಿರುತ್ತಿದ್ದರು. ಉಳಿದವರಿಗೆ ಸಂಪೂರ್ಣ ಮೋಹ ಒದಗಿರುತ್ತಿದ್ದರಿಂದ ಅದು ಮರಣದಂತಾಗುತ್ತಿತ್ತು. ಅವಳು ಪುನಃ ಕನ್ಯೆಯೇ ಆಗುತ್ತಿದ್ದಳು.

ನೋ ಸುಪ್ತಿವತ್ ತ್ವಿದಮತೋಽನ್ಯವಶತ್ವತೋ ಹಿ
ದೇಹಸ್ಯ ಸಂಸ್ಮೃತಿತ ಏವ ಹರೇರ್ನ ಮೋಹಃ ।
ನಾವೇಶವಚ್ಚ ತತ ಏವ ಮೃತೇಃ ಸ್ವರೂಪ-
ಮೇತತ್ ತ್ವತಃ ಪ್ರತಿದಿನಂ ಜನನಾದ್ಧಿ ಕನ್ಯಾ ॥ ೧೮೬ ॥

ಅ: ಅಲ್ಲಿ ಅನ್ಯವಶವಾಗಿ ಅಭಿಮಾನತ್ಯಾಗವಾಗಿರುತ್ತಿತ್ತು. ಆದ್ದರಿಂದ ದ್ರೌಪದಿಯ ಇಂತಹ ರಮಣ ನಿದ್ರೆಯಂತಹುದಲ್ಲ, ಶ್ರೀಹರಿಯ ಸ್ಮರಣೆಯೂ ಇರುತ್ತಿತ್ತು. ಆದ್ದರಿಂದ ಅದು ಮೂರ್ಛಾವಸ್ಥೆಯೂ ಅಲ್ಲ, ಆವೇಶದಂತೆಯೂ ಅಲ್ಲ. ಆದ್ದರಿಂದ ಅದು ಮರಣದ ಸ್ವರೂಪವೇ ಆಗಿತ್ತು. ಹೀಗೆ ಪ್ರತಿದಿನದಲ್ಲೂ ಜನಿಸುತ್ತಿದ್ದುದರಿಂದ ಆಕೆ ಕನ್ಯೆಯೇ ಆಗುತ್ತಿದ್ದಳು.

---

೧೮೫. ಉಕ್ತಮರ್ಥಮೇವ ಸ್ಫುಟಯತಿ – ಧರ್ಮಾತ್ಮಜಾದಿಷ್ವಿತಿ । ಸಂಮೋಹತಃ = ದೇಹಾಭಿಮಾನರಹಿತತ್ವಾತ್ । ಸಮಿತ್ಯುಪಸರ್ಗೇಣ ದೇಹವಿಸ್ಮರಣೇಽಪಿ ಹರಿಸ್ಮರಣಮಸ್ತೀತಿ ಸೂಚಯತಿ ॥ – (ವಾ.)

೧೮೫. ಶುದ್ಧೈವ ಹಿ ತದನ್ಯಸಂಗರಹಿತೈವ ಹಿ । – (ಜ.)

೧೮೫. ಭಾರತೀ ವಿಷಯೇ ಏಷಾಂ ಬುದ್ಧಿಂ ವಿಮೋಹ್ಯ ಪರಿಹತ್ಯೈವ, ಏಷಾಂ ಚ ವಿಷಯೇ ಭಾರತ್ಯಾ ಬುದ್ಧಿಂ ಪರಿಹೃತ್ಯೈವ ಯದ್ಯಸ್ಮಾತ್ ತಯಾ ಭಾರತ್ಯಾ ರಮತೇ ಅತಃ ಸಾ ಭಾರತೀ ಶುದ್ಧೈವೇತ್ಯರ್ಥಃ । – (ತಾ.)

ಎ: ೧) ಇದು ಮೇಲ್ನೋಟಕ್ಕೆ ಸುಲಭಸಾಧ್ಯವೆನ್ನಿಸುವ ವಿಚಾರವಲ್ಲ. ವಿಶ್ವದ ಇತಿಹಾಸದಲ್ಲಿ ಬೇರಾವ ಸಂಧರ್ಭದಲ್ಲೂ ಹೀಗೆ ನಡೆದದ್ದೂ ಇಲ್ಲ. ಆದರೂ, ಇದು ನಡೆದದ್ದು ಮಾತ್ರ ಸತ್ಯವೇ, ಅದೆಲ್ಲ ಹಾಗೆ ಸಾಧ್ಯವಾಗಲೆಂದೇ ಅವರು ವಿಪ್ರಕನ್ಯಾ, ಇಂದ್ರಸೇನಾ ಜನ್ಮಗಳಲ್ಲಿ ಸಾವಿರಾರು ವರ್ಷಗಳ ಕಾಲದಷ್ಟು ದೀರ್ಘಕಾಲದ ತಪಸ್ಸನ್ನು ಮಾಡಿ ಇಂತಹ ಸಾಮರ್ಥ್ಯವನ್ನು ವರಬಲದಿಂದ ಸಾಧಿಸಿದ್ದರು. ಭಾರತೀದೇವಿಯಂತೂ ಸ್ವತಃ ವಾಯುಪತ್ನಿಯಾಗಿ ಅವರನ್ನು ಅನುಗ್ರಹಿಸುತ್ತಿದ್ದಳು.

೨) ಹೀಗೆ ವಾಯು ಭಾರತಿಯರ ಅನುಗ್ರಹ ವಿಶೇಷದಿಂದಾಗಿ ಇತರ ದೇವತಾಸ್ತ್ರೀ-ಯರುಗಳ ಪಾವಿತ್ರ್ಯ ರಕ್ಷಣೆಗಾಗಿ ನಡೆದಂತಹ ಅತ್ಯದ್ಭುತವಾದ ಒಂದು ರಮಣ ಪ್ರಸಂಗ ಎಂದು ಇದನ್ನು ಅರ್ಥಮಾಡಿಕೊಳ್ಳಬೇಕು.

ಏವಂ ಸ ವಾಯುರನುವಿಷ್ಟಯುಧಿಷ್ಠಿರಾದಿ-
ಭೀಮಾತ್ಮನೈವ ರಮತೇ ಸತತಂ ತಯೈಕಃ ।
ಅನ್ಯಾದೃಶಾ ಹಿ ಸುರಭುಕ್ತಿರತೋಽನ್ಯರೂಪಾ
ಮಾನುಷ್ಯಭುಕ್ತಿರಿತಿ ನಾತ್ರ ವಿಚಾರ್ಯಮಸ್ತಿ ॥ ೧೮೭ ॥

ಅ: ಹೀಗೆ ಆ ವಾಯುದೇವರು ಯುಧಿಷ್ಠಿರಾದಿ ಆವೇಶರೂಪದಿಂದಲೂ ಭೀಮರೂಪ-ದಿಂದಲೂ ಇದ್ದು ಭಾರತೀದೇವಿಯೊಂದಿಗೆ ತಾನು ಒಬ್ಬನೇ ಪ್ರತ್ಯೇಕವಾಗಿ ರಮಿಸುತ್ತಿದ್ದ.

---

೧೮೭. ಏತದೇವ ಪ್ರಪಂಚಯತಿ। ನೋ ಸುಪ್ತಿವದಿತ್ಯಾದಿನಾ। ಇದಂ = ಅನ್ಯಪತಿನಾ ಅನ್ಯಸ್ಯಾ ರಮಣೇ ಪತ್ನ್ಯಂತರಸ್ಯ ಜಾಯಮಾನಂ ಚೇಷ್ಟಿತಂ ದೇಹಸ್ಯಾನ್ಯವಶತ್ವತಃ = ಅನ್ಯವಶತ್ವಾತ್ ಅನ್ಯವಶಂ ಕೃತ್ವಾ ಸ್ವಾಭಿಮಾನಮಾತ್ರತ್ಯಾ-ಗಾದಿತ್ಯರ್ಥಃ। ಹರೇಃ ಸಂಸ್ಪೃತಿತಃ = ತದಾಪಿ ಹರೇಃ ಸಮ್ಯಕ್ ಸ್ಮರಣಾತ್ ಸುಪ್ತಿವತ್ ನೋ। ಅತ ಏವ ಮೋಹವತ್ = ಮೂರ್ಚ್ಛಾವದಪಿ ನ। ಆವೇಶವತ್ = ಭೂತಾವೇಶವಚ್ಚನ। ಸುಪ್ತ್ಯಾದ್ಯವಸ್ಥಾತ್ರಯೇ ಸ್ಮರಣಸ್ಯೈವಾಭಾವಾತ್। ಅಸಾಂ ಚ ಅನ್ಯರಮಣಕಾಲೇ ದೇಹವಿಸ್ಮರಣೇಽಪಿ ಹರಿಸ್ಮರಣಸದ್ಭಾವಾತ್ ಸುಪ್ತ್ಯಾ= ದೇಹವಿಸ್ಮರಣಾತ್ ಹರಿಸ್ಮರಣಸದ್ಭಾವಾಚ್ಚ ಮೃತೇರೇವ ಸ್ವರೂಪಮ್। ಮೃತಿಸಮಯೇ ಸಾಧೂನಾಂ ದೇಹಾಭಿಮಾನಾಭಾವೇಽಪಿ ಹರಿಸ್ಮರಣದರ್ಶನಾತ್ ತೇನ ಮೃತಿರೇವೇಯಮಿತಿ ಭಾವಃ। ಅತಃ ಪೂರ್ವದಿನೇ ಮರಣಾತ್ ಅಪರದಿನೇ ಜನನಾಚ್ಚ ಪ್ರತಿದಿನಂ ಕನ್ಯೈವಾಭವದ್ಭೀತಿ ಯೋಜನಾ। ಹಿಶಬ್ದೇನಾಸ್ಮಿನ್ನರ್ಥೇ 'ಇದಂ ಚ ತತ್ಪ್ರಾದ್ಭುತಮ್' ಇತ್ಯಾದಿಭಾರತಕಥಾಪ್ರಸಿದ್ಧಿಂ ಸೂಚಯತಿ॥ – (ವಾ.)

೧೮೭. ಸುಪ್ತೌ ದೇಹಸ್ಯಾನ್ಯವಶತ್ವಾಭಾವಾದತ್ರ ತತ್ಸದ್ಭಾವಾತ್ಸುಪ್ತಿವನ್ನೇತಿ ಭಾವಃ । ಹರೇಃ ಸಂಸ್ಪೃತಿತಃ ದೇಹಾಭಿ-ಮಾನರಹಿತಾನಾಮಿತರಾಸಾಂ ಹರಿಸಂಸ್ಪೃತಿಸದ್ಭಾವಾನ್ನೋಹೋ ನೈವ। ಮೂರ್ಛಿತಾನಾಂ ಹರಿಸಂಸ್ಪೃತ್ಯಭಾವಾ-ದೇತಾಸಾಂ ತತ್ಸದ್ಭಾವಾನ್ನೋಹವನ್ನೌವೇತಿ ಭಾವಃ। ತತ ಏವ ಹರಿಸಂಸ್ಪೃತಿಸದ್ಭಾವಾದೇವ ಆವೇಶವತ್ । ಗ್ರಹಾದ್ಯಾವೇಶವಚ್ಚ ನ । ತತ ಉಕ್ತಪ್ರಕಾರೇಣ ಸುಪ್ತ್ಯಾದಿತ್ರಯವೈಲಕ್ಷಣ್ಯಾದೇತದ್ದೇಹಾಭಿಮಾನವರ್ಜನಂ ಮೃತೇಃಸ್ವರೂಪಂ ಮೃತಿಸದೃಶಂ ಅನೇನ ಮರಣವದ್ಭವತೀತ್ಯೇತತ್ಪರಿಶೇಷಪ್ರಮಾಣಸಿದ್ಧಮಿತ್ಯುಪಪಾದಿತಂ ಭವತಿ । ಪ್ರಮಾಣಂ ತು – ಏತದ್ದೇಹಾಭಿಮಾನವರ್ಜನಂ ಸ್ಮೃತಿಸ್ವರೂಪಂ ಭವಿತುಮರ್ಹತಿ । ಸುಪ್ತಿಮೋಹಾವೇಶ-ವಿಲಕ್ಷಣಾಭಿಮಾನವರ್ಜನತ್ವಾತ್ ಪ್ರದೃಶ್ಯಮಾನಮರಣವದಿತಿ। – (ಜ.)

ದೇವತೆಗಳ ಭೋಗಕ್ರಮ ಬೇರೆ ಬಗೆಯದು, ಮನುಷ್ಯರ ಭೋಗಕ್ರಮ ಮತ್ತೊಂದು ರೀತಿಯದು. ಆದ್ದರಿಂದ ಈ ಬಗ್ಗೆ ಯಾವುದೇ ಶಂಕೆಗೆ ಅವಕಾಶ ಸರ್ವಥಾ ಇಲ್ಲ.

ವಿ: ೧) ದ್ರೌಪದೀದೇವಿಯು ಪಂಚ ಪಾಂಡವರೊಂದಿಗೆ ಹೀಗೆ ಯಾವುದೇ ರೀತಿಯ ಅಪಾವಿತ್ರ್ಯಕ್ಕೆ ಅವಕಾಶವಾಗದಂತೆ ಪರಿಶುದ್ಧವಾದ ರೀತಿಯಲ್ಲಿ ದಾಂಪತ್ಯವನ್ನು ಸಾಗಿಸಿದರು ಎಂಬ ವಿವರದಲ್ಲಿ ಯಾವುದೇ ರೀತಿಯ ಶಂಕೆಗೂ ಅವಕಾಶವಿಲ್ಲ. ದೇವತೆಗಳ ಭೋಗ ಕ್ರಮವೇ ಬೇರೆ, ಮನುಷ್ಯರ ಭೋಗ ಕ್ರಮವೇ ಬೇರೆ. ಲೋಕದಲ್ಲೂ ಪ್ರಾಣಿಗಳ, ಸಸ್ಯಗಳ ಭೋಗಕ್ರಮವೂ ಸಹ ಮನುಷ್ಯ ಭೋಗ ಕ್ರಮಕ್ಕಿಂತ ವಿಭಿನ್ನ ಎಂಬುದನ್ನು ಗಮನಿಸಬೇಕು.

೨) ಸಸ್ಯಗಳ ಉತ್ಪತ್ತಿಯ ಕ್ರಮದಲ್ಲೂ ವೈಚಿತ್ರ್ಯವಿದೆ. ವೃಕ್ಷಗಳ ಎಲೆ ಕಾಂಡಗಳನ್ನು ಕತ್ತರಿಸಿದರೂ ಅವು ಮತ್ತೆ ಎಂದಿನಂತೆ ಬೆಳೆಯುತ್ತವೆ, ಆದರೆ ಪ್ರಾಣಿಗಳಲ್ಲಿ, ಮನುಷ್ಯರಲ್ಲಿ ಇದು

---

೧೮೭. ಅನುವಿಷ್ಟಯುಧಿಷ್ಠಿರಾದಿಭೀಮಾತ್ಮನ್ಯೇವೇತ್ಯತ್ರ ಅನುವಿಷ್ಟಃ ಯುಧಿಷ್ಠಿರಾದಿಃ ಯೇನಾಂಶೇನ ಸೋಽನುವಿಷ್ಟ ಯುಧಿಷ್ಠಿರಾದಿಃ ಅನುವಿಷ್ಟಯುಧಿಷ್ಠಿರಾದಿನಾ ಅಂಶೇನ ಭೀಮಾತ್ಮನಾ = ಭೀಮರೂಪೇಣ ಚ ಏಕೋ ವಾಯುಃ ತಯೈವ= ಭಾರತ್ಯೈವ ರಮತ ಇತಿ ಯೋಜನಾ। ''ವಪುಷಾऽತಿಮಾನುಷಮ್'' ಇತಿ (ಆದಿ. ೧೯೭/೧೪) ಭಾರತೋಕ್ತಾತಿಮಾನುಷಪದತಾತ್ಪರ್ಯಮಾಹ ಅನ್ಯಾದೃಶೇತಿ ॥ – (ವಾ.)

೧೮೭. ನನು ಯುಧಿಷ್ಠಿರದೇಹೇ ಯುಧಿಷ್ಠಿರಸ್ತದಾವಿಷ್ಟೋ ಮರುಚ್ಚೇತಿ ದ್ವೌ ತಿಷ್ಠತಃ ಏವಂ ಕೃಷ್ಣಾದೇಹೇऽಪಿ ಭಾರತೀ ಸ್ವಯಂ ಸ್ವಸ್ವದಿನೇ ಶಾಮಲಾದಿಷ್ವನ್ಯತಮೇತ್ಯೇವಂ ಪ್ರತಿದಿನಂ ದ್ವೇ ಸ್ತ್ರಿಯೌ ತಿಷ್ಠತಃ । ಏವಂ ಸತಿ ಯುಧಿಷ್ಠಿರಃ ಭಾರತೀಮಪೋಹ್ಯ ಸ್ವಸ್ತ್ರಿಯಂ ತೇಷ್ವಾವಿಷ್ಟೋ ಮರುದ್ಭಾರತೀಂ ರಮತ ಇತ್ಯೇತತ್ಕಥಂ ಘಟತ ಇತ್ಯತ ಆಹ – ಅನ್ಯಾದೃಶಾಹೀತಿ । ..... ಕೇಚಿಟ್ಪಟ್ಟಣೇಕಾರಾಃ ಕೃಷ್ಣಾಜನ್ಮನಿ ಅಪಿ ಅನ್ಯಗಾತ್ವಮಿತಿ ವ್ಯಾಕುರ್ವಂತಿ । ತೇಷಾಮಭಿಪ್ರಾಯಂ ನ ಜಾನೀಮಃ । ವಿಲಾಸಂ ದರ್ಶಯಾಮಾಸುರಿತ್ಯಾದಿನಾ ಏಕಸ್ಮಿನ್ ಜನ್ಮನ್ಯನ್ಯಗಾತ್ವಮಿತಿ ಆಚಾರ್ಯೈರ್ದರ್ಶಿತಮ್ । ಬ್ರಹ್ಮಣ್ಯೇವ ಹಿ ಶಪ್ತಾ ಸ್ಮ ಇತ್ಯಾದಿನಾ ತ್ರಿಷು ಜನ್ಮಸ್ವೇಕದೇಹತ್ವಂ ದರ್ಶಿತಂ ರಮಣಪ್ರಸಂಗೇऽಪಿ ದೇವೀನಾಂ ಮರುತಃ ಸಂಗೋ ನ ದರ್ಶಿತಃ । ಕೃಷ್ಣಾಜನ್ಮನಿ ಅನ್ಯಗಾತ್ವಂ ಚೇತ್ ತರ್ಹಿ ಯುಧಿಷ್ಠಿರರಮಣದಿವಸೇ ಶಾಮಲಾಯಾಃ ಯುಧಿಷ್ಠಿರೇಣ ಯುಧಿಷ್ಠಿರಸ್ಯ ವಾಯುನಾऽಪಿ ಸಂಬಂಧಃ । ಶಚ್ಯಾದೀನಾಂ ವಾಯೋಃ ಕೇವಲಂ ಸಂಬಂಧಃ ಸ್ಯಾತ್ । ಭೀಮರಮಣದಿನೇ ಭೀಮೇನೈವ ಸರ್ವಾಸಾಂ ಚ । ತಥಾऽರ್ಜುನರಮಣದಿನೇ ಶಚ್ಯಾ ಅರ್ಜುನೇನ ತತ್ಸ್ತ್ವಾಯೋಃ ಸಂಬಂಧಃ । ಶಚ್ಯಾದಿಸರ್ವಾಸಾಂ ತಥಾ ನಕುಲಸಹದೇವಯೋಶ್ಚೇತ್ಯುಪಪತ್ತೇಃ । ಅಭಿಮತೇಃ ಪೃಥಗೇವ ನಾಶಾದಿತ್ಯುಕ್ತಿರ್ವ್ಯರ್ಥಾ ಸ್ಯಾತ್ । ತಸ್ಮಾತ್ ಕೃಷ್ಣಾಜನ್ಮನಿ ಅನ್ಯಗಾತ್ವಂ ನ ಘಟತ ಇತಿ ಪ್ರತೀಯತೇ । – (ಜ.)

೧೮೭. ನನು ತತ್ರಾಪಿ ಮಾರುತಾದನ್ಯಂ ನ ಸ್ಪೃಶೇಮೇತಿ ಭಾರತ್ಯಾ ಪ್ರಾರ್ಥಿತತ್ವಾತ್ ಯುಧಿಷ್ಠಿರಭೋಗದಿವಸೇ ಪಾರ್ವತ್ಯಾಃ ಯುಧಿಷ್ಠಿರೇಣ ಭೋಗಃ ಪ್ರಾಪ್ತ ಇತ್ಯಾಶಂಕ್ಯ ಯುಧಿಷ್ಠಿರಾದಿಷು ಮರುತ ಆವಿಷ್ಟತ್ವಾತ್ ತೇನೈವ ಸಾಕಂ ಭೋಗೋ, ನ ಯುಧಿಷ್ಠಿರಾದಿನೇತಿ ವಕ್ತುಂ ಮರುತಸ್ತತ್ರ ಪ್ರವೇಶಕಾರಣಮಾಹ ಪ್ರಾಯೋ ಹೀ' ಇತ್ಯಾದಿನಾ । ಭಾರತ್ಯಾದೀನಾಂ ಯುಧಿಷ್ಠಿರಾದಿ ವಿಷಯೇ ಅಭಿಮತಿನಾಶಃ, ಆವಿಷ್ಟಮರುದ್ವಿಷಯೇ ಅಭಿಮತಿನಾಶೋ ನಾಸ್ತೀತಿ ಅಭಿಪ್ರಾಯೇಣ ಪ್ರಾಯ ಇತ್ಯುಕ್ತಂ । ಏವಂ ಪಾರ್ವತ್ಯಾ ಅಪಿ । ತಥಾಚ ಪಾರ್ವತ್ಯಾಃ ಪ್ರತಿವಾಸರಂ ಮರುತೈವ ಭೋಗೋ, ನಾನ್ಯೈರಿತ್ಯುಕ್ತಂ ಭವತಿ । - (ವ.).

ಸಾಧ್ಯವಿಲ್ಲ. ಗುಲಾಬಿ ಗಿಡ ಮೊದಲಾದವುಗಳ ಒಂದು ಟೊಂಗೆಯನ್ನು ಭೂಮಿಯಲ್ಲಿಟ್ಟು ಬೆಳೆಸಿದರು ಅದು ಪುನಃ ಪ್ರತ್ಯೇಕ ಗಿಡವಾಗಿಯೇ ಬೆಳೆಯುತ್ತದೆ. ಆದರೆ, ಮನುಷ್ಯರಲ್ಲಿ ಇದು ಸರ್ವಥಾ ಅಸಾಧ್ಯ. ಉಸಿರಾಟ ಕ್ರಮದಲ್ಲೂ ಹೀಗೆ ವ್ಯತ್ಯಾಸವುಂಟು. ಜಲಚರ ಪ್ರಾಣಿಗಳ ಉಸಿರಾಟ ಕ್ರಮಕ್ಕೂ,

೩) ಭೂಚರ ಪ್ರಾಣಿಗಳ ಉಸಿರಾಟ ಕ್ರಮಕ್ಕೂ ಅಗಾಧ ವ್ಯತ್ಯಾಸವನ್ನು ವಿಜ್ಞಾನ ಗುರುತಿಸಿದೆ. ಸಸ್ಯಗಳ ವಂಶಾಭಿವೃದ್ಧಿಯ ಕ್ರಮವು ಸಹ ವಿಭಿನ್ನವೇ. ಇದಂತೂ ದೇವತಾವಿಚಾರ. ಇಂತಹ ಉನ್ನತ ವಿಚಾರವನ್ನು ಮನುಷ್ಯರಾದ ನಮ್ಮ ಇತಿಮಿತಿಗಳಲ್ಲಿ ವಿಶ್ಲೇಷಿಸಿ ಆಕ್ಷೇಪಿಸುವುದು ಅನುಚಿತ ಎಂದರ್ಥ.

---

೧೮೭. ನನ್ವಿದಮಭಿಮಾನವರ್ಜನಂ ಯಥಾ ನ ಸುಪ್ತಾದಿವತ್ ತಥಾ ನ ಮರಣವತ್। ದೇಹಸ್ಯಾನ್ಯವಶತ್ವಾತ್, ಹರಿಸ್ಮೃತೇಶ್ಚೇತಿ ಚೇತ್, ನ ವಯಮಿದಂ ಮರಣಮೇವೇತಿ ಬ್ರೂಮಃ, ಕಿಂತು ತತ್ಸದೃಶಮಪಿ। ತದಾತ್ಯಂತಿಕ ಸಾದೃಶ್ಯಾಭಿಮಾನವಿನಾಶಸ್ಯ ವಿದ್ಯಮಾನತ್ವಾತ್। ನಚ್ಚೈವಂ ಬ್ರೂಮೋ ನ ಸುಪ್ತಿರೇವೇದಂ, ಕಿಂತು ತತ್ಸದೃಶಂ। ದೇಹಸ್ಯಾನ್ಯವಶತ್ವಾದಿಕಂ ಸಾಕ್ಷಾತ್ಸುಪ್ತ್ಯಾದ್ಯಾತ್ಮಕತ್ವಮೇವ ವ್ಯಾವರ್ತಯೇತ್, ನ ತು ಸಾದೃಶ್ಯಮಪಿ। ತತ್ಸಾದೃಶ್ಯಸ್ಯಾಭಿಮಾನವಿನಾಶಸ್ಯ ಸತ್ವಾದಿತಿ ವಾಚ್ಯಂ। ಸುಪ್ತ್ಯಾದಾವಭಿಮಾನಸ್ಯ ಪ್ರಮಿತತ್ವೇನ ತದವ್ಯಕ್ತಸದ್ಭಾವೇऽಪಿ ನಾಶಾಭಾವಾತ್। ಅತ್ರಾಪಿ ಸುಪ್ತಾದಿವತ್ ಅಭಿಮಾನಾವ್ಯಕ್ತಿರೇವ ಕಿಂ ನ ಸ್ಯಾದಿತಿ ಚೇತ್ ಪೂರ್ವಜೀವಾಪೇಕ್ಷಯಾ ದೇಹಸ್ಯಾನ್ಯವಶತ್ವಾತ್। ನ ಹಿ ಸುಪ್ತ್ಯಾದಾವಿವ ಅಭಿಮಾನಸ್ಯ ನಾಶಾಭಾವಾತ್ ತದುಪಪದ್ಯತೇ। ಚರಮಮರಣೇ ಹರಿಸ್ಮೃತಿಸದ್ಭಾವಾತ್ ಹರಿಸ್ಮರಣಂ ನ ಮರಣ ಸಾರೂಪ್ಯ ವ್ಯಾವರ್ತಕಮಿತಿ ನ ಕಶ್ಚಿದ್ದೋಷಃ। ನನು ಯತ್ ತಾವದುಕ್ತಂ ಪ್ರತಿದಿನಂ ಜನ್ಮಾಭಾವಾದಿತಿ ತದಯುಕ್ತಮಾಭಾತಿ। ಪ್ರತ್ಯಹಂ ವಿವಾಹಪ್ರಸಂಗಾತ್ ನಚ ದೇಹೈಕ್ಯೇನ ನ ಕನ್ಯಾತ್ವಂ ವಿವಾಹಪ್ರತಿಬಂಧಕಮಿತಿ ವಾಚ್ಯಮ್। ತರ್ಹಿ ದೇಹೈಕ್ಯಮಾದಾಯಾನ್ಯಗಾತ್ವಸ್ಯಾಪಿ ಪ್ರಾಪ್ತೇರಿತಿ ಚೇತ್, ಮಧ್ಯೇ ಮಧ್ಯೇ ಕನ್ಯಾತ್ವಪ್ರಾಪ್ತಾವಪಿ ಪ್ರಾಥಮಿಕಪಾಣಿಗ್ರಹಾವಿರೋಧೇನ ಭೋಗಸ್ತು ದೇವತಾಸೂಪಪತ್ತೇರಿತಿ ತದೇತದಾಹ – ಅನ್ಯಾದೃಶಾ ಹೀತಿ। ನನ್ವನ್ಯವಶತ್ವಂ ದೇಹಸ್ಯೇತ್ಯಯುಕ್ತಮಿವ ಪ್ರತೀಯತೇ। ಅನೇಕೈಕಕರ್ಮನಿರ್ಮಿತಶರೀರೇ ಕದಾಚಿದೇಕಸ್ಯಾ ಅಭಿಮಾನಾಭಾವೇನಾಭೋಗಃ, ಅನ್ಯಸ್ಯಾಸದ್ಭಾವೇನ ಭೋಗ ಇತ್ಯನುಪಪತ್ತೇರಿತಿ ಚೇತ್ ನ, ದೇವಭೋಗಸ್ಯಾನ್ಯಾದೃಶತ್ವಾತ್। ಇದಮಪ್ಯಾಹಾನ್ಯಾದೃಶಾ ಹೀತಿ। ನನು ಭಾರತ್ಯೈವ ಚ ಪಾರ್ವತೀ ಸಂಯುಕ್ತಾ ವ್ಯವಹಾರೇಷ್ವಿತ್ಯುಕ್ತಾ ಭಾರತೀದಿನೇ ಪಾರ್ವತ್ಯಾ ಅಭಿಮಾನಸ್ಯ ವಕ್ತವ್ಯತ್ವೇನ ವಾಯುಸಂಬಂಧೋ ದುರ್ವಾರ ಇತಿ ಚೇತ್, ದೇವತಾಭುಕ್ತೇರ್ಮಾನುಷಭುಕ್ತಿವಿಲಕ್ಷಣತ್ವಾತ್ ಪಾರ್ವತ್ಯಾಃ ಸತ್ಯಪ್ಯಭಿಮಾನೇ ತದಭೋಗೋಪಪತ್ತೇಃ। ತದಿದಮಪ್ಯಾಹ ಅನ್ಯಾದೃಶಾ ಹೀತಿ। – (ತಾ.)

೧೮೭. ದೇವಾಶ್ಚೈಶ್ವರ್ಯವಂತೋ ವೈ ಶರೀರಾಣ್ಯಾವಿಶಂತಿ ವೈ।
ಸಂತಿ ದೇವನಿಕಾಯಾಶ್ಚ ಸಂಕಲ್ಪಾಜ್ಜನಯಂತಿ ಯೇ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಘರ್ಷೇಣೇತಿ ಪಂಚಧಾ।
ಮಾನುಷ್ಯಧರ್ಮೋ ದೈವೇನ ಧರ್ಮೇಣ ಹಿ ನ ದುಷ್ಯತಿ॥
ಇತಿ ಕುಂತಿ ವಿಜಾನಾಹಿ ಮೈತು ತೇ ಮಾನಸೋ ಜ್ವರಃ।
ಸರ್ವಂ ಬಲವತಾಂ ಪಥ್ಯಂ ಸರ್ವಂ ಬಲವತಾಂ ಶುಚಿ।
ಸರ್ವಂ ಬಲವತಾಂ ಧರ್ಮಃ ಸರ್ವಂ ಬಲವತಾಂ ಸ್ವಕಮ್॥
(ಕುಂತಿಯನ್ನು ಕುರಿತು ವ್ಯಾಸರವಚನ)–ಭಾರತ (ಆಶ್ರಮ. ೩೦/೨೧-೨೪)

೪) ಒಂದೇ ದೇಹದಲ್ಲಿ ವಿಭಿನ್ನ ಜನರಿದ್ದರೂ ಭೋಗ ಪ್ರಸಂಗದಲ್ಲಿ ಸಾಂಕರವಾಗುವುದಿಲ್ಲ ಎಂಬುದು ನಮ್ಮ ನಿತ್ಯ ಜೀವನದಲ್ಲೂ ಒಂದು ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸ-ಬಹುದಾದ ವಿಚಾರ. ನಮ್ಮ ಶಿರೋಭಾಗದಲ್ಲಿ ಪಂಚೇಂದ್ರಿಯಗಳ ಕೇಂದ್ರಸ್ಥಾನ ನೆಲೆಗೊಂಡಿದೆ. ಕಣ್ಣು, ಕಿವಿ, ಮೂಗು ಮತ್ತು ನಾಲಿಗೆಗಳಂತೂ ಕೇವಲ ಮುಖದಲ್ಲಿ ನೆಲೆಸಿರುವಂತಹವು. ಆದರೆ, ಆಯಾ ಇಂದ್ರಿಯಗಳಿಗೆ ಅವುಗಳ ವಿಷಯಗಳಾದ ರೂಪ, ಶಬ್ದ, ಗಂಧ ಮತ್ತು ರಸಗಳೊಂದಿಗೆ ಮಾತ್ರ ಕ್ರಮವಾಗಿ ಸಂಪರ್ಕ ಬರುವುದೇ ಹೊರತು ಇತರ ವಿಷಯಗಳೊಂದಿಗೆ ಅಲ್ಲ.

೫) ಎಂದರೆ ಕಣ್ಣಿಗೆ ರೂಪ ಕಾಣಿಸುವಂತೆ ಶಬ್ದಾದಿಗಳ ಜ್ಞಾನ ಸರ್ವಥಾ ಬರದು, ಅದರಂತೆ ಕಿವಿಗೆ ಶಬ್ದಜ್ಞಾನ ಮಾತ್ರ, ರೂಪಾದಿಗಳ ಜ್ಞಾನವಿಲ್ಲ. ಹೀಗೆಯೇ ಇತರ ಇಂದ್ರಿಯಗಳಿಗೆ.

೬) ಹೀಗೆ ಅವೆಲ್ಲ ಒಂದೆಡೆಯೇ ಇದ್ದರೂ ಸಾಂಕರ್ಯ ಸರ್ವಥಾ ಇಲ್ಲದಿರುವಂತೆ ದ್ರೌಪದೀ ದೇಹದಲ್ಲಿ ಇತರ ಸ್ತ್ರೀಯರು ನೆಲೆಸಿದ್ದರೂ ವಾಯುಭಾರತಿಯರ ಅಪಾರ ಸಾಮರ್ಥ್ಯ-ದಿಂದಾಗಿ ಆಯಾ ಸ್ತ್ರೀಯರಿಗೆ ಅವರವರ ಪುರುಷರೊಂದಿಗೆ ಮಾತ್ರ ಸಂಪರ್ಕ ಉಂಟಾಗುತ್ತಿತ್ತೇ ಹೊರತು ಇತರರೊಂದಿಗೆ ಸರ್ವಥಾ ಅಲ್ಲ ಎಂದು ತಿಳಿಯಬೇಕು.

ವಾಸಿಷ್ಠಯಾದವವೃಷಾವಪಿ ಕೇಶವೌ ತೌ
ತತ್ರೋಷತುಃ ಪರಮಸೌಹೃದತೋ ಹಿ ತೇಷು ।
ತಾಭ್ಯಾಮನಂತಗುಣಪೂರ್ಣಸುಖಾತ್ಮಕಾಭ್ಯಾಂ
ಪಾರ್ಥಾಶ್ಚ ತೇ ಮುಮುದಿರೇ ಯುತಸತ್ಕಥಾಭಿಃ ॥ ೧೮೮ ॥

ಅ: ವಾಸಿಷ್ಠಕೃಷ್ಣ ಹಾಗೂ ಯಾದವಕೃಷ್ಣರೂಪದ ಶ್ರೀಹರಿ ಪರಮಸ್ನೇಹದಿಂದಾಗಿ ಪಾಂಡವರೊಂದಿಗೆ ಅಲ್ಲಿಯೇ ವಾಸಿಸಿದ. ಅನಂತಗುಣಯುಕ್ತವಾದ ಪರಿಪೂರ್ಣಸುಖ-ಸ್ವರೂಪರಾದ ಅವರಿಬ್ಬರೊಂದಿಗೆ ಪಾಂಡವರು ಸಹ ಉಚಿತವಾದ ಉತ್ತಮ ಸಂಭಾಷಣಾದಿ-ಗಳ ಮೂಲಕ ಆನಂದಿಸಿದರು.

---

೧೮೮. ಮುಮುದಿರೇ ಯುತಸತ್ಕಥಾಭಿಃ ಇತ್ಯತ್ರ ಯುತಾಃ ಸಂತಃ ವೇದಪುರಾಣಾದಯೋ ಯಾಭಿಃ ತಾಃ ತಾಭಿಃ ಕಥಾಭಿರಿತ್ಯರ್ಥಃ ॥ – (ವಾ.)

೧೮೮. ಪರಸ್ಪರಪ್ರಶ್ನಪರಿಹಾರರೂಪತ್ವಂ ಯುತತ್ವಮ್ । – (ವೇ.)

೧೮೮. ಯುತತ್ವಂ ನಾಮ ಪರಸ್ಪರಪ್ರಶ್ನಪರಿಹಾರತ್ವಮ್ । – (ಜ.)

ವಿ: ಪಾಂಡವರ ಹಸ್ತಿನಾಪುರ ಪ್ರವೇಶಕ್ಕೆ ಅನುಗ್ರಹಿಸಲೆಂದು ಪಾಂಚಾಲ ಪಟ್ಟಣದಿಂದ ಅವರೊಂದಿಗೆ ಆಗಮಿಸಿದ್ದ ಶ್ರೀಕೃಷ್ಣ, ಶ್ರೀವ್ಯಾಸರು ಅನಂತರವೂ ಬಹುಕಾಲ ಪಾಂಡವರೊಂದಿಗೇ ನೆಲೆಸಿದ್ದರು ಎಂಬುದು ವಿಶೇಷ.

ಮದುವೆಯಲ್ಲೂ ದುರ್ಯೋಧನನ ಕುತಂತ್ರ

ಪೂರ್ವಂ ಹಿ ತೇಷು ವನಗೇಷು ಬಭೂವ ಕಾಶಿ-
ರಾಜ್ಞಃ ಸುತಾಕೃತ ಉರುಕ್ಷಿತಿಪಾಲಯೋಗಃ ।
ತತ್ರ ಸ್ವಯಂವರಗತಾಂ ಧೃತರಾಷ್ಟ್ರಪುತ್ರಃ
ಕನ್ಯಾಂ ಬಲಾಜ್ಜಗೃಹ ಆತ್ಮಬಲಾತಿದೃಪ್ತಃ ॥ ೧೮೯ ॥

ಅ: ಹಿಂದೆ ಅವರು ವನದಲ್ಲಿದ್ದಾಗ ಕಾಶಿರಾಜನ ಮಗಳ ಸ್ವಯಂವರಕ್ಕಾಗಿ ರಾಜರುಗಳ ದೊಡ್ಡ ಮೇಳನ ನಡೆದಿತ್ತು. ಅದರಲ್ಲಿ ತನ್ನ ಬಲದಿಂದ ಸೊಕ್ಕಿದ್ದ ದುರ್ಯೋಧನ ಕನ್ಯೆಯನ್ನು ಬಲಾತ್ಕಾರದಿಂದ ಅಪಹರಿಸಿದ.

ವಿ: ಪಾಂಡವರು ಹಿಡಿಂಬ ವನದಲ್ಲಿದ್ದಾಗ ನಡೆದ ಘಟನೆ ಇದು. ಕಾಶಿರಾಜನ ಮಗಳ ಸ್ವಯಂವರಕ್ಕೆಂದು ರಾಜ ಮಹಾರಾಜರುಗಳ ಮಹಾಸಮ್ಮೇಳನ ನಡೆದು ಅದರಲ್ಲಿ ದುರ್ಯೋಧನ ಸ್ವಯಂವರದ ನಿಯಮಗಳನ್ನು ಉಲ್ಲಂಘಿಸಿ ಕನ್ಯೆಯನ್ನು ಸ್ವಯಂವರ ಮಂಟಪದಿಂದ ಬಲಾತ್ಕಾರದಿಂದ ಅಪಹರಿಸಿದ ಎಂದರ್ಥ. ಅಂತೂ ದುರ್ಯೋಧನ ಎಲ್ಲ ವ್ಯವಹಾರಗಳಲ್ಲೂ ದುಷ್ಟತನವನ್ನೇ ತೋರುವ ಮಹಾಪಾಪಿ ಎಂದು ಇದರಿಂದ ತಿಳಿಯುವುದು.

ಪೂರ್ವಂ ಹಿ ರಾಜಗಣನೇ ಮಗಧಾಧಿರಾಜಃ
ಸಂಖ್ಯಾತ ಇತ್ಯತಿರುಷಾ ಪ್ರಗೃಹೀತಕನ್ಯೇ ।
ದುರ್ಯೋಧನೇ ನೃಪತಯೋ ಯುಯುಧುಃ ಸ್ಮ ತೇನ
ಭಗ್ನಾಶ್ಚ ಕರ್ಣಸಹಿತೇನ ಸಹಾನುಜೇನ ॥ ೧೯೦ ॥

ಅ: ರಾಜರುಗಳನ್ನು ಪರಿಗಣಿಸುವಾಗ ಜರಾಸಂಧ ಮೊದಲನೆಯವನಾಗಿ ಪರಿಗಣಿತನಾದನೆಂದು ಅತ್ಯಂತ ಕ್ರೋಧದಿಂದ ದುರ್ಯೋಧನ ಕನ್ಯೆಯನ್ನು ಅಪಹರಿಸಿದ. ರಾಜರುಗಳು

---

೧೮೯. ಹಿಡಿಂಬವನಂ ಪ್ರಾಪ್ತೇಷು ಸತ್ಸು ದೃಪ್ತಃ ಮತ್ತಃ । – (ಜ.)

೧೯೦. ಪೂರ್ವಂ ಹಿ ರಾಜಗಣನ ಇತ್ಯತ್ರ ರಾಜಗಣನೇ ಮಗಧಾಧಿರಾಜಃ ಪೂರ್ವಂ ಸಂಖ್ಯಾತ ಇತಿ ಪೂರ್ವಪದಸಂಬಂಧಃ ॥ – (ವಾ.)

ಅವನೊಂದಿಗೆ ಯುದ್ಧಕ್ಕೆ ತೊಡಗಿದರು. ಅವನು ಕರ್ಣ ಹಾಗೂ ತಮ್ಮಂದಿರ ನೆರವಿನಿಂದ ಅವರನ್ನೆಲ್ಲ ಪರಾಭವಗೊಳಿಸಿದ.

ವಿ: ದುರ್ಯೋಧನನ ಕೋಪಕ್ಕೆ ಕಾರಣವೆಂದರೆ ಆ ಸ್ವಯಂವರ ಮಂಟಪದಲ್ಲಿ ಆಗಮಿಸಿದ ರಾಜರುಗಳ ಪಟ್ಟಿಯಲ್ಲಿ ಮೊದಲನೆಯವನನ್ನಾಗಿ ಜರಾಸಂಧನನ್ನು ಉಲ್ಲೇಖಿಸಿದ್ದು. ಇದು ಸಹಜವಾಗಿಯೇ ದುರ್ಯೋಧನನನ್ನು ಕೆರಳಿಸಿತ್ತು. ಅದಕ್ಕೆ ಕಾರಣ ತಾನು ಅವನಿಗಿಂತ ಮಿಗಿಲಾದವನು ಎಂಬ ಸೊಕ್ಕು. ದೈತ್ಯ ತಾರತಮ್ಯ ಕ್ರಮದಂತೆ ಅದು ನಿಜವೂ ಆಗಿತ್ತು. ದೈತ್ಯರಲ್ಲಿ ದುರ್ಯೋಧನ ಸರ್ವಾಧಮ, ಅನಂತರದ ಸ್ಥಾನ ಪುರುಷರಲ್ಲಿ ವಿಪ್ರಚಿತ್ತಿಯದು. ದೈತ್ಯ ತಾರತಮ್ಯದ ತಪ್ಪು ತಿಳುವಳಿಕೆ ದೈತ್ಯರ ಕೋಪಕ್ಕೂ ಕಾರಣ ಎಂಬುದಕ್ಕೂ ಇದು ನಿದರ್ಶನ. ಆದ್ದರಿಂದ ಅದನ್ನೂ ಸಹ ಯಥಾರ್ಥವಾಗಿಯೇ ತಿಳಿಯಬೇಕು ಎಂಬುದು ಇಲ್ಲಿಯ ಸಂದೇಶ.

ಕರ್ಣನ ಅದ್ಭುತ ವಿಜಯ

ಭಗ್ನೇಷು ತೇಷು ಪುನರಾತ್ತಶರಾಸನೇಷು
ಕರ್ಣೋ ಜಗಾದ ಧೃತರಾಷ್ಟ್ರಸುತಂ ಪ್ರಯಾಹಿ ।
ಯುಕ್ತಃ ಸಹೋದರಜನೈರ್ಗುರುಭೀಷ್ಮಮುಖ್ಯೈ ರ್-
ಯ್ಯುಕ್ತಸ್ಯ ತೇ ನ ಪುರಮೇತ್ಯ ಹಿ ಧರ್ಷಣೇಶಾಃ ॥ ೧೯೧ ॥

ಅ: ಸೋತು ಹೋದ ಅವರೆಲ್ಲ ಮತ್ತೆ ಧನುರ್ಧಾರಿಗಳಾಗಿ ಆಗಮಿಸಲು ಕರ್ಣ ದುರ್ಯೋಧನನಿಗೆ ಹೇಳಿದ 'ನೀನು ನಿನ್ನ ಸೋದರರೊಂದಿಗೆ ಹಸ್ತಿನಾಪುರಕ್ಕೆ ತೆರಳು. ಅಲ್ಲಿ ಭೀಷ್ಮ ಮೊದಲಾದವರೊಂದಿಗೆ ಸೇರಿಕೊಂಡರೆ ನಿನ್ನನ್ನೆಂದೂ ಪಟ್ಟಣಕ್ಕೆ ಬಂದು ಇವರು ಆಕ್ರಮಿಸಲು ಸಮರ್ಥರಾಗಲಾರರು.

ವಿ: ಹಸ್ತಿನಾಪುರಕ್ಕೆ ಹೋಗಿ ಸೇರಿಕೊಂಡರೆ ಅಲ್ಲಿ ಮಹಾವೀರರಾದ ಭೀಷ್ಮಾದಿಗಳ ರಕ್ಷಣೆಯೂ ದೊರೆಯುವುದರಿಂದ ಕೌರವರು ಸುರಕ್ಷಿತರಾಗುವರು ಎಂಬುದು ಕರ್ಣನ ಆಶಯ.

ಏಕಾಂತತೋ ಜಯಮವೀಕ್ಷ್ಯ ನ ಚಾನುಯಾತಿ
ಬಾರ್ಹದ್ರಥಃ ಪುರಗತಸ್ಯ ಜಯೇ ನ ನಿಷ್ಠಾ ।
ದ್ರೌಣಿಂ ಹಿ ರುದ್ರತನುಮೇಷ ಸದಾ ವಿಜಾನನ್
ನೋ ತೇನ ಯುದ್ಧಮಭಿವಾಂಛತಿ ರುದ್ರಭಕ್ತಃ ॥ ೧೯೨ ॥

ಅ: ಜರಾಸಂಧ ತಾನು ನಿಶ್ಚಿತಜಯದ ಭರವಸೆಯಿಲ್ಲದೇ ಯುದ್ಧಕ್ಕೆ ತೆರಳುತ್ತಿದ್ದವನಲ್ಲ. ಪಟ್ಟಣ ಹೊಕ್ಕ ಮೇಲೆ ನಿನ್ನನ್ನು ಗೆಲ್ಲುವ ನಂಬಿಕೆ ಅವನಿಗಿರುವುದಿಲ್ಲ. ಅಶ್ವತ್ಥಾಮರನ್ನು ರುದ್ರಾವತಾರವೆಂದು ಅವನು ಸದಾ ಬಲ್ಲವನಾದ್ದರಿಂದ ಅವರೊಂದಿಗೆ ರುದ್ರಭಕ್ತನಾದ ಅವನು ಯುದ್ಧವನ್ನು ಇಷ್ಟಪಟ್ಟಿರಲಿಲ್ಲ.

ಏ: ಇತರ ರಾಜರಿಗೆ ಭೀಷ್ಮಾದಿಗಳ ಭಯವಿದ್ದರೂ ಬ್ರಹ್ಮಾದಿಗಳ ವರದಿಂದ ಕೂಡಿದ ಜರಾಸಂಧನಿಗೆ ಭೀಷ್ಮಾದಿಗಳ ಭಯವೆಲ್ಲಿಯದು ಎಂಬ ಶಂಕೆಗೆ ಇಲ್ಲಿ ಉತ್ತರವಿದೆ. ಜರಾಸಂಧನದು ಗೆಲ್ಲಲೇ ಬೇಕೆಂಬ ಹಟ. ಹಸ್ತಿನಾಪುರಕ್ಕೆ ಇವರು ತೆರಳಿದ ಮೇಳೆ ಭೀಷ್ಮಾದಿಗಳ ಸಹಾಯದಿಂದಾಗಿ ಇವರೊಂದಿಗೆ ಕಾದುವಾಗ ಅಕಸ್ಮಾತ್ತಾಗಿ ಪರಾಭವಗೊಂಡರೆ ತನಗೆ ಅಪಮಾನ ಎಂಬುದು ಅವನ ವಿಚಾರ. ಅದರೊಂದಿಗೆ ಅಲ್ಲಿ ದ್ರೋಣಪುತ್ರರಾಗಿ ಇರುವ ಅಶ್ವತ್ಥಾಮರು ಶಿವನ ಅವತಾರವೆಂಬುದನ್ನೂ ಅವನು ತಿಳಿದಿದ್ದ. ಶಿವಭಕ್ತನಾದ ಅವನಿಗೆ ಅವರೊಂದಿಗೆ ಕಾದುವ ಮನಸ್ಸು ಇರಲಿಲ್ಲ. ಹೀಗಾಗಿ ಅವನು ಹಸ್ತಿನಾಪುರವನ್ನು ಸೇರಿದ ಕೌರವರ ಮೇಲೆ ಯುದ್ಧ ಸಾರುವವನಲ್ಲ ಎಂದು ಭಾವ. ಸದಾ ಜಯವನ್ನೇ ಅಪೇಕ್ಷಿಸುವ ನಿಷ್ಠೆಯ ಜರಾಸಂಧ ಒಂದು ಬಾರಿಯೂ ಗೆಲುವಿನ ಸುಳಿವು ಸಿಕ್ಕದಿದ್ದರೂ ಹದಿನೆಂಟು ಬಾರಿ ಶ್ರೀಕೃಷ್ಣನ ಮೇಲೆ ದಂಡೆತ್ತಿ ಹೋಗಿದ್ದು ಮಾತ್ರ ಎಂತಹ ವಿಪರ್ಯಾಸ..! ಎಂಬುದನ್ನು ಗಮನಿಸಬೇಕು.

ಏಕೋಽಹಮೇವ ನೃಪತೀನ್ ಪ್ರತಿಯೋಧಯಿಷ್ಯ
ಏತೈರ್ಮಯಿ ಪ್ರವಿಜಿತೇಽಪಿ ನ ತೇಽಸ್ಯ ಕೀರ್ತಿಃ।
ಏಕಂ ಚ ತೇಽನುಜಮಿಮೇ ಯದಿ ಪೌರುಷೇಣ
ಗೃಹ್ಣೀಯುರತ್ರ ತವ ಕೀರ್ತಿರುಪೈತಿ ನಾಶಮ್ ॥ ೧೯೩ ॥

ಅ: ನಾನೊಬ್ಬನೇ ಈ ರಾಜರುಗಳನ್ನು ಎದುರಿಸುವು. ನಾನು ಇವರಿಂದ ಪರಾಭವ-ಗೊಂಡರೂ ನಿನ್ನ ಕೀರ್ತಿಗೆ ಕುಂದಿಲ್ಲ. ನಿನ್ನ ಒಬ್ಬ ತಮ್ಮನನ್ನಾದರೂ ಇವರು ಬಲದಿಂದ ಸೆರೆ ಹಿಡಿದಲ್ಲಿ ನಿನ್ನ ಕೀರ್ತಿ ನಾಶಹೊಂದುವುದು.

---

೧೯೨. ಏಕಾಂತತೋ ಜಯಮವೇಕ್ಷ್ಯೇತ್ಕತ್ರ ಏಕಾಂತತೋ= ನಿಯಮೇನ। ಪುರಗತಸ್ಯ= ಪುರೇ ಸ್ಥಿತಸ್ಯ ಜಯೇ ನಿಷ್ಠಾ= ನಿಯಮಃ ನ। ಪುರಸ್ಥ ಪರಿಘಾಪ್ರಾಕಾರಾದಿನಾ ಅಗಮ್ಯತ್ವಾದಿತಿ ಭಾವಃ ॥ – (ವಾ.)

೧೯೨. ಏಕಾಂತತಃ ನಿಯಮೇನ ನಿಶ್ಚಯೇನೇತಿ ಯಾವತ್ । – (ಜ.)

ವಿ: ಕರ್ಣ ದುರ್ಯೋಧನನ ಸಂಬಂಧಿಯಲ್ಲವಾದ್ದರಿಂದ ಅವನ ಸೋಲಿನಿಂದ ಕೌರವರಿಗೇನೂ ಅಪಖ್ಯಾತಿಯಿಲ್ಲ, ಆದರೆ ಕೌರವರಲ್ಲಿ ಒಬ್ಬನು ಸೆರೆಸಿಕ್ಕರೂ ಅದರಿಂದ ಕುರುಕುಲಕ್ಕೆ ಕಳಂಕ. ಆದಾಗದಿರಲಿ ಎಂಬುದು ಕರ್ಣನ ಆಶಯ ಎಂದು ತಿಳಿಯಬೇಕು.

ಭೀಷ್ಮಾದಯೋಽಪಿ ನ ಹಿ ಯೋಧಯಿತುಂ ಸಮರ್ಥಾ
ರಾಜ್ಞಾ ಹ್ಯನೇನ ತತ ಏವ ಹಿ ಬಾಹ್ಲಿಕೋಽಸ್ಯ ।
ಭೃತ್ಯೋ ಬಭೂವ ನ ಹಿ ಭೀಷ್ಮಮಯಂ ಯುಧೇಽಗಾ-
ದ್ರಾಜಾ ನ ಹೀತಿ ನ ಚ ತೇನ ವಿರೋಧ ಆಸೀತ್ ॥ ೧೯೪ ॥

ಅ: ಭೀಷ್ಮಾದಿಗಳೂ ಸಹ ಈ ಜರಾಸಂಧನೊಂದಿಗೆ ಯುದ್ಧ ಮಾಡಲು ಸಮರ್ಥ-ರಾದವರಲ್ಲ. ಅದರಿಂದಾಗಿಯೇ ಬಾಹ್ಲೀಕನು ಇವನಿಗೆ ದಾಸನಾಗಿರುವನು. ಇವನು ರಾಜನಲ್ಲ ಎಂಬ ಕಾರಣದಿಂದ ಭೀಷ್ಮರ ಮೇಲೆ ಯುದ್ಧಕ್ಕೆ ಹೋಗಿರಲಿಲ್ಲ. ಅದರಿಂದಾಗಿ ಭೀಷ್ಮರೊಂದಿಗೆ ಇವನ ಯುದ್ಧ ನಡೆದಿಲ್ಲ''.

ವಿ: ೧) ಭೀಷ್ಮಾದಿಗಳಿಗೆ ಬ್ರಹ್ಮಶಿವಾದಿಗಳ ವರದೊಂದಿಗೆ ಕೂಡಿದ ಜರಾಸಂಧನನ್ನು ಕೊಲ್ಲುವುದು ಆಗದ ಮಾತು. ಮಹಾಬಲಾಢ್ಯನೆನ್ನಿಸಿದ ಬಾಹ್ಲೀಕನೇ ಜರಾಸಂಧನಿಗೆ ಸೋತು ವಶವಾಗಿದ್ದವ. ಭೀಷ್ಮರನ್ನು ಸೋಲಿಸಲು ಸಾಧ್ಯವಿದ್ದರೂ ಜರಾಸಂಧ ಅವರನ್ನು ರಾಜನಲ್ಲ ಎಂಬ ಕಾರಣದಿಂದ ಅವರೊಂದಿಗೆ ಯುದ್ಧಕ್ಕೆ ತೊಡಗಿರಲಿಲ್ಲ. ಅದರಿಂದಾಗಿ ಅವರೊಂದಿಗೆ ಯುದ್ಧ ಮಾಡುವ ಪ್ರಸಂಗವೇ ಬಂದಿರಲಿಲ್ಲ.

೨) ಭೀಷ್ಮ ಜರಾಸಂಧರ ಮುಖಾಮುಖಿ ಏತಕ್ಕೆ ಎಂದೂ ಆಗಿರಲಿಲ್ಲ ಎಂಬುದಕ್ಕೆ ಇಲ್ಲಿ ಸೂಕ್ತ ಉತ್ತರವಿದೆ.

೩) ಇಂತಹ ಜರಾಸಂಧ ರಾಜನಲ್ಲದ ಶ್ರೀಕೃಷ್ಣನ ಮೇಲೆ ಹದಿನೆಂಟು ಬಾರಿ ದಂಡೆತ್ತಿ ಹೋಗಿದ್ದು ಮಾತ್ರ ಪುನಃ ವಿಪರ್ಯಾಸವೇ ಎಂಬುದನ್ನು ಮರೆಯಬಾರದು.

---

೧೯೪. ಆದಿಶಬ್ದೇನ ಭೀಷ್ಮಸಮತ್ವಾದ್ಬಾಹ್ಲೀಕಾದಯೋಽಪಿ ವಿವಕ್ಷಿತಾಃ। .... ತತ ಏವ ಅಶಕ್ತತ್ವಾದೇವ ಬಾಹ್ಲೀಕೋಽಸ್ಯ ಜರಾಸಂಧಸ್ಯ ಭೃತ್ಯೋ ಬಭೂವ। – (ಜ.)

ದುರ್ಯೋಧನಾದಿಗಳ ಪಲಾಯನ

ಇತ್ಯುಕ್ತ ಆಶು ಸ ವಿಮೃಶ್ಯ ಯಯೌ ಪುರಂ ಸ್ವಂ
ಕರ್ಣೋಽಪಿ ತೈಃ ಪ್ರತಿಯುಯೋಧ ಜಿಗಾಯ ಚೈನಾನ್ ।
ಕರ್ಣಸ್ಯ ವೀರ್ಯಮಗಣಯ್ಯ ಜರಾಸುತೋಽಪಿ
ಹ್ಯೇಕೈಕಮೇವ ನೃಪತಿಂ ಸ ದಿದೇಶ ಯೋದ್ಧುಮ್ ॥ ೧೯೫ ॥

ಅ: ಕರ್ಣ ಹೀಗೆನ್ನಲು ದುರ್ಯೋಧನ ವಿಚಾರ ಮಾಡಿ ಬೇಗನೆ ತನ್ನ ಪಟ್ಟಣಕ್ಕೆ ತೆರಳಿದ. ಕರ್ಣ ರಾಜರೊಂದಿಗೆ ಯುದ್ಧ ಮಾಡಿ ಅವರನ್ನು ಗೆದ್ದ. ಕರ್ಣನ ಸಾಮರ್ಥ್ಯವನ್ನು ಲೆಕ್ಕಿಸದೆ ಜರಾಸಂಧ ಒಬ್ಬೊಬ್ಬ ರಾಜರನ್ನೇ ಅವನ ಮೇಲೆ ಯುದ್ಧಕ್ಕೆ ಕಳಿಸಿದ್ದರಿಂದ ಅದು ಸಾಧ್ಯವಾಯಿತು.

ವಿ: ಕರ್ಣ ಅಷ್ಟುಜನ ರಾಜರನ್ನೂ ಒಟ್ಟಾಗಿ ಎದುರಿಸಿ ಗೆದ್ದವನಲ್ಲ. ಜರಾಸಂಧ ಕರ್ಣನನ್ನು ಅಷ್ಟಾಗಿ ಲೆಕ್ಕಿಸದೇ ಒಬ್ಬೊಬ್ಬರನ್ನೇ ಯುದ್ಧಕ್ಕೆ ಕಳುಹಿಸಿದ್ದರಿಂದ ಕ್ರಮವಾಗಿ ಅವರನ್ನೆಲ್ಲ ಸೋಲಿಸಲು ಅವನಿಗೆ ಸಾಧ್ಯವಾಯಿತು ಎಂದರ್ಥ.

ಕರ್ಣಜಯ

ಸರ್ವೇಷು ತೇಷು ವಿಜಿತೇಷ್ವಭಿಜಗ್ಮಿವಾನ್ ಸ
ಯೋದ್ಧುಂ ಬೃಹದ್ರಥಸುತೋಽಪ್ಯಮುನಾ ರಥೇನ ।
ತಂ ಚೈವ ರಾಮವರತೋ ವಿರಥಂ ವಿಶಸ್ತ್ರಂ
ಚಕ್ರೇ ಸ ಚೈನಮಥ ಮುಷ್ಟಿಭಿರಭ್ಯುಪೇತೌ ॥ ೧೯೬ ॥

ಅ: ಅವರೆಲ್ಲ ಪರಾಭವಗೊಂಡಮೇಲೆ ಜರಾಸಂಧ ಅವನೊಂದಿಗೆ ಕಾದಲು ರಥವೇರಿ ಹೊರಟ. ಅವನನ್ನೂ ಸಹ ಪರಶುರಾಮರು ನೀಡಿದ ವರದಿಂದಾಗಿ ಕರ್ಣ ವಿರಥನನ್ನಾಗಿಯೂ, ನಿರಾಯುಧನನ್ನಾಗಿಯೂ ಮಾಡಿದ. ಅವನೂ ಸಹ ಇವನನ್ನು ಹಾಗೆಯೇ ಮಾಡಿದ. ಅವರಿಬ್ಬರೂ ಅನಂತರ ಮುಷ್ಟಿಗಳಿಂದ ಕಾದಾಡಿದರು.

---

೧೯೬. ಚಕ್ರೇ ಸ ಚೈನಮಿತ್ಯತ್ರ ಸ ಚ= ಜರಾಸಂಧಶ್ಚ ಏನಂ= ಕರ್ಣಂ ವಿರಥಂ ವಿಶಸ್ತ್ರಂ ಚ ಚಕ್ರ ಇತಿ ಯೋಜನಾ ॥ – (ವಾ.)

ವಿ: ಜರಾಸಂಧನಂತಹ ಮಹಾವೀರನನ್ನು ಸಹ ಕರ್ಣನಿಗೆ ಜಯಿಸಲು ಸಾಧ್ಯವಾದದ್ದು ಪರಶುರಾಮರು ನೀಡಿದ ವರದ ಬಲದಿಂದ; ಸ್ಪರ್ಧೆಯಿಲ್ಲದೇ ಕಾದಿದಾಗ ಅವನಿಗೆ ಎಂದೂ ಸೋಲಿಲ್ಲ ಎಂಬ ಪರಶುರಾಮರ ವರ ಅವನಿಗೆ ಗೆಲವು ನೀಡಿತ್ತು ಎಂದರ್ಥ. ಜರಾಸಂಧನಿಗೆ ಕರ್ಣನನ್ನು ವಿರಥನನ್ನಾಗಿ ಮಾಡಲು ಅವನಿಗಿದ್ದ ಬ್ರಹ್ಮ, ಶಿವಾದಿಗಳ ವರ ಕಾರಣವಾಗಿತ್ತು ಅಂತೂ ಅಲ್ಲಿ ವರಗಳದ್ದೇ ಪ್ರಾಬಲ್ಯ ನಡೆದಿತ್ತು ಎಂಬುದು ವಿಶೇಷ.

ಸಂಧೌ ಯದೈವ ಜರಯಾ ಪ್ರತಿಸಂಧಿತಸ್ಯ
ಕರ್ಣೋ ಜಘಾನ ನ ಪರತ್ರ ತುತೋಷ ರಾಜಾ ।
ನ ಜ್ಞಾತಮೇತದಪಿ ಹೋ ಹಲಿನಾ ತದೇತ-
ಜ್ಞಾತಂ ತ್ವಯಾ ಭವ ತತೋ ಮಮ ಭೃತ್ಯ ಏವ ॥ ೧೯೭ ॥

ಅ: ಇತರ ಕಡೆಗಳಲ್ಲಿ ಬಿಟ್ಟು ಜರೆಯು ಸೇರಿಸಿದ್ದ ಜರಾಸಂಧನ ಸಂಧಿಸ್ಥಾನದಲ್ಲೇ ಕರ್ಣ ಹೊಡೆಯತೊಡಗಿದ್ದಾಗ ಜರಾಸಂಧ ಮೆಚ್ಚಿದ. ''ನನ್ನ ಈ ಮರ್ಮಸ್ಥಾನ ಬಲರಾಮನಿಗೂ ತಿಳಿದಿರಲಿಲ್ಲ, ನೀನು ತಿಳಿದೆ, ಆದ್ದರಿಂದ ನೀನು ನನಗೆ ಅನುಯಾಯಿಯಾಗು.

ವಿ: ೧) ಕರ್ಣ ಆ ಮುಷ್ಟಿಯುದ್ಧದಲ್ಲಿ ಜರಾಸಂಧನಿಗೆ ಹಾಕುತ್ತಿದ್ದ ಪೆಟ್ಟುಗಳು ಜರೆ ಎಂಬ ರಾಕ್ಷಸಿ ಅವನ ದೇಹವನ್ನು ಸೇರಿಸಿದ್ದ ಸಂಧಿಸ್ಥಳದಲ್ಲೇ ಬೀಳುತ್ತಿದ್ದವು. ಅದಕ್ಕೆ ಕಾರಣ ಹಿಂದೆ ಹೇಳಿದಂತೆ ಪರಶುರಾಮದೇವರ ವರವೇ.

೨) ಜರಾಸಂಧ ಅದು ಕರ್ಣನದೇ ಸಾಮರ್ಥ್ಯ ಎಂದು ಭ್ರಮಿಸಿದ. ಹೋರಾಟ ಹಾಗೇ ಸಾಗಿದಲ್ಲಿ ತನಗೆ ಪರಾಭವವಾದೀತು ಎಂದು ಅಂಜಿದ. ಬಲರಾಮರಿಗೂ ತಿಳಿಯದಿದ್ದ ರಹಸ್ಯ ಇವನಿಗೆಂತು ತಿಳಿಯಿತೆಂದು ಆಶ್ಚರ್ಯಪಟ್ಟ. ಕೊನೆಗೆ ಸಂಧಾನವೇ ಒಳಿತು ಎಂದು ಹೇಳಿ ಕರ್ಣನೊಂದಿಗೆ ಯುದ್ಧ ನಿಲ್ಲಿಸಿ ತನ್ನ ಅನುಯಾಯಿಯಾಗು ಎಂದು ಅವನೊಂದಿಗೆ ಸ್ನೇಹ ಬೆಳೆಸಿದ. ಇಲ್ಲಿ ನಡೆದದ್ದು ನಿಜಕ್ಕೂ ದೊಡ್ಡ ಪವಾಡ ಎಂಬುದನ್ನು ಗಮನಿಸಬೇಕು.

---

೧೯೭. ನ ಜ್ಞಾತಮೇತದಪಿ ಹೋ ಹಲಿನೇತ್ಯತ್ರ ಹೋ= ಅಹೋ ಇತ್ಯರ್ಥಃ ॥ – (ವಾ.)

೧೯೭. ಬಾಹುಕಂಟಕಯುದ್ಧೇನ ತಸ್ಯ ಕರ್ಣೋ೨ಥ ಮುಚ್ಯತಃ ।
ಬಿಭೇದ ಸಂಧಿ ದೇಹಸ್ಯ ಜರಯಾ ಶ್ಲೇಷಿತಸ್ಯ ಹಿ ॥ – ಭಾರತ (ಶಾಂತಿ. ೫/೪)

ಪೂರ್ಣಾಂಗರಾಜನಾಗಿ ಕರ್ಣ

ಏವಂವಿಧಂ ಸುಕುಶಲಂ ಬಹುಯುದ್ಧಶೌಂಡಂ
ನ ತ್ವಾಂ ಹನಿಷ್ಯ ಉತ ತೇ ಪಿತುರೇವ ಪೂರ್ವಮ್ ।
ಬಾಹ್ವೋರ್ಬಲಾದಭಿಹೃತಂ ಹಿ ಮಯಾಽಂಗರಾಜ್ಯಂ
ತತ್ ತ್ವಂ ಗೃಹಾಣ ಯುಧಿ ಕರ್ಮಕರಶ್ಚ ಮೇ ಸ್ಯಾಃ ॥ ೧೯೮ ॥

ಅ: ಇಂತಹ ಬಹುಯುದ್ಧಪ್ರವೀಣನಾದ ನಿನ್ನಂತಹ ಚತುರನನ್ನು ನಾನು ಕೊಲ್ಲಲಾರೆ. ಮಾತ್ರವಲ್ಲದೇ ಹಿಂದೆ ನಾನು ಬಾಹುಬಲದಿಂದ ನಿನ್ನ ತಂದೆಯಿಂದ ಅಂಗರಾಜ್ಯವನ್ನು ಕಿತ್ತುಕೊಂಡಿದ್ದೆ. ಅದನ್ನು ನೀನೀಗ ತೆಗೆದುಕೋ, ಯುದ್ಧದಲ್ಲಿ ನೀನು ನನ್ನ ಕಾರ್ಯ ಮಾಡುವವನಾಗು''.

ವಿ: ಜರಾಸಂಧ ಕರ್ಣನನ್ನು ಹೊಗಳಿ ಅವನ ತಂದೆಯಾದ ಅತಿರಥನಿಂದ ಕಿತ್ತುಕೊಂಡಿದ್ದ ರಾಜ್ಯವನ್ನು ನೀಡುವ ಮೂಲಕ ಕರ್ಣನನ್ನು ಅಭಿನಂದಿಸಿದ ಎಂದರ್ಥ.

ಇತ್ಯುಕ್ತ ಆಶು ಸ ತಥೈವ ಚಕಾರ ಕರ್ಣಃ
ಪೂರ್ವಂ ಹಿ ತಸ್ಯ ನಿಜರಾಜ್ಯಪದೈಕದೇಶಃ ।
ದುರ್ಯೋಧನೇನ ವಿಹಿತೋ ಮಗಧಾಧಿರಾಜಂ
ಜಿತ್ವಾ ವೃಕೋದರಹೃತಃ ಪಿತುರೇವ ದತ್ತಃ ॥ ೧೯೯ ॥

---

೧೯೮. ಶೌಂಡಂ ಪ್ರೌಢಮ್ । –(ವ.)

೧೯೯. ಅಭ್ಯಷೇಚಯದಂಗೇಷು ರಾಜಾನಂ ಪಿತ್ರನುಜ್ಞಯೇತ್ಯತ್ರ (೧೮/೩೮) ಪ್ರಾಗ್ದುರ್ಯೋಧನೇನ ಅಂಗರಾಜ್ಯಂ ಕರ್ಣಾಯ ದತ್ತಮಿತ್ಯುಕ್ತಮ್। ಇದಾನೀಂ ಜರಾಸಂಧೇನ ದತ್ತಮಿತ್ಯುಚ್ಯತೇ। ಅತಃ ಪೂರ್ವೋತ್ತರವಿರೋಧ ಇತ್ಯತ ಆಹ। ಪೂರ್ವಂ ಹಿ ತಸ್ಯೇತಿ। ಕರ್ಣಜನನಾತ್ಪೂರ್ವಂ ಅಧಿರಥಪಾಲಿತಸಮಸ್ತರಾಜ್ಯಂ ಜರಾಸಂಧೇನಾಪಹೃತಂ ತಸ್ಮಾದ್ರಾಜ್ಯಾದಿತ್ಯರ್ಥತಃ ಪ್ರಾಪ್ತಂ ಶೇಷಮಧ್ಯಾಹೃತ್ಯ ವಾಕ್ಯಂ ಯೋಜನೀಯಮ್। ಪೂರ್ವಂ ಯುಧಿಷ್ಠಿರಸ್ಯ ಯುವರಾಜಪಟ್ಟಕಾಲೇ ಮಗಧಾಧಿರಾಜಂ ಜಿತ್ವಾ ವೃಕೋದರಹೃತಃ ಯೋ ನಿಜರಾಜ್ಯಪದೈಕದೇಶಃ ನಿಜಂ= ಕರ್ಣಪಿತುರ್ವಂಶಪರಂಪರಾಪ್ರಾಪ್ತಂ ಯದ್ರಾಜ್ಯಪದಂ ತಸ್ಯೈಕದೇಶಃ ಪಿತುರೇವ= ಜ್ಯೇಷ್ಠಪಿತುರ್ಧೃತರಾಷ್ಟ್ರಸ್ಯೈವ ದತ್ತಃ ಸ ಏವ= ರಾಜ್ಯಪದೈಕದೇಶಃ ಪೂರ್ವಂ = ಅಭ್ಯಾಸಪ್ರದರ್ಶನಸಮಯೇ ದುರ್ಯೋಧನೇನ= ಕರ್ಣಾಯ ವಿಹಿತಃ= ದತ್ತಃ। ಉರ್ವರಿತಾರ್ಧದೇಶಸ್ತು ಜರಾಸಂಧವಶ ಏವ ಸ್ಥಿತಃ। ಸ ಇದಾನೀಂ ಜರಾಸಂಧೇನ ಕರ್ಣಾಯ ದತ್ತ ಇತಿ ಅತೀತಶ್ಲೋಕೇ ಉಕ್ತಮ್। ಅತೋ ನ ವಿರೋಧ ಇತಿ ಭಾವಃ ॥ –(ವಾ.)

ಅ: ಜರಾಸಂಧ ಹೀಗೆನ್ನುತ್ತಲೇ ಒಡನೆಯೇ ಕರ್ಣ ಹಾಗೆಯೇ ಮಾಡಿದ; ಹಿಂದೆ ಅವನ ರಾಜ್ಯದ ಒಂದು ಭಾಗ ದುರ್ಯೋಧನನಿಂದ ಅವನಿಗೆ ನೀಡಲ್ಪಟ್ಟಿದ್ದಿತು, ಅದನ್ನು ಜರಾಸಂಧನನ್ನು ಗೆದ್ದು ಭೀಮಸೇನ ಧೃತರಾಷ್ಟ್ರನಿಗೆ ನೀಡಿದ್ದ.

ವಿ: ೧) ಕರ್ಣ ಜರಾಸಂಧನ ಸಂಧಿಪ್ರಸ್ತಾಪವನ್ನು ಒಡನೆಯೇ ಅಂಗೀಕರಿಸಿಬಿಟ್ಟ. ಅದಕ್ಕೆ ಕಾರಣ ಅವನಿಗಿದ್ದ ಜರಾಸಂಧನ ಬಗೆಗಿನ ಭಯ. ಅಂತಹ ಮಹಾವೀರನೊಂದಿಗೆ ತಾನು ಅಷ್ಟು ಕಾದಾಡಿದ್ದೇ ಹೆಚ್ಚು. ಮುಂದುವರಿದಲ್ಲಿ ಏನಾದೀತೋ ಎಂಬ ಆತಂಕ ಅವನನ್ನು ಕಾಡುತ್ತಿತ್ತು, ಜರಾಸಂಧನ ಸ್ನೇಹದ ಪ್ರಸ್ತಾಪ ಅವನಿಗೆ ಹಿತಾನುಭವ ನೀಡಿತು. ಅದನ್ನು ತಕ್ಷಣ ಅಂಗೀಕರಿಸಿದ ಎಂದರ್ಥ. ಇದರಿಂದ ಕರ್ಣನಿಗೆ ತನ್ನ ಜಯದ ರಹಸ್ಯ ಅರಿವಿಗೆ ಬಂದಿರಲಿಲ್ಲ ಎಂದಾಗುವುದು. ಪರಶುರಾಮರ ವರದಿಂದ ತಾನೀಗ ಅಜೇಯನೆಂಬುದನ್ನು ಅವನು ಸ್ಮರಿಸಿಕೊಂಡಿದ್ದರೆ ಅಂತಹ ಪ್ರಸಂಗ ಒದಗುತ್ತಿರಲಿಲ್ಲ. ಅದರೊಂದಿಗೆ ಅವನೊಡ್ಡಿದ ಅಂಗರಾಜ್ಯ ಪ್ರದಾನದ ಆಮಿಷ ಅವನನ್ನು ಬಲಿತೆಗೆದುಕೊಂಡಿತು ಎನ್ನಬಹುದು.

೨) ರಾಮಾಯಣದ ವಾಲಿ, ರಾವಣರ ಹೋರಾಟದಲ್ಲೂ ನಡೆದದ್ದು ಹೀಗೆಯೇ ಎಂದು ರಾಮಾಯಣದಲ್ಲಿದೆ. ವಾಲಿ ರಾವಣರ ಮಧ್ಯೆ ಯುದ್ಧ ನಡೆದು ವಾಲಿ ರಾವಣನನ್ನು ದೊಡ್ಡ ಮಟ್ಟದಲ್ಲಿಯೇ ಸೋಲಿಸಿದ. ಆ ವೇಳೆಗೆ ರಾವಣ ಅವನ ಬಲವನ್ನು ಗುರುತಿಸಿ ಅಂಜಿ ಸ್ನೇಹಹಸ್ತ ಚಾಚಿದ. ವಾಲಿಗೂ ತನ್ನ ಗೆಲುವಿನ ಗುಟ್ಟು ತಿಳಿಯದೇ ಹೋಗಿತ್ತು (೮/೨೩೪). ಆ ವೇಳೆಗೆ ಅವನಿಗೂ ಸಾಕಷ್ಟು ಬಳಲಿಕೆಯಾಗಿತ್ತು, ಅವನ ಸಂಧಿಪ್ರಸ್ತಾಪವನ್ನು ಅಂಗೀಕರಿಸಿದ. ಅವನ ಸ್ನೇಹದಿಂದಾಗಿ ಅವನು ಕ್ರಮೇಣ ಹನುಮಂತನಿಗೂ, ಮುಂದೆ ರಾಮನಿಗೂ ದೂರಾಗಿ ದುರಂತವನ್ನು ಕಂಡ. ಇಲ್ಲಿ ಕರ್ಣನಿಗೂ ಆದದ್ದು ಅದರಂತೆಯೇ. ಈಗಾಗಲೇ ದುರ್ಯೋಧನನ ಸ್ನೇಹದಿಂದ ಶ್ರೀಕೃಷ್ಣ ಭೀಮರಿಂದ ದೂರಾಗಿದ್ದ ಕರ್ಣ ಮತ್ತೊಬ್ಬ ಶ್ರೀಕೃಷ್ಣದ್ವೇಷಿಯಾದ ಜರಾಸಂಧನ ಸ್ನೇಹದಿಂದಾಗಿ ಅವರಿಬ್ಬರಿಗೆ ಇನ್ನಷ್ಟು ದೂರವಾಗುವಂತಾದ. ಅಲ್ಲಿ ರಾವಣನ ಸಂಗ ಮಾಡಿದ ವಾಲಿ ಹತನಾದಂತೆ, ಇಲ್ಲಿ ದುರ್ಯೋಧನನ ಸಂಗ ಮಾಡಿದ ಕರ್ಣ ಹತನಾದ.

೩) ಅತಿರಥನ ಅಂಗರಾಜ್ಯವನ್ನು ಜರಾಸಂಧ ತನ್ನ ಬಾಹುಬಲದಿಂದ ಅವನನ್ನು ಪರಾಭವಗೊಳಿಸಿ ತನ್ನ ವಶಕ್ಕೆ ತೆಗೆದುಕೊಂಡಿದ್ದ. ಭೀಮಾರ್ಜುನರು ಬಾಲ್ಯದಲ್ಲಿ ದಿಗ್ವಿಜಯಕ್ಕೆ ತೆರಳಿದ್ದಾಗ (೧೪/೮೭–೯೩, ೧೮/೩೮) ಭೀಮ ಜರಾಸಂಧನನ್ನು ಸೋಲಿಸಿ ಅಂಗರಾಜ್ಯದ ಅರ್ಧಭಾಗವನ್ನು ತನ್ನ ವಶಕ್ಕೆ ತೆಗೆದುಕೊಂಡು ಧೃತರಾಷ್ಟ್ರನಿಗೆ ಒಪ್ಪಿಸಿದ್ದ. ದುರ್ಯೋಧನ ತನ್ನ ಸಂಪಾದನೆಯೆಂಬಂತೆ ಅದನ್ನು ಅಸ್ತ್ರವಿದ್ಯಾಪರೀಕ್ಷೆಯ ಸಂದರ್ಭದಲ್ಲಿ ಕರ್ಣನ ಸ್ನೇಹ ಸಂಪಾದನೆಗೆಂದು ಅವನಿಗೆ ನೀಡಿ ಪಟ್ಟಾಭಿಷೇಕ ಮಾಡಿದ್ದ. ಉಳಿದರ್ಧ ಈಗ ಜರಾಸಂಧನಿಂದಲೇ ಕರ್ಣನಿಗೆ ದೊರೆಯಿತು. ಹೀಗೆ ಈ ಅರ್ಧ ಅವನಿಗೆ ದೊರೆಯಲಿ ಎಂದೇ ಸರ್ವಜ್ಞನಾಗಿದ್ದ

ಭೀಮಸೇನ ಆಗ ಪೂರ್ಣ ಗೆಲ್ಲದೇ ಉಳಿಸಿದ್ದ ಎಂದೂ ತಿಳಿಯಬೇಕು. ಅಂತೂ ಕರ್ಣನಿಗೆ ಬಂದ ಅಂಗರಾಜ್ಯ ಮೊದಲ ಅರ್ಧ ಮಹಾದುಷ್ಟನಾದ ದುರ್ಯೋಧನನಿಂದ, ಎರಡನೆಯ ಅರ್ಧ ಮತ್ತೊಬ್ಬ ಮಹಾದುಷ್ಟನಾದ ಜರಾಸಂಧನಿಂದ. ಅದರ ಫಲವಾಗಿ ಅವನಿಗೆ ಎರಡೂ ದಕ್ಕದೇ ಕೊನೆಗೂ ಕುರುಕ್ಷೇತ್ರದಲ್ಲಿ ದುರಂತವನ್ನು ಕಂಡ. ಅಯೋಗ್ಯರಿಂದ ಬಂದದ್ದು ದಕ್ಕಲಾರದು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

೪) ಈ ಎರಡೂ ಪ್ರಸಂಗಗಳಲ್ಲೂ ಕರ್ಣನ ತಪ್ಪು ಎದ್ದು ಕಾಣುತ್ತದೆ. ದುರ್ಯೋಧನ ಹಾಗೂ ಜರಾಸಂಧ ಇಬ್ಬರೂ ದಾನವಾಗಿ ನೀಡಿದ್ದನ್ನು ಅವನು ತೆಗೆದುಕೊಂಡದ್ದು ವೀರರಿಗೆ ಶೋಭಿಸುವಂತಹುದಲ್ಲ. ದಾನ ಸ್ವೀಕಾರದ ಅರ್ಹತೆ ಬ್ರಾಹ್ಮಣರದ್ದೇ ಹೊರತು ಕ್ಷತ್ರಿಯದ್ದಲ್ಲ. ಕರ್ಣ ಎರಡು ಪ್ರಸಂಗಗಳಲ್ಲೂ ಅವುಗಳನ್ನು ತಿರಸ್ಕರಿಸಿ ಕ್ಷಾತ್ರ ತೇಜಸ್ಸನ್ನು ಮೆರೆಯುವ ಬದಲು ಕೈಚಾಚಿ ತನ್ನ ವರ್ಚಸ್ಸನ್ನು ಕುಗ್ಗಿಸಿಕೊಂಡ. ಅದಕ್ಕೆ ಅವನು ಸೂತಸಂಸ್ಕಾರ ಹೊಂದಿ ಕ್ಷತ್ರ ಸಂಸ್ಕಾರರಹಿತನಾಗಿದ್ದುದೂ ಒಂದು ಕಾರಣವಾಯಿತು ಎಂದು ಭಾವಿಸಬಹುದು. ಅಂತೂ ಮೊದಲು ಅರ್ಧಾಂಗರಾಜನಾಗಿದ್ದ ಕರ್ಣ ಈಗ ಪೂರ್ಣಾಂಗರಾಜನಾಗಿ ಮೆರೆಯುವಂತಾಯಿತು. ಆದರೆ, ಅದು ಸರ್ವಾಂಗಸುಂದರವಾದ ಸಾಧನೆ ಮಾತ್ರ ಆಗಿರಲಿಲ್ಲ ಎಂಬುದನ್ನು ಗಮನಿಸಬೇಕು.

೫) ಇಷ್ಟಾಗಿಯೂ ಆ ರಾಜ್ಯ ಮೂಲತಃ ಅವನ ತಂದೆಯದ್ದೇ, ಎಂದರೆ ದುಷ್ಟರು ದಾನವಾಗಿ ಕೊಡುವುದೂ ಸಹ ಮತ್ತೊಬ್ಬರ ಸ್ವತ್ತನ್ನೇ ಹೊರತು ತಮ್ಮ ಸ್ವಯಾರ್ಜಿತವಾದ ಸಂಪತ್ತನ್ನಲ್ಲ ಎಂಬುದಕ್ಕೂ ಇದು ದ್ಯೋತಕ.

ಅಂಗಾಧಿರಾಜ್ಯಮುಪಲಭ್ಯ ಜರಾಸುತಸ್ಯ
ಸ್ನೇಹಂ ಚ ಸೂರ್ಯಸುತ ಆಶು ಕುರೂನ್ ಜಗಾಮ ।
ದೃಷ್ಟ್ವೈವ ತಂ ಮುಮುದಿರೇ ಧೃತರಾಷ್ಟ್ರಪುತ್ರಾ
ನಾನೇನ ತುಲ್ಯಮಧಿಜಗ್ಮುರತೋ ಹರಿಂ ಚ ॥ ೨೦೦ ॥

ಅ: ಅಂಗದೇಶದ ಆಧಿಪತ್ಯವನ್ನೂ, ಜರಾಸಂಧನ ಸ್ನೇಹವನ್ನೂ ಸಂಪಾದಿಸಿ ಸೂರ್ಯ-ಪುತ್ರನಾದ ಕರ್ಣ ಕೌರವರ ಬಳಿಗೆ ತೆರಳಿದ. ಅವನನ್ನು ಕಾಣುತ್ತಲೇ ಕೌರವರು ಸಂತೋಷ-ಪಟ್ಟರು. ಶ್ರೀಕೃಷ್ಣನೂ ಸಹ ಅವನಿಗೆ ಸಮನಲ್ಲ ಎಂದು ತಿಳಿಸಿದರು.

---

೨೦೦. ಕೃಷ್ಣಾದಧಿಕಃ ಕರ್ಣ ಇತಿ ಮೇನಿರೇ ಇತಿ ಭಾವಃ । – (ಜ.)

ವಿ: ೧) ಇಲ್ಲಿ ಕರ್ಣನನ್ನು ಸೂರ್ಯಪುತ್ರ ಎಂದು ಕರೆಯುವ ಮೂಲಕ ಆಚಾರ್ಯರು ಸೂರ್ಯನಾಗಿ ಪ್ರತಿನಿತ್ಯ ಇಡೀ ಜಗತ್ತಿಗೆ ಬೆಳಕನ್ನು ದಾನ ಮಾಡುವ ದೇವತೆಯ ಅವತಾರನಾದ ಅವನು ಅಂತಹ ಅಯೋಗ್ಯನಿಂದ ರಾಜ್ಯದಾನ ಪಡೆದದ್ದು ಎಂತಹ ವಿಪರ್ಯಾಸ ಎಂಬ ಸೂಚನೆಯನ್ನು ನೀಡಿರುವರು ಎಂದು ತಿಳಿಯಬಹುದು.

೨) ಶ್ರೀಕೃಷ್ಣ ಜರಾಸಂಧನಿಗೆ ಅಂಜಿ ಓಡಿಹೋದವನು ಎಂದು ತಪ್ಪು ತಿಳಿದಿದ್ದ ಮಹಾಪಾತಕಿಗಳಾದ ಕೌರವರು ಕರ್ಣ ಹಾಗೆ ಅಂಜಿ ಓಡಿ ಬರದೇ ಜರಾಸಂಧನಿಂದ ರಾಜ್ಯ ಪಡೆದು ಬಂದ ಎಂಬ ಭಾವನೆಯಿಂದ ಅವನು ಶ್ರೀಕೃಷ್ಣನಿಗಿಂತ ಮಿಗಿಲಾದವನು ಎಂದು ಮತ್ತೊಂದು ದೊಡ್ಡ ಭ್ರಮೆಗೆ ಒಳಗಾದರು ಎಂದರ್ಥ.

೩) ಕರ್ಣ ಸೂರ್ಯ; ಕೃಷ್ಣ ನಾರಾಯಣ. ಕರ್ಣನನ್ನು ಶ್ರೀಕೃಷ್ಣನಿಗಿಂತ ಮಿಗಿಲೆಂದು ತಿಳಿಯುವ ಮೂಲಕ ಸೂರ್ಯನನ್ನು ವಿಷ್ಣುವಿಗಿಂತ ಮಿಗಿಲು ಎಂದು ತಿಳಿಯುವ ಅವರೆಲ್ಲ ಆ ಮಟ್ಟಿಗೆ ಸೌರಮತದ ಅನುಯಾಯಿಗಳಾದರು ಎಂದೂ ತಿಳಿಯಬೇಕು.

ಲಕ್ಷಣ ಲಕ್ಷಣೆಯರ ಹುಟ್ಟು

ಉದ್ವಾಹ್ಯ ಕಾಶಿತನಯಾಂ ಗಿರಿಜಾಭಿವಿಷ್ಟಾಂ
ಸಾಕ್ಷಾನ್ನರೇಷು ಜನಿತಾಂ ಪ್ರಥಮಾಮಲಕ್ಷ್ಮೀಮ್ ।
ತಸ್ಯಾಂ ಸುತಂ ತ್ವಜನಯತ್ ಪುರ ಆಸ ಯೋಽಕ್ಷಃ
ಕನ್ಯಾಂ ಪುರಾ ಪ್ರಿಯತಮಾಂ ಚ ಷಡಾನನಸ್ಯ ॥ ೨೦೧ ॥

---

೨೦೧. ಗಿರಿಜಾಭಿವಿಷ್ಟಾಂ ಅತ ಏವ ಭಾರತೇ ದ್ರೌಪದೀವಸ್ತ್ರಹರಣಾದಿವಿಷಯೇ ಅಸ್ಯಾಃ ದುಃಖಿತತ್ವೋಕ್ತಿಃ ಸಂಗಚ್ಛತೇ । ತದುಕ್ತಂ ಸಭಾಪರ್ವಣಿ– 'ಧಾರ್ತರಾಷ್ಟ್ರಸ್ತ್ರಿಯಸ್ತಾಶ್ಚ ನಿಖಿಲೇನೋಪಲಭ್ಯ ವೈ । ಗಮನಂ ಪರಿಕರ್ಷಂ ಚ ಕೃಷ್ಣಾಯಾ ದ್ಯೂತಮಂಡಲೇ । ರುರುದುಃ ಸುಸ್ವರಂ ಸರ್ವಾ ವಿನಿಂದಂತ್ಯಃ ಕುರೂನ್ ಭೃಶಮ್ । ಇತ್ಯುಚ್ಚ ಸುಚಿರಂ ಕಾಲಂ ಕರಾಸಕ್ತಮುಖಾಂಬುಜಾಃ' ಇತಿ । – (ಜ.)

೨೦೧. **ಗಿರಿಜಾಧಿವಿಷ್ಟಾಂ** –(ಪಾಠಾಂತರ)

೨೦೧. ಸಮುದ್ರಮಥನೇ ಕಾಲೇ ಪೂರ್ವೋತ್ಪನ್ನತ್ವಾತ್ ಪ್ರಥಮಾಂ ಸಾಕ್ಷಾದಲಕ್ಷ್ಮೀಮ್ । ಆಸುರೀಷು ಪ್ರಥಮಾಮಿತಿ ವಾ ಶೃಣುತ ಏವೇತಿ ॥ – (ಶ್ರೀ.)

೨೦೧. ಪ್ರಥಮಾಂ ತಮೋಯೋಗ್ಯಸ್ತ್ರೀಷು ಪ್ರಧಾನಾಂ। ಯದ್ವಾಮಹಾಲಕ್ಷ್ಮ್ಯಪೇಕ್ಷಯಾ ಪ್ರಥಮಾಂ ಜ್ಯೇಷ್ಠಾಂ ಕ್ಷೀರಸಮುದ್ರಮಥನಕಾಲೇ ಪೂರ್ವಮುತ್ಪನ್ನಾಮಿತಿ ಯಾವತ್। ಯದ್ವಾ ಪ್ರಥಮಾಮುದ್ವಾಹ್ಯೇತ್ಯನ್ವಯಃ। ಪ್ರಥಮಭಾರ್ಯಾತ್ವೇನೋದ್ವಾಹ್ಯೇತ್ಯರ್ಥಃ। – (ತಾ.)

ಅ: ಪಾರ್ವತಿಯ ಆವೇಶದಿಂದ ಕೂಡಿದ್ದ ಕಾಶಿರಾಜನ ಮಗಳನ್ನು ದುರ್ಯೋಧನ ವಿವಾಹವಾದ. ಅವಳು ಮನುಷ್ಯರಲ್ಲಿ ಹುಟ್ಟಿದ್ದ ಸಾಕ್ಷಾತ್ ಜ್ಯೇಷ್ಠಲಕ್ಷ್ಮಿ ಎಂದರೆ ಅಲಕ್ಷ್ಮಿ. ಅವಳಲ್ಲಿ ಹಿಂದೆ ಅಕ್ಷನೆನ್ನಿಸಿದ್ದ ಮಗನನ್ನು, ಒಬ್ಬ ಮಗಳನ್ನೂ ಪಡೆದ; ಅವಳು ಷಣ್ಮುಖನ ಪತ್ನಿಯಾಗಿದ್ದ ರತಿಯ ಅವತಾರ.

ಎ: ೧) ದುರ್ಯೋಧನ ಹಾಗೆ ಅಪಹರಿಸಿ ವಿವಾಹವಾದ ಕಾಶಿರಾಜನ ಮಗಳು ಅಲಕ್ಷ್ಮಿಯ ಅವತಾರ. ಅಲಕ್ಷ್ಮಿ ಕಲಿಯ ಪತ್ನಿ, ಇವನಂತೂ ಸಾಕ್ಷಾತ್ ಕಲಿ. ರಾಮಾಯಣದಲ್ಲಿ ಮಂಥರೆಯಾಗಿ ಶ್ರೀರಾಮನನ್ನು ಕಾಡಿಗೆ ಕಳಿಸುವ ಯೋಜನೆ ರೂಪಿಸಿದ ಪಾತಕಿ ಇವಳೇ. ಸಮುದ್ರಮಥನ ಕಾಲದಲ್ಲಿ ಮಹಾಲಕ್ಷ್ಮಿಗಿಂತ ಮುಂಚಿತವಾಗಿ ಜನಿಸಿದ್ದರಿಂದ ಇವಳಿಗೆ ಜ್ಯೇಷ್ಠಲಕ್ಷ್ಮಿ ಎಂದು ಹೆಸರು. ಅವಳು ಜನಿಸಿದ್ದು ಹಾಲಿನ ಸಮುದ್ರದಲ್ಲಾದರೂ ಮನಸ್ಸಿನಲ್ಲಿ ಮಾತ್ರ ಹಾಲಹಲವೇ ತುಂಬಿತ್ತು. ದುರ್ಯೋಧನ ತಮೋಯೋಗ್ಯರಲ್ಲಿ ಜ್ಯೇಷ್ಠ; ಜೀವಾಧಮ; ಅವನ ಪತ್ನಿಯಾದ್ದರಿಂದಲೂ ಇವಳು ಜ್ಯೇಷ್ಠಲಕ್ಷ್ಮಿ. ವಾಯುದೇವರು ಸಜ್ಜೀವರಲ್ಲಿ ಜ್ಯೇಷ್ಠರಿದ್ದಂತೆ. 'ಪ್ರಾಣೋ ವೈ ಜ್ಯೇಷ್ಠಶ್ಚ ಶ್ರೇಷ್ಠಶ್ಚ' (ಉಪನಿಷತ್). ದುರ್ಯೋಧನನ ಪತ್ನಿ ತುಂಬಾ ಸುಂದರಿಯೆಂದು ಪ್ರಸಿದ್ಧಳಾದವಳು, ಅದಕ್ಕೆ ಕಾರಣ ಅವಳೊಳಗಿದ್ದ ಪಾರ್ವತಿಯ ಆವೇಶ. ಪಾರ್ವತಿಯ ಆವೇಶ ಅಂತಹ ಪಾತಕಿಯಲ್ಲಿರಲು ಆ ಕಾಲದಲ್ಲಿ ದುರ್ಯೋಧನನ ಪಕ್ಷದಲ್ಲಿ ಪಾರ್ವತೀಪತಿಯಾದ ಅಶ್ವತ್ಥಾಮರು ಸೇರಿದ್ದುದು ಒಂದು ರೀತಿ ಕಾರಣ ಎಂದು ಭಾವಿಸಬಹುದು. ದ್ರೌಪದೀ ವಸ್ತ್ರಾಪಹರಣ ಪ್ರಸಂಗದಲ್ಲಿ ಇವಳು ದುಃಖಿಸಲು, ಇವರಲ್ಲಿದ್ದ ಪಾರ್ವತಿಯ ಅಂಶ ಕಾರಣವಾಗಿತ್ತು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

೨) ಅವಳ ಹೆಸರನ್ನು ಭಾನುಮತೀ ಎಂದು ಭಟ್ಟನಾರಾಯಣ, ಪಂಪ, ಕುಮಾರವ್ಯಾಸ ಮೊದಲಾದವರು ಉಲ್ಲೇಖಿಸಿರುವುದುಂಟು. ಆದರೆ ಮಹಾಭಾರತದಲ್ಲಾಗಲಿ, ಮಹಾಭಾರತ–ತಾತ್ಪರ್ಯನಿರ್ಣಯದಲ್ಲಾಗಲೀ ಆ ರೀತಿಯ ಹೆಸರಿನ ಉಲ್ಲೇಖವಿಲ್ಲ. ಪುರಂದರದಾಸರ ಕೃತಿಯೆಂದು ಹೇಳಲಾಗುವ ಉದಯರಾಗದಲ್ಲಿ ('ಉತ್ತಮಳು ಎಲೆ ಭಾನುಮತಿ ನೆಗೆಹೆಣ್ಣೆ') ಆ ಹೆಸರಿದ್ದರೂ ಅದು ಅವರದ್ದೇ ಕೃತಿ ಎಂದು ಖಚಿತಪಟ್ಟಿಲ್ಲ. ಆದ್ದರಿಂದ ಇವಾವುವೂ ನಿರ್ಣಾಯಕವಾಗಲಾರವು ಎಂದು ಭಾವಿಸಬೇಕು.

೩) ಇಲ್ಲಿ ಷಣ್ಮುಖನ ಪತ್ನಿಯೆಂದರೆ ಷಣ್ಮುಖ ಮನ್ಮಥನ ಅವತಾರವಾದ್ದರಿಂದ ಇವಳು ರತಿ ಎಂದರ್ಥ. ಮುಂದೆ ಇವಳು ಶ್ರೀಕೃಷ್ಣಪುತ್ರನಾದ ಸಾಂಬನನ್ನು ವಿವಾಹವಾಗುವ ವಿವರ ಬಂದಿದೆ. (೨೨/೨೩೧). ರಾಮಾಯಣದಲ್ಲಿ ರಾವಣನ ಮಗನಾಗಿದ್ದ ಅಕ್ಷ ಇಲ್ಲಿ ದುರ್ಯೋಧನನ ಮಗನಾಗಿ ಜನಿಸಿದ. ಅಲ್ಲಿ ರಾಮಾಯಣದ ಮಹಾಖಳನಾಯಕನ ಮಗನಾಗಿದ್ದವನು ಇಲ್ಲಿ ಮಹಾಭಾರತದ ಮಹಾಖಳನಾಯಕನ ಮಗನಾಗಿ ಜನಿಸಿದ. ಹೀಗೆ ಎರಡು ಸಲವೂ ಖಳಪುತ್ರನಾಗಿಯೇ ಜನಿಸಿದ ಅವನು ಸ್ವರೂಪತಃ ಖಳನೇ; ಅಸುರನೇ ಎಂದರ್ಥ.

ಪುತ್ರೋ ಬಭೂವ ಸ ತು ಲಕ್ಷಣನಾಮಧೇಯಃ
+
ಸಾ ಲಕ್ಷಣೇತ್ಯಧಿಕರೂಪಗುಣಾऽऽಸ ಕನ್ಯಾ ।
ತಸ್ಯಾನುಜಾಶ್ಚ ನಿಜಯೋಗ್ಯಗುಣಾ ಅವಾಪು-
ರ್ಭಾರ್ಯಾಃ ಪುನಶ್ಚ ಸ ಸುಯೋಧನ ಆಪ ಭಾರ್ಯಾಃ ॥ ೨೦೨ ॥

ಅ: ಮಗನು ಲಕ್ಷಣ ಎಂಬ ಹೆಸರಿನವನಾದ; ಅತ್ಯಂತ ಹೆಚ್ಚಿನ ರೂಪ, ಗುಣಗಳನ್ನು ಹೊಂದಿದ್ದ ಮಗಳು ಲಕ್ಷಣಾ ಎನ್ನಿಸಿದಳು. ಅವನ ತಮ್ಮಂದಿರು ಸಹ ಮುಂದೆ ತಮಗೆ ಅನುರೂಪವಾದ ಗುಣಗಳನ್ನು ಹೊಂದಿದ್ದವರನ್ನೇ ಪತ್ನಿಯರನ್ನಾಗಿ ಪಡೆದರು. ದುರ್ಯೋಧನ ಅನಂತರವೂ ಕೆಲವರನ್ನು ಮದುವೆಯಾದ.

ವಿ: ಲಕ್ಷಣ ಮಗನ ಹೆಸರಾದರೆ, ಲಕ್ಷಣಾ ಮಗಳ ಹೆಸರು. ಅವನು ಹೆಸರಿಗೆ ಮಾತ್ರ ಲಕ್ಷಣ; ನಿಜಕ್ಕೂ ಅವಲಕ್ಷಣನೇ. ಮಗಳು ಮಾತ್ರ ನಿಜಕ್ಕೂ ಲಕ್ಷಣವತಿಯೇ ಎಂಬುದನ್ನು ಸುಕನ್ಯಾ ಎಂಬ ಪದದಿಂದ ಸೂಚಿಸಿರುವರು. ಹೀಗೆ ದುಷ್ಕರ ಪುತ್ರಿಯರಾಗಿ ದೇವತಾಸ್ತ್ರೀಯರು ಜನಿಸುವುದು ದುಷ್ಕಕುಲದಲ್ಲೂ ಸತ್ಸ್ತ್ರೀಯರು ಜನಿಸುವರು ಎಂಬುದಕ್ಕೆ ದ್ಯೋತಕ. ಅದಕ್ಕೆ ಮನುಸ್ಮೃತಿಯಲ್ಲಿ 'ಸ್ತ್ರೀರತ್ನಂ ದುಷ್ಕುಲಾದಪಿ' ಎಂಬ ಮಾತು ಬಂದಿದೆ. ಶಿಶುಪಾಲನ ಮಗಳು ದೇವಕಿ ಇದಕ್ಕೆ ಮತ್ತೊಂದು ನಿದರ್ಶನ. ಇದರಿಂದ ಕನ್ಯೆ ಯೋಗ್ಯಳಾಗಿದ್ದಲ್ಲಿ ದುಷ್ಕಕುಲದಿಂದಲೂ ಸಹ ಪರಿಗ್ರಹಿಸಬಹುದು ಎಂದಾಗುವುದು. ಲಕ್ಷಣ ಮುಂದೆ ಕುರುಕ್ಷೇತ್ರ ಸಮರದಲ್ಲಿ ಹದಿಮೂರನೇ ದಿವಸದ ಯುದ್ಧದಲ್ಲಿ ಅಭಿಮನ್ಯುವಿನಿಂದ ಹತನಾಗುವನು (೨೬/೪೫).

ದುಶ್ಶಾಸನನ ಮಗ

ಪೂರ್ವಂ ಸುರಾಂತಕ ಇತಿ ಪ್ರಥಿತಃ ಸುತೋऽಭೂ-
ದ್ದುಶ್ಶಾಸನಸ್ಯ ತದನು ಪ್ರತಿತಪ್ಯಮಾನಾಃ ।
ದೃಷ್ಟ್ವೈವ ಪಾರ್ಥಬಲವೀರ್ಯಗುಣಾನ್ ಸಮೃದ್ಧಿಂ
ತಾಂ ಚೈವ ತೇ ಪ್ರತಿಯಯುಃ ಸ್ಮ ಕಳಿಂಗದೇಶಮ್ ॥ ೨೦೩ ॥

ಅ: ಬಳಿಕ, ಹಿಂದೆ ಸುರಾಂತಕ ಎಂದು ಪ್ರಸಿದ್ಧನಾದವನು ದುಶ್ಶಾಸನನಿಗೆ ಮಗನಾಗಿ ಹುಟ್ಟಿದ. ಕೌರವರು ಪಾಂಡವರ ಬಲ, ಸಾಮರ್ಥ್ಯ, ಗುಣಗಳನ್ನು, ಸಮೃದ್ಧಿಯನ್ನೂ ಕಂಡು ಮನಸ್ಸಿನಲ್ಲಿ ಕೊರಗಿದರು. ಆಗೊಮ್ಮೆ ಅವರು ಕಲಿಂಗ ದೇಶಕ್ಕೆ ತೆರಳಿದರು.

---

೨೦೨. ಗುಣಾ ಸುಕನ್ಯಾ – (ಪಾಠಾಂತರ)

ವಿ: ಸುರಾಂತಕ ರಾವಮಾಯಣದಲ್ಲಿ ರಾವಣನಿಗೆ ಒಬ್ಬ ಗಂಧರ್ವ ಕನ್ಯೆಯಲ್ಲಿ ಜನಿಸಿದ್ದ ಪುತ್ರ. ದೇವಾಂತಕ ಎಂಬುದು ಅವನ ಇನ್ನೊಂದು ಹೆಸರು. ಅವನನ್ನು ಅಲ್ಲಿ ಸಂಹರಿಸಿದ್ದು ಹನುಮಂತ. (೮/೫೧, ೫೨). ಈ ದುಶ್ಶಾಸನ ಪುತ್ರನೂ ಸಹ ಲಕ್ಷಣನ ಅನಂತರ ಅಂದೇ ಅಭಿಮನ್ಯುವಿನಿಂದ ಹತನಾಗುವನು(೨೬/೪೮).

ಕಳಿಂಗ ರಾಜಕುಮಾರಿಯ ಸ್ವಯಂವರ

ಆಸೀತ್ ಸ್ವಯಂವರ ಉತಾತ್ರ ಕಳಿಂಗರಾಜ-
ಪುತ್ರ್ಯಾಃ ಸುವಜ್ರ ಇತಿ ಯಂ ಪ್ರವದಂತಿ ಭೂಪಾಃ ।
ರೌದ್ರಾದ್ವರಾದವಿಜಿತಸ್ಯ ಚ ತಸ್ಯ ಕನ್ಯಾಂ
ದೃಪ್ತೋ ಬಲಾತ್ ಸ ಜಗೃಹೇ ಧೃತರಾಷ್ಟ್ರಸೂನುಃ ॥ ೨೦೪ ॥

ಅ: ಕಳಿಂಗ ದೇಶದ ರಾಜನ ಮಗಳಿಗೆ ಸ್ವಯಂವರ ನಡೆದಿತ್ತು; ರಾಜರು ಅವನನ್ನು ಸುವಜ್ರ ಎನ್ನುತ್ತಿದ್ದರು. ಅವನು ಶಿವನ ವರದಿಂದಾಗಿ ಅಜೇಯನಾಗಿದ್ದ. ಅವನ ಮಗಳನ್ನೂ ಸಹ ದುರ್ಯೋಧನ ಬಲಾತ್ಕಾರದಿಂದ ಅಪಹರಿಸಿದ.

ವಿ: ಹೀಗೆ ಕಂಡಕಂಡಲ್ಲೆಲ್ಲಾ ಕನ್ಯೆಯರನ್ನು ಅಪಹರಿಸುವುದೂ ಸಹ ದುರ್ಯೋಧನನ ದುಶ್ಚಟಗಳಲ್ಲಿ ಒಂದು. ಮೊದಲ ಬಾರಿ ಹಾಗೆ ಮಾಡಲು ಬೇರೊಂದು ಕಾರಣವಿದ್ದರೆ, ಮುಂದೆ ಹಾಗೆ ಮಾಡಲು ಮೊದಲು ಹಾಗೆ ಮಾಡಿದ್ದೇ ಕಾರಣವಾಯಿತು ಎಂದು ತಿಳಿಯಬೇಕು. ಆಗ ಕರ್ಣ ತನ್ನನ್ನು ಕಾಪಾಡಿದ್ದಂತೆ ಈಗಲೂ ಕಾಪಾಡುವನು ಎಂಬ ಭ್ರಮೆ ಅದಕ್ಕೆ ಮತ್ತೊಂದು ಕಾರಣ.

ದುರ್ಯೋಧನಾದಿಗಳ ಪರಾಭವ - ಕರ್ಣನ ಪಲಾಯನ

ತತ್ರಾಥ ರುದ್ರವರತಃ ಸ ಜರಾಸುತೇನ
ಯುಕ್ತೋ ಬಬಂಧ ಚ ಸುಯೋಧನಮಾಶು ಜಿತ್ವಾ ।
ಕರ್ಣಃ ಪರಾದ್ರವದಿಹ ಸ್ಮ ಸುತೇಷು ಪಾಂಡೋ-
ರ್ಯಸ್ಮಾತ್ ಸ್ಪೃಧಾऽಗಮದತಃ ಸ ಪರಾಜಿತೋऽಭೂತ್ ॥ ೨೦೫ ॥

ಅ: ಅಲ್ಲಿ ಸುವಜ್ರ ರುದ್ರವರದಿಂದ, ಜರಾಸಂಧನ ಜೊತೆಗೂಡಿ ದುರ್ಯೋಧನನನ್ನು ಗೆದ್ದು ಸೆರೆಹಿಡಿದ. ಕರ್ಣ ಪಲಾಯನ ಮಾಡಿದ. ಅವನು ಹಾಗೆ ಸೋಲಲು ಈ ಬಾರಿ ಪಾಂಡವರ ಮೇಲಿನ ಸ್ಪರ್ಧೆಯಿಂದ ಕಾದತೊಡಗಿದ್ದೇ ಕಾರಣವಾಯಿತು.

ವಿ: ೧) ಈ ಬಾರಿ ದುರ್ಯೋಧನನ ಲೆಕ್ಕ ತಪ್ಪಾಯಿತು. ಅವನ ದುರ್ಬುದ್ಧಿಯನ್ನು ಮೊದಲೇ ಗಮನಿಸಿದ್ದ ಜರಾಸಂಧ ಅವನನ್ನು ಹಿಡಿಯುವ ವ್ಯೂಹ ರಚನೆಯನ್ನು ಮಾಡಿಕೊಂಡಿದ್ದ. ಸುವಜ್ರನಿಗೆ ಶಿವನ ವರವೂ ಇತ್ತು. ಅದರಿಂದಾಗಿ ದುರ್ಯೋಧನ ತನ್ನ ಎಲ್ಲ ತಮ್ಮಂದಿರೊಂದಿಗೂ ಸೋತು ಅವರ ಬಂದಿಯಾದ.

೨) ಈ ಬಾರಿ ಕರ್ಣ ಪಾಂಡವರ ಮೇಲಿನ ಸ್ಪರ್ಧೆಯಿಂದ ಕಾದಾಡಿದ್ದರಿಂದ ಪರಶುರಾಮರ ಶಾಪದಿಂದಾಗಿ ಪರಾಭವಗೊಂಡು ಪಲಾಯನ ಮಾಡಿದ. ಕರ್ಣನಿಗೆ ಅಲ್ಲಿ ಜಯಕ್ಕೆ ಪರಶುರಾಮರ ವರ ಕಾರಣವಾಗಿದ್ದರೆ, ಇಲ್ಲಿ ಪರಾಜಯಕ್ಕೆ ಅವರ ಶಾಪ ಕಾರಣವಾಯಿತು.

ಭೀಮನ ಅದ್ಭುತ ಪರಾಕ್ರಮ

ದುರ್ಯೋಧನೇऽನುಜಜನೈಃ ಸಹಿತೇ ಗೃಹೀತೇ
ಭೀಷ್ಮಾಂಬಿಕೇಯವಿದುರಾಗ್ರಜವಾಕ್ಯನುನ್ನಃ ।
ಭೀಮೋ ವಿಜಿತ್ಯ ನೃಪತೀನ್ ಸಜರಾಸುತಾಂಸ್ತಾನ್
ಹತ್ವಾ ಸುವಜ್ರಮಮುಚದ್ಧೃತರಾಷ್ಟ್ರಪುತ್ರಾನ್ ॥ ೨೦೬ ॥

ಅ: ದುರ್ಯೋಧನನು ಹಾಗೆ ತಮ್ಮಂದಿರೊಂದಿಗೆ ಕೂಡಿ ಸೆರೆಯಾದಾಗ ಭೀಷ್ಮ, ಧೃತರಾಷ್ಟ್ರ, ವಿದುರ ಹಾಗೂ ಅಣ್ಣನಾದ ಧರ್ಮರಾಜ ಇವರೆಲ್ಲರ ಮಾತಿನಿಂದ ಪ್ರೇರಿತನಾಗಿ ಭೀಮಸೇನ ಅಲ್ಲಿಗೆ ತೆರಳಿ, ಜರಾಸಂಧನ ಸಮೇತರಾದ ಎಲ್ಲ ರಾಜರನ್ನೂ ಸೋಲಿಸಿದ. ಸುವಜ್ರನನ್ನು ಕೊಂದು ಹಾಕಿದ; ಕೌರವರನ್ನು ಸೆರೆಯಿಂದ ಬಿಡುಗಡೆ ಮಾಡಿದ.

ವಿ: ೧) ಇದು ಭೀಮನ ಅದ್ಭುತ ಪರಾಕ್ರಮದ ಮತ್ತೊಂದು ನಿದರ್ಶನ. ಅವರೆಲ್ಲರಿಗೆ ಆಗದ್ದನ್ನು ಭೀಮ ಒಬ್ಬನೇ ಅನಾಯಾಸವಾಗಿ ಸಾಧಿಸಿದ. ಬ್ರಹ್ಮ ಶಿವಾದಿಗಳ ವರವಿದ್ದ ಅವರೆಲ್ಲರನ್ನೂ ಸಹ ಲೀಲಾಜಾಲವಾಗಿ ಸೋಲಿಸಿದ. ಸುವಜ್ರನನ್ನಂತೂ ಕೊಂದೇ ಹಾಕಿದ.

೨) ಭೀಮು ಹಾಗೆ ಕೌರವರಂತಹ ಪಾತಕಿಗಳನ್ನು ಬಿಡುಗಡೆ ಮಾಡಲು ಕಾರಣಗಳು ಅನೇಕ. ಮೊದಲನೆಯದು ಭೀಷ್ಮ ಮೊದಲಾದವರ ಪ್ರೀತಿಯ ಕೋರಿಕೆ, ಎರಡನೆಯದು ಅವರನ್ನು ಬಿಡಿಸುವ ಮೂಲಕ ಅವರಿಗೆ ಉಂಟು ಮಾಡಬಹುದಾದ ತೇಜೋವಧೆ, ಮೂರನೆಯದಾಗಿ

---

೨೦೬. ಅಮುಚದ್ಧೃತರಾಷ್ಟ್ರಪುತ್ರಾನಿತ್ಯತ್ರ ಅಮುಚತ್ = ಅಮೂಮುಚತ್ ಮೋಚಯಾಮಾಸೇತ್ಯರ್ಥಃ॥ – (ವಾ.)

೨೦೬. ನುನ್ನಃ ಪ್ರೇರಿತಃ। – (ಜ.)

ಅವರೆಲ್ಲ ಮುಖ್ಯವಾಗಿ ತನ್ನ ಬೇಟೆ. ಸಿಂಹ ತನ್ನ ಬೇಟೆಯನ್ನು ಇತರರಿಂದ ಪಾರು ಮಾಡಿ ತಾನು ಹೊಡೆಯುವಂತೆ ಕೌರವರನ್ನು ಅಲ್ಲಿಂದ ಬಿಡುಗಡೆ ಮಾಡಿ ತಾನು ಮುಂದೆ ಸಂಹರಿಸುವನು ಎಂದು ತಿಳಿಯಬೇಕು.

೩) ಭೀಮ ಹೀಗೆ ಕಳಿಂಗ ದೇಶದ ಸುವಜ್ರನನ್ನು ಸಂಹರಿಸಿದ್ದನ್ನು ಅರ್ಥಮಾಡಿಕೊಳ್ಳದ ಅವನ ಬಂಧುವರ್ಗದವರು ಭೀಮನ ಮೇಲೆ ದ್ವೇಷಭಾವನೆಯನ್ನು ತಳೆದು ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನನ ಪಕ್ಷವಹಿಸಿ ಭೀಮನಿಂದ ಹತರಾಗುವರು (೨೬/೨೨೨). ಕನ್ಯೆಯನ್ನು ಅಪಹರಿಸಿ ಅವರಿಗೆ ಅನ್ಯಾಯ ಮಾಡಿದ್ದು ದುರ್ಯೋಧನನಾದರೂ ಅವರು ಭೀಮನ ಮೇಲೆ ವೈರ ಸಾಧಿಸಹೊರಟಿದ್ದು ಅವರ ತಾಮಸಸ್ವರೂಪಕ್ಕೆ ದ್ಯೋತಕ ಎಂದು ತಿಳಿಯಬೇಕು.

ಇಂದ್ರಪ್ರಸ್ಥಕ್ಕೆ ಪಾಂಡವರು

ತೇऽಪಿ ಸ್ಮ ಕರ್ಣಸಹಿತಾ ಮೃತಕಪ್ರತೀಕಾ
ನಾಗಾಹ್ವಯಂ ಪುರಮಥಾಯಯುರಪ್ಯಮೀಷಾಮ್ ।
ದೃಷ್ಟ್ವಾವಿರೋಧಮವದನ್ನೃಪತಿಶ್ಚ ಧರ್ಮ-
ಪುತ್ರಂ ಪುರಂದರಕೃತಸ್ಥಲಮಾಶು ಯಾಹಿ ॥ ೨೦೭ ॥

ಅ: ಅವರೆಲ್ಲರೂ ಕರ್ಣನೊಂದಿಗೆ ಪ್ರೇತಗಳಂತೆ ಹಸ್ತಿನಾಪುರಕ್ಕೆ ಮರಳಿದರು. ಅವರಲ್ಲಿ ವೈರ ಉಂಟಾಗಿರುವುದನ್ನು ಗಮನಿಸಿ ಧೃತರಾಷ್ಟ್ರ ಧರ್ಮರಾಜನಿಗೆ ನುಡಿದ: ''ನೀನು ಇಂದ್ರಪ್ರಸ್ಥಕ್ಕೆ ಬೇಗನೆ ತೆರಳು''.

ವಿ: ೧) ಭೀಮನಿಂದ ಸೆರೆಯಿಂದ ಬಿಡುಗಡೆಹೊಂದಿದ ಕೌರವರು, ಹಸ್ತಿನಾಪುರಕ್ಕೆ ತೆರಳಲು, ಪಲಾಯನ ಮಾಡಿದ ಕರ್ಣನೂ ಅವರೊಡನೆ ಸೇರಿಕೊಂಡ ಕೌರವರು ಭೀಮನಿಂದ ಹಾಗೆ ರಕ್ಷಿತರಾದರೂ ಅದರ ಬಗ್ಗೆ ಕೃತಜ್ಞತಾ ಭಾವವನ್ನು ತಳೆಯುವ ಬದಲು ಕೃತಘ್ನರಾಗಿ ಇನ್ನೂ ಹೆಚ್ಚಿನ ದ್ವೇಷಭಾವನೆಯನ್ನೇ ಹೊಂದಿದರು.

೨) ಅಸುರರದು ನಿಷ್ಕಾರಣ ದ್ವೇಷವೆನ್ನಲು ಇದು ಇನ್ನೊಂದು ನಿದರ್ಶನ. ಅವರಿಗೆ ಸ್ನೇಹ ತೋರಲು ಒಳ್ಳೆಯ ಕಾರಣವೊದಗಿದ್ದರೂ ಅದರ ಬದಲಾಗಿ ದ್ವೇಷವನ್ನೇ ಹೆಚ್ಚಿಸಿಕೊಂಡಿದ್ದು ಕೃತಘ್ನತೆಯ ಪರಾಕಾಷ್ಠೆ. ಬೇವಿಗೆ ಜೇನೆರೆದರೂ ಅದರ ಕಹಿ ಹಾಗೆ ಉಳಿಯುವುದಲ್ಲವೇ? ಕೃತಘ್ನತೆಗೆ ಸಮನಾದ ಮತ್ತೊಂದು ಪಾತಕವಿಲ್ಲ ಎಂದೇ ಶಾಸ್ತ್ರವಚನ – 'ಕೃತಘ್ನೇ ನಾಸ್ತಿ ನಿಷ್ಕೃತಿಃ'. ಇದನ್ನು ಗಮನಿಸಿದ ಧೃತರಾಷ್ಟ್ರ ಅವರೆಲ್ಲಾ ಒಟ್ಟಾಗಿರುವುದು ಅಸಾಧ್ಯ ಎಂದು ಮನಗಂಡು ಪಾಂಡವರಿಗೆ ಅರ್ಧರಾಜ್ಯ ನೀಡಿ ಇಂದ್ರಪ್ರಸ್ಥಕ್ಕೆ ಕಳುಹಿಸಲು ತೀರ್ಮಾನಿಸಿದ.

೩) ಇಂದ್ರಪ್ರಸ್ಥಕ್ಕೆ ಆ ಹೆಸರು ಬರಲು ಕಾರಣ ಅದು ಇಂದ್ರ ದೇವರಿಗಾಗಿ ವಿಶ್ವಕರ್ಮನ ಮೂಲಕ ಶ್ರೀಹರಿಯಿರದ ನಿರ್ಮಿತವಾದ ಸ್ಥಳ. ಖಾಂಡವಪ್ರಸ್ಥ ಎಂಬುದು ಅದರ ನಾಮಾಂತರ. ಅದು ಒಂದು ಕಾಲಕ್ಕೆ ಚಂದ್ರವಂಶದವರ ರಾಜಧಾನಿಯಾಗಿತ್ತು ಎಂಬ ಉಲ್ಲೇಖವೂ ಇದೆ.

ತತ್ರಾರ್ಧರಾಜ್ಯಮನುಭುಂಕ್ಷ್ವ ಸಹಾನುಜೈಸ್ತ್ವಂ
ಕೋಶಾರ್ಧಮೇವ ಹಿ ಗೃಹಾಣ ಪುರಾ ಹಿ ಶಕ್ರಃ ।
ತತ್ರಾಭಿಷಿಕ್ತ ಉತ ಕಂಜಭವಾದಿದೇವೈ-
ಸ್ತತ್ರಸ್ಥ ಏವ ಸ ಚಕಾರ ಚಿರಂ ಚ ರಾಜ್ಯಮ್ ॥ ೨೦೮ ॥

ಅ: ಅಲ್ಲಿ ನೀನು ನಿನ್ನ ಸಹೋದರರೊಂದಿಗೆ ಅರ್ಧರಾಜ್ಯವನ್ನು ಆಳು, ಅರ್ಧಭಾಗ ಕೋಶವನ್ನು ಸ್ವೀಕರಿಸು. ಹಿಂದೆ ಅಲ್ಲಿ ಇಂದ್ರ ಬ್ರಹ್ಮಾದಿಗಳಿಂದ ಅಭಿಷಿಕ್ತನಾಗಿ ಚಿರಕಾಲ ರಾಜ್ಯವಾಳಿದ್ದ.

ವಿ: ಇಂದ್ರಪ್ರಸ್ಥವನ್ನು ಪಾಂಡವರಿಗೆ ಕೊಡಲು ಅದು ದೇವತೆಗಳ ರಾಜನಾದ ಇಂದ್ರ ಆಳಿದ ಸ್ಥಳ ಎಂಬ ಕಾರಣವನ್ನು ಧೃತರಾಷ್ಟ್ರ ಇಲ್ಲಿ ತಿಳಿಸುತ್ತಾನೆ. ಅದು ಒಂದು ಕಾಲಕ್ಕೆ ಹಾಗಿದ್ದರೂ, ಆ ಕಾಲದಲ್ಲಿ ಮಾತ್ರ ಬಂಜರು ಭೂಮಿಯಂತಾಗಿದ್ದ ಶುಷ್ಕಪ್ರದೇಶ.

ಯುಧಿಷ್ಠಿರ ಪಟ್ಟಾಭಿಷೇಕದ ವೈಭವ

ತ್ವಂ ವೀರ ಶಕ್ರಸಮ ಏವ ತತಸ್ತವೈವ
ಯೋಗ್ಯಂ ಪುರಂ ತದತ ಆಶ್ವಭಿಷೇಚಯಾಮಿ ।
ಇತ್ಯುಕ್ತ ಆಹ ಸ ಯುಧಿಷ್ಠಿರ ಓಮಿತಿ ಸ್ಮ
ಚಕ್ರೇಽಭಿಷೇಕಮಪಿ ತಸ್ಯ ಸ ಆಂಬಿಕೇಯಃ ॥ ೨೦೯ ॥

ಅ: ವೀರನೇ, ನೀನು ಇಂದ್ರನಿಗೆ ಸಮನಾದವನೇ ಆಗಿರುವಿ. ಆದ್ದರಿಂದ ಅದು ನಿನಗೆ ಯೋಗ್ಯವಾದ ಪಟ್ಟಣ. ನಿನಗೆ ಬೇಗನೆ ಪಟ್ಟಾಭಿಷೇಕ ಮಾಡುವೆ''. ಧೃತರಾಷ್ಟ್ರ ಹೀಗೆನ್ನಲು ಯುಧಿಷ್ಠಿರ ''ಆಗಲಿ'' ಎಂದ. ಅವನಿಗೆ ಧೃತರಾಷ್ಟ್ರ ಪಟ್ಟಾಭಿಷೇಕವನ್ನು ಮಾಡಿದನು.

ವಿ: ೧) ಇಂದ್ರನಾಳಿದ ಪಟ್ಟಣದಲ್ಲಿ ಇಂದ್ರ ಸಮನಾದ ನೀನು ಆಳುವುದು ಉಚಿತ ಎಂಬುದು ಮತ್ತೊಂದು ಬಗೆಯ ಪ್ರಲೋಭನೆ.

೨) ಯವಮಾಂಶನಾದ ಧರ್ಮರಾಜ ಒಮ್ಮೆ ಸತ್ಯಜಿತ್ ಎಂಬ ಹೆಸರಿನಿಂದ ಇಂದ್ರಪದವಿಯಲ್ಲಿ ಇದ್ದದ್ದರಿಂದ ಆ ಅರ್ಥದಲ್ಲಿ ಅವನು ಇಂದ್ರಸಮ ಎಂಬುದು ಉಚಿತವಾಗುವ ಮಾತು.

ವ್ಯಾಸರಿಂದ ಪಟ್ಟಾಭಿಷೇಕ

ತಸ್ಯಾಭಿಷೇಕಮಕರೋತ್ ಪ್ರಥಮಂ ಸ ಕೃಷ್ಣೋ
ವಾಸಿಷ್ಠನಂದನ ಉರುರ್ಭವ ಚಕ್ರವರ್ತೀ ।
ಯಷ್ಟಾಽಶ್ವಮೇಧನಿಖಿಲಾತ್ಮಕರಾಜಸೂಯ-
ಪೂರ್ವೈರ್ಮಖೈಃ ಸತತಮೇವ ಚ ಧರ್ಮಶೀಲಃ ॥ ೨೧೦ ॥

ಅ: ಧರ್ಮರಾಜನಿಗೆ ಮೊದಲು ಅಭಿಷೇಕ ಮಾಡಿದ್ದು ವಾಸಿಷ್ಠಕೃಷ್ಣ ಶ್ರೀವೇದವ್ಯಾಸರು; 'ನೀನು ದೊಡ್ಡ ಚಕ್ರವರ್ತಿಯಾಗು; ಅಶ್ವಮೇಧ ಮೊದಲಾದವುಗಳಿಂದ ಕೂಡಿದ

---

೨೧೦. ಅಶ್ವಮೇಧನಿಖಿಲಾತ್ಮಕರಾಜಸೂಯಪೂರ್ವೈರಿತ್ಯತ್ರ ಅಶ್ವಮೇಧಸ್ಯ ನಿಖಿಲಃ ಆತ್ಮಾ ಸ್ವರೂಪಂ ಸ್ವಭಾವೋ ವಾ। ರಾಜಸೂಯೋಽಷ್ಯಶ್ವಹೋಮರೂಪತ್ವಾದಶ್ವಮೇಧ ಏವ ರಾಜ್ಞಾಂ ವಿಜಯರೂಪನಿಷೂದನಾನಂತರಂ ಕ್ರಿಯಮಾಣತ್ವಾದ್ರಾಜ್ಞಾಂ ವಿಜಯೇನಾರ್ಜಿತಧನೈಃ ಪ್ರಸೂಯಮಾನತ್ವಾದ್ವಾ ರಾಜಸೂಯ ಇತ್ಯುಚ್ಯತೇ। ಅತ ಏವ ''ರಾಜಸೂಯಾಶ್ವಮೇಧೇ'' ಇತಿ ಪ್ರಾಚಾಂ ಪ್ರಯೋಗಃ ॥ – (ವಾ.)

೨೧೦. ಅಶ್ವಮೇಧಶ್ಚ ನಿಖಿಲಾತ್ಮಕರಾಜಸೂಯಶ್ಚ ಸರ್ವಯಜ್ಞಾತ್ಮಕೋ ರಾಜಸೂಯಸ್ತತ್ಪೂರ್ವೈರ್ಮಖೈಃ ಯಷ್ಟಾ। – (ಜ.)

೨೧೦. ಅಶ್ವಮೇಧೋ ನಿಖಿಲಾತ್ಮಕಃ ಸರ್ವಯಜ್ಞಾತ್ಮಕೋ ರಾಜಸೂಯಶ್ಚಪೂರ್ವೋ ಯೇಷಾಂ ತೈರ್ಮಖೈಃ। – (ವ.)

೨೧೦. ಅಶ್ವಮೇಧಾನಾಂ ಯನ್ನಿಖಿಲಂ ಸಾಕಲ್ಯಂ ತದಾತ್ಮಕ ರಾಜಸೂಯಪೂರ್ವೈರಿತ್ಯರ್ಥಃ। ಅಶ್ವಮೇಧಶ್ಚ ನಿಖಿಲ ಯಜ್ಞಾತ್ಮಕೋ ರಾಜಸೂಯಶ್ಚತತ್ಪೂರ್ವಕೈರ್ಮಖೈರಿತಿ ವಾ। – (ತಾ.)

೨೧೦. ಜಿತ್ವಾ ತು ಪೃಥಿವೀಂ ಕೃತ್ಸ್ನಾಂ ವಶೇ ಕೃತ್ವಾ ನರರ್ಷಭಾನ್ ।
ರಾಜಸೂಯಾದಿಭಿರ್ಯಜ್ಞೈಃ ಕ್ರತುಭಿರ್ಭೂರಿದಕ್ಷಿಣೈಃ ॥
ಸ್ನಾತ್ವಾ ಹ್ಯವಭೃಥಸ್ನಾನಂ ಮೋದತಾಂ ಬಾಂಧವೈಃ ಸಹ ।
ಏವಮುಕ್ತ್ವಾ ತು ತೇ ಸರ್ವೇ ಆಶೀರ್ಭಿರಭಿಪೂಜಯನ್ । – ಭಾರತ (ಆದಿ. ೨೦೬/೨೫,೨೬)

ಕೃಪೋ ದ್ರೋಣಶ್ಚ ಭೀಷ್ಮಶ್ಚ ಧೌಮ್ಯಶ್ಚ ವ್ಯಾಸಕೇಶವೌ ॥
ಬಾಹ್ಲೀಕಃ ಸೋಮದತ್ತಶ್ಚ ಚಾತುರ್ವೇದ್ಯಪುರಸ್ಕೃತಾಃ ॥
ಅಭಿಷೇಕಂ ತದಾ ಚಕ್ರುಃ ಭದ್ರಪೀಠೇ ಸುಸಂಮತಮ್ ॥ – ಭಾರತ (ಆದಿ. ೨೦೬/೨೪)

೨೧೦. ವಾಯುಸ್ತುತಿ (ಶ್ಲೋ. ೨೩)

ರಾಜಸೂಯ ಮೊದಲಾದ ಯಜ್ಞಗಳಿಂದ ಸತತವೂ ಯಜ್ಞಗಳನ್ನು ಮಾಡುವವನಾಗು; ಸದಾ ಧರ್ಮಶೀಲನಾಗು'.

ವಿ: ೧) ಅಶ್ವಮೇಧವನ್ನು ಅದರಿಂದ ಕೂಡಿದ ರಾಜಸೂಯಾದಿ ಇತರ ಸಕಲ ಯಾಗಗಳನ್ನೂ ಮಾಡು ಎಂಬುದು ಶ್ರೀವ್ಯಾಸರ ಆಶೀರ್ವಚನ. ಋಷಿಗಳ ಮಾತೇ ಸತ್ಯವಾಗುವುದು ಕಂಡಿದೆ. 'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋऽನುಧಾವತಿ'. ಅವರಂತೂ ಸಾಕ್ಷಾತ್ ನಾರಾಯಣ. ಮುಂದೆ ಪಾಂಡವರು ಅಂತಹ ಯಾಗಗಳನ್ನೆಲ್ಲ ಮಾಡಿ ಜಗದ್ವಿಖ್ಯಾತರಾದದ್ದು ಪ್ರಸಿದ್ಧವೇ ಇದೆ. ಶ್ರೀವ್ಯಾಸರು ಈ ಅರ್ಥದಲ್ಲೂ ಸಾಕ್ಷಾತ್ ಭಗವಂತ ಎಂಬುದು ಸಿದ್ಧವಾಗುವುದು. ಶುಭ ಸಂದರ್ಭಗಳಲ್ಲಿ ಜ್ಞಾನಿಗಳು ಮಾಡುವ ಅಂತಹ ಆಶೀರ್ವಚನ ಯಥೋಚಿತವಾಗಿ ಸತ್ಯವಾಗುವವು ಎಂಬುದಕ್ಕೂ ಇದು ದ್ಯೋತಕ.

ಶ್ರೀಕೃಷ್ಣನಿಂದ ಪಟ್ಟಾಭಿಷೇಕ

ಇತ್ಯೇವ ಪಾರ್ಷತಸುತಾಸಹಿತೇऽಭಿಷಿಕ್ತೇ
ಕೃಷ್ಣೋऽಪಿ ವೃಷ್ಣಿವೃಷಭಃ ಸ ತಥಾऽಭ್ಯಷಿಂಚತ್ ।
ಏವಂ ಚ ಮಾರುತಿಶಿರಸ್ಯಭಿಷೇಕಮೇತೌ
ಸಂಚಕ್ರತುಃ ಸ್ಮ ಯುವರಾಜಪದೇ ಸಭಾರ್ಯಮ್ ॥ ೨೧೧ ॥

ಅ: ಹೀಗೆ ದ್ರೌಪದಿಸಮೇತನಾಗಿ ಧರ್ಮರಾಜ ಪಟ್ಟಾಭಿಷಿಕ್ತನಾದ ಮೇಲೆ ಯಾದವಕೃಷ್ಣನಾದ ಶ್ರೀಹರಿಯೂ ಸಹ ಹಾಗೆಯೇ ಅಭಿಷೇಕ ಮಾಡಿದ. ಅದರಂತೆ ಪತ್ನೀಸಮೇತನಾದ ಭೀಮಸೇನನ ಶಿರಸ್ಸಿನ ಮೇಲೂ ಅವರಿಬ್ಬರೂ ಅವನನ್ನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡಿದರು.

ವಿ: ೧) ಧರ್ಮರಾಜನನ್ನು ಮಹಾರಾಜನನ್ನಾಗಿಯೂ, ದ್ರೌಪದಿಯನ್ನು ಮಹಾರಾಣಿಯನ್ನಾಗಿಯೂ ಶ್ರೀವ್ಯಾಸರು ಅಭಿಷೇಕಿಸಿದ ಮೇಲೆ ಶ್ರೀಕೃಷ್ಣನೂ ಅವರಿಬ್ಬರನ್ನೂ ಹಾಗೆಯೇ ಅಭಿಷೇಕಿಸಿದನು. ಬಳಿಕ ಅವರಿಬ್ಬರೂ ಭೀಮ, ದ್ರೌಪದಿಯರನ್ನೂ ಯುವರಾಜ, ಯುವರಾಣಿಯರನ್ನಾಗಿಯೂ ಅಭಿಷೇಕಿಸಿದರು ಎಂದರ್ಥ.

೨) ವಿಪ್ರರೂಪವಾದ್ದರಿಂದಲೂ, ಕೃಷ್ಣಾವತಾರಕ್ಕಿಂತ ಮುಂಚಿನ ಅತಾರವಾದ್ದರಿಂದಲೂ ಶ್ರೀವ್ಯಾಸರೂಪದಿಂದ ಮೊದಲು ಅಭಿಷೇಕ ಮಾಡಿ, ಅನಂತರ ಶ್ರೀಕೃಷ್ಣ ರೂಪದಿಂದ

---

೨೧೧. ಯುವರಾಜಪದ ಇತ್ಯಸ್ಯ ಯುವರಾಜಾಧಿಪತ್ಯಕರಣಾರ್ಥಮಿತ್ಯರ್ಥಃ। – (ಸ.)

ಅಭಿಷೇಕಿಸಿದ ಎಂದರ್ಥ. ಪರಮಾತ್ಮನ ರೂಪರೂಪಗಳಿಗೆ ಎಷ್ಟು ಮಾತ್ರಕ್ಕೂ ವ್ಯತ್ಯಾಸವಿಲ್ಲ– ವಾದರೂ, ಲೋಕ ಶಿಕ್ಷಣಕ್ಕೆಂದು ಇಂತಹ ವರ್ತನೆ ಎಂದು ತಿಳಿಯಬೇಕು. ಏಕಕಾಲದಲ್ಲಿ ಮಹಾರಾಣಿ ಹಾಗೂ ಯುವರಾಣಿಯಾಗಿ ಅಭಿಷಿಕ್ತಳಾದದ್ದು ದ್ರೌಪದೀದೇವಿಯ ಅಸಾಮಾನ್ಯ ವೈಶಿಷ್ಟ್ಯಗಳಲ್ಲಿ ಒಂದು ಎಂದೂ ತಿಳಿಯಬೇಕು.

ಯುವರಾಜನಾಗಿ ಭೀಮ

ಭೀಮೇ ಚ ಪಾರ್ಷತಸುತಾಸಹಿತೇऽಭಿಷಿಕ್ತೇ
ತಾಭ್ಯಾಮನಂತಸುಖಶಕ್ತಿಚಿದಾತ್ಮಕಾಭ್ಯಾಮ್ ।
ಅನ್ಯೈಶ್ಚ ವಿಪ್ರವೃಷಭೈಃ ಸುಕೃತೇऽಭಿಷೇಕೇ
ಧರ್ಮಾತ್ಮಜಾನು ಮುಮುದುರ್ನಿಖಿಲಾಶ್ಚ ಸಂತಃ ॥ ೨೧೨ ॥

ಅ: ಧರ್ಮರಾಜನ ಅನಂತರ ದ್ರೌಪದಿಯೊಂದಿಗೆ ಭೀಮನೂ ಹಾಗೆ ಅನಂತ ಸುಖ, ಶಕ್ತಿ, ಜ್ಞಾನ ಮೂರ್ತಿಗಳಾದ ಶ್ರೀವ್ಯಾಸಕೃಷ್ಣರಿಂದ ಅಭಿಷೇಕಿಸಲ್ಪಟ್ಟ ಬಳಿಕ ಅವರಿಗೆ ಇತರ ವಿಪ್ರೋತ್ತಮರಿಂದಲೂ ಅಭಿಷೇಕ ನಡೆಯಿತು. ಸಕಲ ಸಜ್ಜನರೂ ಹರ್ಷಿಸಿದರು.

ವಿ: ಮುಂದೆ ಕೃಪ, ದ್ರೋಣ, ಭೀಷ್ಮ, ಧೌಮ್ಯ, ಬಾಹ್ಲೀಕ, ಸೋಮದತ್ತ ಮೊದಲಾದ ಗುರುಗಳೂ, ಹಿರಿಯರೂ ಅವರಿಗೆ ಅಭಿಷೇಕ ಮಾಡಿದರು ಎಂದು ಮಹಾಭಾರತದಲ್ಲಿದೆ.

ಕೃಪೋ ದ್ರೋಣಶ್ಚ ಭೀಷ್ಮಶ್ಚ ಧೌಮ್ಯಶ್ಚ ವ್ಯಾಸಕೇಶವೌ ।
ಬಾಹ್ಲೀಕಃ ಸೋಮದತ್ತಶ್ಚ ಚಾತುರ್ವೇದ್ಯಪುರಸ್ಕೃತಾಃ ।
ಅಭಿಷೇಕಂ ತದಾ ಚಕ್ರುರ್ಭದ್ರಪೀಠೇ ಸುಸಂಯತಮ್ ॥ – (ಆದಿ.೨೦೬/೨೬)

ಇಂದ್ರಪ್ರಸ್ಥಕ್ಕೆ ಪಾಂಡವರ ಪಯಣ

ತಸ್ಮಿನ್ ಮಹೋತ್ಸವವರೇ ದಿನಸಪ್ತಕಾನು-
ವೃತ್ತೇ ವಸಿಷ್ಠವೃಷಭೇಣ ಚ ವೃಷ್ಣಿಪೇನ ।
ಕೃಷ್ಣೇನ ತೇ ಯಯುರಮಾ ಪೃಥಯಾ ತಯಾ ಚ
ಪಾಂಚಾಲರಾಜಸುತಯಾ ಸ್ಥಲಮಿಂದ್ರವಾಸಮ್ ॥ ೨೧೩ ॥

---

೨೧೨. ಅನ್ಯೈಶ್ಚ ವಿಪ್ರವೃಷಭೈರಿತ್ಯತ್ರ ಅನ್ಯೈಃ ವಿಪ್ರವೃಷಭೈಶ್ಚ। ಧರ್ಮಾತ್ಮಜಾನು= ಧರ್ಮಾತ್ಮಜಾಭಿಷೇಕಾನಂತರಂ ಅಭಿಷೇಕೇ= ಭೀಮಸ್ಯಾಭಿಷೇಕೇ ಸುಕೃತೇ= ಸುಷ್ಠು ಕೃತೇ ಸತೀತ್ಯರ್ಥಃ ॥ – (ವಾ.)

ಅ: ಆ ಶ್ರೇಷ್ಠ ಮಹೋತ್ಸವ ಸತತ ಏಳು ದಿನಗಳ ಕಾಲ ನಡೆಯಿತು. ಬಳಿಕ ವಾಸಿಷ್ಠಕೃಷ್ಣ ಹಾಗೂ ಯಾದವಕೃಷ್ಣರೊಂದಿಗೆ ಕೂಡಿ ಕುಂತಿಯೊಂದಿಗೂ, ದ್ರೌಪದಿಯೊಂದಿಗೂ ಪಾಂಡವರು ಇಂದ್ರಪ್ರಸ್ಥಕ್ಕೆ ತೆರಳಿದರು.

ವಿ: ಅದು ಏಳು ದಿವಸಗಳ ಕಾಲ ನಡೆದ ಉತ್ಸವ. ಸಾಮಾನ್ಯವಾಗಿ ದೇವತಾ ಪ್ರತಿಷ್ಠಾದಿ ಮಹೋತ್ಸವಗಳೂ ಸಹ ಹೀಗೆ ಏಳು ದಿವಸಗಳು ನಡೆಯುವುದೇ ವಿಹಿತ ಎಂಬ ಮಾತು ತಂತ್ರಸಾರಸಂಗ್ರಹದಲ್ಲಿದೆ. ಶ್ರೀಮದ್ಭಾಗವತಸಪ್ತಾಹವೂ ಈ ಹಿನ್ನೆಲೆಯಲ್ಲೇ ನಡೆದ ಮಹೋತ್ಸವ ಎಂದು ಭಾವಿಸಬಹುದು.

ಪಾಂಡವರ ಹಿಂದೆ ಪುರಜನರು

ಕೋಶಸ್ಯ ಚಾರ್ಧಸಹಿತಾಸ್ತು ಯದೈವ ಪಾರ್ಥಾ
ಗಚ್ಛಂತಿ ತಾನನುಯಯುರ್ನಿಖಿಲಾಶ್ಚ ಪೌರಾಃ ।
ಊಚುಶ್ಚ ಹಾ ಬತ ಸುಯೋಧನ ಏಷ ಪಾಪೋ
ದೂರೇ ಚಕಾರ ನನು ಪಾಂಡುಸುತಾನ್ ಗುಣಾಢ್ಯಾನ್ ॥ ೨೧೪ ॥

ಅ: ಕೋಶದ ಅರ್ಧಭಾಗದೊಂದಿಗೆ ಪಾಂಡವರು ಇಂದ್ರಪ್ರಸ್ಥಕ್ಕೆ ತೆರಳಲು ಸಕಲ ಪಟ್ಟಣಿಗರು ಅವರ ಹಿಂದೆ ತಾವೂ ತೆರಳಲು ಸಿದ್ಧರಾದರು. 'ಅಯ್ಯೋ! ಪಾಪಿಯಾದ ಈ ದುರ್ಯೋಧನ ಗುಣವಂತರಾದ ಪಾಂಡವರನ್ನು ದೂರ ಮಾಡಿದ' ಎಂದರು.

ವಿ: ಪಾಂಡವರನ್ನು ಹಾಗೆ ಕಳುಹಿಸಿದ್ದು ಅವರನ್ನು ತಮ್ಮಿಂದ ದೂರಮಾಡುವ ತಂತ್ರ ಎಂದು ನಗರವಾಸಿಗಳು ನಿಂದಿಸಿದರು ಎಂದರ್ಥ.

ಭೀಮಪ್ರತಾಪಮವಲಂಬ್ಯ ಕಳಿಂಗಬಂಧಾ-
ನ್ಮುಕ್ತಃ ಸುತಾಮಪಿ ಹಿ ತಸ್ಯ ಪುರಂ ನಿನಾಯ ।
ದ್ವೇಷ್ಟ್ಯೇವಮಪ್ಯತಿಬಲಾನ್ ಹಿ ಸದೈವ ಪಾರ್ಥಾನ್
ಯಾಮೋ ವಯಂ ಗುಣಭರದ್ಯ ಸಹೈವ ಪಾರ್ಥೈಃ ॥ ೨೧೫ ॥

ಅ: 'ಭೀಮನ ಬಲವನ್ನು ಅವಲಂಬಿಸಿ ಕಲಿಂಗನ ಸೆರೆಯಿಂದ ಬಿಡುಗಡೆಯಾದ ಇವನು ಅವನ ಮಗಳನ್ನೂ ಪಟ್ಟಣಕ್ಕೆ ತಂದ. ಹೀಗಿದ್ದರೂ ಇವನು ಅತ್ಯಂತ ಬಲಶಾಲಿಗಳಾದ

---

೨೧೪. ನನು ಹಾ ಖೇದೇ ಬತ ಆಶ್ಚರ್ಯೇ । – (ಜ.)

ಪಾಂಡವರನ್ನು ಸದಾ ದ್ವೇಷಿಸುತ್ತಲೇ ಇರುವನು. ನಾವಿಂದು ಗುಣವಂತರಾದ ಪಾಂಡವರೊಂದಿಗೆ ತೆರಳೋಣ'.

ವಿ: ಅವರೆಲ್ಲ ದುರ್ಯೋಧನನ ಕೃತಘ್ನತೆಯನ್ನು ಅರಿತು ನಿಂದಿಸಿದರು. ಅಂತಹ ಅಯೋಗ್ಯನೊಂದಿಗೆ ಬಾಳಬಯಸದೆ ಪಾಂಡವರೊಂದಿಗೆ ತೆರಳುವುದು ಅವರ ನಿಶ್ಚಯವಾಗಿತ್ತು.

ಪುರಜನರಿಗೆ ದುರ್ಯೋಧನನ ಬೆದರಿಕೆ

ಆಜ್ಞಾಪಯತ್ಯಪಿ ಸಭೇರಿರವೇಣ ಪಾರ್ಥಾನ್
ನೈವಾನುಗಚ್ಛತ ಯದಿ ವ್ರಜಥಾನು ವೋಽದ್ಯ ।
ವಿತ್ತಂ ಹರಿಷ್ಯ ಇಹ ಸರ್ವಮಪೀತಿ ತಚ್ಚ
ಪಾಪಃ ಕರೋತು ನ ವಯಂ ವಿಜಹಾಮ ಪಾರ್ಥಾನ್ ॥ ೨೧೬ ॥

ಅ: ದುರ್ಯೋಧನ ಭೇರಿಘೋಷದ ಮೂಲಕ 'ಪಾಂಡವರನ್ನು ಹಿಂಬಾಲಿಸದಿರಿ, ನೀವು ಹಾಗೆ ತೆರಳಿದರೆ ನಿಮ್ಮ ಇಲ್ಲಿನ ಸಂಪತ್ತನ್ನೆಲ್ಲ ಕಿತ್ತುಕೊಳ್ಳುವೆನು' ಎಂದು ಆದೇಶ ನೀಡಿದರೂ 'ಪಾಪಿಯಾದ ಇವನು ಹಾಗೆಯೇ ಮಾಡಿಕೊಳ್ಳಲಿ, ನಾವು ಪಾಂಡವರನ್ನು ಬಿಡಲಾರೆವು' ಎಂದು ನಡೆದೇಬಿಟ್ಟರು.

ವಿ: ದುರ್ಯೋಧನನ ಬೆದರಿಕೆಯ ತಂತ್ರವೂ ವ್ಯರ್ಥವಾಯಿತು ಎಂದರ್ಥ. ಜನರನ್ನು ಪ್ರೀತಿ ವಿಶ್ವಾಸದಿಂದ ಗೆಲ್ಲುವಲ್ಲಿ ನಿಜವಾದ ಯಶಸ್ಸಿದೆ. ಒತ್ತಡ ತಂತ್ರ ಎಂದೂ ಮಾರಕ ಎಂಬುದಕ್ಕೆ ಇದೊಂದು ನಿದರ್ಶನ.

ಪುರಜನರ ದೃಢನಿಶ್ಚಯ

ಸದ್ಭಿರ್ಹಿ ಸಂಗತಿರಿಹೈವ ಸುಖೈಕಹೇತು-
ರ್ಮೋಕ್ಷೈಕಹೇತುರುತ ತದ್ವಿಪರೀತಮನ್ಯತ್ ।
ತಸ್ಮಾತ್ತ್ಯಜೇಮ ಸಹ ಪಾಂಡುಸುತೈರ್ಹಿ ಶಕ್ರ-
ಪ್ರಸ್ಥಂ ತ್ವಿತಿ ಸ್ಮ ಧೃತಚೇತಸ ಆಹ ಧರ್ಮಃ ॥ ೨೧೭ ॥

---

೨೧೬. ಆಜ್ಞಾಪಯತ್ಯಪಿ ಸಭೇರಿರವೇಣೇತ್ಯತ್ರ ಸಭೇರಿರವೇಣ= ಭೇರಿರವಸಹಿತೇನ ದೂತೇನ ಆಜ್ಞಾಪಯತಿ ಸತ್ಯಪೀತ್ಯಪಿಪದಸಂಬಂಧಃ ॥ –(ವಾ.)

ಅ: 'ಸಜ್ಜನರೊಂದಿಗೆ ಜೊತೆಯಿರುವುದು ಇಹದಲ್ಲಿ ಸುಖಕ್ಕೆ ಮುಖ್ಯ ಸಾಧನ, ಬಳಿಕ ಮೋಕ್ಷಕ್ಕೂ ಮುಖ್ಯ ಸಾಧನ. ದುರ್ಜನರ ಸಂಗ ಅದಕ್ಕೆ ವಿರುದ್ಧವಾಗಿ ಇಹಪರಗಳೆರಡರಲ್ಲೂ ದುಃಖಕ್ಕೇ ಸಾಧನ. ಆದ್ದರಿಂದ ನಾವು ಪಾಂಡವರೊಂದಿಗೆ ಇಂದ್ರಪ್ರಸ್ಥಕ್ಕೇ ತೆರಳೋಣ' ಎಂದು ಗಟ್ಟಿಮನಸ್ಸು ಮಾಡಿದ್ದ ಆ ಜನರಿಗೆ ಧರ್ಮರಾಜ ವಿಜ್ಞಾಪಿಸಿಕೊಂಡ.

ವಿ: ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳುವುದರಿಂದ ಆಗುವ ನಷ್ಟ ಅತ್ಯಲ್ಪ, ಆದರೆ ಪಾಂಡವರ ಸಹವಾಸ ತಪ್ಪಿಸಿಕೊಳ್ಳುವುದು ಮಹಾ ಅನರ್ಥಕರ. ಸಜ್ಜನರ ಸಂಗ ಇಹಪರಗಳಲ್ಲಿ ಸರ್ವರೀತಿಯ ಸುಖಸಮೃದ್ಧಿಗೂ ಸಾಧನ. ದುರ್ಜನ ಸಂಗ ದುಃಖಕ್ಕೇ ಸಾಧನ. ಆದ್ದರಿಂದ ತಾವೆಲ್ಲಾ ಪಾಂಡವರೊಂದಿಗೇ ತೆರಳುವುದು ಎಂದು ಅವರು ನಿಶ್ಚಯಿಸಿಬಿಟ್ಟರು. ಹೀಗೆ ಲೌಕಿಕ ಸಂಪತ್ತಿನ ವಿನಾಶಕ್ಕೆ ಜಗ್ಗದೆ ಸತ್ಸಹವಾಸದಲ್ಲೇ ತೊಡಗುವುದು ಉದ್ಧಾರದ ಖಚಿತ ಸಾಧನ ಎಂಬ ತತ್ವವನ್ನು ಈ ಮೂಲಕ ತಿಳಿಸಿರುವರು. ಕಲಿಯುಗದಲ್ಲಿ ಧರ್ಮಿಷ್ಠರ ಸಂಪತ್ತು ಅಷ್ಟಾಗಿ ವರ್ಧಿಸದಿರಲು ಕಲಿಯ ಇಂತಹ ವೈರಸಾಧನೆಯೇ ಕಾರಣ ಎಂದು ಭಾವಿಸಬಹುದು.

ಧರ್ಮರಾಜನ ವಿನಂತಿ

ಪ್ರೀತಿರ್ಯದಿ ಸ್ಮ ಭವತಾಂ ಮಯಿ ಸಾನುಜೇऽಸ್ತಿ
ತಿಷ್ಠಧ್ವಮತ್ರ ಪಿತುರೇವ ಹಿ ಶಾಸನೇ ಮೇ ।
ಕೀರ್ತಿರ್ಹಿ ವೋऽನುಗಮನಾತ್ ಪಿತುರತ್ಯಯೇನ
ನಶ್ಯೇನ್ನ ಇತ್ಯನುಸರಧ್ವಮಿಹಾಂಬಿಕೇಯಮ್ ॥ ೨೧೮ ॥

ಅ: 'ನಿಮಗೆ ನನ್ನಲ್ಲೂ ನನ್ನ ತಮ್ಮಂದಿರಲ್ಲೂ ಪ್ರೀತಿಯಿರುವುದಾದಲ್ಲಿ ನೀವೆಲ್ಲಾ ಇಲ್ಲಿ ನಮ್ಮ ತಂದೆಯಾದ ಧೃತರಾಷ್ಟ್ರನ ಆಳ್ವಿಕೆಯಲ್ಲೇ ಇರಬೇಕು. ನೀವು ನಮ್ಮನ್ನು ಹಿಂಬಾಲಿಸಿ ಬಂದರೆ

---

೨೧೭. ತದ್ವಿಪರೀತಮನ್ಯದಿತ್ಯತ್ರ ಅನ್ಯತ್ = ಅಸಜ್ಜನಸಂಗಮನಮಿತ್ಯರ್ಥಃ ॥ – (ವಾ.)

೨೧೭. ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಸ್ತಮೋದ್ವಾರಂ ಯೋಷಿತಾಂ ಸಂಗಿಸಂಗಮ್ ॥
– ಭಾಗವತ (೫/೫/೨)

ಅಸಜ್ಜನೈಸ್ತು ಸಂವಾಸೋ ನ ಕರ್ತವ್ಯಃ ಕದಾಚನ ।
ಯಾವದ್ಯಾವಚ್ಚ ಬಹುಭಿಃ ಸಜ್ಜನೈಃ ಸಹ ಮುಕ್ತಿದಃ ॥ ಇತಿ ಸದ್ಗುಣೇ । – ಭಾ.ತಾ.(೧೧/೯/೧೦)

ಸಂಗಃ ಸರ್ವಾತ್ಮನಾ ತ್ಯಾಜ್ಯಃ ಸ ಚೇತ್ ತ್ಯಕ್ತುಂ ನ ಶಕ್ಯತೇ ।
ಸದ್ಭಿರೇವ ಸ ಕರ್ತವ್ಯಃ ಸಂತಃ ಸಂಗಸ್ಯ ಭೇಷಜಮ್ । – ಮಧ್ವವಿಜಯಭಾವಪ್ರಕಾಶಿಕಾ (೪/೩೯)

ತಂದೆಯನ್ನು ಮೀರಿ ನಡೆದದ್ದರಿಂದ ನಮ್ಮ ಕೀರ್ತಿ ಹಾಳಾಗುವುದು. ಆದ್ದರಿಂದ ನೀವು ಧೃತರಾಷ್ಟ್ರನನ್ನೇ ಅನುಸರಿಸಿಕೊಡು ಇಲ್ಲಿಯೇ ಇರಿ'.

ವಿ: ಧರ್ಮರಾಜ ಪರಿಸ್ಥಿತಿಯ ದುರ್ಲಾಭ ಪಡೆಯಲಿಲ್ಲ. ಅವನು ಮನಸ್ಸು ಮಾಡಿದ್ದರೆ ಇಡೀ ಹಸ್ತಿನಾಪುರವೇ ಅವನ ಹಿಂದೆ ಸಾಗುತ್ತಿತ್ತು, ಆದರೆ ಅವನದು ಧರ್ಮಪರವಾದ ಅತ್ಯಂತ ಸಾತ್ವಿಕ ಪ್ರವೃತ್ತಿ, ಅದರಿಂದ ತನಗಾಗುವ ಅನುಕೂಲಕ್ಕಿಂತ ದೊಡ್ಡಪ್ಪನಾದ ಧೃತರಾಷ್ಟ್ರನಿಗಾಗುವ ಅಪಮಾನ ಕೆಟ್ಟದು ಎಂಬ ವಿಶೇಷ ಚಿಂತನೆ. ಹಾಗಾಗದಿರಲಿ ಎಂದು ಅವನ ಬಯಕೆ. ಅದನ್ನು ಹಾಗೆಯೇ ಜನಗಳ ಮುಂದೆ ವಿವರಿಸಿದ.

ಹಸ್ತಿನಾಪುರದಲ್ಲೇ ಉಳಿದ ಪಟ್ಟಣಿಗರು

ಇತ್ಯೇವ ತೈಃ ಪುರಜನಾ ನಿಖಿಲೈರ್ನಿಷಿದ್ಧಾಃ
ಕೃಚ್ಛ್ರೇಣ ತಸ್ಥುರಪಿ ತಾನ್ ಮನಸಾऽನ್ವಗಚ್ಛನ್ ।
ಪ್ರಾಪ್ಯಾಥ ಶಕ್ರಪುರಮಸ್ಮರತಾಂ ಚ ಕೃಷ್ಣೌ
ದೇವೇಶವರ್ಧಕಿಮಥಾಗಮದತ್ರ ಸೋऽಪಿ ॥ ೨೧೯ ॥

ಅ: ಸಕಲ ಪಾಂಡವರಿಂದ ಹಾಗೆ ತಡೆಯಲ್ಪಟ್ಟ ಪಟ್ಟಣಿಗರೆಲ್ಲ ಕಷ್ಟದಿಂದ ಅಲ್ಲಿಯೇ ಉಳಿದರು; ಆದರೆ ಮನಸ್ಸಿನಿಂದ ಅವರನ್ನೆ ಹಿಂಬಾಲಿಸಿದರು. ಇಂದ್ರಪ್ರಸ್ಥಕ್ಕೆ ತೆರಳಿದ ಮೇಲೆ ಶ್ರೀಕೃಷ್ಣ, ವ್ಯಾಸರು ದೇವಶಿಲ್ಪಿಯಾದ ವಿಶ್ವಕರ್ಮನನ್ನು ಕರೆದರು. ಅವನು ಒಡನೆಯೇ ಅಲ್ಲಿಗೆ ಧಾವಿಸಿದ.

ವಿ: ೧) ಧರ್ಮರಾಜನ ವಿನಂತಿಯಂತೆ ಪೌರರು ಅಲ್ಲಿಯೇ ಉಳಿದರು. ಆದರೆ, ಅವರ ಮನಸ್ಸೆಲ್ಲಾ ಪಾಂಡವರ ಬಳಿಯೇ.

೨) ಕಲಿಯುಗದ ಜೀವನ ಎಂದರೆ ಇದೇ. ಕಲಿಯುಗ ಎಂದರೆ ದುರ್ಯೋಧನನ ರಾಜ್ಯ. ಇಲ್ಲಿ ಇರುವುದು ಅನಿವಾರ್ಯ, ಆದರೆ, ಮನಸ್ಸು ಮಾತ್ರ ಧರ್ಮಾದಿಗಳ ಚಿಂತನೆಯಲ್ಲಿ ತೊಡಗಿದ್ದರೆ ನಮ್ಮ ಉದ್ಧಾರ ಖಚಿತ ಎಂದು ಇದರ ಧ್ವನಿ.

೩) ಇಂದ್ರಪ್ರಸ್ಥಕ್ಕೆ ಪಾಂಡವರನ್ನು ಕರೆತಂದ ಮೇಲೆ ಶ್ರೀವ್ಯಾಸಕೃಷ್ಣರು ವಿಶ್ವಕರ್ಮನನ್ನು ಕರೆದರು. ಅದಕ್ಕೆ ಅಲ್ಲಿದ್ದ ಬಂಜರಿನ ವಾತಾವರಣವನ್ನು ನಂದನದ ವಾತಾವರಣವನ್ನಾಗಿ ಬದಲಾಯಿಸುವ ಉದ್ದೇಶ ಕಾರಣವಾಗಿತ್ತು.

ವಿಶ್ವಕರ್ಮನಿಂದ ಇಂದ್ರಪ್ರಸ್ಥದ ಪುನರ್ನಿರ್ಮಾಣ

ವಾಸಿಷ್ಠಪೇನ ಯದುಪೇನ ಚ ಪಾಂಡವಾನಾಂ
ರತ್ನೋತ್ಕರಂ ಕುರು ಪುರಂ ಪುರುಹೂತಪುರ್ಯಾಃ ।
ಸಾದೃಶ್ಯತಸ್ತ್ವಿತಿ ನಿಯುಕ್ತ ಉಭೌ ಪ್ರಣಮ್ಯ
ಸರ್ವೇಶ್ವರೌ ಸ ಕೃತವಾಂಶ್ಚ ಪುರಂ ತಥೈವ ॥ ೨೨೦ ॥

ಅ: ವಾಸಿಷ್ಠಕೃಷ್ಣ ಹಾಗೂ ಯಾದವಕೃಷ್ಣನಿಂದ ''ಪಾಂಡವರಿಗೆ ರತ್ನಮಯವಾದ ಅಮರಾವತಿಯಂತಹ ಪಟ್ಟಣವನ್ನು ನಿರ್ಮಿಸು'' ಎಂದು ಆಜ್ಞಪ್ತನಾದ ವಿಶ್ವಕರ್ಮ ಸರ್ವೇಶ್ವರರಾದ ಅವರಿಬ್ಬರಿಗೂ ವಂದಿಸಿ ಅದರಂತೆ ಪಟ್ಟಣವನ್ನು ನಿರ್ಮಿಸಿ ಕೊಟ್ಟ.

ವಿ: ಕೃಷ್ಣ ವ್ಯಾಸರು ವಿಶ್ವಕರ್ಮನಿಗೆ ಹೇಳಿ ಪಾಂಡವರಿಗೆ ನಿರ್ಮಿಸಿ ಕೊಟ್ಟ ಇಂದ್ರಪ್ರಸ್ಥ ಇಂದ್ರಪುರಿಯಾದ ಅಮರಾವತಿಯಂತೆಯೇ ರತ್ನಾದಿಮಯವಾದ ಅಪೂರ್ವ ಪಟ್ಟಣವಾಯಿತು ಎಂದರ್ಥ. ಭಗವಂತ ತನ್ನ ಪ್ರಿಯ ಭಕ್ತರಿಗೆ ನೀಡುವ ಸಮೃದ್ಧಿಗೆ ಇದು ಸೂಚಕ.

ಇಂದ್ರಪುರಿಯಂತಾದ ಇಂದ್ರಪ್ರಸ್ಥ

ದೇಶಂ ಚ ನಾತಿಜನಸಂವೃತಮನ್ಯದೇಶ-
ಸಂಸ್ಥೈರ್ಜನೈರಭಿಪುಪೂರಿರ ಆಶು ಪಾರ್ಥಾಃ ।
ತೇಷಾಂ ಗುಣೈರ್ಹರಿಪದಾನತಿಹೇತುತಶ್ಚ
ರಾಷ್ಟ್ರಾಂತರಾ ಇಹ ಶುಭಾ ವಸತಿಂ ಸ್ಮ ಚಕ್ರುಃ ॥ ೨೨೧ ॥

ಅ: ಅಷ್ಟಾಗಿ ಜನವಸತಿ ಇಲ್ಲದಿದ್ದ ಆ ದೇಶವನ್ನು ಪಾಂಡವರು ಬೇಗನೆ ಇತರ ದೇಶಗಳ ಜನರಿಂದ ತುಂಬಿಸಿದರು. ಅವರ ಗುಣಗಳಿಂದಲೂ ಹರಿಚರಣಗಳಿಗೆ ಎರಗುವ ನಿಮಿತ್ತದಿಂದಲೂ ಬೇರೆ ರಾಷ್ಟ್ರಗಳ ಸಜ್ಜನರು ಅಲ್ಲಿಗೆ ಬಂದು ವಾಸಿಸತೊಡಗಿದರು.

---

೨೨೦. ರತ್ನೋತ್ಕರಂ ರತ್ನಮಯಂ ಸಾದೃಶ್ಯತಃ ಸಾದೃಶ್ಯೇನ ॥ – (ಜ.)

೨೨೧. ರಾಷ್ಟ್ರಾಂತರಾ ಇಹ ಶುಭಾ ವಸತೀಃ ಸ್ಮ ಚಕ್ರೌರಿತ್ಯತ್ರ ಅನ್ಯದ್ರಾಷ್ಟ್ರಂ ಯೇಷಾಂ ತೇ ರಾಷ್ಟ್ರಾಂತರಾಃ ಶುಭಾಃ ಸಜ್ಜನಾ ಇತ್ಯರ್ಥಃ ॥ – (ವಾ.)

೨೨೧. ವಸತೀಃ ಗೃಹಾಣಿ । 'ವಸತೀ ರಾತ್ರಿವೇಶ್ಮನೋರಿ'ತ್ಯಮರಃ । – (ಜ.)

ವಿ: ಬಂಜರು ಭೂಮಿಯಂತಿದ್ದ ಕಾರಣದಿಂದಾಗಿ ಇಂದ್ರಪ್ರಸ್ಥದಲ್ಲಿ ಜನವಸತಿ ಅಷ್ಟಾಗಿ ಇರಲಿಲ್ಲ. ಆದರೆ,ಅದು ಇಂದ್ರಪುರಿಯಂತೆ ಪುನರ್ನಿರ್ಮಾಣಗೊಂಡಾಗ ಅದರ ಆಕರ್ಷಣೆ ಹಾಗೂ ಪಾಂಡವರ ಸದ್ಗುಣಗಳು ಮತ್ತು ಅಲ್ಲಿ ಶ್ರೀವ್ಯಾಸಕೃಷ್ಣರದರ್ಶನ, ನಮನಾದಿಗಳ ಭಾಗ್ಯ ದೊರೆಯುವುದು ಮೊದಲಾದ ಕಾರಣದಿಂದಾಗಿ ಇತರ ದೇಶಗಳ ಸಜ್ಜನರೆಲ್ಲಾ ಅಲ್ಲಿಗೇ ಧಾವಿಸಿ ವಾಸಿಸತೊಡಗಿದರು. ಇದರಿಂದಾಗಿ ಕೆಲವೇ ದಿವಸಗಳಲ್ಲಿ ಅದೊಂದು ಅತ್ಯಂತ ಜನಭರಿತವಾದ ಸಮೃದ್ಧ ಪಟ್ಟಣವಾಗಿಬಿಟ್ಟಿತು ಎಂದರ್ಥ.

ದುರ್ಯೋಧನನಿಗೆ ರಾಜ್ಯಾಭಿಷೇಕ

ಪ್ರಸ್ಥಾಪ್ಯ ದೂರಮನುಜಸ್ಯ ಸುತಾನ್ ಸ ರಾಜಾ
ಚಕ್ರೇಽಭಿಷೇಕಮಪಿ ತತ್ರ ಸುಯೋಧನಸ್ಯ ।
ದುಃಶಾಸನಂ ಚ ಯುವರಾಜಮಸೌ ವಿಧಾಯ
ಮೇನೇ ಕೃತಾರ್ಥಮಿವ ಚ ಸ್ವಮಶಾಂತಕಾಮಃ ॥ ೨೨೨ ॥

ಅ: ತಮ್ಮನ ಮಕ್ಕಳನ್ನು ಹಾಗೆ ದೂರಕ್ಕೆ ಕಳುಹಿಸಿ ಧೃತರಾಷ್ಟ್ರರಾಜ ದುರ್ಯೋಧನನಿಗೆ ಪಟ್ಟಾಭಿಷೇಕ ಮಾಡಿದ. ದುಶ್ಶಾಸನನನ್ನು ಯುವರಾಜನನ್ನಾಗಿ ಮಾಡಿದ ಮತ್ತು ಭೋಗಲಾಲಸೆ ಇನ್ನೂ ಇಂಗದಿದ್ದ ಅವನು ತನ್ನನ್ನು ಕೃತಕೃತ್ಯನೆಂದು ಬಗೆದ.

ವಿ: ೧) ಪಾಂಡವರನ್ನು ಅತ್ತ ಕಳುಹಿಸಿ ಇತ್ತ ಧೃತರಾಷ್ಟ್ರ ದುರ್ಯೋಧನನನ್ನು ಮಹಾರಾಜನನ್ನಾಗಿಯೂ, ದುಶ್ಶಾಸನನನ್ನು ಯುವರಾಜನನ್ನಾಗಿಯೂ ಅಭಿಷೇಕಿಸಿದ. ಅದರಿಂದ ಅವನಿಗೆ ಪೂರ್ಣ ನೆಮ್ಮದಿಯೇನೂ ಸಿಗಲಿಲ್ಲ. ಕಾರಣ ಅದೊಂದು ತಾತ್ಕಾಲಿಕ ಪರಿಹಾರ ಎಂದು ತಿಳಿದಿದ್ದುದೇ ಆಗಿತ್ತು. ಅದರಿಂದಾಗಿ ಅವನು ತನ್ನ ಕರ್ತವ್ಯ ಪೂರೈಸಿತು ಎಂದು ಮೇಲೆ ತಿಳಿದರೂ, ಭೀಮನಿಂದ ತನ್ನ ಮಕ್ಕಳು ಮುಂದೊಮ್ಮೆ ಸಾಯುವುದು ತಪ್ಪಿದ್ದಲ್ಲ ಎಂಬುದಾಗಿ ಒಳಗೆ ಅಶಾಂತಿ ಮನೆಮಾಡಿದ್ದರಿಂದ ವಾನಪ್ರಸ್ಥನಾಗದೇ ಅಲ್ಲಿಯೇ ಉಳಿದ ಎಂದರ್ಥ.

೨) ಪಾಂಡವರಿಗೆ ಅಭಿಷೇಕ ನಡೆದದ್ದು ಅನಂತಾಕ್ಷರಾದ ಶ್ರೀವ್ಯಾಸಕೃಷ್ಣರಿಂದ, ಕೌರವರಿಗೆ ಪಟ್ಟಾಭಿಷೇಕ ನಡೆದದ್ದು ಕಣ್ಣೇ ಇಲ್ಲದ ಧೃತರಾಷ್ಟ್ರನಿಂದ. ಪಾಂಡವರ ರಾಜ್ಯ ಅನಂತಕಾಲದ

---

೨೨೨. ಅನ್ಯಥಾ ವನಂ ಗಚ್ಛೇದಿತಿ ಭಾವಃ । – (ವೇ., ಜ.)

೨೨೨. ಅಶಾಂತಕಾಮೋ ಅನುಪರತವಿಷಯೇಚ್ಛಃ । – (ಜ.)

೨೨೨. ಅಶಾಂತಕಾಮಃ ಭೀಮಾತ್ ಸ್ವಪುತ್ರನಿಧನಂ ಶಂಕಮಾನ ಏವ ತಿಷ್ಠತೀತಿ ಭಾವಃ । – (ತಾ.)

ಖ್ಯಾತಿಗೆ ಒಳಪಟ್ಟರೆ, ಕೌರವರ ರಾಜ್ಯ ಕುರುಡರ ರಾಜ್ಯವಾಗಿ ಅವರಿಗೂ, ಅವರ ಅನುಯಾಯಿ-ಗಳಿಗೂ ದುರಂತಕ್ಕೇ ಕಾರಣವಾಯಿತು ಎಂಬ ಸೂಚನೆಯನ್ನು ಇಲ್ಲಿ ಗುರುತಿಸಬಹುದು.

ಪಾಂಡವರ ಸಂಭ್ರಮ

ಪಾರ್ಥಾಶ್ಚ ತೇ ಮುಮುದುರತ್ರ ವಸಿಷ್ಠವೃಷ್ಣಿ-
ವರ್ಯೋದಿತಾನಖಿಲತತ್ತ್ವವಿನಿರ್ಣಯಾಂಸ್ತು ।
ಶ್ರುಣ್ವಂತ ಏವ ಹಿ ಸದಾ ಪೃಥಿವೀಂ ಚ ಧರ್ಮಾ-
ದ್ಬುಂಜಂತ ಆಶ್ರಿತರಮಾಪತಿಪಾದಯುಗ್ಮಾಃ ॥ ೨೨೩ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಪಾಂಡವರಾಜ್ಯಲಾಭೋ ನಾಮ ಏಕೋನವಿಂಶೋಽಧ್ಯಾಯಃ ॥ ೧೯ ॥

ಅ: ಆ ಪಾಂಡವರು ಶ್ರೀವ್ಯಾಸಕೃಷ್ಣರು ಹೇಳಿದ ಸಕಲ ತತ್ವನಿರ್ಣಯಗಳನ್ನೂ ಸದಾ ಆಲಿಸುತ್ತಲೇ ಭೂಮಿಯನ್ನು ಧರ್ಮದಿಂದ ಭೋಗಿಸುತ್ತಾ ಲಕ್ಷ್ಮೀಪತಿಯಾದ ಆ ಶ್ರೀಹರಿಯ ಪಾದದ್ವಂದ್ವಗಳನ್ನೇ ಆಶ್ರಯಿಸಿದವರಾಗಿ ನಲಿದರು.

ವಿ: ಕೌರವರಾಜ್ಯ ಹೀಗೆ ದುಃಖದಿಂದ ಸಾಗಿದ್ದರೆ ಪಾಂಡವರ ಜೀವನ ಅಲ್ಲಿ ಶ್ರೀವ್ಯಾಸಕೃಷ್ಣರ ನೇತೃತ್ವದಲ್ಲಿ ಅತ್ಯಂತ ಸಮೃದ್ಧಿಯಿಂದ ಸಾಗಿತ್ತು ಅದಕ್ಕೆಲ್ಲಾ ಅವರು ಶ್ರೀಹರಿಯ ಪಾದದ್ವಂದ್ವ-ಗಳನ್ನು ಸದಾ ಆಶ್ರಯಿಸಿದ್ದೇ ಮುಖ್ಯ ಕಾರಣ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವರಾಜ್ಯಲಾಭ'ವೆಂಬ ಹತ್ತೊಂಭತ್ತನೆಯ ಅಧ್ಯಾಯ ಮುಗಿಯಿತು ॥ ೧೯ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೨೨೩. ಭುಂಜಂತಃ ಪಾಲಯಂತಃ ॥ – (ವ.)

ಅಧ್ಯಾಯ - ೨೦

(ಖಾಂಡವವನದಾಹಃ)

(ಕಾಳೀಸ್ವಯಂವರ, ಷಣ್ಮಹಿಷಿಯರ ವಿವಾಹ, ಧನ್ಯಾಶ್ಚರ್ಯಾಖ್ಯಾನ, ನರಕಾಸುರವಧೆ, ಪಾರಿಜಾತಹರಣ, ಸುಭದ್ರಾಕಲ್ಯಾಣ, ಖಾಂಡವವನದಾಹ)

ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ - ಧರ್ಮರಾಜನ ಕಾರ್ಯ

ಯಜ್ಞೋರುದಾನನರದೇವವಂದ್ಯತಾ-
ಪ್ರಶ್ನರ್ಷಿಪೂಜಾಸು ಯುಧಿಷ್ಠಿರೋಽಭೂತ್ ।
ಧರ್ಮಾನುಶಾಸ್ತಿಹರಿತತ್ತ್ವಶಂಸನ-
ಸ್ವರಾಷ್ಟ್ರರಕ್ಷಾದಿಷು ಭೀಮ ಆಸೀತ್ ॥ ೧ ॥

ಅ: ಯುಧಿಷ್ಠಿರ ಯಜ್ಞಗಳನ್ನು ಮಾಡುವುದು, ಮಹಾದಾನಗಳನ್ನು ನೀಡುವುದು, ರಾಜರುಗಳಿಂದ ಗೌರವ ಸ್ವೀಕರಿಸುವುದು, ತತ್ವನಿರ್ಣಯ ಸ್ವರೂಪದ ಕಥೆಗಳಲ್ಲಿ ಪ್ರಾಶ್ನಿಕನಾಗುವುದು, ಋಷಿ ಮುನಿಗಳನ್ನು ಸತ್ಕರಿಸುವುದು ಮೊದಲಾದ ಕಾರ್ಯಗಳಲ್ಲಿ ನಿರತನಾದ. ಧರ್ಮೋಪದೇಶ, ಹರಿತತ್ವಪ್ರಸಾರ, ಸ್ವರಾಷ್ಟ್ರರಕ್ಷಣೆ ಮೊದಲಾದವುಗಳಲ್ಲಿ ಭೀಮ ನಿರತನಾದ.

ವಿ: ೧) ಮಹಾರಾಜನಾದ ಧರ್ಮರಾಜ ಯಜ್ಞಾದಿಕಾರ್ಯಗಳಲ್ಲಿ ತೊಡಗಿಕೊಂಡ ಎಂದರ್ಥ. ಕ್ಷತ್ರಿಯರಿಗೆ ಯಜ್ಞಾದಿಗಳು ವಿಶೇಷ ಕಾರ್ಯಗಳಾದ್ದರಿಂದ ಅದನ್ನು ಮೊದಲು ಉಲ್ಲೇಖಿಸಿರುವರು ಎಂದು ತಿಳಿಯಬಹುದು. ಧರ್ಮರಾಜ ಮಹಾರಾಜನಾದ್ದರಿಂದ ಇತರ ರಾಜರುಗಳಿಂದ ಪೂಜಿತನಾದದ್ದು ಸಹಜ.

೨) ಇಲ್ಲಿ ಪ್ರಶ್ನ ಎಂಬುದಕ್ಕೆ ಪ್ರಾಶ್ನಿಕ ಎಂಬುದು ಒಂದರ್ಥವಾದರೆ, ಪ್ರಶ್ನಿಸುವುದು ಎಂದು ಮತ್ತೊಂದು ಅರ್ಥ. ಪ್ರಶ್ನಿಸುವುದು ಎಂದರೆ ಅಧಿಕಾರವಾಣಿಯಿಂದ ಕೇಳುವುದು ಎಂದರ್ಥ. ಹೇಳುವವರು ಗುರುಗಳು, ಕೇಳುವವರು ರಾಜರು. ಹೇಳುವುದು ಉಪದೇಶದ ಸಂಕೇತವಾದರೆ, ಕೇಳುವುದು ಅಧಿಕಾರದ ಸಂಕೇತ. ಆದ್ದರಿಂದ ಅವ್ಯವಸ್ಥೆ ನಡೆದಾಗ ಇಲ್ಲಿ ಹೇಳುವವರು, ಕೇಳುವವರು ಇಲ್ಲವೇ ಎನ್ನುವುದುಂಟು.

---

೧. ಉರುದಾನೇಷು ತುಲಾಪುರುಷಾದಿಮಹಾದಾನೇಷು । ... ಪ್ರಶ್ನಂ ಸಭಾಯಾಂ ಋಷೀನ್ ಪ್ರತಿ ತತ್ತ್ವ-ಪ್ರಶ್ನಮ್। ಭೀಮಃ ಧರ್ಮಾನುಶಾಸ್ತಾ ವರ್ಣಾಶ್ರಮಾಣಾಂ ಧರ್ಮಶಿಕ್ಷಣೇ ಹರಿತತ್ತ್ವಶಂಸನೇ ಹರಿತತ್ತ್ವೋಪ-ದೇಶೇ ಸ್ವರಾಷ್ಟ್ರರಕ್ಷಾದೌ ಸ್ವರಾಷ್ಟ್ರರಕ್ಷಣೇ ಆದಿಶಬ್ದೇನ ಪ್ರಜಾಪರಿಚಾರಕಾದಿರಕ್ಷಣಂ ಗೃಹ್ಯತೇ। – (ಜ.)

೧. ಆದಿಪದೇನ ತದುಪಯುಕ್ತಕ್ಷೀರಘೃತಾದ್ಯಾರ್ಜನೇ ಚೇತ್ಯರ್ಥಃ। – (ತಾ.)

೩) ಇಲ್ಲಿ ಧರ್ಮಾನುಶಾಸನ ಎಂದರೆ ವರ್ಣಾಶ್ರಮ ಧರ್ಮಗಳ ಶಿಕ್ಷಣ ಹಾಗೂ ಅವುಗಳ ಅನುಷ್ಠಾನದ ವ್ಯವಸ್ಥೆ ಎಂಬ ಎರಡು ಅರ್ಥಗಳೂ ವಿವಕ್ಷಿತ.

೪) ವಿಷ್ಣುಸರ್ವೋತ್ತಮತ್ವ ಸ್ಥಾಪನೆ ಯುವರಾಜನಾಗಿಯೂ ಭೀಮ ಮಾಡುತ್ತಿದ್ದ ಮಹ–ತ್ಕಾರ್ಯವಾಗಿತ್ತು. ಆದಿ ಶಬ್ದದಿಂದ ಪರರಾಷ್ಟ್ರಮರ್ದನ, ವಿಷ್ಣುನಿಂದಕರ ಶಿಕ್ಷಣ ಮೊದಲಾದ–ವುಗಳು ವಿವಕ್ಷಿತ.

ಮಹಾರಾಣಿಯಾಗಿ ದ್ರೌಪದಿ

ಸ್ತ್ರೀಧರ್ಮಸಂಶಾಸನಭೃತ್ಯಕೋಶ–
ರಕ್ಷಾವ್ಯಯಾದೌ ಗುಣದೋಷಚಿಂತನೇ ।
ಅಂತಃಪುರಸ್ಥಸ್ಯ ಜನಸ್ಯ ಕೃಷ್ಣಾ
ಹ್ಯಾಸೀದ್ದರೇರ್ಧರ್ಮನಿದರ್ಶನೀ ಚ ॥ ೨ ॥

ಅ: ಸ್ತ್ರೀಧರ್ಮಗಳ ಉಪದೇಶ, ಭೃತ್ಯರ ರಕ್ಷಣೆ, ಕೋಶದ ವಿನಿಯೋಗ ಮೊದಲಾ-ದವುಗಳಲ್ಲೂ ಅಂತಃಪುರದ ಜನಗಳ ಗುಣದೋಷಗಳ ವಿವೇಚನೆಯಲ್ಲೂ ದ್ರೌಪದಿ ತೊಡಗಿದಳು; ಅಂತಃಪುರದ ಜನರಿಗೆ ಭಾಗವತಧರ್ಮ ದಿಗ್ದರ್ಶಕಳೂ ಆದಳು.

ವಿ: ೧) ದ್ರೌಪದಿಯ ಕಾರ್ಯಗಳ ವಿವೇಚನೆ ಸ್ತ್ರೀಧರ್ಮಗಳ ಬಗ್ಗೆ ಬೆಳಕು ಚೆಲ್ಲುವ ಅಪೂರ್ವಭಾಗ. ಉತ್ತಮಸ್ತ್ರೀಯರು ಇತರ ಸ್ತ್ರೀಯರುಗಳಿಗೆ ವಿಹಿತ ರೀತಿಯಲ್ಲಿ ಧರ್ಮಶಿಕ್ಷಣ ನೀಡುವುದು ಕರ್ತವ್ಯ ಎಂದರ್ಥ.

---

೨. ಕೋಶಸ್ಯ ರಕ್ಷಾಯಾಂ ವ್ಯಯೇ ಚ । ಆದಿಶಬ್ದಾದ್ಭರ್ತೃಹರಕ್ಷಣಾದಿವಿವಕ್ಷಿತಮ್ । – (ಜ.)

೨. ... ಅಯಮಪರಾಧೀ ಅಯಮನಪರಾಧೀ ಅಯಂ ಧರ್ಮಸ್ಯ ಇತ್ಯಾದಿಗುಣವಿವೇಕೇ ತಥಾ । – (ಜ.)

೨. ಸರ್ವಂ ರಾಜ್ಞಃ ಸಮುದಯಮಾಯಂ ಚ ವ್ಯಯಮೇವ ಚ ।
ಏಕಾऽಹಂ ವೇದ್ಮಿ ಕಲ್ಯಾಣಿ ಪಾಂಡವಾನಾಂ ಯಶಸ್ವಿನಿ ।
ಮಯಿ ಸರ್ವಂ ಸಮಾಸಜ್ಯ ಕುಟುಂಬಂ ಭರತರ್ಷಭಾಃ ॥
ಉಪಾಸನರತಾಃ ಸರ್ವೇ ಘಟಯಂತಿ ವರಾನನೇ ।
ತಮಹಂ ಭಾರಮಾಸಕ್ತಮನಾಧೃಷ್ಯಂ ದುರಾತ್ಮಭಿಃ ॥
ಸುಖಿಂ ಸರ್ವಂ ಪರಿತ್ಯಜ್ಯ ರಾತ್ರ್ಯಹಾನಿ ಘಟಾಮಿ ವೈ ।
ಅಧೃಷ್ಯಂ ವರುಣಸ್ಯೇವ ನಿಧಿಪೂರ್ಣಮಿವೋದಧಿಮ್ ॥
ಏಕಾऽಹಂ ವೇದ್ಮಿ ಕೋಶಂ ವೈ ಪತೀನಾಂ ಧರ್ಮಚಾರಿಣಾಮ್ ।
– (ಸತ್ಯಭಾಮಾದೇವಿಯನ್ನು ಕುರಿತು ದ್ರೌಪದೀವಾಕ್ಯ) – ಭಾರತ (ವನ. ೨೩೩/೫೩-೫೬)

* ತ್ವಾಸೀದ್ದರೇ.... – (ಪಾಠಾಂತರ)

೨) ಇಲ್ಲಿ ಭೃತ್ಯರು ಎಂದರೆ ಅಂತಃಪುರದ ಆಳುಕಾಳುಗಳು ಎಂದರ್ಥ.

೩) ಕೋಶದ ಸಂಪಾದನೆ ಪುರುಷರ ಕರ್ತವ್ಯವಾದರೆ ಅದರ ವಿನಿಯೋಗ ಯಜಮಾನಿಯ ಹೊಣೆ. ಮನೆಯ ಆರ್ಥಿಕ ವ್ಯವಸ್ಥೆಯ ನಿರ್ವಹಣೆ ಸ್ತ್ರೀಯರ ಪ್ರಮುಖ ಕರ್ತವ್ಯಗಳಲ್ಲೊಂದು ಎಂದು ಇದರ ಭಾವ.

೪) ಇನ್ನು ಅಂತಃಪುರದ ಜನಗಳ ಗುಣದೋಷಗಳ ವಿಚಾರ ಎಂದರೆ ಮೇಲ್ವಿಚಾರಣೆ ಎಂದರ್ಥ.

೫) ದ್ರೌಪದಿ ಹಾಗೆ ರಕ್ಷಣೆ ಮಾಡುತ್ತಿದ್ದ ಭೃತ್ಯರ ಸಂಖ್ಯೆ ಅಂತಃಪುರದ ಒಟ್ಟು ಜನಗಳ ವಿವರ, ಆತಿಥ್ಯಕ್ಕೆ ಆಗಮಿಸುತ್ತಿದ್ದ ಋಷಿ ಮುನಿಗಳ ಸಂಖ್ಯೆ, ಮೊದಲಾದವುಗಳ ವಿವರ ಮುಂದೆ ಬಂದಿದೆ. (ಅಧ್ಯಾಯ – ೨೨/೬, ೭).

ಅರ್ಜುನಾದಿಗಳ ಕಾರ್ಯ

ಬೀಭತ್ಸುರಾಸೀತ್ ಪರರಾಷ್ಟ್ರಮರ್ದನೇ
ತೇನಾನಿಯಮ್ಯಾಂಶ್ಚ ಜರಾಸುತಾದೀನ್ ।
ಸಕೀಚಕಾದೀಂಶ್ಚ ಮಮರ್ದ ಭೀಮ-
ಸ್ತಸ್ಯೈವ ತೇ ಬಲತೋ ನಿತ್ಯಭೀತಾಃ ॥ ೩ ॥

ಅ: ಅರ್ಜುನ ಪರರಾಷ್ಟ್ರಗಳನ್ನು ನಿಯಂತ್ರಿಸುವುದರಲ್ಲಿ ತೊಡಗಿದ. ಅವನಿಗೆ ವಶರಾಗದ ಜರಾಸಂಧ ಮೊದಲಾದವರನ್ನು, ಕೀಚಕ ಮೊದಲಾದವರನ್ನು ಭೀಮಸೇನ ನಿಗ್ರಹಿಸುತ್ತಿದ್ದ. ಅವನ ಬಲಕ್ಕಷ್ಟೇ ಅವರು ಸದಾ ಅಂಜುತ್ತಿದ್ದವರು!

ವಿ: ೧) ಸ್ವರಾಷ್ಟ್ರರಕ್ಷಣೆ ಭೀಮನ ಕಾರ್ಯ, ಪರರಾಷ್ಟ್ರಮರ್ದನ ಅರ್ಜುನನ ಕಾರ್ಯ ಎಂಬಲ್ಲಿಯೂ ವಿಶೇಷವಿದೆ. ಸ್ವರಾಷ್ಟ್ರವನ್ನು ಸರ್ವತೋಮುಖವಾಗಿ ರಕ್ಷಿಸುವ ಹೊಣೆ ದೊಡ್ಡದು. ಪರರಾಷ್ಟ್ರಗಳ ಮೇಲೆ ಕ್ರಮವಾಗಿ ಹೋರಾಟ ಮಾಡುವ ಅವಕಾಶವಿದೆಯಲ್ಲವೆ!

೨) ಸ್ವರಾಷ್ಟ್ರರಕ್ಷಣೆ ಏಕಕಾಲದಲ್ಲಿ ಅನೇಕ ಶತ್ರುಗಳಿಂದ ರಾಷ್ಟ್ರವನ್ನು ರಕ್ಷಿಸಿಕೊಳ್ಳುವ ಗುರುತರ ಜವಾಬ್ದಾರಿ. ಆದ್ದರಿಂದಲೇ ಅದನ್ನು ಭೀಮ ವಹಿಸಿಕೊಂಡ. ಅನಂತರದ ಹಿರಿಮೆ ಅರ್ಜುನನದು ಎಂದು ತಿಳಿಯಬೇಕು; ಅದರಲ್ಲೂ ಜರಾಸಂಧಾದಿಗಳ ನಿಗ್ರಹದ ಕಾರ್ಯ ಭೀಮನದೇ ಆಗಿತ್ತು.

೩) ಹೀಗೆ ಭೀಮಸೇನನ ಕಾರ್ಯವ್ಯಾಪ್ತಿ ಅಗಾಧವಾಗಿತ್ತು ಎಂಬುದು ಗಮನಾರ್ಹ.

೪) ಅವರು ಮಧ್ವರೂಪದಿಂದಲೂ ಸ್ವಮತಸ್ಥಾಪನೆ ಹಾಗೂ ಪರಪಕ್ಷನಿರಾಕರಣೆ ಎಂಬ ಎರಡು ಕಾರ್ಯಗಳನ್ನು ಸಮಗ್ರ ನಿರ್ವಹಿಸಿದ ವಿವರ ಅವರ ಚರಿತ್ರೆಯಲ್ಲಿ ದಾಖಲಾಗಿದೆ.

ಭೀಮನಿಂದ ಧರ್ಮರಾಜ್ಯ

ರಾಷ್ಟ್ರೇಷು ಭೀಮೇನ ವಿಮರ್ದಿತೇಷು
ಜಿತಾಶ್ಚ ಯುದ್ಧೇಷು ನಿರುದ್ಯಮಾಸ್ತೇ ।
ಬಭೂವುರಾಸೀದ್ಧರಿಧರ್ಮನಿಷ್ಠಃ
ಪ್ರಾಯೇಣ ಲೋಕಶ್ಚ ತದೀಯಶಾಸನಾತ್ ॥ ೪ ॥

ಅ: ಪರರಾಷ್ಟ್ರಗಳನ್ನು ಭೀಮ ವಶಕ್ಕೆ ತೆಗೆದುಕೊಂಡಾಗ ಯುದ್ಧದಲ್ಲಿ ಸೋತ ಅವರೆಲ್ಲ ಕೆಲಸವಿಲ್ಲದವರಾದರು. ಭೀಮನ ಆಳ್ವಿಕೆಯಿಂದಾಗಿ ಸಾಮಾನ್ಯವಾಗಿ ಜನರೆಲ್ಲ ವೈಷ್ಣವ-ಧರ್ಮದಲ್ಲಿಯೇ ನಿರತರಾದರು.

ವಿ: ೧) ಭೀಮನ ಪರರಾಷ್ಟ್ರ ನಿಯಂತ್ರಣ ಕೇವಲ ಬಾಹುಬಲದಿಂದ ಮಾತ್ರವಲ್ಲದೇ ವಿದ್ಯಾ-ಬಲದಿಂದಲೂ ನಡೆದಿತ್ತು. ಅದರಿಂದಾಗಿ ಜನರು ಸದಾಚಾರಿಗಳು ಮಾತ್ರವಲ್ಲದೇ ವಿಷ್ಣು-ಸರ್ವೋತ್ತಮತ್ವವನ್ನು ಬಲ್ಲ ವಿಚಾರವಂತರೂ ಆಗಿ ಜೀವನ ಸಾರ್ಥಕ ಪಡಿಸಿಕೊಳ್ಳಲು ಸಾಧ್ಯವಾಯಿತು ಎಂದರ್ಥ.

೨) ಜರಾಸಂಧಾದಿಗಳಿಗೆ ತಮ್ಮ ಧರ್ಮಗಳಾದ ಶೈವಧರ್ಮಾದಿಗಳನ್ನು ಪ್ರಸಾರ ಮಾಡಲು ಅವಕಾಶ ಸರ್ವಥಾ ದೊರೆಯದಂತಾಯಿತು ಎಂದು ತಿಳಿಯಬೇಕು. ಭೀಮ ಈ ಕಾರ್ಯವನ್ನು ಹಸ್ತಿನಾಪುರಕ್ಕೆ ಆಗಮಿಸಿದ ಹೊಸತರಲ್ಲೂ ವ್ಯಾಪಕವಾಗಿಯೇ ಮಾಡಿದ್ದ ವಿವರ ಈಗಾಗಲೇ ಬಂದಿದೆ. (೧೫–೩).

ನಕುಲ ಸಹದೇವರ ಕಾರ್ಯ

ಆಜೀವಿನಾಂ ವೇತನದಸ್ತದಾऽऽಸೀ-
ನ್ಮಾದ್ರೀಸುತಃ ಪ್ರಥಮೋऽಥ ದ್ವಿತೀಯಃ ।
ಸಂಧಾನಭೇದಾದಿಷು ಧರ್ಮರಾಜ-
ಪಶ್ಚಾಚ್ಚ ಖಿಡ್ಗೀ ಸ ಬಭೂವ ರಕ್ಷನ್ ॥ ೫ ॥

---

೪. ಪ್ರಾಯೇಣೇತ್ಯಯೋಗ್ಯಜನವ್ಯಾವೃತ್ತ್ಯರ್ಥಃ ॥ – (ಜ.)

೪. 'ಪ್ರಾಯೇಣ ಲೋಕಾಶ್ಚ ತದೀಯಶಾಸನಾತ್' ಇತ್ಯತ್ರಾಸುರಾವಿಷ್ಟಜನವ್ಯಾವೃತ್ತ್ಯರ್ಥಂ ಪ್ರಾಯೇಣೇತಿ । – (ರಾ.)

೫. ಆಜೀವಿನಾಂ ಸೇವೋಪಜೀವಿನಾಂ ಸಂಧಾನಭೇದಾದಿಷು ವಿಪ್ರತಿಪನ್ನಾನಾಂ ಸಂಧಾನಂ ಸಂಧಿಕರಣಂ ಅನ್ಯೋನ್ಯಸಮ್ಮತಾನಾಂ ದ್ವಿಷಾಂ ಭೇದಃ ದ್ವೈಧೀಕರಣಂ ಆದಿಶಬ್ದೇನ ವಿಗ್ರಹಾದ್ಯುಚ್ಯತೇ। – (ಜ.)

ಅ: ಸಿಬ್ಬಂದಿ ವರ್ಗಕ್ಕೆ ವೇತನ ಕೊಡುವ ಕಾರ್ಯ ಮಾದ್ರೇಯರಲ್ಲಿ ಹಿರಿಯನಾದ ನಕುಲನದಾಯಿತು. ಸಂಧಿ, ಭೇದ ಮೊದಲಾದವುಗಳಲ್ಲೂ, ಧರ್ಮರಾಜನ ಹಿಂದೆ ಖಡ್ಗಧಾರಿಯಾಗಿ ರಕ್ಷಿಸುವ ಕಾರ್ಯದಲ್ಲೂ ಎರಡನೆಯವನಾದ ಸಹದೇವ ತೊಡಗಿದ.

ವಿ: ೧) ವೇತನ ವಿತರಣೆಯ ಕಾರ್ಯ ನಕುಲನದಾದರೆ, ಪರರಾಜರೊಂದಿಗೆ *ಸಂಧಿ, ವಿಗ್ರಹ ಮೊದಲಾದ ಕಾರ್ಯಗಳಲ್ಲಿ ಸಹದೇವ ತೊಡಗಿದ. ಸಹದೇವ ರಾಜನೀತಿಯನ್ನು ಉದ್ಧವನಿಂದ ತಿಳಿದು ಪ್ರಾವೀಣ್ಯ ಪಡೆದಿದ್ದ ವಿವರ ಈಗಾಗಲೇ ಬಂದಿದೆ (೧೪/೧೦೪).

೨) ಧರ್ಮರಾಜನ ಹಿಂದೆ ಅಂಗರಕ್ಷಕನಾಗಿ ಕಾರ್ಯನಿರ್ವಹಿಸಿದ್ದು ಸಹದೇವನ ಮತ್ತೊಂದು ವಿಶೇಷ.

೩) ಸಹದೇವ ವಿನಯದ ಸಂಕೇತ ಎಂಬ ಮಾತು ಹಿಂದೆ ಬಂದಿದೆ. ಧರ್ಮರಾಜನಿಗೆ ಸಹದೇವನ ರಕ್ಷಣೆ ಎಂದರೆ ಧರ್ಮಿಷ್ಠರಿಗೆ ವಿನಯವೇ ಭೂಷಣ ಎಂದರ್ಥ.

ಪಾಂಡವ ಸೇನಾಧಿಪತಿಯಾಗಿ ಧೃಷ್ಟದ್ಯುಮ್ನ

ಧೃಷ್ಟದ್ಯುಮ್ನಸ್ತತ್ರ ಸೇನಾಪ್ರಣೇತಾ
ಶಕ್ರಪ್ರಸ್ಥೇ ನಿತ್ಯಮಾಸ್ತೇऽತಿಹಾರ್ದಾತ್ ।
ವಿಶೇಷತೋ ಭೀಮಸಖಾ ಸ ಆಸೀ-
ದ್ರಾಷ್ಟ್ರಂ ಚೈಷಾಂ ಸರ್ವಕಾಮೈಃ ಸುಪೂರ್ಣಮ್ ॥ ೬ ॥

ಅ: ಅಲ್ಲಿ ಪಾಂಡವರ ಮೇಲಿನ ಅತಿಶಯ ಸ್ನೇಹದಿಂದಾಗಿ ಧೃಷ್ಟದ್ಯುಮ್ನ ಸೇನಾಪತಿಯಾಗಿ ಇಂದ್ರಪ್ರಸ್ಥದಲ್ಲಿ ಸದಾ ನೆಲೆಸಿದ. ಅವನು ವಿಶೇಷವಾಗಿ ಭೀಮನ ಜೊತೆಗಾರನಾದ; ಹೀಗೆ ಅವರ ರಾಜ್ಯ ಎಲ್ಲ ಅಗತ್ಯ ಭೋಗಗಳಿಂದ ಪರಿಪೂರ್ಣವಾಗಿತ್ತು.

ವಿ: ೧) ಧೃಷ್ಟದ್ಯುಮ್ನ ಅಗ್ನಿಯ ಅವತಾರ, ಭೀಮಸೇನ ವಾಯುವಿನ ಅವತಾರ. ವಾಯು ಅಗ್ನಿಸಖ ಎಂಬ ಮಾತು ಈಗಾಗಲೇ ಬಂದಿದೆ : 'ಮರುತ್ಸಖೋ ಹುತಾಶನಃ (ಅ.೭, ಶ್ಲೋ. ೪೩) ಆದ್ದರಿಂದ ಅವರಿಬ್ಬರು ಜೊತೆಯಾದದ್ದು ಸಹಜ.

೨) ಇಲ್ಲೂ ಒಂದು ವಿಶೇಷವಿದೆ, ಗಾಳಿ ಬೀಸಲು ಅಗ್ನಿ ಬೇಕಿಲ್ಲ, ಆದರೆ ಅಗ್ನಿ ಉರಿಯಲು ಗಾಳಿ ಬೇಕೇ ಬೇಕು. ಎಂದರೆ ಭೀಮಸೇನನಿಗೆ ಧೃಷ್ಟದ್ಯುಮ್ನನ ನೆರವು ಬೇಕಿಲ್ಲ, ಆದರೆ ಭೀಮನ ನೆರವು ಮಾತ್ರ ಧೃಷ್ಟದ್ಯುಮ್ನನಿಗೆ ಅತ್ಯಗತ್ಯವಾಗಿತ್ತು ಎಂದು ತಿಳಿಯಬೇಕು.

---

* ಸಂಧಿಂ ಚ ವಿಗ್ರಹಂ ಚೈವ ಯಾನಮಾಸನಮೇವ ಚ ।
ದ್ವೈಧೀಭಾವಂ ಸಂಶ್ರಯಂ ಚ ಷಡ್ಗುಣಾನ್ ಕವಯೋ ವಿದುಃ ॥ – (ಸ್ಮೃತಿ)

೩) ಇಲ್ಲಿ ಹೀಗೆ ಸೇನಾಧಿಪತಿಯಾದ ಧೃಷ್ಟದ್ಯುಮ್ನ ಮುಂದೆ ಕುರುಕ್ಷೇತ್ರ ಸಮರದಲ್ಲೂ ಪಾಂಡವರಿಗೆ ಸೇನಾಧಿಪತಿಯಾದದ್ದು ವಿಶೇಷ. ಹೀಗೆ ಸಮರ್ಥ ಆಡಳಿತದಿಂದಾಗಿ ಪಾಂಡವರ ರಾಜ್ಯ ಸುಭಿಕ್ಷೆಯಿಂದ ಕೂಡಿತ್ತು ಎಂದರ್ಥ.

ಪಾಂಡವರ ರಾಜ್ಯದ ಹಿರಿಮೆ

ನಾವೈಷ್ಣವೋ ನ ದರಿದ್ರೋ ಬಭೂವ
ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ।
ತೇಷಾಂ ರಾಷ್ಟ್ರೇ ಶಾಸತಿ ಭೀಮಸೇನೇ
ನ ವ್ಯಾಧಿತೋ ನಾಪಿ ವಿಪರ್ಯಯಾನ್ಮೃತಿಃ ॥ ೭ ॥

ಅ: ಅವರ ರಾಜ್ಯದಲ್ಲಿ ಭೀಮಸೇನನ ಆಳ್ವಿಕೆಯಿಂದಾಗಿ ಅವೈಷ್ಣವರಿರಲಿಲ್ಲ, ದರಿದ್ರರಿರಲಿಲ್ಲ, ಯಾರಿಗೂ ಧರ್ಮಾಚರಣೆಗೆ ಅಡ್ಡಿ ಒದಗುತ್ತಿರಲಿಲ್ಲ, ರೋಗಗಳಿಂದ ಜನ ಸಾಯುತ್ತಿರಲಿಲ್ಲ, ಕ್ರಮತಪ್ಪಿದ ಮರಣವೂ ಉಂಟಾಗುತ್ತಿರಲಿಲ್ಲ.

ವಿ: ೧) ಅವೈಷ್ಣವರಿರಲಿಲ್ಲ ಎಂದರೆ ಎಲ್ಲರೂ ವಿಷ್ಣುಭಕ್ತರೇ ಆಗಿದ್ದರು, ವಿಷ್ಣುದ್ರೋಹಿಗಳಾದ ಜನ ಇರಲೇ ಇಲ್ಲ ಎಂದರ್ಥ. ಧರ್ಮಾಚರಣೆಗೆ ಎಲ್ಲ ಬಗೆಯ ಅನುಕೂಲತೆ ಇದ್ದುದರಿಂದ ಜನ ಧರ್ಮ ತಪ್ಪುವ ಪ್ರಸಂಗವೇ ಒದಗುತ್ತಿರಲಿಲ್ಲ, ರೋಗಗಳ ಉಪದ್ರವವಿರಲಿಲ್ಲ.

೨) ವ್ಯತ್ಯಸ್ತಮರಣ ಎಂದರೆ ಹಿರಿಯರಿರುವಾಗ ಕಿರಿಯರು ಸಾಯುವುದು, ತಂದೆ ಇರುವಾಗ ಮಗ ಸಾಯುವುದು, ಸ್ತ್ರೀಯರು ವಿಧವೆಯರಾಗುವುದು, ಅಪಮೃತ್ಯು ಒದಗುವುದು ಮೊದಲಾದವುಗಳು ಎಂದರ್ಥ(ವಾ.) ಅದರಂತೆ ಸಾವು ಸಹ ಸಾಮಾನ್ಯವಾಗಿ ಸ್ವೇಚ್ಛೆಯಿಂದಲಾಗಲಿ, ಯುದ್ಧಾದಿಗಳಿಂದಾಗಲಿ ಒದಗುತ್ತಿತ್ತೇ ಹೊರತು ರೋಗಾದಿಗಳಿಂದಲ್ಲ ಎಂದು ತಿಳಿಯಬೇಕು (ತಾ.). ಈ ವಿವರ ಹನ್ನೊಂದನೇ ಅಧ್ಯಾಯದಲ್ಲಿದೆ (೧೧/೮೩).

---

೭. ವಿಪರ್ಯಯಾನ್ಮೃತಿರಿತ್ಯತ್ರ ಪಿತರಿ ಸತಿ ಪುತ್ರಸ್ಯ ಮರಣಂ ಪತ್ಯೌ ಸತಿ ಭಾರ್ಯಾಯಾ ಮರಣಂ ಶತವರ್ಷಾಭ್ಯಂತರೇ ಮರಣಂ ಚೇತ್ಯಾದಿಕಂ ವಿಪರ್ಯಯಾನ್ಮೃತಿರಿತ್ಯುಚ್ಯತ ಇತಿ ಜ್ಞೇಯಮ್ ॥ –(ವಾ.)

೭. ವ್ಯಾಧಿತಃ ವ್ಯಾಧಿಯುಕ್ತಃ ವಿಪರ್ಯಯಾನ್ಮೃತಿಃ ವೃದ್ಧಸ್ಯ ಪುರತಸ್ತರುಣಸ್ಯ ನಾಶೋ ನ ಬಭೂವೇತ್ಯರ್ಥಃ । –(ಜ.)

೭. ಸ್ವೇಚ್ಛಯಾ ವಾ ಯುದ್ಧೇ ವಾ ಮೃತಿಭಾವೇऽಪಿ ವ್ಯಾಧಿತೋ ಮೃತಿರ್ನೇತ್ಯರ್ಥಃ । ಕೋऽಪಿ ಪುರುಷೋ ವ್ಯಾಧಿಪೀಡಿತೋ ನೇತ್ಯಪ್ಯರ್ಥಮಾಹುಃ । –(ತಾ.)

೩) ಇವರ ರಾಜ್ಯದ ಹಿರಿಮೆ ರಾಮರಾಜ್ಯದ ಹಿರಿಮೆಯನ್ನು ಜ್ಞಾಪಿಸುವಂತಿತ್ತು ಎಂದು ತಾತ್ಪರ್ಯ. ರಾಮ ರಾಜ್ಯವಾಳುವುದು ಎಂದರೆ ಭಗವಂತ ರಾಜ್ಯವಾಳುವುದು ಎಂದು, ಭೀಮ ರಾಜ್ಯವಾಳುವುದು ಎಂದರೆ ಭಗವದ್ಭಕ್ತರಲ್ಲಿ ಶ್ರೇಷ್ಠನಾದವನು ರಾಜ್ಯವಾಳುವುದು ಎಂದರ್ಥ.

೪) ಭಗವದ್ಭಕ್ತರ ರಾಜ್ಯವೂ ಸಹ ಭಗವದನುಗ್ರಹದಿಂದ ಭಗವಂತನ ರಾಜ್ಯದಂತೆ ಸರ್ವ ಜನತೆಗೂ ಹಿತಕಾರಕ ಎಂದು ತಿಳಿಯಬೇಕು.

೫) ಪಾಂಡವರ ರಾಜ್ಯಭಾರದ ಬಗ್ಗೆ ಹೆಚ್ಚಿನ ವಿವರಗಳು ಅಧ್ಯಾಯ ೩೦ ರಲ್ಲಿ ಬಂದಿವೆ.

ಯುಧಿಷ್ಠಿರಂ ಯಾಂತಿ ಹಿ ದರ್ಶನೋತ್ಸುಕಾಃ
ಪ್ರತಿಗ್ರಹಾಯಾಪ್ಯಥ ಯಾಜನಾಯ ।
ಕಾರ್ಯಾರ್ಥಿನೋ ನೈವ ವೃಕೋದರೇಣ
ಕಾರ್ಯಾಣಿ ಸಿದ್ಧ್ಯಂತಿ ಯತೋಽಖಿಲಾನಿ ॥ ೮ ॥

ಅ: ಜನರು ದಾನ ಪಡೆಯಲಾಗಲೀ, ಯಜ್ಞ ಮಾಡಿಸಲಾಗಲಿ, ದರ್ಶನೋತ್ಸುಕರಾಗಿ ಯುಧಿಷ್ಠಿರನ ಬಳಿಗೆ ತೆರಳುತ್ತಿದ್ದರು; ಕಾಯಾರ್ಥಿಗಳಾಗಿ ಅಲ್ಲ. ಏಕೆಂದರೆ ಎಲ್ಲ ಕಾರ್ಯಗಳೂ ಭೀಮನಿಂದಲೇ ಈಡೇರುತ್ತಿದ್ದವು.

ವಿ: ೧ ಇದಕ್ಕೆ ಜನರು ಪ್ರತಿಗ್ರಹ, ಯಾಜನ ಮೊದಲಾದ ಯಾವ ಕಾರ್ಯಗಳಿಗೋಸ್ಕರವೂ ಸಹ ಯುಧಿಷ್ಠಿರನ ಬಳಿಗೆ ಹೋಗುತ್ತಿರಲಿಲ್ಲ. ಏಕೆಂದರೆ ಅವೆಲ್ಲವೂ ಭೀಮನಿಂದಲೇ ಈಡೇರಿ–ಬಿಡುತ್ತಿದ್ದವು ಎಂಬ ಅರ್ಥವೂ ಗ್ರಾಹ್ಯ.

೨) ಯುವರಾಜನಿಂದಲೇ ಎಲ್ಲ ಕೆಲಸವು ಆಗುವಾಗ ಮಹಾರಾಜನ ಬಳಿಗೆ ಹೋಗುವ ಅಗತ್ಯ ಏನಿದೆ ಎಂದು ಭಾವ. ಅಥವಾ ಎಲ್ಲ ಕಾರ್ಯಗಳೂ ಭೀಮನಿಂದಲೇ ಈಡೇರುತ್ತಿರುವು–ದರಿಂದ ಜನ ಕಾರ್ಯಾರ್ಥಿಗಳಾಗಿ ಯುಧಿಷ್ಠಿರನ ಬಳಿಗೆ ಹೋಗದೇ, ಕೇವಲ ದಾನ ಸ್ವೀಕಾರ, ಯಜ್ಞದಲ್ಲಿ ಪಾಲ್ಗೊಳ್ಳುವುದು ಮೊದಲಾದ ಕಾರ್ಯಗಳಿಗೆ ಮಾತ್ರ ಹೋಗುತ್ತಿದ್ದರು ಎಂದೂ ಅರ್ಥಮಾಡಿಕೊಳ್ಳಬಹುದು.

೩) ಧರ್ಮರಾಜನಿಂದ ಕಾರ್ಯ ಈಡೇರದಾಗ ಭೀಮ ಅದನ್ನು ಈಡೇರಿಸಿದ ಪ್ರಸಂಗ ಮುಂದೆ ನಿರೂಪಿತವಾಗಿದೆ. (೩೧/೧–೫) ಜ್ಞಾನಸ್ವರೂಪನಾದ ಭೀಮನಿಂದ ಎಲ್ಲ ಕಾರ್ಯಗಳೂ ಸಿದ್ಧವಾಗುತ್ತಿದ್ದವು ಎಂಬ ಮಾತು ಜ್ಞಾನದಿಂದಲೇ ಸರ್ವಪುರುಷಾರ್ಥಗಳ ಸಿದ್ಧಿ (**'ಸರ್ವೇಽಪಿ ಪುರುಷಾರ್ಥಾಃ ಸ್ಯುರ್ಜ್ಞಾನಾದೇವ ನ ಸಂಶಯಃ'**)ಎಂಬ ಅಣುಭಾಷ್ಯದ ಮಾತಿಗೆ ನಿದರ್ಶನ.

---

೮. ದರ್ಶನಾರ್ಥಿನ ಏವ ಯುಧಿಷ್ಠಿರಂ ಯಾಂತಿ । ಪ್ರತಿಗ್ರಹಾಯ ಅಥವಾ ಯಾಜನಾಯ ಕಾರ್ಯಾರ್ಥಿನೋ ನೈವ ಯಾಂತಿ । ದರ್ಶನ ಪ್ರಯೋಜನಕಮೇವ ಸರ್ವೇಷಾಮಾಗಮನಮ್ । –(ವ.)

೪) ಭೀಮನಿಂದ ಎಲ್ಲ ಕಾರ್ಯಗಳೂ ಸಿದ್ಧಿಸುತ್ತಿರಲಿಲ್ಲವಾದ್ದರಿಂದ ಕಾರ್ಯಾರ್ಥಿಗಳು ಭೀಮನ ಬಳಿಗೆ ತೆರಳದೆ ಯುಧಿಷ್ಠಿರನ ಬಳಿಗೆ ತೆರಳುತ್ತಿದ್ದರು ಎಂಬ ಮತ್ತೊಂದು ಬಗೆಯ ಅರ್ಥವನ್ನೂ ಇದಕ್ಕೆ ಮಾಡಬಹುದು. ದುರ್ಯೋಧನಾದಿಗಳ ಶ್ರಾದ್ಧಕ್ಕೆ ಭೀಮ ಕೋಶದ ಧನವನ್ನು ನೀಡದ ಪ್ರಸಂಗ ಇದಕ್ಕೆ ಗಮಕ (೩೦/೩೨–೩೫).

ಗಂಧರ್ವವಿದ್ಯಾಧರಚಾರಣಾಶ್ಚ
ಸೇವಂತ ಏತಾನ್ ಸತತಂ ಸಮಸ್ತಾಃ ।
ಯಥಾ ಸುರೇಂದ್ರಂ ಮುನಯಶ್ಚ ಸರ್ವ
ಆಯಾಂತಿ ದೇವಾ ಅಪಿ ಕೃಷ್ಣಮರ್ಚಿತುಮ್ ॥ ೯ ॥

ಅ: ಗಂಧರ್ವರು, ವಿದ್ಯಾಧರರು, ಚಾರಣರು ಮೊದಲಾದವರು ಇಂದ್ರನನ್ನು ಹೇಗೋ ಹಾಗೆ ಈ ಪಾಂಡವರನ್ನು ಸದಾ ಸೇವಿಸುತ್ತಿದ್ದರು. ಎಲ್ಲ ದೇವತೆಗಳು, ಮುನಿಗಳು ಸಹ ಶ್ರೀಕೃಷ್ಣನನ್ನು ಆರಾಧಿಸಲೆಂದು ಅಲ್ಲಿಗೆ ಆಗಮಿಸುತ್ತಿದ್ದರು.

ವಿ: ೧) ಪಾಂಡವರೆಲ್ಲ ಒಂದು ಕಾಲದಲ್ಲಿ ಇಂದ್ರಪದವಿಯಲ್ಲಿ ಇದ್ದವರು. ಅವರಲ್ಲಿ ಅರ್ಜುನನಂತೂ ಈ ಮನ್ವಂತರದಲ್ಲಿಯೇ ಇಂದ್ರನಾಗಿರುವವನು. ಆದರಿಂದಾಗಿ ಗಂಧರ್ವಾದಿ–ಗಳೆಲ್ಲ ಹಾಗೆ ಅವರನ್ನು ಸೇವಿಸುತ್ತಿದ್ದುದು ಉಚಿತವೇ ಸರಿ ಎಂದರ್ಥ.

೨) ಶ್ರೀಕೃಷ್ಣ ವ್ಯಾಸರು ಹೆಚ್ಚಾಗಿ ಪಾಂಡವರ ಬಳಿಯಲ್ಲೇ ವಾಸಿಸುತ್ತಿದ್ದುದರಿಂದ ದೇವತೆಗಳು, ಮುನಿಗಳು ಸಹ ಅಲ್ಲಿ ಕೃಷ್ಣನನ್ನು ಪ್ರತ್ಯಕ್ಷ ಆರಾಧಿಸುವ ವಿಶೇಷ ಅವಕಾಶದ ಲಾಭದಿಂದಾಗಿ ಅಲ್ಲಿಗೇ ಬರುತ್ತಿದ್ದರು ಎಂದರ್ಥ.

೩) ರಾಮರಾಜ್ಯದಲ್ಲಿ ಬ್ರಹ್ಮಾದಿದೇವತೆಗಳು ನಿತ್ಯ ಶ್ರೀರಾಮದರ್ಶನಕ್ಕೆಂದು ಬರುತ್ತಿದ್ದಂತೆ (೯/೧೨) ಈ ಪ್ರಸಂಗ ಎಂದು ತಿಳಿಯಬಹುದು.

ಕೃತಯುಗವನ್ನು ಮೀರಿಸಿದ ಕಲಿಯುಗ

ತೇಷಾಂ ರಾಷ್ಟ್ರೇ ಕಾರ್ತಯುಗಾ ಹಿ ಧರ್ಮಾಃ
ಪ್ರವರ್ತಿತಾ ಏವ ತತೋಽಧಿಕಾಶ್ಚ ।
ವೃದ್ಧಿಶ್ಚ ತಸ್ಮಾದಧಿಕಾ ಸುವರ್ಣ–
ರತ್ನಾಂಬರಾದೇರಪಿ ಸಸ್ಯಸಂಪದಾಮ್ ॥ ೧೦ ॥

---

೯. ಕೃಷ್ಣಃ ಪಾಂಡವಸ್ನೇಹಾತ್ ಪ್ರಾಯೇಣೇಂದ್ರಪ್ರಸ್ಥೇ ತಿಷ್ಠತೀತಿ ಭಾವಃ ॥ – (ಜ.)

ಅ: ಅವರ ರಾಜ್ಯದಲ್ಲಿ ಕೃತಯುಗದ ಧರ್ಮಗಳು ಆ ಕಾಲಕ್ಕಿಂತ ಹೆಚ್ಚಾಗಿಯೇ ಜಾರಿಗೆ ಬಂದವು. ಅದರಿಂದಾಗಿ ಚಿನ್ನ, ರತ್ನ, ವಸ್ತ್ರಮತ್ತು ಸಸ್ಯಸಂಪತ್ತುಗಳ ಸಮೃದ್ಧಿ ಆ ಯುಗಕ್ಕಿಂತಲೂ ಮಿಗಿಲಾಗಿಯೇ ಇದ್ದಿತು.

ವಿ: ೧) ಪಾಂಡವರ ರಾಜ್ಯದಲ್ಲಿ ಕೃತಯುಗಕ್ಕಿಂತ ಮಿಗಿಲಾದ ಧರ್ಮಪ್ರವೃತ್ತಿ ಉಂಟಾಯಿತು. ಅದಕ್ಕೆ ಶ್ರೀಕೃಷ್ಣನ ನೇತೃತ್ವದಲ್ಲಿ ನಡೆದ ಭೀಮನ ಆಳ್ವಿಕೆ ಮುಖ್ಯ ಕಾರಣ.

೨) ಹಾಗೆ ಧರ್ಮ ಪೂರ್ಣಪ್ರಮಾಣದಲ್ಲಿ ನೆಲೆಸಿದ್ದರಿಂದ ಸಕಲ ವಿಧ ಸಮೃದ್ಧಿಯೂ ವಿಶೇಷವಾಗಿಯೇ ಉಂಟಾಯಿತು ಎಂದರ್ಥ. ಧರ್ಮದಿಂದ ಸಕಲಪುರುಷಾರ್ಥಸಿದ್ಧಿ ಎಂಬುದಕ್ಕೂ ಇದು ಸೂಚಕವಾಯಿತು. ಕೃತಯುಗದಂತೆ ತಪಸ್ಸು, ದಯೆ, ಶೌಚ ಮತ್ತು ಸತ್ಯ ಎಂಬ ಧರ್ಮದ ನಾಲ್ಕು ಪಾದಗಳು ಸ್ಫುಟವಾಗಿ ಕಾಣಿಸಿದ್ದರಿಂದ ಅದು ಕೃತಯುಗಕ್ಕಿಂತ ಮಿಗಿಲಾಯಿತು ಎಂದರ್ಥ.

೩) ವಿಶ್ವದ ಇತಿಹಾಸದಲ್ಲಿ ಕೃತಯುಗವನ್ನು ಮೀರಿಸಿದ ದಾಖಲೆ ಮಾಡಿದ ರಾಜ್ಯಗಳು ಎರಡೇ – ಒಂದು ರಾಮರಾಜ್ಯ, ಅನಂತರ ಭೀಮ ನೇತೃತ್ವದ ಧರ್ಮರಾಜ್ಯ ಎಂಬುದು ಗಮನಾರ್ಹ.

ಧರ್ಮರಾಜ ದೇವಕಿಯರ ವಿವಾಹ

ಅಥೋಪಯೇಮೇ ಶಿಶುಪಾಲಪುತ್ರೀಂ
ಯುಧಿಷ್ಠಿರೋ ದೇವಕೀಂ ನಾಮ ಪೂರ್ವಾಮ್ ।
ಸ್ವೀಯಾಂ ಭಾರ್ಯಾಂ ಯತ್ಸಹಜೋ ಧೃಷ್ಟಕೇತು-
ರನುಹ್ಲಾದಃ ಸವಿತುಶ್ಚಾಂಶಯುಕ್ತಃ ॥ ೧೧ ॥

ಅ: ಬಳಿಕ ಶಿಶುಪಾಲನ ಮಗಳಾದ ದೇವಕಿ ಎಂಬವಳನ್ನು ಯುಧಿಷ್ಠಿರ ವಿವಾಹವಾದ. ಅವಳು ಹಿಂದೆಯೂ ಅವನ ಪತ್ನಿಯೇ. ಅವಳ ಸಹೋದರ ಧೃಷ್ಟಕೇತು, ಅವನು ಸವಿತೃ ಎಂಬ ಒಬ್ಬ ಆದಿತ್ಯನ ಅಂಶದಿಂದ ಕೂಡಿದ ಅನುಹ್ಲಾದನ ಅವತಾರ.

---

೧೦. ಕೃತಯುಗಾತ್ ಸುವರ್ಣಾದೇಃ ಸಸ್ಯಸಂಪದಾಮಪಿ ವೃದ್ಧಿರಧಿಕಾ ಬಭೂವ ॥ – (ಜ.)

೧೧. ಯತ್ಸಹಜೋ ಧೃಷ್ಟಕೇತುರಿತ್ಯತ್ರ ಯಸ್ಯಾಃ= ದೇವಕ್ಯಾಃ ಸಹಜ ಇತ್ಯರ್ಥಃ ॥ – (ವಾ.)

೧೧. ಶ್ಯಾಮಲಾದೀನಾರಭ್ಯ ಸ್ಪಷ್ಟತಯಾ ಪೃಥಕ್ ಪೃಥಕ್ ಚತುರ್ಥಂ ಜನ್ಮ ದರ್ಶಯನ್ ಯುಧಿಷ್ಠಿರಾದೀನಾಂ ವಿವಾಹಾಂತರಮಾಹ । – (ಜ.)

೧೧. ಅಭ್ರಾತೃಮತ್ಯಾಃ ಕನ್ಯಾಯಾಃ ವಿವಾಹೋ ನ ಪ್ರಶಸ್ತ ಇತಿ ಶಂಕಾ ಪರಾಸ್ತಾ। – (ತಾ.)

ಏಃ ೧) ಶ್ರೀಕೃಷ್ಣನ ತಾಯಿ ದೇವಕಿ ಅದಿತಿಯ ಅವತಾರ, ಯುಧಿಷ್ಠಿರನ ಹೆಂಡತಿ ದೇವಕಿ ಯಮಪತ್ನಿಯಾದ ಶ್ಯಾಮಲೆಯ ಅವತಾರ. ಹೆಸರು ಒಂದೇಯಾದರೂ ವ್ಯಕ್ತಿಗಳು ಬೇರೆ ಎಂಬುದನ್ನು ಗಮನಿಸಬೇಕು.

೨) ಧೃಷ್ಟಕೇತು* ಶಿಶುಪಾಲನ ಮಗ. ಅವನು ಪ್ರಹ್ಲಾದನ ಸಹೋದರನಾದ ಅನುಹ್ಲಾದನ ಅವತಾರ. ಅವನಲ್ಲಿ ಸವಿತೃ ಎಂಬ ದ್ವಾದಶಾದಿತ್ಯರಲ್ಲಿ ಒಬ್ಬ ಆದಿತ್ಯನ ಅಂಶವೂ ಇದ್ದಿತು ಎಂದು ತಿಳಿಯಬೇಕು.

೩) ಇಲ್ಲಿ ಒಂದು ಆಕ್ಷೇಪಕ್ಕೆ ಅವಕಾಶವಿದೆ. ಶಿಶುಪಾಲ ಕೃಷ್ಣನ ಅನಂತರ ಹುಟ್ಟಿದವನು, ಧರ್ಮರಾಜ ಶ್ರೀಕೃಷ್ಣನಿಗಿಂತ ಒಂದು ವರ್ಷ ಐದು ತಿಂಗಳಷ್ಟು ಮಾತ್ರ ಹಿರಿಯ. ಅಂತಹ ಶಿಶು-ಪಾಲನ ಮಗಳಾದ ದೇವಕಿ ವಯಸ್ಸಿನಲ್ಲಿ ಧರ್ಮರಾಜನಿಗಿಂತ ತುಂಬಾ ಚಿಕ್ಕವಳು ಎಂದಾಗುವುದು.

೪) ಅವಳು ಧರ್ಮರಾಜನಿಗೆ ಸ್ವರೂಪವ ಪತ್ನಿಯಾದ್ದರಿಂದಲೂ, ದೇವಸ್ತ್ರೀ ಎನ್ನುವ ಕಾರಣದಿಂದಲೂ ಅಂತಹ ವಯಸ್ಸಿನ ಅಂತರ ಗಮನಾರ್ಹವಲ್ಲ ಎಂದು ಭಾವಿಸಬಹುದು.

ಕಾಳೀ ಸ್ವಯಂವರ

ತಸ್ಯಾಂ ಸುಹೋತ್ರೋ ನಾಮತಃ ಪುತ್ರ ಆಸೀ-
ದ್ಯಶ್ಚಿತ್ರಗುಪ್ತೋ ನಾಮ ಪೂರ್ವಂ ಸುಲೇಖಃ ।
ಕೃಷ್ಣಾ ಸೈವಾಪ್ಯನ್ಯರೂಪೇಣ ಜಾತಾ
ಕಾಶೀಶಪುತ್ರೀ ಯಾಂ ಪ್ರವದಂತಿ ಕಾಲೀಮ್ ॥ ೧೨ ॥

---

* ಅನುಹ್ಲಾದಸ್ತು ತೇಜಸ್ವೀ ಯೋಽಭೂತ್ ಪ್ರಾಪ್ತೋ ಜಘನ್ಯಜಃ ।
ಧೃಷ್ಟಕೇತುರಿತಿ ಖ್ಯಾತಃ ಸ ಬಭೂವ ನರೇಶ್ವರಃ ॥ – ಭಾರತ (ಆದಿ. ೬೭/೭)

೧೨. ಏಕದೇಹತ್ರೇಣ ವಂಚನಕೃತಫಲಂ ಭಾರತೀಸಂಸೃಷ್ಟೇಭ್ಯಃ ಜನ್ಮತ್ರಯಂ। ತತ್ಕಿಮರ್ಥಂ ಜನ್ಮನಿ ಅನ್ಯಗಾತ್ರಮನುಭೂತಮಿತಿ ಭಾವಃ । – (ಜ.)

೧೨. ಸಮ್ಯಕ್ ಲೇಖಿನಕರ್ತಾ ಚಿತ್ರಗುಪ್ತೋ ನಾಮ ... । – (ಪ.)

೧೨. ಸಾ ಕಾಲೀ ಕೇವಲಾ ಭಾರತೀ । ಅನ್ಯದೇವ್ಯಃ ಶಚ್ಯಾದ್ಯಾಸ್ತ್ರಿ ಕಾಲೀದೇವ್ಯಾಂ ಸಾವಿಷ್ಟಾಃ । ಏಕದೇಹಕೃತ ವಂಚನ ಫಲತ್ವೇನ ತ್ರಿವಾರಂ ಭಾರತೀ ದೇಹಸಂಸೃಷ್ಟತಯಾ ಜನ್ಮನಃ ಪ್ರಾಪ್ತತ್ವೇನ ಶಾಪಸ್ಯ ಪರಿಸಮಾಪ್ತತ್ವಾದಿತಿ ಭಾವಃ। – (ವ.)

೧೨. ಭಾರತೀತಿ ವಾಚ್ಯೇ ಕೃಷ್ಣಾಪದಪ್ರಯೋಗಸ್ತು ಕೃಷ್ಣಶಬ್ದೋ ಭಾರತ್ಯಾಮೇವ ಮುಖ್ಯಃ ಉತ್ಕೃಷ್ಟತ್ವಾದ್ಧಿ ಯೋಷಿತಾಮಿತ್ಯಾದಿ ವ್ಯುತ್ಪತ್ತೇರಿತರತ್ರಾಮುಖ್ಯತ್ವಾದಿತಿ ಸೂಚಯಿತುಮಿತಿ ಜ್ಞೇಯಮ್ । – (ತಾ.)

ಅ: ಅವಳಲ್ಲಿ ಯುಧಿಷ್ಠಿರನಿಗೆ ಸುಹೋತ್ರ ಎಂಬ ಪುತ್ರ ಜನಿಸಿದ. ಅವನು ಹಿಂದೆ ಯಮನ ಲೇಖಕನಾಗಿದ್ದ ಚಿತ್ರಗುಪ್ತನ ಅವತಾರ. ದ್ರೌಪದಿಯು ಮತ್ತೊಂದು ರೂಪದಿಂದ ಕಾಶಿರಾಜನ ಮಗಳಾಗಿ ಜನಿಸಿದಳು. ಕಾಳೀ ಎಂಬುದಾಗಿ ಅವಳನ್ನು ಕರೆಯುವರು.

ವಿ: ೧) ಯುಧಿಷ್ಠಿರನಿಗೆ ಈ ದೇವಕಿಯಲ್ಲಿ ಜನಿಸಿದ ಪುತ್ರ ಸುಹೋತ್ರ ಚಿತ್ರಗುಪ್ತನ ಅವತಾರ. ಭಾರತೀದೇವಿಯು ಕಾಳೀ ಎಂಬ ಹೆಸರಿನಿಂದ ಕಾಶಿರಾಜನ ಮಗಳಾಗಿ ಅವತರಿಸಿದಳು.

೨) ಇಲ್ಲಿ ಚಿತ್ರಗುಪ್ತ ಲೇಖಕ ಎಂದರೆ ಜೀವಿಗಳ ಪುಣ್ಯ ಪಾಪಗಳ ವಿವರಗಳನ್ನು ಯಥಾವತ್ತಾಗಿ ದಾಖಲಿಡುವ ಲೇಖಕ ಎಂದರ್ಥ.

೩) ಇಲ್ಲಿ ಕೃಷ್ಣಾ ಎನ್ನುವ ಮೂಲಕ ಜೀವೋತ್ತಮೆಯಾದ ಭಾರತಿ ಎಂಬ ಅರ್ಥ ಸೂಚಿತ. ಕಾಳೀ ಎಂದರೂ ಕೃಷ್ಣವರ್ಣದವಳು ಎಂದೇ ಅರ್ಥ. ಎಂದರೆ ಈ ರೂಪವೂ ಒಂದರ್ಥದಲ್ಲಿ ಕೃಷ್ಣಾ ರೂಪವೇ ಆಯಿತು ಎಂದು ತಿಳಿಯಬೇಕು.

೪) ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ದಾಕ್ಷಿಣಾತ್ಯ ಪ್ರತಿಗಳಲ್ಲಿ ದೇವಕಿ ಎಂಬ ಹೆಸರೇ ಇದ್ದರೂ ಔತ್ತರೇಯ ಪಾಠದಲ್ಲಿ ವೇಎಕಾ ಎಂದು ಹೆಸರಿದೆ. ಕೆಲವು ಪಾಠಗಳಲ್ಲಿ ಅವಳು ಶೈಬ್ಯ ದೇಶದ ಕೋವಾಸನ ಎಂಬ ರಾಜನ ಮಗಳು ಎಂದಿದೆ. ಇದನ್ನು ಅಪಪಾಠ ಅಥವಾ ಪುರುಷವ್ಯತ್ಯಾಸ ಎಂದು ತಿಳಿಯಬೇಕು.

ಸಾ ಕೇವಲಾ ಭಾರತೀ ನಾನ್ಯದೇವ್ಯ-
ಸ್ತತ್ರಾವಿಷಾಚ್ಚಸ್ತತ್ಕೃತೇ ಕಾಶಿರಾಜಃ।
ಸ್ವಯಂವರಾರ್ಥೇ ನೃಪತೀನಾಜುಹಾವ
ಸರ್ವಾಂಸ್ತೇಽಪಿ ಹ್ಯತ್ರ ಹರ್ಷಾತ್ ಸಮೇತಾಃ ॥ ೧೩ ॥

ಅ: ಈ ಕಾಳೀ ಸಾಕ್ಷಾತ್ ಭಾರತಿ ಮಾತ್ರ. ಇತರ ದೇವತಾಸ್ತ್ರೀಯರು ಅವಳಲ್ಲಿ ಆವೇಶ ಹೊಂದಿರಲಿಲ್ಲ. ಅವಳ ಸ್ವಯಂವರಕ್ಕೆಂದು ಕಾಶಿರಾಜ ಸಕಲರಾಜರನ್ನೂ ಆಹ್ವಾನಿಸಿದ, ಅವರೆಲ್ಲರೂ ಅಲ್ಲಿ ಸಂಭ್ರಮದಿಂದ ನೆರೆದರು.

ವಿ: ೧) ದ್ರೌಪದೀ ದೇಹದಲ್ಲಿ ಪಾರ್ವತ್ಯಾದಿ ಇತರ ದೇವತಾಸ್ತ್ರೀಯರು ನೆಲೆಸಿದ್ದಂತೆ, ಈ ಕಾಳೀ ರೂಪದಲ್ಲಿ ನೆಲೆಸಿರಲಿಲ್ಲ. ಇದು ಕೇವಲ ಭಾರತೀರೂಪ ಎಂಬುದು ವಿಶೇಷ. ಅದರಿಂದಾಗಿ ಇದು ವಂಚದೇವಿಯರ ನಾಲ್ಕನೆಯ ಜನ್ಮವಲ್ಲ ಎಂದಾಗುವುದು.

೨) ಈ ಕಾಳೀಗೆ ಜಲಂಧರಾ, ಬಲಂಧರಾ ಎಂಬ ಹೆಸರುಗಳು ದಾಕ್ಷಿಣಾತ್ಯ ಹಾಗೂ ಔತ್ತರೇಯ ಪಾಠಗಳಲ್ಲಿ ಕ್ರಮವಾಗಿ ಕಂಡುಬರುತ್ತವೆ.

ತೇಷಾಂ ಮಧ್ಯೇ ಭೀಮಸೇನಾಂಸ ಏಷಾ
ಮಾಲಾಮಾಧಾತ್ ತತ್ರ ಜರಾಸುತಾದ್ಯಾಃ ।
ಕ್ರುದ್ಧಾ ವಿಷ್ಣೋರಾಶ್ರಿತಾನಾಕ್ಷಿಪಂತ
ಆಸೇದುರುಚ್ಚೈಃ ಶಿವಮಾಸ್ತುವಂತಃ ॥ ೧೪ ॥

ಅ: ಅವರ ಮಧ್ಯದಲ್ಲಿ ಭೀಮಸೇನನ ಹೆಗಲಿಗೆ ಆ ಕಾಳೀ ದೇವಿ ಮಾಲೆಯನ್ನು ಹಾಕಿದಳು. ಜರಾಸಂಧಾದಿಗಳೆಲ್ಲಾ ಕ್ರುದ್ಧರಾಗಿ ವಿಷ್ಣುಭಕ್ತರನ್ನು ಬಹಳವಾಗಿ ನಿಂದಿಸುತ್ತಾ ಶಿವನನ್ನು ಬಹಳವಾಗಿ ಸ್ತುತಿಸುತಾ ಎದುರಿಸಿ ಬಂದರು.

ಎ: ೧) ಆ ಸ್ವಯಂವರದ ನಿಯಮ ತುಂಬಾ ಸರಳವಾಗಿತ್ತು. ಕನ್ಯೆ ತಾನು ಬಯಸಿದ ವರನ ಕೊರಳಲ್ಲಿ ಮಾಲೆ ಹಾಕಿದರೆ ಅವನೇ ಅವಳ ಪತಿ. ಅದರಂತೆ ಕಾಳೀ ತನ್ನ ನಿಯತ ಪತಿಯಾದ ಭೀಮನಿಗೆ ಸಹಜವಾಗಿಯೇ ಮಾಲೆ ಹಾಕಿದಳು.

೨) ಅದಾದ ಮೇಲೆ ಜರಾಸಂಧಾದಿಗಳು ಕೋಪದಿಂದ ಯುದ್ಧಕ್ಕೆ ನುಗ್ಗಿದರು ಎಂದರ್ಥ. ಅವರಿಗೆ ಕಾಳೀದೇವಿ ತಮಗೆ ದೊರೆಯದ್ದು ಒಂದು ಬಗೆಯ ದುಃಖವಾದರೆ, ತಮಗೆ ಅತ್ಯಂತ ಅಪ್ರಿಯನಾದ ಭೀಮಸೇನನಿಗೆ ದೊರೆತದ್ದು ಇನ್ನೂ ಹೆಚ್ಚಿನ ದುಃಖಕ್ಕೆ ಕಾರಣವಾಯಿತು ಎಂದು ತಿಳಿಯಬೇಕು. ಭೀಮ ವೈಷ್ಣವನಾದ್ದರಿಂದ ಅವರೆಲ್ಲ ಎಲ್ಲ ವೈಷ್ಣವರನ್ನೂ ನಿಂದಿಸತೊಡಗಿದರು.

ಭೀಮಸೇನನ ವಾದವೈಖರಿ

ಪೂರ್ವಂ ವಾಕ್ಯೈರ್ವೈದಿಕೈಸ್ತಾನ್ ಸ ಭೀಮೋ
ಜಿಗ್ಯೇ ತರ್ಕೈಃ ಸಾಧುಭಿಃ ಸಂಪ್ರಯುಕ್ತೈಃ ।
ವೇದಾ ಹ್ಯದೋಷಾ ಇತಿ ಪೂರ್ವಮೇವ
ಸಂಸಾಧಯಿತ್ವೈವ ಸದಾಗಮೈಶ್ಚ ॥ ೧೫ ॥

ಅ: ಮೊದಲಿಗೆ ಭೀಮಸೇನ ಅವರನ್ನೆಲ್ಲ ನಿರ್ದುಷ್ಟವಾದ ಯುಕ್ತಿಗಳನ್ನು ಪ್ರಯೋಗಿಸಿ ವೇದಗಳನ್ನು ನಿರ್ದೋಷ ಎಂದು ಸಾಧಿಸಿ, ಆ ವೇದವಾಕ್ಯಗಳಿಂದಲೂ ಇತರ ಸದಾಗಮ-ಗಳಿಂದಲೂ ಅವರನ್ನು ಜಯಿಸಿದ.

---

೧೪. ವೈಷ್ಣವೇನ ರಾಜ್ಞಃ ಕನ್ಯಾ ಹ್ರಿಯತೇ ಇತಿ ಕ್ರುದ್ಧಾಃ ಸಂತಃ ವಿಷ್ಣೋರಾಶ್ರಿತಾನ್ ವಿಷ್ಣುಮಪಿ ಉಚ್ಚೈರಾಕ್ಷಿಪಂತಃ ಶಿವಂ ಶೈವಾಂಶ್ಚಾಸ್ತುವಂತಃ । – (ಜ.)

ಎ: ೧) ಮೊದಲಿಗೆ 'ವೇದಃ ಪ್ರಮಾಣಂ, ಅಪೌರುಷೇಯತ್ವಾತ್, ವ್ಯತಿರೇಕೇಣ ಲೌಕಿಕ–ವಾಕ್ಯವತ್' – ವೇದಗಳು ಪ್ರಮಾಣ, ಅವು ಅಪೌರುಷೇಯವಾಗಿರುವುದರಿಂದ ಮೊದಲಾದ ಉತ್ತಮ ಯುಕ್ತಿಗಳನ್ನು ನೀಡಿ ಅವುಗಳ ಪ್ರಾಮಾಣ್ಯವನ್ನು ಸ್ಥಾಪಿಸಿ ಅವುಗಳಲ್ಲಿನ 'ಅಗ್ನಿರ್ವೈ ದೇವಾನಾಮವಮಃ ವಿಷ್ಣುಃ ಪರಮಃ', 'ಏಕೋ ನಾರಾಯಣ ಆಸೀತ್' ಮೊದಲಾದ ವಾಕ್ಯಗಳನ್ನು ಉಲ್ಲೇಖಿಸಿ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಿ ಶೈವರಾದ ಜರಾಸಂಧಾದಿಗಳನ್ನೆಲ್ಲ ಪರಾಭವ–ಗೊಳಿಸಿದನು ಎಂದರ್ಥ.

೨) ಈ ವಾದ ಸರಣಿಯನ್ನು ಭೀಮನ ಅವತಾರರೇ ಆದ ಶ್ರೀಮಧ್ವಾಚಾರ್ಯರ ವಿಷ್ಣುತತ್ತ್ವವಿನಿರ್ಣಯ ಗ್ರಂಥದ ವಾದಸರಣಿಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದು.

೩) ಇಲ್ಲಿ ನಿರ್ದುಷ್ಟಯುಕ್ತಿಗಳು ಎಂದರೆ ಅಸಿದ್ಧಿ ಅವ್ಯಾಪ್ತಿ ಎಂಬ ದೋಷಗಳಿಂದ ರಹಿತವಾದ, ಬ್ರಹ್ಮತರ್ಕೋಕ್ತವಾದ ಪರಿಶುದ್ಧಯುಕ್ತಿಗಳು ಎಂದರ್ಥ.

೪) ವೇದವಾಕ್ಯಗಳನ್ನು ಮೊದಲು ಉಲ್ಲೇಖಿಸಲು ಕಥಾಲಕ್ಷಣದಲ್ಲಿ ತಿಳಿಸಿರುವಂತೆ 'ಪೃಷ್ಟೇನಾಗಮ ಏವಾದೌ' ಎಂಬ ಮಾತು ಆಧಾರ ಎಂದು ತಿಳಿಯಬೇಕು.

೫) ಯುಕ್ತಿಯ ದೋಷಗಳು ಎಂದರೆ ವಿರೋಧ, ಅಸಂಗತಿ, ನ್ಯೂನ ಮತ್ತು ಅಧಿಕ ಎಂಬ ನಾಲ್ಕು ದೋಷಗಳು ಎಂದರ್ಥ. ಆಗಮದ ದೋಷಗಳು ಎಂದರೆ ಅಬೋಧಕತ್ವ, ವಿಪರೀತ–ಬೋಧಕತ್ವ ಮೊದಲಾದವುಗಳು.

ವೇದಾಧಿಕ್ಯಂ ಶೈವಶಾಸ್ತ್ರೇಣ ಚಾಹು–
ರ್ವೇದೋಜ್ಝಿತಾನಾಂ ಬಹುಲಾಂ ಚ ನಿಂದಾಮ್ ।
ತಥಾ ಶಾಕ್ತೇಯಸ್ಕಾಂದಸೌರಾದಿಕಾನಾಂ
ತತ್ರೈವೋಕ್ತಂ ಛಂದಸಾಂ ವೈಷ್ಣವತ್ವಮ್ ॥ ೧೬ ॥

---

೧೬. ಶೈವಶಾಸ್ತ್ರೇಣ = ಶೈವಪುರಾಣಾದೀನಿ । ಶೈವಶಾಕ್ತೇಯಸ್ಕಾಂದಸೌರಾದೀನಾಂ ವೈದಿಕಪಾಷಂಡಿತ್ವಾತ್ ಕ್ವಚಿದ್ವೇದಮಪಿ ಮಾನಯಂತೀತಿ ಭಾವಃ ॥ – (ವಾ.)

೧೬. ಇದಂ ವೇದಪ್ರಾಮಾಣ್ಯಸಾಧನಂ ಬಾಹ್ಯಾನ್ ಪ್ರತ್ಯೇವ। ಶೈವಾನ್ ಪ್ರತಿ ತು ನ ಸಾಧ್ಯಂ। ತೈರಭ್ಯುಪಗತತ್ವಾತ್। ಅಸ್ತು ಪ್ರಾಮಾಣ್ಯಂ। ನ ತಸ್ಯೇತರಶಾಸ್ತ್ರಾತಿಶಯ ಇತಿ ಚೇತ್ ತಸ್ಯಾಪ್ಯಭ್ಯುಪಗಮಾತ್ ಅನ್ಯಥಾऽಪಸಿದ್ಧಾಂತಾಪತ್ತೇರಿತ್ಯಾಹ ವೇದೇತಿ। ವೇದೋಜ್ಝಿತಾನಾಂ ಬೌದ್ಧಾನಾಂ ತಥಾ ಯೇ ವೇದ ಪ್ರಾಮಾಣ್ಯ ಮಂಗೀಕೃತ್ಯಾಪಿ ವೇದಂ ತ್ವಬಹುಮನ್ಯಂತೇ ತೇಷಾಂ ಸ್ಕಾಂದಾದೀನಾಂ ಚ ನಿಂದಾಮಾಹುರಿತ್ಯರ್ಥಃ। – (ತಾ.)

ಅ: 'ವೇದಗಳ ಹಿರಿಮೆಯನ್ನು ಶೈವ ಶಾಸ್ತ್ರಗಳೂ ಸಹ ಸಾರಿವೆ. ಹಾಗೆಯೇ ವೇದ ವಿರುದ್ಧವಾದ, ಶಾಕ್ತ, ಸ್ಕಾಂದ, ಸೌರ ಮೊದಲಾದವುಗಳ ನಿಂದೆಯನ್ನೂ ಅವೇ ಮಾಡಿವೆ. ವೇದಗಳಲ್ಲೇ ಅವುಗಳ ವಿಷ್ಣುಪರತ್ವ ಉಕ್ತವಾಗಿದೆ.

ವಿ: ೧) ಇಲ್ಲಿ ಶೈವಶಾಸ್ತ್ರಗಳೆಂದರೆ ಸ್ಕಾಂದಾದಿ ತಾಮಸ ಪುರಾಣಗಳು ಎಂದರ್ಥ. ಶಾಕ್ತೇಯರು ಎಂದರೆ ಶಕ್ತಿದೇವತೆಯನ್ನು ಸರ್ವೋತ್ತಮ ಎನ್ನುವವರು; ಸ್ಕಂದನನ್ನು ಸರ್ವೋತ್ತಮ ಎನ್ನುವವರು ಸ್ಕಾಂದರು, ಸೂರ್ಯನನ್ನು ಸರ್ವೋತ್ತಮ ಎನ್ನುವವರು ಸೌರರು.

೨) ಆದಿ ಶಬ್ದದಿಂದ ಗಾಣಪತ ಮತ್ತು ಪಾಶುಪತರನ್ನು ಗ್ರಹಿಸಬೇಕು. ಈ ಮತಗಳ ಅಸಾರತ್ವ ಬ್ರಹ್ಮಸೂತ್ರಗಳ ಸಮಯಪಾದದ, ಪತ್ಯುರಧಿಕರಣ ಮತ್ತು ಉತ್ಪತ್ಯಸಂಭವಾಧಿಕರಣ ಎಂಬ ಕೊನೆಯ ಎರಡು ಅಧಿಕಾರಣಗಳಲ್ಲಿ ಪ್ರತಿಪಾದಿತವಾಗಿದೆ.

ಸ್ಕಂದಸೂರ್ಯಗಣೇಶಾದಿಮತಾನಿ ನ್ಯಾಯತೋಽಮುತಃ ।
ನಿರಾಕೃತಾನ್ಯಶೇಷೇಣ ಸಿದ್ಧಾಂತಸ್ಯಾವಿಶೇಷತಃ ॥ – ಅನುವ್ಯಾಖ್ಯಾನ (೨/೨/೨೯)

ವಿಷ್ಣೋರಾಧಿಕ್ಯಂ ತಾನಿ ಶಾಸ್ತ್ರಾಣಿ ಚಾಹುಃ
ಶಿವಾದಿಭ್ಯಃ ಕುತ್ರಚಿನ್ನೈವ ವೇದೇ ।
ವಿಷ್ಣೂತ್ಕರ್ಷಃ ಕಥಿತೋ ಬೌದ್ಧಪೂರ್ವಾ-
ಶ್ಚಾಹುರ್ವಿಷ್ಣುಂ ಪರಮಂ ಸರ್ವತೋಽಪಿ ॥ ೧೭ ॥

ಅ: ವಿಷ್ಣುವಿಗೆ ಶಿವಾದಿಗಳಿಗಿಂತ ಉತ್ತಮತ್ವವನ್ನು ಆ ಶೈವಶಾಸ್ತ್ರಗಳೇ ಹೇಳಿವೆ. ಆದರೆ, ವೇದಗಳಲ್ಲೆಲ್ಲೂ ಶಿವ ಮೊದಲಾದವರು ವಿಷ್ಣುವಿಗಿಂತ ಮಿಗಿಲು ಎಂದು ಉಕ್ತವಾಗಿಲ್ಲ. ಬೌದ್ಧರೇ ಮೊದಲಾದವರು ವಿಷ್ಣುವನ್ನೇ ಸರ್ವೋತ್ತಮ ಎಂದು ಸರ್ವತಃ ತಿಳಿಸಿರುವರು.

---

೧೭. ಕುತ್ರಚಿದಿತಿ ಪದಂ ಸರ್ವತ್ರಾಪ್ಯಾವರ್ತನೀಯಮ್। ಬೌದ್ಧಪೂರ್ವಾಣಾಮವೈದಿಕತ್ವೇಽಪಿ ರಾಮಕೃಷ್ಣಾದ್ಯವತಾರೇಷು ದೃಷ್ಟಕಾರ್ಯಸ್ಯಾಪೋಢುಮಶಕ್ಯತ್ವಾತ್। ಕ್ವಚಿತ್ತ್ವಕೀಯಗ್ರಂಥಕೋಣೇ ವಿಷ್ಣುಂ ಪರಮಂ ವದಂತೀತಿ ಭಾವಃ॥ – (ವಾ.)

೧೭. ನ ಕೇವಲಂ ವಿಷ್ಣೂತ್ಕರ್ಷೋ ವೇದೈರುಚ್ಯತೇ ಕಿಂತು ಶೈವಶಾಸ್ತ್ರಾಣ್ಯಪ್ಯಾಹುಃ ತಾನಿ ಶಾಸ್ತ್ರಾಣಿ ಕುತ್ರಚಿತ್ ಪ್ರಸಂಗೇ ಶಿವಾದಿಭ್ಯಃ ವಿಷ್ಣೋರಾಧಿಕ್ಯಮಾಹುಃ । ವೇದೇ ಕುತ್ರಚಿತ್ ವಿಷ್ಣೋಃ ಸಕಾಶಾದುತ್ತಮಃ ಅನ್ಯೋ ನ ಕಥಿತಃ। ಇಂದ್ರಾದಿಶಬ್ದಾನಾಂ ವಿಷ್ಣುಪರತ್ವಾದಿತಿ ಭಾವಃ । – (ಜ.)

ನ ಕೇವಲಂ ವೈದಿಕಾ ವಿಷ್ಣುಂ ಪರಮಮಾಹುಃ। ಕಿಂತ್ವವೈದಿಕಾಶ್ಚ ತಥಾಹುರಿತ್ಯಾಹ – ಬೌದ್ಧಪೂರ್ವಾಶ್ಚೇತಿ । ವಿಷ್ಣುಂ ಬುದ್ಧರೂಪಿಣಂ ಸರ್ವತೋಽಪಿ ಸರ್ವೇಭ್ಯ ಏವ ಪರಮಮಾಹುಃ। – (ಜ.)

ಎ: ೧) ಶೈವಶಾಸ್ತ್ರಗಳು ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸಿರುವ ಮಾತಿಗೆ 'ಶೈವೇ ಚ ಸ್ಕಾಂದೇ' ಎಂಬುದಾಗಿ ಬ್ರಹ್ಮಸೂತ್ರಭಾಷ್ಯದ ಜಿಜ್ಞಾಸಾಧಿಕರಣದಲ್ಲಿ ಉದಾಹೃತವಾಗಿರುವ ವಾಕ್ಯಗಳು ಆಧಾರ.

೨) ವೇದಗಳಲ್ಲಿ ಶಿವಾದಿಗಳ ಉತ್ತಮತ್ವ ಪ್ರತಿಪಾದಿತವಾಗಿಲ್ಲವೆನ್ನಲು ಶೈವರು ಅವೈದಿಕರಾಗಿರುವುದೇ ದೊಡ್ಡ ಪುರಾವೆ ಎಂಬ ಸ್ವಾರಸ್ಯವಾದ ಕಾರಣ ವಾದಿರಾಜೀಯುದಲ್ಲಿದೆ.

೩) ಅದರಂತೆ ಬೌದ್ಧರೂ ತಮ್ಮ ಮತವನ್ನು ಶ್ರೇಷ್ಠವೆಂದು ಸಾರಲು ಆ ಮತ-ಪ್ರವರ್ತಕನಾದ ಬುದ್ಧ ವಿಷ್ಣುವಿನ ಅವತಾರವಾಗಿರುವುದೇ ಕಾರಣ ಎಂದು ಹೇಳಿಕೊಳ್ಳುವುದೂ ಸಹ ವಿಷ್ಣುಸರ್ವೋತ್ತಮತ್ವಕ್ಕೇ ಗಮಕ.

೪) ಅವೈದಿಕರಾದ ಬೌದ್ಧರೇ ಹೀಗೆ ವಿಷ್ಣುಸರ್ವೋತ್ತಮತ್ವವನ್ನು ಒಪ್ಪಿರುವಾಗ ವೈದಿಕರು ಅದನ್ನು ಒಪ್ಪದಿರಲು ಹೇಗೆ ಸಾಧ್ಯ ಎಂಬ ಯುಕ್ತಿಯೂ ಇಲ್ಲಿ ಸೂಚಿತ. (ತಾ.)

ಲೋಕಾಯತಾಶ್ಚ ಕ್ವಚಿದಾಹುರಗ್ರ್ಯಂ
ವಿಷ್ಣುಂ ಗುರುಂ ಸರ್ವವರಂ ಬೃಹಸ್ಪತೇಃ ।
ಸರ್ವಾಗಮೇಷು ಪ್ರಥಿತೋಽತ ಏವ
ವಿಷ್ಣುಃ ಸಮಸ್ತಾಧಿಕ ಏವ ಮುಕ್ತಿದಃ ॥ ೧೮ ॥

ಅ: ಚಾರ್ವಾಕರೂ ಸಹ ಕೆಲವು ಕಡೆಗಳಲ್ಲಿ ವಿಷ್ಣುವನ್ನೇ ಸರ್ವಶ್ರೇಷ್ಠನೆಂದು, ಬೃಹಸ್ಪತಿಗೂ ಗುರುವೆಂದು ಹೇಳುವರು. ಆದ್ದರಿಂದಲೇ ಸಕಲ ಶಾಸ್ತ್ರಗಳಲ್ಲೂ ವಿಷ್ಣುವೇ ಸರ್ವೋತ್ತಮ-ನೆಂದೂ, ಮುಕ್ತಿದಾಯಕನೆಂದೂ ಪ್ರಸಿದ್ಧನಾಗಿರುವನು.

---

೧೭. ಕೈಮುತ್ಯನ್ಯಾಯೇನಾಪಿ ತತ್ ಸಾಧಯತಿ ಬೌದ್ಧೇತಿ। – (ತಾ.)

೧೮. ಲೋಕಾಯತಾಶ್ಚೇತ್ಯತ್ರ ಲೋಕಾಯತಾಃ = ಚಾರ್ವಾಕಾಃ ಬೃಹಸ್ಪತ್ಯುಕ್ತಸ್ವಮತಸ್ಯಾಪ್ತಿಮೂಲತ್ವಚಿಂತಾಯಾಂ ಬೃಹಸ್ಪತೇರಪಿ ಗುರುಂ ಅತ ಏವ ಸರ್ವವರಂ ವಿಷ್ಣುಂ ವದಂತೀತಿ ಭಾವಃ। ಕಿಂ ಬಹುನಾ ಮತ್ಸ್ಯಕೂರ್ಮವರಾಹನರಸಿಂಹರಾಮಕೃಷ್ಣಬುದ್ಧಾವತಾರೇಷು ಇತರಾಸಾಧ್ಯಾನಾಂ ವೇದಾಹರಣಸಮುದ್ರಮಥನ-ಮಂದರೋದ್ಧರಣಾದಿಕರ್ಮಣಾಂ ಹಿರಣ್ಯಾಕ್ಷಹಿರಣ್ಯಕಶಿಪುರಾವಣಕಂಸಜರಾಸಂಧಾದಿಪ್ರಬಲದೈತ್ಯವಧಾನಾಂ ಬಲಿಬಂಧನತ್ರಿಲೋಕತ್ರಿಪದೀಕರಣಬ್ರಹ್ಮಾಂಡಖಂಡನಾದ್ಯಪ್ರತಿಚರಿತ್ರಾಣಾಂ ಚಾಸ್ಮಿನ್ನೇವ ಲೋಕೇ ಸಾರ್ವಜನೀನತಯಾ ಕೃತಾನಾಮಪಲಾಪಾಯೋಗಾತ್ ವಿಷ್ಣೋಃ ಸರ್ವಾಧಿಕತ್ವಂ ಸಕಲವಾದಿಷು ಕೋ ನಾಮ ಪ್ರೇಕ್ಷಾವಾನುಪೇಕ್ಷೇತ। ಅತ ಏವ ಸರ್ವಾಗಮೇಷು ಪ್ರಥಿತ ಇತ್ಯಾದ್ಯುಕ್ತಮ್ । ಅತ ಏವ ಸರ್ವಾಧಿಕೋ ವಿಷ್ಣುರೇವೇತ್ಯೇವಕಾರದ್ವಯಸಂಬಂಧಃ॥ – (ವಾ.)

ವಿಃ ೧) ಲೋಕಾಯತರು ಎಂದರೆ ಚಾರ್ವಾಕರು ಎಂದರ್ಥ. ಲೋಕದಲ್ಲಿ ಎಲ್ಲೆಡೆ ಆ ಮತ ಹರಡಿರುವುದರಿಂದ ಅದಕ್ಕೆ ಆ ಹೆಸರು. ಬೃಹಸ್ಪತಿಯು ಸರ್ವೋತ್ತಮನಾದ ವಿಷ್ಣುವಿನ ಆದೇಶದಂತೆ ಚಾರ್ವಾಕ ಮತವನ್ನು ಪ್ರಸಾರ ಮಾಡಿರುವುದಾಗಿ ಕೆಲವು ಚಾರ್ವಾಕರು ಹೇಳುವುದುಂಟು. ಇದು ಅವರೂ ಸಹ ವಿಷ್ಣುವನ್ನು ಸರ್ವೋತ್ತಮರೆಂದು ಒಪ್ಪುವುದಕ್ಕೆ ನಿದರ್ಶನ.

೨) ಬೃಹಸ್ಪತ್ಯಾಚಾರ್ಯರು ಚಾರ್ವಾಕ ಮತ ಪ್ರವರ್ತಿಸಿದ ವಿವರ * ಹರಿವಂಶದಲ್ಲಿದೆ.

ತೇಷ್ವಾಗಮೇಷ್ವೇವ ಪರಸ್ಪರಂ ಚ
ವಿರುದ್ಧತಾ ಹ್ಯನ್ಯಪಕ್ಷೇಷು ಭೂಪಾಃ ।
ಪ್ರತ್ಯಕ್ಷತಶ್ಚಾತ್ರ ಪಶ್ಯಧ್ವಮಾಶು
ಬಲಂ ಬಾಹ್ವೋರ್ಮೇ ವಿಷ್ಣುಪದಾಶ್ರಯಸ್ಯ ॥ ೧೯ ॥

ಅ: ಇತರ ಪಕ್ಷಗಳಲ್ಲೂ ಅವರ ಆಗಮಗಳಲ್ಲೇ ಪರಸ್ಪರ ವಿರೋಧ ಉಂಟು. ರಾಜರೇ! ವಿಷ್ಣುಸರ್ವೋತ್ತಮತ್ವದ ವಿಷಯದಲ್ಲಿ ವಿಷ್ಣುಪದವನ್ನು ಆಶ್ರಯಿಸಿರುವ ನನ್ನ ತೋಳುಗಳ ಬಲವನ್ನೇ ನೀವೀಗ ಪ್ರತ್ಯಕ್ಷ ನೋಡಿರಿ.

---

* ತೇಷಾಂ ಚ ಬುದ್ಧಿಸಂಮೋಹಮಕರೋದ್ದ್ವಿಜಸತ್ತಮಃ ।
ನಾಸ್ತಿ ವಾದಾರ್ಥಶಾಸ್ತ್ರಂ ಹಿ ಧರ್ಮವಿದ್ವೇಷಣಂ ಪರಮ್ ॥
ಪರಮಂ ತರ್ಕಶಾಸ್ತ್ರಾಣಾಮಸತಾಂ ತನ್ಮನೋಽನುಗಮ್ ।
ನ ಹಿ ಧರ್ಮಪ್ರಧಾನಾನಾಂ ರೋಚತೇ ತತ್ಕಥಾಂತರೇ ॥
ತೇ ತದ್ಬೃಹಸ್ಪತಿಕೃತಂ ಶಾಸ್ತ್ರಂ ಶ್ರುತ್ವಾ ಽಲ್ಪಚೇತಸಃ ।
ಪೂರ್ವೋಕ್ತಧರ್ಮಶಾಸ್ತ್ರಾಣಾಮಭವನ್ ದ್ವೇಷಿಣಃ ಸದಾ ॥ – ಹರಿವಂಶ (೧/೨೮/೩೦-೩೨)

೧೮. ಯತೋ ವಿಷ್ಣುರ್ಮುಕ್ತಿದೋಽತ ಏವ ಸರ್ವಾಗಮೇಷು ಸರ್ವಾಧಿಕಃ ಪ್ರಥಿತ ಇತ್ಯರ್ಥಃ । – (ತಾ.)

೧೯. ಅನ್ಯಪಕ್ಷೇಷ್ವಭಿಮಾನವಂತೋ ಭೂಪಾ ಇತಿ ತೇಷಾಂ ಸಂಬೋಧನಮಿತಿ ಜ್ಞೇಯಮ್। ಅನ್ಯಪಕ್ಷೇಷು ಶಿವಶಕ್ತ್ಯಾದೀನಾಮುತ್ತಮತ್ವಪಕ್ಷೇಷ್ವಿತಿ ವಾ। ವಿರುದ್ಧತಾ = ಶಿವಸ್ಯ ಸರ್ವೋತ್ತಮತ್ವಕಥನಂ ಭಸ್ಮಾಸುರಭಯಾತ್ ಪಲಾಯನಕಥನಂ ವಿಷಪಾನಂ ಗಲೇ ವಿಷಶಕ್ತ್ಯಾನೈಲ್ಯೇನ ನೀಲಕಂಠತ್ವಂ ಶಿರಸಿ ಸದಾ ವಿಷ್ಣುಪಾದೋದಕಧಾರಣಂ ವೇದಸ್ಯಾಪ್ರಾಮಾಣ್ಯಕಥನಂ ಸ್ವಾನುಕೂಲಸ್ಯ ''ಬ್ರಾಹ್ಮಣೋ ನ ಹಂತವ್ಯಃ, ಅಹಿಂಸಾ ಪರಮೋ ಧರ್ಮಃ'' ಇತ್ಯಾದೇಃ ಪ್ರಾಮಾಣ್ಯಾಂಗೀಕರಣಂ ಚೇತ್ಯಾದಿನಾ ಪರಸ್ಪರಂ ವಿರುದ್ಧತೇತ್ಯರ್ಥಃ ॥ – (ವಾ.)

೧೯. ಯನ್ನ್ಯಾಯೇನ ಶಿವಸ್ಯ ಸರ್ವೋತ್ತಮತ್ವಂ ಶೈವೈರುಚ್ಯತೇ ತನ್ನ್ಯಾಯೇನ ಶಾಕ್ತೈಃ ಶಕ್ತೇಃ ಸರ್ವೋತ್ತಮತ್ವಂ ಸಾಧ್ಯತೇ। ತಥಾಚ ನ್ಯಾಯಸಾಮ್ಯೇಽಪಿ ಪರಸ್ಪರವಿರುದ್ಧತ್ವಾತ್ ನಿರ್ಣಾಯಕಾಭಾವಾತ್ ಸರ್ವಾಪ್ರಾಣ್ಯಮಿತಿ ಭಾವಃ। ಯದ್ವಾ ವಿಷ್ಣ್ವಧಿಕ್ಯಪಕ್ಷಾಪೇಕ್ಷಯಾಽನ್ಯಪಕ್ಷೇಷು ಪೂರ್ವೋತ್ತರಂ ಪರಸ್ಪರವಿರುದ್ಧತಾ ವರ್ತತೇ। ತೇನ ತಸ್ಯಾಪ್ರಾಮಾಣ್ಯಮಂಗೀಕಾರ್ಯಮ್ । 'ಶಿವಶಾಸ್ತ್ರೇಽಪಿ ತದ್ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿ ಯತ್' ಇತ್ಯುಕ್ತ ನ್ಯಾಯೇನ ತಚ್ಛಾಸ್ತ್ರಗತ ವೈಷ್ಣವ ಭಾಗಸ್ಯ ನ ವಿರೋಧೋ, ನಾಪ್ರಾಮಾಣ್ಯಮಂಗೀಕಾರ್ಯಮ್ । – (ತಾ.)

ವಿ: ೧) ಶೈವಾದಿ ಆಗಮಗಳಲ್ಲಿ ಪರಸ್ಪರ ವಿರೋಧವುಂಟು. ವೇದಗಳಿಗೆ ಅನ್ಯಾಗಮಗಳ ಸಂವಾದವಿದ್ದರೆ ಇತರ ಆಗಮಗಳಿಗೆ ತಮ್ಮಲ್ಲಿಯೇ ವಿವಾದವಿದೆ. ಆದ್ದರಿಂದ ವೇದೋಕ್ತವಾದ ವಿಷ್ಣುಸರ್ವೋತ್ತಮತ್ವವೇ ಗ್ರಾಹ್ಯ ಎಂದರ್ಥ.

೨) ಹೀಗೆ ನುಡಿದ ಭೀಮಸೇನ ವಿಷ್ಣುಸರ್ವೋತ್ತಮತ್ವಕ್ಕೆ ವಿಷ್ಣುಭಕ್ತನಾದ ತನ್ನ ಅದ್ವಿತೀಯವಾದ ಬಾಹುಬಲವೇ ನಿದರ್ಶನ ಎಂದು ನುಡಿಯುವುದು ಗಮನಾರ್ಹ. ಎಂದರೆ ವಿಷ್ಣುಸರ್ವೋತ್ತಮತ್ವ ಸಿದ್ಧಿ ನೀಡುವಂತೆ ಅನ್ಯ ದೇವತೆಗಳ ಸರ್ವೋತ್ತಮತ್ವ ನೀಡದು ಎಂದರ್ಥ.

೩) ಶಾಸ್ತ್ರತತ್ವವನ್ನು ಹೀಗೆ ಸಿದ್ಧಿಯ ಹಿನ್ನೆಲೆಯಲ್ಲಿ ನಿರೂಪಿಸುವ ಭೀಮಸೇನ ಮಹಾಸಾಧಕ ಎಂಬುದು ಇದರಿಂದ ಸಿದ್ಧವಾಗುವುದು.

೪) ಅವೈಷ್ಣವರಾದ ಜರಾಸಂಧಾದಿಗಳೊಂದಿಗೆ ವಿಹಿತವಾದ ಕಥೆ ವಿತಂಡಾ ಮಾತ್ರ. ಅದರ ನಿಯಮದಂತೆ ಸ್ವಪಕ್ಷವನ್ನು ನಿರೂಪಿಸದೇ ಕೇವಲ ಪರಪಕ್ಷವನ್ನು ಮಾತ್ರ ನಿರಾಕರಿಸಬೇಕು. ಎಂದ ಮೇಲೆ ಭೀಮಸೇನ ಹಾಗೆ ಮಾಡಿದ್ದು ಸರಿಯೇ ಎಂಬ ಪ್ರಶ್ನೆಗೆ ಇಲ್ಲಿ ಅವಕಾಶವಿದೆ. ಅದಕ್ಕೆ ವ್ಯಾಖ್ಯಾನಕಾರರು ಉತ್ತರ ನೀಡಿರುವರು; ವಿತಂಡಾದಲ್ಲಿ ಸ್ವಪಕ್ಷವನ್ನು ಸಮರ್ಥಿಸಿಕೊಳ್ಳಬಾರದು ಎಂದರ್ಥವೇ ಹೊರತು ಸ್ವಪಕ್ಷವನ್ನು ಸಂಪೂರ್ಣವಾಗಿ ಉಲ್ಲೇಖಿಸಲೇಬಾರದು ಎಂದರ್ಥವಲ್ಲ; ಪ್ರತಿವಾದಿಗಳ ನಿರಾಕರಣೆಗೆ ಅನುಕೂಲವಾಗುವಷ್ಟು ಮಾತ್ರ ಸ್ವಸಿದ್ಧಾಂತದ ಪ್ರತಿಪಾದನೆ ವಿಹಿತವೇ ಆಗಿದೆ ಎಂಬ ವಿವರ ಗೀತಾತಾತ್ಪರ್ಯದಲ್ಲೂ, ನ್ಯಾಯಸುಧೆಯಲ್ಲೂ ಬಂದಿದೆ :

ತೇಷ್ವಯೋಗ್ಯೇಷು ತತ್ಪಕ್ಷಸ್ತತ್ತ್ವಂ ನಾತಿಪ್ರಕಾಶಯೇತ್ ।
ವದೇದ್ವಿವಾದರೂಪೇಣ ನೋಪದೇಶಾತ್ಮನಾ ಕ್ವಚಿತ್ ।
ಸಭಾರೂಪೇಣ ವಾ ಬ್ರೂಯಾತ್ ಪೃಷ್ಟೇऽನ್ಯಕಕ್ಷದೇವ ವಾ । – ಗೀತಾತಾತ್ಪರ್ಯ (೩/೩೩)

---

೧೯. ನನ್ವಿಯಂ ಕಥಾ ವಿತಂಡಾ । ವಿತಂಡಾ ತ್ವಸತಾಂ ಸತಾಮಿತಿ ತಲ್ಲಕ್ಷಣಲಕ್ಷಿತತ್ವಾತ್। ತತ್ರ ಚ ನ ಸ್ವಪಕ್ಷಸಾಧನಂ ಕಾರ್ಯಮ್ । ''ಅಪ್ರಕಾಶ್ಯ ಸ್ವಸಿದ್ಧಾಂತಮಸತಾಂ ಪಕ್ಷದೂಷಣಮ್'' ಇತ್ಯುಕ್ತೇಃ । ತಥಾ ಚ ಕಥಮತ್ರ, ವೇದಪ್ರಾಮಾಣ್ಯಸಾಧನಮ್? ವಿಷ್ಣುಸರ್ವೋತ್ತಮತ್ವಸಾಧನಮ್? ಇತಿ ಚೇದುಚ್ಯತೇ । ವಿತಂಡಾಯಾಮಪಿ ಯಾವತಾ ಸ್ವಪಕ್ಷಸಾಧನೇನ ವಿನಾ ಪರಪಕ್ಷದೂಷಣಂ ನ ಘಟತೇ, ತಾವತಃ ಸಾಧನೀಯತ್ವಾತ್। ಅನ್ಯಥಾ ವೇದವಿರೋಧೇನ ಶೈವಾದ್ಯಾಗಮಾಪ್ರಾಮಾಣ್ಯೇऽಭಿಹಿತೇ ತದಪ್ರಾಮಾಣ್ಯಶಂಕಾಯಾಮುತ್ತರಾಭಾವಪ್ರಸಂಗಾತ್। ಅತ ಏವ ಸುಧಾಯಾಂ 'ನನ್ವವೈದಿಕಂ ಪ್ರತಿ ಕಥಂ ಆಗಮಂ ಪ್ರಯೋಜ್ಯ ತತ್ ಪ್ರಮಾಣ್ಯಂ ಸಾಧನೀಯಮ್' ಇತ್ಯುಕ್ತಮ್ । ವಾದಜಲ್ಪಯೋರಿವ ಶಾಸ್ತ್ರೋದಿತಕ್ರಮಾಪರಿಹಾರೇಣ ಸ್ವಪಕ್ಷಾಪ್ರಕಾಶನಾಭಿಪ್ರಾಯಮಪ್ರಕಾಶ್ಯೇತಿ ವಚನಮ್ । ಅತ ಏವೈತರೇಯಭಾಷ್ಯೇ 'ಚತುರ್ಥೋ೯ऽಯೋಗ್ಯಪುರುಷೇ । ಉಪದೇಶಃ ಕೇಶವಸ್ಯ' ಇತಿ ಶಾಸ್ತ್ರೋದಿತಕ್ರಮಾನುಸಾರೇಣ ಅಯೋಗ್ಯಾಯೋಪದೇಶಸ್ಯ ಚತುರ್ಥಾಪರಾಧತ್ವಮುಕ್ತಮ್ । ನತು ಪರಪಕ್ಷ ದೂಷಣಾರ್ಥಂ ವಿಶಕಲಿತತಯಾ ಸ್ವಸಿದ್ಧಾಂತಪ್ರಕಾಶನಸ್ಯೇತಿ ಜ್ಞೇಯಮ್ । – (ತಾ.)

ಹಸ್ತಿನಾಪುರದಲ್ಲಿ ವ್ಯಾಘ್ರೇಶ್ವರಲಿಂಗ

ಪೂರ್ವಂ ಹಿ ಗಂಗಾ ಮಮ ವಿಷ್ಣುಪೂಜಾ-
ವಿಘ್ನಾರ್ಥಮಾಯಾದ್ವಾಮಕರೇಣ ಸಾ ಮೇ ।
ನುನ್ನಾ ಪರಸ್ತಾದ್ಬಹುಯೋಜನಂ ಗತಾ
ಪುರೇ ಕುರೂಣಾಂ ಶಿವ ಆಗತಸ್ತದಾ ॥ ೨೦ ॥

ಅ: ಹಿಂದೆ ಕೌರವರ ರಾಜಧಾನಿಯಾದ ಹಸ್ತಿನಾಪುರದಲ್ಲಿ ನನ್ನ ವಿಷ್ಣುಪೂಜೆಗೆ ವಿಘ್ನ ಮಾಡಲೆಂದು ಗಂಗೆ ಬಂದಳು. ನಾನು ಎಡಗೈಯಿಂದ ತಳ್ಳಿದಾಗ ಅವಳು ಬಹುಯೋಜನ ದೂರಕ್ಕೆ ಸರಿದಳು; ಆಗ ಶಿವ ಆಗಮಿಸಿದ.

ವಿ: ೧) ಭೀಮಸೇನ ಹಸ್ತಿನಾಪುರದ ಬಳಿ ಗಂಗಾತೀರದಲ್ಲಿ ವಿಷ್ಣುಪೂಜೆಗೆ ಕುಳಿತಿದ್ದಾಗ ಪೂಜೆಗೆ ವಿಘ್ನ ಮಾಡಲೆಂದು ಗಂಗೆ ಉಕ್ಕೇರಿದಾಗ ಭೀಮ ಅದನ್ನು ದೂರ ತಳ್ಳಿದ. ಗಂಗೆ ಆಗ ಬಹುದೂರಕ್ಕೆ ಸಾಗಿ ತನ್ನ ಪಾತ್ರವನ್ನು ಬದಲಿಸಿ ಹರಿಯತೊಡಗಿತು ಎಂದರ್ಥ.

೨) ಗಂಗೆಯಂತಹ ಮಹಾನದಿಯನ್ನು ಹಾಗೆ ದೂರತಳ್ಳುವ ಸಾಮರ್ಥ್ಯವಿರುವ ವಿಷ್ಣುಭಕ್ತನಾದ ತನ್ನ ಬಲ ಅದೆಷ್ಟು ಅಪಾರ ಎಂದು ತಿಳಿಸಿದ ಎಂದು ಭಾವ.

ಸ ವ್ಯಾಘ್ರರೂಪೀ ಕಪಿಲಾತ್ಮಿಕಾಮುಮಾಂ
ಪರೀಕ್ಷಯನ್ ಹಂತುಮಿವಾದ್ರವದ್ದ್ರುತಮ್
ಸ ಮೇ ಯುದ್ಧೇ ವಿಜಿತೋ ಮೂರ್ಛಿತಶ್ಚ
ಗದಾಪ್ರಹಾರಾದಾಸ ಲಿಂಗಾಂತರಸ್ಥಃ ॥ ೨೧ ॥

ಅ: ಶಿವ ಹುಲಿಯ ರೂಪದಲ್ಲಿ ನನ್ನನ್ನು ಪರೀಕ್ಷಿಸಲೆಂದು ಕಪಿಲಾ ಗೋ ರೂಪದಲ್ಲಿದ್ದ ಪಾರ್ವತಿಯನ್ನು ಕೊಲ್ಲಲೋ ಎಂಬಂತೆ ತ್ವರೆಯಿಂದ ಧಾವಿಸಿದ. ನನ್ನ ಗದಾಪ್ರಹಾರದಿಂದಾಗಿ ಯುದ್ಧದಲ್ಲಿ ಸೋತ ಅವನು ಮೂರ್ಛಿತನಾಗಿ ಲಿಂಗದೊಳಗೆ ಸೇರಿಕೊಂಡ.

ವಿ: ೧) ಭೀಮನ ವಿಷ್ಣುಭಕ್ತಿಯನ್ನು ಪರೀಕ್ಷಿಸಲೆಂದು ಶಿವ ಒಮ್ಮೆ ಕಪಿಲಗೋರೂಪ ಧರಿಸಿದ್ದ ಪಾರ್ವತಿಯನ್ನು ಸಂಹರಿಸುವಂತೆ ನುಗ್ಗಿದ. ಆಗ ಭೀಮ ಗದೆಯಿಂದ ಹೊಡೆಯಲು ಸೋತ ಶಿವ ಮೂರ್ಛಿತನಾಗಿ ಲಿಂಗದೊಳಗೆ ಅಡಗಿ ಕೂತ ಎಂದರ್ಥ.

---

೨೧. ಪರೀಕ್ಷಯನ್ ಹಂತುಮಿವಾದ್ರವದಿತ್ಯತ್ರ ಮಾಂ ಪರೀಕ್ಷಯನ್ = ಮದ್ಬಲಂ ಪರೀಕ್ಷಯನ್ನಿತ್ಯರ್ಥಃ। ಕಪಿಲಾತ್ಮಿಕಾಮುಮಾಂ ಹಂತುಮಿವಾದ್ರವದಿತಿ ಯೋಜನಾ ॥ –(ವಾ.)

೨) ಗೋವು ಶ್ರೀಹರಿಗೆ ಅತ್ಯಂತ ಪ್ರಿಯವಾದದ್ದು, ಅದರ ಸಂರಕ್ಷಣೆ ವೈಷ್ಣವನ ಪ್ರಧಾನ ಕರ್ತವ್ಯ. ಅದನ್ನು ಭೀಮು ಮಾಡತೊಡಗಿದಾಗ ಎದುರಿಸಲಾಗದ ಶಿವ ಅವನ ಗದೆಯ ಪೆಟ್ಟಿಗೆ ಪರಾಭವಗೊಂಡ ಎಂದರ್ಥ.

ಗೋಮತೀ ತೀರದಲ್ಲಿ ಶಾರ್ದೂಲಲಿಂಗ

ವ್ಯಾಘ್ರೇಶ್ವರಂ ನಾಮ ಲಿಂಗಂ ಪೃಥಿವ್ಯಾಂ
ಖ್ಯಾತಂ ತದಾ ತದ್ವದನ್ಯತ್ರ ಯುದ್ಧೇ ।
ತೀರೇ ಗೋಮತ್ಯಾ ಹೈಮವತೇ ಗಿರೌ ಹಿ
ಜಿತಸ್ತತ್ರಾಪ್ಯಾಸ ಶಾರ್ದೂಲಲಿಂಗಮ್ ॥ ೨೨ ॥

ಅ: ಆಗ ಆ ಶಿವಲಿಂಗ ವ್ಯಾಘ್ರೇಶ್ವರ ಎಂಬುದಾಗಿ ಭೂಮಿಯಲ್ಲಿ ಪ್ರಸಿದ್ಧವಾಯಿತು. ಅದರಂತೆ ಮತ್ತೊಂದೆಡೆ ಹಿಮವತ್ಪರ್ವತದಲ್ಲಿ ಗೋಮತೀ ನದಿಯ ತೀರದಲ್ಲಿ ಯುದ್ಧ ನಡೆಯಿತು. ಅಲ್ಲಿಯೂ ಸಹ ಶಿವನು ಸೋತು ಮತ್ತೊಂದು ಶಾರ್ದೂಲಲಿಂಗ ಉಂಟಾಯಿತು.

ವಿ: ೧) ಈ ರೀತಿ ಶಿವ ಭೀಮನಿಂದ ಪರಾಜಿತನಾಗಿ ಲಿಂಗ ಸೇರಿದ ಪ್ರಸಂಗ ಮತ್ತೊಮ್ಮೆ ನಡೆದು ಅದೂ ಶಾರ್ದೂಲಲಿಂಗವೆನ್ನಿಸಿತು.

೨) ಆ ಗೋಮತೀ ನದಿಯು ಹಿಮಾಲಯದಿಂದ ನೈಮಿಷಾರಣ್ಯದ ಕಡೆಗೆ ಹರಿಯುವ ಗೋಮತೀ ನದಿ (ವಾ.). ದ್ವಾರಕೆಯ ಬಳಿ ಪಶ್ಚಿಮ ಸಮುದ್ರಕ್ಕೆ ಸೇರುವ ಗೋಮತೀ ನದಿಯಲ್ಲ ಎಂದು ತಿಳಿಯಬೇಕು. ಇಲ್ಲಿಯೂ ಸಹ ಕಪಿಲಾಗೋರೂಪದಲ್ಲಿದ್ದ ಪಾರ್ವತಿಯ ಮೇಲೆ ಶಿವ ನೆಗೆದಾಗ ಭೀಮು ಶಿವನನ್ನು ಹಿಂದಿನಂತೆ ಪರಾಭವಗೊಳಿಸಿದ ಎಂದೇ ತಿಳಿಯಬೇಕು (ತಾ.).

ಏವಂ ಪ್ರತ್ಯಕ್ಷೇ ವಿಷ್ಣುಪದಾಶ್ರಯಸ್ಯ
ಬಲಾಧಿಕ್ಯೇ ಕಿಮು ವಕ್ತವ್ಯಮತ್ರ ।
ವಿಷ್ಣೋರಾಧಿಕ್ಯೇ ಕ್ಷತ್ರಿಯಾಣಾಂ ಪ್ರಮಾಣಂ
ಬಲಂ ವಿಪ್ರೇ ಜ್ಞಾನಮೇವೇತಿ ಚಾಹುಃ ॥ ೨೩ ॥

---

೨೨. ಗೋಮತ್ಯಾಃ= ಹಿಮವತ್ಪರ್ವತಾದಾಗತಾಯಾಃ ನೈಮಿಷಾರಣ್ಯಗಾಮಿನ್ಯಾಃ ಗೋಮತ್ಯಾ ಇತ್ಯರ್ಥಃ ॥ – (ವಾ.)

೨೨. ಹೈಮವತೇ ಗಿರೌ ಗೋಮತ್ಯಾಸ್ತೀರೇ ಕಪಿಲಾತ್ಮಿಕಾಮುಮಾಂ ವಿಭೀಷಯನ್ ವ್ಯಾಘ್ರರೂಪೀ ಶಿವೋ ಜಿತಃ, ಲಿಂಗಂ ವಿವೇಶ। ತತ್ರಾಪಿ ಶಾರ್ದೂಲಲಿಂಗಮಿತಿ ಖ್ಯಾತಿಮಾಪೇತ್ಯರ್ಥಃ। – (ತಾ.)

ಅ: ಹೀಗೆ ವಿಷ್ಣುಪಾದಗಳನ್ನು ಆಶ್ರಯಿಸಿದ ನನ್ನ ಬಲ ಅಧಿಕ ಎಂಬುದಾಗಿ ಪ್ರತ್ಯಕ್ಷಸಿದ್ಧವಾಗಿರುವಾಗ ಆ ವಿಷ್ಣುವಿನ ಸರ್ವೋತ್ತಮತ್ವದ ಬಗ್ಗೆ ಹೇಳುವುದೇನಿದೆ. ಕ್ಷತ್ರಿಯರಲ್ಲಿ ಉತ್ತಮತ್ವಕ್ಕೆ ಪ್ರಮಾಣ ಬಲ, ಬ್ರಾಹ್ಮಣರಲ್ಲಿ ಉತ್ತಮತ್ವಕ್ಕೆ ಜ್ಞಾನ ಎಂದೇ ಬಲ್ಲವರು ಹೇಳುವರು.

ವಿ: ೧) ವಿಷ್ಣುಭಕ್ತನಾದ ಭೀಮನ ಬಲವೇ ಹೀಗೆ ಶಿವಾದಿ ದೇವತೆಗಳಿಗಿಂತ ಮಿಗಿಲೆಂದು ಪ್ರತ್ಯಕ್ಷಸಿದ್ಧವಾಗಿರುವಾಗ ಅವನ ಸ್ವಾಮಿಯಾದ ವಿಷ್ಣುವಿನ ಬಲ ಸರ್ವಾಧಿಕವೆಂಬಲ್ಲಿ ಬೇರೆ ಪ್ರಮಾಣವೇಕೆ ಎಂದರ್ಥ.

೨) ಬಲದಿಂದ ಹಿರಿತನ ಹೇಗೆ ಸಿದ್ಧವಾದೀತು ಎಂಬುದಕ್ಕೆ ಉತ್ತರ ಕ್ಷತ್ರಿಯರಿಗೆ ಬಲಾಧಿಕ್ಯವೇ ಸ್ವರೂಪಾಧಿಕ್ಯಕ್ಕೆ ದ್ಯೋತಕ ಎಂದು:

ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ । – (೨/೧೭)

ಕೇದಾರದಲ್ಲಿ ಶಿವಲಿಂಗ

ಮಯಾ ಕೇದಾರೇ ವಿಪ್ರರೂಪೀ ಜಿತಶ್ಚ
ರುದ್ರೋ೨ವಿಶಲ್ಲಿಂಗಮೇವಾಶು ಭೀತಃ ।
ತತಃ ಪರಂ ವೇದವಿದಾಮಗಮ್ಯತಾ-
ಶಾಪಂ ಪ್ರಾದಾಚ್ಛಂಕರೋ ವ್ರೀಡಿತೋ೨ತ್ರ ॥ ೨೪ ॥

ಅ: ಕೇದಾರದಲ್ಲಿ ನನ್ನಿಂದ ಬ್ರಾಹ್ಮಣರೂಪದ ಶಿವ ಪರಾಭವಗೊಂಡು ಅಲ್ಲೂ ಸಹ ಭೀತನಾಗಿ ಲಿಂಗದೊಳಗೆ ಸೇರಿಕೊಂಡ. ನಾಚಿದ ಅವನು ಅಂದಿನಿಂದ ಅದು ವೇದ ಬಲ್ಲವರಿಗೆ ಅಗಮ್ಯವಾಗಲಿ ಎಂದು ಶಾಪ ನೀಡಿದ.

ವಿ: ೧) ಹೀಗೆ ಶಿವನೇ ನೀಡಿರುವ ಶಾಪದಿಂದಾಗಿ ಕೇದಾರಯಾತ್ರೆ ವೈಷ್ಣವರಿಗೆ ನಿಷಿದ್ಧ– ವೆನ್ನಿಸಿದೆ. ಆದರೆ, ಕೇದಾರಸ್ಮರಣೆ ನಿಷಿದ್ಧವಲ್ಲ ಎಂಬುದು ವಿಶೇಷ.

೨) ಹಾಗೆ ಕೇದಾರಯಾತ್ರೆ ಮಾಡಿದ ವೈಷ್ಣವರಿಗೆ ಜ್ಞಾನನಾಶವಾಗುವಂತೆ ಶಾಪವಿರುವ ವಿವರ ಕನ್ನಡ ಮಹಾಭಾರತತಾತ್ಪರ್ಯನಿರ್ಣಯದಲ್ಲಿದೆ. **'ಈ ಕೇದಾರ ಕ್ಷೇತ್ರಕ್ಕೆ ಬಂದವರು ಜ್ಞಾನಭ್ರಷ್ಟರಾಗಲಿ ಎಂದು ಮಹಾರುದ್ರನೇ ಶಾಪ ಕೊಟ್ಟಿದ್ದಾನೆ'.**

---

೨೩. ಕ್ಷತ್ರಿಯಾಣಾಂ ಪ್ರಮಾಣಮಿತ್ಯತ್ರ ಪ್ರಮಾಣಂ = ಆಧಿಕ್ಯೇ ಪ್ರಮಾಣಮ್ ॥ – (ವಾ.)

೨೪. ಕೇದಾರಕ್ಷೇತ್ರಂ ವಿದುಷಾಮಪ್ರಾಪ್ಯಂ ಭವೇದಿತ್ಯಶಪದಿತಿ ಭಾವಃ । – (ಜ.)

೩) ತನ್ನ ಸೋಲಿನ ಸಂಕೇತವಾಗಿದ್ದರಿಂದ ಶಿವನಿಗೆ ವೈಷ್ಣವರಿಗೆ ಮುಖ ತೋರಲು ನಾಚಿಕೆಯಾಗಿ ಆ ರೀತಿ ಶಾಪ ಕೊಟ್ಟಿರುವನೆಂದು ತಿಳಿಯಬಹುದು.

೪) ಹೀಗೆ ಮೂರು ಬಾರಿ ಶಿವನನ್ನು ಪರಾಭವಗೊಳಿಸಿ ಲಿಂಗ ಸೇರುವಂತೆ ಮಾಡಿದ ಭೀಮಸೇನ ತಾನೇ ಶಿವನಿಗಿಂತ ಮಿಗಿಲು ಎಂದು ತೋರಿಸಿಕೊಟ್ಟಿರುವಾಗ ಅಂತಹ ಭೀಮನಿಂದಲೂ ಪೂಜ್ಯನಾದ ವಿಷ್ಣುಶಿವಾದಿ ಸಕಲದೇವೋತ್ತಮ ಎಂಬುದು ಸುನಿಶ್ಚಿತ ಎಂದು ತಾತ್ಪರ್ಯ. ಭೀಮ ಭಾವಿಬ್ರಹ್ಮನೇ ಅಲ್ಲವೇ.

ಅಪೂರ್ವ ಭೀಮ ವಿಜಯ

ಏವಂ ಪ್ರತ್ಯಕ್ಷೇ ವಿಷ್ಣುಬಲೇ ಪ್ರತೀಪಂ
ಮನೋ ಯಸ್ಯ ಹ್ಯುತ್ತರಂ ಸ ಬ್ರವೀತು ।
ಕ್ರೋಧಾಧಿಕಶ್ಚೇತ್ ಕ್ಷಿಪ್ರಮಾಯಾತು ಯೋದ್ಧು-
ಮಿತ್ಯುಕ್ತಾಸ್ತೇऽಭ್ಯಾಯಯುರಾತ್ತಶಸ್ತ್ರಾಃ ॥ ೨೫ ॥

ಅ: ಹೀಗೆ ವಿಷ್ಣುವಿನ ಸಾಮರ್ಥ್ಯ ಪ್ರತ್ಯಕ್ಷಸಿದ್ಧವಾಗಿರುವಾಗ ಯಾವನ ಮನಸ್ಸು ಇದಕ್ಕೆ ವಿರುದ್ಧವಾಗಿರುವುದೋ ಅವನು ಉತ್ತರ ನೀಡಲಿ. ಆದಾಗದೇ ಕೇವಲ ಕೋಪ ಹೆಚ್ಚಿಸಿ-ಕೊಳ್ಳುವುದಿದ್ದಲ್ಲಿ ಅಂಥವನು ನನ್ನ ಮೇಲೆ ಒಡನೆಯೇ ಯುದ್ಧಕ್ಕೆ ಬರಲಿ'' ಹೀಗೆ ಭೀಮ ಸಾರಲು ಆ ರಾಜರೆಲ್ಲ ಶಸ್ತ್ರ ಹಿಡಿದು ಹೋರಾಟಕ್ಕೆ ಧಾವಿಸಿದರು.

ವಿ: ೧) ಇಲ್ಲಿ ಭೀಮ ಸಾರಿರುವುದು ತನ್ನ ಹಿರಿಮೆಯ ಪ್ರತ್ಯಕ್ಷವನ್ನೇ, ಆದರೂ, ಅಂತಹ ವಿಷ್ಣುಭಕ್ತನಾಗಿ ತಾನೇ ಎಲ್ಲರೆದುರಿರುವಾಗ, ಅಂತಹ ತನ್ನಿಂದ ಆರಾಧಿತನಾದ ವಿಷ್ಣು ಸರ್ವೋತ್ತಮ ಎಂಬುದು ಪ್ರತ್ಯಕ್ಷಸಿದ್ಧವೇ ಆದುದು ಎಂದು ಸಾರಿದ.

೨) ಹೀಗೆ ಪ್ರತ್ಯಕ್ಷವನ್ನೇ ಪ್ರಮಾಣವನ್ನಾಗಿ ನೀಡಿದರೂ ಆ ರಾಜರುಗಳು ಅದನ್ನು ಒಪ್ಪದೇ ಯುದ್ಧಕ್ಕೆ ಧಾವಿಸಲು ಅವರು ಸ್ವರೂಪತಃ ಹರಿದ್ವೇಷಿಗಳಾಗಿದ್ದುದೇ ಕಾರಣ ಎಂದು ತಿಳಿಯಬೇಕು. ಶಾಸ್ತ್ರದಿಂದ ಸೋತ ಅವರು ಶಸ್ತ್ರವನ್ನು ಕೈಗೆತ್ತಿಕೊಂಡು ಹಾಗಾದರೂ ಗೆಲ್ಲಲು ಬಯಸಿದರು ಎಂದರ್ಥ.

---

೨೫. ಆಧಿಕ್ಯೇ ವಿಪ್ರತಿಪನ್ನಂ ಪ್ರತಿ ಸ್ವಬಲಮುಕ್ತ್ವಾ 'ವಿಷ್ಣುಬಲೇ' ಇತಿ ಕಥಮುಚ್ಯತೇ ಇತಿ ಚೇತ್ ಸತ್ಯಂ। ಸ್ವಬಲಸ್ಯಾಪಿ ವಿಷ್ಣುಬಲಪ್ರತಿಬಿಂಬತ್ವಾತ್ ತಥೇತಿ ಯುಜ್ಯತೇ। – (ಜ.)

ಗಂಗೆಯ ಪಾಲಾದ ಜರಾಸಂಧ

ವಿದ್ರಾವ್ಯ ತಾನ್ ಬಾಣಸಂಘೈಃ ಸಮಸ್ತಾನ್
ಜರಾಸುತಂ ಗದಯಾ ಪೋಥಯಿತ್ವಾ ।
ಬಾಹುಭ್ಯಾಂ ಚೈನಂ ಪರಿಗೃಹ್ಯಾಶು ವಿಷ್ಣೋಃ
*ಪದೋತ್ಥಾಯಾಂ ಪ್ರಾಕ್ಷಿಪದ್ದೇವನದ್ಯಾಮ್ ॥ ೨೬ ॥

ಅ: ಅವರೆಲ್ಲರನ್ನು ಬಾಣಗಳ ಗುಂಪುಗಳಿಂದ ಭೀಮಸೇನ ಹೊಡೆದೋಡಿಸಿದ. ಜರಾಸಂಧನನ್ನು ಗದೆಯಿಂದ ಹೊಡೆದು ಬೀಳಿಸಿದ. ಅವನನ್ನು ತನ್ನ ಎರಡೂ ಕೈಗಳಿಂದ ಹಿಡಿದೆತ್ತಿ ವಿಷ್ಣುಪಾದದಿಂದ ಉದ್ಭವಿಸಿದ ದೇವನದಿಯಾದ ಗಂಗೆಯಲ್ಲಿ ಬಿಸಾಡಿದ.

ವಿ: ೧) ಭೀಮಸೇನ ಅವರೆಲ್ಲರನ್ನು ಮಾತ್ರವಲ್ಲದೆ ಅವರ ನಾಯಕನಾದ ಜರಾಸಂಧನನ್ನೂ ಗದೆಯಿಂದ ಅಪ್ಪಳಿಸಿ ಬೀಳಿಸಿದ. ಬಳಿಕ ಅವನನ್ನು ಎತ್ತಿ ಗಂಗೆಯಲ್ಲಿ ಬಿಸಾಡಿದ. ಇದು ಭೀಮನ ಅದ್ಭುತವಾದ ಬಾಹುಬಲಕ್ಕೆ ಮತ್ತೊಂದು ನಿದರ್ಶನವಾಯಿತು.

೨) ಅವನನ್ನು ಹಾಗೆ ಗಂಗೆಯಲ್ಲಿ ಬಿಸಾಡಲು ಒಂದು ಕಾರಣವನ್ನು ಹೇಳುವುದುಂಟು. ಜರಾಸಂಧ ಶಿವಭಕ್ತನಾಗಿದ್ದಂತೆ ವಿಷ್ಣುದ್ವೇಷಿಯೂ ಆಗಿದ್ದ. ಆದರಿಂದಾಗಿ ವಿಷ್ಣುಪಾದೋದಕ ಎಂಬ ಕಾರಣದಿಂದ ಗಂಗೆಯಲ್ಲಿ ಎಂದೂ ಸ್ನಾನ ಮಾಡೆನೆಂಬ ವ್ರತವನ್ನೂ ತೊಟ್ಟಿದ್ದ. ಭೀಮ ಅವನನ್ನು ಹಾಗೆ ಗಂಗೆಯಲ್ಲಿ ಬಿಸಾಡುವ ಮೂಲಕ ಅವನ ದೇಹಕ್ಕೆ ಮಾತ್ರವಲ್ಲದೇ ವ್ರತಭಂಗವಾಡಿ ಮನಸ್ಸಿಗೂ ಅಪಾರ ವ್ಯಥೆ ಉಂಟುಮಾಡಿದ ಎಂದು ತಿಳಿಯಬೇಕು.

೩) ಇಂದಿಗೂ ಬ್ರಾಹ್ಮಣರ ಒಂದು ಪಂಗಡದವರು ತಾವು ವಿಷ್ಣುಭಕ್ತರೆಂಬ ಕಾರಣಕ್ಕೆ ಗಂಗೆಯಲ್ಲಿ ಸ್ನಾನ ಮಾಡುವುದಿಲ್ಲ. ಅದಕ್ಕೆ ಅವರು ನೀಡುವ ಕಾರಣ ಅದು ವಿಷ್ಣುಪಾದೋದಕ–ವಾದರೂ ಶಿವನ ನಿರ್ಮಾಲ್ಯವಾದ್ದರಿಂದ ನಿಷಿದ್ಧ ಎಂದು. ಅಂತೂ ಗಂಗಾಸ್ನಾನ ಮಾಡದ ಶೈವರಂತೆ ಗಂಗಾಸ್ನಾನ ಮಾಡದ ವೈಷ್ಣವರೂ ಇರುವುದು ಆಶ್ಚರ್ಯದ ಸಂಗತಿ.

೪) ಕನ್ನಡ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಜರಾಸಂಧನಿಗೆ ಗಂಗೆ ಹಿಮಾಲಯದ ಮೇಲೆ ಮಹಾಶಬ್ದದಿಂದ ಬೀಳುತ್ತಾ ವಿಷ್ಣುಸರ್ವೋತ್ತಮತ್ವವನ್ನು ಸಾರುತ್ತಿರುವಳು. ಆ ಶಬ್ದ ತನ್ನ ಕಿವಿಗೆ ಬೀಳಕೂಡದು ಎಂದು ಸದಾ ಭೇರಿ ಬಾರಿಸುತ್ತಾ ಇರುವಂತಹ ಮಹಾ ವಿಷ್ಣುದ್ವೇಷಿ.

---

೨೬. ವಿಷ್ಣುಪಾದೋದಕಂ ಮತ್ವಾ ಯಃ ಸ್ನಾತುಂ ಶಂಕತೇ ಕುಧೀಃ ।
ಅಮಜ್ಜಯಜ್ಜರಾಸಂಧಂ ಬಲಾತ್ ತಂ ಜಾಹ್ನವೀಜಲೇ ॥ – ಸರಸಭಾರತೀವಿಲಾಸ (೬/೨೭)

* ಪಾದೋತ್ಥಾಯಾಂ – (ಪಾಠಾಂತರ)

ಅದಕ್ಕೆಂದೇ ಅವನಿಗೆ ಭೀಮ ಹಾಗೆ ಅದರಲ್ಲೇ ಬೀಳಿಸುವ ಮೂಲಕ ಮಾನಭಂಗ ಮಾಡಿದ ಎಂಬ ಅರ್ಥದ ಮತ್ತೊಂದು ರೀತಿಯ ವಿವರಣೆಯುಂಟು :

''ಭೀಮಸೇನ ಜರಾಸಂಧನ ಕೈಕಾಲು ಕಟ್ಟಿ ಭಾಗೀರಥಿಯೊಳಗೆ ಬಿಸುಟಕೊಟ್ಟನು. ಭಾಗೀರಥಿ ಹಿಮವತ್ಪರ್ವತದಿಂದ ಕೆಳಗೆ ಬೀಳುವಾಗ ಮಹಾಶಬ್ದವಾಗತಿಹೋದು. ಭಾಗೀರಥೀ ಶಬ್ದ ಕವಿಗೆ ಬೀಳಬಾರದೆಂದು ಭೇರಿ ಭಾರಸ್ತಿಹ. ಹನ್ನೆರಡು ತಿಂಗಳು ಇರುಳು ಹಗಲು ಭೇರಿಶಬ್ದದಿಂದ ಇಹೋ ಜರಾಸಂಧನ್ನ ಭಾಗೀರಥೀ ಒಳಗೇ ಭೀಮಸೇನ ಬಿಸ್ಟಲಿಕ್ಕೆ 'ವಿಷ್ಣುಪಾದೋದಕದಲ್ಲಿ ಬಿದ್ದೆನಲ್ಲ!' ಎಂದು ಜರಾಸಂಧನ ದೇಹಕ್ಕೆ ಬೆಂಕಿ ಹಚ್ಚಿದಂಗಾಯಿತು. ಜರಾಸಂಧ ಭಾಗೀರಥಿಯೊಳಗೆ ಬಿದ್ದರೂ ಸರಿಯೆ ತಮಸ್ಸಿನ ಸರಿ ದುಃಖವಾಯಿತು. ಅವೈಷ್ಣವರು ಭಾಗೀರಥೀತೀರದಲ್ಲಿದ್ದರೂ ನಾರಾಯಣನಲ್ಲಿ ಭಕ್ತಿ ಇಲ್ಲದೇ ಇದ್ದವರು ಅಶನ ವ್ಯಸನ ಮಾಡಿಕೊಂಡವರಾಗಿ ಭಾಗೀರಥಿ ಏನು ಫಲ ಕೊಟ್ಟಾಳು? ಅವರಿಗೆ ಕಾಶೀಕ್ಷೇತ್ರ ಕಂಟಕಸದೃಶ. ಸರ್ವಥಾ ಫಲ ಕೊಡದು''.

೫) ಸಕಲ ಸಜ್ಜೀವರಿಗೂ ವಿರಜಾ ಸ್ನಾನ ಮಾಡಿಸುವ ವಾಯುದೇವರ ಅವತಾರನಾದ ಭೀಮಸೇನ ಸ್ವತಃ ಹಾಗೆ ಜರಾಸಂಧನನ್ನು ಗಂಗೆಯಲ್ಲಿ ಬೀಳಿಸಿದರೂ ಜರಾಸಂಧನಿಗೆ ಸದ್ಗತಿ–ಯಾಗಲಿಲ್ಲ. ಅದಕ್ಕೆ ಕಾರಣ ಅವನು ಸ್ವರೂಪತಃ ದೈವದ್ರೋಹಿಯಾಗಿದ್ದೇ ಆಗಿತ್ತು ಅದರಿಂದ ಭೀಮಸೇನ ಅವನನ್ನು ಗಂಗೆಯಲ್ಲಿ ಸ್ನಾನ ಮಾಡಿಸಿದ ಎನ್ನದೇ **'ಪ್ರಾಕ್ಷಿಪತ್'** (ಬಿಸಾಡಿದ) ಎಂದಿರುವರು ಎಂದು ತಿಳಿಯಬೇಕು.

೬) ಜರಾಸಂಧನನ್ನು ಹಾಗೆ ಎತ್ತಿ ಬಿಸಾಡುವ ಸಾಮರ್ಥ್ಯ ಬಲರಾಮನಿಗೂ ಇರಲಿಲ್ಲ ಎಂದಮೇಲೆ ಭೀಮ ಅದೆಂತಹ ಅದ್ಭುತ ಬಲಶಾಲಿ ಎಂಬುದು ಸ್ಫುಟಪಡುವುದು.

ಸ ವ್ರೀಡಿತಃ ಪ್ರಯಯೌ ಮಾಗಧಾಂಶ್ಚ
ಭೂಪೈಃ ಸಮೇತೋ ಭೀಮಸೇನೋ ರಥಂ ಸ್ವಮ್ ।
ಆರುಹ್ಯ ಕಾಶೀಶ್ವರಪೂಜಿತಶ್ಚ
ಯಯೌ ಕಾಲ್ಯಾ ಶಕ್ರಸನಾಮಕಂ ಪುರಮ್ ॥ ೨೭ ॥

ಅ: ನಾಚಿದ ಜರಾಸಂಧ ರಾಜರುಗಳೊಂದಿಗೆ ಮಗಧದೇಶಕ್ಕೆ ಹೊರಟುಹೋದ. ಭೀಮ-ಸೇನ ಕಾಶಿರಾಜನಿಂದ ಪೂಜಿತನಾಗಿ ತನ್ನ ರಥವನ್ನೇರಿ ಕಾಳಿಯೊಂದಿಗೆ ಇಂದ್ರಪ್ರಸ್ಥಕ್ಕೆ ತೆರಳಿದ.

ವಿ: ೧) ಜರಾಸಂಧ ಹಾಗೆ ಭೀಮಸೇನನಿಂದ ಇನ್ನಿಲ್ಲದಂತೆ ಸೋತು ಹಿಂದಿರುಗಿದ. ಅಂತೂ ಆ ರೀತಿಯಾಗಿ ಶ್ರೀಕೃಷ್ಣನಿಂದ ಹದಿನೆಂಟು ಬಾರಿ ಸೋತಿದ್ದ ಅವನು ಶ್ರೀಕೃಷ್ಣ ಭಕ್ತನಿಂದಲೂ ಇಂತಹ ಸೋಲನ್ನು ಕಂಡು ಸೋಲುವುದರಲ್ಲೂ ದಾಖಲೆ ಮಾಡಿದ ಎನ್ನಬಹುದು.

೨) ಈ ಕಾಶೀರಾಜ ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರ ಪಕ್ಷದಲ್ಲಿದ್ದ ಉಲ್ಲೇಖ ಗೀತೆಯಲ್ಲೇ ಬಂದಿದೆ – 'ಕಾಶಿರಾಜಶ್ಚ ವೀರ್ಯವಾನ್' (೨೦/೫).

ಕಾಳೀಪುತ್ರ ಶರ್ವತ್ರಾತ

ತಸ್ಯಾಂ ತ್ರಿಲೋಕಾಧಿಕರೂಪಸದ್ಗುಣೈ-
ರಾಸಮ್ಮಿತಾಯಾಂ ರಮಮಾಣಃ ಸುತಂ ಚ ।
ಶರ್ವತ್ರಾತಂ ನಾಮ್ನಾಽಜನಯತ್ ಪುರಾ ಯಃ
ಸಮಾನವಾಯುರ್ಬಲವೀರ್ಯಯುಕ್ತಃ ॥ ೨೮ ॥

ಅ: ಮೂರು ಲೋಕಗಳಲ್ಲೂ ಮಿಗಿಲಾದ ರೂಪ ಹಾಗೂ ಸದ್ಗುಣಗಳಿಂದ ತನಗೆ ಅತ್ಯಂತ ಅನುರೂಪಳಾಗಿದ್ದ ಕಾಳೀದೇವಿಯಲ್ಲಿ ರಮಿಸುತ್ತಾ ಭೀಮಸೇನ ಶರ್ವತ್ರಾತ ಎಂಬ ಹೆಸರಿನ ಪುತ್ರನನ್ನು ಹುಟ್ಟಿಸಿದ. ಅವನು ಹಿಂದೆ ಬಲವೀರ್ಯಗಳಿಂದ ಕೂಡಿದ ಸಮಾನ ಎಂಬ ಹೆಸರಿನ ಮರುತ್.

ವಿ: ೧) ಅತ್ಯಂತ ಅನುರೂಪವಾದ ಭೀಮಕಾಳಿಯರ ದಾಂಪತ್ಯದಲ್ಲಿ ಶರ್ವತ್ರಾತ ಎಂಬ ಪುತ್ರ ಜನಿಸಿದ. ಅವನು ನಲವತ್ತೊಂಭತ್ತು ಮರುತ್‌ಗಳಲ್ಲಿನ ಪ್ರಾಣಾಪಾನಾದಿಗಳಲ್ಲಿ ಸೇರಿದ ಸಮಾನ ನಾಮಕ ಮರುತ್ ಎಂದು ತಿಳಿಯಬೇಕು. ಆತ ಸ್ವರೂಪದಲ್ಲೂ ವಾಯುದೇವರ ಪುತ್ರನೇ ಆದವನು ಎಂಬುದು ವಿಶೇಷ.

೨) ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ಅವನ ಹೆಸರನ್ನು ಸರ್ವಗ ಎಂದು ಕರೆಯಲಾಗಿದೆ. ಶರ್ವತ್ರಾತ ಎಂಬ ಹೆಸರು ಅವನಿಗೆ ಬರಲು, ಮುಂದೆ ಅಶ್ವತ್ಥಾಮರಿಂದ ಹದಿನೆಂಟನೆಯ ದಿವಸದ ರಾತ್ರಿಯಲ್ಲಿ ಪಾಂಡವ ಶಿಬಿರದಲ್ಲಿ ನಡೆದ ಘೋರಹತ್ಯೆಯಲ್ಲಿ ಅವನನ್ನು ಕಾಶಿರಾಜ ಕೇಳಿಕೊಂಡಿದ್ದಂತೆ ಶಿವ ಕೈಲಾಸಕ್ಕೆ ಎತ್ತಿಕೊಂಡು ಹೋಗಿ ಕಾಪಾಡಿದ್ದೇ ಕಾರಣ ಎಂಬ ವಿವರ ಮುಂದೆ ಬಂದಿದೆ. (ಅ. ೨೮, ಶ್ಲೋ. ೧೪೪).

ಶ್ರೀಕೃಷ್ಣನಿಂದ ಶತಧನ್ವನ ವಧೆ

ಕೃಷ್ಣೋಽಪಿ ಗತ್ವಾ ದ್ವಾರವತೀಂ ಸರಾಮಃ
ಸತ್ಯಾಪಿತುರ್ವಧಕರ್ತಾರಮೇವ ।
ಶತಧನ್ವಾನಂ ಹಂತುಮೈಚ್ಛತ್ ಸ ಚೈವ
ಯಯಾಚೇಽಕ್ರೂರಂ ಕೃತವರ್ಮಾನುಯುಕ್ತಮ್ ॥ ೨೯ ॥

---

೨೮. ...ಗುಣೈರಾಸಮ್ಮತಾಯಾಮ್ (ವೇ. ಪಾಠ); ಆಸಮ್ಮತಾಯಾಂ ಸಮ್ಯಕ್ ಪ್ರಸಿದ್ಧಾಯಾಮ್ । – (ವೇ.)

೨೮. ರೂಪಸದ್ಗುಣೈರಾಸಮ್ಮಿತಾಯಾಮಿತ್ಯತ್ರ ಆ = ಸಮಂತಾತ್ ಸಮ್ಯಕ್ ಮಿತಾಯಾಂ= ಪ್ರಮಿತಾಯಾಮ್ ॥ – (ವಾ.)

ಅ: ಶ್ರೀಕೃಷ್ಣನು ಸಹ ಬಲರಾಮನೊಂದಿಗೆ ದ್ವಾರಕೆಗೆ ತೆರಳಿ ಸತ್ಯಭಾಮೆಯ ತಂದೆಯಾದ ಸತ್ರಾಜಿತನನ್ನು ಕೊಂದ ಶತಧನ್ವನನ್ನು ಕೊಲ್ಲಲು ಸಂಕಲ್ಪಿಸಿದ; ಅಕ್ರೂರ, ಕೃತವರ್ಮರನ್ನು ಶತಧನ್ವ ಸಹಾಯಕ್ಕಾಗಿ ಯಾಚಿಸಿದ.

ವಿ: ೧) ಸತ್ರಾಜಿತನನ್ನು ಕೊಂದಾಗಲೇ ಶತಧನ್ವನನ್ನು ಕೊಲ್ಲದಿರಲು ಆ ವೇಳೆಗೆ ದ್ರೌಪದೀ ಸ್ವಯಂವರದ ವಾರ್ತೆ ಬಂದುದರಿಂದ ಶ್ರೀಕೃಷ್ಣ ಆ ಮಂಗಲಕಾರ್ಯಕ್ಕೆಂದು ತೆರಳಿ, ಅದಾದ ಬಳಿಕ ಶತಧನ್ವನನ್ನು ಶಿಕ್ಷಿಸುವ ಕಾರ್ಯಕ್ಕೆ ತೊಡಗುತ್ತಿರುವನು ಎಂದು ತಿಳಿಯಬೇಕು.

೨) ಶತಧನ್ವನು ಅಕ್ರೂರ ಕೃತವರ್ಮರನ್ನು ಸಹಾಯಕ್ಕಾಗಿ ಯಾಚಿಸಲು ಆ ಯೋಜನೆ–ಯಲ್ಲಿ ಅವರಿಬ್ಬರೂ ಸೇರಿಕೊಂಡಿದ್ದೇ ಕಾರಣವಾಗಿತ್ತು.

ತಾವಬ್ರೂತಾಂ ಸರ್ವಲೋಕೈಕಕರ್ತು-
ರ್ನಾವಾಂ ವಿರೋಧಂ ಮನಸಾऽಪಿ ಕುರ್ವಃ ।
ಕೃಷ್ಣಸ್ಯ ಸರ್ವೇಶಿತುರಿತ್ಯನೂಕ್ತ
ಆರುಹ್ಯ ಚಾಶ್ವೀಂ ಭಯತಃ ಪರಾದ್ರವತ್ ॥ ೩೦ ॥

ಅ: ಅವರಿಬ್ಬರು ನುಡಿದರು 'ಸರ್ವಲೋಕಕ್ಕೆಲ್ಲ ಮುಖ್ಯಕಾರಣನೂ, ಸರ್ವೇಶ್ವರನೂ ಆದ ಶ್ರೀಕೃಷ್ಣನಿಗೆ ನಾವು ಮನಸ್ಸಿನಲ್ಲಿಯೂ ದ್ರೋಹ ಬಗೆಯಲಾರೆವು'. ಅವರು ಹಾಗೆನ್ನಲು ಶತಧನ್ವ ಭಯಗ್ರಸ್ತನಾಗಿ ಹೆಣ್ಣು ಕುದುರೆಯನ್ನು ಏರಿ ಅಲ್ಲಿಂದ ಪಲಾಯನ ಮಾಡಿದ.

ವಿ: ೧) ಅಕ್ರೂರ ಕೃತವರ್ಮರ ಬುದ್ಧಿ ಈಗ ತಿಳಿಯಾಗಿದ್ದರಿಂದ ಶ್ರೀಕೃಷ್ಣದ್ರೋಹಕ್ಕೆ ಮನಸ್ಸು ಮಾಡಲಿಲ್ಲ ಎಂದು ತಿಳಿಯಬೇಕು.

೨) ಶತಧನ್ವನು ಶ್ರೀಕೃಷ್ಣನನ್ನು ಶರಣು ಹೊಂದುವ ಬದಲು ಅಲ್ಲಿಂದ ಪಲಾಯನ ಮಾಡಲು ಅವನು ಸ್ವತಃ ದುಷ್ಟನಾಗಿದ್ದುದೇ ಕಾರಣ ಎಂದು ತಿಳಿಯಬೇಕು.

ಅನ್ವೇವ ತಂ ಕೃಷ್ಣರಾಮೌ ರಥೇನ
ಯಾತೌ ಶತಂ ಯೋಜನಾನಾಂ ದಿನೇನ ।
ಗತ್ವಾ ಮೃತಾಯಾಂ ಬಡವಾಯಾಂ ತದೈವ
ಸ ಪ್ರಾದ್ರವತ್ ಕೃಷ್ಣ ಏನಂ ಪದಾऽಗಾತ್ ॥ ೩೧ ॥

---

೩೦. ಇತ್ಯನೂಕ್ತ ಆರುಹ್ಯೇತ್ಯತ್ರ ಇತಿ ಉಕ್ತಂ ಅನು= ಅನಂತರಮಿತಿ ಪದವಿಭಾಗಃ ॥ – (ವಾ.)

ಅ: ಅವನ ಹಿಂದೆಯೇ ಬೆನ್ನಟ್ಟಿ ಕೃಷ್ಣ ಬಲರಾಮರು ರಥದಲ್ಲಿ ಹೊರಟರು. ದಿನವಿಡೀ ನೂರು ಯೋಜನ ಓಡಿ ಆ ಕುದುರೆ ಸತ್ತುಹೋಗಲು ಶತಧನ್ವ ಕಾಲ್ನಡಿಗೆಯಿಂದಲೇ ಓಡಿದ. ಶ್ರೀಕೃಷ್ಣ ಅವನನ್ನು ಓಡುತ್ತಲೇ ಬೆನ್ನಟ್ಟಿದ.

ವಿ: ಶತಧನ್ವ ಓಡುತ್ತಾ ಹೊರಟಿದ್ದರಿಂದ ಶ್ರೀಕೃಷ್ಣ ತಾನು ರಥದಿಂದಿಳಿದು ಓಡುತ್ತಲೇ ಬೆನ್ನಟ್ಟಿ ಶತ್ರುವನ್ನು ಅವನ ಮಾಧ್ಯಮದಲ್ಲಿಯೇ ಎದುರಿಸಬೇಕು ಎಂಬ ತತ್ವವನ್ನು ಸೂಚಿಸಿದ.

ಛಿತ್ವಾ ಶಿರಸ್ತಸ್ಯ ಚಕ್ರೇಣ ಕೃಷ್ಣೋ
ಜಾನನ್ನಕ್ರೂರೇ ಮಣಿಮೇತೇನ ದತ್ತಮ್ ।
ಅಪ್ಯಜ್ಞವಲ್ಲೋಕವಿಡಂಬನಾಯ
ಪರೀಕ್ಷ್ಯ ವಾಸೋಽತ್ರ ನೇತ್ಯಾಹ ರಾಮಮ್ ॥ ೩೨ ॥

ಅ: ಶ್ರೀಕೃಷ್ಣ ಚಕ್ರದಿಂದ ಅವನ ಶಿರಸ್ಸನ್ನು ಕತ್ತರಿಸಿದ. ಅವನು ಮಣಿಯನ್ನು ಅಕ್ರೂರನ ಕೈಗಿತ್ತಿದನ್ನು ತಿಳಿದಿದ್ದೂ ಸಹ ತಿಳಿಯದವನಂತೆ ಲೋಕವಿಡಂಬನೆಗಾಗಿ ಅವನು ತೊಟ್ಟಿದ್ದ ವಸ್ತ್ರಗಳನ್ನು ಪರೀಕ್ಷಿಸಿದ; ಬಲರಾಮನಿಗೆ 'ಇವನಲ್ಲಿ ಮಣಿಯಿಲ್ಲ' ಎಂದು ತಿಳಿಸಿದ.

ವಿ: ೧) ಶತಧನ್ವ ಹಾಗೆ ಓಡುವ ಮುನ್ನ ಸ್ಯಮಂತಕಮಣಿಯನ್ನು ಅಕ್ರೂರನ ಕೈಗೆ ನೀಡಿದ್ದ. ಸರ್ವಜ್ಞನಾದ ಕೃಷ್ಣನಿಗೆ ಅದೆಲ್ಲಾ ತಿಳಿದಿತ್ತು. ಆದರೂ ಅವನು ಶತಧನ್ವನನ್ನು ಕೊಂದದ್ದು ಅವನು ಸತ್ರಾಜಿತನ ಕೊಲೆ ಮಾಡಿದ್ದಕ್ಕೆ ಶಿಕ್ಷೆ ನೀಡಲೆಂದು. ಮಣಿಯನ್ನು ಹುಡುಕಿದಂತೆ ಮಾಡಿ ಆ ವೇಳೆಗೆ ಅಲ್ಲಿಗೆ ಬಂದ ಬಲರಾಮನಿಗೆ ಅದು ಅವನ ಬಳಿ ಇಲ್ಲ ಎಂದು ನುಡಿದ.

೨) ಶ್ರೀಕೃಷ್ಣ ಬಲರಾಮರಿಬ್ಬರೂ ಒಟ್ಟಾಗಿಯೇ ಓಡಿದರೂ, ಶ್ರೀಕೃಷ್ಣ ಶತಧನ್ವನನ್ನು ಕೊಂದಾದ ಮೇಲೆಯೇ ಬಲರಾಮನಿಗೆ ಅಲ್ಲಿಗೆ ತಲುಪಲು ಸಾಧ್ಯವಾಯಿತು. ಎಂದರೆ ಹರಿಯ ವೇಗದ ಮುಂದೆ ಬಲರಾಮನ ವೇಗ ಕಡಿಮೆಯೆಂದು ಸ್ಫುಟಪಡುವುದು.

೩) ಇದರಿಂದ ಬಲರಾಮ ಸಾಕ್ಷಾತ್ ಶ್ರೀಹರಿಯ ಅವತಾರ ಎಂಬವರ ವಾದ ಸರಿಯಲ್ಲ ಎಂದು ಸಿದ್ಧವಾಗುವುದು. ಶ್ರೀಕೃಷ್ಣ ಈಶಾವಾಸ್ಯೋಪನಿಷತ್ ಹೇಳುವಂತೆ ತಾನು ನಿಂತಿದ್ದೇ ಓಡುವವರನ್ನೆಲ್ಲ ಮೀರಿಸುವವನು (**'ತದ್ಧಾವತೋಽನ್ಯಾನತ್ಯೇತಿ ತಿಷ್ಠತ್'**).

---

* ಅಲಬ್ಧಮಣಿರಾಗಾತ್ಯ ಕೃಷ್ಣ ಆಹಾಗ್ರಜಾಂತಿಕಮ್ ।
ವೃಥಾ ಹತಃ ಶತಧನುರ್ಮಣಿರತ್ರ ನ ವಿದ್ಯತೇ । – ಭಾಗವತ (೧೦/೫೭/೨೨)

ವಿದೇಹದಲ್ಲಿ ಬಲರಾಮ - ಅವನ ಬಳಿ ದುರ್ಯೋಧನ

ಅವಿಶ್ವಾಸಾತ್ ಸ ತು ಸಕ್ರೋಧ ಏವ
ಯಯೌ ವಿದೇಹಾನವಸತ್ ಪಂಚ ಚಾಬ್ದಾನ್ ।
ಜಾನನ್ ಪಾರ್ಥೇಭ್ಯೋಽಹಾರ್ಯತಾಂ ಕೇಶವಸ್ಯ
ವಶೀಕರ್ತುಂ ಧಾರ್ತರಾಷ್ಟ್ರೋ ಬಲಂ ಗಾತ್ ॥ ೩೩ ॥

ಅ: ಬಲರಾಮ ಶ್ರೀಕೃಷ್ಣನನ್ನು ನಂಬದೆ ಕೋಪದಿಂದಲೇ ಅಲ್ಲಿಂದ ವಿದೇಹಕ್ಕೆ ತೆರಳಿ ಅಲ್ಲಿ ಐದು ವರ್ಷಗಳ ಕಾಲ ನೆಲೆಸಿದ. ಶ್ರೀಕೃಷ್ಣನನ್ನು ಪಾಂಡವರಿಂದ ತನ್ನೆಡೆಗೆ ಸೆಳೆದುಕೊಳ್ಳಲು ಅಸಾಧ್ಯವೆಂದು ಬಗೆದ ದುರ್ಯೋಧನ ಬಲರಾಮನನ್ನು ವಶಪಡಿಸಿಕೊಳ್ಳಲೆಂದು ಅವನ ಬಳಿಗೆ ತೆರಳಿದ.

ಆ: ೧) ಬಲರಾಮ ಶ್ರೀಕೃಷ್ಣನ ಮಾತನ್ನು ನಂಬದೇ ಆ ಮಣಿಯನ್ನು ಕೃಷ್ಣ ತಾನು ಎತ್ತಿಟ್ಟು-ಕೊಂಡು ಸುಳ್ಳು ಹೇಳಿದ ಎಂದು ತಪ್ಪು ತಿಳಿದ. ಬೇಸರದಿಂದ ವಿದೇಹದೇಶಕ್ಕೆ ನಡೆದ. ಶ್ರೀಕೃಷ್ಣನ ಬಗ್ಗೆ ಹಾಗೆ ಅಪನಂಬಿಕೆ ತಾಳಿದ್ದು ಬಲರಾಮ ಮಾಡಿದ ಅಪರಾಧ.

೨) ಅದು ಅವನು ಭಾಗವತ ಧರ್ಮವನ್ನು ತಪ್ಪಿದ ಒಂದು ಪ್ರಮುಖ ಪ್ರಸಂಗ ಎಂಬ ಮಾತು ಈಗಾಗಲೇ ಬಂದಿದೆ (೧೮/೧೯).

೩) ಕೃಷ್ಣನನ್ನು ಹಾಗೆ ತಪ್ಪು ತಿಳಿದಿದ್ದರಿಂದಲೇ ಅವನಿಗೆ ಶ್ರೀಕೃಷ್ಣನ ಬಳಿ ಇರುವ ಯೋಗ ತಪ್ಪಿ ಐದು ವರ್ಷಗಳಷ್ಟು ಕಾಲ ಅಗಲಿರಬೇಕಾದ ಪ್ರಸಂಗ ಒದಗಿತು ಎಂದು ಭಾವಿಸಬಹುದು. ವಿಷಯ ತಿಳಿದ ದುರ್ಯೋಧನ ಅಲ್ಲಿಗೆ ತೆರಳಿದ. ಶ್ರೀಕೃಷ್ಣನನ್ನಂತೂ ಪಾಂಡವರಿಂದ ತನ್ನೆಡೆಗೆ ಸೆಳೆದುಕೊಳ್ಳುವುದು ಅಸಾಧ್ಯದ ಮಾತು; ಈ ಬಲರಾಮನನ್ನಾದರೂ ತನ್ನತ್ತ ಎಳೆದುಕೊಳ್ಳಬಹುದು ಎಂದು ಅವನು ಅಲ್ಲಿಗೆ ತೆರಳಿದ. ಹರಿವಂಶದಲ್ಲಿ ಅರವತ್ತು ವರ್ಷ ಎಂದಿರುವುದನ್ನು ಅರವತ್ತು ತಿಂಗಳು ಎಂದು ಅರ್ಥಮಾಡಿಕೊಂಡಲ್ಲಿ ವಿರೋಧವಿರದು.

೪) ಶ್ರೀಕೃಷ್ಣನನ್ನು ಅಗಲಿದವರ ಬಳಿಗೆ ಕಲಿ ಧಾವಿಸುವನು ಎಂಬುದಕ್ಕೂ ಇದು ಸೂಚಕ. ಬಲರಾಮನಿಗೆ ಕಲಿಯ ಆವೇಶಕ್ಕೆ ಅವಕಾಶ ಇದೆಯೆನ್ನಲು ಸಹ.

---

೩೩. ಜಾನನ್ ಪಾರ್ಥೇಭ್ಯೋಽಹಾರ್ಯತಾಮಿತ್ಯತ್ರ ಕೇಶವಸ್ಯ ಪಾರ್ಥೇಭ್ಯೋಽಹಾರ್ಯತಾಂ= ಅಪಹಾರಾ-ಯೋಗ್ಯತಾಂ ಪಾರ್ಥಸ್ನೇಹಂ ಹಿತ್ವಾ ಸ್ವಸ್ನೇಹಾಯ ಅಪಹರ್ತುಮಶಕ್ಯತಾಮಿತ್ಯರ್ಥಃ। ಬಲಂ ಗಾದಿತ್ಯತ್ರ ''ಬಹುಲಂ ಛಂದಸ್ಯಮಾಂಙ್‌ಯೋಗೇಽಪಿ'' ಇತಿ ವಚನಾತ್ ಗಾತ್= ಬಲಂ ವಶೀಕರ್ತುಂ ವಿದೇಹನಗರಮಗಾತ್ ॥ – (ವಾ.)

೩೩. ಯಯೌ ವಿದೇಹಾನವಸತ್ಪಂಚ ಚಾಬ್ದಾನಿತಿ 'ಷಷ್ಠಿವರ್ಷೇ ಗತೇ ಕಾಲೇ ಯದ್ದೋಷೋಽಭೂನ್ಮಮಾನಘ' ಇತಿ ಹರಿವಂಶವಚನಮ್ । ಷಷ್ಟಿಮಾಸಾ ಏವ ತಾವಂತೋ ವರ್ಷಾಭಿಪ್ರಾಯೇಣೇತಿ ಜ್ಞಾತವ್ಯಮ್ ॥ – (ಮ.)

೪) ಅವನು ಶೇಷಾವತಾರ. ಗರುಡ, ಶೇಷ, ರುದ್ರರಿಗೂ ಸಹ ಕಲ್ಯಾವೇಶಕ್ಕೆ ಒಳಗಾಗುವ ಸಂಭವವುಂಟು ಎಂಬುದು ಇದರಿಂದ ನಿರೂಪಿತವಾಗುವುದು.

ಬಲರಾಮನಲ್ಲಿ ದುರ್ಯೋಧನನ ಗದಾಭ್ಯಾಸ

ಬಭೂವ ಶಿಷ್ಯೋಽಸ್ಯ ತಥಾ ಗದಾಯಾ-
ಮಸನ್ನಿಧಾನಂ ಕೇಶವಸ್ಯ ಪ್ರತೀಕ್ಷನ್ ।
ತದಾ ಯಯಾಚೇ ಭಗಿನೀಂ ಚ ತಸ್ಯ
ಸ ಚ ಪ್ರತಿಜ್ಞಾಮಕರೋತ್ ಪ್ರದಾನೇ ॥ ೩೪ ॥

ಅ: ದುರ್ಯೋಧನ ಬಲರಾಮನಿಗೆ ಗದಾಯುದ್ಧದಲ್ಲಿ ಶಿಷ್ಯನಾದ. ಶ್ರೀಕೃಷ್ಣ ಅಲ್ಲಿಲ್ಲ-ವೆಂಬುದನ್ನು ಗಮನಿಸಿ ಅವನು ಬಲರಾಮನನ್ನು ಅವನ ತಂಗಿಯಾದ ಸುಭದ್ರೆಯನ್ನು ತನಗೆ ನೀಡಲು ಕೇಳಿಕೊಂಡ. ಅವನೂ ಸಹ ಕೊಡುವುದಾಗಿ ಅವನಿಗೆ ವಚನ ನೀಡಿದ.

ವಿ: ೧) ದುರ್ಯೋಧನ ಬಲರಾಮನಿಗೆ ಶಿಷ್ಯನಾಗಿ ಗದಾಯುದ್ಧ ಕಲಿತದ್ದು ಈ ಪ್ರಸಂಗದಲ್ಲೇ. ಅವನು ಶ್ರೀಕೃಷ್ಣನಿಲ್ಲದ ಪ್ರಸಂಗದ ದುರ್ಲಾಭವನ್ನು ಪಡೆದು ಬಲರಾಮನಿಂದ ಸುಭದ್ರೆಯನ್ನು ಪಡೆಯುವ ಆಶ್ವಾಸನೆಯನ್ನು ಪಡೆದ.

೨) ಹೀಗೆ ಒಳಿತನ್ನು ಕಲಿಯು ಸಾತ್ವಿಕರಿಂದ ಕಿತ್ತುಕೊಳ್ಳುವನು ಎಂಬುದು ಇದರಿಂದ ಸೂಚಿತ. 'ಸುಭದ್ರ' ಎಂದರೆ ಒಳ್ಳೆಯದು, ಶುಭಕರವಾದುದು ಎಂದರ್ಥ.

ಸುಭದ್ರೆಯನ್ನು ನೀಡಲು ದುರ್ಯೋಧನನಿಗೆ ಬಲರಾಮನ ವಾಗ್ದಾನ

ಜ್ಯೇಷ್ಠಂ ಹ್ಯೇನಂ ಕೇಶವೋ ನಾತಿವರ್ತೇ-
ದಿತ್ಯೇವ ಮೇನೇ ಧಾರ್ತರಾಷ್ಟ್ರಃ ಸ ತಸ್ಮಾತ್ ।
ಜಗ್ರಾಹ ಹಸ್ತಂ ದಕ್ಷಿಣಂ ಸತ್ಯಹೇತೋ-
ರ್ದದೌ ಚ ರಾಮಃ ಕರಮಸ್ಮೈ ಹಲಾಂಕಮ್ ॥ ೩೫ ॥

ಅ: ಅಣ್ಣನಾದ ಇವನನ್ನು ಶ್ರೀಕೃಷ್ಣ ಮೀರಲಾರ ಎಂದು ಭಾವಿಸಿಯೇ ದುರ್ಯೋಧನ ಹಾಗೆ ಮಾಡಿದ. ಅವನು ನೀಡಿದ ವಚನವನ್ನು ಸತ್ಯವೆಂದು ನಿರೂಪಿಸಲು ಬಲಗೈಯನ್ನು ಕೊಡು ಎಂದು ಕೇಳಿದ. ಬಲರಾಮ ನೇಗಿಲ ಚಿಹ್ನೆಯಿದ್ದ ತನ್ನ ಹಸ್ತವನ್ನು ದುರ್ಯೋಧನನಿಗೆ ಕೊಟ್ಟ.

ವಿ: ೧) ದುರ್ಯೋಧನ ಶಿಷ್ಯನಾಗಿ ಗುರು ದಕ್ಷಿಣೆ ನೀಡುವ ಬದಲು ಗುರುವಿನಿಂದಲೇ ಕಾಣಿಕೆ ಪಡೆಯಬಯಸಿದ ಮಹಾಧೂರ್ತ ಎಂಬುದು ಇದರಿಂದ ತಿಳಿಯುವುದು. ಅವನು ಬರೀ ಮಾತಿಗೆ ತೃಪ್ತನಾಗದೇ ಹಾಗೆ ಶಪಥ ಮಾಡಲು ತನ್ನ ಬಲಗೈ ನೀಡಿದ. ಬಲರಾಮ ಅವನ ಕೈ ಮೇಲೆ ತಮ್ಮ ನೇಗಿಲ ಚಿಹ್ನೆಯಿದ್ದ ಕೈಯನ್ನು ಹಾಕಿ ವಚನ ನೀಡಿದ.

೨) ಕಲಿ ಹೀಗೆ ಶೇಷದೇವರಂಥವರನ್ನೂ ತನ್ನೆಡೆಗೆ ಸೆಳೆದುಕೊಂಡಿದ್ದು ಗಮನಿಸಬೇಕಾದ ಅಂಶ. ಹಾಗೆ ಬಲಗೈ ಹಿಡಿಯಲು ಕ್ಷತ್ರಿಯರು ಆಯುಧ ಹಿಡಿಯುವ ಕೈಯಿಂದ ವಚನ ನೀಡಬೇಕು ಎಂಬುದಕ್ಕೆ ಸೂಚಕ ಎಂದು ತಾಮ್ರಪರ್ಣಿಯದಲ್ಲಿದೆ.

೩) ಬಲರಾಮನ ಬಲಗೈಯಲ್ಲಿ ಜನ್ಮಾರಭ್ಯ ನೇಗಿಲ ಚಿಹ್ನೆಯಿದ್ದುದಕ್ಕೂ ಇದು ಸೂಚಕ. ಶ್ರೀಕೃಷ್ಣ ಕೈಯಲ್ಲಿ ಚಕ್ರವನ್ನು ಹಿಡಿದಿರುವುದು ಮಾತ್ರವಲ್ಲದೇ ಅವನ ಕೈಯಲ್ಲಿ ಚಕ್ರದ ಗುರುತೂ ಸಹ ಇರುವಂತೆ, ಹಲಾಯುಧನಾದ ಬಲರಾಮನಿಗೂ ಕೈಯಲ್ಲಿ ನೇಗಿಲ ಗುರುತು ಸಹಜವಾಗಿಯೇ ಇದ್ದಿತು ಎಂದು ಇದರಿಂದ ತಿಳಿಯುವುದು.

೪) ಶೇಷ ಸ್ವರೂಪದಲ್ಲಿಯೇ ಹಲಾಂಕ ಎಂಬ ಮಾತು ತಂತ್ರಸಾರದಲ್ಲಿದೆ : 'ದಧಾನೋ ಹಲಸೌನಂದೌ ಶ್ವೇತವರ್ಣಃ ಕೃತಾಂಜಲಿಃ' (೪/೮೧).

೫) ಗುರುವಿನ ಪಾದ ಹಿಡಿಯಬೇಕಾಗಿದ್ದ ಶಿಷ್ಯ ಅವರ ಕೈ ಹಿಡಿದದ್ದು ಮುಂದೆ ಲಕ್ಷಣಾಸ್ವಯಂವರ ಪ್ರಸಂಗದಲ್ಲಿ ಅವರಿಗೆ ಕೈಕೊಡುವುದಕ್ಕೆ ಸಂಕೇತವೂ ಆಯಿತು (೨೨/೨೩೧).

ಸುಭದ್ರೆಯ ಪೂರ್ವಾಪರ

ರೂಪೇಣ ತಸ್ಯಾ ಮೋಹಿತೋ ಧಾರ್ತರಾಷ್ಟ್ರೋ
ವಿಶೇಷತಃ ಕೃಷ್ಣರಾಮೌ ಭಗಿನ್ಯಾಃ ।
ಸ್ನೇಹಾದ್ವಶಂ ಯಾಸ್ಯತ ಇತ್ಯಗೃಹ್ಣಾ-
ದ್ಧಸ್ತಂ ಹಲಾಂಕಂ ಹಲಿನೋ ರಿಪುಘ್ನಮ್ ॥ ೩೬ ॥

---

೩೫. ಭಟಾಃ ಸಾಯುಧೇನ ಹಸ್ತೇನ ಶಪಥಂ ಕುರ್ವಂತೀತಿ ನೀತ್ಯಾ ಹಲಾಂಕಮಿತ್ಯುಕ್ತಮ್ । – (ವ.)

೩೫. ಕ್ಷತ್ರಿಯಾಃ ಆಯುಧಹಸ್ತೇನ ಶಪಥಂ ಕುರ್ವಂತೀತಿ ಸೂಚಯಿತುಂ ಹಲಾಂಕಮಿತ್ಯುಕ್ತಮ್ । – (ಜ.)

೩೫. ಹಲಾಂಕಮಿತಿ ಹಲರೇಖಾವದಿತ್ಯರ್ಥಃ। 'ದೇಹಸ್ಯ ಲಕ್ಷಣಂ ನೈವ ಭೂಮಾವಪ್ಯನ್ಯಥಾ ಭವೇತ್' ಇತ್ಯುಕ್ತ-ರೀತ್ಯಾ ಸ್ವರೂಪಲಕ್ಷಣಯುಕ್ತಮದ್ಭುತಂ ಹಸ್ತಮಯೋಗ್ಯಾಯ ದದಾವಿತ್ಯನೌಚಿತ್ಯದ್ಯೋತನಾಯೈವಯುಕ್ತಮ್। ವ್ಯಾಸತೀರ್ಥೀಯೇ ತು– ಭಟಾಃ ಶಪಥಂ ಕುರ್ವಂತಃ । ಸ್ವಾಯುಧಂ ಪ್ರದರ್ಶ್ಯ ಕುರ್ವಂತಿ ರಾಮೋಽಪಿ ತತ್ಕೃತವಾನಿತಿ ಸೂಚಯತೀತ್ಯುಕ್ತಮ್ । – (ತಾ.)

ಅ: ಸುಭದ್ರೆಯ ರೂಪಕ್ಕೆ ಮರುಳಾಗಿದ್ದ ದುರ್ಯೋಧನ ವಿಶೇಷವಾಗಿ ಬಲರಾಮ, ಶ್ರೀಕೃಷ್ಣರಿಬ್ಬರೂ ತಂಗಿಯ ಮೇಲಿನ ಪ್ರೀತಿಯಿಂದಾಗಿ ತನಗೆ ವಶರಾಗುವರು ಎಂದು ಭಾವಿಸಿ ಬಲರಾಮನ ಶತ್ರುನಾಶಕವಾದ ಹಲ ಚಿಹ್ನೆಯಿಂದ ಕೂಡಿದ್ದ ಕೈಯನ್ನು ಹಿಡಿದನು.

ವಿ: ೧) ಇಲ್ಲಿ ವಿಶೇಷವಾಗಿ ಎಂಬುದು ಯಥೋಚಿತವಾಗಿ ಎಲ್ಲ ಕಡೆಯೂ ಅನ್ವಯಿಸುವ ಪದ. ಶ್ರೀಕೃಷ್ಣ ರಾಮರನ್ನು ತನ್ನೆಡೆ ಸೆಳೆದುಕೊಳ್ಳುವ ತಂತ್ರ, ರೂಪಸಿಯಾದ ಸುಭದ್ರೆಯನ್ನು ಪಡೆಯುವ ತಂತ್ರ ದುರ್ಯೋಧನನ ಆ ಯೋಜನೆಯಲ್ಲಿತ್ತು ಎಂದರ್ಥ.

೨) ಶತ್ರುಗಳನ್ನು ಸದೆಬಡೆಯುವ ಬಲರಾಮನ ಹಸ್ತವನ್ನು ಹಿಡಿಯುವ ಮೂಲಕ ಬಲರಾಮನ ಧರ್ಮಬುದ್ಧಿಗೆ ದುರ್ಯೋಧನ ಕುತ್ತುತಂದ ಎಂಬ ಸೂಚನೆಯೂ ಇದರಲ್ಲಿದೆ.

ಅಕ್ರೂರನ ಬಳಿ ಸ್ಯಮಂತಕಮಣಿ

ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ
ಭದ್ರಾ ರೂಪೇಣಾನಕದುಂದುಭೇಸ್ತಾಮ್ ।
ಕೃತ್ವಾ ಪುತ್ರೀಂ ರೋಹಿಣೀ ಸ್ವಾಮರಕ್ಷತ್
ಪೂರ್ವಂ ತು ಯಾऽऽಸೀತ್ ತ್ರಿಜಟೈವ ನಾಮ್ನಾ ॥ ೩೭ ॥

ಅ: ಹಿಂದಿನ ಜನ್ಮದಲ್ಲಿ ತ್ರಿಜಟೆ ಎಂಬ ಹೆಸರಿನವಳು ಸುಭದ್ರೆಯೆಂಬ ಹೆಸರಿನಿಂದ ಶುಭಕರವಾದ ರೂಪದಿಂದ ವಸುದೇವನ ಮಗಳಾಗಿ ದೇವಕಿಯಲ್ಲಿ ಜನಿಸಿದ್ದಳು. ಅವಳನ್ನು ರೋಹಿಣಿಯು ತನ್ನ ಮಗಳನ್ನಾಗಿ ಬೆಳೆಸಿದ್ದಳು.

ವಿ: ೧) ರಾಮಾಯಣದಲ್ಲಿ ಅಶೋಕವನದಲ್ಲಿ ಸೀತೆಯನ್ನು ಸೇವಿಸಿಕೊಂಡಿದ್ದ ತ್ರಿಜಟೆ ಎಂಬ ರಾಕ್ಷಸಿಯೇ ಸುಭದ್ರೆಯಾಗಿ ಜನಿಸಿ ಬಂದಿದ್ದಳು ಎಂದರ್ಥ. ಅವಳು ಮೂಲತಃ ಒಬ್ಬ ಅಪ್ಸರೆ.

೨) ಸುಭದ್ರೆ ವಸುದೇವ, ದೇವಕಿಯರ ಮಗಳಾದರೂ ರೋಹಿಣೀ ತನ್ನ ಮಗಳನ್ನಾಗಿ ಬೆಳೆಸಿದ್ದರಿಂದ ರೋಹಿಣೀ ಪುತ್ರನಾದ ಬಲರಾಮನಿಗೆ ಸಹ ಒಂದು ರೀತಿಯಲ್ಲಿ ಅವಳನ್ನು ಧಾರೆಯೆರೆಯುವ ಹಕ್ಕು ಲಭಿಸಿತ್ತು ಎಂಬುದನ್ನು ಈ ವಿವರದಿಂದ ಸೂಚಿಸಿರುವರು. ಇಲ್ಲವಾದಲ್ಲಿ ತನಗೆ ಸಾಕ್ಷಾತ್ ತಂಗಿಯಲ್ಲದ ಸುಭದ್ರೆಯನ್ನು ದುರ್ಯೋಧನನಿಗೆ ನೀಡುವ ವಚನವನ್ನು ಅವನು ನೀಡಿದ್ದು ಅನುಚಿತ ಎಂದು ಶಂಕಿಸಲು ಸಾಧ್ಯವಿತ್ತು

---

೩೭. ತ್ರಿಜಟಾಪೂರ್ವಮಪ್ಸರಾ ಶಾಪಾದ್ರಕ್ಷಸ್ತ್ವಮಾಪನ್ನೇತಿ । – (ರಾ.)

ಸೀತಾಯಾಃ ಪ್ರಾಜ್ಞತ್ಯಶುಶ್ರೂಷಣಾತ್ ಸಾ
ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ ।
ಉಮಾವೇಶಾದ್ರೂಪಗುಣೋಪಪನ್ನಾ
ಪದ್ಮೇಕ್ಷಣಾ ಚಂಪಕದಾಮಗೌರೀ ॥ ೩೮ ॥

ಅ: ಹಿಂದೆ ಸೀತೆಯನ್ನು ನಿತ್ಯ ಸೇವಿಸಿದ್ದರ ಫಲವಾಗಿ ಅವಳು ಶ್ರೀಕೃಷ್ಣನಿಗೆ ಪ್ರೀತಿಯ ತಂಗಿಯಾಗಿ ಹುಟ್ಟಿದಳು; ಪಾರ್ವತಿಯ ಆವೇಶವಿದ್ದುದರಿಂದಾಗಿ ರೂಪ, ಗುಣಗಳಿಂದ ಕೂಡಿದವಳಾಗಿ ಇದ್ದಳು; ಅವಳವು ಕಮಲದಂತಹ ಕಣ್ಣುಗಳು, ಸಂಪಿಗೆ ಮಾಲೆಯಂತಹ ಗೌರವರ್ಣ.

ವಿ: ೧) ತ್ರಿಜಟೆಯಾಗಿದ್ದಾಗ ಒಂದು ವರ್ಷಕಾಲ ಅಶೋಕವನದಲ್ಲಿ ಪ್ರತಿನಿತ್ಯ ಸೀತೆಯನ್ನು ಸೇವಿಸಿದ್ದರ ಫಲ ಅವಳಿಗೆ ಹಾಗೇ ಶ್ರೀಕೃಷ್ಣನ ತಂಗಿಯಾಗಿ ಜನಿಸುವ ಯೋಗ ನೀಡಿತು ಎಂದರ್ಥ.

೨) ರಾವಣ ಸಂಹಾರದ ಅನಂತರವೂ ಅವಳು ಸೀತೆಯೊಂದಿಗೆ ಅಯೋಧ್ಯೆಗೆ ತೆರಳಿ ಅಲ್ಲಿಯೂ ಸೇವೆ ಮಾಡಿದ್ದಳೆಂಬ ವಿಶೇಷಾಂಶ ತಾಮ್ರಪರ್ಣೀಯದಲ್ಲಿದೆ. ತ್ರಿಜಟೆ ಪ್ರಹ್ಲಾದನಂತೆ ಅಸುರಯೋನಿಯಲ್ಲಿ ಜನಿಸಿದ್ದರೂ ಸ್ವರೂಪತಃ ದೇವಸ್ವಭಾವದವಳು; ಅವಳ ಸುಂದರ ಗೌರವರ್ಣಕ್ಕೆ ಗೌರಿಯ ಆವೇಶ ಕಾರಣವಾಗಿತ್ತು.

ಏತತ್ಕೃತ್ವಾ ಧೃತರಾಷ್ಟ್ರಾತ್ಮಜಃ ಸ
ಯಯೌ ಕುರೂನ್ ನಿವಸತ್ಯತ್ರ ರಾಮೇ ।
ಕೃಷ್ಣೋಽಕ್ರೂರಂ ವಿವಸಂತಂ ಭಯೇನ
ಸಹಾರ್ದಿಕ್ಯಂ ಜ್ಞಾನಯಿತ್ವಾ ಜಗಾದ ॥ ೩೯ ॥

---

೩೭. ಪ್ರಕೃತ್ಯಾವಿಷ್ಟೇಂದ್ರಸೇವನಾದರ್ಜುನಭಾರ್ಯಾ ಜ್ಞೇಯಮ್ । – (ಶ್ರೀ.)

೩೮. ಚಂಪಕಮಾಲಾವತ್ ಪೀತವರ್ಣಾ । – (ಜ.)

೩೮. ಲಂಕಾತಃ ಸೀತಯಾ ಸಹಾಯೋಧ್ಯಾಂ ಪ್ರತಿ ತ್ರಿಜಟಾಯಾಗತತ್ವಾದಿತಿ ಭಾವಃ । – (ತಾ.)

೩೮. ನಿತ್ಯಶುಶ್ರೂಷಣಾದಿತಿ। ಲಂಕಾತಃ ಸೀತಯಾ ಸಹಾಯೋಧ್ಯಾಂ ಪ್ರತಿ ತ್ರಿಜಟಾಯಾ ಆಗತತ್ವಾದಿತಿ ಭಾವಃ। – (ತಾ.)

ಅ: ಇದನ್ನು ಮಾಡಿ ದುರ್ಯೋಧನ ತನ್ನ ದೇಶಕ್ಕೆ ತೆರಳಿದ. ಬಲರಾಮ ಅಲ್ಲಿಯೇ ಉಳಿದ. ಶ್ರೀಕೃಷ್ಣ ತನ್ನ ಭಯದಿಂದಾಗಿ ಬೇರೆಡೆ ನೆಲೆಸಿದ್ದ ಅಕ್ರೂರ, ಕೃತವರ್ಮರನ್ನು ಕರೆಸಿ ತಿಳಿಸಿದ.

ವಿ: ೧) ದುರ್ಯೋಧನ ಹಾಗೆ ಭಾಷೆ ಪಡೆದು ತೆರಳುತ್ತಲೇ ಶ್ರೀಕೃಷ್ಣ ಬಲರಾಮನನ್ನು ದ್ವಾರಕೆಗೆ ಕರೆಸಿಕೊಳ್ಳುವ ಪ್ರಸಂಗ ಒದಗಿತು. ಅಸುರಾವೇಶ ದೂರಾದ ಮೇಲೆಯೇ ಹರಿಯ ಬಳಿಗೆ ತೆರಳುವ ಅವಕಾಶ ಪುನಃ ಲಭಿಸುವುದು ಎಂಬುದಕ್ಕೆ ಇದು ಸೂಚನೆ.

೨) ಅಕ್ರೂರ ದ್ವಾರಕೆ ಬಿಟ್ಟಂದಿನಿಂದ ಅಲ್ಲಿ ದುರ್ಭಿಕ್ಷೆ, ರೋಗ, ರುಜಿನಗಳು ಕಾಣಿಸಿ-ಕೊಂಡವು ಎಂದು ಜನ ತಿಳಿದಿದ್ದರು. ಆದರೆ, ಅದೆಲ್ಲಾ ಅವನು ಶ್ರೀಕೃಷ್ಣನ ಬಗ್ಗೆ ತಪ್ಪು ತಿಳಿದಿದ್ದುದರ ಫಲ ಎಂಬುದು ತತ್ವ.

ಆನೀಯ ರಾಮಂ ಚ ಸಮಸ್ತಸಾತ್ತ್ವತಾಂ
ಯದಾऽವಾದೀತ್ ಕೇಶವಃ ಸನ್ನಿಧಾನೇ ।
ಮಣಿಸ್ತ್ವಯ್ಯಾಸ್ತೇ ದರ್ಶಯೇತ್ಯೇವ ಭೀತ-
ಸ್ತದಾऽಕ್ರೂರೋऽದರ್ಶಯದ್ರತ್ನಮಸ್ಮೈ ॥ ೪೦ ॥

ಅ: ಶ್ರೀಕೃಷ್ಣನು ಬಲರಾಮನನ್ನು ಕರೆಸಿ ಎಲ್ಲ ಯಾದವರ ಸಮಕ್ಷಮದಲ್ಲಿ ಅಕ್ರೂರನಿಗೆ ಹೇಳಿದ 'ಸ್ಯಮಂತಕ ಮಣಿ ಇರುವುದು ನಿನ್ನಲ್ಲಿ, ಎಲ್ಲರಿಗೂ ತೋರಿಸು'. ಭಯಗೊಂಡ ಅಕ್ರೂರ ಮಣಿಯನ್ನು ತೆಗೆದು ತೋರಿಸಿದ.

ವಿ: ಶ್ರೀಕೃಷ್ಣನ ಸರ್ವಜ್ಞತ್ವಕ್ಕೆ ಇದು ಮತ್ತೊಂದು ನಿದರ್ಶನ. ಯಾರಿಗೂ ತಿಳಿಯದ್ದೆಂದು ಅಕ್ರೂರ, ಕೃತವರ್ಮರು ತಿಳಿದಿದ್ದ ವಿವರವನ್ನು ಶ್ರೀಕೃಷ್ಣ ಎಲ್ಲರೆದುರೇ ತಿಳಿಸಿ ತನ್ನ ಹಿರಿಮೆಯನ್ನು ಸಾರಿದ.

ಅವ್ಯಾಜತಾಮಾತ್ಮನೋ ದರ್ಶಯಿತ್ವಾ
ಹಲಾಯುಧೇ ಕೇಶವಸ್ತಸ್ಯ ಜಾನನ್ ।
ರತ್ನಾಕಾಂಕ್ಷಾಮುಗ್ರಸೇನಸ್ಯ ಚೈವ
ಮಾತುಶ್ಚ ಸಾಂಬಸ್ಯ ಪುನರ್ಬಭಾಷೇ ॥ ೪೧ ॥

ಅ: ತಾನು ವಂಚಕನಲ್ಲವೆಂಬುದನ್ನು ಶ್ರೀಕೃಷ್ಣ ಬಲರಾಮನಿಗೆ ನಿರೂಪಿಸಿದ; ಬಲರಾಮನಿಗೂ, ಉಗ್ರಸೇನನಿಗೂ ಮತ್ತು ಸಾಂಬನ ತಾಯಿಯಾದ ಜಾಂಬವತಿಗೂ ಆ ಮಣಿಯ ಮೇಲೆ ಅಪೇಕ್ಷೆ ಇರುವುದನ್ನು ತಿಳಿದು ಅವನು ಮತ್ತೆ ನುಡಿದ.

ವಿ: ೧) ಶ್ರೀಕೃಷ್ಣ ತನ್ನ ನಿರ್ದೋಷತ್ವವನ್ನು ಸಾರುವ ಮೂಲಕ ತಾನು ಪರಮಾತ್ಮ ಎಂಬುದನ್ನು ಮತ್ತೊಮ್ಮೆ ನಿರೂಪಿಸಿದ; ಶ್ರೀವ್ಯಾಸರೂಪದಿಂದಲೂ ಬ್ರಹ್ಮಸೂತ್ರಾದಿ ಶಾಸ್ತ್ರಗಳಲ್ಲಿ ತನ್ನ ನಿರ್ದೋಷತ್ವವನ್ನು ಪ್ರತಿಪಾದಿಸಿರುವನು.

೨) ಆ ಮಣಿಯ ಬಗ್ಗೆ ಒಂದೆಡೆ ಅಣ್ಣನೆಂಬ ಕಾರಣದಿಂದ ತನಗೆ ಬೇಕೆಂದು ಬಲರಾಮನಿಗೂ, ಮತ್ತೊಂದೆಡೆ ತಾನು ಯಾದವರ ರಾಜ ಎಂಬ ಕಾರಣದಿಂದ ಉಗ್ರಸೇನನಿಗೂ, ಇನ್ನೊಂದು ಕಡೆ ತನ್ನ ತಂದೆ ಜಾಂಬವಂತ ತನ್ನ ಮದುವೆಯ ಕಾಲದಲ್ಲಿ ನೀಡಿದ್ದೆಂದು ಜಾಂಬವತಿಗೂ ತಮಗೇ ಸೇರಬೇಕೆಂಬ ಬಯಕೆಯಿತ್ತು. ಆ ಸಮಸ್ಯೆಯನ್ನು ಪರಿಹರಿಸಲೆಂದು ಶ್ರೀಕೃಷ್ಣ ಹೀಗೆಂದ :

ಆಸ್ತಾಮಕ್ರೂರೇ ಮಣಿರನ್ಯೈರಧಾರ್ಯಃ
ಸದಾ ಯಜ್ಞಾದ್ದಾನಪತೇಃ ಸ ಧಾರ್ಯಃ।
ನ ಸತ್ಯಾ ಕೃಷ್ಣಾನ್ಯಾಂಛಿತಂ ಕಿಂಚಿದಿಚ್ಛೇತ್
ತಥಾಽಪಿ ತಸ್ಯಾ ಯೋಗ್ಯ ಇತ್ಯಾಹ ಕೃಷ್ಣಃ ॥ ೪೨ ॥

ಅ: ''ಈ ಮಣಿ ಇತರರಲ್ಲಿರುವುದು ತರವಲ್ಲ, ಅಕ್ರೂರನು ಯಜ್ಞಮಾಡುವವನಾದ್ದರಿಂದ ದಾನಶೀಲನಾದ ಅವನಲ್ಲಿಯೇ ಸದಾ ಇರಲಿ'' ಎಂದು ನುಡಿದ. ಶ್ರೀಕೃಷ್ಣ ಬಯಸದ್ದನ್ನು ಸತ್ಯಭಾಮೆ ಎಂದೂ ಬಯಸಳು ಎಂದು ತಿಳಿದಿದ್ದರೂ ''ಅವಳಿಗೇ ಯೋಗ್ಯ'' ಎಂದೂ ನುಡಿದ.

ವಿ: ೧) ನಿಜಕ್ಕೂ ಆ ಮಣಿಯನ್ನು ಹೊಂದುವ ಅರ್ಹತೆಯಿದ್ದುದು ಸತ್ಯಭಾಮಾದೇವಿಗೆ, ಕಾರಣ ಅದನ್ನು ಸೂರ್ಯನನ್ನು ಆರಾಧಿಸಿ ಪಡೆದದ್ದು ಅವಳ ತಂದೆ ಸತ್ರಾಜಿದ್ರಾಜನೇ. ಗಂಡು ಮಕ್ಕಳ ಅನಂತರ ತಂದೆಯ ಸ್ವತ್ತಿನಲ್ಲಿ ಮಗಳಿಗೂ ಅಧಿಕಾರ ಎಹಿತ. ಆದರೂ, ಸತ್ಯಭಾಮಾದೇವಿ

---

೪೨. ಪಿತುರ್ಧನಂ ಪುತ್ರಸ್ಯೈವ ಪುತ್ರ್ಯಾ ಅಪಿ ಯೋಗ್ಯಮಿತ್ಯನೇನಾಭೀಪ್ರಾಯೇಣ ಕೃಷ್ಣೇನ ತಸ್ಯಾ ಯೋಗ್ಯಮಿತ್ಯುಕ್ತಮಿತಿ ಭಾವಃ। – (ವ.)

೪೨. ನ ಸತ್ಯೇತಿ। ಯದ್ಯಪಿ ಸತ್ಯಾ ಕೃಷ್ಣೇನಾನಿಚ್ಛಿತಂ ಕಿಂಚಿದಪಿ ನೇಚ್ಛೇತ್ ತಥಾಪಿ ಪಿತುರ್ಧನಂ ಪುತ್ರ್ಯಾಭಾವೇ ದೌಹಿತ್ರ್ಯಾಧಿಕಾರತ್ವಾತ್ ಪುತ್ರ್ಯಾಃ ಯೋಗ್ಯ ಇತಿ ಧರ್ಮಾವಲಂಬನೇನ ಮಣಿಃ ಸತ್ಯಭಾಮಾಯಾಃ ಯೋಗ್ಯ ಇತ್ಯಾಹ। – (ತಾ.)

೪೨. ಪಿತುರ್ಧನಂ ಪುತ್ರೋ ಗೃಹ್ಣೀಯಾತ್, ನೋ ಚೇದ್ದೌಹಿತ್ರ್ಯಾಧಿಕಾರಿಕತ್ವಾತ್ ಪುತ್ರ್ಯಾ ಯೋಗ್ಯಂ ಇತಿ ಧರ್ಮಾವಲಂಬನಮಣಿಃ ಸತ್ಯಭಾಮಾಯಾ ಯೋಗ್ಯ ಇತ್ಯಾಹ ಕೃಷ್ಣ ಇತ್ಯರ್ಥಃ। – (ತಾ.)

ಅದನ್ನು ಸರ್ವಥಾ ಅಪೇಕ್ಷಿಸಿರಲಿಲ್ಲ ಅದಕ್ಕೆ ಶ್ರೀಕೃಷ್ಣನಿಗೆ ಅದು ಬೇಡವಾಗಿದೆ ಎಂಬುದೇ ಕಾರಣವಾಗಿತ್ತು ಎಂದು ತಿಳಿಯಬೇಕು. ಹರಿ ಬಯಸದ ಏನನ್ನೂ ಬಯಸದಿರುವುದೂ ಸಹ ಮಹಾಲಕ್ಷ್ಮಿಯ ಅವತಾರಳಾದ ಪರಶುಕ್ಷತ್ರಿಯರಲ್ಲೂ ಸರ್ವಾಶ್ರೇಷ್ಠಳಾದ ಸತ್ಯಭಾಮಾ– ದೇವಿಯ ಹಿರಿಮೆ ಎಂಬುದು ಇಲ್ಲಿಯ ತತ್ವ.

೨) ಶ್ರೀಕೃಷ್ಣ ಇತರ ಮೂವರಲ್ಲಿ ಯಾರಿಗೆ ಕೊಟ್ಟರೂ ಮತ್ತಿಬ್ಬರಿಗೆ ಅತೃಪ್ತಿ ತಪ್ಪಿದ್ದಲ್ಲವೆಂಬುದನ್ನು ಮನಗಂಡು ಅದನ್ನು ಅಕ್ರೂರನ ಬಳಿಯೇ ಇರುವಂತೆ ಮಾಡಿದ. ಆ ಮೂಲಕ ಇಂತಹ ಸಮಯದಲ್ಲಿ ಕಲಹ ತಪ್ಪಿಸುವ ಉಪಾಯವನ್ನೂ ಜಗತ್ತಿಗೆ ತೋರಿಸಿಕೊಟ್ಟ ಎಂದು ತಿಳಿಯಬೇಕು.

೩) ಅಕ್ರೂರ ದಾನಪತಿಯೂ, ಯಜ್ಞಶೀಲನೂ ಆದ್ದರಿಂದ ಅವನ ಬಳಿಯೇ ಇರಲಿ ಎಂದು ಅಂತಹ ಅಮೂಲ್ಯ ವಸ್ತುಗಳನ್ನು ಇರಿಸಿಕೊಳ್ಳುವ ಯೋಗ್ಯತೆ ಯಜ್ಞದಾನಾದಿ ಸತ್ಕರ್ಮನಿರತರಿಗೆ ಮಾತ್ರ ಸಾಧ್ಯ ಎಂದು ಸೂಚಿಸಿರುವನು.

೪) ಅದು ಪ್ರತಿನಿತ್ಯ ಹತ್ತು ಭಾರ ಸುವರ್ಣವನ್ನು ಕೊಡುವಂತಹ ಅಪೂರ್ವಮಣಿ ಎಂಬ ವಿವರ ಆಗಲೇ ಬಂದಿದೆ (ಅ. ೧೭, ಶ್ಲೋ. ೨೦೨ರ ಅಡಿಟಿಪ್ಪಣಿ). ಅದರಿಂದ ದೊರೆಯುವ ಸುವರ್ಣವನ್ನು ಅಕ್ರೂರ ಯಜ್ಞಯಾಗಾದಿಗಳಿಗೆ ಉಪಯೋಗಿಸಿ ಸಾರ್ಥಕಪಡಿಸಿದ; ಶ್ರೀಕೃಷ್ಣನ ಈ ತೀರ್ಮಾನ ಸಹಜವಾಗಿಯೇ ಎಲ್ಲರಿಗೂ ಸಮ್ಮತವಾಯಿತು.

ಲಬ್ಧ್ವಾ ರತ್ನಂ ದಾನಪತಿಃ ಸದೈವ
ಸಂದೀಕ್ಷಿತೋಽಭೂದ್ಯಜ್ಞಕರ್ಮಣ್ಯತಂದ್ರಃ ।
ಪ್ರದರ್ಶ್ಯ ಕೃಷ್ಣೋ ಹಲಿನೇ ರತ್ನಮೇತ-
ಚ್ಛಕ್ರಪ್ರಸ್ಥಂ ಪಾಂಡವಸ್ನೇಹತೋಽಗಾತ್ ॥ ೪೩ ॥

ಅ: ಆ ರತ್ನವನ್ನು ಪಡೆದು ಅಕ್ರೂರ ಸದಾ ಹೆಚ್ಚು ಉತ್ಸಾಹದಿಂದ ಯಜ್ಞಕಾರ್ಯದಲ್ಲಿ ಹೆಚ್ಚಾಗಿ ದೀಕ್ಷಿತನಾದ. ಬಲರಾಮನಿಗೆ ಮಣಿಯನ್ನು ತೋರಿಸಿ ಶ್ರೀಕೃಷ್ಣ ಪಾಂಡವರ ಮೇಲಿನ ಪ್ರೀತಿಯಿಂದ ಇಂದ್ರಪ್ರಸ್ಥಕ್ಕೆ ತೆರಳಿದ.

ವಿ: ೧) ಅಕ್ರೂರ ವಿಶೇಷವಾಗಿ ಯಜ್ಞಯಾಗಾದಿಗಳಲ್ಲಿ ತೊಡಗಿ ಶ್ರೀಕೃಷ್ಣ ತನಗೆ ನೀಡಿದ ಆ ಮಣಿಯ ಉಪಯೋಗವನ್ನು ಉತ್ತಮ ರೀತಿಯಲ್ಲಿ ಮಾಡಿ ಕೃತಾರ್ಥನಾದ. ಮಣಿ ಕಂಡದ್ದರಿಂದ ಶ್ರೀಕೃಷ್ಣನ ಬಗ್ಗೆ ಇದ್ದ ಅಪ್ರೀತಿ ಮಾಯವಾಗಿ ಬಲರಾಮ ಎಂದಿನಂತೆ ಶ್ರೀಕೃಷ್ಣ ಭಕ್ತನಾದ.

---

೪೩. ಸುದೀಕ್ಷಿತೋಽಭೂದ್ಯಜ್ಞಕರ್ಮಣ್ಯತಂದ್ರಿತಃ – (ಮ. ಪಾಠ)

೨) ನಿರ್ದೋಷತ್ವಜ್ಞಾನ ಭಕ್ತಿವರ್ಧಕ ಎಂಬುದಕ್ಕೂ ಇದು ಗಮಕ.

೩) ಆಗ ಯಾವ ವಿಶೇಷ ಪ್ರಸಂಗವಿಲ್ಲದಿದ್ದರೂ ಶ್ರೀಕೃಷ್ಣ ಇಂದ್ರಪ್ರಸ್ಥಕ್ಕೆ ತೆರಳಿದ್ದು ಕೇವಲ ಪಾಂಡವರ ಮೇಲಿನ ಪ್ರೀತಿಯಿಂದ.

ಕಾಳಿಂದೀ ವಿವಾಹ

ವಸನ್ನಜಸ್ತತ್ರ ಬಹೂಂಶ್ಚ ಮಾಸಾನ್
ಸಫಲ್ಗುನೋಽಯಾನ್ಮೃಗಯಾಂ ಕದಾಚಿತ್ ।
ಹತ್ವಾ ಮೃಗಾನ್ ಯಮುನಾತೀರಸಂಸ್ಥಃ
ಸೋಽನ್ಯಾಂ ಕಾಳಿಂದೀಂ ದದೃಶೇ ತತ್ಸ್ವಸಾರಮ್ ॥ ೪೪ ॥

ಅ: ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ಅನೇಕ ತಿಂಗಳುಗಳವರೆಗೆ ನೆಲೆಸಿದ. ಒಮ್ಮೆ ಅರ್ಜುನನೊಂದಿಗೆ ಬೇಟೆಗೆಂದು ಹೋಗಿದ್ದಾಗ ಮೃಗಗಳನ್ನು ಕೊಂದು ಯಮುನಾ ತೀರಕ್ಕೆ ನಡೆದ. ಅಲ್ಲಿ ಯಮುನೆಯ ತಂಗಿಯಾಗಿದ್ದ ಕಾಳಿಂದಿ ಎಂಬ ಮತ್ತೊಬ್ಬಳನ್ನು ಕಂಡ.

ವಿ: ಶ್ರೀಕೃಷ್ಣ ಯಮುನಾ ತೀರದಲ್ಲಿ ಕಂಡ ಕಾಳಿಂದಿ ಯಮುನೆಯ ತಂಗಿ; ಅವಳ ಹೆಸರೂ ಕಾಳಿಂದಿಯೆಂದೇ ಆಗಿತ್ತು ಎಂದರ್ಥ.

ಸಾ ಸೂರ್ಯಪುತ್ರೀ ಯಮುನಾನುಜಾತಾ
ತಪಶ್ಚರಂತೀ ಕೃಷ್ಣಪತ್ನೀತ್ವಕಾಮಾ ।
ಪೃಷ್ಟಾಽರ್ಜುನೇನಾಹ ಸಮಸ್ತಮೇತತ್
ಪತ್ನೀಂ ಚ ತಾಂ ಜಗೃಹೇ ವಾಸುದೇವಃ ॥ ೪೫ ॥

ಕಾಳಿಂದೀ ಸೂರ್ಯನ ಮಗಳು, ಯಮುನೆಯ ತಂಗಿ; ವಿಷ್ಣುವಿನ ಪತ್ನಿಯಾಗಬೇಕೆಂದು ಬಯಸಿ ತಪಸ್ಸನ್ನು ಆಚರಿಸುತ್ತಿದ್ದಳು. ಅರ್ಜುನ ಕೇಳಿದಾಗ ಅವಳು ಅದೆಲ್ಲವನ್ನೂ ತಿಳಿಸಿದಳು. ಶ್ರೀಕೃಷ್ಣ ಅವಳನ್ನು ತನ್ನ ಪತ್ನಿಯನ್ನಾಗಿ ಸ್ವೀಕರಿಸಿದ.

ವಿ: ಈ ಕಾಳಿಂದಿಯು ಶ್ರೀಕೃಷ್ಣನ ಷಣ್ಮಹಿಷಿಯರಲ್ಲೊಬ್ಬಳಾದ ಕಾಳಿಂದಿ ಎಂದು ತಿಳಿಯಬೇಕು.

---

೪೪. ನದೀರೂಪ ಕಾಳಿಂದೀ ವ್ಯಾವೃತ್ತಯೇ ಅನ್ಯಾಮಿತಿ ಪದಪ್ರಯೋಗಃ । – (ಜ.)

ನೀಲಾದೇವಿಯ ಸ್ವಯಂವರ

ತತೋ ಗತ್ವಾ ನಗ್ನಜಿತೋ ಗೃಹಂ ಚ
ಸ್ವಯಂವರೇ ಸಪ್ತ ವೃಷಾನಗೃಹ್ಣಾತ್ ।
ಸರ್ವೈರಗ್ರಾಹ್ಯಾನಸುರಾನ್ ವರೇಣ
ಶಿವಸ್ಯ ಯೈರ್ನಿರ್ಜಿತಾ ಭೂಮಿಪಾಲಾಃ ॥ ೪೬ ॥

ಅ: ಶ್ರೀಕೃಷ್ಣ ಬಳಿಕ ನಗ್ನಜಿತ್ ಎಂಬವನ ಮನೆಗೆ ತೆರಳಿ ಅಲ್ಲಿ ಸ್ವಯಂವರದಲ್ಲಿ ಏಳು ಗೂಳಿಗಳನ್ನು ನಿಗ್ರಹಿಸಿದ. ಅವು ಶಿವನ ವರದಿಂದಾಗಿ ಇತರರಿಂದ ನಿಗ್ರಹಿಸಲಾಗದ ಅಸುರಸ್ವರೂಪದ ಗೂಳಿಗಳು. ಇತರ ಎಲ್ಲ ರಾಜರುಗಳೂ ಅವುಗಳಿಂದ ಪರಾಭವ-ಗೊಂಡಿದ್ದರು.

ವಿ: ೧) ನಗ್ನಜಿತ್ ರಾಜ ಏಳು ಗೂಳಿಗಳನ್ನು ಒಮ್ಮೆಗೇ ನಿಗ್ರಹಿಸುವವನಿಗೆ ತನ್ನ ಮಗಳು ನೀಲಾದೇವಿಯನ್ನು ಕೊಡುವ ನಿಶ್ಚಯಮಾಡಿದ್ದ. ಶ್ರೀಕೃಷ್ಣ ಅವುಗಳನ್ನು ಹಾಗೆ ನಿಗ್ರಹಿಸಿ ತಾನು ಅವಳನ್ನು ವಿವಾಹವಾದ.

೨) ಇತರ ರಾಜರೆಲ್ಲ ಅದಕ್ಕೆ ಪ್ರಯತ್ನಿಸಿ ಪರಾಭವಗೊಂಡವರೇ. ಅದಕ್ಕೆ ಅವೆಲ್ಲ ಶಿವನ ವರ ಪಡೆದಿದ್ದ ಅಸುರರಾಗಿದ್ದೇ ಕಾರಣ.

೩) ಇದರಂತೆ ರಾಮಾವತಾರದಲ್ಲಿ ಕಿಷ್ಕಿಂಧೆಯಲ್ಲಿ ಸಪ್ತ ತಾಳವೃಕ್ಷಗಳನ್ನು ಒಂದೇ ಬಾಣದಿಂದ ನಾಶಮಾಡಿದ್ದುದನ್ನು ಇಲ್ಲಿ ಸ್ಮರಿಸಬಹುದು.

ತತೋ ನೀಲಾಂ ತಸ್ಯ ಸುತಾಂ ಚ ಲೇಭೇ
ಪೂರ್ವಂ ನೀಲಾ ಗೋಪಕನ್ಯಾऽಪಿ ಯಾऽऽಸೀತ್ ।
ಸಾ ದೇಹೇऽಸ್ಯಾಃ ಪ್ರಾವಿಶತ್ ಪೂರ್ವಮೇಷಾ
ಯಸ್ಮಾದೇಕಾ ದ್ವಿವಿಧಾ ಸಂಪ್ರಜಾತಾ ॥ ೪೭ ॥

ಅ: ಅನಂತರ ಶ್ರೀಕೃಷ್ಣ ಅವನ ಮಗಳಾದ ನೀಲಾದೇವಿಯನ್ನು ವಿವಾಹವಾದ. ಹಿಂದೆ ನೀಲಾ ಎಂಬ ಒಬ್ಬ ಗೋಪಕನ್ಯೆ ಆಗಿದ್ದವಳು ಇವಳ ದೇಹದಲ್ಲಿ ಪ್ರವೇಶ ಮಾಡಿದಳು. ಅವಳೊಬ್ಬಳೇ ಎರಡು ರೂಪಗಳಿಂದ ಅವತರಿಸಿದ್ದಳು.

ವಿ: ೧) ಶ್ರೀಕೃಷ್ಣ ನೀಲಾದೇವಿಯನ್ನು ಉಪನಯನಕ್ಕಿಂತ ಮುಂಚಿತವಾಗಿಯೇ ವಿವಾಹ–ವಾಗಿದ್ದ ವಿವರ ಈಗಾಗಲೇ ಬಂದಿದೆ (೧೩/೪೮, ೪೯). ಅವಳು ಯಶೋದೆಯ ಅಣ್ಣನಾದ ಕುಂಭಕ

ಎಂಬವನ ಮಗಳು. ಆ ಸ್ವಯಂವರದಲ್ಲೂ ಇಂತಹುದೇ ಏಳು ಗೂಳಿಗಳನ್ನು ನಿಗ್ರಹಿಸುವ ಪಣವಿತ್ತು ಇವಳೂ ಸಹ ನೀಲಿಯೇ ಎಂಬುದು ವಿಶೇಷ.

೨) ಇದು ಅವಳ ಮತ್ತೊಂದು ರೂಪ; ಇವಳು ಕೋಸಲ ದೇಶದ ರಾಜಕುಮಾರಿಯಾಗಿ ಹುಟ್ಟಿದವಳು; ಸತ್ಯಾ ಎಂದು ಇವಳ ನಾಮಾಂತರ.

೩) ಹೀಗೆ ದೇವತೆಗಳು ಎರಡು ರೂಪದಿಂದ ಹುಟ್ಟಿದಾಗ ಎರಡನೆಯ ರೂಪದಲ್ಲಿ ಮೊದಲನೆಯ ರೂಪ ಐಕ್ಯ ಹೊಂದುವುದು ಎಂಬುದು ಸಂಪ್ರದಾಯ ತಿಳಿದವರ ಮಾತು ಎಂದು ಪ್ರಮೇಯದೀಪಿಕೆಯಲ್ಲಿದೆ(೧೦/೬) :

ದ್ವಿತೀಯೇ ಶರೀರೇ ಜಾತೇ ತತ್ಪೂರ್ವಶರೀರೇಣೈಕ್ಯಮಾಪದ್ಯತ ಇತಿ *ಸಂಪ್ರದಾಯವಿದಃ ।

೪) ಮೊದಲು ಹುಟ್ಟಿದ ವಿದುರ ಅನಂತರ ಹುಟ್ಟಿದ ಧರ್ಮರಾಜನಲ್ಲಿ ಐಕ್ಯ ಹೊಂದುವ ವಿವರ ಮುಂದೆ ಬರುವುದು ಇಂತಹುದೇ ಪ್ರಸಂಗ (೩೧/೬೩).

೫) ಹೀಗೆ ನೀಲಾರೂಪಗಳು ಎರಡಾದರೂ ಎರಡನೆಯ ರೂಪ ವಿವಾಹವಾಗುತ್ತಲೇ ಮೊದಲನೆಯ ರೂಪ ಅವಳಲ್ಲಿ ಐಕ್ಯ ಹೊಂದಿದ್ದರಿಂದ ಷಣ್ಮಹಿಷಿಯರ ಸಂಖ್ಯೆ ಆರು ಎಂದೇ ಆಗುವುದು.

ಮಿತ್ರವಿಂದಾ ವಿವಾಹ

ಪಿತೃಷ್ವಸುರ್ಮಿತ್ರವಿಂದಾ ಸುತಾ ಚ
ಕೃಷ್ಣೇ ಮಾಲಾಮಾಸಜದ್ರಾಜಮಧ್ಯೇ ।
ವಿಂದಾನುವಿಂದೌ ಭ್ರಾತರಾವೇವ ತಸ್ಯಾ
ನ್ಯಷೇಧತಾಂ ಧಾರ್ತರಾಷ್ಟ್ರಾರ್ಥಮುಗ್ರೌ ॥ ೪೮ ॥

ಅ: ಮಿತ್ರವಿಂದೆ ಕೃಷ್ಣನ ಸೋದರತ್ತೆಯ ಮಗಳು. ಅವಳು ರಾಜರ ಮಧ್ಯದಲ್ಲಿ ಶ್ರೀಕೃಷ್ಣನಿಗೇ ಮಾಲೆ ಹಾಕಿದಳು. ಅವಳ ಸಹೋದರರಾದ ವಿಂದ ಮತ್ತು ಅನುವಿಂದ ಅವಳನ್ನು ದುರ್ಯೋಧನನಿಗೆ ಕೊಡುವ ಸಲುವಾಗಿ ಅದಕ್ಕೆ ಅಡ್ಡಿಮಾಡಿದರು.

ವಿ: ೧) ಶ್ರೀಕೃಷ್ಣನ ಸೋದರತ್ತೆಯ ಹೆಸರು ರಾಜಾಧಿದೇವಿ, ಅವಳು ಅವಂತೀದೇಶದ ಜಗತ್ಸೇನ ಎಂಬ ರಾಜನ ಪತ್ನಿ. ಮಿತ್ರವಿಂದೆ ಅವರಿಬ್ಬರ ಮಗಳು. ವಿಂದಾನುವಿಂದರು ಅವಳ

---

* ಸಂಪ್ರದಾಯವಿದ ಇತ್ಯನೇನ ನೀಲಾದಿಶರೀರೇ ತಥಾಭಾವಸ್ಯ ಪ್ರಮಿತತ್ವಂ ಸೂಚಯತಿ । – ಭಾವಬೋಧಃ

೪೮. ಪಿತೃಷ್ವಸುಃ ರಾಜಾಧಿದೇವ್ಯಾಃ ಅಸೃಜತ್ಸ್ವಮರ್ಪಯಾಮಾಸ । – (ಜ.)

ಸಹೋದರರು. ಅವರಿಗೆ ಅವಳನ್ನು ದುರ್ಯೋಧನನಿಗೆ ಕೊಡುವ ಹಂಬಲ. ಅದರಿಂದಾಗಿ ಅದಕ್ಕೆ ಅಡ್ಡಿಮಾಡಿದರು.

೨) ರುಗ್ಮಿಣಿಯನ್ನು ಶಿಶುಪಾಲನಿಗೆ ಕೊಡಲು ಯೋಚಿಸಿದ್ದ ದುಷ್ಟಸಹೋದರನಾದ ರುಗ್ಮಿಯಂತೆ, ಇವರೂ ಸಹ ಸ್ವರೂಪತಃ ತಮೋಯೋಗ್ಯರಾದವರು ಎಂದು ತಿಳಿಯಬೇಕು. ಮುಂದೆ ಕುರುಕ್ಷೇತ್ರ ಯುದ್ಧದಲ್ಲೂ ಇವರು ಕೌರವಪಕ್ಷವನ್ನೇ ವಹಿಸಿ ನಾಶಹೊಂದುವರು ಎಂಬುದನ್ನು ಗಮನಿಸಬೇಕು.

ಭದ್ರಾವಿವಾಹ

ಜಿತ್ವಾऽऽವಂತ್ಯೌ ನೃಪತೀಂಶ್ಚೈವ ಸರ್ವಾ-
ನಾದಾಯ ತಾಂ ಪ್ರಯಯೌ ವಾಸುದೇವಃ।
ಪಿತೃಷ್ವಸುಸ್ತನಯಾಂ ಚ ದ್ವಿತೀಯಾಂ
ಭದ್ರಾಂ ದತ್ತಾಮಗ್ರಹೀದ್ಭ್ರಾತೃಭಿಃ ಸಃ ॥ ೪೯ ॥

ಅ: ಶ್ರೀಕೃಷ್ಣ ಅವಂತೀ ದೇಶದ ಅವರಿಬ್ಬರನ್ನೂ, ಹಾಗೆಯೇ ಇತರ ಸಕಲ ರಾಜರನ್ನೂ ಸೋಲಿಸಿ ಅವಳನ್ನು ಕರೆದುಕೊಂಡು ತೆರಳಿದ. ಶ್ರೀಕೃಷ್ಣನ ಇನ್ನೊಬ್ಬ ಸೋದರತ್ತೆಯ ಮಗಳು ಭದ್ರಾ. ಅವಳನ್ನು ಅವಳ ಸಹೋದರರು ಶ್ರೀಕೃಷ್ಣನಿಗೇ ಧಾರೆಯೆರೆದರು. ಶ್ರೀಕೃಷ್ಣ ಅವಳನ್ನು ಸ್ವೀಕರಿಸಿದ.

ವಿ: ಶ್ರೀಕೃಷ್ಣನ ಈ ಸೋದರತ್ತೆ ಶ್ರುತಕೀರ್ತಿ; ಕೇಕಯ ದೇಶದ ಧೃಷ್ಟಕೇತು ಎಂಬವನ ಪತ್ನಿ.

ವಿಶ್ವೇಷಾಂ ದೇವಾನಾಮವತಾರಾ ಹಿ ಪಂಚ
ತೇ ಕೈಕೇಯಾ ಭ್ರಾತರೋऽಸ್ಯಾ ಹರೇಶ್ಚ।
ಭಕ್ತಾ ನಿತ್ಯಂ ಪಾಂಡವಾನಾಂ ಚ ತಾತೋ
ಹ್ಯೇಷಾಂ ವಶೇ ಶೈಬ್ಯನಾಮರ್ಭುರಗ್ರೇ ॥ ೫೦ ॥

ಅ: ಶ್ರೀಕೃಷ್ಣನಿಗೆ ಧಾರೆಯೆರೆದ, ಭದ್ರಾದೇವಿಯ ಸಹೋದರರಾದ ಆ ಕೇಕಯ ರಾಜಕುಮಾರರು ವಿಶ್ವೇದೇವತೆಗಳ ಅವತಾರರು. ಶ್ರೀಹರಿಯಲ್ಲಿ ಸದಾ ಭಕ್ತರು, ಪಾಂಡವರಿಗೂ ಭಕ್ತರೇ. ಇವರ ತಂದೆ ಶೈಬ್ಯ ಎಂಬವನು ಇವರ ಮಾತು ಕೇಳುತ್ತಿದ್ದ. ಅವನು ಋಭುದೇವತೆಯ ಅವತಾರ.

ವಿ: ೧) ಈ ಋಭು ದೇವತೆಯು ಶೇಷಶತಸ್ಥರಲ್ಲಿ ಸೇರುವ ದೇವತೆ. 'ಶೈಬ್ಯಶ್ಚ ನರಪುಂಗವಃ' ಎಂಬುದಾಗಿ ಭಗವದ್ಗೀತೆಯಲ್ಲಿ (೧/೫) ಇವನ ಉಲ್ಲೇಖ ಬಂದಿದೆ.

೨) ಈ ಪಂಚಕೇಕಯರೂ ಸಹ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರ ಪಕ್ಷ ಸೇರಿದವರು.

ಲಕ್ಷಣಾ ಸ್ವಯಂವರ

ಸ್ವಯಂವರೋ ಲಕ್ಷಣಾಯಾಸ್ತಥಾऽಸೀ-
ದ್ಯಥಾ ದ್ರೌಪದ್ಯಾ ಲಕ್ಷ್ಯವೇಧಾತ್ಮಕಃ ಸಃ ।
ಮದ್ರೇಷು ತಸ್ಯಾಶ್ಚ ಪಿತಾ ಪಿನಾಕಂ
ಸ್ವಯಂವರಾರ್ಥಂ ಜಗೃಹೇ ಗಿರೀಶಾತ್ ॥ ೫೧ ॥

ಅ: ಲಕ್ಷಣಾದೇವಿಯ ಸ್ವಯಂವರವು ಮದ್ರದೇಶದಲ್ಲಿ ನಡೆಯಿತು. ಆ ಸ್ವಯಂವರ ದ್ರೌಪದಿಯ ಸ್ವಯಂವರದಂತೆ ಲಕ್ಷ್ಯವೇಧರೂಪದ್ದಾಗಿತ್ತು. ಅವಳ ತಂದೆ ಸ್ವಯಂವರಕ್ಕೆಂದು ಶಿವನಿಂದ ಅವನ ಪಿನಾಕವೆಂಬ ಧನುಸ್ಸನ್ನು ಬೇಡಿತಂದಿದ್ದ.

ವಿ: ೧) ದುರ್ಯೋಧನನ ಮಗಳ ಹೆಸರು ಲಕ್ಷಣಾ ಎಂದೇ. ಆದರೆ ಅವಳು ಕಾಮಪತ್ನಿಯಾದ ರತಿ, ಇವಳು ಶ್ರೀಕೃಷ್ಣಷಣ್ಮಹಿಷಿಯರಲ್ಲಿ ಒಬ್ಬಳಾದವಳು.

೨) ಈ ಸ್ವಯಂವರವೂ ದ್ರೌಪದೀ ಸ್ವಯಂವರದಲ್ಲಿದ್ದಂತೆ ಮತ್ಸ್ಯಯಂತ್ರವನ್ನು ಭೇದಿಸುವುದೇ ಆಗಿದ್ದಿತು ಎಂದರ್ಥ.

ಲಕ್ಷ್ಯಂ ಚ ತತ್ ಸರ್ವತಶ್ಚಾನ್ನಮೇವ
ದ್ವಾರಂ ಚ ತಸ್ಯಾಪ್ಯುಪರಿ ಸ್ಮ ಲಕ್ಷ್ಯಾತ್ ।
ಛಿನ್ನೇಷುಣಾ ಪಾತನೀಯಂ ಚ ತದ್ಧಿ
ದ್ರೌಪದ್ಯರ್ಥಾತ್ ತದಶಕ್ಯಂ ತತೋऽಲಮ್ ॥ ೫೨ ॥

ಅ: ಇಲ್ಲಿ ಲಕ್ಷ್ಯ ಎಲ್ಲ ಕಡೆಯಿಂದಲೂ ಮುಚ್ಚಲ್ಪಟ್ಟಿತ್ತು. ಅದರ ದ್ವಾರ ಲಕ್ಷ್ಯದ ಮೇಲ್ಗಡೆಯಿತ್ತು. ಒಂದು ತುಂಡು ಬಾಣದಿಂದ ಲಕ್ಷ್ಯವನ್ನು ಹೊಡೆದು ಬೀಳಿಸಬೇಕಾಗಿತ್ತು. ಆದ್ದರಿಂದ ದ್ರೌಪದಿಗೋಸ್ಕರವಾಗಿ ಇದ್ದ ಲಕ್ಷ್ಯಕ್ಕಿಂತ ಇದು ಇನ್ನೂ ಹೆಚ್ಚು ಅಸಾಧ್ಯವೇ ಆಗಿತ್ತು.

---

೫೨. ದ್ರೌಪದ್ಯರ್ಥಾತ್ತದಶಕ್ಯಮಿತ್ಯತ್ರ ದ್ರೌಪದ್ಯರ್ಥಾತ್ ತತಃ ಲಕ್ಷಾತ್ ತತ್ ಲಕ್ಷಣಾಸ್ವಯಂವರೇ ಕೃತಂ ಲಕ್ಷಂ ಅಲಮಶಕ್ಯಮಿತಿ ಯೋಜನಾ ॥ – (ವಾ.)

ವಿಃ ೧) ದ್ರೌಪದೀ ಸ್ವಯಂವರದಲ್ಲಿ ಲಕ್ಷ್ಯ ನೇರವಾಗಿ ಕಾಣದಿದ್ದರೂ ಅದರ ಪ್ರತಿಬಿಂಬ ಕೆಳಗಿನ ಪಾತ್ರೆಯ ನೀರಿನಲ್ಲಿ ಕಾಣುತ್ತಿತ್ತು; ಅದರ ದ್ವಾರ ಕೆಳಗಿನಿಂದಲೇ ಇತ್ತು.

೨) ಅಲ್ಲಿ ಪ್ರಯೋಗಿಸಬೇಕಾಗಿದ್ದ ಬಾಣಗಳು ಐದು; ಇಲ್ಲಿ ಹಾಗಿರದೇ ಒಂದು ತುಂಡಾದ ಬಾಣದಿಂದ ನೇರವಾಗಿ ಕಾಣದಿದ್ದ ಲಕ್ಷ್ಯವನ್ನು ಬಾಣ ಮೇಲಿನಿಂದ ಹೋಗಿ ಅಲ್ಲಿಯ ದ್ವಾರದಿಂದ ಒಳಗಿದ್ದ ಮತ್ಸ್ಯಯಂತ್ರವನ್ನು ಭೇದಿಸುವಂತೆ * ಏರ್ಪಡಿಸಲಾಗಿತ್ತು.

೩) ಧನುಸ್ಸಿನ ವ್ಯತ್ಯಾಸವನ್ನು ಈಗಾಗಲೇ ತಿಳಿಸಿರುವರು.

೪) ಅಲ್ಲಿಯ ಧನುಸ್ಸಿಗೆ ಇತರರಿಗೆ ಎತ್ತಲಾಗದಂತೆ ಶಿವನವರವಿದ್ದರೆ, ಇಲ್ಲಿಯದ್ದು ಶಿವನ ಧನುಸ್ಸೇ ಆದ ಪಿನಾಕವೇ ಆಗಿತ್ತು ಎಂಬುದು ವಿಶೇಷ.

ತತ್ರಾಜಗ್ಮುರ್ಮಾಗಧಾದ್ಯಾಶ್ಚ ಸರ್ವೇ
ಪಾರ್ಥಾ ಅಪಿ ದ್ರಷ್ಟುಮಿಹಾಭ್ಯುಪಾಯಯುಃ ।
ದುರ್ಯೋಧನಾದ್ಯಾಶ್ಚ ಸಸೂತಪುತ್ರಾಃ
ಸಜ್ಯಂ ಕರ್ತುಂ ಧನುರಪ್ಯುತ್ಸಹಂತೇ ॥ ೫೩ ॥

ಅಃ ಅಲ್ಲಿಗೆ ಜರಾಸಂಧ ಮೊದಲಾದ ಎಲ್ಲರೂ ಆಗಮಿಸಿದರು; ನೋಡಲೆಂದು ಪಾಂಡವರೂ ಬಂದು ಸೇರಿದರು. ಕರ್ಣನೊಂದಿಗೆ ದುರ್ಯೋಧನಾದಿಗಳೂ ಬಂದಿದ್ದರು. ಅವರೆಲ್ಲ ಧನುಸ್ಸನ್ನು ಹೆದೆಯೇರಿಸಲು ಕಾತರರಾಗಿದ್ದರು.

ವಿಃ ೧) ಪಾಂಡವರ ಸ್ವಯಂವರಕ್ಕೆ ಶ್ರೀಕೃಷ್ಣ ಯಾದವರೊಂದಿಗೆ ನೋಡಲೆಂದು (೧೯/೧೩೩) ಮಾತ್ರ ಹೋಗಿದ್ದಂತೆ, ಈ ಕೃಷ್ಣನ ಸ್ವಯಂವರಕ್ಕೆ ಪಾಂಡವರು ಸಹ ನೋಡಲೆಂದು ಮಾತ್ರ ಬಂದಿದ್ದರು ಎಂಬಲ್ಲಿರುವ ಸ್ವಾರಸ್ಯವನ್ನು ಗಮನಿಸಬೇಕು.

೨) ಭಕ್ತರ ಸ್ವತ್ತನ್ನು ಭಕ್ತರಿಗೇ ನೀಡುವ ಅನುಗ್ರಹ ಭಗವಂತನದಾದರೆ, ಭಗವಂತನ ಸ್ವತ್ತು ಭಗವಂತನಿಗೇ ತಲುಪುವುದನ್ನು ಕಾಣುವ ಸಂಭ್ರಮ ಅವನ ಭಕ್ತರಿಗೆ ಎಂಬುದು ಇಲ್ಲಿಯ ಪ್ರಮೇಯ.

---

* ಯಥಾ ಸ್ವಯಂವರೇ ರಾಜ್ಞಿ ಮತ್ಸ್ಯಃ ಪಾರ್ಥೇಪ್ಸಯಾ ಕೃತಃ ।
ಅಯಂ ತು ಬಹಿರಾಚ್ಛನ್ನೋ ದೃಶ್ಯತೇ ಸ ಜಲೇ ಪರಮ್ ॥
(ದ್ರೌಪದಿಯನ್ನು ಕುರಿತು ಲಕ್ಷಣೆ ಹೇಳಿದ ಮಾತು) – ಭಾಗವತ (೧೦/೮೩/೧೯)

ಕೇಚಿನ್ನಿಪೇತುರ್ಧನುಷೈವ ತಾಡಿತಾ
ನ ವೈ ಕೇಚಿಚ್ಚಾಲಯಿತುಂ ಚ ಶೇಕುಃ ।
ದುರ್ಯೋಧನೋ ಮಾಗಧಃ ಸೂತಪುತ್ರಃ
ಸಜ್ಜಂ ಕೃತ್ವಾ ಲಕ್ಷ್ಯವೀಕ್ಷಾಂ ನ ಶೇಕುಃ ॥ ೫೪ ॥

ಅ: ಕೆಲವರು ಧನುಸ್ಸಿನಿಂದ ಹೊಡೆಸಿಕೊಂಡು ಉರುಳಿದರು, ಮತ್ತೆ ಕೆಲವರು ಅದನ್ನು ಅಲುಗಿಸಲೂ ಸಮರ್ಥರಾಗಲಿಲ್ಲ. ದುರ್ಯೋಧನ, ಜರಾಸಂಧ ಮತ್ತು ಕರ್ಣ ಬಿಲ್ಲಿಗೆ ಹೆದೆಯೇರಿಸಿದಾದರೂ ಲಕ್ಷ್ಯವನ್ನು ಗುರುತಿಸಲು ಸಮರ್ಥರಾಗಲಿಲ್ಲ.

ವಿ: ೧) ದ್ರೌಪದೀ ಸ್ವಯಂವರದಲ್ಲಿ ಶಿವನ ವಿಶೇಷ ವರದಿಂದಾಗಿ ಶಿಶುಪಾಲಾದಿಗಳಿಗೆ ಧನುಸ್ಸಿನ ಹೆದೆಯೇರಿಸಲೇ ಸಾಧ್ಯವಾಗಿರಲಿಲ್ಲ.

೨) ಇಲ್ಲಿ ದುರ್ಯೋಧನ ಮೊದಲಾದ ಕೆಲವರಿಗೆ ಅದು ಸಾಧ್ಯವಾದರೂ ಅವರಿಗೆ ಗುರಿಯನ್ನು ಗುರುತಿಸಲಾಗದ್ದರಿಂದ ಯಶಸ್ವಿಯಾಗಲು ಸಾಧ್ಯವಾಗಲಿಲ್ಲ.

ಧನಂಜಯಃ ಸ್ವಾತ್ಮಬಲಂ ಪ್ರಕಾಶಯನ್
ಸಜ್ಜಂ ಕೃತ್ವಾ ಧನುರೈಕ್ಷಚ್ಚ ಲಕ್ಷ್ಯಮ್ ।
ನೈವಾದದೇ ಬಾಣಮನಿಚ್ಛಯೈವ
ಪ್ರಾಪ್ಯಾಂ ಜಾನನ್ ಕೇಶವೇನೈವ ತಾಂ ಚ ॥ ೫೫ ॥

ಅ: ಅರ್ಜುನ ತನ್ನ ಬಲವನ್ನು ತೋರಿಸಲೆಂದು ಧನುಸ್ಸನ್ನು ಹೆದೆಯೇರಿಸಿ ಲಕ್ಷ್ಯವನ್ನೂ ಸಹ ಗುರುತಿಸಿದ. ಆದರೆ, ಬಾಣವನ್ನು ಉದ್ದೇಶಪೂರ್ವಕವಾಗಿಯೇ ಸರಿಯಾಗಿ ಪ್ರಯೋಗಿಸಲಿಲ್ಲ. ಅವಳು ಶ್ರೀಕೃಷ್ಣನನ್ನೇ ಹೊಂದಬೇಕಾದವಳು ಎಂಬುದು ಅವನಿಗೆ ತಿಳಿದಿತ್ತು.

---

೫೫. ನೈವಾದದೇ ಬಾಣಮನಿಚ್ಛಯೈವೇತ್ಯತ್ರ ''ಮತ್ಸ್ಯಾಭಾಸಂ ಜಲೇ ದೃಷ್ಟ್ವಾ ಜ್ಞಾತ್ವಾ ಚ ತದವಸ್ಥಿತಿಮ್। ಪಾರ್ಥೋ ಯತ್ತೋऽಸೃಜದ್ಬಾಣಂ ನಾಚ್ಛಿನತ್ಪಸ್ಪಶೇ ಪರಮ್'' ಇತಿ ಭಾಗವತೋಕ್ತೇರ್ವಿರೋಧಪರಿಹಾರಾಯ ಧನಂಜಯಃ ಅನಿಚ್ಛಯೈವ= ಕೃಷ್ಣಪ್ರಾಪ್ಯಲಕ್ಷಣಾಯಾಮಿಚ್ಛಾಭಾವೇನೈವ ಕಾರಣೇನ ಬಾಣಂ ನೈವಾದದೇ= ನೈವ ಸಮ್ಯಕ್ ದತ್ತವಾನ್। ಲಕ್ಷಚ್ಛೇದೋ ಯಥಾ ಭವತಿ ತಥಾ ನ ದತ್ತವಾನಿತ್ಯರ್ಥಃ। ಲಕ್ಷಸ್ಪರ್ಶಸ್ಯಾಪ್ಯತಿ-ಕುಶಲಸಾಧ್ಯತ್ವಾದ್ಭಾಗವತೇ ಯತ್ತ ಇತ್ಯುಕ್ತಮ್। ಲಕ್ಷಚ್ಛೇದೋ ಯಥಾ ನ ಭವತಿ ತಥಾ ಸ್ಪರ್ಶಮಾತ್ರಂ ಚ ಯಥಾ ಭವತಿ ತಥಾ ಸನ್ನಾಹವಾನಿತ್ಯರ್ಥಃ ॥ – (ವಾ.)

೫೫. ಏತೇನಾತ್ಮಬಲಮಿತ್ಯನೇನೈವ ಪೂರ್ಣತ್ವಾತ್ ಸ್ವೇತ್ಯೇತದ್ವ್ಯರ್ಥಮಿತಿ ದೂಷಣಸ್ಯಾನವಕಾಶಃ । ನಾಯಂ ಸ್ವಶಬ್ದಃ ಕಿಂತು ಸುಶಬ್ದ ಇತ್ಯಂಗೀಕಾರತ್ ॥ – (ಸ.)

ವಿಃ ೧) ಅರ್ಜುನ ನೋಡಲಿಂದೇ ಬಂದವನಾದರೂ ತನಗೆ ಸಾಮರ್ಥ್ಯವಿದೆ ಎಂದು ಜನ ತಿಳಿಯಲಿ ಎಂಬ ಉದ್ದೇಶದಿಂದ ಅಷ್ಟೆಲ್ಲ ಮಾಡಿದ ಎಂದರ್ಥ. ಆದರೆ, ಅವಳು ಶ್ರೀಕೃಷ್ಣಪತ್ನಿ ಎಂಬುದನ್ನು ಅರಿತಿದ್ದರಿಂದ ತಾನು ಯಶಸ್ವಿಯಾಗುವಂತಹ ಪ್ರಯತ್ನ ಮಾಡಲಿಲ್ಲ ಎಂದು ತಿಳಿಯಬೇಕು. ಇಲ್ಲಿ ಅರ್ಜುನ ಬಾಣವನ್ನು ತೆಗೆದುಕೊಳ್ಳಲೇ ಇಲ್ಲ ಎಂದು ತಿಳಿಸುವಂತೆ ಕಾಣುತ್ತದೆ.

೨) ಆದರೆ, ಭಾಗವತದಲ್ಲಿ ಅರ್ಜುನ ಬಾಣ ಹೊಡೆದರೂ ಅದು ಸ್ಪರ್ಶಮಾಡಿತೇ ಹೊರತು ಲಕ್ಷ್ಯವನ್ನು ಭೇದಿಸಲಿಲ್ಲ ಎಂದಿದೆ. ಈ ವಿರೋಧವನ್ನು ಶ್ರೀ ವಾದಿರಾಜಸ್ವಾಮಿಗಳು ಅಪೂರ್ವ ರೀತಿಯಲ್ಲಿ ಪರಿಹರಿಸಿರುವರು. ಭಾಗವತದಲ್ಲಿ ಹೇಳಿರುವಂತೆ ಅರ್ಜುನ ಬಾಣವನ್ನು ಪ್ರಯೋಗಿಸಿದ್ದು ಸತ್ಯ. ಆದರೆ ಅವನಿಗೆ ಅದನ್ನು ಹೊಡೆದು ಬೀಳಿಸುವ ಉದ್ದೇಶವಿರಲಿಲ್ಲ. ಅದನ್ನೇ ಆಚಾರ್ಯರು ಅರ್ಜುನ ಬಾಣವನ್ನು ಲಕ್ಷ್ಯ ಬೀಳಿಸುವ ರೀತಿಯಲ್ಲಿ ಸರಿಯಾಗಿ ಪ್ರಯೋಗಿಸಲಿಲ್ಲ ಎಂಬ ಅರ್ಥದಲ್ಲಿ ಬಾಣ ತೆಗೆದುಕೊಳ್ಳಲಿಲ್ಲ ಎಂದಿರುವರೇ ಹೊರತು ಪ್ರಯೋಗಿಸಲೇ ಇಲ್ಲ ಎಂಬ ಅರ್ಥದಲ್ಲಿ ಅಲ್ಲ ಎಂದು ಭಾವ.

೩) ಬಾಣ ಅದಕ್ಕೆ ಸ್ಪರ್ಶಿಸಿದ್ದರಿಂದ ಅರ್ಜುನನಿಗೆ ಅದು ಗೋಚರಿಸಿದ್ದು ಜನರಿಗೆ ಸ್ಪಷ್ಟ-ವಾಯಿತು, ಅದು ಭೇದಿಸಿ ಕೆಳಗೆ ಬೀಳಲಿಲ್ಲವಾದ್ದರಿಂದ ಅವನು ಸರಿಯಾಗಿ ಬಾಣ ಪ್ರಯೋಗಿಸಲಿಲ್ಲ ಎಂದೂ ತಿಳಿಯಿತು. ಹಾಗೆ ಸರಿಯಾಗಿ ಪ್ರಯೋಗಿಸದಿದ್ದಕ್ಕೆ ಅವಳು ಶ್ರೀಕೃಷ್ಣಪತ್ನಿ ಎಂದು ಅವನು ತಿಳಿದಿದ್ದುದೇ ಕಾರಣ ಎಂದು ಅವನ ಮನಸ್ಸಿನ ಭಾವವನ್ನು ತಿಳಿಸಿದಂತಾಯಿತು.

ಭೀಮಶ್ಚಾಪಂ ಲಕ್ಷ್ಯಮಪ್ಯೇತದತ್ರ
ದ್ರಷ್ಟುಂ ಚ ನೈವೈಚ್ಛದರೀಂದ್ರಧಾರಿಣಃ ।
ಯೋಗ್ಯೇ ಕರ್ಮಣ್ಯಾಯತಂಶ್ಚಾಪರಾಧೀ
ಸ್ಯಾಮಿತ್ಯಂಜಃ ಪಶ್ಯಮಾನೋ ಮಹಾತ್ಮಾ ॥ ೫೬ ॥

---

೫೬. ಭೀಮಶ್ಚಾಪಂ ಲಕ್ಷ್ಯಮಪ್ಯೇತದತ್ರ ದ್ರಷ್ಟುಂ ಚ ನೈವೇಚ್ಛದರೀಂದ್ರಧಾರಿಣಃ ಇತ್ಯುಕ್ತೇಃ ''ಸಜ್ಯಂ ಕೃತ್ವಾ ಪರೇ ವೀರಾಃ ಪ್ರಾಗ್ಜೋತಿಷಗಧೇಶ್ವರೌ। ಭೀಮೋ ದುರ್ಯೋಧನಃ ಕರ್ಣಃ ನಾವಿಂದಂಸ್ತದವಸ್ಥಿಮ್'' ಇತಿ ಭಾಗವತೋಕ್ತೇಶ್ಚ ವಿರೋಧಪರಿಹಾರಾಯ ದುರ್ಯೋಧನಾದ್ಯಾಃ ಸಜ್ಯಂ ಕೃತ್ವಾ ತದವಸ್ಥಿತಂ= ತಸ್ಯ ಲಕ್ಷ್ಯಾವಸ್ಥಿತಿಂ ನಾವಿಂದನ್। ಭೀಮಸ್ತ್ವಚ್ಛಿನ್ನಧರ್ಮತ್ವಾತ್ ತಸ್ಯ= ಧನುಷಃ ಅವಸ್ಥಿತಿಮೇವ ನಾವಿಂದತ್= ನಾಪಶ್ಯತ್। ವಿಷ್ಣುಯೋಗ್ಯವಸ್ತುನಿ ಇಚ್ಛಾಽಪಿ ದೋಷ ಇತಿ ಮನ್ವಾನಃ ಧನುಷೋ ದರ್ಶನಮಪಿ ನ ಚಕಾರೇತಿ ಯೋಜನಾ ದ್ರಷ್ಟವ್ಯಾ। ಅತ ಏವ ತದವಸ್ಥಿತಂ ನಾವಿಂದನ್ನಿತಿ ಸಾಮಾನ್ಯೇನ ಪ್ರಯೋಗಃ ॥ –(ವಾ.)

ಅ: ಭೀಮಸೇನನು ಬಾಣವನ್ನಾಗಲೀ ಲಕ್ಷ್ಯವನ್ನಾಗಲೀ ನೋಡಲು ಸಹ ಬಯಸಲೇ ಇಲ್ಲ; ಚಕ್ರಪಾಣಿಯಾದ ಶ್ರೀಹರಿಗೆ ಮಾತ್ರ ಸಲ್ಲುವ ಕಾರ್ಯದಲ್ಲಿ ಪ್ರಯತ್ನಿಸಿದರೂ ಸಹ ಅಪರಾಧಿಯಾದೇನು ಎಂದು ಚೆನ್ನಾಗಿ ತಿಳಿದಿದ್ದ ಮಹಾತ್ಮ ಅವನು.

ವಿ: ೧) ಭೀಮಸೇನ ಅರ್ಜುನನಿಗಿಂತ ಮಿಗಿಲಾದ ಪರಿಶುದ್ಧ ಧರ್ಮರತ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ. ಅರ್ಜುನನಿಗೆ ಇದ್ದಂತೆ ತನ್ನ ಸಾಮರ್ಥ್ಯವನ್ನು ತೋರಿಸುವ ಇಚ್ಛೆಯೂ ಸಹ ಭೀಮನಿಗೆ ಇರಲಿಲ್ಲ.

೨) ಶ್ರೀಕೃಷ್ಣನಿಗೆ ಸಲ್ಲುವ ವಸ್ತುವಿನ ಬಗ್ಗೆ ಯಾವುದೇ ರೀತಿಯಲ್ಲಿ ಪ್ರಯತ್ನಿಸುವುದು ಸಹ ದೊಡ್ಡ ಅಪರಾಧವೇ ಎಂಬುದು ಭೀಮನ ಧರ್ಮದೀಕ್ಷೆ ಎಂದರ್ಥ.

೩) ಮೇಲ್ನೋಟಕ್ಕೆ ಭಾಗವತದಲ್ಲಿ ಭೀಮಸೇನನೂ ದುರ್ಯೋಧನಾದಿಗಳಂತೆ ಲಕ್ಷ್ಯ ಕಾಣಲಿಲ್ಲ ಎಂದು ಹೇಳಿರುವಂತೆ ತೋರುತ್ತದೆ. ಅದಕ್ಕೆ ಶ್ರೀವಾದಿರಾಜಸ್ವಾಮಿಗಳು ಅಪೂರ್ವ ರೀತಿಯಲ್ಲಿ ವಿವರ ನೀಡಿರುವರು. ದುರ್ಯೋಧನಾದಿಗಳು ಪ್ರಯತ್ನಿಸಿದರೂ ಅವರಿಗೆ ಲಕ್ಷ್ಯವನ್ನು ಗುರುತಿಸಲಾಗಲಿಲ್ಲ.

೪) ಆದರೆ ಭೀಮ ಲಕ್ಷ್ಯವನ್ನು ಕಾಣುವ ಪ್ರಯತ್ನವನ್ನೇ ಮಾಡಲಿಲ್ಲ ಎಂಬುದು ಅಲ್ಲಿಯ ವ್ಯತ್ಯಾಸ ಎಂಬುದು ಅವರು ನೀಡಿರುವ ವಿವರಣೆ.

ಕೃಷ್ಣಸ್ತತಶ್ಚಾಪಮಧಿಜ್ಯಮಾಶು
ಕೃತ್ವಾऽಚಿಂತ್ಯಃ ಛಿನ್ನಬಾಣೇನ ಲಕ್ಷ್ಯಮ್ ।
ಅಪಾತಯದ್ದುಂದುಭಯಶ್ಚ ದಿವ್ಯಾ
ನೇದುಃ ಪ್ರಸೂನಂ ವವೃಷುಃ ಸುರಾಶ್ಚ ॥ ೫೭ ॥

ಅ: ಅಚಿಂತ್ಯ ಮಹಿಮೆಯ ಶ್ರೀಕೃಷ್ಣನು ಆ ಬಿಲ್ಲನ್ನು ಬೇಗನೆ ಹೆದೆಯೇರಿಸಿ ಛಿನ್ನಬಾಣದಿಂದ ಲಕ್ಷ್ಯವನ್ನು ಹೊಡೆದು ಬೀಳಿಸಿದ. ದೇವದುಂದುಭಿಗಳು ಮೊಳಗಿದವು. ದೇವತೆಗಳು ಪುಷ್ಪವೃಷ್ಟಿ ಮಾಡಿದರು.

---

೫೭. ಅಚಿಂತ್ಯಮಹಿಮ್ನೋऽಸ್ಯ ನೈತದಾಶ್ಚರ್ಯಮಿತಿ ಭಾವಃ। ಯದ್ವಾ ಅರ್ಜುನಾದಿಸಾಧ್ಯೋऽಯಂ ಲಕ್ಷ್ಯವೇಧಃ ಕಥಂ ಕೃಷ್ಣಸ್ಯ ಮಹಿಮೋಚ್ಯತೇ ಇತ್ಯತ ಆಹ ಅಚಿಂತ್ಯ ಇತಿ। 'ರಾಮಾವತಾರಚರಿತಾನಿ ತದನ್ಯ ಪುಂಭಿಃ ಶಕ್ಯಾನಿ ನೈವ ಮನಸಾऽಪಿ ಹಿ ತಾನಿ ಕರ್ತುಮ್' ಇತ್ಯುಕ್ತರೀತ್ಯಾ (೯/೪೩) 'ಏವಂವಿಧಾನ್ಯಗಣಿತಾನಿ ಯದೂತ್ತಮಸ್ಯ' ಇತಿ (೨೨/೨೭) ವಕ್ಷ್ಯಮಾಣರೀತ್ಯಾ ಚ ಭಗವದೀಯಂ ತದೇವ ಲಕ್ಷ್ಯವೇಧಾದಿರೂಪಂ ಕರ್ಮಾಚಿಂತ್ಯಮನನ್ಯಸಾಧಾರಣಮಿತಿ ಭಾವಃ। – (ತಾ.)

ವಿಃ ೧) ಜರಾಸಂಧಾದಿಗಳೆಲ್ಲ ಶ್ರೀಕೃಷ್ಣನ ಅಪೂರ್ವ ಸಾಮರ್ಥ್ಯವನ್ನು ಕಂಡು ಮತೊಮ್ಮೆ ಕೊರಗುವಂತಾಯಿತು.

೨) ಶ್ರೀಕೃಷ್ಣ ಹೀಗೆ ಮತ್ಸ್ಯಯಂತ್ರವನ್ನು ಭೇದಿಸುವ ಮೂಲಕ ಇದಕ್ಕಿಂತ ಕಡಿಮೆ-ಯೆನ್ನಿಸಿದ್ದ ದ್ರೌಪದಿಯ ಸ್ವಯಂವರದ ಮತ್ಸ್ಯಯಂತ್ರಭೇದನವನ್ನೂ ಸಹ ತಾನು ಲೀಲಾಜಾಲ-ವಾಗಿ ಮಾಡಬಲ್ಲವನಾಗಿದ್ದ ಎಂಬುದನ್ನು ತೋರಿಸಿಕೊಟ್ಟ.

೩) ಅದರಿಂದ ತಾವೆಲ್ಲ ಆಗ ಅಲ್ಲಿಗೆ ತೆರಳಿದ್ದು ನೋಡಲು ಮಾತ್ರ ಎಂಬುದನ್ನು ಸ್ಪಷ್ಟಪಡಿಸಿದನು. ಪಾಂಡವರಿಗೆ ಲಕ್ಷಣಾ ಕೃಷ್ಣಪತ್ನಿ ಎಂದು ತಿಳಿದಿದ್ದಂತೆ, ಸರ್ವಜ್ಞನಾದ ಶ್ರೀಕೃಷ್ಣ-ನಿಗೆ ದ್ರೌಪದಿ ಪಾಂಡವಪತ್ನಿ ಎಂದು ತಿಳಿದಿದ್ದುದೇ ಕಾರಣ ಎಂಬುದು ಒಟ್ಟು ಸಿದ್ಧಾಂತ.

ಕೃಷ್ಣೇ ಬ್ರಹ್ಮಾದ್ಯೈಃ ಸ್ತೂಯಮಾನೇ ನರೇಂದ್ರ-
ಕನ್ಯಾ ಮಾಲಾಂ ಕೇಶವಾಂಸೇ ನಿಧಾಯ।
ತಸ್ಥಾವುಪಾಸ್ಯಾಥ ಸರ್ವೇ ನರೇಂದ್ರಾ
ಯುದ್ಧಾಯಾಗುಃ ಕೇಶವಂ ಸ್ವಾತ್ತಶಸ್ತ್ರಾಃ ॥ ೫೮ ॥

ಅ: ಶ್ರೀಕೃಷ್ಣನನ್ನು ಬ್ರಹ್ಮಾದಿ ದೇವತೆಗಳು ಸ್ತೋತ್ರ ಮಾಡುತ್ತಿದ್ದಂತೆಯೇ ರಾಜಕುಮಾರಿ-ಯಾದ ಲಕ್ಷಣೆ ಶ್ರೀಕೃಷ್ಣನ ಭುಜದಲ್ಲಿ ಮಾಲೆ ಹಾಕಿ ಅವನ ಪಕ್ಕದಲ್ಲಿ ನಿಂತಳು. ಆಗ ಎಲ್ಲ ರಾಜರುಗಳು ಶಸ್ತ್ರ ಹಿಡಿದು ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಹೊರಟರು.

ವಿಃ ಸ್ವಯಂವರದಲ್ಲಿ ಮಾತ್ರವಲ್ಲದೇ ಯುದ್ಧದಲ್ಲೂ ಸೋಲುವ ಅವಿವೇಕ ಅವರದು ಎಂಬುದಕ್ಕೂ ಇದು ಸೂಚಕ.

ವಿದ್ರಾವ್ಯ ತಾನ್ ಮಾಗಧಾದೀನ್ ಸ ಕೃಷ್ಣೋ
ಭೀಮಾರ್ಜುನಾಭ್ಯಾಂ ಸಹಿತಃ ಪುರೀಂ ಸ್ವಾಮ್।
ಯಯಾವೇತಾ ಅಷ್ಟ ಮಹಾಮಹಿಷ್ಯಃ
ಕೃಷ್ಣಸ್ಯ ದಿವ್ಯಾ ಲೋಕಸುಂದರ್ಯ ಇಷ್ಟಾಃ ॥ ೫೯ ॥

ಅ: ಶ್ರೀಕೃಷ್ಣನು ಜರಾಸಂಧ ಮೊದಲಾದ ಎಲ್ಲರನ್ನೂ ಓಡಿಸಿ ಭೀಮಾರ್ಜುನರೊಂದಿಗೆ ಕೂಡಿ ದ್ವಾರಕಾ ಪಟ್ಟಣಕ್ಕೆ ತೆರಳಿದ. ಇವರು ಶ್ರೀಕೃಷ್ಣನ ಅಷ್ಟ ಮಹಾಮಹಿಷಿಯರು. ಶ್ರೀಕೃಷ್ಣ-ನಿಗೆ ಅತ್ಯಂತ ಪ್ರಿಯರಾದ ದಿವ್ಯ ಲೋಕಸುಂದರಿಯರು.

ವಿ: ೧) ರುಗ್ಮಿಣೀ, ಸತ್ಯಭಾಮಾ, ಜಾಂಬವತೀ, ಕಾಳಿಂದೀ, ನೀಲಾ, ಮಿತ್ರವಿಂದಾ, ಭದ್ರಾ ಮತ್ತು ಲಕ್ಷಣಾ ಎಂಬ ಈ ಎಂಟು ಜನ ಶ್ರೀಕೃಷ್ಣನ ಅಷ್ಟಮಹಾಮಹಿಷಿಯರು ಎಂದರ್ಥ.

೨) ಇವರಲ್ಲಿ ರುಗ್ಮಿಣಿ, ಸತ್ಯಭಾಮೆಯರನ್ನು ಬಿಟ್ಟು ಉಳಿದವರಿಗೆ ಷಣ್ಮಹಿಷಿಯರು ಎಂದು ಹೆಸರು. ಇವರು ಸದಾ ವಿಷ್ಣುಪತ್ನಿಯರೇ ಎಂಬುದು ವಿಶೇಷ.

೩) ತಾರತಮ್ಯದಲ್ಲಿ ಗರುಡಶೇಷರುದ್ರರ ಅನಂತರದ ಸ್ಥಾನ ಇವರದ್ದು. ಜಾಂಬವತಿಯ ಬಗ್ಗೆ ಇರುವ ಸ್ವಲ್ಪ ವಿಶೇಷವನ್ನು ಮುಂದಿನ ಶ್ಲೋಕಗಳಲ್ಲಿ ತಿಳಿಸಿರುವರು.

ಶ್ರೀಕೃಷ್ಣನ ಅಷ್ಟಮಹಿಷಿಯರು

ಭೈಷ್ಮೀ ಸತ್ಯಾ ಚೈಕತನುರ್ದ್ವಿಧೈವ
ಜಾತಾ ಭೂಮೌ ಪ್ರಕೃತಿರ್ಮೂಲಭೂತಾ ।
ತಯೈವಾನ್ಯಾಃ ಸರ್ವದಾ ಽನುಪ್ರವಿಷ್ಟಾ-
ಸ್ತಾಸಾಂ ಮಧ್ಯೇ ಜಾಂಬವತೀ ಪ್ರಧಾನಾ ॥ ೬೦ ॥

ಅ: ರುಗ್ಮಿಣೀ ಮತ್ತು ಸತ್ಯಭಾಮೆ ಇಬ್ಬರು ಎರಡು ರೂಪಗಳಿಂದ ಭೂಮಿಯಲ್ಲಿ ಅವತರಿಸಿದ, ಮೂಲ ಜಡಪ್ರಕೃತಿಯ ಅಭಿಮಾನಿ ದೇವತೆಯಾದ ಮಹಾಲಕ್ಷ್ಮಿ. ಉಳಿದೆಲ್ಲರಲ್ಲೂ ಅವಳು ಸರ್ವದಾ ಆವೇಶ ಹೊಂದಿದ್ದಳು. ಅವರ ಮಧ್ಯೆ ಜಾಂಬವತಿ ಪ್ರಮುಖಳು.

ವಿ: ೧) ರುಗ್ಮಿಣಿ, ಸತ್ಯಭಾಮೆಯರಿಬ್ಬರೂ ಸಾಕ್ಷಾತ್ ಮಹಾಲಕ್ಷ್ಮಿಯ ಶ್ರೀ ಮತ್ತು ಭೂ ಎಂಬ ಎರಡು ರೂಪಗಳ ಪ್ರಾದುರ್ಭಾವ. ಅವರಿಬ್ಬರಲ್ಲೂ ಕಿಂಚಿತ್ತು ಸಹ ಭೇದ ಸರ್ವಥಾ ಇಲ್ಲ.

೨) ಆದರಿಂದಲೇ ಅಷ್ಟಮಹಿಷಿಯರು, ಷಣ್ಮಹಿಷಿಯರು ಎನ್ನುವಂತೆ ಸಪ್ತಮಹಿಷಿಯರು ಎಂಬ ಪದ ಇಲ್ಲ ಎಂದು ಗಮನಿಸಬೇಕು. ಅವರಿಬ್ಬರು ಸೇರಿ ಒಂದೇ ಆಗಿರುವುದೇ ಅದಕ್ಕೆ ಕಾರಣ.

---

೬೦. ತಾಸಾಂ ಮಧ್ಯೇ ಜಾಂಬವತೀ ಪ್ರಧಾನೇತ್ಯತ್ರ ರಮಾವೇಶಾಜ್ಜಾಂಬವತ್ಯಾಃ ರಾಮಸಾಮ್ಯಮ್। ಅನ್ಯಾಸಾಂ ತು ಈಷದ್ರಮಾವೇಶೇ ऽಪಿ ತತಃ ಕಿಂಚಿದೂನತ್ವಮ್। ನಿಜಸ್ವರೂಪವಿಚಾರೇ ತು ಷಣ್ಣಾಮಪಿ ಪ್ರದ್ಯುಮ್ನತೋ ವಿಂಶತಿಗುಣಾಧಿಕತ್ವೇನ ಸಾಮ್ಯಮೇವ। ಅತಸ್ತಾರತಮ್ಯಸ್ತೋತ್ರೇ "ಸ್ತ್ರಿಯಃ ಷಟ್ ಚ" ಇತಿ ಷಣ್ಣಾಮಪಿ ಸಮತಯೋಕ್ತಿರಿತಿ ಜ್ಞೇಯಮ್ ॥ – (ವಾ.)

೬೦. ಸರ್ವಜಗತ್ಕಾರಣಭೂತಾ ಪ್ರಕೃತಿರ್ಮಹಾಲಕ್ಷ್ಮೀರಚಿಂತ್ಯಶಕ್ತ್ಯಾ ಶ್ರೀಭೂರಿತಿ ದ್ವಿಧಾ ಭೂತಾ ಸತೀ ಭೂಮೌ ಭೈಷ್ಮೀ ಸತ್ಯಾ ಚೇತಿ ಜಾತೇತ್ಯರ್ಥಃ। – (ತಾ.)

೩) ಉಳಿದೆಲ್ಲ ಶ್ರೀಕೃಷ್ಣ ಪತ್ನಿಯರಲ್ಲೂ ರಮಾವೇಶ; ವಿಶೇಷವಾಗಿ ಜಾಂಬವತಿಯಲ್ಲಿ ಹೆಚ್ಚಿನ ರಮಾವೇಶ. ಆದ್ದರಿಂದ ಷಣ್ಮಹಿಷಿಯರಲ್ಲೂ ಸಹ ಜಾಂಬವತಿಗೆ ಪ್ರಾಧಾನ್ಯ ಎಂದರ್ಥ.

೪) ರಮಾದೇವಿಯ ಆವೇಶವಿಲ್ಲದವರನ್ನು ಶ್ರೀಹರಿ ಎಂದೂ ಪತ್ನಿಯನ್ನಾಗಿ ಸ್ವೀಕರಿಸುವುದಿಲ್ಲ ಎಂಬ ಮಾತು ಹಿಂದೆ ಬಂದಿದೆ : **'ಋತೇ ರಮಾಂ ಜಾತು ಮಮಾಂಗಸಂಗ-ಯೋಗ್ಯಾಂಗನಾ ನೈವ ಸುರಾಲಯೇಽಪಿ'** (೧೧/೧೨೭).

ರಾಮೇಣ ತುಲ್ಯಾ ಜಾಂಬವತೀ ಪ್ರಿಯತ್ವೇ
ಕೃಷ್ಣಸ್ಯಾನ್ಯಾಃ ಕಿಂಚಿದೂನಾಶ್ಚ ತಸ್ಯಾಃ ।
ಯದಾಽಽವೇಶೋ ಬಹುಲಃ ಸ್ಯಾದ್ರಮಾಯಾ-
ಸ್ತದಾ ತಾಸು ಪ್ರೀಯತೇ ಕೇಶವೋಽಲಮ್ ॥ ೬೧ ॥

ಅ: ಜಾಂಬವತಿಯು ಶ್ರೀಹರಿಗೆ ಪ್ರೀತಿಪಾತ್ರರಲ್ಲಿ ಬಲರಾಮನಿಗೆ ಸಮಾನಳು, ಉಳಿದವರು ಅವಳಿಗಿಂತ ಸ್ವಲ್ಪ ಕಡಿಮೆ. ಅವರಲ್ಲಿ ರಮಾವೇಶ ಅಧಿಕವಾಗಿ ಕಾಣಿಸಿದಾಗ ಶ್ರೀಕೃಷ್ಣ ಅವರಲ್ಲಿ ವಿಶೇಷವಾಗಿ ಪ್ರೀತಿ ಹೊಂದುವನು.

ವಿ: ರಮಾವೇಶ ಅಧಿಕವಾಗಿದ್ದಾಗ ಜಾಂಬವತಿ ಗರುಡ, ಶೇಷ, ರುದ್ರರ ಸಮಾನ. ಇಲ್ಲದಿದ್ದಾಗ ಅವರಿಗಿಂತ ಕಡಿಮೆಯೆನ್ನಿಸಿ ಇತರ ಐವರಿಗಿಂತ ಸ್ವಲ್ಪ ಮಿಗಿಲು ಎಂಬುವ ವಿಶೇಷಾಂಶವನ್ನು ಗಮನಿಸಬೇಕು.

---

೬೦. ಪೂರ್ವಂ ತಾಸಾಂ ಸ್ವರೂಪಂ ತೂಕ್ತಂ ಗರುಡಪುರಾಣೇ ವೇಂಕಟಾಚಲಮಾಹಾತ್ಮ್ಯೇ–

ಚಂದ್ರಪುತ್ರೀ ಚ ಯಾ ಪೂರ್ವಂ ಸೈವ ಜಾಂಬವತೀ ಹ್ಯಭೂತ್ ।
ಪೂರ್ವಂ ತು ಪಿತೃದೇವಸ್ಯ ಕವ್ಯವಾಹಸ್ಯ ಯಾ ಸುತಾ ॥
ಸೈವ ನೀಲಾ ದ್ವಿರೂಪೇಣ ನಗ್ನಜಿತ್ಕುಂಭಯೋಃ ಸುತಾ ।
ನಲಾಖ್ಯಪಿತೃದೇವಸ್ಯ ಪುತ್ರೀ ಭದ್ರಾ ಪ್ರಕೀರ್ತಿತಾ ॥
ಅಗ್ನಿಷ್ವಾತ್ತನಾಮಕಸ್ಯ ಯಾ ಸುತಾ ಪೂರ್ವಜನ್ಮನಿ ।
ಅಭೂತ್ ಸೈವ ತದಾ ದೇವೀ ಮಿತ್ರವಿಂದಾ ಪ್ರಕೀರ್ತಿತಾ ॥
ಪೂರ್ವಸರ್ಗೇ ಸೂರ್ಯಪುತ್ರೀ ಕಾಲಿಂದೀ ನಾಮಿಕಾ ಹ್ಯಭೂತ್ ।
ಪೂರ್ವಸರ್ಗೇ ಬರ್ಹಿಷದಃ ಪಿತೃದೇವಸ್ಯ ಪುತ್ರಿಕಾ ॥
ಸೈವ ಜಾತಾ ಲಕ್ಷಣೇತಿ ಷಣ್ಮಹಿಷ್ಯಃ ಪ್ರಕೀರ್ತಿತಾಃ ।
ಅನಾದಿಕಾಲತಸ್ತಾಸು ನಾನ್ಯತ್ರಸ್ಥಾ ಹರಿಂ ವಿನಾ ॥
ಶೇಷಾಚ್ಚ ಪಂಚಗುಣತೋ ನ್ಯೂನಾಸ್ತಾಃ ಪರಿಕೀರ್ತಿತಾಃ ।
ತಾಭ್ಯೋ ದ್ವಿಗುಣತೋ ನ್ಯೂನಾಃ ಶೇಷರುದ್ರವಿಪಸ್ತ್ರಿಯಃ ॥ ಇತ್ಯಾದಿ ॥ – (ರಾ.)

ಯದಾऽऽವೇಶೋ ಹ್ರಾಸಮುಪೈತಿ ತತ್ರ
ಪ್ರದ್ಯುಮ್ನತೋ ವಿಂಶಗುಣಾಧಿಕಾಃ ಸ್ಯುಃ ।
ಅನಾದಿತಸ್ತಾಃ ಕೇಶವಾನ್ನಾನ್ಯಸಂಸ್ಥಾ
ರೇಮೇ ತಾಭಿಃ ಕೇಶವೋ ದ್ವಾರವತ್ಯಾಮ್ ॥ ೬೨ ॥

ಅ: ರಮಾವೇಶ ಕಡಿಮೆಯಾದಾಗ ಅವರೆಲ್ಲ ಕಾಮನಿಗಿಂತ ಇಪ್ಪತ್ತು ಗುಣ ಮಿಗಿಲಾದವರು. ಅನಾದಿ ಕಾಲದಿಂದಲೂ ಅವರು ಶ್ರೀಕೃಷ್ಣನ ಹೊರತು ಮತ್ತೊಬ್ಬರನ್ನು ಹೊಂದಿದವರಲ್ಲ. ಶ್ರೀಕೃಷ್ಣ ದ್ವಾರಕೆಯಲ್ಲಿ ಅವರೊಂದಿಗೆ ವಿಹರಿಸಿದ.

ವಿ: ೧) ಇಲ್ಲಿ ಕಾಮನಿಗಿಂತ ಇಪ್ಪತ್ತು ಗುಣ ಅಧಿಕರು ಎಂದರೆ ಇಂದ್ರ, ಕಾಮನಿಗಿಂತ ಇಪ್ಪತ್ತು ಗುಣ ಅಧಿಕರು ಎಂದರ್ಥ. ಅದರಂತೆ ಗರುಡ ಶೇಷರಿಗಿಂತ ಐದು ಗುಣ ಕಡಿಮೆಯೆಂದೂ ತಿಳಿಯಬೇಕು.

೨) ಇಲ್ಲಿ ಪ್ರದ್ಯುಮ್ನ ಮಾತ್ರ ಎಂದು ಉಲ್ಲೇಖಿಸಲು ಕಾಮ ಆ ರೂಪದಿಂದ ಅವತರಿಸಿದ್ದು ಕಾರಣ. ಶೇಷ ಅಣ್ಣನಾಗಿದ್ದರೆ, ಪ್ರದ್ಯುಮ್ನ ಮಗ. ಜಾಂಬವತಿ ಮೊದಲಾದವರು ಪತ್ನಿಯರು, ಇಂದ್ರ ಇಲ್ಲಿ ಪುತ್ರನಾಗಿ ಅವತರಿಸಿಲ್ಲ. ಕಾಮ ಜಾಂಬವತೀಪುತ್ರನಾಗಿ ಸಾಂಬ ಎಂಬ ಹೆಸರಿನಿಂದಲೂ ಅವತರಿಸಿದ್ದನ್ನು ಗಮನಿಸಬೇಕು.

೩) ಈ ದೃಷ್ಟಿಯಲ್ಲಿ ವಿವೇಚನೆ ಮಾಡುತ್ತಾ ಪುತ್ರನಿಗಿಂತ ಪತ್ನಿಯರೂ, ಪತ್ನಿಗಿಂತ ಅಣ್ಣನೂ ಶ್ರೀಕೃಷ್ಣನಿಗೆ ಪ್ರಿಯ ಎಂದು ಲೋಕವೈಲಕ್ಷಣ್ಯವನ್ನೂ ಸಹ ತಿಳಿಸಿರುವುದು ವಿಶೇಷ.

ಧನ್ಯಾಶ್ಚರ್ಯಾಖ್ಯಾನ

ಏವಂ ಕೃಷ್ಣೇ ದ್ವಾರಕಾಮಧ್ಯಸಂಸ್ಥೇ
ಗಿರಿಂ ಭೂಪಾ ರೈವತಕಂ ಸಮಾಯಯುಃ ।
ದುರ್ಯೋಧನಾದ್ಯಾಃ ಪಾಂಡವಾಶ್ಚೈವ
ಸರ್ವೇ ನಾನಾದೇಶ್ಯಾ ಯೇ ಚ ಭೂಪಾಲಸಂಘಾಃ ॥ ೬೩ ॥

---

೬೨. ಇದಮುಕ್ತಂ ಭವತಿ । ರಮಾವೇಶೋದ್ರೇಕದಶಾಯಾಂ ಜಾಂಬವತೀ ರಾಮಸಮಾ । ಅನ್ಯಾಸ್ತು ರಾಮಾತ್ ಕಿಂಚಿದೂನಾಃ । ತದಭಾವಕಾಲೇ ಸರ್ವಾ ಅಪಿ ರಾಮಾತ್ ಪಂಚಗುಣನ್ಯೂನಾಃ ಪ್ರದ್ಯುಮ್ನತೋ ವಿಂಶತಿಗುಣಾಧಿಕಾಃ। ತಥಾऽಪಿ ಜಾಂಬವತೀ ಕಿಂಚಿದಧಿಕೇತಿ ಟೀಕಾಯಾಂ ತಾಸಾಂ ಮಧ್ಯೇ ಜಾಂಬವತೀ ಪ್ರಧಾನಾ ಪ್ರಕೃತ್ಯಾವೇಶಾಧಿಕ್ಯಾದಿತ್ಯುಕ್ತಮ್ । ಕೇಚಿತ್ತು ಇತರಾಸಾಂ ಕಿಂಚಿದೂನತ್ವಂ ನ ಸಾರ್ವಕಾಲಿಕಮಿತ್ಯಾಹ ಯದೇತಿ। ತಾಸು ಕಾಲಿಂದ್ಯಾದ್ಯಾಸು ಅಲಂ ಪ್ರೀಯತೇ। ಜಾಂಬವತೀಸಾಮ್ಯೇನ ಪ್ರೀಯತೇ। ಯದಾ ತು ತಾಸ್ವಾವೇಶೋऽಲ್ಪತ್ವಮುಪೈತಿ ತದಾ ಪ್ರದ್ಯುಮ್ನತೋ ವಿಂಶತಿಗುಣಾಧಿಕಾಃ ಸ್ಯುಃ। ತದಾ ಕಿಂಚಿದೂನತ್ವಮಿತಿ ಭಾವಃ । — (ತಾ.)

ಅ: ಹೀಗೆ ಶ್ರೀಕೃಷ್ಣನು ದ್ವಾರಕೆಯಲ್ಲಿ ನೆಲೆಸಿದ್ದಾಗ ಎಲ್ಲ ರಾಜರುಗಳೂ ಒಮ್ಮೆ ರೈವತಕ ಪರ್ವತಕ್ಕೆ ಆಗಮಿಸಿದರು. ದುರ್ಯೋಧನಾದಿಗಳು, ಪಾಂಡವರು, ನಾನಾ ದೇಶಗಳಿಗೆ ಸೇರಿದ ರಾಜರ ಗುಂಪುಗಳೂ ಸಹ ಬಂದವು.

ವಿ: ೧) ದ್ವಾರಕೆಯ ಸುತ್ತ ಪೂರ್ವಾದಿ ದಿಕ್ಕುಗಳಲ್ಲಿ ಕ್ರಮವಾಗಿ ರೈವತ, ಲತಾವೇಷ್ಟ, ಸುರಕ್ಷ ಮತ್ತು ವೇಣುಮಂತ ಎಂಬ ನಾಲ್ಕು ಕ್ರೀಡಾಂಗಣವಾಗಿದ್ದ ಪರ್ವತಗಳು ಇದ್ದವು. ಅವುಗಳಲ್ಲಿ ರೈವತಗಿರಿ ಪ್ರಧಾನ.

೨) ಅಲ್ಲಿ ಶ್ರೀಕೃಷ್ಣನ ದರ್ಶನಕ್ಕೆಂದು ಸಕಲ ರಾಜರುಗಳೂ ಸಹ ವಿಶೇಷ ಪ್ರಸಂಗ–ವೊಂದರಲ್ಲಿ ಆಗಮಿಸಿದರು.

ಆತ್ಮಾನಂ ತಾನ್ ದ್ರಷ್ಟುಮಭ್ಯಾಗತಾನ್ ಸ
ಕೃಷ್ಣೋ ಗಿರೌ ರೈವತಕೇ ದದರ್ಶ ।
ನಮಸ್ಯತೇ ಸರ್ವನರೇಂದ್ರಮುಖ್ಯೈಃ
ಕೃಷ್ಣೇ ವೈದರ್ಭ್ಯಾ ಸಹ ದಿವ್ಯಾಸನಸ್ಥೇ ॥ ೬೪ ॥

ಅ: ತನ್ನನ್ನು ಕಾಣಲೆಂದು ಆಗಮಿಸಿದ್ದ ಅವರೆಲ್ಲರಿಗೂ ಶ್ರೀಕೃಷ್ಣ ರೈವತಕ ಪರ್ವತದಲ್ಲಿ ಕಂಡ.ರುಗ್ಮಿಣೀ ಸಮೇತನಾಗಿ, ದಿವ್ಯ ಆಸನದಲ್ಲಿ ಮಂಡಿಸಿದ ಅವನಿಗೆ ಸಕಲ ರಾಜಮುಖ್ಯರು ಸಹ ವಂದಿಸಿದರು.

ಏತ್ಯಾಕಾಶಾನ್ನಾರದಃ ಕೃಷ್ಣಮಾಹ
ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿತ್ ।
ಇತ್ಯಾಶ್ಚರ್ಯೋ ಧನ್ಯ ಇತ್ಯೇವ ಶಬ್ದ–
ದ್ವಯೇ ತೂಕ್ತೇ ವಾಸುದೇವಸ್ತಮಾಹ ॥ ೬೫ ॥

ಅ: ಆಗ ಗಗನದಿಂದ ಆಗಮಿಸಿ ನಾರದ ಶ್ರೀಕೃಷ್ಣನಿಗೆ ನುಡಿದ : ''ನೀನು ಸರ್ವೋತ್ತಮ, ನಿನ್ನಂಥವನು ಬೇರಾರೂ ಇಲ್ಲ'' ಎಂದು ಆಶ್ಚರ್ಯ ಮತ್ತು ಧನ್ಯ ಎಂಬ ಎರಡು ಶಬ್ದಗಳಿಂದ ತಿಳಿಸಿದ. ಶ್ರೀಕೃಷ್ಣ ಅವರಿಗೆ ತಿಳಿಸಿದ:

ವಿ: ಆಗ ಆಕಾಶದಿಂದ ಇಳಿದ ನಾರದರು ಕೃಷ್ಣನನ್ನು **'ತ್ವಂ ಆಶ್ಚರ್ಯಃ ಧನ್ಯಃ ...'** ಎಂದು ಸ್ತುತಿಸಿದರು. ಅದರ ಅರ್ಥ ನೀನೇ ಸರ್ವೋತ್ತಮ, ನಿನ್ನಂಥವರು ಬೇರಾರೂ ಇಲ್ಲ ಎಂದು.

ದಕ್ಷಿಣಾಭಿಃ ಸಾಕಮಿತ್ಯೇವ ಕೃಷ್ಣಂ
ಪಪ್ರಚ್ಛುರೇತತ್ ಕಿಮಿತಿ ಸ್ಮ ಭೂಪಾಃ ।
ನಾರಾಯಣೋ ಮುನಿಮೂಚೇ ವದೇತಿ
ಶೃಣುಧ್ವಮಿತ್ಯಾಹ ಸ ನಾರದೋಽಪಿ ॥ ೬೬ ॥

ಅ: ''ದಕ್ಷಿಣೆಗಳ ಸಮೇತವಾಗಿ'' ಎಂದು. ಆಗ ಶ್ರೀಕೃಷ್ಣನನ್ನು ''ಇದೇನು'' ಎಂದು ರಾಜರು ಕೇಳಿದರು. ಶ್ರೀಕೃಷ್ಣ ನಾರದಮುನಿಗೆ ತಿಳಿಸಿದ ''ಹೇಳಿರಿ''. ನಾರದರೂ ಸಹ ''ಆಲಿಸಿರಿ'' ಎಂಬುದಾಗಿ ಹೇಳತೊಡಗಿದರು.

---

೬೫. ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿದಿತಿ ಶ್ಲೋಕಸ್ಯೈವಂ ಯೋಜನಾ — ತ್ವಂ ಸರ್ವೋತ್ತಮೋಽಸಿ ಕಶ್ಚಿದಪಿ ಲೋಕೇ ತ್ವಾದೃಶೋ ನಾಸ್ತಿ ಇತಿ = ಇತ್ಯಭಿಪ್ರಾಯೇಣ ನಾರದೇನ ಕೃಷ್ಣಂ ಪ್ರತ್ಯೇವ। ತು= ಪೂರ್ವೋಕ್ತ-ಸಕಲಾಶ್ಚರ್ಯಧನ್ಯೇಭ್ಯಃ ವಿಶೇಷೇಣ ತ್ವಮೇವಾಶ್ಚರ್ಯೋಽಸಿ ಧನ್ಯೋಽಸಿ ಚ ಇತಿಶಬ್ದದ್ವಯೇ ಉಕ್ತೇ ಸತಿ ಆ = ಸಮಂತಾತ್ ಶ್ಚರ್ಯಾಃ = ಸುಖಚರಣಯೋಗ್ಯಾಃ ಜೀವಾಃ ಯಸ್ಮಾತ್ತವರ್ತಂತೇ ಸ ಆಶ್ಚರ್ಯಃ ಧಂ= ಸ್ವವಶಜಗದ್ಧಾರ-ಕತ್ವೇನ ಕುತ್ಸಿತತ್ವಾದಿಭಿಃ ಕಥ್ಯಮಾನಂ ನಿ = ನಿತರಾಂ ಅಯತಿ = ದೂರೇ ಯಾಪಯತಿ ಅಷ್ಟಮರಸೀ ಕರೋತೀತಿ ಧನ್ಯ ಇತಿ ವ್ಯುತ್ಪತ್ತಿಮಭಿಪ್ರೇತ್ಯೋಕ್ತಂ ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿದಿತಿ। ಏವಕಾರೇಣ ಪಾರ್ಶ್ವಸ್ಥಾಂ ರುಕ್ಮಿಣ್ಯಾಖ್ಯಶ್ರಿಯಂ ವ್ಯವಚ್ಛಿನತ್ತಿ। –(ವಾ.)

೬೫. 'ಅನಪೇಕ್ಷೋ ಗುಣೈಃ ಪೂರ್ಣೋ ಧನ್ಯ ಇತ್ಯುಚ್ಯತೇ ಬುಧೈಃ'ಇತಿ ಶಬ್ದನಿರ್ಣಯೇ। –ಭಾ.ತಾ.(೪/೨೩/೨೫)

೬೫. ಧನ್ಯಃ ಕೃತಾರ್ಥಃ ನಿರವಧಿಕಪೂರ್ಣತ್ವಮೇವ ಸರ್ವೋತ್ತಮತ್ವಮ್। –(ತಾ.)

೬೫. ಆಶ್ಚರ್ಯಂ ಖಲು ದೇವಾನಾಮೇಕಸ್ತ್ವಂ ಪುರುಷೋತ್ತಮಃ।
ಧನ್ಯಶ್ಚಾಸಿ ಮಹಾಬಾಹೋ ಲೋಕೇ ನಾನ್ಯೋಽಸ್ತಿ ಕಶ್ಚನ ॥ –ಹರಿವಂಶ (೨/೧೧೦/೨೨)

೬೬. ವಾಸುದೇವಸ್ತಂ ನಾರದಂ ಪ್ರತಿ ದಕ್ಷಿಣಾಭಿಃ ಸಾಕಮೇವಾಹಂ ಆಶ್ಚರ್ಯೋಽಸ್ಮಿ ಧನ್ಯೋಽಸ್ಮೀತ್ಯಾಹ । ದಕ್ಷಿಣಾಭಿಃ ಸಾಕಮಿತಿ ವದನ್ ಕೃಷ್ಣಃ ನ ಕೇವಲೋಽಹಮೇವ ಆಶ್ಚರ್ಯಾದಿಶಬ್ದಾರ್ಥಭೂತಸರ್ವೋತ್ತಮತ್ವಾದಿ ಗುಣವಾನ್ ಕಿಂತು ಯಾ ದಕ್ಷಿಣಾಭಿಮಾನಿತ್ವಾತ್ ಅರ್ಧನಾರೀಶ್ವರತಯಾ ಸ್ಥಿತಸ್ಯ ಭಗವದ್ದೇಹಭಾಗಸ್ಯ ವಾಮಭಾಗೇ ಸ್ಥಿತಾಯಾಃ ದಕ್ಷಿಣಭಾಗೇ ಇನಃ ಸ್ವಪತಿರ್ನಾರಾಯಣಃ ಸದಾ ವರ್ತತ ಇತಿ ಹೇತೋರ್ವಾ ದಕ್ಷಿಣಾಪದವಾಚ್ಯಾ ರುಕ್ಮಿಣೀರೂಪಾ ಇಯಂ ಶ್ರೀಶ್ಚ ಸರ್ವೋತ್ತಮತ್ವಾದಸದೃಶತ್ವಾಚ್ಚ ಆಶ್ಚರ್ಯಾ ಧನ್ಯಾ ಚೇತ್ಯಭಿಪ್ರೈತಿ । ಬಹುವಚನಂ ತು ನಾನಾವಿಧಯಜ್ಞೇಷು ದೀಯಮಾನದಕ್ಷಿಣಾನಾಂ ಅನೇಕಪ್ರಕಾರವತ್ತ್ವೇನ ಬಹುತ್ವಾತ್ ತದಭಿಮಾನಿತಯಾ ತತ್ರ ಸ್ಥಿತಾನಾಂ ಅತ ಏವ ದಕ್ಷಿಣಾಪದವಾಚ್ಯಾನಾಂ ದಕ್ಷಿಣಾಖ್ಯಮೂಲರೂಪರಮಾಂಶಾನಾಂ ಬಹುತ್ವಾಭಿಪ್ರಾಯೇಣೇತಿ ಜ್ಞೇಯಮ್। ಅತ್ರ ಸರ್ವಪದೇನ ಚ ಪ್ರಸ್ತುತಾಃ ಕೂರ್ಮಮಾರಭ್ಯ ಬ್ರಹ್ಮಪರ್ಯಂತಾಃ ಪ್ರಧಾನಜೀವಾಃ ವೇದಾ-ಭಿಮಾನಿನೀ ಯಜ್ಞಾಭಿಮಾನಿನೀ ಚೇತಿ ದ್ವಿರೂಪಾ ಶ್ರೀಶ್ಚ ಗೃಹ್ಯಂತೇ। ತತ್ರ ಬ್ರಹ್ಮಪರ್ಯಂತಜೀವೇಭ್ಯ ಉತ್ತಮತ್ವಂ

ಏಃ 'ಆಶ್ಚರ್ಯಃ ಧನ್ಯಃ' ಎಂಬ ನಾರದರ ಮಾತು, ಅದಕ್ಕೆ 'ದಕ್ಷಿಣಾಭಿಃ ಸಾಕಂ' ಎಂಬ ಶ್ರೀಕೃಷ್ಣನ ಉತ್ತರ; ಈ ಎರಡರ ಭಾವವನ್ನು ಅರಿಯದೆ ರಾಜರೆಲ್ಲಾ ಅದರ ವಿವರಣೆ ನೀಡಲು ಕೃಷ್ಣನನ್ನು ಕೇಳಿಕೊಳ್ಳಲು, ಶ್ರೀಕೃಷ್ಣ ಅದನ್ನು ವಿವರಿಸುವ ಕಾರ್ಯವನ್ನು ನಾರದರಿಗೆ ವಹಿಸಿದ ಎಂದರ್ಥ.

ಕೂರ್ಮೋ ದೃಷ್ಟೋ ವಿಷ್ಣುಪದ್ಯಾಂ ಮಯೋಕ್ತ-
ಸ್ತ್ವಮುತ್ತಮೋ ನಾಸ್ತಿ ಸಮಸ್ತವೇತಿ ।
ಊಚೇ ಗಂಗಾಮುತ್ತಮಾಂ ಸಾ ಜಲೇಶ-
ಮುಮಾಮೂಚೇ ಪೃಥಿವೀನಾಮಿಕಾಂ ಸಃ ॥ ೬೭ ॥

ಕೃಷ್ಣಸ್ಯ ರುಕ್ಮಿಣ್ಯಾಶ್ಚ ಸಮಮ್। ಇಯಾಂಸ್ತು ವಿಶೇಷಃ ಸ್ವಸ್ಯ ನಿರವಧಿಕೋತ್ತಮತ್ವಂ ಲಕ್ಷ್ಮ್ಯಾಸ್ತು ಸಾವಧಿಕೋತ್ತಮತ್ವ-ಮಿತಿ। ವೇದಯಜ್ಞಾಖ್ಯಲಕ್ಷ್ಮೀರೂಪದ್ವಯಾತ್ತ್ವಸ್ಯ ನಿರವಧಿಕಮುತ್ತಮತ್ವಂ ಲಕ್ಷ್ಮ್ಯಾಸ್ತು ಸ್ವರೂಪೇಷೂತ್ತಮಾಧಮ-ವಿಭಾಗಾಯೋಗೇಽಪಿ ರಮಾರೂಪತ್ರಯಾಭಿಮನ್ಯಮಾನವೇದಯಜ್ಞದಕ್ಷಿಣಾನಾಂ ಕ್ರಮೇಣೋತ್ತಮತ್ವಾತ್ತದಭಿ-ಮಾನಿನೀನಾಂ ಲಕ್ಷ್ಮೀರೂಪಾಣಾಮಪಿ ಕ್ರಮೇಣೋತ್ತಮತ್ವೋಕ್ತಿರಿತಿ ಜ್ಞೇಯಮ್। ಶುಷ್ಕವೇದಾತ್ತದರ್ಥಭೂತ-ವಿಷ್ಣುಪೂಜಾರೂಪಯಜ್ಞಸ್ಯ ಜ್ಯೈಷ್ಠ್ಯಮ್। ಋತ್ವಿಕೃತಪುಣ್ಯಶ್ರೇಯಃಸಂಪತ್ತ್ಯಾಯಜಮಾನಕೃತಯಜ್ಞಪೂರಕತ್ವಾದ್ಯಜ್ಞ-ಕಾಲೀನತ್ವಿಕ್ಶ್ರಮನಿವರ್ತಕತ್ವಾಚ್ಚ ದಕ್ಷಿಣಾಯಾಃ ಕೇವಲಯಜ್ಞಾದಪಿ ಜ್ಯೈಷ್ಠ್ಯಮ್। ಯಥಾ ಏಕಸ್ಯೈವ ರಾಜಕುಮಾರಸ್ಯ ಮೇಷತುರಗಗಜಾಖ್ಯೇಷು ಕ್ರಮೇಣ ಅಧಿಕಸ್ಥಾನೇಷು ಸ್ಥಿತೌ ತಸ್ಯೈವ ಸ್ಥಾನಕೃತನೀಚೋಚ್ಚ-ಭಾವೋಪಾಧಿಕಾ ನೀಚೋಚ್ಚತಾ ದ್ರಷ್ಟೃಣಾಂ ದೃಶಿ ದೃಶ್ಯತೇ। ಅತ ಏವ ಗಜರಾಜಸ್ಥಿತಂ ತಂ ಮಹಾರಾಜ ಇತಿ ಪರಿತೋ ನಮಂತಿ। ತಥೇಹಾಪೀತ್ಯೇಕೋ ಭಾವಃ। ಬಹಿರ್ನಿಷ್ಠವೇದಾಭಿಮಾನಿತಯಾ ಬಹಿಸ್ಥಿತರಮಾರೂಪಾತ್ ಭಗವದಂಕಗತಾ ಯಜ್ಞಾಭಿಮಾನಿನೀ ಲಕ್ಷ್ಮೀಃ ಸ್ಥಾನಾಧಿಕ್ಯೇನ ಅಧಿಕೇತ್ಯುಚ್ಯತೇ। ತತೋಽಪಿ ಭಗವತಃ ದೇಹಾರ್ಧಗತಾ ರಮಾ ಸ್ಥಾನವೈಶೇಷ್ಯಾತ್ ವಿಶಿಷ್ಟೇತ್ಯುಚ್ಯತ ಇತ್ಯಪರೋ ಭಾವಃ ॥ – (ವಾ.)

೬೬. ಆಶ್ಚರ್ಯಶ್ಚೈವ ಧನ್ಯಶ್ಚ ದಕ್ಷಿಣಾಭಿಃ ಸಹೇತ್ಯಹಮ್ ॥ - ಹರಿವಂಶೇ (೨/೧೧೦/೨೩)

೬೭. ಕೂರ್ಮೋ ದೃಷ್ಟೋ ವಿಷ್ಣುಪದ್ಯಾಂ ಮಯೋಕ್ತ ಇತ್ಯಾದಿನಾರದವಾಕ್ಯಸ್ಯೈವಂ ಯೋಜನಾ। ವಿಷ್ಣುಪದ್ಯಾಂ= ಗಂಗಾಯಾಂ ಮಯಾ ದೃಷ್ಟಃ ಕೂರ್ಮಃ ತ್ವಮುತ್ತಮೋಽಸಿ ತವ ಸಮೋ ನಾಸ್ತೀತಿ ಚ ಭಾವೇನೋಕ್ತಃ= ಆಶ್ಚರ್ಯೋಽಸಿ ಧನ್ಯೋಽಸೀತ್ಯುಕ್ತಃ। ಏವಂ ವದತೋ ನಾರದಸ್ಯ ಕೂರ್ಮಃ ಸ್ವಾವರಸರ್ವೋತ್ತಮ ಇತ್ಯೇವಾಭಿಸಂಧಿಃ। ಗಂಗಾತೋಽಪ್ಯವರಸ್ಯ ನಿರವಧಿಕಸರ್ವೋತ್ತಮತ್ವಾಯೋಗಾತ್। ಸಾಕ್ಷಾತ್ಕೃತಪರಮತತ್ತ್ವಸ್ಯ ನಾರದಸ್ಯ ಭ್ರಮಾಯೋಗಾಚ್ಚ। ಅತಃ ಕೂರ್ಮೋಽಸೌ ಗಂಗಾತೋಽಪ್ಯವರಃ ತಾರತಮ್ಯಪೂರ್ವಾವಧಿಭೂತಪುಷ್ಕರ ಏವೇತಿ ಜ್ಞೇಯಮ್। ಏವಮುಕ್ತೇ ಸತಿ ಕೂರ್ಮಃ ಸ್ವಾಧಾರತ್ವಾದ್ಗಂಗೈವ ಮತ್ತೋಽಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ಗಂಗಾಮೇವೋತ್ತಮಾಮೂಚೇ। ತದಾ ಗಂಗಾಮಾಗತ್ಯ ತ್ವಮಾಶ್ಚರ್ಯಾಽಸಿ ಧನ್ಯಾಽಸೀತ್ಯಬ್ರುವಮ್। ತದಾ ಸಾ ಗಂಗಾ ಸ್ವಪತಿತ್ವಾದ್ವರುಣಃ ಮತ್ತ ಆಶ್ಚರ್ಯೋ ಧನ್ಯಶ್ಚೇತಿ ಭಾವೇನ ಜಲೇಶಮುತ್ತಮಮೂಚೇ। ತತೋಽಹಂ ವರುಣಮುಪೇತ್ಯ ತ್ವಮಾಶ್ಚರ್ಯೋಽಸಿ ಧನ್ಯೋಽಸೀತ್ಯಬ್ರುವಂ ತದಾ ಸ ವರುಣಃ ಮಮಾಪಿ ಮಾತೃಸ್ಥಾನೀಯತ್ವಾತ್ ಪೃಥಿವೀ ಉತ್ತಮೈವ ಮತ್ತೋಽಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ಪೃಥಿವೀನಾಮಿಕಾಮುಮಾಮೂಚೇ। ಕ್ವಚಿದ್ ಗ್ರಂಥೇ ಪೃಥಿವೀಮಾಹೇತ್ಯಪ್ಯಸ್ತಿ ತಸ್ಯ ತಾತ್ಪರ್ಯಕಥನಾಯ ಪೃಥಿವೀನಾಮಿಕಾಮಿತ್ಯುಕ್ತಮ್। – (ವಾ.)

ಅ: ''ಗಂಗೆಯಲ್ಲಿ ನಾನೊಂದು ಆಮೆಯನ್ನು ಕಂಡೆ. ಅದಕ್ಕೆ ನೀನು ಉತ್ತಮ, ನಿನಗಿಂತ ಮೇಲಿನವನಿಲ್ಲ ಎಂದೆ. ಅದು ಗಂಗೆಯನ್ನು ತನಗಿಂತ ಉತ್ತಮಳು ಎಂದಿತು, ಗಂಗೆ ವರುಣನನ್ನು ಉತ್ತಮ ಎಂದಳು, ವರುಣ ಪೃಥಿವೀನಾಮಕಳಾದ ಉಮಾದೇವಿ ಉತ್ತಮಳು ಎಂದ''.

ವಿ: ೧) ಒಮ್ಮೆ ನಾರದರು ಗಂಗೆಯ ಬಳಿಯಿದ್ದಾಗ ಬೃಹದಾಕಾರದ ಆಮೆಯೊಂದನ್ನು ಕಂಡು ಆಶ್ಚರ್ಯದಿಂದ ನೀನೇ ದೊಡ್ಡವನು ಎಂದು ಸ್ತುತಿಸಿದರು. ಅದಕ್ಕೆ ಕೂರ್ಮ ತನ್ನಂತಹ ಸಾವಿರಾರು ಆಮೆಗಳನ್ನು ಹೊಂದಿರುವ ಗಂಗೆ ತನಗಿಂತ ಮಿಗಿಲು ಎಂದಿತು. ಗಂಗೆ ತನ್ನಂತಹ ಸಾವಿರಾರು ನದಿಗಳಿಗೆ ಒಡೆಯನಾದ ವರುಣ ತನಗಿಂತ ಮಿಗಿಲು ಎಂದಳು. ವರುಣ ತಾನು ನೆಲೆಸಿರುವ ಭೂಮಿ ತನಗಿಂತ ದೊಡ್ಡದು ಎಂದ ಎಂದರ್ಥ.

೨) ಇಲ್ಲಿ ಕೂರ್ಮ ಮೊದಲಾದ ಪದಗಳಿಂದ ಅವುಗಳ ಅಭಿಮಾನಿದೇವತೆಗಳನ್ನು ತಿಳಿಯಬೇಕು. ಇಲ್ಲಿ ಕೂರ್ಮ ಎಂದರೆ ಕರ್ಮಾಭಿಮಾನಿಯಾದ ಪುಷ್ಕರ, ಗಂಗಾ ಎಂದರೆ ಗಂಗಾದೇವಿ, ಸಮುದ್ರ ಎಂದರೆ ವರುಣ, ಭೂಮಿ ಎಂದರೆ ಭೂಮಿಯ ಅಭಿಮಾನಿ ದೇವತೆಯಾದ ಪಾರ್ವತಿ ಎಂದರ್ಥ; ಉಪಲಕ್ಷಣಯಾ ಸೌಪರ್ಣಿ ವಾರುಣಿಯರೂ ಗ್ರಾಹ್ಯ.

೩) ಇಲ್ಲಿ ಕೂರ್ಮ ಎಂದರೆ ತಾಯಿಯ ಶಾಪದಿಂದಾಗಿ ಕೂರ್ಮನಾಗಿ ಜನಿಸಿದ್ದ ಬುಧ ಎಂಬ ಪಕ್ಷವೂ ಉಂಟು.

ಯಾ ಮಾದೃಶಾ ದೇವತಾಃ ಸರ್ವಶಸ್ತಾ
ಧೃತಾಸ್ತಯಾ ಪ್ರಥಿತತ್ವಾತ್ ಪೃಥಿವ್ಯಾ ।
ಶಿವಂ ಶೇಷಂ ಗರುಡಂ ಚಾಹ ಸಾऽಪಿ
ಪರಾವನಾತ್ ಪರ್ವತನಾಮಧೇಯಾನ್ ॥ ೬೮ ॥

---

೬೭. ... ಇತಿ ಗ್ರಂಥಾಂತರಸ್ಯಾಭಿಪ್ರಾಯಮಾಹ ಪೃಥಿವೀನಾಮಿಕಾಮಿತಿ ॥ – (ಜ.)

೬೭. ವಿಷ್ಣುಪದ್ಯಾಂ ದೃಷ್ಟಃ ಕೂರ್ಮಃ ಬುಧಃ ಮಾತೃಶಾಪಾತ್ ಕೂರ್ಮೋ ಬಭೂವೇತಿ ವದಂತಿ । – (ರಾ.)

೬೮. ಪರಸ್ಯ ಭಗವತಃ ಆ ಸಮ್ಯಕ್ ಜ್ಞಾನಾತ್ = ಜ್ಞಾನಾತ್ । 'ವಾ ಗತಿಗಂಧನಯೋಃ' ಇತಿ ಧಾತುಃ । ಲ್ಯುಡಂತಃ । ಗತ್ಯರ್ಥಾನಾಂ ಜ್ಞಾನಾರ್ಥತ್ವಾದ್ವಾನಂ = ಜ್ಞಾನಮ್ । – (ವೇ.)

೬೮. ಯಾ ಮಾದೃಶಾ ದೇವತಾಃ ಸಂತಿ ಸರ್ವಶಃ= ಸರ್ವಾಸ್ತಾ ದೇವತಾಃ ಪ್ರಥಿತತ್ವಾತ್ಪೃಥಿವ್ಯಾ = ಪೃಥಿವೀನಾಮ್ನ್ಯಾ ಉಮಯಾ ಧೃತಾಃ। ಅತಃ ಸಾ ಉತ್ತಮೇತಿ ವರುಣಸ್ಯ ಭಾವಃ। ತತೋऽಹಮುಮಾಮಭ್ಯೇತ್ಯ ತ್ವಮಾಶ್ಚರ್ಯಾऽಸಿ ಧನ್ಯಾऽऽಸೀತ್ಯಬ್ರುವಮ್। ತದಾ ಸಾ ಉಮಾऽಪಿ ಮಮ ಪತಿತ್ವಾತ್ಪತಿಸಮತ್ವಾಚ್ಚ ಶಿವಶೇಷಗರುಡಾ ಏವ ಮತ್ತೋऽಪ್ಯಾಶ್ಚರ್ಯಾಃ ಧನ್ಯಾಶ್ಚೇತಿ ಭಾವೇನ ಪರಾವನಾತ್ಪರ್ವತನಾಮಧೇಯಾನ್ ಶಿವಶೇಷಗರುಡಾಖ್ಯ-ದೇವಾನುತ್ತಮಾನಾಹ। ಪರೇಷಾಂ ಸ್ವಾವರಾಣಾಮಿಂದ್ರಾದೀನಾಮವನಾದ್ರಕ್ಷಣಾತ್ಪರ್ವತನಾಮಧೇಯಾನಿತಿ ವದತಾ ಪರಪದೋಪಪದಾತ್ 'ಅವ ರಕ್ಷಣ' ಇತಿ ಧಾತೋಃ ಕ್ತಪ್ರತ್ಯಯೇ ಕೃತೇ ನಿರುಕ್ತತ್ವಾದುಪಪದಾಂತಿಮಸ್ಯ ಧಾತೋ-ರಾದಿಮಸ್ಯ ಚಾಕಾರಸ್ಯ ನಾಶೇ ಶ್ಲಿಷ್ಟೋಚ್ಚಾರಣೇ ಕೃತೇ ಸತಿ ಪರ್ವತಶಬ್ದೋ ನಿಷ್ಪನ್ನ ಇತಿ ಸೂಚಿತಮ್ ॥ – (ವಾ.)

ಅ: 'ನನ್ನಂತಹ ದೇವತೆಗಳನ್ನೆಲ್ಲ ಎಲ್ಲ ರೀತಿಯಲ್ಲೂ ಧರಿಸಿರುವವಳೆಂದು ಪ್ರಸಿದ್ಧಳಾದ್ದರಿಂದ ಉಮಾದೇವಿಗೆ ಪೃಥಿವಿ ಎಂದು ಹೆಸರು. ಅವಳು ಶಿವ, ಶೇಷ, ಗರುಡರನ್ನು ಉತ್ತಮರೆಂದು ತಿಳಿಸಿದಳು; ಅವರು ಇತರರನ್ನು ರಕ್ಷಿಸುವ ಮೂಲಕ ಪರ್ವತ ಎಂಬ ಹೆಸರನ್ನು ಹೊಂದಿರುವವರು'.

ವಿ: ೧) ಬಳಿಕ ನಾರದರು ಪೃಥಿವಿ ಶಬ್ದವಾಚ್ಯಳಾದ ಉಮಾದೇವಿಯ ಬಳಿಗೆ ತೆರಳಿ ಆಶ್ಚರ್ಯ, ಧನ್ಯ ಎಂದು ಹೊಗಳಿದರು. ಆಗ ಅವರು ಶಿವ ಶೇಷ ಗರುಡರನ್ನು ತನಗಿಂತ ಉತ್ತಮರು ಎಂದರು.

೨) ಇಲ್ಲಿ ಮೇಲ್ನೋಟಕ್ಕೆ ಭೂಮಿಯನ್ನು ಧರಿಸುವ ಕಾರಣದಿಂದ ಭೂಧರ ಎನ್ನಿಸಿರುವ ಪರ್ವತಗಳು ಭೂಮಿಗಿಂತ ಶ್ರೇಷ್ಠ ಎಂದು ಅರ್ಥ. ಅದಕ್ಕೆ ಉಮಾದೇವಿಗಿಂತ ಪರ್ವತ ಶಬ್ದವಾಚ್ಯರಾದ ಗರುಡ, ಶೇಷ, ರುದ್ರರು ಅಧಿಕರು ಎಂದು ಅರ್ಥ ಎಂದು ತಿಳಿಸಿರುವರು.

ತೈರೇವಾಹಂ ಮತ್ಸಮಾಶ್ಚೈವ ದೇವ್ಯೋ
ಧ್ರಿಯಂತ ಇತ್ಯೇವ ತ ಊಚಿರೇಽಥ ।
ಬ್ರಹ್ಮಾಣಮೇವೋತ್ತಮಮಾಹ ಸೋಽಪಿ
ವೇದಾತ್ಮಿಕಾಂ ಪ್ರಕೃತಿಂ ವಿಷ್ಣುಪತ್ನೀಮ್ ॥ ೬೯ ॥

---

೬೮. ಪರಾವನಾತ್ ಪರಃ ಪರಮಾತ್ಮಾ ತಸ್ಯ ಆಸಮ್ಯಕ್ ವನಾತ್ 'ವಾ ಗತಿಗಂಧನಯೋ'ರಿತಿ ಧಾತುಃ । ಲ್ಯುಡಂತಃ ಗತ್ಯರ್ಥಾನಾಂ ಜ್ಞಾನಾರ್ಥತ್ವಾತ್ ವನಂ ಜ್ಞಾನಂ ಪರೇಷಾಂ ಅನ್ಯೇಷಾಂ ಉಮಾದಿಸ್ಥಾವರಾಣಾಂ ಆಸಮ್ಯಗವನಾತ್ ರಕ್ಷಣಾದಿತಿ ವಾ । 'ಅವ ರಕ್ಷಣ' ಇತಿ ಧಾತುಃ । ಪರ್ವತಶಬ್ದಸ್ತು ಪರಶಬ್ದೋಪಪಾದಾಭ್ಯಾಂ ವಾ ಗತಿಗಂಧನಯೋಃ ಅವ ರಕ್ಷಣ ಇತ್ಯೇತಾಭ್ಯಾಂ ಧಾತುಭ್ಯಾಂ ಕ್ತಪ್ರತ್ಯಯಃ । ವರ್ಣಾಗಮೋ ವರ್ಣವಿಪರ್ಯಯಶ್ಚೇತ್ಯನುಶಾಸನಾತ್ ಪರ್ವತ ಇತಿ ರೂಪಸಿದ್ಧಿರ್ದ್ರಷ್ಟವ್ಯಾ ॥ – (ಜ.)

೬೮ ಪರವಾನಾದಿತಿ । ಪರಸ್ಯ ಭಗವತ ಆಸಮ್ಯಕ್ ವಾನಾತ್ ಜ್ಞಾನಾದಿತ್ಯರ್ಥಃ । ಪರಾವನಾದಿತಿ ಕೇಚಿತ್ ಪಠಂತಿ । ತದಾ ಪರೇಷಾಮುತ್ತಮದೇವಾನಾಮಾವನಾದ್ರಕ್ಷಣಾದಿತ್ಯರ್ಥಃ । – (ತಾ.)

೬೯. ತೈಃ ಶಿವಶೇಷಗರುಡೈರೇವ ಅಹಂ ಮತ್ಸಮಾ ದೇವ್ಯಶ್ಚ ಧ್ರಿಯಂತ ಇತಿ ಹೇತೋಃ ತಾನೇವ ಸ್ವೋತ್ತಮಾನಾಹೇತಿ ಪೂರ್ವೇಣ ಸಂಬಂಧಃ। ತತೋಽಹಂ ತಾನಪಿ ಗತ್ವಾ ಯೂಯಮಾಶ್ಚರ್ಯಾ ಧನ್ಯಾಶ್ಚೇತ್ಯಬ್ರುವಮ್। ಅಥ ತೇ ಸ್ವಪಿತೃತ್ವಾದಸ್ಮತ್ತೋಽಪಿ ಬ್ರಹ್ಮಾ ಆಶ್ಚರ್ಯೋ ಧನ್ಯಶ್ಚೇತಿ ಭಾವೇನ ಬ್ರಾಹ್ಮಣಜಾತೇಃ ಪ್ರವರ್ತಕತ್ವಾತ್ ಬ್ರಾಹ್ಮಣಶಬ್ದವಾಚ್ಯಂ ಬ್ರಹ್ಮಾಣಮೇವೋತ್ತಮಮೂಚಿರೇ। ತತೋಽಹಂ ಬ್ರಹ್ಮಾಣಂ ದೃಷ್ಟ್ವಾ ತ್ವಮಾಶ್ಚರ್ಯೋಽಸಿ ಧನ್ಯೋಽಸೀತ್ಯಬ್ರುವಮ್। ಸೋಽಪಿ ಮಮ ಚ ಮಾತೃತ್ವಾತ್ ವೇದಾಭಿಮಾನಿನೀ ಶ್ರೀರೇವ ಮತ್ತೋಽಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ವೇದಾತ್ಮಿಕಾಂ ಪ್ರಕೃತಿಂ= ಪ್ರಕೃತಿನಾಮ್ನೀಂ ವಿಷ್ಣುಪತ್ನೀಂ ಉತ್ತಮಾಮಾಹ ॥ – (ವಾ.)

ಅ: ''ಅವರಿಂದಲೇ ನಾನು, ನನಗೆ ಸಮಾನರಾದ ಸೌಪರ್ಣಿ ವಾರುಣಿ ದೇವಿಯರು ಪಾಲಿಸಲ್ಪಡುವೆವು'' ಎಂದರು. ಬಳಿಕ ಅವರ ಬಳಿಗೆ ಹೋಗಲು ಅವರು ತಿಳಿಸಿದರು ''ಬ್ರಹ್ಮದೇವರೇ ನಮಗಿಂತ ಉತ್ತಮ''. ಬ್ರಹ್ಮದೇವರು ತಿಳಿಸಿದರು ''ವೇದಾಭಿಮಾನಿನಿಯಾದ ವಿಷ್ಣುಪತ್ನಿ ಮಹಾಲಕ್ಷ್ಮಿ ಉತ್ತಮಳು''.

ವಿ: ೧) ಪೃಥಿವೀ ಶಬ್ದವಾಚ್ಯಳಾದ ಪಾರ್ವತಿಗೆ ಸಮರಾದ ಸೌಪರ್ಣಿ, ವಾರುಣಿಯರೂ ಅದರಿಂದ ವಿವಕ್ಷಿತ. ಮೂವರನ್ನೂ ಸೇರಿ ದೇವ್ಯಃ ಎಂದು ಅರ್ಥ.

೨) ಅದಕ್ಕೆ ಉಪಲಕ್ಷಣಯಾ ಜಾಂಬವತಿ ಮೊದಲಾದವರು ಸೇರಿ ದೇವ್ಯಃ ಎಂದು, ಶಚೀ ಮೊದಲಾದವರನ್ನು ಸೇರಿಸಿಕೊಂಡು ದೇವಿಯರು ಎಂದು ಪದಪ್ರಯೋಗ ಮಾಡಲಾಗಿದೆ ಎಂದು ಕೆಲವು ವ್ಯಾಖ್ಯಾನಗಳಲ್ಲಿದೆ.

೩) ಮುಂದೆ ಪಾರ್ವತ್ಯಾದಿ ಪದವಿಗೆ ಬರುವ ದೇವಿಯರನ್ನೂ ಗಮನದಲ್ಲಿರಿಸಿಕೊಂಡು ದೇವ್ಯಃ ಎಂದು ಬಹುವಚನ ಪ್ರಯೋಗ ಎಂದು ಮತ್ತೆ ಕೆಲವರ ವ್ಯಾಖ್ಯಾನ.

ಸೈಕಾ ದೇವೀ ಬಹುರೂಪಾ ಬಭಾಷೇ
ಯುಕ್ತಾ ಯದಾಽಹಂ ಜ್ಞೇನ ನಾರಾಯಣೇನ ।
ಯಜ್ಞಕ್ರಿಯಾಮಾನಿನೀ ಯಜ್ಞನಾಮ್ನೀ
ತದೋತ್ತಮಾ ತತ್ಪವೇಶಾತ್ ತದಾಖ್ಯಾ ॥ ೭೦ ॥

---

೬೯. ಯದ್ಯಪಿ ಸೌಪರ್ಣೀವಾರುಣ್ಯಾವೇವೋಮಾಸಮೇ। ತಥಾಪಿ ತತ್ಪದಯೋಗ್ಯವಿವಕ್ಷಯಾ ವಾ ಅಲ್ಪತ್ವಾದವಿವಕ್ಷಯಾ ಷಣ್ಮಹಿಷೀಣಾಮಪಿ ಸಾಮ್ಯವಿವಕ್ಷಯಾ ವಾ ದೇವತಾತ್ವೇನೇತರದೇವೀನಾಮಪಿ ಸಾಮ್ಯವಿವಕ್ಷಯಾ ವಾ ಬಹುವಚನಂ। – (ತಾ.)

೭೦. ತತೋಽಹಂ ತಾಮೇವ ಶ್ರಿಯಮಭ್ಯುಪೇತ್ಯ ತ್ವಮಾಶ್ಚರ್ಯಾಽಸಿ ಧನ್ಯಾಽಸೀತ್ಯಬ್ರುವಮ್। ತದಾ ಬಹುರೂಪಾ ಸಾ ಏಕಾ ದೇವೀ ಮದಭಿಮನ್ಯಮಾನವೇದಾದಪಿ ವೇದಫಲೀಭೂತಯಜ್ಞಾಭಿಮಾನಿನೀ ಅಭಿಮನ್ಯಮಾನತಾರತಮ್ಯಾತ್ ಆಶ್ಚರ್ಯಾ ಧನ್ಯಾ ಚೇತಿ ಭಾವೇನ ತಾಮೇವೋತ್ತಮಾಂ ಬಭಾಷೇ। ಏಕಾ= ರೂಪತ್ರಯೇಽಪಿ ಭೇದರಹಿತಾ ಯದಾಽಹಂ ಜ್ಞೇನ ಸರ್ವಜ್ಞೇನ ನಾರಾಯಣೇನ ಯುಕ್ತಾ ಯಜ್ಞಕ್ರಿಯಾಮಾನಿನೀ ತತ್ಪವೇಶಾತ್ ಯಜ್ಞಕ್ರಿಯಾಂತರೇಽಪಿ ಸನ್ನಿಧಾನಾತ್ ತದಾಖ್ಯಾ ಯಜ್ಞನಾಮ್ನೀ ಭೂಯಾಸಮ್। ತದಾ ಸಾ ಅಧಿಷ್ಠಾನಚ್ಛೈಷ್ಯಾದುತ್ತಮೇತಿ ಬಭಾಷ ಇತಿ ಪೂರ್ವೇಣಾನ್ವಯಃ। ಜ್ಞೇನ ಯುತಾ ಯಜ್ಞಕ್ರಿಯಾಮಾನಿನೀ ತತ್ಪವಿಷ್ಟೇತಿ ಚ ಯಜ್ಞಪದವಾಚ್ಯತ್ವೇ ನಿಮಿತ್ತತ್ರಯಮುದಿತಮಿತಿ ಜ್ಞೇಯಮ್। ಜ್ಞೇನ ನಾರಾಯಣೇನ ಯುತಾ ಯಜ್ಞನಾಮ್ನೀತಿ ವದಂತ್ಯಾ ಜ್ಞಂ ಯಾತೀತಿ ಸಮಾಸಃ ಅಗ್ನ್ಯಾಹಿತಾದಿವತ್ ಯಶಬ್ದಸ್ಯ ಪೂರ್ವನಿಪಾತ ಇತಿ ಸೂಚಿತಮ್। ಅತ್ರ ಸರ್ವತ್ರೋತ್ತಮತ್ವಂ ಸ್ವಾವರೇಭ್ಯ ಏವ ನತು ಸರ್ವೇಭ್ಯಃ। ಅತ ಏವ ವಿಷ್ಣೋಃ ನಿರವಧಿಕಸರ್ವೋತ್ತಮತ್ವಜ್ಞಾಪನಾಯ ಅಲಂಶಬ್ದಪ್ರಯೋಗಃ। ಹಿಶಬ್ದೇನ ಹರೇಃ ನಿರವಧಿಕಸರ್ವೋತ್ತಮತ್ವಂ ''ಏಷ ಸರ್ವೇಶ್ವರಃ'' ಇತ್ಯಾದಿಶ್ರುತಿಸ್ಮೃತಿಷು ಪ್ರಸಿದ್ಧಮಿತಿ ಸೂಚಯತಿ ॥ – (ವಾ.)

ಅ: 'ಆಗ ವೇದಾಭಿಮಾನಿನಿಯಾದ ಮಹಾಲಕ್ಷ್ಮಿ ಒಬ್ಬಳೇ ಆದರೂ ಬಹುರೂಪ-ಳಾದ್ದರಿಂದ ನುಡಿದಳು : ''ನಾನು *'ಜ್ಞ'ನಾಮಕನಾದ ನಾರಾಯಣನೊಂದಿಗೆ ಕೂಡಿದಾಗ ಉತ್ತಮಳು. ಯಜ್ಞಕ್ರಿಯಾ ಅಭಿಮಾನಿನಿಯಾದ ಯಜ್ಞನಾಮಕಳು ಅವಳಿಗಿಂತ ಉತ್ತಮಳು. ಅವನ ಪ್ರವೇಶದಿಂದಾಗಿ ಯಜ್ಞ ಎಂಬ ಹೆಸರು ಅವರಿಗೆ'' ಎಂದು.

ಎ: ೧) ವೇದಾಭಿಮಾನಿನಿಯಾದ ಮಹಾಲಕ್ಷ್ಮಿ ತನ್ನ ಯಜ್ಞಾಭಿಮಾನಿನಿರೂಪ ಅದಕ್ಕಿಂತ ಶ್ರೇಷ್ಠ ಎಂದಳು. ಅದರ ಅರ್ಥ ಮಹಾಲಕ್ಷ್ಮಿ ಬಹುರೂಪಳು, ಅವಳ ಎಲ್ಲ ರೂಪಗಳೂ ಸಹ ಸಮಾನವೇ;

೨) ಆದರೂ ವೇದಗಳು ಯಜ್ಞಕ್ರಿಯೆ ನಡೆದಾಗ ಸಾರ್ಥಕವಾಗುವುದೆಂದು ತೋರಿಸಲು ವೇದಾಭಿಮಾನಿ ರೂಪಗಳಿಗಿಂತ ಯಜ್ಞಾಭಿಮಾನಿ ರೂಪ ಶ್ರೇಷ್ಠ ಎಂದು ತಿಳಿಸಿದರು ಎಂದು ತಿಳಿಯಬೇಕು.

ವಿಷ್ಣ್ವಾವಿಷ್ಟಾ ಯಜ್ಞನಾಮ್ನೀ ತದಂಕ-
ಸ್ಥಿತಾ ಸೋಽಚೇ ಕೇಶವೋ ಹ್ಯುತ್ತಮೋಽಲಮ್ ।
ನ ತತ್ಸಮಶ್ಚಾಭ್ಯಧಿಕೋಽತಃ ಕುತಃ ಸ್ಯಾ-
ದ್ದೃಷೇ ಸತ್ಯಂ ನಾನ್ಯಥೇತಿ ಸ್ಮ ಭೂಪಾಃ ॥ ೭೧ ॥

---

೭೦. ಸೈಕಾ ದೇವೀ ಬಹುರೂಪೇತಿ । ಏತೇನ ವೇದಾ ಊಚುರಿತಿ ಹರಿವಂಶಗತಬಹುವಚನತಾತ್ಪರ್ಯಮುಕ್ತಂ ಭವತಿ। – (ತಾ.)

* ಜ್ಞೋ ನಾಮ ಭಗವಾನ್ ವಿಷ್ಣುಸ್ತಂ ಯಾತ್ಯುದ್ದೇಶ ಏಷ ಯಃ । ಸ ಯಜ್ಞ ಇತಿ ಸಂಪ್ರೋಕ್ತಃ॥
– ಗೀ.ತಾ.(೩/೯)

೭೧. ತತೋಽಹಂ ತಾಮಪಿ ಸಮೇತ್ಯ ತ್ವಮಾರ್ಚ್ಯಾಽಸಿ ಧನ್ಯಾಽಸೀತ್ಯಬ್ರುವಮ್। ತದಾ ವಿಷ್ಣ್ವಾವಿಷ್ಟಾ ವಿಷ್ಣ್ವಂಕಸ್ಥಿತಾ ಯಜ್ಞನಾಮ್ನೀ ಲಕ್ಷ್ಮೀಃ ಮಮಾಪಿ ಪತಿತ್ವಾನ್ಮದೀಯಯಜನಕ್ರಿಯಾಯಾಂ ಪೂಜ್ಯತ್ವಾನ್ನಿರವಧಿಕ-ಗುಣಪೂರ್ಣತ್ವಾಚ್ಚ ಕೇಶವ ಏವ ಮತ್ತೋಽಪ್ಯಲಂ ಆರ್ಚ್ಚರ್ಯೋ ಧನ್ಯಶ್ಚೇತಿ ಭಾವೇನ ಕೇಶವಮುತ್ತಮಮೂಚೀ। ಸರ್ವತ್ರ ಪ್ರತಿವಚನಬಲಾದುಕ್ತರೀತ್ಯಾ ಪ್ರಶ್ನೋಽಪ್ಯನುಸಂಧೇಯಃ। ಏವಂ ಚ ಕೂರ್ಮದೇಹಾದ್ಗಂಗಾಜಲಸ್ಯ, ಗಂಗಾಜಲಾತ್ತದಾಧಾರಭೂತಸಮುದ್ರಜಲಸ್ಯ, ಸಮುದ್ರಜಲಾದಪಿ ತದಾಧಾರಭೂತಪೃಥಿವ್ಯಾಃ, ಪೃಥಿವೀತೋಽಪಿ ಪೃಥಿವ್ಯಾಧಾರಭೂತಭೂಧರಾಣಾಂ, ಭೂಧರೇಭ್ಯೋಽಪಿ ಬ್ರಹ್ಮಾಭಿಮನ್ಯಮಾನಮಹತ್ತತ್ತ್ವಸ್ಯ ತತೋಽಪಿ ಬ್ರಾಹ್ಮಣ್ಯಹೇತುಭೂತವೇದಸ್ಯ, ವೇದಾದಪಿ ಯಜ್ಞಸ್ಯ ಯಜ್ಞಾದಪಿ ದಕ್ಷಿಣಾಯಾಶ್ಚೇತಿ ಕ್ರಮೇಣ ಜ್ಯೈಷ್ಠ್ಯಮಿತಿ ಜಡತಾರತಮ್ಯಂ ಚ ದರ್ಶಿತಮಿತಿ ॥ ಪುಷ್ಕರಾದಿಭ್ಯೋ ಗಂಗಾ, ಗಂಗಾತೋ ವರುಣಃ, ವರುಣದೇವಾದುಮಾ ಉಮಾತೋ ರುದ್ರಶೇಷಗರುಡಾಃ ತತೋ ಬ್ರಹ್ಮಾ, ತತೋ ಬಹುರೂಪಿಣೀ ಲಕ್ಷ್ಮೀಃ, ತತಃ ಶ್ರೀನಾರಾಯಣ ಇತಿ ದೇವತಾತಾರತಮ್ಯಂ ಚ ದರ್ಶಿತಮಿತಿ ಜ್ಞೇಯಮ್ ॥ – (ವಾ.)

ಅ: 'ವಿಷ್ಣುವಿನಿಂದ ಆವಿಷ್ಟಳಾಗಿ ಅವನ ತೊಡೆಯಮೇಲೆ ಮಂಡಿಸಿದ ಯಜ್ಞನಾಮಕಳಾದ ರಮಾದೇವಿ ತಿಳಿಸಿದರು - ಬ್ರಹ್ಮರುದ್ರಾದಿಪ್ರವರ್ತಕನಾದ ಶ್ರೀಹರಿಯೇ ಅತ್ಯಂತ ಶ್ರೇಷ್ಠನಾದವನು. ಅವನಿಗೆ ಸಮನಿಲ್ಲ. ಉತ್ತಮನಿರುವುದೆಂತು? ಋಷಿಯೇ ಇದು ಸತ್ಯ, ಸುಳ್ಳಲ್ಲ ಎಂದು ಮತ್ತೆ ನುಡಿದರು'.

ವಿ: ೧) ಆಗ ಯಜ್ಞಾಭಿಮಾನಿ ರೂಪಳಾದ ಮಹಾಲಕ್ಷ್ಮಿ ನನಗಿಂತ ಯಜ್ಞದಿಂದ ಆರಾಧಿಸಲ್ಪಡುವ ಶ್ರೀಹರಿಯೇ ಸರ್ವೋತ್ತಮ ಎಂದು ತಿಳಿಸಿದರು.

೨) ಇಲ್ಲಿ ದೇವತೆಗಳ ತಾರತಮ್ಯದಂತೆ ಕೂರ್ಮಕ್ಕಿಂತ ಗಂಗೆ, ಗಂಗೆಗಿಂತ ಸಮುದ್ರ, ಸಮುದ್ರಕ್ಕಿಂತ ಪೃಥಿವಿ, ಪೃಥಿವಿಗಿಂತ ಬೆಟ್ಟಗಳು, ಅವುಗಳಿಗಿಂತ ಮಹತ್ತತ್ತ್ವ, ಅದಕ್ಕಿಂತ ವೇದ–ಯಜ್ಞಗಳು ಶ್ರೇಷ್ಠವೆಂಬ ಜಡತತ್ತ್ವದ ತಾರತಮ್ಯದ ವಿವರಗಳೂ ಸಹ ಉಕ್ತವಾದಂತಾಯಿತು.

ತಯೋಕ್ತೋಽಹಂ ನಾವತಾರೇಷು ಕಶ್ಚಿ-
ದ್ವಿಶೇಷ ಇತ್ಯೇವ ಯದುಪ್ರವೀರಮ್ ।
ಸರ್ವೋತ್ತಮೋಽಸೀತ್ಯವದಂ ಸ ಚಾಹ
ನ ಕೇವಲಂ ಮೇಽಂಕಗಾಯಾಃ ಶ್ರಿಯೋಽಹಮ್ ॥ ೭೨ ॥

ಸದೋತ್ತಮಃ ಕಿಂ ತು ಯದಾ ತು ಸಾ ಮೇ
ವಾಮಾರ್ಧರೂಪಾ ದಕ್ಷಿಣಾನಾಮಧೇಯಾ ।
ಯಸ್ಮಾತ್ ತಸ್ಯಾ ದಕ್ಷಿಣತಃ ಸ್ಥಿತೋಽಹಂ
ತಸ್ಮಾನ್ನಾಮ್ನಾ ದಕ್ಷಿಣೇತ್ಯೇವ ಸಾ ಸ್ಯಾತ್ ॥ ೭೩ ॥

---

೭೨. ವೇದಾಭಿಮಾನಿನೀ ಸಾಕ್ಷಾತ್ ಸಾ ವಿಷ್ಣೋರ್ದೂರವತ್ ಸ್ಥಿತಾ ॥
ಯಜ್ಞಾಖ್ಯಾ ಸೈವ ವಿಷ್ಣೋಸ್ತು ಯಾ ತೂರುಸ್ಥಲಮಾಶ್ರಿತಾ ।
ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾಽಪಿ ಸೈವ ತು ॥
ಉತ್ತರೋತ್ತರತಃ ಸಾಽಪಿ ವಿಶಿಷ್ಟಾ ದಕ್ಷಿಣಾ ಸುಖೇ । – ಭಾ.ತಾ. (೧೧/೧೬/೧೨)

೭೨. ಅಹಂ ಕೇವಲಂ ಮೇ ಅಂಕಗಾಯಾಃ ಯಜ್ಞನಾಮ್ನ್ಯಃ ಶ್ರಿಯಃ ಪ್ರಕೃತೇರೇವ ಸಕಾಶಾತ್ । ಸದಾ ಉತ್ತಮೋ ನ ತರ್ಹಿ ಕುತಸ್ತ್ವಮುತ್ತಮ ಇತಿ ಪೃಚ್ಛತಿ ಕಿಂತ್ವಿತಿ । ಉತ್ತರಮಾಹ – ಯದೇತಿ । ಸಾ ಯಜ್ಞನಾಮ್ನೀ ಶ್ರೀಃ ಯದಾ ಯಸ್ಮಿನ್ನವಸರೇ ಮೇ ವಾಮಾರ್ಧರೂಪಾ ವಾಮಾರ್ಧೇ ಪ್ರವಿಷ್ಟರೂಪಾ ತತ ಏವ ದಕ್ಷಿಣಾನಾಮಧೇಯಾ ದಕ್ಷಿಣಾನಾಮ್ನೀ । ದಕ್ಷಿಣಾನಾಮಧೇಯತ್ವೇ ಕಾರಣಮಾಹ – ಯಸ್ಮಾದಿತಿ । ಇನಃ ಪತಿಃ ಅಹಂ ತಸ್ಯಾಃ ದಕ್ಷಿಣತಃ ದಕ್ಷಿಣಭಾಗೇ ಸ್ಥಿತಃ ಯಸ್ಮಾತ್ ತಸ್ಮಾದೇವ ಸಾ ನಾಮ್ನಾ ದಕ್ಷಿಣೇತಿ ಸ್ಯಾತ್ ॥ – (ಜ.)

ಸಾ ದಕ್ಷಿಣಾಮಾನಿನೀ ದೇವತಾ ಚ
ಸಾ ಚ ಸ್ಥಿತಾ ಬಹುರೂಪಾ ಮದರ್ಥಾ ।
ವಾಮಾರ್ಧೋ ಮೇ ತತ್ಪ್ರವಿಷ್ಟೋ ಯತೋ ಹಿ
ತತೋಽಹಂ ಸ್ಯಾಮರ್ಧನಾರಾಯಣಾಖ್ಯಃ ॥ ೭೪ ॥

ತದಾಽಪ್ಯಸ್ಯಾ ಉತ್ತಮೋಽಹಂ ಸುಪೂರ್ಣೋ
ನ ಮಾದೃಶಃ ಕಶ್ಚಿದಸ್ಯುತ್ತಮೋ ವಾ ।
ಇತ್ಯೇವಾವಾದೀದ್ದಕ್ಷಿಣಾಭಿಃ ಸಹೇತಿ
ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ ಸಃ ॥ ೭೫ ॥

ಅ: 'ಅವಳಿಂದ ತಿಳಿಸಲ್ಪಟ್ಟ ನಾನು ಶ್ರೀಹರಿಯ ಅವತಾರಗಳಲ್ಲಿ ಯಾವುದು ವಿಶೇಷವಿಲ್ಲ ಎಂದು ತಿಳಿದು ಈ ಯದುಶ್ರೇಷ್ಠನಾದ ಕೃಷ್ಣನ ಬಳಿಗೆ ಬಂದು ನೀನು ಸರ್ವೋತ್ತಮನಾಗಿರುವಿ ಎಂದು ನುಡಿದೆ, ಅವನು ತಿಳಿಸಿದ 'ನಾನು ಕೇವಲ ನನ್ನ ತೊಡೆಯಮೇಲೆ ಕುಳಿತಿರುವ

---

೭೩. ಸಾ ದಕ್ಷಿಣಾಮಾನಿನೀ ದೇವತಾ ಯಜ್ಞಾದೌ ದೀಯಮಾನಾಯಾಃ ದಕ್ಷಿಣಾಯಾಃ ಅಭಮಾನಿದೇವತಾ ಚ ತಸ್ಮಾಚ್ಚ ನಾಮ್ನಾ ದಕ್ಷಿಣೇತ್ಯರ್ಥಃ ॥ – (ಜ.)

೭೩. ದಕ್ಷಿಣಾಶಬ್ದಂ ನಿರ್ವಕ್ತಿ – ಯಸ್ಮಾದಿತಿ ।ದಕ್ಷಭಾಗೇ ಇನಃ ಪತಿರ್ಯಸ್ಯಾಃ ಸಾ ದಕ್ಷಿಣೇತ್ಯುಕ್ತಂ ಭವತಿ । – (ತಾ.)

೭೩. ದಕ್ಷಭಾಗಸ್ಥಿತೇನತ್ವಾದ್ದಕ್ಷಿಣಂ ನಾಮ ಸೋಚ್ಯತೇ ।
ತಸ್ಯಾ ಇನೋ ಹಿ ವಿಷ್ಣುಃ ಸ ದಕ್ಷ ಭಾಗೇ ಸ್ಥಿತಃ ಸದಾ ॥
ಯಸ್ಯಾಭಮಾನಿನ್ಯನ್ನಸ್ಯ ಲಕ್ಷ್ಮೀಃ ಸಾ ದೇವತೋತ್ತಮಾ । - ಏತರೇಯೋಪನಿಷದ್ಭಾಷ್ಯಮ್ (೨/೨/೩)

೭೪. ಯತೋ ಮೇ ವಾಮಭಾಗಸ್ತದ್ವಾಮಭಾಗೇ ಪ್ರವಿಷ್ಟಾಂಗಾರವಹ್ನಿವತ್ ಸಂವಲಿತಸ್ತತ ವಾ ಽಹಮರ್ಧನಾರಾ-ಯಣಾಖ್ಯಃ ಸ್ಯಾಮನ್ಯಥಾ ತನ್ನ ಸ್ಯಾದಿತಿ ಭಾವಃ । – (ತಾ.)

೭೪. 'ಸರ್ವವೇದಾಭಮಾನಿನ್ಯೋ ದೇವ್ಯೋ ಲಕ್ಷ್ಮೀಸ್ತತೋಽಧಿಕಾ ।
ವೇದಾಭಿಮಾನಿನೀ ಸಾಕ್ಷಾತ್ಸಾ ವಿಷ್ಣೋರ್ದೂರತಃ ಸ್ಥಿತಾ ।
ಯಜ್ಞಾಖ್ಯಾ ಸೈವ ವಿಷ್ಣೋಸ್ತು ಯಾ ತೂರಃ ಸ್ಥಲಮಾಶ್ರಿತಾ ।
ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾಪಿ ಸೈವ ತು ।
ಉತ್ತರೋತ್ತರತಃ ಸಾಽಪಿ ವಿಶಿಷ್ಟಾ ದಕ್ಷಿಣಾ ಸುಖೇ ।
ಏವಂ ವೇದಾಭಮಾನಿಭ್ಯೋ ದೇವೀಭ್ಯಃ ಸರ್ವ ಏವ ತು ।
ತದರ್ಥರೂಪಾಃ ಪತಯಸ್ತಸ್ಯಾಸ್ತಸ್ಯಾಸ್ತಥೋತ್ತಮಾಃ ।
ಶಚ್ಯಾ ಇಂದ್ರಸ್ತತಶ್ಚೋಮಾ ತಸ್ಯಾ ರುದ್ರಸ್ತತರತಥಾ ।
ಭಾರತೀ ಪ್ರಾಣ ಏವಾಸ್ಯಾಸ್ತತಃ ಶ್ರೀಸ್ತದ್ವರೋ ಹರಿಃ' ಇತಿ ವೈಶಿಷ್ಯೇ॥ – ಭಾ.ತಾ. (೧೧/೧೬/೧೩)

ಮಹಾಲಕ್ಷ್ಮಿಗಿಂತ ಮಾತ್ರವೇ ಉತ್ತಮನಲ್ಲ. ನನ್ನ ದೇಹದ ಎಡಅರ್ಧಭಾಗದಲ್ಲಿ ದಕ್ಷಿಣಾ ಎಂಬ ಹೆಸರಿನಿಂದಿರುವಳು. ಅವಳ ಬಲಭಾಗದಲ್ಲಿ ನಾನು ಇರುವುದರಿಂದ ಅವಳು ದಕ್ಷಿಣಾ ಎಂದೇ ಎನ್ನಿಸಿರುವಳು. ಅವಳು ದಕ್ಷಿಣಾಭಿಮಾನಿನಿ ದೇವತೆ, ಅವಳು ಬಹುರೂಪಳು. ಅವಳು ನನ್ನ ದೇಹದ ಎಡಭಾಗದ ಅರ್ಧದಲ್ಲಿ ನೆಲೆಸಿರುವಳು. ನನ್ನ ಎಡಭಾಗ ಅವಳಲ್ಲಿ ಸೇರಿಹೋಗಿರುವುದರಿಂದ ನಾನು ಅರ್ಧನಾರಾಯಣ ಎನ್ನಿಸಿರುವೆನು. ಆಗಲೂ ನಾನು ಅವಳಿಗಿಂತ ಉತ್ತಮನು, ಪರಿಪೂರ್ಣನು ನನ್ನಂಥವನಾಗಲೀ, ನನಗಿಂತ ಉತ್ತಮನಾಗಲೀ ಯಾರೂ ಇಲ್ಲ' ಎಂಬುದಾಗಿ 'ದಕ್ಷಿಣಾಭಿಃ ಸಹ' ಎಂಬ ಮಾತಿನಿಂದ ತಿಳಿಸಿದನು. ಅವನು ಹಾಗೆ ಹೇಳುವಾಗ ದಕ್ಷಿಣಾಭಿಮಾನಿನಿಯಾದ ಮಹಾಲಕ್ಷ್ಮಿಗಿಂತ ತಾನು ಮಿಗಿಲು ಎಂದು ತಾನು ತಿಳಿಸಿರುವನು'.

ತಾಭಿಶ್ಚೈತಾಭಿರ್ದಕ್ಷಿಣಾಭಿಃ ಸಮೇತಾ-
ದ್ವರಿಷ್ಠೋಽಹಂ ಜಗತಃ ಸರ್ವದೈವ ।
ಮತ್ತಾಸಮರ್ಥ್ಯಾನ್ನೈವ ಚಾನಂತಭಾಗೋ
ದಕ್ಷಿಣಾನಾಂ ವಿದ್ಯತೇ ನಾರದೇತಿ ॥ ೭೬ ॥

---

೭೫. ತದಾಪ್ಯಸ್ಯಾ ಉತ್ತಮೋಽಹಮಿತಿ ವದನ್ ಕೃಷ್ಣಃ ದಕ್ಷಿಣಾಭಿಃ ಸಾಕಮಿತ್ಯಸ್ಯ ದಕ್ಷಿಣಾಭಿಃ ಸಹ ಸ್ಥಿತಾತ್ ಕೂರ್ಮಾದಿಯಜ್ಞಾಂತದೇವತಾವರ್ಗಾದುತ್ತಮೋಽಸ್ಮೀತ್ಯರ್ಥಾಂತರಂ ಚ ಸೂಚಯತಿ। ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ನಿತಿ ವದನ್ ನಾರದಃ ಪ್ರಾಗುಕ್ತಮರ್ಥಂ ಮುಖ್ಯತ್ವಾನ್ಮುಖತೋ ವಕ್ತಿ। ತಸ್ಮಾದ್ದಕ್ಷಿಣಾಭಿಃ ಸಾಕಮಿತ್ಯಸ್ಯ ದ್ವೇಧಾऽಪ್ಯರ್ಥೋ ಜ್ಞೇಯಃ। ಅಸಂಕುಚಿತಸ್ವೇತರಸಕಲಸರ್ವೋತ್ತಮತ್ವಂ ಕೃಷ್ಣಸ್ಯೈವ। ಲಕ್ಷ್ಮ್ಯಾಸ್ತು ನ ಕೃಷ್ಣವದಸಂಕುಚಿತವೃತ್ತ್ಯಾ ಸ್ವೇತರಸರ್ವೋತ್ತಮತ್ವಮ್। ಪತ್ಯುಃ ಪುರುಷೋತ್ತಮಾದಪ್ಯುತ್ತಮತ್ವಸ್ಯ ತಸ್ಯಾಮಸಂಭವಾತ್। ಸಾ ಬ್ರಹ್ಮಾದಿಸರ್ವಜಗತಃ ಶ್ರೇಷ್ಠಾ ಹರೇಸ್ತು ಭಾರ್ಯಾತ್ವಾದ್ಧಕ್ಷೈವ। ನಿರವಧಿಕಸರ್ವೋತ್ತಮಸ್ತು ಭಗವಾನ್ ಶ್ರೀಕೃಷ್ಣ ಏವೇತಿ ಭಾವಃ ॥ – (ವಾ.)

೭೫. ಅಹಮೇವ ದಕ್ಷಿಣಾರ್ಧೋ ಯಸ್ಯಾಃ ಸಾ ಮದರ್ಧಾ। ಮಯಿ ಕ್ಷೀರನೀರವತ್ ಅಪ್ರತಿಘಾತತ್ವೇನ ಚಿತ್‌ಸಂವಲನತ್ವೇನ ದಕ್ಷಿಣಾರ್ಧೋ ಯಸ್ಯಾಃ ಸೇತಿ ವಾ। ವಾಮಾರ್ಧ ಇತಿ। ಯತೋ ಮೇ ವಾಮಾರ್ಧಭಾಗಃ ತದ್ದಕ್ಷಿಣಭಾಗೇ ಪ್ರವಿಷ್ಟಃ ಅಂಗಾರವಹ್ನಿವತ್ ಸಂವಲಿತಃ ತತ ಏವಾಹಗಮರ್ಧನಾರಾಯಣಾಖ್ಯಿಃ ಸ್ಯಾಮನ್ಯಥಾ ತನ್ನ ಸ್ಯಾದಿತಿ ಭಾವಃ। – (ತಾ.)

೭೫. ನನು ಯಜ್ಞಾಂತ ಸರ್ವೋತ್ತಮತ್ವೇ ನಾರದೇನೋಕ್ತೇ ಕೃಷ್ಣೇನ ದಕ್ಷಿಣಾಂತ ಸರ್ವೋತ್ತಮತ್ವ ಮುಚ್ಯತೇ। ತದಿದಂ ವಿಶೇಷ ಶೂನ್ಯಂ। ಯಜ್ಞದಕ್ಷಿಣಯೋರೇಕತ್ವೇನ ವಿಶೇಷಾಭಾವಾದಿತ್ಯತಃ ಕೃಷ್ಣಸ್ಯಾಭಿಪ್ರಾಯಮಾಹ ಸರ್ವೋತ್ತಮತ್ವಮಿತಿ। ಸ್ಮರನ್ ಅಭಿಪ್ರಯನ್। ತದುಕ್ತಮ್ ಏಕಾದಶಸ್ಕಂಧತಾತ್ಪರ್ಯೇ - ಸರ್ವವೇದಾಭಿಮಾನಿನ್ಯೋ ದೇವ್ಯೋ ಲಕ್ಷ್ಮೀಸ್ತತೋऽಧಿಕಾ। ವೇದಾಭಿಮಾನಿನೀ ಸಾಕ್ಷಾತ್ ಸಾ ವಿಷ್ಣೋರ್ದೂರವತ್ ಸ್ಥಿತಾ। ಯಜ್ಞಾಖ್ಯಸೈವ ವಿಷ್ಣೋಸ್ತು ಯಾ ತೂರಃಸ್ಥಲಮಾಶ್ರಿತಾ । 'ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾಪಿ ಸೈವ ತು। ಉತ್ತರೋತ್ತರತಃ ಸಾಪಿ ವಿಶಿಷ್ಟಾ ದಕ್ಷಿಣಾ ಸುಖೇ' ಇತಿ ॥ – (ತಾ.)

ಅ: ''ನಾರದ! ದಕ್ಷಿಣೆಗಳಿಂದ ಕೂಡಿದ ಅವಳ ರೂಪಗಳಿಗಿಂತಲೂ, ಸಮಸ್ತ ಜಗತ್ತಿಗಿಂತಲೂ ನಾನು ಸರ್ವದಾ ಮಿಗಿಲಾಗಿರುವೆ; ನನ್ನ ಸಾಮರ್ಥ್ಯದ ಅನಂತ ಭಾಗದ ಒಂದು ಭಾಗವೂ ದಕ್ಷಿಣಾ ರೂಪದ ಮಹಾಲಕ್ಷ್ಮಿಗೆ ಇಲ್ಲ''.

ಉಕ್ತಂ ಕೃಷ್ಣೇನಾಪ್ರತಿಮೇನ ಭೂಪಾ
ಅನ್ಯೋತ್ತಮತ್ವಂ ದಕ್ಷಿಣಾನಾಂ ಚ ಶಶ್ವತ್ ।
ಸೇಯಂ ಭೈಷ್ಮೀ ದಕ್ಷಿಣಾ ಕೇಶವೋಽಯಂ
ತಸ್ಯಾಃ ಶ್ರೇಷ್ಠಃ ಪಶ್ಯತ ರಾಜಸಂಘಾಃ ॥ ೭೭ ॥

ಅ: ''ಹೀಗೆ ಅನುಪಮನಾದ ಶ್ರೀಕೃಷ್ಣನು ತಿಳಿಸಿದ. ಬೇರೆ ಎಲ್ಲದಕ್ಕಿಂತಲೂ ದಕ್ಷಿಣಾ ರೂಪದ ಮಹಾಲಕ್ಷ್ಮಿ ಸದಾ ಉತ್ತಮಳು. ಆ ದಕ್ಷಿಣಾ ದೇವಿಯೇ ಈ ರುಕ್ಮಿಣಿ; ಅವಳಿಗಿಂತ ಮಿಗಿಲಾದವನು ಕೇಶವನಾದ ಈ ಶ್ರೀಕೃಷ್ಣ ಎಂಬುದನ್ನು ಎಲೈ ರಾಜರುಗಳೇ ಕಾಣಿರಿ''.

---

೭೬. ಏತದೇವ ಪ್ರಪಂಚಯತಿ ತಾಭಿಶ್ಚೈತಾಭಿರಿತ್ಯಾದಿನಾ। ಅನಂತಭಾಗ ಇತ್ಯತ್ರ ಅನಂತಾದೇಕೋ ಭಾಗಃ ಅನಂತಭಾಗ ಇತ್ಯರ್ಥಃ ॥ – (ವಾ.)

೭೬. ಮತ್ತಾಮರ್ಥ್ಯಾದಿತಿ । ಮತ್ತಾಮರ್ಥ್ಯಮಪೇಕ್ಷ್ಯ । ತಾಭಿರ್ವೇದಾದಿಭಿರೇತಾಭಿರ್ದಕ್ಷಿಣಾಭಿಃ ಸಮೇತಾಜ್ಜಗತ ಇತ್ಯುಕ್ತ್ಯಾಪ್ರಾಪ್ತಂ ದಕ್ಷಿಣಾಯಾ ಇತರಸಾಮ್ಯಂ ವಾರಯನ್ ಕದಾಚಿದ್ದಕ್ಷಿಣಾನಾಮುತ್ತಮತ್ವಂ ಕದಾಚಿದ್ಯಜ್ಞಾನಾಮುತ್ತಮತ್ವಂ ಕಿಮಿತಿ ಶಂಕಾಂ ಚ ವಾರಯತಿ – ಅನ್ಯೋತ್ತಮತ್ವಮಿತಿ । ದಕ್ಷಿಣಾಭಿಃ ಸಾಕಮಿತಿ ವದತಃ ಕೃಷ್ಣಸ್ಯ ದಕ್ಷಿಣಾಮನ್ಯೋತ್ತಮತ್ವಮಭಿಪ್ರೇತಮಿತಿ ಭಾವಃ । ಸೇಯಂ ಭೈಷ್ಮೀತಿ । ಸಾ ದಕ್ಷಿಣೇಯಂ ಭೈಷ್ಮೀತ್ಯರ್ಥಃ । ನನು ಕಥಂ ಭೈಷ್ಮ್ಯಾ ದಕ್ಷಿಣಾತ್ವಂ ಸಾऽರ್ಧನಾರೀನರಾತ್ಮನಾ ದಕ್ಷಭಾಗೇ ಸ್ಥಿತೇನತ್ವಾಭಾವಾತ್ । ನಚ ದಕ್ಷಿಣೈಕ್ಯವಿವಕ್ಷಯೈವಮುಕ್ತಿರಿತಿ ವಾಚ್ಯಮ್ । ಯಜ್ಞೈಕ್ಯೇ ನ ಭೈಷ್ಮೀ ಯಜ್ಞನಾಮ್ನೀತಿ ವಕ್ತವ್ಯತಾಪತ್ತೇರಿತಿ ಚೇದತ್ರಾಹುಃ ದಕ್ಷಿಣಾರೂಪಾದ್ಧಿ ಭಕ್ತ್ಯೈವೈನೈವ ಮುಕ್ತಿಸಂಭವಾತ್ । ಯದ್ವಾ ರುಗ್ಮಿಣ್ಯಪೀದಾನೀಂ ದಕ್ಷಿಣೈವ ಭಾಗತಃ ಪುರುಷತ್ವಂ ನ ವ್ಯಕ್ತಮತೋ ನ ದೋಷಃ । ತಸ್ಯಾ ಇನೋ ಹಿ ವಿಷ್ಣುಃ ಸಃ ದಕ್ಷಭಾಗಸ್ಥಿತಃ ಸದೇತ್ಯೈತರೇಯಭಾಷ್ಯಾನುಸಾರೇಣ ದಕ್ಷಿಣಾರೂಪಾಣಿ ವ್ಯವಸ್ಥಿತಾನಿ ವಾ । ಯದಾ ತು ಸಾ ಮೇ ವಾಮಾ ವಾಮಾರ್ಧರೂಪೇತ್ಯಾದಿಬಲಾತ್ ಸರ್ವರೂಪಾಣಾಮಪಿ ದಕ್ಷಿಣಾತ್ವಂ ಭವತಿ ವೇತಿ ಚಿಂತಾऽಸ್ಮದಾಚಾರ್ಯೈಃ ಕೃತಾऽನ್ಯತ್ರೇತಿ* ನೇಹ ಕೃತಾ । – (ತಾ.)

೭೬. ಏತೇನ– ಸತ್ಯಂ ಸತ್ಯಂ ಪುನಃ ಸತ್ಯಂ ಶಪಥೈಶ್ಚಾಪಿ ಕೋಟಿಭಿಃ ।
ವಿಷ್ಣುಮಾಹಾತ್ಮ್ಯಲೇಶಸ್ಯ ವಿಭಕ್ತಸ್ಯ ಚ ಕೋಟಿಧಾ ।
ಪುನಶ್ಚಾನಂತಧಾ ತಸ್ಯ ಪುನಶ್ಚಾಪಿ ಹ್ಯನಂತಧಾ ।
ನೈಕಾಂಶಸಮಮಾಹಾತ್ಮ್ಯಃ ಶ್ರೀಶೇಷಬ್ರಹ್ಮಶಂಕರಾಃ ॥ – ಗೀತಾಭಾಷ್ಯ (೨/೨೪)

ಇತಿ ನಾರದೀಯಪುರಾಣವಚನಾನುಸಾರೇಣ ಮತ್ತಾಮರ್ಥ್ಯಸ್ಯ ಯೋऽನಂತಭಾಗಸ್ತದೇಕಭಾಗಸಮಸಾಮರ್ಥ್ಯಂ ದಕ್ಷಿಣಾನಾಂ ನೈವ ವಿದ್ಯತ ಇತಿ ವಕ್ತವ್ಯಮ್ ॥ – (ಸ.)

---

* ಸತ್ತತ್ತ್ವರತ್ನಮಾಲಾ ಮಹಾಲಕ್ಷ್ಮೀಪ್ರಕರಣ ಶ್ಲೋ. ೨೧೦ ರ ವ್ಯಾಖ್ಯಾನದಲ್ಲಿ.

ಎ: ಈ ಭಾಗ ಭಗವದ್ಗೀತೆಯ ಈ ಕೆಳಗಿನ ಶ್ಲೋಕದ ವಿವರಣೆಗೆ ತುಂಬಾ ಉಪಯುಕ್ತ(೨/೨೯):

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮಾಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಽಪ್ಯೇನಂ ವೇದ ನ ಚೈವ ಕಶ್ಚಿತ್॥

ಶ್ರೀಕೃಷ್ಣನ ಅದ್ಭುತ ಶಕ್ತಿಯ ಪ್ರತ್ಯಕ್ಷ

ಪ್ರತ್ಯಕ್ಷಂ ವೋ ವೀರ್ಯಮಸ್ಯಾಪಿ ಕುಂತ್ಯಾ
ಯುದ್ಧೇಽರ್ಥಿತಃ ಕೇಶವೋ ವೀರ್ಯಮಸ್ಯೈ ।
ಅದರ್ಶಯತ್ ಪಾಂಡವಾನ್ ಧಾರ್ತರಾಷ್ಟ್ರಾನ್
ಭೀಷ್ಮದ್ರೋಣದ್ರೌಣಿಕೃಪಾನ್ ಸಕರ್ಣಾನ್
ನಿರಾಯುಧಾಂಶ್ಚಕ್ರ ಏಕಃ ಕ್ಷಣೇನ
ಲೋಕಶ್ರೇಷ್ಠಾನ್ ದೈವತೈರಪ್ಯಜೇಯಾನ್ ॥ ೭೮ ॥

ಅ: 'ನಿಮಗೆಲ್ಲ ಶ್ರೀಕೃಷ್ಣನ ಸಾಮರ್ಥ್ಯ ಪ್ರತ್ಯಕ್ಷವಾಗಿದೆ. ಕುಂತಿಯಿಂದ ಯುದ್ಧಕ್ಕೋಸ್ಕರ ಬೇಡಲ್ಪಟ್ಟ ಶ್ರೀಕೃಷ್ಣ ಅವಳಿಗೆ ತನ್ನ ಸಾಮರ್ಥ್ಯವನ್ನು ತೋರಿಸಿದ. ದೇವತೆಗಳಿಂದಲೂ ಜಯಿಸಲಾಗದ ಲೋಕಶ್ರೇಷ್ಠಪರಾಕ್ರಮಿಗಳಾದ ಪಾಂಡವರನ್ನೂ, ಕೌರವರನ್ನೂ, ಭೀಷ್ಮ, ದ್ರೋಣ, ಅಶ್ವತ್ಥಾಮ, ಕೃಪ, ಕರ್ಣರನ್ನೂ ಒಂದೇ ಕ್ಷಣದಲ್ಲಿ ನಿರಾಯುಧರನ್ನಾಗಿ ಮಾಡಿದ'.

ಎ: ಕುಂತಿ ಶ್ರೀಕೃಷ್ಣನ ಅಗಾಧಮಹಿಮೆಯನ್ನು ಕಣ್ಣಾರೆ ಕಾಣಲು ಅಪೇಕ್ಷಿಸಿದಾಗ ಶ್ರೀಕೃಷ್ಣ ತಕ್ಷಣವೇ ಅಲ್ಲಿ ನೆರೆದಿದ್ದ ಪಾಂಡವಾದಿ ಸಮಸ್ತಲೋಕವೀರರನ್ನು ಒಂದೇ ಕ್ಷಣದಲ್ಲಿ ಆಯುಧ–ರಹಿತರನ್ನಾಗಿ ಮಾಡಿ ತನ್ನ ಸಾಮರ್ಥ್ಯ ತೋರಿಸಿಕೊಟ್ಟ ಎಂದರ್ಥ.

+ ಸ ಹಿ ವಿಷ್ಣುರ್ದಕ್ಷಿಣಾಮಿತ್ರ ಉಕ್ತೋ ಹರಿವಂಶೇಷು ಧನ್ಯಾಶ್ಚರ್ಯಾಧ್ಯಾಯೇ–

ದಕ್ಷಿಣಾಭಃ ಸಹೈವೈತನ್ಮದಧಸ್ತಾಜ್ಜಗತ್ ಸದಾ ।
ಧನ್ಯಾಶ್ಚರ್ಯೋಽಹಮೇವೈಕೋ ಮಿತ್ರಂ ಮೇ ದಕ್ಷಿಣಾ ರಮಾ ।
ಇತ್ಯವಾದೀದ್ಧರಿರ್ಭೂಪಾ ಧನ್ಯೋಽಸೀತ್ಯುದಿತೇ ಮಯಾ ॥ ಇತಿ ನಾರದವಚವನಮ್ ।

– ಐತರೇಯಭಾಷ್ಯ

೭೮. ಪ್ರತ್ಯಕ್ಷಂ ವೋ ವೀರ್ಯಮಿತ್ಯತ್ರ ಹೇ ರಾಜಸಂಘಾಃ ಅಸ್ಯ ವೀರ್ಯಂ ವಃ ಪ್ರತ್ಯಕ್ಷಮಪೀತಿ ಯದಾ ನಾರದೋ ಜಗಾದ ತದಾ ಕುಂತ್ಯಾ ಅರ್ಥಿತಃ= ತವ ವೀರ್ಯಂ ದರ್ಶಯೇತ್ಯರ್ಥಿತಃ ಕೇಶವಃ ಅಸ್ಯೈ ಯುದ್ಧೇ ವೀರ್ಯಮದರ್ಶಯದಿತಿ ಯದಾ ತದೇತಿ ಪದೇ ಉಪಸ್ಕೃತ್ಯ ಯೋಜನಾ ॥ – (ವಾ.)

ವ್ರತಂ ಭೀಮಸ್ಯಾಸ್ತಿ ನೈವಾಭಿಕೃಷ್ಣ-
ಮಿಯಾಮಿತಿ ಸ್ವಾಜ್ಞಯಾ ತಸ್ಯ ವಿಷ್ಣೋಃ ॥
ಚಕ್ರಂ ರಥಸ್ಯಾಗ್ರಹೀತ್ ಸ ಪ್ರಣಮ್ಯ
ಕೃಷ್ಣಂ ಸ ತಂ ಕೇಶವೋಽಪಾಹರಚ್ಚ ॥ ೭೯ ॥

ಅ: ನಾನೆಂದೂ ಶ್ರೀಕೃಷ್ಣನನ್ನು ಎದುರಿಸಿ ಹೋಗೆನು ಎಂದು ಭೀಮನ ವ್ರತವಿದೆ. ಅದರಿಂದಾಗಿ ಶ್ರೀಕೃಷ್ಣನ ಅಪ್ಪಣೆಯಂತೆ ಆತನ ರಥದ ಚಕ್ರವನ್ನು ನಮಸ್ಕರಿಸಿ ಹಿಡಿದುಕೊಂಡ; ಶ್ರೀಕೃಷ್ಣ ಅದನ್ನು ಬಿಡಿಸಿಕೊಂಡು ತೆರಳಿದ.

ವಿ: ೧) ಇತರರೆಲ್ಲ ಶ್ರೀಕೃಷ್ಣನ ಎದುರು ನಿಂತು ಕ್ಷಣಮಾತ್ರದಲ್ಲಿ ನಿರಾಯುಧರಾದರು.

೨) ಆದರೆ ಭೀಮಸೇನ ಆಯುಧಪಾಣಿಯಾಗಿ ಶ್ರೀಕೃಷ್ಣನ ಎದುರು ನಿಲ್ಲಲಿಲ್ಲ. ಅದಕ್ಕೆ ನಾನೆಂದೂ ಶ್ರೀಕೃಷ್ಣನನ್ನು ಎದುರಿಸೆನು ಎಂಬ ಆತನ ಶುದ್ಧ ಭಾಗವತ ವ್ರತವೇ ಕಾರಣ.

೩) ಆದರೂ, ಶ್ರೀಕೃಷ್ಣನ ಸರ್ವೋತ್ತಮತ್ವವನ್ನು ಸ್ಥಾಪಿಸಲೆಂದು ರಥದ ಬಳಿಗೆ ತೆರಳಿ ಶ್ರೀಕೃಷ್ಣನಿಗೆ ವಂದಿಸಿ ಆ ರಥದ ಚಕ್ರವನ್ನು ಹಿಡಿದುಕೊಂಡ. ಶ್ರೀಕೃಷ್ಣ ಆತನ ಹಿಡಿತವನ್ನು ಬಿಡಿಸಿಕೊಂಡು ಮುಂದೆ ಸಾಗಿ ತಾನು ಸರ್ವೋತ್ತಮ ಎಂದು ಸ್ಥಾಪಿಸಿದ ಎಂದರ್ಥ.

೪) ಈ ಭಾಗ ಶ್ರೀಕೃಷ್ಣನ ಸರ್ವೋತ್ತಮತ್ವವನ್ನು ನಿರೂಪಿಸುವಂತೆ ಭೀಮನ ಜೀವೋತ್ತಮತ್ವವನ್ನು ಸಹ ನಿರೂಪಿಸುವುದು ಗಮನಾರ್ಹ.

ಏವಂ ಕ್ರೀಡಂತೋಽಪ್ಯಾತ್ಮಶಕ್ತ್ಯಾ ಪ್ರಯತ್ನಂ
ಕುರ್ವಂತಸ್ತೇ ವಿಜಿತಾಃ ಕೇಶವೇನ ।
ತತಃ ಸರ್ವೇ ನೇಮುರಸ್ಮೈ ಪೃಥಾ ಚ
ಸವಿಸ್ಮಯಾ ವಾಸುದೇವಂ ನನಾಮ ॥ ೮೦ ॥

---

೭೯. ಯಸ್ಮಾತ್ಕೃಷ್ಣಮಭಿ ನ ಇಯಾಂ= ಯುದ್ಧಾರ್ಥಂ ನ ಗಚ್ಛೇಯಮಿತಿ ಭೀಮಸ್ಯ ವ್ರತಮಸ್ತಿ ಅತಃ ಕಾರಣಾತ್ ಆಜ್ಞಯಾ= ಯುದ್ಧಂ ಕುರ್ವಿತಿ ಕೃಷ್ಣಾಜ್ಞಯಾ ಕೃತಯಾಽಪಿ ಸಃ= ಭೀಮಃ ಕೃಷ್ಣಂ ಪ್ರಣಮ್ಯ= ಆಜ್ಞೋಲ್ಲಂಘನಭಿಯಾ ನಮಸ್ಕೃತ್ಯ ರಥಚಕ್ರಮೇವಾಗ್ರಹೀತ್। ನ ತು ಯುಯೋಧ। ತಥಾಽಪಿ ಸಃ= ಕೇಶವಃ ಸ್ವವೀರ್ಯೋತ್ಕರ್ಷಂ ದರ್ಶಯಿತುಂ ತಂ= ಭೀಮಮಪಾಹರತ್ = ಸ್ವಬಾಹುಬಲೇನ ರಥಾದ್ವಿಮೋಚ್ಯ ದೂರೇ ಪ್ರಾಕ್ಷಿಪದಿತಿ ಯೋಜನಾ ॥ – (ವಾ.)

೭೯. ರಥಕ್ಷೇಪಣಾರ್ಥಂ ಗೃಹೀತಮಿತಿ ದರ್ಶಯನ್ ಕೃಷ್ಣಂ ನನಾಮೇತಿ ಭಾವಃ। – (ಜ.)

ಅ: ಹೀಗೆ ಕ್ರೀಡಿಸುತ್ತಾ ತಮ್ಮ ಶಕ್ತಿಗೆ ಇದ್ದಷ್ಟು ಪ್ರಯತ್ನ ಮಾಡಿದರೂ ಅವರೆಲ್ಲ ಶ್ರೀಕೃಷ್ಣನಿಂದ ಪರಾಭವಗೊಂಡು ಎಲ್ಲರೂ ಅವನಿಗೆ ನಮಸ್ಕರಿಸಿದರು. ಕುಂತಿಯೂ ಆಶ್ಚರ್ಯಗೊಂಡು ಅವನನ್ನು ನಮಸ್ಕರಿಸಿದಳು.

ವಿ: ೧) ಹೀಗೆ ಸೋತ ಸಕಲರೂ ಶ್ರೀಕೃಷ್ಣನಿಗೆ ನಮಸ್ಕರಿಸಿದರು ಎಂದರ್ಥ. ಹಾಗೆ ನಮ-ಸ್ಕರಿಸಿದವರಲ್ಲಿ ಪಾಂಡವಾದಿ ಸಜ್ಜನರು ಮಾತ್ರವಲ್ಲದೇ, ದುರ್ಯೋಧನಾದಿ ಅಸುರರೂ ಇದ್ದರು.

೨) ಅವರೆಲ್ಲರಿಂದ ಶ್ರೀಕೃಷ್ಣ ಹೀಗೆ ನಮಸ್ಕೃತನಾಗುವ ಮೂಲಕ ತಾನು '**ಅಮರಾಸುರ-ಸಿದ್ಧವಂದ್ಯ**' (ಮಹಾಭಾರತ ೧/೧/೧) ಎಂಬುದನ್ನು ನಿರೂಪಿಸಿದ ಎಂದು ತಿಳಿಯಬೇಕು.

ಏವಂವಿಧಾನ್ಯದ್ಭುತಾನೀಹ ಕೃಷ್ಣೇ
ದೃಷ್ಟಾನಿ ವಃ ಶತಸಾಹಸ್ರಶಶ್ಚ ।
ತಸ್ಮಾದೇಷ ಹ್ಯದ್ಭುತೋಽತ್ಯುತ್ತಮಶ್ಚೇ-
ತ್ಯುಕ್ತಾ ನೇಮುಸ್ತೇಽಖಿಲಾ ವಾಸುದೇವಮ್ ॥ ೮೧ ॥

ಅ: ಈ ತೆರನಾದ ಅದ್ಭುತಗಳು ಈ ಶ್ರೀಕೃಷ್ಣನಲ್ಲಿ ನಿಮಗೆ ನೂರಾರು, ಸಾವಿರಾರು, ಲಕ್ಷಗಟ್ಟಲೆ ಕಂಡಿವೆ. ಆದ್ದರಿಂದ ಇವನು ಅದ್ಭುತ, ಅತ್ಯುತ್ತಮ'' ಎಂದು ನುಡಿಯಲು ಅವರೆಲ್ಲರೂ ಶ್ರೀಕೃಷ್ಣನನ್ನು ನಮಸ್ಕರಿಸಿದರು.

ವಿ: ೧) ಶ್ರೀಕೃಷ್ಣನ ಮಹಿಮೆ ಹೀಗೆ ಕಂಡದ್ದು ಒಂದೆರಡು ಬಾರಿಯಲ್ಲ, ನೂರು, ಸಾವಿರ, ಲಕ್ಷಬಾರಿ ಎಂದರ್ಥ.

೨) ಇಲ್ಲಿ 'ಶತಸಹಸ್ರಶಃ' ಎಂಬುದಕ್ಕೆ ಶತಶಃ, ಸಹಸ್ರಶಃ ಮತ್ತು ಶತಸಹಸ್ರಶಃ ಎಂಬ ಎಲ್ಲ ಅರ್ಥಗಳೂ ಯಥಾಯೋಗ್ಯವಾಗಿ ವಿವಕ್ಷಿತ ಎಂದು ತಿಳಿಯಬೇಕು.

೩) ನೋಡುವವರ ಯೋಗ್ಯತೆಯನ್ನು ಅನುಸರಿಸಿ ಈ ಸಂಖ್ಯೆ ಭಿನ್ನವಾಗುವುದು ಎಂದರ್ಥ.

ವಾಯ್ವಾಜ್ಞಯಾ ವಾಯುಶಿಷ್ಯಃ ಸ ಸತ್ಯ-
ಮಿತ್ಯಾದ್ಯುಕ್ತ್ವಾ ನಾರದೋ ರುಗ್ಮಿಣೇಂ ಚ ।
ಸ್ತುತ್ವಾ ಪುಷ್ಪಂ ಪಾರಿಜಾತಸ್ಯ ದತ್ವಾ
ಯಯೌ ಲೋಕಂ ಕ್ಷಿಪ್ರಮಬ್ಜೋದ್ಭವಸ್ಯ ॥ ೮೨ ॥

ಅ: ವಾಯುಶಿಷ್ಯರಾದ ನಾರದರು ವಾಯುದೇವರ ಆದೇಶದಂತೆ ಶ್ರೀಕೃಷ್ಣನ ಮಹಿಮೆಯೆಲ್ಲಾ ''ಸತ್ಯ'' ಇತ್ಯಾದಿಯಾಗಿ ನುಡಿದು, ರುಗ್ಮಿಣಿಯನ್ನು ಸ್ತುತಿಸಿ, ಪಾರಿಜಾತ ಪುಷ್ಪವನ್ನು ಸಮರ್ಪಿಸಿ ತ್ವರೆಯಿಂದ ಬ್ರಹ್ಮಲೋಕಕ್ಕೆ ನಡೆದರು.

ಏ: ೧) ನಾರದ ಮುನಿಗಳು ವಾಯುದೇವರ ಶಿಷ್ಯ ಎಂಬ ವಿಶೇಷಾಂಶ ಇಲ್ಲಿದೆ. ಅವರು ಬ್ರಹ್ಮ ಪುತ್ರರೆಂಬುದಂತೂ ಪ್ರಸಿದ್ಧವೇ. ಹೀಗೆ ಬ್ರಹ್ಮನಿಗೆ ಪುತ್ರರಾಗಿಯೂ, ಭಾವೀ ಬ್ರಹ್ಮದೇವರಿಗೆ ಶಿಷ್ಯರಾಗಿಯೂ ಇರುವ ಮೂಲಕ ನಾರದಮುನಿಗಳು ಅತ್ಯಂತ ವಿಶೇಷವಾದಂತಹ ಹಿರಿಮೆಗೆ ಪಾತ್ರರಾಗಿರುವುದನ್ನು ಗಮನಿಸಬೇಕು. ನಾರದರು ಗುರುಗಳಾದ ವಾಯು[illegible]ನರ ಆದೇಶದಿಂದಲೆ ಹಾಗೆ ಅಲ್ಲಿಗೆ ಆಗಮಿಸಿ ಶ್ರೀಹರಿಯ ಸರ್ವೋತ್ತಮತ್ವವನ್ನು ಸ್ಥಾಪಿಸಿದರು ಎಂಬುದು ಮತ್ತೊಂದು ವಿಶೇಷ. ತಂದೆಯಾದ ಬ್ರಹ್ಮದೇವರ ಆದೇಶದಂತೆ ಶ್ರೀವ್ಯಾಸರ ಬಳಿಗೆ ಬಂದು ಭಾಗವತಪ್ರಸಾರ ಮಾಡಿಸಿದ ಅವರು, ಭಗವಂತನಾದ ಶ್ರೀಕೃಷ್ಣನ ಬಳಿಗೆ ಬಂದು ಅವನು ಭಗವಂತನೆಂಬುದನ್ನು ಪ್ರಚುರಪಡಿಸಿದರು.

೨) ಅದರಿಂದಾಗಿಯೇ ನಾರದ ಎಂಬ ಭಗವಂತನ ವಿಭೂತಿರೂಪ ಅವರಲ್ಲಿ ಇರುವ ವಿಷಯ ಭಗವದ್ಗೀತೆಯಲ್ಲಿ ಉಕ್ತವಾಗಿದೆ: **'ದೇವರ್ಷೀಣಾಮಹಂ ನಾರದಃ'**. ಭಾರತಪುರಾಣಾದಿ–ಗಳಲ್ಲಿ ಉದ್ದಕ್ಕೂ ಕಂಡು ಬರುವ ಅವರ ಪಾತ್ರ ಅವರು ಮಾಡುವ ಹರಿಸರ್ವೋತ್ತಮತ್ವಾದಿ ಪ್ರಮೇಯಗಳ ಪ್ರಸಾರ, ಪರಿಪರಿಯಿಂದ ಮಾನ್ಯವಾಗಿವೆ.

೩) ಭರತಖಂಡದ ಮಟ್ಟಿಗಂತೂ ಅವರೇ ಪ್ರಧಾನವಾದ ಧರ್ಮೋಪದೇಶಕ ಗುರುಗಳು ಎಂಬ ವಿಶೇಷಾಂಶ ಶ್ರೀಮದ್ಭಾಗವತಪುರಾಣದಲ್ಲಿ ಬಂದಿದೆ :

ತಂ ಭಗವಾನ್ ನಾರದೋ ವರ್ಣಾಶ್ರವತೀಭಿರ್ಭಾರತೀಭಿಃ ಪ್ರಜಾಭಿರ್ಭಗವತ್ಪ್ರೋಕ್ತಾಭ್ಯಾಂ ಸಾಂಖ್ಯಯೋಗಾಭ್ಯಾಂ ಭಗವದನುಭಾವೋಪವರ್ಣನಂ ಸಾವರ್ಣೇರುಪದೇಕ್ಷ್ಯಮಾಣಃ ಪರಮ-ಭಕ್ತಿಭಾವೇನೋಪಸರತಿ ..... – ಭಾಗವತ (೫/೧೯/೧೦)

೪) ಧ್ರುವ, ಪ್ರಹ್ಲಾದ ಮೊದಲಾದ ಮಹಾ ವಿಷ್ಣುಭಕ್ತರೆಲ್ಲಾ ನಾರದ ಮುನಿಗಳ ಶಿಷ್ಯರು ಎಂಬುದು ಮತ್ತೊಂದು ಗಮನಾರ್ಹ ಅಂಶ.

೫) ಹೀಗೆ ವಿಷ್ಣುಸರ್ವೋತ್ತಮತ್ವ ಸಮರ್ಥನೆಯಾಗಿದ್ದರಿಂದ ಅದೊಂದು ವಿಶಿಷ್ಟ ಸಮಾರಂಭವಾಗಿ ದಾಖಲೆಯಾಯಿತು ಎಂದೂ ಸಹ ತಿಳಿಯಬೇಕು.

---

೮೨. ವಾಯ್ವಾಜ್ಞಯಾ ವಾಯುಶಿಷ್ಯ ಇತ್ಯತ್ರ ವಾಯುಶಿಷ್ಯಃ ಸಃ = ನಾರದಃ ವಾಯ್ವಾಜ್ಞಯಾ= ರೈವತಾಚಲಸ್ಥಕೃಷ್ಣ-ಮಹಿಮಾನಂ ತತ್ರ ಪುಂಜೀಭೂತರಾಜಕಟಕಮಧ್ಯೇ ಪ್ರಕಟೀಕೃತ್ಯ ಗಚ್ಛೇತಿ ವಿಷ್ಣುಪ್ರೇಷಿತಮೂಲರೂಪ-ವಾಯ್ವಾಜ್ಞಯಾ ಸತ್ಯಂ= ಹರೇರ್ಮಹಾಮಾಹಾತ್ಮ್ಯಂ ಯಥಾರ್ಥಮಿತಿ ಆದಿಪದೇನ ದಕ್ಷಿಣಾದೇವ್ಯಾ ಅಪಿ ಮಾಹಾತ್ಮ್ಯಂ ಚ ಸತ್ಯಮಿತ್ಯುಕ್ತ್ವೇತಿ ಯೋಜನಾ। ಅನ್ಯತ್ ಸ್ಪಷ್ಟಮೇವ ॥ – (ವಾ.)

ಸತ್ಯಭಾಮೆಯ ಪ್ರಣಯಕೋಪ

ಸಾಕ್ಷಾತ್ ಸತ್ಯಾ ರುಕ್ಮಿಣೀತ್ಯೇಕಸಂವಿ-
ದ್ದ್ವಿಧಾ ಭೂತಾ ನಾತ್ರ ಭೇದೋऽಸ್ತಿ ಕಶ್ಚಿತ್ ।
ತಥಾऽಪಿ ಸಾ ಪ್ರಮದಾನಾಂ ಸ್ವಭಾವ-
ಪ್ರಕಾಶನಾರ್ಥಂ ಕುಪಿತೇವಾಸ ಸತ್ಯಾ ॥ ೮೩ ॥

ಅ: ಒಂದೇ ಜ್ಞಾನಾನಂದಾದಿ ಗುಣಗಳಿಂದ ಕೂಡಿದ ಸಾಕ್ಷಾತ್ ಮಹಾಲಕ್ಷ್ಮಿಯೇ ರುಗ್ಮಿಣೀ, ಸತ್ಯಭಾಮಾ ಎಂಬುವ ಎರಡು ರೂಪಗಳಿಂದ ಅವತರಿಸಿದಳು. ಅವರಿಬ್ಬರಲ್ಲಿ ಯಾವುದೇ ವಿಧವಾದ ಭೇದವೂ ಸರ್ವಥಾ ಇಲ್ಲ. ಆದರೂ ಸ್ತ್ರೀಯರ ಸ್ವಭಾವವನ್ನು ತೋರಿಸುವ ಸಲುವಾಗಿ ಸತ್ಯಭಾಮಾದೇವಿ ಶ್ರೀಕೃಷ್ಣನ ಬಗ್ಗೆ ಮುನಿಸಿಕೊಂಡಂತೆ ತೋರಿಸಿಕೊಂಡಳು.

ವಿ: ೧) ರುಗ್ಮಿಣೀ ಸತ್ಯಭಾಮೆಯರ ಬಗ್ಗೆ ಜನಗಳಿಗೆ ತುಂಬಾ ತಪ್ಪು ತಿಳಿವಳಿಕೆ ಉಂಟು. ರುಗ್ಮಿಣೀ ಸಾತ್ವಿಕಳು, ಸತ್ಯಭಾಮಾ ಜಗಳಗಂಟಿ. ಅವರಿಬ್ಬರಲ್ಲಿ ವಿಶೇಷ ಸವತಿ ಮಾತ್ಸರ್ಯ ಎಂದು ಜನ ತಿಳಿದಿರುವುದುಂಟು. ಅದು ಸರಿಯಲ್ಲ. ರುಗ್ಮಿಣೀ ಸತ್ಯಭಾಮೆಯರಿಬ್ಬರೂ ಸಾಕ್ಷಾತ್ ಲಕ್ಷ್ಮೀರೂಪಗಳೇ.

೨) ಶ್ರೀಹರಿಯ ಮತ್ಸ್ಯ ಕೂರ್ಮಾದಿ ರೂಪಗಳಂತೆ ಅವುಗಳೂ ಸಹ ಪರಿಪೂರ್ಣ ಲಕ್ಷ್ಮೀರೂಪಗಳೇ ಆಗಿದ್ದು ಅವೆಲ್ಲ ಒಂದೇ ತೆರನಾದುವು.

೩) ಆದರೂ ಸತ್ಯಭಾಮಾದೇವಿ ಹಾಗೆ ಮುನಿಸಿಕೊಂಡಂತೆ ನಟಿಸಿದ್ದು ಸ್ತ್ರೀಯರಿಗೆ ಇರುವ ಸವತಿ ಮಾತ್ಸರ್ಯ ಮುಂತಾದ ಗುಣಗಳನ್ನು ವಿಡಂಬನೆ ಮಾಡಲೆಂದು ಮಾತ್ರ ಎಂಬ ಪ್ರಮೇಯ ಇಲ್ಲಿ ನಿರೂಪಿತವಾಗಿದೆ.

ಸಾಕಂ ರುಗ್ಮಿಣ್ಯಾ ರಾಜಮಧ್ಯೇ ಪ್ರವೇಶಾತ್
ಸ್ತವಾದೃಷೇಃ ಪುಷ್ಪದಾನಾಚ್ಚ ದೇವೀಮ್ ।
ಕೋಪಾನನಂ ದರ್ಶಯಂತೀಮುವಾಚ
ವಿಡಂಬನಾರ್ಥಂ ಕಾಮಿಜನಸ್ಯ ಕೃಷ್ಣಃ ॥ ೮೪ ॥

---

೮೩. ಏಕಸಂವಿತ್ ಅಭಿನ್ನಸಂವಿತ್ ... । –(ಜ.)

ಅ: ರುಗ್ಮಿಣಿಯೊಂದಿಗೆ ರಾಜರ ಮಧ್ಯದಲ್ಲಿ ಪ್ರವೇಶಿಸಿದ್ದು ಅಲ್ಲಿ ನಾರದ ಋಷಿಗಳು ಬಂದು ರುಗ್ಮಿಣಿಯನ್ನು ಸ್ತುತಿಸಿದ್ದು ಮತ್ತು ಅವಳಿಗೆ ಪಾರಿಜಾತ ಕುಸುಮವನ್ನು ನೀಡಿದ್ದು - ಈ ಕಾರಣಗಳಿಂದಾಗಿ ಸತ್ಯಭಾಮಾದೇವಿ ಕೆರಳಿದಂತೆ ಮುಖ ತೋರಿಸಿದಳು. ಕಾಮಿಜನರನ್ನು ಅನುಸರಿಸಲೆಂದು ಶ್ರೀಕೃಷ್ಣ ಅವಳಿಗೆ ನುಡಿದ.

ವಿ: ೧) ರುಗ್ಮಿಣಿಗೆ ವಿಶೇಷಪ್ರಾಶಸ್ತ್ಯ ದೊರೆತದ್ದನ್ನು ಸಹಿಸಲಿಲ್ಲವೆಂಬಂತೆ ಸತ್ಯಭಾವಾದೇವಿ ತೋರಿಸಿಕೊಂಡಳು ಎಂದರ್ಥ :

ಯತ್ಪಾರಿಜಾತಕುಸುಮಂ ದತ್ತವಾನ್ನಾರದಸ್ತವ ।
ತತ್ಕಿಲೇಷ್ಟಜನೇ ದತ್ತಂ ತ್ವಯಾऽಹಂ ಪರಿವರ್ಜಿತಾ ॥ – ಹರಿವಂಶ (೨/೬೭/೮)

೨) ಶ್ರೀಕೃಷ್ಣನೂ ಸಹ ಸಾಮಾನ್ಯ ಕಾಮುಕಜನರಂತೆ ಹೆಂಡತಿಯನ್ನು ಮೆಚ್ಚಿಸಲೆಂದು ಅವಳನ್ನು ಸಮಾಧಾನಪಡಿಸತೊಡಗಿದಂತೆ ನಟಿಸಿದ.

ನರಕಾಸುರ ವಧೆಗೆ ಇಂದ್ರನ ಪ್ರಾರ್ಥನೆ

ದಾತಾऽಸ್ಮ್ಯಹಂ ಪಾರಿಜಾತಂ ತರುಂ ತ
ಇತ್ಯೇವ ತತ್ರಾಗಮದ್ವಾಸವೋऽಪಿ ।
ಸರ್ವೈರ್ದೇವೈರ್ಭೌಮಜಿತೋऽಪ್ಯದಿತ್ಯಾ-
ಸ್ತೇನೈವಾಥೋ ಕುಂಡಲಾಭ್ಯಾಂ ಹೃತಾಭ್ಯಾಮ್ ॥ ೮೫ ॥

ಅ: ನಿನಗೆ ನಾನು ಪಾರಿಜಾತ ವೃಕ್ಷವನ್ನೇ ನೀಡುವೆ ಎಂದು ಶ್ರೀಕೃಷ್ಣ ಹೇಳಿದ. ಆ ವೇಳೆಗೆ ಅಲ್ಲಿಗೆ ಇಂದ್ರನೂ ಆಗಮಿಸಿದ. ಅವನು ಸಕಲ ದೇವತೆಗಳೊಂದಿಗೆ ನರಕಾಸುರನಿಂದ ಸೋತಿದ್ದ. ಅಲ್ಲದೆ ಅವನ ತಾಯಿಯಾದ ಅದಿತಿಯ ಕುಂಡಲಗಳನ್ನು ನರಕಾಸುರ ಅಪಹರಿಸಿದ್ದ.

ವಿ: ಶ್ರೀಕೃಷ್ಣ ಇಲ್ಲಿ ಪಾರಿಜಾತ ವೃಕ್ಷವನ್ನು ನಿನಗೆ ಕೊಡುವೆ ಎಂದು ಮಾತ್ರ ಹೇಳದೇ ನಾನು ಕೊಡುವೆ ಎನ್ನುವ ಮೂಲಕ ರುಗ್ಮಿಣಿಗಿತ್ತ ಪಾರಿಜಾತ ಪುಷ್ಪ ನಾರದಮುನಿ ನೀಡಿದ್ದು ನಿನಗೆ ನಾನೇ

---

೮೫. ಕುಂಡಲಾಭ್ಯಾಂ ಹೃತಾಭ್ಯಾಮಿತ್ಯತ್ರ ಕುಂಡಲಾಭ್ಯಾಂ ಹೃತಾಭ್ಯಾಂ ಸದ್ಭ್ಯಾಮಿತ್ಯರ್ಥಃ ತೇನ ನುನ್ನಾ ಇತ್ಯತ್ರ ತೇನ ''ನುದ ವ್ಯಥನ'' ಇತಿ ಧಾತೋಃ ನುನ್ನಾಃ= ವ್ಯಥಿತಾ ಇತ್ಯರ್ಥಃ ॥ – (ವಾ.)

೮೫. ದಾತಾಸ್ಮೀತ್ಯುತ್ತಮಪುರುಷ ಪ್ರಯೋಗಾದಹಮಿತಿ ಸಿದ್ಧಾವಪಿ ರುಕ್ಮಿಣ್ಯಾ ಋಷಿರದಾತ್ । ತುಭ್ಯಂ ತ್ವಹಮಿತಿ ವಿಶೇಷಂ ಸ್ಫೋರಯನ್ ಪುನರಹಮಿತ್ಯಾಹ । – (ತಾ.)

ಪಾರಿಜಾತ ವೃಕ್ಷವನ್ನೇ ನೀಡುವೆ ಎನ್ನುವ ಮೂಲಕ ರುಗ್ಮಿಣಿಗಿಂತ ಅವಳೇ ಪ್ರಿಯಳು ಎಂದು ನಂಬಿಸುವವನಂತೆ ಮಾತನಾಡಿದ ಎಂಬುದನ್ನೂ *ಗಮನಿಸಬೇಕು.

ಪ್ರಾಗ್ಜ್ಯೋತಿಷಕ್ಕೆ ಶ್ರೀಕೃಷ್ಣನ ಪ್ರಯಾಣ

ತದೈವಾಗುರ್ಮುನಯಸ್ತೇನ ನುನ್ನಾ
ಬದರ್ಯಾಸ್ತೇ ಸರ್ವ ಏವಾಶು ಕೃಷ್ಣಮ್ ।
ಯಯಾಚಿರೇ ಭೌಮವಧಾಯ ನತ್ವಾ
ಸ್ತುತ್ವಾ ಸ್ತೋತ್ರೈರ್ವೈದಿಕೈಸ್ತಾಂತ್ರಿಕೈಶ್ಚ ॥ ೮೬ ॥

ಅ: ಅದೇ ವೇಳೆಗೆ ನರಕಾಸುರನಿಂದ ಪೀಡಿತರಾದ ಮುನಿಗಳು ಇಂದ್ರನ ಪ್ರೇರೇಪಣೆಯಿಂದ ಬದರಿಯಿಂದ ಅಲ್ಲಿಗೆ ಆಗಮಿಸಿದರು. ಎಲ್ಲರೂ ಶ್ರೀಕೃಷ್ಣನ ಬಳಿಬಂದು ವೈದಿಕ ಹಾಗೂ ತಾಂತ್ರಿಕಸ್ತೋತ್ರಗಳಿಂದ ಸ್ತುತಿಸಿ ನರಕಾಸುರನ ವಧೆಗೆ ಪ್ರಾರ್ಥಿಸಿಕೊಂಡರು.

ವಿ: ೧) ನರಕ ಪೀಡಿತರಾದ ಮುನಿಗಳನ್ನು ಇಂದ್ರ ತಾನು ಅಲ್ಲಿ ಸೇರುವ ವೇಳೆಗೆ ನೀವು ಬನ್ನಿರಿ ಎಂದು ಆ ಮುನಿಗಳಿಗೆ ಹೇಳಿದ್ದರಿಂದ ಅವರೂ ಅದೇ ಸಮಯಕ್ಕೆ ಆಗಮಿಸಿದರು ಎಂದರ್ಥ.

೨) ಅವರು ಸ್ತೋತ್ರ ಮಾಡಿದ್ದೂ ಸಹ ವೇದೋಕ್ತವಾದ, ಪುರಾಣೋಕ್ತವಾದ ಸ್ತುತಿಗಳಿಂದಲೇ ಎಂಬುದು ಮತ್ತೊಂದು ಗಮನಾರ್ಹ ಅಂಶ. ಶಾಸ್ತ್ರೋಕ್ತವಾದ ಸ್ತೋತ್ರಗಳಿಂದ

---

* ಅಭಿಮಾನವತೀಂ ದೇವಃ ಸಾಂತ್ವಪೂರ್ವಮಥಾಬ್ರವೀತ್ ॥
ಮೈವಂ ಪದ್ಮಪಲಾಶಾಕ್ಷಿ ಪ್ರಾಣೇಶ್ವರ ವದ ಪ್ರಿಯೇ ।
ಕಿಮತ್ರ ಬಹುನೋಕ್ತೇನ ತ್ವದೀಯಮವಗಚ್ಛ ಮಾಮ್ ॥
ತತ್ಪಾರಿಜಾತಕುಸುಮಂ ತಸ್ಯಾ ದೇವಿ ಮಮಾಗ್ರತಃ ।
ನಾರದೋ ಮತ್ಕ್ರಿಯಂ ಕುರ್ವನ್ ಮುನಿರಾಕ್ಲಿಷ್ಟಕರ್ಮಕೃತ್ ॥
ದಾಕ್ಷಿಣ್ಯಾದಾನುರೋಧಾಚ್ಚ ದತ್ತವಾನ್ ನಾತ್ರ ಸಂಶಯಃ ।
ಪ್ರಸೀದೈಕಾಪರಾಧಂ ಮೇ ಮರ್ಷಯಸ್ವ ಶುಚಿಸ್ಮಿತೇ ॥
ಪಾರಿಜಾತಕಪುಷ್ಪಾಣಿ ಯದೀಚ್ಛಸ್ಯತಿಕೋಪನೇ ।
ತದಾ ದಾತಾಸ್ಮಿ ಸುಶ್ರೋಣಿ ಸತ್ಯಮೇತದ್ಬ್ರವೀಮಿ ತಮ್ ॥
ಸ್ವರ್ಗಾತ್ಸದಾದಾನಯಿತ್ವಾ ಪಾರಿಜಾತಂ ದ್ರುಮೇಶ್ವರಮ್ ।
ಗೃಹೇ ತೇ ಸ್ಥಾಪಯಿಷ್ಯಾಮಿ ಯಾವತ್ಕಾಲಂ ತ್ವಮಿಚ್ಛಸಿ ॥ – ಹರಿವಂಶ(೨/೬೭/೨೭-೩೨)

ಸ್ತುತಿಸಿದಾಗ ಭಗವಂತ ವಿಶೇಷವಾಗಿ ಅನುಗ್ರಹಿಸುವನು ಎಂಬುದಕ್ಕೆ ಇದು ಸೂಚಕ : 'ಉನ್ನತಪ್ರಾರ್ಥಿತಾಶೇಷಸಂಸಾಧಕಂ'(ದ್ವಾದಶಸ್ತೋತ್ರ).

ಇಂದ್ರೇಣ ದೇವೈಃ ಸಹಿತೇನ ಯಾಚಿತೋ
ವಿಪ್ರೈಶ್ಚ ಸಸ್ಮಾರ ವಿಹಂಗರಾಜಮ್ ।
ಆಗಮ್ಯ ನತ್ವಾ ಪುರತಃ ಸ್ಥಿತಂ ತಮಾ-
ರುಹ್ಯ ಸತ್ಯಾಸಹಿತೋ ಯಯೌ ಹರಿಃ ॥ ೮೭ ॥

ಅ: ದೇವತೆಗಳಿಂದ ಕೂಡಿದ ಇಂದ್ರನಿಂದಲೂ ಮುನಿಗಳಿಂದಲೂ ಪ್ರಾರ್ಥಿತನಾದ ಶ್ರೀಕೃಷ್ಣ ಪಕ್ಷಿರಾಜನಾದ ಗರುಡನನ್ನು ಸ್ಮರಿಸಿದ. ಒಡನೆಯೇ ಅವನು ಬಂದು ಅವನ ಮುಂದೆ ನಿಂತ. ಅವನ ಮೇಲೇರಿ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ತೆರಳಿದ.

ವಿ: ದೇವತೆಗಳು ದೇವಲೋಕದವರು, ಮುನಿಗಳು ಭೂಲೋಕದವರು – ಹೀಗೆ ಉಭಯ ಲೋಕದ ಜನರೂ ನರಕಾಸುರನಿಂದ ಪೀಡಿತರಾದವರೇ. ಅವರೆಲ್ಲರ ಪ್ರಾರ್ಥನೆಯಂತೆ ಶ್ರೀಕೃಷ್ಣ ನರಕಾಸುರ ವಧೆಗೆಂದು ತೆರಳಿದ ಎಂದರ್ಥ.

ಸತ್ಯಭಾಮೆಯಿಂದ ಭೀಮದ್ವಾದಶೀವ್ರತ

ನಿತ್ಯೈವ ಯಾ ಪ್ರಕೃತಿಃ ಸ್ವೇಚ್ಛಯೈವ
ಜಗಚ್ಛಿಕ್ಷಾರ್ಥಂ ದ್ವಾದಶೀಂ ಭೀಮಸಂಜ್ಞಾಮ್ ।
ಉಪೋಷ್ಯ ಬಭ್ರೇ ಕೋಟಿಧಾರಾಜಲಸ್ಯ
ವಿಷ್ಣೋಃ ಪ್ರೀತ್ಯರ್ಥಂ ಸೈವ ಹಿ ಸತ್ಯಭಾಮಾ ॥ ೮೮ ॥

ಅ: ಸತ್ಯಭಾಮೆಯು ನಿತ್ಯ ಪ್ರಕೃತಿಯಾದ ಮಹಾಲಕ್ಷ್ಮಿಯೇ. ಆದರೂ ಸಹ ಸ್ವೇಚ್ಛೆಯಿಂದ ಲೋಕಶಿಕ್ಷಣಕ್ಕಾಗಿ, ಹರಿಪ್ರೀತಿಗಾಗಿ ಭೀಮ ಎಂಬ ಹೆಸರಿನ ದ್ವಾದಶೀ ವ್ರತವನ್ನು ಆಚರಿಸಿ ಕೋಟಿ ಜಲಧಾರೆಗಳನ್ನು ಧರಿಸಿದಳು.

ವಿ: ೧) ಸತ್ಯಭಾಮಾದೇವಿ ಹಾಗೆ ತೆರಳುವ ಮುನ್ನ ಭೀಮದ್ವಾದಶೀ ವ್ರತವನ್ನು ಆಚರಿಸಿ ವ್ರತಾಂಗವಾಗಿ ಕೋಟಿ ಜಲಧಾರೆಗಳನ್ನು ಧರಿಸಿದಳು ಎಂದರ್ಥ.

೨) ಮಾಘ ಶುದ್ಧ ದ್ವಾದಶೀ ಭೀಮ ದ್ವಾದಶಿಯೆಂದು ಪ್ರಸಿದ್ಧ. ಮತ್ಸ್ಯಪುರಾಣ ಹಾಗೆ ಉಲ್ಲೇಖಿಸಿದೆ.

೩) ಮಾಘ ಶುದ್ಧ ಏಕಾದಶಿಯಂದು ಉಪೋಷಣ ಮಾಡಿ ಅಂದು ರಾತ್ರಿಯಲ್ಲಿ ಕೃಷ್ಣಾಜಿನದ ಮೇಳೆ ಕುಳಿತು ರಾತ್ರಿಯಿಡೀ ಉದ್ದಿನ ಕಾಳಿನಷ್ಟು ಗಾತ್ರದ ರಂಧ್ರಗಳನ್ನು ಹೊಂದಿದ ಕಲಶಗಳಿಂದ ಅಖಂಡ ಜಲಧಾರೆಯನ್ನು ತಲೆಯ ಮೇಲೆ ಸುರಿಸಿಕೊಳ್ಳಬೇಕು. ಶ್ರೀಹರಿಯ ಮೇಲೂ ಅದೇ ರೀತಿ ಕ್ಷೀರಧಾರೆಯನ್ನು ಸುರಿಸಬೇಕು. ಮಾರನೆಯ ದಿನ ಕೇವಲ ಕ್ಷೀರಪಾನ ಮಾಡಿ ಪಾರಣೆ ಮಾಡಬೇಕು ಎಂಬ ವಿವರವೂ ಮತ್ಸ್ಯಪುರಾಣದಲ್ಲಿದೆ.

೪) ಭೀಮಸೇನ ಮಾಡಿದ್ದ ವ್ರತವಾದ್ದರಿಂದ ಭೀಮ ದ್ವಾದಶೀ ವ್ರತ ಎಂಬ ಹೆಸರು ಇದಕ್ಕೆ ಬಂದಿತು ಎಂಬ ವಿವರ ಬೃಹನ್ನಾರದೀಯಪುರಾಣದಲ್ಲಿದೆ.

---

೮೮. ರಾತ್ರೌ ಜಲಸ್ಯ ಸಚ್ಛಿದ್ರಕಲಶಸ್ಥ ಜಲಸ್ಯ ಕೋಟಿಧಾರಾಃ ಬಭ್ರೇ ಕೋಟಿಸಂಖ್ಯಾಕಧಾರಾಭಿಃ ಸಸ್ನಾವಿತ್ಯರ್ಥಃ । ಭೀಮದ್ವಾದಶೀ ತು ಮತ್ಸ್ಯಪುರಾಣೇऽಭಿಹಿತಾ । 'ಸಹೈವ ಪುಂಡರೀಕಾಕ್ಷ ದ್ವಾದಶ್ಯಾಂ ಕ್ಷೀರಭೋಜನಮ್ । ಕರಿಷ್ಯಾಮಿ ಮಿತಾತ್ಮಾऽಹಂ ನಿರ್ವಿಘ್ನೇನಾಸ್ತು ಮೇ ವ್ರತಮಿ'ತಿ ತಥಾ ತತ್ರೈವ 'ಪ್ರಣಮ್ಯ ಕಲಶಂ ತತ್ರ ಮಾಷಮಾತ್ರೇಣ ಸಂಯುತಮ್ । ಛಿದ್ರೇಣ ಜಲಸಂಪೂರ್ಣಮಥ ಕೃಷ್ಣಾಜನಸ್ಥಿತಃ । ತಸ್ಯ ಧಾರಾಂ ಚ ಶಿರಸಿ ಧಾರಯೇತ್ ಸಕಲಾಂ ನಿಶಿ । ಧಾರಾಭಿರ್ಭೂರಿಭಿಶ್ಚೈವ ಫಲಂ ವೇದವಿದೋ ವಿದುಃ । ಯಸ್ಮಾತ್ ತಸ್ಮಾತ್ ಕುರುಶ್ರೇಷ್ಠ ಧಾರಾ ಧಾರ್ಯಾ ನು ಶಕ್ತಿತಃ' ಇತಿ ॥ – (ಜ.)

೮೮. ಭೀಮನಾಮಾ ಮಹಾಬಾಹುಃ ಕೌರವಾಣಾಂ ಯಶಸ್ಕರಃ।
ತಿದರೇಣಾಗ್ನಿನಾ ಕರ್ತುಂ ಉಪವಾಸಂ ತಥಾ ಕ್ಷಮಃ ॥
ಸೋऽಪಿ ಚೈತಾಂ ಮಹಾಪುಣ್ಯಾಂ ಉಪೋಷ್ಯತಿ ಮಹಾಫಲಾಮ್ ।
ತತಃ ಪ್ರಭೃತಿ ಭೀಮಸ್ಯ ನಾಮ್ನಾ ಖ್ಯಾತಾ ಭವಿಷ್ಯತಿ॥ ಇತಿ ನಾರದೀಯೇ । – (ಮ.)

೮೮ ದ್ವಾದಶೀಮಿತ್ಯೇಕಾದಶೀಮಿತ್ಯರ್ಥಃ । ದ್ವಾದಶೀಂ ಪ್ರತ್ಯೇಕಾದಶೀಮುಪೋಷ್ಯೇತಿ ವಾ । – (ತಾ.)

೮೮. ಸ್ವೇಚ್ಛಯೇತ್ಯಸ್ಯ ಸ್ವಸ್ಯ ತಂತ್ರಸ್ಯ ಕೃಷ್ಣಸ್ಯೇಚ್ಛಯೇತ್ಯರ್ಥಃ । – (ಸ.)

೮೮. ದ್ವಾದಶೀಂ ಭೀಮಸಂಜ್ಞಾಮಿತ್ಯತ್ರ ಮಾಘಶುದ್ಧದ್ವಾದಶೀ ದಶಮೀವೇಧೇ ದ್ವಾದಶ್ಯಾಮುಪವಾಸಃ । ಭೀಮೇನೋಪೋಷಿತತ್ವಾದ್ಭೀಮಸಂಜ್ಞಾಮ್ –

ಸಹೈವ ಪುಂಡರೀಕಾಕ್ಷ ದ್ವಾದಶ್ಯಾಂ ಕ್ಷೀರಭೋಜನಮ್ ।
ಕರಿಷ್ಯಾಮಿ ಯತಾತ್ಮಾऽಹಂ ನಿರ್ವಿಘ್ನೇನಾಸ್ತುಮೇ ವ್ರತಮ್ ॥ ಇತಿ ಮಾತ್ಸ್ಯೇ ॥

ಪ್ರಣಮ್ಯ ಕಲಶಂ ತತ್ರ ಮಾಷಮಾತ್ರೇಣ ಸಂಯುತಮ್ ।
ಛಿದ್ರೇಣ ಜಲಸಂಪೂರ್ವಂ ಮಧು ಕೃಷ್ಣಾಜನಾಸ್ಥಿತಮ್ ।
ತಸ್ಯ ಧಾರಾಂ ಚ ಶಿರಸಿ ಧಾರಯೇತ್ ಸಕಲಾಂ ನಿಶಿ ।
ಧಾರಾಭಿರ್ಭೂರಿಭಿಶ್ಚೈವ ಫಲಂ ವೇದವಿದೋ ವಿದುಃ ।
ಯಸ್ಮಾತ್ ಕಸ್ಮಾತ್ ಕುರುಶ್ರೇಷ್ಠ ಧಾರಾ ಧಾರ್ಯಾ ನು ಶಕ್ತಿತಃ ॥ ಇತಿ ಮಾತ್ಸ್ಯೇ । – (ರಾ.)

ತಯಾ ಯುಕ್ತೋ ಗರುಡಸ್ಕಂಧಸಂಸ್ಥೋ
ದೂರಾನುಯಾತೋ ವಜ್ರಭೃತಾऽಪ್ಯನುಜ್ಞಾಮ್ ।
ದತ್ತ್ವಾऽಮುಷ್ಮೈ ಪ್ರಯಯೌ ವಾಯುಜುಷ್ಟಾ-
ಮಾಶಾಂ ಕೃಷ್ಣೋ ಭೌಮವಧೇ ಧೃತಾತ್ಮಾ ॥ ೮೯ ॥

ಅ: ಸತ್ಯಭಾಮೆಯೊಂದಿಗೆ ಕೂಡಿ ಶ್ರೀಕೃಷ್ಣ ಗರುಡನ ಹೆಗಲನ್ನೇರಿ ತೆರಳಿದ. ಅವನನ್ನು ಬಹುದೂರದವರೆಗೆ ಅನುಸರಿಸಿದ ಇಂದ್ರ ಅವನಿಂದ ಅನುಜ್ಞೆಪಡೆದು ತೆರಳಿದ. ಕೃಷ್ಣ ನರಕಾಸುರನನ್ನು ಕೊಲ್ಲಲು ಮನಸ್ಸಿನಲ್ಲಿ ನಿಶ್ಚಯಿಸಿ ವಾಯವ್ಯ ದಿಕ್ಕಿನತ್ತ ಸಾಗಿದ.

ನರಕಾಸುರನಿಗೆ ಬ್ರಹ್ಮವರ

ಭೌಮೋ ಹ್ಯಾಸೀದ್ಬ್ರಹ್ಮವರಾದವಧ್ಯೋ
ನ ಶಸ್ತ್ರಭೃಜ್ಜೀಯಸ ಇತ್ಯಮುಷ್ಮೈ ।
ದತ್ತೋ ವರೋ ಬ್ರಹ್ಮಣಾ ತದ್ವದೇವ
ತಸ್ಯಾಮಾತ್ಯಾನಾಂ ತದ್ವದವಧ್ಯತಾ ಚ ॥ ೯೦ ॥

ಅ: ನರಕಾಸುರ ಬ್ರಹ್ಮ ವರದಿಂದಾಗಿ ಅವಧ್ಯನಾಗಿದ್ದ. ಶಸ್ತ್ರ ಹಿಡಿದ ನಿನಗೆ ಸೋಲಿಲ್ಲ ಎಂಬುದಾಗಿ ಬ್ರಹ್ಮ ಅವನಿಗೆ ವರ ನೀಡಿದ್ದ. ಅದರಂತೆ ಅವನ ಮಂತ್ರಿಗಳಿಗೂ ಸಹ ಅದೇ ರೀತಿಯ ವರವೂ, ಅದರಂತೆ ಅವಧ್ಯತ್ವವೂ ಬ್ರಹ್ಮನಿಂದ ನೀಡಲ್ಪಟ್ಟಿದ್ದಿತು.

---

೮೮. ಕೋಟಿಧಾರಾಜಲಲಕ್ಷಣಂ ಪ್ರಕಾರಾಂತರೇಣೋಕ್ತಂ ಹರಿವಂಶೇ (೨/೭೮/೧೯-೨೨)–

'ಸ್ನಾತ್ವಾ ಸ್ತ್ರೀ ಪ್ರಾತರುತ್ಥಾಯ ಪತಿಂ ವಿಜ್ಞಾಪಯೇತ್ ಸತೀ ।
ಶ್ವಶುರಾಭ್ಯಾಂ ಚ ಚರಣೌ ಸತತಂ ಸತ್ತಮಸ್ಯ ಚ ।
ಗೃಹೀತ್ವೌದುಂಬರಂ ಪಾತ್ರಂ ಸಕುಶಂ ಸಾಕ್ಷತಂ ತಥಾ ।
ಗೋಶೃಂಗಂ ದಕ್ಷಿಣಂ ಸಿಚ್ಯ ಪ್ರತಿಗೃಹ್ಣೀತ ತಜ್ಜಲಮ್ ।
ತತೋ ಭರ್ತುಃ ಸತೀ ದದ್ಯಾತ್ ಸ್ನಾತಸ್ಯ ಪ್ರಯತಸ್ಯ ಚ ।
ಆತ್ಮನೋऽಥ ನಿಷೇಕ್ತವ್ಯಂ ತತಃ ಶಿರಸಿ ತಜ್ಜಲಮ್ ।
ಕೋಟಿಧಾರಾಜಲಮಿದಂ ಸರ್ವತೀರ್ಥಾಧಿಕಂ ಮತಮ್ ।
ತ್ರೈಲೋಕ್ಯಸರ್ವತೀರ್ಥೇಷು ಸ್ನಾನಮೇತದುದಾಹೃತಮ್ ॥ ಇತ್ಯಾದಿ ॥ –(ರಾ.)

೮೮ 'ಕೋಟಿಧಾರಾ ಬಭ್ರೇ' ಇತ್ಯೇತತ್ ಕೋಟಿಧಾರಾಖ್ಯೇ ತೀರ್ಥೇ ಸಸ್ನಾವಿತಿ ಸರ್ವೇऽಪಿ ಪ್ರತಿಪನ್ನಾಃ । ಸಂಪ್ರದಾಯಸ್ತು ವ್ರತಸಮಾಪ್ತ್ಯನಂತರಂ ಏಕಂ ಘಟಂ ಜಲೇನ ಸಂಪೂರ್ಯ ಸ್ವೇಚ್ಛಾನುಸಾರೇಣ ತಸ್ಯ ಶತಸಹಸ್ರಲಕ್ಷಾದಿಛಿದ್ರಾನ್ ಕೃತ್ವಾ ತಂ ಘಟಮುಪರಿ ನಿಬಧ್ಯ ಸ್ವಯಂ ತದಧಃಸ್ಥಿತ್ವಾ ತಾಃ ಧಾರಾಃ ಧಾರ್ಯಾಃ । **ಕಾರ್ನಾಟಕೇ ತಥೈವಾಚಾರಾತ್** । ಯೇಷಾಂ ತು ಕೋಟಿಸಂಖ್ಯಾಕಾ ಧಾರಾ ಬಭ್ರ ಇತ್ಯರ್ಥಃ । **ಇತಿ ವ್ಯಾಸತೀರ್ಥೀಯೇ ವ್ಯಾಖ್ಯಾತಮ್** ॥ –(ಚ.)

ಎ: ನರಕಾಸುರನಿಗೂ ಅವನ ಮಂತ್ರಿಗಳಿಗೂ ಕೈಯಲ್ಲಿ ಶಸ್ತ್ರ ಇರುವವರೆಗೂ ಸೋಲಿಲ್ಲ ಸಾವೂ ಇಲ್ಲ ಎಂಬ ವರ ಬ್ರಹ್ಮದೇವರಿಂದ ಲಭಿಸಿದ್ದವು ಎಂದರ್ಥ.

ನರಕಾಸುರನ ಮಂತ್ರಿಗಳಿಗೂ ವರ

ಭೌಮೇನ ಜೇಯತ್ವಮಪಿ ಹ್ಯಮೀಷಾಂ
ದತ್ತಂ ಭೌಮಾಯ ಬ್ರಹ್ಮಣಾ ಕ್ರೋಡರೂಪಾತ್ ।
ವಿಷ್ಣೋರ್ಜಾತಾಯಾಸ್ಯ ದುರ್ಗಂ ಚ ದತ್ತಂ
ಪ್ರಾಗ್ಜ್ಯೋತಿಷಂ ನಾಮ ಪುರಂ ಸಮಸ್ತೈಃ ॥ ೯೦ ॥

ಅ: ನರಕಾಸುರ ಮಾತ್ರ ಅವರನ್ನು ಗೆಲ್ಲಬೇಕೆಂಬ ವರವನ್ನು ಬ್ರಹ್ಮ ನರಕಾಸುರನಿಗೆ ನೀಡಿದ್ದ. ವರಾಹ ರೂಪದ ಮಹಾವಿಷ್ಣುವಿನಿಂದ ಭೂಮಿಯಲ್ಲಿ ಜನಿಸಿದ್ದ ನರಕಾಸುರನಿಗೆ ಪ್ರಾಗ್ಜ್ಯೋತಿಷ ಎಂಬ ದುರ್ಗಮವಾದ ಪಟ್ಟಣವೂ ಸಹ ಬ್ರಹ್ಮದೇವರಿಂದ ನೀಡಲ್ಪಟ್ಟಿತು.

ಎ: ೧) ಎಲ್ಲರಿಗೂ ಎಂದೇ ರೀತಿಯ ವರವಿದ್ದರೂ ನರಕಾಸುರನಿಗೆ ಅವನ ಮಂತ್ರಿಗಳನ್ನೂ ಗೆಲ್ಲುವ ವಿಶೇಷ ವರವಿದ್ದುದರಿಂದ ಅವರೆಲ್ಲಾ ಅವಧ್ಯರಾಗಿದ್ದರೂ ಅವನ ಅನುಯಾಯಿ–ಗಳಾಗಿದ್ದರು ಎಂದು ತಿಳಿಯಬೇಕು.

೨) ನರಕಾಸುರ ವರಾಹರೂಪ ಶ್ರೀಹರಿಯ ಪುತ್ರ. ಭೂದೇವಿಯಲ್ಲಿ ಜನಿಸಿದವನು. ಅವನ ವಾಸಸ್ಥಾನ ಪ್ರಾಗ್ಜ್ಯೋತಿಷ ಎಂಬ ಗುಡ್ಡಕಾಡುಗಳ ದುರ್ಗಮ ಪ್ರದೇಶ. ಅದನ್ನು ಅವನಿಗೆ ನೀಡಿದವರೂ ಬ್ರಹ್ಮದೇವರೇ.

ನರಕಾಸುರನ ದುರ್ಗಗಳು

ಆಸೀದ್ಬಾಹ್ಯೇ ಗಿರಿದುರ್ಗಂ ತದಂತಃ
ಪಾನೀಯದುರ್ಗಂ ಮೌರವಂ ಪಾಶದುರ್ಗಮ್।
ತಸ್ಯಾಪ್ಯಂತಃ ಕ್ಷುರಧಾರೋಪಮಂ ತ–
ತ್ಪಾಶಾಶ್ಚ ತೇ ಷಟ್‌ಸಹಸ್ರಾಃ ಸುಘೋರಾಃ ।
ಅಭೇದ್ಯತ್ವಮರಿಭಿರತಾರ್ಯತಾ ಚ
ದತ್ತಾ ದುರ್ಗಾಣಾಂ ಬ್ರಹ್ಮಣಾऽऽರಾಧಿತೇನ ॥ ೯೨ ॥

---

೯೧. ಪುರಂ ಸಮಸ್ತೈರಿತ್ಯತ್ರ ''ಪೃ ಪಾಲನಪೂರಣಯೋ'' ರಿತಿ ಧಾತೋಃ ಸಮಸ್ತೈಃ= ಭಾಗ್ಯೈಃ ಪುರಂ= ಪೂರ್ಣಮಿತ್ಯರ್ಥಃ ॥ –(ವಾ.)

ಅ: ಎಲ್ಲದಕ್ಕಿಂತ ಹೊರಗೆ ಆ ಪಟ್ಟಣಕ್ಕೆ ಪರ್ವತ ದುರ್ಗವಿದ್ದಿತು, ಅದರೊಳಗೆ ಜಲದುರ್ಗ, ಅದರೊಳಗೆ ಮುರ ಎಂಬವನಿಂದ ನಿರ್ಮಿತವಾದ ಪಾಶದುರ್ಗ, ಅದರಲ್ಲಿ ಕತ್ತಿಯ ಅಲಗಿನಂತಹ ಅತ್ಯಂತ ಭಯಂಕರವಾದ ಆರುಸಾವಿರ ಪಾಶಗಳು ಇದ್ದವು. ಆ ದುರ್ಗಗಳಿಗೆಲ್ಲ ಅವನಿಂದಾರಾಧಿತನಾದ ಬ್ರಹ್ಮ ಅಭೇದ್ಯತ್ವ ಹಾಗೂ ಅತಾರ್ಯತ್ವ ಎಂಬ ವರಗಳನ್ನು ನೀಡಿದ್ದ.

ವಿ: ಆ ಎಲ್ಲ ದುರ್ಗಗಳೂ ಅಷ್ಟು ಭಯಂಕರವಾಗಿದ್ದಂತೆ ಬ್ರಹ್ಮ ವರದಿಂದಾಗಿ ಅಭೇದ್ಯವೂ, ದಾಟಲು ಅಸಾಧ್ಯವೂ ಆಗಿದ್ದವು ಎಂದರ್ಥ.

ನರಕಾಸುರನ ಮಂತ್ರಿಗಳು

ತಸ್ಯಾಮಾತ್ಯಾಃ ಪೀಠಮುರೌ ನಿಶುಂಭ-
ಹಯಗ್ರೀವೌ ಪಂಚಜನಶ್ಚ ಶೂರಾಃ ।
ಸಂಕಲ್ಪ್ಯ ತಾನ್ ಲೋಕಪಾಲಾನಹಂ ಚ
ಬ್ರಹ್ಮೇತ್ಯದ್ಧಾ ಭಾಷಮಾಣಃ ಸ ಆಸ್ತೇ ॥ ೯೩ ॥

ಅ: ಅವನಿಗೆ ಪೀಠ, ಮುರ, ನಿಶುಂಭ, ಹಯಗ್ರೀವ ಮತ್ತು ಪಂಚಜನ ಎಂಬ ಶೂರ ಮಂತ್ರಿಗಳಿದ್ದರು. ಅವರನ್ನು ಲೋಕಪಾಲಕರೆಂದು ಸಂಕಲ್ಪಿಸಿ ಆ ನರಕಾಸುರ ತನ್ನನ್ನು ಬ್ರಹ್ಮ ಎಂಬುದಾಗಿಯೇ ಕರೆದುಕೊಳ್ಳುತ್ತಾ ಇದ್ದ.

ವಿ: ಆ ಐದು ಜನ ಅವನ ಪಾಲಿಗೆ ಲೋಕಪಾಲಕರು, ಅವನೇ ಅವರಿಗೆಲ್ಲ ಒಡೆಯನಾದ ಬ್ರಹ್ಮ; ಹೀಗೆ ಒಂದರ್ಥದಲ್ಲಿ 'ಅಹಂ ಬ್ರಹ್ಮಾಸ್ಮಿ' ಎಂಬ ಚಿಂತನೆಯನ್ನೇ ನರಕಾಸುರ ಮಾಡುತ್ತಿದ್ದ ಎಂದರ್ಥ.

ಶ್ರೀಕೃಷ್ಣನಿಂದ ಗಿರಿದುರ್ಗದ ಭೇದ

ಹಂತುಂ ಕೃಷ್ಣೋ ನರಕಂ ತತ್ರ ಗತ್ವಾ
ಗಿರಿಂ ದುರ್ಗಂ ಗದಯಾ ನಿರ್ಬಿಭೇದ ।
ವಾಯವ್ಯಾಸ್ತ್ರೇಣೋದಕಂ ಶೋಷಯಿತ್ವಾ
ಚಕರ್ತ ಖಡ್ಗೇನ ಮುರಸ್ಯ ಪಾಶಾನ್ ॥ ೯೪ ॥

---

೯೨. ಮೌರವಂ= ಮುರನಾಮಕದೈತ್ಯೇನ ಕೃತಮ್ ॥ –(ವಾ.)

೯೩. ದತ್ತಾ ದುರ್ಗಾಣಾಮಿತ್ಯತ್ರ ದುರ್ಗಾಣಾಂ = ದುರ್ಗಮತ್ವಾತ್ ದುರ್ಗಪದವಾಚ್ಯಾನಾಂ ಗಿರಿಸಲಿಲಮುರ-ಪಾಶಾನಾಮಿತ್ಯರ್ಥಃ ॥ –(ವಾ.)

ಅ: ನರಕಾಸುರನನ್ನು ಕೊಲ್ಲಲೆಂದು ಶ್ರೀಕೃಷ್ಣ ಅಲ್ಲಿಗೆ ತೆರಳಿ ಅವನ ಗಿರಿದುರ್ಗವನ್ನು ಗದೆಯಿಂದ ಪುಡಿಮಾಡಿದ.ವಾಯವ್ಯಾಸ್ತ್ರದಿಂದ ಜಲದುರ್ಗವನ್ನು ಒಣಗಿಸಿದ. ಖಡ್ಗದಿಂದ ಮುರನ ಪಾಶಗಳನ್ನು ಕತ್ತರಿಸಿದ.

ವಿ: ೧) ಹೀಗೆ ನರಕಾಸುರನಿಗೆ ಮುಖ್ಯ ರಕ್ಷಣೆಯಾಗಿದ್ದ ಮೂರು ದುರ್ಗಗಳೂ ಶ್ರೀಕೃಷ್ಣನಿಂದ ನಾಶಹೊಂದಿದವು ಎಂದು ತಿಳಿಯಬೇಕು.

೨) ಬ್ರಹ್ಮನ ವರವನ್ನು ನಾಶಮಾಡಿದ ಶ್ರೀಕೃಷ್ಣ ತಾನು ಪರಬ್ರಹ್ಮ ಎಂದು ತಿಳಿಸಿದ ಎಂದು ಭಾವ.

ಮುರಾರಿಯಾದ ಕೃಷ್ಣ

ಅಥಾಭಿಪೇತುರ್ಮುರಪೀಠೌ ನಿಶುಂಭ-
ಹಯಗ್ರೀವೌ ಪಂಚಜನಶ್ಚ ದೈತ್ಯಾಃ ।
ತಾನ್ ಶೈಲಶಸ್ತ್ರಾಸ್ತ್ರಶಿಲಾಭವರ್ಷಿಣ-
ಶ್ಚಕ್ರೇ ವ್ಯಸೂಂಶ್ಚಕ್ರನಿಕೃತ್ತಕಂಧರಾನ್ ॥ ೯೫ ॥

ಅ: ಅನಂತರ ಮುರ, ಪೀಠ, ನಿಶುಂಭ, ಹಯಗ್ರೀವ ಮತ್ತು ಪಂಚಜನ ಎಂಬ ದೈತ್ಯರು ಧಾವಿಸಿ ಬಂದರು. ಬೆಟ್ಟ, ಶಸ್ತ್ರ ಅಸ್ತ್ರ ಬಂಡೆಗಳನ್ನು ಸುರಿಸಿದರು. ಅವರನ್ನು ಶ್ರೀಕೃಷ್ಣ ಚಕ್ರದಿಂದ ತಲೆ ಕತ್ತರಿಸಿ ಸಂಹರಿಸಿದ.

ವಿ: ದುರ್ಗಗಳೊಂದಿಗೆ ನರಕಾಸುರನ ಮಂತ್ರಿಗಳೂ ಸಹ ನಾಶಹೊಂದಿದರು.

ತೇಷಾಂ ಸುತಾಃ ಸಪ್ತಸಪ್ತೋರುವೀರ್ಯಾ
ವರಾದವಧ್ಯಾ ಗಿರಿಶಸ್ಯಾಭಿಪೇತುಃ ।
ತಾನಸ್ತ್ರಶಸ್ತ್ರಾಭ್ಯಮುಚಃ ಶರೋತ್ತಮೈಃ
ಸಮರ್ಪಯಾಮಾಸ ಸ ಮೃತ್ಯವೇಽಚ್ಯುತಃ ॥ ೯೬ ॥

ಅ: ಅವರ ಏಳೇಳು ಮಂದಿ ಮಕ್ಕಳೂ ಸಹ ಮಹಾಪರಾಕ್ರಮಿಗಳಾಗಿದ್ದವರು. ಶಿವನ ವರದಿಂದಾಗಿ ಅವಧ್ಯರಾಗಿದ್ದವರು. ಅವರೂ ಸಹ ಯುದ್ಧಕ್ಕೆ ಧಾವಿಸಿದರು. ಅಸ್ತ್ರ ಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಅವರನ್ನು ಶ್ರೀಕೃಷ್ಣ ಉತ್ತಮ ಬಾಣಗಳಿಂದ ಮೃತ್ಯುವಿಗೆ ನೀಡಿದ.

ವಿ: ಅವರು ಏಳೇಳು ಮಂದಿಯೆಂದರೆ ಒಬ್ಬೊಬ್ಬರಿಗೂ ಏಳೇಳು ಮಂದಿಯಂತೆ ಒಟ್ಟು ಮೂವತ್ತೈದು ಜನ ಮಂತ್ರಿಪುತ್ರರು ಎಂದರ್ಥ. ಅವರೆಲ್ಲ ಶ್ರೀಕೃಷ್ಣನಿಂದ ಹತರಾದರು.

ಹತ್ವಾ ಪಂಚತ್ರಿಂಶತೋ ಮಂತ್ರಿಪುತ್ರಾನ್
ಜಗಾಮ ಭೌಮಸ್ಯ ಸಕಾಶಮಾಶು ।
ಶ್ರುತ್ವಾ ಭೌಮಃ ಕೃಷ್ಣಮಾಯಾಂತಮಾರಾ-
ದಕ್ಷೌಹಿಣೀತ್ರಿಂಶಕೇನಾಭ್ಯಯಾತ್ ತಮ್ ॥ ೯೭ ॥

ಅ: ಮೂವತ್ತೈದು ಜನ ಮಂತ್ರಿಪುತ್ರರನ್ನು ಸಂಹರಿಸಿ ಶ್ರೀಕೃಷ್ಣ ನರಕಾಸುರನ ಬಳಿಗೆ ಬೇಗನೆ ತೆರಳಿದ. ಶ್ರೀಕೃಷ್ಣ ಬಂದದ್ದನ್ನು ಕೇಳಿ ನರಕಾಸುರ ದೂರದಿಂದಲೇ ಮೂವತ್ತು ಅಕ್ಷೌಹಿಣೀ ಸೇನೆಯೊಂದಿಗೆ ಅವನನ್ನು ಎದುರಿಸಿದ.

ಕೃಷ್ಣ ನರಕಾಸುರರ ಯುದ್ಧ

ಜಘ್ನೇ ಸೇನಾಂ ಗರುಡಃ ಪಕ್ಷಪಾತೈಃ
ಪಾದಂ ಶೇಷಂ ಕೇಶವಃ ಸಾಯಕೌಘೈಃ ।
ಅಥಾಸಸಾದಾಶು ಭೌಮೋಽಚ್ಯುತಂ ತಂ
ಮುಂಚನ್ ಬಾಣಾನಸ್ತ್ರಸಮ್ಮಂತ್ರಿತಾನ್ ದ್ರಾಕ್ ॥ ೯೮ ॥

ವಿವ್ಯಾಧ ತಂ ಕೇಶವಃ ಸಾಯಕೌಘೈ-
ರ್ಭೌಮಃ ಶತಘ್ನೀಂ ಬ್ರಹ್ಮದತ್ತಾಮಮುಂಚತ್ ॥ ೯೯ ॥

ಅ: ಆ ಸೇನೆಯ ನಾಲ್ಕನೆಯು ಒಂದು ಭಾಗವನ್ನು ಗರುಡ ತನ್ನ ರೆಕ್ಕೆಯ ಬಡಿತಗಳಿಂದ ಸಂಹರಿಸಿದ. ಉಳಿದ ಸೈನ್ಯವನ್ನು ಶ್ರೀಕೃಷ್ಣ ಬಾಣಗಳ ಪ್ರವಾಹಗಳಿಂದ ನಾಶಮಾಡಿದ. ಬಳಿಕ ನರಕಾಸುರ ಅಚ್ಯುತನಾದ ಶ್ರೀಕೃಷ್ಣನನ್ನು ಅಸ್ತ್ರಗಳಿಂದ ಮಂತ್ರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ತ್ವರೆಯಿಂದ ಎದುರಿಸಿದ (೯೮).

ಶ್ರೀಕೃಷ್ಣ ಅವನನ್ನು ಬಾಣಗಳ ಪ್ರವಾಹಗಳಿಂದ ಹೊಡೆದ. ಅವನು ಬ್ರಹ್ಮದೇವರು ನೀಡಿದ್ದ ಶತಘ್ನಿಯನ್ನು ಪ್ರಯೋಗಿಸಿದ (೯೯).

ವಿ: ೧) ಅವನು ಅಚ್ಯುತನನ್ನು ಎದುರಿಸಿದ ಎನ್ನುವ ಮೂಲಕ ಚ್ಯುತನಾಗುವುದು ಉಚಿತ ಎಂಬ ಅರ್ಥ ಸೂಚಿತವಾಗಿದೆ.

೨) ಶತಘ್ನೀ ಎಂಬುದು ಒಂದೇ ಹೊಡೆತಕ್ಕೆ ನೂರು ಜನರನ್ನು ಕೊಲ್ಲುವ ಒಂದು ಬಗೆಯ ವಿಶಿಷ್ಟ ಆಯುಧ.

೩) ಶತಘ್ನೀ ಎಂಬುದು ಗದೆಯ ಹೆಸರು ಎಂದು ಜನಾರ್ದನೀಯದಲ್ಲಿದೆ.

ಕೃಷ್ಣನ ಅಸುರಮೋಹನ

ಅಚ್ಛೇದ್ಯೋಽಭೇದ್ಯೋ ನಿತ್ಯಸಂವಿತ್ಸುಖಾತ್ಮಾ
ನಿತ್ಯಾವ್ಯಯಃ ಪೂರ್ಣಶಕ್ತಿಃ ಸ ಕೃಷ್ಣಃ ।
ನಿಗೀರ್ಯ ತಾಂ ದೇವವರಃ ಶತಘ್ನೀಂ
ನಿತ್ಯಾಶ್ರಾಂತೋಽದರ್ಶಯಚ್ಛ್ರಾಂತವಚ್ಚ ॥ ೧೦೦ ॥

ಅ: ಅಚ್ಛೇದ್ಯನೂ, ಅಭೇದ್ಯನೂ, ನಿತ್ಯ ಜ್ಞಾನಾನಂದಸ್ವರೂಪನೂ, ಸದಾ ಅವ್ಯಯನೂ , ಪರಿಪೂರ್ಣವಾದ ಶಕ್ತಿಯುಳ್ಳವನು, ದೇವಶ್ರೇಷ್ಠನೂ ಆದ ಶ್ರೀಕೃಷ್ಣನು ಆ ಶತಘ್ನಿಯನ್ನು ನುಂಗಿದ. ಎಂದೂ ಶ್ರಮರಹಿತನಾದರೂ ಅಸುರಮೋಹನಕ್ಕೆಂದು ಬಳಲಿದವನಂತೆ ತೋರಿದ.

ವಿ: ಶ್ರೀಕೃಷ್ಣ ಶತಘ್ನೀ ಎಂಬ ಬ್ರಹ್ಮದತ್ತವಾದ ಅಂತಹ ಇಡೀ ಆಯುಧವನ್ನೇ ನುಂಗಿ ಮತ್ತೊಂದು ಅದ್ಭುತ ಮಹಿಮೆಯನ್ನು ತೋರಿ ಸುರರಿಗೆ ಆನಂದ ನೀಡಿದರೆ, ಬಳಲಿದವನಂತೆ ತೋರುತ್ತಾ ಅಸುರರಿಗೆ ಮೋಹನವನ್ನೂ ಮಾಡಿದ.

ಬಹೂನ್ ವರಾನ್ ಬ್ರಹ್ಮಣೋಽನ್ಯೇಷ್ವಮೋಘಾನ್
ಮೋಘೀಕೃತಾನ್ ವೀಕ್ಷ್ಯ ಪರಾತ್ಪರೇಶಃ।
ಭವೇತ್ ಕಥಂಚಿದ್ಬಹುಮಾನೇನ ಯುಕ್ತ
ಇತ್ಯೇವ ಕೃಷ್ಣೋಽದರ್ಶಯಚ್ಛ್ರಾಂತವತ್ ಸ್ವಮ್ ॥ ೧೦೧ ॥

---

೯೯. ಬ್ರಹ್ಮಣಾ ದತ್ತಾಂ ಶತಘ್ನೀಂ ನಾಮ ಗದಾಂ ಕೃಷ್ಣಸ್ತೋಪರ್ಯಮುಂಚತ್ – (ವ.)

೯೯. ಲೋಹಮಯೀಂ ಕಿಂಚಿತ್ಸ್ಥಲೇಽಯೋಮಯೀಂ ಶತಘ್ನೀಂ ತನ್ನಾಮ್ನೀಂ ಶಕ್ತಿಮ್ । – ಸತ್ಯಧರ್ಮೀಯ

೯೯. ಶತಘ್ನೀಂ ಶತಘ್ನ್ಯಾಖ್ಯಾಂ ಗದಾಮ್ ॥ – (ಜ.)

ಅ: ಬ್ರಹ್ಮದೇವರ ಅಮೋಘವಾದ ಅನೇಕ ವರಗಳನ್ನು ಇತರರ ವಿಷಯದಲ್ಲಿ ವ್ಯರ್ಥಗೊಳಿಸಿದ್ದನ್ನು ಕಂಡು ನರಕಾಸುರನು ಬ್ರಹ್ಮದೇವರ ಬಗ್ಗೆ ಗೌರವಭಾವವನ್ನು ಕಳೆದುಕೊಳ್ಳದಂತೆ ಆಗಲಿ ಎಂಬ ದೃಷ್ಟಿಯಿಂದ ಉತ್ತಮೋತ್ತಮನಾದ ಶ್ರೀಕೃಷ್ಣ ತನ್ನನ್ನು ಬಳಲಿದವನಂತೆ ತೋರಿಸಿಕೊಂಡನು.

ಎ: ೧) ಬ್ರಹ್ಮದೇವರಲ್ಲಿ ನರಕಾಸುರನಿಗೆ ಉತ್ತಮತ್ವಬುದ್ಧಿ ಕಡಿಮೆಯಾಗಕೂಡದು ಎಂಬ ದೃಷ್ಟಿಯಿಂದ ಶ್ರೀಕೃಷ್ಣ ಹಾಗೆ ಬ್ರಹ್ಮದತ್ತವಾದ ಆಯುಧವನ್ನು ನುಂಗಿ ಬಳಲಿದವನಂತೆ ತೋರಿಸಿಕೊಳ್ಳುವ ಮೂಲಕ ಮಾಡಿದನು ಎಂದರ್ಥ. ನರಕಾಸುರನಿಗೆ ಬ್ರಹ್ಮದೇವರಲ್ಲಿ ಗೌರವ ಕಡಿಮೆಯಾಗಿ ತನ್ನ ಬಗ್ಗೆ ಗೌರವ ಹೊಂದುವಂತಾದಲ್ಲಿ ಅವನನ್ನು ಸಂಹರಿಸುವುದು ಉಚಿತವಾಗುವುದಿಲ್ಲ.

೨) ಆದರೆ ಅಯೋಗ್ಯನಾದ ಅವನನ್ನು ಸಂಹರಿಸುವುದು ಅನಿವಾರ್ಯ ಎಂಬ ಕಾರಣದಿಂದ ಅವನಿಗೆ ಆ ವೇಳೆಗೆ ಬ್ರಹ್ಮ ವರವಿದ್ದ ತನ್ನ ಮಂತ್ರಿಗಳು ಮೊದಲಾದವರ ಸಾವಿನಿಂದ ಉಂಟಾಗಿದ್ದ ಅಗೌರವ ಭಾವವನ್ನು ತೆಗೆದುಹಾಕಲು ಶ್ರೀಕೃಷ್ಣ ಹಾಗೆ ನಡೆದುಕೊಂಡ ಎಂದು ಭಾವ.

ಬಿಲ್ಲುಹಿಡಿದ ಭಾಮೆ

ತದಾ ದೃಪ್ತಂ ನರಕಂ ವೀಕ್ಷ್ಯ ದೇವೀ
ಸತ್ಯಾऽऽದದೇ ಕಾರ್ಮುಕಂ ಶಾರ್ಙ್ಗಸಂಜ್ಞಮ್ ।
ಚಕಾರ ತಂ ಯತಮಾನಂ ಚ ಭೌಮಂ
ನಿರಾಯುಧಂ ವಿರಥಂ ಚ ಕ್ಷಣೇನ ॥ ೧೦೨ ॥

---

೧೦೧. ಕಥಂಚಿದ್ಬಹುಮಾನಯುಕ್ತ ಇತ್ಯತ್ರ । ಕಥಂಚಿತ್ = ಸ್ವಭಜಕದೈತ್ಯಚಿತ್ತೇ ಅಂಕುರಿತಬಹುಮಾನಯುಕ್ತ ಇತ್ಯರ್ಥಃ। ಯದ್ವಾ ಕಥಂಚಿತ್ = ಕೇವಲಲೋಕನಟನಾರ್ಥಂ ಮಯಾ ಪ್ರದರ್ಶಿತಶ್ರಮೇಣ ಸ್ವಸ್ಯಾಪರಾಧಶಂಕಯಾ ''ನಿರನಿಷ್ಪೋ ನಿರವದ್ಯಃ'' ''ಅಚ್ಛೇದ್ಯೋऽಯಮದಾಹ್ಯೋऽಯಮ್'' ''ನಿತ್ಯೋ ನಿತ್ಯಾನಾಂ'' ''ನಿತ್ಯಾನಂದೋ ನಿತ್ಯಜ್ಞಾನೋ ನಿತ್ಯಬಲಃ ಪರಮಾತ್ಮಾ'' ''ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'' ಇತ್ಯಾದಿ ಬಹುಪ್ರಮಾಣೇನ ಯುಕ್ತಃ = ಸಂಯುಕ್ತಃ ಆಲೋಚನೇ ಸರ್ವವಿಷಯಕತ್ವಾತ್ ಈದೃಶಾನಿ ಪ್ರಮಾಣಾನ್ಯಾಲೋಚ್ಯ ಕೇವಲಮಸುರಜನಮೋಹನಾರ್ಥಮೇವ ಶ್ರಾಂತಿಃ ಪ್ರದರ್ಶಿತಾ। ಅತೋ ವರದಾನಾನ್ನ ಮೇऽಪರಾಧ ಇತಿ ಅನುಸಂಧಾತಾ ಭವೇದಿತ್ಯರ್ಥಃ ॥ – (ವಾ.)

೧೦೧. ಅಹಂ ಬ್ರಹ್ಮಣಃ ಪೂರ್ಣಾನುಗ್ರಹಾಸ್ಪದ ಇತಿ ಬ್ರಹ್ಮಣಿ ಬಹುಮಾನೇನ ಸತ್ಕಾರೇಣ ಯುಕ್ತೋ ಭವೇತ್ । – (ಜ.)

೧೦೧. ಬ್ರಹ್ಮಣಿ ಕಥಂಚಿತ್ ಬಹುಮಾನೇನ ಯುಕ್ತೋ ಭೌಮಃ ಸ್ಯಾತ್। ಅನ್ಯಥಾ ಬ್ರಹ್ಮಾಣಂ ವಿಶ್ವಸ್ಯ ಯುದ್ಧಾಯ ನಾಗಚ್ಛೇದಿತ್ಯಭಪ್ರಾಯೇಣ ಶ್ರಾಂತವದದರ್ಶಯತ್ ಇತ್ಯರ್ಥಃ। ಬ್ರಹ್ಮಾ ಬಹುಮಾನಯುಕ್ತಃ ಸ್ಯಾದಿತಿ ವಾ। – (ತಾ.)

ಅ: ಆಗ ನರಕಾಸುರ ಬೀಗುತ್ತಿದ್ದುದನ್ನು ಕಂಡು ಸತ್ಯಭಾಮಾದೇವಿ ಶಾರ್ಙ್ಗ ಎಂಬ ಕೃಷ್ಣನ ಧನುಸ್ಸನ್ನು ತಾನೇ ಕೈಗೆತ್ತಿಕೊಂಡಳು. ನರಕಾಸುರ ಎಷ್ಟು ಪ್ರಯತ್ನಿಸಿದರೂ ಬಿಡದೆ ಅವನನ್ನು ನಿರಾಯುಧನನ್ನಾಗಿಯೂ ರಥಹೀನನನ್ನಾಗಿಯೂ ಕ್ಷಣಮಾತ್ರದಲ್ಲೇ ಮಾಡಿದಳು.

ವಿ: ಈ ಮೂಲಕ ಸತ್ಯಭಾಮಾದೇವಿ ತಾನು ಸಾಕ್ಷಾತ್ ಮಹಾಲಕ್ಷ್ಮಿ ಬ್ರಹ್ಮಾದಿ ಪದವಿಗಳನ್ನೇ ನೀಡಬಲ್ಲ ಮಹಾಶಕ್ತಳು ಎಂಬುದನ್ನು ಜಗತ್ತಿಗೆ ಸಾರಿದ ಎಂದೂ ತಿಳಿಯಬೇಕು.

ನರಕಾಸುರನ ವಧೆ

ಆಲಿಂಗ್ಯ ಕೃಷ್ಣಃ ಸತ್ಯಭಾಮಾಂ ಪುನಶ್ಚ
ರಥಾಂತರೇ ಸಂಸ್ಥಿತಂ ಭೌಮಮುಗ್ರಮ್ ।
ಸೃಜಂತಮಸ್ತ್ರಾಣ್ಯರಿಣಾ ನಿಕೃತ್ತ-
ಸ್ಕಂಧಂ ಮೃತ್ಯೋರರ್ಪಯಾಮಾಸ ಶೀಘ್ರಮ್ ॥ ೧೦೩ ॥

ಅ: ಶ್ರೀಕೃಷ್ಣನು ಸತ್ಯಭಾಮೆಯನ್ನು ಆಲಿಂಗಿಸಿಕೊಂಡ. ಮರಳಿ ಮತ್ತೊಂದು ರಥದಲ್ಲಿ ಕುಳಿತು ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಭಯಂಕರನಾದ ನರಕಾಸುರನನ್ನು ಚಕ್ರದಿಂದ ತಲೆಕತ್ತರಿಸಿ ಬೇಗನೆ ಮೃತ್ಯುವಿಗೆ ಒಪ್ಪಿಸಿದ.

ವಿ: ೧) ಅಂತೂ ಜಗತ್ತಿಗೆ ಸಮಸ್ಯೆಯಾಗಿದ್ದ ನರಕಾಸುರ ಶ್ರೀಕೃಷ್ಣನಿಂದ ಹತನಾಗಿ ಭೂಮಿಗೆ ಒರಗಿದ.

೨) ದುರ್ವಿಚಾರಗಳಿಂದ ಕೆಟ್ಟುಹೋಗಿದ್ದ ಅವನ ತಲೆಯನ್ನು ಕತ್ತರಿಸುವ ಮೂಲಕ ಶ್ರೀಕೃಷ್ಣ ತಾನು ಮಿಥ್ಯಾಜ್ಞಾನವನ್ನು ನಿರಸನ ಮಾಡುವ ಜ್ಞಾನಭಾಸ್ಕರ ಎಂಬುದನ್ನು ಜಗತ್ತಿಗೆ ತಿಳಿಸಿದ ಎಂದು ತಿಳಿಯಬೇಕು. ಶ್ರೀಕೃಷ್ಣನಾಮವೇ ನರಕವನ್ನು ಪರಿಹರಿಸುವಾಗ ಸ್ವತಃ ಶ್ರೀಕೃಷ್ಣ ನರಕಾಸುರನನ್ನು ಸಂಹರಿಸಿದ್ದರಲ್ಲಿ ಅಚ್ಚರಿಯೇನಿದೆ?

ಸ ಮಂತ್ರಿಭಿರ್ಮಂತ್ರಿಪುತ್ರೈಃ ಸಮೇತೋ
ಜಗಾಮ ಕೃಷ್ಣಾವಜ್ಞಯಾऽಂಧಂ ತಮಶ್ಚ ।
ತದಾವಿಷ್ಟೋ ವಾಯುರಗಾಚ್ಚ ಕೃಷ್ಣ-
ಮಂತಃಪುರಂ ಪ್ರಾವಿಶತ್ ಸತ್ಯಯೇಶಃ ॥ ೧೦೪ ॥

---

೧೦೩. ನಿಕೃಂತಸ್ಕಂಧಂ ನಿಕೃಂತಃ ಛಿನ್ನಃ ಸ್ಕಂಧೋ ಯಸ್ಯ ಸ ತಥಾ ॥ – (ಜ.)

ಅ: ಆ ನರಕಾಸುರನು ಶ್ರೀಕೃಷ್ಣದ್ವೇಷದಿಂದಾಗಿ ಮಂತ್ರಿಗಳೊಂದಿಗೂ, ಮಂತ್ರಿ-ಪುತ್ರರುಗಳೊಂದಿಗೂ ಕೂಡಿಕೊಂಡು ಅಂಧಂತಮಸ್ಸಿಗೇ ತೆರಳಿದ, ಅವನೊಳಗೆ ಆವೇಶಿಸಿದ್ದ ವಾಯುದೇವರು ಶ್ರೀಕೃಷ್ಣನನ್ನು ಸೇರಿದರು. ಶ್ರೀಕೃಷ್ಣ ಸತ್ಯಭಾಮಾದೇವಿಯೊಂದಿಗೆ ಅವನ ಅಂತಃಪುರವನ್ನು ಪ್ರವೇಶಿಸಿದ.

ವಿ: ೧) ನರಕಾಸುರನಲ್ಲಿ ಸುಜೀವಿಯೊಬ್ಬ ಇದ್ದ ಉಲ್ಲೇಖ ಮಹಾಭಾರತದಲ್ಲಿದೆ:

ತ್ವತ್ಪ್ರಭಾವಾಚ್ಚ ತೇ ಪುತ್ರೋ ಲಬ್ಧವಾನ್ ಗತಿಮುತ್ತಮಾಮ್ ।

೨) ಅಲ್ಲಿಯ ಸುಜೀವ ವಾಯು ಎಂಬುದನ್ನು ಇಲ್ಲಿ ತಿಳಿಸಿರುವರು. ಮಗನಾದ ಪ್ರಹ್ಲಾದನ ಪುಣ್ಯದಿಂದ ಹಿರಣ್ಯಕಶಿಪುವಿನ ಒಳಗಿದ್ದ ಜಯನಿಗೆ ಸದ್ಗತಿಯಾದಂತೆ.

೩) ತಾಯಿಯ ಪುಣ್ಯದಿಂದ ನರಕಾಸುರನ ಒಳಗಿದ್ದ ಸುಜೀವನಿಗೆ ಸದ್ಗತಿಯಾಯಿತು ಎಂದು ತಿಳಿಯಬೇಕು.

ಭೂದೇವಿಯ ಪರಿಚಯ

ತದಾ ಭೂಮಿಃ ಪಂಚಭೂತಾವರಾ ಯಾ
ಯಸ್ಯಾಂ ಜಜ್ಞೇ ನರಕಃ ಶ್ರೀವರಾಹಾತ್ ।
ಮೂಲಪ್ರಕೃತ್ಯೈವ ಭೂಮ್ಯಾ ನಿತಾಂತ-
ಮಾವಿಷ್ಟಾ ಯಾ ಸಾऽಗಮತ್ ಕೃಷ್ಣಪಾದೌ ॥ ೧೦೫ ॥

ಅ: ಆಗ ಪಂಚಭೂತಗಳಲ್ಲಿ ಕಡೆಯವಳಾದ ಯಾವ ಭೂದೇವಿಯಲ್ಲಿ ನರಕಾಸುರ ಶ್ರೀವರಾಹದೇವರಿಂದ ಜನಿಸಿದ್ದನೋ, ಆ ಭೂದೇವಿಯಲ್ಲಿ ಮೂಲಪ್ರಕೃತಿಯ ಅಭಿಮಾನಿ ದೇವತೆಯಾದ ಮಹಾಲಕ್ಷ್ಮಿಯ ಭೂರೂಪ ವಿಶೇಷವಾಗಿ ಆವಿಷ್ಟವಾಗಿತ್ತು; ಆ ಭೂದೇವಿ ಶ್ರೀಕೃಷ್ಣನ ಪಾದಗಳಿಗೆ ಶರಣಾದಳು.

ವಿ: ೧) ಭೂ ಮತ್ತು ವರಾಹರ ಪುತ್ರ ನರಕಾಸುರ. ಇಲ್ಲಿಯ ಭೂದೇವಿ ಶ್ರೀ, ಭೂ ಎಂಬ ಮಹಾಲಕ್ಷ್ಮಿಯ ರೂಪಗಳಲ್ಲಿನ ಭೂದೇವಿಯಲ್ಲ. ಪೃಥಿವೀತತ್ವಕ್ಕೆ ಅಭಿಮಾನಿ ದೇವತೆಯಾದ ಭೂದೇವಿ ಎಂದರ್ಥ.

---

೧೦೪. ಅನೇನ ನರಕಸ್ಯ ಪುರಾಣೋಕ್ತಕೃಷ್ಣಪದಪ್ರಾಪ್ತಿರುಕ್ತಾ ಭವತಿ । ಸತ್ಯಯಾ ಸಹೇತಿ ಶೇಷಃ ॥ – (ಜ.)

೧೦೫. ಯದ್ಯಪಿ ಪೃಥಿವೀ ಆಕಾಶಾಭಿಮಾನಿ ವಿಘ್ನೇಶ ಸಮೋಕ್ತಾ । ತಥಾಪ್ಯೇತದ್ವಾಕ್ಯಬಲಾತ್ ಕಿಂಚಿದೂನತ್ವಂ ದ್ರಷ್ಟವ್ಯಮ್ । – (ತಾ.)

೨) ಈ ಭೂದೇವಿಯಲ್ಲಿ ಮಹಾಲಕ್ಷ್ಮಿಯ ಭೂರೂಪ ಅವಿಷ್ಟವಾದ್ದರಿಂದ ಈಕೆ ವಿಷ್ಣುಪತ್ನಿಯೆನ್ನಿಸಿದಳು.

೩) ಪ್ರತಿನಿತ್ಯ ಪ್ರಾತಃ ಕಾಲದಲ್ಲಿ ಪಠಿಸುವ **'ಸಮುದ್ರವಸನೇ ದೇವಿ ಪರ್ವತಸ್ತನ–ಮಂಡಿತೇ । ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವ ಮೇ'** ಎಂದು ಪ್ರಾರ್ಥಿಸುವುದು ಈ ಭೂದೇವಿಯನ್ನೇ.

ಭಗದತ್ತನಿಗೆ ರಾಜ್ಯಾಭಿಷೇಕ

ಸಾಽದಿತ್ಯಾಸ್ತೇ ಕುಂಡಲೇ ಪಾದಯೋಶ್ಚ
ನಿಧಾಯ ಪೌತ್ರಂ ಭಗದತ್ತಸಂಜ್ಞಮ್ ।
ಸಮರ್ಪಯಾಮಾಸ ತಸ್ಯಾಭಿಷೇಕಂ
ಪ್ರಾಗ್ಜ್ಯೋತಿಷೇ ಕಾರಯಾಮಾಸ ಕೃಷ್ಣಃ ॥ ೧೦೬ ॥

ಅ: ಅವಳು ಅದಿತಿಯ ಕುಂಡಲಗಳನ್ನು ಶ್ರೀಕೃಷ್ಣನ ಪಾದಗಳಲ್ಲಿ ಇರಿಸಿದಳು. ಮೊಮ್ಮಗನಾದ ಭಗದತ್ತ ಎಂಬವನನ್ನು ಒಪ್ಪಿಸಿದಳು. ಶ್ರೀಕೃಷ್ಣ ಅವನನ್ನು ಪ್ರಾಗ್ಜ್ಯೋತಿಷದಲ್ಲಿ ಅಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿಸಿದ.

ವಿ: ೧) ಇಂದ್ರನು ಬಯಸಿದ್ದ ಅದಿತಿಯ ಕರ್ಣಕುಂಡಲಗಳನ್ನು ಭೂದೇವಿ ಶ್ರೀಕೃಷ್ಣನಿಗೆ ಒಪ್ಪಿಸಿದಳು. ಭಗದತ್ತ ನರಕಾಸುರನ ಮಗ. ಅವನು ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಕುಬೇರನ ಅವತಾರ. ಆದ್ದರಿಂದ ಶ್ರೀಕೃಷ್ಣ ಅವನಿಗೆ ಪಟ್ಟಾಭಿಷೇಕ ಮಾಡಿಸಿದ.

೨) ಶೃಗಾಲವಾಸುದೇವ ಮೊದಲಾದವರನ್ನು ಸಂಹರಿಸಿದ ಮೇಲೆ ಅವರ ಪುತ್ರರಾದ ಶಕ್ರದೇವ ಮೊದಲಾದವರಿಗೆ ಪಟ್ಟಾಭಿಷೇಕ ಮಾಡಿದ್ದಂತೆ ಇಲ್ಲಿಯೂ ಶ್ರೀಕೃಷ್ಣ ಆ ರಾಜ್ಯವನ್ನು ಉತ್ತರಾಧಿಕಾರಿಯಾಗಿದ್ದ ಭಗದತ್ತನಿಗೆ ನೀಡಿದನೇ ಹೊರತು ತಾನು ತೆಗೆದುಕೊಳ್ಳಲಿಲ್ಲ ಎಂಬುದನ್ನು ಗಮನಿಸಬೇಕು.

ಸಂಸ್ಥಾಪ್ಯ ತಂ ಸರ್ವಕಿರಾತರಾಜ್ಯೇ
ಭೌಮಾಹೃತಂ ವೈಶ್ರವಣಾದ್ಬಲೇನ ।
ಶಿವೇನ ದತ್ತಂ ಧನದಾಯಾತಿಸತ್ತ್ವಂ
ಭಗದತ್ತೇಽದಧಾತ್ ಸುಪ್ರತೀಕಂ ರಮೇಶಃ ॥ ೧೦೭ ॥

ಅ: ಶ್ರೀಕೃಷ್ಣ ಅವನನ್ನು ಸರ್ವಕಿರಾತರ ರಾಜ್ಯದಲ್ಲಿ ಒಡೆಯನನ್ನಾಗಿ ನಿಯಮಿಸಿದ. ನರಕಾಸುರ ಕುಬೇರನಿಂದ ಬಲಾತ್ಕಾರದಿಂದ ತಂದಿದ್ದ ಸುಪ್ರತೀಕ ಎಂಬ ಅತ್ಯಂತ ಬಲಶಾಲಿಯಾದ ಗಜವನ್ನು ಶ್ರೀಕೃಷ್ಣ ಭಗದತ್ತನಿಗೆ ಕೊಟ್ಟ. ಅದು ಕುಬೇರನಿಗೆ ಶಿವ ನೀಡಿದ್ದ.

ವಿ: ಈ ಸುಪ್ರತೀಕ ಅಷ್ಟದಿಗ್ಗಜಗಳಲ್ಲೊಂದು. ಸಮುದ್ರಮಥನ ಕಾಲದಲ್ಲಿ ಉದ್ಭವಿಸಿದ್ದು. ನರಕಾಸುರ ಕಿತ್ತಿಕೊಂಡಿದ್ದ ಈ ಆನೆಯ ಮೇಲಿನ ಲೋಭದಿಂದಾಗಿಯೇ ಕುಬೇರನು ನರಕಾಸುರನ ಮಗನಾಗಿ ಹುಟ್ಟಿದ್ದ ವಿವರ ಈಗಾಗಲೇ ಬಂದಿದೆ. (೧೨/೨೨೮, ೨೨೯).

ನರಕಾಸುರ ಸಂಪತ್ತು ದ್ವಾರಕೆಗೆ

ಕರೀಂದ್ರಮೇಕಂ ತಂ ನಿಧಾಯೈವ ತಸ್ಮಿನ್
ಕೃತ್ವಾ ಪ್ರಸಾದಂ ಚ ವಸುಂಧರಾಯಾಃ ।
ಚತುರ್ದಂತಾನ್ ಷಟ್ಸಹಸ್ರಾನ್ ಕರೀಂದ್ರಾನ್
ಪಯೋಬ್ಧಿಜಾನ್ ಪ್ರಾಹಿಣೋದ್ದ್ವಾರವತ್ಯೈ ॥ ೧೦೮ ॥

ಅ: ಆ ಶ್ರೇಷ್ಠ ಆನೆಯೊಂದನ್ನು ಮಾತ್ರ ಭಗದತ್ತನಿಗೆ ನೀಡಿದ; ಭೂದೇವಿಯನ್ನು ಶ್ರೀಕೃಷ್ಣ ಅನುಗ್ರಹಿಸಿದ. ನಾಲ್ಕು ದಂತಗಳಿದ್ದ ಆರುಸಾವಿರ ಅಂತಹ ಶ್ರೇಷ್ಠ ಆನೆಗಳನ್ನು ದ್ವಾರಾವತಿಗೆ ಕಳಿಸಿದ. ಅವೆಲ್ಲ ಕ್ಷೀರಸಮುದ್ರಮಥನ ಕಾಲದಲ್ಲಿಯೇ ಹುಟ್ಟಿಬಂದಿದ್ದ ಆನೆಗಳು.

ವಿ: ೧) ಹರಿವಂಶದಂತೆ ಈ ಆನೆಗಳ ಸಂಖ್ಯೆ ಇಪ್ಪತ್ತು ಸಾವಿರ; ವಿಷ್ಣುಪುರಾಣದಂತೆ ಆರು ಸಾವಿರ :

ಇಮಾನಿ ಮಣಿರತ್ನಾನಿ ವಿವಧಾನಿ ಬಹೂನಿ ಚ ।
ಭೀಮರೂಪಾಶ್ಚ ಮಾತಂಗಾಃ ಪ್ರವಾಲವಿಕೃತಾಂಕುಶಾಃ ॥
ಹೇಮಸೂತ್ರಾ ಮಹಾಕಕ್ಷಾಶ್ಚಾಪತೋಮರಶಾಲಿನಃ ।
ರುಚಿರಾಭಿಃ ಪತಾಕಾಭಿಃ ಶಬಲಾ ರುಚಿರಾಂಕುಶಾಃ ॥

---

೧೦೮. ತದೇತದುಕ್ತಂ–

ಐರಾವತಕುಲೇಭಾಂಶ್ಚ ಚತುರ್ದಂತಾನ್ ಮದೋತ್ಕಟಾನ್ ।
ಭಗದತ್ತಾಯ ದತ್ವೈಕಂ ಸುಪ್ರತೀಕಂ ತತೋऽಪರಾನ್ ।
ಪಾಂಡುರಾಂಶ್ಚ ಚತುಃಷಷ್ಟಿಂ ಪ್ರೇಷಯಾಮಾಸ ಕೇಶವಃ ॥
ತೇ ಚ ವಿಂಶತಿಸಾಹಸ್ರಾ ದ್ವಿಸಹಸ್ರಾಃ ಕರೇಣವಃ ।
ಅಷ್ಟೌ ಶತಸಹಸ್ರಾಣಿ ದೇಶಜಾಶ್ಚ ಹಯೋತ್ತಮಾಃ ॥
ಗವಾಂ ಚಾಪರಿಮೇಯಾನಿ ಸಹಸ್ರಾಣಿ ಜನಾರ್ದನಃ ॥' ಇತಿ ಹರಿವಂಶೇ ॥ – (ರಾ., ಮ.)

ತೇ ಚ ಏಂಶತಿಸಾಹಸ್ರಾ ದ್ವಿಸ್ತಾವತ್ಯಃ ಕರೇಣವಃ ।
ಅಷ್ಟಾದಶಸಹಸ್ರಾಣಿ ದೇಶಜಾಶ್ಚೋತ್ತಮಾ ಹಯಾಃ ॥.... – (೨/೬೪/೧೧-೧೩)

ಚತುರ್ದಂಷ್ಟಾನ್ ಗಜಾಂಶ್ಚಾಗ್ರ್ಯಾನ್ ಷಟ್ಸಹಸ್ರಾಂಶ್ಚ ದೃಷ್ಟವಾನ್ ।
ಕಾಂಬೋಜಾನಾಂ ತಥಾऽಶ್ವಾನಾಂ ನಿಯುತಾನ್ಯೇಕವಿಂಶತಿಮ್ ॥
ತಾಃ ಕನ್ಯಾಸ್ತಾಂಸ್ತಥಾ ನಾಗಾಂಸ್ತಾನಶ್ವಾನ್ ದ್ವಾರಕಾಪುರೀಮ್ ।
ಪ್ರಾಪಯಾಮಾಸ ಗೋವಿಂದಃ ಸದ್ಯೋ ನರಕಕಿಂಕರೈಃ ॥–ವಿ.ಪು.(೫/೨೯/೩೨,೩೩)

೨) ಆಚಾರ್ಯರು ಅವುಗಳ ಸಂಖ್ಯೆ ಒಟ್ಟು ಆರು ಸಾವಿರ ಎಂದು ನಿರ್ಣಯಿಸಿರುವರು ಎಂದು ತಿಳಿಯಬೇಕು. ಒಟ್ಟು ಸಂಖ್ಯೆ ಇಪ್ಪತ್ತು ಸಾವಿರವಾದರೂ, ಸಮುದ್ರಮಥನ ಕಾಲಕ್ಕೆ ಜನಿಸಿದವು ಇಪ್ಪತ್ತುಸಾವಿರ; ಅದರಲ್ಲೂ ಆರು ಸಾವಿರ ಇನ್ನೂ ಶ್ರೇಷ್ಠ ಎಂದು ತಿಳಿಯಬೇಕು.

ನರಾಧಿಪಾನ್ ದೇವಗಂಧರ್ವನಾಗಾನ್
ಜಿತ್ವಾ ನೀತಂ ಹೇಮರತ್ನೋಚ್ಚರಾಶಿಮ್ ।
ಶತದ್ವಯಂ ಯೋಜನಾನಾಂ ಸಮೃದ್ಧಂ
ಸಮಂತತಃ ಪ್ರಾಹಿಣೋತ್ ಸ್ವಾಂ ಪುರೀಂ ಸಃ ॥ ೧೦೯ ॥

ಅ: ನರಕಾಸುರ ದೇವತೆಗಳನ್ನೂ, ಗಂಧರ್ವರನ್ನೂ, ನಾಗರನ್ನೂ, ರಾಜರುಗಳನ್ನೂ ಸೋಲಿಸಿ ತಂದಿದ್ದ ಇನ್ನೂರು ಯೋಜನಗಳಷ್ಟು ಸಮೃದ್ಧವಾಗಿದ್ದ ಚಿನ್ನ, ರತ್ನಗಳ ದೊಡ್ಡ ರಾಶಿಯನ್ನು ಶ್ರೀಕೃಷ್ಣ ದ್ವಾರಕಾಪುರಿಗೆ ಕಳುಹಿಸಿದ.

ಮಹಾವೀರ್ಯೈರ್ನೈರ್ಋತೈ ರಾಕ್ಷಸೇಂದ್ರೈ-
ರ್ಭೌಮಾನೀತೈರ್ನಿರ್ಋತಿಂ ಯೋಧಯಿತ್ವಾ।
ಸ ಪ್ರಾಹಿಣೋತ್ ಸರ್ವರತ್ನೋಚ್ಚರಾಶಿಂ
ಗಜಾಂಶ್ಚ ನಾರಾಯಣ ಆದಿದೇವಃ ॥ ೧೧೦ ॥

ಅ: ನರಕಾಸುರ ನಿರ್ಋತಿಯನ್ನು ಸೋಲಿಸಿ ಹಿಡಿದು ತಂದಿದ್ದ ಮಹಾವೀರರಾದ ರಾಕ್ಷಸ-ಶ್ರೇಷ್ಠರುಗಳ ಮೂಲಕ ಆದಿದೇವನಾದ ಶ್ರೀಕೃಷ್ಣ ಆ ಸಕಲ ರತ್ನರಾಶಿಯನ್ನು ಆನೆಗಳನ್ನು ದ್ವಾರಕೆಗೆ ಕಳುಹಿಸಿಕೊಟ್ಟ.

ವಿ: ೧) ನರಕಾಸುರನ ಬಳಿ ಶ್ರೇಷ್ಠ ರಾಕ್ಷಸರ ದೊಡ್ಡ ಹಿಂಡೇ ಇತ್ತು ಅವರೆಲ್ಲ ನಿರ್ಋತಿಯ ಅನುಚರರು. ಆ ನರಕಾಸುರ ನಿರ್ಋತಿಯನ್ನು ಸೋಲಿಸಿ ಅವರನ್ನೆಲ್ಲ ತನ್ನ ಪಟ್ಟಣಕ್ಕೆ ಸಾಗಿಸಿದ್ದ.

೨) ಇಲ್ಲಿಯ ಶ್ಲೋಕಗಳಲ್ಲಿ ನರಕಾಸುರನಿಂದ ದೇವತೆಗಳಿಗೆ ಉಂಟಾಗಿದ್ದ ಹಾನಿಗಳ ವಿವರ ನಿರೂಪಿತವಾಗಿರುವುದನ್ನು ಗಮನಿಸಬೇಕು.

ಹದಿನಾರು ಸಾವಿರದ ನೂರು ಕನ್ಯೆಯರ ಪೂರ್ವಾಪರ

ತತ್ರಾಪಶ್ಯತ್ ಕನ್ಯಕಾ ಭೂಮಿಪಾನಾಂ
ಭೌಮಾನೀತಾಃ ಸಮರೇ ತಾನ್ ವಿಜಿತ್ಯ ।
ದ್ವ್ಯಷ್ಟೌ ಸಹಸ್ರಾಣಿ ಶತಂ ಚ ರೂಪ-
ಶೀಲೋದಾರಾ ಅಕ್ಷತಾಃ ಸದ್ವ್ರತಸ್ಥಾಃ ॥ ೧೧೧ ॥

ಅ: ಶ್ರೀಕೃಷ್ಣ ಅಲ್ಲಿ ಕನ್ಯೆಯರನ್ನೂ ಕಂಡ. ಅವರೆಲ್ಲ ಯುದ್ಧದಲ್ಲಿ ರಾಜರುಗಳನ್ನು ಗೆದ್ದು ನರಕಾಸುರ ಅಪಹರಿಸಿ ತಂದಿದ್ದ ರಾಜಕುಮಾರಿಯರು. ಅವರ ಸಂಖ್ಯೆ ಹದಿನಾರು ಸಾವಿರದ ಒಂದು ನೂರು. ಅವರೆಲ್ಲ ರೂಪ, ಗುಣಗಳಲ್ಲಿ ತುಂಬಾ ಶ್ರೇಷ್ಠರಾದವರು. ಅವರೆಲ್ಲರು ಉತ್ತಮವ್ರತದಲ್ಲಿ ತೊಡಗಿದ್ದರಿಂದ ನರಕಾಸುರನಿಂದ ಬಲಾತ್ಕಾರಕ್ಕೆ ಒಳಗಾಗದೇ ಕನ್ಯೆ-ಯರಾಗಿಯೇ ಇದ್ದವರು.

ವಿ: ೧) ನರಕಾಸುರ ಚಿನ್ನ, ರತ್ನ, ಆನೆ ಮೊದಲಾದವುಗಳನ್ನಲ್ಲದೇ ಕನ್ಯೆಯರನ್ನೂ ಅಪಹರಿಸಿ ತಂದಿದ್ದ. ಆದರೆ, ಅವರೆಲ್ಲ ಉತ್ತಮ ವ್ರತಃಶೀಲರಾಗಿದ್ದರಿಂದ ಅವರನ್ನು ಮೇಲೆ ಬಲಾತ್ಕರಿಸಲು ಅವನಿಂದ ಸಾಧ್ಯವಾಗಿರಲಿಲ್ಲ ಎಂದು ಭಾವ.

೨) ಉತ್ತಮ ವ್ರತನಿರತರಾದ್ದರಿಂದ ಅವರು ನರಕಾಸುರನಿಗೆ ಬಲಿಯಾಗಿರಲಿಲ್ಲ. ಉತ್ತಮ ವ್ರತಶೀಲರಿಗೆ ನರಕದ ಭಯವಿರುವುದಿಲ್ಲ ಎಂಬುದಕ್ಕೂ ಇದು ದ್ಯೋತಕ.

೩) 'ಸದ್ವ್ರತ' ಎಂದರೆ ವಾಯುದೇವರಿಗೆ ('ಸದಿತಿ ಪ್ರಾಣಃ') ಸಮ್ಮತವಾದ ಏಕಾದಶ್ಯಾದಿವ್ರತಗಳು ಎಂದರ್ಥ.

ಕಾಶ್ಚಿತ್ ತತ್ರಾಸನ್ ದೇವಗಂಧರ್ವಕನ್ಯಾ-
ಸ್ತಾಸಾಂ ಪ್ರಧಾನಾ ತ್ವಷ್ಟೃಪುತ್ರೀ ಕಶೇರುಃ ।
ಪುತ್ರ್ಯಾ ಅಗ್ನೇಃ ಪೂರ್ವಮಾಸಂಶ್ಚ ತೇऽಥ
ಸ್ತ್ರೀತ್ವಪ್ರಾಪ್ತ್ಯೈ ಚಕ್ರುರುಗ್ರಂ ತಪಶ್ಚ ॥ ೧೧೨ ॥

---

೧೧೧. ಅಕ್ಷತಾ ಅದೃಷ್ಟರಜಸಃ । – (ವೇ.)

ಅ: ಅವರಲ್ಲಿ ಕೆಲವರು ದೇವಕನ್ಯೆಯರು, ಮತ್ತೆ ಕೆಲವರು ಗಂಧರ್ವ ಕನ್ಯೆಯರು. ಅವರಲ್ಲಿ ತ್ವಷ್ಟ್ರಪ್ರಜಾಪತಿಯ ಮಗಳಾದ ಕಶೇರು ಪ್ರಮುಖಳಾದವಳು. ಅವರೆಲ್ಲ ಮೂಲತಃ ಅಗ್ನಿಯ ಪುತ್ರರು. ಅವರು ಸ್ತ್ರೀತ್ವ ಪ್ರಾಪ್ತಿಗಾಗಿ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದ್ದರು.

ವಿ: ಈ ಹದಿನಾರು ಸಾವಿರದ ನೂರು ಜನರೂ ಸಹ ಮೂಲತಃ ಸ್ತ್ರಿಯರೇ ಅಲ್ಲ. ಅವರೆಲ್ಲ ಅಗ್ನಿದೇವರ ಪುತ್ರರು. ತಪಸ್ಸನ್ನಾಚರಿಸಿ ಸ್ತ್ರೀತ್ವ ಪಡೆದವರು :

೧) **ಅಗ್ನಿಪುತ್ರಾ ಮಹಾತ್ಮಾನಸ್ತಪಸಾ ಸ್ತ್ರೀತ್ವಮಾಪಿರೇ ।**
ಭರ್ತಾರಂ ಚ ಜಗದ್ಯೋನಿಂ ವಾಸುದೇವಮಜಂ ವಿಭುಮ್'
– ಭಾ.ತಾ.(೧/೧೦/೩೧) ಉದಾಹೃತ ಮಹಾಕೌರ್ಮವಚನ

೨) **ಹುತಾಶನಸುತಾಃ ಸರ್ವಾಃ ಭವಂತ್ಯೋಽಪ್ಸರಸಃ ಪುರಾ ॥**
– ಮತ್ಸ್ಯಪುರಾಣ (೬೯/೨೧)(ಕೃಷ್ಣಪತ್ನಿಯರನ್ನು ಕುರಿತು ದಾಳ್ಭ್ಯರ ವಚನ)

ಭಾರ್ಯಾತ್ವಾರ್ಥೇ ವಾಸುದೇವಸ್ಯ ಯೋಷಿ-
ತ್ತನುಂ ತಾಸಾಮಿಚ್ಛತೀನಾಂ ಸಮೀರಃ ।
ಅದಾದ್ವರಂ ತಪಸಾಽಽರಾಧಿತಃ ಸ
ಸ್ತ್ರೀಭೂತಾಸ್ತೇ ಬದರೀಂ ಸಂಪ್ರಜಗ್ಮುಃ ॥ ೧೧೩ ॥

ಅ: ಶ್ರೀಕೃಷ್ಣನ ಪತ್ನಿಯರಾಗಬೇಕೆಂಬ ಬಯಕೆಯಿಂದ ಸ್ತ್ರೀ ದೇಹವನ್ನು ಬಯಸಿದ ಅವರಿಗೆ ವಾಯುದೇವರು ಅವರ ತಪಸ್ಸಿನಿಂದ ಆರಾಧಿತರಾಗಿ ವರ ನೀಡಿದ್ದರು. ಸ್ತ್ರೀಯರಾಗಿ ಹುಟ್ಟಿದ ಅವರೆಲ್ಲ ಬದರಿಗೆ ತೆರಳಿದರು.

ವಿ: ೧) ಅವರು ತಪಸ್ಸು ಮಾಡಿದ್ದು ವಾಯುದೇವರನ್ನು ಕುರಿತು. ಸ್ತ್ರೀದೇಹ ಪುರುಷರಿಗೆ ವಿಹಿತವಾದುದಲ್ಲ, ಶಾಶ್ವತವಾಗಿ ಅವರಿಗೆ ಅದು ಬರುವಂತಹುದೂ ಅಲ್ಲ, ಸಾಮಾನ್ಯವಾಗಿ ಪುರುಷರಿಗೆ ಅದು ಬರುವುದು ಕಾಮ, ವರಾದಿಗಳಿಂದ ಎಂಬ ವಿವರ ಈಗಾಗಲೇ ಬಂದಿದೆ (ಅ.೧೧, ಶ್ಲೋ. ೧೧೨).

೨) ಸುದ್ಯುಮ್ನನಿಗೆ ಅದು ಬಂದದ್ದು ರುದ್ರದೇವರ ಶಾಪದ ಫಲವಾಗಿ ಎಂದು ಭಾಗವತ ಪುರಾಣದಲ್ಲಿದೆ (೯/೧). ಆದರೆ, ಇವರು ಅಂತಹ ಸ್ತ್ರೀದೇಹವನ್ನು ಬಯಸಿದ್ದು ಶ್ರೀಕೃಷ್ಣನ ಪತ್ನಿಯರಾಗುವ ವಿಶೇಷವಾದ ಅವಕಾಶವನ್ನು ಪಡೆಯಲೆಂದು ಎಂಬುದು ವಿಶೇಷ.

೩) ಶ್ರೀಹರಿ ಸ್ವೀಕರಿಸುವ ಸ್ತ್ರೀತ್ವ ಬರಲು ವಾಯುದೇವರ ಅನುಗ್ರಹವೇ ಮುಖ್ಯ ಎಂದು ಭಾವಿಸಿ ಅವರನ್ನು ಕುರಿತು ತಪಸ್ಸನ್ನಾಚರಿಸಿದರು ಎಂದೂ ತಿಳಿಯಬಹುದು.

ನಾರಾಯಣಂ ತತ್ರ ಶುಶ್ರೂಷಮಾಣಾಃ
ಪ್ರಾಪ್ಯಾಪ್ಸರಸ್ತ್ವಂ ರಾಜಕುಲೇಷು ಜಾತಾಃ ।
ಕಾಶ್ಚಿತ್ ಸ್ವರ್ಗೇ ತಾ ನಿಶಾಮ್ಯೈವ ಕೃಷ್ಣಂ
ವವ್ರುಃ ಪತಿಂ ಸರ್ವಗುಣಾಭಿರಾಮಮ್ ॥ ೧೧೪ ॥

ಅ: ಅವರು ಅಲ್ಲಿ ನಾರಾಯಣನನ್ನು ಸೇವೆ ಮಾಡುತ್ತಾ ಮುಂದೆ ಅಪ್ಸರೆಯ ಜನ್ಮವನ್ನು ಹೊಂದಿದರು. ಕೆಲವರು ರಾಜಕುಲದಲ್ಲಿ ಹುಟ್ಟಿದರು, ಕೆಲವರು ಸ್ವರ್ಗದಲ್ಲಿ ಹುಟ್ಟಿದರು. ಶ್ರೀಕೃಷ್ಣನನ್ನು ಕಾಣುತ್ತಲೇ ಅವರು ಸಕಲ ಗುಣಗಳಿಂದ ಮನೋಹರನಾಗಿದ್ದ ಅವನನ್ನೇ ಪತಿಯನ್ನಾಗಿ ವರಿಸಿದರು.

ವಿ: ೧) ನರಕಾಸುರನ ಬಂದಿಗಳಾಗಿದ್ದಾಗಲೂ ಅವರು ಶ್ರೀಕೃಷ್ಣನನ್ನು ಪಡೆಯಲೆಂದು ಘೋರವಾದ ವ್ರತಾದಿಗಳಲ್ಲೇ ನಿರತರಾಗಿದ್ದರು.

೨) ಆಗೊಮ್ಮೆ ಅಲ್ಲಿಗೆ ಆಗಮಿಸಿದ್ದ ನಾರದರು ಶ್ರೀಕೃಷ್ಣ ಅವರನ್ನು ನರಕಾಸುರ ಬಂಧನದಿಂದ ಪಾರುಮಾಡಿ ವಿವಾಹವಾಗುವನು ಎಂದು ತಿಳಿಸಿದ್ದರು :

೩) ಬದರಿಯಲ್ಲಿ ನಾರಾಯಣನೊಂದಿಗೆ ವೇದವ್ಯಾಸರನ್ನು ಸೇವಿಸಿದರೆಂದು ತಿಳಿಯ–ಬಹುದು. (ಜ).

ಆಜಾನದೇವೈಃ ಸರ್ವಗುಣೈಃ ಸಮಾಸ್ತಾಃ
ಸ್ವಭಾವತೋಽಥೇಂದಿರಾವೇಶತೋಽತಃ ।
ಗುಣಾಧಿಕಾಸ್ತಾಃ ಶಿಬಿಕಾಸು ಕೃಷ್ಣ
ಆರೋಪಯಿತ್ವಾ ಪ್ರಾಹಿಣೋದ್ದ್ವಾರವತ್ಯೈ ॥ ೧೧೫ ॥

ಅ: ಅವರೆಲ್ಲ ಸ್ವರೂಪತಃ ಆಜಾನದೇವತೆಗಳೊಂದಿಗೆ ಸಕಲ ಗುಣಗಳಲ್ಲೂ ಸಮಾನರು; ರಮಾವೇಶದಿಂದಾಗಿ ಅವರಿಗಿಂತ ಸ್ವಲ್ಪ ಮಿಗಿಲೆನ್ನಿಸುವರು. ಶ್ರೀಕೃಷ್ಣ ಅವರನ್ನು ಮೇಣೆಗಳಲ್ಲಿ ಕೂಡಿಸಿ ದ್ವಾರಕೆಗೆ ಕಳುಹಿಸಿದ.

---

೧೧೫. ಆಜಾನದೇವೈಃ ಸರ್ವಗುಣೈಃ ಸಮಾಸ್ತಾ ಇತ್ಯತ್ರ ತಾಃ=ಕನ್ಯಾಃ ಸ್ವಭಾವತಃ ಸರ್ವಗುಣೈಃ ಆಜಾನದೇವೈಃ ಸಮಾಃ । ಆಜಾನದೇವಾ ಇತಿ ಜಯಂತಾದಿದೇವಾನಾಮೇಕೋ ಗಣಃ । ಅತಃ=ಆಜಾನದೇವೇಭ್ಯಃ ಗುಣಾಧಿಕಾಃ ॥ – (ವಾ.)

ವಿ: ೧) ಅವರು ಸ್ವರೂಪತಃ ಆಜಾನದೇವತೆಗಳಿಗೆ ಸಮಾನರಾದರೂ ವಿಷ್ಣುಪತ್ನಿಯರಾದಾಗ ಅವರಲ್ಲಿ ಉಂಟಾದ ರಮಾವೇಶದಿಂದಾಗಿ ಆಜಾನದೇವತೆಗಳಿಗಿಂತಲೂ ಶ್ರೇಷ್ಠರೆನ್ನಿಸಿದರು ಎಂದರ್ಥ.

೨) ರಮಾವೇಶವಿಲ್ಲದೇ ವಿಷ್ಣುವಿನ ಸಂಗ ಲಭಿಸುವುದಿಲ್ಲ ಎಂದು ಈಗಾಗಲೇ ತಿಳಿಸಿರುವರು (ಅಧ್ಯಾಯ–೧೧).

ಸ್ವರ್ಗಕ್ಕೆ ಶ್ರೀಕೃಷ್ಣನ ಪ್ರಯಾಣ

ಸಮಂತತೋ ಯೋಜನಾನಾಂ ಶತೇ ದ್ವೇ
ಪ್ರವೃದ್ಧಮಿಂದ್ರಸ್ಯ ಸರತ್ನಪರ್ವತಮ್ ।
ನಿತ್ಯಾಮೃತಸ್ರಾವಿ ಜಲೇಶ್ವರಸ್ಯ
ಛತ್ರಂ ಚ ದೋರ್ಭ್ಯಾಂ ಗರುಡೇ ನ್ಯಧಾದ್ಧರಿಃ ॥ ೧೧೬ ॥

ಅ: ಇನ್ನೂರು ಯೋಜನ ಎತ್ತರವಾಗಿದ್ದ ಇಂದ್ರನ ರತ್ನಪರ್ವತವನ್ನೂ, ಸದಾ ಅಮೃತ ಸುರಿಸುವಂತಹ ವರುಣನ ಶ್ವೇತಛತ್ರವನ್ನೂ, ಶ್ರೀಕೃಷ್ಣ ಕೈಗಳಿಂದೆತ್ತಿ ಗರುಡನ ಮೇಲಿರಿಸಿದ.

ಸ್ವಯಂ ಚ ಸತ್ಯಾಸಹಿತಃ ಸಮಾರುಹತ್
ಸ ಚಾಶ್ರಮೇಣೈವ ಯಯೌ ತ್ರಿವಿಷ್ಟಪಮ್ ।
ಅಭಿಪ್ರಯಾತೋಽಖಿಲಲೋಕಪಾಲೈ-
ರ್ಜನಾರ್ದನಃ ಶಕ್ರಗೃಹಂ ವಿವೇಶ ॥ ೧೧೭ ॥

ಅ: ಶ್ರೀಕೃಷ್ಣ ಸ್ವತಃ ತಾನೂ ಸಹ ಸತ್ಯಭಾಮಾದೇವಿಯೊಂದಿಗೆ ಗರುಡನನ್ನು ಏರಿದ. ಗರುಡ ಯಾವ ಬಳಲಿಕೆಯೂ ಇಲ್ಲದೇ ಸ್ವರ್ಗವನ್ನು ತಲುಪಿದ. ಎಲ್ಲ ದಿಕ್ಪಾಲಕರು ಅವನನ್ನು ಇದಿರುಗೊಂಡರು; ಶ್ರೀಕೃಷ್ಣ ಇಂದ್ರನ ಅರಮನೆಯನ್ನು ಪ್ರವೇಶಿಸಿದ.

---

೧೧೬. ತತಸ್ತದ್ವಾರುಣಂ ಛತ್ರಂ ಸ್ವಯಮುತ್ಕ್ಷಿಪ್ಯ ಮಾಧವಃ ।
ಹಿರಣ್ಮಯವರ್ಷಂ ವರ್ಷಂತಮಾರುರೋಹ ವಿಹಂಗಮಮ್ ॥
ಗರುಡಂ ಪತಗಶ್ರೇಷ್ಠಂ ಮೂರ್ತಿಮಂತಮಿವಾಂಬುದಮ್ ।
ತತೋಽಭ್ಯಾದ್ಗಿರಿಶ್ರೇಷ್ಠಮಭತೋ ಮಣಿಪರ್ವತಮ್ ॥ – ಹರಿವಂಶ(೨/೬೪/೧೯,೨೦)

ದದೃಶೇ ವಾರುಣಂ ಛತ್ರಂ ತಥೈವ ಮಣಿಪರ್ವತಮ್ ।
ಆರೋಪಯಾಮಾಸ ಹರಿಃ ಗರುಡೇ ಪತಗೇಶ್ವರೇ ॥ – ವಿಷ್ಣುಪುರಾಣ (೫/೨೯/೩೪)

ಅದಿತಿಗೆ ಕರಣಕುಂಡಲಪ್ರಾಪ್ತಿ

ಸಂಪೂಜಿತಃ ಸತ್ಯಭಾಮಾಸಹಾಯಃ
ಶಕ್ರೇಣ ಶಚ್ಯಾ ಸಹಿತೇನ ಸಾದರಮ್ ।
ದದಾವದಿತ್ಯಾ ಅಪಿ ಕುಂಡಲೇ ಶುಭೇ
ಸಮಸ್ತದೇವೈರ್ಮುನಿಭಿಶ್ಚ ವಂದಿತಃ ॥ ೧೧೮ ॥

ಅ: ಇಂದ್ರನಿಂದಲೂ, ಶಚಿಯಿಂದಲೂ ಸತ್ಯಭಾಮಾಸಮೇತನಾದ ಶ್ರೀಕೃಷ್ಣ ಭಕ್ತಿ-ಪೂರ್ವಕವಾಗಿ ವಿಶೇಷವಾಗಿ ಪೂಜಿತನಾದ. ಶ್ರೀಕೃಷ್ಣ ಅದಿತಿಯ ಶುಭಕರವಾದ ಕುಂಡಲ-ಗಳನ್ನು ಅವಳಿಗೆ ನೀಡಿದ. ಸಮಸ್ತದೇವತೆಗಳು, ಮುನಿಗಳು ಅವನಿಗೆ ನಮಸ್ಕರಿಸಿದರು.

ವಿ: ಹೀಗೆ ಅವತಾರರೂಪದಲ್ಲಿದ್ದಾಗಲೂ ಶ್ರೀಕೃಷ್ಣ ಇಂದ್ರಾದಿದೇವತೆಗಳಿಂದ ವಂದಿತ-ನಾದದ್ದು ಅವನ ರೂಪರೂಪಗಳಲ್ಲಿನ ಅಭೇದಕ್ಕೆ ದ್ಯೋತಕ.

ತಮಾಸುರಾವೇಶವಶಾದಜಾನತೀ
ಸತ್ಯಾಂ ಚ ಸರ್ವಪ್ರಭವೌ ಜಗದ್ಗುರೂ ।
ನಿರ್ದೋಷಸೌಖ್ಯೈಕತನೂ ಶುಭಾಶಿಷ-
ಸ್ತಾಭ್ಯಾಂ ದದೌ ಸಾऽದಿತಿರಾತ್ಮಪುತ್ರವತ್ ॥ ೧೧೯ ॥

ಅ: ಅಸುರಾವೇಶದಿಂದಾಗಿ ಶ್ರೀಕೃಷ್ಣನನ್ನೂ, ಸತ್ಯಭಾಮೆಯನ್ನೂ ಎಲ್ಲರ ಒಡೆಯರೂ, ಜಗತ್ಪ್ರಭುಗಳೂ, ನಿರ್ದೋಷರೂ, ಆನಂದೈಕದೇಹರೂ ಎಂಬುದನ್ನು ತಿಳಿಯದವಳಾಗಿ ಅದಿತಿ ಅವರಿಬ್ಬರಿಗೂ ತನ್ನ ಮಕ್ಕಳಿಗೆ ಹಾರೈಸುವಂತೆ ಶುಭ ಹಾರೈಸಿದಳು.

ವಿ: ಅದಿತಿ ಹೀಗೆ ಶ್ರೀಕೃಷ್ಣ ಸತ್ಯಭಾಮೆಯರಿಗೆ ಆಶೀರ್ವದಿಸಿದ ವಿವರ *ವಿಷ್ಣುಪುರಾಣದಲ್ಲಿದೆ. ಅದರ ಭಾವವನ್ನು ಶ್ರೀಮದಾಚಾರ್ಯರು ಹೀಗೆ ನಿರ್ಣಯಿಸಿರುವರು.

---

* ಏವಮಸ್ತು ಯಥೇಚ್ಛಾ ತೇ ತ್ವಮಶೇಷೈಃ ಸುರಾಸುರೈಃ ।
ಅಜೇಯಃ ಪುರುಷವ್ಯಾಘ್ರ ಮರ್ತ್ಯಲೋಕೇ ಭವಿಷ್ಯಸಿ ॥
– (ಶ್ರೀಕೃಷ್ಣನನ್ನು ಕುರಿತು ಅದಿತಿವಚನ) ವಿಷ್ಣುಪುರಾಣ (೫/೩೦/೨೫)

ಮತ್ಪ್ರಸಾದಾನ್ನ ತೇ ಸುಭ್ರು ಜರಾ ವೈರೂಪ್ಯಮೇವ ವಾ ।
ಭವಿಷ್ಯತ್ಯನವದ್ಯಾಂಗಿ ಸುಸ್ಥಿರಂ ನವಯೌವನಮ್ ॥
– (ಸತ್ಯಭಾಮೆಯನ್ನು ಕುರಿತು ಅದಿತಿವಚನ) ವಿಷ್ಣುಪುರಾಣ (೫/೩೦)೭)

ನಂದನವನದಲ್ಲಿ ಸತ್ಯಭಾಮಾ ಸಮೇತನಾಗಿ ಕೃಷ್ಣ

ಅಥೋ ಸದಾನಂದಚಿದಾತ್ಮದೇಹಃ
ಸ ನಂದನೋದ್ಯಾನಮಜೋಽನುರೂಪಯಾ ।
ಅನಂತಶಕ್ತಿಃ ಸಹ ಸತ್ಯಭಾಮಯಾ
ವಿವೇಶ ರಂತುಂ ಪ್ರಿಯಯಾಽಖಿಲೇಶ್ವರಃ ॥ ೧೨೦ ॥

ಅ: ಬಳಿಕ ಸದಾ ಆನಂದಜ್ಞಾನಸ್ವರೂಪದೇಹನೂ, ಅನಂತಶಕ್ತಿ ಉಳ್ಳವನೂ, ಜನ್ಮಾದಿದೋಷರಹಿತನೂ ಆದ ಶ್ರೀಕೃಷ್ಣ ತನಗೆ ಅನುರೂಪಳೂ, ಪ್ರಿಯಳೂ ಆದ ಸತ್ಯಭಾಮೆಯೊಂದಿಗೆ ವಿಹರಿಸಲೆಂದು ನಂದನವನವನ್ನು ಪ್ರವೇಶಿಸಿದ.

ತಯಾಽಚ್ಯುತೋಽಸೌ ಕನಕಾವದಾತಯಾ
ಸುಕುಂಕುಮಾದಿಗ್ಧಪಿಶಂಗವಾಸಸಾ ।
ಪೂರ್ಣೇಂದುಕೋಟ್ಯೌಘಜಯನ್ಮುಖಾಬ್ಜಯಾ
ರೇಮೇಽಮಿತಾತ್ಮಾ ಜಗದೇಕಸುಂದರಃ ॥ ೧೨೧ ॥

ಅ: ಸತ್ಯಭಾಮೆ ಚಿನ್ನದಂತೆ ಹೊಳೆಯುತ್ತಿದ್ದವಳು; ಕುಂಕುಮಕೇಸರಿಯಿಂದ ಲೇಪಿತವಾದ ಪೀತಾಂಬರವನ್ನು ತೊಟ್ಟಿದ್ದವಳು; ಕೋಟಿಗಟ್ಟಲೆ ಪೂರ್ಣಚಂದ್ರರನ್ನು ಮೀರಿಸುವ ಮುಖ-ಕಮಲವನ್ನು ಹೊಂದಿದ್ದವಳು; ಅವಳೊಂದಿಗೆ ಜಗದೇಕಸುಂದರನಾದ ಅನಂತಸ್ವರೂಪನಾದ ಶ್ರೀಕೃಷ್ಣರಮಿಸಿದ.

ಸರ್ವರ್ತುನಿತ್ಯೋದಿತಸರ್ವವೈಭವೇ
ಸುರತ್ನಚಾಮೀಕರವೃಕ್ಷಸದ್ವನೇ ।
ಸದೈವ ಪೂರ್ಣೇಂದುವಿರಾಜಿತೇ ಹರಿ-
ಶ್ಚಚಾರ ದೇವ್ಯಾ ಪವನಾನುಸೇವಿತೇ ॥ ೧೨೨ ॥

---

೧೨೨. ನನು ಸರ್ವದಾ ಪೂರ್ಣೇಂದುವಿರಾಜಿತತ್ವೇಽಹಃಪ್ರಯುಕ್ತಗುಣಾತಿಶಯೋ ವನಸ್ಯ ನ ಸ್ಯಾದಿತಿ ಚೇನ್ನ! ಸದೈವಾಹನ್ಯಪೀತಿ ವ್ಯಾಖ್ಯಾನಾತ್ । ಸರ್ವದಾ ತತ್ರ ಸೂರ್ಯಸ್ಯಾಪ್ಯುದಿತತ್ವೇನ ತಸ್ಯಾಪಿ ಭಾವಾತ್ । ತದುಕ್ತಂ ಯಮಕಭಾರತೇ 'ಸರ್ವರ್ತುವನೇ ಶಶಿನಾ ನಿಶಿ ಸತ್ಯಾಂ ವಾಸರೇ ವನೇಽಶಶಿನಾ' ಇತಿ (ಶ್ಲೋ. ೩೬)। –(ತಾ.)

ಅ: ಅದು ಸಕಲ ಋತುಗಳ ಸಕಲವೈಭವವನ್ನೂ ಸದಾ ಅಭಿವ್ಯಕ್ತಿಗೊಳಿಸುವಂತಹ; ಒಳ್ಳೆಯ ರತ್ನ, ಚಿನ್ನಗಳಿಂದ ತುಂಬಿದ ವೃಕ್ಷಗಳಿಂದ ಶೋಭಿಸುವ ಉತ್ತಮವನ. ಸದಾ ಪೂರ್ಣಚಂದ್ರನು ಕಂಗೊಳಿಸುವ ದಿವ್ಯ ತಾಣ. ಮಂದಮಾರುತ ಸದಾ ಅಲ್ಲಿ ಬೀಸುವುದು. ಅಂತಹ ಆ ಉದ್ಯಾನದಲ್ಲಿ ಶ್ರೀಕೃಷ್ಣನ ಸತ್ಯಭಾಮಾದೇವಿಯೊಂದಿಗೆ ವಿಹರಿಸಿದ.

ವಿ: ಅಲ್ಲಿ ಸದಾ ಪೂರ್ಣಚಂದ್ರ ಶೋಭಿಸುತ್ತಿದ್ದ ಎಂದರೆ ಹಗಲೇ ಇರಲಿಲ್ಲ ಎಂದರ್ಥವಲ್ಲ, ಹಗಲಿನಲ್ಲಾದರೆ ಸೂರ್ಯ ಶೋಭಿಸುತ್ತಿದ್ದ, ರಾತ್ರಿಗಳು ಮಾತ್ರ ಎಲ್ಲ ಹುಣ್ಣಿಮೆಯ ರಾತ್ರಿಗಳೇ ಆಗಿದ್ದವು ಎಂದರ್ಥ (ಯಮಕಭಾರತ – ಶ್ಲೋ. ೩೬):

ಸರ್ವರ್ತುವನೇ ಶಶಿನಾ ನಿಶಿ ಸತ್ಯಾಂ ವಾಸರೇ ವನೇಽಶಶಿನಾ ।

ನಿರ್ದೋಷಸಂವಿತ್ತನುರತ್ರ ಸತ್ತರುಂ
ದದರ್ಶ ಸತ್ಯಾಽಮೃತಮಂಥನೋದ್ಭವಮ್ ।
ಸಾ ಪಾರಿಜಾತಂ ಮಣಿಕಾಂಚನಾತ್ಮಕಂ
ಸಮಸ್ತಕಾಮಪ್ರದಮಾರ್ತಿಹಾರಿಣಮ್ ॥ ೧೨೩ ॥

ಅ: ನಿರ್ದೋಷಜ್ಞಾನಶರೀರಳಾದ ಸತ್ಯಭಾಮಾದೇವಿಯು ಆ ವನದಲ್ಲಿ ಅಮೃತಮಥನ ಕಾಲದಲ್ಲಿ ಹುಟ್ಟಿದಂತಹ ರತ್ನ ಚಿನ್ನಗಳ ಸ್ವರೂಪವಾದಂತಹ ಸಮಸ್ತಕಾಮನೆಗಳನ್ನೂ ನೀಡುವಂತಹ, ದುಃಖಗಳನ್ನು ಪರಿಹರಿಸುವಂತಹ ಉತ್ತಮವಾದ ಪಾರಿಜಾತವೃಕ್ಷವನ್ನು ಕಂಡಳು.

ವಿ: ೧) ಪಾರಿಜಾತವೃಕ್ಷವನ್ನು ತರುವುದಾಗಿ ಹೇಳಿ ಶ್ರೀಕೃಷ್ಣ ಅಲ್ಲಿಗೆ ಆಗಮಿಸಿದ್ದ, ಅದನ್ನು ಸತ್ಯಭಾಮಾದೇವಿ ಅಲ್ಲಿ ಕಂಡಳು ಎಂದರ್ಥ.

೨) ಪಾರಿಜಾತವು ಕಲ್ಪತರು ಮಂದಾರ ವೃಕ್ಷಗಳೊಂದಿಗೆ ಸಮುದ್ರಮಥನ ಕಾಲದಲ್ಲಿ ಉದ್ಭವಿಸಿದ ಅಪೂರ್ವ ವೃಕ್ಷ. ಕಲ್ಪವೃಕ್ಷ, ಕಾಮಧೇನುಗಳಂತೆ ಸಕಲಾಭೀಷ್ಟಗಳನ್ನೂ ನೀಡುವುದು ಅದರ ವಿಶೇಷ.

ದೃಷ್ಟ್ವೈವ ತಂ ಸುಸ್ಮಿತಚಂದ್ರಿಕಾಸ್ಫುರ-
ನ್ಮುಖಾರವಿಂದಾऽಸಿತಲೋಲಲೋಚನಾ ।
ಕಪೋಲನಿರ್ಘಾತಚಲತ್ಸುಕುಂಡಲಾ
ಜಗಾದ ದೇವಾಧಿಪತಿಂ ಪತಿಂ ಸತೀ ॥ ೧೨೪ ॥

ಅ: ಅದನ್ನು ಕಾಣುತ್ತಲೇ ಬೆಳದಿಂಗಳಿನಂತಹ ಮಂದಹಾಸದಿಂದ ಕೂಡಿದ ಮುಖಕಮಲವನ್ನು ಹೊಂದಿದವಳೂ, ಕಪ್ಪಾದ ಚಂಚಲ ನೇತ್ರಗಳನ್ನು ಹೊಂದಿದವಳೂ, ಕೆನ್ನೆಯಲ್ಲಿ ಶೋಭಿಸುವ ಚಲಿಸುವ ಕರ್ಣಕುಂಡಲಗಳನ್ನು ಹೊಂದಿದವಳೂ ಆದ ಸತ್ಯಭಾಮಾದೇವಿ ದೇವತೆಗಳ ಒಡೆಯನಾದ ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು.

ವಿ: ೧) ನಿತ್ಯಮುಕ್ತಳಾದ ಸಾಕ್ಷಾತ್ ಮಹಾಲಕ್ಷ್ಮಿಯೇ ಸತ್ಯಭಾಮಾ. ಸದಾ ಪೂರ್ಣಕಾಮಳಾದ ಅವಳಿಗೆ ಪಾರಿಜಾತಾದಿಗಳ ಅಪೇಕ್ಷೆ ಸರ್ವಥಾ ಇಲ್ಲ.

೨) ಬ್ರಹ್ಮಾದಿ ಸಮಸ್ತ ದೇವತೆಗಳ ಪಾಲಿಗೂ ಅವಳೇ ಕಲ್ಪವೃಕ್ಷ, ಕಾಮಧೇನು, ಪಾರಿಜಾತವಾಗಿರುವಾಗ ಈ ಪಾರಿಜಾತದ ಬಯಕೆ ಅವಳಿಗೆಲ್ಲಿಯದು.

೩) ಆದರೂ ಹಾಗೆ ಮಾಡಿದ್ದು ಲೋಕವಿಡಂಬನೆಗೆಂದು, ಅಸುರಮೋಹನಕ್ಕೆಂದು ತಿಳಿಯಬೇಕು ಎಂಬುದನ್ನು ಇಲ್ಲಿಯ ಅನೇಕ ವಿಶೇಷಣಗಳಿಂದ ತಿಳಿಸಿರುವರು.

೪) ಪಾರಿಜಾತದ ವರ್ಣನೆ ಹರಿವಂಶದಲ್ಲಿದೆ (೨/೬೭/೬೨–೬೫) :

ಪಾರಿಜಾತಂ ತತೋಽಸ್ಪಾಕ್ಷೀದದಿತ್ಯಾಃ ಪ್ರಿಯಕಾಮ್ಯಯಾ ।
ಸರ್ವಕಾಮಪ್ರದೈಃ ಪುಷ್ಪೈರಾವೃತಂ ನಿತ್ಯಗಂಧದೈಃ ॥
ತ್ರಿಶಾಖಂ ಸರ್ವದಾ ದೃಶ್ಯಂ ಸರ್ವಭೂತಮನೋಹರಮ್ ।
ಸರ್ವಪುಷ್ಪಾಣಿ ದೃಶ್ಯಂತೇ ತಸ್ಮಿನ್ನೇವ ಮಹಾದ್ರುಮೇ ॥
ಈದೃಶಾನ್ಯಪಿ ಪುಷ್ಪಾಣಿ ಬಿಭರ್ತ್ಯೇಕಾಽಪಿ ರೂಪಿಣೀ ।
ಬಹುರೂಪಾಣಿ ಚಾಪ್ಯನ್ಯಾ ಪದ್ಮಾನಿ ಚ ತತೋಽಪರಾ ॥
ಮಂದಾರಾದಪಿ ವೃಕ್ಷಾಚ್ಚ ಸಾರಮುದ್ಧೃತ್ಯ ಕಶ್ಯಪಃ ।
ತಸ್ಮಾದೇಷ ತರುಶ್ರೇಷ್ಠಃ ಸರ್ವೇಷಾಂ ಶ್ರೇಷ್ಠತಾಂ ಗತಃ ॥

ಪಾರಿಜಾತಾಪಹರಣ

ತರುರ್ಜಗಜ್ಜೀವದ ಮೇ ಗೃಹಾಂಗಣೇ
ಸಂಸ್ಥಾಪನೀಯೋಽಯಮಚಿಂತ್ಯಪೌರುಷ ।
ಇತೀರಿತಸ್ತಾಂ ಕಲಶೋಪಮಸ್ತನೀ-
ಮಾಲಿಂಗ್ಯ ದೇವಸ್ತರುಮುದ್ಬಬರ್ಹ ॥ ೧೨೫ ॥

ಅ: ''ಜಗತ್ತಿಗೆ ಬದುಕು ನೀಡುವ ಅಚಿಂತ್ಯ ಪೌರುಷಶಾಲಿಯಾದ ಶ್ರೀಕೃಷ್ಣ! ಈ ವೃಕ್ಷವನ್ನು ನನ್ನ ಮನೆಯ ಅಂಗಳದಲ್ಲಿ ಸ್ಥಾಪಿಸು''. ಅವಳು ಹೀಗೆನ್ನಲು ಕಲಶದಂತಹ ಸ್ತನವುಳ್ಳ ಅವಳನ್ನು ಆಲಿಂಗಿಸಿ ದೇವನಾದ ಶ್ರೀಕೃಷ್ಣ ಪಾರಿಜಾತ ವೃಕ್ಷವನ್ನು ಕಿತ್ತಿದನು.

ಸಕಲ ದೇವತೆಗಳ ಪರಾಭವ

ಸ ತೇನ ವೃಕ್ಷೇಣ ಸಹೈವ ಕೇಶವ-
ಸ್ತಯಾ ಚ ದೇವ್ಯಾऽऽರುಹದಗ್ರ್ಯಪೌರುಷಮ್ ।
ಖಗೇಶ್ವರಂ ತಚ್ಚ ನಿಶಮ್ಯ ಶಚ್ಯಾ
ಪ್ರಚೋದಿತೋ ವಾಸವ ಆಗಮತ್ ಸುರೈಃ ॥ ೧೨೬ ॥

ಅ: ಶ್ರೀಕೃಷ್ಣನು ಆ ವೃಕ್ಷದೊಂದಿಗೂ, ಸತ್ಯಭಾಮೆಯೊಂದಿಗೂ ಮಹಾಪೌರುಷಶಾಲಿಯಾದ ಗರುಡನನ್ನು ಏರಿದ. ಅದನ್ನು ಕೇಳಿ ಶಚಿಯಿಂದ ಪ್ರಚೋದಿತನಾಗಿ ಇಂದ್ರ ದೇವತೆಗಳೊಡನೆ ಅಲ್ಲಿಗೆ ಆಗಮಿಸಿದ.

ವಿ: ೧) ವನರಕ್ಷಕರಿಂದ ವಿಷಯ ತಿಳಿದ ಇಂದ್ರ ಶಚೀದೇವಿಯಿಂದ ಪ್ರೇರಿತನಾಗಿ ಸಮಸ್ತ ದೇವತೆಗಳ ಗುಂಪುಗಳಿಂದ ಕೂಡಿ ಐರಾವತವನ್ನೇರಿ ಶ್ರೀಕೃಷ್ಣನ ಮೇಲೆ ಯುದ್ಧಕ್ಕೆಂದೇ ಧಾವಿಸಿದ ಎಂದರ್ಥ.

೨) ಇಂದ್ರ, ಶಚಿಯರಿಗೂ ಇತರ ದೇವತೆಗಳಿಗೂ ಆ ಸಮಯದಲ್ಲಿ ಅಸುರಾವೇಶ ಉಂಟಾಗಿದ್ದೇ ಆ ರೀತಿಯಾದ ಶ್ರೀಕೃಷ್ಣ ವಿರೋಧಿ ವರ್ತನೆಗೆ ಕಾರಣ ಎಂಬುದನ್ನು ಮುಂದಿನ ಶ್ಲೋಕದಲ್ಲಿ ಹೇಳಿರುವರು.

ತಾನಾಸುರಾವೇಶಯುತಾನ್ ಹರೇಶ್ಚ
ಬಲಪ್ರಕಾಶಾಯ ಸಮುದ್ಯತಾನ್ ಸುರಾನ್ ।
ನ್ಯವಾರಯಚ್ಛಾರ್ಙ್ಗಶರಾಸನಚ್ಯುತೈ-
ರ್ಹರಿಪ್ರಿಯಾ ಬಾಣವರೈಃ ಸಮಸ್ತಶಃ ॥ ೧೨೭ ॥

ಅ: ಶ್ರೀಹರಿಯ ಬಲವನ್ನು ಪ್ರಕಟಿಸುವ ಸಲುವಾಗಿ ಸತ್ಯಭಾಮೆ ಅಸುರಾವೇಶದಿಂದ ಕೂಡಿದ, ಯುದ್ಧಕ್ಕೆ ಬಂದ ಆ ದೇವತೆಗಳನ್ನು ಶಾರ್ಙ್ಗ ಧನುಸ್ಸಿನಿಂದ ಬಿಡಲ್ಪಟ್ಟ ಶ್ರೇಷ್ಠ ಬಾಣಗಳಿಂದ ಎಲ್ಲೆಡೆಗಳಿಂದಲೂ ತಡೆದಳು.

---

೧೨೬. ಶ್ರುತ್ವಾ ಚೋತ್ಸಾಹಯಾಮಾಸ ಶಚೀ ಶಕ್ರಂ ಸುರಾಧಿಪಮ್ ॥ – ವಿಷ್ಣುಪುರಾಣ (೫/೩೦/೫೨)

೧೨೭. ಸ್ಪರ್ಧಂತ ಇವ ದೇವಾಸ್ತು ಹರಿಣಾ ಯತ್ರ ಕುತ್ರಚಿತ್ ।
ಹರೇರೇವಾಜ್ಞಯಾ ಕ್ವಾಪಿ ದೈತ್ಯಾವೇಶಾದಥಾಪಿ ವಾ ॥ – ಭಾ.ತಾ.(೫/೧೮/೨೭)

೧೨೭. ಕಾಂಶ್ಚಿದಸುರಾವೇಶಯುತಾನ್ ಕಾಂಶ್ಚಿದ್ಧರೇರ್ಬಲಪ್ರಕಾಶನಾಯ ಸಮುದ್ಯತಾನಿತಿ ಕೇಚಿಟ್ಪಣ್ಡಿತಕಾರಾಃ ।
ಅಸ್ಮಿನ್ ಪ್ರಸಂಗೇ ಕಸ್ಯಾಪಿ ಅಸುರಾವೇಶರಾಹಿತ್ಯಮಾಚಾರ್ಯೈರ್ನ ದರ್ಶಿತಮ್ । – (ಜ.)

ನಿರಾಯುಧಂ ವೈಶ್ರವಣಂ ಚಕಾರ
ಚಿಕ್ಷೇಪ ಚಾಬ್ಧೌ ಗರುಡೋ ಜಲೇಶಮ್ ।
ಪ್ರಧಾನವಾಯೋಸ್ತನಯಂ ಚ ವಾಯುಂ
ಕೋಣಾಧಿಪಂ ವಹ್ನಿಯಮಾದಿಕಾನಪಿ ॥ ೧೨೮ ॥

ಅ: ಸತ್ಯಭಾಮೆ ಕುಬೇರನನ್ನು ನಿರಾಯುಧನನ್ನಾಗಿಸಿದಳು, ಗರುಡ ವರುಣನನ್ನು ಎತ್ತಿ ಸಮುದ್ರಕ್ಕೆ ಎಸೆದ. ಪ್ರಧಾನವಾಯುವಿನ ಪುತ್ರನಾದ ಕೋಣಾಧಿಪನಾದ ವಾಯುವನ್ನು, ಅಗ್ನಿ, ಯಮ ಮೊದಲಾದವರನ್ನೂ ಸಹ ಪರಾಭವಗೊಳಿಸಿದಳು.

ವಿ: ೧) ಇಲ್ಲಿ ಸತ್ಯಭಾಮೆ ಸೋಲಿಸಿದ ಕುಬೇರ, ವರುಣ, ವಾಯು, ಅಗ್ನಿ ಮತ್ತು ಯಮ ಮೊದಲಾದವರೆಲ್ಲ ದಿಕ್ಪಾಲಕರುಗಳು ಎಂಬುದನ್ನು ಗಮನಿಸಬೇಕು. ಇಲ್ಲಿ ಪರಾಭವಗೊಂಡ ವಾಯು ಮುಖ್ಯಪ್ರಾಣನಲ್ಲ, ವಾಯವ್ಯ ದಿಕ್ಕಿಗೆ ಅಧಿಪತಿಯಾದ ಪ್ರವಹವಾಯು ಎಂಬುದನ್ನು ತಿಳಿಸಲು ಪ್ರಧಾನವಾಯೋಸ್ತನಯಂ ಕೋಣಾಧಿಪಂ ಎಂದು ವಿಶೇಷಣಗಳನ್ನು ನೀಡಿರುವರು.

೨) ಮುಖ್ಯ ವಾಯುದೇವರಿಗೆ ಅಸುರಾವೇಶಾದಿ ದೋಷಗಳಾಗಲೀ, ಹರಿಯನ್ನು ವಿರೋಧಿಸುವ ಪ್ರವೃತ್ತಿಯಾಗಲೀ ಸರ್ವಥಾ ಇಲ್ಲ ಎಂಬ ವಿವರ ಈಗಾಗಲೇ ಬಂದಿದೆ (೧೮/೬). ಸಮುದ್ರರಾಜನಾದ ವರುಣನನ್ನು ಸಮುದ್ರದಲ್ಲೇ ಎಸೆದದ್ದು ವಿಶೇಷ.

ವಿಬೋಧ್ಯ ಶಾರ್ಙ್ಗೋತ್ಥರವೈಃ ಸ್ವಕಾಂ ತನು-
ಮಾವೇಶಿತಾನಾಮಸುರೈರಗಾದ್ಧರಿಃ ।
ತೇ ಬೋಧಿತಾಸ್ತೇನ ರಣಂ ವಿಸೃಜ್ಯ
ಯಯುರ್ವಿದಿತ್ವಾ ತಮನಾದಿಪೂರುಷಮ್ ॥ ೧೨೯ ॥

ಅ: ಶಾರ್ಙ್ಗಧನುಸ್ಸಿನಿಂದ ಹೊರಹೊಮ್ಮುತ್ತಿದ್ದ ಧ್ವನಿಯಿಂದಲೇ ಅಸುರಾವೇಶದಿಂದ ಕೂಡಿದ್ದ ದೇವತೆಗಳಿಗೆ ತನ್ನ ಸ್ವರೂಪವನ್ನು ತಿಳಿಯುವಂತೆ ಮಾಡಿದ. ಅವನಿಂದ ಹಾಗೆ

---

೧೨೮. ಪ್ರಧಾನವಾಯೋಸ್ತನಯಮಿತ್ಯತ್ರ ಪ್ರಧಾನವಾಯೋಸ್ತನಯಂ ವಹ್ನಿಯಮಾದಿಕಾನ್ ದಿಕ್ಪಾಲಕಾನ್ ಪ್ರತ್ಯಪಿ ಅಸುರೈರಾವೇಶಿತಾನಾಮಿತರದೇವಾನಾಂ ಚ ಸ್ವಕಾಂ ತನುಂ ವಿಬೋಧ್ಯೇತ್ಯನ್ವಯಃ ॥ – (ವಾ.)

೧೨೮. ತದುಕ್ತಂ ದಶಮೇ (ಭಾಗ. ೧೦/೬೬/೨೫) –
'ತಂ ಪಕ್ಷಕೋಟ್ಯಾ ಗರುಡಃ ಸಮುದ್ಧೃತ್ಯ ಜಲೇಶ್ವರಮ್ ।
ಪದ್ಭ್ಯಾಂ ಗೃಹೀತ್ವಾ ಮಕರಂ ಚಿಕ್ಷೇಪ ವರುಣಾಲಯೇ' ಇತಿ । – (ಜ.)

ಜ್ಞಾನೋದಯ ಹೊಂದಿದ ಅವರು ಅವನನ್ನು ಅನಾದಿಪುರುಷನಾದ ಶ್ರೀಹರಿ ಎಂದು ತಿಳಿದು ಯುದ್ಧವನ್ನು ತೊರೆದು ಹೊರಟರು.

ವಿ: ೧) ಶಾರ್ಙ್ಗಧನುಸ್ಸಿನ ಧ್ವನಿಯಿಂದಲೇ ದೇವತೆಗಳಲ್ಲಿದ್ದ ಅಸುರಾವೇಶ ಪರಿಹಾರವಾಗಿ ಶ್ರೀಕೃಷ್ಣನು ಶ್ರೀಹರಿ ಎಂದು ಜ್ಞಾನೋದಯವಾಯಿತು ಎಂದರ್ಥ.

೨) ಶಾರ್ಙ್ಗಧನುಸ್ಸಿಗೆ ಸರಸ್ವತಿ *ಅಭಿಮಾನಿದೇವತೆ. ಸರಸ್ವತಿಯೇ ಶ್ರುತಿತತಿಗಳ ಅಭಿಮಾನಿದೇವತೆಯೂ ಹೌದು.

೩) ಅವರಿಗೆ ಶಾರ್ಙ್ಗ ಧನುಸ್ಸಿನ ಧ್ವನಿಗಳಿಂದ ಜ್ಞಾನ ಎಂದರೆ ವೇದಾಭಿಮಾನಿನಿಯಾದ ಸರಸ್ವತಿಯಿಂದ ಜ್ಞಾನ ಎಂಬ ಅರ್ಥ ಸೂಚಿತ.

ಗರುಡನಿಂದ ಶಿವನ ಪರಾಭವ

ಶಿವಂ ಚ ಶಕ್ರಾರ್ಥಮುಪಾಗತಂ ಹರಿ-
ರ್ವ್ಯದ್ರಾವಯಚ್ಛಾರ್ಙ್ಗವಿನಿಃಸೃತೈಃ ಶರೈಃ ।
ಸವಾಹನೋ ದೂರತರೇ ನಿಪಾತಿತೋ
ಗರುತ್ಮತಾ ಶಂಭುರಗಾಚ್ಛರಾಹತಃ ॥ ೧೩೦ ॥

ಅ: ಇಂದ್ರನಿಗಾಗಿ ಯುದ್ಧಮಾಡಲೆಂದು ಬಂದ ಶಿವನನ್ನು ಶ್ರೀಕೃಷ್ಣ ಶಾರ್ಙ್ಗಧನುಸ್ಸಿನಿಂದ ಹೊರಹೊರಟ ಬಾಣಗಳಿಂದ ಪಲಾಯನ ಮಾಡಿಸಿದ. ವಾಹನ ಸಮೇತನಾಗಿ ಗರುಡನಿಂದ ತುಂಬಾ ದೂರಕ್ಕೆ ಎಸೆಯಲ್ಪಟ್ಟ ಶಿವ ಬಾಣಗಳ ಹೊಡೆತದಿಂದ ದೂರಕ್ಕೆ ಓಡಿದ.

---

೧೨೯. ಶಾರ್ಙ್ಗೋತ್ಥರವೈರ್ವಿಬೋಧ್ಯೇತಿ ವದತಾ ಯದ್ಯಪಿ ಶರಾ ಅಪಿ ದೇವೇಷು ಪ್ರಯುಕ್ತಾಃ ತಥಾऽಪಿ ಸ್ವಭಕ್ತತ್ವಾತ್ ಯಥಾ ನ ಮ್ರಿಯೇರನ್ ತಥಾ ಕರುಣಯಾ ಮಂದಂ ಲಘು ಚ ಪ್ರಯುಕ್ತಾಃ। ಭೀಷಣಾಯ ಶಾರ್ಙ್ಗರವಂ ತು ಘನಗರ್ಜಿತವತ್ ಕರೋತಿ। ಅತಃ ಶರತಾಡನಾತ್ ಕೃಷ್ಣೋऽಯಮಿತಿ ಪ್ರಬೋಧೋ ನಾಭೂತ್। ಕಿಂತು ಗಂಭೀರಶಾರ್ಙ್ಗರವೈರೇವ ವಿಬೋಧೋ ಜಾತ ಇತಿ ಸೂಚಿತಮ್। ಅನ್ಯಥಾ ''ದೃಷ್ಟ್ವಾ ಸಮೀರಣೋ ಯುದ್ಧಾದಪಯಾತಂ ಹುತಾಶನಮ್। ಸಾಯಕಾಚಿತಸರ್ವಾಂಗಮಾತ್ಮಾನಂ ಚಾತಿವಿಹ್ವಲಃ। ವಿದಿತ್ವಾ ಪುಂಡರೀಕಾಕ್ಷಂ ಸಂಗ್ರಾಮೇ ಪ್ರತ್ಯುಪಸ್ಥಿತಮ್। ನ್ಯವರ್ತತ ಕುರುಶ್ರೇಷ್ಠ ಪ್ರಾಣತ್ರಾಣಪರಾಯಣಃ'' ಇತಿ ಭಾಗವತವಿರೋಧಃ ಸ್ಯಾತ್ ಅತ ಇತ್ಥಮೇವ ಯೋಜನಾ ॥ –(ವಾ.)

* ದುರ್ಗೈವ ಖಡ್ಗದೇವೀ ಸ್ಯಾಚ್ಛಾರ್ಙ್ಗಂ ಚೈವ ಸರಸ್ವತೀ ॥ –ಪದ್ಮಮಾಲಾ (ಶ್ಲೋ. ೭೯)

ವಿ: ೧) ಗರುಡನೇ ನಂದೀಶ್ವರನ ಸಮೇತವಾಗಿ ಮಹೇಶ್ವರನಾದ ಶಿವನನ್ನು ದೂರಕ್ಕೆ ಎತ್ತಿ ಎಸೆದ. ಈ ವಿವರವನ್ನು *ಭಾಗವತದಲ್ಲಿ ಕಾಣಬಹುದು.

೨) ಶ್ರೀವಾದಿರಾಜರು ಸರಸಭಾರತೀವಿಲಾಸದಲ್ಲಿ ಈ ವಿವರಗಳನ್ನು ವಿಶ್ಲೇಷಿಸುತ್ತಾ ಹರಿಸರ್ವೋತ್ತಮತ್ವಕ್ಕೆ ಇವೆಲ್ಲಾ ಹೇಗೆ ಸಾಧಕ ಎಂಬುದನ್ನು ನಿರೂಪಿಸಿರುವರು.

ಪಾರಿಜಾತಾಪಹರಣೇ ಸೇಶ್ವರಾ ದಿಗಧೀಶ್ವರಾಃ ।
ಆಯುಧ್ಯ ಹರಿಣಾ ಸಾರ್ಧಂ ಯುದ್ಧೇ ಕ್ರುದ್ಧಮನೋರಥಾಃ ॥ – (೯/೧೯)

ನಿರಾಯುಧಂ ಹರೇಃ ಪಕ್ಷೀ ಸಾಯುಧಂ ಚ ಸವಾಹನಮ್ ।
ದೋರ್ಭ್ಯಾಂ ಗೃಹೀತ್ವಾ ತ್ರ್ಯಕ್ಷಂ ತೇ ಚಿಕ್ಷೇಪ ಕಿಲ ಪೃಷ್ಠತಃ ॥ – (೯/೨೪)

ವಿದ್ರಾವಿತೇ ಬಾಣಗಣೈಶ್ಚ ಶೌರಿಣಾ
ಹರೇ ಹರೌ ವಜ್ರಮವಾಸೃಜದ್ದ್ರುತಮ್ ।
ಶಕ್ರೋಽಗ್ರಹೀತ್ ತಂ ಪ್ರಹಸನ್ ಜನಾರ್ದನಃ
ಕರೇಣ ವಾಮೇನ ಸ ಚಾಪಜಗ್ಮಿವಾನ್ ॥ ೧೩೧ ॥

ಅ: ಶ್ರೀಕೃಷ್ಣನಿಂದ ಬಾಣಗಳ ಸಮೂಹಗಳಿಂದ ಹರ ಪಲಾಯನ ಮಾಡಿದಾಗ ಇಂದ್ರ ಕೂಡಲೇ ವಜ್ರಾಯುಧವನ್ನು ಶ್ರೀಕೃಷ್ಣನ ಮೇಲೆ ಪ್ರಯೋಗಿಸಿದ. ಶ್ರೀಕೃಷ್ಣ ಅದನ್ನು ನಗುತ್ತಲೇ ತನ್ನ ಎಡಗೈಯಿಂದ ಹಿಡಿದ. ಇಂದ್ರ ಅಲ್ಲಿಂದ ಹಿಂದಕ್ಕೆ ಓಡತೊಡಗಿದ.

ವಿ: ೧) ಹರ ಸೋತು ಪಲಾಯನ ಮಾಡಿದ್ದನ್ನು ಕಂಡರೂ ಇಂದ್ರ ಇನ್ನೂ ಶ್ರೀಕೃಷ್ಣನ ಮೇಲೆ ಕಾದಲು ಬಂದಿದ್ದು ಇಲ್ಲಿಯ ಇನ್ನೊಂದು ವಿಶೇಷ. ಅದು ಮತ್ತೊಂದು ರೀತಿಯ ಮಿಥ್ಯಾಜ್ಞಾನ.

೨) ವಜ್ರಾಯುಧದಂತಹ ಅಪೂರ್ವ ಆಯುಧವನ್ನು ಎಡಗೈಯಿಂದಲೇ ಹಿಡಿಯುವ ಮೂಲಕ ಶ್ರೀಕೃಷ್ಣ ಅದರಲ್ಲಿ ತನ್ನ ವಿಭೂತಿ ರೂಪ ಇರುವುದನ್ನು ಸಾರಿದ ಎಂದು ತಿಳಿಯಬಹುದು :

ಆಯುಧಾನಾಮಹಂ ವಜ್ರಮ್ ... – ಗೀತಾ (೧೦/೨೮).

---

* ಗರುಡಃ ಪನ್ನಗರಿಪುಃ ಪದ್ಭ್ಯಾಂ ದ್ವಾಭ್ಯಾಂ ಚ ಸಂಯುಗೇ ।
ಪಕ್ಷಾಭ್ಯಾಂ ಚಂಚುಕೋಟ್ಯಾ ಚ ಮರ್ದಯಾಮಾಸ ತಂ ವೃಷಮ್ ॥
ತೂರ್ಣಂ ಗೃಹೀತ್ವಾ ಪಾಣಿಭ್ಯಾಂ ವಿಷಾಣೇ ತಸ್ಯ ನಂದಿನಃ ।
ಸಶೂಲಪಾಣಿಂ ಚಿಕ್ಷೇಪ ವೈನತೇಯೋ ಧನುಃಶತೇ ॥
ತತೋ ವಿಸೃಜ್ಯ ಸಂಗ್ರಾಮಂ ತ್ರಿಶೂಲೀ ವೃಷವಾಹನಃ ।
ಪ್ರಮಥೈಃ ಸಹಿತಃ ಪ್ರಾಯಾತ್ ಕುರುಶ್ರೇಷ್ಠ ಯಥಾಗತಮ್ ॥ –ಭಾಗವತ (೧೦/೬೬/೪೧,೪೮,೪೯)

ಸತ್ಯಭಾಮೆ ಮಾಡಿದ ಇಂದ್ರನ ಪರಿಹಾಸ

ಅಪಾಹಸತ್ ತಂ ಜಗದೇಕಸುಂದರೀ
ಹರಿಪ್ರಿಯಾऽಥೋ ಜಗದೇಕಮಾತರಮ್ ।
ಉವಾಚ ಶಕ್ರೋ ಜಗತಾಂ ಜನಿತ್ರೀ
ಪ್ರದರ್ಶಯಾಮೋ ವಯಮಾತ್ಮಶೈಶವಮ್ ॥ ೧೩೨ ॥

ಅ: ಜಗದೇಕಸುಂದರಿಯಾದ ಸತ್ಯಭಾಮೆ ಇಂದ್ರನನ್ನು ಲೇವಡಿಗೈದಳು, ಬಳಿಕ ಇಂದ್ರ ಎಲ್ಲ ಜಗತ್ತಿನ ಮುಖ್ಯ ತಾಯಿಯಾದ ಅವಳನ್ನು ಕೇಳಿಕೊಂಡ 'ನಾವು ಜಗತ್ತಿನ ತಂದೆಯ ಮುಂದೆ ನಮ್ಮ * ಬಾಲಚಾಪಲವನ್ನು ತೋರುತ್ತಿರುವೆವು'.

ವಿ: ೧) ಇತರ ದಿಕ್ಪಾಲಕರ ಅಸುರಾವೇಶ ಶಾರ್ಙ್ಗಧನುಸ್ಸಿನ ಧ್ವನಿಯಿಂದ ಪರಿಹಾರವಾದರೆ, ಇಂದ್ರನ ಅಸುರಾವೇಶ ಸತ್ಯಭಾಮಾದೇವಿಯ ಮಾತಿನಿಂದ ಪರಿಹಾರವಾಯಿತು ಎಂದರ್ಥ.

೨) ಸತ್ಯಭಾಮಾದೇವಿಯ ಮಾತು ಎಂಬುದು ವೇದವಚನಗಳ ಸಂಕೇತ. ವೇದಗಳ ಮುಖ್ಯಾಭಿಮಾನಿನಿ ಮಹಾಲಕ್ಷ್ಮಿಯೇ ಅಲ್ಲವೆ! ಇಂದ್ರನಿಗೆ ಅಸುರಾವೇಶ ಮರೆಯಾಗಿ ಕೇಳಿಕೊಂಡಃ ''ಇದು ನಮ್ಮ ಹುಡುಗತನ; ದಯವಿಟ್ಟು ಕ್ಷಮಿಸಿ''.

೩) ಸತ್ಯಭಾಮೆ ಅಪಹಾಸ್ಯ ಮಾಡಿದ್ದರ ವಿವರ ಭಾಗವತದಲ್ಲಿದೆ (ಸ್ಕಂಧ ೧೦, ಅ. ೬೬).

೪) ನಿನ್ನ ಬಗ್ಗೆ ಭಾರೀ ಕೊಚ್ಚಿಕೊಂಡಿದ್ದ ಶಚಿ ನಿನ್ನನ್ನು ಈ ಅವಸ್ಥೆಯಲ್ಲಿ ಕಂಡರೆ ಬಳಿ ಸೇರಿಸಿಕೊಂಡಾಳೇ + ಎಂದರ್ಥ.

ಇಂದ್ರನ ಶರಣಾಗತಿ

ಜಗಾಮ ಚಾಥೋ ಶರಣಂ ಜನಾರ್ದನಂ
ಸುರೈರ್ವೃತೋ ದೇವಪತಿಃ ಕ್ಷಮಾಪಯನ್ ।
ಶೃಂಗಂ ಚ ದತ್ತ್ವಾ ಮಣಿಪರ್ವತಸ್ಯ
ಪ್ರಣಮ್ಯ ದೇವ್ಯಾ ಸಹಿತಂ ಜಗದ್ಗುರುಮ್ ॥ ೧೩೩ ॥

---

* ವತ್ಸೋ ಯಥಾ ತನುಬಲಃ ಸಕೃದೇತ್ಯ ಮಾತರ್ಯೂಧಸ್ಯ ಪಾನಸಮಯೇ ಕುರುತೇ ವಿರೋಧಮ್ ।
ತದ್ವದ್ವಯಂ ಚ ನಿಜಶೈಶವಮಪ್ರಮೇಯೇ ನಾಥೇ ವಿರುದ್ಧ್ಯ ಪಿತಿತಾಶನಿ ದರ್ಶಯಾಮಃ ॥
– ಭಾಗವತ (೧೦/೬೬/೨೨)

\+ ಐಶ್ವರ್ಯಮತ್ತಾ ಪೌಲೋಮೀ ಭರ್ತೃಪೌರುಷಗರ್ವಿತಾ ।
ಅವಮಂಸ್ಯತಿ ಸದ್ಯಸ್ತ್ವಾಂ ಭಾರ್ಯಾ ರಣಪರಾಜಿತಮ್ ॥ – ಭಾಗವತ (೧೦/೬೬/೧೯)

ಅ: ಬಳಿಕ ದೇವತೆಗಳಿಂದ ಸಮೇತನಾಗಿ ಇಂದ್ರ ಶ್ರೀಕೃಷ್ಣನನ್ನು ಕ್ಷಮೆಯಾಚಿಸುತ್ತಾ ಶರಣು ಹೊಕ್ಕ. ಮಣಿಪರ್ವತದ ಶಿಖರವನ್ನು ಕಪ್ಪಕಾಣಿಕೆಯಾಗಿ ನೀಡಿ ಸತ್ಯಭಾಮಾಸಮೇತನಾದ ಜಗದ್ಗುರುವಾದ ಶ್ರೀಹರಿಯನ್ನು ಸಾಷ್ಟಾಂಗ ವಂದಿಸಿದ.

ವಿ: ಬಳಿಕ ಇಂದ್ರ ಸಮಸ್ತ ದೇವತೆಗಳೊಂದಿಗೆ ಶರಣಾಗಿ ಕ್ಷಮೆ ಯಾಚಿಸಿದ. ಶ್ರೀಕೃಷ್ಣ ನೀಡಿದ್ದ ಮಣಿಪರ್ವತದ ಶಿಖರವನ್ನು ಕಾಣಿಕೆಯಾಗಿ ನೀಡಿದ. ಇದು ಕೆರೆಯ ನೀರನು ಕೆರೆಗೆ ಚೆಲ್ಲಿ ಹರಿಯ ಕರುಣೆಯನ್ನು ಪಡೆವ ಒಂದು ಬಗೆಯಾಯಿತು ಎಂಬುದೂ ಗಮನಾರ್ಹ.

ಶ್ರೀಕೃಷ್ಣನಿಂದ ಇಂದ್ರನಿಗೆ ವರಪ್ರಾಪ್ತಿ

ಯಯಾಚ ಏನಂ ಪರಿರಕ್ಷಣಾಯ
ಶಚೀಪತಿಃ ಕೇಶವಮರ್ಜುನಸ್ಯ ।
ಜಗಾದ ಕೃಷ್ಣೋಽಪಿ ಧರಾತಲೇ ಸ್ಥಿತೇ
ನ ಮಯ್ಯಮುಂ ಕಶ್ಚನ ಜೇಷ್ಯತೀತಿ ॥ ೧೩೪ ॥

ಅ: ಅರ್ಜುನನ್ನು ಸಂರಕ್ಷಿಸಬೇಕೆಂದು ಶ್ರೀಕೃಷ್ಣನನ್ನು ಇಂದ್ರ ಬೇಡಿಕೊಂಡ. ಶ್ರೀಕೃಷ್ಣ ''ನಾನು ಭೂಮಿಯ ಮೇಲಿರುವಷ್ಟು ಕಾಲ ಅರ್ಜುನನನ್ನು ಯಾವನೂ ಸೋಲಿಸಲಾರ'' ಎಂದು ಹೇಳಿದ.

ವಿ: ೧) ಕೃಷ್ಣ ಹೀಗೆ ವರ ನೀಡುವ ಮೂಲಕ ತಾನು ಪರಂಧಾಮಕ್ಕೆ ತೆರಳಿದ ಮೇಲೆ ಅರ್ಜುನ ಅಭೀರರಿಗೆ ಸೋಲುವ ವಿಚಾರ(೩೨/೪೫)ವನ್ನು ಸೂಚ್ಯವಾಗಿ ತಿಳಿಸಿದ ಎಂದು ತಿಳಿಯಬಹುದು.

೨) ಅದು ಶ್ರೀಕೃಷ್ಣ ಭೂಮಿಯನ್ನು ತೊರೆದ ಮೇಲೆ ನಡೆದ ಘಟನೆಯಲ್ಲವೆ! ಅರ್ಜುನನಿಗಾಗಿ ಕೇಳಿದ ವರ ಎಂದರೆ ಇಂದ್ರನೇ ಅರ್ಜುನನಾದ್ದರಿಂದ ಅವನು ತನ್ನ ರಕ್ಷಣೆಗಾಗಿಯೇ ಕೇಳಿಕೊಂಡ ವರ ಎಂದರ್ಥ.

ತಮರ್ಜುನಾರ್ಥಂ ವರಮಾಪ್ಯ ವಾಸವಃ
ಪುನಃ ಪುನಶ್ಚಕ್ರಧರಂ ಪ್ರಣಮ್ಯ ।
ಪ್ರಸನ್ನದೃಷ್ಟ್ಯಾ ಹರಿಣಾಽಭಿವೀಕ್ಷಿತೋ
ಯಯೌ ಮಹಾಭಾಗವತಃ ಸ್ವಮಾಲಯಮ್ ॥ ೧೩೫ ॥

ಅ: ಅರ್ಜುನನ ಸಲುವಾಗಿ ಆ ವರ ಪಡೆದು ಇಂದ್ರ ಶ್ರೀಕೃಷ್ಣನನ್ನು ಪುನಃ ಪುನಃ ಸಾಷ್ಟಾಂಗ ವಂದಿಸಿದ. ಶ್ರೀಕೃಷ್ಣ ಅವನನ್ನು ಪ್ರಸನ್ನ ದೃಷ್ಟಿಯಿಂದ ನೋಡಿದ. ಮಹಾಭಾಗವತನಾದ ಇಂದ್ರ ತನ್ನ ಮನೆಗೆ ತೆರಳಿದ.

ವಿಃ ಇಂದ್ರ ಹಾಗೆ ಅಪರಾಧ ಮಾಡಿದ್ದರೂ ತನ್ನ ತಪ್ಪನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಶ್ರೀಕೃಷ್ಣನ ಅನುಗ್ರಹವನ್ನು ಸಂಪಾದನೆ ಮಾಡಿದ್ದರಿಂದ ಮಹಾಭಾಗವತರ ಸಾಲಿಗೆ ಸೇರಿದ ಎಂದು ತಿಳಿಯಬಹುದು.

ಮರಳಿ ಧರೆಗೆ ಶ್ರೀಕೃಷ್ಣ

ಕೃಷ್ಣೋಽಪ್ಯನುಜ್ಞಾಪ್ಯ ಪುರಂದರಂ ಪುರೀಂ
ನಿಜಾಂ ವ್ರಜನ್ನಭ್ಯಧಿಕಂ ವ್ಯರೋಚತ ।
ಕಿರೀಟಧಾರೀ ಚಲಕುಂಡಲೋಲ್ಲಸ-
ನ್ಮುಖಾಂಬುಜಃ ಪೀತಪಟಃ ಸಕೌಸ್ತುಭಃ ॥ ೧೩೬ ॥

ಅ: ಶ್ರೀಕೃಷ್ಣನು ಇಂದ್ರನಿಗೆ ತೆರಳಲು ಅನುಮತಿ ನೀಡಿ ತಾನು ತನ್ನ ದ್ವಾರಕಾ ಪುರಿಗೆ ತೆರಳಿದ. ಕಿರೀಟಧಾರಿಯಾಗಿ, ಚಲಿಸುವ ಕರ್ಣಕುಂಡಲಗಳಿಂದ ಹೊಳೆಯುವ ಮುಖಕಮಲ-ವುಳ್ಳವನಾಗಿ, ಪೀತಾಂಬರಧಾರಿಯಾಗಿ ಕೌಸ್ತುಭ ಧರಿಸಿದ ಶ್ರೀಕೃಷ್ಣ ಆಗ ಬಹುವಾಗಿ ಶೋಭಿಸಿದ.

ವಿರೋಚಮಾನಸ್ಯ ಸದಾ ಜಗತ್ಪ್ರಭೋ-
ರ್ನ ವೈ ವಿಶೇಷಃ ಕ್ವಚಿದಚ್ಯುತಸ್ಯ ।
ತಥಾಽಪಿ ತತ್ ಸ್ಮಾರಯಿತುಂ ವಚೋ ಭವೇ-
ದಪೇಕ್ಷ್ಯ ಚಾಲ್ಪಜ್ಞಮತಿಂ ಪುರಾಣಗಮ್ ॥ ೧೩೭ ॥

ಅ: ಸದಾ ಶೋಭಿಸುವ ಜಗದೊಡೆಯನಾದ, ಅಚ್ಯುತನಾದ ಶ್ರೀಹರಿಗೆ ಯಾವ ವಿಶೇಷವೂ ಸರ್ವಥಾ ಇಲ್ಲ. ಹಾಗಿದ್ದರೂ ಅದನ್ನು ತಿಳಿಸಿಕೊಡಲೆಂದು ಮಂದಮತಿಗಳ ದೃಷ್ಟಿಯಿಂದ ಪುರಾಣಗಳಲ್ಲಿ ಇಂತಹ ಮಾತುಗಳು ಬರುವವು.

ವಿಃ ೧) ಶ್ರೀಹರಿಯ ವೈಭವ ಅನಾದಿನಿತ್ಯವಾದುದು. ಅವನು ಶಶ್ವದೇಕಪ್ರಕಾರನಾದವನು. ಆದರೂ ಕೆಲವೊಮ್ಮೆ ವಿಶೇಷ ವೈಭವವನ್ನು ತೋರುವ ಮೂಲಕ ತನ್ನ ಹಿರಿಮೆಯನ್ನು ಅಜ್ಞಜನರೂ ಸಹ ವಿಶೇಷವಾಗಿ ತಿಳಿಯುವಂತಾಗಲಿ ಎಂದು ಹಾಗೆ ನಡೆಯುವನು ಎಂಬ ದೃಷ್ಟಿಯಿಂದ

---

೧೩೭. ತಥಾಽಪಿ ತತ್ ಸ್ಮಾರಯಿತುಮಿತ್ಯತ್ರ ಅಲ್ಪಜ್ಞಮತಿಮವೇಕ್ಷ್ಯ ಯತ್ಪುರಾಣಗಂ ವಚಃ ತತ್ಸ್ಮಾರಯಿತುಂ ತತ್ ಕದಾಚಿತ್ಕದಾಚಿತ್ ವಿಶೇಷದರ್ಶನಂ ಭವೇದಿತಿ ಯೋಜನಾ ॥ –(ವಾ.)

ಪುರಾಣಗಳಲ್ಲಿ ಶ್ರೀಹರಿಯನ್ನು ಇಂತಹ ಪ್ರಸಂಗಗಳಲ್ಲಿ ವಿಶೇಷವಾಗಿ ಶೋಭಿಸಿದ ಎಂದು ವರ್ಣಿಸುವುದುಂಟು ಎಂದರ್ಥ.

೨) ಇದರಿಂದ ಆಗ ಮಾತ್ರವೇ ಶ್ರೀಹರಿ ಶೋಭಿಸಿದ ಎಂದು ಸರ್ವಥಾ ತಪ್ಪು ತಿಳಿಯಕೂಡದು. ಹಿಂದೆ ಈ ಮಾತನ್ನು ನಿತ್ಯೋದಿತನಾದ ಸೂರ್ಯನಿಗೆ ಸೂರ್ಯ ಹುಟ್ಟಿದ ಎಂದು ಹೇಳುವಂತೆ ಎಂದು ನಿದರ್ಶನಪೂರ್ವಕ ತಿಳಿಸಿರುವುದನ್ನು ಸ್ಮರಿಸಿಕೊಳ್ಳಬಹುದು (೧೩/೧೩೭).

ಪ್ರವಿಶ್ಯ ಚೇಶಃ ಸ್ವಪುರೀಂ ಸ ಯಾದವೈಃ
ಸಂಪೂಜಿತೋಽಂತಃಪುರಮೇತ್ಯ ಚಾಂಗಣೇ ।
ತರುಂ ಪ್ರಿಯಾಯಾ ನ್ಯದಧಾದ್ಗೃಹಸ್ಯ
ಸಹೈವ ಶೃಂಗೇಣ ಚ ರತ್ನಸದ್ಗಿರೇಃ ॥ ೧೩೮ ॥

ಅ: ಸರ್ವೇಶ್ವರನಾದ ಶ್ರೀಕೃಷ್ಣ ತನ್ನ ಪಟ್ಟಣವನ್ನು ಪ್ರವೇಶಿಸಿದ. ಯಾದವರಿಂದ ವಿಶೇಷವಾಗಿ ಪೂಜಿತನಾದ. ಸತ್ಯಭಾಮೆಯ ಅಂತಃಪುರಕ್ಕೆ ತೆರಳಿ, ಅವಳ ಮನೆಯ ಅಂಗಳದಲ್ಲಿ ಮಣಿಪರ್ವತದ ಶಿಖರದೊಂದಿಗೆ ಪಾರಿಜಾತ ವೃಕ್ಷವನ್ನು ಸ್ಥಾಪಿಸಿದ.

ವಿ: ತಾನು ಸತ್ಯಭಾಮೆಗೆ ನೀಡಿದ ವಚನವನ್ನು ಹಾಗೆ ಶ್ರೀಕೃಷ್ಣ ಪೂರೈಸಿ **'ಪಾರಿಜಾತಾಪ-ಹಾರಕಃ'** (ಕೃಷ್ಣಾಷ್ಟೋತ್ತರಶತನಾಮಸ್ತೋತ್ರ) ಎಂದು ಲೋಕದಲ್ಲಿ ಖ್ಯಾತನಾದ ಎಂದರ್ಥ.

ಷೋಡಶಸ್ತ್ರೀಸಹಸ್ರೇಶನಾದ ಶ್ರೀಕೃಷ್ಣ

ಪ್ರದಾಯ ರತ್ನಾನಿ ಚ ಸರ್ವಸಾತ್ತ್ವತಾಂ
ಯಥೇಪ್ಸಿತಸ್ತಾ ಅಪಿ ಕನ್ಯಕಾಃ ಪ್ರಭುಃ ।
ಉದ್ವಾಹ್ಯ ರೇಮೇ ಪೃಥಗೇವ ರತ್ನ-
ಪ್ರಾಸಾದಸಂಸ್ಥಾಭಿರನಂತರೂಪಃ ॥ ೧೩೯ ॥

ಅ: ಅನಂತರೂಪನಾದ ಶ್ರೀಕೃಷ್ಣ ಸಕಲ ಯಾದವರಿಗೂ ಯಥೇಚ್ಛವಾಗಿ ರತ್ನಗಳನ್ನು ನೀಡಿದ. ಸರ್ವಸ್ವಾಮಿಯಾದ ಅವನು ಆ ಕನ್ಯೆಯರನ್ನು ವಿವಾಹವಾಗಿ ಅವರನ್ನು ರತ್ನದ ಉಪ್ಪರಿಗೆಯ ಮನೆಗಳಲ್ಲಿರಿಸಿ ಅವರೊಂದಿಗೆ ಪ್ರತ್ಯೇಕ ಪ್ರತ್ಯೇಕವಾಗಿಯೇ ರಮಿಸಿದ.

ವಿ: ೧) ನರಕಾಸುರನನ್ನು ಕೊಂದು ತಂದಿದ್ದ ರತ್ನಗಳನ್ನು ಯಾದವರಿಗೆ ಹಂಚಿದ.

೨) ಹದಿನಾರು ಸಾವಿರದ ನೂರು ಜನ ಕನ್ಯೆಯರನ್ನು ವಿವಾಹವಾಗಿ ಅವರನ್ನೆಲ್ಲ ರತ್ನದ ಉಪ್ಪರಿಗೆಯ ಮನೆಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಯೇ ಇರಿಸಿ ಪ್ರತಿಯೊಬ್ಬರ ಮನೆಯಲ್ಲೂ ಒಂದೊಂದು ರೂಪದಿಂದ ನೆಲೆಸಿ ಅನುಗ್ರಹಿಸಿದ ಎಂದರ್ಥ.

ಶ್ರೀಕೃಷ್ಣನ ಪುತ್ರ ಪುತ್ರಿಯರು

ಪೃಥಕ್ ಪೃಥಕ್ ತಾಸು ದಶೈವ ಪುತ್ರಕಾ-
ನಧತ್ತ ಕನ್ಯಾಮಪಿ ಸರ್ವಶಃ ಪ್ರಭುಃ ।
ಪ್ರದ್ಯುಮ್ನಸಾಂಬಾವಪಿ ಭಾನುಚಾರು-
ದೇಷ್ಣೌ ಚ ತೇಷಾಂ ನಿತರಾಂ ಗುಣಾಧಿಕಾಃ ॥ ೧೪೦ ॥

ಅ: ಶ್ರೀಕೃಷ್ಣ ಅವರಲ್ಲಿ ಒಬ್ಬೊಬ್ಬರಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಹತ್ತು ಜನ ಪುತ್ರರನ್ನೂ, ಒಬ್ಬ ಪುತ್ರಿಯನ್ನೂ ಹುಟ್ಟಿಸಿದ. ಅವರಲ್ಲಿ ಪ್ರದ್ಯುಮ್ನ, ಸಾಂಬ, ಭಾನು ಮತ್ತು ಚಾರುದೇಷ್ಣ ಇವರು ಇತರರಿಗಿಂತ ಗುಣಗಳಲ್ಲಿ ತುಂಬಾ ಶ್ರೇಷ್ಠರಾದವರು.

ವಿ: ೧) ಶ್ರೀಕೃಷ್ಣ ಹದಿನಾರುಸಾವಿರದ ನೂರೆಂಟು ಪತ್ನಿಯರಲ್ಲಿ ಪ್ರತಿಯೊಬ್ಬರಲ್ಲೂ ಹತ್ತು ಗಂಡು ಹಾಗೂ ಒಂದು ಹೆಣ್ಣಿನಂತೆ ಮಕ್ಕಳನ್ನು ಪಡೆದ; ಎಂದರೆ ಶ್ರೀಕೃಷ್ಣನ ಪುತ್ರರ ಸಂಖ್ಯೆ ೧,೬೧,೦೬೦ ಹಾಗೂ ಪುತ್ರಿಯರ ಸಂಖ್ಯೆ ೧೬,೧೦೬ ಎಂದಾಗುವುದು.

೨) ಶ್ರೀಕೃಷ್ಣ ಹೀಗೆ ಪ್ರತಿಯೊಬ್ಬರಲ್ಲೂ ಒಂದೇ ಸಂಖ್ಯೆಯ ಸಂತತಿಯನ್ನು ಪಡೆಯುವ ಮೂಲಕ ತಾನು ಸರ್ವಸಮರ್ಥ ಎಂದೂ, ಸಮ ಎಂದೂ ಜಗತ್ತಿಗೆ ಸಾರಿದ ಎಂದು ತಿಳಿಯಬೇಕು.

---

೧೪೦. ತೇಷಾಂ ನಿತರಾಂ ಗುಣಾಧಿಕಾ ಇತಿ –

ತೇಷಾಮುದ್ದಾಮವೀರ್ಯಾಣಾಮಷ್ಟಾದಶ ಮಹಾರಥಾಃ ।
ಆಸನ್ನುದಾರಯಶಸಃ ತೇಷಾಂ ನಾಮಾನಿ ಮೇ ಶೃಣು ॥
ಪ್ರದ್ಯುಮ್ನಶ್ಚಾರುದೇಷ್ಣಶ್ಚ ದೀಪ್ತಿಮಾನ್ ಭಾನುರೇವ ಚ ।
ಸಾಂಬಮಿತ್ಯೌ ಬೃಹದ್ಭಾನುರ್ಭಾನುರ್ವಿಂದೋ ವೃಕೋऽರುಣಃ ॥
ಪುಷ್ಕರೋ ದೇವಭಾನುಶ್ಚ ಶ್ರುತದೇವಃ ಸುನಂದನಃ ।
ಚಿತ್ರಬಾಹುರ್ವಿರೂಪಶ್ಚ ಕವಿರ್ನ್ಯಗ್ರೋಧ ಏವ ಚ ॥
ಕುಬ್ಜಾಯಾಂ ವಿಶೋಕಶ್ಚ.....' ಇತ್ಯಾದಿ ।

ತಥಾ ಚ ಸರ್ವೇಷಾಂ ಅಷ್ಟಾದಶಪ್ರಧಾನಾಃ ತತ್ರಾಪಿ ಪ್ರದ್ಯುಮ್ನೋದಯಶ್ಚತ್ವಾರೋ ನಿತರಾಂ ಪ್ರಧಾನಾ ಇತ್ಯರ್ಥಃ । – (ಮ.)

೧೪೦. ಏಕೈಕಸ್ಯಾಂ ದಶ ದಶ ಕೃಷ್ಣೋऽಜೀಜನದಾತ್ಮಜಾನ್ । – ಭಾಗವತ (೧೦/೯೦/೩೧)

೩) ಕೃಷ್ಣನು ಹಾಗೆ ಪ್ರತಿಯೊಬ್ಬರಲ್ಲೂ ತಾನು ಏಕಾದಶ ಮಕ್ಕಳನ್ನು ಪಡೆಯುವ ಮೂಲಕ ತಾನು ಏಕಾದಶೇಂದ್ರಿಯಾಧಿಪತಿಯಾದ ಹೃಷೀಕೇಶ ಎಂದೂ, ಏಕಾದಶೀವ್ರತಪ್ರಿಯ ಎಂದೂ ಸೂಚಿಸಿದ ಎಂದು ತಿಳಿಯಬಹುದು.

೪) ಕೃಷ್ಣನ ಪುತ್ರರಲ್ಲಿ ಪ್ರದ್ಯುಮ್ನ, ಸಾಂಬ, ಭಾನು, ಚಾರುದೇಷ್ಣ – ಈ ನಾಲ್ವರು ತುಂಬಾ ಶ್ರೇಷ್ಠರೆನ್ನಿಸಲು ಕಾರಣಗಳನ್ನು ಮುಂದೆ ತಿಳಿಸಿರುವರು.

ವಿವಸ್ವತೋ ಯೋಽವರಜೋಽದಿತೇಃ
ಸುತಃ ಖ್ಯಾತಶ್ಚ ನಾಮ್ನಾ ಸವಿತೇತಿ ಕೃಷ್ಣಾತ್ ।
ಜಾತಃ ಸ ಸತ್ಯಾಜಠರೇಽತ್ರ ನಾಮ್ನಾ
ಭಾನುಸ್ತು ಭೈಷ್ಮ್ಯ ಅಪಿ ಚಾರುದೇಷ್ಣಃ ॥ ೧೪೧ ॥

ಅ: ವಿವಸ್ವಾನ್ ಎಂಬ ಸೂರ್ಯನ ತಮ್ಮನಾದ ಸವಿತೃ ಎಂಬ ಅದಿತಿಪುತ್ರ ಶ್ರೀಕೃಷ್ಣನಿಂದ ಸತ್ಯಭಾಮೆಯ ಉದರದಲ್ಲಿ ಭಾನು ಎಂಬ ಹೆಸರಿನಿಂದ ಜನಿಸಿದ; ರುಗ್ಮಿಣಿಯಲ್ಲಿ ಚಾರುದೇಷ್ಣ ಹುಟ್ಟಿದ.

ಎ : ಭಾನು ಸತ್ಯಭಾಮಾಪುತ್ರ; ಚಾರುದೇಷ್ಣ ರುಗ್ಮಿಣೀಪುತ್ರ. ಭಾನುವು ಸವಿತೃ ಎಂಬ ಸೂರ್ಯನ ಅವತಾರ.

ಸ ಚಾರುದೇಷ್ಣೋಽಪಿ ಹಿ ವಿಷ್ಣುರಾಜೋ
ಯೇಽನ್ಯೇ ಚ ಕೃಷ್ಣಸ್ಯ ಸುತಾಃ ಸಮಸ್ತಾಃ ।
ತೇ ಚೈವ ಗೀರ್ವಾಣಗಣಾಸ್ತಥಾಽನ್ಯೇ
ಯೇ ದ್ವಾರಕಾಯಾಂ ನಿವಸಂತಿ ಸರ್ವೇ ॥ ೧೪೨ ॥

---

* ಯದಿ ರೇತೋಮಯೀ ಸೃಷ್ಟಿಃ ಕೃಷ್ಣಸ್ಯ ದ್ವಾರಕಾಪುರೇ ।
ತರ್ಹಿ ಷೋಡಶಸಾಹಸ್ರಪತ್ನೀಷ್ವೇಕೈಕಶಃ ಪ್ರಭೋಃ ॥
ಪುತ್ರಾ ದಶ ದಶೈವಾಸನ್ ನ ನ್ಯೂನಾ ನಾಧಿಕಾಃ ಕುತಃ ।
ಆದಿಪುಂಸೋ ಯಶ್ಚ ಕೃಷ್ಣಕೇಶಸ್ತಸ್ಯ ಪರಾಕ್ರಮಮ್ ॥ –ಸರಸಭಾರತೀವಿಲಾಸ (೧೧/೬೮,೬೯)

೧೪೨. 'ಯೇ ದ್ವಾರಕಾಯಾಂ ನಿವಸಂತಿ ಸರ್ವೇ' ಇತ್ಯತ್ರ ದ್ವಾರಕಾನಿವಾಸಿನಾಂ ಸರ್ವೇಷಾಂ ಗೀರ್ವಾಣಗಣತ್ವಮುಚ್ಯತೇ । ತದನುಪಪನ್ನಂ ಕೃತವರ್ಮಣೋಽನುಜಸ್ಯ ಶತಧನ್ವನಃ ಅಸುರತ್ವಾದಿತಿ ಚೇನ್ನ । ಯೇ ದ್ವಾರಕಾಯಾಂ ನಿವಸಂತಿ ತೇ ಗೀರ್ವಾಣಗಣಾ ಇತ್ಯುತ್ಸರ್ಗಃ । ಪೂರ್ವದೇಹೇ ದೈತ್ಯೋ ಯತಃ ತದಾಕಾರ ಇತಿ ಬಾಧಸ್ಯೋತ್ಕತ್ವಾದಿತಿ ಧ್ಯೇಯಮ್ ॥ – (ತಿ.)

ಅ: ಆ ಚಾರುದೇಷ್ಣ ಗಣೇಶನ ಅವತಾರ. ಇತರ ಶ್ರೀಕೃಷ್ಣಪುತ್ರರೆಲ್ಲ ದೇವತೆಗಳ ಸಮೂಹಕ್ಕೆ ಸೇರಿದವರೇ. ಅದರಂತೆ ದ್ವಾರಕೆಯಲ್ಲಿ ನೆಲೆಸಿದ್ದ ಎಲ್ಲರೂ ದೇವಾಂಶಸಂಭೂತರಾದವರೇ ಆಗಿದ್ದವರು.

ವಿ: ೧) ಶ್ರೀಕೃಷ್ಣಪುತ್ರರಲ್ಲಿ ಒಬ್ಬರೂ ಅಯೋಗ್ಯರಿರಲಿಲ್ಲ; ಎಲ್ಲರೂ ಸ್ಫುರದ್ರೂಪಿಗಳೇ. ಕೃಷ್ಣಪುತ್ರರಿರಲಿ, ಕೃಷ್ಣನೊಂದಿಗೆ ದ್ವಾರಕೆಯಲ್ಲಿ ನೆಲೆಸಿದ್ದ ಸರ್ವರೂ ದೇವತಾಗಣ– ದವರೇ ಆಗಿದ್ದವರು ಎಂಬುದು ವಿಶೇಷ. ಸತ್ರಾಜಿತನ ಕೊಲೆ ಮಾಡಿದ ಶತಧನ್ವ ಮಾತ್ರವೇ ಅಯೋಗ್ಯನಾಗಿದ್ದವನು. ಶತಧನ್ವ ಎಂಬ ಸುಜೀವಿಯೂ ಇರುವ ಉಲ್ಲೇಖ ಭಾಗವತದಲ್ಲಿದೆ (೨/೭/೪೪): 'ಮಾಂಧಾತ್ರಲರ್ಕಶತಧನ್ವನರಂತಿದೇವದೇವವ್ರತಾಃ'. ಇಬ್ಬರು ಬಲಿ, ಇಬ್ಬರು ಬಾಣರಂತೆ.

೨) ದ್ವಾರಕೆ ವೈಕುಂಠ ಲೋಕ ಇದ್ದಂತೆ. ವೈಕುಂಠದಲ್ಲಿ ಹೇಗೆ ಅಯೋಗ್ಯರಿಗೆ ಪ್ರವೇಶ– ಎಲ್ಲವೋ ಹಾಗೆಯೇ ದ್ವಾರಕೆಯಲ್ಲಿ ಅಯೋಗ್ಯರಿಗೆ ಪ್ರವೇಶವೇ ಇರಲಿಲ್ಲ ಎಂದು ತಿಳಿಯಬೇಕು.

ಪ್ರದ್ಯುಮ್ನ ಸಾಂಬರ ದಿಗ್ವಿಜಯ

ತಸ್ಯಾಂ ಸಮಸ್ತೈರಭಿಪೂಜ್ಯಮಾನೇ
ದೇವೈಃ ಸ್ವಪುರ್ಯಾಂ ನಿವಸತ್ಯನಂತೇ ।
ಯಯೌ ಕದಾಚಿತ್ ಸ ತು ರೌಗ್ಮಿಣೇಯಃ
ಸಾಂಬೇನ ಸಾರ್ಧಂ ಭುಜಗೇಂದ್ರಲೋಕಮ್ ॥ ೧೪೩ ॥

ಅ: ಶ್ರೀಕೃಷ್ಣನು ಹಾಗೆ ತನ್ನ ಪಟ್ಟಣ ದ್ವಾರಕೆಯಲ್ಲಿ ಸಮಸ್ತ ದೇವತೆಗಳಿಂದಲೂ ಅತ್ಯಂತ ಪೂಜಿತನಾಗಿ ವಾಸಿಸುತ್ತಿದ್ದಾಗ ಒಮ್ಮೆ ರುಗ್ಮಿಣಿಯ ಮಗನಾದ ಪ್ರದ್ಯುಮ್ನ ಸಾಂಬನೊಂದಿಗೆ ನಾಗಲೋಕದ ದಿಗ್ವಿಜಯಕ್ಕೆಂದು ತೆರಳಿದ.

ವಿ: ೧) ಪ್ರದ್ಯುಮ್ನ ರುಗ್ಮಿಣಿ ಪುತ್ರನಾದರೆ, ಸಾಂಬ ಜಾಂಬವತೀಪುತ್ರ, ಅವರಿಬ್ಬರೂ ಕಾಮನ ಅವತಾರ ಎಂಬುದು ವಿಶೇಷ.

೨) ಒಬ್ಬನೇ ದೇವತೆ ತನ್ನ ಎರಡು ಅವತಾರಗಳಿಂದ ದಿಗ್ವಿಜಯಕ್ಕೆ ಹೊರಟಿದ್ದು ಇಲ್ಲಿಯ ಮತ್ತೊಂದು ವಿಶೇಷ.

ಅಜ್ಞಾನತಸ್ತೈರಭಿಯೋಧಿತಃ ಸ
ಜಿಗಾಯ ಸರ್ವಾನಪಿ ವಾಸುಕಿಂ ಚ ।
ವಿದ್ರಾವ್ಯ ಬಾಣೈರಥ ರತ್ನಸಂಚಯಾನ್
ಸಮಾದದೇ ನೇಮುರಮುಂ ತತಸ್ತೇ ॥ ೧೪೪ ॥

ಅ: ಅಜ್ಞಾನದಿಂದ ಸರ್ಪಗಳು ಯುದ್ಧಕ್ಕೆ ತೊಡಗಿದಾಗ ಪ್ರದ್ಯುಮ್ನ ಅವರೆಲ್ಲರನ್ನೂ, ವಾಸುಕಿಯನ್ನೂ ಬಾಣಗಳಿಂದ ಪರಾಭವಗೊಳಿಸಿ ಓಡಿಸಿದ. ಅಲ್ಲಿದ್ದ ರತ್ನಗಳ ಸಮೂಹವನ್ನು ತೆಗೆದುಕೊಂಡ. ಅವರೆಲ್ಲ ಇವರಿಗೆ ವಂದಿಸಿದರು.

ವಿ: ೧) ಸಾಂಬನೊಂದಿಗೆ ಪ್ರದ್ಯುಮ್ನ ತೆರಳಿದ್ದರಿಂದ ಅವರಿಬ್ಬರೂ ಒಟ್ಟಾಗಿ ಅವರನ್ನು ಸೋಲಿಸಿದರು ಎಂದರ್ಥ.

೨) ಅವೆರಡೂ ಒಬ್ಬನೇ ದೇವತೆಯ ರೂಪವಾದ್ದರಿಂದ ಸಃ ಎಂದು ಮಾತ್ರ ಹೇಳಿರುವರು ಎಂದೂ ತಿಳಿಯಬಹುದು. ವಾಸುಕಿ ಸರ್ಪಗಳ ರಾಜ.

೩) ಅವನಲ್ಲಿ ಶ್ರೀಹರಿಯ ವಿಶೇಷ ವಿಭೂತಿರೂಪ ಇರುವ ಉಲ್ಲೇಖ ಗೀತೆಯಲ್ಲಿದೆ:

.... ಸರ್ಪಾಣಾಮಸ್ಮಿ ವಾಸುಕಿಃ । – ಗೀತೆ (೧೦/೨೮)

ತೈಃ ಪೂಜಿತಃ ಸಾಂಬಸಹಾಯ ಆಶು
ಮಯಂ ಚ ಮಾಯಾವಿನಮಸ್ತ್ರವರ್ಷೈಃ ।
ವಿಜಿತ್ಯ ರುಂಧಾನಮನೇನ ಪೂಜಿತೋ
ಯಯೌ ರಥೇನಾಂಬರಗೇನ ನಾಕಮ್ ॥ ೧೪೫ ॥

ಅ: ಅವರಿಂದ ಪೂಜಿತನಾಗಿ ಸಾಂಬನೊಂದಿಗೆ ಪ್ರದ್ಯುಮ್ನ ತನ್ನನ್ನು ತಡೆದ ಮಾಯಾವಿಯಾದ ಮಯನನ್ನು ಅಸ್ತ್ರಗಳ ಸುರಿಮಳೆಯಿಂದ ಬೇಗನೆ ಪರಾಭವಗೊಳಿಸಿದ. ಅವನಿಂದ ಪೂಜಿತನಾಗಿ ಗಗನಗಾಮಿಯಾದ ರಥದಲ್ಲಿ ಕುಳಿತು ಸ್ವರ್ಗಲೋಕಕ್ಕೆ ತೆರಳಿದ.

ತತ್ಕೃವ ಕೃಷ್ಣೇನ ತು ಪಾರಿಜಾತೇ
ಹೃತೇ ಜಯಂತಂ ಪ್ರಜಿಗಾಯ ಚಾಜೌ ।
ಸಂಸ್ಪರ್ಧಯಾऽऽಯಾತಮಮುಷ್ಯ ಚಾನುಜಂ
ಸಾಂಬೋऽಜಯದ್ವೃಷಭಂ ನಾಮ ಶಸ್ತ್ರೈಃ ॥ ೧೪೬ ॥

ಅ: ಕೃಷ್ಣನು ಪಾರಿಜಾತವನ್ನು ಅಪಹರಿಸಿದ್ದ ಎಂಬ ಕಾರಣದಿಂದ ಈಗ ಅವನ ಮೇಲೆ ಯುದ್ಧಕ್ಕೆ ಬಂದ ಜಯಂತನನ್ನು ಯುದ್ಧದಲ್ಲಿ ಪ್ರದ್ಯುಮ್ನ ಸೋಲಿಸಿದ. ಜಯಂತನ ತಮ್ಮನಾದ ಋಷಭ ಎಂಬವನನ್ನು ಸಾಂಬ ಶಸ್ತ್ರಗಳಿಂದ ಸೋಲಿಸಿದ.

ವಿ: ೧) ಇಂದ್ರಪುತ್ರರಾದ ಅವರಿಬ್ಬರನ್ನು ಉಪೇಂದ್ರನಾದ ಶ್ರೀಕೃಷ್ಣನ ಪುತ್ರನಾದ ಇವರಿಬ್ಬರು ಸೋಲಿಸಿದರು ಎಂಬುದು ಇಲ್ಲಿಯ ಸ್ವಾರಸ್ಯ.

೨) ಶ್ರೀಕೃಷ್ಣ ಇಂದ್ರನಿಗಿಂತ ಮಿಗಿಲಾಗಿದ್ದಂತೆ, ಶ್ರೀಕೃಷ್ಣಪುತ್ರರು ಇಂದ್ರಪುತ್ರರಿಗಿಂತ ಮಿಗಿಲಾಗಿದ್ದರು ಎಂಬಲ್ಲಿ ತಾರತಮ್ಯ ಪ್ರಕಟವಾಗಿರುವುದು ಗಮನಾರ್ಹ.

೩) ಜಯಂತ, ವೃಷಭ ಇಬ್ಬರೂ ಇಂದ್ರಪುತ್ರರು, ಇವರಿಬ್ಬರೂ ಪಾದಾಭಿಮಾನಿ ದೇವತೆಗಳು.

ಅಸ್ತ್ರೈ ತಾವಸ್ತ್ರವರೈರ್ನಿಹತ್ಯ
ತಯೋಶ್ಚ ತಾಭ್ಯಾಂ ಪ್ರತಿದಗ್ಧಯಾನೌ ।
ವಿದ್ರಾವ್ಯ ತೌ ಬಾಣವರೈಃ ಸುರೇಂದ್ರ-
ಸಂಪೂಜಿತೌ ಯಯತುರ್ವಿದ್ಯಯಾ ಖೇ ॥ ೧೪೭ ॥

ಅ: ಅವರಿಬ್ಬರ ಅಸ್ತ್ರಗಳನ್ನು ಇವರಿಬ್ಬರು ತಮ್ಮ ಶ್ರೇಷ್ಠ ಅಸ್ತ್ರಗಳಿಂದ ನಾಶಪಡಿಸಿದರು. ಅವರಿಬ್ಬರೂ ಇವರ ರಥವನ್ನು ಸುಟ್ಟುಹಾಕಿದರು. ಇವರು ಅವರನ್ನು ಶ್ರೇಷ್ಠ ಬಾಣಗಳಿಂದ ಸೋಲಿಸಿ ಓಡಿಸಿದರು. ದೇವೇಂದ್ರ ಇವರಿಬ್ಬರನ್ನೂ ವಿಶೇಷವಾಗಿ ಸಮ್ಮಾನಿಸಿದ.

ವಿ: ೧) ಇವರು ಏರಿ ಹೊರಟಿದ್ದ ಗಗನಗಾಮಿಯಾದ ರಥ ಜಯಂತ ವೃಷಭರಿಂದ ನಾಶವಾಯಿತು. ಬಳಿಕ ಇವರು ಸ್ವಯಂ ಮಂತ್ರಶಕ್ತಿಯಿಂದ ಆಕಾಶದಲ್ಲಿ ಹಾಗೆಯೇ ಪ್ರಯಾಣವನ್ನು ಮುಂದುವರಿಸಿದರು.

೨) ಈ ಮಂತ್ರವಿದ್ಯೆ ಪ್ರದ್ಯುಮ್ನನಿಗೆ ರತಿ ಹೇಳಿಕೊಟ್ಟಿದ್ದ ಪರಶುರಾಮದೇವತಾಕವಾದ ಅಪೂರ್ವವಿದ್ಯೆ ಎಂಬ ವಿವರ ಈಗಾಗಲೇ ಬಂದಿದೆ (೧೭/೧೯೪).

ನಾರದರು ಕಂಡ ಶ್ರೀಕೃಷ್ಣನ ಅಪೂರ್ವ ದಾಂಪತ್ಯ

ಸ ವಿದ್ಯಯಾ ಸಾಂಬಮುದೂಹ್ಯ ರತ್ಯಾ
ಪ್ರದತ್ತಯಾ ರುಗ್ಮಿಣಿನಂದನಃ ಪುರೀಮ್ ।
ಯಯೌ ತತೋ ನಾರದ ಆಗಮದ್ಧ್ರುತಂ
ಜ್ಞಾತುಂ ಹರೇರ್ಬಹುಭಾರ್ಯಾಸು ವೃತ್ತಿಮ್ ॥ ೧೪೮ ॥

ಅ: ಅವನು ರತಿ ನೀಡಿದ್ದ ಆ ಮಂತ್ರವಿದ್ಯೆಯಿಂದ ಸಾಂಬನನ್ನು ಹೊತ್ತುಕೊಂಡು ದ್ವಾರಕೆಗೆ ತೆರಳಿದ. ಆಗೊಮ್ಮೆ ನಾರದರು ಶ್ರೀಕೃಷ್ಣನು ತನ್ನ ಬಹುಜನಪತ್ನಿಯರಲ್ಲಿ ನಡೆದುಕೊಳ್ಳುವ ಬಗೆಯನ್ನು ಅರಿಯಲೆಂದು ಅಲ್ಲಿಗೆ ಆಗಮಿಸಿದರು.

ವಿ: ೧) ಪ್ರದ್ಯುಮ್ನ ತನಗಿದ್ದ ಮಂತ್ರವಿದ್ಯೆಯ ಪ್ರಭಾವದಿಂದ ಸಾಂಬನನ್ನು ಹೊತ್ತುಕೊಂಡು ಗಗನಮಾರ್ಗದಿಂದ ತೆರಳಿದ. ಅವರಿಬ್ಬರು ಕಾಮನ ಅವತಾರವಾಗಿದ್ದುದು ಅದಕ್ಕೆ ಮತ್ತೊಂದು ರೀತಿಯಾಗಿ ಪೋಷಕವಾಗಿತ್ತು ಎಂದು ತಿಳಿಯಬಹುದು.

೨) ನಾರದರು ಕೃಷ್ಣನು ತನ್ನ ಹದಿನಾರು ಸಾವಿರದಾ ನೂರೆಂಟು ಪತ್ನಿಯರ ಜೊತೆಗೆ ಸಂಸಾರ ಸಾಗಿಸುವುದನ್ನು ಕಣ್ಣಾರೆ ಕಾಣಲೆಂದು ದ್ವಾರಕೆಗೆ ತೆರಳಿದ್ದ ಪ್ರಸಂಗ ನಡೆಯುವುದು ಈ ಸಂದರ್ಭದಲ್ಲಿ.

ಪಾಂಡವರ ಬಳಿಗೆ ನಾರದರು

ತಂ ದ್ವ್ಯಷ್ಟಸಾಹಸ್ರಗೃಹೇಷು ದೃಷ್ಟ್ವಾ
ತಾವತ್ಸ್ವರೂಪೈರ್ವಿಹರಂತಮೇಕಮ್ ।
ಸುವಿಸ್ಮಿತಃ ಪ್ರಯಯೌ ತಂ ಪ್ರಣಮ್ಯ
ಶಕ್ರಪ್ರಸ್ಥಂ ಪೂಜಿತಶ್ಚಾತ್ರ ಪಾರ್ಥೈಃ ॥ ೧೪೯ ॥

ಅ: ಶ್ರೀಕೃಷ್ಣ ಹದಿನಾರು ಸಾವಿರದ ನೂರು ಮನೆಗಳಲ್ಲಿ ಅಷ್ಟು ಸಂಖ್ಯೆಯ ತನ್ನ ರೂಪಗಳಿಂದ ಒಬ್ಬನೇ ವಿಹರಿಸುವುದನ್ನು ಕಂಡು ನಾರದಮುನಿ ತುಂಬಾ ಆಚ್ಚರಿಪಟ್ಟು ಅವನಿಗೆ ಸಾಷ್ಟಾಂಗ ವಂದಿಸಿ ಇಂದ್ರಪ್ರಸ್ಥಕ್ಕೆ ತೆರಳಿದರು. ಅಲ್ಲಿ ಪಾಂಡವರು ಅವರನ್ನು ಆದರಿಸಿದರು.

ವಿ: ೧) ಶ್ರೀಕೃಷ್ಣನು ಪ್ರತಿಯೊಬ್ಬ ಪತ್ನಿಯ ಮನೆಯಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿ ನೆಲೆಸಿ ಬಗೆಬಗೆಯ ಕಾರ್ಯಗಳನ್ನು ಮಾಡುತ್ತಿದ್ದ ವಿವರ ಶ್ರೀಮದ್ಭಾಗವತದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ (ಸ್ಕಂಧ ೧೦, ಅಧ್ಯಾಯ ೬೯).

೨) ಪ್ರತಿಯೊಂದು ಮನೆಯಲ್ಲೂ ನಾರದರನ್ನು ಕೃಷ್ಣ ಸಂಭ್ರಮದಿಂದ ಸ್ವಾಗತಿಸಿ ತಾನು ಭಕ್ತವತ್ಸಲ ಎಂಬುದನ್ನು ನಿರೂಪಿಸಿದ.

೩) ನಾರದರು ಹಾಗೆ ಆಗಮಿಸಿದ್ದು ಕೃಷ್ಣನನ್ನು ಪರೀಕ್ಷಿಸಲೆಂದಲ್ಲ; ಶ್ರೀಕೃಷ್ಣನ ಬಗೆಯನ್ನು ತಿಳಿಯಲೆಂದು ಮಾತ್ರ ಎಂಬ ವಿವರ ಹಿಂದಿನ ಶ್ಲೋಕದಲ್ಲಿಯೇ ಬಂದಿದೆ.

ಸ ಆಜ್ಞಯಾ ಬ್ರಹ್ಮಣ ಆಹ ಕೃಷ್ಣಾಂ
ಕ್ರಮಾತ್ ಕರ್ತುಂ ಭೀಮ ಏವೈಕಸಂಸ್ಥಾಮ್ ।
ಅನ್ಯಾ ದೇವೀಃ ಸ್ವಾಪಯಿತ್ವಾ ಶರೀರೇ
ತಸ್ಯಾ ಭಾರತ್ಯಾಃ ಪೂರ್ಣಭೋಗಾರ್ಥಮೇವ ॥ ೧೫೦ ॥

ಅ: ಕ್ರಮವಾಗಿ ದ್ರೌಪದಿಯನ್ನು ಭೀಮನೊಬ್ಬನಲ್ಲಿಯೇ ನೆಲೆಗೊಳಿಸಬೇಕು, ಶರೀರದಲ್ಲಿನ ಇತರ ದೇವಿಯರನ್ನು ಸುಪ್ತಿಗೊಳಿಸಿ ಆ ಭಾರತೀ ದೇವಿಗೆ ಪೂರ್ಣಭೋಗವನ್ನು ದೊರಕಿಸಿಕೊಡಬೇಕು ಎಂಬ ಕಾರಣದಿಂದ ಅವರು ಬ್ರಹ್ಮ ದೇವರ ಅಪ್ಪಣೆಯಂತೆ ಪಾಂಡವರಿಗೆ ತಿಳಿಸಿದರು.

ಏ: ನಾರದರು ಅಲ್ಲಿಗೆ ಬಂದಿದ್ದುದು ಪಾಂಡವರಿಗೆ ಬ್ರಹ್ಮದೇವರ ವಿಶೇಷವಾದ ಆದೇಶವನ್ನು ತಲುಪಿಸಲೆಂದು. ಆ ಆದೇಶದಂತೆ ಕ್ರಮವಾಗಿ ಭೀಮ ದ್ರೌಪದಿಯರು ಮಾತ್ರ ಪತಿ ಪತ್ನಿಯರಾಗಲು ಅವಕಾಶ ಕಲ್ಪಿಸುವುದೇ ಆಗಿತ್ತು

ಪರಸ್ಪರ ಹತರಾದ ಸುಂದೋಪಸುಂದರು

ಸುಂದೋಪಸುಂದೌ ಭ್ರಾತರೌ ಬ್ರಹ್ಮವಾಕ್ಯಾತ್
ಪರಸ್ಪರಾದನ್ಯತೋ ನೈವ ವಧ್ಯೌ ।
ತಿಲೋತ್ತಮಾರ್ಥೇ ನಿಹತೌ ಪರಸ್ಪರಂ
ತಯೋರ್ವಧಾರ್ಥೇ ಸೃಷ್ಟಯಾ ತೇನ ದೈತ್ಯೌ ॥ ೧೫೧ ॥

ಅ: ಸುಂದ ಮತ್ತು ಉಪಸುಂದ ಎಂಬ ಇಬ್ಬರು ಸಹೋದರರು ಬ್ರಹ್ಮವರದಿಂದಾಗಿ ಪರಸ್ಪರರ ಹೊರತು ಬೇರಾರಿಂದಲೂ ಸಾವಿಲ್ಲದವರಾಗಿದ್ದರು. ಅವರಿಬ್ಬರೂ ತಿಲೋತ್ತಮೆಗೋಸ್ಕರವಾಗಿ ಪರಸ್ಪರ ಕಾದಾಡಿ ಸತ್ತರು. ಅವಳು ಆ ಇಬ್ಬರು ದೈತ್ಯರ ವಧೆಗಾಗಿ ಬ್ರಹ್ಮದೇವರಿಂದ ನಿರ್ಮಿತಳಾಗಿದ್ದವಳು.

---

೧೫೦. ಯದ್ಯಪಿ ದಿನೇ ದಿನೇ ಏಕೈಕೇನ ಸಂಭೋಗೇಽಪಿ ಭೀಮದಿನೇ ಅನ್ಯಾಃ ಸ್ವಾಪಯಿತ್ವಾ ಸಂಭೋಗೇ ಭಾರತ್ಯಾಸ್ತಸ್ಮಿನ್ ದಿನೇ ಸಂಪೂರ್ಣಭೋಗೋ ಭವತಿ। ತಥಾಽಪಿ ವತ್ಸರಮಾತ್ರಂ ಕೃಷ್ಣಾಯಾ ಏವ ಸಂಪೂರ್ಣಭೋಗಂ ದಾತುಂ ವತ್ಸರಕಟ್ಟಲಿಕೇತಿ ಭಾವೇನಾಹ ಕೃಷ್ಣಾಂ ಕ್ರಮಾತ್ ಕರ್ತುಂ ಭೀಮ ಏವೈಕಸಂಸ್ಥಾಮಿತಿ ॥ – (ವಾ.)

೧೫೧. ತಯೋರ್ವಧಾರ್ಥೇ ಸೃಷ್ಟಯೇತ್ಯತ್ರ ತಯೋರ್ವಧಾರ್ಥಂ ತೇನ= ಬ್ರಹ್ಮಣಾ ಸೃಷ್ಟಯಾ= ತಿಲೋತ್ತಮಯಾ ಮೋಹಿತೌ ಸಂತಾವಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ ॥ – (ವಾ.)

೧೫೧. ನಿಹತೌ ಗದಾಭ್ಯಾಮಿತಿ ಶೇಷಃ । – (ಜ.)

ವಿ: ೧) ಸುಂದ ಉಪಸುಂದ ಎಂಬ ಇಬ್ಬರು ಅಸುರರು ಹಿರಣ್ಯಕಶಿಪುವಿನ ವಂಶದಲ್ಲಿ ಜನಿಸಿದವರು. ಅವರಿಬ್ಬರೂ ಬ್ರಹ್ಮನಿಂದ ಪಡೆದ ವರ ವಿಚಿತ್ರವಾಗಿತ್ತು. ಪರಸ್ಪರರ ಹೊರತು ಬೇರಾರಿಂದಲೂ ಸಾವಿಲ್ಲದಂತೆ ಅವರು ವರ ಪಡೆದುಕೊಂಡಿದ್ದರು. ಎಲ್ಲ ಬಗೆಯಲ್ಲೂ ಏಕದೇಹ ನ್ಯಾಯದಂತೆ ಅನ್ಯೋನ್ಯವಾಗಿರುವ ತಮ್ಮಲ್ಲಿ ಪರಸ್ಪರ ವಿರೋಧ ಎಂದೂ ಬರುವ ಸಂಭವವೇ ಇಲ್ಲವಾದುದರಿಂದ ತಮಗೆ ಪರಸ್ಪರ ಮರಣ ಅಸಂಭಾವಿತ ಎಂಬುದು ಅವರ ಚಿಂತನೆಯಾಗಿತ್ತು. ಅಂತಹ ವರ ಪಡೆದ ಮೇಲೆ ಅವರು ಋಷಿಮುನಿಗಳನ್ನು ಪೀಡಿಸಿ ದೇವಕಾರ್ಯಗಳಿಗೆ ವಿಘ್ನ ಉಂಟುಮಾಡಿದರು. ಆಗ ದೇವತೆಗಳ ಪ್ರಾರ್ಥನೆಯಂತೆ ಬ್ರಹ್ಮದೇವ ವಿಶ್ವಕರ್ಮನಿಂದ ನಿರ್ಮಿಸಿದ ಅಪೂರ್ವವಾದಂತಹ ಸ್ತ್ರೀ ಈ ತಿಲೋತ್ತಮೆ.

೨) ಎಲ್ಲ ರತ್ನಪ್ರಾಯವಾದ ಸುಂದರ ವಸ್ತುಗಳಿಂದ ತಿಲಾಂಶದಷ್ಟು ಸಾರವನ್ನು ತೆಗೆದು ಅವಳು ನಿರ್ಮಿತಳಾದ್ದರಿಂದ ತಿಲೋತ್ತಮೆ ಎಂದು ಹೆಸರು ಪಡೆದಳು :

ತಿಲಂ ತಿಲಂ ಸಮಾನೀಯ ರತ್ನಾನಾಂ ಯದ್ವಿನಿರ್ಮಿತಾ ।
ತಿಲೋತ್ತಮೇತಿ ತತ್ ತಸ್ಯಾ ನಾಮ ಚಕ್ರೇ ಪಿತಾಮಹಃ ॥– ಭಾರತ(೧/೨೧೦/೧೮)

೩) ಅವಳ ಸೌಂದರ್ಯವನ್ನು ನೋಡಲೆಂದು ಶಿವನಿಗೆ ನಾಲ್ಕು ಮುಖಗಳು ಹೆಚ್ಚಾಗಿ ಅವನು ಪಂಚಮುಖನೆನ್ನಿಸಿದ, ಇಂದ್ರ ಸಹಸ್ರಾಕ್ಷನಾದ ಎಂದು ಮಹಾಭಾರತ ವರ್ಣಿಸಿದೆ :

ಏವಂ ಚತುರ್ಮುಖಃ ಸ್ಥಾಣುಃ ಮಹಾದೇವೋಽಭವತ್ ಪುರಾ ।
ತಥಾ ಸಹಸ್ರನೇತ್ರಶ್ಚ ಬಭೂವ ಬಲಸೂದನಃ ॥ – (ಆದಿ.೨೧೦/೨೮)

೪) ಅವಳಿಂದ ಮೋಹಿತರಾದ ಸುಂದೋಪಸುಂದರು ಅವಳು ತನಗೆ ತನಗೆ ಎಂದು ಕಾದಾಡಿ ಹತರಾದರು (ಭಾರತ ಆದಿ. ಅ.೨೦೭–೨೧೧). ಎರಡು ಅಧ್ಯಾಯಗಳ ಇಂತಹ ಉಪಾಖ್ಯಾನವನ್ನು ಒಂದೇ ಶ್ಲೋಕದಲ್ಲಿ ಸಮಗ್ರ ಸಂಗ್ರಹಿಸಿರುವ ಶ್ರೀಮದಾಚಾರ್ಯರ ಕೌಶಲ ಎಷ್ಟು ಅದ್ಭುತ ಎಂಬುದನ್ನು ಗಮನಿಸಬೇಕು: **'ಸಂಕ್ಷೇಪ ವಿಸ್ತಾರಾಭ್ಯಾಂ ಹಿ ಪ್ರವದಂತಿ ಮನೀಷಿಣಃ'.**

ಬ್ರಹ್ಮದೇವರ ಆದೇಶ

ಅತಃ ಪೃಥಗ್ವತ್ಸರತೋ ಭವತ್ಸು
ಕ್ರಮಾತ್ ಕೃಷ್ಣಾ ತಿಷ್ಠತಾಂ ಯೋಽನ್ಯಯುಕ್ತಾಮ್ ।
ಪಶ್ಯೇದ್ವೋಽಸೌ ವತ್ಸರಂ ತೀರ್ಥಯಾತ್ರಾಂ
ಕುರ್ಯಾದಿತಿ ಸ್ಮಾಥ ಚಕ್ರುಸ್ತಥಾ ತೇ ॥ ೧೫೨ ॥

---

೧೫೨. ಅನ್ಯಯುಕ್ತಾಂ ಪಶ್ಯೇದ್ವೋಽಸಾವಿತ್ಯತ್ರ ವಃ = ಯುಷ್ಮಾಕಂ ಮಧ್ಯೇ ಯಃ ಅನ್ಯಯುಕ್ತಾಂ = ಸ್ವಸ್ಮಾದನ್ಯೇನ ಯುಧಿಷ್ಠಿರಾದಿನಾ ಯುಕ್ತಾಮಿತ್ಯನ್ವಯಃ ॥ – (ವಾ.)

ಅ: ''ಆದ್ದರಿಂದ ನಿಮ್ಮಲ್ಲಿ ದ್ರೌಪದಿ ವರ್ಷಕ್ಕೊಬ್ಬರಂತೆ ಕ್ರಮವಾಗಿ ಸಂಸಾರ ಮಾಡಲಿ, ಬೇರೊಬ್ಬರ ಜೊತೆಗಿದ್ದಾಗ ಅವಳನ್ನು ಯಾರು ನೋಡುವರೋ ಅವರು ಒಂದು ವರ್ಷಕಾಲ ತೀರ್ಥಯಾತ್ರೆಯನ್ನು ಮಾಡತಕ್ಕದ್ದು''. ಅವರು ಅದರಂತೆ ನಡೆದುಕೊಂಡರು.

ಎ: ೧) ಆ ವರೆಗೆ ದಿನಕ್ಕೊಬ್ಬರ ಜೊತೆಗೆ ಸಂಸಾರ ಮಾಡುತ್ತಿದ್ದ ದ್ರೌಪದಿ ಅಂದಿನಿಂದ ವರ್ಷಪೂರ್ತಿ ಒಬ್ಬರ ಜೊತೆ ಎಂಬ ಕ್ರಮದಲ್ಲಿ ಅವರೊಂದಿಗೆ ಸಂಸಾರ ಮಾಡತೊಡಗಿದರು ಎಂದರ್ಥ.

೨) ಇಲ್ಲಿಯ ಸುಂದೋಪಸುಂದರ ಕಥೆ ಅಪೂರ್ವ ತತ್ವವೊಂದನ್ನು ಸೂಚಿಸುವ ಕಥೆ. ಬೇರೆ ವಸ್ತುಗಳ ಬಗ್ಗೆ ಎಷ್ಟೇ ಹೊಂದಾಣಿಕೆ ಬಂದರೂ ಸ್ತ್ರೀಯನ್ನು ಹಂಚಿಕೊಳ್ಳುವಲ್ಲಿ ಮಾತ್ರ ಎಂದೂ ಪುರುಷರಲ್ಲಿ ಒಮ್ಮತ ಅಸಾಧ್ಯ ಎಂಬುದು ಇದರ ಒಟ್ಟು ಭಾವ.

೩) ಇದರಲ್ಲಿ ಕುಂತಿ ಪಾಂಡವರಲ್ಲಿ ದ್ರೌಪದಿ ನಿಮಿತ್ತದಿಂದ ಒಡಕು ಹುಟ್ಟದಿರಲಿ ಎಂಬ ಕಾರಣದಿಂದ ಒಬ್ಬಳನ್ನೇ ಐವರಿಗೂ ವಿವಾಹ ಮಾಡಿಸುವ ಉಪಾಯವನ್ನಾಗಿ ಆ ವಿವಾಹವನ್ನು ಮಾಡಿಸಿದಳು ಎಂಬ ಕೆಲವರ ಕೆಟ್ಟ ಕಲ್ಪನೆಗೆ ಉತ್ತರವಿದೆ.

೪) ಕುಂತಿ ಹಾಗೆ ಮಕ್ಕಳಲ್ಲಿನ ಐಕಮತ್ಯವನ್ನು ಉಳಿಸಲು ಹಾಗೆ ಮಾಡಿದ್ದಲ್ಲಿ ಇತರ ಎಲ್ಲ ತಾಯಂದಿರೂ ಈ ಮೇಲ್ಪಂಕ್ತಿಯನ್ನು ಅನುಸರಿಸಿ ಹಾಗೆಯೇ ಮಾಡಬಹುದಿತ್ತು. ಅದೇಕೆ ನೂರು ಜನ ಕೌರವರಿಗೂ ಗಾಂಧಾರಿ ಒಬ್ಬ ಕನ್ಯೆಯೊಂದಿಗೇ ವಿವಾಹ ಮಾಡಿಸಬಹುದಿತ್ತು.

೫) ಅಲ್ಲದೇ ಕುಂತಿ ಸುಭದ್ರೆ ಮೊದಲಾದ ಇತರರನ್ನು ಅರ್ಜುನಾದಿಗಳು ಮದುವೆ–ಯಾಗಲು ಅವಕಾಶ ಕೊಡಬಾರದಿತ್ತು. ಅಥವಾ ಅವರೆಲ್ಲರೂ ಸಹ ಐವರಿಗೂ ಪತ್ನಿ–ಯಾಗುವಂತೆಯೇ ವ್ಯವಸ್ಥೆ ಮಾಡಬೇಕಿತ್ತು. ಇದಾವುದೂ ನಡೆದಿಲ್ಲ. ನಡೆಯಲು ಸಾಧ್ಯವೂ ಇಲ್ಲ.

೬) ಅನಂತರದ ಜನ ಎಂದೂ ಇದನ್ನು ಅನುಕರಿಸಲಿಲ್ಲ ಎಂಬುದನ್ನು ಅರ್ಥಮಾಡಿಕೊಂಡರೆ, ಕೆಲವರ ಆ ಕಲ್ಪನೆ ಎಷ್ಟು ಹೇಯ ಎಂಬುದು ಮನದಟ್ಟಾಗುವುದು.

---

೧೫೨. ಗತೇ ಕೃಷ್ಣೇ ನಿಜಪುರಂ ನಾರದಸ್ಯಾನುಶಾಸನಾತ್ ।
ಪ್ರತಿಜ್ಞಾಂ ಚಕ್ರಿರೇ ಪಾರ್ಥಾ ಧರ್ಮಜ್ಞಾ ದ್ರೌಪದೀಂ ಪ್ರತಿ ।
ಯಥಾಕ್ರಮೇಣ ಸಾ ಕೃಷ್ಣಾ ವರ್ಷಮೇಕೈಕಮಾದರಾತ್ ।
ಏಕೈಕಸ್ಯ ಗೃಹೇ ತಿಷ್ಠೇತ್ ಪ್ರತಿ ನಿರ್ಣಯಪೂರ್ವಕಮ್ ॥
ಯಃ ಪಶ್ಯೇತ್ ತಾಂ ಪರಗೃಹೇ ಸ್ಥಿತಾಂ ಪಾಂಚಾಲನಂದಿನೀಮ್ ।
ತೇನೈಕಹಾಯನಮಿತಂ ವಿಧೇಯಂ ತೀರ್ಥಸೇವನಮ್ ॥

–ಸ್ಕಂದಪುರಾಣ(ವೈಷ್ಣವಖಂಡ-ವೇಂಕಟಾಚಲಮಾಹಾತ್ಮ್ಯ ೨೯/೧೩-೧೫)

೭) ಇದರ ದುಷ್ಪರಿಣಾಮವನ್ನು ಶ್ರೀವೇದವ್ಯಾಸರು ಸುಂದೋಪಸುಂದೋಪಾಖ್ಯಾನದ ಮೂಲಕ ಅತ್ಯಂತ ಮಾರ್ಮಿಕವಾಗಿ ವಿವರಿಸಿರುವರು ಎಂದು ತಿಳಿಯಬೇಕು.

೮) ಕೆಲವರು ಹೀಗೆ ಒಬ್ಬ ಹೆಣ್ಣನ್ನು ಅನೇಕ ಜನ ಪುರುಷರಿಗೆ ಧಾರೆಯೆರೆಯುವ ಪದ್ಧತಿ ಪಾಂಚಾಲರಲ್ಲಿತ್ತು ಎಂದು ಕಲ್ಪಿಸುವರು. ಅದೂ ಸರಿಯಲ್ಲ. ಪಾಂಚಾಲರಲ್ಲಿ ಆ ಪದ್ಧತಿಯಿದ್ದ ಬಗ್ಗೆ ಯಾವ ಪುರಾವೆಯೂ ಇಲ್ಲ. ದ್ರುಪದನಿಗಂತೂ ದ್ರೌಪದಿ ಒಬ್ಬಳೇ ಪುತ್ರಿಯಾದ್ದರಿಂದ ಅಂತಹ ಮತ್ತೊಂದು ಮದುವೆಯನ್ನು ಮಾಡುವ ಸಂಭವವೂ ಇಲ್ಲ. ಆದ್ದರಿಂದ ಅದೂ ಸಹ ಕೆಟ್ಟ ಕಲ್ಪನೆ ಎನ್ನದೇ ವಿಧಿಯಿಲ್ಲ.

೯) ಬ್ರಹ್ಮದೇವರು ಪಾಂಡವರಿಗೆ ಈ ಆಖ್ಯಾನವನ್ನು ತಿಳಿಸಿದ್ದು ಸುಂದೋಪಸುಂದರ ಪತನದ ಕಥೆಯನ್ನು ತಿಳಿಸಲೆಂದು ಮಾತ್ರ.

೧೦) ಇದು ಪಾಂಡವರಿಗೆ ಸರ್ವಥಾ ಅನ್ವಯಿಸದು. ಕಾರಣ ಪಾಂಡವರು ವಿವಾಹವಾಗಿದ್ದು ಒಬ್ಬ ಸ್ತ್ರೀಯನ್ನು ಅಲ್ಲವೇ ಅಲ್ಲ ಎಂಬ ವಿವರ ಈಗಾಗಲೇ ಬಂದಿದೆ. ಲೋಕದ ಜನಕ್ಕೆ ಇದು ಅರಿವಾಗದು ಎಂಬ ಹಿನ್ನೆಲೆಯಲ್ಲಿ ಈ ರೀತಿಯಾದ ವ್ಯವಸ್ಥೆಗೆ ಅವಕಾಶ ಕಲ್ಪಿಸಲು ನಾರದರ ಮೂಲಕ ಹಾಗೆ ಸಂದೇಶ ನೀಡಿದರು ಎಂದು ತಿಳಿಯಬೇಕು.

೧೧) ನಿಯಮಕ್ಕೆ ತಪ್ಪಿದರೆ ಹನ್ನೆರಡು ವರ್ಷಗಳ ಕಾಲ ಬ್ರಹ್ಮಚರ್ಯವನ್ನು ಪಾಲಿಸಬೇಕು ಎಂದು ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ಉಲ್ಲೇಖವಿದೆ. ಆದರೆ ದಾಕ್ಷಿಣಾತ್ಯಪಾಠದಲ್ಲಿ ಹನ್ನೆರಡು ತಿಂಗಳ ನಿಯಮವೇ ಉಕ್ತವಾಗಿದೆ ಎಂಬುದು ಗಮನಾರ್ಹ.

೧೨) ಸ್ಕಾಂದಪುರಾಣದ ವೆಂಕಟಾಚಲ ಮಹಾತ್ಮ್ಯದಲ್ಲಿಯೂ ಒಂದು ವರ್ಷದ ನಿಯಮವೇ ಉಕ್ತವಾಗಿದೆ: **'ತೇನೈಕಹಾಯನಮಿತಂ ವಿಧೇಯಂ ತೀರ್ಥಸೇವನಮ್'**. (೨೯/೧೫)

೧೩) ಹನ್ನೆರಡು ವರ್ಷ ಎಂಬ ಪಾಠಕ್ಕೆ ಮುಂದೆ ವನಪರ್ವದಲ್ಲಿ ಬರುವಂತೆ (೨೨/೧೦೯) ಹನ್ನೆರಡು ತಿಂಗಳು ಎಂದು ಅರ್ಥ ಮಾಡಿಕೊಂಡರೆ ಯಾವ ವಿರೋಧವೂ ಇರದು. ಹನ್ನೆರಡು ವರ್ಷವೆಂದೇ ಅರ್ಥಮಾಡಿಕೊಂಡರೆ ಪಾಂಡವರ ಜೀವಿತದ ಒಟ್ಟು ಕಾಲಮಾನಕ್ಕೆ ಹೊಂದಾಣಿಕೆ–ಯಾಗುವುದಿಲ್ಲ ಎಂಬ ಮತ್ತೊಂದು ಅಂಶವನ್ನೂ ಗಮನಿಸಬೇಕು.

೧೪) ಆ ಪಕ್ಷದಲ್ಲಿ ಉಪಪಾಂಡವರಿಗೆಲ್ಲ ಒಂದೊಂದು ವರ್ಷ ಮಾತ್ರ ಅಂತರವಿದ್ದಿತು (ಭಾರತ ಆದಿ. ೨೨೦/೮೬) ಎಂಬ ನಿರೂಪಣೆಗೂ ಹೊಂದಾಣಿಕೆಯಾಗುವುದಿಲ್ಲ ಎಂಬುದು ಮತ್ತೊಂದು ವಿಶೇಷ ಅನುಪಪತ್ತಿ (ಶ್ಲೋ. ೨೧೨).

ಅರ್ಜುನನಿಂದ ಗೋ ಬ್ರಾಹ್ಮಣ ರಕ್ಷಣೆ

ತತಃ ಕದಾಚಿದ್ಧರ್ಮರಾಜೇನ ಯುಕ್ತಾಂ
ಶಸ್ತ್ರಾಗಾರೇ ವಿಪ್ರಗೋರಕ್ಷಣಾರ್ಥಮ್ ।
ಶಸ್ತ್ರಾದಿತ್ಸುಃ ಫಲ್ಗುನೋऽದ್ರಾಕ್ ಸ ಶಸ್ತ್ರೈ-
ರ್ದಸ್ಯೂನ್ ಹತ್ವಾ ತೀರ್ಥಯಾತ್ರೋನ್ಮುಖೋऽಭೂತ್ ೧೫೩

ಅ: ಬಳಿಕ ಒಮ್ಮೆ ಶಸ್ತ್ರಾಗಾರದಲ್ಲಿ ಧರ್ಮರಾಜನೊಂದಿಗೆ ದ್ರೌಪದಿ ಜೊತೆಗಿದ್ದುದನ್ನು ಅರ್ಜುನ ಕಂಡ. ಅಲ್ಲಿಗೆ ಅವನು ಹಾಗೆ ತೆರಳಿದ್ದು ಬ್ರಾಹ್ಮಣನೊಬ್ಬನ ಗೋವುಗಳ ರಕ್ಷಣೆಗೆಂದು ಶಸ್ತ್ರವನ್ನು ತೆಗೆದುಕೊಳ್ಳಲು. ಅವನು ಶಸ್ತ್ರಗಳಿಂದ ಕಳ್ಳರನ್ನು ಕೊಂದು ತೀರ್ಥಯಾತ್ರೆಗೆ ಹೊರಟು ನಿಂತ.

ವಿ: ೧) ಒಮ್ಮೆ ಬ್ರಾಹ್ಮಣನೊಬ್ಬನ ಗೋವುಗಳನ್ನು ಚೋರರು ಅಪಹರಿಸಿದರು. ಬ್ರಾಹ್ಮಣ ಪಾಂಡವರ ಬಳಿ ರಕ್ಷಣೆಗೆ ಧಾವಿಸಿದ. ವಿಷಯ ತಿಳಿದ ಅರ್ಜುನ ಕಳ್ಳರನ್ನು ನಿಗ್ರಹಿಸಲೆಂದು ಶಸ್ತ್ರಾಸ್ತ್ರ ತೆಗೆದುಕೊಳ್ಳಲೆಂದು ಶಸ್ತ್ರಾಗಾರಕ್ಕೆ ತೆರಳಿದ. ಅಲ್ಲಿ ದ್ರೌಪದೀ ಧರ್ಮರಾಜರಿರುವುದು ಅವನಿಗೆ ತಿಳಿದಿದ್ದರೂ ಬ್ರಾಹ್ಮಣನ ಗೋವುಗಳ ರಕ್ಷಣೆಯ ಮಹತ್ವದ ಕಾರ್ಯಕ್ಕಾಗಿ ತಾನು ಹಾಗೆ ಒಂದು ವರ್ಷ ಬ್ರಹ್ಮಚರ್ಯದಿಂದಿದ್ದು ತೀರ್ಥಯಾತ್ರೆಗೆ ತೆರಳುವಂತಾದರೂ ಚಿಂತೆಯಿಲ್ಲ ಎಂಬ ವಿಶೇಷ ಧರ್ಮಬುದ್ಧಿಯಿಂದ ಅಲ್ಲಿಗೆ ಪ್ರವೇಶಿಸಿ ಶಸ್ತ್ರವನ್ನು ತೆಗೆದುಕೊಂಡ. ಚೋರರನ್ನು ನಿಗ್ರಹಿಸಿ ಗೋವುಗಳನ್ನು ಬ್ರಾಹ್ಮಣನಿಗೆ ಮರಳಿಸಿದ.

೨) ಅರ್ಜುನ ಇಲ್ಲಿ ಗೋಬ್ರಾಹ್ಮಣ ರಕ್ಷಣೆಗೆ ತೋರಿದ ದೀಕ್ಷೆ ಅಪೂರ್ವವಾದುದು. 'ಗೋಬ್ರಾಹ್ಮಣಹಿತಾಯ ಚ' ಎಂದು ಸಂಸ್ತುತನಾದ ಶ್ರೀಕೃಷ್ಣನಿಗೆ ಅವನು ಪ್ರಿಯನಾಗಲು ಇಂತಹ ಅವನ ದೀಕ್ಷೆ ಮುಖ್ಯ ಕಾರಣ ಎಂದು ತಿಳಿಯಬೇಕು.

೩) ಇಂತಹ ಕಲ್ಯಾಣಕಾರ್ಯಕ್ಕಾಗಿ ಅವನು ಮಾಡಿದ ತ್ಯಾಗ ಮುಂದೆ ಅವನಿಗೆ ಸುಭದ್ರಾಕಲ್ಯಾಣದಲ್ಲಿಯೇ ಕಾರಣವಾಯಿತು ಎಂಬುದು ಸಹ ಗಮನಾರ್ಹ.

೪) ಇಲ್ಲಿ ಮತ್ತೊಂದು ಸ್ವಾರಸ್ಯವೂ ಉಂಟು. ಅರ್ಜುನನ ಬದಲು ಭೀಮನಾಗಿದ್ದರೆ ಶಸ್ತ್ರ ತೆಗೆದುಕೊಳ್ಳುವ ಪ್ರಸಕ್ತಿಯೇ ಬರುತ್ತಿರಲಿಲ್ಲ. ಭೀಮ ಎಂದೂ ಶಸ್ತ್ರಾಸ್ತ್ರಗಳ ನೆರವಿನಿಂದ ಕಾದುವ ವ್ಯಕ್ತಿಯಲ್ಲ. ಸಜ್ಜಿಹ್ಮ ಬಾಹುಬಲ ಸಂಪನ್ನನಾದ ಅವನಿಗೆ ಬೇರಾವ ನೆರವೂ ಅನಗತ್ಯ.

---

೧೫೩. ಶಸ್ತ್ರಾದಿತ್ಸುಃ ಫಲ್ಗುನೋऽದ್ರಾಗಿತ್ಯತ್ರ 'ವ್ಯತ್ಯಯೋ ಬಹುಲಮ್' ಇತಿ ವಚನಾತ್ ಅದ್ರಾಕ್ = ಅದ್ರಾಕ್ಷೀತ್ ॥ – (ವಾ.)

೫) ಭೀಮಾರ್ಜುನರಲ್ಲಿನ ಅಂತರ ಇದರಿಂದ ಸ್ಪಷ್ಟಪಡುವುದು. ಅರ್ಜುನ ತನ್ನ ಮಿತಿಯಲ್ಲೂ ಅತ್ಯಂತ ಧಾರ್ಮಿಕನಾಗಿಯೇ ವರ್ತಿಸಿದ ಎಂಬುದು ವಿಶೇಷ.

ಅರ್ಜುನನ ತೀರ್ಥಯಾತ್ರೆ

ಯುಧಿಷ್ಠಿರಾದ್ಯೈಃ ಸೌಹೃದಾದ್ವಾರಿತೋಽಪಿ
ಯಯೌ ಸತ್ಯಾರ್ಥಂ ಸ ಕದಾಚಿದ್ಗಂಗಾದ್ವಾರಮ್ ।
ಕುರ್ವನ್ ಸ್ನಾನಂ ಮಾಯಯಾ ನಾಗಕನ್ಯಾ
ಹೃತೋ ಲೋಕಂ ಭುಜಗಾನಾಂ ಕ್ಷಣೇನ ॥ ೧೫೪ ॥

ಅ: ಧರ್ಮರಾಜ ಮೊದಲಾದವರು ಪ್ರೀತಿಯಿಂದ ತಡೆದರೂ, ಪ್ರತಿಜ್ಞಾಪಾಲನೆಗಾಗಿ ಅರ್ಜುನ ತೀರ್ಥಯಾತ್ರೆಗೆ ತೆರಳಿದ. ಒಮ್ಮೆ ಗಂಗೆಯಲ್ಲಿ ಮೀಯುತ್ತಿದ್ದಾಗ ನಾಗಕನ್ಯೆಯಾದ ಉಲೂಪಿ ಎಂಬವಳು ಅವನನ್ನು ಮಾಯೆಯಿಂದ ಕ್ಷಣಮಾತ್ರದಲ್ಲಿ ನಾಗಗಳ ಲೋಕಕ್ಕೆ ಕರೆದೊಯ್ದಳು.

ವಿ: ೧) ಅರ್ಜುನನು ಉದ್ದೇಶಪೂರ್ವಕ ಮಾಡಿದ ಅಪರಾಧವಲ್ಲ ಎಂಬ ಕಾರಣಕ್ಕಾಗಿ ಯುಧಿಷ್ಠಿರಾದಿಗಳು ಅರ್ಜುನನನ್ನು ತೀರ್ಥಯಾತ್ರೆಗೆ ತೆರಳದಂತೆ ತಿಳಿಸಿದರೂ ಸಹ ಅರ್ಜುನ ಪ್ರತಿಜ್ಞಾಪಾಲನೆಗಾಗಿ ತೀರ್ಥಯಾತ್ರೆಗೆ ತೆರಳಿಯೇಬಿಟ್ಟ.

೨) ಯಾವುದೇ ನೆಪದಿಂದಲೂ ಧರ್ಮ ತಪ್ಪುವುದು ಅಂಥವರ ಪ್ರವೃತ್ತಿಯಲ್ಲ; ಇದು ಅರ್ಜುನ ಲೋಕಕ್ಕೆ ತೋರಿದ ದೊಡ್ಡ ಆದರ್ಶ. ಸಾಮಾನ್ಯವಾಗಿ ಯಾವುದೋ ನೆಪದಲ್ಲಿ ಧರ್ಮವನ್ನು ಕೈಬಿಡುವ ಜನರೇ ತುಂಬಿರುವ ಪ್ರಪಂಚದಲ್ಲಿ ಅರ್ಜುನನ ರೀತಿ ಎಷ್ಟು ಅನುಪಮ ಎಂಬುದನ್ನು ಗಮನಿಸಬೇಕು.

೩) ಅರ್ಜುನ ತೀರ್ಥಯಾತ್ರೆಗೆ ತೆರಳುವಾಗ ತನ್ನೊಂದಿಗೆ ಬಗೆಬಗೆಯ ಜನಗಳನ್ನು ಕರೆದೊಯ್ಯುತ್ತಾನೆ*. ಅವರಲ್ಲಿ ಇತಿಹಾಸ ಪುರಾಣ ಕೋವಿದರಾದ ಬ್ರಾಹ್ಮಣರೂ ಇದ್ದರು ಎಂಬುದು ವಿಶೇಷ. ಅರ್ಜುನ ಹಾಗೆ ಸ್ನಾನ ಮಾಡುತ್ತಿದ್ದುದು ಹರಿದ್ವಾರದ ಬಳಿ ಎಂಬ ಉಲ್ಲೇಖ ಮಹಾಭಾರತದಲ್ಲಿದೆ.

---

* ಅನುಜಗ್ಮುರ್ಮಹಾತ್ಮಾನೋ ಬ್ರಾಹ್ಮಣಾ ವೇದಪಾರಗಾಃ ॥
ವೇದವೇದಾಂಗವಿದ್ವಾಂಸಸ್ತಥೈವಾಧ್ಯಾತ್ಮಚಿಂತಕಾಃ ।
ಭೈಕ್ಷಾಶ್ಚ ಭಗವದ್ಭಕ್ತಾಃ ಸೂತಾಃ ಪೌರಾಣಿಕಾಶ್ಚ ಯೇ ॥ – ಭಾರತ (ಆದಿ.೨೧೩/೧,೨)

ಉಲೂಪಿಯಲ್ಲಿ ಗರ್ಭಾದಾನ

ತಸ್ಯಾಃ ಪಿತಾ ಗರುಡೇನಾತ್ತಪತ್ಯುಃ
ಪುತ್ರಾಕಾಂಕ್ಷೀ ಚೋದಯಾಮಾಸ ಪಾರ್ಥಮ್ ।
ಸಂವತ್ಸರಂ ಬ್ರಹ್ಮಚರ್ಯೇ ತು ಪಾರ್ಥೈಃ
ಕೃಷ್ಣಾಹೇತೋಃ ಸಮಯೇ ಸಾಧು ಬದ್ಧಮ್ ॥ ೧೫೫ ॥

ಅ: ಆ ಉಲೂಪಿಯ ಗಂಡನನ್ನು ಗರುಡ ತಿಂದುಹಾಕಿದ್ದ. ಅವಳ ತಂದೆಯಾದ ನಾಗರಾಜ ಮಗನನ್ನು ಬಯಸಿ ಅರ್ಜುನನನ್ನು ಗರ್ಭಾಧಾನ ಮಾಡಲೆಂದು ಪ್ರಾರ್ಥಿಸಿದ. ಆದರೆ ಅರ್ಜುನ ದ್ರೌಪದೀ ನಿಮಿತ್ತದಿಂದಾಗಿ ಪಾಂಡವರು ಮಾಡಿಕೊಂಡಿದ್ದ ಒಂದು ವರ್ಷಕಾಲದ ಬ್ರಹ್ಮಚರ್ಯ ನಿಯಮವನ್ನು ಪಾಲಿಸುವಲ್ಲಿ ದೀಕ್ಷಿತನಾಗಿದ್ದ.

ವಿ: ಉಲೂಪಿಯ ತಂದೆಯನ್ನು ಕೌರವ್ಯ ಎಂಬ ಹೆಸರಿನ ನಾಗ ಎಂದು *ಮಹಾಭಾರತ ಉಲ್ಲೇಖಿಸಿದೆ. ಅವನ ಹೆಸರನ್ನು ಧೃತರಾಷ್ಟ್ರ ಎಂದು ಲಕ್ಷಾಲಂಕಾರದಲ್ಲಿ ವ್ಯಾಖ್ಯಾನಿಸಲಾಗಿದೆ :

ಐರಾವತಕುಲೇ ಜಾತಃ ಕೌರವ್ಯೋ ನಾಮ ಪನ್ನಗಃ ।
ತಸ್ಯಾಸ್ಮಿ ದುಹಿತಾ ರಾಜನ್ನುಲೂಪೀ ನಾಮ ಪನ್ನಗೀ ॥ – ಭಾರತ (ಆದಿ.೨೧೩/೧೮)

ಇರಾವಂತನ ಅವತಾರ

ಪುನಃ ಪುನರ್ಯಾಚ್ಯಮಾನಃ ಸ ಪಾರ್ಥಃ
ಪುತ್ರಾರ್ಥಮಸ್ಯಾ ಭುಜಗೇನ ತಸ್ಯಾಮ್ ।
ಉತ್ಪಾದಯಾಮಾಸ ಸುತಂ ಕುಜಾಂಶಂ
ನಾಮ್ನೇರಾವಂತಂ ವರುಣಾವೇಶಯುಕ್ತಮ್ ॥ ೧೫೬ ॥

ಅ: ಅರ್ಜುನನನ್ನು ಅವಳ ತಂದೆ ಮತ್ತೆ ಮತ್ತೆ ಪುತ್ರೋತ್ಪತ್ತಿಗಾಗಿ ಪ್ರಾರ್ಥಿಸತೊಡಗಿದ. ಅರ್ಜುನ ಅವಳಲ್ಲಿ ಒಬ್ಬ ಮಗನನ್ನು ಪಡೆದ. ಅವನ ಹೆಸರು ಇರಾವಾನ್. ಅವನು ಮಂಗಳನ ಅಂಶ, ವರುಣನ ಆವೇಶದಿಂದ ಕೂಡಿದ್ದವನು.

---

೧೫೫. ಕೃಷ್ಣಾಹೇತೋಃ ಸಮಯೇ ಸಾಧು ಬದ್ಧಮಿತ್ಯತ್ರ ಪಾರ್ಥೈಃ= ಅನ್ಯಪಾರ್ಥೈಃ ಸಹ ಸಮಯೇ= ವರ್ಷಮಾತ್ರಂ ತೀರ್ಥಯಾತ್ರಾಂ ಕರಿಷ್ಯಾಮೀತಿ ಸಂಕೇತೇ ಸಾಧು= ಸಮ್ಯಕ್ ಬದ್ಧಂ= ವ್ರತಬದ್ಧಮಿತಿ ಸಂಬಂಧಃ ॥ – (ವಾ.)

೧೫೬. ಕೌರವಸ್ಯ ಧೃತರಾಷ್ಟ್ರಸ್ಯ ಸಮಾನನಾಮಧೇಯತ್ವಾತ್ ಕೌರವಸ್ಯ ಧೃತರಾಷ್ಟ್ರಾಖ್ಯನಾಗಸ್ಯೇತ್ಯರ್ಥಃ ।
– ಲಕ್ಷಾಲಂಕಾರ

ಗುಣಾಃ ಪಿತುರ್ಮಾತೃಜಾತಿಃ ಸುತಾನಾಂ
ಯಸ್ಮಾತ್ ಸತಾಂ ಪ್ರಾಯಶಸ್ತೇನ ನಾಗಃ ।
ಬಲೀ ಚ ಪಾರ್ಥಪ್ರಥಮೋದ್ಭವತ್ವಾತ್
ಮಾಯಾವಿದಸ್ತ್ರೀ ಚ ಸುಧಾರ್ಮಿಕಶ್ಚ ॥ ೧೫೭ ॥

ಅ: ಯೋಗ್ಯರಾದ ಮಕ್ಕಳ ಗುಣಗಳು ತಂದೆಯದು, ಜಾತಿ ತಾಯಿಯದು ಎಂದು ನಿಯಮವಿರುವುದರಿಂದ ಆ ಹುಟ್ಟಿದ ಮಗು ಇರಾವಾನ್ ಒಬ್ಬ ನಾಗನೇ ಆದ. ಅವನು ಅರ್ಜುನನ ಮೊದಲ ಮಗನಾದ್ದರಿಂದ ತುಂಬಾ ಬಲಿಷ್ಠನಾಗಿದ್ದ. ಮಾಯೆಗಳನ್ನೂ ತಿಳಿದಿದ್ದ, ಅಸ್ತ್ರಗಳನ್ನೂ ಬಲ್ಲವನಾಗಿದ್ದ, ಉತ್ತಮ ಧಾರ್ಮಿಕನೂ ಆಗಿದ್ದ.

ವಿ: ೧) ವಿಭಿನ್ನ ಜಾತಿಯ ಸ್ತ್ರೀ ಪುರುಷರಲ್ಲಿ ಹುಟ್ಟಿದ ಮಗುವಿನ ಜಾತಿಯ ಬಗ್ಗೆ ನಿರ್ಣಯ ನೀಡುವ ಅಪೂರ್ವ ವಾಕ್ಯವಿದು. ಇಬ್ಬರೂ ಒಂದೇ ಜಾತಿಯವರಾಗಿದ್ದಲ್ಲಿ ಅವರಿಂದ ಹುಟ್ಟುವ ಮಗುವಿನ ಜಾತಿಯೂ ಅವರದೇ. ಆದರೆ, ಅನುಲೋಮ ಕ್ರಮದಲ್ಲಿ ಜನಿಸಿದ ಮಗುವಿನ ಜಾತಿ ತಾಯಿಯದೇ ಆಗುವುದು ಎಂಬುದು ಇಲ್ಲಿಯ ವಿಶೇಷ.

೨) ಗುಣಗಳು ಮಾತ್ರ ತಂದೆಯದೇ ಎಂಬುದು ಮತ್ತೊಂದು ವಿಶೇಷ. ಗುಣಗಳು ತಂದೆಯದೇ ಎಂಬ ನಿಯಮ ಪುರುಷ ಸಂತತಿಗೆ ಮಾತ್ರ. ಸ್ತ್ರೀ ಸಂತತಿಗೆ ತಾಯಿಯ ಗುಣಗಳೇ ಸಹಜ ಎಂಬ ಮಾತು *ರಾಮಾಯಣದಲ್ಲಿದೆ.

೩) ಇಲ್ಲಿ ಪ್ರಾಯಃ ಎಂದಿರುವುದರಿಂದ ಇದು ಸಾಮಾನ್ಯನಿಯಮ. ಅಪವಾದಗಳೂ ಉಂಟು ಎಂದು ಅರ್ಥ. ಅದರಿಂದಾಗಿ ಪರಾಶರ ಸತ್ಯವತಿಯರ ಪುತ್ರ ವೇದವ್ಯಾಸರು ತಾಯಿ ಸತ್ಯವತಿಯಂತೆ ಕ್ಷತ್ರಿಯರೆನ್ನಿಸದೇ, ತಂದೆಯ ಜಾತಿಯನ್ನು ಪಡೆದು ಬ್ರಾಹ್ಮಣರೆನ್ನಿಸಿದರು.

೪) ಪ್ರಹ್ಲಾದನಂತಹ ಯೋಗ್ಯನ ಪುತ್ರ ವಿರೋಚನ ಅಯೋಗ್ಯನೆನ್ನಿಸಿದ ಮೊದಲಾದ ದೃಷ್ಟಾಂತಗಳನ್ನು ವ್ಯಾಖ್ಯಾನಕಾರರು ನೀಡಿರುವರು.

---

೧೫೭. ಸತಾಂ ಸಮೀಚೀನಾನಾಂ ಸುತಾನಾಂ ಪ್ರಾಯಶಃ ಪಿತುರ್ಗುಣಾಃ ಭವಂತಿ । ಪ್ರದ್ಯುಮ್ನಾದೌ ದೃಷ್ಟತ್ವಾತ್ ಮಾತೃಜಾತಿರ್ಭವತಿ । ಹನುಮದಾದೌ ದೃಷ್ಟತ್ವಾತ್। ಯಸ್ಮಾತ್ ತೇನ ಕಾರಣೇನ ನಾಗಃ ಬಭೂವೇತಿ ಶೇಷಃ । ಸತ್ಯವತ್ಯಾದಿವ್ಯಾವೃತ್ತ್ಯರ್ಥಂ ಪ್ರಾಯ ಇತ್ಯುಕ್ತಮ್ । ಸೃಗಾಲಪೌಂಡ್ರಕಾದಿವ್ಯಾವೃತ್ತ್ಯರ್ಥಂ ಸತಾಮಿತ್ಯುಕ್ತಮ್ । ... ವಿಧವಾಯಾಂ ಮನುಷ್ಯೋತ್ಪನ್ನತ್ವಾತ್ ತ್ಕ್ತ ಇತಿ ಭಾವಃ । – (ಜ.)

೧೫೭. ಪ್ರಹ್ಲಾದಸುತೇ ವಿರೋಚನೇ ಪಿತೃಗುಣಾಭಾವಾತ್ ಸತಾಂ ಸುತಾನಾಮಿತ್ಯುಕ್ತಮ್ । ಪಿತೃಗುಣವತ್ವಂ ಚ ಪ್ರದ್ಯುಮ್ನಾದೌ ದೃಷ್ಟಮ್ । ಮಾತೃಜಾತಿರ್ಹನುಮದಾದೌ । ಭೀಷ್ಮವ್ಯಾವೃತ್ತ್ಯರ್ಥಂ ಪ್ರಾಯ ಇತಿ । – (ತಾ.)

* ಪಿತ್ರ್ಯಂ ಸಮನುಜಾನಂತಿ ನರಾ ಮಾತರಮಂಗನಾಃ ॥ – ವಾ.ರಾ. (೨/೩೫/೨೭)

೫) ಇರಾವಂತನನ್ನು ಅರ್ಜುನನ ಮೊದಲ ಮಗ ಎಂದು ಕರೆದಿರುವುದರಿಂದ ಬಭ್ರುವಾಹನ ಮೊದಲಾದ ಇತರ ಎಲ್ಲರೂ ಸಹ ಅನಂತರದವರು ಎಂದು ಸ್ಪಷ್ಟಪಡುವುದು.

ತತೋ ಯಯಾವರ್ಜುನಸ್ತೀರ್ಥಯಾತ್ರಾ-
ಕ್ರಮೇಣ ಪಾಂಡ್ಯಾನ್ ತನಯೋಽಸ್ಯ ಮಾತ್ರಾ ।
ಸಹ ತ್ಯಕ್ತೋ ಭುಜಗೈರ್ದೇವಲೋಕೇ
ಸಂಪೂಜಿತೋ ನ್ಯವಸದ್ದೈವತೈಶ್ಚ ॥ ೧೫೮ ॥

ಅ: ಅನಂತರ ಅರ್ಜುನ ತೀರ್ಥಯಾತ್ರಾಕ್ರಮದಿಂದ ಅಲ್ಲಿಂದ ಪಾಂಡ್ಯದೇಶಕ್ಕೆ ತೆರಳಿದ. ಇರಾವಂತನನ್ನು ಉಲೂಪಿಯೊಂದಿಗೆ ನಾಗರು ಬಹಿಷ್ಕರಿಸಿದರು. ಅವನು ದೇವಲೋಕದಲ್ಲಿ ದೇವತೆಗಳಿಂದ ಆದೃತನಾಗಿ ಅವರೊಂದಿಗೇ ವಾಸಮಾಡಿದ.

ವಿ: ೧) ಅರ್ಜುನನು ಇರಾವಂತನನ್ನು ಹಾಗೆ ಪಡೆದದ್ದು ಶಾಸ್ತ್ರವಿಹಿತವೇ ಆದುದು, ಆದರೆ ನಾಗರು ಅದನ್ನು ಒಪ್ಪದೆ ಉಲೂಪಿಯನ್ನೂ, ಇರಾವಂತನನ್ನೂ ಸ್ವೀಕರಿಸದೇ ನಿರಾಕರಿಸಿದರು. ಉಲೂಪಿ ತನ್ನ ಮಗನೊಂದಿಗೆ ದೇವಲೋಕಕ್ಕೆ ತೆರಳಿ ನೆಲೆಸಿಬಿಟ್ಟಳು.

೨) ಇಂದ್ರಾವತಾರನಾದ ಅರ್ಜುನನ ಮಗ ಎಂಬ ಕಾರಣದಿಂದ ದೇವತೆಗಳು ಅವರನ್ನು ಸ್ವೀಕರಿಸಿ ತಮ್ಮ ಲೋಕದಲ್ಲಿ ವಾಸಿಸಲು ಅವಕಾಶ ಕಲ್ಪಿಸಿದರು ಎಂದು ತಿಳಿಯಬೇಕು.

೩) ಅವನು ದೇವತೆಯಾದ ಮಂಗಳನ ಅವತಾರವಾಗಿದ್ದುದೂ ಸಹ ದೇವತೆಗಳಿಂದ ಸ್ವೀಕೃತನಾಗಲು ಕಾರಣವಾಯಿತು.

೪) ಇರಾವಂತನು ಕುರುಕ್ಷೇತ್ರಯುದ್ಧದಲ್ಲಿ ಪಾಂಡವರ ಪಕ್ಷದಲ್ಲಿದ್ದು ಅದ್ಭುತಯುದ್ಧ ಮಾಡಿ ಕೊನೆಗೆ ಅಲಂಬುಸ ಎಂಬ ರಾಕ್ಷಸನಿಂದ ಹತನಾದ (೨೫/೪೪).

ಅರ್ಜುನನಿಗೆ ನಿಯಮಭಂಗದೋಷವಿಲ್ಲ

ಸತ್ಯಾತ್ಯಯಾನ್ನೈವ ದೋಷೋಽರ್ಜುನಸ್ಯ
ತೇಜೀಯಸಶ್ಚಿಂತನೀಯಃ ಕಥಂಚಿತ್ ।
ಶ್ರೇಷ್ಠಾಪರಾಧಾನ್ನಾನ್ಯದೋಷಸ್ಯ ಲೇಪ-
ಸ್ತೇಜೀಯಸಾಂ ನಿರ್ಣಯೋಽಯಂ ಹಿ ಶಾಸ್ತ್ರೇ ॥ ೧೫೯ ॥

---

೧೫೮. ದೇವರೇಣ ಸುತೋತ್ಪಾದನಂ ಯುಗಾಂತರೇಷು ಧರ್ಮಮಪಿ ಕಲೌ ಯಥಾ ನಿಂದಿತಂ ತಥಾ ಬಂಧುನಿಯೋಗಾದ್ವಿಧವಾಯಾಂ ಸುತೋತ್ಪಾದನಮಪಿ ಮರ್ತ್ಯಲೋಕೇ ನಿಂದಿತಮಿತಿ ನಾಗೈಸ್ತಸ್ಯ ಇತಿ ಸೂಚನಾಯ ಚಶಬ್ದಃ ॥ –(ರಾ.)

ಅ: ಮಹಾಜ್ಞಾನಿಯಾದ ಅರ್ಜುನನಿಗೆ ಪ್ರತಿಜ್ಞೆ ಮೀರಿದ್ದರಿಂದಾಗಿ ಯಾವ ದೋಷವೂ ಸರ್ವಥಾ ಒದಗಲಿಲ್ಲ ಎಂದು ತಿಳಿಯಬೇಕು. ಮಹಾಜ್ಞಾನಿಗಳಿಗೆ ಸ್ವೋತ್ತಮದ್ರೋಹದ ಹೊರತು ಬೇರಾವ ಪಾಪದ ಲೇಪವೂ ಆಗದು ಎಂಬುದು ಶಾಸ್ತ್ರಗಳಲ್ಲಿರುವ ನಿರ್ಣಯ.

ವಿ: ೧) ಅರ್ಜುನನಿಗೆ ಉಲೂಪಿಯ ಪ್ರಸಂಗದಲ್ಲಿ ಎರಡು ಬಗೆಯ ದೋಷಗಳಿಗೆ ಅವಕಾಶವಿದೆ. ಒಂದು ಬ್ರಹ್ಮಚರ್ಯಲೋಪ, ಮತ್ತೊಂದು ವಿಧವಾಸಂಗ. ಅದು ಅರ್ಜುನ ಹೊಂದಿದ್ದು ವಿವಾಹವಲ್ಲದೇ ನಿಯೋಗ ಪದ್ಧತಿಯಾದ್ದರಿಂದ ಎರಡನೆಯದು ದೋಷವಲ್ಲ;

೨) ಇನ್ನು ಬ್ರಹ್ಮಚರ್ಯಲೋಪ; ಅವನು ಮಹಾಜ್ಞಾನಿಯಾದ್ದರಿಂದ ಜ್ಞಾನಿಗಳಿಗೆ ಅಪರೋಕ್ಷಜ್ಞಾನದ ಅನಂತರದ ಕರ್ಮಗಳ ಲೇಪವಿಲ್ಲವಾದ್ದರಿಂದ ಅದರ ಲೇಪವೂ ಆಗಲಿಲ್ಲ ಎಂದು ಭಾವ.

೩) ಅಪರೋಕ್ಷಜ್ಞಾನಿಗಳಿಗೆ ಲೇಪವಾಗುವ ಪಾಪಕರ್ಮ ಸ್ವೋತ್ತಮದ್ರೋಹ ಒಂದೇ. ಇದು ಸರ್ವಥಾ ಸ್ವೋತ್ತಮದ್ರೋಹವಲ್ಲವಾದ್ದರಿಂದ ಅರ್ಜುನನಿಗೆ ಅದು ಪಾತಕವಲ್ಲ ಎಂದು ಭಾವ. ಚಂದ್ರ, ಸುಗ್ರೀವರು ಮಾಡಿದ್ದು ಸ್ವೋತ್ತಮಸ್ತ್ರೀ ಸಂಗ, ಆದ್ದರಿಂದ ಅವರಿಗೆ ಅದು ಒಂದು ಬಗೆಯಲ್ಲಿ ಬಂಧಕವಾಯಿತು. ಅಶ್ವತ್ಥಾಮರು ದುರ್ಯೋಧನನಿಗೆ ಅವನ ಪತ್ನಿಯಲ್ಲಿ ಸಂತಾನೋತ್ಪತ್ತಿ ಮಾಡುವುದಾಗಿ ನೀಡಿದ ಮಾತು ಅವರ ಬ್ರಹ್ಮಚರ್ಯಲೋಪಕ್ಕೆ ಕಾರಣವಾಯಿತು. (೨೮/೧೧೭, ೨೮/೧೬೮)

೪) ಅಶ್ವತ್ಥಾಮರ ಪ್ರಸಂಗದಲ್ಲಿನ ದೋಷ ಲೋಕರೀತಿಯದು ಮಾತ್ರ. ಅದು ಮೋಕ್ಷದಲ್ಲಿನ ಆನಂದೋನ್ಮಾಹಾದಿಗಳಿಗೆ ಬಾಧಕ ಉಂಟು ಮಾಡುವಂತಹುದಲ್ಲ ಎಂಬ ವಿಶೇಷಾಂಶಗಳನ್ನು ಗ್ರಂಥಾಂತರಗಳಿಂದ ತಿಳಿಯಬೇಕು.

ಅರ್ಜುನ ಚಿತ್ರಾಂಗದೆಯರ ವಿವಾಹ

ಅತಿಸ್ನೇಹಾಚ್ಚಾಗ್ರಜಾಭ್ಯಾಂ ತದಸ್ಯ
ಕ್ಷಾಂತಂ ಸುತಾ ಪಾಂಡ್ಯರಾಜೇನ ದತ್ತಾ ।
ಸಂವತ್ಸರಾಂತೇ ಫಲ್ಗುನಸ್ಯಾಭಿರೂಪಾ
ಚಿತ್ರಾಂಗದಾ ವೀರಸೇನೇನ ತೋಷಾತ್ ॥ ೧೬೦ ॥

ಅ: ಅವನ ಮೇಲಿನ ವಿಶೇಷ ಪ್ರೀತಿಯಿಂದಾಗಿ ಅಣ್ಣಂದಿರಾದ ಧರ್ಮರಾಜ, ಭೀಮಸೇನ ಇಬ್ಬರೂ ಅವನ ಅಪರಾಧವನ್ನು ಕ್ಷಮಿಸಿದರು. ವರ್ಷದ ಕೊನೆಯಲ್ಲಿ ಪಾಂಡ್ಯರಾಜನಾದ

---

೧೫೯. ಸ್ವತೋ ಮಹದವಜ್ಞಾನಾದ್ ರುದ್ರೋಽಪ್ಯಾತ್ಮಾನಮಾದಹೇತ್ । – ಭಾ.ತಾ. (೫/೧೦/೨೫)

ವೀರಸೇನ ತನ್ನ ಮಗಳೂ, ಅರ್ಜುನನಿಗೆ ಅನುರೂಪಳೂ ಆದ ಚಿತ್ರಾಂಗದೆಯನ್ನು ಅರ್ಜುನನಿಗೆ ಧಾರೆಯೆರೆದ.

ವಿ: ೧) ಭೀಮ, ಧರ್ಮರಾಜ ಇಬ್ಬರೂ ಅಣ್ಣಂದಿರಾಗಿ ಅರ್ಜುನನಿಗೆ ಸ್ವೋತ್ತಮರು. ಭೀಮ ಅಣ್ಣನಾಗಿ ಮಾತ್ರವಲ್ಲದೇ ವಾಯುದೇವನಾದ್ದರಿಂದ ಸ್ವರೂಪದಲ್ಲಿಯೂ ಸ್ವೋತ್ತಮನೇ. ಆದ್ದರಿಂದ ಅರ್ಜುನನದು ಸ್ವೋತ್ತಮದ್ರೋಹವಾಗುವುದಿಲ್ಲವೇ? ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅವರಿಬ್ಬರೂ ಅರ್ಜುನನ್ನು ಅತಿಪ್ರೀತಿಯ ಕಾರಣದಿಂದ ಕ್ಷಮಿಸಿದ್ದರಿಂದಾಗಿ ದೋಷವಾಗಲಿಲ್ಲ ಎಂದರ್ಥ.

೨) ಎಂದರೆ ಸ್ವೋತ್ತಮದ್ರೋಹ ಅಪರಾಧವಾಗುವುದು ಅವರು ಅಪ್ರೀತರಾದಾಗ ಮಾತ್ರ. ಅಣ್ಣಂದಿರಿಬ್ಬರೂ ಅಪ್ರೀತರಾಗದ್ದರಿಂದ ಅದು ದೋಷವಾಗಲಿಲ್ಲ ಎಂದರ್ಥ.

ಶಚಿಯೇ ಚಿತ್ರಾಂಗದೆ

ಸ ವೀರಸೇನಸ್ತ್ವಷ್ಟುರಂಶೋ ಯಮಸ್ಯಾ-
ಪ್ಯಾವೇಶಯುಕ್ ಸಾ ಚ ಕನ್ಯಾ ಶಚೀ ಹಿ ।
ತಾರಾದೇಹೇ ಸೂರ್ಯಜಸ್ಯಾಂಗಸಂಗಾತ್
ಸ್ವರ್ಗಂ ನಾಗಾದಂತರಿಕ್ಷಾದಿಹಾಸೀತ್ ॥ ೧೬೧ ॥

ಅ: ಆ ವೀರಸೇನ ತ್ವಷ್ಟೃವಿನ ಅಂಶ, ಯಮನ ಆವೇಶವನ್ನೂ ಹೊಂದಿದ್ದ. ಆ ಕನ್ಯೆ ಚಿತ್ರಾಂಗದೆಯು ಶಚಿಯ ಅವತಾರ. ತಾರೆಯಾಗಿದ್ದಾಗ ಸುಗ್ರೀವನ ಅಂಗಸಂಗ ಮಾಡಿದ್ದರಿಂದಾಗಿ ಸ್ವರ್ಗಕ್ಕೆ ತೆರಳಲಿಲ್ಲ. ಅಂತರಿಕ್ಷದಿಂದಲೇ ಬಂದು ಇಲ್ಲಿ ಜನಿಸಿದ್ದಳು.

ವಿ: ೧) ಭೂಮಿಯಲ್ಲಿ ಅವತರಿಸಿದ ದೇವತೆಗಳು ತಮ್ಮ ಅವತಾರ ಕಾರ್ಯದ ಅನಂತರ ದೇಹ ತೊರೆದ ಮೇಲೆ ತಮ್ಮ ಮೂಲರೂಪ ಸೇರಬೇಕು; ಸಾಮಾನ್ಯವಾಗಿ ಅದು ನಡೆಯುವುದು ಹಾಗೆಯೇ.

೨) ಆದರೆ ಅವರು ಅವತಾರದಲ್ಲಿ ಮೂಲರೂಪ ಪ್ರವೇಶಕ್ಕೆ ಅಡ್ಡಿಯಾಗುವಂತಹ ಮಹಾಪಾತಕಗಳನ್ನು ಮಾಡಿದರೆ ಹಾಗೆ ಮೂಲರೂಪದಲ್ಲಿ ಸೇರಲು ಈ ಅವತಾರದ ಅಂಶಕ್ಕೆ ಸಾಧ್ಯವಾಗುವುದಿಲ್ಲ ಎಂಬ ವಿಶೇಷಾಂಶ ಇದರಿಂದ ತಿಳಿಯುವುದು.

೩) ತಾರೆಯಾಗಿದ್ದಾಗ ಶಚೀದೇವಿ ವಾಲಿಯ ಮರಣಾನಂತರ ಸುಗ್ರೀವನ ಸಂಗ ಮಾಡಿದಳು. ಸುಗ್ರೀವ ಸೂರ್ಯಾವತಾರ; ಇಂದ್ರಾವತಾರನಾದ ವಾಲಿಗಿಂತ ಸೂರ್ಯಾವತಾರನಾದ

ಸುಗ್ರೀವ ತಾರತಮ್ಯದಲ್ಲಿ ತುಂಬಾ ಕಡಿಮೆಯಾಗಿದ್ದವನು. ಅದರಂತೆ ಶಚಿಯ ಅವತಾರಳಾದ ತಾರೆಯೂ ಸಹ ಸ್ವೋತ್ತಮಳೇ. ಎಂದರೆ ತಾರೆಗೆ ತನ್ನ ಪತಿಗಿಂತ ಕಡಿಮೆ ಮಾತ್ರವಲ್ಲದೇ ತನಗಿಂತಲೂ ಕಡಿಮೆಯಾದ ಸುಗ್ರೀವನ ಸಂಗ ಮಹಾದೋಷವಾಯಿತು. ಅದರಿಂದಾಗಿ ಅವಳಿಗೆ ಮೂಲ ರೂಪದಲ್ಲಿ ಸೇರಲು ಸಾಧ್ಯವಾಗಲಿಲ್ಲ ಎಂದರ್ಥ: **'ನ ಭರ್ತ್ಯಲೋಕಮೃಚ್ಛತಿ'**(೧೨/೨೪).

೪) ಅದರಿಂದಾಗಿ ಅವಳು ದೇವಲೋಕಕ್ಕೆ ತೆರಳಿದರೂ ಮೂಲರೂಪಕ್ಕೆ ಸೇರಲಾಗದೇ ಅಂತರಿಕ್ಷದಲ್ಲೇ ನೆಲೆಸಿದ್ದು ಈಗ ಭೂಮಿಯಲ್ಲಿ ಪುನಃ ಅವತರಿಸಬೇಕಾಯಿತು ಎಂದು ತಿಳಿಯಬೇಕು. ಈ ವಿವರಗಳನ್ನು ಇಲ್ಲಿ 'ಸೂರ್ಯಜಸ್ಯ' ಇತ್ಯಾದಿ ಪದಗಳ ಮೂಲಕ ಸೂಚಿಸಿರುವರು ಎಂದು ತಿಳಿಯಬೇಕು.

ಬಭ್ರುವಾಹನನಾದ ಜಯಂತ

ತೇನೈವ ಹೇತೋರ್ನಾತಿಸಾಮೀಪ್ಯಮಾಸೀತ್
ತಸ್ಯಾಃ ಪಾರ್ಥೇ ಪುತ್ರಿಕಾಪುತ್ರಧರ್ಮಾತ್ ।
ತಸ್ಯಾಂ ಜಾತೋ ಬಭ್ರುವಾಹೋಽರ್ಜುನೇನ
ಪೂರ್ವಂ ಜಯಂತಃ ಕಾಮದೇವಾಂಶಯುಕ್ತಃ ॥ ೧೬೨ ॥

ಅ: ಆ ಕಾರಣದಿಂದಾಗಿಯೇ ಅವಳಿಗೆ ಅರ್ಜುನನೊಂದಿಗೆ ಹೆಚ್ಚಿನ ಸಾಮೀಪ್ಯ ಸಹ ಉಂಟಾಗಲಿಲ್ಲ. ಅರ್ಜುನನು ಅವಳಲ್ಲಿ ಪುತ್ರಿಕಾಪುತ್ರ ಧರ್ಮದಿಂದ ಬಭ್ರುವಾಹನನನ್ನು ಪಡೆದ. ಬಭ್ರುವಾಹನನು ಹಿಂದೆ ಜಯಂತನಾಗಿದ್ದವನು; ಮನ್ಮಥನ ಅಂಶದಿಂದಲೂ ಕೂಡಿದವನು.

ವಿ: ೧) ಶಚಿಯು ತಾರೆಯಾಗಿದ್ದಾಗ ಮಾಡಿದ ಆ ಅಪರಾಧದಿಂದಾಗಿ ಹೀಗೆ ಚಿತ್ರಾಂಗದೆ–ಯಾಗಿ ಹುಟ್ಟುವ ಪ್ರಸಂಗ ಒದಗಿದ್ದು ಮಾತ್ರವಲ್ಲದೇ ಇಲ್ಲೂ ಸಹ ಅರ್ಜುನನೊಂದಿಗೆ ಒಟ್ಟಾಗಿ ನೆಲೆಸುವ ಯೋಗ ಅಷ್ಟಾಗಿ ಬರಲಿಲ್ಲ. ಅರ್ಜುನ ಅವಳನ್ನು ಮದುವೆಯಾದ ಮೇಲೆ ಮೂರು ತಿಂಗಳು ಮಾತ್ರ ಜೊತೆಗಿದ್ದು ತೆರಳಿದ.

೨) ಪುತ್ರಿಕಾಪುತ್ರ ಧರ್ಮದಿಂದ ವಿವಾಹವಾದ್ದರಿಂದ ಮಗನ ಸಂರಕ್ಷಣೆಗಾಗಿ ಅವಳು ಬಹುಕಾಲ ತಂದೆಯ ಮನೆಯಲ್ಲಿಯೇ ಉಳಿಯುವಂತಾಯಿತು. ಅನಂತರ ಅವಳು ಪಾಂಡವರ

---

೧೬೨. ತೇನೈವ ಹೇತೋರ್ನಾತಿಸಾಮೀಪ್ಯಮಿತ್ಯತ್ರ ''ವ್ಯತ್ಯಯೋ ಬಹುಲಮ್'' ಇತಿ ವಚನಾತ್ ಹೇತೋಃ= ಹೇತುನಾ॥ –(ವಾ.)

ಬಳಿಗೆ ತೆರಳಿದ್ದು ರಾಜಸೂಯ ಯಾಗದ ಸಂದರ್ಭದಲ್ಲಿ. ಅನಂತರವೂ ಅವಳು ಬಭ್ರುವಾಹನನ ಜೊತೆಗೇ ಇದ್ದದ್ದು ಅಶ್ವಮೇಧ ಯಾಗದ ಸಂದರ್ಭದಲ್ಲಿ ನಡೆದ ಘಟನೆಗಳಿಂದ ತಿಳಿಯುವುದು.

೩) ಹೀಗೆ ಅವಳು ಅರ್ಜುನನೊಂದಿಗೆ ಬಹುಕಾಲ ಒಟ್ಟಾಗಿ ಇರಲು ಸಾಧ್ಯವಾಗಲಿಲ್ಲ ಎಂಬುದು ಸ್ಪಷ್ಟ.

೪) ಬಭ್ರುವಾಹನ ಇಂದ್ರಪುತ್ರನಾದ ಜಯಂತನ ಅವತಾರ. ಕಾಮನ ಆವೇಶವೂ ಅವನಲ್ಲಿದ್ದಿತು. ಅವನು ಪುತ್ರಿಕಾಪುತ್ರಧರ್ಮದಿಂದ ಜನಿಸಿದ್ದರಿಂದ ಪಾಂಡವರ ವಂಶಕ್ಕೆ ಸೇರದೇ ಪಾಂಡ್ಯ ದೇಶಕ್ಕೆ ಸೇರಿದ.

ಅರ್ಜುನ ಮಾಡಿದ ನಕ್ರಮೋಚನ

ಪುತ್ರಂ ವೀರಂ ಜನಯಿತ್ವಾऽರ್ಜುನೋऽತೋ
ಗಚ್ಛನ್ ಪ್ರಭಾಸಂ ಶಾಪತೋ ಗ್ರಾಹದೇಹಾಃ ।
ಅಮೂಮುಚಚ್ಚಾಪ್ಸರಸಃ ಸ ಪಂಚ
ತಾಭಿರ್ಗೃಹೀತಃ ಪ್ರವಿಕೃಷ್ಯ ತೀರಮ್ ॥ ೧೬೩ ॥

ಅ: ವೀರನಾದ ಪುತ್ರನನ್ನು ಅರ್ಜುನ ಪಡೆದು ಪ್ರಭಾಸಕ್ಕೆ ತೆರಳುತ್ತಾ ದಾರಿಯಲ್ಲಿ ಶಾಪದಿಂದ ಮೊಸಳೆಯ ಜನ್ಮ ಹೊಂದಿದ್ದ ಐವರು ಅಪ್ಸರೆಯರನ್ನು ಅವರು ಈತನನ್ನು ಹಿಡಿದಾಗ ತೀರಕ್ಕೆ ಸೆಳೆದು ಅವರನ್ನು ಶಾಪದಿಂದ ಮುಕ್ತರನ್ನಾಗಿಸಿದ.

ಏವಂ ಹಿ ತಾಸಾಂ ಶಾಪಮೋಕ್ಷಃ ಪ್ರದತ್ತೋ
ಯದಾऽಖಿಲಾ ವೋ ಯುಗಪತ್ ಸಂಪ್ರಕರ್ಷೇತ್ ।
ಏಕಸ್ತದಾ ನಿಜರೂಪಾಪ್ತಿರೇವೇ-
ತ್ಯಲಂ ತುಷ್ಟೇನ ಬ್ರಾಹ್ಮಣೇನಾನತಾನಾಮ್ ॥ ೧೬೪ ॥

ಅ: ಆ ಐವರು ಅಪ್ಸರೆಯರು ಒಬ್ಬ ಬ್ರಾಹ್ಮಣನಿಂದ ಶಪಿಸಲ್ಪಟ್ಟಿದ್ದವರು. ಇವರು ಅವನನ್ನು ಶರಣುಹೊಕ್ಕಾಗ ತುಷ್ಟನಾಗಿ ಶಾಪದ ಪರಿಹಾರ ತಿಳಿಸಿದ: ''ಒಬ್ಬನೇ ವ್ಯಕ್ತಿ ನಿಮ್ಮನ್ನೆಲ್ಲಾ ತೀರಕ್ಕೆ ಒಟ್ಟಿಗೆ ಎಳೆದಾಗ ನಿಮಗೆ ನಿಜರೂಪ ಲಭಿಸುವುದು''.

---

೧೬೪. ಅಪ್ಸರಾऽಸ್ಮಿ ಮಹಾಬಾಹೋ ದೇವಾರಣ್ಯವಿಹಾರಿಣೀ ।
ಇಷ್ಟಾ ಧನಪತೇರ್ನಿತ್ಯಂ ವರ್ಗಾ ನಾಮ ಮಹಾಬಲ ॥...
ಅಹಂ ಚ ಸೌರಭೇಯೀ ಚ ಸಮೀಚೀ ಬುದ್ಬುದಾ ಲತಾ ।(ವರ್ಗಾವಚನ) –ಭಾರತ (೧/೨೧೫/೧೫,೨೦)

ವಿ: ೧) ಆ ಐವರು ಅಪ್ಸರೆಯರ ಹೆಸರುಗಳು ಕ್ರಮವಾಗಿ *ವರ್ಗಾ, ಸೌರಭೇಯೀ, ಸಮೀಚೀ, ಬುದ್ಬುದಾ ಮತ್ತು ಲತಾ. ಆ ಐವರಲ್ಲಿ ವರ್ಗಾ ಪ್ರಧಾನಳು.

೨) ಅವರೆಲ್ಲ ಒಮ್ಮೆ ಒಬ್ಬ ತಪಸ್ವಿಯಾದ ಬ್ರಾಹ್ಮಣನನ್ನು ಅಪಹಾಸ ಮಾಡಿದಾಗ ಅವನಿಂದ ಮೊಸಳೆಗಳಾಗಿ ಹುಟ್ಟುವಂತೆ ಶಾಪ ಪಡೆದಿದ್ದರು. ತಮ್ಮ ಅಪರಾಧವನ್ನು ಮನ್ನಿಸಲು ಕೇಳಿಕೊಂಡಾಗ ಆ ಮುನಿ ಒಬ್ಬನೇ ವ್ಯಕ್ತಿ ನಿಮ್ಮ ಐವರನ್ನೂ ಒಂದೇ ಬಾರಿಗೆ ಮೇಲಕ್ಕೆಳೆದಾಗ ನಿಮಗೆ ಆ ಜನ್ಮ ಪರಿಹಾರವಾಗಿ ನಿಜರೂಪ ಲಬಿಸಲಿ ಎಂದು ವಿಶಾಪ ನೀಡಿದ್ದ. ಅದರಂತೆ ಅವರೆಲ್ಲ ಕನ್ಯಾತೀರ್ಥದಲ್ಲಿ ಮೊಸಳೆಗಳಾಗಿ ಜನಿಸಿದ್ದರು.

೩) ಅರ್ಜುನ ಅಲ್ಲಿ ಸ್ನಾನ ಮಾಡುವಾಗ ಅವರೆಲ್ಲ ಇವನ ಕಾಲನ್ನು ಹಿಡಿಯಲು ಅವನು ಅವರನ್ನೆಲ್ಲ ಒಟ್ಟಾಗಿ ಮೇಲಕ್ಕೆಳೆದ. ಆಗಲೇ ಅವರ ಶಾಪ ಬಿಡುಗಡೆಯಾಗಿ ಉದ್ಧಾರಹೊಂದಿದರು.

೪) ಆ ತೀರ್ಥಕ್ಕೆ ಅಂದಿನಿಂದ *ನಾರೀತೀರ್ಥವೆಂದು ಹೆಸರಾಯಿತು. ಈ ಕನ್ಯಾತೀರ್ಥ ಕನ್ಯಾಕುಮಾರಿಯಲ್ಲಿರುವ ಕನ್ಯಾತೀರ್ಥವೇ ಆಗಿರಬೇಕು ಎಂದು ಊಹಿಸಬಹುದು :

ನಾರೀತೀರ್ಥಾನಿ ನಾಮ್ನೇಹ ಖ್ಯಾತಿಂ ಯಾಸ್ಯಂತಿ ಸರ್ವಶಃ ॥

– ಭಾರತ(ಆದಿ. ೨೧೬/೧೧)

೫) ಗಜೇಂದ್ರನ ಪಾದವನ್ನು ಹಿಡಿದಾಗ ಮೊಸಳೆಗೆ ಮೋಕ್ಷವಾದ ಕಥೆ ಸುಪ್ರಸಿದ್ಧ; ಇಲ್ಲಿ ದೇವೇಂದ್ರನ ಪಾದವನ್ನು ಹಿಡಿದು ಐವರು ಮೊಸಳೆಗಳು ಏಕಕಾಲಕ್ಕೆ ಉದ್ಧಾರವಾದ್ದು ವಿಶೇಷ.

೬) ಅಲ್ಲಿ ಶ್ರೀಹರಿ ಸ್ವತಃ ಆಗಮಿಸಿ ಗಜೇಂದ್ರನನ್ನು ಉದ್ಧರಿಸಿದ್ದರೆ, ಇಲ್ಲಿ ಇಂದ್ರನ ಮೂಲಕ ಆ ಕಾರ್ಯ ಮಾಡಿಸಿದ ಎಂಬುದು ವಿಶೇಷ.

೭) ಈ ಐದು ಮೊಸಳೆಗಳು (ಶಬ್ದ ಮೊದಲಾದ) ಐದು ಬಗೆಯ ದುರ್ವಿಷಯಗಳಿಗೆ ಸಂಕೇತ. ಅವುಗಳಿಂದ ಬಿಡಿಸಿಕೊಳ್ಳುವ ಶಕ್ತಿ ಅರ್ಜುನನಿಗೆ ಇತ್ತು ಎಂದರೆ ದುರ್ವಿಷಯಗಳಿಂದ ಪಾರಾಗುವ ಶಕ್ತಿ ಶ್ರವಣ, ಮನನಾದಿಗಳನ್ನು ಮಾಡುವವರಿಗೆ ಲಭ್ಯವಾಗುವುದು ಎಂದರ್ಥ.

೮) ಕನ್ಯಾತೀರ್ಥದ ವಾಸ ಅವರ ಮೊಸಳೆಯ ಜನ್ಮದ ಉದ್ಧಾರಕ್ಕೆ ಸಾಧನವಾಗಿದ್ದಂತೆ, ಆನಂದತೀರ್ಥದ ಅಭ್ಯಾಸ ಸುಜೀವಿಗಳ ಕುಯೋನಿಗಳ ಪರಿಹಾರಕ್ಕೆ ಸಾಧನ ಎಂಬ ತತ್ವವನ್ನೂ ಇಲ್ಲಿ ಗುರುತಿಸಬಹುದು.

೯) ಅರ್ಜುನ ಅಸ್ತ್ರಾಭ್ಯಾಸ ಕಾಲದಲ್ಲೊಮ್ಮೆ ಗುರುಗಳಾದ ದ್ರೋಣಾಚಾರ್ಯರ ಪಾದ–ವನ್ನು ಮೊಸಳೆಯೊಂದು ಹಿಡಿದಾಗ ತಕ್ಷಣವೇ ಧಾವಿಸಿ ಐದು ಬಾಣಗಳನ್ನು ಪ್ರಯೋಗಿಸಿ ಮೊಸಳೆ–ಯಿಂದ ಅವರನ್ನು ಬಿಡುಗಡೆ ಮಾಡಿದ್ದ ಅಪೂರ್ವ ಉಲ್ಲೇಖವೊಂದು *ಮಹಾಭಾರತದಲ್ಲಿದೆ.

ವಿಪ್ರಾಪಹಾಸಾತ್ ಕುತ್ಸಿತಯೋನಿತಸ್ತಾಃ
ಕನ್ಯಾತೀರ್ಥೇ ಪಾಂಡವಃ ಸಂಪ್ರಮುಚ್ಯ ।
ಪ್ರಾಪ್ತಃ ಪ್ರಭಾಸಂ ವಾಸುದೇವಾನುಜಾಂ ತಾಂ
ಶುಶ್ರಾವ ರಾಮೇಣ ಸುಯೋಧನೋದ್ಯತಾಮ್ ॥ ೧೬೫ ॥

ಅ: ಬ್ರಾಹ್ಮಣನನ್ನು ಅಪಹಾಸ್ಯ ಮಾಡಿದ್ದರಿಂದ ಒದಗಿದ್ದ ಹೀನ ಜನ್ಮದಿಂದ ಅವರನ್ನು ಕನ್ಯಾತೀರ್ಥದಲ್ಲಿ ಅರ್ಜುನ ಬಿಡುಗಡೆ ಮಾಡಿದ. ಬಳಿಕ ಪ್ರಭಾಸಕ್ಕೆ ತೆರಳಿ ಅಲ್ಲಿ ಕೃಷ್ಣನ ತಂಗಿಯಾದ ಸುಭದ್ರೆಯನ್ನು ಬಲರಾಮನು ದುರ್ಯೋಧನನಿಗೆ ನೀಡುವ ಸಿದ್ಧತೆ ನಡೆಸಿದ್ದನ್ನು ಕೇಳಿದ.

ವಿ: ೧) ಅರ್ಜುನ ಪ್ರಭಾಸಕ್ಕೆ ಬರುವ ವೇಳೆಗೆ ಬಲರಾಮ ತಾನು ದುರ್ಯೋಧನನಿಗೆ ವಚನ ನೀಡಿದ್ದಂತೆ ಸುಭದ್ರೆಯನ್ನು ಅವನಿಗೆ ನೀಡುವ ಸಿದ್ಧತೆಗಳಲ್ಲಿ ತೊಡಗಿರುವ ವಿವರ ಕವಿಗೆ ಬಿತ್ತು

೨) ಶ್ರೀರಾಮನು ಶಿಲೆಯಂತಿದ್ದ ಅಹಲ್ಯೆಯನ್ನು ಉದ್ಧರಿಸಿದ ಬಳಿಕ ಸೀತಾಕಲ್ಯಾಣ; ಅರ್ಜುನ ವೊಸಳೆಯಾಗಿದ್ದ ಅಪ್ಸರೆಯರನ್ನು ಉದ್ಧರಿಸಿದ ಅನಂತರ ಸುಭದ್ರಾಕಲ್ಯಾಣ; ಶ್ರೀರಾಮ ನಾರಾಯಣನಾಗಿ ಹಾಗೆ ಮಾಡಿದರೆ, ಅರ್ಜುನ ನರಾವಿಷ್ಟ ಇಂದ್ರನಾಗಿ ಹೀಗೆ ಮಾಡಿದ. ಅಲ್ಲಿ ಅಹಲ್ಯೆ ಇಂದ್ರನಿಂದ ಧರ್ಷಿತಳಾಗಿದ್ದರೆ, ಇಲ್ಲಿ ಉದ್ಧಾರ ಮಾಡಿದ ಅರ್ಜುನನೇ ಇಂದ್ರ ಎಂಬುದು ವಿಶೇಷ.

ದ್ವಾರಕೆಯ ಬಳಿ ಸನ್ಯಾಸಿಯಾಗಿ ಅರ್ಜುನ

ವಿಚಿಂತ್ಯ ಕಾರ್ಯಂ ಯತಿರೂಪಂ ಗೃಹೀತ್ವಾ
ಕುಶಸ್ಥಲೀಂ ಪ್ರಯಯೌ ತಂ ಸಮೀಪೇ ।
ಪ್ರಾಪ್ತಂ ಕೃಷ್ಣಃ ಪ್ರಾಹಸತ್ ಸಂವಿಜಾನನ್
ಸತ್ಯಾಸಹಾಯಃ ಶಯನೀಯಾಧಿರೂಢಃ ॥ ೧೬೬ ॥

---

* ಕಸ್ಯಚಿತ್ ತ್ವಥ ಕಾಲಸ್ಯ ಸಶಿಷ್ಯೋಽಂಗಿರಸಾಂ ವರಃ ।
ಜಗಾಮ ಗಂಗಾಮಭಿತೋ ಮಜ್ಜಿತುಂ ಭರತರ್ಷಭ ॥
ಅವಗಾಢಮಥೋ ದ್ರೋಣಂ ಸಲಿಲೇ ಸಲಿಲೇಚರಃ ।
ಗ್ರಾಹೋ ಜಗ್ರಾಹ ಬಲವಾನ್ ಜಂಘಾಂತೇ ಕಾಲಚೋದಿತಃ ॥
ಸ ಸಮರ್ಥೋಽಪಿ ಮೋಕ್ಷಾಯ ಶಿಷ್ಯಾನ್ ಸರ್ವಾನಚೋದಯತ್ ।
ಗ್ರಾಹಂ ಹತ್ವಾ ಮೋಕ್ಷಯಧ್ವಂ ಮಾಮಿತಿ ತ್ವರಯನ್ನಿವ ॥
ತದ್ವಾಕ್ಯಸಮಕಾಲಂ ತು ಬೀಭತ್ಸುರ್ನಿಶಿತೈಃ ಶರೈಃ ।
ಅವಾರ್ಯೈಃ ಪಂಚಭಿರ್ಗ್ರಾಹಂ ಮಗ್ನಮಂಭಸ್ಯತಾಡಯತ್ ॥... – ಭಾರತ (ಆದಿ. ೧೩೨/೧೧-೧೪)

ಅ: ಅರ್ಜುನ ತಾನು ಮಾಡಬೇಕಾದ್ದನ್ನು ಬಹಳವಾಗಿ ಆಲೋಚಿಸಿ ಯತಿರೂಪವನ್ನು ಧರಿಸಿ ದ್ವಾರಕೆಗೆ ತೆರಳಿದ. ಅವನು ಸಮೀಪಕ್ಕೆ ಬಂದದ್ದನ್ನು ಸತ್ಯಭಾಮೆಯೊಂದಿಗೆ ಪರ್ಯಂಕದಲ್ಲಿ ಒರಗಿದ್ದ ಕೃಷ್ಣ ತಿಳಿದು ಜೋರಾಗಿ ನಕ್ಕ.

ವಿ: ೧) ಅರ್ಜುನನು ಆಗ ಸ್ವೀಕರಿಸಿದ್ದು ತ್ರಿದಂಡಿ ಸನ್ಯಾಸ, ಎಂದರೆ ಶಿಖಾ, ಯಜ್ಞೋಪವೀತಗಳ ಸಮೇತವಾಗಿಯೇ ಮೂರು ದಂಡಗಳೊಂದಿಗೆ ಸ್ವೀಕರಿಸುವ ಸನ್ಯಾಸ.

೨) ಅವನು ಬಯಸಿದ್ದು ಸುಭದ್ರಾ ಕಲ್ಯಾಣವನ್ನು, ಧರಿಸಿದ್ದು ಸನ್ಯಾಸಿ ವೇಷವನ್ನು. ಸನ್ಯಾಸಿವೇಷ ಸಂಸಾರವನ್ನು ತ್ಯಜಿಸುವುದರ ಸಂಕೇತ, ಆದರೆ ಸಂಸಾರಿಯಾಗಲೆಂದೇ ಸನ್ಯಾಸಿಯಾದದ್ದು ಅರ್ಜುನನ ವಿಶೇಷ. ಅದಕ್ಕೆಂದೆ ಶ್ರೀಕೃಷ್ಣನ ಜೋರಾದ ನಗು ಎಂದು ತಿಳಿಯಬಹುದು.

ಸರ್ವಜ್ಞಾ ಸಾ ಲೀಲಯಾ ಹಾಸಹೇತು-
ಮಪೃಚ್ಛತ್ ತಂ ಸೋಽಪಿ ತಸ್ಯೈ ಬಭಾಷೇ ।
ಲೀಲಾಭಾಜೌ ದರ್ಶನಾರ್ಥಂ ಪುನಸ್ತಾ-
ವಗಚ್ಛತಾಂ ರೈವತಂ ಶೈಲರಾಜಮ್ ॥ ೧೬೭ ॥

ಅ: ಸತ್ಯಭಾಮೆ ಸರ್ವಜ್ಞಳು, ಆದರೂ ಲೀಲೆಗೆಂದು ಕೃಷ್ಣನ ನಗುವಿನ ಕಾರಣವನ್ನು ಕೇಳಿದಳು. ಅವನು ಅದನ್ನು ತಿಳಿಸಿದ. ಹೀಗೆ ಲೀಲೆಗೈಯುತ್ತಲೇ ಅವರಿಬ್ಬರು ಅರ್ಜುನನನ್ನು ಕಾಣಲು ಪರ್ವತರಾಜವಾದ ರೈವತಕ್ಕೆ ತೆರಳಿದರು.

ವಿ: ೧) ಸತ್ಯಭಾಮೆ ಕೇಳುವುದು, ಕೃಷ್ಣ ಹೇಳುವುದು – ಎಲ್ಲಾ ಸರ್ವಜ್ಞರಾದ ಅವರ ಲೀಲೆ ಎಂಬ ವಿಶೇಷಾಂಶವನ್ನು ಗಮನಿಸಬೇಕು. ಅರ್ಜುನನಿದ್ದಲ್ಲಿಗೆ ಕೃಷ್ಣ ತೆರಳಿದ್ದು ಆತನ ಭಕ್ತವಾತ್ಸಲ್ಯಕ್ಕೆ ದ್ಯೋತಕ.

೨) ಸತ್ಯಭಾಮಾದೇವಿಯನ್ನು ಜೊತೆಗೆ ಕರೆದೊಯ್ದದ್ದು ಅವನಿಗೆ ಕಲ್ಯಾಣ ಮಾಡಿ–ಸುವುದಕ್ಕೆ ದ್ಯೋತಕ ಎಂದೂ ತಿಳಿಯಬಹುದು.

ಆಕ್ರೀಡೋಽಸೌ ಭೋಜವೃಷ್ಣ್ಯಂಧಕಾನಾಂ
ತತ್ರಾಪಶ್ಯತ್ ಕೇಶವಃ ಫಲ್ಗುನಂ ತಮ್ ।
ಸ್ವಸುರ್ದಾನೇ ಸ ಪ್ರತಿಜ್ಞಾಂ ರಹೋಽಸ್ಮೈ
ಚಕ್ರೇ ಕೃಷ್ಣೋಽಥಾಸದತ್ ಸರ್ವವೃಷ್ಣೀನ್ ॥ ೧೬೮ ॥

ಅ: ರೈವತಕ ಪರ್ವತ ಭೋಜ, ವೃಷ್ಣಿ ಅಂಧಕರಿಗೆ ಕ್ರೀಡಾಂಗಣವಾಗಿತ್ತು. ಅಲ್ಲಿ ಕೃಷ್ಣ ಅರ್ಜುನನನ್ನು ಕಂಡ. ತಂಗಿಯನ್ನು ಅವನಿಗೆ ಧಾರೆಯೆರೆಯುವುದಾಗಿ ರಹಸ್ಯವಾಗಿ ವಚನವಿತ್ತ. ಬಳಿಕ ಎಲ್ಲ ಯಾದವರ ಬಳಿಗೆ ತೆರಳಿದ.

ವಿ: ೧) ಬಲರಾಮ ಸುಯೋಧನನಿಗೆ ವಚನ ನೀಡಿದ್ದರೆ, ಕೃಷ್ಣ ಅರ್ಜುನನಿಗೆ ವಚನ ನೀಡಿದ. ಬಲರಾಮನ ಕೈ ಹಲಾಂಕ, ಕೃಷ್ಣನ ಕೈ ಚಕ್ರಾಂಕ. ಹೀಗೆ ವಿಭಿನ್ನ ಅಂಕಗಳ ಇವರಿಬ್ಬರಲ್ಲಿ ಯಾರ ಮಾತು ನಡೆಯುವುದು ಎಂಬುದು ಮೇಲ್ನೋಟಕ್ಕೆ ಕುತೂಹಲದ ವಿಷಯ.

೨) ಒಂದರ್ಥದಲ್ಲಿ ಚುನಾವಣೆಗಳಲ್ಲಿ ಚಿಹ್ನೆಗಳ ಮೂಲಕ ಸ್ಪರ್ಧಿಸುವ ಪದ್ಧತಿಗೆ ನಾಂದಿ ಹಾಡಿದ ಅಪೂರ್ವ ಘಟನೆಯಂತೆ ಇದು ಇರುವುದು ಗಮನಾರ್ಹ.

೩) ಆದರೆ ಸದಾ ಚಕ್ರ ಚಿಹ್ನೆಗೇ ಜಯ ಎಂಬುದು ಶ್ರೀಕೃಷ್ಣನ ವೈಭವದ ಸಂಕೇತ. ಹಾಗೆ ವಚನ ನೀಡುವ ಮೂಲಕ ತಾನು ಅನ್ಯ ದೇವತೆಗಳು ನೀಡುವ ವಚನಗಳನ್ನು ವ್ಯೋಫಗೊಳಿಸಬಲ್ಲ ಮಹಾಸಮರ್ಥ ಎಂಬುದನ್ನು ಕೃಷ್ಣ ಸೂಚಿಸಿದ ಎಂದು ತಿಳಿಯಬಹುದು.

ದೃಷ್ಟ್ವಾ ಗಿರೌ ರೌಹಿಣೇಯೋ ಯತೀಂದ್ರ-
ವೇಷಂ ಪಾರ್ಥಂ ಜ್ಞಾತಿಯುಕ್ತಃ ಪ್ರಣಮ್ಯ ।
ಚಕ್ರೇ ಪೂಜಾಂ ಫಲ್ಗುನೋಽಪಿ ಪ್ರಣಾಮಂ
ಗುಣಜ್ಯೇಷ್ಠೋಽಸೀತಿ ಚಕ್ರೇ ಬಲಾಯ ॥ ೧೬೯ ॥

ಅ: ಬಲರಾಮ ಪರ್ವತದಲ್ಲಿ ಯತಿಶ್ರೇಷ್ಠನ ವೇಷದಲ್ಲಿದ್ದ ಅರ್ಜುನನನ್ನು ಕಂಡು ಬಾಂಧವ ಸಮೇತನಾಗಿ ನಮಸ್ಕರಿಸಿ ಪೂಜಿಸಿದ. 'ನೀನು ನನಗಿಂತ ಗುಣದಲ್ಲಿ ಮಿಗಿಲಾದವನು' ಎನ್ನುತ್ತಾ ಭಕ್ತಿಯಿಂದ ಅರ್ಜುನನೂ ಅವನಿಗೆ ನಮಸ್ಕರಿಸಿದ.

ವಿ: ೧) ಯತಿಶ್ರೇಷ್ಠರೊಬ್ಬರು ಬಂದ ವಿಚಾರವನ್ನು ತಿಳಿದು ಬಲರಾಮ ಯಾದವರೊಂದಿಗೆ ತೆರಳಿ ಅರ್ಜುನನಿಗೆ ನಮಸ್ಕರಿಸಿ ಸತ್ಕರಿಸಿದ.

೨) ತನಗಿಂತ ತುಂಬ ಮಿಗಿಲಾದ ಶೇಷನ ಅವತಾರವಾದ ಬಲರಾಮನ ಅಂತಹ ವಂದನೆ ಅರ್ಜುನನಿಗೆ ಆಘಾತ ಉಂಟುಮಾಡಿದ್ದರಲ್ಲಿ ಅಚ್ಚರಿಯೇನಿಲ್ಲ.

---

೧೬೯. ಸ್ವಾವರಾಣಾಂ ಗುರುತ್ವೇ ಪ್ರಾಪ್ತೇ ಮರ್ಯಾದಾರ್ಥಂ ತು ತೇ ಪೂಜ್ಯಾ ಇತಿ ಜಾನನ್ನರ್ಜುನಃ ಸ್ವಸ್ಯ ಯತ್ಯಾಶ್ರಮಾಭಾವಾದ್ಗುಣಜ್ಯೇಷ್ಠೋಽಸೀತಿ ವ್ಯಾಜೇನ ಪ್ರಣಾಮಂ ಚಕ್ರ ಇತಿ ಅಪಿಶಬ್ದಾಭಿಪ್ರಾಯಃ । – (ಜ.)

೩) ನಿಜವಾದ ಸನ್ಯಾಸಿಯೂ ಅಲ್ಲದ, ಯೋಗ್ಯತೆ, ವಯಸ್ಸು ಮೊದಲಾಗಿ ಎಲ್ಲದರಲ್ಲೂ ಅವರಿಗಿಂತ ಚಿಕ್ಕವನಾದ ತಾನು ಅವರಿಂದ ನಮಸ್ಕರಿಸಿಕೊಂಡ ಅಪರಾಧದ ಪರಿಹಾರಕ್ಕಾಗಿ ಅವರಿಗೇ ನಮಸ್ಕರಿಸಿದ. ಅವರನ್ನು ತನಗಿಂತ ಗುಣದಲ್ಲಿ ಮಿಗಿಲಾದವರು ಎಂದು ಪ್ರಶಂಸಿಸಿದ. ಆ ಮೂಲಕವಾಗಿ ಅವರ ವಿಶೇಷಪ್ರೀತಿಗೂ ಪಾತ್ರನಾದ.

ದ್ವಾರಕೆಯಲ್ಲಿ ಅರ್ಜುನನ ಚಾತುರ್ಮಾಸ್ಯ

ಸರ್ವಜ್ಞಂ ತಂ ವಾಗ್ಮಿನಂ ವೀಕ್ಷ್ಯ ರಾಮಃ
ಕನ್ಯಾಗಾರೇ ವರ್ಷಕಾಲೇ ನಿವಾಸಮ್ ।
ಸತ್ಕಾರಪೂರ್ವಂ ಕಾರಯೇತ್ಯಾಹ ಕೃಷ್ಣಂ
ನೈವೇತ್ಯೂಚೇ ಕೇಶವೋ ದೋಷವಾದೀ ॥ ೧೭೦ ॥

ಅ: ಸನ್ಯಾಸಿ ವೇಷದ ಅರ್ಜುನನನ್ನು ಎಲ್ಲ ಬಲ್ಲವ ಮತ್ತು ಒಳ್ಳೆಯ ವಾಗ್ಮಿ ಎಂದು ಗಮನಿಸಿದ ಬಲರಾಮ ''ಚಾತುರ್ಮಾಸ್ಯ ಕಾಲದಲ್ಲಿ ಕನ್ಯಾಗಾರದ ಬಳಿಯಲ್ಲಿ ವಾಸವನ್ನು ಸತ್ಕಾರಪೂರ್ವಕವಾಗಿ ಏರ್ಪಡಿಸು'' ಎಂದು ಕೃಷ್ಣನಿಗೆ ತಿಳಿಸಿದ. ಕೃಷ್ಣನು ಅದರ ಕೆಡುಕುಗಳನ್ನು ತಿಳಿಸುತ್ತಾ ''ಆಗದು'' ಎಂದ.

ವಿ: ೧) ಅರ್ಜುನನ ವಿನಯಾದಿಗುಣಗಳಿಗೆ ಮಾರುಹೋದ ಬಲರಾಮ ಅಪೂರ್ವಯತಿ ಎಂದು ಭಾವಿಸಿ ಆಗಲೇ ಚಾತುರ್ಮಾಸ್ಯ ಸಮೀಪಿಸಿದ್ದನ್ನು ನೋಡಿ ಆ ಬಾರಿಯ ಚಾತುರ್ಮಾಸ್ಯ–ವನ್ನು ತಮ್ಮಲ್ಲಿಯೇ ಏರ್ಪಡಿಸಲು ನಿಶ್ಚಯಿಸಿ ಕೃಷ್ಣನಿಗೆ ಅದರ ಜವಾಬ್ದಾರಿ ವಹಿಸಿದ ಎಂದರ್ಥ.

೨) ಚಾತುರ್ಮಾಸ್ಯ ಯತಿಗಳಿಗೆ ವಿಹಿತವಾದ ವಿಶೇಷವಾದ ಧರ್ಮ ಎಂಬುದು ಸಹ ಈ ಮೂಲಕ ಸೂಚಿತವಾಗಿದೆ. ಚಾತುರ್ಮಾಸ್ಯದಲ್ಲಿ ಯತಿಗಳ ಸೇವೆ ತುಂಬಾ ಪುಣ್ಯಕರ ಎಂಬುದು ಶಾಸ್ತ್ರಪ್ರಮಿತವಾದ ವಿಚಾರ.

೩) ನಾರದರು ಶೂದ್ರಸ್ತ್ರೀಪುತ್ರನಾಗಿದ್ದಾಗ ಹಾಗೆ ಮಾಡಿದ್ದಕ್ಕೆ ಬ್ರಹ್ಮಪುತ್ರನಾಗಿ ಜನಿ–ಸುವಂತಹ ಸೌಭಾಗ್ಯಕ್ಕೆ ಪಾತ್ರರಾದರು (ಭಾಗವತ ಸ್ಕಂಧ ೧, ಅಧ್ಯಾಯ ೬). ಕುಂತಿ ಹಾಗೆ ದುರ್ವಾಸರನ್ನು ಸೇವಿಸಿದ್ದರ ಫಲವಾಗಿ ಅಪೂರ್ವ ಮಂತ್ರವೊಂದನ್ನು ಅವರಿಂದ ಉಪದೇಶ ಹೊಂದಿ ಪಾಂಡವರಂತಹ ಲೋಕೋತ್ತರ ಪುತ್ರರನ್ನು ಪಡೆದ ಭಾಗ್ಯವತಿಯಾದಳು (೧೧/೧೪೭–೧೫೦) ಎಂಬ ವಿವರಗಳನ್ನು ಗಮನಿಸಬೇಕು.

೪) ಇಲ್ಲಿ 'ವರ್ಷಕಾಲೇ' ಎಂಬುದಕ್ಕೆ ಮಳೆಗಾಲ ಎಂಬುದು ಶಬ್ದಾರ್ಥವಾದರೂ, ಚಾತುರ್ಮಾಸ್ಯಕಾಲ ಎಂಬುದು ತಾತ್ಪರ್ಯ.

ಯುವಾ ಬಲೀ ದರ್ಶನೀಯೋಽತಿವಾಗ್ಮೀ
ನಾಯಂ ಯೋಗ್ಯಃ ಕನ್ಯಕಾಗಾರವಾಸಮ್ ।
ಇತ್ಯುಕ್ತವಂತಂ ರಾಮ ಆಹಾಪ್ತವಿದ್ಯೇ
ನಾಸ್ಮಿನ್ ಶಂಕೇತ್ಯೇವ ಲೋಕಾಧಿನಾಥಮ್ ॥ ೧೭೧ ॥

ಅ: ''ಇವನು ತರುಣ, ಬಲಶಾಲಿ, ರೂಪವಂತ, ಉತ್ತಮ ಮಾತುಗಾರ. ಆದ್ದರಿಂದ ಇವನನ್ನು ಕನ್ಯಾಗಾರದಲ್ಲಿ ಇರಿಸುವುದು ಯೋಗ್ಯವಲ್ಲ'' ಹೀಗೆ ಲೋಕನಾಥನಾದ ಶ್ರೀಕೃಷ್ಣನುಡಿಯಲು ಬಲರಾಮ ಹೇಳಿದ: ''ವಿದ್ಯಾವಂತನಾದ ಇವನ ಬಗ್ಗೆ ಅಂತಹ ಸಂದೇಹ ತರವಲ್ಲ''.

ವಿ: ೧) ಕೃಷ್ಣ ಅರ್ಜುನನನ್ನು ಹಾಗೆ ವರ್ಣಿಸುವ ಮೂಲಕ ಅವನು ಸುಭದ್ರೆಗೆ ಉತ್ತಮವರ ಎಂಬುದನ್ನು ಸೂಚಿಸಿದ ಎಂದು ತಿಳಿಯಬೇಕು. ಬಲರಾಮನಿಗೆ ಅರ್ಜುನನ ಸ್ವರೂಪ ತಿಳಿಯದೇ ಇರುವುದು ಋಜುವ್ಯತಿರಿಕ್ತತಾತ್ತ್ವಿಕದೇವತೆಗಳ ಬಾಹ್ಯಜ್ಞಾನ ಒಮ್ಮೊಮ್ಮೆ ಅಯಥಾರ್ಥವಾಗುವುದುಂಟು ಎಂಬುದಕ್ಕೆ ಗಮಕ ('ಬಾಹ್ಯಂ ಕದಾಚಿದಯಥಾರ್ಥಮಪಿ' – ಪ್ರಮಾಣಪದ್ಧತಿ).

೨) ಅವರು ಶ್ರೀಹರಿಯ ಸಾಕ್ಷಾದವತಾರ ಎಂಬ ಕೆಲವರ ಕಲ್ಪನೆ ತಪ್ಪು ಎಂಬುದನ್ನು ಇದು ಸಮರ್ಥಿಸುವುದು. ಹೀಗೆ ಬೇಡವೆನ್ನುತ್ತಲೇ ಅರ್ಜುನನ ವಿವಾಹವನ್ನು ಮಾಡಿಸುವುದು ಕೃಷ್ಣ ಅಪೂರ್ವ ಕಾರ್ಯವ್ಯೆಖರಿ.

೩) ಸುಯೋಧನನಿಗೆ ಸುಭದ್ರೆಯನ್ನು ನೀಡಬಯಸಿದ್ದ ಬಲರಾಮನೇ ಅರ್ಜುನನ ಸುಭದ್ರಾಕಲ್ಯಾಣಕ್ಕೆ ಪರ್ಯಾಯವಾಗಿ ನೆರವಾಗುವಂತೆ ಮಾಡುವುದು ಶ್ರೀಕೃಷ್ಣನ ಅಚಿಂತ್ಯಾದ್ಭುತಶಕ್ತಿಗೆ ನಿದರ್ಶನ.

ನಾಸ್ಮನ್ಮತೇ ರೋಚತೇ ತ್ವನ್ಮತಂ ತು
ಸರ್ವೇಷಾಂ ನಃ ಪೂಜ್ಯಮೇವಾಸ್ತು ತೇನ ।
ಇತ್ಯುಕ್ತ್ವಾ ತಂ ಕೇಶವಃ ಸೋದರಾಯೈ
ಶುಶ್ರೂಷಸ್ವೇತ್ಯಾಹ ಸಂತಂ ಯತೀಂದ್ರಮ್ ॥ ೧೭೨ ॥

ಅ: ''ನನ್ನ ಅಭಿಪ್ರಾಯದಲ್ಲಂತೂ ಇದು ಸರಿಯೆನ್ನಿಸುವುದಿಲ್ಲ. ಆದರೂ ನಿನ್ನ ತೀರ್ಮಾನ ನಮ್ಮೆಲ್ಲರಿಗೂ ಪೂಜ್ಯವೇ ಆದ್ದರಿಂದ ಆಗಲಿ'' - ಎಂದು ನುಡಿದು ಶ್ರೀಕೃಷ್ಣ ತಂಗಿಯಾದ ಸುಭದ್ರೆಗೆ ಹೇಳಿದ ''ಈ ಯತಿವರ್ಯ ಉತ್ತಮನು; ಇವನ ಸೇವೆ ಮಾಡು''.

ವಿ: ಶ್ರೀಕೃಷ್ಣ ಬಲರಾಮನಿಗೆ ನೀನು ಹಿರಿಯ ಎನ್ನುತ್ತಲೇ ಅವನು ಎಷ್ಟು ಕಿರಿಯ ಎಂಬುದನ್ನು ತೋರಿಸಿಕೊಡುತ್ತಿರುವನು. ಹೀಗೆ ಹೇಳುವ ಮೂಲಕ ಮುಂದೆ ಬಲರಾಮ ತನ್ನನ್ನು ಯಾವುದೇ ರೀತಿಯಲ್ಲಿ ಆಕ್ಷೇಪಿಸದಂತೆ ಮಾಡಿದ ಎಂದು ಸಹ ತಿಳಿಯಬೇಕು.

ನಿತ್ಯಾಪ್ರಮತ್ತಾ ಸಾಧು ಸಂತೋಷಯೇತಿ
ಪ್ರೋಕ್ತಾ ತಥಾ ಸಾऽಕರೋತ್ ಸೋऽಪಿ ತತ್ರ।
ಚಕ್ರೇ ಮಾಸಾನ್ ವಾರ್ಷಿಕಾನ್ ಸತ್ಕಥಾಭಿ-
ರ್ವಾಸಂ ವಾಕ್ಯಂ ಶ್ರದ್ಧಧಾನೋ ಹರೇಸ್ತತ್ ॥ ೧೭೩ ॥

ಅ: 'ನಿತ್ಯವೂ ಮೈಮರೆಯದೇ ಇವನನ್ನು ಚೆನ್ನಾಗಿ ಸಂತೋಷಪಡಿಸು' ಎಂದು ಶ್ರೀಕೃಷ್ಣ ಹೇಳಲು ಸುಭದ್ರೆ ಹಾಗೆಯೇ ಮಾಡಿದಳು. ಅರ್ಜುನನು ಶ್ರೀಕೃಷ್ಣ ನೀಡಿದ ವಚನವನ್ನು ನಂಬಿಕೊಂಡು, ಉತ್ತಮ ಕಥೆಗಳ ಮೂಲಕ ಮಳೆಗಾಲದ ತಿಂಗಳುಗಳನ್ನು (ಚಾತುರ್ಮಾಸ್ಯ-ವನ್ನು) ಅಲ್ಲಿ ಕಳೆದ.

ವಿ: ೧) ಕೃಷ್ಣ ಹಾಗೆ ಸೇವೆ ಮಾಡಲು ತಿಳಿಸುತ್ತಾ ಮೈಮರೆಯದಿರು ಎಂಬ ಎಚ್ಚರವನ್ನೂ ನೀಡಿರುವುದು ಗಮನಾರ್ಹ. ಅರ್ಜುನ ಶ್ರೀಕೃಷ್ಣವಚನವನ್ನು ನಂಬಿ ನಿಶ್ಚಿಂತೆಯಿಂದ ಚಾತು-ರ್ಮಾಸ್ಯವನ್ನು ಪೂರೈಸಿದ.

೨) ಅದು ಚಾತುರ್ಮಾಸ್ಯ ಕಾಲವಾದ್ದರಿಂದ ಆಗ ವಿವಾಹ ನಡೆಯುವ ಸಂಭವ ಇಲ್ಲದ್ದರಿಂದ ಆತಂಕಪಡುವ ಪ್ರಸಂಗವೂ ತಪ್ಪಿತ್ತು ಎಂದು ತಿಳಿಯಬೇಕು :

ಸಮಸ್ತ ಮಂಗಲಾನಾಂ ಚ ದೇವತಾ ಚ ಜನಾರ್ದನಃ।
ತಸ್ಮಿಂಸ್ತು ಶಯನಂ ಯಾತೇ ನೋದ್ವಾಹಾದಿಕ್ರಿಯಾ ಭವೇತ್ ॥
ಚೌಲೋಪನಯನೇ ಚೈವ ವಿವಾಹಾದ್ಯಂ ತ್ಯಜೇದ್ಬುಧಃ ॥ – ಸ್ಕಂದಪುರಾಣ

೩) ಇಲ್ಲಿ ಸತ್ಕಥಾಭಿಃ ಎಂಬುದಕ್ಕೆ ಭಗವಂತನ ಅವತಾರ ಕಥೆಗಳನ್ನು, ಮಹಿಮೆಗಳನ್ನು ಹೇಳುತ್ತಾ ಕೇಳುತ್ತಾ ಎಂದು ಮುಖ್ಯವಾದ ಅರ್ಥ. ಒಳ್ಳೆಯ ಮಾತುಕಥೆಗಳಿಂದ ಎಂಬ ಅರ್ಥವೂ ವಿವಕ್ಷಿತ.

ಸಂಯಾಚಿತಃ ಫಲ್ಗುನೇನಾಹ ವಾಕ್ಯಂ
ಯದ್ವಾಸುದೇವಸ್ತನ್ನ ಜಾನಾತಿ ಕಶ್ಚಿತ್ ।
ಋತೇ ಪಿತ್ರೋರ್ವಿಪೃಥೋಃ ಸಾತ್ಯಕೇರ್ವಾ
ಸುಭದ್ರಾಂ ತೇ ಪ್ರದದಾನೀತಿ ಸತ್ಯಮ್ ॥ ೧೭೪ ॥

ಅ: ಅರ್ಜುನನು ಬೇಡಿದಾಗ, 'ಸುಭದ್ರೆಯನ್ನು ನಾನು ಸತ್ಯವಾಗಿಯೂ ನಿನಗೇ ಕೊಡುವೆ' ಎಂದು ಶ್ರೀಕೃಷ್ಣನೀಡಿದ್ದ ವಚನವನ್ನು ತಂದೆ ತಾಯಿಗಳಾದ ವಸುದೇವ ದೇವಕಿಯರು, ವಿಪೃಥು ಮತ್ತು ಸಾತ್ಯಕಿ ಇವರ ಹೊರತು ಬೇರಾರೂ ತಿಳಿದಿರಲಿಲ್ಲ.

ವಿ: ವಿಪೃಥು ಎಂಬವನು ಯಾದವ ಸೇನಾಪತಿ ಎಂಬ ವಿವರ ಮುಂದೆ ಬಂದಿದೆ (ಶ್ಲೋ.೧೯೩). ಸಾತ್ಯಕಿಯ ಬಗ್ಗೆ ಹೆಚ್ಚಿನ ವಿವರವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

ಅಸ್ತ್ರೇ ಶಸ್ತ್ರೇ ಸರ್ವವಿದ್ಯಾಸು ಚೈವ
ಶಿಷ್ಯಃ ಶೈನೇಯೋ ವಾಸುದೇವೇಂದ್ರಸೂನ್ವೋಃ ।
ತಸ್ಮಾದಸ್ಮೈ ಕಥಯಾಮಾಸ ಕೃಷ್ಣಃ
ಸ್ವಶಿಷ್ಯತ್ವಾದ್ವಿಪೃಥೋಶ್ಚಾಪಿ ಸರ್ವಮ್ ॥ ೧೭೫ ॥

ಅ: ಸಾತ್ಯಕಿ ಅಸ್ತ್ರ ಶಸ್ತ್ರ ಹಾಗೂ ತತ್ವವಿದ್ಯೆಗಳಲ್ಲಿ ಶ್ರೀಕೃಷ್ಣಾರ್ಜುನರ ಶಿಷ್ಯ. ಆದ್ದರಿಂದ ಅವನಿಗೆ ಶ್ರೀಕೃಷ್ಣ ಎಲ್ಲವನ್ನೂ ತಿಳಿಸಿದ್ದ. ತನ್ನ ಶಿಷ್ಯನೆಂಬ ಕಾರಣದಿಂದಾಗಿ ವಿಪೃಥುವಿಗೂ ಹೇಳಿದ್ದ.

ವಿ: ಸಾತ್ಯಕಿ ಕೃಷ್ಣಾರ್ಜುನರ ಶಿಷ್ಯ. ಕೃಷ್ಣ ಮದುವೆ ಮಾಡಿಸುವವನು, ಅರ್ಜುನ ಮದುವೆಯಾಗುವವನು; ಎಂದರೆ ಸಾತ್ಯಕಿಗೆ ಅದು ಅತ್ಯಂತ ಹರ್ಷದಾಯಕವಾದ ವಿಚಾರ ಎಂಬ ಕಾರಣದಿಂದ ಅವನಿಗೆ ತಿಳಿಸಿದ್ದ ಎಂದರ್ಥ.

ಅನ್ಯೇ ಸರ್ವೇ ವಾಸುದೇವಸ್ಯ ಪಾರ್ಥಾನ್
ಪ್ರಿಯಾನ್ ನಿತ್ಯಂ ಜಾನಮಾನಾ ಅಪಿ ಸ್ಮ ।
ರಾಮೇಣಾದಿಷ್ಟಾ ಉದ್ಧವೋಽಥಾಹುಕಾದ್ಯಾ
ಹಾರ್ದಿಕ್ಯಾದ್ಯಾ ನೈವ ದಿತ್ಸಂತಿ ಜಿಷ್ಣೋಃ ॥ ೧೭೬ ॥

ಅ: ಉದ್ಧವ, ಆಹುಕ ಮೊದಲಾದವರು, ಕೃತವರ್ಮ ಮುಂತಾದ ಇತರ ಎಲ್ಲರೂ ಪಾಂಡವರನ್ನು ಶ್ರೀಕೃಷ್ಣನಿಗೆ ಸದಾ ಅತ್ಯಂತ ಪ್ರಿಯರು ಎಂದು ಬಲ್ಲವರಾಗಿದ್ದರೂ, ಬಲರಾಮನ ಆದೇಶದಿಂದಾಗಿ ಸುಭದ್ರೆಯನ್ನು ಅರ್ಜುನನಿಗೆ ಕೊಡಲು ಇಷ್ಟಪಟ್ಟಿರಲಿಲ್ಲ.

ವಿ: ಹೀಗೆ ಇವರೆಲ್ಲ ಭಿನ್ನಧರ್ಮರು ಎಂಬುದಾಗಿ ಹೇಳಿರುವುದನ್ನು ಗಮನಿಸಬೇಕು(೧೮/೨೦).

ದುರ್ಯೋಧನೇ ದಾತುಮಿಚ್ಛಂತಿ ಸರ್ವೇ
ರಾಮಪ್ರಿಯಾರ್ಥಂ ಜಾನಮಾನಾ ಹರೇಸ್ತತ್ ।
ಅಪ್ಯಪ್ರಿಯಂ ರಾಕ್ಷಸಾವೇಶಯುಕ್ತಾ-
ಸ್ತಸ್ಮಾತ್ ಸರ್ವಾನ್ ವಂಚಯಾಮಾಸ ಕೃಷ್ಣಃ ॥ ೧೭೭ ॥

ಅ: ಅವರೆಲ್ಲ ಅಸುರಾವೇಶದಿಂದಾಗಿ, ಅದು ಶ್ರೀಕೃಷ್ಣನಿಗೆ ಅಪ್ರಿಯವೆಂದು ತಿಳಿದಿದ್ದರೂ ಬಲರಾಮನ ಸಂತೋಷಕ್ಕಾಗಿ ಸುಭದ್ರೆಯನ್ನು ದುರ್ಯೋಧನನಿಗೇ ನೀಡಲು ಇಚ್ಛಿಸಿದ್ದರು. ಅದಕ್ಕೇ ಶ್ರೀಕೃಷ್ಣ ಅವರೆಲ್ಲರನ್ನೂ ವಂಚಿಸಿದ.

ವಿ: ೧) ಸಾತ್ಯಕಿ ಮೊದಲಾದವರ ಹೊರತು ಉಳಿದವರಿಗೆ ಶ್ರೀಕೃಷ್ಣ ಆ ವಿಷಯವನ್ನು ತಿಳಿಸದೇ ಇದ್ದ ಕಾರಣವನ್ನು ಇಲ್ಲಿ ಹೇಳಿರುವರು. ಉದ್ಧವಾದಿಗಳಿಲ್ಲ ಕೃಷ್ಣನ ಪರಮ ಭಕ್ತರೇ ಆಗಿದ್ದರೂ, ಆಗ ಅಸುರಾವೇಶದಿಂದಾಗಿ ಬಲರಾಮನ ಪ್ರೀತಿಗಾಗಿ ಕೃಷ್ಣನ ವಿರುದ್ಧವಾಗಿ ವರ್ತಿಸಿದ್ದರಿಂದ ಅವರಾರಿಗೂ ಆ ವಿಷಯವನ್ನು ತಿಳಿಸಿರಲಿಲ್ಲ ಎಂದರ್ಥ.

೨) ಅವರು ತಿಳಿಯುವುದರಿಂದ ಕೃಷ್ಣನ ಸಂಕಲ್ಪಕ್ಕೆ ಯಾವ ಆತಂಕವೂ ಇರುತ್ತಿರಲಿಲ್ಲ. ಆದರೂ ಕೃಷ್ಣನ ಸಂಕಲ್ಪಕ್ಕೆ ಅನುಗುಣವಾಗಿ ವರ್ತಿಸಿದ ವಿಶೇಷಪುಣ್ಯಕ್ಕೆ ಭಾಗಿಗಳಾಗುವ ಅವಕಾಶವನ್ನು ಅವರು ಅಸುರಾವೇಶದಿಂದಾಗಿ ಕಳೆದುಕೊಳ್ಳುವಂತಾಯಿತು ಎಂದರ್ಥ.

೩) ದುರ್ಯೋಧನ ಬಲರಾಮನನ್ನು ಮಾತ್ರವಲ್ಲದೇ ಅವರ ಮೂಲಕವಾಗಿ ಉದ್ಧವಾದಿಗಳ ಮನಸ್ಸನ್ನೂ ಸಹ ತನ್ನೆಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದ ಎಂದೂ ಭಾವ.

೪) ಅಸುರಾವೇಶವಿದ್ದವರಿಗೆ ಕೃಷ್ಣನ ಭಾವ ತಿಳಿಯದು; ವಾಸಿಷ್ಠಕೃಷ್ಣನಾದ ವೇದ–ವ್ಯಾಸರ, ಅವರ ಕೃತಿಗಳಾದ ಬ್ರಹ್ಮಸೂತ್ರ ಭಾರತಾದಿಕೃತಿಗಳ ಭಾವವೂ ತಿಳಿಯದಾಗುವುದು ಎಂಬುದೂ ಇದರಿಂದ ಸೂಚಿತ.

ಸುಭದ್ರಾ ಅರ್ಜುನರ ಸಮಾಗಮ

ಪ್ರದ್ಯುಮ್ನಸಾಂಬಪ್ರಮುಖಾಶ್ಚ ವಂಚಿತಾ
ಯಯುಸ್ತೀರ್ಥಾರ್ಥಂ ರಾಮಯುಕ್ತಾಃ ಸಮಗ್ರಾಃ ।
ಪಿಂಡೋದ್ಧಾರಂ ತತ್ರ ಮಹೋತ್ಸವೇಷು
ಸ್ಥಾವರ್ತಯತ್ಸು ಕ್ವಚಿದೂಚೇ ಸುಭದ್ರಾ ॥ ೧೭೮ ॥

ಅ: ಅದರಂತೆ ಪ್ರದ್ಯುಮ್ನ, ಸಾಂಬ ಮೊದಲಾದವರು ಸಹ ಕೃಷ್ಣನಿಂದ ವಂಚಿತರಾದರು. ಅವರೆಲ್ಲ ಬಲರಾಮನೊಂದಿಗೆ ಕೂಡಿಕೊಂಡು ಒಮ್ಮೆ ಪಿಂಡೋದ್ಧಾರ ಕ್ಷೇತ್ರಕ್ಕೆ ತೆರಳಿದ್ದರು.

ಅಲ್ಲಿ ಮಹೋತ್ಸವಗಳು ಒಂದಾದ ಮೇಲೆ ಒಂದರಂತೆ ನಡೆಯುತ್ತಿದ್ದವು. ಒಮ್ಮೆ ಸುಭದ್ರೆ ಅರ್ಜುನನನ್ನು ಕೇಳಿದಳು:

ವಿ: ೧) ಬಲರಾಮನೊಂದಿಗೆ ಸಕಲ ಯಾದವರೂ ಪಿಂಡೋದ್ಧಾರಕ್ಷೇತ್ರಕ್ಕೆ ತೆರಳಿದ್ದರು. ಅಲ್ಲಿ ಒಂದಾದ ಮೇಲೆ ಒಂದರಂತೆ ಉತ್ಸವಗಳು ನಡೆದದ್ದರಿಂದ ಬೇಗನೆ ಹಿಂದಿರುಗಿರಲಿಲ್ಲ. ಆ ಅವಕಾಶವನ್ನು ಉಪಯೋಗಿಸಿಕೊಂಡು ಸುಭದ್ರೆ ಅರ್ಜುನನನ್ನು ಕೇಳಿದಳು.

೨) ಇಷ್ಟು ಕಾಲವಾದರೂ ಅವಳಿಗೆ ಆ ಯತಿ ಅರ್ಜುನ ಎಂಬ ವಿಚಾರ ತಿಳಿದಿರಲಿಲ್ಲ ಎಂಬುದು ಗಮನಾರ್ಹ. ಅರ್ಜುನ ಅಷ್ಟು ಸಂಯಮದಿಂದ ವರ್ತಿಸಿ ಕೃಷ್ಣನ ಪ್ರೀತಿಗೆ ಪಾತ್ರನಾಗಿದ್ದ. ಇಂತಹ ಸಂಯಮವೇ ಅವನಿಗೆ ಮುಂದೆ ಗೀತೆ ಕೇಳುವಂತಹ ವಿಶೇಷ ಅರ್ಹತೆಯನ್ನು ತಂದುಕೊಟ್ಟಿತು ಎಂದು ತಿಳಿಯಬೇಕು.

ಯತೇ ತೀರ್ಥಾನ್ಯಾಚರನ್ ಬಾಂಧವಾಂಸ್ತ್ವ-
ಮದ್ರಾಕ್ಷೀರ್ನಃ ಕ್ವಚಿದಿಷ್ಟಾನ್ ಸ್ಮ ಪಾರ್ಥಾನ್ ।
ಕುಂತೀಂ ಕೃಷ್ಣಾಂ ವೇತ್ಯಾಹ ಪೃಷ್ಟಃ ಸ ಪಾರ್ಥ
ಓಮಿತ್ಯೇಷಾಮಾಹ ಚಾನಾಮಯಂ ಸಃ ॥ ೧೭೯ ॥

ಅ: ''ಯತಿಗಳೇ! ನೀವು ತೀರ್ಥಾಟನೆ ಮಾಡುವಾಗ ನಮಗೆ ಪ್ರಿಯ ಬಂಧುಗಳಾದ ಪಾಂಡವರನ್ನು, ಕುಂತಿಯನ್ನು, ದ್ರೌಪದಿಯನ್ನು ಎಲ್ಲಿಯಾದರೂ ಕಂಡಿದ್ದಿರಾ''. ಸುಭದ್ರೆ ಹಾಗೆ ಕೇಳಲು ಅರ್ಜುನ ನುಡಿದ ''ಹೌದು, ಕಂಡಿದ್ದೆ. ಅವರು ಕ್ಷೇಮದಿಂದಿರುವರು''.

ವಿ: ಕ್ಷತ್ರಿಯರು ಯೋಗಕ್ಷೇಮವನ್ನು ಅನಾಮಯ ಎಂದು ವಿಚಾರಿಸಬೇಕು ಎಂದು ಮನುಸ್ಮೃತಿಯಲ್ಲಿದೆ*. ಅರ್ಜುನ ಹಾಗೆ ತಿಳಿಸುವ ಮೂಲಕ ತಾನು ಕ್ಷತ್ರಿಯ ಎಂಬುದನ್ನು ಸೂಚಿಸಿದ ಎಂದೂ ತಿಳಿಯಬಹುದು.

---

೧೭೯. ...ಕ್ವಚಿದಿತ್ಯಸ್ಯಾಪ್ಯವ್ಯಯಾತ್ ಕಶ್ಚಿದಿತ್ಯರ್ಥಃ । ತೇನ ಸುಖೇನ ತಿಷ್ಠಂತಿ ಕಿಮಿತಿ ಪ್ರಶ್ನೋಽಪಿ ಜ್ಞಾತವ್ಯಃ । ... ಅಥವಾ 'ಅನಾಪೃಷ್ಟಮಪಿ ಬ್ರೂಯುಃ ಗುರವೋ ದೀನವತ್ಸಲಾ' ಇತಿ ವಾಕ್ಯಾತ್ ಸುಭದ್ರಾಗುರುತ್ವಾದನಾಪೃಷ್ಟಮುಕ್ತಮಿತಿ । – (ತಿ.)

೧೭೯. ಪೃಷ್ಟಃ ಸ ಪಾರ್ಥ ಓಮಿತ್ಯತ್ರ ಪೃಷ್ಟಃ ಸಃ= ಸನ್ನ್ಯಾಸೀ ಓಮಿತ್ಯಾಹ। ಅಹಂ ಸಪಾರ್ಥಃ ಪಾರ್ಥೈಃ ಸಹ ಬಹುಕಾಲಂ ಸ್ಥಿತಃ ಅಸ್ಮೀತಿ ಚಾಹ। ತೇಷಾಮನಾಮಯಂ ಚಾಹ। ಪಾರ್ಥೈಃ ಸಹ ಮಯಾ ಬಹುಕಾಲಂ ಸ್ಥಿತಮ್। ತೇನ ಸರ್ವಂ ಜಾನಾಮೀತಿ ಭಾರತಕಥಾಸೂಚನಾಯ ಸ ಪಾರ್ಥ ಇತ್ಯುಕ್ತಮ್। ಅತಸ್ತಚ್ಛಬ್ದದ್ವಯವೈಯರ್ಥ್ಯಶಂಕಾಯಾ ನಾವಕಾಶ ಇತಿ ಜ್ಞೇಯಮ್ ॥ – (ವಾ.)

* ಬ್ರಾಹ್ಮಣಂ ಕುಶಲಂ ಪೃಚ್ಛೇತ್ ಕ್ಷತ್ರಬಂಧುಮನಾಮಯಮ್ । – ಮನುಸ್ಮೃತಿ (೨/೧೨೭)

ಭೂಯಃ ಸಾಽವಾದೀದ್ಭಗವನ್ನಿಂದ್ರಸೂನು-
ರ್ಗತಸ್ತೀರ್ಥಾರ್ಥಂ ಬ್ರಾಹ್ಮಣೇಭ್ಯಃ ಶ್ರುತೋ ಮೇ ।
ಕ್ವಚಿದ್ದೃಷ್ಟೋ ಭವತೇತ್ಯೋಮಿತಿ ಸ್ಮ
ಪಾರ್ಥೋಽಪ್ಯೂಚೇ ಕ್ವೇತಿ ಸಾಽಪೃಚ್ಛದೇನಮ್ ॥ ೧೮೦ ॥

ಅ: ಅವಳು ಮತ್ತೆ ಕೇಳಿದಳು 'ಪೂಜ್ಯರೇ, ಅರ್ಜುನ ತೀರ್ಥಯಾತ್ರೆಗೆ ತೆರಳಿದನೆಂದು ಬ್ರಾಹ್ಮಣರ ಮೂಲಕ ನಾನು ಕೇಳಿರುವೆ. ಅವನನ್ನು ನೀವೆಲ್ಲಾದರೂ ಕಂಡಿದ್ದಿರಾ'. ಅರ್ಜುನನುಡಿದ 'ಹೌದು, ನೋಡಿದೆ'. ಅವಳು ಕೇಳಿದಳು 'ಎಲ್ಲಿ?'.

ವಿ: ೧) ಸುಭದ್ರೆ ಅರ್ಜುನನ ಬಗ್ಗೆ ಎಷ್ಟು ಕಾತರಳಾಗಿದ್ದಳು ಎಂಬುದು ಇದರಿಂದ ತಿಳಿಯುವುದು. ಅರ್ಜುನ ಸುಭದ್ರೆಯನ್ನು ವಿವಾಹವಾಗ ಬಯಸಿದ್ದಂತೆ ಸುಭದ್ರೆ ಅರ್ಜುನನನ್ನು ವಿವಾಹವಾಗ ಬಯಸಿದ್ದಳು. ಬಲರಾಮ ಸುಭದ್ರೆಯ ಮನೋಗತವನ್ನು ತಿಳಿಯದೇ ಅವಳನ್ನು ದುರ್ಯೋಧನನಿಗೆ ನೀಡಲು ಬಯಸಿದ್ದರೆ, ಕೃಷ್ಣ ಅವಳ ಇಚ್ಛೆಗೆ ಅನುಗುಣವಾಗಿ ಅರ್ಜುನನಿಗೆ ನೀಡಲು ಸಂಕಲ್ಪಿಸಿದ್ದ ಎಂಬುದು ವಿಶೇಷ.

೨) ಆ ಮೂಲಕ ಕನ್ಯೆಯ ಮನೋಗತ ವಿವಾಹಕ್ಕೆ ಅಪೇಕ್ಷಿತ ಎಂಬ ತತ್ವವನ್ನೂ ಜಗತ್ತಿಗೆ ಸಾರಿದ.

೩) ಶೇಷಾವತಾರನಾದ ಬಲರಾಮ ಮನೋನಿಯಾಮಕನಾಗಿಯೂ ಸುಭದ್ರೆಯ ಮನಸ್ಸನ್ನು ಅರಿತಿರಲಿಲ್ಲ ಎಂಬುದು ಮತ್ತೊಂದು ವಿಶೇಷ.

೪) ಮುಖ್ಯತಃ ಸರ್ವೇಂದ್ರಿಯಪ್ರೇರಕನಾದ ಕೃಷ್ಣನೇ ಸಾಕ್ಷಾತ್ ಶ್ರೀಹರಿ ಎಂಬುದಕ್ಕೂ ಇದು ದ್ಯೋತಕ. ನೇರವಾಗಿ ಅರ್ಜುನನ ಬಗ್ಗೆ ಕೇಳದೇ ಹೀಗೆ ಕ್ರಮವಾಗಿ ಕೇಳುವ ಸುಭದ್ರೆಯ ಕೌಶಲವೂ ಗಮನಾರ್ಹ.

ಅತ್ಯೈವೇತಿ ಸ್ಮಯಮಾನಂ ಚ ಪಾರ್ಥಂ
ಪುನಃ ಪುನಃ ಪರ್ಯಪೃಚ್ಛಚ್ಛುಭಾಂಗೀ ।
ಸೋಽಪ್ಯಾಹೋನ್ಮತ್ತೇ ಸೋಽಸ್ಮಿ ಹೀತಿ ಸ್ಮಯಂಸ್ತಾಂ
ಪುಲ್ಲಾಕ್ಷೀ ತಂ ಸಾ ದದರ್ಶಾತಿಹೃಷ್ಟಾ ॥ ೧೮೧ ॥

---

೧೮೧. ಶುಭಾಂಗೀ ಮಂಗಲಾಂಗೀ ... । – (ಜ.)

ಅ: 'ಇಲ್ಲಿಯೇ' ಎಂದು ಅರ್ಜುನ ನಸುನಕ್ಕ. ಆಗ ಶುಭಾಂಗಿಯಾದ ಸುಭದ್ರೆ 'ಎಲ್ಲಿ? ಎಲ್ಲಿ?' ಎಂದು ಮತ್ತೆ ಮತ್ತೆ ಕೇಳಿದಳು. ಆಗ ಅರ್ಜುನ 'ಹುಚ್ಚಿ.! ಅವನೇ ನಾನು' ಎಂದು ನಗುತ್ತಲೇ ನುಡಿದ. ಆಗ ಸುಭದ್ರೆ ಅತ್ಯಂತ ಹರ್ಷಿತಳಾಗಿ ಕಣ್ಣರಳಿಸಿಕೊಂಡು ಅವನನ್ನು ನೋಡಿದಳು.

ವಿ: ಆವರೆಗೂ ತಾನು ಸೇವಿಸಿದ್ದ ಯತಿಯೇ ಅರ್ಜುನ ಎಂದು ತಿಳಿದಾಗ ಸುಭದ್ರೆಗಾದ ಆನಂದಕ್ಕೆ ಪಾರವೇ ಇರಲಿಲ್ಲ ಎಂದರ್ಥ.

ತತೋ ಹರ್ಷಾಲ್ಲಜ್ಜಯಾ ಚೋತ್ಪಲಾಕ್ಷೀ
ಕಿಂಚಿನ್ನೋಚೇ ಪಾರ್ಥ ಏನಾಮುವಾಚ ।
ಕಾಮಾವಿಷ್ಟೋ ಮುಖ್ಯಕಾಲೋ ಹ್ಯಯಂ ನಾ-
ವುದ್ವಾಹಾರ್ಥಂ ತ್ವಿತಿ ಸಾ ಚೈನಮಾಹ ॥ ೧೮೨ ॥

ಅ: ಬಳಿಕ ಕನ್ನೆದಿಲೆಯಂತಹ ಕಣ್ಣುಗಳ ಸುಭದ್ರೆ ಹರ್ಷದಿಂದಲೂ, ನಾಚಿಕೆಯಿಂದಲೂ ಏನನ್ನೂ ನುಡಿಯಲಿಲ್ಲ. ಕಾಮಾವಿಷ್ಟನಾದ ಅರ್ಜುನ ಅವಳಿಗೆ ಹೇಳಿದ 'ನಮ್ಮಿಬ್ಬರಿಗೆ ಇದು ವಿವಾಹಕ್ಕೆ ಸಕಾಲ'. ಅವಳು ಅವನಿಗೆ ತಿಳಿಸಿದಳು.

ನಾತಿಕ್ರಮೋ ವಾಸುದೇವಸ್ಯ ಯುಕ್ತ-
ಸ್ತಸ್ಮಾತ್ ತೇನ ಸ್ವಪಿತೃಭ್ಯಾಂ ಚ ದತ್ತಾಮ್ ।
ಯುಕ್ತೋ ನಿಜೈರ್ಬಂಧುಭಿಶ್ಚೋತ್ಸವೇ ಮಾಂ
ಸಮುದ್ವಹೇತ್ಯಥ ಕೃಷ್ಣಂ ಸ ದಧ್ಯೌ ॥ ೧೮೩ ॥

ಅ: 'ಕೃಷ್ಣನನ್ನು ಮೀರಿ ನಡೆಯುವುದು ಯುಕ್ತವಲ್ಲ. ಆದ್ದರಿಂದ ಅವನು ನನ್ನ ತಂದೆತಾಯಿಗಳ ಮೂಲಕ ಧಾರೆಯೆರೆದಾಗ ನಿನ್ನ ಬಂಧುಗಳೊಂದಿಗೆ ಕೂಡಿ ಉತ್ಸವದಲ್ಲಿ ನನ್ನನ್ನು ವಿವಾಹವಾಗು'. ಆಗ ಅವನು ಕೃಷ್ಣನನ್ನು ಧ್ಯಾನಿಸಿದ.

ವಿ: ೧) ಅರ್ಜುನ ಕಾಮಾತುರನಾಗಿ ಆಗಲೇ ಗಾಂಧರ್ವ ರೀತಿಯಲ್ಲಿ ಸುಭದ್ರೆಯನ್ನು ವಿವಾಹವಾಗಲು ಬಯಸಿದರೂ ಸುಭದ್ರೆ ಅದಕ್ಕೆ ಒಪ್ಪಲಿಲ್ಲ. ಇದು ಅವಳ ಉನ್ನತ ಸಂಸ್ಕಾರವನ್ನು ತಿಳಿಸುವುದು. ಕೃಷ್ಣನ ಅಪ್ಪಣೆಯಂತೆ ನಡೆಯುವುದು ತನ್ನ ಕರ್ತವ್ಯ ಎಂಬ ಅವಳ ದೀಕ್ಷೆ ಅತ್ಯಂತ ಆದರ್ಶಮಯವಾದುದು.

೨) ಕೃಷ್ಣನ ತಂಗಿಯಾಗಿ ಆ ಸಂದರ್ಭದಲ್ಲಿ ಅರ್ಜುನನಿಗಿಂತ ಮಿಗಿಲಾಗಿ ಸಂಯಮವನ್ನು ತೋರುವುದು ಅತ್ಯಂತ ಅಪೂರ್ವ. ಕುಲೀನ ಸ್ತ್ರೀಯರಲ್ಲಿ ಕಂಡು ಬರುವ ಸದ್ಗುಣಕ್ಕೆ ಇದು ಶ್ರೇಷ್ಠ ನಿದರ್ಶನ.

೩) ವಿಧ್ಯುಕ್ತವಾಗಿ ವಿವಾಹವಾಗುವುದೇ ತನಗೆ ಪ್ರಿಯ ಎಂಬುದು ಅವಳ ಭಾವ. ಗಾಂಧರ್ವ ವಿವಾಹ ಕ್ಷತ್ರಿಯರಿಗೆ ಶ್ರೇಷ್ಠವಾದರೂ, ಹಿರಿಯರು ಶಾಸ್ತ್ರೋಕ್ತ ವಿವಾಹಕ್ಕೆ ಅಣಿಮಾಡುವಾಗ ಅದನ್ನು ಉಲ್ಲಂಘಿಸಿ ಗಾಂಧರ್ವ ವಿವಾಹ ಮಾಡಿಕೊಳ್ಳುವುದು ಉಚಿತವಲ್ಲ ಎಂಬ ತತ್ವವೂ ಇಲ್ಲಿ ಸೂಚಿತವಾಗಿದೆ ಎಂದು ತಿಳಿಯಬಹುದು.

ಸುಭದ್ರಾ ಕಲ್ಯಾಣ

ಮಾತಾಪಿತೃಭ್ಯಾಂ ಸಹಿತೋಽಥ ಕೃಷ್ಣ-
ಸ್ತತ್ಕೈವಾಯಾದ್ವಾಸವಶ್ಚಾಥ ಶಚ್ಯಾ ।
ಸಮಂ ಮುನೀಂದ್ರೈಃ ಫಲ್ಗುನೇನ ಸ್ಮೃತಃ ಸಂ-
ಸತ್ಕೈವಾಗಾತ್ ಪ್ರೀತಿಯುಕ್ತೋ ನಿಶಾಯಾಮ್ ॥ ೧೮೪ ॥

ಅ: ಆಗಲೇ ವಸುದೇವ ದೇವಕಿಯರೊಂದಿಗೆ ಶ್ರೀಕೃಷ್ಣ ಅಲ್ಲಿಗೆ ಆಗಮಿಸಿದ. ದೇವೇಂದ್ರ ಅರ್ಜುನ ಸ್ಮರಿಸಿದ್ದರಿಂದ ಪ್ರೀತಿಯಿಂದ ಶಚಿಯೊಂದಿಗೂ, ಮುನಿಶ್ರೇಷ್ಠರುಗಳೊಂದಿಗೂ ರಾತ್ರಿಯಲ್ಲೇ ಅಲ್ಲಿಗೆ ಬಂದ.

ವಿ: ೧) ಅರ್ಜುನ ಸ್ಮರಿಸುತ್ತಲೇ ಕೃಷ್ಣ ವಿವಾಹಕ್ಕೆ ಅಗತ್ಯವಿದ್ದ ಎಲ್ಲರೊಂದಿಗೆ ಅಲ್ಲಿಗೆ ಆಗಮಿಸಿದ ಎಂದು ಅರ್ಥ. ಧಾರೆಯೆರೆಯಲೆಂದು ವಸುದೇವ–ದೇವಕಿಯರು, ಧಾರೆಯೆರೆಸಿಕೊಳ್ಳಲು ಇಂದ್ರ–ಶಚಿಯರು, ಋಷಿಮುನಿಗಳೆಲ್ಲ ಆ ಸಂಭ್ರಮದಲ್ಲಿ ಪಾಲ್ಗೊಂಡು ಉದ್ಧಾರವಾಗಲು.

೨) ಉಭಯಪಕ್ಷಗಳ ತಂದೆತಾಯಿಗಳು ಋಷಿಮುನಿಗಳಂತಹ ಸಜ್ಜನರೊಂದಿಗೆ ಮಾಡುವ ವಿವಾಹ ಶ್ರೀಹರಿಗೆ ಅತ್ಯಂತ ಸಮ್ಮತ ಎಂಬುದು ತಾತ್ಪರ್ಯ.

ಕೃಷ್ಣಸ್ತತಃ ಪುರುಹೂತೇನ ಸಾಕಂ
ತಯೋರ್ವಿವಾಹಂ ಕಾರಯಾಮಾಸ ಸಮ್ಯಕ್ ।
ಮಾತಾಪಿತೃಭ್ಯಾಂ ಸಾತ್ಯಕಿನಾಽಪಿ ಯುಕ್ತೋ
ಮಹೋತ್ಸವೇಽನ್ಯಾವಿದಿತೇ ಮುನೀಂದ್ರೈಃ ॥ ೧೮೫ ॥

ಅ: ಶ್ರೀಕೃಷ್ಣನು ಇಂದ್ರನೊಂದಿಗೆ, ತಂದೆ ತಾಯಿಗಳೊಂದಿಗೂ, ಸಾತ್ಯಕಿಯೊಂದಿಗೂ, ಮುನಿಶ್ರೇಷ್ಠರೊಂದಿಗೂ ಕೂಡಿ ಅವರಿಬ್ಬರ ವಿವಾಹವನ್ನು ಶಾಸ್ತ್ರೋಕ್ತವಾಗಿ ನಡೆಸಿದ. ಆ ಮಹೋತ್ಸವದ ಬಗ್ಗೆ ಬೇರಾರಿಗೂ ತಿಳಿಯಲಿಲ್ಲ.

ತತಃ ಕೃಷ್ಣಃ ಸ್ಯಂದನಂ ಫಲ್ಗುನಾರ್ಥೇ
ನಿಧಾಯ ಸ್ವಂ ಪ್ರಯಯೌ ತದ್ವಜನ್ಯಾಮ್ ।
ಗತೇ ಚ ಶಕ್ರೇ ರಥಮಾರುರೋಹ
ಪ್ರಾತಃ ಪಾರ್ಥಃ ಸಹಿತೋ ಭಾರ್ಯಯೈವ ॥ ೧೮೬ ॥

ಅ: ಬಳಿಕ ಶ್ರೀಕೃಷ್ಣ ಅರ್ಜುನನಿಗಾಗಿ ತನ್ನ ರಥವನ್ನು ಅಲ್ಲಿರಿಸಿ ಆ ರಾತ್ರಿಯಲ್ಲಿ ತೆರಳಿದ. ಇಂದ್ರನೂ ತನ್ನ ಲೋಕಕ್ಕೆ ಮರಳಿದ. ಬೆಳಿಗ್ಗೆ ಅರ್ಜುನ ಸುಭದ್ರೆಯೊಂದಿಗೆ ರಥವನ್ನೇರಿ ಹೊರಟ.

ವಿ: ೧) ಉಳಿದ ಯಾದವರೊಂದಿಗೆ ಪಿಂಡೋದ್ಧಾರ ಕ್ಷೇತ್ರಕ್ಕೆ ತೆರಳಿದ ಕೃಷ್ಣ ಅರ್ಜುನ ನೆನೆದಾಗ ಅಲ್ಲಿಗೆ ಆಗಮಿಸಿ, ವಿವಾಹವನ್ನು ಪೂರೈಸಿ ಅಲ್ಲಿಗೇ ಮರಳಿದ ಎಂದರ್ಥ.

೨) ಕೃಷ್ಣ ಅರ್ಜುನನಿಗೆ ಆ ರಥವನ್ನು ನೀಡಿದ್ದು ಸಾಧಕರಿಗೆ ಅವನು ಯೋಗ್ಯ ದೇಹವನ್ನು ನೀಡಿ ಅನುಗ್ರಹಿಸುವುದಕ್ಕೆ ಸಂಕೇತ. ದೇಹವನ್ನೇ ರಥ ಎಂದು ಕಠೋಪನಿಷತ್ತು ಬಣ್ಣಿಸಿದೆಯಲ್ಲವೆ?

ಸುಭದ್ರೆಯೊಂದಿಗೆ ಅರ್ಜುನನ ನಿರ್ಗಮನ

ಸರ್ವಾಯುಧೈರ್ಯುಕ್ತರಥಂ ಸಮಾಸ್ಥಿತೇ
ಗೃಹೀತಚಾಪೇ ಫಲ್ಗುನೇ ದ್ವಾರವತ್ಯಾಮ್ ।
ಆಸೀದ್ರಾವಃ ಕಿಂ ಕಿಮೇತತ್ ತ್ರಿದಂಡೀ
ಕನ್ಯಾಂ ಹರತ್ಯೇಷ ಕೋದಂಡಪಾಣಿಃ ॥ ೧೮೭ ॥

ಅ: ಸಕಲ ಆಯುಧಗಳಿಂದ ಕೂಡಿದ್ದ ರಥದಲ್ಲಿ ಕುಳಿತು ಬಿಲ್ಲನ್ನು ಹಿಡಿದು ಅರ್ಜುನ ಹೊರಟು ನಿಂತಾಗ ದ್ವಾರಕೆಯಲ್ಲಿ ಕೋಲಾಹಲ ಉಂಟಾಯಿತು. ''ಇದೇನು? ಇದೇನು? ಈ ತ್ರಿದಂಡಿಯತಿ ಕೋದಂಡಪಾಣಿಯಾಗಿ ಕನ್ಯೆಯನ್ನು ಅಪಹರಿಸುತ್ತಿರುವನಲ್ಲ!!''.

---

೧೮೮. ದ್ವಾರವತ್ಯಾಂ ರಾವಃ ಕೋಲಾಹಲಃ ಆಸೀತ್ । ಏತತ್ ಕಿಂ ಕಿಮಿದಂ ಭವತಿ ಕಿಂ ಭವತೀತಿ ಕೇಚಿದಾಹುಃ । ಕೇಚಿದೇಷಃ ತ್ರಿದಂಡೀ ಯತಿಃ ಕೋದಂಡಪಾಣಿಃ ಸನ್ ದಂಡಂ ತ್ಯಕ್ತ್ವಾ ಧನುಃಪಾಣಿಃ ಸನ್ ಕನ್ಯಾಂ ಹರತಿ ಇತಿ ಆಹುರಿತ್ಯರ್ಥಃ ॥ –(ಜ.)

ವಿ: ದ್ವಾರಕೆಯ ಜನಕ್ಕೆ ಅಚ್ಚರಿ. ಅಷ್ಟುದಿನ ಚಾತುರ್ಮಾಸ್ಯಕ್ಕೆ ಕುಳಿತಿದ್ದ ಯತಿ ದಂಡ ತೊರೆದು ಕೋದಂಡ ಹಿಡಿದು ಕನ್ಯೆಯೊಂದಿಗೆ ಪರಾರಿಯಾಗುತ್ತಿರುವನಲ್ಲ..!!

ತತಸ್ತು ತಂ ಸತನುತ್ರಂ ಮಹೇಂದ್ರ-
ದತ್ತೇ ದಿವ್ಯೇ ಕುಂಡಲೇ ವಾಸಸೀ ಚ ।
ದಿವ್ಯಾನಿ ರತ್ನಾನಿ ವಿಭೂಷಣಾನಿ
ದೃಷ್ಟ್ವಾ ಬಿಭ್ರಾಣಂ ರಕ್ಷಿಣೋಽವಾರಯನ್ ಸ್ಮ ॥ ೧೮೮ ॥

ಅ: ದೇವೇಂದ್ರ ನೀಡಿದ್ದ ದಿವ್ಯವಾದ ಕುಂಡಲಗಳನ್ನು, ವಸ್ತ್ರಗಳನ್ನು, ದಿವ್ಯವಾದ ರತ್ನಗಳನ್ನು, ಆಭರಣಗಳನ್ನು ಧರಿಸಿ, ಕವಚವನ್ನು ತೊಟ್ಟಿದ್ದ ಅವನನ್ನು ಕಂಡು ನಗರ ರಕ್ಷಣೆಗೆ ತೊಡಗಿದ್ದ ಸೈನಿಕರು ತಡೆದರು.

ವಿ: ಇದರಿಂದ ದೇವೇಂದ್ರ ಅರ್ಜುನನಿಗೆ ವಿವಾಹಕಾಲದಲ್ಲಿ ದಿವ್ಯಕುಂಡಲಗಳನ್ನು, ದಿವ್ಯ-ರತ್ನಾಭರಣಗಳನ್ನು, ದಿವ್ಯವಸ್ತ್ರಗಳನ್ನು ನೀಡಿದ್ದ ವಿವರ ತಿಳಿಯುವುದು.

ಅರ್ಜುನನ ಅದ್ಭುತ ಅಸ್ತ್ರಕೌಶಲ

ತತಃ ಸ ಆಬದ್ಧತಲಾಂಗುಲಿತ್ರಃ
ಸತೂಣೀರಶ್ಚಾಪಮಾಯಮ್ಯ ಬಾಣೈಃ ।
ಚಕ್ರೇಽಂತರಿಕ್ಷಂ ಪ್ರದಿಶೋ ದಿಶಶ್ಚ
ನಿರಂತರಂ ಶಿಕ್ಷಯಾ ವಿದ್ಯಯಾ ಚ ॥ ೧೮೯ ॥

ಅ: ಬಳಿಕ ಅರ್ಜುನನು ಅಂಗೈಗಳಿಗೂ ಕವಚವನ್ನು ತೊಟ್ಟವನಾಗಿ ಬತ್ತಳಿಕೆಗಳನ್ನು ಧರಿಸಿ ಬಿಲ್ಲನ್ನು ಎಳೆದು ಅಭ್ಯಾಸಕೌಶಲದಿಂದಲೂ, ವಿದ್ಯೆಯ ಬಲದಿಂದಲೂ ಬಾಣಗಳಿಂದ ಅಂತರಿಕ್ಷವನ್ನು, ದಿಕ್ಕು ವಿದಿಕ್ಕುಗಳನ್ನು ಎಲ್ಲೆಡೆ ತುಂಬಿಸಿದನು.

ವಿ: ಅರ್ಜುನ ಆಗ ತನ್ನ ಅಭ್ಯಾಸ ಹಾಗೂ ವಿದ್ಯೆಗಳಿಗೆ ತಕ್ಕಂತೆ ಅಪೂರ್ವವಾಗಿ ಬಾಣಗಳನ್ನು ಪ್ರಯೋಗಿಸಿ ಎಲ್ಲೆಡೆಯೂ ತುಂಬುವಂತೆ ಅವುಗಳನ್ನು ಪ್ರಯೋಗಿಸಿದ ಎಂದರ್ಥ.

ಸುಭದ್ರೆಯ ಸಾರಥ್ಯ

ಚಕ್ರೇ ಸಾರಥ್ಯಂ ಕೇಶವೇನೈತದರ್ಥೇ
ಸುಶಿಕ್ಷಿತಾ ತಸ್ಯ ಸಮ್ಯಕ್ ಸುಭದ್ರಾ ।
ತಯಾ ಪಾರ್ಥೋ ವಾರಿತೋ ನೈವ ಕಂಚಿ-
ದ್ಭಿನ್ನತ್ವಚಂ ಕೃತವಾನ್ ಕ್ರೀಡಮಾನಃ ॥ ೧೯೦ ॥

ಅ: ಶ್ರೀಕೃಷ್ಣನಿಂದ ಈ ಪ್ರಸಂಗಕ್ಕೆಂದೇ ಸಾರಥ್ಯದಲ್ಲಿ ಒಳ್ಳೆಯ ಶಿಕ್ಷಣ ಪಡೆದಿದ್ದ ಸುಭದ್ರೆಯು ಆಗ ಸಾರಥ್ಯವನ್ನು ವಹಿಸಿದಳು. ಅವಳಿಂದ ತಡೆಯಲ್ಪಟ್ಟವನಾಗಿ ಅರ್ಜುನ ಯಾರಿಗೂ ಮೈಯಲ್ಲಿ ಗಾಯ ಮಾಡಲಿಲ್ಲ; ಕ್ರೀಡಿಸುತ್ತಾ ಯುದ್ಧ ಮಾಡಿದ.

ವಿ: ೧) ಅರ್ಜುನ ಯಾದವ ಸೈನಿಕರಲ್ಲಿ ಒಬ್ಬರಿಗೂ ಗಾಯವಾಗದಂತೆ ಅಷ್ಟು ಅಪಾರ ಸಂಖ್ಯೆಗಳಲ್ಲಿ ಬಾಣಗಳನ್ನು ಪ್ರಯೋಗಿಸಿದ್ದು ಅವನ ಮತ್ತೊಂದು ಬಗೆಯ ಕೌಶಲಕ್ಕೆ ನಿದರ್ಶನ.

೨) ಏಕಲವ್ಯ ಒಂದು ನಾಯಿಯ ಬಾಯೊಳಗೆ ಗಾಯವಾಗದಂತೆ ಅಸ್ತ್ರ ಪ್ರಯೋಗಿಸಿದ್ದ ವಿವರ ಹಿಂದೆ ಬಂದಿದೆ(೧೫/೬೧). ಆದರೆ, ಅರ್ಜುನ ಅಷ್ಟು ಅಸಂಖ್ಯ ಜನಗಳಲ್ಲಿ ಒಬ್ಬರಿಗೂ ಗಾಯವಾಗದಂತೆ ಅಸ್ತ್ರ ಪ್ರಯೋಗಿಸಿದ್ದು ಅವನು ಏಕಲವ್ಯನಿಗಿಂತ ತುಂಬಾ ಮಿಗಿಲಾಗಿದ್ದ ಅಸ್ತ್ರಕೋವಿದ ಎಂಬುದಕ್ಕೆ ಗಮಕ. ಇದರಿಂದ ಅರ್ಜುನನಿಗೆ ತಿಳಿಯದಿದ್ದ ವಿದ್ಯೆ ಏಕಲವ್ಯನಿಗೆ ತಿಳಿದಿತ್ತು ಎಂಬುದು ಸರಿಯಲ್ಲ ಎಂದೂ ದೃಢಪಡುವುದು. ಅಂತಹ ಘೋರ ಯುದ್ಧ ಅವನ ಪಾಲಿಗೆ ಒಂದು ವಿಹಾರದಂತಿತ್ತು.

೩) ನಾರಾಯಣನಾದ ಶ್ರೀಕೃಷ್ಣ ರುಗ್ಮಿಣಿಯನ್ನು ಕರೆದೊಯ್ದಿದ್ದಂತೆ, ನರಾವಿಷ್ಟನಾದ ಅರ್ಜುನ ಅವನ ಅನುಗ್ರಹದಿಂದ ಸುಭದ್ರೆಯನ್ನು ಕರೆದೊಯ್ದದ್ದು ವಿಶೇಷ.

ಸುಶಿಕ್ಷಯಾಽತ್ಯದ್ಭುತಯಾ ಶರೌಘೈ-
ರ್ವಿದ್ರಾವ್ಯ ತಾನ್ ಭೀಷಯಿತ್ವೈವ ಸರ್ವಾನ್ ।
ನಿರ್ಗತ್ಯ ಪುರ್ಯಾ ವಿಪೃಥುಂ ದದರ್ಶ
ರಾಮೇಣ ಪುರ್ಯಾ ರಕ್ಷಣೇ ಸನ್ನಿಯುಕ್ತಮ್ ॥ ೧೯೧ ॥

ಅ: ತನ್ನ ಅತ್ಯದ್ಭುತವಾದ ಉತ್ತಮ ಅಸ್ತ್ರಕೌಶಲದಿಂದ ಅರ್ಜುನ ಬಾಣಗಳ ಪ್ರವಾಹ-ಗಳಿಂದ ಅವರೆಲ್ಲರನ್ನೂ ಅಂಜಿಸಿ ಓಡಿಸಿದ. ಪಟ್ಟಣದಿಂದ ಹೊರಬಂದು ಬಲರಾಮನಿಂದ ನಗರರಕ್ಷಣೆಯ ಕಾರ್ಯದಲ್ಲಿ ನಿಯುಕ್ತನಾಗಿದ್ದ ವಿಪೃಥುವನ್ನು ಕಂಡ.

ವಿಪೃಥುವಿನ ಕೃಷ್ಣಭಕ್ತಿ

ಪ್ರಿಯಂ ಕುರ್ವನ್ನಿವ ರಾಮಸ್ಯ ಸೋಽಪಿ
ವ್ಯಾಜೇನ ಪಾರ್ಥಂ ಸೇನಯೈವಾವೃಣೋತ್ ತಮ್ ।
ಕೃಷ್ಣಾದೇಶಾನ್ನೈವ ಪಾರ್ಥಸ್ಯ ಚಕ್ರೇ
ಸಮ್ಯಗ್ರೋಧಂ ಯುಯುಧೇ ಚ ಫಲೇನ ॥ ೧೯೨ ॥

ಅ: ಆ ವಿಪೃಥುವೂ ಸಹ ಬಲರಾಮನಿಗೆ ಪ್ರಿಯವೆಸಗುವನಂತೆ ನಟಿಸುತ್ತಾ ನೆಪಮಾತ್ರಕ್ಕೆ ಅರ್ಜುನನ್ನು ಸೈನ್ಯದಿಂದ ಸುತ್ತುಗಟ್ಟಿದ. ಕೃಷ್ಣನ ಆದೇಶದಿಂದಾಗಿ ಅರ್ಜುನನಿಗೆ ಬಲವಾದ ವಿರೋಧವನ್ನು ಮಾಡಲೇ ಇಲ್ಲ. ನೆಪಮಾತ್ರಕ್ಕಷ್ಟೇ ಯುದ್ಧ ಮಾಡಿದ.

ವಿ: ೧) ವಿಪೃಥುವಿನದು ಉಭಯಸಂಕಟ. ಅವನು ಒಂದೆಡೆ ಬಲರಾಮನಿಂದ ನಿಯೋಜಿತ–ನಾದವನು, ಮತ್ತೊಂದೆಡೆ ಕೃಷ್ಣನಿಂದ ಆದೇಶಿಸಲ್ಪಟ್ಟವನು.

೨) ಕೃಷ್ಣನಲ್ಲಿ ಭಕ್ತಿ ಬಲರಾಮನ ಬಗ್ಗೆ ಭಯ. ಆದಕ್ಕಾಗಿಯೇ ಅವನು ಬಲರಾಮನಿಗೆ ಪ್ರಿಯವಾಗಲೆಂದು ಯುದ್ಧ ಮಾಡಿದಂತೆ ನಟಿಸಿದರೂ, ಕೃಷ್ಣನಿಗೆ ಪ್ರಿಯವಾಗಲೆಂದು ಅವನಿಗೆ ಯಾವ ಅಡ್ಡಿಯೂ ಆಗದಂತೆ ಅತ್ಯಂತ ಮೃದುವಾಗಿ ಹೋರಾಡಿದ ಎಂದರ್ಥ.

ಏಕೋ ಹ್ಯಸೌ ಮರುತಾಂ ಸೌಮ್ಯನಾಮಾ
ಶುಶ್ರೂಷಾರ್ಥಂ ವಾಸುದೇವಸ್ಯ ಜಾತಃ ।
ತಂ ಯಾದವಂ ಶರವರ್ಷೈರ್ವವರ್ಷ
ಯಥಾ ಕ್ಷತಂ ನ ಭವೇತ್ ಸವ್ಯಸಾಚೀ ॥ ೧೯೩ ॥

ಅ: ವಿಪೃಥು ಮರುತ್ತುಗಳಲ್ಲಿ ಸೌಮ್ಯ ಎಂಬ ಹೆಸರಿನ ಒಬ್ಬನು. ಕೃಷ್ಣನ ಸೇವೆಗಾಗಿ ಅವತರಿಸಿ ಬಂದಿದ್ದವನು. ಆ ಯಾದವನಿಗೆ ಅರ್ಜುನ ಸ್ವಲ್ಪವೂ ಗಾಯವಾಗದಂತೆ ಬಾಣಗಳ ಮಳೆಯನ್ನು ಸುರಿಸಿದ.

ನಿರಾಯುಧಂ ವಿರಥಂ ಚೈವ ಚಕ್ರೇ
ಪಾರ್ಥಃ ಸೇನಾಂ ತಸ್ಯ ನೈವಾಹನಚ್ಚ।
ದೃಷ್ಟ್ವಾ ಶರಾಂಸ್ತಸ್ಯ ತೀಕ್ಷ್ಣಾಂಸ್ತ್ವಚೋಽಪಿ
ನ ಚ್ಛೇದಕಾನ್ ವಿಪೃಥುಸ್ತಂ ತುತೋಷ ॥ ೧೯೪ ॥

ಅ: ಅರ್ಜುನ ಅವನನ್ನು ನಿರಾಯುಧನನ್ನಾಗಿಯೂ, ರಥರಹಿತನನ್ನಾಗಿಯೂ ಮಾಡಿದ. ಅವನ ಸೇನೆಯನ್ನು ನಾಶಮಾಡಲಿಲ್ಲ. ಅತ್ಯಂತ ಹರಿತವಾದ ಅವನ ಬಾಣಗಳು ಚರ್ಮವನ್ನೂ ಸಹ ಗಾಯಗೊಳಿಸದೇ ಇದ್ದುದನ್ನು ನೋಡಿ ವಿಪೃಥು ಬಹಳವಾಗಿ ಸಂತೋಷಿಸಿದ.

ವಿ: ೧) ಕೃಷ್ಣನ ಆಜ್ಞೆಯೆಂದು ವಿಪೃಥುವಿನದು ಮೃದು ಧೋರಣೆಯಾದರೆ, ಅವರೆಲ್ಲ ಕೃಷ್ಣ ಭಕ್ತರೆಂದು ಅವರ ಬಗ್ಗೆ ಅರ್ಜುನನದೂ ಮೃದು ಧೋರಣೆಯಾಗಿತ್ತು. ಅದನ್ನು ವಿಪೃಥು ಗುರುತಿಸಿದ.

೨) ಅರ್ಜುನನು ಅಷ್ಟು ಹರಿತವಾದ ಬಾಣಗಳನ್ನು ತಮ್ಮೆಲ್ಲರ ಮೇಲೆ ಪ್ರಯೋಗಿಸುತ್ತಿದ್ದರೂ ಒಬ್ಬರಿಗೂ ಯಾವುದೇ ರೀತಿಯಲ್ಲಿ ಗಾಯವಾಗದೇ ಇದ್ದುದನ್ನು ಕಂಡು ವಿಪೃಥು ಅವನ ಅಸ್ತ್ರಕೌಶಲವನ್ನು ಬಹಳವಾಗಿ ಮೆಚ್ಚಿಕೊಂಡ.

ಶಿಕ್ಷಾಂ ಪಾರ್ಥಸ್ಯಾಧಿಕಾಂ ಮಾನಯಾನ
ಉಪೇತ್ಯ ಪಾರ್ಥಂ ಚ ಶಶಂಸ ಸರ್ವಮ್ ।
ಆಜ್ಞಾಂ ವಿಷ್ಣೋಃ ಸನ್ನಿಯುಧ್ಯನ್ನಿವಾಸ್ಮೈ
ಕೃತ್ತಾಯುಧಃ ಫಲ್ಗುನೇನೈವ ಪೂರ್ವಮ್ ॥ ೧೯೫ ॥

ಅ: ಅರ್ಜುನನ ಅಗಾಧವಾದ ಅಸ್ತ್ರಕೌಶಲವನ್ನು ಗೌರವಿಸುತ್ತಾ ವಿಪೃಥು ಯುದ್ಧ ಮಾಡುವವನಂತೆ ನಟಿಸುತ್ತಾ ಅವನ ಬಳಿಗೆ ತೆರಳಿ ಕೃಷ್ಣನ ಆದೇಶವನ್ನೆಲ್ಲ ತಿಳಿಸಿದ. ಅವನ ಆಯುಧವನ್ನು ಆಗಲೇ ಅರ್ಜುನ ತುಂಡರಿಸಿದ್ದ.

ವಿ: ಅರ್ಜುನನಿಂದ ಆಯುಧಗಳೆಲ್ಲ ನಾಶವಾಗಲು ಅವನು ಮುಷ್ಟಿಯುದ್ಧ ಮಾಡುವವನಂತೆ ಅರ್ಜುನನ ಬಳಿಗೆ ಹೋಗಿ ಅವನಿಗೆ ಕೃಷ್ಣನ ಆದೇಶವನ್ನೆಲ್ಲಾ ತಿಳಿಸಿ ಮುಂದೆ ಹೋಗಲು ತನ್ನ ಅಡ್ಡಿಯೇನಿಲ್ಲ ಎಂಬುದನ್ನು ಅರಿಕೆ ಮಾಡಿದ ಎಂದರ್ಥ.

---

೧೯೪. ನಿರಾಯುಧಂ ವಿರಥಂ ಚೈವ ಚಕ್ರ ಇತ್ಯತ್ರ ತಂ ವಿಪೃಥುಮಿತಿ ಯೋಗ್ಯಪದಾಧ್ಯಾಹಾರಃ ॥ – (ವಾ.)

೧೯೪. 'ನಿರಾಯುಧಾಂ ವಿರಥಾಮ್' – (ಪಾಠಾಂತರ)

೧೯೪. ಸಂತುತೋಷ ಇತಿ ವಾ ಪಾಠಃ । – (ಜ.)

೧೯೫. ಸನ್ನಿಯುಧ್ಯನ್ನಿವಾಸ್ಮಾ ಇತ್ಯತ್ರ ಸಮ್ಯಗ್ದ್ವಂದ್ವಯುದ್ಧಂ ಕುರ್ವನ್ನಿವ। ವಿಷ್ಣೋರಾಜ್ಞಾಂ= ಮದೀಯರಥೇನೈವಾರ್ಜುನೋ ಗಚ್ಛತು। ತಂ ರಥಂ ತಸ್ಮಾ ಏವ ದಿಶ। ಯುದ್ಧಂ ನ ಕುರ್ವಿತ್ಯಾಜ್ಞಾಮ್ ॥ – (ವಾ.)

ಅರ್ಜುನನ ಬಗ್ಗೆ ಕೆರಳಿದ ಯಾದವರು

ತತಃ ಪರಾಜಿತವಚ್ಛೀಘ್ರಮೇತ್ಯ
ಶಶಂಸ ಸರ್ವಂ ಹಲಿನೇऽಥ ಸೋऽಪಿ ।
ಪ್ರದ್ಯುಮ್ನಸಾಂಬಾದಿಯುತೋऽಥ ಕೋಪಾ-
ದಾಯಾತ್ ಪುರೀಂ ಹಂತುಕಾಮೋऽರ್ಜುನಂ ಚ ॥ ೧೯೬ ॥

ಅ: ಬಳಿಕ ವಿಪೃಥು ಸೋತವನಂತೆ ಬೇಗನೆ ತೆರಳಿ ಅಲ್ಲಿ ಬಲರಾಮನಿಗೆ ಎಲ್ಲವನ್ನೂ ತಿಳಿಸಿದ. ಬಲರಾಮ ಕೋಪದಿಂದ ಅರ್ಜುನನ್ನು ಕೊಲ್ಲಬಯಸಿದವನಾಗಿ ಪ್ರದ್ಯುಮ್ನ, ಸಾಂಬ ಮೊದಲಾದವರೊಂದಿಗೆ ಕೂಡಿ ದ್ವಾರಕೆಗೆ ಆಗಮಿಸಿದ.

ಕೃಷ್ಣೋऽಪಿ ಸರ್ವಂ ವಿಪೃಥೋರ್ನಿಶಮ್ಯ
ಪ್ರಾಪ್ತಃ ಸುಧರ್ಮಾಂ ವಿಮನಾ ಇವಾಸೀತ್ ।
ಅವಾಙ್ಮುಖಸ್ತತ್ರ ಯದುಪ್ರವೀರಾಃ
ಪ್ರದ್ಯುಮ್ನಾದ್ಯಾ ಆಹುರುಚ್ಚೈರ್ನದಂತಃ ॥ ೧೯೭ ॥

ಅ: ಶ್ರೀಕೃಷ್ಣಸಹ ವಿಪೃಥುವಿನಿಂದ ಎಲ್ಲವನ್ನೂ ಕೇಳಿ ಸುಧರ್ಮಸಭೆಗೆ ಆಗಮಿಸಿದ. ಮನಸ್ಸು ಕೆಟ್ಟವನಂತೆ ಬೇಸರಿಸಿದವನಂತೆ ಮುಖ ತಗ್ಗಿಸಿ ಕುಳಿತ. ಪ್ರದ್ಯುಮ್ನ ಮೊದಲಾದ ಯಾದವ ಮಹಾವೀರರೆಲ್ಲ ದೊಡ್ಡ ಧ್ವನಿಯಿಂದ ನುಡಿದರು.

ವಿ: ಕೃಷ್ಣ ತನಗೇನೂ ತಿಳಿದಿಲ್ಲ; ಅವರಂತೆ ತನಗೂ ಬೇಸರವಾಗಿದೆ ಎಂಬಂತೆ ನಟಿಸುತ್ತಾ ಮುಖ ತಗ್ಗಿಸಿ ಕುಳಿತ ಎಂದರ್ಥ.

ಮಾಯಾವ್ರತಂ ತಂ ವಿನಿಹತ್ಯ ಶೀಘ್ರಂ
ವಯಂ ಸುಭದ್ರಾಮಾನಯಾಮಃ ಕ್ಷಣೇನ ।
ಇತ್ಯುಕ್ತವಾಕ್ಯಾನವದದ್ಬಲಸ್ತಾನ್
ಕೃಷ್ಣಾಜ್ಞಯಾ ಯಾಂತು ನ ಸ್ವೇಚ್ಛಯೈವ ॥ ೧೯೮ ॥

---

೧೯೬. ತತಃ ಪರಾಜಿತವಚ್ಛೀಘ್ರಮೇತ್ಯೇತ್ಯತ್ರ ಅಥ= ಅರ್ಜುನಯುದ್ಧಾನಂತರಮ್। ತತಃ= ದ್ವಾರವತೀಪುರಾತ್ ಏತ್ಯ= ಪಿಂಡೋದ್ಧಾರಕ್ಷೇತ್ರಮೇತ್ಯ ॥ –(ವಾ.)

ಅ: ''ಕಪಟವ್ರತದ ಆ ಅವನನ್ನು ಬೇಗನೆ ಕೊಂದು ನಾವು ಸುಭದ್ರೆಯನ್ನು ಕ್ಷಣಮಾತ್ರದಲ್ಲಿ ಕರೆತರೋಣ''. ಅವರು ಹೀಗೆನ್ನಲು ಬಲರಾಮ ನುಡಿದ ''ನೀವೆಲ್ಲ ಕೃಷ್ಣನ ಅಪ್ಪಣೆ ಪಡೆದು ತೆರಳಿರಿ, ಸ್ವೇಚ್ಛೆಯಿಂದಲ್ಲ''.

ವಿ: ೧) ಅಂತಹ ಕೋಪದ ಭರದಲ್ಲೂ ಬಲರಾಮ ಕೃಷ್ಣನ ಅಪ್ಪಣೆಯಂತೆ ನಡೆಯುವ ಆದೇಶವನ್ನು ಎಲ್ಲರಿಗೂ ನೀಡುತ್ತಾ ತಾನು ಅದೆಂತಹ ಕೃಷ್ಣಭಕ್ತ ಎಂಬುದನ್ನು ಸಾರಿದ ಎಂದು ತಿಳಿಯಬೇಕು.

೨) ತಾನು ಕೃಷ್ಣನ ಮಾತನ್ನು ಕೇಳದ್ದಕ್ಕೆ ಅಷ್ಟೆಲ್ಲಾ ಅನರ್ಥವಾಗಿದೆ, ಆ ತಪ್ಪನ್ನು ಮತ್ತೆ ಮಾಡಕೂಡದು ಎಂಬ ತೀರ್ಮಾನ ಅವನು ಮಾಡಿರುವುದು ಇದರಿಂದ ತಿಳಿಯುವುದು.

ಜ್ಞಾತವ್ಯಮೇತಸ್ಯ ಮತಂ ಪುರಸ್ತಾ-
ದ್ಧರೇರ್ವಿರೋಧೇ ನ ಜಯೋ ಭವೇದ್ವಃ ।
ಇತ್ಯುಕ್ತವಾಕ್ಯೇ ಹಲಿನಿ ಸ್ಮ ಸರ್ವೇ
ಪಪ್ರಚ್ಛುರಾನಮ್ಯ ಜನಾರ್ದನಂ ತಮ್ ॥ ೧೯೯ ॥

ಅ: 'ಮೊದಲು ಕೃಷ್ಣನ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು, ಅವನಿಗೆ ವಿರುದ್ಧವಾಗಿ ನಡೆದಲ್ಲಿ ನಿಮಗೆಂದೂ ಜಯ ಲಭಿಸದು'. ಬಲರಾಮ ಈ ಮಾತನ್ನಾಡಲು ಎಲ್ಲರೂ ಕೃಷ್ಣನನ್ನು ವಂದಿಸಿ ಕೇಳಿದರು.

ಯಾದವರಿಗೆ ಶ್ರೀಕೃಷ್ಣನ ಸಂದೇಶ

ಅಥಾಬ್ರವೀದ್ವಾಸುದೇವೋಽಮಿತೌಜಾಃ
ಶೃಣ್ವಂತು ಸರ್ವೇ ವಚನಂ ಮದೀಯಮ್ ।
ಪುರೈವೋಕ್ತಂ ತನ್ಮಯಾ ಕನ್ಯಕಾಯಾ
ಮಾಯಾವ್ರತೋ ನಾರ್ಹತಿ ಸನ್ನಿಧಿಸ್ಥಿತಿಮ್ ॥ ೨೦೦ ॥

ಅ: ಅಮಿತಬಲದ ಕೃಷ್ಣ ಆಗ ನುಡಿದ : ''ನೀವೆಲ್ಲ ನನ್ನ ಮಾತನ್ನು ಕೇಳಿರಿ, ನಾನು ಮುಂಚೆಯೇ ಹೇಳಿದ್ದೆ ಕಪಟವ್ರತದ ಇವನು ಕನ್ಯೆಯ ಬಳಿ ಇರಲು ಯೋಗ್ಯನಲ್ಲ ಎಂದು''.

---

೨೦೦. ಮಾಯಾವ್ರತಂ ಮಾಯಯೈವ ವ್ರತಂ ಯಸ್ಯ ಸ ತಥಾ ತಂ ಪಾರ್ಥಂ ... । – (ಜ.)

ತಾಂ ಮೇ ವಾಚಂ ನಾಗ್ರಹೀದಗ್ರಜೋಽಯಂ
ಬಹೂನ್ ದೋಷಾನ್ ವ್ಯಾಹರತೋಽಪ್ಯತೋ ಮಯಾ ।
ಅನುಲಂಘ್ಯತ್ವಾದಗ್ರಜೋಽನುಪ್ರವೃತ್ತಃ
ಕನ್ಯಾಗೃಹೇ ವಾಸನೇ ಕೂಟಬುದ್ಧೇಃ ॥ ೨೦೧ ॥

ಅ: ''ನಾನು ಎಷ್ಟು ದೋಷಗಳನ್ನು ತಿಳಿಸಿದರೂ ನನ್ನ ಆ ಮಾತನ್ನು ಈ ಅಣ್ಣ ಬಲರಾಮ ಕೇಳಲಿಲ್ಲ. ಅಣ್ಣನನ್ನು ಮೀರಬಾರದೆಂದು ನಾನು ಈ ವಂಚಕಬುದ್ಧಿಯ ಅರ್ಜುನನಿಗೆ ಕನ್ಯಾಗಾರದಲ್ಲಿ ವಾಸದ ಏರ್ಪಾಟನ್ನು ಮಾಡಲು ಹೊರಟೆ''.

ಅತೀತಶ್ಚಾಯಂ ಕಾರ್ಯಯೋಗೋಽಸಮಕ್ಷಂ
ಹೃತಾ ಕನ್ಯಾ ನೋಽತ್ರ ಕಾ ಮಾನಹಾನಿಃ ।
ಭೂಯಸ್ತರಾಂ ಮಾನಿನಸ್ತಸ್ಯ ಸಾ ಸ್ಯಾತ್
ಜ್ಞಾತಾ ಚ ವೋ ವಿಪೃಥೋಃ ಪಾರ್ಥತಾಽಸ್ಯ ॥ ೨೦೨ ॥

ಅ: ''ಇದೆಲ್ಲ ನಡೆದುಹೋದ ಕಾರ್ಯ. ನಾವೆಲ್ಲ ಇಲ್ಲದಿದ್ದಾಗ ಅವನು ಕನ್ಯೆಯನ್ನು ಅಪಹರಿಸಿರುವನು. ಇದರಲ್ಲಿ ನಮ್ಮ ಮಾನಕ್ಕೇನೂ ಕುಂದಿಲ್ಲ. ತುಂಬಾ ಸ್ವಾಭಿಮಾನಿಯಾದ ಅವನಿಗೇ ಅಂತಹ ಮಾನಹಾನಿ. ವಿಪೃಥುವಿನಿಂದ ಅವನು ಅರ್ಜುನ ಎಂಬುದು ನಿಮಗೆ ತಿಳಿದಿದೆ''.

ವಿ: ಮಹಾವೀರ ಎಂಬ ಮನ್ನಣೆ ಪಡೆದ ಅರ್ಜುನ ಹೀಗೆ ಕನ್ಯಾಪಹರಣ ಮಾಡಿದ್ದರಿಂದ ಅವನ ಗೌರವಕ್ಕೇ ಚ್ಯುತಿ. ತಾವಾರೂ ಅಲ್ಲಿ ಇಲ್ಲದಿದ್ದಾಗ ಅವನು ಹಾಗೆ ಮಾಡಿದ್ದರಿಂದ ತಮ್ಮ ಗೌರವಕ್ಕೇನೂ ಚ್ಯುತಿಯಿಲ್ಲ.

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ
ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ
ಪೈತೃಷ್ವಸೇಯೋ ವೀರತಮೋ ಗುಣಾಢ್ಯಃ ॥ ೨೦೩ ॥

ಅ: ''ಕನ್ಯೆಯನ್ನಂತೂ ಕೊಡಲೇಬೇಕು, ಪಾರ್ಥನಿಗೆ ಸಮನಾದ ಇನ್ನೊಬ್ಬ ವರ ಇಲ್ಲ. ಅವನು ಕುರುಕುಲದವನು, ಪರಿಪೂರ್ಣ ಶಕ್ತಿಸಂಪನ್ನನಾದ ವೇದವ್ಯಾಸರಿಗೆ ಮೊಮ್ಮಗ. ನಮ್ಮ ಸೋದರತ್ತೆಯ ಮಗ, ಅತ್ಯಂತ ಶ್ರೇಷ್ಠನಾದ ವೀರ, ಒಳ್ಳೆಯ ಗುಣವಂತ''.

ವಿ: ೧) ಇವುಗಳಲ್ಲಿ ಶ್ರೀಕೃಷ್ಣ ಅರ್ಜುನನ ವಂಶ, ಬಂಧುತ್ವ, ಗುಣ ಮೊದಲಾದ ಅನೇಕ ಹಿರಿಮೆಯಿಂದಾಗಿ ಸುಭದ್ರೆಗೆ ಅತ್ಯಂತ ಯೋಗ್ಯವರ ಎಂಬುದನ್ನು ತಿಳಿಸಿರುವನು.

೨) ಕುರುಕುಲದವನು, ವೇದವ್ಯಾಸರ ಮೊಮ್ಮಗ, ಸೋದರತ್ತೆಯ ಮಗ, ಗುಣವಂತ ಎಂದು ಕರೆಯುವ ಮೂಲಕ ಬಲರಾಮ ಆರಿಸಿದ ದುರ್ಯೋಧನ ಅಂತಹ ಸಂಬಂಧಿಯೂ ಅಲ್ಲ, ಗುಣವಂತನೂ ಅಲ್ಲ, ವೀರನೂ ಅಲ್ಲ ಎಂಬುದನ್ನೂ ಸಹ ಸೂಚಿಸಿರುವನು.

೩) ಈ ಮೂಲಕ ದುರ್ಯೋಧನನೊಂದಿಗೆ ವಿವಾಹವಾಗಿದ್ದರೆ ಚಿಂತಿಸಬೇಕಿತ್ತೇ ಹೊರತು ಅರ್ಜುನನೊಂದಿಗೆ ವಿವಾಹವಾದಾಗ ಚಿಂತಿಸುವುದೇಕೆ ಎಂದು ಸಹ ತಿಳಿಸಿರುವನು ಎಂದು ಭಾವಿಸಬಹುದು.

೪) ಈ ಶ್ಲೋಕದಲ್ಲಿ ಆದರ್ಶ ವರನ ಲಕ್ಷಣಗಳು ನಿರೂಪಿತವಾಗಿರುವುದೂ ಗಮನಾರ್ಹ.

ಅರ್ಥ್ಯೋಽಸ್ಮಾಭಿಃ ಸ್ವಯಮೇವಾಹರತ್ ಸ
ಶಕ್ರಾತ್ಮಜೋ ನಾತ್ರ ನಃ ಕಾರ್ಯಹಾನಿಃ ।
ಅನುದ್ರುತ್ಯೈನಂ ಯದಿ ವಃ ಸ್ಯಾತ್ ಪರಾಜಯೋ
ಹಾನಿರ್ದೃಢಂ ಯಶಸೋ ವೋ ಭವೇತ ॥ ೨೦೪ ॥

ಅ: ''ಇಂದ್ರನ ಮಗನಾದ ಅವನನ್ನು ನಾವೇ ಕೇಳಬೇಕಾಗಿತ್ತು, ಆದರೆ ಅವನಾಗಿಯೇ ಕನ್ಯೆಯನ್ನು ಅಪಹರಿಸಿದ; ಇದರಿಂದ ನಮ್ಮ ಕಾರ್ಯವೇನೂ ಕೆಟ್ಟಿಲ್ಲ. ಬೆನ್ನಟ್ಟಿ ಹೋಗಿ ನೀವೇನಾದರೂ ಸೋತಲ್ಲಿ ಆಗ ನಿಮಗೆ ಕೀರ್ತಿನಾಶವಾಗುವುದು ಖಂಡಿತ''.

ವಿ: ೧) ನಾವಾಗಿಯೇ ಕೇಳಬೇಕಾಗಿದ್ದ ವರನಾದ ಅವನು ತಾನಾಗಿಯೇ ಕನ್ಯೆಯನ್ನು ಕರೆದೊಯ್ದಿರುವಾಗ ಕೆಟ್ಟಿರುವದೇನು? ಈಗ ನೀವೇನಾದರೂ ಹೋಗಿ ಅವನಿಂದ ಪರಾಭವ-ಗೊಂಡಲ್ಲಿ ನಿಮಗೆ ಖಚಿತವಾಗಿಯೂ ಕೀರ್ತಿಹಾನಿ.

೨) ಬಲರಾಮ, ಪ್ರದ್ಯುಮ್ನಾದಿಗಳೆಲ್ಲಾ ಹೋದರೂ ಅರ್ಜುನನನ್ನು ಗೆದ್ದು ಬರಲಾರರು ಎಂಬ ಎಚ್ಚರಿಕೆಯನ್ನು ಕೃಷ್ಣ ಇಲ್ಲಿ ನೀಡಿರುವನು.

೩) ಇಂದ್ರಪ್ರಸ್ಥಕ್ಕೆ ತೆರಳಿ ಭೀಮನಿಂದ ರಕ್ಷಿತನಾಗುವ ಅವನನ್ನು ಇವರೆಂತು ಗೆದ್ದಾರು..!

ಜಿತ್ವಾ ಚೈನಂ ಕನ್ಯಕಾ ಚಾಹೃತಾ ಚೇತ್
ಪರಾಮೃಷ್ಟಾಂ ನೈವ ಕಶ್ಚಿದ್ಧಿ ಲಿಪ್ಸೇತ್ ।
ತತೋ ನ ಮೇ ರೋಚತೇ ವೋಽನುಯಾನ-
ಮಿತ್ಯೂಚಿವಾನಾಸ ತೂಷ್ಣೀಂ ಪರೇಶಃ ॥ ೨೦೫ ॥

ಅ: 'ಅವನನ್ನು ಗೆದ್ದು ಕನ್ಯೆಯನ್ನು ಮರಳಿ ತಂದಲ್ಲಿ ಅವಳು ಇನ್ನೊಬ್ಬರಿಂದ ಮುಟ್ಟಲ್ಪಟ್ಟವಳು ಎಂಬುದಾಗಿ ಬೇರಾರೂ ವಿವಾಹವಾಗಬಯಸಲಾರರು. ಆದ್ದರಿಂದ ನೀವು ಅವನನ್ನು ಬೆನ್ನಟ್ಟುವುದು ನನಗೆ ಸರಿ ಎನ್ನಿಸದು' ಎಂದು ಸರ್ವೋತ್ತಮನಾದ ಶ್ರೀಕೃಷ್ಣ ನುಡಿದು ಸುಮ್ಮನಾದ.

ವಿ: ೧) ಒಂದು ಪಕ್ಷ ಗೆದ್ದರೂ ಪ್ರಯೋಜನವಿಲ್ಲ, ಅರ್ಜುನನ ಜೊತೆಗೆ ತೆರಳಿದ ಅವಳನ್ನು ಬೇರಾರು ತಾನೇ ಮದುವೆಯಾದಾರು? – ಹೀಗೆ ಸೋತರೂ, ಗೆದ್ದರೂ ನಷ್ಟ, ನಮ್ಮದೇ ಹೊರತು ಅವನದಲ್ಲ.

೨) ಹೀಗೆ ಕೈಮಿಂಚಿದ ಕಾರ್ಯವನ್ನು ಎಶ್ಲೇಷಿಸುವ ಬಗೆಯನ್ನೂ ಸಹ ಕೃಷ್ಣ ತಿಳಿಸಿಕೊಟ್ಟಿರುವನು ಎಂದು ಅರ್ಥವಮಾಡಿಕೊಳ್ಳಬೇಕು.

ಶ್ರುತ್ವಾ ಹಲೀ ಕೃಷ್ಣವಾಕ್ಯಂ ಬಭಾಷೇ
ಮಾ ಯಾತ ಚಿತ್ತಂ ವಿದಿತಂ ಮಯಾಽಸ್ಯ ।
ಅಸ್ಯಾನುವೃತ್ತಿರ್ವಿಜಯಾಯ ನಃ ಸ್ಯಾ-
ಚ್ಛುಭಾಯ ಶಾಂತ್ಯೈ ಪರತಶ್ಚ ಮುಕ್ತ್ಯೈ ॥ ೨೦೬ ॥

ಅ: ಬಲರಾಮ ಕೃಷ್ಣನ ಮಾತನ್ನು ಕೇಳಿ ನುಡಿದ 'ನೀವು ಹೋಗದಿರಿ, ಇವನ ಮನಸ್ಸು ನನಗೆ ತಿಳಿಯಿತು. ಇವನನ್ನು ಅನುಸರಿಸುವುದು ವಿಜಯಕ್ಕೂ, ಮಂಗಳಕ್ಕೂ, ಶಾಂತಿಗೂ, ಪರಲೋಕದಲ್ಲಿ ಮುಕ್ತಿಗೂ ನಮಗೆ ಖಚಿತವಾದ ಸಾಧನ'.

ವಿ: ೧) ಬಲರಾಮನ ಈ ಮಾತಿನಲ್ಲಿ ಮುಂಚೆ ಕೃಷ್ಣನ ಮಾತನ್ನು ಕೇಳದೇ ಹೋಗಿದ್ದರ ಬಗ್ಗೆ ಇರುವ ಪಶ್ಚಾತ್ತಾಪ ಎದ್ದು ಕಾಣುತ್ತದೆ. ಅದರಂತೆ ಮತ್ತೊಮ್ಮೆ ಎಂದೂ ಅವನ ಮಾತನ್ನು ಮೀರಬಾರದು ಎಂಬ ನಿಶ್ಚಯವೂ ಸಹ.

---

೨೦೫. ನೈವ ಕಶ್ಚಿದ್ವಿಲಿಪ್ಸೇದಿತ್ಯತ್ರ ವಿಶೇಷೇಣ ಲಬ್ಧುಮಿಚ್ಛೇತ್ ವಿಲಿಪ್ಸೇತ್ ॥ –(ವಾ.)

೨) ಕೃಷ್ಣನ ಮಾತಿನಂತೆ ನಡೆಯುವುದು ವಿಜಯ, ಮಂಗಳ, ಶಾಂತಿ, ಮುಕ್ತಿ ಮೊದಲಾಗಿ ಎಲ್ಲದಕ್ಕೂ ಸಾಧನ ಎಂಬ ಇಲ್ಲಿಯ ಘೋಷಣೆ ಅತ್ಯಂತ ತಾತ್ತ್ವಿಕವಾದುದು.

೩) ಇಲ್ಲಿ ಬಲರಾಮನ ನಿಶ್ಚಯ ವಿಫಲವಾಗಿ ಕೃಷ್ಣನ ಸಂಕಲ್ಪ ಗೆದ್ದುದು 'ಹರಿಚಿತ್ತ ಸತ್ಯ ಹರಿಚಿತ್ತ ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು' ಎಂಬ ದಾಸವಾಣಿಗೆ ಉತ್ತಮ ನಿದರ್ಶನ. ಕೃಷ್ಣಚಿತ್ತಕ್ಕೆ ಬಂದದ್ದು ನಡೆಯಿತು, ನರನಾದ ಶೇಷಾವತಾರನಾದ ಬಲರಾಮನ ಚಿತ್ತಕ್ಕೆ ಬಂದದ್ದು ನಡೆಯಲಿಲ್ಲ ಎಂದು ಇದರ ಭಾವ.

೪) ಶೇಷನಾದ ನರನ ಚಿತ್ತಕ್ಕೆ ಬಂದುದೇ ನಡೆಯದಿದ್ದಾಗ ಸಾಮಾನ್ಯ ನರರ ಚಿತ್ತಕ್ಕೆ ಬಂದದ್ದು ಎಂತು ನಡೆದೀತು ಎಂಬ ಸೂಚನೆಯೂ ಇಲ್ಲಿದೆ.

ಇಂದ್ರಪ್ರಸ್ಥದಲ್ಲಿ ಅರ್ಜುನ

ತತೋऽರ್ಜುನೋ ಯತ್ರ ತಿಷ್ಠನ್ ನ ಕಶ್ಚಿತ್
ಪರಾಭವಂ ಯಾತಿ ಕೃಷ್ಣಾಜ್ಞಯೈವ ।
ರಥೇನ ತೇನೈವ ಯಯೌ ಸಭಾರ್ಯಃ
ಶಕ್ರಪ್ರಸ್ಥಂ ಚಾವಿಶದ್ಭಾತೃಗುಪ್ತಮ್ ॥ ೨೦೭ ॥

30/11/07

ಅ: ಅರ್ಜುನನು ಎಲ್ಲಿರುವನೋ ಅಲ್ಲಿ ಯಾವನೂ ಸೋಲಲಾರನು ಎಂಬುದು ಕೃಷ್ಣನ ಆದೇಶವೇ. ಆ ರಥದಿಂದಲೇ ಕೃಷ್ಣನ ಆದೇಶದಂತೆ ಸಪತ್ನೀಕವಾಗಿ ಹೊರಟ ಅರ್ಜುನ ಸಹೋದರ ಪಾಲಿತವಾದ ಇಂದ್ರಪ್ರಸ್ಥವನ್ನು ಪ್ರವೇಶಿಸಿದ.

ವಿ: ಅರ್ಜುನನ ಜೊತೆ ಇರುವವನಿಗೇ ಪರಾಭವವಿಲ್ಲದಿರುವಾಗ, ಅರ್ಜುನನಿಗೆಲ್ಲಿಯ ಪರಾಭವ ಎಂದರ್ಥ.

---

೨೦೭. ತತೋऽರ್ಜುನೋ ಯತ್ರ ತಿಷ್ಠೇದಿತ್ಯತ್ರ ಅರ್ಜುನಃ ಯತ್ರ ತಿಷ್ಠೇತ್ ತತಃ= ತತ್ರ । ಕೃಷ್ಣಾಜ್ಞಯೈವೇತಿ ವದತಾ "ಯತ್ರ ಯೋಗೇಶ್ವರಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ। ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ" ॥ ಇತಿ ವ್ಯಾಸಾತ್ಕೃಷ್ಣೋಕ್ತಗೀತಾವಾಕ್ಯಂ (೧೮/೭೮) ಸ್ಮಾರಯತಿ। ಕೃಷ್ಣೋ ವ್ಯಾಸಃ ತಸ್ಯಾಜ್ಞಯೇತ್ಯರ್ಥಃ ॥ – (ವಾ.)

೨೦೭. ತತೋऽರ್ಜುನೋ ಯತ್ರ ಯಸ್ಮಿನ್ ಕೃಷ್ಣರಥೇ ಕಶ್ಚಿತ್ ಪುರುಷಸ್ತಿಷ್ಠನ್ ಕೃಷ್ಣಾಜ್ಞಯಾ ಪರಾಜಯಂ ನೈವ ಯಾತಿ ತೇನೈವ ರಥೇನ ಯಯೌ । – (ಜ.)

೨೦೭. ತತಸ್ತದನಂತರಂ ತೇನೈವ ರಥೇನ ಸಭಾರ್ಯೋऽರ್ಜುನೋ ಯಯಾವಿತಿ ಸಂಬಂಧಃ । ತೇನ ಕೇನ? ಯತ್ರ ರಥೇ ತಿಷ್ಠನ್ ಕಶ್ಚಿದಪಿ ವೀರಃ ಕೃಷ್ಣಾಜ್ಞಯಾ ಪರಾಜಯಂ ನಾಯಾತಿ ತೇನೈವ ರಥೇನೇತ್ಯರ್ಥಃ । – (ವ.)

ಸಂಭಾವಿತೋ ಭ್ರಾತೃಭಿಶ್ಚಾತಿತುಷ್ಟೈ-
ರೂಚೇ೭ಥ ಸರ್ವಂ ತೇಷು ಯಚ್ಚಾತ್ಮವೃತ್ತಮ್ ।
ಶಾಂತೇಷು ವಾಕ್ಯಾದಾತ್ಮನೋ ಯಾದವೇಷು
ಕೃಷ್ಣೋ ಯುಕ್ತೋ ಹಲಿನಾ೭ಗಾಚ್ಚ ಪಾರ್ಥಾನ್ ॥ ೨೦೮ ॥

ಅ: ಅತ್ಯಂತ ಸಂತೋಷದಿಂದ ಸೋದರರೆಲ್ಲರೂ ಅರ್ಜುನನನ್ನು ಆದರಿಸಿದರು. ಅವರಿಗೆ ಅರ್ಜುನ ತನ್ನ ವೃತ್ತಾಂತವನ್ನು ವಿವರಿಸಿದ. ಕೃಷ್ಣ ತನ್ನ ಮಾತಿನಿಂದ ಯಾದವರೆಲ್ಲ ಸಮಾಧಾನಗೊಂಡಾಗ ಬಲರಾಮನೊಂದಿಗೆ ಕೂಡಿಕೊಂಡು ಪಾಂಡವರ ಬಳಿಗೆ ತೆರಳಿದ.

ವಿ: ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ಸುಭದ್ರಾ ಕಲ್ಯಾಣದ ವಿವರ ವಿಭಿನ್ನ ರೀತಿಯಲ್ಲಿ ಕಂಡುಬರುವುದು. ಆದರೆ, ಕೆಲವು ಪಾಠಗಳಲ್ಲಿ ನಿರ್ಣಯೋಕ್ತವಾದ ಕ್ರಮದಲ್ಲೇ ಸುಭದ್ರಾ ಕಲ್ಯಾಣವಿರುವುದು ಪೂನಾ ಭಂಡಾರ್‌ಕರ್ ಸಂಸ್ಥೆಯ ಪರಿಷ್ಕೃತ ಆವೃತ್ತಿಯ ಪರಿಶಿಷ್ಟಗಳಿಂದ ತಿಳಿದುಬರುವುದು.

ಸಾರ್ಧಂ ಯಯೌ ಶಕಟೈ ರತ್ನಪೂರ್ಣೈಃ
ಶಕ್ರಪ್ರಸ್ಥಂ ಪೂಜಿತಸ್ತತ್ರ ಪಾರ್ಥೈಃ ।
ದದೌ ತೇಷಾಂ ತಾನಿ ರಾಮೇಣ ಯುಕ್ತ-
ಸ್ತಥಾ ಕೃಷ್ಣಾಯೈ ಭೂಷಣಾನಿ ಸ್ವಸುಶ್ಚ ॥ ೨೦೯ ॥

ಅ: ಕೃಷ್ಣ ರತ್ನಗಳಿಂದ ತುಂಬಿದ ಗಾಡಿಗಳೊಂದಿಗೆ ಇಂದ್ರಪ್ರಸ್ಥಕ್ಕೆ ತೆರಳಿ ಪಾಂಡವರಿಂದ ಪೂಜಿತನಾದ. ಬಲರಾಮನೊಂದಿಗೆ ಕೂಡಿ ಪಾಂಡವರಿಗೆ ಹಾಗೂ ದ್ರೌಪದಿಗೂ, ತಂಗಿ ಸುಭದ್ರೆಗೂ ಆಭರಣಗಳನ್ನು ನೀಡಿದ.

ಮಾಸಾನುಷಿತ್ವಾ ಕತಿಚಿದ್ರೌಹಿಣೇಯೋ
ಯಯೌ ಪುರೀಂ ಸ್ವಾಂ ಕೇಶವೋ೭ತ್ರಾವಸಚ್ಚ ।
ಬಹೂನ್ ವರ್ಷಾನ್ ಪಾಂಡವೈಃ ಪೂಜ್ಯಮಾನಃ
ಪ್ರೀತಿಂ ತೇಷಾಮಾದಧಾನೋ೭ಧಿಕಾಂ ಸ್ವಾಮ್ ॥ ೨೧೦ ॥

ಅ: ಬಲರಾಮ ಕೆಲವು ತಿಂಗಳು ಅಲ್ಲಿ ವಾಸಿಸಿ ದ್ವಾರಕೆಗೆ ತೆರಳಿದ. ಕೃಷ್ಣ ಅಲ್ಲಿಯೇ ಬಹುವರ್ಷಗಳ ಕಾಲ ಪಾಂಡವರಿಂದ ಪೂಜಿತನಾಗಿ ನೆಲೆಸಿದ. ಅವರಲ್ಲಿ ತನ್ನ ವಿಶೇಷ ಪ್ರೀತಿಯನ್ನು ಆ ಮೂಲಕ ತೋರಿಸಿದ.

ವಿ: ವರ್ಷಗಟ್ಟಲೆ ಶ್ರೀಕೃಷ್ಣ ಹೀಗೆ ಪಾಂಡವರ ಬಳಿ ನೆಲೆಸಿದ ಉಲ್ಲೇಖ ಅವರ ಮೇಲೆ ಅವನಿಗಿದ್ದ ವಿಶೇಷ ಪ್ರೀತಿಗೆ ನಿದರ್ಶನ ಎಂದರ್ಥ.

ದ್ರೌಪದೀಪುತ್ರರು

ಆಸನ್ ಕೃಷ್ಣಾಯಾಃ ಪಂಚ ಪುತ್ರಾ ಗುಣಾಢ್ಯಾ
ವಿಶ್ವೇದೇವಾಃ ಪಂಚಗಂಧರ್ವಮುಖ್ಯೈಃ ।
ಆವಿಷ್ಟಾಸ್ತೇ ಚಿತ್ರರಥಾಭಿತಾಮ್ರ-
ಕಿಶೋರಗೋಪಾಲಬಲೈಃ ಕ್ರಮೇಣ ॥ ೨೧೧ ॥

ಅ: ದ್ರೌಪದಿಗೆ ಗುಣವಂತರಾದ ಐವರು ಮಕ್ಕಳು ಜನಿಸಿದರು. ಅವರೆಲ್ಲ ವಿಶ್ವೇದೇವತೆಗಳು; ಚಿತ್ರರಥ, ಅಭಿತಾಮ್ರ, ಕಿಶೋರ, ಗೋಪಾಲ ಮತ್ತು ಬಲ ಎಂಬ ಐದು ಗಂಧರ್ವಶ್ರೇಷ್ಠರುಗಳಿಂದ ಕ್ರಮವಾಗಿ ಆವಿಷ್ಟರಾಗಿದ್ದವರು.

ವಿ: ೧) ದ್ರೌಪದಿಗೆ ಐದು ಜನ ವಿಶ್ವೇದೇವತೆಗಳು ಚಿತ್ರರಥ ಮೊದಲಾದ ಗಂಧರ್ವರು–ಗಳೊಂದಿಗೆ ಆವಿಷ್ಟರಾಗಿ ಪುತ್ರತ್ವೇನ ಜನಿಸಿದರು ಎಂದರ್ಥ. ವಿಶ್ವಾ ಎಂಬ ದಕ್ಷಪ್ರಜಾಪತಿಯ ಮಗಳಲ್ಲಿ ಯಮಧರ್ಮನ ಪುತ್ರರಾಗಿ ಜನಿಸಿದವರು ಈ ವಿಶ್ವೇದೇವತೆಗಳು.

೨) ವಿಶ್ವೇದೇವತೆಗಳು ಕ್ರತು, ದಕ್ಷ, ಸತ್ಯ, ವಸು, ಧೂರಿ, ಲೋಚನ, ಪೂರು, ಖಾರ್ದ್ರವ, ಕಾಮ ಮತ್ತು ಕಾಲ ಎಂದು ಹತ್ತುಜನ. ಐವರು ವಿಶ್ವೇದೇವತೆಗಳು ಉಪಪಾಂಡವರಾಗಿ ಜನಿಸಿದ ವಿವರ ಮಾರ್ಕಂಡೇಯಪುರಾಣದಲ್ಲಿ ಬಂದಿದೆ.

೩) ಇವರೆಲ್ಲ ವಿಶ್ವಾಮಿತ್ರಮುನಿಯ *ಶಾಪದಿಂದ ಭೂಮಿಯಲ್ಲಿ ಜನಿಸಿ ವಿವಾಹಕ್ಕೆ ಮುಂಚಿತವಾಗಿಯೇ ಅಶ್ವತ್ಥಾಮರಿಂದ ಹತರಾದರು.

---

೨೧೧ ದ್ರೌಪದೇಯಾಶ್ಚ ಯೇ ಪಂಚ ಬಭೂವುರ್ಭರತರ್ಷಭ ।
ವಿಶ್ವಾನ್ ದೇವಗಣಾನ್ ವಿದ್ಧಿ ಸಂಜಾತಾನ್ ಭರತರ್ಷಭ ॥ – ಭಾರತ (ಆದಿ. ೬೭/೧೨೭)

* ಇತಿ ತೇಷಾಂ ವಚಃ ಶ್ರುತ್ವಾ ಕೌಶಿಕೋಽತಿರುಷಾನ್ವಿತಃ ।
ಶಶಾಪ ತಾನ್ ಮನುಷ್ಯತ್ವಂ ಸರ್ವೇ ಯೂಯಮವಾಪ್ಸ್ಯಥ ॥
ಪ್ರಸಾದಿತಶ್ಚ ತೈಃ ಪ್ರಾಹ ಪುನರೇವ ಮಹಾಮುನಿಃ ।
ಮಾನುಷತ್ವೇಽಪಿ ಭವತಾಂ ಭವಿತ್ರೀ ನೈವ ಸಂತತಿಃ ॥
ನ ದಾರಸಂಗ್ರಹಶ್ಚೈವ ಭವಿತಾ ನ ಚ ಮತ್ಸರಃ ।
ಕಾಮಕ್ರೋಧವಿನಿರ್ಮುಕ್ತಾ ಭವಿಷ್ಯಥ ಸುರಾಃ ಪುನಃ ॥
ತತೋಽವತೇರೂರಂಶೈಃ ಸ್ವೈರ್ದೇವಾಸ್ತೇ ಕುರುವೇಶ್ಮನಿ ।
ದ್ರೌಪದೀಗರ್ಭಸಂಭೂತಾಃ ಪಂಚ ವೈ ಪಾಂಡುನಂದನಾಃ ॥ – ಮಾರ್ಕಂಡೇಯಪುರಾಣ (೭/೬೪-೬೭)

ಪ್ರತಿವಿಂಧ್ಯಃ ಶ್ರುತಸೋಮಃ ಶ್ರುತಾಖ್ಯ-
ಕೀರ್ತಿಃ ಶ್ರುತಾನೀಕ ಉತ ಶ್ರುತಕ್ರಿಯಃ ।
ಯುಧಿಷ್ಠಿರಾದ್ಯೈಃ ಕ್ರಮಶಃ ಪ್ರಜಾತಾ-
ಸ್ತೇಷಾಂ ದ್ವಯೋಶ್ಚಾವರಜೋಽಭಿಮನ್ಯುಃ ॥ ೨೧೨ ॥

ಅ: ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶ್ರುತಾನೀಕ ಮತ್ತು ಶ್ರುತಕ್ರಿಯ ಎಂಬ ಇವರು ಕ್ರಮವಾಗಿ ಯುಧಿಷ್ಠಿರ ಮೊದಲಾದವರಿಂದ ಜನಿಸಿದವರು. ಅವರಲ್ಲಿ ಮೊದಲಿಬ್ಬರ ಅನಂತರ ಹುಟ್ಟಿದವನು ಅಭಿಮನ್ಯು.

ವಿ: ೧) ಐವರು ಉಪಪಾಂಡವರ ಹೆಸರುಗಳು ಕ್ರಮವಾಗಿ ಪ್ರತಿವಿಂಧ್ಯ ಇತ್ಯಾದಿ ಎಂದು ತಿಳಿಯಬೇಕು ಪ್ರತಿವಿಂಧ್ಯ ಯುಧಿಷ್ಠಿರನ ಮಗ, ಶ್ರುತಸೋಮ ಭೀಮಪುತ್ರ, ಶ್ರುತಕೀರ್ತಿ ಅರ್ಜುನನ ಪುತ್ರ, ಉಳಿದಿಬ್ಬರು ನಕುಲ ಸಹದೇವರ ಪುತ್ರರು.

೨) ಇವರಿಗೆಲ್ಲ ಒಂದು ವರ್ಷದ * ಅಂತರ.

೩) ಯುಧಿಷ್ಠಿರನಿಂದ ಪ್ರತಿವಿಂಧ್ಯ ಜನಿಸಿದ, ಆ ಸಮಯದಲ್ಲಿ ಅರ್ಜುನ ತೀರ್ಥಯಾತ್ರೆಗೆ ತೆರಳಿದ್ದ. ಅನಂತರ ಭೀಮನಿಂದ ಶ್ರುತಸೋಮ ಜನಿಸಿದ. ಆ ವೇಳೆಗೆ ಅರ್ಜುನ ಸುಭದ್ರೆಯನ್ನು ವಿವಾಹವಾಗಿ ಅವಳಲ್ಲಿ ಅಭಿಮನ್ಯುವನ್ನು ಪಡೆದ. ಅನಂತರ ಅವನಿಗೆ ದ್ರೌಪದಿಯಲ್ಲಿ ಜನಿಸಿದ್ದು ಶ್ರುತಕೀರ್ತಿ.

೪) ಇದರಿಂದ ಅರ್ಜುನನ ತೀರ್ಥಯಾತ್ರೆಯ ಅವಧಿ ಒಂದು ವರ್ಷ ಮಾತ್ರ ಎಂದು ಸ್ಫುಟಪಡುವುದು; ಅದು ಕಳೆದ ಮೇಲೆ ಬಭ್ರುವಾಹನನ ಜನನ ಇತ್ಯಾದಿ ಎಂದು ತಿಳಿಯಬೇಕು. ಅಭಿಮನ್ಯು ಅರ್ಜುನನ ಮೂರನೆಯ ಮಗ. ಮೊದಲ ಇಬ್ಬರು ಇರಾವಾನ್ ಮತ್ತು ಬಭ್ರುವಾಹನ.

---

೨೧೨. ಅರ್ಜುನಪುತ್ರಸ್ಯ ಶ್ರುತಾಖ್ಯಕೀರ್ತಿಶಬ್ದವಾಚ್ಯತ್ವಮುಕ್ತಂ ತದಯುಕ್ತಮ್ । ಭಾಗವತೇ ನವಮಸ್ಕಂಧೇ ಅರ್ಜುನಾಚ್ಛ್ರುತಕೀರ್ತಿಸ್ತ್ವತ್ಕರ್ಜುನಪುತ್ರಸ್ಯ ಶ್ರುತಾಖ್ಯಕೀರ್ತಿಶಬ್ದವಾಚ್ಯತ್ವಸ್ಯೋಕ್ತತ್ವಾತ್ । ಭಾರತೇ ಆದಿಪರ್ವಣಿ 'ಅರ್ಜುನಾಚ್ಛ್ರುತಕರ್ಮಾಣಮ್' ಇತ್ಯರ್ಜುನಪುತ್ರಸ್ಯ ಶ್ರುತಕರ್ಮಶಬ್ದವಾಚ್ಯತ್ವಸ್ಯೋಕ್ತೇರಿತಿ ಚೇನ್ನ । ಅರ್ಜುನಪುತ್ರಸ್ಯ ಶ್ರುತಾಖ್ಯಕೀರ್ತಿಃ ಶ್ರುತಕರ್ಮೇತಿ ನಾಮತ್ರಯಮಿತ್ಯಭ್ಯುಪಗಮಾತ್ । ಏವಮನ್ಯತ್ರಾಪಿ ದ್ರಷ್ಟವ್ಯಮ್। –(ಸ.)

* ಏಕವರ್ಷಾಂತರಾಸ್ತ್ವೇತೇ ದ್ರೌಪದೇಯಾ ಯಶಸ್ವಿನಃ। –ಭಾರತ (ಆದಿ. ೨೨೦/೮೬)

ಅಭಿಮನ್ಯು ಜನನ

ಚಂದ್ರಾಂಶಯುಕ್ತೋಽತಿತರಾಂ ಬುಧೋಽಸೌ
ಜಾತಃ ಸುಭದ್ರಾಜಠರೇಽರ್ಜುನೇನ ।
ಧರ್ಮೇರಶಕ್ರಾಂಶಯುತೋಽಶ್ವಿನೋಶ್ಚ
ತಥೈವ ಕೃಷ್ಣಸ್ಯ ಚ ಸನ್ನಿಧಾನಯುಕ್ ॥ ೨೧೩ ॥

ಅ: ಅಭಿಮನ್ಯು ವಿಶೇಷವಾಗಿ ಚಂದ್ರನ ಅಂಶದಿಂದ ಕೂಡಿದ್ದ ಬುಧ; ಅರ್ಜುನನಿಂದ ಸುಭದ್ರೆಯ ಜಠರದಲ್ಲಿ ಅವತರಿಸಿದ. ಅವನು ಯಮಧರ್ಮ, ವಾಯು, ಇಂದ್ರ ಮತ್ತು ಅಶ್ವಿನೀ ದೇವತೆಗಳ ಅಂಶದಿಂದಲೂ ಕೂಡಿದ್ದ, ಹಾಗೆಯೇ ಶ್ರೀಕೃಷ್ಣನ ಸನ್ನಿಧಾನವನ್ನೂ ಹೊಂದಿದ್ದ.

ವಿ: ೧) ಅಭಿಮನ್ಯು ಬುಧನ ಅವತಾರ, ಅವನಲ್ಲಿ ವಿಶೇಷವಾಗಿ ಚಂದ್ರನ ಅಂಶವೂ ಇತ್ತು ಪಂಚಪಾಂಡವರ ಮೂಲರೂಪಗಳಾದ ಯಮಾದಿ ದೇವತೆಗಳ ಅಂಶಗಳೂ ಇದ್ದವು. ವಿಶೇಷವಾಗಿ ಶ್ರೀಕೃಷ್ಣನ ಸನ್ನಿಧಾನವನ್ನೂ ಹೊಂದಿದ್ದ.

೨) ಪಾಂಡವರದು ಚಂದ್ರವಂಶ, ಚಂದ್ರನ ಮಗ ಬುಧ. ಹೀಗೆ ಆ ವಂಶದಲ್ಲಿ ಆ ವಂಶದ ಮೂಲಪುರುಷನಾದ ಬುಧ ಚಂದ್ರನ ಸನ್ನಿಧಾನದೊಂದಿಗೆ ಅವತರಿಸಿದ್ದು ವಿಶೇಷ. ವಂಶದ ಮೂಲಪುರುಷನಾದ ಅವನು ಅರ್ಜುನನ ಮಗನಾಗಿ ಅವತರಿಸುವ ಮೂಲಕ ತಾನು ವಿಶೇಷ ಸಾರ್ಥಕ್ಯವನ್ನು ಪಡೆದುಕೊಂಡ ಎನ್ನಬಹುದು.

೩) ಮುಂದೆ ಅವನ ಮಗ ಪರೀಕ್ಷಿದ್ರಾಜನೇ ಆ ವಂಶದ ಪ್ರವರ್ತಕನಾದದ್ದು ಚಂದ್ರವಂಶದ ಪುನರುತ್ಥಾನಕ್ಕೆ ನಿದರ್ಶನದಂತೆ ಆಯಿತು.

೪) ಹೀಗೆ ಬಗೆಬಗೆಯ ದೇವತೆಗಳ ವಿಶೇಷ ಸನ್ನಿಧಾನದಿಂದಾಗಿ ಅಭಿಮನ್ಯು ಪಾಂಡವ ವೀರರಲ್ಲಿ ಅತ್ಯಂತ ಮಹತ್ವಪೂರ್ಣವಾದ ಸ್ಥಾನವನ್ನು ಗಳಿಸಿದ.

ಪಾಂಡವರ ಪುತ್ರರಲ್ಲಿ ಅಭಿಮನ್ಯುವಿನ ಹಿರಿಮೆ

ಸರ್ವೇಽಪಿ ತೇ ವೀರ್ಯವಂತಃ ಸುರೂಪಾಃ
ಭಕ್ತಾ ವಿಷ್ಣೋಃ ಸರ್ವಶಾಸ್ತ್ರೇಷ್ವಭಿಜ್ಞಾಃ ।
ಮೋದಂ ಯಯುಃ ಪಾಂಡವಾಸ್ತೈಃ ಸುತೈಶ್ಚ
ವಿಶೇಷತಃ ಸಾತ್ವತೀನಂದನೇನ ॥ ೨೧೪ ॥

ಅ: ಅವರೆಲ್ಲರೂ ತುಂಬಾ ಪರಾಕ್ರಮಶಾಲಿಗಳು, ರೂಪವಂತರು, ವಿಷ್ಣುವಿನ ಭಕ್ತರು, ಸರ್ವಶಾಸ್ತ್ರಗಳನ್ನೂ ತಿಳಿದವರು. ಪಾಂಡವರು ಆ ಮಕ್ಕಳಿಂದ ವಿಶೇಷವಾಗಿ ಸುಭದ್ರಾತನಯ-ನಾದ ಅಭಿಮನ್ಯುವಿನಿಂದ ಬಹಳ ಆನಂದ ಹೊಂದಿದರು.

ವಿ: ೧) ಪಾಂಡವರ ಪುತ್ರರಲ್ಲಿ ಅಭಿಮನ್ಯುವಿಗೆ ಮೇಲೆ ಹೇಳಿದ ಅನೇಕ ಕಾರಣಗಳಿಂದಾಗಿ ಹಿರಿಮೆ ಲಭಿಸಿದ್ದರಿಂದ ಅವನು ಸರ್ವಶ್ರೇಷ್ಠನೆನ್ನಿಸಿದ. ಅದರಲ್ಲಿ ಮುಖ್ಯ ಕಾರಣ ಅವನು ಸುಭದ್ರೆಯ ಮಗನಾಗಿದ್ದು. ಸುಭದ್ರೆ ಕೃಷ್ಣನ ತಂಗಿ, ಕೃಷ್ಣನ ಸಂಪರ್ಕದಿಂದಾಗಿ ಅಭಿಮನ್ಯುವಿನ ಹಿರಿಮೆ ಅಗಾಧವೆನ್ನಿಸಿತು.

೨) ಅವನ ಮಗ ಪರೀಕ್ಷಿದ್ರಾಜ ಉತ್ತರಾಧಿಕಾರಿಯಾದ. ಶ್ರೀಮದ್ಭಾಗವತವನ್ನು ಶುಕ-ಮುನಿಗಳಿಂದ ಶ್ರವಣ ಮಾಡಿ ವೈಕುಂಠಕ್ಕೆ ನಡೆದ.

೩) ಪರೀಕ್ಷಿತನ ಮಗ ಜನಮೇಜಯ ಮಹಾಭಾರತವನ್ನು ಶ್ರವಣ ಮಾಡಿ ಕೃತಕೃತ್ಯನಾದ.

೪) ಅಭಿಮನ್ಯುವಿನ ತಂದೆಯಾದ ಅರ್ಜುನನಂತೂ ಶ್ರೀಕೃಷ್ಣನ ಮುಖದಿಂದಲೇ ಗೀತಾ-ಮೃತವನ್ನು ಪಾನ ಮಾಡಿದ.

೫) ಹೀಗೆ ಆ ಇಡೀ ವಂಶ ಗೀತಾ, ಭಾಗವತ ಮತ್ತು ಮಹಾಭಾರತ ಎಂಬ ಸಚ್ಛಾಸ್ತ್ರಗಳ ಪ್ರವರ್ತನೆಯಲ್ಲಿ ಶ್ರೋತೃಗಳಾಗಿ ಪಾಲ್ಗೊಂಡದ್ದು ಒಂದು ವಿಶ್ವದಾಖಲೆಯ ಮಹಾಸಾಧನೆ ಎಂಬುದು ಗಮನಾರ್ಹ. ಇದೆಲ್ಲವನ್ನು ಶ್ರೀಮದಾಚಾರ್ಯರು **'ವಿಶೇಷತಃ ಸಾತ್ವತೀ ನಂದನೇನ'** ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬಹುದು.

ಖಾಂಡವ ವನದಲ್ಲಿ ಕೃಷ್ಣಾರ್ಜುನರು

ತತಃ ಕದಾಚಿತ್ ಖಾಂಡವಂ ಕೃಷ್ಣಪಾರ್ಥೌ
ಚಿಕ್ರೀಡಿಷೂ ಸತ್ಯಭಾಮಾಸುಭದ್ರೇ ।
ಆದಾಯ ಯಾತೌ ಪರಿಚಾರಕೈಶ್ಚ
ರಥೇನ ಗಂಧರ್ವವರಾನುಗೀತೌ ॥ ೨೧॥

ಅ: ಬಳಿಕ ಒಮ್ಮೆ ಕೃಷ್ಣಾರ್ಜುನರು ವಿಹರಿಸಲೆಂದು ಸತ್ಯಭಾಮೆ, ಸುಭದ್ರೆಯರನ್ನು ಕರೆದು-ಕೊಂಡು ಪರಿಚಾರಕರೊಂದಿಗೆ ರಥದಲ್ಲಿ ಕುಳಿತು ಗಂಧರ್ವಶ್ರೇಷ್ಠರುಗಳಿಂದ ಹಾಡಲ್ಪಡು-ವವರಾಗಿ ಖಾಂಡವವನಕ್ಕೆ ತೆರಳಿದರು.

ಸ್ವೈರಂ ತಯೋಸ್ತತ್ರ ವಿಕ್ರೀಡತೋಶ್ಚ
ಸ್ತ್ರೀರತ್ನಾಭ್ಯಾಂ ಮಂದವಾತಾನುಜುಷ್ಟೇ ।
ವನೇ ಪ್ರಸೂನಸ್ತಬಕೋರುರಾಜತೇ
ಜಲೇ ಚ ತಿಗ್ಮದ್ಯುತಿಕನ್ಯಕಾಯಾಃ ॥ ೨೧೬ ॥

ಅ: ಅವರಿಬ್ಬರು ಅಲ್ಲಿ ಮಂದಮಾರುತದಿಂದ ಸೇವಿತವಾದ, ಹೂಗುಚ್ಛಗಳಿಂದ ಬಹುವಾಗಿ ಕಂಗೊಳಿಸುತ್ತಿದ್ದ, ಆ ಖಾಂಡವವನದಲ್ಲೂ, ಸೂರ್ಯಪುತ್ರಿಯಾದ ಯಮುನೆಯ ಜಲದಲ್ಲೂ ಇಬ್ಬರು ರತ್ನಪ್ರಾಯರಾದ ಸ್ತ್ರೀಯರೊಂದಿಗೆ ವಿಹರಿಸುತ್ತಿದ್ದರು.

ಅಗ್ನಿಯಿಂದ ಅನ್ನಯಾಚನೆ

ಭೂತ್ವಾ ವಿಪ್ರಸ್ತೌ ಯಯಾಚೇಽನ್ನಮೇತ್ಯ
ಕೃಶಾನುರೂಚೇಽನುಮತೇ ರಮೇಶಿತುಃ ।
ಪಾರ್ಥಃ ಕೀದೃಕ್ ತೇಽನ್ನಮಿಷ್ಟಂ ವದೇತಿ
ಸ ಚಾವಾದೀದ್ದಹ್ಮಿರಹಂ ವನಾರ್ಥೀ ॥ ೨೧೭ ॥

ಅ: ಆಗ ಅಗ್ನಿಯು ವಿಪ್ರವೇಷವನ್ನು ಧರಿಸಿ ಅವರಿಬ್ಬರ ಬಳಿಗೆ ಬಂದು ಅನ್ನ *ನೀಡಲು ಬೇಡಿದನು. ಅರ್ಜುನ ಕೃಷ್ಣನ ಅಪ್ಪಣೆಯನ್ನು ಪಡೆದು ''ನಿನಗೆ ಎಂತಹ ಅನ್ನ ಬೇಕು, ತಿಳಿಸು'' ಎಂದನು, ಅವನು ನುಡಿದ ''ನಾನು ಅಗ್ನಿ, ಈ ವನವನ್ನು ಬಯಸಿರುವೆ''.

ವಿ: ೧) ಅಗ್ನಿ ಹಾಗೆ ವಿಪ್ರವೇಷವನ್ನು ಧರಿಸಿ ಬರಲು ಕಾರಣ ಕೃಷ್ಣ ಬ್ರಹ್ಮಣ್ಯದೇವ, ಬ್ರಾಹ್ಮಣಹಿತಕಾರಿ. ಆದ್ದರಿಂದ ಆ ರೂಪದಲ್ಲಿ ಬಂದರೆ ಅಭೀಷ್ಟಸಿದ್ಧಿಸುವುದು ಎಂದು ಸೂಚಿಸಲು.

೨) ಯಾಚನೆ ಮಾಡಿದವನಿಗೆ ಅನ್ನ ನೀಡಲೇಬೇಕು ಎಂಬ ಶಾಸ್ತ್ರತತ್ತ್ವವು ಅಗ್ನಿ ಹಾಗೆ ಅನ್ನವನ್ನು ಬೇಡಲು ಕಾರಣ ಎಂದು ತಿಳಿಯಬೇಕು – 'ಅನ್ನಸ್ಯ ಕ್ಷುಧಿತಂ ಪಾತ್ರಂ'.

೩) ದೇವತೆಯಾಗಿ ಮೂಲರೂಪದಿಂದ ಬರುವುದಕ್ಕಿಂತಲೂ, ಬ್ರಾಹ್ಮಣನಾಗಿ ದೇವರನ್ನು ಪ್ರಾರ್ಥಿಸುವುದು ಶೀಘ್ರ ಫಲದಾಯಕ ಎಂಬುದೂ ಇದರಿಂದ ಸೂಚಿತ.

---

* ಬ್ರಾಹ್ಮಣೋ ಬಹುಭೋಕ್ತಾಽಸ್ಮಿ ಭುಂಜೇಽಪರಿಮಿತಂ ಸದಾ ।
ಭಿಕ್ಷೇ ವಾರ್ಷ್ಣೇಯಪಾರ್ಥೌ ವಾಮೇಕಾಂ ತೃಪ್ತಿಂ ಪ್ರಯಚ್ಛತಮ್ ॥ – ಭಾರತ (ಆದಿ. ೨೨೨/೨)

ಅಗ್ನಿಗೆ ಅಜೀರ್ಣವಾದದ್ದು

ಪ್ರಯಾಜಾನ್ ದೇವಾನನುಯಾಜಾಂಶ್ಚ ಶುಲ್ಕಂ
ಹವಿರ್ದಾನೇ ದೈವತಾನಾಮಯಾಚಿಷಮ್।
ಬಲಹ್ರಾಸಸ್ತವ ಭೂಯಾದಿತಿ ಸ್ಮ
ಶಪ್ತ್ವೈವ ತೇ ತಾಂಶ್ಚ ದದುಃ ಪುರಾ ಮಮ ॥ ೨೧೮ ॥

ಅ: ನಾನು ದೇವತೆಗಳಿಗೆ ಹವಿಸ್ಸನ್ನು ಒಯ್ದುಕೊಡುವ ಕಾರ್ಯಕ್ಕಾಗಿ ಅವರಿಂದ ಪ್ರಯಾಜ ಮತ್ತು ಅನುಯಾಜ ಎಂಬ ಆಹುತಿಗಳನ್ನು ವೇತನವನ್ನಾಗಿ ನೀಡಲು ಬೇಡಿಕೊಂಡೆ. ಅವರು ನಿನಗೆ ಪಚನ ಶಕ್ತಿ ಕುಂದಲಿ ಎಂದು ಶಪಿಸಿ ಅವುಗಳನ್ನು ನೀಡಿದರು..

ವಿ: ೧) ಅಗ್ನಿ ದೇವಮುಖ ಎಂದೇ ಪ್ರಸಿದ್ಧ, ಎಂದರೆ ದೇವತೆಗಳು ಅಗ್ನಿಯಲ್ಲಿ ಹೋಮಿಸಿ–ದ್ದನ್ನು ಸ್ವೀಕರಿಸುವನು. ಹಾಗೆ ಅವರವರ ಹವಿಸ್ಸುಗಳನ್ನು ತಲುಪಿಸುವುದು ಅಗ್ನಿಯ ಕಾರ್ಯ. ಆ ಕಾರ್ಯವನ್ನು ಮಾಡಲು ಅಗ್ನಿ ಒಮ್ಮೆ ದೇವತೆಗಳನ್ನು ವೇತನವನ್ನು ನೀಡಲು ಕೇಳಿಕೊಂಡ. ಅವರು ಆಗಲಿ ಎಂದು ಒಪ್ಪಿ ಪ್ರಯಾಜ ಮತ್ತು ಅನುಯಾಜ ಎಂಬ ಆಹುತಿಗಳನ್ನು ವೇತನವನ್ನಾಗಿ ನೀಡಿದರು; ''ಶಕ್ತಿ ಕುಂದಲಿ'' ಎಂಬ ಶಾಪವನ್ನೂ ನೀಡಿದರು.

೨) ಫಲಾಪೇಕ್ಷೆ ಶಕ್ತಿಹ್ರಾಸಕರ ಎಂಬುದಕ್ಕೂ ಇದು ಸೂಚಕ –**'ಮಾ ಫಲೇಷು ಕದಾಚನ'.**

೩) ಸಮಿತ್, ತನೂನಪಾತ್, ಇಟ್, ಬರ್ಹಿ, ಸ್ವಾಹಾಕಾರ ಎಂಬ ಐದು ಪ್ರಯಾಜ ನಾಮಕ ಆಜ್ಯಾಹುತಿಗಳು. ಬರ್ಹಿ, ನರಾಶಂಸ, ಸ್ವಿಷ್ಟಕೃದಗ್ನಿ ಎಂಬ ಮೂರು ಅನುಯಾಜ ನಾಮಕ ಆಜ್ಯಾಹುತಿಗಳು.

೪) ಪ್ರಯಾಜ ಎಂಬವು ಪ್ರಧಾನ ಹೋಮಕ್ಕಿಂತ ಮುಂಚಿತವಾಗಿ ನೀಡಬೇಕಾದ ಆಹುತಿಗಳು, ಅನುಯಾಜ ಆಹುತಿಗಳು ಹೋಮಶೇಷದಿಂದ ಹೋಮದ ಅನಂತರ ನೀಡಬೇಕಾದ ಆಹುತಿಗಳು. ಈ ಎಲ್ಲ ಆಹುತಿಗಳಿಗೂ ಅಗ್ನಿಯೇ ದೇವತೆ. ಇದು ಅವನ ಅಪೇಕ್ಷೆಯಂತೆ ದೇವತೆಗಳು ನೀಡಿದ್ದವರ.

---

೨೧೮. ಪ್ರಯಾಜಾನ್ ದೇವಾನನುಯಾಜಾನಿತ್ಯತ್ರ ದೇವತಾನಾಂ ಹವಿರ್ದಾನೇ= ಸ್ವಸ್ಮಿನ್ ಹುತಹವಿರ್ದಾನೇ ಪ್ರಯಾಜಾನನುಯಾಜಾಂಶ್ಚ= ಆಹುತಿವಿಶೇಷಾನ್ ಶುಲ್ಕಂ= ವೇತನಂ ದೇವಾನ್ ಪ್ರತಿ ಅಯಾಚಿಷಂ= ಶಪ್ತ್ವಾ ಅಸ್ಮಾಕಮನ್ನದಾನೇ ವೇತನಮಯಾಚಿಷಮಿತಿ ಕೋಪಾತ್ ಶಪ್ತ್ವಾ ತಾನ್= ಆಹುತಿವಿಶೇಷಾನ್ ॥ – (ವಾ.)

೨೧೮. ಪ್ರಯಾಜಾನನುಯಾಜಾಂಶ್ಚತುರ ಆಹುತಿವಿಶೇಷಾನ್। – (ಜ.)

೫) ಶ್ವೇತಕಿ ಎಂಬ ರಾಜ ನಿರಂತರ ಯಾಗ ಮಾಡಿದ್ದರಿಂದ ಋತ್ವಿಜರು ಬಳಲಿ ಪೌರೋಹಿತ್ಯವನ್ನು ಮುಂದುವರಿಸಲು ನಿರಾಕರಿಸಿದಾಗ ಅವನು ಶಿವನನ್ನು ತಪಸ್ಸಿನಿಂದ ಆರಾಧಿಸಿ ಹನ್ನೆರಡು ವರ್ಷಗಳ ಕಾಲ ಅವಿಚ್ಛಿನ್ನ ಅಜ್ಯಧಾರಾಹೋಮವನ್ನು ಮಾಡಿದನು. ಬಳಿಕ ಶಿವನ ಆಜ್ಞೆಯಂತೆ ಶಿವನ ಅವತಾರರಾದ ದುರ್ವಾಸರು ಬಂದು ಅವನಿಂದ ಸತ್ರಯಾಗವೊಂದನ್ನು ಮಾಡಿಸಿದರು.

೬) ಹನ್ನೆರಡು ವರ್ಷಗಳ ಕಾಲ ಹಾಗೆ ನಿರಂತರ ಯಜ್ಞದಿಂದ ಅಗ್ನಿದೇವತೆ ಅಜೀರ್ಣರೋಗದಿಂದ ಕೂಡಿದ ಎಂಬ ಮತ್ತೊಂದು ವಿವರ ಮಹಾಭಾರತದಲ್ಲಿದೆ :

ಏವಮುಕ್ತೋ ಭ್ರಾತೃಭಿಸ್ತು ಜರಿತಾರಿರ್ವಿಭಾವಸುಮ್ ।
ತುಷ್ಟಾವ ಪ್ರಾಂಜಲಿರ್ಭೂತ್ವಾ ಯತ್ತಚ್ಛ್ರುಣು ನರಾಧಿಪ ॥

ಪುನಃ ಪೂರ್ತಿಃ ಕೇನ ಮೇ ಸ್ಯಾದ್ಬಲಸ್ಯೇ-
ತ್ಯಬ್ರೋದ್ಭವಂ ಪೃಷ್ಟವಾನಸ್ಮಿ ನತ್ವಾ ।
ಯದಾ ವನಂ ಖಾಂಡವಂ ಹಿ ತ್ವಮತ್ಸಿ
ತದಾ ಬಲಂ ತೇ ಭವತೀತಿ ಸೋಽಬ್ರವೀತ್ ॥ ೨೧೯ ॥

ಅ: ''ನನ್ನ ಬಲ ಮತ್ತೆ ಮುಂಚಿನಂತೆ ಪೂರ್ತಿಗೊಳ್ಳುವುದು ಯಾವುದರಿಂದ?'' ಎಂದು ಅಗ್ನಿ ಬ್ರಹ್ಮದೇವರನ್ನು ನಮಸ್ಕರಿಸಿ ಕೇಳಿದ; ಅವರು ''ನೀನು ಯಾವಾಗ ಖಾಂಡವವನವನ್ನು ತಿನ್ನುವೆಯೋ ಆಗ ನಿನಗೆ ಪೂರ್ಣಬಲ ಒದಗುವುದು'' ಎಂದು ತಿಳಿಸಿದರು.

ಶಕ್ರಸ್ಯೇದಂ ಖಾಂಡವಂ ತೇನ ವಿಘ್ನಂ
ಕರೋತ್ಯಸೌ ತೇನ ವಾಂ ಪ್ರಾರ್ಥಯಾಮಿ ।
ಇತ್ಯುಕ್ತೇ ತಂ ಪಾರ್ಥ ಊಚೇ ಯದಿ ಸ್ಯಾ-
ದ್ರಥೋ ಧನುಶ್ಚಾಥ ಶಕ್ರಂ ನಿರೋತ್ಸ್ಯೇ ॥ ೨೨೦ ॥

ಅ: ''ಈ ಖಾಂಡವವನ ದೇವೇಂದ್ರನದು; ಅದರಿಂದ ಅವನು ನನಗೆ ಅಡ್ಡಿಮಾಡುತ್ತಿರುವನು. ಅದರಿಂದ ನಾನು ನಿಮ್ಮನ್ನು ಬೇಡುತ್ತಿರುವೆ'' – ಅಗ್ನಿ ಹೀಗೆನ್ನಲು ಅರ್ಜುನ ನುಡಿದ ''ನನಗೆ ರಥ ಹಾಗೂ ಧನುಸ್ಸುಗಳು ದೊರೆತಲ್ಲಿ ಇಂದ್ರನನ್ನು ಎದುರಿಸಬಲ್ಲೆ''.

ವಿ: ೧) ಅಗ್ನಿ ಬ್ರಹ್ಮದೇವರ ಮಾತಿನಂತೆ ಖಾಂಡವವನವನ್ನು ಸುಡಲು ಸತತ ಏಳುಬಾರಿ ಪ್ರಯತ್ನಿಸಿ ವಿಫಲನಾಗಿದ್ದ; ಪ್ರತಿ ಬಾರಿ ಅವನು ಪ್ರಯತ್ನಿಸಿದಾಗಲೂ ಇಂದ್ರ ಮಳೆ ಸುರಿಸಿ ಅದರ

ಸುಡುವ ಕಾರ್ಯಕ್ಕೆ ವಿಘ್ನ ಮಾಡುತ್ತಿದ್ದ. ಅದರಿಂದಾಗಿ ನಿರ್ವಿಘ್ನವಾಗಿ ಅದರ ಭಕ್ಷಣೆ ಸಾಧ್ಯವಾಗಲೆಂದು ಅಗ್ನಿ ಅರ್ಜುನನನ್ನು ಕೇಳಿದ.

೨) ಅರ್ಜುನ ಇಂದ್ರಾವತಾರನಾದ್ದರಿಂದ ಅವನನ್ನೇ ಕೇಳಿದ; ಇಂದ್ರಪುತ್ರ ಅರ್ಜುನ; ಮಗ ನೀಡಿದ್ದನ್ನು ತಂದೆ ವಿರೋಧಿಸಲಾರ ಎಂಬ ಲೋಕನ್ಯಾಯಕ್ಕೂ ಅನುಗುಣವಾಗಿರುವುದು ಗಮನಾರ್ಹ.

ನರಾವೇಶಾದನ್ನದಾನಪ್ರತಿಶ್ರವಾತ್
ಸ್ವಸ್ಯಾಪಿ ಶಕ್ರಸ್ಯ ವಿರೋಧಮೈಚ್ಛತ್ ।
ಪಾರ್ಥಃ ಕೃಷ್ಣಪ್ರೇರಣಾಚ್ಚೈವ ವಹ್ನಿಃ
ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ॥ ೨೨೧ ॥

ಅ: ಅರ್ಜುನನಲ್ಲಿನ ನರಾವೇಶವಿದ್ದದ್ದರಿಂದಲೂ ಹಾಗೂ ಅವನು ಅನ್ನದಾನ ನೀಡುವ ವಚನ ನೀಡಿದ್ದರಿಂದಲೂ, ಅರ್ಜುನ ತಾನೇ ಇಂದ್ರನಾದರೂ ವಿರೋಧಮಾಡಲು ಬಯಸಿದ. ಕೃಷ್ಣನ ಪ್ರೇರಣೆ ಮುಖ್ಯವಾದ ಕಾರಣ. ಅಗ್ನಿ ಇಂದ್ರನ ವಿರೋಧ ಪರಿಹಾರವಾಗಲೆಂದೇ ಅರ್ಜುನನನ್ನು ಪ್ರಾರ್ಥಿಸಿದ್ದ.

ವಿ: ಅರ್ಜುನ ತನ್ನದೇ ಮೂಲರೂಪವಾದ ಇಂದ್ರನೊಂದಿಗೆ ಯುದ್ಧಕ್ಕೆ ತೊಡಗಲು ಇಲ್ಲಿ ಮೂರು ಕಾರಣಗಳನ್ನು ನೀಡಿರುವರು - ಅವನಲ್ಲಿದ್ದ ನರಾವೇಶ, ಅವನು ಅನ್ನದಾನವನ್ನು ಮಾಡುವುದಾಗಿ ಮಾಡಿದ ಪ್ರತಿಜ್ಞೆ, ಎಲ್ಲಕ್ಕಿಂತ ಮಿಗಿಲಾಗಿ ಕೃಷ್ಣನ ಪ್ರೇರಣೆ.

ನ ಹಿ ಸ್ವದತ್ತಸ್ಯ ಪುನಃ ಸ ವೈರಂ
ಶಕ್ರಃ ಕುರ್ಯಾತ್ ಸ್ವಯಮಿಂದ್ರೋ ಹಿ ಪಾರ್ಥಃ ।
ನಾಪ್ರೇರಿತೋ ವಿಷ್ಣುನಾ ತಸ್ಯ ರೋಧಂ
ಪಾರ್ಥಃ ಕುರ್ಯಾದಿತಿ ಕೃಷ್ಣಂ ಯಯಾಚೇ ॥ ೨೨೨ ॥

---

೨೨೧. ನರಾವೇಶಾದನ್ನದಾನಪ್ರತಿಶ್ರವಾದಿತ್ಯತ್ರ ನರಾವೇಶಾತ್ ಕಾರಣಾತ್ ಕೃಷ್ಣಸ್ಯ ಪ್ರೇರಣಾನ್ನಿಮಿತ್ತಾಚ್ಚ ಕೃತಾದನ್ನದಾನಪ್ರತಿಶ್ರವಾದಿತಿ ಯೋಜನಾ। ಸ್ವಸ್ಯಾಪಿ = ಸ್ವಾಭಿನ್ನಸ್ಯಾಪಿ ॥ – (ವಾ.)

೨೨೧. ವಹ್ನಿಃ ಕೃಷ್ಣಸ್ಯ ಪ್ರೇರಣಾತ್ ಪಾರ್ಥಂ ಯಯಾಚೇ ಇತಿ ಟಿಪ್ಪಣೀಕಾರಾಃ । ತೇಷಾಂ ಮತೇನ ಪ್ರೇರಿತೋ ವಿಷ್ಣುನಾ ತಸ್ಯ ರೋಧಂ ಪಾರ್ಥಂ ಕುರ್ಯಾದಿತಿ ಉತ್ತರಶ್ಲೋಕವಿರೋಧೋ ದೃಶ್ಯತೇ । – (ಜ.)

ಅ: ತಾನು ನೀಡಿದ್ದಕ್ಕೆ ಇಂದ್ರ ಮರಳಿ ವಿರೋಧ ಮಾಡಲಾರ, ಸ್ವತಃ ಇಂದ್ರನೇ ಪಾರ್ಥನಲ್ಲವೆ! ಇವನು ಕೃಷ್ಣನಿಂದ ಪ್ರೇರಿತನಾಗದಿದ್ದರೆ ಹಾಗೆ ವಿರೋಧ ಮಾಡಲಾರ ಎಂಬ ಕಾರಣದಿಂದ ಅಗ್ನಿ ಕೃಷ್ಣನನ್ನು ಯಾಚಿಸಿದ್ದ.

ವಿ: ೧) ಅರ್ಜುನನೊಬ್ಬನನ್ನೇ ಬೇಡದೇ ಕೃಷ್ಣನನ್ನೂ ಅಗ್ನಿ ಪ್ರಾರ್ಥಿಸಲು ಅರ್ಜುನ ತನ್ನ ಮೂಲರೂಪವಾದ ಇಂದ್ರನೊಂದಿಗೆ ಕೃಷ್ಣನ ಅಪ್ಪಣೆಯಿಲ್ಲದೇ ಹೋರಾಡಲಾರ ಎಂಬ ತಿಳುವಳಿಕೆ ಕಾರಣವಾಗಿತ್ತು ಎಂದರ್ಥ.

೨) ಅರ್ಜುನ ಸ್ವತಃ ಇಂದ್ರನಾಗಿದ್ದರಿಂದ ತಾನು ನೀಡಿದ್ದ ವರಕ್ಕೆ ಪ್ರತಿಯಾಗಿ ತಾನು ವರ್ತಿಸಲಾರ ಎಂದು ಅಗ್ನಿ ಯೋಚಿಸಿದ್ದ.

ಅಗ್ನಿಯಿಂದ ಕೃಷ್ಣನಿಗೆ ಚಕ್ರ ಸಮರ್ಪಣೆ

ನ ಚಾಯುಕ್ತಃ ಕೇಶವೇನೈಷ ಶಕ್ತ
ಇತಿ ಸ್ಮ ಕೃಷ್ಣಾದಾಪ ಭೂಯೋಽಪ್ಯನುಜ್ಞಾಮ್ ।
ಯಯೌ ಸಮೀಪಂ ಚ ಹರೇರ್ಬದರ್ಯಾ-
ಮಾದಾಯ ಚಕ್ರಂ ಚಾಮುತಃ ಕೇಶವೇಽದಾತ್ ॥ ೨೨೩ ॥

11/12/09

---

೨೨೨. ನಹಿ ಸ್ವದತ್ತಸ್ಯ ಪುನಃ ಸ ವೈರಮಿತ್ಯತ್ರ ತಾತ್ಕಾಲಿಕವೈರಕರಣೇಽಪಿ ಅರ್ಜುನದತ್ತಂ ಸ್ವದತ್ತಮೇವೇತಿ ವಿಚಾರ್ಯ ಪಶ್ಚಾದ್ವೈರಂ ನ ಕರಿಷ್ಯತೀತಿ ಭಾವೇನ ಪುನರಿತ್ಯುಕ್ತಮ್ ॥ – (ವಾ.)

೨೨೩. ತರ್ಹಿ ಪಾರ್ಥಪ್ರತಿಜ್ಞಾನಂತರಂ ಪುನಃ ಕೃಷ್ಣಪ್ರಾರ್ಥನಂ ಭಾರತಾದೌ ಕಥಮಿತ್ಯತಸ್ತಸ್ಯ ತಾತ್ಪರ್ಯಮಾಹ ನ ಚಾಯುಕ್ತಇತಿ। – (ವ.)

೨೨೩. ಕೃಷ್ಣಸ್ಯಾರ್ಜುನಪ್ರೇರಣಾರ್ಥಂ ಪೂರ್ವಂ ಯಾಚಿತತ್ವಾತ್, ಪುನಃ ಸಹಾಯಕರಣಾರ್ಥಂ ಯಾಚನಾತ್ ಭೂಯ ಇತ್ಯುಕ್ತಮ್ । – (ಜ.)

೨೨೩. ಚಕ್ರಮಿತಿ । ಕಥಮುತ್ಪನ್ನಮಿತ್ಯುಕ್ತೇ ತತ್ರ ಪ್ರಮಾಣಮ್ –

ತ್ವಷ್ಟೈವ ತೇಜಸಾ ತೇನ ವಿಷ್ಣುಚಕ್ರಂ ಪ್ರಕಲ್ಪಯತ್ ।
ತ್ರಿಶೂಲಂ ಚೈವ ಶರ್ವಸ್ಯ ಶಿಬಿಕಾಂ ಧನದಸ್ಯ ಚ ॥
ಶಕ್ತಿಂ ಗುಹಸ್ಯ ದೇವಾನಾಮನ್ಯೇಷಾಂ ಚ ಯಥಾ ಯಥಾ ।
ತತ್ಸರ್ವಂ ತೇಜಸಾ ತೇನ ವಿಶ್ವಕರ್ಮಾ ವ್ಯವರ್ಧಯತ್ ॥' ಇತಿ ವಿಷ್ಣುಪುರಾಣೇ । – (ಮ.)

ಅ: ಕೃಷ್ಣನ ಸಹಾಯವಿಲ್ಲದಿದ್ದರೆ ಅರ್ಜುನ ಈ ಕಾರ್ಯದಲ್ಲಿ ಸಮರ್ಥನಾಗಲಾರ ಎಂಬ ಕಾರಣದಿಂದಾಗಿಯೂ ಅಗ್ನಿ ಕೃಷ್ಣನಿಂದಲೂ ಅನುಜ್ಞೆಯನ್ನು ಪಡೆದ. ಅನಂತರ ಬದರಿಯಲ್ಲಿದ್ದ ಶ್ರೀಹರಿಯ ಸಮೀಪಕ್ಕೆ ತೆರಳಿ ಅವನಿಂದ ಚಕ್ರವನ್ನು ಪಡೆದು ಅದನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದ.

ವಿ: ೧) ಕೃಷ್ಣನ ಪ್ರೇರಣೆ ಹಾಗೂ ಸಹಾಯ ಇಲ್ಲವಾದರೆ ಅರ್ಜುನ ಇಂದ್ರನನ್ನು ಎದುರಿಸುವ ಕಾರ್ಯದಲ್ಲಿ ಶಕ್ತನಾಗಲಾರ ಎಂಬುದು ಅಗ್ನಿ ಅವರಿಬ್ಬರನ್ನು ಕೇಳಲು ಮತ್ತೊಂದು ಕಾರಣ.

೨) ಅರ್ಜುನ ಅಪೇಕ್ಷಿಸಿದ್ದಂತೆ ಧನುಸ್ಸು ಹಾಗೂ ರಥಗಳನ್ನು ತರಲು ಹೊರಟ ಅಗ್ನಿ ಮೊದಲು ಬದರಿಗೆ ತೆರಳಿ ಅಲ್ಲಿಯ ನಾರಾಯಣ ದೇವರಿಂದ ಚಕ್ರವನ್ನು ಪಡೆದು ಅದನ್ನು ಕೃಷ್ಣನಿಗೆ ಸಮರ್ಪಿಸಿದ. ಶ್ರೀಹರಿಗೇ ಮೊದಲ ಕಾಣಿಕೆ ಎಂಬುದು ಇದರ ಭಾವ.

ಚಕ್ರಂ ಗೋಮಂತೇ ಕೃಷ್ಣಮಾಯಾದ್ಧಿ ಪೂರ್ವಂ
ಭಕ್ತ್ಯಾ ವಹ್ನಿಃ ಕೇಶವೇऽದಾತ್ ಪುನಸ್ತತ್ ।
ಚಕ್ರಂ ಚ ವಿಷ್ಣೋರ್ಬಹುಧಾ ವ್ಯವಸ್ಥಿತಂ
ತದಗ್ನಿದತ್ತಂ ಪ್ರಾಕ್ತನಂ ಚೈಕಧಾऽऽಸೀತ್ ॥ ೨೨೪ ॥

ಅ: ಚಕ್ರ ಹಿಂದೆ ಗೋಮಂತದಲ್ಲಿ ಕೃಷ್ಣನ ಬಳಿಗೆ ಬಂದಿದ್ದಿತು, ಅದನ್ನೇ ಅಗ್ನಿ ಭಕ್ತಿಯಿಂದಾಗಿ ಕೃಷ್ಣನಿಗೆ ಮರಳಿ ನೀಡಿದ. ವಿಷ್ಣುವಿನ ಚಕ್ರವು ಬಹುರೂಪದಲ್ಲಿ ಇರುವಂತಹುದು. ಅಗ್ನಿ ಈಗ ಕೊಟ್ಟದ್ದು ಮತ್ತು ಹಿಂದಿನದು ಎರಡು ಒಂದೇ ಆದುದು.

ವಿ: ಗೋಮಂತ ಪರ್ವತದಲ್ಲಿ ಕೃಷ್ಣ ರಾಮರು ನೆಲೆಸಿದ್ದಾಗ ಚಕ್ರಾದಿ ಆಯುಧಗಳು ಇಳಿದು ಬಂದ ವಿವರ ಈಗಾಗಲೇ ಬಂದಿದೆ (೧೬/೧೦). ಅದೇ ಚಕ್ರವನ್ನೇ ಅಗ್ನಿ ಈಗ ಕೃಷ್ಣನಿಗೆ ನೀಡಿದ್ದು ಎಂದರ್ಥ. ಸೀತೆಯ ಆಭರಣಗಳ ಬಹುರೂಪ ಇಂತಹ ಮತ್ತೊಂದು ಪ್ರಸಂಗ (೭/೧೩).

ಅರ್ಜುನನಿಗೆ ಗಾಂಡೀವಾದಿ ಸಮರ್ಪಣೆ

ಧನುಶ್ಚ ಗಾಂಡೀವಮಥಾಬ್ಜಜಸ್ಯ
ಕರೋತಿ ಯೇನಾಖಿಲಸಂಯತಿಂ ಸಃ ।
ಅಂಶೇನ ದತ್ತಂ ತದುಮಾಪತೇಶ್ಚ
ಶಕ್ರಸ್ಯ ಸೋಮಸ್ಯ ಜಲೇಶಿತುಶ್ಚ ॥ ೨೨೫ ॥

ಅ: ಗಾಂಡೀವ ಧನುಸ್ಸನ್ನು ಅಗ್ನಿ ಅರ್ಜುನನಿಗೆ ನೀಡಿದ, ಅದು ಬ್ರಹ್ಮದೇವರ ಧನುಸ್ಸು. ಅದರಿಂದ ಅವರು ಸಕಲವನ್ನೂ ನಿಗ್ರಹಿಸುವರು. ಅದನ್ನು ಒಂದಂಶದಿಂದ ಅವರು ಶಿವನಿಗೆ ನೀಡಿದ್ದರು. ಹಾಗೆಯೇ ಇಂದ್ರನಿಗೂ, ಚಂದ್ರನಿಗೂ, ವರುಣನಿಗೂ ನೀಡಿದ್ದರು.

ವಿ: ೧) ಶಾರ್ಙ್ಗ ವಿಷ್ಣುಧನುಸ್ಸು, ಪಿನಾಕ ಶಿವಧನುಸ್ಸು, ಗಾಂಡೀವ ಬ್ರಹ್ಮ ಧನುಸ್ಸು :

ತಚ್ಚ ದಿವ್ಯಂ ಧನುಃ ಶ್ರೇಷ್ಠಂ ಬ್ರಹ್ಮಣಾ ನಿರ್ಮಿತಂ ಪುರಾ ।
ಗಾಂಡೀವಮುಪಸಂಗೃಹ್ಯ ಬಭೂವ ಮುದಿತೋಽರ್ಜುನಃ॥

–ಭಾರತ(ಆದಿ.೨೨೪/೧೯)

೨) ಹೀಗೆ ಗಾಂಡೀವ ಬ್ರಹ್ಮ ದೇವರ ಧನುಸ್ಸಾಗಿದ್ದರಿಂದಲೇ ಅದನ್ನು ಹಿಡಿದ ಅರ್ಜುನ ಬಗೆಬಗೆಯ ಅಪೂರ್ವ ಯಶಸ್ಸನ್ನು ಗಳಿಸಲು ಸಾಧ್ಯವಾಯಿತು.

ಗಾಂಡೀವ ಬ್ರಹ್ಮಧನುಸ್ಸು

ತೇನೈವ ತೇ ಜಿಗ್ಯುರಥೋ ಜಗತ್ತ್ರಯಂ
ಪ್ರಸಾದತಸ್ತೇ ಕ್ರಮಶೋಽಬ್ಜಯೋನೇಃ ।
ಅನನ್ಯಧಾರ್ಯಂ ವಿಜಯಾವಹಂ ಚ
ಭಾರೇಣ ಲಕ್ಷಸ್ಯ ಸಮಂ ಶುಭಾವಹಮ್ ॥ ೨೨೬ ॥

---

೨೨೫. ಅಂಶೇನ ದತ್ತಮಿತ್ಯತ್ರ ತತ್= ಬ್ರಹ್ಮಕರಸ್ಥಗಾಂಡೀವಂ ಧನುಃ ಅಂಶೇನ= ಏಕಾಂಶೇನ ಉಮಾಪತೇರ್ದತ್ತಮಿತಿ ಯೋಜನಾ। ದೇವಾಯುಧಾನಾಂ ಬಹುರೂಪಗ್ರಹಣಶಕ್ತರಪ್ಯಸ್ತೀತಿ ಜ್ಞೇಯಮ್ ॥ – (ವಾ.)

೨೨೫. ನನು ಗಾಂಡೀವಂ ವಾರುಣಂ ಅರ್ಜುನೇಽಗ್ನಿರದಾದಿತಿ ಗ್ರಂಥಾಂತರೇ ಉಕ್ತಮ್ । ಕಥಮಬ್ಜಜಸ್ಯ ತದಿತ್ಯತ ಆಹ – ಅಂಶೇನೇತಿ । ಪ್ರಸಾದಸ್ತ್ವಿತಿ । ಕ್ರಮಶೋ ವಿದ್ಯಮಾನಾತ್ ಪ್ರಸಾದತಃ ಕ್ರಮಶೋ ಜಗತ್ತ್ರಯಂ ಜಿಗ್ಯುರಿತ್ಯರ್ಥಃ। – (ತಾ.)

೨೨೬. 'ಭಾರೋ ನಾಮ ವಿಂಶತಿತುಲಾ ಗುಂಜಾಃ ಪಂಚಾದ್ಯಮಾಷಕಾಃ।
ತೇ ಷೋಡಶಾಕ್ಷಃ ಕರ್ಷೋಽಸ್ತ್ರೀ ಪಲಂ ಕರ್ಷ ಚತುಷ್ಪಯಮ್ ।
ತುಲಾಃ ಸ್ತ್ರಿಯಾಂ ಪಲಶತಂ ಭಾರಃ ಸ್ಯಾದ್ವಿಂಶತಿಸ್ತುಲಾ' ಇತ್ಯಮರಃ। – (ಜ.)

೨೨೬. ದ್ವಾತ್ರಿಂಶತ್ಸಹಸ್ರನಿಷ್ಕಾತ್ಮಕಭಾರಲಕ್ಷೇಣ ಸಮಭಾರಮಿತ್ಯರ್ಥಃ। – (ವ.)

೨೨೬. ಭಾರೋ ನಾಮ ವಿಂಶತಿತುಲಾ । ಅತ ಏವ ಅನನ್ಯಧಾರ್ಯಂ ಧನುರಿತಿ ಶೇಷಃ। – (ತಾ.)

೨೨೬. ಪ್ರಸಾದಸ್ತು ಕ್ರಮಶೋ... – (ಪಾಠಾಂತರ)

ಅ: ಆ ಧನುಸ್ಸಿನಿಂದಲೇ ಅವರೆಲ್ಲ ಮೂರು ಲೋಕಗಳನ್ನೂ ಬ್ರಹ್ಮನ ಅನುಗ್ರಹದಿಂದ ಕ್ರಮವಾಗಿ ಗೆದ್ದರು. ಅದನ್ನು ಧರಿಸಲು ಇತರರಿಗೆ ಆಗದು. ಅದು ವಿಜಯ ನೀಡುವಂತಹುದು, ಲಕ್ಷ ಭಾರದಷ್ಟು ಭಾರ ಹೊಂದಿದ್ದುದು, ಶುಭಕರವಾದದ್ದು.

ವಿ: ಶಿವಾದಿಗಳ ಯಶಸ್ಸಿಗೆ ಈ ಗಾಂಡೀವ ಧನುಸ್ಸು ಒಂದು ಪ್ರಮುಖ ಕಾರಣ ಎಂದರ್ಥ. ಇತರರಿಗೆ ಧರಿಸಲಾಗದ ಅದನ್ನು ಅವರಿಂದ ಧರಿಸಲು ಸಾಧ್ಯವಾದದ್ದು ಬ್ರಹ್ಮ ದೇವರ ಅನುಗ್ರಹದಿಂದ.

ಶ್ರೀರಾಮನ ರಥ

ರಥಂ ಚ ಶುಭ್ರಾಶ್ವಯುತಂ ಜಯಾವಹಂ
ತೂಣೌ ತಥಾ ಚಾಕ್ಷಯಸಾಯಕೌ ಶುಭೌ ।
ಧ್ವಜಂ ಚ ರಾಮಸ್ಯ ಹನೂಮದಂಕ-
ಮಾದಾಯ ಸರ್ವಂ ವರುಣಾದರ್ಜುನೇऽದಾತ್ ॥ ೨೨೭ ॥

ಅ: ಶ್ವೇತಾಶ್ವಗಳಿಂದ ಕೂಡಿದ್ದ ಶುಭಕರವಾದ ರಥ, ಅಕ್ಷಯ ಬಾಣಗಳನ್ನು ಹೊಂದಿದ್ದ ಶುಭಕರವಾದ ಎರಡು ಬತ್ತಳಿಕೆಗಳು ಮತ್ತು ಹನುಮಂತನ ಚಿಹ್ನೆಯಿಂದ ಕೂಡಿದ್ದ ರಾಮನ ಧ್ವಜ – ಇವೆಲ್ಲವನ್ನೂ ಅಗ್ನಿ ವರುಣನ ಬಳಿಯಿಂದ ತಂದು ಅರ್ಜುನನಿಗೆ ನೀಡಿದ.

ವಿ: ೧) ಅದು ರಾಮರಾವಣರ ಯುದ್ಧದಲ್ಲಿ ಇಂದ್ರದೇವರು ಶ್ರೀರಾಮದೇವರಿಗೆ ಸಮರ್ಪಿಸಿದ ರಥ ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

೩) ಆ ರಥಕ್ಕೆ ಶ್ವೇತಾಶ್ವಗಳು ಹೂಡಲ್ಪಟ್ಟಿದ್ದರಿಂದ ಅದರಲ್ಲಿ ಕುಳಿತ ಅರ್ಜುನನಿಗೆ ಶ್ವೇತವಾಹನ ಎಂಬ ಹೆಸರು ಉಂಟಾಯಿತು '(ತತಃ ಶ್ವೇತಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ' – ಗೀತಾ).' ಅದು ಅವನ ದಶ ನಾಮಗಳಲ್ಲಿ ಒಂದು :

ಅರ್ಜುನಃ ಫಲ್ಗುನೋ ಜಿಷ್ಣುಃ ಕಿರೀಟೀ ಶ್ವೇತವಾಹನಃ ।
ಬೀಭತ್ಸುರ್ವಿಜಯಃ ಕೃಷ್ಣಿ ಸವ್ಯಸಾಚೀ ಧನಂಜಯಃ ॥ – ಭಾರತ (ವಿರಾಟ. ೪೪/೯)

---

೨೨೭. ಧ್ವಜಂ ಚ ರಾಮಸ್ಯ ಹನೂಮದಂಕಮಿತ್ಯತ್ರ ರಾಮಸ್ಯ ಯುದ್ಧಕಾಲೇ ಹನೂಮದಂಕಂ ಯದಾ ರಾಮಃ ಇಂದ್ರದತ್ತಮಿಮಮೇವ ರಥಮಾರುಹ್ಯ ರಾವಣಂ ಪ್ರತಿ ಯುದ್ಧಂ ಚಕ್ರೇ ತದಾ ಹನುಮಾನ್ ಧ್ವಜಾಗ್ರೇ ಅಂಕತಯಾ ಸ್ಥಿತಃ। ಸ ಏವ ರಥಃ ಅರ್ಜುನಾರ್ಥಮಿಂದ್ರೇಣ ವರುಣವಶೇ ದತ್ತೋऽಭೂದಿತಿ ಭಾವಃ ॥ – (ವಾ.)

ಧ್ವಜದಲ್ಲಿ ಹನುಮಂತ

ವಿಶೇಷತೋ ಧ್ವಜಸಂಸ್ಥೇ ಹನೂಮ-
ತ್ಯಜೇಯತಾ ಸ್ಯಾಜ್ಜಯರೂಪೋ ಯತೋಽಸೌ ।
ಸರ್ವಂ ಚ ತದ್ದಿವ್ಯಮಭೇದ್ಯಮೇವ
ವಿದ್ಯುತ್ಪ್ರಭಾ ಜ್ಯಾ ಚ ಗಾಂಡೀವಸಂಸ್ಥಾ ॥ ೨೨೮ ॥

ಅ: ಹನುಮಂತ ಧ್ವಜದಲ್ಲಿದ್ದರೆ ವಿಶೇಷವಾಗಿ ಅಜೇಯತ್ವ ಲಭಿಸುವುದು. ಅವನು ಜಯಸ್ವರೂಪನಲ್ಲವೇ. ಅವೆಲ್ಲವೂ ದಿವ್ಯವೂ ಅಭೇದ್ಯವೂ ಆದುದು. ಗಾಂಡೀವಕ್ಕೆ ಇದ್ದ ಹೆದೆಯು ಮಿಂಚಿನಂಥ ಪ್ರಭೆಯನ್ನು ಹೊಂದಿದ್ದಂತಹುದು.

ವಿ: ಗಾಂಡೀವಾದಿಗಳೆಲ್ಲವೂ ಅಭೇದ್ಯ, ಗಾಂಡೀವದ ಹೆದೆಯು ಅಚ್ಛೇದ್ಯವಲ್ಲವಾದರೂ ವಿದ್ಯುತ್ತಿನ ಕಾಂತಿಯಿಂದ ಕೂಡಿದ್ದು ಪುನಃ ಬೆಳೆಯುವಂತಹದ್ದು ಎಂಬ ವಿವರ ಮುಂದೆ ಬಂದಿದೆ (ಅ.೨೭, ಶ್ಲೋ. ೫೪).

ಗಾಂಡೀವಮಪ್ಯಾಸ ಕೃಷ್ಣಪ್ರಸಾದಾ-
ಚ್ಛಕ್ಯಂ ಧರ್ತುಂ ಪಾಂಡವಸ್ಯಾಪ್ಯಧಾರ್ಯಮ್ ।
ದೇವೈಶ್ಚ ತೈರ್ಬ್ರಹ್ಮವರಾದ್ಧೃತಂ ತ-
ದ್ಬ್ರಹ್ಮೈವ ಸಾಕ್ಷಾತ್ ಪ್ರಭುರಸ್ಯ ಧಾರಣೇ ॥ ೨೨೯ ॥

ಅ: ಕೃಷ್ಣನ ಅನುಗ್ರಹದಿಂದಾಗಿ ಅರ್ಜುನನಿಗೆ ಅಧಾರ್ಯವಾದ ಆ ಧನುಸ್ಸನ್ನು ಧರಿಸಲು ಸಾಧ್ಯವಾಯಿತು. ಶಿವಾದಿ ದೇವತೆಗಳಿಂದ ಅದು ಬ್ರಹ್ಮವರದಿಂದಾಗಿ ಧರಿಸಲು ಸಾಧ್ಯವಾಗಿತ್ತು. ಅದನ್ನು ಸಾಕ್ಷಾತ್ ಧರಿಸುವ ಸಮರ್ಥ ಬ್ರಹ್ಮ ದೇವರದು ಮಾತ್ರ.

ವಿ: ಅರ್ಜುನನಿಗೆ ಆ ಗಾಂಡೀವವನ್ನು ಎತ್ತಲು ಸಾಧ್ಯವಾಗಿದ್ದು ಕೃಷ್ಣನ ಅನುಗ್ರಹದಿಂದ ಮಾತ್ರ. ಅಂತಹ ವಿಶೇಷಾನುಗ್ರಹ ಅವನಿಗಿದ್ದದ್ದು ಕೃಷ್ಣ ಪರಂಧಾಮಕ್ಕೆ ತೆರಳುವ ವರೆಗೆ. ಬಳಿಕ ಅವನಿಗೆ ಅದನ್ನು ಧರಿಸಲು ಕಷ್ಟಸಾಧ್ಯವಾದ ವಿವರ ಮುಂದೆ ಬಂದಿದೆ (ಅ. ೩೨, ಶ್ಲೋ. ೪೬).

---

೨೨೮. ಅಭೇದ್ಯತ್ವಂ ಚ ಜ್ಯಾಂ ವರ್ಜಯಿತ್ವೇತಿ ಜ್ಞಾತವ್ಯಂ। ಗುರೋಃ ಸುತಃ ಚ ಜ್ಯಾಂ ಯುಧಿ ಗಾಂಡಿವಸ್ಯೇತಿ ವಕ್ಷ್ಯ ಮಾಣತ್ವಾತ್। – (ಜ.)

೨೨೮. ಜ್ಯಾಂ ವರ್ಜಯಿತ್ವಾ । ತತ್ಸರ್ವಮಭೇದ್ಯಮ್ । ದ್ರೌಣಿನಾ ಜ್ಯಾಚ್ಛೇದಸ್ಯ ಕೃತ್ಯಮಾಣತ್ವಾತ್ । – (ತಾ.)

ಇಂದ್ರಸ್ಯ ದತ್ತಶ್ಚ ವರಃ ಸ್ವಯಂಭುವಾ
ತೇನಾಪಿ ಪಾರ್ಥಸ್ಯ ಬಭೂವ ಧಾರ್ಯಮ್ ।
ಇಂದ್ರೋ ಹ್ಯಸೌ ಫಲ್ಗುನತ್ವೇನ ಜಾತ-
ಸ್ತತಃ ಸೋಽಸ್ತ್ರೈಃ ಶರಶಾಲಾಂ ಚಕಾರ ॥ ೨೩೦ ॥

ಅ: ಬ್ರಹ್ಮದೇವರು ಇಂದ್ರನಿಗೆ ವರ ನೀಡಿದ್ದರು, ಅದರಿಂದಾಗಿಯೂ ಅರ್ಜುನನಿಗೆ ಅದನ್ನು ಧರಿಸಲು ಸಾಧ್ಯವಾಯಿತು. ಏಕೆಂದರೆ ಇಂದ್ರನೇ ಅರ್ಜುನನಾಗಿ ಹುಟ್ಟಿದ್ದ; ಅರ್ಜುನ ಅಸ್ತ್ರಗಳಿಂದ ಒಂದು ಶರಶಾಲೆಯನ್ನು ನಿರ್ಮಿಸಿದ.

ಎ: ೧) ಕೃಷ್ಣ ಪ್ರಸಾದದಂತೆ ಬ್ರಹ್ಮದೇವರ ವರದಿಂದಾಗಿಯೂ ಅರ್ಜುನನಿಗೆ ಗಾಂಡೀವ ಧಾರಣ ಸಾಧ್ಯವಾಯಿತು. ಬ್ರಹ್ಮದೇವರು ಅದನ್ನು ಎತ್ತಲು ಸಾಧ್ಯವಾಗುವಂತೆ ಇಂದ್ರದೇವರಿಗೆ ನೀಡಿದ್ದ ವರ ಅರ್ಜುನ ಇಂದ್ರಾವತಾರನಾದ್ದರಿಂದ ಅವನಿಗೂ ಅದು ವರವೇ ಆಯಿತು ಎಂದು ತಿಳಿಯಬೇಕು.

೨) ಅಗ್ನಿಯ ಬಯಕೆಯಂತೆ ಇಡೀ ಖಾಂಡವವನವನ್ನು ಅದರಲ್ಲಿರುವ ಸಮಸ್ತ ಮರ, ಗಿಡ ಹಾಗೂ ಪ್ರಾಣಿಗಳ ಸಮೇತ ಅವನಿಗೆ ತಿನ್ನಲು ಸಾಧ್ಯವಾಗಬೇಕು. ಅದಕ್ಕೆಂದೇ ಅರ್ಜುನ ಅದ-ರೊಳಗಿನಿಂದ ಯಾರೂ ಹೊರಕ್ಕೆ ತಪ್ಪಿಸಿಕೊಂಡು ಹೋಗದಂತೆ ಎಲ್ಲೆಡೆಗಳಿಂದಲೂ ಅಸ್ತ್ರಗಳಿಂದ ಅಭಿಮಂತ್ರಿತವಾದ ಬಾಣಗಳಿಂದ ಬಲೆಯಂತಹ ಶಾಲೆಯನ್ನು ನಿರ್ಮಿಸಿದ ಎಂದರ್ಥ.

೩) ಮೇಲಿನಿಂದ ಇಂದ್ರ ಸುರಿಸಿದ ಮಳೆಯ ನೀರು ಒಳಗೆ ನುಗ್ಗಿ ಅಗ್ನಿಗೆ ಅಡೆಚಣೆಯಾಗ-ದಿರಲಿ ಎಂಬ ದೃಷ್ಟಿಯಿಂದ ಅಲ್ಲಿಯೂ ಶರಗಳ ಛಾವಣಿಯನ್ನು ನಿರ್ಮಿಸಿದ್ದ ಎಂದು ತಿಳಿಯಬೇಕು.

೪) ಪರಶುರಾಮರು ನೀಡಿದ ಅಸ್ತ್ರಕೌಶಲದಿಂದ' ಭೀಷ್ಮ ಗಂಗೆಗೆ ಆಣೆಕಟ್ಟನ್ನು ನಿರ್ಮಿಸಿದ್ದಂತೆ ಅವರ ಮೊಮ್ಮಗನಾದ ಅರ್ಜುನ ಗಾಂಡೀವದ ಸಹಾಯದಿಂದ ಖಾಂಡವವನಕ್ಕೇ ಅಂತಹ ಅಪೂರ್ವವಾದ ಶರಶಾಲೆಯನ್ನು ನಿರ್ಮಿಸಿದ. ಅರ್ಜುನ ಭೀಷ್ಮರಿಗೆ ಮೊಮ್ಮಗ; ದ್ರೋಣರಿಗೆ ಶಿಷ್ಯನಾಗಿ ಪರಶುರಾಮರಿಗೆ ಪ್ರಶಿಷ್ಯ.

ಖಾಂಡವವನ ದಹನ

ಆಯೋಜನದ್ವಾದಶಕಾಭಿವಿಸ್ತೃತಂ
ಪುರಂ ಚಕಾರಾಶು ಪುರಂದರಾತ್ಮಜಃ ।
ಹುತಾಶನೋಽಪ್ಯಾಶು ವನಂ ಪ್ರಗೃಹ್ಯ
ಪ್ರಭಕ್ಷಯಾಮಾಸ ಸಮುದ್ಧತಾರ್ಚಿಃ ॥ ೨೩೧ ॥

ಅ: ಹನ್ನೆರಡು ಯೋಜನದಷ್ಟು ವಿಶಾಲವಾದ ಬಾಣಗಳ ಬಲೆಯನ್ನು ಅರ್ಜುನ ಬೇಗನೆ ನಿರ್ಮಿಸಿದ. ಅಗ್ನಿಯೂ ಸಹ ಬೇಗನೇ ಆ ಕಾಡಿಗೆ ಹೊತ್ತಿಕೊಂಡು ಪ್ರಜ್ವಲಿಸುವ ಜ್ವಾಲೆಗಳಿಂದ ಅದನ್ನು ಸುಡತೊಡಗಿದ.

ಪ್ರಭಕ್ಷಮಾಣಂ ನಿಜಕಕ್ಷಮೀಕ್ಷ್ಯ
ಸಂಧುಕ್ಷಯಾಮಾಸ ತದಾऽऽಶುಶುಕ್ಷಣಿಮ್ ।
ಅಕ್ಷೋಪಮಾಭಿರ್ಬಹುಳೇಕ್ಷಣೋऽಂಭಸಾಂ
ಧಾರಾಭಿರಾಕ್ಷುಬ್ಧಮನಾಃ ಕ್ಷಯಾಯ ॥ ೨೩೨ ॥

ಅ: ತನ್ನ ವನ ಬೆಂಕಿಯಿಂದ ಸುಡುತ್ತಿದ್ದುದನ್ನು ಕಂಡು ಆಗ ಸಹಸ್ರಾಕ್ಷನಾದ ಇಂದ್ರ ಮನಸ್ಸಿನಲ್ಲಿ ಕ್ಷೋಭೆಗೊಂಡು ರಥದ ಅಚ್ಚಿನಷ್ಟು ಗಾತ್ರದ ಜಲಧಾರೆಗಳಿಂದ ಅಗ್ನಿಯನ್ನು ನಂದಿಸಲು ಪ್ರಯತ್ನಿಸಿದ.

ವಿ: ಇಂದ್ರನಿಗೆ ವಾಸ್ತವವಾಗಿ ಮನಃಕ್ಷೋಭೆಯೇನೂ ಉಂಟಾಗಲಿಲ್ಲ, ಹಾಗೆ ನಟಿಸಿದ ಎಂಬ ವಿಚಾರ ಮುಂದೆ ಬಂದಿದೆ (ಶ್ಲೋ. ೨೩೪).

ಇಂದ್ರಾರ್ಜುನರ ಯುದ್ಧ

ಅಸ್ತ್ರೈಸ್ತು ವೃಷ್ಟಿಂ ವಿನಿವಾರ್ಯ ಕೃಷ್ಣಃ
ಪಾರ್ಥಶ್ಚ ಶಕ್ರಂ ಸುರಪೂಗಯುಕ್ತಮ್ ।
ಅಯುಧ್ಯತಾಂ[1]ಸೋऽಪಿ ಪರಾಜಿತೋऽಭೂತ್
ಪ್ರೀತಶ್ಚ ದೃಷ್ಟ್ವಾ[2] ಬಲಮಾತ್ಮಜಸ್ಯ ॥ ೨೩೩ ॥

ಅ: ಕೃಷ್ಣ ಮತ್ತು ಅರ್ಜುನ ಇಬ್ಬರೂ ಅಸ್ತ್ರಗಳಿಂದ ಮಳೆಯನ್ನು ತಡೆದು ಸುರಸಮೂಹದಿಂದ ಕೂಡಿದ ಇಂದ್ರನನ್ನು ಎದುರಿಸಿದರು. ಅವನು ಪರಾಜಿತನಾದ. ತನ್ನ ಪುತ್ರನಾದ ಅರ್ಜುನನ ಬಲವನ್ನು ಕಂಡು ಸಂತುಷ್ಟನಾದ.

---

೨೩೨. ಸಂಧುಕ್ಷಯಾಮಾಸ ತದಾऽऽಶುಶುಕ್ಷಣಿಮಿತ್ಯತ್ರ ಸಂಧುಕ್ಷಯಾಮಾಸ= ಕ್ಲೇಶಯಾಮಾಸ। ಧುಕ್ಷ ಧಿಕ್ಷ ಸಂದೀಪಕ್ಲೇಶನಜೀವನೇಷ್ವಿತಿ ಧಾತುಃ। ಅಕ್ಷೋಪಮಾಭಿಃ= ರಥಚಕ್ರವಾರಕದಾರೂಪಮಾಭಿಃ ॥ – (ವಾ.)

೨೩೨. ಧಾತೂನಾಮನೇಕಾರ್ಥತ್ವಾತ್ ಸಂಧುಕ್ಷಯಾಮಾಸೇತ್ಯಸ್ಯ ಸಂಸೇವಯಾಮಾಸೇತ್ಯರ್ಥ ಇತ್ಯಭ್ಯುಪಗಮಾತ್ । – (ಸ.)

೨) ಇಲ್ಲಿ ಅವರಿಬ್ಬರಿಗೂ ಇರುವುದು ನಾಮಸಾಮ್ಯವೇ ಹೊರತು ಸರ್ವಸಾಮ್ಯವಾಗಲೀ. ಅಭೇದವಾಗಲೀ ಅಲ್ಲ ಎಂಬುದನ್ನು ಗಮನಿಸಬೇಕು.

ಅನುಜ್ಞಾತಾಸ್ತೇ ಪ್ರಯಯುಃ ಕೇಶವೇನ
ಕ್ರೀಡಾರ್ಥಮಿಂದ್ರೋ ಯುಯುಧೇ ಹಿ ತತ್ರ
ಪ್ರೀತ್ಯಾ ಕೀರ್ತಿಂ ದಾತುಮಪ್ಯರ್ಜುನಸ್ಯ
ತತಸ್ತುಷ್ಟಃ ಸಹ ದೇವೈರ್ಯಯೌ ಸ್ವಃ ॥ ೨೩೭ ॥

ಅ: ಶ್ರೀಕೃಷ್ಣನ ಅನುಮತಿ ಪಡೆದು ಬ್ರಹ್ಮಾದಿ ದೇವತೆಗಳೆಲ್ಲ ತೆರಳಿದರು. ಇಂದ್ರನು ಅಲ್ಲಿ ಯುದ್ಧ ಮಾಡಿದ್ದು ಕ್ರೀಡೆಗೋಸ್ಕರ. ಅರ್ಜುನನಿಗೆ ಕೀರ್ತಿಯನ್ನು ನೀಡಬೇಕೆಂಬ ಪ್ರೀತಿಯಿಂದಲೂ ಹಾಗೆ ಮಾಡಿದ. ಬಳಿಕ ಸಂತುಷ್ಟನಾಗಿ ದೇವತೆಗಳೊಂದಿಗೆ ಸ್ವರ್ಗಕ್ಕೆ ತೆರಳಿದ.

ಖಾಂಡವ ವನದಲ್ಲಿ ಉಳಿದವರು

ದೈತ್ಯಾಶ್ಚ ನಾಗಾಶ್ಚ ಪಿಶಾಚಯಕ್ಷಾ
ಹತಾಶ್ಚ ಸರ್ವೇ ತದ್ವನಸ್ಥಾ ಹಿ ತಾಭ್ಯಾಮ್ ।
ಋತೇ ಚತುಃಪಕ್ಷಿಣಶ್ಚಾಶ್ವಸೇನಂ
ಮಯಂ ಚ ನಾನ್ಯತ್ ಕಿಂಚಿದಾಸಾತ್ರ ಮುಕ್ತಮ್ ॥ ೨೩೮ ॥

ಅ: ದೈತ್ಯರು, ನಾಗಗಳು, ಪಿಶಾಚರು, ಯಕ್ಷರು ಮೊದಲಾಗಿ ಆ ವನದಲ್ಲಿದ್ದ ಎಲ್ಲರೂ ಅವರಿಬ್ಬರಿಂದ ಹತರಾದರು; ನಾಲ್ಕು ಪಕ್ಷಿಗಳು, ಅಶ್ವಸೇನ ಮತ್ತು ಮಯ ಇವರನ್ನು ಹೊರತು ಅಲ್ಲಿದ್ದ ಬೇರಾವುದೂ ಉಳಿದುಕೊಳ್ಳಲಿಲ್ಲ.

---

* ಕೃಷ್ಣ ಇತ್ಯೇವ ದಶಮಂ ನಾಮ ಚಕ್ರೇ ಪಿತಾ ಮಮ ।
ಕೃಷ್ಣಾವದಾತಸ್ಯ ತತಃ ಪ್ರಿಯತ್ವಾದ್ಬಾಲಕಸ್ಯ ವೈ ॥ – (ವಿರಾಟ. ೪೪/೨೨)

೨೩೭. ಭಗವಾನಪಿ ತಿಗ್ಮಾಂಶುಃ ಸಮಿದ್ಧಃ ಖಾಂಡವಂ ತತಃ ।
ದದಾಹ ಸಹ ಕೃಷ್ಣಾಭ್ಯಾಂ ಜನಯನ್ ಜಗತೋ ಹಿತಮ್ ॥
ಪಾವಕಶ್ಚತದಾ ದಾವಂ ದಗ್ಧ್ವಾ ಸಮ್ಯಗವಕ್ಷಿಣಮ್ ।
ಅಹಾನಿ ಪಂಚ ಚೈಕಂ ಚ ವಿರರಾಮ ಸುತರ್ಪಿತಃ ॥ – ಭಾರತ (ಆದಿ. ೨೩೩/೫)

ವಿ: ೧) ನಾಲ್ಕು ಪಕ್ಷಿಗಳು ಜರಿತಾರಿ, ಸಾರಿಸೃಕ್ಷ, ಸ್ತಂಬಮಿತ್ರ ಮತ್ತು ದ್ರೋಣ ಎಂಬ ಪಕ್ಷಿಗಳು. ಅವರೆಲ್ಲ ಮಂದಪಾಲ ಎಂಬ ಮುನಿಯ ಪಕ್ಷಿರೂಪದ ಮಕ್ಕಳು. ಅವನು ಸಂತತಿ ಪಡೆದಿರಲಿಲ್ಲ ಎಂಬ ಕಾರಣದಿಂದ ಪಿತೃಲೋಕಕ್ಕೆ ತೆರಳಲು ಸಾಧ್ಯವಾಗಿರಲಿಲ್ಲ. ಮರಳಿ ಭೂಲೋಕಕ್ಕೆ ನಡೆದು ಬೇಗನೆ ಸಂತತಿ ಪಡೆಯಲೆಂದು ಜರಿತಾ ಎಂಬ ಹೆಣ್ಣು ಪಕ್ಷಿಯಲ್ಲಿ ಆ ನಾಲ್ವರು ಪಕ್ಷಿಗಳನ್ನು ಮಕ್ಕಳನ್ನಾಗಿ ಪಡೆದ.

೨) ತನ್ನ ಆ ಮಕ್ಕಳ ಕ್ಷೇಮಕ್ಕಾಗಿ ಅಗ್ನಿಯನ್ನು ಪ್ರಾರ್ಥಿಸಿ ವರ ಪಡೆದುಕೊಂಡಿದ್ದ:

ತಮಾಬ್ರವೀನ್ನಂದಪಾಲಃ ಪ್ರಾಂಜಲಿರ್ಹವ್ಯವಾಹನಮ್ ।
ಪ್ರದಹನ್ ಖಾಂಡವಂ ದಾವಂ ಮಮ ಪುತ್ರಾನ್ ವಿಸರ್ಜಯ ॥– (೩/೨೨೮/೩೩)

ಜರಿತಾರಿ ಮೊದಲಾದ ನಾಲ್ಕು ಪಕ್ಷಿಗಳು – ಅಶ್ವಸೇನ

ಅಯಮಗ್ನೇ ಜರಿತೇತ್ಯಾದಿಮಂತ್ರೈಃ
ಸ್ತುತ್ವಾ ವಹ್ನಿಂ ಪಕ್ಷಿಣೋ ನೈವ ದಗ್ಧಾಃ ।
ಸ ಚಾಶ್ವಸೇನಃ ಪುತ್ರಕಸ್ತಕ್ಷಕಸ್ಯ
ಮಾತ್ರಾ ಗ್ರಸ್ತಃ ಪ್ರಾತಿಲೋಮ್ಯೇನ ಕಂಠೇ ॥ ೨೩೯ ॥

ಅ: 'ಅಯಮಗ್ನೇ ಜರಿತಾ' ಇತ್ಯಾದಿ ವೇದಮಂತ್ರಗಳಿಂದ ವಹ್ನಿಯನ್ನು ಸ್ತುತಿಸಿ ಆ ಪಕ್ಷಿಗಳು ಸುಡದೇ ಉಳಿದವು. ಅಶ್ವಸೇನ ತಕ್ಷಕನ ಮಗ; ಅವನು ತಾಯಿಯಿಂದ ಹಿಂದು ಮುಂದಾಗಿ ನುಂಗಲ್ಪಟ್ಟಿದ್ದ.

ವಿ: ೧) ಜರಿತಾರಿ ಮೊದಲಾದ ನಾಲ್ಕು ಶಾರ್ಙ್ಗಕಪಕ್ಷಿಗಳು ಉಳಿದುಕೊಳ್ಳಲು ಅವು 'ಅಯಮಗ್ನೇ ಜರಿತಾ' ಎಂಬ ಅಗ್ನಿಸೂಕ್ತದಿಂದ ಅಗ್ನಿಯನ್ನು ಸ್ತುತಿಸಿದ್ದು ಕಾರಣವಾಯಿತು. ಅವು ಪಕ್ಷಿಗಳಾಗಿದ್ದರೂ ವೇದಾಧಿಕಾರ ಹೊಂದಿದ್ದವು ಎಂಬ ವಿವರ ಬ್ರಹ್ಮಸೂತ್ರಭಾಷ್ಯದಲ್ಲಿದೆ :

ತಿರ್ಯಗಾದೀನಾಂ ತದಭಾವಾದಭಾವಃ। ತೇಷಾಮಪಿ ಯತ್ರ ವಿಶಿಷ್ಟಬುದ್ಧ್ಯಾದಿಭಾವ-ಸ್ತತ್ರಾವಿರೋಧಃ। ನಿಷೇಧಾಭಾವಾತ್। ದೃಶ್ಯಂತೇ ಹಿ ಜರಿತಾರ್ಯಾದಯಃ ॥ – (೩/೩/೨೩)

---

೨೩೯. ತಸ್ಮಿನ್ ವನೇ ದಹ್ಯಮಾನೇ ಷಡಗ್ನಿರ್ನ ದದಾಹ ಚ ।
ಅಶ್ವಸೇನಂ ಮಯಂ ಚೈವ ಚತುರಃ ಶಾರ್ಙ್ಗಕಾಂಸ್ತಥಾ ॥ – ಭಾರತ (ಆದಿ. ೨೨೭/೪೭)

೨೩೯. 'ಅಯಮಗ್ನೇ ಜರಿತಾ' (ಋ. ೧೦/೧೪೨)ಇತ್ಯಾದಿ ಎಂಟು ಋಕ್ಕುಗಳ ಸೂಕ್ತ.

೨೩೯. ದೃಶ್ಯಂತೇ ಹಿ ಜರಿತಾರ್ಯಾದಯಃ ॥ – ಇತಿ ಬ್ರಹ್ಮಸೂತ್ರಭಾಷ್ಯ

೨೩೯. ತಸ್ಯ ಪೂರ್ವಂ ಶಿರೋಗ್ರಸ್ತಂ ಪುಚ್ಛಮಸ್ಯ ನಿಗೀರ್ಯ ಚ । – ಭಾರತ

ವಿ: ಆ ವೇಳೆಗೆ ಹೋರಾಟ ನಿಲ್ಲಿಸುವಂತೆ ಇಂದ್ರನಿಗೆ ಅಶರೀರವಾಣಿ ನುಡಿಯಿತು ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ :

ನಿವೃತ್ತೇಷ್ವಥ ದೇವೇಷು ವಾಗುವಾಚಾಶರರೀರಿಣೀ ॥
ಶತಕ್ರತುಂ ಸಮಾಭಾಷ್ಯ ಮಹಾಗಂಭೀರನಿಃಸ್ವನಾ ।
ನ ತೇ ಸಖಾ ಸನ್ನಿಹಿತಸ್ತಕ್ಷಕೋ ಭುಜಗೋತ್ತಮಃ ॥
ದಾಹಕಾಲೇ ಖಾಂಡವಸ್ಯ ಕುರುಕ್ಷೇತ್ರಂ ಗತೋ ಹ್ಯಸೌ ।
ನ ಚ ಶಕ್ಯೋ ಯುಧಾ ಜೇತುಂ ಕಥಂಚಿದಪಿ ವಾಸವ ॥
ವಾಸುದೇವಾರ್ಜುನಾವೇತೌ ಪೂರ್ವದೇವೌ ದಿವಿ ಶ್ರುತೌ ।....
ತಸ್ಮಾದಿತಃ ಸುರೈಃ ಸಾರ್ಧಂ ಗಂತುಮರ್ಹಸಿ ವಾಸವ ॥
ದಿಷ್ಟಂ ಚಾಪ್ಯನುಪಶ್ಯೈತತ್ ಖಾಂಡವಸ್ಯ ವಿನಾಶನಮ್ ॥
ಇತಿ ವಾಕ್ಯಮುಪಶ್ರುತ್ಯ ತಥ್ಯಮಿತ್ಯಮರೇಶ್ವರಃ ।
ಕ್ರೋಧಾಮರ್ಷೌ ಸಮುತ್ಸೃಜ್ಯ ಸಂಪ್ರತಸ್ಥೇ ದಿವಂ ತದಾ ॥

– (ಆದಿ.೨೨೭/೧೫-೧೮, ೨೧-೨೩)

ಸ್ನೇಹಂ ಚ ಕೃಷ್ಣಸ್ಯ ತದರ್ಜುನೇ ಧೃತಂ
ವಿಲೋಕ್ಯ ಪಾರ್ಥಸ್ಯ ಬಲಂ ಚ ತಾದೃಶಮ್ ।
ನಿವರ್ತ್ಯ ಮೇಘಾನತಿತುಷ್ಟಚಿತ್ತಃ
ಪ್ರಣಮ್ಯ ಕೃಷ್ಣಂ ತನಯಂ ಸಮಾಶ್ಲಿಷತ್ ॥ ೨೩೪ ॥

ಅ: ಅರ್ಜುನನ ಮೇಲೆ ಇದ್ದಂತಹ ಶ್ರೀಕೃಷ್ಣನ ಪ್ರೀತಿಯನ್ನು, ಅರ್ಜುನನ ಅಂತಹ ಬಲವನ್ನು ಕಂಡು ಅತ್ಯಂತ ಸಂತುಷ್ಟಮನಸ್ಕನಾಗಿ ಇಂದ್ರ ಮೇಘಗಳನ್ನು ಹಿಂತೆಗೆದುಕೊಂಡು ಕೃಷ್ಣನಿಗೆ ವಂದಿಸಿ ಮಗನಾದ ಅರ್ಜುನನನ್ನು ಆಲಿಂಗಿಸಿಕೊಂಡ.

ವಿ: ಗೋವರ್ಧನೋದ್ಧರಣ ಪ್ರಸಂಗದಲ್ಲಿ ಕೃಷ್ಣನ ಮೇಲೆ ಮಳೆ ಸುರಿಸುವ ಪ್ರಯತ್ನದಲ್ಲಿ ಪರಾಭವಗೊಂಡಿದ್ದ ಇಂದ್ರ ಇಲ್ಲಿ ಮತ್ತೊಮ್ಮೆ ಪರಾಭವಗೊಳ್ಳುವಂತಾಯಿತು. ಆದರೆ ಅಲ್ಲಿಯಂತೆ ಇಂದ್ರನಲ್ಲಿ ಅಸುರಾವೇಶಾದಿಗಳು ಇಲ್ಲದೆ ಕೇವಲ ಪ್ರೀತಿಯೇ ಇದ್ದದ್ದು ಇಲ್ಲಿಯ ವಿಶೇಷ.

---

೨೩೪. ಅನಂತೋಽಪಿ ಸಮಾಶ್ಲಿಷ್ಟತ್ । ಆಶ್ಲೇಷೇ ಸ್ವಸ್ಯಾಪಿ ಕೃಷ್ಣಬಾಹುಮಧ್ಯಗತತ್ವಪ್ರಾಪ್ತೇಃ । ದೇಶತೋಽನವಧಿಕಸ್ಯ ಬಾಹುಮಧ್ಯಗಮನರೂಪಪರಿಷ್ವಂಗೋ ಲೌಕಿಕ ಇತಿ ಭಾವಃ। – (ತಾ.)

ವಿಷ್ಣುಶ್ಚ ಶಕ್ರೇಣ ಸಹೇತ್ಯ ಕೇಶವಂ
ಸಮಾಶ್ಲಿಷನ್ನಿರ್ವಿಶೇಷೋಽಪ್ಯನಂತಃ ।
ಸ ಕೇವಲಂ ಕ್ರೀಡಮಾನಃ ಸಶಕ್ರಃ
ಸ್ಥಿತೋ ಹಿ ಪೂರ್ವಂ ಯುಯುಧೇ ನ ಕಿಂಚಿತ್ ॥ ೨೩೫ ॥

ಅ: ಅನಂತನಾದ ವಿಷ್ಣು ಇಂದ್ರನೊಂದಿಗೆಬಂದು ತಾನು ಅವತಾರಗಳಲ್ಲಿ ವಿಶೇಷರಹಿತನಾದರೂ ಕೃಷ್ಣನನ್ನು ಆಲಿಂಗಿಸಿದ. ಅವನು ಕೇವಲ ಲೀಲೆ ತೋರುವವನಾಗಿ ಇಂದ್ರನೊಂದಿಗೆ ಜೊತೆಯಾಗಿ ನಿಂತಿದ್ದನಷ್ಟೇ. ಸ್ವಲ್ಪವೂ ಯುದ್ಧ ಮಾಡಲಿಲ್ಲ.

ವಿ: ಇಲ್ಲಿ ವಿಷ್ಣುವು ಎಂದರೆ ಇಂದ್ರನೊಂದಿಗೆ ಬಂದಿದ್ದ ಶ್ರೀಹರಿಯ ಉಪೇಂದ್ರರೂಪ ಎಂದು ತಿಳಿಯಬೇಕು. (ವಾ).

ಅರ್ಜುನನಿಗೆ 'ಕೃಷ್ಣ' ಎಂಬ ಹೆಸರು

ಬ್ರಹ್ಮಾ ಚ ಶರ್ವಶ್ಚ ಸಮೇತ್ಯ ಕೃಷ್ಣಂ
ಪ್ರಣಮ್ಯ ಪಾರ್ಥಸ್ಯ ಚ ಕೃಷ್ಣನಾಮ ।
ಸಂಚಕ್ರತುಶ್ಚಾಪಿ ಶಿಕ್ಷಾಪ್ರಕರ್ಷಾ-
ಚ್ಚಕ್ರುಶ್ಚ ಸರ್ವೇ ಸ್ವಾಸ್ತ್ರದಾನೇ ಪ್ರತಿಜ್ಞಾಮ್ ॥ ೨೩೬ ॥

ಅ: ಬ್ರಹ್ಮ ಹಾಗೂ ಶಿವ ಕೃಷ್ಣನ ಬಳಿಗೆ ಬಂದು ನಮಸ್ಕರಿಸಿದರು ಮತ್ತು ಅರ್ಜುನನಿಗೆ, ಅವನ ಶಸ್ತ್ರಾಭ್ಯಾಸದ ವಿಶೇಷ ಕೌಶಲದ ಕಾರಣದಿಂದಾಗಿ *ಕೃಷ್ಣ ಎಂಬ ಹೆಸರನ್ನು ಇರಿಸಿದರು. ಎಲ್ಲ ದೇವತೆಗಳು ತಮ್ಮ ಅಸ್ತ್ರಗಳನ್ನು ನೀಡುವುದಾಗಿ ವಚನವಿತ್ತರು.

ವಿ: ೧) ಕೃಷ್ಣ ಎಂಬುದು ಅರ್ಜುನನ ದಶನಾಮಗಳಲ್ಲಿ ಹತ್ತನೆಯದು(ವಿರಾಟಪರ್ವ ೪೪/೯). ಸರ್ವೋತ್ಕೃಷ್ಟನೆಂಬ ಕಾರಣದಿಂದ ಕೃಷ್ಣನಿಗೆ ಆ ಹೆಸರಿದ್ದರೆ, ಅರ್ಜುನನಿಗೆ ವಿಶಿಷ್ಟವಾದ ಶಸ್ತ್ರದ ಕೌಶಲವಿದ್ದುದರಿಂದ ಮಾತ್ರ ಆ ಹೆಸರು ಬಂತು :

---

೨೩೫. ವಿಷ್ಣುಶ್ಚಕ್ರೇಣ ಸಹೇತ್ಯತ್ರ ಸ್ವರ್ಗಸ್ಥಿತಃ ಇಂದ್ರಾವರಜೋ ವಾಮನರೂಪೀ ವಿಷ್ಣುಃ ಅತ್ರ ವಿಷ್ಣುಪದೇನೋಚ್ಯತ ಇತಿ ಜ್ಞೇಯಮ್ ॥ – (ವಾ.)

೨೩೬. ಪಾರ್ಥಸ್ತು ವರಯಾಮಾಸ ಶಕ್ರಾದಸ್ತ್ರಾಣಿ ಸರ್ವಶಃ ।
ಪ್ರದಾತುಂ ತಚ್ಚ ಶಕ್ರಸ್ತು ಕಾಲಂ ಚಕ್ರೇ ಮಹಾದ್ಯುತಿಃ ॥
ಯದಾ ಪ್ರಸನ್ನೋ ಭಗವಾನ್ ಮಹಾದೇವೋ ಭವಿಷ್ಯತಿ ।
ತದಾ ತುಭ್ಯಂ ಪ್ರದಾಸ್ಯಾಮಿ ಪಾಂಡವಾಸ್ತ್ರಾಣಿ ಸರ್ವಶಃ ॥ – ಭಾರತ(ಆದಿ ೨೩೩/೯,೧೦)

ದೇವಾರಿರಿತ್ಯೇವ ಮಯಿ ಪ್ರಕೋಪಃ
ಕೃಷ್ಣಸ್ಯ ತೇನಾಹಮಿಮಂ ಪುರಂದರಮ್ ।
ಪಾರ್ಥಾತ್ಮಕಂ ಶರಣಂ ಯಾಮಿ ತೇನ
ಕೃಷ್ಣಪ್ರಿಯಃ ಸ್ಯಾಮಿತಿ ತಸ್ಯ ಬುದ್ಧಿಃ ॥ ೨೪೨ ॥

ಅ: ''ನಾನು ದೇವತೆಗಳ ಶತ್ರು ಎಂಬ ಕಾರಣದಿಂದ ಕೃಷ್ಣನಿಗೆ ನನ್ನಲ್ಲಿ ತುಂಬಾ ಕೋಪ. ಅದರಿಂದ ನಾನು ಅರ್ಜುನ ರೂಪದ ಇಂದ್ರನನ್ನು ಶರಣುಹೊಂದುವೆ. ಅದರಿಂದ ನಾನು ಕೃಷ್ಣನಿಗೆ ಪ್ರಿಯನಾಗುವೆ'' ಎಂಬುದು ಅವನ ವಿಚಾರವಾಗಿತ್ತು.

ವಿ: ೧) ಮಯ ಕೃಷ್ಣನಿಗೆ ಶರಣಾಗುವ ಬದಲು ಅರ್ಜುನನಿಗೆ ಶರಣಾದುದಕ್ಕೆ ಇಲ್ಲಿ ವಿವರಣೆಯಿದೆ. ಕೃಷ್ಣನಿಗೆ ಅವನ ಮೇಲಿನ ಕೋಪಕ್ಕೆ ಕಾರಣ ಅವನು ಸುರಾರಿ ಎಂದು. ಆದರೆ, ಅರ್ಜುನ ದೇವರಾಜ. ಅವನಿಗೆ ಶರಣಾದರೆ ತಾನು ಸುರಾರಿಯಲ್ಲ ಎಂದು ತಿಳಿಸಿದಂತಾಗುವುದು. ಅದರಿಂದ ಕೃಷ್ಣ ಪ್ರೀತನಾಗಿ ತನ್ನನ್ನು ರಕ್ಷಿಸುವನು ಎಂಬ ಯೋಚನೆಯಿಂದ ಹಾಗೆ ಮಾಡಿದ ಎಂದರ್ಥ.

೨) ಇಲ್ಲಿ ಶ್ರೀಹರಿಪ್ರೀತಿಯನ್ನು ಗಳಿಸಲು ಶ್ರೀಹರಿಭಕ್ತರನ್ನು ಶರಣುಹೊಂದುವುದು ಶ್ರೇಷ್ಠ ಉಪಾಯ ಎಂಬ ತತ್ವ ನಿರೂಪಿತವಾಗಿದೆ. ಮಯಾಸುರನ ಮಗಳು ಮಂಡೋದರಿ, ಎಂದರೆ ಇವನು ರಾವಣನಿಗೆ ಮಾವ.

೩) ತ್ರಿಪುರಾಸುರರಿಗೆ ಮೂರು ಪಟ್ಟಣಗಳನ್ನು ನಿರ್ಮಿಸಿಕೊಟ್ಟವನೂ ಇವನೇ. ವಾಲಿಯಿಂದ ಹತರಾದ ಮಾಯಾವಿ, ದುಂದುಭಿಗಳೆಂಬ ರಾಕ್ಷಸರೂ ಇವನ ಮಕ್ಕಳೇ.

೪) ಈ ರೀತಿಯಾಗಿ ಅವನು ಅಸುರರಿಗೆ ನೆರವಾಗಿದ್ದ ಕಾರಣದಿಂದ ತನ್ನನ್ನು ಕೃಷ್ಣ ಸುರಾರಿಯೆಂದು ತಿಳಿದು ಸಂಹರಿಸಹೊರಟಿರುವನು ಎಂಬುದು ಮಯನ ತಪ್ಪುಕಲ್ಪನೆಯಾಗಿತ್ತು.

ಮಯನ ಪ್ರಾರ್ಥನೆ

ಪ್ರಾಣೋಪಕರ್ತೃತ್ಯುಪಕಾರಮಾಶು
ಕಿಂ ತೇ ಕರೋಮೀತಿ ಸ ಪಾರ್ಥಮಾಹ ।
ಕೃಷ್ಣಪ್ರಸಾದಾದ್ಧಿ ಭವಾನ್ ವಿಮುಕ್ತ-
ಸ್ತಸ್ಮೈ ಕರೋತ್ವಿತ್ಯವದತ್ ಸ ಪಾರ್ಥಃ ॥ ೨೪೩ ॥

---

೨೪೩. ಕೃಷ್ಣಸ್ಯ ಕ್ರಿಯತಾಂ ಕಿಂಚಿತ್ ತಥಾ ಪ್ರತಿಕೃತಂ ಮಯಿ । – ಭಾರತ (ಸಭಾ. ೨/೧/೮)

ಅ: ಜೀವ ಉಳಿಸಿ ಉಪಕಾರ ಮಾಡಿದ್ದಕ್ಕೆ ಪ್ರತ್ಯುಪಕಾರವಾಗಿ ನಿನಗೆ ನಾನೇನು ಮಾಡಲಿ ಎಂದು ಮಯ ಅರ್ಜುನನನ್ನು ಕೇಳಿದ. ನೀನು ಉಳಿದದ್ದು ಕೃಷ್ಣನ ಅನುಗ್ರಹದಿಂದ, ಅದರಿಂದ ನೀನು ಅಂತಹ ಪ್ರತ್ಯುಪಕಾರವನ್ನು ಅವನಿಗೇ ಮಾಡು ಎಂದು ಅರ್ಜುನ ಹೇಳಿದ.

ವಿ: ೧) ಮಯ ಕೃತಜ್ಞತೆಯ ಸಂಕೇತವಾಗಿ ಅರ್ಜುನನಿಗೆ ಪ್ರತ್ಯುಪಕಾರವನ್ನು ಮಾಡಬಯಸಿದಾಗ, ಅರ್ಜುನ ನೀಡಿದ ಉತ್ತರ ಅತ್ಯಂತ ಮಾರ್ಮಿಕವಾದುದು: ''ನಿನ್ನನ್ನು ಉಳಿಸಿದ್ದು ನಾನಲ್ಲ, ಕೃಷ್ಣ''.

೨) ಸಾತ್ವಿಕ ಚಿಂತನೆಯೆಂದರೆ ಇದೇ – 'ನಾಹಂ ಕರ್ತಾ ಹರಿಃ ಕರ್ತಾ'. ಎಲ್ಲವನ್ನೂ ಮಾಡುವವನು ಶ್ರೀಹರಿಯೇ ಆದ್ದರಿಂದ ಶ್ರೀಹರಿಗೆ ಸಲ್ಲಿಸುವ ಸೇವೆಯೇ ಸರ್ವರೀತಿಯ ಕೃತಜ್ಞತೆಯ ಸಮರ್ಪಣೆಗೆ ರಾಜಮಾರ್ಗ ಎಂದರ್ಥ.

ಸಭಾ ನಿರ್ಮಾಣಕ್ಕೆ ಶ್ರೀಕೃಷ್ಣನ ಆದೇಶ

ಕೃಷ್ಣೋಽಪಿ ರಾಜ್ಞೇಽತಿವಿಚಿತ್ರರೂಪ-
ಸಭಾಕೃತಾವಾದಿಶತ್ ತಾಂ ಸ ಚಕ್ರೇ ।
ಅನಿರ್ಗಮಂ ಪ್ರಾಣಿನಾಮರ್ಥಿತೌ ತೌ
ಹುತಾಶನೇನಾಥ ವಿಧಾಯ ಜಗ್ಮತುಃ ॥ ೨೪೪ ॥

ಅ: ಕೃಷ್ಣನಾದರೋ ಧರ್ಮರಾಜನಿಗೆ ಅತ್ಯಂತ ವಿಚಿತ್ರಸ್ವರೂಪದ ಸಭೆಯನ್ನು ನಿರ್ಮಿಸಿಕೊಡಲು ಅವನಿಗೆ ಆದೇಶಿಸಿದ. ಯಾವ ಪ್ರಾಣಿಗಳೂ ತಪ್ಪಿಸಿಕೊಳ್ಳದಂತೆ ಅಗ್ನಿಯಿಂದ ಬೇಡಲ್ಪಟ್ಟಿದ್ದ ಅವರಿಬ್ಬರು ಹಾಗೆಯೇ ಮಾಡಿ ಅಲ್ಲಿಂದ ಹೊರಟರು.

ವಿ: ೧) ಕೃಷ್ಣ ಕೇಳಿದ್ದು ತನ್ನ ಭಕ್ತನಾದ ಧರ್ಮರಾಜನಿಗೆ ಸಭೆಯೊಂದನ್ನು ಕಟ್ಟಿಕೊಡಲೆಂದೇ ಹೊರತು ತನಗಾಗಿ ಏನೂ ಅಲ್ಲ; ಪೂರ್ಣಕಾಮನೂ, ನಿತ್ಯತೃಪ್ತನೂ ಆದ ತನಗೆ ಯಾರಿಂದಲೂ

---

೨೪೩. ತತೋ ವಿಚಿಂತ್ಯ ಮನಸಾ ಲೋಕನಾಥಃ ಪ್ರಜಾಪತಿಃ ।
ಚೋದಯಾಮಾಸ ತಂ ಕೃಷ್ಣಃ ಸಭಾ ವೈ ಕ್ರಿಯತಾಮಿತಿ ॥ – ಭಾರತ (ಸಭಾ. ೧/೧೦)

೨೪೪. ಪಾವಕಶ್ಚ ತದಾ ದಾವಂ ದಗ್ಧ್ವಾ ಸಮೃಗಪಕ್ಷಿಣಮ್ ।
ಅಹಾನಿ ಪಂಚ ಚೈಕಂ ಚ ವಿರರಾಮ ಸುತರ್ಪಿತಃ ॥ – ಭಾರತ (ಆದಿ ೨೩೩/೧೫)

೨) ತಿನ್ನಬೇಕಾಗಿದ್ದ ಅಗ್ನಿ ತನ್ನ ಸ್ತುತಿಗೆ ಮೆಚ್ಚಿ ಅವುಗಳನ್ನು ಸುಡದೇ ಬಿಟ್ಟ.

೩) ಇದು ವೇದಮಂತ್ರಗಳ ಸಾಮರ್ಥ್ಯಕ್ಕೆ ಅಪೂರ್ವ ನಿದರ್ಶನ. ಆ ನಾಲ್ಕು ಮಂತ್ರಗಳು ಹೀಗಿವೆ. ಅಶ್ವಸೇನ ತಕ್ಷಕನ ಪುತ್ರ, ಅವನು ಮತ್ತು ಅವನ ತಾಯಿ ಮಾತ್ರ ಆಗ ಆ ಖಾಂಡವ ವನದಲ್ಲಿದ್ದರು. ತಕ್ಷಕ ಕಾರಣಾಂತರದಿಂದ ಕುರುಕ್ಷೇತ್ರಕ್ಕೆ ತೆರಳಿದ್ದ. ಅಗ್ನಿಯಿಂದ ಉಳಿದುಕೊಳ್ಳಲು ಬೇರಾವ ಉಪಾಯವನ್ನು ಕಾಣದೇ ಅವನ ತಾಯಿ ಅವನನ್ನು ಹಿಂದು ಮುಂದಾಗಿ ನುಂಗಿದಳು. ಎಂದರೆ ಮೊದಲು ತಲೆಯನ್ನು ನುಂಗಿ, ಅನಂತರ ಉಳಿದೆಲ್ಲ ದೇಹಭಾಗವನ್ನು ನುಂಗಿದಳು ಎಂದರ್ಥ.

೪) ಕೃಷ್ಣಾರ್ಜುನರ ಕಣ್ಣಿಗೆ ಬೀಳದಿದ್ದಲ್ಲಿ ಅವರಿಬ್ಬರೂ ತಪ್ಪಿಸಿಕೊಳ್ಳಬಹುದು, ಆಕಸ್ಮಾತ್ ಅವರ ಕಣ್ಣಿಗೆ ಕಂಡಲ್ಲಿ ಆ ತಾಯಿಯ ತಲೆಯನ್ನು ಕತ್ತರಿಸಿದರೂ, ಒಳಗಿನ ಅಶ್ವಸೇನನಿರುವುದು ಅವರಿಗೆ ತಿಳಿಯದೆ ಅವನು ಬದುಕಬಹುದು ಎಂದು ಅವರ ಆಲೋಚನೆಯಾಗಿತ್ತು.

ಛಿನ್ನೇऽರ್ಜುನೇನಾಂತರಿಕ್ಷೇ ಪತಂತ್ಯಾ-
ಸ್ತಸ್ಯಾಃ ಶಕ್ರೇಣಾವಿತಶ್ಛಿನ್ನಪುಚ್ಛಃ ।
ವಧಾನ್ಮಾತುಃ ಪುಚ್ಛಭಂಗಾಚ್ಚ ರೋಷಾ-
ದ್ಧಂತುಂ ಪಾರ್ಥಂ ಕರ್ಣತೂಣೀರಗೋऽಭೂತ್ ॥ ೨೪೦ ॥

ಅಃ ಗಗನದಲ್ಲಿ ನೆಗೆಯುತ್ತಿದ್ದಾಗ ಅರ್ಜುನನಿಂದ ಅದರ ತಲೆ ಕತ್ತರಿಸಿ ಕೆಳಗೆ ಬಿದ್ದಾಗ ಬಾಲ ತುಂಡಾಗಿದ್ದ ಅಶ್ವಸೇನ ಇಂದ್ರನಿಂದ ಪಾಲಿತನಾದ. ತನ್ನ ತಾಯಿಯ ವಧೆಯಿಂದಾಗಿಯೂ, ತನ್ನ ಬಾಲ ತುಂಡಾದ್ದರಿಂದಾಗಿಯೂ ರೋಷದಿಂದ ಅರ್ಜುನನನ್ನು ಕೊಲ್ಲಲೆಂದು ಅವನು ಕರ್ಣನ ಬತ್ತಳಿಕೆಯನ್ನು ಸೇರಿಕೊಂಡ.

ವಿಃ ೧) ಅವಳು ತನ್ನ ವಿಷಜ್ವಾಲೆಯಿಂದ ಬಾಣದ ಭಾವಣೆಯನ್ನು ಭೇದಿಸಿ ಗಗನದಲ್ಲಿ ನೆಗೆದಾಗ ಕೃಷ್ಣನಿಂದ ಸೂಚಿತನಾದ ಅರ್ಜುನ ಅದರ ತಲೆಯನ್ನು ಕತ್ತರಿಸಿದ. ಅದು ಕೆಳಗೆ ಬಿದ್ದಾಗ ಅದರೊಳಗಿಂದ ಅಶ್ವಸೇನ ಹೊರಬಂದ, ಅವನ ತಲೆ ಉಳಿದಿದ್ದರೂ ಬಾಲ ತುಂಡಾಗಿತ್ತು. ಇಂದ್ರ ಅವನನ್ನು ಕಾಪಾಡಿದ.

---

೨೪೦. ಕರ್ಣತೂರ್ಣೀರಗ ಇತಿ । ಬಾಣಪ್ರಯೋಗಕಾಲೇ ಬಾಣಗತೋ ಭವಿಷ್ಯತೀತಿ ಯಯೌ ಬಾಣಗತಶ್ಚ ನಾಗರಾಡಿತಿ ನ ವಕ್ಷ್ಯಮಾಣವಿರೋಧಃ । –(ತಾ.)

೨) ಅವನು ಒಂದು ಕಡೆ ತನ್ನ ತಾಯಿ ಸತ್ತ ಸಂಕಟ, ಮತ್ತೊಂದು ಕಡೆ ತನ್ನ ಬಾಲ ತುಂಡಾದ ವ್ಯಥೆ. ಅದರಿಂದಾಗಿ ಅರ್ಜುನನ ಮೇಲೆ ಸೇಡು ತೀರಿಸಿಕೊಳ್ಳಲು ಕರ್ಣನ ಬತ್ತಳಿಕೆಯನ್ನು ಸೇರಿಕೊಂಡ ಅವನು ಮುಂದೆ (೨೭/೧೪೩) ಕರ್ಣಪರ್ವದಲ್ಲಿ ಅರ್ಜುನನಿಂದ ಹತನಾಗುವನು.

ಮಯಾಸುರನ ಶರಣಾಗತಿ

ಮಯಃ ಕೃಷ್ಣೇನಾತ್ತಚಕ್ರೇಣ ದೃಷ್ಟ್ವೋ
ಯಯೌ ಪಾರ್ಥಂ ಶರಣಂ ಜೀವನಾರ್ಥೀ ।
ಪಾರ್ಥಾರ್ಥಮೇನಂ ನ ಜಘಾನ ಕೃಷ್ಣಃ
ಸ್ವಭಕ್ತತ್ವೇತ್ಯತಿಮಾಯಂ ಪರೇಶಃ ॥ ೨೪೧ ॥

ಅ: ಚಕ್ರಪಾಣಿಯಾದ ಮಯ ತನ್ನನ್ನು ಕೃಷ್ಣ ನೋಡಿದಾಗ ಜೀವ ಉಳಿಸಿಕೊಳ್ಳಲೆಂದು ಅರ್ಜುನನನ್ನು ಶರಣುಹೊಕ್ಕ. ಅರ್ಜುನನಿಗಾಗಿ ಅವನನ್ನು ಕೃಷ್ಣ ಕೊಲ್ಲಲಿಲ್ಲ; ತುಂಬಾ ಮಾಯಾವಿಯಾದ ಅವನನ್ನು ತನ್ನ ಭಕ್ತನೆಂಬ ಕಾರಣದಿಂದಲೂ ಕೃಷ್ಣ ಕೊಲ್ಲದೇ ಬಿಟ್ಟ.

ವಿ: ೧) ಮಯನೂ ಹಾಗೆ ಆ ವನದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದವನೇ. ಆದರೆ, ಹಾಗೆ ತಪ್ಪಿಸಿಕೊಳ್ಳುವಾಗ ಕೃಷ್ಣ ನೋಡಿದ. ಅವನಾಗ ಪ್ರಾಣರಕ್ಷಣೆಗಾಗಿ ಅರ್ಜುನನನ್ನು ಶರಣುಹೊಕ್ಕ. ಅರ್ಜುನನ ಪ್ರಾರ್ಥನೆಯಂತೆ ಕೃಷ್ಣ ಅವನನ್ನು ಕೊಲ್ಲದೆಬಿಟ್ಟ.

೨) ಅದಕ್ಕೆ ಅವನು ದೈತ್ಯಶಿಲ್ಪಿಯಾಗಿದ್ದರೂ ಮೂಲತಃ ತನ್ನ ಭಕ್ತ ಎಂಬುದು ಮೂಲ ಕಾರಣವಾಗಿತ್ತು, ತುಂಬಾ ಮಾಯಾವಿಯಾದ್ದರಿಂದ ಅವನಿಗೆ ಮಯ ಎಂಬ ಹೆಸರು ಬಂದಿತ್ತು ಎಂಬ ಸೂಚನೆ ಅತಿಮಾಯಂ ಎಂಬ ಪದದಿಂದ ಬಂದಿದೆ.

೩) ವಿಶ್ವಕರ್ಮ ದೇವಶಿಲ್ಪಿ, ಮಯ ದೈತ್ಯಶಿಲ್ಪಿ – ಆದರೆ ಇಬ್ಬರೂ ಸುಜೀವಿಗಳೇ ಎಂಬುದು ವಿಶೇಷ. ದೇವಗುರುವಾದ ಬೃಹಸ್ಪತಿ, ದೈತ್ಯಗುರುವಾದ ಶುಕ್ರ – ಇಬ್ಬರೂ ಸಹ ಸುಜೀವಿಗಳೇ ಆಗಿರುವಂತೆ — ಎಂಬ ಪ್ರಮೇಯವಿಶೇಷವನ್ನು ಇಲ್ಲಿ ಗಮನಿಸಬೇಕು.

---

೨೪೦. ನ ಚಾಪಿ ತವ ಸಂಕಲ್ಪಂ ಮೋಘಮಿಚ್ಛಾಮಿ ದಾನವ ।
ಕೃಷ್ಣಸ್ಯ ಕ್ರಿಯತಾಂ ಕಿಂಚಿತ್ ತಥಾ ಪ್ರತಿಕೃತಂ ಮಯಿ ॥ - ಭಾರತ (ಸಭಾ.೧/೮)

೨೪೧. ಪ್ರಾಣಸಂಬಂಧರೂಪೋತ್ಪತ್ತೇಃ ಪ್ರಾಯಃ ಶಿರಃಪೂರ್ವಕತ್ವೇನ ಪ್ರಾಣವಿಯೋಗರೂಪನಾಶಸ್ಯ ಪಾದ-ಪೂರ್ವಕತ್ವೇನ ಗ್ರಸನಸ್ಯಾಪಿ ನಾಶಪ್ರತಿನಿಧಿತ್ವಾತ್ ತತ್ಪ್ರತಿಲೋಮ್ಯೇನ ಶಿರಃಪ್ರಭೃತಿಗ್ರಸ್ತ ಇತ್ಯರ್ಥಃ। ಯದ್ವಾ ಇತ್ಥಂಭೂತಲಕ್ಷಣೇ ತೃತೀಯಾ। ಯಥಾ ಮಾತುಃ ಕಂಠಪ್ರದೇಶೇऽಶ್ವಸೇನಸ್ಯ ಪುಚ್ಛಂ ಭವತಿ, ಅಸ್ಯ ಕಂಠಪ್ರದೇಶೇ ಮಾತುಃ ಪುಚ್ಛಂ ಭವತಿ ತಥಾಗ್ರಸ್ತಃ। – (ಜ.)

ಮಯನಿಂದ ಭೀಮಸೇನನಿಗೆ ಗದಾ ಸಮರ್ಪಣೆ

ಸ ವಾಯುಧಾರಿತಾಂ ಗದಾಂ ಹಿ ಯೌವನಾಶ್ವಭೂಭೃತಾ ।
ಪ್ರಸಾದತೋಽಸ್ಯ ಲಂಭಿತಾಮವಾಪ್ಯ ಮೋದಮಾಪ ಹ ॥ ೨ ॥

ಅ: ಅದು ವಾಯುವಿನ ಗದೆ. ಮಾಂಧಾತರಾಜ ಅದನ್ನು ವಾಯುದೇವರ ಅನುಗ್ರಹದಿಂದ ಪಡೆದಿದ್ದ. ಅದನ್ನು ಪಡೆದು ಭೀಮ ಆನಂದಿಸಿದ.

ವಿ: ೧) ಮಯ ಭೀಮನಿಗಿತ್ತ ಗದೆ ಮೂಲತಃ ವಾಯುದೇವರದೇ. ಅದನ್ನು ಮಾಂಧಾತ ರಾಜ ವಾಯುದೇವರನ್ನು ಮೆಚ್ಚಿಸಿ ಪಡೆದುಕೊಂಡಿದ್ದ. ಅದನ್ನು ಮಯ ತಂದು ಭೀಮನಿಗಿತ್ತ.

೨) ಆ ಗದೆ ಮುಚುಕುಂದರಾಜನದು ಎಂದೂ ಕೆಲವು ವ್ಯಾಖ್ಯಾನಗಳಲ್ಲುಂಟು.

೩) ಎಂದರೆ ಅಗ್ನಿ ಕೃಷ್ಣನ ಚಕ್ರವನ್ನೇ ಕೃಷ್ಣನಿಗೆ ನೀಡಿದ್ದಂತೆ ಮಯ ಭೀಮನ ಗದೆಯನ್ನೇ ಭೀಮನಿಗೆ ನೀಡಿದ ಎಂದಾಯಿತು.

೪) ಹರಿವಾಯುಗಳಿಂದೂ ಪರರ ವಸ್ತುಗಳಿಂದ ಹಿರಿಮೆ ಪಡೆಯುವವರಲ್ಲ ಎಂಬುದಕ್ಕೆ ಇದೂ ನಿದರ್ಶನ.

೫) ಕೈಲಾಸದ ಉತ್ತರ ಭಾಗದಲ್ಲಿ ಮೈನಾಕದ ಬಳಿಯ ಬಿಂದು ಸರೋವರದ ಬಳಿಯಿದ್ದ ವೃಷಪರ್ವ ಎಂಬ ದೈತ್ಯಚಕ್ರವರ್ತಿಯ ಸಭಾಭವನದ ಅವಶೇಷಗಳಲ್ಲಿದ್ದ ವಿಚಿತ್ರವಾದ ಮಣಿ, ರತ್ನಗಳಿಂದ ಮಯಾಸುರ ಸಭಾಭವನವನ್ನು ನಿರ್ಮಿಸಿದ್ದ. ಅಲ್ಲಿದ್ದ ಗದೆಯನ್ನೇ ತಂದು ಭೀಮನಿಗೆ ನೀಡಿದ.

ದ್ವಾರಕೆಗೆ ಶ್ರೀಕೃಷ್ಣ

ಪುನಶ್ಚ ವತ್ಸರದ್ವಯಂ ಸಮುಷ್ಯ ಕೇಶವೋ ಯಯೌ ।
ಸಮರ್ಚಿತಶ್ಚ ಪಾಂಡವೈರ್ವಿಯೋಜನೇಽಸ್ಯ ಚಾಕ್ಷಮೈಃ ॥ ೩ ॥

ಅ: ಮತ್ತೆರಡು ವರ್ಷಗಳ ಕಾಲ ಕೃಷ್ಣ ಪಾಂಡವರ ಬಳಿ ಇದ್ದು ದ್ವಾರಕೆಗೆ ತೆರಳಿದ. ಅವನನ್ನು ಬಿಟ್ಟಿರಲಾಗದ ಪಾಂಡವರು ಅವನನ್ನು ಬಹಳವಾಗಿ ಸತ್ಕರಿಸಿ ಬೀಳ್ಕೊಟ್ಟರು.

---

೨. ಯೌವನಾಶ್ವಭೂಭೃತಾ ಮುಚುಕುಂದರಾಜೇನ। - (ವ., ಜ.)

ಸ್ಯಮಂತಪಂಚಕದಲ್ಲಿ ವಸುದೇವನಿಂದ ಶ್ರೀಕೃಷ್ಣ ಮಾಡಿಸಿದ ಯಜ್ಞ

ತತೋ ವಸನ್ ಸ್ವಪುರ್ಯಜಃ ಕ್ವಚಿದ್ರವಿಗ್ರಹೇ ಹರಿಃ ।
ಸದಾರಪುತ್ರಬಾಂಧವಃ ಸ್ಯಮಂತಪಂಚಕಂ ಯಯೌ ॥ ೪ ॥

ಅ: ಅನಂತರ ಕೃಷ್ಣ ದ್ವಾರಕೆಯಲ್ಲಿ ವಾಸಿಸುತ್ತಾ ಒಮ್ಮೆ ಸೂರ್ಯಗ್ರಹಣ ಕಾಲದಲ್ಲಿ ಪತ್ನೀ ಪುತ್ರ ಬಾಂಧವಸಮೇತನಾಗಿ ಸ್ಯಮಂತ ಪಂಚಕಕ್ಕೆ ತೆರಳಿದ.

ವಿ: ೧) ಸ್ಯಮಂತಪಂಚಕವೆಂಬುದು ಪರಶುರಾಮರಿಂದ ನಿರ್ಮಿತವಾದ ಐದು ಸರೋವರ–ಗಳುಳ್ಳ ಸ್ಥಳ.

೨) ಸ್ಯಮಂತಪಂಚಕ ಎಂದೂ ಕೆಲವು ಪ್ರತಿಗಳಲ್ಲುಂಟು. ದುಷ್ಟ ಕ್ಷತ್ರಿಯರನ್ನು ಸಂಹರಿಸಿ ಅವರ ರಕ್ತದಿಂದ ಪಿತೃಗಳಿಗೆ ಪರಶುರಾಮ ತರ್ಪಣವಿತ್ತ ಸ್ಥಳ ಎಂಬುದು ಅದರ ಪ್ರಸಿದ್ಧಿ. ಅದಿರುವುದು ಕುರುಕ್ಷೇತ್ರದಲ್ಲಿ. ಸೂರ್ಯಗ್ರಹಣಾದಿ ಕಾಲದಲ್ಲಿ ತೀರ್ಥಸ್ನಾನ ವಿಹಿತ.

೩) ಅದರಲ್ಲೂ ಕುರುಕ್ಷೇತ್ರಾದಿಗಳಲ್ಲಿ ಸ್ನಾನ ಇನ್ನೂ ಶ್ರೇಷ್ಠ ಎಂಬ ಮಾತು ಪುರಾಣ–ಗಳಲ್ಲಿದೆ. ಹೀಗೆ ತೆರಳುವ ಮೂಲಕ ಕೃಷ್ಣ ಅದನ್ನೆಲ್ಲ ಸೂಚಿಸಿದ ಎಂದು ತಿಳಿಯಬಹುದು.

ಪೃಥಾಸುತಾಶ್ಚ ಸರ್ವಶಃ ಸದಾರಪುತ್ರಮಾತೃಕಾಃ ।
ಕ್ಷಿತೀಶ್ವರಾಶ್ಚ ಸರ್ವಶಃ ಪ್ರಿಯಾಪ್ರಿಯಾಶ್ಚ ಯೇ ಹರೇಃ ॥ ೫ ॥

ಅ: ಪಾಂಡವರೆಲ್ಲರೂ ಪತ್ನೀಪುತ್ರಸಮೇತರಾಗಿ ತಾಯಿಯಾದ ಕುಂತಿಯೊಂದಿಗೂ ಕೂಡಿ ಅಲ್ಲಿಗೆ ತೆರಳಿದರು. ಅದರಂತೆ ಶ್ರೀಹರಿಗೆ ಪ್ರಿಯರೂ, ದ್ವೇಷಿಗಳೂ, ಪ್ರಿಯಾಪ್ರಿಯರೂ ಆದ ಸಕಲ ರಾಜರು ಅಲ್ಲಿಗೆ ಬಂದರು.

ವಿ: ೧) ಕೃಷ್ಣನ ಬಳಿಗೆ ಅವನಿಗೆ ಪ್ರಿಯರು ಮಾತ್ರವಲ್ಲದೇ ಅಪ್ರಿಯರು ಹಾಗೂ ತಟಸ್ಥರೂ ಸಹ ಆಗಮಿಸಿದರು ಎಂಬುದು ಭಾವ. ಪ್ರಿಯರು ಕೃಷ್ಣನ ಬಳಿಗೆ ತೆರಳಿದ್ದು ಭಕ್ತಿಯಿಂದ ಅವನ ಮಹಿಮಾತಿಶಯವನ್ನು ಕಾಣಲು, ಉಳಿದವರು ತೆರಳಿದ್ದು ಅವನಲ್ಲಿ ದೋಷಗಳು ಕಂಡಲ್ಲಿ ವಿರೋಧಿಸಲು.

೨) ಶ್ರಹರಿಯ ಬಳಿಗೆ ತೆರಳಿದ ಮಾತ್ರಕ್ಕೇ ಹಾಗೆ ತೆರಳಿದವರೆಲ್ಲ ಯೋಗ್ಯರಾಗಿರಬೇಕಿಲ್ಲ ಎಂಬ ವಿಶೇಷಾಂಶ ಇದರಿಂದ ಸೂಚಿತ.

---

೪. ಸ್ಯಮಂತಪಂಚಕಂ ಕುರುಕ್ಷೇತ್ರಮ್। –(ಜ.)

ಏನೂ ಆಗಬೇಕಿಲ್ಲ ಎಂದು ಕೃಷ್ಣ ಆ ಮೂಲಕ ಸಾರಿದ ಎಂದು ತಿಳಿಯಬೇಕು — 'ನಾನವಾಪ್ತಮವಾಪ್ತವ್ಯಂ', 'ಆಪ್ತಕಾಮಸ್ಯ ಕಾ ಸ್ಪೃಹಾ'.

೨) ಭಕ್ತರಿಗೆ ಸಲ್ಲಿಸುವ ಸೇವೆ ಭಗವಂತನಿಗೆ ಪ್ರೀತಿಕರ ಎಂಬ ತತ್ವ ಇಲ್ಲಿ ಮಾರ್ಮಿಕವಾಗಿ ಸೂಚಿತವಾಗಿರುವುದು ಗಮನಾರ್ಹ.

೩) ಖಾಂಡವವನ ಒಟ್ಟು ಉರಿದದ್ದು ಹದಿನೈದು ದಿವಸಗಳ ಕಾಲ :

ತದ್ವನಂ ಪಾವಕೋ ಧೀಮಾನ್ ದಿನಾನಿ ದಶ ಪಂಚ ಚ ।
ದದಾಹ ಕೃಷ್ಣಪಾರ್ಥಾಭ್ಯಾಂ ರಕ್ಷಿತಃ ಪಾಕಶಾಸನಾತ್ ॥ – ಭಾರತ(ಆದಿ.೨೨೭/೪೬)

ಇಂದ್ರಪ್ರಸ್ಥಕ್ಕೆ ಮರಳಿದ ಕೃಷ್ಣಾರ್ಜುನರು

ದೃಷ್ಟ್ವಾ ಚ ತೌ ಪಾಂಡವಾಃ ಸರ್ವ ಏವ
ಮಹಾಮುದಂ ಪ್ರಾಪುರೇತನ್ನಿಶಮ್ಯ ।
ಕೃಷ್ಣೋಽಪಿ ಪಾರ್ಥೈರ್ಮುದೇಽನಂತಶಕ್ತಿಃ
ಸುಖಜ್ಞಾನಪ್ರಭವೌದಾರ್ಯವೀರ್ಯಃ 3/12/09 **॥ ೨೪೫ ॥**

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಖಾಂಡವವನದಾಹೋ ನಾಮ ವಿಂಶೋಽಧ್ಯಾಯಃ ॥ ೨೦ ॥

ಅ: ಅವರಿಬ್ಬರನ್ನೂ ಕಂಡು ಎಲ್ಲ ಪಾಂಡವರು ಅದನ್ನೆಲ್ಲ ಕೇಳಿ ಮಹದಾನಂದಪಟ್ಟರು. ಅನಂತ ಶಕ್ತಿಯುಳ್ಳವನೂ, ಆನಂದ, ಜ್ಞಾನ, ಪ್ರಭುತ್ವ, ಔದಾರ್ಯ, ವೀರ್ಯಗಳನ್ನು ಹೊಂದಿದವನೂ ಆದ ಶ್ರೀಕೃಷ್ಣ ಪಾಂಡವರೊಂದಿಗೆ ಹರ್ಷಿಸಿದ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಖಾಂಡವವನದಾಹ'ವೆಂಬ ಇಪ್ಪತ್ತನೆಯ ಅಧ್ಯಾಯ ಮುಗಿಯಿತು ॥ ೨೦ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೨೧

(ಪಾಂಡವವನವಾಸಗಮನಮ್)

(ದಿನಾಶ್ವಮೇಧಯಾಗ, ಜರಾಸಂಧವಧೆ, ರಾಜಸೂಯಯಾಗ,
ಶಿಶುಪಾಲವಧೆ, ಮಯಸಭೆ, ದ್ಯೂತ, ಅನುದ್ಯೂತ, ವನವಾಸಗಮನ)

ಮಯಸಭೆಯ ನಿರ್ಮಾಣ

ಜನಾರ್ದನಾಜ್ಞಯಾ ಮಯಃ ಸಮಸ್ತಕೌತುಕೋತ್ತರಾಮ್ ।
ಸಭಾಂ ವಿಧಾಯ ಭೂಭೃತೇ ದದೌ ಗದಾಂ ವೃಕೋದರೇ ॥ ೧ ॥

ಅ: ಶ್ರೀಕೃಷ್ಣನ ಆದೇಶದಂತೆ ಮಯ ಸಮಸ್ತ ಅಚ್ಚರಿಗಳಿಂದ ತುಂಬಿ ಉತ್ಕೃಷ್ಟವಾಗಿದ್ದ ಸಭೆಯನ್ನು ನಿರ್ಮಿಸಿ ಯುಧಿಷ್ಠಿರನಿಗೆ ನೀಡಿದ. ಭೀಮಸೇನನಿಗೆ ಒಂದು ಗದೆಯನ್ನೂ ಅರ್ಪಿಸಿದ.

ವಿ: ೧) ಕೃಷ್ಣನ ಆದೇಶದಂತೆ ಮಯಾಸುರ ನಿರ್ಮಿಸಿದ ಸಭೆ ಅತ್ಯದ್ಭುತವಾಗಿತ್ತು.

೨) ಹದಿನಾಲ್ಕು ತಿಂಗಳ ಅವಧಿಯಲ್ಲಿ ನಿರ್ಮಿತವಾದ ಅದು ಸರ್ವ ಋತುಗಳ ವಾತಾವರಣಗಳನ್ನು ಒದಗಿಸಬಲ್ಲ ವಿಚಿತ್ರ ಸಭೆಯಾಗಿತ್ತು. ಅದರಲ್ಲಿ ಕೆರೆ, ಭಾವಿ, ಸರೋವರ, ಉದ್ಯಾನಗಳೆಲ್ಲ ತುಂಬಿದ್ದವು.

೩) ಇದನ್ನೆಲ್ಲ ಆಚಾರ್ಯರು ಸಮಸ್ತಕೌತುಕೋತ್ತರಾಂ ಎಂಬ ಪದದಿಂದ ಸೂಚಿಸಿರುವರು.

೪) ದುರ್ಯೋಧನನಂತಹ ಮಹಾಪಾಪಿ ಅದರ ರಹಸ್ಯವನ್ನು ಅರಿಯಲಾಗದೇ ನಗೆಪಾಟಲಿಗೆ ಗುರಿಯಾದ ವಿವರ ಮುಂದೆ ಬಂದಿದೆ (ಶ್ಲೋಕ ೨೭೭).

---

೧. ದದೌ ಗದಾಮಿತಿ । ಬಿಂದುಸರಸಿ ಮುಚುಕುಂದನಿಹತಾಂ ಗದಾಂ ದದಾವಿತ್ಯರ್ಥಃ । ತಥಾ ಚ ಸಭಾಪರ್ವಣಿ ಮಯವಾಕ್ಯಮ್ ।

ಅಸ್ತಿ ಬಿಂದುಸರಸ್ಯೇವ ಗದಾ ಶ್ರೇಷ್ಠಾ ಕುರೂದ್ವಹ ।
ನಿಹತಾ ಯೌವನಾಶ್ವೇನ ರಾಜ್ಞಾ ಹತ್ವಾ ರಿಪೂನ್ ರಣೇ ॥' ಇತಿ । – (ತಾ.)

೧ ಈದೃಶೀಂ ತಾಂ ಸಭಾಂ ಕೃತ್ವಾ ಮಾಸೈಃ ಪರಿಚತುರ್ದಶೈಃ ।
ನಿಷ್ಠಿತಾಂ ಧರ್ಮರಾಜಾಯ ಮಯೋ ರಾಜನ್ ನ್ಯವೇದಯತ್ ॥ – ಭಾರತ (೨/೩/೩೭)

ಹಯಂ ಸಭೀಮಫಲ್ಗುನಾ ಹರೇ ರಥಂ ಸಮಾಸ್ಥಿತಾಃ ।
ವ್ಯಚಾರಯನ್ ಹರೇಃ ಸುತಾ ದಿನಸ್ಯ ಪಾದಮಾತ್ರತಃ ॥ ೧೨ ॥

ಅ: ಶ್ರೀಹರಿಯ ರಥದಲ್ಲಿ ಕುಳಿತು ಭೀಮಾರ್ಜುನರ ಸಮೇತರಾಗಿ ಕೃಷ್ಣ ಪುತ್ರರು ಅದನ್ನು ದಿನದ ಕಾಲುಭಾಗ ವೇಳೆಯಲ್ಲಿಯೇ ವಿಶ್ವದಲ್ಲೆಲ್ಲಾ ಸಂಚಾರ ಮಾಡಿಸಿದರು.

ವಿ: ೧) ಅಶ್ವಮೇಧಯಾಗದ ನಿಯಮದಂತೆ ಆ ಕುದುರೆಯನ್ನು ಒಂದು ವರ್ಷ ಅವಧಿಯಲ್ಲಿ ಪ್ರಪಂಚದಲ್ಲೆಲ್ಲಾ ಸುತ್ತಿಸಿ ತರಬೇಕು. ಅದು ಒಂದು ದಿನದ ಅಶ್ವಮೇಧ ಯಾಗವಾದ್ದರಿಂದ ಹಗಲಿನ ಒಂದಂಶದಲ್ಲಿ ಎಂದರೆ ಹನ್ನೆರಡು ತಾಸುಗಳ ಹಗಲಿನ ಮೂರು ತಾಸುಗಳ ಅವಧಿಯಲ್ಲಿ ಇಡೀ ವಿಶ್ವವನ್ನೇ ಸುತ್ತಿಸಿಕೊಂಡು ಬಂದದ್ದು ಆ ಯಾಗದ ವಿಶೇಷವಾಯಿತು.

೨) ಅಂತಹ ವೇಗದ ಸಂಚಾರಕ್ಕೆ ಶ್ರೀಕೃಷ್ಣನ ರಥ ಅವರಿಗೆಲ್ಲ ನೆರವಾಯಿತು ಎಂದರ್ಥ.

ಜಿತಾಃ ಸಮಸ್ತಭೂಭೃತೋ ಜರಾಸುತಾದಯಃ ಕ್ಷಣಾತ್ ।
ವೃಕೋದರಾದಿಭಿಸ್ತು ತೈರ್ಹಯಶ್ಚ ದಿವ್ಯ ಆಯಯೌ ॥ ೧೩ ॥

ಅ: ಭೀಮಸೇನ ಮೊದಲಾದವರಿಂದ ಜರಾಸಂಧ ಮೊದಲಾದ ಸಮಸ್ತರಾಜರು ಕ್ಷಣದಲ್ಲೇ ಪರಾಜಿತರಾದರು. ದಿವ್ಯವಾದ ಆ ಕುದುರೆ ಹಿಂದಿರುಗಿ ಬಂದಿತು.

ವಿ: ೧) ಸಂಚಾರದ ಸಮಸ್ಯೆ ಕೃಷ್ಣ ರಥದಿಂದಾಗಿ ಸುಗಮವಾದರೆ, ಜರಾಸಂಧಾದಿ ಮಹಾ ದೈತ್ಯರನ್ನು ಪರಾಭವಗೊಳಿಸುವ ಕಾರ್ಯ ಭೀಮಾದಿಗಳಿಂದ ಸುಲಭವಾಗಿ ನಡೆಯಿತು.

೨) ಹೀಗೆ ಅಷ್ಟು ಅಲ್ಪಾವಧಿಯಲ್ಲಿ ವಿಶ್ವಪರ್ಯಟನೆಯೊಂದಿಗೆ ವಿಶ್ವದಿಗ್ವಿಜಯವೂ ಪೂರೈಸಿತು ಎಂಬುದು ವಿಶೇಷ.

ಶ್ರೀಕೃಷ್ಣನಿರ್ಮಿಸಿದ ಅಶ್ವದ ಹಿರಿಮೆ

ಹಯಃ ಸ ಕೃಷ್ಣನಿರ್ಮಿತೋ ದಿನೇನ ಲಕ್ಷಯೋಜನಮ್ ।
ಕ್ಷಮೋ ಹಿ ಗಂತುಮಂಜಸಾ ದಿನಾಶ್ವಮೇಧಸಿದ್ಧಯೇ ॥ ೧೪ ॥

---

೧೨. ದಿನಸ್ಯ ಪಾದಮಾತ್ರತ ಇತ್ಯತ್ರ ಸಪ್ತಘಟಿಕಾಃ ಪಾದ ಇತ್ಯುಚ್ಯತೇ ॥ – (ವಾ.)

೧೨. ದಿನಸ್ಯ ಪಾದಮಾತ್ರತಃ ಏಕಯಾಮಾತ್ । – (ಜ.)

೧೩. ವೃಕೋದರಾದಿಭಿಃ ಸುತೈರಿತ್ಯತ್ರ ವೃಕೋದರಃ ಆದಿಃ ಮೂಲಬಲಂ ಯೇಷಾಂ ತೇ ತೈಃ ಸುತೈಃ ॥ – (ವಾ.)

ಅ: ಶ್ರೀಕೃಷ್ಣನಿಂದ ನಿರ್ಮಿತವಾದ ಆ ಕುದುರೆ ದಿನಾಶ್ವಮೇಧದ ಸಿದ್ಧಿಗಾಗಿ ಒಂದು ದಿನದಲ್ಲಿ ಲಕ್ಷಯೋಜನವನ್ನು ಸಂಚರಿಸಲು ಸಮರ್ಥವಾಗಿತ್ತು.

ವಿ: ೧) ಜಗತ್ತಿನ ಯಾವ ಕುದುರೆಯೂ ಒಂದು ದಿನದಲ್ಲಿ ವಿಶ್ವಪರ್ಯಟನೆ ಮಾಡುವ ಸಾಮರ್ಥ್ಯಹೊಂದಿಲ್ಲ. ಆದರೆ ಅದು ಕೃಷ್ಣನಿಂದ ನಿರ್ಮಿತವಾದ ವಿಶೇಷ ಕುದುರೆಯಾದ್ದರಿಂದ ಒಂದು ಹಗಲಿನಲ್ಲಿ ಲಕ್ಷಯೋಜನವನ್ನು ಅನಾಯಾಸವಾಗಿ ಸಂಚರಿಸಬಲ್ಲ ಸಾಮರ್ಥ್ಯವನ್ನು ಹೊಂದಿತ್ತು ಎಂದರ್ಥ.

೨) ಇದರಿಂದ ಕೃಷ್ಣನ ಮತ್ತೊಂದು ಬಗೆಯ ವಿಚಿತ್ರ ಸಾಮರ್ಥ್ಯ ಪ್ರಕಟವಾಗುವುದು.

ವಿಪ್ರಾಗಮನ

ಪರಾಶರಾತ್ಮಜೋ ಹರಿರ್ಹರಿಂ ಯದಾ ತ್ವದೀಕ್ಷಯತ್ ।
ತದಾऽऽಸಸಾದ ಹಿ ದ್ವಿಜಸ್ಯ ಣಾವಹೋ ರುರಾವ ಚ ॥ ೧೫ ॥

ಅ: ಶ್ರೀವ್ಯಾಸರೂಪದ ಶ್ರೀಹರಿಯು ಕೃಷ್ಣರೂಪದ ಹರಿಯನ್ನು ಯಜ್ಞದಲ್ಲಿ ದೀಕ್ಷಿತನನ್ನಾಗಿ ಮಾಡಿದ. ಆಗೊಬ್ಬ ಬ್ರಾಹ್ಮಣ ಕೈಯಲ್ಲಿ ಹುಲ್ಲುಕಡ್ಡಿಯನ್ನು ಹಿಡಿದುಕೊಂಡುಬಂದು, ಅಳತೊಡಗಿದ.

ವಿ: ಕೃಷ್ಣನನ್ನು ಯಜಮಾನನ್ನಾಗಿ ಕುಳ್ಳಿರಿಸಿ ಯಜ್ಞಮಾಡಿಸುವಂತಹ ಸಾಮರ್ಥ್ಯ ವೇದವ್ಯಾಸ–ರಿಗೆ ಹೊರತು ಮತ್ತಾರಿಗೂ ಇರಲಿಲ್ಲ; ಅವರಿಬ್ಬರೂ ಸಾಕ್ಷಾತ್ ಶ್ರೀಹರಿಯ ರೂಪಗಳೇ ಅಲ್ಲವೇ.

ವಿಪ್ರ ಶಿಶುವಿನ ರಕ್ಷಣೆಗೆ ಅರ್ಜುನನ ಪ್ರತಿಜ್ಞೆ

ವ್ರಜಂತಿ ಜನ್ಮನೋऽನು ಮೇ ಸದಾ ಸುತಾ ಅದೃಶ್ಯತಾಮ್ ।
ಇತೀರಿತೇऽರ್ಜುನೋऽಬ್ರವೀದಹಂ ಹಿ ಪಾಮಿ ತೇ ಸುತಾನ್ ॥ ೧೬ ॥

ಅ: 'ಹುಟ್ಟುತ್ತಲೇ ನನ್ನ ಮಕ್ಕಳೆಲ್ಲಾ ಕಾಣೆಯಾಗುತ್ತಿರುವರು' - ಅವನು ಹೀಗೆನ್ನಲು ಅರ್ಜುನ ನುಡಿದ 'ನಾನು ನಿನ್ನ ಮಕ್ಕಳನ್ನು ರಕ್ಷಿಸುವೆನು'.

---

೧೬. ಪಾಮಿ - ರಕ್ಷಿಷ್ಯಾಮಿ। – (ಜ.)

೩) ಶ್ರೀಮದಾಚಾರ್ಯರು ಸೂರ್ಯಗ್ರಹಣವೊಂದರಲ್ಲಿ ಕಣ್ವತೀರ್ಥದ ಬಳಿ ಸಮುದ್ರ ಸ್ನಾನಕ್ಕೆ ತೆರಳಿದ್ದಾಗ ಅಲ್ಲಿಯೂ ಹೀಗೆ ಅವರ ಭಕ್ತರು ಮಾತ್ರವಲ್ಲದೇ ದ್ವೇಷಿಗಳೂ ನೆರೆದಿದ್ದ ವಿವರ *ಸುಮಧ್ವವಿಜಯದಲ್ಲಿ ಬಂದಿರುವುದು ಗಮನಾರ್ಹ (೧೬/೧೨, ೨೧).

ತಥೈವ ನಂದಗೋಪಕಃ ಸದಾರಗೋಪಗೋಪಿಕಃ ।
ಮುನೀಶ್ವರಾಶ್ಚ ಸರ್ವಶಃ ಸಮೀಯುರತ್ರ ಚ ಪ್ರಜಾಃ ॥ ೬ ॥

ಅ: ಹಾಗೆಯೇ ನಂದಗೋಪನು ಪತ್ನೀ, ಹಾಗೂ ಗೋಪಗೋಪಿಯರೊಂದಿಗೆ ತೆರಳಿದ. ಮುನಿಶ್ರೇಷ್ಠರು ಮೊದಲಾಗಿ ಸಮಸ್ತ ಜನರೂ ಅಲ್ಲಿಗೆ ತೆರಳಿದರು.

ಪ್ರಿಯಾಶ್ಚ ಯೇ ರಮೇಶಿತುರ್ಹರಿಂ ತ್ರಿರೂಪಮೇತ್ಯ ತೇ ।
ವಸಿಷ್ಠವೃಷ್ಣಿನಂದನೌ ಭೃಗೂತ್ತಮಂ ತಥಾऽರ್ಚಯನ್ ॥ ೭ ॥

ಅ: ಹರಿಗೆ ಪ್ರಿಯರಾದವರೆಲ್ಲ ಲಕ್ಷ್ಮೀಪತಿಯಾದ ಅವನ ವೇದವ್ಯಾಸ, ಯಾದವ ಕೃಷ್ಣ ಹಾಗೂ ಪರಶುರಾಮ ಎಂಬ ಮೂರು ರೂಪಗಳನ್ನು ನೋಡಿ ಪೂಜಿಸಿದರು.

ವಿ: ಅಲ್ಲಿ ಶ್ರೀಹರಿಯು ವ್ಯಾಸ, ಕೃಷ್ಣ ಹಾಗೂ ಪರಶುರಾಮ ಎಂಬ ರೂಪತ್ರಯಗಳಿಂದ ಕಾಣಿಸಿಗುವನು ಎಂಬ ಕಾತರದಿಂದ ಭಕ್ತರು ಅಲ್ಲಿಗೆ ತೆರಳಿದ್ದರು ಎಂದರ್ಥ.

ಕೃತಾರ್ಥತಾಂ ಚ ತೇ ಯಯೂ ರಮೇಶಪಾದದರ್ಶನಾತ್ ।
ರವಿಗ್ರಹೇ ಸಮಾಪ್ಲುತಾ ಭೃಗೂದ್ವಹೋತ್ಥತೀರ್ಥಕೇ ॥ ೮ ॥

ಅ: ಅವರೆಲ್ಲ ಸೂರ್ಯಗ್ರಹಣದ ಸಮಯದಲ್ಲಿ ಪರಶುರಾಮ ನಿರ್ಮಿತವಾದ ಆ ತೀರ್ಥಗಳಲ್ಲಿ ಮಿಂದು ಶ್ರೀಹರಿಯ ಪಾದದರ್ಶನದಿಂದಾಗಿ ಕೃತಾರ್ಥರಾದರು.

ವಿ: ೧) ಕೃಷ್ಣ ಹಾಗೆ ಅಲ್ಲಿಗೆ ತೆರಳಿದ್ದುದು ಸೂರ್ಯಗ್ರಹಣಕ್ಕೋಸ್ಕರ. ಇತರ ಜನರೂ ಸಹ ಅದಕ್ಕೆಂದೇ ಅಲ್ಲಿಗೆ ಬಂದು ಕೃಷ್ಣನ ದರ್ಶನ ಮಾಡಿ ಪುನೀತರಾದರು.

೨) ಗ್ರಹಣಾದಿಗಳಲ್ಲಿ ತೀರ್ಥಸ್ನಾನ, ಅಂತಃಕರಣಶುದ್ಧಿಯ ದ್ವಾರಾ, ಜ್ಞಾನದ್ವಾರಾ ಹರಿದರ್ಶನಕ್ಕೆ ಸಾಧನವಾಗುವ ಉಪಾಯ ಎಂಬ ಅಂಶವು ಇದರಿಂದ ಸೂಚಿತ.

---

* ಸರ್ವಜ್ಞಂ ಸಪರಿಜನಂ ಸಮೀಕ್ಷಮಾಣಾಃ ಪುಲ್ಲಾಕ್ಷಾಃ ಸ್ಮಿತವದನಾಃ ಶುಭಾ ನನಂದುಃ ।
ದೌರ್ಮುಖ್ಯಂ ದಧತ ಉತಾಪರೇ ನಿನಿಂದುರ್ನಾಶ್ಚರ್ಯಂ ದ್ವಯಮಪಿ ತತ್ತ್ವಭಾವತಂತ್ರಮ್ ॥
–ಮ.ವಿ.(೧೬/೧೨)

ಅನುಗ್ರಹಂ ವಿಧಾಯ ಸ ಸ್ವಕೇಷು ಕೇಶವಸ್ತ್ರಿವೃತ್ [೯] ।
ಅಯಾಜಯಚ್ಚ ಶೂರಜಂ ಮಖೈಃ ಸಮಾಪ್ತದಕ್ಷಿಣೈಃ ॥ ೯ ॥

ಅ: ಮೂರು ರೂಪದ ಶ್ರೀಹರಿ ತನ್ನ ಭಕ್ತರಿಗೆ ಅಲ್ಲಿ ಅನುಗ್ರಹ ಮಾಡಿದ; ವಸುದೇವನಿಂದ ಪೂರ್ಣ ದಕ್ಷಿಣೆಗಳಿಂದ ಕೂಡಿದ ಯಜ್ಞಗಳನ್ನು ಮಾಡಿಸಿದ.

ವಿ: ತಂದೆ ತಾಯಿಗಳಿಂದ ಯಜ್ಞ ಯಾಗಾದಿ ಸತ್ಕಾರ್ಯಗಳನ್ನು ಮಾಡಿಸುವುದು ಪುತ್ರರ ಕರ್ತವ್ಯ ಎಂಬ ತತ್ವವನ್ನೂ ಸಹ ಕೃಷ್ಣ ಆ ಮೂಲಕ ಸಾರಿದ ಎಂದು ತಿಳಿಯಬೇಕು.

ಸಮಸ್ತಲೋಕಸಂಸ್ಥಿತಾತ್ಮಭಕ್ತಿಮಜ್ಜನಸ್ಯ ಸಃ ।
ಸುಕಾಲದರ್ಶನಾತ್ ಪರಂ ವ್ಯಧಾದನುಗ್ರಹಂ ಹರಿಃ ॥ ೧೦ ॥

ಅ: ತನ್ನಲ್ಲಿ ಭಕ್ತಿಯುಳ್ಳ ಸಮಸ್ತ ಲೋಕದ ಜನರಿಗೆಲ್ಲ ಅಂತಹ ಪರ್ವಕಾಲದಲ್ಲಿ ದರ್ಶನ ನೀಡುವ ಮೂಲಕ ಶ್ರೀಕೃಷ್ಣ ವಿಶೇಷಾನುಗ್ರಹ ಮಾಡಿದ.

ಶ್ರೀಕೃಷ್ಣ ಮಾಡಿದ ಏಕಾಹಯಜ್ಞ (ಮಹಾಶ್ವಮೇಧಯಜ್ಞ)

ತತೋ ಯಯೌ ಸ್ವಕಾಂ ಪುರೀಂ ಪೃಥಾಸುತೈಃ ಸಹಾಚ್ಯುತಃ ।
ಚಕಾರ ತತ್ರ ಚಾಹ್ನಿಕಂ ಕ್ರತುಂ ಮಹಾಶ್ವಮೇಧಿಕಮ್ ॥ ೧೧ ॥

ಅ: ಕೃಷ್ಣ ಆ ಬಳಿಕ ಪಾಂಡವರೊಂದಿಗೆ ಕೂಡಿ ದ್ವಾರಕಾಪುರಿಗೆ ತೆರಳಿದ. ಅಲ್ಲಿ ಒಂದು ದಿನದ ಮಹಾಶ್ವಮೇಧ ಎಂಬ ಯಜ್ಞವನ್ನು ಮಾಡಿದ.

ವಿ: ಅಶ್ವಮೇಧ ಯಾಗವನ್ನು ಅನೇಕ ರಾಜರು ಮಾಡಿದ ಉಲ್ಲೇಖ ಇತಿಹಾಸ ಪುರಾಣ–ಗಳಲ್ಲಿದೆ. ಆದರೆ ಒಂದೇ ದಿನದಲ್ಲಿ ಪೂರೈಸುವಂತಹ ಇಂತಹ ಮಹಾಶ್ವಮೇಧವನ್ನು ಮಾಡಿದ ದಾಖಲೆ ಭಗವಂತನಾದ ಶ್ರೀಕೃಷ್ಣನದು ಮಾತ್ರ (ಭಾಗವತ ೧೦/೧೦೦).

---

೯. ವಿವೃತ್ ತ್ರಿಭಿರ್ವರ್ತತ ಇತಿ ತ್ರಿವೃತ್ ವ್ಯಾಸಾದಿತ್ರಿರೂಪವಾನ್ । – (ಜ.)

೯ ತ್ರಿವೃತ್ । ತ್ರೇಧಾ ವರ್ತತ ಇತಿ ತ್ರಿವೃತ್ । – (ತಾ.)

೯ ಕೇಶವಸ್ತ್ರಿವೃದಿತ್ಯಸ್ಯ ತ್ರಿತ್ವೇನ ವಿಶಿಷ್ಟೋ ವರ್ತತ ಇತಿ ತ್ರಿವೃತ್ ಕೇಶವ ಇತ್ಯರ್ಥಃ । ಕೃಷ್ಣಸ್ಯ ತ್ರಿತ್ವಂ ವೇದವ್ಯಾಸ-ಪರಶುರಾಮಾಭ್ಯಾಂ ಸಹೇತಿ ದ್ರಷ್ಟವ್ಯಮ್ ॥ – (ಸ.)

೧೧. ಚಕಾರ ತತ್ರ ಚಾಹ್ನಿಕಮಿತ್ಯತ್ರ ಏಕಸ್ಮಿನ್ನಹ್ನಿ ಕ್ರಿಯಮಾಣಂ ಆಹ್ನಿಕಮ್ ॥ – (ವಾ.)

ಸಕೃಷ್ಣರಾಮಕಾರ್ಷ್ಣಿಭಿಃ ಸುತಾ ನ ಮೇಽತ್ರ ಪಾಲಿತಾಃ ।
ಕ್ವ ತೇಽತ್ರ ಶಕ್ತಿರಿತ್ಯಮುಂ ಜಗಾದ ಸೋಽರ್ಜುನಂ ದ್ವಿಜಃ ॥ ೧೭ ॥

ಅ: 'ಕೃಷ್ಣ, ಬಲರಾಮ, ಪ್ರದ್ಯುಮ್ನರು ನನ್ನ ಮಕ್ಕಳನ್ನು ರಕ್ಷಿಸಿಲ್ಲ. ನಿನಗೆ ಈ ವಿಷಯದಲ್ಲಿ ಶಕ್ತಿ ಎಲ್ಲಿಯದು' ಎಂದು ಆ ಬ್ರಾಹ್ಮಣ ಅರ್ಜುನನಿಗೆ ನುಡಿದ.

ವಿ: ೧) ಇಲ್ಲಿ ಕೃಷ್ಣಾದಿಗಳು ಪಾಲಿಸಿಲ್ಲ ಎಂದರೆ ಪಾಲಿಸುವೆವೆಂದು ರಕ್ಷಣೆಗೆ ಧಾವಿಸಿಲ್ಲ ಎಂದು ಮಾತ್ರವೇ ಅರ್ಥ.

೨) ದುಃಖದ ಭರದಲ್ಲಿ ಆ ಬ್ರಾಹ್ಮಣ ಹಾಗೆ ಹೇಳಿದ ಎಂದು ತಿಳಿಯಬೇಕು. ಇಲ್ಲವಾದಲ್ಲಿ ಮುಂದೆ ಕೃಷ್ಣನಿಂದ ಆ ವಿಪ್ರಪುತ್ರರು ರಕ್ಷಿತರಾದುದ್ದಕ್ಕೆ ವಿರುದ್ಧವಾಗುವುದು.

ಅರ್ಜುನನ ದರ್ಪ

ತದಾ ಜಗಾದ ಫಲ್ಗುನೋಽಸುರೈರ್ವಿದೂಷಿತಾತ್ಮನಾ ।
ನ ವಿಪ್ರ ತಾದೃಶೋಽಸ್ಮ್ಯಹಂ ಯಥೈವ ಕೇಶವಾದಯಃ ॥ ೧೮ ॥

ಅ: ಆಗ ಅಸುರಾವೇಶದಿಂದಾಗಿ ಮನಸ್ಸು ಕಲುಷಿತವಾಗಿದ್ದ ಅರ್ಜುನ ನುಡಿದ 'ಬ್ರಾಹ್ಮಣ, ನಾನು ಕೃಷ್ಣ ಮೊದಲಾದವರು ಎಂಥವರೋ ಅಂಥವನಲ್ಲ'.

ವಿ: ಇಲ್ಲಿ ಅರ್ಜುನನ ಈ ಮಾತಿನಲ್ಲಿ ತಾನು ಕೃಷ್ಣ ಬಲರಾಮರಿಗಿಂತ ಮಿಗಿಲು ಎಂಬ ಭಾವ ಕಂಡು ಬರುತ್ತದೆ. ಅದು ಸರ್ವಥಾ ಅಪ್ರಾಮಾಣಿಕವಾದ ಮಾತು. ಅರ್ಜುನನಂತಹ ಮಹಾಜ್ಞಾನಿ ಹಾಗೆ ನುಡಿಯಲು ಅವನೊಳಗೆ ಆಗ ಅಸುರಾವೇಶ ಉಂಟಾಗಿದ್ದುದೇ ಕಾರಣ ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ. ಅವನು ಮಾತು ಶ್ರೀಕೃಷ್ಣ ಬಲರಾಮಾದಿಗಳಂತೆ ನಾನಲ್ಲ ಅವರು ತುಂಬಾ ದೊಡ್ಡವರು ಎಂಬ ಅರ್ಥದಲ್ಲಿ ಬಂದಿದ್ದರೆ ಗ್ರಾಹ್ಯವಾಗುತ್ತಿತ್ತು

---

೧೭ ಸಕೃಷ್ಣರಾಮಕಾರ್ಷ್ಣಿಭಿಃ ಸುತಾ ನ ಮೇ ಪಾಲಿತಾ ಇತ್ಯಸ್ಯ ಭವಿಷ್ಯಂತೀತ್ಯಧ್ಯಾಹಾರೇಣ ಮೇ ಸುತಾಃ ಪಾಲಿತಾ ನ ಭವಿಷ್ಯಂತೀತ್ಯರ್ಥಃ ॥ – (ಸ.)

೧೭. ಕೃಷ್ಣಾದಿಭಿಃ ಪಾಲಯಿಷ್ಯಾಮಿ ಇತ್ಯಪ್ರತಿಜ್ಞಾತಾ ಇತ್ಯರ್ಥಃ । – (ತಾ.)

೧೮. ನಾಹಂ ಸಂಕರ್ಷಣೋ ಬ್ರಹ್ಮನ್ ನ ಕೃಷ್ಣಃ ಕಾರ್ಷ್ಣಿರೇವ ವಾ ।
ಅಹಂ ವಾ ಅರ್ಜುನೋ ನಾಮ ಗಾಂಡೀವಂ ಯಸ್ಯ ವೈ ಧನುಃ ॥ – ಭಾಗವತ (೧೦/೮೯/೩೩)

ಮಯಾ ಜಿತಾ ಹಿ ಖಾಂಡವೇ ಸುರಾಸ್ತಥಾಽಸುರಾನಹಮ್ ।
ನಿವಾತವರ್ಮನಾಮಕಾನ್ ವಿಜೇಷ್ಯ ಉತ್ತರತ್ರ ಹಿ ॥ ೧೯ ॥

ಅ: 'ನಾನು ಖಾಂಡವವನದಲ್ಲಿ ದೇವತೆಗಳನ್ನೇ ಗೆದ್ದಿರುವೆ. ಹಾಗೆಯೇ ನಾನು ಮುಂದೆ ನಿವಾತಕವಚ ಎಂಬ ಹೆಸರಿನ ಅಸುರರನ್ನೂ ಗೆಲ್ಲಲಿರುವೆ'.

ವಿ: ೧) ಅರ್ಜುನ ನಿವಾತಕವಚರನ್ನು ಆಗಲೇ ಕೊಂದಿರುವನು ಎಂದು ನುಡಿದಂತೆ ಭಾಗವತದಲ್ಲಿ ಉಲ್ಲೇಖವಿದೆ. ಅದರ ಭಾವವನ್ನು ಆಚಾರ್ಯರು ಇಲ್ಲಿ ವಿವರಿಸಿರುವರು. ಇಲ್ಲಿ ಕೊಂದಿರುವೆನು ಎಂದರೆ ಕೊಲ್ಲಲಿರುವೆನು ಎಂದರ್ಥ.

೨) ಅರ್ಜುನ ಅವತರಿಸಿದಾಗಲೇ ಅವನು ಮಾಡುವ ಕೆಲವು ಮುಖ್ಯ ಕಾರ್ಯಗಳ ವಿವರ ಆಶರೀರವಾಣಿಯಿಂದ ಘೋಷಿತವಾಗಿತ್ತು. ಅದರಲ್ಲಿ ನಿವಾತಕವಚವಧವೂ ಸೇರಿದೆ :

ನಿವಾತಕವಚಾ ನಾಮ ದೈತ್ಯಾ ವಿಬುಧವಿದ್ವಿಷಃ ।
ಶಕ್ರಾಜ್ಞಯಾ ಮಹಾಬಾಹುಸ್ತಾನ್ ವಧಿಷ್ಯತಿ ತೇ ಸುತಃ ॥ –ಭಾರತ (ಆದಿ.೧೨೨/೪೫)

೩) **'ವಿಷ್ಯಚ್ಚ ನಿಶ್ಚಿತಂ ಯತ್ತದತೀತತ್ವೇನ ಭಣ್ಯತೇ'*** (ಭಾ.ತಾ. ೩/೩/೨೫) ಎಂಬ ವಚನದಂತೆ ನಿಶ್ಚಿತವಾಗಿ ನಡೆಯುವ ಅದನ್ನು ಅರ್ಜುನ ಭೂತಕಾಲದಲ್ಲಿ ತಿಳಿಸಿದ ಎಂದು ತಿಳಿಯಬೇಕು ಎಂದರ್ಥ. ನಿವಾತಕವಚರನ್ನು ಅರ್ಜುನ ಕೊಂದ ವಿವರ ಮುಂದೆ ವನಪರ್ವದಲ್ಲಿ (ಭಾರತ ವನಪರ್ವ, ಅಧ್ಯಾಯ ೧೭೨; ಮ.ಭಾ.ತಾ.ನಿ. ೨೨/೩೨೩) ಬರುವುದು.

ಕೃಷ್ಣನೀಡಿದ ಎಚ್ಚರಿಕೆ

ಉದೀರ್ಯ ಚೇತಿ ಕೇಶವಂ ಸ ಊಚಿವಾನ್ ವ್ರಜಾಮ್ಯಹಮ್ ।
ಇತೀರಿತೋಽವದದ್ಧರಿಸ್ತವಾತ್ರ ಶಕ್ಯತೇ ನು ಕಿಮ್ ॥ ೨೦ ॥

ಅ: ಹೀಗೆ ನುಡಿದು ಅವನು ಕೃಷ್ಣನಿಗೆ ತಿಳಿಸಿದ ''ನಾನಿದೋ ತೆರಳುವೆ''. ಅವನು ಹೀಗೆಂದಾಗ ಕೃಷ್ಣನುಡಿದ ''ನಿನಗಿದು ಶಕ್ಯವಾದೀತೇ?''.

---

೧೯. ನಿವಾತವರ್ಮನಾಮಕಾನ್ ನಿವಾತಕವಚನಾಮಕಾನಿತ್ಯರ್ಥಃ ॥ –(ವಾ.)

* 'ವಿಷ್ಯಚ್ಚ ನಿಶ್ಚಿತಂ ಯತ್ತದತೀತತ್ವೇನ ಭಣ್ಯತೇ ।
ಚಕ್ರವತ್ ಪರಿವೃತ್ತೇರ್ವಾ ದುಷ್ಪಾನಾಂ ಮೋಹನಾಯ ವಾ' ಇತಿ ನಾರದೀಯೇ ॥ –ಭಾ.ತಾ. (೩/೩/೨೮)

ಎ: ತನ್ನ ಅಪ್ಪಣೆಯನ್ನು ಕೇಳಿದ ಅರ್ಜುನನಿಗೆ ಕೃಷ್ಣ ಹಾಗೆ ಕೇಳುವ ಮೂಲಕ ಎಚ್ಚರಿಸಿದ ಎಂದು ತಿಳಿಯಬೇಕು.

ವಿಲಜ್ಜಮಾನಮೀಕ್ಷ್ಯ ತಂ ಜಗಾದ ಕೇಶವೋ೭ರಿಹಾ ।
ವ್ರಜೇತಿ ಸ ಪ್ರತಿಶ್ರವಂ ಚಕಾರ ಹಾಪ್ಯರಕ್ಷಣೇ ॥ ೨೧ ॥

ಅ: ಅರ್ಜುನ ಲಜ್ಜೆಗೇಡಿಯಾದುದನ್ನು ಕಂಡು ಶತ್ರುನಾಶಕನಾದ ಕೃಷ್ಣ ನುಡಿದ 'ತೆರಳು' ಎಂದು; ಆಗ ಅರ್ಜುನ ತಾನು ರಕ್ಷಿಸಲು ವಿಫಲನಾದಲ್ಲಿ ಹೀಗೆ ಮಾಡುವೆನೆಂದು ಶಪಥ ಮಾಡಿದ.

ಅರ್ಜುನನ ಅಗ್ನಿಪ್ರವೇಶದ ಪ್ರತಿಜ್ಞೆ

ವಹ್ನಿಂ ಪ್ರವೇಕ್ಷ್ಯೇ೭ಶಕ್ತಶ್ಚೇದಿತ್ಯುಕ್ತ್ವಾ ಸರ್ವಯಾದವೈಃ ।
ಯಯೌ ನ ರಾಮಪ್ರದ್ಯುಮ್ನಾವನಿರುದ್ಧಂ ಚ ಕೇಶವಃ ।
ನ್ಯಯೋಜಯತ್ ತತ್ಸಹಾಯೇ ಯಶಸ್ತೇಷ್ವಭಿರಕ್ಷಿತುಮ್ ॥ ೨೨ ॥

ಅ: ''ಅಶಕ್ತನಾದಲ್ಲಿ ಅಗ್ನಿಯನ್ನು ಪ್ರವೇಶಿಸುವೆ'' ಎಂದು ನುಡಿದು ಸಕಲ ಯಾದವರೊಂದಿಗೂ ತೆರಳಿದ. ಬಲರಾಮ, ಪ್ರದ್ಯುಮ್ನ ಮತ್ತು ಅನಿರುದ್ಧರನ್ನು ಮಾತ್ರ ಕೃಷ್ಣ ಅವರ ಕೀರ್ತಿಯನ್ನು ಉಳಿಸಲೆಂದು ಅವನ ಸಹಾಯಕ್ಕೆ ನಿಯೋಜಿಸಲಿಲ್ಲ.

ವಿ: ೧) ಕೃಷ್ಣನ ಆಕ್ಷೇಪದಿಂದ ಬೆಚ್ಚಿದ ಅರ್ಜುನ ಪುನಃ ಅಹಂಕಾರದಿಂದ ತನ್ನ ಮೊದಲ ಶಪಥವನ್ನು ಪೂರೈಸದಿದ್ದಲ್ಲಿ ಅಗ್ನಿಯನ್ನು ಪ್ರವೇಶ ಮಾಡುವುದಾಗಿ ಮತ್ತೊಂದು ಶಪಥವನ್ನು ಮಾಡಿದ.

೨) ಕೃಷ್ಣ ತೆರಳು ಎಂದು ಹೇಳಿದ್ದನ್ನು ತರ್ಕಮುದ್ರೆಯಿಂದ ಅರ್ಥಮಾಡಿಕೊಳ್ಳಬೇಕು. ಅದಕ್ಕೆ ತೆರಳಿ ನೋಡು ಅದು ನಿನಗೆ ಆಗದು ಎಂದು ಅರ್ಥವಾಗುವುದು. ಅರ್ಜುನನೊಂದಿಗೆ ಇತರ ಯಾದವರನ್ನು ಕಳುಹಿಸಿದರೂ, ಬಲರಾಮ, ಪ್ರದ್ಯುಮ್ನ ಮತ್ತು ಅನಿರುದ್ಧ – ಈ ಮೂವರನ್ನು ಮಾತ್ರ ಕೃಷ್ಣ ಅವನೊಂದಿಗೆ ಕಳುಹಿಸಲಿಲ್ಲ.

೩) ಕಾರಣ ಆ ಕಾರ್ಯದಲ್ಲಿ ಅರ್ಜುನ ವಿಫಲನಾಗುವುದು ನಿಶ್ಚಿತ. ಅವನೊಂದಿಗೆ ಇವರೂ ವಿಫಲರಾದರೆಂಬ ಅಪಕೀರ್ತಿಗೆ ಗುರಿಯಾಗಕೂಡದು ಎಂಬುದು ಆತನ ಸಂಕಲ್ಪ ಎಂದರ್ಥ.

---

೨೧. ವಿಲಜ್ಜಮಾನಮೀಕ್ಷ್ಯೇತ್ಯಸ್ಯ ಲಜ್ಜಾರಹಿತಮೀಕ್ಷ್ಯೇತ್ಯರ್ಥಃ। – (ಸ.)

ಅನಿರುದ್ಧನ ಸ್ವರೂಪ

ಪ್ರಿಯೋ ಹಿ ನಿತರಾಂ ರಾಮಃ ಕೃಷ್ಣಸ್ಯಾನು ಚ ತಂ ಸುತಃ ।
ಅನಿರುದ್ಧಃ ಕಾರ್ಷ್ಣಿಮನು ಪ್ರದ್ಯುಮ್ನಾದ್ಯೋಽಜನಿಷ್ಟ ಹಿ ॥ ೨೩ ॥

ರುಗ್ಮಿಪುತ್ರ್ಯಾಂ ರುಗ್ಮವತ್ಯಾಮಾಹೃತಾಯಾಂ ಸ್ವಯಂವರೇ ।
ರತಿರೇವ ಹಿ ಯಾ ತಸ್ಯಾಂ ಜಾತೋಽಸೌ ಕಾಮನಂದನಃ ॥ ೨೪ ॥

ಅ: ಕೃಷ್ಣನಿಗೆ ಬಲರಾಮ ಅತ್ಯಂತ ಪ್ರಿಯ; ಅನಂತರ ಪ್ರದ್ಯುಮ್ನ ಪ್ರಿಯ; ಬಳಿಕ ಅನಿರುದ್ಧ; ಅವನು ಪ್ರದ್ಯುಮ್ನನಿಂದ ಸ್ವಯಂವರದಲ್ಲಿ ಅಪಹೃತಳಾದ ರುಗ್ಮಿಪುತ್ರಿಯಾದ ರುಗ್ಮವತಿಯಲ್ಲಿ ಜನಿಸಿದವನು. ಆ ರುಗ್ಮವತಿಯೂ ರತಿಯ ಅವತಾರಳೇ, ಕಾಮಪುತ್ರನಾದ ಅನಿರುದ್ಧ ಜನಿಸಿದ್ದು ಅವಳಲ್ಲಿಯೇ.

ವಿ: ೧) ಈ ಮೂವರನ್ನು ಮಾತ್ರ ಕಳುಹಿಸದಿರಲು ಅವರು ಕೃಷ್ಣನಿಗೆ ಅತ್ಯಂತ ಪ್ರಿಯರಾದವರಾದ್ದರಿಂದ ಅವರಿಗೆ ಅಪಕೀರ್ತಿ ಒದಗದಿರಲಿ ಎಂದು. ಬಲರಾಮ ಪ್ರಿಯನಾಗಲು ಅವನಲ್ಲಿ ಕೃಷ್ಣನ ಸಂಕರ್ಷಣ ರೂಪದ ವಿಶೇಷಾವೇಶವಿದ್ದುದು ಕಾರಣವಾದರೆ, ಪ್ರದ್ಯುಮ್ನ ಪ್ರಿಯವಾಗಲು ಅವನಲ್ಲಿ ಪ್ರದ್ಯುಮ್ನರೂಪದ ವಿಶೇಷಾವೇಶ ಇರುವುದು ಕಾರಣ.

೨) ಅದರಂತೆ ಅನಿರುದ್ಧ ರೂಪದ ವಿಶೇಷಾವೇಶವಿದ್ದುದು ಅನಿರುದ್ಧ ಪ್ರಿಯವಾಗಲು ಕಾರಣ. ಇವರು ಮೂವರೂ ಕ್ರಮವಾಗಿ ಶೇಷ, ಕಾಮ ಹಾಗೂ ಅನಿರುದ್ಧರ ಅವತಾರ.

೩) ಅದರಂತೆ ತಾರತಮ್ಯಕ್ರಮೇಣ ಅವರಲ್ಲಿನ ಪ್ರೀತಿಯಲ್ಲಿಯೂ ತಾರತಮ್ಯ ಎಂದು ತಿಳಿಯಬೇಕು. ಅನಿರುದ್ಧ ಮೂಲದಲ್ಲೂ ಕಾಮಪುತ್ರ, ಇಲ್ಲೂ ಕಾಮಾವತಾರನಾದ ಪ್ರದ್ಯುಮ್ನನ ಪುತ್ರ ಎಂಬುದು ವಿಶೇಷ.

ಪೂರ್ವಮಪ್ಯನಿರುದ್ಧಾಖ್ಯೋ ವಿಷ್ಣೋಸ್ತನ್ನಾಮ್ನ ಏವ ಚ ।
ಆವೇಶಯುಕ್ತೋ ಬಲವಾನ್ ರೂಪವಾನ್ ಸರ್ವಶಾಸ್ತ್ರವಿತ್ ॥ ೨೫ ॥

ಅ: ಅವನು ಹಿಂದೆಯೂ ಅನಿರುದ್ಧ ಎಂಬ ಹೆಸರಿನವನಾಗಿದ್ದು ವಿಷ್ಣುವಿನ ಆ ಹೆಸರಿನ ರೂಪದ ಆವೇಶದಿಂದ ಕೂಡಿದ್ದ. ಬಲವಂತ, ರೂಪವಂತ ಹಾಗೂ ಸರ್ವಶಾಸ್ತ್ರಗಳನ್ನೂ ಅರಿತಿದ್ದವನು.

ವಿ: ೧) ಈ ಅನಿರುದ್ಧನು ಮುಂದೆ ಬಾಣಾಸುರನ ಪುತ್ರಿಯಾದ ಉಷೆಯನ್ನು ವಿವಾಹವಾಗುವ ವಿವರ ಮುಂದೆ ಬಂದಿದೆ (೨೨/೨೪೪).

೨) ಅನಿರುದ್ಧನ ಮಗ ವಜ್ರ ಶೂರಸೇನದೇಶ ಮತ್ತು ಇಂದ್ರಪ್ರಸ್ಥಗಳಿಗೆ ರಾಜನನ್ನಾಗಿ ಮಾಡಿದ ಉಲ್ಲೇಖ ಮುಂದೆ ಮಹಾಪ್ರಸ್ಥಾನ ಪರ್ವದಲ್ಲಿ ಬಂದಿದೆ (ಅ. ೩೨, ಶ್ಲೋ. ೫೧).

ತಸ್ಮಾತ್ ತಾಂಸ್ತ್ರೀನೃತೇ ಕೃಷ್ಣಃ ಪಾರ್ಥಸಾಹಾಯ್ಯಕಾರಣಾತ್ ।
ನ್ಯಯೋಜಯತ್ ಸೂತಿಕಾಲೇ ಬ್ರಾಹ್ಮಣ್ಯಾಃ ಸ ಚ ಫಲ್ಗುನಃ ॥ ೨೬ ॥

ಅರ್ಜುನನ ವೈಫಲ್ಯ - ಶ್ರೀಕೃಷ್ಣನಲ್ಲಿ ಶರಣಾಗತಿ

ಅಸ್ತ್ರೈಶ್ಚಕಾರ ದಿಗ್ಬಂಧಂ ಕುಮಾರೋಽಥಾಪಿ ತತ್‌ಕ್ಷಣಾತ್ ।
ಅದರ್ಶನಂ ಯಯೌ ಪಾರ್ಥೋ ವಿಷಣ್ಣಃ ಸಹ ಯಾದವೈಃ ।
ಅಧಿಕ್ಷಿಪ್ತೋ ಬ್ರಾಹ್ಮಣೇನ ಯಯೌ ಯತ್ರ ಶ್ರಿಯಃಪತಿಃ ॥ ೨೭ ॥

ಅ: ಆದ್ದರಿಂದ ಆ ಮೂವರನ್ನು ಹೊರತು ಇತರರನ್ನು ಕೃಷ್ಣ ಅರ್ಜುನನ ಸಹಾಯಕ್ಕೆಂದು ನಿಯೋಜಿಸಿದ. ವಿಪ್ರಪತ್ನಿಯ ಪ್ರಸವ ಕಾಲದಲ್ಲಿ ಅರ್ಜುನನು ಅಸ್ತ್ರಗಳಿಂದ ದಿಗ್ಬಂಧನವನ್ನು ಮಾಡಿದ. ಹಾಗಿದ್ದರೂ ಹುಟ್ಟಿದ ಮಗು ಆ ಕ್ಷಣದಲ್ಲೇ ಕಾಣೆಯಾಯಿತು. ವಿಷಣ್ಣನಾದ ಬ್ರಾಹ್ಮಣ ಅರ್ಜುನನನ್ನು *ನಿಂದಿಸಿದ; ಅರ್ಜುನ ಯಾದವರೊಂದಿಗೆ ಶ್ರೀಪತಿಯಾದ ಶ್ರೀಕೃಷ್ಣನಿದ್ದಲ್ಲಿಗೆ ತೆರಳಿದ.

ವಿ: ೧) ಖಾಂಡವವನ ದಹನದಲ್ಲಿ ಇಂದ್ರ ಸುರಿಸಿದ ಮಳೆಯ ಒಂದು ಹನಿಯೂ ಒಳಗಿಳಿಯ–ದಿದ್ದಂತೆ ಅಸ್ತ್ರಗಳಿಂದ ಛಾವಣಿ ನಿರ್ಮಿಸಿದ್ದವನು, ಒಳಗಿನಿಂದ ಒಂದು ಪ್ರಾಣಿಯೂ ಹೊರಗೆ ತಪ್ಪಿಸಿಕೊಂಡು ಹೋಗದಂತೆ ಬಲೆ ಹೆಣೆದಿದ್ದವನು ಎಂಬ ಕಾರಣದಿಂದ ಅರ್ಜುನನಿಗೆ ಆ ವಿಪ್ರ–ಪುತ್ರನ ರಕ್ಷಣೆ ಅಂತಹ ಅಸಾಧ್ಯಕಾರ್ಯವಲ್ಲ ಎಂಬ ಅಹಂಕಾರ ಬಂದಿರಬೇಕು. ಅದರಿಂದ ಅವನು ಅಂತಹ ಮಂತ್ರಾಸ್ತ್ರಗಳಿಂದ ದಿಗ್ಬಂಧನ ಮಾಡಿ ಯಶಸ್ವಿಯಾಗುವುದಾಗಿ ಭಾವಿಸಿದ್ದ. ಆದರೆ, ಅದೆಲ್ಲ ವ್ಯರ್ಥವಾಗಿ ಹುಟ್ಟಿದ ಮಗು ಕಾಣೆಯಾದಾಗ ಕಾರಣ ತಿಳಿಯದ ಅರ್ಜುನ ವಿಷಾದಕ್ಕೊಳಗಾದ.

---

೨೬. ಅಧಿಕ್ಷಿಪ್ತ - ತಿರಸ್ಕೃತಃ। – (ಜ.)

* ತತಃ ಕುಮಾರಃ ಸಂಜಾತೋ ವಿಪ್ರಪತ್ನ್ಯಾ ರುದನ್ ಮುಹುಃ।
ಸದ್ಯೋಽದರ್ಶನಮಾಪೇದೇ ಸಶರೀರೋ ವಿಹಾಯಸಾ ॥
ತದಾऽऽಹ ವಿಪ್ರೋ ವಿಜಯಂ ವಿನಿಂದನ್ ಕೃಷ್ಣಸನ್ನಿಧೌ ।
ಮೌಢ್ಯಾದ್ಧಸ್ಯ ತವಾಹಂ ವೈ ಶ್ರದ್ದಧೇ ಕ್ಲೀಬಕತ್ಥನಮ್ ॥...
ಧಿಗರ್ಜುನಂ ವೃಥಾವಾಚಂ ಧಿಗಾತ್ಮಶ್ಲಾಘಿನೋ ಧನುಃ।
ದೈವೋಪಸೃಷ್ಟಯೋರ್ಮೌಢ್ಯಾದಾನಿನೀಷತಿ ದುರ್ಮತಿಃ ॥ ... – ವಿ. ಭಾಗವತ (೧೦/೧೦೦/೪೬,೪೭,೪೯)

೨) ಅರ್ಜುನನ ಪ್ರಯತ್ನ ವ್ಯರ್ಥವಾದಾಗ ಆ ಬ್ರಾಹ್ಮಣ ಅವನನ್ನು ಮಾತ್ರವಲ್ಲದೇ ಅವನನ್ನು ನಂಬಿದ್ದಕ್ಕಾಗಿ ತನ್ನನ್ನೂ ಜರಿದುಕೊಂಡ. ಆ ಮೂಲಕ ಅರ್ಜುನನನ್ನು ಮತ್ತಷ್ಟು ಜರಿದಂತಾಯಿತು.

೩) ಅರ್ಜುನ ಆಗ *ಇಂದ್ರಾದಿದಿಕ್ಪಾಲಕರ ಲೋಕಗಳನ್ನು, ಅಂತರಿಕ್ಷಪಾತಾಳಗಳನ್ನು ಶೋಧಿಸಿದರೂ ಆ ವಿಪ್ರಪುತ್ರನನ್ನು ಕಾಣದೇ ನಿರಾಶನಾಗಿ ಹಿಂದಿರುಗಿದ.

ಅರ್ಜುನನೊಂದಿಗೆ ಕೃಷ್ಣನ ಅನಂತಾಸನ ಪ್ರಯಾಣ

ವಹ್ನಿಂ ವಿವಿಕ್ಷಂತಮಮುಂ ನಿವಾರ್ಯ
ಯಯೌ ಸವಿಪ್ರಃ ಸಹಫಲ್ಗುನೋ ಹರಿಃ ।
ಆಶಾಮುದೀಚೀಂ ಬೃಹತಾ ರಥೇನ
ಕ್ಷಣೇನ ತೀರ್ತ್ವೈವ ಚ ಸಪ್ತ ವಾರಿಧೀನ್ ॥ ೨೮ ॥

ಅ: ಅರ್ಜುನ ಅಗ್ನಿಯನ್ನು ಪ್ರವೇಶಿಸಬಯಸಲು ಶ್ರೀಕೃಷ್ಣ ಅವನನ್ನು ತಡೆದು ಅವನೊಂದಿಗೂ ಆ ಬ್ರಾಹ್ಮಣನೊಂದಿಗೂ ಕೂಡಿ ದೊಡ್ಡ ರಥವನ್ನೇರಿ ಕ್ಷಣದಲ್ಲಿಯೇ ಸಪ್ತಸಾಗರಗಳನ್ನು ದಾಟಿ ಉತ್ತರದಿಕ್ಕಿಗೆ ಪ್ರಯಾಣ ಮಾಡಿದ.

---

* ...ಯಯೌ ಸಂಯಮನೀಮಾಶು ಯತ್ರಾಸ್ತೇ ಭಗವಾನ್ ಯಮಃ ॥
ವಿಪ್ರಾಪತ್ಯಮಚಕ್ಷಾಣಸ್ತತ ಐಂದ್ರೀಮಗಾತ್ ಪುರಮ್ ।
ಆಗ್ನೇಯೀಂ ನೈರ್ಋತೀಂ ಸೌಮ್ಯಾಂ ವಾಯವ್ಯಾಂ ವಾರುಣೀಮಥ ॥
ರಸಾತಲಂ ನಾಗಪುರಂ ಧಿಷ್ಣ್ಯಾನ್ಯನ್ಯಾನ್ಯದಾಯುಧಃ ।
ತತೋಽಲಬ್ಧ್ವಿಜಸುತೋ ಹ್ಯನಿಸ್ತೀರ್ಣಪ್ರತಿಶ್ರುತಃ ॥ – ಭಾಗವತ (೧೦/೧೦/೫೦-೫೨)

೨೮. ಆಶಾಮುದೀಚೀಂ ಬೃಹತಾ ರಥೇನೇತ್ಯಸ್ಯ ''ಸಹೈವ ರಥಮಾಸ್ಥಾಯ ಪ್ರತೀಚೀಂ ದಿಶಮಾವಿಶತ್'' ಇತಿ (೧೦/೮೯/೪೭) ಭಾಗವತೋಕ್ತ್ಯಾ ವಿರೋಧ ಇತಿ ಚೇನ್ನ । ಉತ್ತರೋತ್ತರಗತೇರೂರ್ಧ್ವಗತೇಶ್ಚ ಮುಕ್ತಿತ್ವೇನ ಮುಕ್ತಿತಯಾऽಭಿಮತಾನಂತಾಸನಲೋಕೋऽಪಿ ಉತ್ತರಸ್ಯಾಮೇವ ದಿಶಿ ವಕ್ತವ್ಯಃ । ಅತಸ್ತಾತ್ಪರ್ಯನಿರ್ಣಯ-ಕಾರೋಕ್ತಮೇವ ತಾತ್ಪರ್ಯಮ್। ಭಾಗವತೋಕ್ತಿಸ್ತು ''ವ್ಯತ್ಯಾಸಃ ಪ್ರಾತಿಲೋಮ್ಯಂ ಚ'' ಇತಿ ವಚನಾತ್ ದಿಗ್ವ್ಯತ್ಯಾಸೇನ ಉದೀಚೀಮೇವ ಪ್ರತೀಚೀಮಿತ್ಯಾಹೇತಿ ಪರಿಹಾರಸಂಭವಾತ್ । ಪ್ರತ್ಯಕ್ ಪುರುಷಃ ಸ್ವಮೂಲರೂಪೀ ಅನಂತಾಸನೋ ನಾರಾಯಣಃ ಪ್ರತ್ಯಗಿತ್ಯುಚ್ಯತೇ । ತಸ್ಯ ಸಂಬಂಧಿನೀ ಪ್ರತೀಚೀತಿ ವ್ಯುತ್ಪತ್ತ್ಯಾ ಉದೀಚ್ಯೇವ ಪ್ರತೀಚೀತ್ಯುಚ್ಯತೇ। ಅತೋऽಪಿ ನ ವಿರೋಧಃ । ಯದ್ವಾ ವಾಯವ್ಯಾಂ ದಿಶಿ ಅನಂತಾಸನೋ ಲೋಕಃ। ಸಾ ಚ ದಿಕ್ ಯಥೇಶಾನೀದಿಕ್ ಪ್ರಾಗುದೀಚೀತ್ಯುಚ್ಯತೇ । ತಥಾ ಪ್ರತ್ಯಗುದೀಚೀತ್ಯುಚ್ಯತೇ। ಕೋಣದಿಶಾಮುಭಯರೂಪತ್ವಾತ್। ಅತ ಉಭಯಥಾऽಪಿ ಪ್ರಯೋಗೋ ನ ದೋಷಾಯೇತಿ ಜ್ಞೇಯಮ್ ॥ – (ವಾ.)

ವಿ: ೧) ಇಲ್ಲಿ ದೊಡ್ಡ ರಥವೆಂದರೆ ಶ್ರೇಷ್ಠ ರಥ ಎಂದರ್ಥ. ಅದು ಕೃಷ್ಣನದೇ ರಥವೆಂದು ತಿಳಿಸಲು ಆ 'ಬೃಹತಾ' ಎಂಬ ವಿಶೇಷಣ ಎಂದು ತಿಳಿಯಬೇಕು :

೨) *ಭಾಗವತದಲ್ಲಿ ಪಶ್ಚಿಮದಿಕ್ಕಿಗೆ ತೆರಳಿದ ಎಂಬ ವಚನವಿದ್ದು ಅದಕ್ಕೆ ದಿಗ್ವ್ಯತ್ಯಾಸ ಎಂದು ತಿಳಿದು, ನಿರ್ಣಯಕ್ಕನುಗುಣವಾಗಿ ಅರ್ಥಮಾಡಿಕೊಳ್ಳಬೇಕು ಎಂಬ ವಿವರಣೆ ವಾದಿರಾಜೀಯದಲ್ಲಿದೆ. ವಿಜಯಧ್ವಜೀಯಪಾಠದಲ್ಲಿ 'ಪ್ರಾಚೀಂ ದಿಶಮ್' ಎಂಬ ಪಾಠವೇ ಇದೆ.

ಕೃಷ್ಣನ ಪ್ರಯಾಣ ವೈಭವ

ದದುಶ್ಚ ಮಾರ್ಗಂ ಗಿರಯೋಽಬ್ಧಯಸ್ತಥಾ
ವಿದಾರ್ಯ ಚಕ್ರೇಣ ತಮೋಽಂಧಮೀಶಃ ।
ಘನೋದಕಂ ಚಾಪ್ಯತಿತೀರ್ಯ ತತ್ರ
ದದರ್ಶ ಧಾಮ ಸ್ವಮನಂತವೀರ್ಯಃ ॥ ೨೯ ॥

ಅ: ಪರ್ವತಗಳು, ಸಮುದ್ರಗಳು ಮಾರ್ಗ ನೀಡಿದವು. ಅನಂತವೀರ್ಯನಾದ ಕೃಷ್ಣ ಚಕ್ರದಿಂದ ಅಂಧಂತಮಸ್ಸನ್ನು ಸೀಳಿ, ಘನೋದಕವನ್ನೂ ದಾಟಿ ತನ್ನ ಪರಂಧಾಮವನ್ನು ಕಂಡ.

ವಿ: ೧) ಕೃಷ್ಣ ಹಾಗೆ ಸಾಗಿದಾಗ ಮಾರ್ಗ ಮಧ್ಯದಲ್ಲಿ ಸಪ್ತಪರ್ವತಗಳು, ಸಪ್ತಸಮುದ್ರಗಳೂ ತಾವಾಗಿಯೇ ದಾರಿ ನೀಡಿ ತಮ್ಮ ಗೌರವವನ್ನು ಸೂಚಿಸಿದವು.

೨) ಶ್ರೀರಾಮದೇವರಿಗೆ ಸಮುದ್ರ ಮಾರ್ಗ ನೀಡಿದ್ದನ್ನು (೮/೧೨) ಇಲ್ಲಿ ಸ್ಮರಿಸಿಕೊಳ್ಳಬಹುದು.

---

* ... ಇತಿ ಸಂಭಾಷ್ಯ ಭಗವಾನರ್ಜುನಂ ಸ ಮಹೇಶ್ವರಃ ।
ಸಹೈವ ರಥಮಾಸ್ಥಾಯ ಪ್ರಾಚೀಂ ದಿಶಮವೀವಿಶತ್ ॥ – ವಿ.ಭಾಗವತ (೧೦/೧೦೦/೫೪)

೨೯. ದದೌ ಚ ಮಾರ್ಗಂ ಗಿರಯೋಽಬ್ಧಯ ಇತಿ । – (ಮ.)

೨೯. 'ತತಶ್ಚಕ್ರೇಣ ಗೋವಿಂದಃ ಪಾಟಯಿತ್ವಾ ತಮಸ್ತತಃ' ಇತ್ಯಾದಿ । – (ಮ.)

೩೦. ತಮಃ ಸುಘೋರಂ ಗಗನಚ್ಚದಂ ಮಹದ್ ವಿದಾರಯದ್ಭೂರಿತರೇಣ ರೋಚಿಷಾ ।
ಮನೋಜವಂ ನಿರ್ವಿವಿಶೇ ಸುದರ್ಶನಂ ಗುಣಚ್ಛುತೋ ರಾಮಶರೋ ಯಥಾ ಚಮೂಮ್ ॥
– ಭಾಗವತ (೧೦/೮೯/೫೧)

೨೯. ತತಃ ಕದಾಚಿದ್ದುಃಖೇನ ರಥಮೂಹುಸ್ತುರಂಗಮಾಃ ।
ಪಂಕಭೂತಂ ಹಿ ತಿಮಿರಮಶ್ವಾನಾಂ ಜಾಯತೇಽನಘಃ ।
ಅಥ ಪರ್ವತ ಭೂತಂ ತತ್ ತಿಮಿರಂ ಸಮಜಾಯತ ।
ತತಶ್ಚಕ್ರೇಣ ಗೋವಿಂದಃ ಪಾಟಯಾಮಾಸ ತತ್ ತಮಃ ॥ – ಹರಿವಂಶ (೨-೧೧೩.-೨೧,೨೨)

೩) ಕೃಷ್ಣ ಸುದರ್ಶನ ಚಕ್ರದಿಂದ ತಮಸ್ಸನ್ನು ಕೊರೆದದ್ದನ್ನು ಇಲ್ಲಿ ವಿಶೇಷವಾದ ತಾತ್ವಿಕ ಚರ್ಚೆಗೆ ಆಧಾರವನ್ನಾಗಿ ಜ್ಞಾನಿಗಳು ಬಳಸಿರುವರು.

೪) ಕೆಲವರು ತಮಸ್ಸನ್ನು ಪ್ರತ್ಯೇಕ ದ್ರವ್ಯವೆಂದು ಒಪ್ಪದೇ ಅದನ್ನು ತೇಜಸ್ಸಿನ ಅಭಾವವೆಂದು ವಾದಿಸುವ ಅವರಿಗೆ ಕೃಷ್ಣ ತಮಸ್ಸನ್ನು ಚಕ್ರದಿಂದ ಕೊರೆದ ಈ ಭಾಗವನ್ನು ಆಧಾರವನ್ನಾಗಿ ನೀಡಿ ತಮಸ್ಸು ಪ್ರತ್ಯೇಕ ದ್ರವ್ಯವೇ ಹೊರತು ಕೇವಲ ತೇಜಸ್ಸಿನ ಅಭಾವವಲ್ಲ ಎಂಬ ಪ್ರಮೇಯವನ್ನು ಶ್ರೀವ್ಯಾಸತೀರ್ಥರು *ತರ್ಕತಾಂಡವದಲ್ಲಿ ವಿವರವಾಗಿ ನಿರೂಪಿಸಿರುವರು.

೫) ರಾಮಾಯಣದ ಸಿಂಹಿಕಾ ಪ್ರಸಂಗದಲ್ಲಿ ತಮಸ್ಸನ್ನು ದ್ರವ್ಯವೆಂದು ನಿರೂತವಾದ ವಿವರ ಈಗಾಗಲೇ ಬಂದಿದೆ (ಅಧ್ಯಾಯ–೭, ಶ್ಲೋಕ ೬, ೭).

೬) ಅಲ್ಲಿ ತಮಸ್ಸಿನ ದ್ರವ್ಯತ್ವ ಸಾಧಿತವಾದದ್ದು ವಾಯುವಿನಿಂದ; ಇಲ್ಲಿ ಶ್ರೀಹರಿಯಿಂದ ಎಂಬುದು ವಿಶೇಷ.

ಮೂಲರೂಪದಲ್ಲಿ ಕೃಷ್ಣನ ಐಕ್ಯ

ಸಂಸ್ಥಾಪ್ಯ ದೂರೇ ಸರಥಂ ಸವಿಪ್ರಂ
ಪಾರ್ಥಂ ಸ್ವರೂಪೇ ದ್ವಿಚತುಷ್ಕಬಾಹೌ ।
ಸಮಸ್ತರತ್ನೋಜ್ಜ್ವಲದಿವ್ಯಭೂಷಣೇ
ವಿವೇಶ ನಿತ್ಯೋರುಗುಣಾರ್ಣವೇ ಪ್ರಭುಃ ॥ ೩೦ ॥

ಅ: ಶ್ರೀಕೃಷ್ಣ ದೂರದಲ್ಲೇ ರಥದಲ್ಲಿ ಬ್ರಾಹ್ಮಣ ಹಾಗೂ ಅರ್ಜುನನನ್ನು ನಿಲ್ಲಿಸಿ ತನ್ನ ಅಷ್ಟಬಾಹುಗಳಿಂದ ಕೂಡಿದ, ಸಮಸ್ತ ರತ್ನಗಳಿಂದ ಕಂಗೊಳಿಸುವ ದಿವ್ಯ ಭೂಷಣಗಳಿಂದ ಅಲಂಕೃತವಾದ, ಸದಾ ಶ್ರೇಷ್ಠ ಗುಣಗಳ ಸಾಗರವೆನ್ನಿಸಿದ, ಮೂಲ ರೂಪದಲ್ಲಿ ಪ್ರವೇಶಿಸಿದ.

---

* 'ತಮಃ ಸುಘೋರಂ .... ಯಥಾಚಮೂಮ್' ಇತಿ +ಭಾಗವತೇ, 'ತತಃ ಕದಾಚಿದ್ದುಃಖೇನ ... ಪಾಟಯಾಮಾಸ ತತ್ತಮಃ' ಇತಿ ಹರಿವಂಶೇ ಚ ತಮಸಶ್ಚಕ್ರವಿದಾರ್ಯತ್ವಪಂಕತ್ವಪರ್ವತತ್ವಾದ್ಯುಕ್ತ್ಯಾಕಾರಿಣ್ಯಾದಿಪ್ರತೀತೇಶ್ಚ।
– ತರ್ಕತಾಂಡವ (ಪರಿಚ್ಛೇದ ೨/ಪು.೧೧೦, ೧೧೧)

೩೦. ದೂರೇ ಅಮುಕ್ತಸ್ಥಾನೇ। – (ತಾ.)

೩೦. 'ಪ್ರಲಂಬಬಾರ್ವಷ್ಟಭುಜಮ್' ಇತಿ ×ಭಾಗವತೋಕ್ತೇಃ ದ್ವಿಚತುಷ್ಕಬಾಹಾವಿತ್ಯುಕ್ತಮ್ ॥ – (ವಾ.)

\+ ವಿ.ಭಾಗವತ (೧೦/೧೦೦/೫೮) × ಭಾಗವತ (೧೦/೫೯/೫೬)

ವಿ: ಅಮುಕ್ತರಿಗೆ ಮುಕ್ತಸ್ಥಾನದಲ್ಲಿ ಪ್ರವೇಶವಿಲ್ಲವಾದ್ದರಿಂದ 'ದೂರೇ' ಎಂಬುದಕ್ಕೆ ಅಮುಕ್ತ ಸ್ಥಾನದಲ್ಲಿ ಎಂದರ್ಥ (ತಾ).

ಸಹಸ್ರಮೂರ್ಧನ್ಯುರುಶೇಷಭೋಗ
ಆಸೀನರೂಪೇಽಮಿತಸೂರ್ಯದೀಧಿತೌ ।
ರಮಾಸಹಾಯೇ ತಟಿದುಜ್ಜ್ವಲಾಂಬರೇ
ಮುಕ್ತೈರ್ವಿರಿಂಚಾದಿಭಿರರ್ಚಿತೇ ಸದಾ ॥ ೩೧ ॥

ಅ: ಅದು ಸಾವಿರ ಹೆಡೆಗಳ ಉತ್ತಮವಾದ ಶೇಷನ ಮೈಮೇಲೆ ಕುಳಿತಿದ್ದಂತಹ ರೂಪ, ಅನಂತ ಸೂರ್ಯರ ಪ್ರಕಾಶ ಅದರದು, ಮಿಂಚಿನಂತೆ ಹೊಳೆಯುವ ವಸ್ತ್ರವನ್ನು ಅದು ಧರಿಸಿತ್ತು; ಅದು ಲಕ್ಷ್ಮೀಸಮೇತವಾದದ್ದು ಮುಕ್ತಬ್ರಹ್ಮಾದಿಗಳಿಂದ ಸದಾ ಆರಾಧಿತವಾದದ್ದು.

ವಿ: ಅದು ಮುಕ್ತಸ್ಥಾನವಾದ್ದರಿಂದ ಅಲ್ಲಿಯ ಬ್ರಹ್ಮ ಶೇಷ ಮೊದಲಾದ ಎಲ್ಲರೂ ಮುಕ್ತರಾದ–ವರೇ ಎಂಬ ವಿಶೇಷಾಂಶವನ್ನು ಗಮನಿಸಬೇಕು.

ವಿಪ್ರಪುತ್ರರೊಂದಿಗೆ ಕೃಷ್ಣನ ಆಗಮನ

ಸ್ಥಿತ್ವೈಕರೂಪೇಣ ಮುಹೂರ್ತಮೀಶ್ವರೋ
ವಿನಿರ್ಯಯೌ ವಿಪ್ರಸುತಾನ್ ಪ್ರಗೃಹ್ಯ ।
ಸುನಂದನಂದಾದಯ ಏವ ಪಾರ್ಷದಾ-
ಸ್ತೇ ವೈಷ್ಣವಾ ಭೂಮಿತಲೇ ಪ್ರಜಾತಾಃ ॥ ೩೨ ॥

ಅ: ಸರ್ವೇಶ್ವರನಾದ ಶ್ರೀಕೃಷ್ಣ ಅದರಲ್ಲಿ ಒಂದೇ ರೂಪದಿಂದ ಮುಹೂರ್ತಕಾಲ ನೆಲೆಸಿದ್ದು ವಿಪ್ರಪುತ್ರರನ್ನು ಕರೆದುಕೊಂಡು ಅಲ್ಲಿಂದ ಹೊರಗೆ ಬಂದ. ಆ ವಿಪ್ರಪುತ್ರರು ಸುನಂದ, ನಂದ ಮೊದಲಾದ ವಿಷ್ಣುಪಾರ್ಷದರಾದ ವೈಷ್ಣವರು; ಭೂಮಿಯಲ್ಲಿ ಜನಿಸಿದ್ದರು.

---

೩೧. ಏಕರೂಪತ್ವೇನೇತ್ಯರ್ಥಃ। – (ವೇ.)

೩೨. ವಿಪ್ರಸುತಾನ್ ಪ್ರಗೃಹ್ಯೇತ್ಯತ್ರ ಪ್ರಗೃಹ್ಯ= ಜಯವಿಜಯಾದಿವದಮುಕ್ತಗಮ್ಯಮುಕ್ತಿಸ್ಥಾನದ್ವಾರಪಾಲಕತಯಾ ಸ್ಥಿತಾನ್ ವಿಪ್ರಸುತಾನ್ ಪ್ರಗೃಹ್ಯೇತ್ಯರ್ಥಃ॥ – (ವಾ.)

೩೨. ವಾಸುದೇವೋ ರಥಂ ಸಪಾರ್ಥವಿಪ್ರಂ ಅಪ್ರಾಕೃತ ಸದನಾನ್ನಿರ್ಗತ್ಯಾಗಾದಿತ್ಯರ್ಥಃ। ನನು ವಿನಿರ್ಯಯೌ ವಿಪ್ರಸುತಾನ್ ಪ್ರಗೃಹ್ಯೇತ್ಯನೇನ ತೇ ಭಗವತ್ಸಮೀಪಸ್ಥಾ ಇತಿ ಜ್ಞಾಯತೇ । ತದಯುಕ್ತಮ್ । ಅಮುಕ್ತಾನಾಂ ಮುಕ್ತಸ್ಥಾನಾನ್ವಯಾಯೋಗಾತ್ ಮುಕ್ತೈರ್ವಿರಿಂಚಾದಿಭಿರಿತಿ ಮುಕ್ತಸ್ಥಾನತ್ವಂ ಚೋಕ್ತಮಿತಿ ಚೇನ್ನ। 'ವಿನಿರ್ಯಯೌ ವಿಪ್ರಸುತಾನ್ ಪ್ರಗೃಹ್ಯ' ಇತ್ಯತ್ರಾಮುಕ್ತಸ್ಥಾನಗತಾನಾದಾಯೇತ್ಯುಪಪತ್ತೇಃ। ಮುಕ್ತಸ್ಥಾನಾನ್ವಯಾಭಾವಾತ್। – (ತಾ.)

ವಿ: ಸುನಂದ, ನಂದ ಮೊದಲಾದವರು ಜಯ, ವಿಜಯರಂತೆ ಆ ವಿಷ್ಣುಲೋಕದ ಅಮುಕ್ತ-ಸ್ಥಾನದಲ್ಲಿ ಪಾರ್ಷದರಾಗಿದ್ದವರು ಎಂದು ತಿಳಿಯಬೇಕು ಎಂಬ ವಿಶೇಷಾಂಶ ವ್ಯಾಖ್ಯಾನಗಳಲ್ಲಿದೆ. ಇಲ್ಲಿ ಮುಹೂರ್ತ ಎಂದರೆ ಮುಹೂರ್ತಕಾಲ (ಎರಡು ಘಳಿಗೆಗಳು) ಎಂದೇ ಅರ್ಥ.

ದರ್ಪಂ ನಿಹಂತುಂ ಹರಿರರ್ಜುನಸ್ಯ
ಸಮಾನಯದ್ವಿಪ್ರಸುತಾನ್ ಪರೇಶಃ ।
ಪ್ರೀತಿರ್ಮಹತ್ಯೇವ ಯತೋಽರ್ಜುನೇ ಹರೇಃ
ಸಂಶಿಕ್ಷಯಾಮಾಸ ತತಃ ಸ ಏನಮ್ ॥ ೩೩ ॥

ಅ: ಅರ್ಜುನನ ಅಹಂಕಾರವನ್ನು ಕಳೆಯಲೆಂದು ಸರ್ವೋತ್ತಮನಾದ ಶ್ರೀಕೃಷ್ಣ ಹಾಗೆ ವಿಪ್ರಪುತ್ರರನ್ನು ಅಲ್ಲಿಗೆ ತಂದಿದ್ದ. ಅರ್ಜುನನಲ್ಲಿ ಶ್ರೀಕೃಷ್ಣನಿಗೆ ಅತಿಶಯವಾದ ಪ್ರೀತಿ ಇದ್ದುದರಿಂದಲೇ ಅವನಿಗೆ ಹಾಗೆ ತಿಳುವಳಿಕೆ ನೀಡಿದ.

ವಿ: ೧) ವಿಪ್ರಪುತ್ರರು ಜನಿಸುತ್ತಲೇ ಕಾಣೆಯಾಗುತ್ತಿದ್ದರ ರಹಸ್ಯವನ್ನು ಇಲ್ಲಿ ತಿಳಿಸಿರುವರು., ವಿಪ್ರಪುತ್ರರನ್ನು ಹಾಗೆ ತಕ್ಷಣ ಮರೆಮಾಡಿ ಕರೆದೊಯ್ಯುತ್ತಿದ್ದವನು ಸ್ವತಃ ಶ್ರೀಹರಿಯೇ. ಅರ್ಜುನನಿಗೆ ಒದಗಿದ ಅಹಂಕಾರವನ್ನು ಕಳೆಯಲೆಂದು ಹಾಗೆ ಮಾಡುತ್ತಿದ್ದ.

೨) ಅರ್ಜುನನ ಅಹಂಕಾರವನ್ನು ಕಳೆಯುವುದು ಎಂದರೆ ಅವನನ್ನು ಉದ್ಧರಿಸುವುದು ಎಂದರ್ಥ. ಅವನನ್ನು ಹಾಗೆ ವಿಶೇಷ ರೀತಿಯಲ್ಲಿ ಅನುಗ್ರಹಿಸಲು ಅವನ ಮೇಲಿದ್ದ ವಿಶೇಷ ಪ್ರೀತಿಯೇ ಕಾರಣ, ಆ ವಿಶೇಷ ಪ್ರೀತಿಗೆ ಅವನು ಇಂದ್ರಾವತಾರ, ನರಾಂಶಯುಕ್ತ ವಾಯು-ದೇವರ ಆವೇಶದಿಂದ ಕೂಡಿದವ, ಭೀಮನ ತಮ್ಮ ಮೊದಲಾದ ಅನೇಕ ಕಾರಣಗಳು ಈಗಾಗಲೇ ಬಂದಿವೆ.

ಮರಳಿ ದ್ವಾರಕೆಗೆ

ಅಪ್ರಾಕೃತಾತ್ ಸದನಾದ್ವಾಸುದೇವೋ
ನಿಃಸೃತ್ಯ ಸೂರ್ಯಾಧಿಕಲಕ್ಷದೀಧಿತೇಃ ।
ರಥಂ ಸಮಾರುಹ್ಯ ಸಪಾರ್ಥವಿಪ್ರ
ಆಗಾತ್ ಸುತಾಂಶ್ಚೈವ ದದೌ ದ್ವಿಜಾಯ ॥ ೩೪ ॥

ಅ: ಲಕ್ಷಕ್ಕೆ ಮಿಗಿಲಾದ ಸೂರ್ಯರ ಕಾಂತಿಯಿಂದ ಕಂಗೊಳಿಸುವ ಆ ಅಪ್ರಾಕೃತ ಲೋಕ-ದಿಂದ ಶ್ರೀಕೃಷ್ಣ ಹೊರಬಂದು ರಥವನ್ನೇರಿ ಅರ್ಜುನ ಹಾಗೂ ವಿಪ್ರರೊಂದಿಗೆ ಆ ವಿಪ್ರಪುತ್ರರನ್ನು ಕರೆದುಕೊಂಡು ತೆರಳಿದ; ಬ್ರಾಹ್ಮಣನಿಗೆ ಅವನ ಪುತ್ರರನ್ನು ಒಪ್ಪಿಸಿದ.

ವಿ: ೧) ವೈಕುಂಠ ಲೋಕದ ಅದ್ಭುತ ಕಾಂತಿಯನ್ನು ವರ್ಣಿಸುವ ಮೂಲಕ ಅದು ಸೂರ್ಯಾದಿಗಳಿಂದ ಬೆಳಗುವ ಲೋಕವಲ್ಲ ಎಂಬ ತತ್ತ್ವವನ್ನು ತಿಳಿಸಿರುವರು :

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ – ಗೀತಾ (೧೫/೬)

೨) ಕೃಷ್ಣನು ಹಾಗೆ ಬ್ರಾಹ್ಮಣನಿಗೆ ನೀಡಿದ ಒಟ್ಟು ಪುತ್ರರ ಸಂಖ್ಯೆ ನಾಲ್ಕು ಎಂದು ಹರಿವಂಶದಲ್ಲಿದೆ; ಅರ್ಜುನನು ರಕ್ಷಿಸಲು ವಿಫಲನಾದದ್ದು ನಾಲ್ಕನೆಯ ಮಗುವನ್ನು ಎಂದರ್ಥ.

ಲೋಕಶಿಕ್ಷಾರ್ಥಮೇವಾಸೌ ಪ್ರಾಯಶ್ಚಿತ್ತಂ ಚ ಚಾಲನೇ ।
ಚಕ್ರೇ ಸಾರ್ಧಮುಹೂರ್ತೇನ ಸಮಾಗಮ್ಯ ಪುನರ್ಮಖಮ್ ॥ ೩೫ ॥

ಅ: ಒಂದೂವರೆ ಮುಹೂರ್ತದಲ್ಲಿ ಹಾಗೆ ಹೋಗಿಬಂದ ಕೃಷ್ಣ, ಲೋಕಶಿಕ್ಷಣಕ್ಕೆಂದು, ಮಧ್ಯೆ ಯಜ್ಞಮಂಟಪದಿಂದ ತೆರಳಿದ್ದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡ. ಮುಂದೆ ಯಜ್ಞವನ್ನು ಪೂರೈಸಿದ.

ವಿ: ೧) ಕೃಷ್ಣ ಅಷ್ಟು ದೂರ ಹೋಗಿ ಬರಲು ಬೇಕಾದ ಅವಧಿ ಕೇವಲ ಒಂದುವರೆ ಮುಹೂರ್ತ ಕಾಲ ಮಾತ್ರ, ಎಂದರೆ ಒಟ್ಟು ಮೂರು ಘಳಿಗೆ, ಎಂದರೆ ಎಪ್ಪತ್ತೆರಡು ನಿಮಿಷಗಳು ಮಾತ್ರ.

೨) ಎಪ್ಪತ್ತೆರಡು ಸಹಸ್ರ ರೂಪಗಳಿಂದ ಪ್ರತೀ ದೇಹದಲ್ಲಿ ನಾಡೀಗತ ರೂಪಗಳಲ್ಲಿ ನೆಲೆಸಿರುವ ಭಗವಂತ ತಾನೇ ಎಂಬುದನ್ನು ಕೃಷ್ಣ ಆ ಮೂಲಕ ಸೂಚಿಸಿದ ಎಂದೂ ತಿಳಿಯ–ಬಹುದು.

---

೩೪. ಲಕ್ಷಾದಧಿಕಾ ಇತಿ ಅಧಿಲಕ್ಷಾಃ । ಅಧಿಲಕ್ಷಾಶ್ಚ ತೇ ಸೂರ್ಯಾಶ್ಚೇತಿ ಸೂರ್ಯಾಧಿಕಲಕ್ಷಾಃ । ತೇಷಾಂ ದೀಧಿತಿರಿವ ದೀಧಿತಿರ್ಯಸ್ಯ ತತ್ । ತಥಾ ತಸ್ಮಾತ್ ಲಕ್ಷಾಧಿಕಸೂರ್ಯಾಣಾಂ ಪ್ರಕಾಶವತ್ ಪ್ರಕಾಶವತಃ ಅಧಿಕಂ ಚ ತತ್ ಲಕ್ಷಂ ಚ ತಥಾ ಸೂರ್ಯಾಣಾಮಧಿಕಲಕ್ಷಂ ವಾ । ತದುಕ್ತಂ ಹರಿವಂಶೇ–

'ಚತುರೋ ಬಾಲಕಾನ್ ಗೃಹ್ಯ ಬ್ರಾಹ್ಮಣಸ್ಯಾತ್ಮಜಾಂಸ್ತಥಾ ।
ಪ್ರದದೌ ಬ್ರಾಹ್ಮಣಾಯಾಶು ಪುತ್ರಾನ್ ಸರ್ವಾನ್ ಜನಾರ್ದನಃ ।
ತ್ರಯಃ ಪೂರ್ವಂ ಹೃತಾ ಯೇ ಚ ಸದ್ಯೋಜಾತಶ್ಚ ಬಾಲಕಃ' ಇತಿ ಚ । – (ಜ.)

೩೫. .....ಚಾಲನೇ ಮಖಂ ಹಿತ್ವಾ ಅನ್ಯತ್ರಗಮನವಿಷಯೇ ಪ್ರಾಯಶ್ಚಿತ್ತಂ ಚಕ್ರೇ । ಪುನಃ ಮಖಂ ಚಕ್ರೇ । – (ಜ.)

೩೫. ಸಾರ್ಧಮುಹೂರ್ತೇನ ಅರ್ಧಮುಹೂರ್ತೇನ ಸಹಿತೈಕಮುಹೂರ್ತೇನ ಘಟಿಕಾತ್ರಯೇಣೇತ್ಯರ್ಥಃ । 'ಮುಹೂರ್ತಮಲ್ಪಕಾಲೇ ಸ್ಯಾದ್ಘಟಿಕಾ ದ್ವಿತಯೇಽಪಿ ಚ' ಇತಿ ಶಬ್ದಾರ್ಣವೇ । – (ಜ.)

೩) ಅದರಲ್ಲಿ ಮೂಲರೂಪದಲ್ಲಿ ನೆಲೆಸಿದ್ದ ಒಂದು ಮುಹೂರ್ತ ಕಾಲವನ್ನು ತೆಗೆದರೆ ಪ್ರಯಾಣಕ್ಕೆ ತಗುಲಿದ ಒಟ್ಟು ಕಾಲ ಬರೀ ಒಂದು ಘಳಿಗೆ ಮಾತ್ರ, ಎಂದರೆ ಇಪ್ಪತ್ತನಾಲ್ಕು ನಿಮಿಷಗಳು ಮಾತ್ರ.

೪) ಶ್ರೀರಾಮಭಕ್ತನಾದ ಹನುಮಂತ ಐವತ್ತುಸಹಸ್ರ ದೂರದ ಗಂಧಮಾದನಕ್ಕೆ ಹೋಗಿ ಬರಲು ತೆಗೆದುಕೊಂಡ ಒಟ್ಟು ಅವಧಿ ಒಂದು ಕ್ಷಣಮಾತ್ರ (೮/೧೫೪) ಎಂಬ ರಾಮಾಯಣದ ಉಲ್ಲೇಖವನ್ನು ಗಮನಿಸಿದಾಗ ಸ್ವತಃ ಶ್ರೀಹರಿ ಹೀಗೆ ಹೋಗಿ ಬಂದಿದ್ದರಲ್ಲಿ ಯಾವ ಅಚ್ಚರಿಯೂ ಇರದು.

೫) ಯಜ್ಞದೀಕ್ಷಿತನಾದವನು ಕುಳಿತ ಸ್ಥಳದಿಂದ ಬಿಟ್ಟೇಳುವುದು ವಿಹಿತವಾದುದಲ್ಲ ಎಂಬುದನ್ನು ಲೋಕಕ್ಕೆ ತಿಳಿಸಲೆಂದು ಶ್ರೀಕೃಷ್ಣ ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಎಂದು ತಿಳಿಯಬೇಕು.

ಬ್ರಹ್ಮಾದೀನಾಗತಾಂಶ್ಚೈವ ಸದಾ ಸ್ವಪರಿಚಾರಕಾನ್ ।
ಪೂಜಯಿತ್ವಾವಭೃನುಜ್ಞಾಯ ಬ್ರಾಹ್ಮಣಾನಪ್ಯಪೂಜಯತ್ ॥ ೩೬ ॥

ಅ: ಅಲ್ಲಿಗೆ ಆಗಮಿಸಿದ್ದ ತನ್ನ ನಿತ್ಯಪರಿಚಾರಕರಾದ ಬ್ರಹ್ಮಾದಿಗಳನ್ನು ಆದರಿಸಿ, ಅವರನ್ನು ಬೀಳ್ಕೊಟ್ಟು ಬ್ರಾಹ್ಮಣರನ್ನೂ ಸಹ ಸತ್ಕರಿಸಿದ.

ವಿ: ಇಲ್ಲಿ 'ಪೂಜಯಿತ್ವಾ' ಎಂಬುದಕ್ಕೆ ಸತ್ಕರಿಸಿ, ಆದರಿಸಿ ಎಂದರ್ಥ. ಶ್ರೀರಾಮದೇವರು ಶತ್ರುಘ್ನಾದಿಗಳನ್ನು ಅವರ ವಯಸ್ಸಿಗೆ ತಕ್ಕಂತೆ ಪೂಜಿಸಿದ ಎಂಬ ಮಾತು ಈಗಾಗಲೇ ಬಂದಿದೆ (೮/೩೦). 'ಭಜಾಮ್ಯಹಂ' ಎನ್ನುವಂತೆ ಈ ಪದ ಎಂದು ತಿಳಿಯಬೇಕು.

ಕೃಷ್ಣನಿಂದ ದಂತವಕ್ರ ವಿಡೂರಥರ ವಧೆ

ಸಸ್ನಾವವಭೃಥಂ ಕೃಷ್ಣಃ ಸದಾರಃ ಸಸುಹೃಜ್ಜನಃ ।
ಆಯಾಂತಂ ದ್ವಾರಕಾಂ ಕೃಷ್ಣಂ ದಂತವಕ್ರೋ ರುರೋಧ ಹ ॥ ೩೭ ॥

---

೩೭. ಸಸ್ನಾವವಭೃಥಂ ಕೃಷ್ಣ ಇತ್ಯತ್ರ "ಉದ್ಯಾಪನಸ್ನಾನಹೇತೋರ್ಯಮುನಾತೀರಮಾಗತಮ್" ಇತಿ ಭಾಗವತೋಕ್ತೇಃ । ಯಮುನಾಯಾಂ ಸಸ್ನಾವಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ। ಅತ ಏವ "ಆಯಾಂತಂ ದ್ವಾರಕಾಂ ಕೃಷ್ಣಮ್" ಇತ್ಯುಕ್ತಮ್ ॥ –(ವಾ.)

೩೭. ಸಸ್ನಾವವಭೃಥಮಿತ್ಯಸ್ಯ ಯಜ್ಞಸ್ನಾನಂ ಚಕ್ರ ಇತ್ಯರ್ಥಃ। –(ಸ.)

ಅ: ಕೃಷ್ಣ ತನ್ನ ಪತ್ನಿಯರೊಂದಿಗೂ, ಬಂಧುಜನರೊಂದಿಗೂ ಅವಭೃಥಸ್ನಾನವನ್ನು ಮಾಡಿದ. ಸ್ನಾನ ಪೂರೈಸಿ ದ್ವಾರಕೆಗೆ ಮರಳುವಾಗ ಮಾರ್ಗದಲ್ಲಿ ಅವನನ್ನು ದಂತವಕ್ರ ಅಡ್ಡಗಟ್ಟಿದ.

ವಿ: ೧) ಅವಭೃಥಸ್ನಾನ ಯಜ್ಞಸಮಾಪ್ತಿಯ ಮಂಗಳಸ್ನಾನ. ಯಜ್ಞ ಪೂರ್ಣಗೊಳ್ಳುವುದು ಅವಭೃಥಸ್ನಾನ ಪೂರೈಸಿದಾಗಲೇ. ಕೃಷ್ಣ ಅವಭೃಥಸ್ನಾನಮಾಡಿದ ಎನ್ನುವ ಮೂಲಕ ಯಜ್ಞ ಪೂರೈಸಿದ್ದನ್ನು ತಿಳಿಸಿರುವರು.

೨) ಭಾಗವತದಲ್ಲಿ ಅದನ್ನು ಉದ್ಯಾಪನಸ್ನಾನ ಎಂದೂ ಕರೆಯಲಾಗಿದೆ.

೩) ಕೃಷ್ಣ ಹಾಗೆ ಅವಭೃಥಸ್ನಾನವನ್ನು ಮಾಡಿದ್ದು ಯಮುನಾ ನದಿಯಲ್ಲಿ ಎಂಬ ವಿಶೇಷಾಂಶ ಭಾಗವತದಲ್ಲಿದೆ :

ಯಮುನಾಯಾಂ ಮಹಾನದ್ಯಾಂ ಕೃತ್ವಾऽವಭೃಥಮಜ್ಜನಮ್ ।
ವಿಜಹಾರ ಯಥಾಕಾಮಂ ಮಹಿಷೀಭಿರ್ಯದೂತ್ತಮಃ ॥

– ವಿ. ಭಾಗವತ (೧೦/೧೦೦/೭೪)

ಜಘಾನ ಗದಯಾ ಕೃಷ್ಣಸ್ತತ್ಕ್ಷಣಾತ್ ಸವಿಡೂರಥಮ್ ।
ವಿಡೂರಥಸ್ತಮೋऽಗಚ್ಛದ್ದಂತವಕ್ತ್ರೇ ಚ ಯೋऽಸುರಃ ।
ಹರೇಶ್ಚ ಪಾರ್ಷದಃ ಕ್ಷಿಪ್ರಂ ಹರಿಮೇವ ಸಮಾಶ್ರಿತಃ ॥ ೩೮ ॥

ಅ: ಕೃಷ್ಣ ದಂತವಕ್ರನನ್ನು, ವಿಡೂರಥನನ್ನು ಕ್ಷಣದಲ್ಲೇ ಗದೆಯಿಂದ ಸಂಹರಿಸಿದ. ವಿಡೂರಥನು ತಮಸ್ಸಿಗೆ ತೆರಳಿದ, ದಂತವಕ್ರನಲ್ಲಿದ್ದ ಅಸುರನೂ ಸಹ ತಮಸ್ಸಿಗೇ ತೆರಳಿದ; ಅವನೊಳಗಿದ್ದ ವಿಷ್ಣುಪಾರ್ಷದ ಹರಿಯೊಳಗೆ ಪ್ರವೇಶಿಸಿ ನೆಲೆಸಿದ.

---

೩೮. ವಿಡೂರಥಾಖ್ಯಭ್ರಾತ್ರಾ ಸಹ ವರ್ತಮಾನಂ ದಂತವಕ್ತ್ರಂ..... 'ಭ್ರಾತರಂ ನಿಹತಂ ದೃಷ್ಟ್ವಾ ದಂತವಕ್ರಂ ವಿಡೂರಥಃ' (೧೦/೧೦೧/೧೭) ಭಾಗವತೇ। – (ಜ.)

ಉದ್ಯಾಪನಸ್ನಾನಹೇತೋರ್ಯಮುನಾತೀರಮಾಗತಮ್ ।
ಶ್ರುತ್ವಾ ತೂರ್ಣಂ ಕಲಿಂಗೇಶೋ ದಂತವಕ್ತ್ರಃ ಸಹಾನುಜಃ ॥
ಮಹತ್ಯಾ ಸೇನಯಾ ಯುಕ್ತೋ ಗಜಾನೀಕಸಮನ್ವಿತಃ ।
ಗಚ್ಛಂತಂ ದ್ವಾರಕಾಂ ಕೃಷ್ಣಂ ಪಥಿ ರೋದ್ಧುಂ ಸಮಾಯಯೌ ॥ – ವಿ. ಭಾಗವತ (೧೦/೧೦೧/೧, ೨)

ದೀಕ್ಷಾಂತೋऽವಭೃಥೋ ಯಜ್ಞಃ । – ಅಮರಕೋಶ

ದೀಕ್ಷಾಯಾ ಅಂತಃಪ್ರಧಾನಕರ್ಮಸಮಾಪ್ತ್ಯೌ ಕ್ರಿಯಮಾಣೋ ಯೋ ಯಜ್ಞಃ ಇಷ್ಟಿವಿಶೇಷಸ್ತಸ್ಯ । - ವ್ಯಾಖ್ಯಾನ

ವಿಃ ೧) ಭಾಗವತದಲ್ಲಿ ರಾಜಸೂಯಯಾಗದಲ್ಲಿ ಶಿಶುಪಾಲನನ್ನು ಸಂಹರಿಸಿದ ಅನಂತರ ಕೃಷ್ಣ ಏಕಾಹಯಜ್ಞದ ಅವಭೃಥ ಸಮಯದಲ್ಲಿ ದಂತವಕ್ರನನ್ನು ಸಂಹರಿಸಿದ ಎಂಬಂತೆ [೨]ಉಲ್ಲೇಖವಿದೆ. ಅದನ್ನು [*]ಕಾಲವ್ಯತ್ಯಾಸ ಎಂದು ತಿಳಿಯಬೇಕು.

೨) ವಾಸ್ತವವಾಗಿ ಮೊದಲು ದಂತವಕ್ರನ ಸಂಹಾರ, ಅನಂತರ ಶಿಶುಪಾಲನ ಸಂಹಾರ ಎಂಬ ಪ್ರಮೇಯವನ್ನು ಇಲ್ಲಿ ತಿಳಿಸಿರುವರು.

೩) ವಿಡೂರಥ ದಂತವಕ್ರನ ತಮ್ಮ. ಅವನು ಸ್ವರೂಪತಃ ಅಸುರ. ಅವನು ತಮಸ್ಸಿಗೇ ತೆರಳಿದ. ಆದರೆ ದಂತವಕ್ರ ಹಿರಣ್ಯಾಕ್ಷನೆಂಬ ಅಸುರ. ಅವನಲ್ಲಿ ವಿಜಯ ಎಂಬ ವಿಷ್ಣುದ್ವಾರ–ಪಾಲಕನ ಆವೇಶವಿದ್ದಿತು ಎಂದು ತಿಳಿಸಲು ಅವನಲ್ಲಿದ್ದ ಅಸುರ ಮಾತ್ರ ತಮಸ್ಸಿಗೆ ನಡೆದ ಎಂದು ತಿಳಿಸಿರುವರು. ಒಳಗಿದ್ದ ವಿಜಯ ವಿಷ್ಣುವಿನ ಉದರವನ್ನು ಪ್ರವೇಶಿಸಿದ.

ವಿಜಯನಿಗೆ ಸದ್ಗತಿ

ಕೃಷ್ಣೇ ಪ್ರಾಪ್ತೇ ಸ್ವಲೋಕಂ ಚ ನಿಃಸೃತ್ಯಾಸ್ಮಾತ್ ಸ್ವರೂಪತಃ ।
ಏಕೀಭಾವಂ ಸ್ವರೂಪೇಣ ದ್ವಾರಪೇಣ ಗಮಿಷ್ಯತಿ ॥ ೩೯ ॥

ಅ: ಶ್ರೀಕೃಷ್ಣನು ಪರಂಧಾಮಕ್ಕೆ ತೆರಳಿದ ಮೇಲೆ ಅಲ್ಲಿಂದ ಹೊರಬಂದು ತನ್ನ ಸ್ವರೂಪವಾದ ದ್ವಾರಪಾಲಕ ರೂಪದೊಂದಿಗೆ ಅವನು ಐಕ್ಯ ಹೊಂದುವನು.

ವಿಃ ೧) ಕೃಷ್ಣನ ಉದರವನ್ನು ಪ್ರವೇಶಿಸಿದ ವಿಜಯ ಕೃಷ್ಣ ಪರಂಧಾಮಕ್ಕೆ ತೆರಳುವ ವರೆಗೂ ಅಲ್ಲಿಯೇ ನೆಲೆಸಿದ್ದು ಬಳಿಕ ತನ್ನ ಮೂಲರೂಪವನ್ನು ಸೇರುವನು ಎಂದರ್ಥ.

೨) ಶಿಶುಪಾಲನು ಸತ್ತಾಗಲೂ ಸಹ ಅವನ ದೇಹದಿಂದ ಹೊರಬಂದ ಜಯ ಕೃಷ್ಣನ ಉದರವನ್ನು ಪ್ರವೇಶಿಸಿ ಬಳಿಕ ಸದ್ಗತಿಗೆ ತೆರಳುವ ವಿವರ ಮುಂದೆ ಬಂದಿದೆ (ಶ್ಲೋ. ೨೫೯).

---

೩೮. ಗದಯಾऽತಾಡಯತ್ ಕೃಷ್ಣಂ ಸಿಂಹವದ್ವ್ಯನದಚ್ಚ ಸಃ ॥
ಗದಯಾऽಭಿಹತೋऽಪ್ಯಾಜೌ ನ ಚಚಾಲ ಯದೂತ್ತಮಃ ।
ಗದಯಾ ಮಹನದ್ಗರ್ವಾ ಕೌಮೋದಕ್ಯಾ ಸ್ತನಾಂತರೇ ॥
ಗಾಢನಿರ್ಭಿಣ್ಣಹೃದಯ ಉದ್ವಮನ್ ರುಧಿರಂ ಮುಖಾತ್ ।
ಪ್ರಸಾರ್ಯ ಕೇಶಬಾಹ್ವಂಘ್ರಿಂ ಗತಾಸುರ್ವ್ಯಪತದ್ಭುವಿ ॥
ತತಃ ಸೂಕ್ಷ್ಮತರಂ ಜ್ಯೋತಿಃ ಕೃಷ್ಣಮಾವಿಶದುದ್ಧತಮ್ ॥ – ವಿ. ಭಾಗವತ (೧೦/೧೦೧/೧೩-೧೬)

* ಪೌಂಡ್ರಕಂ ಮಾತುಲೇಯಂ ಮೇ ಸಂಖೇ ಸೂದಿತವಾನಸಿ ।
ರುಗ್ಮೀ ಚ ಶಿಶುಪಾಲಶ್ಚ ಭ್ರಾತರೌ ಮೇ ತ್ವಯಾ ಹತೌ ॥
ಅತಸ್ತ್ವಾಂ ಗದಯಾ ಮಂದ ಹನಿಷ್ಯೇ ವಜ್ರಕಲ್ಪಯಾ । ....
(ಶ್ರೀಕೃಷ್ಣನನ್ನುಕುರಿತು ದಂತವಕ್ರನ ವಚನ) – ವಿ. ಭಾಗವತ (೧೦/೧೦೧/೧೦,೧೧)

ಭೂಗೋಳ ವರ್ಣನೆ

ತತಃ ಕೃಷ್ಣಃ ಪುರೀಮೇತ್ಯ ಬೋಧಯಾಮಾಸ ಫಲ್ಗುನಮ್ ।
ಕಿಮೇತದ್ದೃಷ್ಟಮಿತ್ಯೇವ ತೇನ ಪೃಷ್ಟೋ ರಮಾಪತಿಃ ॥ ೪೦ ॥

ಅ: ಅನಂತರ ಕೃಷ್ಣ ದ್ವಾರಕಾಪುರಿಯನ್ನು ತಲುಪಿದ; ಅರ್ಜುನನು 'ನಾನು ಕಂಡಿದ್ದೆಲ್ಲಾ ಏನು' ಎಂದು ಕೇಳಿಕೊಳ್ಳಲು ರಮಾಪತಿಯಾದ ಕೃಷ್ಣ ಅವನಿಗೆ ತಿಳಿಸಿದ.

ವಿ: ಅರ್ಜುನನಿಗೆ ತಾನು ಕೃಷ್ಣನೊಂದಿಗೆ ತೆರಳಿದಾಗ ಕಂಡದ್ದನ್ನೆಲ್ಲಾ ತಿಳಿಯುವ ಕಾತರ–ವುಂಟಾಗಿತ್ತು ಯಾಗ ಮುಗಿಯುವ ವರೆಗೂ ಕಾದಿದ್ದು ಬಳಿಕ ಆ ಬಗ್ಗೆ ಕೃಷ್ಣನನ್ನು ಪ್ರಾರ್ಥಿಸಿದ ಎಂದರ್ಥ.

ಅಯಂ ದ್ವೀಪಃ ಸಾಗರಶ್ಚ ಲಕ್ಷಯೋಜನವಿಸ್ತೃತೌ ।
ತದನ್ಯೇ ತು ಕ್ರಮೇಣೈವ ದ್ವಿಗುಣೇನೋತ್ತರೋತ್ತರಾಃ ॥ ೪೧ ॥

ಅ: "ಈ ಜಂಬೂದ್ವೀಪ ಮತ್ತು ಈ ಲವಣಸಮುದ್ರ ಲಕ್ಷಯೋಜನ ವಿಶಾಲವಾಗಿವೆ. ಇತರ ದ್ವೀಪ ಹಾಗೂ ಸಮುದ್ರಗಳು ಕ್ರಮವಾಗಿ ಮೊದಲನೆಯದಕ್ಕಿಂತ ಎರಡನೆಯದು ಎರಡು ಪಟ್ಟು ಹೆಚ್ಚು ವಿಶಾಲವಾಗಿವೆ.

ವಿ: ೧) ಜಂಬು, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರ ಎಂಬುದಾಗಿ ಸಪ್ತ ದ್ವೀಪಗಳು ಎಂಬುದಾಗಿ ಭಾಗವತದಲ್ಲಿದೆ (೫/೧/೩೨) :

...ಸಪ್ತ ಭುವೋದ್ವೀಪಾಃ । ಜಂಬೂಪ್ಲಕ್ಷಶಾಲ್ಮಲಿಕುಶಕ್ರೌಂಚಶಾಕಪುಷ್ಕರಸಂಜ್ಞಾಃ ।
– ಭಾಗವತ (೫/೧/೩೨)

ಲವಣ, ಇಕ್ಷು, ಸುರ, ದಧಿ, ಘೃತ, ಕ್ಷೀರ ಮತ್ತು ಶುದ್ಧೋದ ಎಂಬುದಾಗಿ ಸಪ್ತ ಸಮುದ್ರಗಳು :

ಲವಣೋದೇಕ್ಷುರಸೋದಸುರೋದಘೃತೋದಕ್ಷೀರೋದದಧಿಮಂಡೋದಶುದ್ಧೋದಾಃ..।
– ಭಾಗವತ (೫/೧/೩೩)

---

೪೦. ರಮಾಪತಿಃ = ಶ್ರೀಕೃಷ್ಣಃ ಪುರೀಮೇತ್ಯ ತತ್ ದೃಷ್ಟಂ ಕಿಮಿತಿ ತೇನ = ಅರ್ಜುನೇನ ಪೃಷ್ಟಃ ಫಲ್ಗುನಂ ಬೋಧಯಾಮಾಸೇತ್ಯನ್ವಯಃ ॥ – (ವಾ.)

೪೧. ಚಶಬ್ದೋ ಲವಣಸಮುದ್ರಸ್ಯ ವಿಸ್ತೃತಿಸಮಗಾಂಭೀರ್ಯತ್ವಸೂಚಕಃ । ಸಪ್ತಾನಾಂ ತು ಸಮುದ್ರಾಣಾಂ ಗಾಂಭೀರ್ಯಂ ವಿಸ್ತೃತೇಃ ಸಮಮ್' ಇತ್ಯುಕ್ತೇಃ ॥ – (ರಾ.)

೨) ಇವು ಕ್ರಮವಾಗಿ ಜಂಬು ಮೊದಲಾದ ಸಪ್ತ ದ್ವೀಪಗಳ ಸುತ್ತ ಇರುವ ಸಮುದ್ರಗಳು.

೩) ಇವುಗಳಲ್ಲಿ ಎರನೆಯದ್ದು ಮೊದಲನೆಯದ್ದಕ್ಕಿಂತ ಎರಡು ಪಟ್ಟು, ಮುಂದಿನದು ಅದರ ಎರಡು ಪಟ್ಟು ಎಂಬುದಾಗಿ ತಿಳಿಯಬೇಕು.

ಅಂತ್ಯಾಧ್ಯರ್ಧಸ್ಥಲಂ ಹೈಮಂ ಬಾಹ್ಯತೋ ವಾಜ್ರಲೇಪಿಕಮ್ ।
ಏತತ್ ಸರ್ವಂ ಲೋಕನಾಮ ಹ್ಯೇತಸ್ಮಾದ್ದ್ವಿಗುಣಂ ತಮಃ ॥ ೪೨ ॥

---

೪೨. ಅಂತ್ಯಾತ್ ಸಮುದ್ರಾತ್ ಪರತಃ ಅಧ್ಯರ್ಧಸ್ಥಲಂ ಅರ್ಧಾದಪಿ ಪುನರಧಿಕಂ ಸ್ಥಲಮ್ । – (ವೇ.)

೪೨. ಅಂತ್ಯಾಧ್ಯರ್ಧಸ್ಥಲಂ ಹೈಮಮಿತ್ಯತ್ರ ವರ್ತುಲತಯಾ ಸ್ಥಿತಾಂತ್ಯಸಮುದ್ರಸ್ಯ ಭಾಗದ್ವಯೇ ಮಿಲಿತ್ವಾ ಯತ್ಪರಿಮಾಣಂ ಅಷ್ಟಾವಿಂಶೋತ್ತರಶತಲಕ್ಷಯೋಜನಾತ್ಮಕಮ್। ತತೋಽರ್ಧಂ ಚತುಃಷಷ್ಟಿಲಕ್ಷಯೋಜನಾನಿ। ತಾನಿ ಚ ಅಧಿ = ಯತ್ಕಿಂಚದಧಿಕಸಂಖ್ಯಯಾ ಅಷ್ಟಾವಿಂಶಸಹಸ್ರಾಖ್ಯಸಹಿತಾದ್ದ್ವಿಲಕ್ಷೋತ್ತರಚತ್ವಾರಿಂಶಲ್ಲಕ್ಷಪರಿಮಿತಯಾ ಸಹಿತಮಧಿಕಮಧ್ಯರ್ಧಂ ಸ್ಥಲಮಿತ್ಯರ್ಥಃ । ಬಾಹ್ಯತೋ ವಜ್ರಲೇಪಿಕಂ = ವಜ್ರಲೇಪಸ್ಥಲಸಹಿತಮ್। ಹೈಮಂ= ಸುವರ್ಣಮಯಮ್। ತತ್ರ ಸುವರ್ಣಭೂಮಿಸ್ತು ಅರ್ಧಪದೋಕ್ತಚತುಃಷಷ್ಟಿಲಕ್ಷಯೋಜನಪರಿಮಿತಾ ಉರ್ವರಿತಾ। ಅಷ್ಟಾವಿಂಶತ್ಸಹಸ್ರಾಖ್ಯಾಂಶೇನ ಸಹಿತದ್ವಿಲಕ್ಷೋತ್ತರಚತ್ವಾರಿಂಶಲ್ಲಕ್ಷಪರಿಮಿತಂ ವಜ್ರಲೇಪಸ್ಥಲಮಿತಿ ವಿವೇಕಃ। ತಾವತ್ತದರ್ಧಂ ಚೇತ್ಯರ್ಥಕಥನೇ ಭೂಗೋಳಸ್ಯ ಪಂಚಾಶತ್ಕೋಟಿತೋಽಪ್ಯಧಿಕ್ಯಂ ಸ್ಯಾತ್। ತಚ್ಚಾಂಡಕೋಶಾದ್ಬಹಿರಯಂ ಪಂಚಾಶತ್ಕೋಟಿವಿಸ್ತೃತ ಇತಿ ಭಾಗವತೋಕ್ತವಿರುದ್ಧಮ್। ತಸ್ಮಾತ್ ಶಬ್ದಸ್ಯ ಕಾಮದುಘತ್ವೇನ ಅರ್ಥಸ್ಯ ಚ ವ್ಯತ್ಯಾಸಾಯೋಗಾತ್ ಉಕ್ತೈವ ಯೋಜನಾ ॥ – (ವಾ.)

೪೨. ಅಧ್ಯರ್ಧಂ ಅರ್ಧೇನ ಅಧಿಕಂ ಪೂರ್ವೋಕ್ತಚತುಃಷಷ್ಟಿಲಕ್ಷಯೋಜನಾನಾಮರ್ಧೇನ ದ್ವಾತ್ರಿಂಶಲ್ಲಕ್ಷ-ಯೋಜನಪರಿಮಾಣೇನ ಅಧಿಕಂ ಚತುಃಷಷ್ಟಿಲಕ್ಷಯೋಜನಪರಿಮಾಣಂ ಸ್ಥಲಂ ಹೈಮಂ ಸುವರ್ಣಮಯಂ। ಷಣ್ಣವತಿಲಕ್ಷಯೋಜನವಿಸ್ತೀರ್ಣಂ ಹೈಮಸ್ಥಲಮಿತ್ಯರ್ಥಃ। ಬಾಹ್ಯತೋ ಬಹಿರ್ಭಾಗೇ ವಾಜ್ರಲೇಪಿಕಂ। ಚತುಃ ಪಂಚಾಶಲ್ಲಕ್ಷಾಧಿಕಕೋಟಿದ್ವಯಯೋಜನಸಂಖ್ಯಾಕಾಃ ಸರ್ವೇ ದ್ವೀಪಸಮುದ್ರಾಃ ಷಣ್ಣವತಿಲಕ್ಷಯೋಜನ ವಿಸ್ತೀರ್ಣಂ ಹೈಮಂ, ಸ್ಥಲಂ, ಏವಂ ಸರ್ವಂ ಮಿಲಿತ್ವಾ ಸಾರ್ಧಕೋಟಿತ್ರಯಪರಿಮಾಣಮುಕ್ತಂ। ಏತತ್ಸರ್ವಂ ತಮಸೋಽರ್ವಾಕ್ ಅಯಂದ್ವೀಪ ಇತ್ಯಾದ್ಯುಕ್ತಮ್ । ಲೋಕನಾಮ ಲೋಕಸಂಜ್ಞಕಂ ಸರ್ವಂ ಹಿ ಪ್ರಸಿದ್ಧಂ ಪುರಾಣಾದಾವಿತಿ ಶೇಷಃ। ಏತಸ್ಮಾಲ್ಲೋಕಶಬ್ದವಾಚ್ಯಾತ್ ದ್ವಿಗುಣಂ ಅಂಧಂತಮಃ ಸಪ್ತಕೋಟಿಯೋಜನಪರಿಮಾಣಂ ವಿಸ್ತೀರ್ಣಂ ಅಂಧಂತಮಃ । – (ಜ.)

೪೨. ಇದಂ ಪರಿಮಾಣಂ ತು ಕೃತಯುಗಪುರುಷಮಾನವಿವಕ್ಷಯೇತಿ ಸೂಚನಾಯ ಹಿಶಬ್ದಃ । ತ್ರೇತಾಯುಗಾದಿ-ಪುರುಷಮಾನೇನಾಧಿಕ್ಯಪರಿಮಾಣಕಥನಾತ್ । ತದೇತದುಕ್ತಂ ಬೃಹದ್ಭಾಷ್ಯೇ–

'ಸಪ್ತಕೋಟಿಂ ಚ ಲಕ್ಷಾಣಾಂ ಚತುರ್ದಶ ಚ ನಿತ್ಯಶಃ ।
ಅಷ್ಟಾವಿಂಶತ್ಸಹಸ್ರಂ ಚ ಸಪ್ತಾಂಶಶತಪಂಚಕಮ್ ।
ಸೌರೋ ರಥಸ್ತ್ವಹೋರಾತ್ರಾತ್ ಪರಿಯಾತಿ ದಿವಿ ಸ್ಥಿತಃ ।
ತತ್ತ್ರಿಭಾಗಾಧಿಕಂ ಚಕ್ರಂ ಮಾನಸೋತ್ತರಗಂ ಚರೇತ್ ।
ನೃಣಾಂ ಕಾರ್ತಯುಗಾನಾಂ ತು ಯೋಜನಾ ಮಾನತೋ ಭವೇತ್ ।
ಯಾವತ್ ಸೂರ್ಯರಥೋ ಯಾತಿ ದಿವಾರಾತ್ರೇಣ ಪಾರ್ಶ್ವಯೋಃ ।
ಸೂರ್ಯಸ್ಯ ತಾವದೇವ ಸ್ಯಾತ್ ಪ್ರಕಾಶಃ ಸರ್ವತಸ್ತಥಾ ॥ ಇತಿ ॥ – (ರಾ.)

ಅಂಧಂ ಯತ್ರ ಪತಂತ್ಯುಗ್ರಾ ಮಿಥ್ಯಾಜ್ಞಾನಪರಾಯಣಾಃ ।
ಘನೋದಕಂ ತದ್ದ್ವಿಗುಣಂ ತದಂತೇ ಧಾಮ ಮಾಮಕಮ್ ॥ ೪೩ ॥

ಯತ್ತದ್ದೃಷ್ಟಂ ತ್ವಯಾ ಪಾರ್ಥ ತತ್ರ ಮುಕ್ತೈರಜಾದಿಭಿಃ ।
ಸೇವ್ಯಮಾನಃ ಸ್ಥಿತೋ ನಿತ್ಯಂ ಸರ್ವೈಃ ಪರಮಪೂರುಷಃ ॥ ೪೪ ॥

ಅ: ಕೊನೆಯ ಸಮುದ್ರದ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಅಗಲವಾದದ್ದು ವಜ್ರಲೇಪದಿಂದ ಕೂಡಿದ ಸುವರ್ಣಭೂಮಿ. ಇದೆಲ್ಲಕ್ಕೂ ಲೋಕ ಎಂದು ಹೆಸರು. ಇದರ ಎರಡುಪಟ್ಟು ವಿಸ್ತಾರವಾದದ್ದು ಅಂಧಂತಮಸ್ಸು. ಆ ಅಂಧಂತಮಸ್ಸಿನಲ್ಲಿ ಕ್ರೂರಿಗಳು, ಮಿಥ್ಯಾಜ್ಞಾನ-ಪರಾಯಣರಾದವರು ಬೀಳುವರು. ಘನೋದಕ ಅದರ ಇಮ್ಮಡಿಯಾದದ್ದು, ಅದರ ಕೊನೆಯಲ್ಲಿ ನೀನು ನೋಡಿದ ನನ್ನ ಲೋಕವಿದೆ. ಅಲ್ಲಿ ಪರಮಪುರುಷನಾದ ನಾನು ಮುಕ್ತರಾದ ಬ್ರಹ್ಮಾದಿಗಳಿಂದ ಸದಾ ಸೇವಿತನಾಗಿರುವೆ.

ಲೋಕಾಲೋಕಪ್ರದೇಶ

ಲೋಕಾಲೋಕಪ್ರದೇಶಸ್ತು ಪಂಚಾಶಲ್ಲಕ್ಷವಿಸ್ತೃತಃ ।
ಸಪಂಚಾಶತ್ಸಹಸ್ರಶ್ಚ ತಸ್ಯಾಪಿ ಗಣನಂ ತಥಾ ॥ ೪೫ ॥

ಅ: ಲೋಕಾಲೋಕ ಪ್ರದೇಶವು ಐವತ್ತು ಲಕ್ಷ ಐವತ್ತು ಸಾವಿರ ಯೋಜನ ವಿಶಾಲ-ವಾದುದು. ಅದರ ಗಣನೆಯನ್ನೂ ಹಾಗೆಯೇ ತಿಳಿಯಬೇಕು.

---

೪೩. ಯತ್ರ ಅಂಧೇತಮಸಿ ತದ್ದ್ವಿಗುಣಂ ತಮಸೋ ದ್ವಿಗುಣಂ ದ್ವಿಲಕ್ಷನ್ಯೂನಚತುರ್ದಶಕೋಟಿಯೋಜನ-ವಿಸ್ತೀರ್ಣಂ ಘನೋದಕಮ್ । – (ಜ.)

೪೫. ಭಾಗವತಾದೌ ಅಧಿಕಪರಿಮಾಣಸ್ಯ ಊನಪರಿಮಾಣತಯಾ ಗಣನಂ ಕಥಂ ಘಟತ ಇತಿ ಚೇತ್, ದಶಯೋಜನಾತ್ ಕಿಂಚಿದಧಿಕಸ್ಯಾಪಿ ಗ್ರಾಮಾದೇರ್ದಶಯೋಜನಾದಿವ್ಯವಹಾರಸ್ಯ ಲೋಕೇ ದರ್ಶನಾತ್ ಪಂಚಾಶಲ್ಲಕ್ಷವಿಸ್ತೃತ ಇತಿ ಘಟತೇ। ಅಸ್ಯ ತು ತಾತ್ಪರ್ಯಗ್ರಂಥತ್ವಾದ್ಯಥಾವಸ್ತು ಕಥನಮೇವಕೃತಮಿತಿ ಭಾವಃ । – (ಜ.)

೪೫. ಲೋಕಾಲೋಕಪ್ರದೇಶಸ್ತು ಇತ್ಯತ್ರ ವಜ್ರಲೇಪಾಂಧತಮಸೋರ್ಮಧ್ಯವರ್ತೀ ಲೋಕಾಲೋಕಪರ್ವತಃ। ಅರ್ಧೇ ಸೂರ್ಯಲೋಕಸಂಚಾರೋऽಸ್ತಿ। ಪುನರರ್ಧೇ ತಮಸ್ಯಮೀಪಸ್ಥತ್ವಾತ್ ತಮ ಏವೇತಿ ಭಾವೇನ ಲೋಕಾಲೋಕ ಇತ್ಯುಕ್ತಮ್ ॥ – (ವಾ.)

ವಿ: ೧) ವಜ್ರಲೇಪ ಮತ್ತು ಅಂಧಂತಮಸ್ಸುಗಳ ಮಧ್ಯೆ ಲೋಕಾಲೋಕ ಪರ್ವತ ಉಂಟು. ಅದರ ಒಳಗಿನ ಅರ್ಧಭಾಗದಲ್ಲಿ ಸೂರ್ಯ ಸಂಚಾರವಿರುವುದರಿಂದ ಬೆಳಕು ಇರುವುದರಿಂದಲೂ, ಇತರ ಅರ್ಧಭಾಗದಲ್ಲಿ ಸೂರ್ಯ ಸಂಚಾರವಿಲ್ಲದಿರುವುದರಿಂದಲೂ ಅದು ಲೋಕಾಲೋಕ (ಬೆಳಕು ಮತ್ತು ಕತ್ತಲೆಗಳನ್ನುಳ್ಳ) ಪ್ರದೇಶ ಎಂದು ಕರೆಸುವುದು.

೨) ಭಾಗವತಾದಿಗಳಲ್ಲಿ ಅದರ ಪ್ರಮಾಣವನ್ನು ಐವತ್ತುಲಕ್ಷ ಮಾತ್ರ ಎಂದು ಹೇಳಿದ್ದರೂ, ಇಲ್ಲಿ ತಿಳಿಸಿರುವಂತೆ ಐವತ್ತು ಲಕ್ಷ ಐವತ್ತುಸಾವಿರ ಯೋಜನ ಎಂದೇ ನಿರ್ಣಯಿಸಿಕೊಳ್ಳಬೇಕು ಎಂಬ ವಿಶೇಷಾಂಶ ವ್ಯಾಖ್ಯಾನಗಳಲ್ಲಿದೆ.

ಬ್ರಹ್ಮಾಂಡದ ಪರಿಮಾಣ

ಯೋಜನಾನಾಂ ಪಂಚವಿಂಶತ್ಕೋಟಯೋ ಮೇರುಪರ್ವತಾತ್ ।
ಚತಸೃಷ್ವಪಿ ದಿಕ್ಷೂರ್ಧ್ವಮಧಶ್ಚಾಂಡಂ ಪ್ರಕೀರ್ತಿತಮ್ ॥ ೪೬ ॥

ಅ: ಬ್ರಹ್ಮಾಂಡವು ಮೇರು ಪರ್ವತದಿಂದ ನಾಲ್ಕು ದಿಕ್ಕುಗಳಲ್ಲಿ, ಮೇಲೆ ಹಾಗೂ ಕೆಳಗೆ ಇಪ್ಪತ್ತೈದು ಕೋಟಿ ಯೋಜನ ಎನ್ನಿಸಿದೆ.

ವಿ: ೧) ಮೇರು ಪರ್ವತವಿರುವುದು ಜಂಬೂದ್ವೀಪದ ಮಧ್ಯದಲ್ಲಿ. ಮೇರು ಪರ್ವತದ ಸುತ್ತ ಜಂಬೂದ್ವೀಪದ ವಿಸ್ತಾರ ನಾಲ್ಕು ದಿಕ್ಕುಗಳಲ್ಲಿ ಐವತ್ತುಸಾವಿರ ಯೋಜನ. ಹೀಗೆ ಮೇರುವಿನಿಂದ ಅಂಧಂ ತಮಸ್ಸಿನ ವರೆಗೆ ಲೋಕಾಲೋಕ ಪರ್ವತದ ವಿಸ್ತಾರವನ್ನು ಸೇರಿಸಿದರೆ ಒಟ್ಟು ನಾಲ್ಕು ಕೋಟಿ ಯೋಜನವಾಗುವುದು. ಅಂಧಂ ತಮಸ್ಸಿನ ವಿಸ್ತಾರ ಆರು ಕೋಟಿ ತೊಂಭತ್ತೊಂಭತ್ತು ಲಕ್ಷ ಯೋಜನ. ಫನೋದಕ ಅದರ ಇಮ್ಮಡಿ. ಎಂದರೆ ಹದಿಮೂರು ಕೋಟಿ ತೊಂಭತ್ತೆಂಟು ಲಕ್ಷ ಯೋಜನ. ಅನಂತಾಸನ ಮೂರು ಲಕ್ಷ ಯೋಜನ, ಅನಂತರ ಬ್ರಹ್ಮಾಂಡ ಕಟಾಹ.

೨) ಹೀಗೆ ಮೇರುವಿನಿಂದ ಬ್ರಹ್ಮಾಂಡ ಕಟಾಹದವರೆಗೆ ಒಟ್ಟು ಇಪ್ಪತ್ತೈದು ಕೋಟಿ ಯೋಜನ ಪ್ರಮಾಣ ಎನ್ನಿಸುವುದು ಎಂಬುದಾಗಿ ಜನಾರ್ದನೀಯದಲ್ಲಿದೆ.

---

೪೬. ಜಂಬೂದ್ವೀಪಸ್ಯ ಮಧ್ಯ ಏವ ಮೇರುಪರ್ವತಸ್ತಿಷ್ಠತಿ । ಮೇರೋಃ ಸಕಾಶಾಚ್ಚತುರ್ದಿಕ್ಷು ಜಂಬೂದ್ವೀಪಃ ಪಂಚಶತ್ಸಹಸ್ರಯೋಜನವಿಸ್ತೀರ್ಣಃ ಅತ ಏವ ಮೇರುಪರ್ವತಾದಂಧಂತಮಃಪರ್ಯಂತಂ ಲೋಕಾಲೋಕಪರ್ವತ-ಪರಿಮಾಣೇನ ಸಹಕೋಟಿಚತುಷ್ಟಯಂ ಭವತಿ । ಲಕ್ಷನ್ಯೂನಂ ಕೋಟಿಸಪ್ತಕಪರಿಮಾಣಂ ತಮಃ ದ್ವಿಲಕ್ಷನ್ಯೂನಂ ಚತುರ್ದಶಕೋಟಿಪರಿಮಾಣಂ ಫನೋದಕಂ । ತ್ರಿಲಕ್ಷಪರಿಮಾಣಂ ಅನಂತಾಸನಂ ಏವಂ ಮೇರುಪರ್ವತಮಾರಭ್ಯ ಅಂಡಪರ್ಯಂತಂ ಪಂಚವಿಂಶತ್ಕೋಟಯೋ ಭವಂತಿ ತದೇವಾಹ । ಯೋಜನಾನಾಮಿತಿ । – (ಜ.)

೨) ಮೇರು ಪರ್ವತದಿಂದ ಸಪ್ತದ್ವೀಪಗಳ, ಸಪ್ತಸಾಗರಗಳ ಒಟ್ಟು ವಿಸ್ತಾರ ಎರಡು ಕೋಟಿ ಐವತ್ತಮೂರುವರೆ ಲಕ್ಷ ಯೋಜನಗಳು. ಇದು ಒಂದು ಭಾಗ. ಎರಡು ಭಾಗಗಳ ಒಟ್ಟು ಅಳತೆ ಐದು ಕೋಟಿ ಏಳು ಲಕ್ಷಯೋಜನಗಳು. ವಜ್ರಲೇಪಯುಕ್ತ ಸ್ವರ್ಣಭೂಮಿಯ ಎರಡೂ ಪಾರ್ಶ್ವಗಳು ಸೇರಿ ಒಂದುಕೋಟಿ ಆರುಲಕ್ಷ ಇಪ್ಪತ್ತೆಂಟು ಸಾವಿರದ ಐನೂರ ಎಪ್ಪತ್ತೊಂಭತ್ತು ಯೋಜನಗಳು (೧,೦೬,೨೮,೦೭೧). ಲೋಕಾಲೋಕ ಪರ್ವತದ ಎರಡು ಪಾರ್ಶ್ವಗಳ ವಿಸ್ತಾರ ಒಂದು ಕೋಟಿ ಒಂದು ಲಕ್ಷ ಯೋಜನ. ಈ ಮೂರು ಸೇರಿ ಒಟ್ಟು ಏಳು ಕೋಟಿ ಹದಿನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರದಾ ಐನೂರಾ ಎಪ್ಪತ್ತೊಂದು ಯೋಜನಗಳು (೭,೧೪,೨೮,೫೭೧) ಭೂಮಿಯ ವಿಸ್ತಾರ. ತಮಸ್ಸಿನ ವಿಸ್ತಾರ ಇದರ ಇಮ್ಮಡಿ. ಅದರ ಇಮ್ಮಡಿ ಘನೋದಕ. ಈ ಮೂರೂ ಸೇರಿ ಮೂರು ಯೋಜನ ಕಡಿಮೆ ಐವತ್ತುಕೋಟಿ ಯೋಜನ. ಉಳಿದ ಮೂರು ಯೋಜನಗಳನ್ನು ೧:೨:೪ ಪ್ರಮಾಣದಲ್ಲಿ ಹಂಚಿದರೆ ಒಟ್ಟು ಐವತ್ತುಕೋಟಿ ಯೋಜನ ಬ್ರಹ್ಮಾಂಡದ ವಿಸ್ತಾರ (ವಾದಿರಾಜೀಯ).

---

೪೬. ತತ್ರ ಭೂಃ ಕೋಟಿಸಂಖ್ಯಾಯಾಂ ಸಪ್ತಭಿಃ ಕೋಟಿಭಿರ್ಯುತಾ ।
ತತೋ ದ್ವಿಗುಣತಸ್ತಾಂಧತಮಸಃ ಸ್ಯುಶ್ಚತುರ್ದಶ ।
ಘನೋದಕಸ್ಯ ತಸ್ಮಾಚ್ಚ ದ್ವಿಗುಣಸ್ಯ ವಿಚಾರಣೇ ।
ಅಷ್ಟಾವಿಂಶತ್ಕೋಟಯಃ ಸ್ಯುಃ ಕೋಟಿಸಂಖ್ಯೈವಮೇವ ಹಿ ।...
ಏವಂ ಚೈಕೋನಪಂಚಾಶತ್ ಕೋಟಯಸ್ತ್ರಿಷು ಖಂಡಿತಾಃ ।
ಅವಶಿಷ್ಟೈಕಕೋಟಿಸ್ತು ವಿಭಜ್ಯಾ ಲಕ್ಷಸಂಖ್ಯಯಾ ॥...
ಏವಂ ಸಪ್ತತ್ಯಯೇ ಜಾತೇ ಯದತ್ರೋರ್ವರಿತಂ ತ್ರಿಕಮ್ ॥
ತಸ್ಯಚ ದ್ವಾದಶಕ್ರೋಶಾನ್ ಕೃತ್ವೈವ ವಿಭಜೇದ್ಬುಧಃ ॥...
ಯುಕ್ತಾऽಭೂತ್ ಸ್ವರ್ಣಭೂಮ್ಯಂತಃ ಕೋಟಿಪಂಚಕಯೋಜನಾ ।
ಲಕ್ಷೈಶ್ಚ ಸಪ್ತಭಿರ್ಯುಕ್ತಾನಿತ್ಯಮಾಸೀದ್ವಿಚಾರಣೇ ।...
ದ್ವಿಪಂಚಾಶತ್ಸಹಸ್ರಾ ಚ ಕೋಟಿಮೂಲಕೃತೈವ ಹಿ ।
ಲೋಕಾಲೋಕಗಿರೇರ್ಮಾನಸಂಖ್ಯಾ ಸಂಕೀರ್ತಿತಾ ಸ್ಫುಟಮ್ ।...
ಅತೋऽಂತಿಮಸಮುದ್ರಸ್ಯ ಪರಿತೋ ಮಂಡಲಾಕೃತೇಃ ।
ಭಾಗದ್ವಯೇ ಮಿಲಿತ್ವಾऽಷ್ಟಾವಿಂಶಲ್ಲಕ್ಷಯುತಂ ತು ಯತ್ ।
ಕೋಟಿಯೋಜನಮಾನಂ ಸ್ಯಾತ್ ತತೋऽಪ್ಯರ್ಧಂ ತು ಯದ್ಭವೇತ್ ।
ಚತುಃಷಷ್ಟ್ಯಾಖ್ಯಮೇತಚ್ಚ ಕಯಾऽಪ್ಯಧಿಕಸಂಖ್ಯಯಾ ।
ಚತ್ವಾರಿಂಶಲ್ಲಕ್ಷಯುಕ್ತಲಕ್ಷದ್ವಿತಯರೂಪಯಾ ।
ಯುತಮಧ್ಯರ್ಧಶಬ್ದೋಕ್ತಂ ಶಾಸ್ತ್ರಸಂಖ್ಯಾಪ್ರಪೂರ್ವಕಮ್ ॥

– ಭೂಗೋಲವರ್ಣನ (೧೪,೧೫,೧೮,೨೯, ೫೭, ೫೯,೬೦,೬೩-೬೫)

ಬ್ರಹ್ಮಾಂಡದ ಆವರಣಗಳು

ಅಬಗ್ನೀರನಭೋಽಹಂಕೃನ್ಮಹತ್ತತ್ತ್ವಗುಣತ್ರಯೈಃ ।
ಕ್ರಮಾದ್ ದಶಗುಣೈರೇತದಾವೃತಂ ಪರತಸ್ತತಃ ॥ ೪೭ ॥

---

೪೭. ಬ್ರಹ್ಮಾಂಡಾಂತರ್ಗತಪರಿಮಾಣಾತ್ ದ್ವಿಗುಣಪರಿಮಾಣಮಂಡಖರ್ಪರಂ ಸೈವಾವರಣಭೂತಾ ಭೂರಿತ್ಯುಚ್ಯತೇ । ಭೂಮೇರ್ದಶಗುಣಾ ಆಪಃ ಅದ್ಭ್ಯೋ ದಶಗುಣಂ ತೇಜಃ ಇತ್ಯಾದ್ಯವಗಂತವ್ಯಮ್ । ತದುಕ್ತಂಮಾತ್ಸ್ಯೇ* —

'ಶತಾರ್ಧಕೋಟಿವಿಸ್ತಾರಾ ಪೃಥಿವೀ ಕೃತ್ಸ್ನಶಃ ಸ್ಮೃತಾ।
ಲೋಕವಿಸ್ತಾರಮಾತ್ರಂ ತು ಪೃಥಿವ್ಯರ್ಧಂ ತು ಬಾಹ್ಯತಃ ।
ಅಂಡಾದ್ಬಹಿಃ ಸಮಂತಾತ್ತು ಉದಕೇನಾವೃತಂ ಮಹತ್ ।
ಭೂಮೇರ್ದಶಗುಣ ಹ್ಯಾಪಃ ಸಮಂತಾತ್ ..... ವಯನ್ಮಹೀಂ ।
ಅದ್ಭ್ಯೋ ದಶಗುಣಶ್ಚಾಗ್ನಿಃ ಸರ್ವತೋ ಧಾರಯತ್ಯಪಃ' ಇತ್ಯಾದಿ ।

ಯದ್ವಾ ದಶಲಕ್ಷಯೋಜನಪರಿಮಿತಂ ಖರ್ಪರಂ ಭಿನ್ನಮ್ । ತದ್ಭಿನ್ನಾ ತದಾವರಣಭೂತಾ ಶತಕೋಟಿವಿಸ್ತೃತಾ ಭೂಸ್ತತೋ ದಶಗುಣಾ ಆಪ ಇತ್ಯಾದಿ ಜ್ಞೇಯಮ್ । ತದುಕ್ತಂ ವಾರಾಹೇ—

ದಶಲಕ್ಷಂ ಯೋಜನಾನಾಂ ಕಟಾಹಘನತಾ ಸ್ಮೃತಾ' ಇತಿ।

ತೃತೀಯಸ್ಕಂಧತಾತ್ಪರ್ಯೇ ಪೃಥಿವೀ ಆವರಣತ್ವೇನಾಸ್ತೀತ್ಯುಕ್ತಮ್ । ಅತ್ರ ಕಥನೇ ತು ದಶಗುಣತ್ವಾಭಾವಾತ್ । ತಥಾಹಿ —

'ಪೃಥಿವೀಂ ವಿಶೇಷ ಇತ್ಯಾಹುಃ ಶಬ್ದಾದೀನಾಂ ಬಹುತ್ವತಃ ।
ಸಾ ಸೂಕ್ಷ್ಮತ್ವಾದ್ದ್ವಿಗುಣೋತ್ಕಂಡಂ ದ್ವಿಗುಣಾ ತು ದಶೋತ್ತರಾಃ ।
ಅಬಾದಯಃ ಪ್ರಕೃತ್ಯಂತಾ .....' *ಇತಿ ।

ತದೇವೋಕ್ತಂ +ತತ್ತ್ವಸಂಖ್ಯಾನೇ —

'.....ಅಸಂಸೃಷ್ಟಂ ಮಹಾನಹಮ್ ।
ಬುದ್ಧಿರ್ಮನಃ ಖಾನಿ ದಶ ಮಾತ್ರಾ ಭೂತಾನಿ ಪಂಚ ಚ ॥
ಸಂಸೃಷ್ಟಮಂಡಂ ತದ್ಗಂ ಚ ಸಮಸ್ತಂ ಪರಿಕೀರ್ತಿತಮ್ ।' ಇತಿ ।

ಪ್ರಾಕೃತಾದ್ಯಂಶೈರುಪಚಯಮಾತ್ರತದ್ರಾಹಿತ್ಯೇಽಸಂಸೃಷ್ಟಸಂಸೃಷ್ಟಶಬ್ದಾರ್ಥತ್ವೇನಾಭಿಮತೇ । ತದರ್ಥಂ ವಿಶೇಷಾವಿಶೇಷಾಭ್ಯಾಂ ಆಧಾರಾಧೇಯಭಾವಂ ಚಾಹ ಮಾತ್ಸ್ಯೇ —

ಮಹಾಂಸ್ತತೋ ಹ್ಯನಂತೇನಾವ್ಯಕ್ತೇನೈವ ತು ಧಾರ್ಯತೇ ।
ಏವಂ ಪರಸ್ಪರೋತ್ಪನ್ನಾಧಾರ್ಯಂ ತೇ ಚ ಪರಸ್ಪರಮ್ ।
ಆಧಾರಾಧೇಯಭಾವೇನ ವಿಕಾರಾಸ್ತೇ ವಿಕಾರಿಣಃ ।
ಪೃಥ್ವ್ಯಾದಯೋ ವಿಕಾರಾಸ್ತೇ ಪರಿಚ್ಛಿನ್ನಾಃ ಪರಸ್ಪರಮ್ ।
ಮತ್ಸ್ಯವಿಷ್ಟಾಶ್ಚತೇಽನ್ಯೋನ್ಯಂ ತಸ್ಮಾತ್ ತ್ತೇ ಸ್ಥಿರತಾಂಗತಾಃ ।
ಆಸಂಸ್ತೇ ಹ್ಯವಿಶೇಷಾಸ್ತುವಿಶೇಷಾನ್ಯೋನ್ಯವೇಶನಾತ್।
ಪೃಥ್ವ್ಯಾದಯಸ್ತು ಬಾಹ್ಯಾಂತಃ ಪರಿಚ್ಛಿನ್ನಾಸ್ತುತತ್ರತಾ ॥' ಇತಿ ।

ಅತ ಏವಖರ್ಪರಪರಿಮಾಣಮಾಗಮಾದಾವನೇಕಧೋಕ್ತಮ್। –(ಜ.)

---

* ಭಾ.ತಾ. (೩/೧೨/೪೦)

\+ ತತ್ತ್ವಸಂಖ್ಯಾನ (ಶ್ಲೋ. ೯, ೧೦)

ಅ: ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ವ ಮತ್ತು ಗುಣತ್ರಯಗಳು - ಇವುಗಳಿಂದ ಕ್ರಮವಾಗಿ ಬ್ರಹ್ಮಾಂಡ ಆವೃತವಾಗಿದೆ. ಇವುಗಳ ಪ್ರಮಾಣ ಕ್ರಮವಾಗಿ ಒಂದಕ್ಕಿಂತ ಮತ್ತೊಂದು ಹತ್ತುಪಟ್ಟು ಅಧಿಕ.

ವಿ: ಈ ಒಂಭತ್ತು ನವಾವರಣಗಳು ಎಂದು ಪ್ರಸಿದ್ಧ. ಇವೆಲ್ಲ ಬ್ರಹ್ಮಾಂಡಕ್ಕೆ ಆವರಣವಾಗಿರುವ ವಿವರ ಯಶೋದೆಯ ವಿಶ್ವರೂಪದರ್ಶನ ಪ್ರಸಂಗದಲ್ಲಿ ಬಂದಿದೆ (೧೩/೪,೫).

ಶ್ರೀಹರಿಯ ಅಪೂರ್ವ ಮಾಹಾತ್ಮ್ಯ

ವ್ಯಾಪ್ತೋಽಹಂ ಸರ್ವಗೋಽನಂತೋಽನಂತರೂಪೋ ನಿರಂತರಃ ।
ಅನಂತಶೀರ್ಷೋಽನಂತಾಕ್ಷೋಽನಂತಪಾದಕರೋರುಕಃ ।
ಅನಂತಗುಣಮಾಹಾತ್ಮ್ಯಶ್ಚಿದಾನಂದಶರೀರಕಃ ॥ ೪೮ ॥

ಅ: ನಾನು ವ್ಯಾಪ್ತ; ಸರ್ವತ್ರ ಇರುವವನು; ಅನಂತಾನಂತ ರೂಪಗಳುಳ್ಳವನು; ಯಾವ ರೂಪಗಳಲ್ಲೂ ಪರಸ್ಪರ ಭೇದವಿಲ್ಲದವನು; ಅನಂತಮುಖ; ಅನಂತಾಕ್ಷ; ಅನಂತಪಾದ; ಅನಂತಬಾಹು; ಅನಂತತೊಡೆಗಳುಳ್ಳವ; ಅನಂತಗುಣನು; ಅನಂತಮಾಹಾತ್ಮ್ಯನು; ಜ್ಞಾನಾನಂದದೇಹನು.

ಮದ್ವಶಾ ಏವ ಸರ್ವೇಽಪಿ ತ್ವಂ ಚಾನ್ಯೇಽಪಿ ಧನಂಜಯ ।
ಮತ್ಪ್ರಸಾದಾದ್ಬಲಂ ಚೈವ ವಿಜಯಶ್ಚಾಖಿಲಾ ಗುಣಾಃ ॥ ೪೯ ॥

ಅ: ಅರ್ಜುನ! ನೀನು, ಬೇರೆಯವರು ಮೊದಲಾಗಿ ಎಲ್ಲರೂ ನನ್ನ ಅಧೀನರು; ಎಲ್ಲರಿಗೂ ಬಲ, ವಿಜಯ ಮೊದಲಾದ ಎಲ್ಲ ಗುಣಗಳೂ ನನ್ನ ಅನುಗ್ರಹದಿಂದಲೇ.

---

* **ತತಃ ಪರತಃ ಸಾವರಣಬ್ರಹ್ಮಾಂಡಾದ್ಬಹಿರಿತ್ಯರ್ಥಃ ॥** (೪೭) – (ಜ.)

೪೮. ಯತ್ಪರ್ವತಾದಿಕಂ ದೃಷ್ಟಂ ತತ್ಸರ್ವಮಹಮೇವೇತಿ *ಹರಿವಂಶೋಕ್ತಾರ್ಥಸ್ಯ ತಾತ್ಪರ್ಯಮ್ । – (ಜ.)

---

* ಅಹಂ ತೇ ಪರ್ವತಾಃ ಸಪ್ತ ಯೇ ದೃಷ್ಟಾವಿವಿಧಾಸ್ತ್ವಯಾ ।
ಪಂಕಭೂತಂ ಹಿ ತಿಮಿರಂ ದೃಷ್ಟವಾನಸಿ ಯದ್ಧಿ ತತ್ ।
ಅಹಂ ತಮೋ ಘನೀಭೂತಂ ಅಹಮೇವ ಚ ಪಾಟಕಃ । – ಹರಿವಂಶ (೨/೧೧೪/೧೩, ೧೪)

ತಸ್ಮಾನ್ನ ವಿಸ್ಮಯಃ ಕಾರ್ಯೋ ನ ದರ್ಪಶ್ಚ ತ್ವಯಾऽನಘ ।
*ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ॥ ೫೦ ॥

ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋऽಸಿ ಮೇ ।
ಇತ್ಯುಕ್ತಃ ಪ್ರಣಿಪತ್ಯೈನಂ ಕ್ಷಮಸ್ವೇತ್ಯಾಹ ಫಲ್ಗುನಃ ॥ ೫೧ ॥

ಅ: ಆದ್ದರಿಂದ ಆಶ್ಚರ್ಯಪಡಬೇಡ, ಅಹಂಕಾರವನ್ನೂ ಪಡಬೇಡ. ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನ್ನನ್ನು ಆರಾಧಿಸು, ನನ್ನನ್ನು ನಮಸ್ಕರಿಸು, ನನ್ನನ್ನೇ ನೀನು ನಿಶ್ಚಯವಾಗಿ ಹೊಂದುವೆ - ಇದು ಸತ್ಯ; ಶಪಥಮಾಡುವೆ ನೀನು ನನಗೆ ಪ್ರಿಯ' - ಹೀಗೆ ನುಡಿಯಲು ಅರ್ಜುನ ಅವನಿಗೆ ಸಾಷ್ಟಾಂಗ ವಂದಿಸಿ 'ಕ್ಷಮಿಸು' ಎಂದು ಬೇಡಿಕೊಂಡ.

ಉಷಿತ್ವಾ ಕತಿಚಿನ್ಮಾಸಾನ್ ಯಯುಃ ಸರ್ವೇऽಪಿ ಪಾಂಡವಾಃ ।
ಅನುಜ್ಞಾತಾಃ ಕೇಶವೇನ ಭಕ್ತನಮ್ರಧಿಯೋऽಚ್ಯುತೇ ।
ಸಂಭಾವಿತಾಃ ಕೇಶವೇನ ಸೌಹಾರ್ದೇನಾಧಿಕೇನ ಚ ॥ ೫೨ ॥

ಅ: ಕೃಷ್ಣನಿಂದ ಅತಿಶಯ ಪ್ರೀತಿಯಿಂದಾಗಿ ವಿಶೇಷವಾಗಿ ಆದರಿಸಲ್ಪಟ್ಟವರಾಗಿ, ಭಕ್ತಿಯಿಂದ ನಮ್ರಮನಸ್ಕರಾಗಿ, ಮತ್ತೆ ಕೆಲವು ತಿಂಗಳುಗಳ ಕಾಲ ಅಲ್ಲಿದ್ದು ಪಾಂಡವರೆಲ್ಲ ತೆರಳಿದರು.

ರಾಜಸೂಯ ಯಾಗಕ್ಕೆ ಪಾಂಡುವಿನ ಸಂದೇಶ

ತತಃ ಕದಾಚಿತ್ ಪ್ರವರೇ ಸಭಾತಲೇ
ಧರ್ಮಾತ್ಮಜೋ ರಾಜಭಿರ್ಭ್ರಾತೃಭಿಶ್ಚ ।
ವೃತೋ ನಿಶಮ್ಯೈವ ಸಭಾಃ ಸುರಾಣಾಂ
ಯಥಾಸ್ಥಿತಾ ನಾರದಮನ್ವಪೃಚ್ಛತ್ ॥ ೫೩ ॥

ಅ: ಆಗೊಮ್ಮೆ ಶ್ರೇಷ್ಠವಾದ ಸಭಾಮಂಟಪದಲ್ಲಿ ಧರ್ಮರಾಜನು ರಾಜರಿಂದಲೂ, ತಮ್ಮಂದಿರಿಂದ ಸುತ್ತುವರೆದವನಾಗಿ ಕುಳಿತಿದ್ದ. ಆಗ ನಾರದರಿಂದ ದೇವಸಭೆಗಳ ವಿವರವನ್ನು ಯಥಾಸ್ಥಿತವಾಗಿ ಕೇಳಿ ಅವರನ್ನು ಪ್ರಶ್ನಿಸಿದ.

---

* ಗೀತಾ (೧೮/೬೫)

೫೧. ಪ್ರತಿಜಾನೇ ಪ್ರತಿಜ್ಞಾಂ ಕರೋಮೀತ್ಯರ್ಥಃ। – (ಜ.)

ವಿ: ೧) ಹೀಗೆ ಶ್ರೀಕೃಷ್ಣನ ಮಹಾಶ್ವಮೇಧ ಯಾಗವನ್ನು ಮುಗಿಸಿಕೊಂಡು ಮರಳಿದ ಮೇಲೆ ಒಮ್ಮೆ ಮಯನಿರ್ಮಿತವಾದ ಆ ಅಪೂರ್ವ ಸಭೆಯಲ್ಲಿ ಧರ್ಮರಾಜ ಕುಳಿತಿದ್ದಾಗ ನಾರದರು ಆಗಮಿಸಲು ಅವರಿಂದ ಅವನು ಇಂದ್ರಾದಿ ದೇವಸಭೆಗಳ ಬಗ್ಗೆ ವಿವರಗಳನ್ನು ಕೇಳಿ ತಿಳಿದ ಎಂದರ್ಥ.

೨) ತನ್ನ ಸಭೆಯ ಅಪೂರ್ವತೆಯನ್ನು ಗಮನಿಸಿದ್ದ ಅವನಿಗೆ ಇಂದ್ರಾದಿ ದೇವತೆಗಳ ಸಭೆಯ ಅಪೂರ್ವತೆಯನ್ನು ತಿಳಿಯುವ ಭಾವನೆಯುಂಟಾಗಿ ಅದನ್ನೆಲ್ಲಾ ಬಲ್ಲ ನಾರದರು ಅಲ್ಲಿಗೆ ಆಗಮಿಸಿದಾಗ ಅವರನ್ನು ಹಾಗೆ ಪ್ರಶ್ನಿಸಿ ತಿಳಿದುಕೊಂಡ ಎಂದು ಭಾವ.

೩) ಧರ್ಮರಾಜ ನಾರದರ ಆ ಪ್ರಶ್ನೋತ್ತರಗಳ ಭಾಗ ಮಹಾಭಾರತ ಸಭಾಪರ್ವದಲ್ಲಿ **ಲೋಕಪಾಲಸಭಾಖ್ಯಾನಪರ್ವ** ಎಂಬ ಉಪಪರ್ವವಾಗಿ ನಿರೂಪಿತವಾಗಿದೆ.

ಚತುರ್ದಶ ಲೋಕಗಳು

ಅಂತರಿಕ್ಷಂ ತ್ವಯಾ ಪ್ರೋಕ್ತಂ ಲಕ್ಷಯೋಜನಮುಚ್ಛ್ರಿತಮ್ ।
ಅರ್ಧಕೋಟ್ಯುಚ್ಛ್ರಿತಃ ಸ್ವರ್ಗೋ ವಿಮಾನಾವಲಿಸಂಕುಲಃ ॥ ೫೪ ॥

ಅ: 'ನೀವು ಅಂತರಿಕ್ಷಲೋಕವು ಒಂದು ಲಕ್ಷ ಯೋಜನ ಮೇಲಿದೆ ಎಂದೂ, ವಿಮಾನ ವೃಂದಗಳಿಂದ ತುಂಬಿದ ಸ್ವರ್ಗಲೋಕ ಅರ್ಧಕೋಟಿ ಯೋಜನ ಮೇಲಿದೆ ಎಂದೂ ತಿಳಿಸಿದಿರಿ'.

ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ತೃತೌ ।
ಮಹರ್ಜನಸ್ತಪಶ್ಚೈವ ಕ್ರಮಾದರ್ಧಾರ್ಧಯೋಜನಾಃ ॥ ೫೫ ॥

---

೫೫. ಭುವಃ ಸ್ವರ್ಗಶ್ಚೇತ್ಯತ್ರ ಭುವಃ = ಅಂತರಿಕ್ಷಲೋಕಃ। ಕ್ರಮಾದರ್ಧಾರ್ಧಯೋಜನಾ ಇತ್ಯತ್ರ ಅರ್ಧಾರ್ಧ-ಯೋಜನಾಃ = ಅಧಿಕಮರ್ಧಂ ಯಸ್ಯ ಪೂರ್ವಪ್ರಮಾಣಸ್ಯ ತದರ್ಧಾರ್ಧಮ್ । ತಾವದ್ಯೋಜನೈರುತ್ತರೋ-ತ್ತರೋಚ್ಛ್ರಾಯವಂತಃ । ಸ್ವರ್ಗಲೋಕಾತ್ ಮಹರ್ಲೋಕಃ ಪಂಚೋತ್ತರಸಪ್ತತಿಲಕ್ಷೋತ್ತುಂಗ ಇತ್ಯರ್ಥಃ। ಮಹರ್ಲೋಕಾದುಪರಿ ಜನಲೋಕಃ ಸಾರ್ಧದ್ವಾದಶಲಕ್ಷೋತ್ತರಕೋಟಿಯೋಜನೋತ್ತುಂಗ ಇತ್ಯರ್ಥಃ। ಜನಲೋಕಾತ್ ತಪೋಲೋಕೋऽಪಿ ಕೋಟಿಯೋಜನಾದುಪರಿ ಅಷ್ಟೋತ್ತರಷಟ್ಪಲಕ್ಷಾದುಪರಿ ಪಂಚಸಪ್ತತಿಸಹಸ್ರ-ಯೋಜನೋತ್ತುಂಗಃ । ಸಮಸ್ತಶಃ ಲೋಕತ್ರಯಸಮೂಹಃ । ಮಿಲಿತ್ವಾ ಸಂಖ್ಯಾಯಾಂ ಪಂಚಾಶತ್ಕೋಟಿವಿಸ್ತಾರಃ। ಏವಂ ಚ ಪ್ರತ್ಯೇಕಂ ಗಣನಾಯಾಂ ಷೋಡಶಕೋಟಿಚ್ಛಃ ಉಪರಿ ಕಿಂಚಿದೂನತ್ರಿಸಪ್ತತಿಲಕ್ಷಯೋಜನಪ್ರಮಾಣೇನ ಏಕೈಕಸ್ಯ ವಿಸ್ತಾರೋ ಜ್ಞೇಯಃ । ಏತೇ ಅಂತರಿಕ್ಷಾದಯೋ ಲೋಕಾಃ। ವಿಸ್ತಾರಸ್ತು ಸತ್ಯಲೋಕಾದೇರಪಿ ಪೃಥಗನುಕ್ತೇಃ ಮಹರ್ಲೋಕಾದಿವದೇವ ಜ್ಞೇಯಃ ॥ – (ವಾ.)

ಅ: ಭುವರ್ಲೋಕ ಮತ್ತು ಸ್ವರ್ಗಲೋಕಗಳು ಒಂದು ಕೋಟಿ ಯೋಜನ ವಿಶಾಲವಾದವುಗಳು. ಮಹರ್ಲೋಕ, ಜನೋಲೋಕ, ತಪೋಲೋಕಗಳು ಕ್ರಮವಾಗಿ ಒಂದಕ್ಕಿಂತ ಮತ್ತೊಂದು ಒಂದೂವರೆ ಪಟ್ಟುಮೇಲಿರುವಂತಹವುಗಳು.

ಪಂಚಾಶತ್ಕೋಟಿವಿಸ್ತಾರೋ ಯೋಜನಾನಾಂ ಸಮಸ್ತಶಃ ।
ಯಾವಂತ ಏತೇ ಮಿಲಿತಾಸ್ತತ್ಪ್ರಮಾಣ ಉದೀರಿತಃ ॥ ೫೬ ॥

ಸತ್ಯಾಖ್ಯೋ ಬ್ರಹ್ಮಲೋಕಸ್ತು ಯತ್ರ ಬ್ರಹ್ಮಾ ವಿರಾಜತೇ ।
ತತಶ್ಚ ದ್ವಿಗುಣಃ ಪ್ರೋಕ್ತೋ ವಿಷ್ಣುಲೋಕಃ ಸನಾತನಃ ॥ ೫೭ ॥

ಅ: ಈ ಲೋಕಗಳ ಒಟ್ಟು ಪ್ರಮಾಣ ಐವತ್ತು ಕೋಟಿ ಯೋಜನ ವಿಶಾಲ ಎಂದು ಹೇಳಲ್ಪಟ್ಟಿದೆ. ಸತ್ಯಲೋಕವು ತಪೋಲೋಕದಿಂದ, ಸ್ವರ್ಲೋಕ, ಮಹರ್ಲೋಕ,

---

೫೫. ಮಹರಾದಯೋ ಲೋಕಾ ಅಧಿಕಾರ್ಧಕೋಟಿಯೋಜನಾ ಇತ್ಯರ್ಥಃ। ಮಹರ್ಲೋಕಃ ಸಪಂಚಾಶಲ್ಲಕ್ಷ ಕೋಟಿಯೋಜನಃ। ಜನ್ಲೋಲೋಕಃ ಕೋಟಿದ್ವಯ ಯೋಜನಃ। ತಪೋಲೋಕಃ ಸಪಂಚಾಶಲ್ಲಕ್ಷ ಕೋಟಿದ್ವಯ-ಯೋಜನ ಇತಿ ಭಾವಃ। – (ತಾ.)

೫೭. ತಪೋಲೋಕಾತ್ ಪಂಚವಿಂಶತಿ ಸಹಸ್ರಾಧಿಕ ಷಡ್‌ಲಕ್ಷ ಸಹಿತಚತುಷ್ಕೋಟಿಯೋಜನೋಚ್ಚಃ ಸತ್ಯಾಖ್ಯೋ ಲೋಕ ಇತ್ಯರ್ಥಃ। ತತಃ ಸತ್ಯಲೋಕಾತ್ ದ್ವಿಗುಣಕೋಚ್ಛ್ರಿತದೇಶೇ ವಿಷ್ಣುಲೋಕೋ ವೈಕುಂಠಲೋಕಃ। – (ವ.)

೫೭. ಸ್ವರ್ಗಲೋಕಃ ಕೋಟಿಯೋಜನಃ। ಮಹರಾದಯಃ ಷಟ್‌ಕೋಟಿಯೋಜನಾಃ । ಸತ್ಯಲೋಕಃ ಷಟ್ ಕೋಟಿಯೋಜನಃ। ವೈಕುಂಠಲೋಕೋ ದ್ವಾದಶ ಕೋಟಿಯೋಜನಃ। – (ತಾ.)

೫೭. ಮಿಲಿತ್ವೈಷಾಂ ತು ಲೋಕಾನಾಂ ಯತ್ ಕೋಟೀನಾಂ ಚತುಷ್ಟಯಮ್ ।
ಲಕ್ಷಾಣಿ ಷಟ್ ಸಹಸ್ರಾಣಾಂ ಪಂಚವಿಂಶತಿರೇವ ಚ ।
ಏತಾವತ್ಯಾ ಯೋಜನಾನಾಂ ಸಂಖ್ಯಯಾ ಪುನರುಚ್ಛ್ರಿತಃ ।
ಸ್ಯಾದ್ಬ್ರಹ್ಮಣಃ ಸತ್ಯಲೋಕಃ ಸರ್ವಕಾಮಧುರಂಧರಃ ।
ಕೋಟೀನಾಮಷ್ಟಕಾಲ್ಲಕ್ಷ ದ್ವಿಷಟ್ಕಾತ್ ತದುಪರ್ಯಪಿ ।
ಪಂಚಾಶದ್ಭಿಃ ಸಹಸ್ರೈಶ್ಚಾಪ್ಯುಚ್ಛ್ರಿತಂ ತದ್ವಿಧೇಃ ಪದಮ್ ।
ಸತ್ಯಲೋಕಪ್ರಮಾಣಾತ್ತು ದ್ವಿಗುಣೀಕೃತಮಾನವಾನ್ ।
ವಿಷ್ಣೋರ್ಲೋಕಾಸ್ತು ವಿಜ್ಞೇಯೋ ಯಂ ವೈಕುಂಠಂ ವಿದುರ್ಬುಧಾಃ ।
ಕೋಟೀನಾಂ ಷೋಡಶೈಃ ಪಂಚವಿಂಶಲ್ಲಕ್ಷಯುತೈಃ ಸ ಚ ।
ಭೂಲೋಕಾದುಚ್ಛ್ರಿತೋ ಜ್ಞೇಯಃ .....। – ಭೂಗೋಲವರ್ಣನ

ಜನೋಲೋಕ ಮತ್ತು ತಪೋಲೋಕ ಎಂಬ ಲೋಕಗಳ ಒಟ್ಟು ಪ್ರಮಾಣದಷ್ಟು ಮೇಲಿದೆ. ಸತ್ಯಲೋಕವೆಂದರೆ ಬ್ರಹ್ಮಲೋಕವೇ, ಅಲ್ಲಿ ಬ್ರಹ್ಮದೇವರು ವಿರಾಜಮಾನರಾಗಿರುವರು. ಅದರ ಇಮ್ಮಡಿ ಸನಾತನವಾದ ವಿಷ್ಣುಲೋಕ ವೈಕುಂಠ ಎಂದು ಹೇಳಲ್ಪಟ್ಟಿದೆ.

ಉತ್ತರೋತ್ತರತಃ ಸರ್ವೇ ಸುಖೇ ಶತಗುಣೋತ್ತರಾಃ ।
ಅನಂತಜನಸಂಪೂರ್ಣಾ ಅಪಿ ತೇ ಹೀಚ್ಛಯಾ ಹರೇಃ ॥ ೫೮ ॥

ಅವಕಾಶವಂತೋ ದಿವ್ಯತ್ವಾತ್ ಪೂರ್ಯಂತೇ ನ ಕದಾಚನ ।
ಸರ್ವಕಾಮಸುಖೈಃ ಪೂರ್ಣಾಃ ದಿವ್ಯಸ್ತ್ರೀಪುರುಷೋಜ್ಜ್ವಲಾಃ ॥ ೫೯ ॥

ಅ: ಈ ಲೋಕಗಳು ಉತ್ತರೋತ್ತರ ಕ್ರಮವಾಗಿ ಆನಂದದಲ್ಲಿ ನೂರು ಪಟ್ಟು ಮಿಗಿಲಾದುವು, ಅನಂತ ಜನಗಳಿಂದ ತುಂಬಿದ್ದರೂ ಶ್ರೀಹರಿಯ ಇಚ್ಛೆಯಿಂದಾಗಿ ಈ ದಿವ್ಯ ಲೋಕಗಳು ಸದಾ ಅವಕಾಶವನ್ನು ಹೊಂದಿರುವಂತಹವುಗಳಾಗಿದ್ದು ಎಂದೂ ಪೂರ್ಣವಾಗಿ ತುಂಬುವುದೇ ಇಲ್ಲ. ಇವೆಲ್ಲ ಸಕಲ ಸುಖಭೋಗಗಳಿಂದ ಪೂರ್ಣವಾಗಿರುವಂತಹವು; ದಿವ್ಯ ಸ್ತ್ರೀ ಪುರುಷರಿಂದ ಶೋಭಿತವಾದವು.

ದಿವ್ಯರತ್ನಸಮಾಕೀರ್ಣಂ ತಥಾ ಪಾತಾಲಸಪ್ತಕಮ್ ।
ಅಧಸ್ತಾಚ್ಛೇಷದೇವೇನ ಬಲಿನಾ ಸಮಧಿಷ್ಠಿತಮ್ ॥ ೬೦ ॥

ಅ: ಕೆಳಗಿನ ಏಳು ಲೋಕಗಳು ಹಾಗೆಯೇ ದಿವ್ಯ ರತ್ನಗಳಿಂದ ತುಂಬಿರುವಂತಹವುಗಳು. ಅವುಗಳನ್ನು ಕೆಳಗೆ ಬಲಶಾಲಿಯಾದ ಶೇಷದೇವ ಹೊತ್ತಿರುವನು.

ವಿ: ೧) ಕೆಳಗಿನ ಲೋಕಗಳು ಅತಲ, ವಿತಲ, ಸುತಲ, ತಲಾತಲ, ರಸಾತಲ, ಮಹಾತಲ, ಮತ್ತು ಪಾತಾಲ ಎಂಬುದಾಗಿ ಏಳು. ಇಲ್ಲಿ ಪಾತಾಳವೆಂದರೆ ಕೆಳಗಿನ ಎಂದರ್ಥ; ಪಾತಾಳದವರೆಗಿನ ಕೆಳಗಿನ ಲೋಕಗಳು ಎಂದೂ ಅರ್ಥ.

೨) ಅತಲದಲ್ಲಿ ಬಲ ಎಂಬ ಅಸುರ, ವಿತಲದಲ್ಲಿ ಹಾಟಕೇಶ್ವರ ನಾಮಕ ಶಿವ, ಸುತಲದಲ್ಲಿ ವಾಮನರಕ್ಷಿತನಾದ ಬಲಿಚಕ್ರವರ್ತಿ, ತಲಾತಲದಲ್ಲಿ ಮಯ, ಮಹಾತಲದಲ್ಲಿ ಕ್ರೋಧವಶರೆಂಬ ಸರ್ಪಗಣ, ರಸಾತಲದಲ್ಲಿ ನಿವಾತಕವಚ ಕಾಲಕೇಯರೆಂಬ ರಾಕ್ಷಸರು, ಪಾತಾಲದಲ್ಲಿ ವಾಸುಕಿ ಮೊದಲಾದ ಸರ್ಪಗಳು ನೆಲೆಸಿರುವವು.

ಕಾಮಭೋಗಸಮಾಯುಕ್ತಾ ಬಹುವರ್ಷಸಹಸ್ರಿಣಃ ।
ಸಪ್ತದ್ವೀಪೇಷು ಪುರುಷಾಃ ನಾರ್ಯಶ್ಚೋಕ್ತಾಃ ಸುರೂಪಿಣಃ ॥ ೬೧ ॥

ಅ: ಸಪ್ತದ್ವೀಪಗಳಲ್ಲಿರುವ, ಬಯಸಿದ ಭೋಗಗಳಿಂದ ಕೂಡಿರುವ ಇಲ್ಲಿಯ ಪುರುಷ ಸ್ತ್ರೀಯರು ಕೂಡಿರುವರು. ಅನೇಕ ಸಾವಿರ ವರ್ಷಗಳ ಕಾಲ ಜೀವಿಸುವರು. ಇವರೆಲ್ಲ ಅತ್ಯಂತ ಸುರೂಪಿಗಳು.

ಏಷಾಂ ಚ ಸರ್ವಲೋಕಾನಾಂ ಧಾತಾ ನಾರಾಯಣಃ ಪರಃ ।
ವಿಷ್ಣುಲೋಕಸ್ಥಿತೋ ಮುಕ್ತೈಃ ಸದಾ ಸರ್ವೈರುಪಾಸ್ಯತೇ ॥ ೬೨ ॥

ಅ: ಈ ಎಲ್ಲ ಲೋಕಗಳಿಗೆ ಧಾರಣಪೋಷಣಕರ್ತೃವಾದವನು ಸರ್ವೋತ್ತಮನಾದ ನಾರಾಯಣ. ಅವನು ವಿಷ್ಣುಲೋಕಗಳಲ್ಲಿ ಸದಾ ಸಕಲ ಮುಕ್ತರಿಂದಲೂ ಉಪಾಸಿತನಾಗಿರುವನು.

ದಿಕ್ಪಾಲಕ ಸಭಾವರ್ಣನೆ - ಇಂದ್ರಸಭೆಯಲ್ಲಿ ಹರಿಶ್ಚಂದ್ರ

ಸೇವಕಾ ಬ್ರಹ್ಮಣಶ್ಚೈವ ದೇವಾ ವೇದಾಶ್ಚ ಸರ್ವಶಃ ।
ಶಕ್ರಸ್ಯ ಮುನಯಃ ಸರ್ವೇ ಹರಿಶ್ಚಂದ್ರಶ್ಚ ಭೂಮಿಪಃ ॥ ೬೩ ॥

ಅ: ಎಲ್ಲವೇದಾಭಿಮಾನಿ ದೇವತೆಗಳು ಮತ್ತು ಇತರ ದೇವತೆಗಳು ಬ್ರಹ್ಮನ ಪರಿವಾರ. ಎಲ್ಲ ಮುನಿಗಳು ಮತ್ತು ಹರಿಶ್ಚಂದ್ರರಾಜ ಇಂದ್ರನ ಪರಿವಾರದವರು.

ವಿ: ಇಂದ್ರಸಭೆಯಲ್ಲಿ ಇರುವ ಪರಾಶರ, ಶಂಖ, ಲಿಖಿತ, ದುರ್ವಾಸರು, ದೀರ್ಘತಮಸ್, ಪವಿತ್ರಪಾಣಿ, ವಾಲ್ಮೀಕಿ, ಶಮೀಕ, ಮೇಧಾತಿಥಿ, ಪುಲಸ್ತ್ಯ, ಪುಲಹ, ಕ್ರತು ಮೊದಲಾದ ಮುನಿ–ಗಳು ಇರುವ ವಿವರವನ್ನು ತಿಳಿಸಿ, *ಹರಿಶ್ಚಂದ್ರರಾಜನೂ ಅಲ್ಲಿರುವುದಾಗಿ ಉಲ್ಲೇಖಿಸಿರುವರು.

ಯಮಸಭೆಯಲ್ಲಿ ಪಾಂಡುರಾಜ; ಯಮಸಭೆ ಇಂದ್ರಸಭೆಗಳಲ್ಲಿ ರಾಮವಾಮನರು ಉಪಾಸ್ಯರು

ಅಖಿಲಾ ಅಪಿ ರಾಜಾನಃ ಪಾಂಡುಶ್ಚಾಸ್ಮತ್ಪಿತಾ ಮುನೇ ।
ಯಮಸ್ಯೈವಾನುಗಾಃ ಪ್ರೋಕ್ತಾ ರಾಜಭಿಸ್ತೈರ್ಯಮೇನ ಚ ॥ ೬೪ ॥

---

೬೧. **ಸಪ್ತದ್ವೀಪೇಷು** ಅಧಃಸ್ಥ ಸಪ್ತಲೋಕೇಷು। ನ ತು ಜಂಬ್ವಾದಿದ್ವೀಪೇಷು। ಜಂಬುದ್ವೀಪೇ ಯುಗಾನುಸಾರೇಣ ಆಯುರ್ಭೋಗಾದ್ಯಲ್ಪತ್ವಾತ್। – (ಜ.)

* ....ಹರಿಶ್ಚಂದ್ರಶ್ಚ ಪಾರ್ಥಿವಃ। – ಭಾರತ (ಸಭಾ. ೭/೧೩)

ಉಪಾಸ್ಯಮಾನೋ ಭಗವಾನ್ ರಾಮೋ ಯಮಸಭಾತಲೇ ।
ಉಕ್ತ ಇಂದ್ರೇಣ ಚೋಪಾಸ್ಯೋ ವಾಮನಾತ್ಮಾ ಜನಾರ್ದನಃ ॥ ೬೫ ॥

ಅ: ಎಲ್ಲ ರಾಜರೂ ಮತ್ತು ನಮ್ಮ ತಂದೆಯಾದ ಪಾಂಡುವೂ ಯಮನ ಅನುಯಾಯಿಗಳು ಎಂದೂ, ಆ ರಾಜರುಗಳಿಂದ ಹಾಗೂ ಯಮನಿಂದ ಶ್ರೀರಾಮ ರೂಪದ ಶ್ರೀಹರಿಯು ಯಮನ ಸಭೆಯಲ್ಲಿ ಉಪಾಸ್ಯಮಾನವಾಗಿರುವನು ಎಂದೂ ತಿಳಿಸಿದಿರಿ. ಇಂದ್ರನಿಂದ ವಾಮನರೂಪಿಯಾದ ಶ್ರೀಹರಿಯು ಆರಾಧಿಸಲ್ಪಡುವನು.

ವಿ: ಯಮಸಭೆಯಲ್ಲಿ ರಾಮ ಮತ್ತು ಪರಶುರಾಮ ಎಂಬ ಎರಡು ರೂಪಗಳಿಂದಲೂ ಶ್ರೀಹರಿಯು ಯಮನಿಂದ ಆರಾಧಿತನಾಗಿ ನೆಲೆಸಿರುವನು ಎಂಬ ವಿವರ ಮುಂದೆ ಶ್ಲೋಕ ೭೦ರಲ್ಲಿ ಬಂದಿದೆ.

ಬ್ರಹ್ಮಸಭೆಯಲ್ಲಿ ಸಕಲ ಪ್ರಾದುರ್ಭಾವಗಳು - ವರುಣಸಭೆಯಲ್ಲಿ ಮತ್ಸ್ಯ

ಪ್ರಾದುರ್ಭಾವಾಶ್ಚ ನಿಖಿಲಾ ಬ್ರಹ್ಮಣೋಪಾಸಿತಾಃ ಸದಾ ।
ವರುಣಸ್ಯಾನುಗಾ ನಾಗಾಸ್ತತ್ರ ಮತ್ಸ್ಯಕೃತಿರ್ಹರಿಃ ॥ ೬೬ ॥

ಅ: ಬ್ರಹ್ಮನಿಂದ ಶ್ರೀಹರಿಯ ಸಕಲ ಪ್ರಾದುರ್ಭಾವಗಳೂ ಸದಾ ಆರಾಧಿಸಲ್ಪಡುವವು. ನಾಗಗಳು ವರುಣನ ಪರಿವಾರ, ಅಲ್ಲಿ ಮತ್ಸ್ಯರೂಪದ ಹರಿಯು ಉಪಾಸ್ಯ.

ಕುಬೇರಸಭೆಯಲ್ಲಿ ಕಲ್ಕಿ - ಈಶಾನ್ಯದಲ್ಲಿ ನೃಸಿಂಹ

ಗಂಧರ್ವಾ ಧನದಸ್ಯಾಪಿ ತತ್ರ ಕಲ್ಕೀ ಹರಿಃ ಪ್ರಭುಃ ।
ರುದ್ರಸ್ಯೋಗ್ರಾಣಿ ಭೂತಾನಿ ನೃಸಿಂಹಾತ್ಮಾ ಶಿವೇನ ಚ ॥ ೬೭ ॥

---

೬೪. ಶಂತನುಶ್ಚೈವ ರಾಜರ್ಷಿಃ ಪಾಂಡುಶ್ಚೈವ ಪಿತಾ ತವ । – ಭಾರತ (ಸಭಾ. ೮/೨೫)

೬೪. ತಸ್ಯಾಂ ರಾಜರ್ಷಯಃ ಪುಣ್ಯಾಸ್ತಥಾ ಬ್ರಹ್ಮರ್ಷಯೋಽಮಲಾಃ ।
ಯಮಂ ವೈವಸ್ವತಂ ತಾತ ಪ್ರಹೃಷ್ಟಾಃ ಪರ್ಯುಪಾಸತೇ ॥ – ಭಾರತ (ಸಭಾ. ೮/೮)

೬೬. ದೇವೋ ನಾರಾಯಣಸ್ತ್ಯಾಂ ತಥಾ ದೇವರ್ಷಯಶ್ಚಯೇ ... । – ಭಾರತ (ಸಭಾ. ೧೧/೫೨)

೬೬. ಆದಿತ್ಯಾಸ್ತತ್ರ ವರುಣಂ ಜಲೇಶ್ವರಮುಪಾಸತೇ ॥
ವಾಸುಕಿಸ್ತಕ್ಷಕಶ್ಚೈವ ನಾಗಶ್ಚೈರಾವತಸ್ತಥಾ । – ಭಾರತ (ಸಭಾ. ೯/೭,೮)

೬೭. ತತ್ರ ದೇವಾಃ ಸಗಂಧರ್ವಾ ಗಣೈರಪ್ಸರಸಾಂ ವೃತಾಃ ।
ದಿವ್ಯತಾನ್ಯೈರ್ಮಹಾರಾಜ ಗಾಯಂತಿ ಸ್ಮ ಸಭಾಗತಾಃ ॥ – ಭಾರತ (ಸಭಾ. ೧೦/೯)

ಉಪಾಸ್ಯತೇ ಸದಾ ವಿಷ್ಣುರಿತ್ಯಾದ್ಯುಕ್ತಂ ತ್ವಯಾऽನಘ ।
ಸರ್ವರತ್ನಸ್ಥಲಾನ್ ದಿವ್ಯಾನ್ ದೇವಲೋಕಾನ್ ಪ್ರಭಾಷತಾ ॥ ೬೮ ॥

ಅ: ಕುಬೇರನ ಪರಿವಾರ ಗಂಧರ್ವರು, ಅಲ್ಲಿ ಶ್ರೀಹರಿಯು ಕಲ್ಕಿಯಾಗಿ ಆರಾಧ್ಯನು. ಶಿವನಿಗೆ ಭಯಂಕರವಾದ ಭೂತಗಳು ಪರಿವಾರ, ನೃಸಿಂಹ ರೂಪದ ಶ್ರೀಹರಿ ಶಿವನಿಂದ ಪೂಜಿತ. ಹೀಗೆ ವಿಷ್ಣುವು ಸದಾ ಉಪಾಸಿಸಲ್ಪಡುವನು ಎಂಬುದಾಗಿ ನೀವು ಎಲ್ಲಾ ರತ್ನಮಯ-ವಾದ ದಿವ್ಯವಾದ ದೇವಲೋಕಗಳನ್ನು ವರ್ಣಿಸುತ್ತಾ ತಿಳಿಸಿದಿರಿ.

ತತ್ರ ಮೇ ಸಂಶಯೋ ಭೂಯಾನ್ ಹರಿಶ್ಚಂದ್ರಃ ಕಥಂ ನೃಪಃ ।
ಐಂದ್ರಂ ಸಭಾತಲಂ ಪ್ರಾಪ್ತಃ ಪಾಂಡುರ್ನಾಸ್ಮತ್ಪಿತಾ ಮುನೇ ॥ ೬೯ ॥

ಅ: ನನಗೆ ಅಲ್ಲಿ ದೊಡ್ಡ ಸಂದೇಹ - ''ಮುನಿಯೇ ಹರಿಶ್ಚಂದ್ರ ರಾಜನು ಅದ್ಹೇಗೆ ಇಂದ್ರ ಸಭೆಯನ್ನು ಪಡೆದ? ನಮ್ಮ ತಂದೆ ಪಾಂಡು ಏಕೆ ಪಡೆದಿಲ್ಲ?''.

ವಿ: ೧) ಸಭೆಗಳ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದ ಧರ್ಮರಾಜ, ರಾಜರುಗಳಲ್ಲಿ ಒಬ್ಬನಾದ ಹರಿಶ್ಚಂದ್ರ ಮಾತ್ರ ಇಂದ್ರಸಭೆಯಲ್ಲಿರುವುದನ್ನು, ಇತರ ರಾಜರು ಹಾಗೆಯೇ ತಮ್ಮ ತಂದೆ ಪಾಂಡುರಾಜನು ಯಮಸಭೆಯಲ್ಲಿ ಇರುವುದನ್ನು ಕೇಳಿ ನಾರದರಿಂದ ಅದಕ್ಕೆ ಕಾರಣವನ್ನು ತಿಳಿಯಬಯಸಿದ.

೨) ''ಹರಿಶ್ಚಂದ್ರನೂ ಇತರರಂತೆ ರಾಜನಾಗಿರುವಾಗ ಅವನು ಮಾತ್ರ ಏತಕ್ಕೆ ಇಂದ್ರ-ಸಭೆಗೆ ತೆರಳಿದ? ಅದರಂತೆ ಪಾಂಡುರಾಜ ಏತಕ್ಕೆ ಅಲ್ಲಿಗೆ ತೆರಳಲಿಲ್ಲ?'' ಎಂಬುದು ಅವನ ಪ್ರಶ್ನೆ.

ರಾಜಸೂಯ ಯಾಗಕ್ಕೆ ಪಾಂಡುರಾಜನ ಆದೇಶ

ಇತ್ಯುಕ್ತೋ ನಾರದಃ ಪ್ರಾಹ ರಾಜಸೂಯಕೃತೋನ್ನತಿಮ್ ।
ಹರಿಶ್ಚಂದ್ರಸ್ಯ ತಾಂ ದೃಷ್ಟ್ವಾ ಪಿತಾ ಯಮಸಭಾತಲೇ ।
ಸ್ಥಿತಸ್ತ್ವಾಮವದತ್ ಪಾಂಡೂ ರಾಮದ್ವಯಸುದೈವತೇ ॥ ೭೦ ॥

ಅ: ಅವನು ಹೀಗೆ ಕೇಳಲು ನಾರದರು 'ಹರಿಶ್ಚಂದ್ರನದ್ದು ರಾಜಸೂಯಯಾಗದಿಂದಾಗಿ ಉಂಟಾದ ಹಿರಿಮೆ' ಎಂದು ತಿಳಿಸಿ 'ಎರಡು ರಾಮರೂಪಗಳು ಪೂಜಿತವಾಗುವ ಯಮಸಭೆ-ಯಲ್ಲಿರುವ ನಿಮ್ಮ ತಂದೆಯಾದ ಪಾಂಡುರಾಜ ನನಗೆ ತಿಳಿಸಿರುವನು.

---

೭೦. **ರಾಮೋ ದಾಶರಥಿಶ್ಚಾಪಿ ದೃಶ್ಯೋ ಯಮಸಭಾತಲೇ ।**
ಜಾಮದಗ್ನ್ಯಶ್ಚರಾಮೋऽಥ ... ॥ — ಭಾರತ (೨/೮/೧೯)

ಕರೋತು ರಾಜಸೂಯಂ ಮೇ *ಪುತ್ರೋ ಜ್ಯೇಷ್ಠೋಽನುಜಾರ್ಚಿತಃ ।
ಪಾಲಿತೋ ವಾಸುದೇವೇನ ಕಿಂ ತಸ್ಯಾಸಾಧ್ಯಮತ್ರ ಹಿ ॥ ೭೧ ॥

ಅ: 'ನನ್ನ ಜ್ಯೇಷ್ಠಪುತ್ರನಾದ ಧರ್ಮರಾಜ ರಾಜಸೂಯ ಯಾಗವನ್ನು ಮಾಡಲಿ, ಅವನಿಗೆ ತಮ್ಮಂದಿರು ಆರಾಧಕರು; ಕೃಷ್ಣ ಪಾಲಕ. ಅಲ್ಲಿ ಅವನಿಗೆ ಅಸಾಧ್ಯವಾದದ್ದು ಏನಿದೆ?

ವಿ: ಭೀಮಾರ್ಜುನರಂತಹ ತಮ್ಮಂದಿರನ್ನು, ಕೃಷ್ಣನಂತಹ ಸ್ವಾಮಿಯನ್ನು ಹೊಂದಿರುವ ಧರ್ಮರಾಜನಿಗೆ ರಾಜಸೂಯಯಾಗದಂತಹ ಕಾರ್ಯ ಸರ್ವಥಾ ಅಶಕ್ಯವಲ್ಲ ಎಂದರ್ಥ.

ರಾಜಸೂಯಯಾಗಕ್ಕೆ ಮಂತ್ರಾಲೋಚನೆ

ಏತಚ್ಛ್ರುತ್ವಾ ಧರ್ಮಸುತೋ ಭ್ರಾತೃಭಿಃ ಸಹಿತೋ ವಶೀ ।
ಅವಾಪ್ತಿಂ ರಾಜಸೂಯಸ್ಯ ಮಂತ್ರಯಾಮಾಸ ಧರ್ಮವಿತ್ ॥ ೭೨ ॥

ಅ: ಅದನ್ನು ಕೇಳಿ ಜಿತೇಂದ್ರಿಯನೂ, ಧರ್ಮಜ್ಞನೂ ಆದ ಧರ್ಮರಾಜ ತಮ್ಮಂದಿರೊಂದಿಗೆ ರಾಜಸೂಯವನ್ನು ಮಾಡುವ ಬಗ್ಗೆ ಮಂತ್ರಾಲೋಚನೆಗೆ ತೊಡಗಿದ.

ಶ್ರೀಕೃಷ್ಣನ ಬಳಿಗೆ ದೂತಪ್ರೇಷಣ

ಸುಕಾರ್ಯಮೇತದಿತ್ಯಲಂ ನಿಶಮ್ಯ ಸೋದರೋದಿತಮ್ ।
ಅಯಾತಯತ್ ಸ್ವಸಾರಥಿಂ ಸ ಕೇಶವಾಯ ಭೂಪತಿಃ ॥ ೭೩ ॥

ಅ: ಇದು ಬಹಳ ಉತ್ತಮವಾದ ಕಾರ್ಯ ಎಂದು ತಮ್ಮಂದಿರು ನುಡಿದದ್ದನ್ನು ಕೇಳಿ ಧರ್ಮರಾಜನು ತನ್ನ ಸಾರಥಿಯನ್ನು ಶ್ರೀಕೃಷ್ಣನ ಬಳಿಗೆ ಕಳುಹಿಸಿಕೊಟ್ಟ.

---

೭೧. ತ್ವಾಂ ದೃಷ್ಟ್ವಾ ಪಿತಾ ಯಮಸಭಾತಲೇ ಸ್ಥಿತಸ್ತ್ವಮವದತ್ ಪಾಂಡೋ ರಾಮದ್ವಯ ಸುದೈವತೇ । **ಕರೋತು ರಾಜಸೂಯಮಿತಿ ಕ್ವಚಿತ್ ಪಾಠಃ । ಕ್ವಚಿತ್ ತಾಂ ದೃಷ್ಟ್ವಾ ಪಿತಾ ಮಾಂ ಪ್ರಾಹ ಪಾಂಡವ । ಕರೋತು ರಾಜಸೂಯಮಿತಿ** ಪಾಠಃ । – (ತಾ.)

* **ಪುತ್ರೋಽಜೇಯಾನುಜಾರ್ಚಿತಃ** – (ಪಾಠಾಂತರ)

೭೪. ತದೈವ ಕೇಶವಸ್ಯ ಯಾಃ ಸ್ತ್ರಿಯ ಇತ್ಯತ್ರ ಕೇಶವಸ್ಯ ಸ್ತ್ರಿಯಃ= ಷೋಡಶಸಹಸ್ರರಾಜಕನ್ಯಾಃ। ತದೀಯತಾತಕೈಃ= ಜರಾಸಂಧೇನ ಬಂದೀಕೃತೈಃ ತಾಸಾಂ ಪಿತೃಭೂತರಾಜಕೈಃ ತಾಸಾಂ ಸಹೋದರೈಶ್ಚೇತ್ಯರ್ಥಃ ॥ – (ವಾ.)

೭೪. **ಕಾಶ್ಚಿದ್ ಗಂಧರ್ವಾದಿಷು ಜಾತಾಃ। ತತ್ಪಿತೃವ್ಯಾವೃತ್ಯರ್ಥಂ ಯಾಃ ಸ್ತ್ರಿಯಃ ಇತ್ಯುಕ್ತಮ್ ।** – (ಜ.)

ತದೈವ ಕೇಶವಸ್ಯ ಯಾಸ್ತ್ರಿಯಸ್ತದೀಯತಾತಕೈಃ ।
ಸಹೋದರೈಶ್ಚ ಯಾಪಿತಃ ಸ ದೂತ ಆಪ ಮಾಧವಮ್ ॥ ೭೪ ॥

ಅ: ಅದೇ ವೇಳೆಗೆ ಕೃಷ್ಣನ ಪತ್ನಿಯರ ತಂದೆಯರು ಹಾಗೂ ಸಹೋದರರು ಕಳಿಸಿದ್ದ ಒಬ್ಬ ದೂತ ಕೃಷ್ಣನ ಬಳಿಗೆ ಬಂದ.

ವಿ: ಜರಾಸಂಧನ ಬಂದಿಗಳಾಗಿ ಅವನ ಸೆರೆಯಲ್ಲಿದ್ದ ಹದಿನಾರುಸಾವಿರದ ನೂರು ಜನ ಕೃಷ್ಣಪತ್ನಿಯರ ಪಿತೃಗಳು, ಸೋದರರು ಒಟ್ಟಾಗಿ ಒಬ್ಬ ದೂತನನ್ನು ತಮ್ಮನ್ನು ರಕ್ಷಿಸಲೆಂಬ ಪ್ರಾರ್ಥನೆಯೊಂದಿಗೆ ಕೃಷ್ಣನ ಬಳಿಗೆ ಕಳುಹಿಸಿದ್ದರು.

ಬಂಧಿತ ರಾಜರ ಪ್ರಾರ್ಥನೆ

ಪ್ರಣಮ್ಯ ಕೇಶವಂ ವಚಃ ಸ ಆಹ ಮಾಗಧೇನ ತೇ ।
ವಿವಾಹಬಾಂಧವಾ ರಣೇ ವಿಜಿತ್ಯ ರೋಧಿತಾ ಗಿರೌ ॥ ೭೫ ॥

ಅ: ಅವನು ಕೃಷ್ಣನಿಗೆ ನಮಸ್ಕರಿಸಿ ಮಾತನಾಡಿದ 'ಜರಾಸಂಧನಿಂದ ನಿನ್ನ ವಿವಾಹದ ಸಂಬಂಧಿಗಳು ರಣದಲ್ಲಿ ಸೋತು ಬೆಟ್ಟದಲ್ಲಿ ಬಂದಿಗಳಾಗಿರುವರು.

ವಿ: ವಿವಾಹಬಾಂಧವರು ಎಂದರೆ ವಿವಾಹದ ಕಾರಣದಿಂದಾಗಿ ಬಂಧುಗಳಾದಂತಹ ನಿನ್ನ ಪತ್ನಿಯರ ತಂದೆ, ಸೋದರ ಮೊದಲಾದವರು ಎಂದರ್ಥ.

ನೃಪಾಯುತದ್ವಯೇನ ಸೋಽಷ್ಟವಿಂಶಕೈಃ ಶತೈರಪಿ ।
ಯಿಯಕ್ಷುರುಗ್ರರೂಪಿಣಂ ತ್ರಿಲೋಚನಂ ತ್ವಯಿ ಸ್ಥಿತೇ ॥ ೭೬ ॥

ಅ: ಅವನು ನೀನಿರುವಾಗಲೇ ಇಪ್ಪತ್ತೆರಡು ಸಾವಿರದಾ ಎಂಟುನೂರುಜನ ರಾಜರುಗಳನ್ನು ಬಲಿಕೊಟ್ಟು ಉಗ್ರರೂಪಿಯಾದ ಶಿವನನ್ನು ಕುರಿತು ಯಜ್ಞಮಾಡಲು ಬಯಸಿರುವನು.

ವಿ: ಶ್ರೀಮದ್ಭಾಗವತದಲ್ಲಿ ಈ ರಾಜರುಗಳ ಸಂಖ್ಯೆಯನ್ನು ಹೀಗೆ ಹೇಳಲಾಗಿದೆ :

ಅಯುತೇ ದ್ವೇ ಶತಾನ್ಯಷ್ಟೌ ಲೀಲಯಾ ಯುಧಿ ನಿರ್ಜಿತಾಃ ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ ॥ – ಭಾಗವತ(೧೦/೭೩/೧)

---

೭೫. ವಿವಾಹಬಾಂಧವಾ ರಣ ಇತ್ಯತ್ರ ಸ್ವಪುತ್ರೀವಿವಾಹೇನ ಬಾಂಧವಾಃ = ವಿವಾಹಬಾಂಧವಾಃ ಶ್ವಶುರಾ ಇತ್ಯರ್ಥಃ ॥ – (ವಾ.)

೭೬. ಷಡಶೀತಿಃ ಷಡಶೀತಿಕುಲೋತ್ಪನ್ನಾಃ । ಶೇಷಾ ಏತಚ್ಛೇಷಭೂತಾ ಅನ್ಯೇ ರಾಜಾನಶ್ಚೇತಿ ಕುಲಾನ್ಯೇಕಶತಂ ನೃಪಾ ಇತಿ ಪ್ರಾಗುಕ್ತನೃಪಾ ಇತ್ಯರ್ಥಃ । – ಲಕ್ಷಾಲಂಕಾರ

ಅದು ಶ್ರೀಮದಾಚಾರ್ಯರು ತಿಳಿಸಿರುವ ಸಂಖ್ಯೆಯೇ ಆಗಿರುವುದನ್ನು ಶ್ರೀಸತ್ಯಧರ್ಮ-ತೀರ್ಥರು ತಮ್ಮ ವ್ಯಾಖ್ಯಾನದಲ್ಲಿ ವಿವರಿಸಿರುವರು :

ಅಯುತೇ ವಿಂಶತಿಸಹಸ್ರಂ ದ್ವೇ ಸಹಸ್ರೇ ತಥಾऽಷ್ಟೌ ಶತಾನೀತ್ಯಾಹತ್ಯ ದ್ವಾವಿಂಶ-ತ್ಸಹಸ್ರಾಷ್ಟಶತಸಂಖ್ಯಾಃ । – ಸತ್ಯಧರ್ಮತೀರ್ಥರು

ವಿಮೋಚಯಸ್ವ ತಾನ್ ಪ್ರಭೋ ನಿಹತ್ಯ ಮಾಗಧೇಶ್ವರಮ್ ।
ಅವೈದಿಕಂ ಮಖಂ ಚ ತಂ ವಿಲುಂಪ ಧರ್ಮಗುಪ್ತಯೇ ॥ ೭೭ ॥

ಅ: ಪ್ರಭುವಾದ ಕೃಷ್ಣನೇ! ನೀನು ಆ ಜರಾಸಂಧನನ್ನು ಸಂಹರಿಸಿ ಅವರನ್ನು ಬಿಡುಗಡೆ ಮಾಡಿಸಬೇಕು. ಧರ್ಮರಕ್ಷಣೆಗಾಗಿ ಅವೈದಿಕವಾದ ಆ ಯಜ್ಞವನ್ನೂ ತಪ್ಪಿಸಬೇಕು'.

ವಿ: ಅಶ್ವಮೇಧ ವೇದವಿಹಿತವಾದ ಯಜ್ಞ, ಆದರೆ ನರಮೇಧ ಹಾಗಲ್ಲ, ಅದು ಅವೈದಿಕ. ಅದರಿಂದಾಗಿ ಸಮಾಜಕ್ಕೆ ಅನಿಷ್ಟ. ಆದ್ದರಿಂದ ಅದನ್ನು ತಪ್ಪಿಸಬೇಕು ಎಂದು ಶ್ರೀಕೃಷ್ಣನನ್ನು ಪ್ರಾರ್ಥಿಸಿದ ಎಂದು ಭಾವ.

ಇಂದ್ರಪ್ರಸ್ಥಕ್ಕೆ ಶ್ರೀಕೃಷ್ಣ

ಇತೀರಿತೋऽಥ ಸಾರಥಿಂ ನಿಶಾಮ್ಯ ಧರ್ಮಜಸ್ಯ ಚ ।
ನಿಶಮ್ಯ ತದ್ವಚಸ್ತದಾ ಜಗಾಮ ಪಾಂಡವಾಲಯಮ್ ॥ ೭೮ ॥

ಅ: ಅವನು ಹೀಗೆನ್ನಲು ಧರ್ಮರಾಜನ ಸಾರಥಿಯೂ ಬಂದದ್ದನ್ನು ಕಂಡು ಅವನ ಮಾತನ್ನೂ ಕೇಳಿ ಕೃಷ್ಣ ಪಾಂಡವರ ಬಳಿಗೆ ತೆರಳಿದ.

ವಿ: ೧) ಒಂದು ಕಡೆ ವಿವಾಹ ಬಾಂಧವರ ಪ್ರಾರ್ಥನೆ, ಮತ್ತೊಂದು ಕಡೆ ಪಾಂಡವರ ರಾಜಸೂಯ ಯಾಗದ ಆಹ್ವಾನ – ಕೃಷ್ಣ ಅವುಗಳಲ್ಲಿ ಯಾವುದನ್ನು ಮೊದಲು ನಡೆಸುವುದು ಎಂಬುದನ್ನು ತೀರ್ಮಾನಿಸಲೆಂದು ಲೋಕದ ದೃಷ್ಟಿಯಿಂದ ಒಂದು ಸಭೆ ಕರೆದ ವಿವರ ಶ್ರೀಮದ್ಭಾಗವತ ಪುರಾಣದಲ್ಲಿದೆ.

೨) ಉದ್ಧವಾದಿಗಳೆಲ್ಲ ಬಗೆಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಮೇಲೆ ಕೃಷ್ಣ ಪಾಂಡವರ ಯಾಗಕ್ಕೆ ತೆರಳಿದರೆ ಆ ಯಾಗದ ಅಂಗವಾಗಿ ಸಕಲ ರಾಜ ಜಯವನ್ನೂ ಮಾಡಲೇ-ಬೇಕಿರುವುದರಿಂದ ಅಲ್ಲಿಗೆ ತೆರಳಿದರೆ ಜರಾಸಂಧನನ್ನು ನಿಗ್ರಹಿಸಿ ರಾಜರುಗಳನ್ನು ಬಿಡುಗಡೆಯನ್ನೂ ಮಾಡಬಹುದು. ಹೀಗೆ ಅಲ್ಲಿಗೆ ತೆರಳುವುದರಿಂದ ಎರಡೂ ಕಾರ್ಯಗಳು ಒಟ್ಟಿಗೆ ನಡೆಯುವುದರಿಂದ ಅಲ್ಲಿಗೆ ತೆರಳುವುದೇ ಉಚಿತ ಎಂದು ತಿಳಿಸಿ ಪಾಂಡವರ ಬಳಿಗೇ ತೆರಳಿದನು ಎಂದು ನಿರೂಪಿತವಾಗಿದೆ.

೩) ಶ್ರೀಕೃಷ್ಣನ ಈ ಕಾರ್ಯ ನಿಜವಾದ ಅರ್ಥದಲ್ಲಿ 'ಯೋಗ'ವಾಗಿದ್ದು ಎಲ್ಲ ಜನತೆಗೂ ಅಪೂರ್ವ ಆದರ್ಶವನ್ನು ತಿಳಿಸುವುದು ಎಂಬುದನ್ನು ಗಮನಿಸಬೇಕು.

೪) ಕೃಷ್ಣ ಇತರರ ಪ್ರಾರ್ಥನೆಗಿಂತ ಪಾಂಡವರ ಪ್ರಾರ್ಥನೆ ತನಗೆ ಪ್ರಿಯ ಎಂಬ ಮತ್ತೊಂದು ವಿಶೇಷಾಂಶವನ್ನೂ ಸೂಚಿಸಿರುವನು ಎಂದು ತಿಳಿಯಬಹುದು. ಪಾಂಡವರ ಮಧ್ಯದಲ್ಲಿ ಭೀಮಸೇನ– ನಿರುವುದರಿಂದ, ಅವನು ಜೀವೋತ್ತಮನಾದ್ದರಿಂದ ಅವನ ಬಳಿಗೆ ತೆರಳುವುದು ತನಗೆ ಅತ್ಯಂತ ಪ್ರಿಯ ಎಂದು ತಿಳಿಸಿರುವನು ಎಂದರ್ಥ– **'ಉನ್ನತಪ್ರಾರ್ಥಿತಾಶೇಷಸಂಸಾಧಕಂ'** (ದ್ವಾದಶಸ್ತೋತ್ರ).

ಶ್ರೀಕೃಷ್ಣನಲ್ಲಿ ಪಾಂಡವರ ಪ್ರಾರ್ಥನೆ

ಸ ಪಾಂಡವೈಃ ಸಮರ್ಚಿತೋ ಮಖಾಯ ಧರ್ಮಜೇನ ಚ ।
ಪ್ರಪೃಷ್ಟ ಆಹ ಮಾಧವೋ ವಚೋ ಜಗತ್ಸುಖಾವಹಮ್ ॥ ೭೯ ॥

ಅ: ಅವನು ಪಾಂಡವರಿಂದ ವಿಶೇಷವಾಗಿ ಪೂಜಿತನಾದ. ಧರ್ಮರಾಜ ಯಾಗದ ಬಗ್ಗೆ ಅವನನ್ನು ಕೇಳಿದ. ಲಕ್ಷ್ಮೀಪತಿಯಾದ ಕೃಷ್ಣ ಜಗತ್ತಿಗೆ ಮಂಗಳಕರವಾದ ಮಾತನ್ನು ಆಡಿದ.

ರಾಜಸೂಯ ಯಾಗದ ಹಿರಿಮೆ

ಕ್ರತುರ್ಯಥಾವಿಧಾನತಃ ಕೃತೋ ಹಿ ಪಾರಮೇಷ್ಠ್ಯಕಮ್ ।
ಪದಂ ನಯೇತ ತತ್ಪದೇ ಸುಯೋಗ್ಯಮೇವ ನಾನ್ಯಥಾ ॥ ೮೦ ॥

ಅ: 'ವಿಧಿ ವಿಧಾನಕ್ಕೆ ಅನುಗುಣವಾಗಿ ಈ ಯಜ್ಞವನ್ನು ಮಾಡಿದಾಗ ಆ ಪದವಿಗೆ ಯೋಗ್ಯನಾದವನಿಗೆ ಅದು ಬ್ರಹ್ಮ ಪದವಿಯನ್ನೂ ನೀಡಬಲ್ಲದು, ಇತರರಿಗಲ್ಲ.

ವಿ: ರಾಜಸೂಯಯಾಗ ಬ್ರಹ್ಮ ಪದವಿಗೆ ಸಾಧನವಾಗುವ ಯಾಗ. ಆದರೆ, ಅದು ಹಾಗೆ ಬ್ರಹ್ಮ ಪದವಿ ನೀಡುವುದು ಆ ಯಾಗವನ್ನು ಬ್ರಹ್ಮ ಪದವಿಗೆ ಅರ್ಹರಾದವರು ಮಾಡಿದಾಗ ಮಾತ್ರ, ಇತರರು ಮಾಡಿದಾಗ ಅದು ಬ್ರಹ್ಮ ಪದವಿಗೆ ಕಾರಣವಾಗುವುದಿಲ್ಲ ಎಂದರ್ಥ.

---

೮೦. ಕ್ರತುರ್ಯಥಾವಿಧಾನತ ಇತ್ಯತ್ರ ಯಥಾವಿಧಾನತಃ = ಯಥೋಕ್ತವಿಧಾನೇನ ಕೃತಃ । ಏಷಃ ಕ್ರತುಃ= ರಾಜಸೂಯಯಾಗಃ ತತ್ಪದೇ= ಬ್ರಹ್ಮಣಃ ಪಟ್ಟಬಂಧೇ ಸುಯೋಗ್ಯಂ = ಋಜುಗಣಸ್ಥಮಿತಿ ಯಾವತ್। ಪಾರಮೇಷ್ಠ್ಯಕಂ = ಪರಮೇಷ್ಠಿನಃ ಸಂಬಂಧಿ ಪದಂ ನಯೇತ ॥ – (ವಾ.)

೮೦. ಕ್ರತುರ್ಯಥಾವಿಧಾನತಃ ಕೃತಃ ತತ್ಪದೇ ಸುಯೋಗ್ಯಮೇವ ಪಾರಮೇಷ್ಠ್ಯಕಂ ಪದಂ ನಯೇತ । ಅನ್ಯಥಾ ಅಯಥಾವಿಧಾನತಃ ಕೃತ ಅನ್ಯಥಾಸ್ಥಿತಂ ತತ್ಪದೇಽಯೋಗ್ಯಂ ಪಾರಮೇಷ್ಠ್ಯಕಂ ಪದಂ ನ ನಯೇತೇತಿ ಏತೇನ ಕಿಮನ್ಯಥೇತ್ಯಸ್ಯ ಅನ್ಯಥಾಕೃತ ಇತ್ಯರ್ಥಃ । – (ಸ.)

ಅಯೋಗ್ಯಕಾನ್ ಮಹಾಪದೇ ವಿಧಾತುರೇಷ ಹಿ ಕ್ರತುಃ ।
ಸಮಾನಯೋಗ್ಯತಾಗಣಾತ್ ಕರೋತಿ ಮುಕ್ತಿಗಂ ವರಮ್ ॥ ೮೧ ॥

---

೮೧. ವಿಧಾತುಃ ಮಹಾಪದೇ ಅಯೋಗ್ಯಕಾತ್= ಅಯೋಗ್ಯದೇವಚಕ್ರವರ್ತ್ಯಾದಿಗಣಾತ್। ಲ್ಯಬ್ಲೋಪನಿಮಿತ್ತಾ ಪಂಚಮೀ। ಅಯೋಗ್ಯಗಣಂ ಯಜಮಾನೀಕೃತ್ಯೇತ್ಯರ್ಥಃ। ಕೃತಃ ಏಷ ಕ್ರತುಃ = ರಾಜಸೂಯಃ। ತಂ ಯಜ್ಞಕರ್ತಾರಮ್। ಮುಕ್ತಿಗಂ = ಮುಕ್ತಿಗತಂ ಸಂತಂ ಸಮಾನಯೋಗ್ಯತಾಗಣಾತ್= ರಾಜಸೂಯಯಾಗಕರಣೇ ಶಕ್ಯಭಾವೇನ ತದಕರಣೇಽಪಿ ಸಮಾನಾ = ಜ್ಞಾನಭಕ್ತ್ಯಾದೌ ಸದೃಶೀ ಯೋಗ್ಯತಾ ಯೇಷಾಂ ತೇ ತೇಷಾಮ್। ಆ ಸಮಂತಾತ್ ಸ್ಥಿತಾದ್ಗಣಾತ್ = ಪ್ರತಿಕಲ್ಪಂ ಮುಕ್ತಗಣಾತ್। ವರಂ = ಶ್ರೇಷ್ಠಮ್ । ಅಭ್ಯುತ್ಥಾನಪ್ರಿಯಸಂಭಾಷಣಾದಿನಾ ಸತ್ಕಾರಯೋಗ್ಯಂ ಕರೋತಿ। ಸಮಾನಷಡ್ರಸಾನ್ನಭೋಜನಾಂ ಪಂಕ್ತೌ ಯಥಾ ಕಂಚಿದ್ ವೃದ್ಧಮಗ್ರೇ ಸ್ಥಾಪಯಂತಿ ತಥೇತ್ಯರ್ಥಃ। ಯೋಗ್ಯತಾಸಾಮ್ಯೇ ಆನಂದತಾರತಮ್ಯಾಯೋಗಾತ್। ಉಕ್ತವಿಧಯೈವ ವರತ್ವಮೂಹ್ಯಮ್ ॥– (ವಾ.)

೮೧. ಮುಕ್ತೌ ವರಂ ಆವಿರ್ಭೂತಾನಂದಾಧಿಕ್ಯಯುಕ್ತಂ ಕರೋತಿ। ಕ್ವಚಿದಯೋಗ್ಯಕಮಿತಿ ದ್ವಿತೀಯೈಕವಚನಾಂತಃ ಪಾಠಃ। – (ಜ.)

೮೧. ನನು ಸಾಮ್ಯೇ ಆಧಿಕ್ಯಾಯೋಗಃ ಸತಿ ಚಾಧಿಕ್ಯೇ ನ ಸಾಮ್ಯಂ। ತಥಾಚ ಕಥಂ ಸಮಾನಯೋಗ್ಯತಾಗಣಾದಾಧಿಕ್ಯಮುಚ್ಯತೇ ಇತಿ ಚೇದುಚ್ಯತೇ। ಅಪರೋಕ್ಷಜ್ಞಾನವ್ಯಂಗ್ಯಪ್ರಚುರಾನಂದೇನ ಸಾಮ್ಯಂ। ತದುತ್ತರಭಾವಿ ರಾಜಸೂಯಾದಿಪ್ರಯತ್ನಾಧಿಕ್ಯೇನ ಆನಂದಾತಿಶಯ ಇತ್ಯುಭಯೋಪಪತ್ತೇಃ। ತದುಕ್ತಂ ಬೃಹದ್ಭಾಷ್ಯೇ — 'ಮನುಷ್ಯಾಣಾಂ ಯೋಗ್ಯತಯಾ ಸ್ವಸಮೇಭ್ಯಃ ಪ್ರಯತ್ನಾಧಿಕ್ಯಾದಾಧಿಕ್ಯಂ ಮುಕ್ತೌ ಪ್ರಾಪ್ತುಂ ಶಕ್ನುತ ಇತ್ಯತಃ ಸಮೃದ್ಧ ಇತ್ಯುಕ್ತಮ್।' ಇತಿ । ಋಗ್ಭಾಷ್ಯಟೀಕಾಯಾಂ ಚ 'ರಕ್ಷಾಧಿಕಾನ್ ಬ್ರೂಹಿ ನೋಽಥೋ ಸಮೇಭ್ಯಃ' ಇತ್ಯತ್ರ 'ಹೀನೇಭ್ಯೋಽಧಿಕತ್ವಸ್ಯ ಸಿದ್ಧತ್ವಾದಧಿಕೇಭ್ಯಸ್ತ್ವಪ್ರಾಪ್ಯತ್ವಾತ್ ಸಮೇಭ್ಯ ಇತ್ಯುಕ್ತಮ್ । ಏತದ್ಭಟನಂ ಚಾನ್ಯತ್ರ ದ್ರಷ್ಟವ್ಯಮ್' ಇತ್ಯುಕ್ತಮ್ । ನನ್ವಸ್ತು ಮನುಷ್ಯಾಣಾಂ ರಾಜ್ಞಾಂ ಚ ಸಮಾನಾದಾಧಿಕ್ಯಮ್ । ತೇಷಾಂ ವೃದ್ಧಿಹ್ರಾಸಭಾಕ್ತ್ವಾತ್। ಬೃಹದ್ಭಾಷ್ಯೇ ಮನುಷ್ಯಪದಪ್ರಯೋಗಾಚ್ಚ । 'ರಕ್ಷಾ ಚನೋಽಧಿ ಚ ಬ್ರೂಹಿ ದೇವ' ಇತಿ ಋಚೌ (ಸೂಕ್ತ ೩೫, ವರ್ಗ ೨) ಹಿರಣ್ಯಸ್ತೂಪವಾಕ್ಯತ್ವಾಚ್ಚ । ದೇವಾನಾಮೇತತ್ ಕಥಂ ಸ್ಯಾತ್? '...ವೃದ್ಧಿಹ್ರಾಸೌ ವಿಮುಕ್ತಿಗೌ । ನೃಣಾಂ ಸುರಾಣಾಂ ಮುಕ್ತೌ ತು ಸುಖಂ ಕ್ಲೃಪ್ತಂ ಯಥಾಕ್ರಮಮ್' (ಬ್ರಹ್ಮಸೂತ್ರಾಣುಭಾಷ್ಯ ೩/೭) ಇತ್ಯುಕ್ತೇರಿತಿ ಚೇನ್ನ। 'ಮರುತಶ್ಚ ಸಮಾಃ ಸರ್ವೇ ಸಪ್ತತೇಷು ಪ್ರಧಾನಕಾಃ' (ಭಾ.ತಾ. ೧೦/೯೪/೧೧) ಇತ್ಯುಕ್ತರೀತ್ಯಾ ಮರುತ್ವವಸುತ್ವಾದಿಸಮಾನಯೋಗ್ಯತಾಪನ್ನಗಣಾನ್ಮುಕ್ತಿಗಂ ನರಂ ಕರೋತೀತ್ಯುಪಪತ್ತೇಃ। – (ತಾ.)

೮೧. ಆಧಿಪತ್ಯಂ ತ್ರಿಲೋಕಸ್ಯ ಯೋಗ್ಯಾನಾಮಿಂದ್ರತಾ ಸ್ಮೃತಾ ।
ಅಯೋಗ್ಯಾನಾಂ ತ್ರಿಲೋಕೇಽಪಿ ಪೂಜ್ಯತ್ವಂ ಸಮುದಾಹೃತಮ್ ॥
ತದ್ಭವೇತ್ ಪರಯಾ ಭಕ್ತ್ಯಾ ವಿಷ್ಣೋರಾಲಯಕಾರಿಣಃ ।
ತತೋಽಪ್ಯುದ್ರಿಕ್ತಯಾ ಭಕ್ತ್ಯಾ ವಿಷ್ಣುಂ ಪೂಜಯತಃ ಸದಾ ॥
ಅವಾಪ್ಯತೇ ಬ್ರಹ್ಮಲೋಕಃ ಸಮುದ್ರಿಕ್ತಶ್ಚ ಮುಚ್ಯತೇ ॥ – ಭಾ.ತಾ. (೧೧/೨೭/೫೧)

೮೧. ಬ್ರಾಹ್ಮಣಾಚ್ಚ ಪರೋ ರಾಜಾ ರಾಜಸೂಯಾಶ್ವಮೇಧಯೋಃ ।
ಉಪಾಸ್ತೇ ರಾಜಸೂಯೇಽತೋ ಬ್ರಾಹ್ಮಣೋ ರಾಜಸೂಯಿನಮ್ । – ಬೃಹದಾರಣ್ಯಕೋಪನಿಷದ್ಭಾಷ್ಯ

ಅ: ಆ ಮಹಾಪದವಿಗೆ ಅರ್ಹನಲ್ಲದವರನ್ನು ಈ ಯಾಗವು ಸಮಾನಯೋಗ್ಯತೆಯ ಜನಗಳ ಮಧ್ಯದಲ್ಲಿ ಮುಕ್ತಿಯಲ್ಲಿ ಶ್ರೇಷ್ಠನನ್ನಾಗಿ ಮಾಡುವುದು.

ವಿ: ೧) ಬ್ರಹ್ಮನ ಪದವಿಗೆ ಅರ್ಹತೆ ಇಲ್ಲದವನು ರಾಜಸೂಯ ಯಾಗವನ್ನು ಮಾಡಿದರೆ ಅದು ಬ್ರಹ್ಮ ಪದವಿಯನ್ನು ನೀಡುವುದಿಲ್ಲ, ಆದರೆ ಮುಕ್ತಿಯಲ್ಲಿ ಅವನನ್ನು ಅವರ ಸಮಾನ ಯೋಗ್ಯತೆಯ ಜನರ ಗುಂಪಿನಲ್ಲಿ ಶ್ರೇಷ್ಠನೆನ್ನಿಸುವುದು.

೨) ಅಲ್ಲಿ ಶ್ರೇಷ್ಠನೆನ್ನಿಸುವುದು ಎಂದರೆ ಆ ಗುಂಪಿನಲ್ಲಿ ತಾರತಮ್ಯಕ್ಕೆ ವಿರೋಧವಾಗದಂತೆ ಮೊದಲಿಗನಾಗುವ ಹಿರಿಮೆಯನ್ನು ತಂದುಕೊಡುವುದು ಎಂದರ್ಥ.

ಪುರಾ ತು ಮುಕ್ತೇರೋಽಧಿಕಂ ಸ್ವಜಾತಿತಃ ಕರೋತಿ ಚ ।
ಅತಸ್ತ್ರಿಶಂಕುಪುತ್ರಕೋ ನೃಪಾನತೀತ್ಯ ವರ್ತತೇ ॥ ೮೨ ॥

ಅ: ಮುಕ್ತಿಗಿಂತ ಮುಂಚಿತವಾಗಿಯೂ ಅಂಥವನನ್ನು ಅದು ತನ್ನ ಸಮಾನಯೋಗ್ಯತೆಯವರಲ್ಲಿ ಶ್ರೇಷ್ಠನನ್ನಾಗಿ ಮಾಡುವುದು. ಅದರಿಂದಲೇ ತ್ರಿಶಂಕು ಪುತ್ರನಾದ ಹರಿಶ್ಚಂದ್ರ ಇತರ ರಾಜರಿಗಿಂತ ಮಿಗಿಲೆನ್ನಿಸಿರುವನು.

ವಿ: ೧) ಮುಕ್ತಿಯಲ್ಲಿ ಮಾತ್ರವಲ್ಲದೇ ಸಂಸಾರದಲ್ಲೂ ರಾಜಸೂಯ ಯಾಗ ಮಾಡಿದವನು ತನ್ನ ಗುಂಪಿನಲ್ಲಿ ಮಿಗಿಲೆನ್ನಿಸುವನು. ಹರಿಶ್ಚಂದ್ರ ಹಾಗೆ ರಾಜಸೂಯ ಯಾಗ ಮಾಡಿದವನಾದ್ದರಿಂದ ಅವನು ಇತರ ರಾಜರಂತೆ ಯಮಸಭೆಯಲ್ಲಿರದೆ, ಇಂದ್ರಸಭೆಯನ್ನು ಪಡೆದಿರುವನು ಎಂದರ್ಥ.

೨) ಇಲ್ಲಿಯೂ ಹರಿಶ್ಚಂದ್ರ ತನಗೆ ಉಚಿತವಾದ ಭೋಗಗಳನ್ನೇ ಇಂದ್ರಸಭೆಯಲ್ಲೂ ಪಡೆಯುತ್ತಿರುವನು. ಯೋಗ್ಯತೆಗೆ ಮೀರಿ ಅಲ್ಲ, ಆದರೂ ಇಂದ್ರಸಭೆಯಲ್ಲಿರುವ ಪ್ರಯುಕ್ತ ಒಂದು ಬಗೆಯ ಹಿರಿಮೆಯನ್ನು ಅವನು ಪಡೆದಂತಾಗಲು ರಾಜಸೂಯಯಾಗದ ಪುಣ್ಯವೇ ಕಾರಣ ಎಂದರ್ಥ.

---

೮೨. ಪುರಾ ತು= ಮರಣಾತ್ಪಾಕ್। ಸ್ವಜಾತಿತಃ ಅಧಿಕಂ ಕರೋತಿ ಸ್ವಜಾತೌ ಅಭ್ಯುತ್ಥಾನಾದಿನಾ ಸತ್ಕಾರಯೋಗ್ಯಂ ಕರೋತಿ ಚಶಬ್ದೇನ ಸಮಾನಪದಸ್ಥಿತಾತ್ ಉಚ್ಚಶಕ್ರಾದಿಪದಸ್ಥಿತಂ ಕರೋತೀತಿ ಸೂಚಿತಮ್ ॥ – (ವಾ.)

೮೨. 'ಪಿತುಶ್ಚಾಪರಿತೋಷೇಣ ಗುರೋರ್ದೋಗ್ಧ್ರೀವಧೇನ ಚ ।
ಅಪ್ರೋಕ್ಷಿತೋಪಯೋಗಾಚ್ಚ ತ್ರಿವಿಧಸ್ತೇ ವ್ಯತಿಕ್ರಮಃ ॥
ಏವಂ ತ್ರೀಣ್ಯಸ್ಯ ಶಂಕೂನಿ ತಾನಿ ದೃಷ್ಟ್ವಾ ಮಹಾತಪಾಃ ।
ತ್ರಿಶಂಕುರಿತಿ ಹೋವಾಚ ವಸಿಷ್ಠೋ ಮುನಿಸತ್ತಮ ॥' ಇತಿ ಹರಿವಂಶೇ ॥ – (ಮ.)

ಸುರಾಂಶಕೋಽಪಿ ತೇ ಪಿತಾ ವಿನಾ ಹಿ ರಾಜಸೂಯತಃ ।
ನ ಶಕ್ನ್ಯತಿ ತ್ರಿಶಂಕುಜಾದ್ವರತ್ವಮಾಪ್ತುಮದ್ಯ ತು ॥ ೮೩ ॥

ಅ: ನಿನ್ನ ತಂದೆ ದೇವತಾಂಶಸಂಭೂತನಾದರೂ ರಾಜಸೂಯಯಾಗವನ್ನು ಮಾಡದಿದ್ದಲ್ಲಿ ಹರಿಶ್ಚಂದ್ರನಿಗಿಂತ ಮಿಗಿಲೆನ್ನಿಸಲು ಈಗ ಶಕ್ತನಾಗಲಾರ.

ವಿ: ಪಾಂಡುರಾಜ ಹರಿಶ್ಚಂದ್ರನಂತೆ ಚಕ್ರವರ್ತಿಗಣಕ್ಕೆ ಸೇರಿದವನಲ್ಲ, ಅವನು ದೇವತಾ–ಗಣಕ್ಕೇ ಸೇರಿದವನು. ಎಂದರೆ ಅವನು ಸಹಜವಾಗಿಯೇ ಇಂದ್ರ ಸಭೆಯಲ್ಲಿರಬೇಕಾದವನು ಎಂದರ್ಥ.

ಪರಾವಹನಿಗೆ ಇಂದ್ರಶಾಪ

ತಪಶ್ಚರನ್ ಸಮಾಗತೇ ಶಚೀಪತೌ ಪಿತಾ ತವ ।
ಮರುದ್ಗಣೋತ್ತಮಃ ಪುರಾ ನ ತೂತ್ಥಿತಃ ಶಶಾಪ ಸಃ ॥ ೮೪ ॥

ಅ: ನಿನ್ನ ತಂದೆ ಮೂಲರೂಪದಲ್ಲಿದ್ದಾಗ ಒಮ್ಮೆ ತಪಸ್ಸು ಮಾಡುತ್ತಿದ್ದ, ಆಗ ಇಂದ್ರ ಅವನ ಬಳಿಗೆ ಬಂದ. ಆದರೆ ಅವನು ಎದ್ದು ನಿಲ್ಲಲಿಲ್ಲ. ಅವನು ಇವನನ್ನು ಶಪಿಸಿದ.

ವಿ: ೧) ದೊಡ್ಡವರು ಬಂದಾಗ ಉತ್ತಮ ಪುಣ್ಯ ಕಾರ್ಯಗಳಲ್ಲಿ ನಿರತನಾಗಿದ್ದರೂ ಸಹ ಚಿಕ್ಕ–ವರು ಎದ್ದು ನಿಂತು ಯಥೋಚಿತವಾದ ಗೌರವವನ್ನು ತೋರಿಸಲೇ ಬೇಕು ಎಂಬುದು ಶಾಸ್ತ್ರದ ನಿಯಮ*. ಇಲ್ಲವಾದಲ್ಲಿ ಆಯುಷ್ಯಾದಿಗಳ ನಾಶ ಎಂದು ಅಲ್ಲಿಯೇ ಹೇಳಿದೆ. ಅಗಸ್ತ್ಯರು ಬಂದಾಗ ಏಳದ ಅಪರಾಧಕ್ಕಾಗಿ ಇಂದ್ರದ್ಯುಮ್ನ ಗಜೇಂದ್ರನಾಗಿ ಜನಿಸಿದ್ದು ಅಂತಹ ಒಂದು ಪ್ರಸಂಗ. ಇಲ್ಲಿ ಪಾಂಡುರಾಜನಿಗೆ ಆದದ್ದೂ ಹಾಗೆಯೇ ಎಂದು ತಿಳಿಯಬೇಕು.

ವ್ರಜಸ್ವ ಮಾನುಷೀಂ ತನುಂ ತತೋ ಮೃತಃ ಪುನರ್ದಿವಮ್ ।
ಗತೋಽಪಿ ಚ ಸ್ವಕಾಂ ತನುಂ ಪ್ರವೇಷ್ಟುಮತ್ರ ನೇಶಸೇ ।
ತದಾಽಧಿಕಸ್ತ್ರಿಶಂಕುಜೋ ಭವಿಷ್ಯತಿ ತ್ವದಿತ್ಯಥ ॥ ೮೫ ॥

---

೮೪. ನ ಚ ಮರುತ್ಸು ಕೇಷಾಂಚಿನ್ಮುಕ್ತಾವಾಧಿಕ್ಯಂ ಕ್ಲೃಪ್ತಮ್ । ಕಥಂ ರಾಜಸೂಯೇನ ತಲ್ಲಾಭ ಇತಿ ವಾಚ್ಯಮ್ । ಕ್ಲೃಪ್ತಸ್ಯಾಪಿ ಸಾಧನವ್ಯಂಗ್ಯತ್ವಾತ್ । – (ತಾ.)

* ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ ಯೂನಃ ಸ್ಥವಿರ ಆಯತಿ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ತಾನ್ ಪುನಃ ಪ್ರತಿಪದ್ಯತೇ ॥ – ಮನುಸ್ಮೃತಿ

ಅ: ನೀನು ಮನುಷ್ಯಜನ್ಮವನ್ನು ಹೊಂದು, ಬಳಿಕ ಮೃತನಾದ ಮೇಲೆ ಮರಳಿ ದೇವ-ಲೋಕವನ್ನು ಸೇರಿದರೂ ನಿನ್ನ ಸ್ವರೂಪದ ದೇಹವನ್ನು ಪ್ರವೇಶಿಸಲು ನೀನು ಸಮರ್ಥನಾಗಲಾರೆ, ಆಗ ನಿನಗಿಂತ ಹರಿಶ್ಚಂದ್ರ ಮೇಲೆನ್ನಿಸುವನು.

ಕ್ಷಮಾಪಿತಶ್ಚ ವಾಸವೋ ಜಗಾದ ರಾಜಸೂಯತಃ ।
ತ್ರಿಶಂಕುಜಾಧಿಕೋ ಭವಾನವಾಪ್ಸ್ಯಸಿ ಸ್ವಕಾಂ ತನುಮ್ ॥ ೮೬ ॥

ಅ: ಪರಾವಹ ಕ್ಷಮೆಯಾಚಿಸಿದಾಗ ಇಂದ್ರ ತಿಳಿಸಿದ - ನೀನು ರಾಜಸೂಯ ಯಾಗವನ್ನು ಮಾಡಿದರೆ ಪುನಃ ನಿನ್ನ ಸ್ವರೂಪದೇಹವನ್ನು ಹೊಂದಿ ಹರಿಶ್ಚಂದ್ರನಿಗಿಂತ ಮಿಗಿಲೆನ್ನಿಸುವೆ.

ಅತಃ ಸುಕಾರ್ಯ ಏವ ತೇ ಯುಧಿಷ್ಠಿರ ಕ್ರತೂತ್ತಮಃ ।
ಭವದ್ಭಿರಪ್ಯವಾಪ್ಯತೇ ಸ್ವಯೋಗ್ಯತಾऽಮುನಾऽಖಿಲಾ ॥ ೮೭ ॥

ಅ: ಆದ್ದರಿಂದ ಧರ್ಮರಾಜ, ಈ ಶ್ರೇಷ್ಠ ಯಾಗವನ್ನು ನೀನು ಅಗತ್ಯ ಮಾಡಲೇಬೇಕು, ನಿಮಗೂ ಸಹ ಸ್ವಯೋಗ್ಯತೆಗೆ ಅನುಗುಣವಾದ ಪೂರ್ಣಫಲ ಇದರಿಂದ ಲಭಿಸುವುದು.

ವಿ: ಯಾಗದಿಂದ ಪಾಂಡುರಾಜನಿಗೆ ಇಂದ್ರಲೋಕಪ್ರಾಪ್ತಿ; ಪಾಂಡವರಿಗೂ ಅವರ ಯೋಗ್ಯತೆಗನುಗುಣವಾಗಿ ಪೂರ್ಣಫಲ ಎಂಬುದು ವಿಶೇಷ. ಸಾತ್ತ್ವಿಕರ ಶ್ರೇಯಸ್ಸಿಗಾಗಿ ಪುಣ್ಯಕಾರ್ಯ ಮಾಡಿದಾಗ ಹಾಗೆ ಮಾಡಿದವರಿಗೂ ವಿಶೇಷವಾದ ಪುಣ್ಯಫಲ ಯಥೋಚಿತವಾಗಿ ಲಭಿಸುವುದು ಎಂಬ ಪ್ರಮೇಯ ಇದರಿಂದ ಸೂಚಿತ.

ಉದೀರ್ಯ ಚೈವಮೀಶ್ವರಃ ಕ್ರತೋರಮುಷ್ಯ ಯೋಗ್ಯತಾ ।
ವೃಕೋದರೇ ಯತೋऽಖಿಲಾ ಚತುರ್ಮುಖತ್ವಯೋಗ್ಯತಾ ॥ ೮೮ ॥

---

೮೫. ಪ್ರವೇಷ್ಟುಮತ್ರ ನೇಶಸ ಇತ್ಯತ್ರ ಈಶ ಐಶ್ವರ್ಯ ಇತಿ ಧಾತೋಃ ಶಬ್ದಕರಣೇऽಪಿ ಸತ್ವಾತ್ ಈಶಸ ಇತಿ ಸಾಧುಃ ॥ – (ವಾ.)

೮೬. ತ್ರಿಶಂಕುಜಃ= ಹರಿಶ್ಚಂದ್ರಃ ॥ – (ವಾ.)

೮೭. ಸ್ವಯೋಗ್ಯತಾऽಮುನಾऽಖಿಲೇತ್ಯತ್ರ ಸ್ವಯೋಗ್ಯತಾ= ಸ್ವಸ್ವಪದವೀಯೋಗ್ಯತಾ ॥ – (ವಾ.)

೮೭. ಅಖಿಲಸ್ವಯೋಗ್ಯತಾನುಸಾರಿಫಲಮವಾಪ್ಯತ ಇತ್ಯರ್ಥಃ । – (ಸ.)

ತತಃ ಸುಪೂರ್ಣಮಸ್ಯ ತತ್ಫಲಂ ವಿಧಾತುಮಂಜಸಾ ।
ಜಗಾದ ವಾಯುವಾಹನೋ ವಚೋ ಯುಧಿಷ್ಠಿರಂ ತ್ವಿದಮ್ ॥ ೮೯ ॥

ಅ: ಸರ್ವಸಮರ್ಥನಾದ ಶ್ರೀಕೃಷ್ಣ ಹೀಗೆ ನುಡಿದು ಆ ಯಜ್ಞದ ಪರಿಪೂರ್ಣ ಅಧಿಕಾರ ಬ್ರಹ್ಮಪದವಿಗೆ ಅರ್ಹನಾದ ಭೀಮಸೇನನಲ್ಲಿ ಮಾತ್ರ ಇರುವುದು. ಆದ್ದರಿಂದ ಅದರ ಪೂರ್ಣ-ಫಲವನ್ನು ಭೀಮನಿಗೇ ನೀಡುವ ಉದ್ದೇಶದಿಂದ ವಾಯುವಾಹನನಾದ ಶ್ರೀಕೃಷ್ಣ ಯುಧಿಷ್ಠಿರ-ನನ್ನು ಕುರಿತು ಪುನಃ ಹೀಗೆಂದ.

ವಿ: ೧) ರಾಜಸೂಯಯಾಗದ ಮಹತ್ವವನ್ನು ವಿವರಿಸಿದ ಕೃಷ್ಣ ಆ ಯಾಗದ ಮುಖ್ಯಾಧಿ-ಕಾರಿಯು ಬ್ರಹ್ಮ ಪದವಿಯನ್ನು ಹೊಂದುವ ಋಜುಯೋಗಿ ಮಾತ್ರ ಎಂದು ಸಾರಿ ಅಂತಹ ಋಜುಯೋಗಿ ಅಲ್ಲಿ ಭೀಮಸೇನ ಮಾತ್ರ ಎಂಬುದನ್ನು ತಿಳಿಸಿಕೊಟ್ಟು, ಆ ಮೂಲಕ ಆ ಯಾಗದ ಮುಖ್ಯಫಲ ಭೀಮಸೇನನಿಗೇ ಸೇರಲೆಂದು ಪುನಃ ಮುಂದೆ ಹೇಳುವ ಮಾತನ್ನು ನುಡಿದ ಎಂದರ್ಥ.

೨) ವಾಯುವಾಹನ ಎಂಬುದು ವಿಷ್ಣುಸಹಸ್ರನಾಮದಲ್ಲಿ 'ಸುಪರ್ಣೋ ವಾಯು-ವಾಹನಃ', 'ವರದೋ ವಾಯುವಾಹನಃ' ಎಂಬುದಾಗಿ ಬಂದಿರುವ ವಿಶಿಷ್ಟಪದಗಳಲ್ಲಿ ಒಂದು. ಸಾಮಾನ್ಯವಾಗಿ ಗರುಡವಾಹನ ಎಂಬುದು ಪ್ರಚಲಿತವಾದ ಪದವಾದರೂ ಶ್ರೀಹರಿಯು ಮುಖ್ಯವಾಗಿ ವಾಯುವಾಹನನೇ ಎಂಬುದು ಇದರ ಭಾವ.

೩) ಗರುಡನಲ್ಲಿದ್ದು ಶ್ರೀಹರಿಯನ್ನು ಧರಿಸಿರುವುದೂ ಸಹ *ಶ್ರೀವಾಯುದೇವರೇ ಎಂಬುದು ಇದರಿಂದ ತಿಳಿಯುವುದು.

---

೮೯. ಭೀಮಸೇನೇ ಅಧಿಕಪ್ರೀತಿಸೂಚನಾಯ ವಾಯುವಾಹನ ಇತ್ಯುಕ್ತಮ್। ಜೀವಾನಾಮುತ್ಕ್ರಮಣಸಮಯೇ ವಾಯುರ್ವಾಹನಂ ಯಸ್ಯೇತಿ ವಿಗ್ರಹಃ। ''ಪ್ರಾಚ್ಛೀನಾತ್ಮನಾऽನ್ವಾರೂಢ ಉತ್ಸರ್ಜದ್ಯಾತಿ'' ಇತಿ ಶ್ರುತೇಃ। ದಕ್ಷಿಣಸ್ಕಂಧೇ ಪರಮಾತ್ಮಾನಂ ವಾಮಸ್ಕಂಧೇ ಜೀವಂ ಚಾರೋಪ್ಯ ದೇಹಾತ್ ದೇಹಾಂತರಂ ಗಚ್ಛತೀತಿ ಪ್ರಸಿದ್ಧೇರ್ವಾಯುವಾಹನ ಇತಿ ಭಗವತಃ ಪುಣ್ಯನಾಮ। ''ವರದೋ ವಾಯುವಾಹನಃ'' ಇತಿ ಸಹಸ್ರನಾಮಸು ಪಾಠಾಚ್ಚ॥ –(ವಾ.)

೮೯. ವಾಯುವಾಹನ ಇತಿ । ಕೃಷ್ಣಾವತಾರೇ ಭಗವತಃ ಸರ್ವದಾ ವಾಯ್ವಾರೂಢತಯೈವಾವಸ್ಥಾನಾದಿತಿ ಭಾವಃ । ತದುಕ್ತಂ ಭಗವತ್ಪಾದೈರ್ಯಮಕಭಾರತೇ– 'ಸೋऽವನಿ ಮಧ್ಯೇ ರಂಗನ್ನರಿದರಯುಗ್ ಬಾಲರೂಪಮಧ್ಯೇರಂ ಗನ್' ಇತಿ (ಶ್ಲೋ. ೧೩) । ಉಕ್ತಂ ಚ ಕೃಷ್ಣಲೀಲಾಪ್ರಕಾಶಿಕಾಯಾಂ– 'ಸಾ ಚಾರಿದರಯುಗ್ವಿಷ್ಣುರ್ಬಾಲರೂಪಂ ಸಮೀರಣಂ ಅಧಿರುಹ್ಯ ಸಮಂತಾದ್ಗಚ್ಛನ್ನಿ'ತಿ । ಸ್ಕಾಂದೇ ಚ – 'ವೈಕುಂಠಾಧಿಪತೇರ್ವಾಯುಃ ಕ್ವಚಿದ್ವಾಹನತಾಂ ವ್ರಜೇತ್ । ಕದಾಚಿದಂಗತಾಂ ಯಾತಿ ಕದಾಚಿಚ್ಛಸ್ತತಾಂ ವ್ರಜೇತ್' ಇತಿ । ಅನೇನ ವಾಯೋರ್ಭಗವತ್ಪರಮಪ್ರಿಯತ್ವಾತ್ ತಸ್ಯ ಸುಪೂರ್ಣಂ ಫಲಂ ವಿಧಾತುಂ ಜರಾಸುತವಧಾಯ ಜಗಾಮೇತ್ಯುಕ್ತಂ ಭವತಿ । –(ತಾ.)

* ಅಪಕ್ಷಪಾತೀ ಪುರುಷಸ್ತ್ರಿಲೋಕ್ಯಾಮಭೋಗಭೋಕ್ತಾ ಪತಗಾಧಿರಾಜಮ್ ।
ವಿಶ್ವಂಭರಂ ಬಿಭ್ರದಸೌ ಜಿಗಾಯ ತ್ವರಾಪರಾಕ್ರಾಂತಿಷು ಚಿತ್ರಮೇತತ್ ॥ –ಸುಮಧ್ವವಿಜಯ (೧/೧೬)

೪) ಮರಣ ಕಾಲದಲ್ಲಿ ಬಲಭುಜದಲ್ಲಿ ಶ್ರೀಹರಿಯನ್ನು ಎಡಭುಜದಲ್ಲಿ ಜೀವನನ್ನೂ ಧರಿಸಿ ಶ್ರೀವಾಯುದೇವರು ದೇಹದಿಂದ ಹೊರಕ್ಕೆ ತೆರಳುವರು. ಆಗ ಶ್ರೀಹರಿಯ ವಾಹನ ವಾಯುದೇವರೇ ಎಂಬ ವಿಶೇಷಾಂಶವನ್ನು ಶ್ರೀವಾದಿರಾಜಸ್ವಾಮಿಗಳು ತಿಳಿಸಿರುವರು.

೫) ತಾಮ್ರಪರ್ಣೀಯದಲ್ಲಿ 'ವೈಕುಂಠಾಧಿಪತೇರ್ವಾಯುಃ ಕ್ವಚಿದ್ವಾಹನತಾಂ ವ್ರಜೇತ್ । ಕದಾಚಿದಂಗತಾಂ ಯಾತಿ ಕದಾಚಿಚ್ಛತ್ರತಾಂ ವ್ರಜೇತ್' ಎಂಬ ಸ್ಕಂದಪುರಾಣವಚನದ ಆಧಾರ–ವನ್ನಿತ್ತು ಈ ವಿಷಯವನ್ನು ಸ್ಫುಟಪಡಿಸಿರುವರು.

ಜರಾಸಂಧ ವಧೆ ಅನಿವಾರ್ಯ

ಕ್ವ ರಾಜಸೂಯಮದ್ಯ ತೇ ಜರಾಸುತೇ ತು ಜೀವತಿ ।
ಜಯೇತ್ ಕ ಏವ ತಂ ಯುಧಾ ಮೃತೋ ನ ಯೋಽಪಿ ಸೀರಿಣಾ ॥ ೯೦ ॥

ಅ: ''ಜರಾಸಂಧ ಬದುಕಿರುವಾಗ ನಿನಗೆ ಈ ರಾಜಸೂಯ ಎಂತು ಸಾಧ್ಯವಾದೀತು? ಬಲರಾಮನಿಂದಲೂ ಹತನಾಗದ ಅವನನ್ನು ಯಾರು ತಾನೇ ಜಯಿಸಿಯಾರು?''.

ವಿ: ೧) ರಾಜಸೂಯ ಯಾಗವೆಂದರೆ ಸಮಸ್ತ ರಾಜರನ್ನು ಜಯಿಸಿ ಅವರಿಂದ ಕಪ್ಪಕಾಣಿಕೆ–ಗಳನ್ನು ಪಡೆದು ಅದನ್ನು ಶ್ರೀಹರಿಗೆ ಸಮರ್ಪಿಸುವ ವಿಶಿಷ್ಟಯಾಗ. ಒಬ್ಬ ರಾಜನನ್ನು ಸಹ ಗೆಲ್ಲದೇ ಹೋದರೂ ಅದು ರಾಜಸೂಯಯಾಗವೆನ್ನಿಸದು.

೨) ಜರಾಸಂಧನಂತಹ ಬಲರಾಮನಿಗೂ ಸೋಲದ ಬಲಾಢ್ಯನಾದ ರಾಜ ಇರುವಾಗ ಅವನನ್ನು ಗೆಲ್ಲದೇ ರಾಜಸೂಯ ಯಾಗ ಎಂತು ಪೂರೈಸೀತು? ಎಂಬುದು ಶ್ರೀಕೃಷ್ಣ ಧರ್ಮರಾಜನ ಮುಂದಿಡುವ ಸಮಸ್ಯೆ.

೩) ಮೇಲ್ನೋಟಕ್ಕೆ ಜರಾಸಂಧ ಸರ್ವಥಾ ಅಜೇಯ, ಅವನನ್ನು ಗೆಲ್ಲುವುದು ಅಸಾಧ್ಯವಾದ್ದರಿಂದ ರಾಜಸೂಯ ಯಾಗವೂ ಅಸಾಧ್ಯ ಎಂಬ ಭಾವ ಇದರಲ್ಲಿ ಕಾಣುವುದು. ಆದರೆ, ಶ್ರೀಕೃಷ್ಣ ತನ್ನ ಈ ಮಾತಿನಲ್ಲಿ ಅದಕ್ಕೆ ಸೂಕ್ತ ಪರಿಹಾರವನ್ನೂ ನೀಡಿರುವುದು ಗಮನಾರ್ಹ.

೪) **'ಕ ಏವ ಜಯೇತ್'** – ಎಂಬಲ್ಲಿ **'ಕ'** ಎಂಬುದಕ್ಕೆ ವಾಯು ಎಂಬ ಅರ್ಥವಿದೆ (**'ಕೋ ವಾಯುರಿತಿ ಶಬ್ದಿತಃ'** – ತತ್ತ್ವಪ್ರಕಾಶಿಕಾ ೧/೨/೧೬). ಅದರಂತೆ ವಾಯುವಿನ ಹೊರತು ಜರಾಸಂಧ ಬೇರಾರಿಂದಲೂ ಹತನಾಗಲಾರ. ಭೀಮಸೇನ ವಾಯುವಿನ ಅವತಾರ. ಆದ್ದರಿಂದ ಭೀಮಸೇನನೇ ಅವನನ್ನು ಸಂಹರಿಸುವನು, ಆದ್ದರಿಂದ ಯಾಗದ ಮುಖ್ಯಾಧಿಕಾರಿ ಅವನೇ ಎಂಬುದು ಇದರ ಆಂತರ್ಯ ಎಂದು ತಿಳಿಯಬೇಕು. 'ಕ' ಎಂದರೆ ಬ್ರಹ್ಮ ಎಂದೂ ಅರ್ಥ. ಇದರಂತೆ ಜರಾಸಂಧನನ್ನು ಗೆಲ್ಲುವವನು 'ಕ ಏವ' – 'ಬ್ರಹ್ಮನೇ ಆಗುವನು' ಎಂದು ಅದರ ಫಲವೂ ಸೂಚಿತವಾಗುವುದು ಎಂಬುದನ್ನೂ ಗಮನಿಸಬೇಕು.

ವಿರಿಂಚಶರ್ವವಾಕ್ಕೃತಃ ಸಮಸ್ತಲೋಕಜಾಯಿನಿ ।
ಸ್ಥಿತೇ ತು ತೇ ಜರಾಸುತೇ ನ ಸೇತ್ಸ್ಯತಿ ಕ್ರತೂತ್ತಮಃ ॥ ೯೦ ॥

ಅ: ಬ್ರಹ್ಮ ಶಿವರ ವರದಿಂದ ಸಮಸ್ತ ಲೋಕಗಳನ್ನೂ ಗೆಲ್ಲುವ ಆ ಜರಾಸಂಧ ಇರುವ ವರೆಗೂ ಈ ಶ್ರೇಷ್ಠವಾದ ಯಾಗ ಸಿದ್ಧಿಸದು.

ಯಾಗ ಮಾಡಲು ಧರ್ಮರಾಜನ ಸಂದೇಹ

ಇತೀರಿತೇ ರಥಾಂಗಿನಾ ಜಗಾದ ಧರ್ಮನಂದನಃ ।
ನಿವರ್ತಿತಂ ಮನಃ ಕ್ರತೋರಲಂ ಮಮಾಮುನಾ ಪ್ರಭೋ ॥ ೯೨ ॥

ಅ: ಚಕ್ರಪಾಣಿಯಾದ ಶ್ರೀಕೃಷ್ಣ ಹೀಗೆನ್ನಲು ಧರ್ಮರಾಜ ಹೇಳಿದ 'ಪ್ರಭು, ಶ್ರೀಕೃಷ್ಣ, ಈ ಜರಾಸಂಧನ ಕಾರಣದಿಂದಾಗಿ ನನ್ನ ಮನಸ್ಸನ್ನು ಯಾಗದಿಂದ ಹಿಂತೆಗೆದೆ'.

ವಿ: ೧) ಜರಾಸಂಧನ ಅಜೇಯತ್ವವನ್ನು ಗಮನಿಸಿದ ಧರ್ಮರಾಜ ಶ್ರೀಕೃಷ್ಣನ ಮಾತಿನ ಭಾವವನ್ನು ತಿಳಿಯದೆ ಯಾಗದಿಂದ ಹಿಂತೆಗೆಯುವುದಾಗಿ ತಿಳಿಸುವನು. ಎಂದರೆ ಜರಾಸಂಧನನ್ನು ಗೆಲ್ಲುವುದು ಸರ್ವಥಾ ಅಶಕ್ಯ ಎಂಬ ತೀರ್ಮಾನ ಅವನದ್ದು. ಇದರಿಂದ ಅವನಿಗೆ ರಾಜಸೂಯದ ಅರ್ಹತೆ ಇಲ್ಲವೆಂಬುದು ಸ್ಫುಟಪಡುವುದು.

೨) ಇದನ್ನು ತಿಳಿಸಿಕೊಡುವುದೇ ಕೃಷ್ಣನ ಮಾತಿನ ತಾತ್ಪರ್ಯವಾಗಿತ್ತು. ಧರ್ಮರಾಜನಿಗೆ ಹೀಗೆ ಅವನ ಮಾತಿನಿಂದಲೇ ಅವನ ಯಾಗದ ಅನರ್ಹತೆಯನ್ನು ತಿಳಿಸಿಕೊಟ್ಟಿದ್ದು ಶ್ರೀಕೃಷ್ಣನ ಕೌಶಲ.

೩) ಇಲ್ಲಿ 'ಧರ್ಮನಂದನಃ' ಎಂಬ ಪದವನ್ನು ಪ್ರಯೋಗಿಸುತ್ತಾ ಶ್ರೀಮದಾಚಾರ್ಯರು ಅವನು ಯಮಧರ್ಮನ ಅವತಾರನಾದರೂ ಜರಾಸಂಧನನ್ನು ಯಮಪುರಿಗೆ ಅಟ್ಟಲು ಸಾಧ್ಯವಿರಲಿಲ್ಲ ಎಂಬ ಸ್ವಾರಸ್ಯವನ್ನು ಸೂಚಿಸಿರುವರು. ಶ್ರೀಹರಿ–ವಾಯುಗಳ ಅವತಾರ ಈ ಕಾರಣದಿಂದಾಗಿಯೇ ಅತ್ಯಗತ್ಯವಾಗಿತ್ತು ಎಂಬುದು ಸ್ಪಷ್ಟಪಡುವುದು.

ಬಭೂವಿರೇ ಚ ಭೂಭೃತೋ ನ ಚಾಧಿರಾಜ್ಯಮಾಪಿರೇ ।
ಯದಾ ಚ ಚಕ್ರವರ್ತಿನಸ್ತದೇದೃಶಾ ನ ಶತ್ರವಃ ॥ ೯೩ ॥

---

೯೨. ಕ್ರತೋರಲಂ ಮಮಾಮುನೇತ್ಯತ್ರ ಅಮುನಾ = ತ್ವದೀಯವಚನೇನ। ತ್ವದುಕ್ತಜರಾಸಂಧಾಖ್ಯಕಾರಣೇನ ವಾ ॥ – (ವಾ.)

ಅ: 'ಬಹಳ ರಾಜರು ಆಗಿರುವರು, ಅವರೆಲ್ಲ ಚಕ್ರಾಧಿಪತಿಗಳಾಗಲಿಲ್ಲ. ಚಕ್ರವರ್ತಿಗಳಾದ ರಾಜರುಗಳಿದ್ದಾಗ ಈ ಜರಾಸಂಧನಂತಹ ಶತ್ರುಗಳು ಇರಲಿಲ್ಲ'.

ವಿ: ೧) ಧರ್ಮರಾಜ ಮಾಡಿಕೊಳ್ಳುತ್ತಿರುವ ಸಮಾಧಾನದ ಬಗೆಯಿದು. ಇತಿಹಾಸದಲ್ಲಿ ಅಸಂಖ್ಯ ರಾಜರಾಗಿದ್ದರೂ ಎಲ್ಲರೂ ಚಕ್ರವರ್ತಿಗಳಾದವರೇನಲ್ಲ. ಅದರಂತೆ ತಾನೂ ಸಹ ಚಕ್ರವರ್ತಿಯಾಗದೇ ಜೀವನ ಸಾಗಿಸಬಹುದು ಎಂದರ್ಥ.

೨) ರಾಜಸೂಯ ಯಾಗ ಮಾಡದೇ ಪಾರಿಭಾಷಿಕ ಅರ್ಥದಲ್ಲಿ ಯಾರು ಚಕ್ರವರ್ತಿ–ಗಳೆನ್ನಿಸಲಾರರು ಎಂಬ ವಿಶೇಷಾಂಶ ಈ ಮಾತಿನಲ್ಲಿದೆ.

೩) ಹರಿಶ್ಚಂದ್ರನಂತಹ ಕೆಲವರು ರಾಜಸೂಯ ಯಾಗ ಮಾಡಿದವರಾದರೂ ಆ ಕಾಲಕ್ಕೆ ಜರಾಸಂಧನಂತಹ ಪ್ರಬಲ ಶತ್ರುಗಳು ಇರಲಿಲ್ಲ. ತನ್ನ ಕಾಲದಲ್ಲಿ ಜರಾಸಂಧನಂತಹ ಪ್ರಬಲ ವೈರಿಗಳು ಇದ್ದುದರಿಂದ ಇದು ಅಸಾಧ್ಯವಾದ ಯೋಜನೆ ಎಂದು ಧರ್ಮರಾಜ ತಾನು ಯಾಗವನ್ನು ಕೈಬಿಡಲು ತೀರ್ಮಾನಿಸುವನು.

೪) ಈ ಸಂದರ್ಭದಲ್ಲಿ ಅವನು ನಾರದರ ಮೂಲಕ ತಿಳಿದ ತನ್ನ ತಂದೆಯಾದ ಪಾಂಡುರಾಜನ ಸಂದೇಶವನ್ನೂ ಸಹ ಕೈಬಿಡುತ್ತಿರುವುದು ತುಂಬಾ ಗಮನಾರ್ಹವಾದ ಅಂಶ. ಜರಾಸಂಧನ ಭಯ ಅವನನ್ನು ಹಾಗೆ ಹತಾಶನನ್ನಾಗಿಸಿತ್ತು ಎಂದರ್ಥ.

ಭೀಮಸೇನನ ಸಂದೇಶ

ಇತೀರಿತೇऽಮುನಾऽವದತ್ ಪ್ರಧಾನಮಾರುತಾತ್ಮಜಃ ।
ಪದಂ ಚತುರ್ಮುಖಸ್ಯ ವಾ ಸುಸಾಧ್ಯಮೇವ ಯತ್ನತಃ ॥ ೯೪ ॥

ಅ: ಅವನು ಹೀಗೆನ್ನಲು ಮುಖ್ಯವಾಯುವಿನ ಅವತಾರನಾದ ಭೀಮಸೇನ ನುಡಿದ 'ಪ್ರಯತ್ನದಿಂದ ಚತುರ್ಮುಖ ಬ್ರಹ್ಮನ ಪದವಿಯನ್ನಾದರೂ ಸುಲಭವಾಗಿ ಸಾಧಿಸಬಹುದು'

ವಿ: ೧) ಚತುರ್ಮುಖ ಬ್ರಹ್ಮನ ಪದವಿ ಇತರರಿಗೆ ಊಹಿಸಲೂ ಆಗದಂತಹ ಅತ್ಯುನ್ನತವಾದ ಪದವಿ. ಅದನ್ನೂ ಸಹ ಪ್ರಯತ್ನದಿಂದ ಸಾಧಿಸಬಹುದು ಎನ್ನುವ ಮೂಲಕ ಭೀಮಸೇನ ತಾನು ಬ್ರಹ್ಮ ಪದವಿಗೆ ಅರ್ಹನಾದ ಋಜು ದೇವತೆ ಎಂಬುದನ್ನು ಸ್ಪಷ್ಟಪಡಿಸಿದ.

---

೯೩. ಬಭೂವುರೇವ ಭೂಭೃತ ಇತ್ಯತ್ರ ಬಹವೋ ಭೂಭೃತೋ ಬಭೂವುರೇವ। ತೇ ಅಧಿರಾಜ್ಯಂ ನಾಪಿರೇ। ರಾಜಸೂಯಂ ಕೃತ್ವಾ ರಾಜಸ್ವಾಧಿಕ್ಯಂ ನ ಲೇಭಿರ ಇತ್ಯರ್ಥಃ। ಯದಾ ಚಕ್ರವರ್ತಿನಃ ಹರಿಶ್ಚಂದ್ರಾದ್ಯಾ ಅಧಿರಾಜ್ಯಮಾಪಿರೇ। ತದಾ ಈದೃಶಾಃ ಶತ್ರವಃ ನ ಸಂತಿ ಸ್ಮೇತ್ಯನ್ವಯಃ ॥ – (ವಾ.)

೨) ಇದರಿಂದ ಪ್ರಯತ್ನ ಮಾಡುವ ಬುದ್ಧಿ ಹುಟ್ಟಲೂ ಸಹ ಸ್ವರೂಪ ಯೋಗ್ಯತೆ ಮುಖ್ಯ ಕಾರಣ ಎಂಬ ತತ್ವವೂ ಸೂಚಿತ.

ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ ।
ಮಹಾಪ್ರಯತ್ನವರ್ಜಿತಾ ಜನಾ ನ ಜಗ್ಮುರುನ್ನತಿಮ್ ॥ ೯೫ ॥

ಅ: 'ಸ್ವರೂಪಯೋಗ್ಯತೆ ಇಲ್ಲದ, ದೈವಾನುಗ್ರಹ ಪಡೆಯದ, ಮಹಾಪ್ರಯತ್ನ ಮಾಡದ ಜನರು ಮಾತ್ರ ಎಂದೂ ಸಹ ಅಭ್ಯುದಯ ಹೊಂದರು'.

ವಿ: ೧) ಕಾರ್ಯ ಸಾಧನೆಗೆ ಅತ್ಯಗತ್ಯವಾದ ಮೂರು ಗುಣಗಳನ್ನು ತುಂಬಾ ಸುಂದರವಾಗಿ ಭೀಮಸೇನನ ಈ ಮಾತಿನಲ್ಲಿ ವಿವರಿಸಲಾಗಿದೆ. ಮೊದಲನೆಯದು ಸ್ವರೂಪ ಯೋಗ್ಯತೆ, ಎರಡನೆಯದು ಶ್ರೀಹರಿಯ ಅನುಗ್ರಹ, ಮೂರನೆಯದು ಗುರಿ ಸಾಧನೆಗೆ ತಕ್ಕಂತಹ ಉತ್ತಮ ಪ್ರಯತ್ನ. ಈ ಮೂರು ಇದ್ದಲ್ಲಿ ಮಾತ್ರ ಒಂದು ಕಾರ್ಯ ಸಿದ್ಧಿಸಲು ಸಾಧ್ಯ ಎಂದರ್ಥ.

೨) ಸ್ವರೂಪ ಯೋಗ್ಯತೆ ಎನ್ನುವುದು ಆಯಾ ಜೀವರ ಅನಾದಿ ಯೋಗ್ಯತೆ. ಶ್ರೀಹರಿಯ ಅನುಗ್ರಹವನ್ನು ಮಧ್ಯದ ಕಾರಣವನ್ನಾಗಿ ನಿರೂಪಿಸುವ ಮೂಲಕ ದೆಹಲೀದೀಪ ನ್ಯಾಯದಿಂದ ಸ್ವರೂಪ ಯೋಗ್ಯತೆ ಹಾಗೂ ಮಹಾಪ್ರಯತ್ನಗಳೆರಡೂ ಸಹ ಶ್ರೀಹರಿಯ ಅನುಗ್ರಹವನ್ನು ಅವಲಂಬಿಸಿ ಇರುವಂತಹವು ಎಂಬ * ವಿಶೇಷಾಂಶವೂ ಸೂಚಿತ.

೩) ಇಲ್ಲಿ ಮಹಾಪ್ರಯತ್ನವೆಂದರೆ ಆಯಾ ಕಾರ್ಯವು ಈಡೇರಲು ಉಚಿತವಾದ ಸೂಕ್ತ ಪ್ರಯತ್ನ ಎಂದರ್ಥ.

೪) ಗೌತಮ ಅಣಿಮಾಂಡವ್ಯರು ಮೊದಲಾದವರು ಮಾಡಿದ ಪ್ರಯತ್ನ ಅಯೋಗ್ಯ–ಕಾಮನೆಯ ಪ್ರಯತ್ನವಾದ್ದರಿಂದ ಅದು ಮಹಾಪ್ರಯತ್ನವಾಗದೇ ವ್ಯರ್ಥಪ್ರಯತ್ನವಾಯಿತು.

೫) ಇಂದ್ರದೇವರು ಇಂದ್ರಪದವಿಯ ಸಂಪಾದನೆಗಾಗಿ ಮಾಡಿದ ನೂರು ಅಶ್ವಮೇಧ ಯಾಗಗಳು ಮಹಾಪ್ರಯತ್ನ, ಅದರಂತೆ ರುದ್ರಾದಿದೇವತೆಗಳ ಸ್ವಪದಪ್ರಾಪ್ತಿಯ ಪ್ರಯತ್ನ ಸಹ.

---

೯೫. ಅನಿರ್ವೇದೇನ ದೀರ್ಘೇಣ ನಿಶ್ಚಯೇನ ಧ್ರುವೇಣ ಚ ।
ದೇವದೇವಪ್ರಸಾದಾಚ್ಚಕ್ಷಿಪ್ರಂ ಫಲಮವಾಪ್ಯತೇ ॥ – ಭಾರತ (೧೨/೧೫೩/೧೧೬)

* 'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ' ॥ – ಭಾಗವತ (೨/೧೦/೧೨)

ಆದ್ದರಿಂದ ಮಹಾಪ್ರಯತ್ನ ಎಂಬುದಕ್ಕೆ ಸೂಕ್ತ ಪ್ರಯತ್ನ ಎಂಬುದೇ ವಿಹಿತವಾದ ಅರ್ಥ ಎಂದು ತಿಳಿಯಬೇಕು.

ಸ್ಥಿರೋಽನುಭಾವ ಏವ ಮೇ ಮಹಾನನುಗ್ರಹೋ ಹರೇಃ ।
ಪ್ರಯತ್ನಮೇಕಮಗ್ರತೋ ನಿಧಾಯ ಭೂತಿಮಾಪ್ನುಮಃ ॥ ೯೬ ॥

ಅ: 'ನನ್ನಲ್ಲಿ ಸುಸ್ಥಿರ ಯೋಗ್ಯತೆ ಇದೆ; ಶ್ರೀಹರಿಯ ಮಹತ್ತರವಾದ ಅನುಗ್ರಹವಿದೆ, ಪ್ರಯತ್ನವೊಂದನ್ನು ಮುಂದಿರಿಸಿಕೊಂಡು ಅಭ್ಯುದಯವನ್ನು ಹೊಂದೋಣ'.

ವಿ: ೧) ಭೀಮನಿಗೆ ತನ್ನ ಯೋಗ್ಯತೆಯ ಸ್ಫುಟಪರಿಜ್ಞಾನವಿರುವುದು ಇಲ್ಲಿಯ ವಿಶೇಷಾಂಶ. ಋಜುಗಳಲ್ಲದವರಿಗೆ ತಮ್ಮ ಯೋಗ್ಯತೆಯ ಇತಿಮಿತಿಗಳು ಸಹ ತಿಳಿಯದೇ ಹೋಗುವುದುಂಟು ಎಂಬುದಕ್ಕೂ ಇದು ಸೂಚಕ.

೨) ಶ್ರೀಹರಿಯ ಅನುಗ್ರಹವಿರುವುದು ಶ್ರೀಕೃಷ್ಣನ ಉಪಸ್ಥಿತಿಯಿಂದಲೇ ವ್ಯಕ್ತ ಇನ್ನುಳಿದಿರುವುದು ಪ್ರಯತ್ನ ಮಾತ್ರ ಎಂದರ್ಥ. ಜೀವನದಲ್ಲಿ ಸಾಧನೆ ಎಂದರೆ ಇದೇ. ನಮಗೆ ಶ್ರೀಹರಿಯು ನೀಡಿರುವ ದೇಹಾದಿಗಳು ಯೋಗ್ಯತೆಗೆ ಅನುಗುಣವಾಗಿ ಇರುವುದರಿಂದ ಅದಕ್ಕೆ ವಿಹಿತವಾದ ಪ್ರಯತ್ನವನ್ನು ಮಾಡುವುದಷ್ಟೇ ಪ್ರತಿಯೊಬ್ಬರ ಮುಖ್ಯ ಕರ್ತವ್ಯ ಎಂದು ತಿಳಿಯಬೇಕು.

೩) ಸೂಕ್ತವಾದ ಸಾಧನ ಪರಿಕರವನ್ನು ನೀಡಿದಾಗಲೂ ಶ್ರೀಹರಿಯ ಅನುಗ್ರಹವನ್ನು ಸಂದೇಹಿಸುತ್ತಾ ವಿಹಿತ ಕರ್ತವ್ಯ ಕರ್ಮಗಳಲ್ಲಿ ತೊಡಗದೆ ಇರುವುದು ಪಲಾಯನವಾದವೇ ಸರಿ.

೪) ಶ್ರೀಹರಿಯ ಸ್ವಾತಂತ್ರ್ಯವನ್ನೂ ಜೀವರ ಅಸ್ವಾತಂತ್ರ್ಯವನ್ನೂ ಯೋಗ್ಯರೀತಿಯಲ್ಲಿ ತಿಳಿದು ಪ್ರಯತ್ನದ ಸ್ಥಾನಮಾನವನ್ನು ಸೂಕ್ತವಾಗಿ ಅರ್ಥಮಾಡಿಕೊಂಡು ಶ್ರೀಹರಿ ಪ್ರೀತಿಗೆಂದು ಸಾಧನೆಯಲ್ಲಿ ತೊಡಗುವುದೇ ಮಧ್ವಸಿದ್ಧಾಂತದ ತಿರುಳು.

ಇತೀರಿತೇಽಮುನಾ ಹರಿಃ ಸಮುದ್ಯಮಾತ್ ಪ್ರಧಾನತಃ ।
ಸ್ಥಿತೇ ಹಿ ಯಜ್ಞಕಾರಣೇ ವೃಕೋದರೇ ಜಗಾದ ಹ ॥ ೯೭ ॥

ಅ: ಭೀಮ ಹೀಗೆನ್ನಲು ಅಂತಹ ಪ್ರಯತ್ನದಿಂದಾಗಿ ಮುಖ್ಯವಾಗಿ ಅವನೇ ಯಜ್ಞಕ್ಕೆ ಕಾರಣ ಎಂದು ಸಿದ್ಧವಾಯಿತು; ಶ್ರೀಕೃಷ್ಣನುಡಿದ.

---

೯೭. ಸಮುದ್ಯಮಾತ್ಪ್ರಧಾನತ ಇತ್ಯತ್ರ ಸಮು = ಸಮ್ಯಕ್ಕಯತ್ನಾತ್। ಪ್ರಧಾನತಃ= ಪ್ರಧಾನೇ ॥ – (ವಾ.)

ವಿ: ೧) ಭೀಮನ ಆ ರೀತಿಯಾದ ವೀರೋಚಿತವಾದ ಮಾತುಗಳು ಅವನ ಯೋಗ್ಯತೆಯನ್ನು ಸ್ಫುಟಪಡಿಸುವ ಸಾಧನ ಎಂಬುದನ್ನು ಸಾರುತ್ತಾ ಶ್ರೀಕೃಷ್ಣ ಮುಂದೆ ತಿಳಿಸಿದಂತೆ ಮಾತನಾಡಿದ ಎಂದರ್ಥ.

೨) ಮಹಾಭಾರತದಲ್ಲಿ ಮೇಲ್ನೋಟಕ್ಕೆ ಅರ್ಜುನ ಇಂತಹ ಮಾತನ್ನಾಡಿದಂತೆ ಕಾಣುವುದು, ಅದರ ಭಾವವನ್ನು ಹೀಗೆ ವಿವರಿಸಿ ಅಲ್ಲಿ ಅರ್ಜುನ ಎಂಬುದಕ್ಕೆ ಪುರುಷವ್ಯತ್ಯಾಸ ಎಂಬ ಪ್ರಭೇದದ ಹಿನ್ನೆಲೆಯಲ್ಲಿ ಭೀಮ ಎಂದೇ ಅರ್ಥಮಾಡಿಕೊಳ್ಳಬೇಕು ಎಂದು ತಿಳಿಯಬೇಕು.

ಜರಾಸಂಧ ವಧೆಯ ಮಹತ್ತ್ವ

ಸ ಏಕ ಏವ ಪೂರುಷೋ ಜರಾಸುತೋಽದ್ಯ ವರ್ತತೇ ।
ಸಮಸ್ತಸದ್ವಿರೋಧಿನಾಂ ಬಲಂ ಕಲೇರನಂತರಃ ॥ ೯೮ ॥

ಅ: 'ಕಲಿಯ ಅನಂತರ ಇಂದು ಸಮಸ್ತ ಸಜ್ಜನರ ವಿರೋಧಿಗಳಿಗೆ ಬಲವಾಗಿ ಇರುವಂತಹ ಪ್ರಧಾನ ವ್ಯಕ್ತಿ ಆ ಜರಾಸಂಧನೊಬ್ಬನೇ'.

ವಿ: ೧) ಆ ಕಾಲದಲ್ಲಿ ಸಮಸ್ತ ಸಜ್ಜನರಿಗೂ ಸಾಧನೆಗೆ ವಿಘ್ನಕರವಾಗಿದ್ದವರು ಪ್ರಧಾನವಾಗಿ ಇಬ್ಬರು – ಒಬ್ಬ ಕಲಿಯ ಅವತಾರನಾದ ದುರ್ಯೋಧನ, ಇನ್ನೊಬ್ಬ ವಿಪ್ರಚಿತ್ತಿಯ ಅವತಾರನಾದ ಜರಾಸಂಧ.

೨) ಈ ಮಾತಿನಲ್ಲಿ ಶ್ರೀಮದಾಚಾರ್ಯರು ದೈತ್ಯ ತಾರತಮ್ಯವನ್ನೂ ಸಹ ಸೂಚಿಸಿರುವರು ಎಂದು ತಿಳಿಯಬೇಕು. ಎಂದರೆ ಕಲಿ ದೈತ್ಯಾಧಮನಾದರೆ, ಪುರುಷ ದೈತ್ಯರ ಗುಂಪಿನಲ್ಲಿ ಅವನ ಅನಂತರದ ಸ್ಥಾನ ವಿಪ್ರಚಿತ್ತಿಯದೇ ಎಂದರ್ಥ.

ತಥಾ ಸತಾಂ ಸಮಾಶ್ರಯೋ ಯದುದ್ಭವಾಃ ಸತಾಂ ಗುಣಾಃ ।
ಸ ಏಕ ಏವ ತಾದೃಶಸ್ತ್ವಯಾ ವಿಚಿಂತ್ಯ ಯಾತ್ಯತಾಮ್ ॥ ೯೯ ॥

ಅ: 'ಅದರಂತೆ ಸಜ್ಜನರಿಗೆ ಗುಣಗಳ ಪ್ರಕಾಶಕ್ಕೆ ಆಶ್ರಯನಾಗಿರುವ ಅಂತಹ ವ್ಯಕ್ತಿಯು ಒಬ್ಬನೇ; ಅಂಥವನನ್ನು ನೀನು ಸರಿಯಾಗಿ ಆಲೋಚಿಸಿ ಕಳುಹಿಸಿಕೊಡು'.

---

೯೯. ತಥಾ ಸತಾಂ ಸಮಾಶ್ರಯ ಇತ್ಯತ್ರ ಯಥಾ ಜರಾಸಂಧಃ ಅಸತಾಂ ಸಮಾಶ್ರಯಃ। ತಥಾ ಯಃ ಸತಾಂ ಸಮಾಶ್ರಯಃ। ಸತಾಂ ಗುಣಾಶ್ಚ ಯದುದ್ಭವಾಃ= ಯಸ್ಮಿನ್ ಉದ್ಭವೋ ಯೇಷಾಂ ತೇ ತಥೋಕ್ತಾಃ। ತಾದೃಶಃ ಸ ಏಕ ಏವೇತಿ ಸಂಬಂಧಃ ॥ – (ವಾ.)

ಏಃ ೧) ದುರ್ಜನರಿಗೆ ಕಲಿ, ವಿಪ್ರಚಿತ್ತಿಗಳು ಆಸರೆಯಾಗಿರುವಂತೆ ಸಜ್ಜನರಿಗೆ ವಾಯುದೇವರೇ ಆಶ್ರಯ ಎಂಬುದನ್ನು ಕೃಷ್ಣ ಇಲ್ಲಿ ಸೂಚಿಸುತ್ತಾ ಅಂತಹ ವಾಯುವಿನ ಅವತಾರನಾದ ಭೀಮಸೇನ– ನನ್ನೇ ಕಳುಹಿಸಿಕೊಡು ಎಂದು ತಿಳಿಸಿದ.

೨) ಸತಾಂ ಎನ್ನುವ ಮೂಲಕ ಸಜ್ಜನರಿಗೆಲ್ಲ ಮೂಲತಃ ಸತ್ ಶಬ್ದ ವಾಚ್ಯನಾದ ವಾಯುದೇವರೇ ಮುಖ್ಯ ಆಶ್ರಯರು ಎಂಬುದನ್ನು ತಿಳಿಸಿರುವನು : 'ಸದಿತಿ ಪ್ರಾಣಃ'.

ಯದಿ ಸ್ಮ ತೇನ ಮಾಗಧೋ ನಿಹನ್ಯತೇ ಸತಾಂ ಜಯಃ ।
ವಿಪರ್ಯಯೇಣ ಚಾಸತಾಮಿತಿ ಸ್ಮ ವಿದ್ಧಿ ನಾನ್ಯಥಾ ॥ ೧೦೦ ॥

ಅಃ 'ಅವನಿಂದ ಜರಾಸಂಧ ಹತನಾದಲ್ಲಿ ಸಜ್ಜನರಿಗೆ ಜಯ, ಇಲ್ಲವಾದಲ್ಲಿ ಅಸಜ್ಜನರಿಗೇ ಜಯ ಎಂದು ತಿಳಿ. ಇದು ಸುಳ್ಳಾಗಲಾರದು'.

ಏಃ ೧) ಮೇಲ್ನೋಟಕ್ಕೆ ಇಲ್ಲಿ 'ಯದಿ' ಎಂಬ ಮಾತಿನಿಂದ ಜರಾಸಂಧ ಹತನಾದಲ್ಲಿ ಎಂದು ವಿಕಲ್ಪ ಮಾಡಿ ಹೇಳುತ್ತಿರುವಂತೆ ಕಾಣುತ್ತಿದೆ, ಆದರೆ ಇಲ್ಲಿ 'ಯದಿ' ಶಬ್ದವನ್ನು ಅಧ್ಯಾಯ ೮ ಶ್ಲೋಕ ೧೧೩ ('ಯದಿ ಸ್ಮ ಶಕ್ಯತೇ...')ರ ವಿವರಣೆಯಲ್ಲಿ ಕೊಟ್ಟಿರುವಂತೆ 'ನಿಶ್ಚಯ' ಎಂಬ ಅರ್ಥದಲ್ಲೇ ಗ್ರಹಿಸಬೇಕು.

೨) ಮೇಲ್ನೋಟಕ್ಕೆ ಕೃಷ್ಣ ಹಾಗೆನ್ನುವುದು ಧರ್ಮರಾಜನಿಗೆ ಕ್ರಮವಾಗಿ ದಾರ್ಢ್ಯ ಹುಟ್ಟಿಸಲೆಂದು ಮಾತ್ರ. ಸರ್ವಜ್ಞನಾದ ಕೃಷ್ಣನಿಗೆ ಸರ್ವಾತ್ಮನಾ ಸಂಶಯದ ಪ್ರಸಕ್ತಿಯೇ ಇಲ್ಲವಾದ್ದರಿಂದ ಅದು ಮುಖ್ಯಾರ್ಥವಾಗಲಾರದು ಎಂದು ಗಮನಿಸಬೇಕು.

೩) ಹೀಗೆ ಹೇಳುವ ಮೂಲಕ ಭೀಮಜರಾಸಂಧರ ಸಮರ ಸಜ್ಜನದುರ್ಜನರ ಪಾಲಿಗೆ ನಿರ್ಣಾಯಕ ಸಮರ ಎಂಬ ವಿಶೇಷಾಂಶವನ್ನು ಕೃಷ್ಣ ತಿಳಿಸುತ್ತಿರುವನು ಎಂದು ಭಾವಿಸಬಹುದು.

ಜರಾಸಂಧನನ್ನು ಕೊಲ್ಲುವವನು ಭಾವಿಬ್ರಹ್ಮ

ಸ ಪಾರಮೇಷ್ಯ್ಯಸತ್ಪದಂ ಪ್ರಯಾತ್ಯಸಂಶಯಂ ಯುಧಿ ।
ಯ ಏವ ಹಂತಿ ಮಾಗಧಂ ಸ ವೇದಧರ್ಮಪಾಲಕಃ ॥ ೧೦೧ ॥

---

೧೦೧. **ಸ ಏವ ಧರ್ಮಪಾಲಕಃ** – (ಜ.ಪಾಠ)

೧೦೧. ಜಯೇದ್ಯಶ್ಚ ಜರಾಸಂಧಂ ಸ ಸಮ್ರಾಣ್ಮಿಯತಂ ಭವೇತ್ ॥ – ಭಾರತ (ಸಭಾ. ೧೫/೨೫)

ಅ: 'ಯಾವನು ಯುದ್ಧದಲ್ಲಿ ಜರಾಸಂಧನನ್ನು ಕೊಲ್ಲುವನೋ, ಅವನು ನಿಶ್ಚಯವಾಗಿಯೂ ಬ್ರಹ್ಮ ಪದವಿಯನ್ನು ಹೊಂದುವನು; ವೇದ ಧರ್ಮಗಳನ್ನು ಪಾಲಿಸುವನು'.

ವಿ: ೧) ಜರಾಸಂಧನನ್ನು ಕೊಲ್ಲುವುದು ಎಂದರೆ ಬ್ರಹ್ಮ ಪದವಿಯನ್ನು ಪಡೆಯುವುದು ಎಂದೇ ಅರ್ಥ. ಜರಾಸಂಧನಿಗೆ ಮುಖ್ಯವಾಗಿ ಬ್ರಹ್ಮವರವಿದ್ದುದರಿಂದ ಅವನನ್ನು ಸಂಹರಿಸುವನು ಬ್ರಹ್ಮ-ಪದವಿಯನ್ನು ಹೊಂದುವುದು ಕೈಮುತ್ಯಸಿದ್ಧ ಎಂಬುದನ್ನು ಅಸಂಶಯಂ ಎಂಬ ಮಾತಿನಿಂದ ಸೂಚಿಸಿರುವರು ಎಂದು ತಿಳಿಯಬೇಕು.

೨) ಜರಾಸಂಧ ಅವೈದಿಕನಾದ್ದರಿಂದ ಅವನ ಸಂಹಾರದಿಂದ ವೈದಿಕ ಧರ್ಮ ಪುನಃ ಪ್ರವರ್ತಿತವಾಗುವುದು ಎಂಬ ಅಂಶವೂ ಸೂಚಿತ.

ನಿಹಂತಿ ಮಾಗಧೇಶ್ವರಂ ಸ ಏವ ವೈಷ್ಣವಂ ಜಗತ್ ।
ಕರೋತಿ ಶರ್ವಪಾಲಿತೋ ಯತಃ ಸ ಬಾರುಹದ್ರಥಃ ॥ ೧೦೨ ॥

ಅ: 'ಆ ಜರಾಸಂಧನು ಶಿವನಿಂದ ರಕ್ಷಿತನಾದ್ದರಿಂದ ಅವನನ್ನು ಕೊಲ್ಲುವವ ಜಗತ್ತನ್ನು ವೈಷ್ಣವವಾಗಿಸುವನು'.

ವಿ: ಜರಾಸಂಧ ಒಂದೆಡೆ ಅವೈದಿಕನಾದರೆ, ಮತ್ತೊಂದೆಡೆ ಶೈವ. ಅವನ ಸಂಹಾರ ವೈದಿಕ-ಮತದ ಪುನರುಜ್ಜೀವನಕ್ಕೆ ಕಾರಣವಾಗುವಂತೆ, ವೈಷ್ಣವಮತದ ಪುನರುಜ್ಜೀವನಕ್ಕೂ ಸಾಧನ ಎಂದರ್ಥ.

ನಿಹಂತಿ ಶೈವನಾಯಕಂ ಯ ಏವ ವೈಷ್ಣವಾಗ್ರಣೀಃ ।
ಇತಿ ಸ್ಮ ಭಾವಸಂಯುತೇ ವದತ್ಯಜೇಽಬಿಭೇನ್ನೃಪಃ ॥ ೧೦೩ ॥

ಅ: 'ಶೈವರ ನಾಯಕನನ್ನು ಯಾವನು ಕೊಲ್ಲುವನೋ ಅವನೇ ವೈಷ್ಣವಾಗ್ರೇಸರ-ನಾಗುವನು'. ಹೀಗೆ ಕೃಷ್ಣನು ಭಾವಗರ್ಭಿತವಾಗಿ ನುಡಿಯಲು ಧರ್ಮರಾಜ ಅಂಜಿದ.

---

೧೦೨. ನಿಹಂತಿ ಮಾಗಧೇಶ್ವರಮಿತ್ಯತ್ರ ಯಃ ಮಾಗಧೇಶ್ವರಂ ನಿಹತ್ಯ ಜಗದ್ವೈಷ್ಣವಂ ಕರೋತಿ। ಸ ಏವ ವೇದಧರ್ಮಪಾಲಕ ಇತಿ ಪೂರ್ವೇಣಾನ್ವಯಃ ॥ – (ವಾ.)

೧೦೩. ಯಃ ಶೈವನಾಯಕಂ ನಿಹಂತಿ ಯತ್ತದೋರ್ನಿತ್ಯಸಂಬಂಧಾತ್ ಸ ಏವ ವೈಷ್ಣವಾಗ್ರಣೀರಿತಿ ಸಂಬಂಧಃ। ಅಬಿಭೇದಿತಿ ಲಙ್ ಪ್ರಥಮಪುರುಷೈಕವಚನಮ್ ॥ – (ವಾ.)

ವಿ: ೧) ಶೈವಾಗ್ರಣಿಯನ್ನು ಕೊಲ್ಲುವವನು ವೈಷ್ಣವಾಗ್ರಣಿ ಎನ್ನಿಸುವುದು ಸಹಜ ಎಂದರ್ಥ. ಈ ಮೂಲಕ ಜರಾಸಂಧನನ್ನು ಸಂಹರಿಸುವ ಮೂಲಕ ಭೀಮಸೇನ ಸಾಧಿಸುವ ಹಿರಿಮೆಯನ್ನು ಶ್ರೀಕೃಷ್ಣ ವಿಶೇಷವಾಗಿ ನಿರೂಪಿಸುತ್ತಿರುವನು ಎಂಬುದನ್ನು ಗಮನಿಸಬೇಕು.

೨) ರಾಜಸೂಯಯಾಗದ ಪರಿಣಾಮ ಒಟ್ಟಾಗಿ ಜಗತ್ತನ್ನು ವೈದಿಕ ಹಾಗೂ ವೈಷ್ಣವ–ವಾಗಿಸುವಷ್ಟು ಪ್ರಮುಖ ಎಂಬ ಅಂಶ ಇಲ್ಲಿ ನಿರೂಪಿತ.

೩) ಧರ್ಮರಾಜ ಇದನ್ನು ಗಮನಿಸದೇ ಇಂತಹ ಗುರುತರ ಜವಾಬ್ದಾರಿಯನ್ನು ಭೀಮು ಹೇಗೆ ನಿರ್ವಹಿಸಿಯಾನು ಎಂದು ಅಂಜಿದ.

ಜರಾಸಂಧ ವಧೆಗೆ ಭೀಮಸೇನನ ನಿರ್ಣಯ

ಯುಧಿಷ್ಠಿರೇ ಬ್ರುವತ್ಯಜಂ ಮಖೇನ ಮೇ ತ್ವಲಂ ತ್ವಿತಿ ।
ತಮಾಹ ಮಾರುತಾತ್ಮಜೋ ನಿಹನ್ಮಿ ಮಾಗಧಂ ರಣೇ ॥ ೧೦೪ ॥

ಅ: ಧರ್ಮರಾಜನು ''ನನಗೆ ಆ ಯಜ್ಞವೇ ಬೇಡ'' ಎನ್ನಲು ಅವನನ್ನು ಕುರಿತು ಭೀಮಸೇನ ನುಡಿದ 'ನಾನು ಯುದ್ಧದಲ್ಲಿ ಜರಾಸಂಧನನ್ನು ನಿಶ್ಚಿತವಾಗಿ ಕೊಲ್ಲುವೆ'.

ವಿ: ೧) ಧರ್ಮರಾಜನ ಬಾಯಿಂದ ಮತ್ತೊಮ್ಮೆ ಯಜ್ಞಬೇಡ ಎನ್ನಿಸುವ ಮೂಲಕ ಕೃಷ್ಣ ಅವನಿಗೆ ಸರ್ವಥಾ ರಾಜಸೂಯ ಯಾಗ ಮಾಡುವ ಯೋಗ್ಯತೆ ಇಲ್ಲ ಎಂಬುದನ್ನು ಲೋಕಕ್ಕೆ ಸಾರಿದ.

೨) ಆಗಲೂ ಪುನಃ ಜರಾಸಂಧನನ್ನು ನಾನು ಕೊಲ್ಲುವುದು ನಿಶ್ಚಿತ ಎಂದು ನುಡಿದು ತನ್ನ ಯೋಗ್ಯತೆಯನ್ನು ಸಾರಿದ್ದು ಪುನಃ ಭೀಮಸೇನನೇ ಎಂಬುದು ಗಮನಾರ್ಹ.

ಇತೀರಿತೇऽವದದ್ಧರಿರ್ವ್ರಜಾಮಹೇ ವಯಂ ತ್ರಯಃ ।
ಅಹಂ ಚ ಭೀಮಫಲ್ಗುನೌ ನಿಹಂತುಮೇವ ಮಾಗಧಮ್ ॥ ೧೦೫ ॥

ವೃಕೋದರೇಣ ಹನ್ಯತೇ ಯದಿ ಸ್ಮ ಮಾಗಧಾಧಿಪಃ ।
ಮಖಶ್ಚ ಸೇತ್ಸ್ಯತೇ ಧ್ರುವಂ ಜಗಚ್ಚ ತೇ ವಶೇ ಭವೇತ್ ॥ ೧೦೬ ॥

ಅ: ಭೀಮ ಹೀಗೆನ್ನಲು ಕೃಷ್ಣ ನುಡಿದ 'ನಾನು, ಭೀಮ ಮತ್ತು ಅರ್ಜುನ - ಮೂವರೂ ಜರಾಸಂಧನನ್ನು ಕೊಲ್ಲಲೆಂದು ಹೊರಡುವೆವು, ನಿಶ್ಚಯವಾಗಿಯೂ ಜರಾಸಂಧ ಭೀಮನಿಂದ ಹತನಾಗುವನು, ಖಂಡಿತವಾಗಿಯೂ ಯಜ್ಞ ನಡೆಯುವುದು, ಜಗತ್ತು ನಿನ್ನ ವಶವಾಗುವುದು'.

ವಿ: ಇಲ್ಲಿಯೂ ಕೃಷ್ಣ ಮತ್ತೊಮ್ಮೆ ಯದಿ ಎನ್ನುವ ಮೂಲಕ ಭೀಮಸೇನನು ಜರಾಸಂಧನನ್ನು ಕೊಲ್ಲುವುದು ಖಚಿತ ಎಂಬುದನ್ನು ತಿಳಿಸುವನು. ಧರ್ಮರಾಜನಿಗೆ ಮೋಹವನ್ನೂ ಕವಿಸುವನು ಎಂಬುದನ್ನು ಗಮನಿಸಬೇಕು.

ಧರ್ಮರಾಜನ ಗೊಂದಲ

ಇತೀರಿತೇ ತು ಶೌರಿಣಾ ಜಗಾದ ಧರ್ಮನಂದನಃ ।
ಸ ಶೂರಸೇನಮಂಡಲಪ್ರಹಾಣತೋ ಹರೇಸ್ತ್ರಸನ್ ॥ ೧೦೭ ॥

ಅ: ಶ್ರೀಕೃಷ್ಣ ಹೀಗೆನ್ನಲು ಕೃಷ್ಣ ಮಧುರೆಯನ್ನು ತೊರೆದದ್ದರಿಂದ ಭಯಪಡುತ್ತಾ ಧರ್ಮ-ರಾಜ ನುಡಿದ :

ಭಯಾದ್ಧಿ ಯಸ್ಯ ಮಾಧುರಂ ವಿಹಾಯ ಮಂಡಲಂ ಗತಾಃ ।
ಭವಂತ ಏವ ಸಾಗರಂ ತತೋ ಬಿಭೇಮ್ಯಹಂ ರಿಪೋಃ ॥ ೧೦೮ ॥

ಅ: ''ಜರಾಸಂಧನ ಭಯದಿಂದಾಗಿ ನೀವೇ ಮಧುರೆಯನ್ನು ಬಿಟ್ಟು ಸಮುದ್ರಕ್ಕೆ ತೆರಳಿರುವಿರಿ. ಅದರಿಂದಾಗಿ ಅವನಿಗೆ ನಾನು ಅಂಜುವೆ''.

ವಿ: ೧) ಕೃಷ್ಣ ಮಧುರೆಯಿಂದ ದ್ವಾರಕೆಗೆ ತೆರಳಿದ ಪ್ರಸಂಗವನ್ನು ಕೆಲವರಂತೆ ಧರ್ಮ-ರಾಜನೂ ತಪ್ಪಾಗಿ ತಿಳಿದಿದ್ದ ಎಂಬುದಕ್ಕೆ ಇದು ನಿದರ್ಶನ. ಕೃಷ್ಣ ಹಾಗೆ ತೆರಳಿದ್ದು ರಾಜನೀತಿಯನ್ನು ತಿಳಿಸಿಕೊಡಲೆಂದು ಎಂಬ ವಿಚಾರ ಈಗಾಗಲೇ ಬಂದಿದೆ (೧೭/೧೦೭–೧೧೭).

೨) ಆದರೆ ಕೆಲವರು ಕೃಷ್ಣ ಜರಾಸಂಧನಂತಹ ಪ್ರಬಲ ಶತ್ರುವಿನೊಂದಿಗೆ ಕಾದಲಾಗದೇ ದೂರಕ್ಕೆ ತೆರಳಿದ ಎಂದು ತಪ್ಪಾಗಿ ತಿಳಿಯುವುದುಂಟು. ಧರ್ಮರಾಜನ ಈ ಮಾತು ಅಂತಹವರ ಮಾತನ್ನು ಪ್ರತಿನಿಧಿಸುವುದು ಎಂದು ತಿಳಿಯಬೇಕು.

೩) ಧರ್ಮರಾಜನ ಮನಸ್ಸಿನಲ್ಲಿದ್ದ ಆ ಸಂಶಯವನ್ನು ಹೊರ ಹಾಕಿಸುವ ಮೂಲಕ ಕೃಷ್ಣ ಅವನಿಗೆ ಮಾತ್ರವಲ್ಲದೇ ಅಂತಹ ಸಮಸ್ತ ಸಜ್ಜನರ ತಪ್ಪು ತಿಳುವಳಿಕೆಯನ್ನು ಪರಿಹರಿಸುತ್ತಿರುವನು ಎಂದು ತಿಳಿಯಬೇಕು.

---

೧೦೭. ಶೂರಸೇನಮಂಡಲಪ್ರಹಾಣತೋ ಹರೇರಿತ್ಯತ್ರ ಹರೇಃ ಶೂರಸೇನವಿಷಯಪರಿತ್ಯಾಗಾನ್ನಿಮಿತ್ತಾತ್। ತ್ರಸನ್॥

–(ವಾ.)

ಇಮೌ ಹಿ ಭೀಮಫಲ್ಗುನೌ ಮಮಾಕ್ಷಿಣೀ ಸದಾ ಪ್ರಭೋ ।
ಮನೋನಿಭೋ ಭವಾನ್ ಸದಾ ನ ವೋ ವಿನಾऽಸ್ಮ್ಯತಃ ಪುಮಾನ್ ೧೦೯

ಅ: 'ಪ್ರಭುವಾದ ಶ್ರೀಕೃಷ್ಣ, 'ಈ ಭೀಮಾರ್ಜುನರಿಬ್ಬರೂ ನನಗೆ ಸದಾ ಎರಡು ಕಣ್ಣುಗಳು, ನೀನು ನನಗೆ ಮನಸ್ಸಿನಂತಿರುವನು, ನೀವಿಲ್ಲದೇ ನಾನೆಂದಿಗೂ ಮನುಷ್ಯನೆನ್ನಿಸೆನು'.

ವಿ: ೧) ಧರ್ಮರಾಜ ಶ್ರೀಕೃಷ್ಣ ಹಾಗೂ ಭೀಮಾರ್ಜುನರನ್ನು ಎಂತಹ ವಿಶಿಷ್ಟ ಸ್ಥಾನದಲ್ಲಿ ಕಾಣುತ್ತಿದ್ದ ಎಂಬುದಕ್ಕೆ ಇದು ನಿದರ್ಶನ. ಧರ್ಮರಾಜ ಧರ್ಮದ ಸಂಕೇತವಾದರೆ, ಕೃಷ್ಣ ದೈವದ ಸಂಕೇತ. ಭೀಮಾರ್ಜುನರು ಗುರುಗಳ ಸಂಕೇತ.

೨) ಧರ್ಮ ಎಂದೂ ಸಹ ದೈವಪ್ರಜ್ಞೆಯನ್ನೆ ಜೀವಾಳವನ್ನಾಗಿ ಹೊಂದಿ ಭಕ್ತಿ ಮೊದಲಾದ ಹತ್ತು ಗುಣಗಳನ್ನು ಸಂಕೇತಿಸುವ ಭೀಮನನ್ನು, ಶ್ರವಣಾದಿ ಮೂರು ಗುಣಗಳನ್ನು ಸಂಕೇತಿಸುವ ಅರ್ಜುನನನ್ನು ಕ್ರಮವಾಗಿ ಮಾರ್ಗದರ್ಶಕರನ್ನಾಗಿ ಅವಲಂಬಿಸಿರುವುದು ಎಂಬ ತತ್ವ ಇದರಿಂದ ಸೂಚಿತ.

ಅತೋ ನ ಜೀವಿತಾತ್ ಪ್ರಿಯಾನಹಂ ರಿಪೋರ್ಬಲೀಯಸಃ ।
ಸಕಾಶಮಾತ್ಮಹೇತುತಃ ಪ್ರಯಾತಯಾಮಿ ವೋ ವಿಭೋ ॥ ೧೧೦ ॥

ಅ: ಆದ್ದರಿಂದ ವಿಭುವಾದ ಕೃಷ್ಣನೆ! ಪ್ರಾಣಕ್ಕಿಂತ ಹೆಚ್ಚು ಪ್ರಿಯರಾದ ನಿಮ್ಮನ್ನು ಸ್ವಾರ್ಥಕ್ಕಾಗಿ ಆ ಪ್ರಬಲ ಶತ್ರುವಿನ ಬಳಿಗೆ ನಾನು ಕಳಿಸಿಕೊಡಲಾರೆ.

ವಿ: ೧) ಬಕಾಸುರನ ಬಳಿಗೆ ಭೀಮಸೇನ ತೆರಳುವ ವಿಚಾರ ಕೇಳಿದಾಗಲೂ, ಆ ಬಗ್ಗೆ ಧರ್ಮರಾಜ ಹೀಗೆ ಅಂಜಿದ್ದ ವಿವರ ಈಗಾಗಲೇ ಬಂದಿದೆ (೧೯/೮೪, ೮೫). ಇಲ್ಲಿ ಈಗ ಆ ಮೂವರ ಬಗ್ಗೆಯೂ ಸಂದೇಹಿಸುತ್ತಿರುವನು ಎಂಬುದು ವಿಶೇಷ.

೨) ಇದರಿಂದ ಧರ್ಮರಾಜನು ಸಹ ವಿದುರನಂತೆ ಕೃಷ್ಣನ ಸಾಮರ್ಥ್ಯದ ಬಗ್ಗೆ ಸಂದೇಹಿಸಿದವನು ಎಂದಾಗುವುದು. ವಿದುರ ಕೌರವ ಸಭೆಗೆ ಕೃಷ್ಣ ತೆರಳುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಂತೆ ಧರ್ಮರಾಜ ಇಲ್ಲಿ ಜರಾಸಂಧನ ಬಳಿಗೆ ತೆರಳುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿರುವನು. ಇದು

---

೧೦೯. ಭೀಮಾರ್ಜುನಾವುಭೌ ನೇತ್ರೌ ಮನೋ ಮನ್ಯೇ ಜನಾರ್ದನಮ್ ।
ಮನಶ್ಚಕ್ಷುರ್ವಿಹೀನಸ್ಯ ಕೀದೃಶಂ ಜೀವನಂ ಭವೇತ್ ॥ – ಭಾರತ (೨/೧೬/೨)

ಅವನ ಭಾಗವತ ಧರ್ಮದ ಲೋಪಕ್ಕೆ ಸೂಚಕವಾದ ಮತ್ತೊಂದು ನಿದರ್ಶನ ಎಂದು ತಿಳಿಯಬೇಕು.

೩) ವಿದುರ ಧರ್ಮರಾಜರಿಬ್ಬರೂ ಯಮನ ಅವತಾರರೇ ಅಲ್ಲವೇ!

ಭೀಮ ಹೇಳಿದ ಕೃಷ್ಣಮಹಿಮೆ

ಇತೀರಿತೇऽವದತ್ ಪುನರ್ಯಕೋದರೋऽರಿಕಕ್ಷಭುಕ್ ।
ಯದೀಯನೇತೃಕಾ ರಮಾವಿರಿಂಚಶರ್ವಪೂರ್ವಕಾಃ ॥ ೧೧೧ ॥

ವಶೇ ಚ ಯಸ್ಯ ತದ್ಬಲಂ ಸುರಾಸುರೋರಗಾದಿನಾಮ್ ।
ಸ ಏಷ ಕೇಶವಃ ಪ್ರಭುಃ ಕ್ವ ಚಾಸ್ಯ ಬಾರುಹದ್ರಥಃ ॥ ೧೧೨ ॥

ಅ: ಧರ್ಮರಾಜ ಹೀಗೆನ್ನಲು ಶತ್ರುಗಳೆಂಬ ಅರಣ್ಯಕ್ಕೆ ಕಾಡ್ಗಿಚ್ಚಿನಂತಹ ಭೀಮಸೇನ ಮತ್ತೆ ನುಡಿದ : ''ಮಹಾಲಕ್ಷ್ಮಿ, ಬ್ರಹ್ಮ, ಶಿವ ಮೊದಲಾದವರೆಲ್ಲ ಅವನ ಪ್ರೇರಣೆಯಿಂದಲೇ ಜಗತ್ತನ್ನು ರಕ್ಷಿಸುವರು. ಅವರೆಲ್ಲರ ಬಲವೂ ಅವನ ಅಧೀನ. ಸುರ, ಅಸುರ, ಸರ್ಪಾದಿಗಳ ಬಲವೂ ಸಹ ಅವನ ಅಧೀನವೇ, ಅಂತಹ ಬ್ರಹ್ಮ ರುದ್ರ ಪ್ರವರ್ತಕನಾದ ಶ್ರೀಹರಿಯೇ ಈ ಕೃಷ್ಣ. ಇವನ ಮುಂದೆ ಆ ಜರಾಸಂಧ ಎಲ್ಲಿಯವನು?''

---

೧೧೧. ಯದೀಯನೇತೃಕಾಃ - ಯದೀಯಪ್ರೇರಣಯುಕ್ತಾಃ। – (ವೇ.)

೧೧೧. ಯದೀಯನೇತೃಕಾ ಇತ್ಯತ್ರ ಇತಸ್ತತಃ ಜನಂ ನಯತೀತಿ ನೇತೃ= ಪ್ರೇರಣಮ್। ಯದೀಯಂ ನೇತೃ= ಪ್ರೇರಣಂ ಯೇಷಾಂ ತೇ ಯದೀಯನೇತೃಕಾಃ। ಯದ್ವಾ ಯದೀಯಾಃ= ಯತ್ಸಂಬಂಧಿನಃ ಇತಿ ಹೇತೋಃ ನೇತೃಕಾಃ= ಜಗನ್ನಾಯಕಾಃ। ಯದಾಜ್ಞಯಾ ಜಗನ್ನೇತಾರ ಇತ್ಯರ್ಥಃ ॥ – (ವಾ.)

೧೧೧. ಯದೀಯಂ ಶ್ರೀವಿಷ್ಣುಸಂಬಂಧಿ ಇಚ್ಛಾದಿಕಂ ನೇತೃಕಂ ಪ್ರೇರಕಂ ಯೇಷಾಂ ತೇ ತಥೋಕ್ತಾಃ। – (ಜ.)

೧೧೧. ಯದೀಯನೇತೃಕಾ ಇತಿ । ಯದೀಯಂ ನೇತೃಕಂ ನಯನಂ ಪ್ರೇರಣಂ ಯೇಷಾಂ ತೇ ಯದೀಯನೇತೃಕಾಃ । ಯದ್ವಾ ಯದೀಯಮ್ । ಯತ್ಸ್ವರೂಪಭೂತಂ ನೇತೃ ನಿಯಾಮಕರೂಪಂ ಯೇಷಾಂ ತೇ ಯದೀಯನೇತೃಕಾಃ । ಯದ್ವಾ ನೇತೃಕಮಿತಿ ಭಾವಪ್ರಧಾನಮ್ । ಯದೀಯಂ ಯದಧೀನಂ ನೇತೃತ್ವಂ ಸರ್ವಜಗನ್ನಿಯಾಮಕತ್ವಂ ಯೇಷಾಂ ತೇ ಯದೀಯನೇತೃಕಾಃ । – (ತಾ.)

೧೧೧. ಯದೀಯಮಿಚ್ಛಾದಿಕಂ ನೇತೃಕಂ ಪ್ರೇರಕಂ ಯೇಷಾಂ ತೇ ತಥೋಕ್ತಾ ಇತಿ । – (ಸ.)

೧೧೨. ವಶೇ ಚ ಯಸ್ಯ ಸದ್ಬಲಮಿತ್ಯತ್ರ ತತ್ ಪೂರ್ವೋಕ್ತಂ ಬಲಮಿತ್ಯರ್ಥಃ। ''ವ್ರೀಹ್ಯಾದಿಭ್ಯಶ್ಚ'' ಇತಿ ವಚನಾತ್ ಸುರಾಸುರೋರಗಾಃ ಆದಯೋ ಯೇಷಾಂ ವರ್ತಂತ ಇತಿ ಸುರಾಸುರೋರಗಾದೀನಿ ಜಗಂತಿ ತೇಷಾಮ್ ।– (ವಾ.)

ವಿಃ ೧) ಭೀಮಸೇನನ ಈ ಮಾತಿನಲ್ಲಿ ಅವನ ಪೂರ್ಣಪ್ರಜ್ಞತ್ವ ಮತ್ತೊಮ್ಮೆ ಸ್ಫುಟಪಟ್ಟಿದೆ. ಕೃಷ್ಣನ ಸಾಮರ್ಥ್ಯವನ್ನು ಸಂದೇಹಿಸಿದ ತತ್‌ಕ್ಷಣವೇ ಧರ್ಮರಾಜನಿಗೆ ಹೀಗೆ ಉತ್ತರಿಸುವ ಮೂಲಕ ಭೀಮಸೇನ ತಾನೆಂದೂ ಶ್ರೀಹರಿಯ ಬಗ್ಗೆ ದೋಷಾರೋಪಣೆಯನ್ನು ಸಹಿಸುವವನಲ್ಲ ಎಂಬುದನ್ನು ತಿಳಿಸಿರುವನು.

೨) ಶ್ರೀಹರಿಯ ಬಗ್ಗೆ ಅತ್ಯಂತ ಸ್ಫುಟವಾದ ಪರಿಜ್ಞಾನವನ್ನು ಪ್ರಳಯ ಕಾಲದಲ್ಲೂ ಸಹ ಹೊಂದಿರುವ ಹಿರಿಮೆಯ ವಾಯುದೇವನ ಅವತಾರವೇ ಅವನು ಎಂಬುದಕ್ಕೂ ಇದು ಸೂಚಕ.

೩) ಬಾರ್ಹದ್ರಥಃ ಎನ್ನದೇ ಬಾರುಹದ್ರಥಃ ಎನ್ನುವ ಮೂಲಕ ಆ ಜರಾಸಂಧ ಇನ್ನು ತನ್ನ ಜೀವ ತೊರೆಯುವುದು ಖಚಿತ ಎಂಬುದನ್ನೂ ಸೂಚಿಸಿರುವರು ಎಂದು ತಿಳಿಯಬೇಕು.

೪) ರಮಾಬ್ರಹ್ಮಾದಿ ಪ್ರೇರಕನಾದ ಕೃಷ್ಣ ಬ್ರಹ್ಮಾದಿಗಳ ವರವುಳ್ಳ ಜರಾಸಂಧನಿಗೆ ಎಂತು ಅಂಜಿಯಾನು ಎಂಬುದು ಇಲ್ಲಿ ಸೂಚಿತವಾಗಿರುವ ಯುಕ್ತಿ ಎಂದೂ ತಿಳಿಯಬೇಕು.

ಅಧೃಷ್ಯಮಸ್ತಿ ಮೇ ಬಲಂ ಹರಿಃ ಪ್ರಣಾಯಕೋಽಸ್ಯ ಚ ।
ಸಮಸ್ತಲೋಕನೇತರಿ ಪ್ರಭೌ ಹಿ ಸರ್ವಶಕ್ತಿತಾ ॥ ೧೧೩ ॥

ಅಜೇಯತಾ ತಥಾಽರ್ಜುನೇ ಹರೇರ್ವರೋದ್ಭವಾಽಸ್ತಿ ಹಿ ।
ಅತೋ ವಯಂ ತ್ರಯೋಽದ್ಯ ತಂ ಪ್ರಯಾಮ ಮಾಗಧಂ ರಿಪುಮ್ ೧೧೪

ಅ: ''ನನ್ನ ಬಲ ಶತ್ರುಗಳಿಗೆ ಎದುರಿಸಲಾಗದಂತಹುದು. ಇದಕ್ಕೂ ಶ್ರೀಹರಿಯೇ ಮುಖ್ಯ ಪ್ರೇರಕ, ಸಮಸ್ತ ಲೋಕ ಪ್ರೇರಕನಾದ ಅವನಲ್ಲಿ ಸರ್ವಶಕ್ತತ್ವ, ಅಜೇಯತ್ವ ಉಂಟು. ಶ್ರೀಹರಿಯ ವರದಿಂದಾಗಿ ಅರ್ಜುನನಲ್ಲೂ ಅಜೇಯತ್ವವಿದೆ. ಆದ್ದರಿಂದ ನಾವು ಮೂವರು ಈಗ ಶತ್ರುವಾದ ಜರಾಸಂಧನ ಬಳಿಗೆ ತೆರಳುವೆವು''.

ವಿಃ ಪಾರಿಜಾತ ಪ್ರಸಂಗದಲ್ಲಿ ಶ್ರೀಕೃಷ್ಣ ಇಂದ್ರನಿಗೆ ಅಂತಹ ವರ ನೀಡಿದ ವಿವರ ಬಂದಿದೆ. ಇದು ಮಹಾಭಾರತದ **'ಕೃಷ್ಣೇ ನಯೋ ಮಯಿ ಬಲಂ ಜಯಃ ಪಾರ್ಥೇ ಧನಂಜಯೇ'** (ಭಾರತ ಸಭಾ. ೧೫/೧೩) ಎಂಬ ಮಾತಿಗೆ ವ್ಯಾಖ್ಯಾನ ರೂಪವಾದುದು.

ಹನಿಷ್ಯ ಏವ ಮಾಗಧಂ ಹರೇಃ ಪುರೋ ನ ಸಂಶಯಃ ।
ಇತೀರಿತೇಽಮುನಾ ಹರಿರ್ಜಗಾದ ಧರ್ಮನಂದನಮ್ ॥ ೧೧೫ ॥

ಅ: ''ನಾನು ಶ್ರೀಕೃಷ್ಣನ ಎದುರಿನಲ್ಲೇ ಜರಾಸಂಧನನ್ನು ಖಚಿತವಾಗಿ ಕೊಲ್ಲುವೆ, ಈ ಬಗ್ಗೆ ಸಂಶಯಬೇಡ''. ಭೀಮ ಹೀಗೆನ್ನಲು ಕೃಷ್ಣ ಧರ್ಮರಾಜನಿಗೆ ಹೇಳಿದ :

ವಿ: ೧) ಅರ್ಜುನ ವಿಪ್ರಶಿಶುವನ್ನು ರಕ್ಷಣೆ ಮಾಡಿಯೇ ಮಾಡುವೆ ಎಂದು ಶಪಥ ಮಾಡಿದಾಗ ಕೃಷ್ಣ ಇದು ನಿನಗಾಗುವ ಕಾರ್ಯವೇ? ಎಂದು ಎಚ್ಚರಿಸಿದ್ದ. ಆದರೆ, ಭೀಮಸೇನ ಈ ಬಗೆಯ ಮಾತನ್ನಾಡುವಾಗ ಎಂದೂ ಸಹ ಅದನ್ನು ಕೃಷ್ಣ ವಿರೋಧಿಸಿಲ್ಲ, ಮಾತ್ರವಲ್ಲದೇ ಅದನ್ನು ಸಮರ್ಥಿಸಿಯೇ ಮಾತನಾಡುವನು ಎಂಬುದನ್ನು ಗಮನಿಸಬೇಕು.

೨) ಅರ್ಜುನನಲ್ಲಿ ಆಗಾಗ್ಗೆ ಉಂಟಾಗುತ್ತಿದ್ದ ಅಹಂಕಾರಾದಿ ದೋಷಗಳು ಭೀಮನಲ್ಲಿ ಸರ್ವಥಾ ಇರಲಿಲ್ಲ ಎಂಬುದಕ್ಕೆ ಇದು ನಿದರ್ಶನ.

ಶ್ರೀಕೃಷ್ಣ ನೀಡಿದ ಆಶ್ವಾಸನೆ

ವಯಂ ತ್ರಯಃ ಸಮೇತ್ಯ ತಂ ಪ್ರಯಾತಯಾಮ ಮೃತ್ಯವೇ ।
ಹನಿಷ್ಯತಿ ಸ್ಫುಟಂ ರಣೇ ವೃಕೋದರೋ ಜರಾಸುತಮ್ ॥ ೧೧೬ ॥

ಅ: ''ನಾವು ಮೂವರು ಒಟ್ಟಾಗಿ ಅವನನ್ನು ಮೃತ್ಯುವಿಗೆ ಒಪ್ಪಿಸುವೆವು, ಭೀಮಸೇನ ಯುದ್ಧದಲ್ಲಿ ಜರಾಸಂಧನನ್ನು ನಿಶ್ಚಿತವಾಗಿ ಕೊಲ್ಲುವನು''.

ವಿ: ೧) ಕೃಷ್ಣ ಭೀಮಸೇನನ ಮಾತನ್ನು ಸಂಪೂರ್ಣವಾಗಿ ಅಂಗೀಕರಿಸುತ್ತಾ ಅವನು ಜರಾಸಂಧನನ್ನು ಸಂಹರಿಸುವುದು ನಿಶ್ಚಿತ ಎಂದು ಸಾರುವನು. ಹರಿಯ ಮಹಿಮೆಯನ್ನು ಸದಾ ಸಾರುವುದು ಶ್ರೀವಾಯುದೇವರಾದರೆ ವಾಯುದೇವರ ಹಿರಿಮೆಯನ್ನು ಹೀಗೆ ಸದಾ ಸಾರುವುದು ಶ್ರೀಹರಿಯ ಹಿರಿಮೆ ಎಂಬುದನ್ನೂ ಗಮನಿಸಬೇಕು.

೨) ತನ್ನ ಹಿರಿಮೆಯನ್ನು ಹಾಗೆ ಸದಾ ಸಾರುವ ಕಾರಣದಿಂದಲೇ ಶ್ರೀಹರಿಗೆ ವಾಯುದೇವರ ಮೇಲೆ ಅಷ್ಟು ವಿಶೇಷ ಪ್ರೀತಿ. ಅದನ್ನು ಅವನು ಹೀಗೆ ಪ್ರಶಂಸಿಸುವ ಮೂಲಕ ಪ್ರಕಟಿಸುವನು ಎಂದೂ ತಿಳಿಯಬೇಕು.

ಭಯಂ ನ ಕಾರ್ಯಮೇವ ತೇ ಮಯಾ ಹತಃ ಸ ನೇತಿ ಹ ।
ಮಯಾ ಹಿ ನೀತಿಹೇತುತಃ ಸ್ವಯಂ ನ ಹನ್ಯತೇ ರಿಪುಃ ॥ ೧೧೭ ॥

ಅ: 'ನಾನು ಅವನನ್ನು ಕೊಲ್ಲಲಿಲ್ಲವೆಂದು ನೀನು ಅಂಜಬೇಕಿಲ್ಲ, ಅವನನ್ನು ನಾನು ನೀತಿಯನ್ನು ತೋರುವ ನಿಮಿತ್ತದಿಂದಾಗಿ ಸ್ವತಃ ಕೊಲ್ಲಲಿಲ್ಲ'.

ವಿ: ಕೃಷ್ಣ ತಾನು ಜರಾಸಂಧನನ್ನು ಕೊಲ್ಲದಿದ್ದುದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವನು. ತಾನು ಅವನನ್ನು ಹಾಗೆ ಬಿಟ್ಟದ್ದು ಅಸಾಮರ್ಥ್ಯದಿಂದಲ್ಲ, ಒಂದು ನೀತಿಯನ್ನು ತೋರಿಸಲಿಕ್ಕೋಸ್ಕರ ಎಂದರ್ಥ. ಆ ನೀತಿಯ ಬಗ್ಗೆ ಎವರ ಈಗಾಗಲೇ ಬಂದಿದೆ (೧೬/೨, ೧೬/೩೩).

ಸ ಶರ್ವಸಂಶ್ರಯಾಗ್ರಣೀರ್ಮದಾಶ್ರಯೋತ್ತಮೇನ ತು ।
ನಿಹನ್ಯತೇ ಯದಾ ತದಾ ಪ್ರಕಾಶಿತಂ ಹಿ ಮೇ ಬಲಮ್ ॥ ೧೧೮ ॥

ಅ: ಶಿವಭಕ್ತರಲ್ಲಿ ಅಗ್ರೇಸರನಾದ ಅವನನ್ನು ನನ್ನನ್ನು ಆಶ್ರಯಿಸಿದವರಲ್ಲಿ ಅಗ್ರೇಸರನಾದವನಿಂದ ಕೊಲ್ಲಿಸಿದರೆ ನನ್ನ ಬಲ ಪ್ರಕಾಶಿತವಾಗುವುದು.

ವಿ: ೧) ಆ ನೀತಿಯ ಬಗ್ಗೆ ಮತ್ತೊಂದು ಬಗೆಯ ವಿವರಣೆ ಇಲ್ಲಿದೆ. ಜರಾಸಂಧ ಶಿವಭಕ್ತಾಗ್ರೇಸರ. ಅವನನ್ನು ವಿಷ್ಣುವಾದ ತಾನೇ ಸ್ವತಃ ಕೊಲ್ಲುವುದಕ್ಕಿಂತ ತನ್ನ ಭಕ್ತಾಗ್ರೇಸರನಾದ ಭೀಮಸೇನನಿಂದ ಕೊಲ್ಲಿಸಿದಲ್ಲಿ ತನ್ನ ಭಕ್ತನ ಬಲವೂ ತಿಳಿಯುವುದು, ತನ್ನ ಬಲವೂ ತಿಳಿಯುವುದು ಎಂಬ ತಾತ್ವಿಕ ನೀತಿಯನ್ನು ತೋರಲೆಂದು ತಾನಾಗಿಯೇ ಸಂಹರಿಸಿಲ್ಲ ಎಂಬುದನ್ನು ಕೃಷ್ಣ ವಿವರಿಸಿರುವನು.

೨) ಹನುಮಂತ ಲಂಕೆಗೆ ತೆರಳಿದ್ದಾಗ ರಾವಣನನ್ನು ತಾನೇ ಕೊಲ್ಲಬಲ್ಲ ಸಮರ್ಥನಾಗಿದ್ದರೂ ಹಾಗೆ ಕೊಲ್ಲದೆ ಅವನನ್ನು ರಾಮನಿಗೆ ಮೀಸಲಿರಿಸಿ ರಾಮನ ಹಿರಿಮೆ ಜಗತ್ತಿಗೆ ತಿಳಿಯುವಂತೆ ಮಾಡಿದ; ಸಮರ್ಥನಾಗಿದ್ದರೂ ಶ್ರೀರಾಮನಿಗೆಂದು ರಾವಣನನ್ನು ಮೀಸಲಿರಿಸಿದ್ದು ಆತನ ಅಪಾರ ರಾಮಭಕ್ತಿಗೆ ದ್ಯೋತಕ. ಅದರಂತೆ ಇಲ್ಲಿ ಶ್ರೀಕೃಷ್ಣನೂ ಸಹ ಜರಾಸಂಧನನ್ನು ಕೊಲ್ಲಲು ಸರ್ವಸಮರ್ಥನಾಗಿದ್ದರೂ ಹಾಗೆ ಮಾಡದೆ ಅವನನ್ನು ಭೀಮಸೇನನಿಗೆ ಮೀಸಲಿರಿಸಿರುವನು. ಆ ಮೂಲಕ ಅವನ ಮೇಲಿನ ತನ್ನ ವಿಶೇಷಾನುಗ್ರಹವನ್ನು ಪ್ರಕಟಿಸಿರುವನು.

೩) ರಾವಣನನ್ನು ತನಗೆ ಮೀಸಲಿರಿಸಿದ್ದಕ್ಕೆ ಪ್ರತಿಯಾಗಿ ಎಂಬಂತೆ ಶ್ರೀಕೃಷ್ಣ ಹೀಗೆ ಮಾಡುವ ಮೂಲಕ ತಾನು ಅದೆಂತಹ ಭಕ್ತವತ್ಸಲ ಎಂಬುದನ್ನು ತಿಳಿಸಿರುವನು. ಅಲ್ಲಿಯ ರಾಮನೇ ಇಲ್ಲಿಯ ಶ್ರೀಕೃಷ್ಣನಾಗಿರುವಂತೆ, ಅಲ್ಲಿಯ ಹನುಮಂತನೇ ಇಲ್ಲಿಯ ಭೀಮಸೇನನಾಗಿರುವುದು ಗಮನಾರ್ಹ. ಅಲ್ಲಿ ಹನುಮಂತ ರಾವಣನನ್ನು ಕೊಲ್ಲದೆ ಬಿಟ್ಟದ್ದು ಶ್ರೀರಾಮನ ಮಹಿಮೆಯ ಪ್ರಕಾಶನಕ್ಕಾಗಿ, ಇಲ್ಲಿ ಕೃಷ್ಣ ಜರಾಸಂಧನನ್ನು ಕೊಲ್ಲದೆ ಬಿಡುತ್ತಿರುವುದು ಭೀಮನ ಹಿರಿಮೆಯ ಪ್ರಕಾಶನಕ್ಕಾಗಿ.

೪) ಹನುಮಂತನದು ರಾಮಭಕ್ತಿಯಾದರೆ, ಕೃಷ್ಣನದು ಭೀಮನ ಮೇಲಿನ ಪ್ರೀತಿ. ಹೀಗೆ ಅನೇಕ ಬಗೆಯ ಕಾರಣದಿಂದಾಗಿ ಕೃಷ್ಣ ತಾನಾಗಿ ಜರಾಸಂಧನನ್ನು ಕೊಲ್ಲಲಿಲ್ಲ ಎಂದು ತಿಳಿಯುವುದು.

ಅತೋ ನ ಶಂಕಿತಂ ಮನಃ ಕುರುಷ್ವ ಭೂಪ ತೇ ಕ್ವಚಿತ್ ।
ಪ್ರದರ್ಶಯಾಮಿ ತೇಽನುಜೌ ನಿಹತ್ಯ ಮಾಗಧೇಶ್ವರಮ್ ॥ ೧೧೯ ॥

ಅ: ''ಆದ್ದರಿಂದ ಧರ್ಮರಾಜನೇ! ನೀನು ಮನಸ್ಸಿನಲ್ಲಿ ಸಂದೇಹಪಡದಿರು. ನಾನು ಜರಾಸಂಧನನ್ನು ಕೊಂದು ನಿನ್ನ ತಮ್ಮಂದಿರನ್ನು ನಿನಗೆ ತೋರಿಸುವೆ''.

ವಿ: ನಿನ್ನ ತಮ್ಮಂದಿರನ್ನು ನನಗೀಗ ಒಪ್ಪಿಸು, ಅವರು ಜರಾಸಂಧ ವಧೆಯ ಕಾರ್ಯದಲ್ಲಿ ಯಶಸ್ವಿಯಾಗಿ ಬಂದು ನಿನ್ನ ಮುಂದೆ ನಿಲ್ಲುವುದನ್ನು ನಾನು ನಿನಗೆ ತೋರಿಸುವೆ ಎಂದು ಕೃಷ್ಣ ಆಶ್ವಾಸನೆ ನೀಡುತ್ತಿರುವನು. ಈ ಮೂಲಕ ತನ್ನ ಸರ್ವಜ್ಞತ್ವವನ್ನೂ ಸಾರುತ್ತಿರುವನು. ಶ್ರೀಕೃಷ್ಣ ಈ ಪ್ರಸಂಗದಲ್ಲಿ ಧರ್ಮರಾಜನನ್ನು ಎಲ್ಲೂ ಒತ್ತಾಯಿಸದೆ, ಒಪ್ಪಿಸುವಂತೆ ಮಾತನಾಡುತ್ತಿರುವುದನ್ನು ಗಮನಿಸಬೇಕು; ಇದು ಅವನ ಕರುಣೆಯ ರೀತಿ.

ಇತೀರಿತಃ ಸ ವಿಷ್ಣುನಾ ವಿಚಾರ್ಯ ತದ್ಗುಣಾನ್ ಪರಾನ್ ।
ತಥೇತಿ ಚಾಹ ತೇ ತ್ರಯಃ ಪ್ರತಸ್ಥುರಾಶು ಮಾಗಧಾನ್ ॥ ೧೨೦ ॥

ಅ: ಶ್ರೀಕೃಷ್ಣ ಹೀಗೆನ್ನಲು ಧರ್ಮರಾಜ ಅವನ ಹಿರಿದಾದ ಗುಣಗಳನ್ನು ಚೆನ್ನಾಗಿ ಆಲೋಚಿಸಿ ''ಹಾಗೆಯೇ ಆಗಲಿ'' ಎಂದು ನುಡಿದ. ಆ ಮೂವರೂ ಬೇಗನೇ ಮಗಧ ದೇಶಕ್ಕೆ ತೆರಳಿದರು.

ವಿ: ೧) ಶ್ರೀಕೃಷ್ಣ ತನ್ನ ಮಾತುಗಳಿಂದ ಧರ್ಮರಾಜನ ಭ್ರಮೆಯನ್ನು ಹೋಗಲಾಡಿಸಿ, ನಿರ್ಮಲವಾದ ಜ್ಞಾನವನ್ನು ನೀಡಿದ. ಧರ್ಮರಾಜನ ಮನಸ್ಸಿನಲ್ಲಿ ತುಂಬಿದ್ದ ಭ್ರಮೆ ವಿಪ್ರಚಿತ್ತಿಯ ಸಂಕೇತ, ವಿಪ್ರಚಿತ್ತಿ ಮಿಥ್ಯಾಜ್ಞಾನದ ಅಭಿಮಾನಿ ದೈತ್ಯ; ಜರಾಸಂಧ ಅವನ ಅವತಾರ. ಹೀಗೆ ಧರ್ಮರಾಜನ ಮನಸ್ಸಿನಲ್ಲಿದ್ದ ಜರಾಸಂಧನನ್ನು ಸಂಹರಿಸಿ ಇನ್ನು ಭೌತಿಕವಾಗಿದ್ದ ಜರಾಸಂಧನನ್ನು ಸಂಹರಿಸಲೆಂದು ಕೃಷ್ಣ ಭೀಮಾರ್ಜುನರೊಂದಿಗೆ ತೆರಳಿದ ಎಂದರ್ಥ.

೨) ಹಾಗೆ ಅವರು ಮೂವರು ತೆರಳಿದ್ದು ಸ್ನಾತಕ ಬ್ರಾಹ್ಮಣವೇಷದಿಂದ ಎಂಬುದನ್ನು ಹಾಗೂ ಅದಕ್ಕೆ ಕಾರಣವನ್ನು ಮುಂದೆ ತಿಳಿಸಿರುವರು.

ಭೀಮಾರ್ಜುನರೊಂದಿಗೆ ಜರಾಸಂಧವಧೆಗಾಗಿ ಶ್ರೀಕೃಷ್ಣನ ಪಯಣ

ಸಮೇತ್ಯ ಮಾಗಧಾಂಸ್ತು ತೇ ಶಿವೋರುಲಿಂಗಮಿತ್ಯಲಮ್ ।
ಸುಮಾಲ್ಯವಸ್ತ್ರಭೂಷಣೈಃ ಸಮರ್ಚಿತಂ ಗಿರಿಂ ಯಯುಃ ॥ ೧೨೧ ॥

ಅ: ಅವರು ಮೂವರು ಮಗಧ ದೇಶವನ್ನು ತಲುಪಿ ಅಲ್ಲಿ ಶಿವನ ಮಹಾಲಿಂಗವೆಂದು ತಿಳಿದು ಒಳ್ಳೆಯ ಮಾಲೆ, ವಸ್ತ್ರ ಭೂಷಣಗಳಿಂದ ಬಹಳವಾಗಿ ಪೂಜಿತವಾಗಿದ್ದ ಒಂದು ಬೆಟ್ಟದ ಬಳಿಗೆ ತೆರಳಿದರು.

ವಿ: ಮಗಧ ದೇಶ ವೈಹಾರ, ವಾರಾಹ, ವೃಷಭ, ಋಷಿ ಮತ್ತು ಚೈತ್ಯಕ ಎಂಬ ಐದು ಪರ್ವತಗಳ ಮಧ್ಯೆ ಇದ್ದ ಒಂದು ದುರ್ಗಮಸ್ಥಳ. ಗಿರಿವ್ರಜ ಎಂದು ಅದರ ರಾಜಧಾನಿಯ ಹೆಸರು ಎಂಬ ಉಲ್ಲೇಖ ಮಹಾಭಾರತದಲ್ಲಿದೆ (೨/೨೧/೧–೩). ಅದರಲ್ಲಿ ಚೈತ್ಯಕ ಎಂಬ ಬೆಟ್ಟವನ್ನು ಜರಾಸಂಧ ಶಿವಲಿಂಗವೆಂದು ಭಾವಿಸಿ ಪೂಜಿಸುತ್ತಿದ್ದ.

ಕೃಷ್ಣ ಮೊದಲಾದವರಿಂದ ಜರಾಸಂಧನ ಗಿರಿಲಿಂಗಭೇದನ

ಸ್ವಶೀರ್ಷತೋಽಪಿ ಚಾದೃತಂ ಜರಾಸುತೇನ ತೇ ಗಿರಿಮ್ ।
ನ್ಯಪಾತಯಂತ ಬಾಹುಭಿಸ್ತಮಸ್ಯ ಚೋತ್ತಮಾಂಗವತ್ ॥ ೧೨೨ ॥

ಅ: ಜರಾಸಂಧನಿಂದ ಶಿರಬಾಗಿ ವಂದಿಸಲ್ಪಡುತ್ತಿದ್ದ ಆ ಬೆಟ್ಟವನ್ನು ಅವನ ತಲೆಯನ್ನೆಂಬಂತೆ ಅವರು ತಮ್ಮ ತೋಳುಗಳಿಂದ ಉರುಳಿಸಿದರು.

ವಿ: ೧) ಜರಾಸಂಧ ಶಿವಲಿಂಗವೆಂದೇ ಆ ಬೆಟ್ಟವನ್ನು ಪೂಜಿಸುತ್ತಿದ್ದರೂ ಅದು ವಸ್ತುತಃ ಶಿವಲಿಂಗವಾಗಿರಲಿಲ್ಲ. ಅದರೊಂದಿಗೆ ದುರ್ವಾಸರ ಶಾಪದಿಂದಾಗಿಯೂ ಅದರಲ್ಲಿ ಶಿವನ ಸನ್ನಿಧಾನ ಲುಪ್ತವಾಗಿತ್ತು ಎಂಬ ವಿವರ ಮಹಾಭಾರತದಲ್ಲಿದೆ. ಅದರಿಂದಾಗಿ ಅವರು ಬೆಟ್ಟವನ್ನು ಉರುಳಿಸಿದ್ದು ಶಿವಲಿಂಗಕ್ಕೆ ಅಗೌರವ ತೋರಿದ್ದಕ್ಕೆ ನಿದರ್ಶನವಾಗಲಿಲ್ಲ ಎಂಬ ಸೂಚನೆ ಇಲ್ಲಿದೆ.

೨) ಶಿವಲಿಂಗದ ದರ್ಶನ, ಪೂಜಾದಿಗಳು ವೈಷ್ಣವರಿಗೆ ನಿಷಿದ್ಧವಲ್ಲ.

೩) ಶ್ರೀಸತ್ಯನಾಥತೀರ್ಥರು ಶಾಸ್ತ್ರರತ್ನಾವಳೀ ಅಥವಾ ವಿಜಯಮಾಲಾ (ಪ್ರಶ್ನೆ ೪೦) ಎಂಬ ತಮ್ಮ ಕೃತಿಯಲ್ಲಿ ಅಹಂಕಾರಿಗಳಿಗೆ ಹಾಕಿರುವ ಪ್ರಶ್ನೆಗಳಲ್ಲಿ ಇದೂ ಒಂದು. ಅಂತೂ ತಾನು

---

೧೨೧. ಸ್ಥಿರಂ ಸುವಿಪುಲಂ ಶೃಂಗಂ ಸುಮಹತ್ ತತ್ ಪುರಾತನಮ್ ।
ಅರ್ಚಿತಂ ಗಂಧಮಾಲ್ಯೈಶ್ಚ ಸತತಂ ಸುಪ್ರತಿಷ್ಠಿತಮ್ ॥
ವಿಪುಲೈರ್ಬಾಹುಭಿರ್ವೀರಾಸ್ತೇಽಭಹತ್ಯಾಭ್ಯಪಾತಯನ್ ॥ – ಭಾರತ (೨/೨೧/೨೦)

೧೨೧. ಶಶಾಪ ಮಾಗಧಂ ರೋಷಾತ್ ತ್ರಕ್ಷತೀಶಃ ಪುರಂ ತವ ।
ತ್ವದರ್ಚಿತಂ ಚ ಲಿಂಗಂ ವೈ ಪರ್ವತಂ ವಿಫಲಂ ಭವೇತ್ ॥ (ದುರ್ವಾಸರ ಶಾಪ) – ಭಾರತ

೧೨೧. ಬುದ್ಧ್ಯಾ ಮಾಲ್ಯಾದಿಭಿರರ್ಚಿತಂ ಗಿರಿಮಿತ್ಯನೇನ ವಸ್ತುತೋ ನ ಶಿವಲಿಂಗತ್ವಮಿತಿ ಸೂಚಯತಿ । – (ತಾ.)

ಶಿವಲಿಂಗವೆಂದು ಭಾವಿಸಿದ್ದ ಆ ಬೆಟ್ಟ ಉರುಳುವುದು ಜರಾಸಂಧನ ತಲೆ ಉರುಳುವುದಕ್ಕೆ ಸಂಕೇತದಂತಾಗಿ ಅವನ ಮನಸ್ಸಿನಲ್ಲಿ ಅಂಜಿಕೆ ಕವಿಯಿತು.

೪) ಮಧುರೆಯಲ್ಲಿನ ಶಿವಧನುರ್ಭಂಗ ಕಂಸನ ಪ್ರಾಣಭಂಗಕ್ಕೆ ಮುನ್ಸೂಚನೆಯಾದಂತೆ, ಈ ಗಿರಿಭಂಗ ಜರಾಸಂಧನ ದೇಹಭಂಗಕ್ಕೂ ಮುನ್ಸೂಚನೆಯಾಯಿತು.

೫) ಶಿವಧನುರ್ಭಂಗವನ್ನು ಸ್ವತಃ ತಾನೇ ಮಾಡಿದ್ದ ಕೃಷ್ಣ ಈ ಗಿರಿಭಂಗವನ್ನು ಅವರಿಬ್ಬರೊಂದಿಗೆ ಕೂಡಿ ಮಾಡಿದ ಎಂಬುದು ಮಾತ್ರ ವಿಶೇಷ. ಶಿವಧನುರ್ಭಂಗದ ಮೂಲಕ ಕೃಷ್ಣ ತನ್ನ ಶಿವೋತ್ತಮತ್ವವನ್ನು ಸಾರಿದಂತೆ, ಈ ಗಿರಿಭಂಗವನ್ನು ಮಾಡುವ ಮೂಲಕ ಜರಾಸಂಧನಿಗೆ ತಾವು ಶಿವೋತ್ತಮರು ಎಂಬುದನ್ನೂ ಸೂಚಿಸಿದ ಎಂದೂ ತಿಳಿಯಬಹುದು.

೬) ಈ ಮೂವರಲ್ಲಿ ಕೃಷ್ಣನಂತೂ ಸರ್ವೋತ್ತಮನಾದ ಶ್ರೀಹರಿ, ಭೀಮ ಜೀವೋತ್ತಮ–ನಾದ ವಾಯು, ಅವರಿಬ್ಬರೂ ಹೀಗೆ ಸ್ವರೂಪತಃ ಶಿವೋತ್ತಮರು, ಅರ್ಜುನ ಇಂದ್ರಾವತಾರ–ನಾದ್ದರಿಂದ ಶಿವನಿಗಿಂತ ಕಡಿಮೆಯಾದರೂ ಅವನಲ್ಲಿದ್ದ ನರಾವೇಶ ಹಾಗೂ ವಾಯುದೇವರ ವೀರನಾಮಕ ರೂಪದ ಆವೇಶದಿಂದಾಗಿ ವಿಶೇಷ ಹಿರಿಮೆ ಒದಗಿತ್ತು ಎಂದು ತಿಳಿಯಬೇಕು.

ಅದ್ವಾರತಸ್ತೇ ನಗರಂ ಪ್ರವಿಶ್ಯ
ಮಾಷಸ್ಯ ನಾಳೇನ ಕೃತಾಸ್ತ್ರಭೇರೀಃ ।
ಮುಷ್ಟಿಪ್ರಹಾರಾದ್ವಿಭಿದುಸ್ತಸ್ಯ ಕೀರ್ತಿ–
ಶಾಸ್ತ್ರೋಪಮಾ ನ್ಯಕೃತಮಾಗಧೇಶಾಃ ॥ ೧೨೩ ॥

ಅ: ಅವರು ಅದ್ವಾರದಿಂದ ಪಟ್ಟಣವನ್ನು ಪ್ರವೇಶಿಸಿದರು. ಮಾಷ ಎಂಬ ಅಸುರನ ನಾಳ-ದಿಂದ ಮಾಡಲ್ಪಟ್ಟಿದ್ದ ಮೂರು ಭೇರಿಗಳನ್ನು ಮುಷ್ಟಿಪ್ರಹಾರದಿಂದ ನಾಶಮಾಡಿದರು. ಅವು ತಮ್ಮ ಧ್ವನಿಯಿಂದ ಜರಾಸಂಧನಿಗೆ ಪುಷ್ಟಿಪ್ರದವಾಗಿದ್ದವು, ಅವನ ಕೀರ್ತಿಯನ್ನು ಸಾರುವ ಶಾಸ್ತ್ರ-ಗಳಂತಿದ್ದವು. ಇವರು ಅವುಗಳನ್ನು ನಾಶಪಡಿಸುವ ಮೂಲಕ ಜರಾಸಂಧನನ್ನು ತೃಣೀಕರಿಸಿದರು.

---

೧೨೩. ಕೀರ್ತಿಶಾಸ್ತ್ರೋಪಮಾ ಇತ್ಯತ್ರ ಶಾಸ್ತ್ರಂ ಶೈವಶಾಸ್ತ್ರಂ ಶಾಸ್ತ್ರಂ ಶಾಸನಂ ಚ। ''ನಿದೇಶಗ್ರಂಥಯೋಃ ಶಾಸ್ತ್ರಮ್'' ಇತ್ಯನುಶಾಸನಮ್। ತೇಷಾಂ ಉಪಮಾ ಯಾಸಾಂ ತಾಃ। ಮಾಷಕೃತಾಸ್ತ್ರಭೇರೀರಿತಿ ಸಂಬಂಧಃ। ಆಕಸ್ಮಿಕಮಾಷನಾಳೇನ ಕೃತಾ ಇತ್ಯರ್ಥಃ ॥ – (ವಾ.)

೧೨೩. ವೃಷಭರೂಪೀ ಮಾಷಾದನಾಮಕೋऽಸುರೋ ಮಾಷಾದ ವೃಷಭಃ । ತಂ ಮಾಷಾದಂ ಹತ್ವಾ ಮಾಷನಾಲಾನ್ ಶೃಂಗದ್ವಯಕಂಠನಾಲಾಖ್ಯಾನ್ ತ್ರೀನ್ ನಾಲಾನ್ ತೇನ ಚರ್ಮಣಾ ಆನಹ್ಯ ಬದ್ಧ್ವಾ ತಿಸ್ರೋ ಭೇರ್ಯಃ ಯಥಾ ಭವಂತಿ ತಥಾ ಚಕಾರ । ತ್ರಿಭಿರೇತೈಸ್ತಾಡಿತಾಸ್ತಿಸ್ರೋ ಭೇರ್ಯಃ ಪ್ರಾಣದನ್...ಪರಿತಃ ಅಗ್ನಿಃ ನೀರಾಜನರೂಪೋऽಗ್ನಿಃ ಯಥಾ ಭವತಿ ತಥಾ ಕುರ್ವನ್ ಅಕುರ್ವನ್ ಮಂಗಲಾರಾತ್ರ್ಯಾ ಸತ್ಕೃತವಂತಃ । - ಲಕ್ಷಾಲಂಕಾರಃ

ವಿಃ ೧) ಅವರು ಜರಾಸಂಧನ ಪಟ್ಟಣವನ್ನು ಮಹಾದ್ವಾರದಿಂದ ಪ್ರವೇಶಿಸದೇ ಕೋಟೆಯ ಗೋಡೆಯನ್ನು ಒಡೆದು ಹಿಂಬಾಗಿಲಿನಿಂದ ಪ್ರವೇಶಿಸಿದರು. ಆ ಮೂಲಕ ತಾವು ಅವನ ಶತ್ರುಗಳು ಎಂದು ಸೂಚಿಸಿದರು. ಶತ್ರುಗಳ ನೆಲೆಯನ್ನು ಮಹಾದ್ವಾರದಿಂದ ಪ್ರವೇಶಿಸಕೂಡದು ಎಂಬ ನಿಯಮವನ್ನು ತಿಳಿಸಿಕೊಟ್ಟರು.

೨) ಮಾಷ ಎಂಬ ಅಸುರ ವೃಷಭರೂಪದಿಂದ ಪ್ರಜೆಗಳನ್ನು ಪೀಡಿಸುತ್ತಿದ್ದಾಗ, ಬೃಹದ್ರಥರಾಜ ಅವನನ್ನು ಕೊಂದು ಅವನ ಎರಡು ಕೊಂಬುಗಳು ಮತ್ತು ಕಂಠನಾಳಗಳಿಂದ ಮೂರು ನಗಾರಿಗಳನ್ನು ಮಾಡಿಸಿದ್ದ. ಅವುಗಳಿಂದ ಹೊರಡುತ್ತಿದ್ದ ಧ್ವನಿ ಒಂದು ಮಾಸ ಪರ್ಯಂತ ಅನುರಣನ ಮಾಡುತ್ತಾ ಜರಾಸಂಧನಿಗೆ ಬಲವರ್ಧಕವಾಗಿದ್ದವು.

---

೧೫. ಮಾಷಸ್ಯ ಮಾಷನಾಮ್ನೋಽಸುರಸ್ಯ ನಾಳೇನ ಕಂಠನಾಳೇನ। – (ವೇ.)

೧೫. ಅದ್ವಾರತಃ ಭಿತ್ತಿಂ ಪಾತಯಿತ್ವೇತಿ ಭಾವಃ। ... ಮಾಷಸ್ಯ ಮಾಷನಾಮ್ನೋಽಸುರಸ್ಯ ನಾಲೇನ ಕಂಠನಾಲೇನ ಕೃತಾಃ ಪುಷ್ಪಪ್ರದಾಃ ಯಾವದ್ದೇಶಂ ಸ್ವನಾದಃ ತಾವದ್ದೇಶೇ ಪ್ರಜಾಸುಪುಷ್ಪಪ್ರದಾಃ ಪುಷ್ಪಕರಾ ಇತ್ಯರ್ಥಃ। ... ಕೀರ್ತಿಪ್ರತಿಪಾದಕಗದ್ಯಪದ್ಯರೂಪನಿಬಂಧಸದೃಶಾಃ। ಕೀರ್ತಿಶಾಸ್ತ್ರವತ್ ಮಾಗಧಪ್ರಸಿದ್ಧಿಕರಾ ಇತಿಭಾವಃ। ... ಮುಷ್ಪಿಪ್ರದಾ ಇತಿ ಪಾಠೇ – (ಜ.)

೧೫. ಮಾಷಸ್ಯ। ಮಾಷನಾಮ್ನೋಽಸುರಸ್ಯ। ನಾಲೇನ ದೇಹೇನ ತ್ವಚೇತಿ ಯಾವತ್। ತದುಕ್ತಂ ಸಭಾಪರ್ವಣಿ–

ಯತ್ರ ಮಾಷಾದಮೃಷಭಮಾಸಸಾದ ಬೃಹದ್ರಥಃ।
ತಂ ಹತ್ವಾ ಮಾಷನಾಲಾಂಶ್ಚ ತಿಸ್ರೋ ಭೇರೀಶ್ಚಕಾರ ಹ।
ಆನಹ್ಯ ಚರ್ಮಣಾ ತೇನ ಸ್ಥಾಪಯಾಮಾಸ ಚೈತ್ಯಕೇ।
ಯತ್ರ ತಾಃ ಪ್ರಾಣದನ್ ಭೇರ್ಯೋ ದಿವ್ಯಪುಷ್ಪಾವಚೂರ್ಣಿತಾಃ।
ಮಾಗಧಾನಾಂ ಸುರುಚಿರಂ ..... ॥ ಇತಿ।

ಟೀಕಾಯಾಂ ತು–

ಮಾಷಸ್ಯ ಮಾಷನಾಮ್ನೋ ವೃಕ್ಷಸ್ಯ ನಾಲೇನ ಮೂಲೇನೇತ್ಯುಕ್ತಮ್।

ಕೀರ್ತಿಶಾಸ್ತ್ರೋಪಮಾಃ ಕೀರ್ತಿವ್ಯಾಪಕಪ್ರಬಂಧತುಲ್ಯಾಃ। ಕೀರ್ತಿಪ್ರಬಂಧೇ ಯಥಾಕೀರ್ತಿಃ ಖ್ಯಾಪ್ಯತೇ। ತಥಾ ಸ್ವಧ್ವನಿಭಿಃ ಕೀರ್ತಿಖ್ಯಾತಿಕರೀರಿತ್ಯರ್ಥಃ। – (ತಾ.)

೧೫. ತದುಕ್ತಂ ಸಭಾಪರ್ವಣಿ–

ಅದ್ವಾರೇಣ ರಿಪೋರ್ಗೇಹಂ ದ್ವಾರೇಣ ಸುಹೃದೋ ಗೃಹಮ್।
ಪ್ರವಿಶಂತಿ ಸದಾ ಸಂತೋ ದ್ವಾರಂ ನೋ ವರ್ಜಿತಂ ತತಃ ॥ ಇತಿ। – ಭಾರತ (೨/೨೧/೫೩)
– (ತಾ.,)

'ಅದ್ವಾರೇಣ ರಿಪೋರ್ಗೇಹಂ ದ್ವಾರೇಣ ಸುಹೃದೋ ಗೃಹಾನ್।
ಪ್ರವಿಶಂತಿ ನರಾ ಧೀರಾ ದ್ವಾರಾಣ್ಯೇತಾನಿ ಧರ್ಮತಃ ॥ – (ಮ. ಗೃಹೀತ ಪಾಠ)

೩) ಶತ್ರುಗಳ ಆಗಮನದ ಸೂಚನೆಯನ್ನೂ ಸಹ ಅವು ನೀಡುತ್ತಿದ್ದವು. ಅವುಗಳ ನಾಶ ಜರಾಸಂಧನ ಸಾವಿಗೆ ಮುನ್ಸೂಚನೆಯಾಯಿತು. ಹೀಗೆ ಬೆಟ್ಟ ಹಾಗೂ ಭೇರಿಗಳನ್ನು ನಾಶಪಡಿಸುವ ಮೂಲಕ ತಾವು ಜರಾಸಂಧನನ್ನು ಕೊಲ್ಲಲೆಂದೇ ಬಂದವರು ಎಂಬುದನ್ನು ಅವನಿಗೆ ಸೂಚಿಸಿದರು ಎಂದು ತಿಳಿಯಬೇಕು.

ಜರಾಸಂಧನ ಬಳಿಗೆ ಕೃಷ್ಣ ಭೀಮಾರ್ಜುನರು

ತಥಾऽऽಪಣೇಭ್ಯೋ ಬಹುಮಾಲ್ಯಗಂಧಾನ್
ಪ್ರಸಹ್ಯ ಸಂಗೃಹ್ಯ ಶುಭಾಂಶ್ಚ ದಧ್ರುಃ ।
ಅದ್ವಾರತಸ್ತಸ್ಯ ಗೃಹಂ ಚ ಸಸ್ರು-
ರ್ಭೋ೯ ಶಬ್ದತಸ್ತಂ ಚ ನೃಪಂ ಪ್ರಸಸ್ರುಃ ॥ ೧೨೪ ॥

ಅ: ಅವರು ಅಂಗಡಿಗಳಿಂದ ಅನೇಕ ಬಗೆಯ ಒಳ್ಳೆಯ ಹಾರ ಹಾಗೂ ಗಂಧಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡು ಧರಿಸಿದರು. ಅವನ ಮನೆಯನ್ನೂ ಸಹ ಅದ್ವಾರದಿಂದಲೇ ಹೊಕ್ಕರು; ''ಎಲೋ'' ಎಂದು ಕೂಗುತ್ತಾ ಅವನನ್ನು ಸಮೀಪಿಸಿದರು.

ವಿ: ೧) ಕೃಷ್ಣ ಕಂಸವಧೆಗಿಂತ ಮುಂಚಿತವಾಗಿ ಸುದಾಮ ನೀಡಿದ ಮಾಲೆ ಹಾಗೂ ತ್ರಿವಕ್ರೆ ನೀಡಿದ ಗಂಧಗಳಿಂದ ಭೂಷಿತನಾಗಿ ತೆರಳಿದಂತೆ ಜರಾಸಂಧನ ವಧೆಗೆ ಮುಂಚಿತವಾಗಿ ಇಲ್ಲಿಯೂ ಸಹ ಮಾಲ್ಯಗಂಧಗಳನ್ನು ಧರಿಸಿ ತೆರಳಿದ್ದು ವಿಶೇಷ.

೨) ಅವನ ಪಟ್ಟಣವನ್ನು ಅದ್ವಾರದಿಂದ ಪ್ರವೇಶಿಸಿದಂತೆ ಅವನ ಮನೆಯನ್ನೂ ಸಹ ಮಹಾದ್ವಾರದಿಂದ ಪ್ರವೇಶಿಸದೇ ಅದ್ವಾರದಿಂದಲೇ ಪ್ರವೇಶಿಸಿದರು.

ತಾನ್ ವಿಪ್ರವೇಷಾನ್ ಸ ನಿಶಾಮ್ಯ ರಾಜಾ
ಮಹಾಭುಜಾನ್ ಸ್ನಾತಕವೇಷಯುಕ್ತಾನ್।
ದ್ವಿತೀಯವರ್ಣಾನ್ ಪ್ರವಿಚಿಂತ್ಯ ಬಾಹೂನ್
ಜ್ಯಾಕರ್ಕಶಾನ್ ವೀಕ್ಷ್ಯ ಬಭಾಷ ಏತಾನ್ ೧೨೫

ಅ: ಬ್ರಾಹ್ಮಣ ವೇಷದಲ್ಲಿದ್ದ ಅವರನ್ನು ಜರಾಸಂಧ ನೋಡಿದ. ಸ್ನಾತಕ ವೇಷದಿಂದ ಕೂಡಿದ ಮಹಾಬಲಿಷ್ಠರಾದ ಅವರನ್ನು ಗಮನಿಸಿ ಬಿಲ್ಲಿನ ಹೆದೆಯ ಚಿಹ್ನೆಗಳಿಂದ ಕೂಡಿದ್ದ ಅವರ ತೋಳುಗಳನ್ನು ನೋಡಿ ಅವರು ಕ್ಷತ್ರಿಯರು ಎಂದು ತಿಳಿದು ಅವರನ್ನು ಕುರಿತು ಹೇಳಿದ.

ವಿ: ೧) ಆ ಮೂವರನ್ನೂ ಜರಾಸಂಧ ನೋಡುತ್ತಲೇ ಅವರು ಬ್ರಾಹ್ಮಣರಲ್ಲ, ಕ್ಷತ್ರಿಯರು ಎಂದು ಗುರುತಿಸಿದ ಬಗೆಯನ್ನು ಇಲ್ಲಿ ತಿಳಿಸಿರುವರು.

೨) ಸ್ನಾತಕ ವೇಷ ಎಂದರೆ ಅಧ್ಯಯನವನ್ನು ಪೂರೈಸಿದ, ಅನಂತರ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಮುನ್ನ ಕಾಶೀ ಯಾತ್ರೆಗೆಂದು ತೆರಳುವಾಗ ಧರಿಸುವ ವೇಷ.

ಜರಾಸಂಧನೊಂದಿಗೆ ಮಾತುಕತೆ

ಕೇ ಷ್ಠಾಥ ಕಿಂ ಹೇತುತ ಆಗತಾಶ್ಚ
ಕುತಶ್ಚ ಮೇ ಪರ್ವತಲಿಂಗಭೇದನಮ್ ।
ಕೃತಂ ಭವದ್ಭಿಃ ಕುತ ಏವ ದುರ್ನಯಾಃ
ಕೃತಾಸ್ತಥಾಽನ್ಯೇ ದ್ವಿಜವರ್ಯವೇಷೈಃ ॥ ೧೨೬ ॥

ಅ: ''ಯಾರು ನೀವು, ಯಾವ ಕಾರಣಕ್ಕಾಗಿ ಬಂದಿರುವಿರಿ, ನನ್ನ ಬೆಟ್ಟದ ಲಿಂಗವನ್ನು ನೀವೇಕೆ ಪುಡಿಗೈದಿರಿ? ಬ್ರಾಹ್ಮಣೋತ್ತಮರ ವೇಷಗಳನ್ನು ಧರಿಸಿ ನೀವು ಇಂತಹ ಅನ್ಯಾಯದ ಕಾರ್ಯಗಳನ್ನು ಏಕೆ ಎಸಗಿದಿರಿ?''

---

೧೨೫. ಸ್ನಾತಕಃ ತೀರ್ಥಯಾತ್ರಾವ್ರತಧರಃ। –(ಜ.)

೧೨೫. ಸ್ನಾತಕವೇಷಯುಕ್ತಾನ್ । ವಿವಾಹಾತ್ ಪೂರ್ವಂ ವಾರಾಣಸೀಯಾತ್ರೋಪಯುಕ್ತಾನ್, ನೂತನವಸ್ತ್ರಗಂಧ-ಮಾಲ್ಯಾದಿವೇಷಯುಕ್ತಾನ್ । –(ತಾ.)

೧೨೬. ಕೇ ಸ್ಥಾಥ ಕಿಮಿತ್ಯತ್ರ ''ಅಸ ಭುವಿ'' ಇತಿ ಧಾತೋಃ ಸ್ಥೇತಿ ಲಿಟಿ ಮಧ್ಯಮಪುರುಷಬಹುವಚನಮ್। ಕೇ= ಕಿಂಜಾತೀಯಾಃ ॥ –(ವಾ.)

೧೨೬. ಅಸ್ತೇರ್ಧಾತೋರ್ಲಣ್ಮಧ್ಯಮಪುರುಷಬಹುವಚನಂ। ಸುಷಾಮಾದಿಷು ಪರಿಗಣಿತತ್ವಾತ್ ಷತ್ವಂ ಷ್ಟುತ್ವಂ ಚ । –(ಜ.)

೧೨೬. ಕೇ ಸ್ಥಾಥ ಕಿಂ ಹೇತುತ ಆಗತಾಶ್ಚೇತ್ಯತ್ರ ಕೇ ಸ್ಥ ಅಥ ಇತಿ ಪದತ್ರಯಂ ದ್ರಷ್ಟವ್ಯಮ್ । ತೇನ ಪದಚ್ಛೇದೇನ ಕಾಠಿಣ್ಯಂ ಅಸ್ತೇ ಧಾತೋರ್ಲಟ್ ಮಧ್ಯಮಪುರುಷಬಹುವಚನಮ್ ಸುಷಮಾದಿಪರಿಗಣಿತತ್ವಾತ್ ಷತ್ವಂ ಷ್ಟುತ್ವಂ ಚ ಕೇಷ್ಮ ನರಶ್ರೇಷ್ಠಾ ಮಾ ಇತ್ಯತ್ರೈವ ಕುತಶ್ಚ ಮೇ ಪರ್ವತಲಿಂಗಭೇದನಮಿತ್ಯತ್ರ ಶಿವಪ್ರತಿಮಾಭೇದಸ್ಯಾಕಾರ್ಯತ್ವಾತ್ ಕಥಂ ಕೃತಮಿತ್ಯಾಶಂಕಾ ಶಿವಸ್ಯ ಶಾಪಕೃತಪರ್ವತಜನ್ಮನಿವೃತ್ತಿಃ ಕೃಷ್ಣಾದಿತ್ರಿಭಿರ್ಭೇದನೇನೈವ ಭವಿಷ್ಯತೀತಿ ಪುರಾಣಕಥಾ ನಿರಾಕೃತಾ ಜ್ಞೇಯಾ । –(ತಿ.)

ವಿ: ಅದ್ವಾರದಿಂದ ಪ್ರವೇಶ, ಗಿರಿಲಿಂಗದ ಪುಡಿಮಾಡುವಿಕೆ, ಭೇರಿಗಳ ಭೇದನ, ಅಂಗಡಿಗಳ ಲೂಟಿ ಮೊದಲಾದ ಕಾರ್ಯಗಳೆಲ್ಲ ಬ್ರಾಹ್ಮಣರು ಮಾಡುವಂತಹ ಕಾರ್ಯಗಳಲ್ಲ, ಆದ್ದರಿಂದ ಅವರದ್ದು ಬ್ರಾಹ್ಮಣ ವೇಷವೇ ಹೊರತು ಬ್ರಾಹ್ಮಣ ವರ್ಣವಲ್ಲ ಎಂಬುದು ಅವನ ನಿಶ್ಚಯ–ವಾಗಿತ್ತು.

ಇತಿ ಬ್ರುವಾಣಂ ಭಗವಾನುವಾಚ
ಕಾರ್ಯಂ ಹಿ ಶತ್ರೋರಖಿಲಂ ಪ್ರತೀಪಮ್ ।
ಇತ್ಯುಕ್ತ ಊಚೇ ನ ಹಿ ವಿಪ್ರಶತ್ರು-
ರಹಂ ಕುತೋ ವೋ ಮಮ ಶತ್ರುತಾ ಭವೇತ್ ೧೨೭

ಅ: ಅವನು ಹೀಗೆನ್ನಲು ಶ್ರೀಕೃಷ್ಣ ಉತ್ತರಿಸಿದ ''ಶತ್ರುವಿಗೆ ಎಲ್ಲ ಬಗೆಯ ವಿರೋಧ ಮಾಡಲೇಬೇಕಲ್ಲವೇ!''. ಹೀಗೆನ್ನಲು ಜರಾಸಂಧ ಕೇಳಿದ : ''ನಾನು ಬ್ರಾಹ್ಮಣವೈರಿಯಲ್ಲ, ನಿಮಗೆ ನನ್ನಲ್ಲಿ ವೈರ ಎಲ್ಲಿಂದ ಉಂಟಾದೀತು?''.

ವಿ: ೧) ಇಲ್ಲಿ ಜರಾಸಂಧ ತನ್ನ ಬಗ್ಗೆ ತಾನು ವಿಪ್ರಶತ್ರುವಲ್ಲ ಎಂದು ನೀಡುವ ವಿವರ ತುಂಬಾ ಅಪೂರ್ವವಾದುದು.

೨) ಹಿರಣ್ಯಕಶಿಪು ಮೊದಲಾದವರಂತೆ ಜರಾಸಂಧ ನೇರವಾಗಿ ಬ್ರಾಹ್ಮಣ ದ್ವೇಷಿಯಾಗಿ–ರಲಿಲ್ಲ ಎಂಬುದು ಇಲ್ಲಿಯ ವಿಶೇಷ. ಅವನು ಹಾಗೆ ಬ್ರಾಹ್ಮಣ ಶತ್ರುವಲ್ಲದೇ ಇದ್ದುದು ಅವನು ಅಷ್ಟುಕಾಲ ಸಾಯದೇ ಇರುವ ಕೆಲವು ಕಾರಣಗಳಲ್ಲಿ ಪ್ರಮುಖ ಕಾರಣವೊಂದಾಗಿತ್ತು ಎಂದು ತಿಳಿಯಬಹುದು.

ಜರಾಸಂಧನಿಗೆ ಕೃಷ್ಣಸಂದೇಶ

ಇತ್ಯುಕ್ತವಾಕ್ಯಂ ನೃಪತಿಂ ಜಗಾದ
ಜನಾರ್ದನೋ ನೈವ ಹಿ ತಾದೃಶಾ ದ್ವಿಜಾಃ ।
ಅಹಂ ರಿಪುಸ್ತೇऽಸ್ಮಿ ಹಿ ವಾಸುದೇವ
ಇಮೌ ಚ ಭೀಮಾರ್ಜುನನಾಮಧೇಯೌ ॥ ೧೨೮ ॥

ಅ: ಅವನು ಹೀಗೆನ್ನಲು ಶ್ರೀಕೃಷ್ಣ ಅವನಿಗೆ ತಿಳಿಸಿದ ''ನಾವು ಅಂತಹ ಬ್ರಾಹ್ಮಣರೇನಲ್ಲ, ನಾನು ನಿನ್ನ ವೈರಿಯಾದ ಕೃಷ್ಣ, ಇವರಿಬ್ಬರೂ ಭೀಮ ಮತ್ತು ಅರ್ಜುನ ಎಂಬ ಹೆಸರಿನವರು''.

ವಿಃ ಇಲ್ಲಿ ''ನಾವು ಅಂತಹ ಬ್ರಾಹ್ಮಣರಲ್ಲ'' ಎನ್ನುವ ಮೂಲಕ ಶ್ರೀಕೃಷ್ಣ ತಾನು ಪರಬ್ರಹ್ಮ, ಭೀಮ ಭಾವಿಬ್ರಹ್ಮ, ಅರ್ಜುನ ಬ್ರಹ್ಮಶಬ್ದವಾಚ್ಯನಾದ ಬೃಹಸ್ಪತಿಗಳನ್ನು ಗುರುವನ್ನಾಗಿ ಹೊಂದಿದ ದೇವೇಂದ್ರ ಎಂದು ಸೂಚಿಸಿರುವನು ಎಂದೂ ತಿಳಿಯಬಹುದು.

ಯದ್ಬಾಂಧವಾನ್ ನಃ ಪಿಶಿತಾಶಿಧರ್ಮತೋ
ರೌದ್ರೇ ಮಖೇ ಕಲ್ಪಯಿತುಂ ಪಶುತ್ವೇ ।
ಇಚ್ಛಸ್ಯರೇ ವೇದಪಥಂ ವಿಹಾಯ
ತಂ ತ್ವಾ ಬಲಾಚ್ಛಾಸ್ತುಮಿಹಾಗತಾ ವಯಮ್ ॥ ೧೨೯ ॥

ಅ: ''ಎಲಪ್ಪೋ! ನೀನು ವೇದದ ಹಾದಿಯನ್ನು ಬಿಟ್ಟು ರಾಕ್ಷಸ ಧರ್ಮದಿಂದ ನಮ್ಮ ಬಂಧುಜನರನ್ನು ಶಿವಯಾಗದಲ್ಲಿ ಬಲಿಪಶುವಾಗಿ ಮಾಡಲು ಬಯಸಿರುವಿ. ಅಂತಹ ನಿನ್ನನ್ನು ಬಲಾತ್ಕಾರದಿಂದ ಶಾಸನ ಮಾಡಲೆಂದು ನಾವು ಇಲ್ಲಿಗೆ ಬಂದಿರುವೆವು''.

ವಿಃ ೧) ಈ ಮಾತುಗಳಲ್ಲಿ ಜರಾಸಂಧ ಕೃಷ್ಣನ ಬಂಧುಜನರನ್ನು ಕೊಲ್ಲ ಹೊರಟಿರುವ ವಿವರ ಬಂದಿದೆ; ಅವನದು ಅವೈದಿಕಮಾರ್ಗ, ಆಸುರೀಪ್ರವೃತ್ತಿ ಎಂದು ಸ್ಪಷ್ಟ ತಿಳಿಸಲಾಗಿದೆ.

೨) ನರಬಲಿ ಮೊದಲಾದವುಗಳನ್ನು ಎಂದೂ ಭಗವಂತ ಮೆಚ್ಚಲಾರನು ಎಂಬ ವಿಶೇಷಾಂಶ ಇದರಿಂದ ಸೂಚಿತ.

ವಿಮೋಕ್ಷಯಾಮಃ ಸ್ವಜನಾನ್ ಯದಿ ತ್ವಂ
ನ ಮೋಚಯಸ್ಯದ್ಯ ನಿಗೃಹ್ಯ ಚ ತ್ವಾಮ್ ।
ಮುಂಚಾಥ ವಾ ತಾನಭಿಯಾಹಿ ವಾಽಸ್ಮಾನ್
ರಣಾಯ ಮರ್ತುಂ ಕೃತನಿಶ್ಚಯೋಽತ್ರ ॥ ೧೩೦ ॥

---

೧೨೯. ಅಹಂ ರಿಪುಸ್ತೇಽಸ್ಮಿ ಹಿ ವಾಸುದೇವ ಇತ್ಯತ್ರ ಹಿಶಬ್ದೇನ ''ದೈತ್ಯಾರಿಃ ಪುಂಡರೀಕಾಕ್ಷಃ'' ಇತ್ಯನುಶಾಸನೇಽಪಿ ಪಾಠಾತ್ ಸ್ವಸ್ಯ ದೈತ್ಯಾರಿತ್ವಂ ಸುಪ್ರಸಿದ್ಧಮಿತ್ಯಾಹ ॥ – (ವಾ.)

೧೩೦. ನಿಗೃಹ್ಯ ಚ ತ್ವಾಮಿತ್ಯತ್ರ ಯದಿ ತ್ವಂ ನ ಮೋಚಯಸಿ ತರ್ಹಿ ತ್ವಾಂ ನಿಗೃಹ್ಯ ಚ ಮೋಚಯಾಮ ಇತಿ ಸಂಬಂಧಃ ॥ – (ವಾ.)

೧೩೦. ಮನುಷ್ಯಾಣಾಂ ಸಮಾಲಂಭೋ ನ ಚ ದೃಷ್ಟಃ ಕದಾಚನ ।
ಸ ಕಥಂ ಮಾನುಷೈರ್ದೇವಂ ಯಷ್ಟುಮಿಚ್ಛಸಿ ಶಂಕರಮ್ ॥
– (ಜರಾಸಂಧನನ್ನು ಕುರಿತು ಶ್ರೀಕೃಷ್ಣವಚನ) – ಭಾರತ (೨/೨೨/೧೧)

೧೩೦. ಮುಂಚ ವಾ ನೃಪತೀನ್ ಸರ್ವಾನ್ ಗಚ್ಛ ವಾ ತ್ವಂ ಯಮಕ್ಷಯಮ್ ॥ – ಭಾರತ (೨/೨೩/೨೬)

ಅ: ' ನೀನು ಅವರನ್ನು ಬಿಡುಗಡೆ ಮಾಡದಿದ್ದಲ್ಲಿ ನಿನ್ನನ್ನು ನಿಗ್ರಹಿಸಿ ನಾವು ನಮ್ಮ ಬಂಧುಜನರನ್ನು ಬಿಡುಗಡೆ ಮಾಡುವೆವು. ನೀನು ಅವರನ್ನು ಬಿಡುಗಡೆಮಾಡು, ಇಲ್ಲದಿದ್ದಲ್ಲಿ ಸಾಯಲು ನಿಶ್ಚಯಿಸಿ ಯುದ್ಧದಲ್ಲಿ ನಮ್ಮನ್ನು ಎದುರಿಸು'.

ವಿ: ಜರಾಸಂಧನಿಗೆ ಈ ಮೂಲಕ ಕೃಷ್ಣ ಬದುಕಲು ಮತ್ತೊಂದು ಅವಕಾಶವನ್ನು ನೀಡುತ್ತಿರು–ವನು ಎಂಬುದನ್ನು ಗಮನಿಸಬೇಕು. ಇದು ಸೀತೆಯನ್ನು ರಾಮನಿಗೆ ಒಪ್ಪಿಸಿ ನೀನು ಜೀವ ಉಳಿಸಿಕೋ ಎಂಬ ಹನುಮಂತನ ಸಂದೇಶದಂತಿರುವುದನ್ನು ಗಮನಿಸಬೇಕು.

ಜರಾಸಂಧನ ದುರಾಗ್ರಹ

ಇತೀರಿತೋಽಸೌ ಮಗಧಾಧಿಪೋ ರುಷಾ
ಜಗಾದ ನಾಹಂ ಶಿವಯಾಗಯುಕ್ತಾನ್ ।
ಮೋಕ್ಷ್ಯೇ ಪಶೂನ್ ಯುಗಪದ್ವಾ ಕ್ರಮೇಣ
ಯೋತ್ಸ್ಯೇ ಚ ವೋಽಥಾಪಿ ಚಮೂಸಹಾಯಾನ್ ॥ ೧೩೧ ॥

ಅ: ಶ್ರೀಕೃಷ್ಣ ಹೀಗೆನ್ನಲು ಜರಾಸಂಧ ಕೋಪದಿಂದ ನುಡಿದ 'ನಾನು ಶಿವಯಾಗಕ್ಕೆಂದು ತೊಡಗಿಸಿರುವ ಈ ಪಶುಗಳನ್ನು ಬಿಡಲಾರೆ. ನಿಮ್ಮೊಂದಿಗೆ ಒಟ್ಟಾಗಿ ಆಗಲಿ, ಕ್ರಮವಾಗಿ ಆಗಲಿ ಸೈನ್ಯಸಮೇತವಾಗಿಯಾಗಲೀ, ಹೋರಾಡುವೆ'.

ನಿರಾಯುಧಃ ಸಾಯುಧೋ ವಾ ಯುಷ್ಮದಿಷ್ಟಾಯುಧೇನ ವಾ ।
ಏಕೋಽಪಿ ಸಕಲೈರ್ಯೋತ್ಸ್ಯೇ ಸಸೈನ್ಯೋ ವಾ ಸಸೈನಿಕಾನ್ ॥ ೧೩೨ ॥

ಅ: ನಿರಾಯುಧನಾಗಿಯಾಗಲೀ, ಆಯುಧಸಹಿತನಾಗಲೀ, ನಿಮಗೆ ಇಷ್ಟವಾದ ಆಯುಧ-ದಿಂದಾಗಲೀ, ನಾನೊಬ್ಬನೇ ಆಗಲಿ, ಅಥವಾ ಸೈನ್ಯ ಸಮೇತವಾಗಿ ಆಗಲಿ ನಿಮ್ಮೆಲ್ಲರನ್ನು ಯುದ್ಧದಲ್ಲಿ ಎದುರಿಸುವೆ.

ಇತ್ಯುಕ್ತವಂತಮವದದಜಿತೋರುಬಲೋ ಹರಿಃ ।
ಏಹ್ಯೇಕಮೇಕೋ ವಾಽಸ್ಮಾಸು ಸಸೈನ್ಯೋ ವಾ ರಣೇ ನೃಪ ॥ ೧೩೩ ॥

---

೧೩೧. ಶಿವಯಾಗಯುಕ್ತಾನ್ = ಶಿವಯಾಗೇ ನಿಯುಕ್ತಾನ್ ॥ – (ವಾ.)

ಅ: ಅವನು ಹೀಗೆನ್ನಲು, ಎಂದೂ ಸೋಲದ ಮಹಾಬಲಶಾಲಿಯಾದ ಕೃಷ್ಣ ತಿಳಿಸಿದ ''ನಮ್ಮಲ್ಲಿ ಒಬ್ಬನನ್ನು ನೀನು ಏಕಾಂಗಿಯಾಗಿ ಆಗಲಿ ಅಥವಾ ಸೈನ್ಯಸಮೇತವಾಗಿ ಆಗಲಿ ಯುದ್ಧದಲ್ಲಿ ಎದುರಿಸು''.

ಯೇನ ಕಾಮಯಸೇ ಯೋದ್ಧುಂ ತನ್ನ ಆಸಾದಯ ದ್ರುತಮ್ ।
ನಿರಾಯುಧಃ ಸಾಯುಧೋ ವಾ ತ್ವದಭೀಷ್ಟಾಯುಧೇನ ವಾ ॥ ೧೩೪ ॥

ಅ: ''ನೀನು ಯಾರೊಂದಿಗೆ ಕಾದ ಬಯಸುವೆಯೋ ಅವನನ್ನು ಬೇಗನೆ ಆರಿಸಿಕೋ, ನಿರಾಯುಧನಾಗಿ ಆಗಲೀ, ಸಾಯುಧನಾಗಲೀ ಅಥವಾ ನಿನಗೆ ಪ್ರಿಯವಾದ ಆಯುಧ-ದಿಂದಾಗಲೀ ನೀನು ಹೋರಾಡಬಹುದು''.

ವಿ: ಜರಾಸಂಧ ಹೇಳಿದ್ದಕ್ಕೆ ಪ್ರತಿಯಾಗಿ ಶ್ರೀಕೃಷ್ಣ ಇಲ್ಲಿ ನುಡಿಯುತ್ತಿರುವನು. ಆಯ್ಕೆ ನಮ್ಮದಲ್ಲ, ಅವನದೇ ಆಗಲಿ ಎಂಬುದು ಕೃಷ್ಣನ ಭಾವ. ನಿರಾಯುಧನಾಗಿ ಹೋರಾಡುವುದು ಎಂದರೆ ಮಲ್ಲಯುದ್ಧ ಮಾಡುವುದು ಎಂದರ್ಥ.

ಕೃಷ್ಣಾದಿಗಳ ವಿಪ್ರವೇಷಕ್ಕೆ ಕಾರಣ

ಇತ್ಯಾಹ ಭಗವಾನ್ಶತ್ರುಂ ಯಶೋ ಭೀಮೇ ವಿವರ್ಧಯನ್ ।
ಘಾತಯಿತ್ವಾ ಸ್ವಶತ್ರುಂ ಚ ಭೀಮೇನಾನುಗ್ರಹೇ ಪರಮ್ ॥ ೧೩೫ ॥

ಭೀಮಸ್ಯ ಕರ್ತುಮಿಚ್ಛಂಶ್ಚ ಭಕ್ತಿಜ್ಞಾನಾದಿವರ್ಧನಮ್ ।
ತೃಣೀಕರ್ತುಂ ರಿಪುಂ ಚೈವ ನಿರಾಯುಧತಯಾऽಗಮತ್ ॥ ೧೩೬ ॥

ಅ: ಹೀಗೆ ಕೃಷ್ಣ ಭೀಮನ ಕೀರ್ತಿಯನ್ನು ಅವನಿಂದ ತನ್ನ ಶತ್ರುವನ್ನು ಕೊಲ್ಲಿಸುವ ಮೂಲಕ ಹೆಚ್ಚಿಸಲೆಂದೂ, ಅವನಿಗೆ ಪರಮಾನುಗ್ರಹವನ್ನು ಮಾಡಲೆಂದೂ, ಭಕ್ತಿಜ್ಞಾನ ಮೊದಲಾದವು-ಗಳನ್ನು ಹೆಚ್ಚಿಸಲೆಂದೂ, ಶತ್ರುವನ್ನು ತೃಣೀಕರಿಸಲೆಂದೂ, ನಿರಾಯುಧನಾಗಿ ತೆರಳಿದ್ದ.

ವಿ: ೧) ಜರಾಸಂಧನನದು ಬರೀ ಮಾತು ಮಾತ್ರ, ಆದರೆ ಕೃಷ್ಣನದು ಮಾತಲ್ಲ, ಕೃತಿ. ಅದಕ್ಕೆ ಅವರೆಲ್ಲ ನಿರಾಯುಧರಾಗಿ ತೆರಳಿದ್ದುದೇ ದ್ಯೋತಕ. ಹಾಗೆ ಮಾಡುವ ಮೂಲಕ ಕೃಷ್ಣ ಭೀಮಸೇನ–ನಲ್ಲಿರುವ ಅಗಾಧ ಸಾಮರ್ಥ್ಯವನ್ನು ಪ್ರಕಟಿಸುತ್ತಾ ಅವನ ಕೀರ್ತಿಯನ್ನು ಹೆಚ್ಚಿಸಿದ. ತನ್ನ ಪರಮಾನುಗ್ರಹವನ್ನು ಸೂಚಿಸಿದ ಎಂದರ್ಥ.

೨) ಜರಾಸಂಧನಂತಹ ಮಹಾಬಲಶಾಲಿಯನ್ನು ಅವನು ಇದ್ದಲ್ಲಿಗೇ ತೆರಳಿ ಯಾವ ಆಯುಧವೂ ಇಲ್ಲದೇ ಕೇವಲ ತೋಳುಗಳಿಂದ ಸಂಹರಿಸುವ ಮೂಲಕ ಭೀಮಸೇನ ಅತ್ಯಂತ ಮಹತ್ತರವಾದ ಕೀರ್ತಿಯನ್ನು ಪಡೆಯಲಿ ಎಂಬುದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ.

ಕೃಷ್ಣಭೀಮಾರ್ಜುನಾಸ್ತೇನ ವಿಪ್ರವೇಷಾಶ್ಚ ತೇऽಭವನ್ ।
ನಿರಾಯುಧಃ ಕ್ಷತ್ರವೇಷೋ ನೈವ ಯೋಗ್ಯಃ ಕಥಂಚನ ॥ ೧೩೭ ॥

ಅ: ಆಯುಧ ಹಿಡಿಯದ ಕ್ಷತ್ರಿಯವೇಷ ಯಾವ ರೀತಿಯಲ್ಲೂ ಯೋಗ್ಯವಲ್ಲ, ಅದರಿಂದಾಗಿ ಕೃಷ್ಣ, ಭೀಮಸೇನ ಮತ್ತು ಅರ್ಜುನರು ಬ್ರಾಹ್ಮಣ ವೇಷವನ್ನು ಧರಿಸಿದ್ದರು.

ವಿ: ೧) ಶಸ್ತ್ರಪಾಣಿಗಳಾಗಿ ಕ್ಷತ್ರಿಯರು ಶಾಸ್ತ್ರಪಾಣಿಗಳಾಗಿ ಬ್ರಾಹ್ಮಣರು ಸಂಚರಿಸಬೇಕಾದುದ್ದು ವಿಹಿತ. ಅವರು ನಿರಾಯುಧರಾಗಿ ತೆರಳುವ ಮೂಲಕ ಜರಾಸಂಧನನ್ನು ತೃಣೀಕರಿಸಲು ನಿಶ್ಚಯಿಸಿದ್ದರು, ಕ್ಷತ್ರಿಯ ವೇಷದಿಂದ ಹಾಗೆ ತೆರಳುವುದು ಉಚಿತವಲ್ಲ ಆದ್ದರಿಂದ ಕ್ಷತ್ರಿಯ ವೇಷವನ್ನು ತೊರೆದು ಬ್ರಾಹ್ಮಣ ವೇಷವನ್ನು ಧರಿಸಿ ತೆರಳಿದ್ದರು ಎಂದರ್ಥ.

೨) ಕ್ಷತ್ರಿಯ ಶಸ್ತ್ರ ಹಿಡಿಯದಿರುವುದು ನಿಷಿದ್ಧವಾಗಿದ್ದಂತೆ ಬ್ರಾಹ್ಮಣ ಶಸ್ತ್ರ ಹಿಡಿಯುವುದೂ ನಿಷಿದ್ಧವೇ. ಆದ್ದರಿಂದ ಬ್ರಾಹ್ಮಣ ವೇಷದಲ್ಲಿ ಅವರು ನಿರಾಯುಧರಾಗಿ ತೆರಳಿದರು ಎಂದರ್ಥ.

ತತೋ ಜಗ್ಮುರ್ವಿಪ್ರವೇಷಾಸ್ತ್ರಣೀಕರ್ತುಂ ಹಿ ಮಾಗಧಮ್ ।
ಮಾಗಧಸ್ಯ ಸಸೈನ್ಯಸ್ಯ ಸ್ವಗೃಹೇ ಸಂಸ್ಥಿತಸ್ಯ ಚ ॥ ೧೩೮ ॥

ನಿರಾಯುಧೇನ ಭೀಮೇನ ಸಮಾಹ್ವಾನೇ ಕೃತೇऽಮಿತಮ್ ।
ಧರ್ಮಂ ಯಶಶ್ಚ ಭೀಮಸ್ಯ ವರ್ಧಯಾಮಾಸ ಕೇಶವಃ ॥ ೧೩೯ ॥

---

೧೩೭. ತೇನ ವಿಪ್ರವೇಷಾಶ್ಚ ತೇऽಭವನ್ನಿತ್ಯತ್ರ ತೇನ = ಜರಾಸಂಧತೃಣೀಕರಣಾಖ್ಯಪ್ರಯೋಜನೇನ। ಶ್ರಾದ್ಧ-ಭೋಜಿನೋ ಬ್ರಾಹ್ಮಣಾ ಅಪಿ ತ್ವಾಂ ಹನ್ಯುಃ ಕಿಮುತ ಕ್ಷತ್ರಿಯಾ ಇತಿ ಸೂಚನಾಯ ವಿಪ್ರವೇಷಾಶ್ಚಾಭವನ್ನಿತ್ಯುಕ್ತಮಿತಿ ಭಾವಃ ॥ – (ವಾ.)

೧೩೯. ಧರ್ಮಂ ಯಶಶ್ಚೇತ್ಯತ್ರ ನಿರಾಯುಧತಯಾ ಗೃಹೇ ಸ್ಥಿತಂ ಪ್ರತಿ ಸಾಯುಧತಯಾ ಆಗಮನಸ್ಯಾಧರ್ಮತ್ವಾದಿತಿ ಭಾವಃ। ಇದಂ ಚೋಪಲಕ್ಷಣಮ್। ದುರ್ಮಾರ್ಗವರ್ತಿನಂ ಪ್ರತಿ ಅಮಾರ್ಗೇಣ ಗಮನಸ್ಯ ನ್ಯಾಯ್ಯತ್ವಾದದ್ವಾರೇಣ ಗಮನಂ ಚೇತ್ಯಪಿ ದ್ರಷ್ಟವ್ಯಮ್ ॥ – (ವಾ.)

ಅ: ಆದ್ದರಿಂದ ಅವರು ಜರಾಸಂಧನನ್ನು ತೃಣೀಕರಿಸಲೆಂದು ನಿರಾಯುಧರಾಗಿ ತೆರಳಿದ್ದರು. ತನ್ನ ಮನೆಯಲ್ಲಿಯೇ ತನ್ನ ಸೇನೆಯೊಂದಿಗೆ ಜರಾಸಂಧ ನೆಲೆಸಿದ್ದಾಗಲೂ ನಿರಾಯುಧನಾದ ಭೀಮನಿಂದ ಹಾಗೆ ಯುದ್ಧಕ್ಕೆ ಆಹ್ವಾನ ನೀಡಿಸಿ ಆತನ ಅಮಿತ ಧರ್ಮ, ಯಶಸ್ಸು, ಕೀರ್ತಿಗಳನ್ನು ಕೃಷ್ಣ ಅಪಾರವಾಗಿ ಹೆಚ್ಚಿಸಿದ.

ವಿ: ಶತ್ರುವಿನ ಮನೆಗೆ ಆಯುಧರಹಿತನಾಗಿ ತೆರಳಿ ಸೇನಾದಿಗಳ ಸಹಾಯವೂ ಇಲ್ಲದೇ ಜರಾಸಂಧನನ್ನು ಯುದ್ಧದಲ್ಲಿ ಕೊಲ್ಲುವ ಮೂಲಕ ಭೀಮಸೇನ ತನ್ನ ಧರ್ಮದೀಕ್ಷೆ ಹಾಗೂ ಬಾಹುಬಲ ಎರಡನ್ನೂ ಜಗತ್ತಿಗೆ ಸಾರಲಿ ಎಂಬುದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ.

ಅರ್ಜುನನ ಗರ್ವಭಂಗ

ತೃತೀಯಮರ್ಜುನಂ ಚೈವ ಸಮಾದಾಯ ಯಯೌ ರಿಪುಮ್ ।
ಹರಿಸ್ತಸ್ಮಾಚ್ಚ ಭೀಮಸ್ಯ ಮಹಾಧಿಕ್ಯಂ ಪ್ರಕಾಶಯನ್ ।
ಮುಖೇನ ಮಾಗಧಸ್ಯೈವ ವೃಣ್ವೇಕಂ ನ ಇತಿ ಬ್ರುವನ್ ॥ ೧೪೦ ॥

ಅ: ಮೂರನೆಯವನನ್ನಾಗಿ ಕೃಷ್ಣ ಅರ್ಜುನನನ್ನು ಜರಾಸಂಧನ ಬಳಿಗೆ ತೆರಳುವ ಮೂಲಕ ಕರೆದೊಯ್ಯುತ್ತಾ ಅವನಿಗಿಂತಲೂ ಭೀಮಸೇನನ ಹಿರಿಮೆ ತುಂಬಾ ಮಿಗಿಲು ಎಂದು ತಿಳಿಸಿದನು. ಜರಾಸಂಧನ ಮುಖದಿಂದಲೇ ನಮ್ಮಲ್ಲಿ ಒಬ್ಬನನ್ನು ಆರಿಸಿಕೋ ಎಂದು ನುಡಿಯುತ್ತಾ ಹಾಗೆ ಮಾಡಿದರು.

ವೃಣ್ವೇಕಮಸ್ಮಾಸ್ವಿತಿ ಸ ಪ್ರೋಕ್ತ ಆಹ ಜರಾಸುತಃ ।
ಕುರ್ಯಾಂ ನೈವಾರ್ಜುನೇನಾಹಮಬಲೇನೈವ ಸಂಗರಮ್ ॥ ೧೪೧ ॥

ಅ: ನಮ್ಮಲ್ಲಿ ಒಬ್ಬರನ್ನು ಆರಿಸಿಕೋ ಎಂದು ಕೃಷ್ಣ ತಿಳಿಸಲು ಜರಾಸಂಧ ನುಡಿದ 'ನಾನು ಬಲಹೀನನಾದ ಅರ್ಜುನನೊಂದಿಗೆ ಯುದ್ಧಮಾಡಲಾರೆ'.

---

೧೪೧. ಮುಖೇನ ಮಾಗಧಸ್ಯೈವೇತ್ಯತ್ರ ನಃ = ಅಸ್ಮಾಕಂ ಮಧ್ಯೇ ಏಕಂ ವೃಣ್ವಿತಿ ಬ್ರುವನ್ ಹರಿಃ ಮಾಗಧಸ್ಯ ಮುಖೇನೈವ ತಸ್ಮಾತ್ = ಅರ್ಜುನಾತ್ ಭೀಮಸ್ಯ ಮಹಾಧಿಕ್ಯಂ ಪ್ರಕಾಶಯನ್ ಅರ್ಜುನಮಾದಾಯ ಯಯಾವಿತಿ ಪೂರ್ವೇಣಾನ್ವಯಃ ॥ – (ವಾ.)

೧೪೧. ತ್ರಯಾಣಾಂ ಕೇನ ತೇ ರಾಜನ್ ಯೋದ್ಧುಮುತ್ಸಹತೇ ಮನಃ ।
ಅಸ್ಮದನ್ಯತಮೇನೇಹ ಸಜ್ಜೀಭವತು ಕೋ ಯುಧಿ ॥ – ಭಾರತ (ಸಭಾ. ೩/೨)

ವಿ: ೧) ಕೃಷ್ಣನ ಆದೇಶದಂತೆ ಜರಾಸಂಧ ಒಬ್ಬನನ್ನು ಆರಿಸಿಕೊಳ್ಳಲು ಸಿದ್ಧನಾಗಿ ಅರ್ಜುನ ದುರ್ಬಲ, ಅವನೊಂದಿಗೆ ನಾನು ಯುದ್ಧ ಮಾಡಲಾರೆ ಎಂದ.

೨) ಹೀಗೆ ಅವನಿಂದ ದುರ್ಬಲ ಎನ್ನಿಸಿಕೊಳ್ಳುವ ಮೂಲಕ ಅರ್ಜುನ ತಾನು ಭೀಮನಿ–ಗಿಂತ ಕಡಿಮೆಯವನು ಎಂದು ಅರಿತುಕೊಳ್ಳಲಿ ಎಂದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ.

ಪಂಚಪಂಚಾಶದಬ್ದೋಽದ್ಯ ಹ್ಯಯಮೇವಂ ಚ ಬಾಲವತ್ ।
ಅಬಲತ್ವಾದ್ಯುವಾಽಪ್ಯೇಷ ಬಾಲ ಏವ ಮತೋ ಮಮ ॥ ೧೪೨ ॥

ಅ: ಐವತ್ತೈದು ವರ್ಷಗಳ ಇವನು ದುರ್ಬಲನಾದ್ದರಿಂದ ನನಗೆ ಬಾಲಕನಿದ್ದಂತೆ. ಇಂತಹ ದುರ್ಬಲನೊಂದಿಗೆ ನಾನು ಯುದ್ಧ ಮಾಡಲಾರೆ. ಇವನು ತರುಣನಾಗಿದ್ದರೂ ದುರ್ಬಲ-ನಾದ್ದರಿಂದ ಬಾಲಕನೆಂದೇ ನನ್ನ ಭಾವನೆ.

ವಿ: ೧) ಇದರಲ್ಲಿ ಅರ್ಜುನನ ವಯಸ್ಸಿನ ಬಗ್ಗೆ ಅಪೂರ್ವ ಮಾಹಿತಿ ಇದೆ. ಆಗ ಅರ್ಜುನನಿಗೆ ಐವತ್ತೈದು ವರ್ಷ, ಭೀಮನಿಗೆ ಐವತ್ತಾರು ವರ್ಷ, ಕೃಷ್ಣನಿಗೆ ಐವತ್ತೈದು ವರ್ಷ ಏಳು ತಿಂಗಳು. ಹೀಗೆ ಪಾಂಡವರ ಕಾಲಮಾನದ ಬಗ್ಗೆಯೂ ಸಹ ಸ್ಪಷ್ಟ ವಿವರ ಚೆಲ್ಲಿದ ಹಿರಿಮೆ ಶ್ರೀಮಧ್ವಾ–ಚಾರ್ಯರದು.

೨) ಪಾಂಡವರು ಅರಗಿನ ಮನೆಗೆ ತೆರಳಿದಾಗ ಧರ್ಮರಾಜನ ವಯಸ್ಸು ಇಪ್ಪತ್ತೊಂಭತ್ತು ವರ್ಷಗಳು.

೩) ಅರಗಿನ ಮನೆಯಲ್ಲಿ ಆರು ತಿಂಗಳು ಹಾಗೂ ಹಿಡಿಂಬ ವನದಲ್ಲಿ ಆರು ತಿಂಗಳು, ಮತ್ತು ಏಕಚಕ್ರನಗರದಲ್ಲಿ ಆರು ತಿಂಗಳು – ಹೀಗೆ ಒಂದೂವರೆ ವರ್ಷಗಳು ಕಳೆದವು. ಅನಂತರ ದ್ರೌಪದೀ ಸ್ವಯಂವರ, ಆಗ ಧರ್ಮರಾಜನ ವಯಸ್ಸು ಮೂವತ್ತು ವರ್ಷ ಆರು ತಿಂಗಳು, ಸ್ವಯಂವರದ ಅನಂತರ ಒಂದು ವರ್ಷ ಕಾಲ ಪಾಂಚಾಲ ಪಟ್ಟಣದಲ್ಲಿ ವಾಸ, ಅನಂತರ ಹಸ್ತಿನಾಪುರಕ್ಕೆ ಆಗಮನ, ಅಲ್ಲಿ ಐದು ವರ್ಷಗಳು ಕಳೆದ ಮೇಲೆ ಇಂದ್ರಪ್ರಸ್ಥಕ್ಕೆ ತೆರಳಿದ್ದು. ಆಗ ಧರ್ಮರಾಜನ ವಯಸ್ಸು ಮೂವತ್ತಾರುವರೆ ವರ್ಷಗಳು.

೪) ಈಗ ರಾಜಸೂಯ ಯಾಗದ ಸಮಯದಲ್ಲಿ ಧರ್ಮರಾಜನಿಗೆ ಐವತ್ತೇಳು ವರ್ಷಗಳು. ಎಂದರೆ ಪಾಂಡವರ ಇಂದ್ರಪ್ರಸ್ಥದ ರಾಜ್ಯಭಾರ ಆಗಲೇ ಇಪ್ಪತ್ತು ವರ್ಷಗಳು ಪೂರೈಸಿದ್ದವು.

೫) ಹೀಗೆ ಉದ್ದಕ್ಕೂ ಪಾಂಡವರ ವಯೋಮಾನವನ್ನು ಸ್ಫುಟವಾಗಿ ವಿವರಿಸಿರುವುದು ಮಹಾಭಾರತ ತಾತ್ಪರ್ಯನಿರ್ಣಯದ ಮತ್ತೊಂದು ವೈಶಿಷ್ಟ್ಯ.

ಇತ್ಯುಕ್ತೋಽಪ್ಯರ್ಜುನೋ ನಾಹ ಕುರು ತರ್ಹಿ ಪರೀಕ್ಷಣಮ್ ।
ಬಾಹುಭ್ಯಾಂ ಧನುಷಾ ಚೇತಿ ಶಂಕಮಾನಃ ಪರಾಜಯಮ್ ॥ ೧೪೩ ॥

ಅ: ಅವನು ಹೀಗೆನ್ನಲು ಅರ್ಜುನ ಸೋಲಿನ ಶಂಕೆಯಿಂದ 'ಹಾಗಿದ್ದಲ್ಲಿ ತೋಳುಗಳಿಂದಾಗಲೀ, ಬಿಲ್ಲಿನಿಂದಾಗಲೀ ಪರೀಕ್ಷೆ ಮಾಡು' ಎಂದು ನುಡಿಯಲಿಲ್ಲ.

ವಿ: ೧) ಜರಾಸಂಧ ಹಾಗೆಂದಾಗ ಅರ್ಜುನ ಹಾಗಿದ್ದರೆ ಪರೀಕ್ಷೆ ಮಾಡು ಎನ್ನಲಿಲ್ಲ, ಏಕೆಂದರೆ ಅವನು ಬಾಹುಯುದ್ಧಕ್ಕೆ ಬಂದರೂ, ಧನುರ್ಯುದ್ಧಕ್ಕೆ ಬಂದರೂ ತನಗೆ ಗೆಲವು ದೊರೆಯಲಾರದೇನೋ ಎಂಬ ಸಂಶಯವಿದ್ದದ್ದೇ ಕಾರಣ.

೨) ಇದರಿಂದ ಬಾಲ ಎಂದು ಜರಾಸಂಧ ಕರೆದರೆ ಅದು ಅವನ ತಪ್ಪು ತಿಳುವಳಿಕೆ, ಅದರಿಂದ ಅರ್ಜುನನಿಗೇನು ಕುಂದು ಎನ್ನುವಂತಿಲ್ಲ. ಅದಕ್ಕೆ ಪ್ರತಿಯಾಗಿ ಅರ್ಜುನ ನಾನೇನೂ ಬಾಲನಲ್ಲ, ಯುದ್ಧಕ್ಕೆ ಬಾ ಎಂದು ಆಹ್ವಾನಿಸುವ ಧೈರ್ಯ ತೋರದಿದ್ದದ್ದೇ ಕಾರಣ ಎಂದು ತಿಳಿಯಬೇಕು.

ಅತೋ ಭೀಮೇ ಬಲಾಧಿಕ್ಯಂ ಸುಪ್ರಸಿದ್ಧಮಭೂನ್ಮಹತ್ ।
ಏತದರ್ಥಂ ಹಿ ಕೃಷ್ಣೇನ ಸಹಾನೀತಃ ಸ ಫಲ್ಗುನಃ ॥ ೧೪೪ ॥

ಅ: ಆದ್ದರಿಂದ ಭೀಮನಲ್ಲಿ ಬಲ ತುಂಬಾ ಮಿಗಿಲು ಎಂಬುದು ಸುಪ್ರಸಿದ್ಧವಾಯಿತು. ಅದಕ್ಕೆಂದೇ ಕೃಷ್ಣ ಅರ್ಜುನನನ್ನು ತನ್ನೊಂದಿಗೆ ಕರೆತಂದಿದ್ದ.

ವಿ: ೧) ಜರಾಸಂಧಸಂಹಾರಕ್ಕೆ ಭೀಮಸೇನನನ್ನು ಮಾತ್ರ ಕರೆದೊಯ್ಯದೇ ಕೃಷ್ಣ ಅರ್ಜುನನನ್ನೇಕೆ ಕರೆದೊಯ್ದ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ.

೨) ಅರ್ಜುನನಿಗೆ ಒದಗಿದ್ದ ಅಹಂಕಾರವನ್ನು ಜರಾಸಂಧನಿಂದ ಅವನನ್ನು ಬಾಲ ಎಂದು ಕರೆಸುವ ಮೂಲಕ ಪರಿಹರಿಸುವುದು ಕೃಷ್ಣನ ಸಂಕಲ್ಪವಾಗಿತ್ತು ಎಂದರ್ಥ.

೩) ಇದರಿಂದ ಅರ್ಜುನನನ್ನು ಭೀಮನ ಸಹಾಯಕ್ಕೆಂದು ಕರೆದೊಯ್ದಿದ್ದ ಎಂಬ ತಪ್ಪು ಕಲ್ಪನೆ ಪರಿಹಾರವಾಗುವುದು.

---

೧೪೩. ಇತ್ಯುಕ್ತೋಽಪ್ಯರ್ಜುನೋ ನಾಹೇತ್ಯತ್ರ ಇತಿ ಧಿಕ್ಕಾರಪೂರ್ವಕಮುಕ್ತೋಽಪ್ಯರ್ಜುನಃ ಬಾಹುಭ್ಯಾಂ ಧನುಷಾ ವಾ ಪರೀಕ್ಷಣಂ ಕುರ್ವಿತಿ ನಾಹೇತ್ಯನ್ವಯಃ ॥ – (ವಾ.)

ಕೃಷ್ಣನಿಗೆ ಅಂಜಿದ ಜರಾಸಂಧ

ಜಾನನ್ ಕೃಷ್ಣೇ ಬಲಂ ಘೋರಮವಿಷಹ್ಯಂ ಸ ಮಾಗಧಃ ।
ಕುತ್ಸಯನ್ ಗೋಪ ಇತಿ ತಂ ಭಯಾನ್ನೈವಾಹ್ವಯತ್ ಪ್ರಭುಮ್ ॥೧೪೫॥

ಆಹ್ವಯಾಮಾಸ ಭೀಮಂ ತು ಸ್ಯಾದ್ವಾ ಮೇ ಜೀವನಂ ತ್ವಿತಿ ॥ ೧೪೬ ॥

ಅ: ಕೃಷ್ಣನಲ್ಲಿರುವುದು ಯಾರೂ ಸಹಿಸಲಾಗದ ಅಪಾರ ಬಲ ಎಂದು ತಿಳಿದಿದ್ದ ಜರಾಸಂಧ ಅಂಜಿಕೆಯಿಂದ ಸರ್ವಸಮರ್ಥನಾದ ಕೃಷ್ಣನನ್ನು ಕರೆಯದೆ ಬಾಯಿಂದ ಅವನು ಗೋಪ ಎಂದು ಹೀಗಳೆದ. ಬದುಕಲೂಬಹುದು ಎಂಬ ಭಾವನೆಯಿಂದ ಜರಾಸಂಧ ಭೀಮನನ್ನೇ ಆರಿಸಿ-ಕೊಂಡನು.

ವಿ: ೧) ಮೂವರಲ್ಲಿ ಜರಾಸಂಧ ಅರ್ಜುನನನ್ನು ಆಯ್ದುಕೊಳ್ಳದಿರಲು ಕಾರಣವನ್ನು ತಿಳಿಸಿದರು. ಈಗ ಕೃಷ್ಣನನ್ನು ಆಯ್ದುಕೊಳ್ಳದಿರಲು ಕಾರಣವನ್ನು ತಿಳಿಸುತ್ತಿರುವರು. ಜರಾಸಂಧ ಮೇಲ್ನೋಟಕ್ಕೆ ಕೃಷ್ಣನನ್ನು ಇವ ರಾಜನಲ್ಲ, ಒಬ್ಬ *ಗೋಪಾಲಕ, ಇವನೊಂದಿಗೆ ನಾನು ಕಾದಲಾರೆ ಎಂದು ತಿರಸ್ಕರಿಸಿದ.

೨) ವಸ್ತುಸ್ಥಿತಿ ಅದಲ್ಲ. – ಕೃಷ್ಣನನ್ನು ಹದಿನೆಂಟು ಬಾರಿ ಇಪ್ಪತ್ತಮೂರು ಅಕ್ಷೋಹಿಣಿ ಸೇನೆಯೊಂದಿಗೆ ಎದುರಿಸಿ ಎಲ್ಲವನ್ನೂ ಕಳೆದುಕೊಂಡು ಅವನ ಬಲ ಅಗಾಧ ಎಂದು ಅರಿತಿದ್ದ. ಅಷ್ಟು ಅಗಾಧ ಸೇನೆಯೊಂದಿಗೆ ತೆರಳಿದ್ದರೂ ಸೋಲು ತನ್ನದೇ ಆಗಿತ್ತು, ಇನ್ನು ಕೇವಲ ಬಾಹು ಯುದ್ಧದಲ್ಲಿ ತೊಡಗಿದರೆ ಕ್ಷಣಮಾತ್ರದಲ್ಲಿಯೇ ತನ್ನ ಅವಸಾನ ಖಚಿತ ಎಂದು ನಿರ್ಧರಿಸಿ ಭಯದಿಂದ ಜರಾಸಂಧ ಕೃಷ್ಣನನ್ನು ಆಯ್ದುಕೊಳ್ಳಲಿಲ್ಲ ಎಂಬದು ಇಲ್ಲಿ ನಿರೂಪಿತವಾಗಿದೆ. ಅವನು ನೀಡಿದ ಕಾರಣ ಸರಿಯಲ್ಲ ಎಂಬುದು ಸ್ಪಷ್ಟ.

೩) ರಾಜನಲ್ಲವೆಂಬ ಕಾರಣಕ್ಕೆ ಕೃಷ್ಣನನ್ನು ಆರಿಸಿಕೊಳ್ಳದೇ ಇರುವುದಾದಲ್ಲಿ ಆ ಕಾರಣ ಸ್ಪಷ್ಟವೇ ಆಗಿದ್ದರೂ ಅವನು ಹದಿನೆಂಟು ಬಾರಿ ಯುದ್ಧಕ್ಕೆ ಏತಕ್ಕೆ ತೆರಳಿದ್ದ ಎಂಬ ಪ್ರಶ್ನೆ ಹಾಗೆಯೇ ಉಳಿಯುವುದು. ಹಾಗೆ ತೆರಳುವಾಗ ಅವನಿಗೆ ಗೆಲ್ಲುವ ಆಸೆ ಇತ್ತು, ಅದಾಗದೆಂದು ತಿಳಿದಾಗ ಈಗ ಕೇವಲ ಬದುಕುವ ಆಸೆಯಿಂದ ಕೃಷ್ಣನೊಂದಿಗೆ ನೇರವಾಗಿ ಕಾದಾಡುವುದನ್ನು ತಪ್ಪಿಸಿಕೊಳ್ಳಲು ಹೀಗೆ ಮಾಡಿದ ಎಂದು ಅರಿಯಬೇಕು.

---

* ಅರ್ಜುನಂ ವಾಸುದೇವಂ ಚ ವರ್ಜಯಿತ್ವಾ ಸ ಮಾಗಧಃ ।
ಮತ್ವಾ ದೇವಂ ಗೋಪ ಇತಿ ಬಾಲೋಽರ್ಜುನ ಇತಿ ಸ್ಮ ಹ ॥ – ಕೃ.ಭಾರತ (ಸಭಾ. ೨೪/೪)

೪) ಕೃಷ್ಣನೂ ಸಹ ತನ್ನನ್ನೇ ಆರಿಸಿಕೊಳ್ಳಲು ಒತ್ತಾಯ ಮಾಡಲಿಲ್ಲ, ಅದಕ್ಕೆ ಮೊದಲೇ ತಿಳಿಸಿರುವಂತೆ ಭೀಮನಿಂದಲೇ ಅವನನ್ನು ಕೊಲ್ಲಿಸುವ ತನ್ನ ಸಂಕಲ್ಪ ಒಂದು ಕಾರಣವಾದರೆ, ಜರಾಸಂಧ ಅಯೋಗ್ಯ ಎಂದು ಜನಕ್ಕೆಲ್ಲ ಸ್ಪಷ್ಟ ತಿಳಿಯುವುದು ಮತ್ತೊಂದು ಕಾರಣ.

೫) ಇದು ಕೃಷ್ಣನ ಸಾಮರ್ಥ್ಯದ ಬಗ್ಗೆ ಎತ್ತಿದ ಆಕ್ಷೇಪವಾಗಿರದೇ ಅವನ ಪದವಿಯ ಬಗ್ಗೆ ಎತ್ತಿದ ಅಸಂಗತ ಆಕ್ಷೇಪವಾಗಿದ್ದುದು ಮೇಲ್ನೋಟಕ್ಕೇ ತಿಳಿಯುವ ಕಾರಣ.

೬) ಇನ್ನು ಉಳಿದವರಲ್ಲಿ ಭೀಮನ ಆಯ್ಕೆ ಅನಿವಾರ್ಯವಾಗಿತ್ತು, ಅದರೊಂದಿಗೆ ಭೀಮನೊಂದಿಗೆ ಕಾದಿದಲ್ಲಿ ತನಗಿರುವ ಬ್ರಹ್ಮಾದಿಗಳ ವರದಿಂದ ಒಂದೊಮ್ಮೆ ಬದುಕುಳಿಯುವ ಸಾಧ್ಯತೆಯೂ ಇರಬಹುದು ಎಂದು ಅವನು ಯೋಚಿಸಿದ್ದ.

ಹನಿಷ್ಯತ್ಯೇವ ಮಾಂ ಕೃಷ್ಣ ಇತ್ಯಾಸೀನ್ನೃಪತೇರ್ಭಯಮ್ ।
ತಸ್ಮಾತ್ ತಂ ನಾಹ್ವಯಾಮಾಸ ವಾಸುದೇವಂ ಸ ಮಾಗಧಃ ॥ ೧೪೭ ॥

ಅ: ಕೃಷ್ಣ ತನ್ನನ್ನು ಕೊಂದೇ ಕೊಲ್ಲುವನು ಎಂಬ ಭಯ ಅವನಿಗಿತ್ತು. ಅದಕ್ಕಾಗಿ ಅವನು ಕೃಷ್ಣನನ್ನು ಆರಿಸಿಕೊಳ್ಳಲಿಲ್ಲ.

ವಿ: ಕೃಷ್ಣನನ್ನು ಆರಿಸಿಕೊಂಡರೆ ಸಾವು ಖಚಿತ, ಭೀಮನನ್ನು ಆರಿಸಿಕೊಂಡರೆ ಬದುಕುವ ಸಂಭವವುಂಟು. ಅದಕ್ಕಾಗಿಯೇ ಭೀಮನನ್ನು ಆರಿಸಿಕೊಂಡ ಎಂಬ ಮಾತಿನಲ್ಲಿ **'ನಿಶ್ಚಿತ-ಪರಾಜಯಾದ್ವರಃ ಪಾಕ್ಷಿಕೋಽಪಿ ಜಯಃ'** ಎಂಬ ಶಾಸ್ತ್ರನ್ಯಾಯ ಕಾಣುವುದು.

ಅರ್ಜುನೇ ತು ಜಿತೇ ಕೃಷ್ಣಭೀಮೌ ಮಾಂ ನಿಹನಿಷ್ಯತಃ ।
ತ್ರಯಾಣಾಂ ದುರ್ಬಲಾಹ್ವಾನಾನ್ನಶ್ಯೇತ್ ಕೀರ್ತಿಶ್ಚ ಮೇ ಧ್ರುವಮ್ ೧೪೮

ಅ: ಅರ್ಜುನನನ್ನು ಆರಿಸಿಕೊಂಡು ಅವನನ್ನು ಗೆದ್ದರೂ ಕೃಷ್ಣ ಭೀಮರು ತನ್ನನ್ನು ಕೊಲ್ಲುವುದು ನಿಶ್ಚಿತ. ಮೂವರಲ್ಲಿ ದುರ್ಬಲನನ್ನು ಆರಿಸಿಕೊಂಡಾಗ ತನ್ನ ಕೀರ್ತಿ ಕೆಡುವುದು ನಿಶ್ಚಿತ.

---

೧೪೬. ಸ್ಯಾದ್ವಾ ಮೇ ಜೀವನಂ ತ್ವಿತ್ಯತ್ರ ಭೀಮೇನ ಸಹ ಯುದ್ಧೇ ಉಭಯೋಃ ಸಮಬಲತ್ವಾತ್ ಮೇ ಜೀವನಂ ಸ್ಯಾದ್ವೇತಿ ಪಾಕ್ಷಿಕಜೀವನಾಶಯಾ ಭೀಮಮೇವಾಹ್ವಯಾಮಾಸ। ಕೃಷ್ಣೇನ ತು ಅಷ್ಟಾದಶವಾರಮಪಿ ಪರೀಕ್ಷಿತಸ್ಯ ತಸ್ಯ ಕೃಷ್ಣೋ ಮಾಂ ಹನಿಷ್ಯತ್ಯೇವೇತಿ ಭಯಮಾಸೀದಿತಿ ಯೋಜನಾ ॥ – (ವಾ.)

೧೪೬. ತುಶಬ್ದದ್ವಯಸ್ಯಾವಧಾರಣಾರ್ಥತ್ವಮೇಕಸ್ಯ ಭೀಮಮಿತ್ಯನೇನಾನ್ವಯಂ ದ್ವಿತೀಯಸ್ಯ ಸಂದೇಹಂ ಕೃತ್ವೇತ್ಯಧ್ಯಾಹೃತೇನಾನ್ವಯಂ ಚಾಭ್ಯುಪೇತ್ಯಾರ್ಥಸ್ಯೋಕ್ತತ್ವಾತ್ । – (ಸ.)

ಎ: ೧) ಅರ್ಜುನನನ್ನು ಆರಿಸಿಕೊಂಡು ಗೆದ್ದಲ್ಲಿ ಕೃಷ್ಣ ಭೀಮರಿಂದ ಉಳಿಯುವುದಂತೂ ಅಸಾಧ್ಯ. ಅದಕ್ಕೆ ಕಾರಣ ಅವರದ್ದು ಬರೀ ತನ್ನನ್ನು ಗೆಲ್ಲುವ ಉದ್ದೇಶವಷ್ಟೇ ಆಗಿರದೇ ರಾಜರು-ಗಳನ್ನು ಬಂಧದಿಂದ ಬಿಡುಗಡೆ ಮಾಡುವ ಉದ್ದೇಶ ಆಗಿರುವುದು ಆಗಲೇ ತಿಳಿದಿದೆ.

೨) ಆದ್ದರಿಂದ ಅವರು ಅನಂತರ ತನ್ನನ್ನು ಸರ್ವಥಾ ಬಿಡಲಾರರು ಎಂಬುದು ನಿಶ್ಚಯ-ವಾಗಿತ್ತು. ಹಾಗೆ ಅರ್ಜುನನನ್ನು ಗೆದ್ದರೂ ಪ್ರಯೋಜನವಾಗದೇ ಹೋಗುವುದು, ಅದರೊಂದಿಗೆ ಅರ್ಜುನಂತಹ ದುರ್ಬಲನನ್ನು ಆರಿಸಿಕೊಂಡ ಎಂಬ ಕಾರಣದಿಂದ ಅವನ ಕೀರ್ತಿಗೂ ಕಳಂಕ ತಟ್ಟುವುದು ಎಂಬುದು ಅವನ ಮತ್ತೊಂದು ವಿಚಾರವಾಗಿತ್ತು.

ಇತಿ ಮತ್ವಾऽऽಹ್ವಯಾಮಾಸ ಭೀಮಸೇನಂ ಸ ಮಾಗಧಃ ।
ಕಥಂಚಿಜ್ಜೀವಿತಂ ಮೇ ಸ್ಯಾನ್ನ ತು ನಶ್ಯತಿ ಮೇ ಯಶಃ ॥ ೧೪೯ ॥

ಅ: ಹೇಗೋ ಉಳಿಯಲೂಬಹುದು, ತನ್ನ ಕೀರ್ತಿಗಂತೂ ಕುಂದಿಲ್ಲ ಎಂದು ಬಗೆದು ಜರಾಸಂಧ ಭೀಮನನ್ನು ಆಯ್ದುಕೊಂಡ.

ವಿ: ಇಂತಹುದೇ ಪ್ರಸಂಗದಲ್ಲಿ ಮುಂದೆ ಜರಾಸಂಧನಂತೆ ದುರ್ಯೋಧನನೂ ಸಹ ಭೀಮನನ್ನೇ ಗದಾಯುದ್ಧಕ್ಕೆ ಆರಿಸಿಕೊಳ್ಳುವುದು ಗಮನಾರ್ಹ (೨೮/೫೯).

ಸಹದೇವನಿಗೆ ರಾಜ್ಯಾಭಿಷೇಕ

ಇತಿ ಸ್ಮ ಭೀಮಂ ಪ್ರತಿಯೋಧನಾಯ
ಸಂಗೃಹ್ಯ ರಾಜಾ ಸ ಜರಾಸುತೋ ಬಲೀ ।
ರಾಜ್ಯೇ ನಿಜಂ ಚಾತ್ಮಜಮಭ್ಯಷಿಂಚತ್
ಪುರಾ ಖ್ಯಾತಂ ಪತ್ರತಾಪಾಖ್ಯರುದ್ರಮ್ ॥ ೧೫೦ ॥

ಅ: ಹೀಗೆ ತನ್ನೊಡನೆ ಯುದ್ಧ ಮಾಡಲೆಂದು ಭೀಮಸೇನನನ್ನು ಆರಿಸಿಕೊಂಡು ಬಲಿಷ್ಠನಾದ ಜರಾಸಂಧ ರಾಜ್ಯದಲ್ಲಿ ತನ್ನ ಮಗನನ್ನು ಪಟ್ಟಾಭಿಷೇಕ ಮಾಡಿದ; ಅವನ ಮಗ ಸಹದೇವ ಹಿಂದೆ ಪತ್ರತಾಪ ಎಂದು ಪ್ರಸಿದ್ಧನಾಗಿದ್ದ ರುದ್ರ.

---

೧೫೦. ಇತಿ ಸ್ಮ ಭೀಮಂ ಪ್ರತಿಯೋಧನಾಯೇತ್ಯತ್ರ ಪ್ರತಿಯೋಧನಾಯ ಸ್ವಾತ್ಮಾನಂ ಪ್ರತಿ ಯುದ್ಧಾಯ। ಭೀಮಮೇವ ಸಂಗೃಹ್ಯ = ಸ್ವಮನಸಾ ಗ್ರಹಣಂ ಕೃತ್ವೇತ್ಯರ್ಥಃ ॥ – (ವಾ.)

ವಿ: ೧) ಜರಾಸಂಧ ಯುದ್ಧಕ್ಕೆ ತೊಡಗುವ ಮುನ್ನ ತನ್ನ ಮಗ ಸಹದೇವನನ್ನು ಪಟ್ಟಾಭಿಷೇಕ ಮಾಡಿದ್ದು ಗಮನಾರ್ಹವಾದ ಅಂಶ. ಹಾಗೆ ಮಾಡುವ ಮೂಲಕ ಅವನು ತನ್ನ ಬದುಕಿನ ಬಗ್ಗೆ ಎಷ್ಟು ಹತಾಶನಾಗಿದ್ದ ಎಂಬ ಅಂಶ ಸೂಚಿತವಾಗುವುದು.

೨) ಸಹದೇವ ಪತ್ರತಾಪ ಎಂಬ ಒಬ್ಬ ರುದ್ರನ ಅವತಾರ. ಅವನು ಸೋಮದತ್ತ ಎಂಬ ಹೆಸರಿನಿಂದ ಬಾಹ್ಲೀಕಪುತ್ರನಾಗಿ ಜನಿಸಿದ ವಿವರ ಈಗಾಗಲೇ ಬಂದಿದೆ (೧೧/೧೦).

ಭೀಮ ಜರಾಸಂಧರ ಭಯಂಕರ ಯುದ್ಧ

ಬಲಂ ಭೀಮೇ ಮನ್ಯಮಾನೋಽಧಿಕಂ ತು
ಗದಾಶಿಕ್ಷಾಮಾತ್ಮನಿ ಚಾಧಿಕಾಂ ನೃಪಃ ।
ಭೀತೋ ನಿಯುದ್ಧೇಽಸ್ಯ ದದೌ ಗದಾಂ ಸ
ಭೀಮಾಯ ಚಾನ್ಯಾಂ ಸ್ವಯಮಗ್ರಹೀದ್ಬಲೀ ॥ ೧೫೧ ॥

ಅ: ಭೀಮನಲ್ಲಿ ಬಲ ಮಿಗಿಲು, ತನ್ನಲ್ಲಿ ಗದಾಭ್ಯಾಸದ ಕೌಶಲ ಮಿಗಿಲು ಎಂದು ಭಾವಿಸಿದ್ದ ಬಲಿಷ್ಠನಾದ ಜರಾಸಂಧ ಮಲ್ಲಯುದ್ಧಕ್ಕೆ ಅಂಜಿ, ಒಂದು ಗದೆಯನ್ನು *ಭೀಮನಿಗೆ ನೀಡಿದ, ಮತ್ತೊಂದನ್ನು ತಾನು ತೆಗೆದುಕೊಂಡ.

ವಿ: ೧) ಭೀಮನನ್ನು ದ್ವಂದ್ವಯುದ್ಧಕ್ಕೆ ಆರಿಸಿಕೊಂಡಾಗಲೂ ಅವನ ಅಪಾರ ಬಲಕ್ಕೆ ಅಂಜಿದ ಜರಾಸಂಧ ಗದಾಯುದ್ಧವನ್ನೇ ಆರಿಸಿಕೊಂಡ. ಅದಕ್ಕೆ ಗದಾಯುದ್ಧದಲ್ಲಿ ತಾನೇ ಮಿಗಿಲು ಎಂಬ ಮತ್ತೊಂದು ಭ್ರಮೆ ಕಾರಣವಾಯಿತು.

೨) ನಿರಾಯುಧನಾಗಲೀ, ಸಾಯುಧನಾಗಲೀ ಎಂದು ಹೇಳಿಕೊಂಡಿದ್ದ ಅವನು ಈಗ ನಿರಾಯುಧನಾಗಿ ತೆರಳದೇ ಆಯುಧ ಸಮೇತವಾಗಿ ತೆರಳುವ ಮೂಲಕ ತನ್ನದು ಹೃತ್ಪೂರ್ವಕ–ವಾದ ಮಾತಲ್ಲ, ಕೇವಲ ಶಾಠ್ಯದ ಮಾತು ಎಂಬುದನ್ನು ನಿರೂಪಿಸಿದ ಎಂದೂ ತಿಳಿಯಬೇಕು.

---

೧೫೧. ದದೌ ಗದಾಂ ವೃಕೋದರ ಇತ್ಯತ್ರ ನ ದಾನಂ ಮುಖ್ಯತಃ ಅತಃ ಸಪ್ತಮೀ । ಅನ್ಯಥಾ ಚತುರ್ಥೀ ಸ್ಯಾತ್ । ಗದಾಯಾಃ ಮುಖ್ಯತೋ ದಾನಾಭಾವಸ್ತು 'ಸ ವಾಯುಧಾರಿತಾಂ ಗದಾಂ ಹಿ ಯೌವನಾಶ್ವಭೂಭೃತಾ । ಪ್ರಸಾದತೋಽಸ್ಯ ಲಂಭಿತಾಮ್...' ಇತ್ಯನೇನ ಜ್ಞಾಯತೇ । – (ತಿ.)

* ಇತ್ಯುಕ್ತ್ವಾ ಭೀಮಸೇನಾಯ ಪ್ರಾದಾಯ ಮಹತೀಂ ಗದಾಮ್ ।
ದ್ವಿತೀಯಾಂ ಸ್ವಯಮಾದಾಯ ನಿರ್ಜಗಾಮ ಪುರಾದ್ಬಹಿಃ ॥ – ಭಾಗವತ (೧೦/೨೨/೩೩)

ತದರ್ಥಮೇವಾಶು ಗದಾಂ ಪ್ರಗೃಹ್ಯ
ಭೀಮೋ ಯಯೌ ಮಾಗಧಸಂಯುತೋ ಬಹಿಃ ।
ಪುರಾತ್ ಸಕೃಷ್ಣಾರ್ಜುನ ಏವ ತತ್ರ
ತ್ವಯುದ್ಧ್ಯತಾಂ ಕೇಶವಪಾರ್ಥಯೋಃ ಪುರಃ ॥ ೧೫೨ ॥

ಅ: ಅವನು ಬಯಸಿದ್ದರಿಂದಾಗಿಯೇ ಭೀಮಸೇನ ಗದೆಯನ್ನು ತೆಗೆದುಕೊಂಡು ಜರಾಸಂಧನೊಂದಿಗೆ ಕೃಷ್ಣಾರ್ಜುನರ ಸಮೇತ ನಗರದಿಂದ ಹೊರ ಹೊರಟ. ಅವರಿಬ್ಬರೂ ಕೃಷ್ಣಾರ್ಜುನರ ಮುಂದೆ ಯುದ್ಧಕ್ಕೆ ತೊಡಗಿದರು.

ವಿ: 'ತದರ್ಥಮೇವ' ಎಂದರೆ ಭೀಮ ಗದೆ ತೆಗೆದುಕೊಂಡಿದ್ದು ಜರಾಸಂಧ ಬಯಸಿದ್ದರಿಂದಾಗಿ ಮಾತ್ರ ಎಂದರ್ಥ. ಭೀಮಜರಾಸಂಧರ ಯುದ್ಧ ನಿರಾಹಾರವಾಗಿ ಹಗಲಿರುಳೂ ನಿರಂತರ ನಡೆಯಿತು.

ವಾಗ್ಯುದ್ಧದಲ್ಲಿ ಜರಾಸಂಧನ ಪರಾಜಯ

ವಾಚಾऽಜಯತ್ ತಂ ಪ್ರಥಮಂ ವೃಕೋದರಃ
ಶಿವಾಶ್ರಯಂ ವಿಷ್ಣುಗುಣಪ್ರಕಾಶಯಾ ।
ತತೋ ಗದಾಭ್ಯಾಮಭಿಪೇತತುಸ್ತೌ
ವಿಚಿತ್ರಮಾರ್ಗಾನಪಿ ದರ್ಶಯಂತೌ ॥ ೧೫೩ ॥

ಅ: ಮೊದಲಿಗೆ ಭೀಮಸೇನ ಶಿವಭಕ್ತನಾದ ಅವನನ್ನು ವಿಷ್ಣುವಿನ ಗುಣಗಳನ್ನು ಪ್ರತಿಪಾದಿಸುವ ಮಾತಿನಿಂದ ಗೆದ್ದ. ಬಳಿಕ ಅವರಿಬ್ಬರೂ ಗದೆಗಳನ್ನು ತೆಗೆದುಕೊಂಡು ವಿಚಿತ್ರವಾದ ವರಸೆಗಳನ್ನು ತೋರುತ್ತಾ ಹೋರಾಡತೊಡಗಿದರು.

ವಿ: ೧) ಗದಾಯುದ್ಧಕ್ಕಿಂತ ಮುಂಚಿತವಾಗಿ ಸ್ವಲ್ಪ ಹೊತ್ತು ಭೀಮ ಜರಾಸಂಧರ ಮಧ್ಯೆ ವಾಗ್ಯುದ್ಧ ನಡೆಯಿತು. ಅದರಲ್ಲಿ ಭೀಮಸೇನ ವಿಷ್ಣುಸರ್ವೋತ್ತಮತ್ವವನ್ನು ಸಮರ್ಥಿಸುವ ವಾದವನ್ನು ಮಂಡಿಸಿ, ಜರಾಸಂಧನನ್ನು ಪರಾಭವಗೊಳಿಸಿದ.

---

೧೫೨. ತದರ್ಥಮೇವಾಶ್ವಿತ್ಯತ್ರ ತದರ್ಥಮೇವ= ಗದಾಭ್ಯಾಸಕೌಶಲಪ್ರದರ್ಶನಾರ್ಥಮೇವ ॥ – (ವಾ.)

೧೫೨. ಕಾರ್ತಿಕಸ್ಯ ಮಾಸಸ್ಯ ಪ್ರವೃತ್ತಂ ಪ್ರಥಮೇऽಹನಿ ।
ಅನಾಹಾರಂ ದಿವಾರಾತ್ರಮವಿಶ್ರಾಂತಮವರ್ತತ ॥ – ಭಾರತ (೨/೨೩/೨೯)

೧೫೩. ವಿಷ್ಣುಗುಣಾನ್ ಪ್ರಕಾಶಯತೀತಿ ವಿಷ್ಣುಗುಣಪ್ರಕಾಶಾ ತಯಾ ವಾಚಾ ವೇದೇನ । – (ಜ.)

೨) ಕಾಳೀ ಸ್ವಯಂವರ ಪ್ರಸಂಗದಲ್ಲಿ ಆಗಲೇ ಒಮ್ಮೆ ಜರಾಸಂಧಾದಿಗಳನ್ನು ವಾಗ್ಯುದ್ಧ–ದಿಂದ ಪರಾಭವಗೊಳಿಸಿದ ವಿವರ ಬಂದಿದೆ (೨೦/೧೫–೨೫). ಅಂತಹ ವಾದ ಮತ್ತೊಮ್ಮೆ ನಡೆದು ಭೀಮ ಅದರಲ್ಲೂ ಜರಾಸಂಧನನ್ನು ಸೋಲಿಸಿದ ಎಂದರ್ಥ.

೩) ಇದು ಭೀಮಸೇನನ ಬಾಹುಬಲದೊಂದಿಗೆ ಜ್ಞಾನಬಲವನ್ನು ನಿರೂಪಿಸುವ ಅಪೂರ್ವ ನಿದರ್ಶನ. ಶೈವರ ಪ್ರಧಾನ ವಾದಸರಣಿ ಹಾಗೂ ಅದನ್ನು ನಿರಾಕರಿಸುವ ವೈಷ್ಣವ ವಾದಸರಣಿಯ ಪರಿಜ್ಞಾನಕ್ಕೆ ಶ್ರೀವಿಜಯೀಂದ್ರತೀರ್ಥರ 'ಶೈವಸರ್ವಸ್ವಖಂಡನ' ಕೃತಿಯನ್ನು ಗಮನಿಸಬಹುದು.

ಗದೆಗಳು ಪುಡಿಯಾದವು

ತಯೋರ್ಗದೇ ತೇಽಶನಿಸನ್ನಿಕಾಶೇ
ಚೂರ್ಣೀಕೃತೇ ದೇಹಮಹಾರ್ದ್ಧಿಮ್ನಾ ।
ಅನ್ಯೋನ್ಯಯೋರ್ವಕ್ಷಸಿ ಪಾತಿತೇ ರುಷಾ
ಯಥಾಶ್ಮನೋಃ ಪಾಂಸುಪಿಂಡೌ ಸುಮುಕ್ತೌ ॥ ೧೫೪ ॥

ಅ: ವಜ್ರಾಯುಧದಂತಿದ್ದಂತಹ ಅವರಿಬ್ಬರ ಆ ಎರಡೂ ಗದೆಗಳು ಪರಸ್ಪರರ ಎದೆಯ ಮೇಲೆ ಕೋಪದಿಂದ ಅಪ್ಪಳಿಸಲ್ಪಟ್ಟಾಗ ಅವರ ದೇಹದ ಮಹಾದಾರ್ಢ್ಯದಿಂದಾಗಿ ಬಂಡೆಗಳ ಮೇಲೆ ಎಸೆದ ಮಣ್ಣಹೆಂಟೆಗಳಂತೆ ಪುಡಿಯಾಗಿ ಹೋದವು.

ವಿ: ೧) ಗದಾಯುದ್ಧದಲ್ಲಿ ಒಬ್ಬರ ಎದೆಯ ಮೇಲೆ ಮತ್ತೊಬ್ಬರು ಗದೆಯನ್ನು ಅಪ್ಪಳಿಸಿದಾಗ ಅವರ ದೇಹದಾರ್ಢ್ಯದಿಂದಾಗಿ ಅವುಗಳು ಪುಡಿಯಾದವು. ಇದನ್ನು ಬಂಡೆಯ ಮೇಲೆ ಎಸೆಯಲ್ಪಟ್ಟ ಮಣ್ಣಹೆಂಟೆಗಳು ಪುಡಿಯಾದಂತೆ ಎಂದು ಉಪಮೆಯೊಂದಿಗೆ ವಿವರಿಸಿರುವರು. ಅವರ ದೇಹಗಳು ವಜ್ರಕ್ಕಿಂತ ದೃಢವಾದವು ಎಂಬುದು ತಾತ್ಪರ್ಯ.

೨) ಇಲ್ಲಿ ಎರಡು ಗದೆಗಳೂ ಜರಾಸಂಧನವೇ. ಭೀಮ ನಿರಾಯುಧನಾಗಿ ತೆರಳಿದ್ದರಿಂದ ಭೀಮ ಉಪಯೋಗಿಸಿದ್ದು ತನ್ನ ಗದೆಯನ್ನಲ್ಲ. ಆದ್ದರಿಂದ ಭೀಮನ ಅಮೋಘಗದೆ ಎಂತು ಪುಡಿಯಾಯಿತು ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ ಎಂದು ತಿಳಿಯಬೇಕು. ಸ್ವತಃ ಸಮಸ್ತ ಅಸುರರೂ ಒಟ್ಟಾಗಿ ವಾಯುದೇವರ ಮೇಲೆ ನುಗ್ಗಿದಾಗ ಅವರೆಲ್ಲ ಮಣ್ಣ ಹೆಂಟೆಗಳಂತೆ ಪುಡಿಯಾದರೆಂದು ಅದರಿಂದಾಗಿ ವಾಯುದೇವರಿಗೆ ಆಖಣಾಶ್ಮಸಮ ಎಂದು ಹೆಸರಾಯಿತೆಂದು ಛಾಂದೋಗ್ಯೋಪ–ನಿಷತ್ತಿನಲ್ಲಿ ನಿರೂಪಿತವಾಗಿದೆ. ಅಸುರರೇ ಹಾಗೆ ಪುಡಿಯಾಗುವಾಗ ಒಬ್ಬ ಅಸುರನ ಗದೆ ಹಾಗೆ ಪುಡಿಯಾದದ್ದರಲ್ಲಿ ಆಶ್ಚರ್ಯವೇನಿದೆ ಎಂಬ ಪ್ರಮೇಯ ಇದರಿಂದ ಸೂಚಿತ.

ಸಂಚೂರ್ಣಿತಗದೌ ವೀರೌ ಜಘ್ನತುರ್ಮುಷ್ಟಿಭಿರ್ಮಿಥಃ ।
ಬ್ರಹ್ಮಾಂಡಸ್ಫೋಟಸಂಕಾಶೈರ್ಯಥಾ ಕೇಶವಕೈಟಭೌ ॥ ೧೫೫ ॥

ಅ: ಗದೆಗಳು ಪುಡಿಯಾದ ಮೇಲೆ ಆ ವೀರರಿಬ್ಬರೂ ಬ್ರಹ್ಮಾಂಡ ಸ್ಫೋಟ ಗೈಯ್ಯುವಂತಹ ಮುಷ್ಟಿಗಳಿಂದ ಶ್ರೀಕೃಷ್ಣ-ಕೈಟಭರಂತೆ ಪರಸ್ಪರ ಹೋರಾಡಿದರು.

ವಿ: ಭೀಮ–ಜರಾಸಂಧರ ಯುದ್ಧವನ್ನು ಕೃಷ್ಣ ಕೈಟಭರ ಯುದ್ಧಕ್ಕೆ ಹೋಲಿಸಿರುವರು. ವಿಷ್ಣು ಕೈಟಭರ ಯುದ್ಧದ ಪ್ರಸ್ತಾಪ ಈಗಾಗಲೇ ಬಂದಿದೆ. (೩/೬೦) ಇಲ್ಲಿ ಅವರಿಬ್ಬರ ಮಧ್ಯೆ ನಡೆದದ್ದು ಮುಷ್ಟಿಯುದ್ಧ ಎಂಬ ವಿಶೇಷಾಂಶ ನಿರೂಪಿತವಾಗಿದೆ. ಈ ಮುಷ್ಟಿಯುದ್ಧ ಇಂದಿನ ಬಾಕ್ಸಿಂಗ್ (boxing) ಇದ್ದಂತೆ ಎನ್ನಬಹುದು.

ಚಚಾಲ ಪೃಥ್ವೀ ಗಿರಯಶ್ಚ ಚೂರ್ಣಿತಾಃ
ಕುಲಾಚಲಾಶ್ಚೇಲುರಲಂ ವಿಚುಕ್ಷುಭುಃ ।
ಸಮಸ್ತವಾರಾಂಪತಯಃ ಸುರಾಸುರಾ
ವಿರಿಂಚಶರ್ವಾದಯ ಆಸದನ್ ನಭಃ ॥ ೧೫೬ ॥

ಅ: ಭೂಮಿಯು ಕಂಪಿಸಿತು, ಬೆಟ್ಟಗಳು ಪುಡಿಯಾದವು, ಕುಲಪರ್ವತಗಳು ಬಹಳವಾಗಿ ನಡುಗಿದವು, ಸಮಸ್ತ ಸಾಗರಗಳು ಕ್ಷೋಭೆಗೊಂಡವು, ಬ್ರಹ್ಮ, ಶಿವ ಮೊದಲಾದ ಸುರರು, ಅಸುರರು ಗಗನದಲ್ಲಿ ನೆರೆದರು.

ವಿ: ಭೀಮ–ಜರಾಸಂಧರ ಸಮರ ವಿಶ್ವದಾಖಲೆಯ ಸಮರಗಳಲ್ಲೊಂದಾಯಿತು ಎಂಬುದನ್ನು ತಿಳಿಸಿರುವರು. ಭೂಮಿ ಕಂಪಿಸುವುದು, ಪರ್ವತಗಳು ಪುಡಿಯಾಗುವುದು, ಕುಲಾಚಲಗಳು ನಡುಗುವುದು, ಸಮುದ್ರಗಳು ಕ್ಷೋಭೆಗೊಳ್ಳುವುದು ನಡೆದು ಅವರ ಯುದ್ಧದ ಅಗಾಧತೆ ಜಗತ್ತಿಗೆಲ್ಲ ತಿಳಿಯಿತು ಎಂದರ್ಥ.

---

೧೫೫. ಬ್ರಹ್ಮಾಂಡಸ್ಫೋಟಸಂಕಾಶೈರಿತ್ಯತ್ರ ಬ್ರಹ್ಮಾಂಡಸ್ಯ ಸ್ಫೋಟೋ ವಿದಾರಣಂ ಯೈಸ್ತೇ ಬ್ರಹ್ಮಾಂಡಸ್ಫೋಟಾಃ। ಬ್ರಹ್ಮಾಂಡಸ್ಫೋಟಾ ಇವ ಸಂಕಾಶಾಃ = ಸಮ್ಯಕ್ಪ್ರಕಾಶಮಾನಾಃ। "ಕಾಶೃ ದೀಪ್ತಾ" ವಿತಿ ಧಾತೋಃ। ಕರ್ತ್ರರ್ಥೇ ಪಚಾದ್ಯಚಿ ಕೃತೇ ಕಾಶಾಃ= ಕಾಶಮಾನಾಃ ಇತಿ ಶಬ್ದನಿಷ್ಪತ್ತಿಃ ॥ – (ವಾ.)

೧೫೬. ತಯೋಃ ಸಮಭವದ್ಯುದ್ಧಂ ತುಮುಲಂ ರೋಮಹರ್ಷಣಮ್ ।
ಸರ್ವಲೋಕಕ್ಷಯಕರಂ ಸರ್ವಭೂತಭಯಾವಹಮ್ ॥ – ಭಾರತ (ಸಭಾ. ೨೪/೭)

ಸುರಾಸ್ತು ಭೀಮಸ್ಯ ಜಯಾಭಿಕಾಂಕ್ಷಿಣ-
ಸ್ತಥಾऽಸುರಾದ್ಯಾ ಮಗಧಾಧಿಪಸ್ಯ ।
ಪಶ್ಯಂತಿ ಸರ್ವೇ ಕ್ರಮಶೋ ಬಲಂ ಸ್ವಂ
ಸಮಾದದೇ ಮಾರುತನಂದನೋऽಪಿ ॥ ೧೫೭ ॥

ಅ: ದೇವತೆಗಳು ಭೀಮನ ಜಯವನ್ನು ಹಾರೈಸಿದರೆ, ಅಸುರರೆಲ್ಲ ಜರಾಸಂಧನ ಜಯವನ್ನು ಹಾರೈಸುತ್ತಿದ್ದರು. ಎಲ್ಲರೂ ಯುದ್ಧವನ್ನು ನೋಡುತ್ತಿದ್ದರು. ಆಗ ವಾಯುಪುತ್ರನಾದ ಭೀಮಸೇನ ತನ್ನ ಬಲವನ್ನು ಕ್ರಮವಾಗಿ ವ್ಯಕ್ತಪಡಿಸತೊಡಗಿದನು.

ವಿ: ೧) ಇಲ್ಲಿ ಭೀಮಸೇನ ತನ್ನ ಬಲವನ್ನು ತೆಗೆದುಕೊಂಡ ಎಂದರೆ ವ್ಯಕ್ತಮಾಡಿದ ಎಂದರ್ಥ. ರಾವಣನೊಂದಿಗೆ ಯುದ್ಧ ನಡೆದ ಪ್ರಸಂಗದಲ್ಲಿ ಮೂರ್ಛಿತನಾದ ಲಕ್ಷ್ಮಣ ರಾವಣ ತನ್ನನ್ನು ಎತ್ತಿಕೊಂಡು ಹೋಗಲೆಂದು ಬಂದಾಗ ತನ್ನ ಮೂಲ ರೂಪವಾದ ಶೇಷರೂಪದ ಬಲವನ್ನು ತೆಗೆದುಕೊಂಡಂತೆ ಈ ಪ್ರಸಂಗವಲ್ಲ ಎಂಬುದನ್ನು ಗಮನಿಸಬೇಕು.

೨) ಲಕ್ಷ್ಮಣ ತೆಗೆದುಕೊಂಡದ್ದು ತನ್ನ ಅವತಾರ ರೂಪದಲ್ಲಿ ಇಲ್ಲದೇ ಇದ್ದ ಮೂಲರೂಪದ ಶಕ್ತಿಯನ್ನು. ಆದರೆ ಭೀಮಸೇನ ತನ್ನ ಅವತಾರ ರೂಪದಲ್ಲೂ ಇದ್ದ ಶಕ್ತಿಯನ್ನು ಪ್ರಕಟ ಮಾಡಿದ ಮಾತ್ರ. ಲಕ್ಷ್ಮಣ ಆ ರೀತಿ ಶಕ್ತಿಯನ್ನು ತೆಗೆದುಕೊಂಡದ್ದು ಧರ್ಮಲೋಪಕ್ಕೆ ಕಾರಣವಾಯಿತು. ಆದರೆ ಭೀಮನದು ಹಾಗಲ್ಲ.

---

೧೫೭. 'ಕ್ರಮಶೋ ಬಲಂ ಸ್ವಂ ಸಮಾದದೇ ಮಾರುತನಂದನೋऽಪಿ' ಇತ್ಯತ್ರ ಸ್ವಂ ಸ್ವಕೀಯಂ ಬಲಂ ಸಮಾದದೇ ವ್ಯಕ್ತೀಚಕಾರೇತಿ ಕೇಚಿತ್ ಅನ್ಯೇ ತು ಸ್ವಕೀಯಂ ಸ್ವಸ್ಮಿನ್ನೇವ ವಿದ್ಯಮಾನಂ ಬಲಂ ಮಾನುಷಂ ಬಲಂ ಕ್ರಮಾತ್ ಸಮಾದದೇ ಗೃಹೀತವಾನಿತಿ ಏಕದೈವ ಸರ್ವಮಾನುಷಂ ನ ವ್ಯಕ್ತೀಚಕಾರೇತ್ಯರ್ಥ ಇತಿ। 'ದೈವಂ ಬಲಂ ಸುಶಕ್ತೋऽಪಿ ವ್ಯಕ್ತಂ ಚಕ್ರೇ ನ ಮಾರುತಿಃ' ಇತ್ಯುತ್ತರತ್ರ (೨೧/೩೬೨) ವಕ್ಷ್ಯಮಾಣತ್ವಾದಸ್ಯಾಪಿ ಏವಮಿತಿ। – (ತಿ.)

೧೫೭. ಕ್ರಮಶ ಇತಿ। ಮೂಲರೂಪಂ ಸಂಸ್ಮೃತ್ಯ ಮೂಲರೂಪಗತಂ ಸ್ವಬಲಂ ಕ್ರಮಾತ್ ಸಮಾದದೇ ಸ್ವೀಚಕಾರ। ತದುಕ್ತಂ ಸಭಾಪರ್ವಣಿ* –

ಯತ್ ತೇ ದೈವಂ ಪರಂ ಸತ್ತ್ವಂ ಯಚ್ಚ ತೇ ಮಾತರಿಶ್ವನಃ।
ಬಲಂ ಭೀಮ ಜರಾಸಂಧೇ ದರ್ಶಯಶು ತದದ್ಯ ನಃ।
ವಾಯುಂ ಚಿಂತ್ಯ ಮಹಾಬಾಹೋ ಜಹೀಮಂ ಮಗಧಾಧಿಪಮ್।
ಏವಮುಕ್ತಸ್ತದಾ ಭೀಮೋ ಮನಸಾऽऽಚಿಂತ್ಯ ಮಾರುತಮ್।
ಜನಾರ್ದನಂ ನಮಸ್ಕೃತ್ಯ ಪರಿಷ್ವಜ್ಯ ಚ ಫಲ್ಗುನಮ್।
ಪ್ರಭಂಜನಬಲಾವಿಷ್ಟೋ ಜರಾಸಂಧಮರಿಂದಮಃ ॥ ಇತ್ಯಾದಿ। – (ತಾ.)

---

* ಕೃ.ಭಾರತ (ಸಭಾ. ೨೫/೪,೭-೯)

೩) ಆದರೆ, ಭೀಮಸೇನ ತನ್ನ ಶಕ್ತಿಯನ್ನು ಅಭಿವ್ಯಕ್ತಗೊಳಿಸಿದ್ದು ಜರಾಸಂಧ, ಬಕ, ಹಿಡಿಂಬಾದಿಗಳಿಗಿಂತ ಹೆಚ್ಚು ಬಲಿಷ್ಠ ಎಂದು ತೋರಿಸಲು ಮಾತ್ರ. ಶ್ರೀರಾಮ ದೇವರು ಕುಂಭಕರ್ಣನನ್ನು ಸಂಹರಿಸುವಾಗ ಖರಾದಿಗಳನ್ನು ಸಂಹರಿಸುವಾಗ ಪ್ರಯೋಗಿಸಿದ್ದ ಶಕ್ತಿಗಿಂತ ಮಿಗಿಲಾದ ಶಕ್ತಿಯನ್ನು ಪ್ರಕಟಿಸಿದ (೮/೧೨೯) ಎಂಬ ಮಾತಿನಂತೆ ಇದನ್ನು ಅರ್ಥಮಾಡಿಕೊಳ್ಳಬೇಕು.

೪) ವಾಯುದೇವರ ಬಲ ಅವತಾರಗಳಲ್ಲೂ ಮೂಲರೂಪದಷ್ಟೇ ಪೂರ್ಣ. ಅದನ್ನು ಬಯಸಿದಾಗ ಅಭಿವ್ಯಕ್ತಗೊಳಿಸುವರು ಎಂಬ ವಿವರ ಮುಂದೆ ಬರುವುದು (೨೨/೨೮೫).

ಭೀಮನಿಂದ ಜರಾಸಂಧವಧೆ

ಮಾನಯಿತ್ವಾ ವರಂ ಧಾತುರ್ದಿವಸಾನ್ ದಶ ಪಂಚ ಚ ।
ವಾಸುದೇವಾಜ್ಞಯಾ ಭೀಮಃ ಶತ್ರುಂ ಹಂತುಂ ಮನೋ ದಧೇ ॥ ೧೫೮ ॥

ಅ: ಬ್ರಹ್ಮದೇವರ ವರವನ್ನು ಗೌರವಿಸಿ ಭೀಮಸೇನ ಒಟ್ಟು ಹದಿನೈದು ದಿವಸಗಳ ಕಾಲ ಶ್ರೀಕೃಷ್ಣನ ಆದೇಶದಂತೆ ಯುದ್ಧಮಾಡಿ ಅನಂತರ ಶತ್ರುವಾದ ಅವನನ್ನು ಕೊಲ್ಲಲು ಮನಸ್ಸು ಮಾಡಿದ.

ವಿ: ೧) ಭೀಮ–ಜರಾಸಂಧರ ಯುದ್ಧ ನಡೆದದ್ದು ಒಟ್ಟು ಹದಿನೈದು ದಿವಸಗಳ ಕಾಲ ಎಂಬ ವಿವರ *ಮಹಾಭಾರತದಲ್ಲಿದೆ (೨೩/೩೩). ಅದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವರು.

೨) ಭೀಮನು ಮೊದಲ ಹದಿನೈದು ದಿವಸಗಳ ಕಾಲ ಜರಾಸಂಧನೊಂದಿಗೆ ಕಾದಿದ್ದು ಬ್ರಹ್ಮದೇವರ ವರವನ್ನು ಗೌರವಿಸಲೆಂದು ಮಾತ್ರ; ಅವನಿಗೆ ಹದಿನೈದು ದಿವಸಗಳ ವರೆಗೆ ನಿರಂತರ ಯುದ್ಧದಲ್ಲಿ ಸಾವಿಲ್ಲದಿರಲಿ ಎಂಬ ವರ ಬ್ರಹ್ಮನಿಂದ ಲಭಿಸಿತ್ತು.

೩) ಇಂದ್ರಜಿತ್ ಬ್ರಹ್ಮಾಸ್ತ್ರ ಪ್ರಯೋಗಿಸಿದ್ದ ಪ್ರಸಂಗದಲ್ಲಿ 'ಸ ಮಾನನೀಯ ಏವ ಮೇ' (೭/೩೩) ಎಂದು ಅದನ್ನು ಗೌರವಿಸಿ ಅದಕ್ಕೆ ವಶನಾದಂತೆ ಹನುಮಂತ ನಟಿಸಿದ್ದ ವಿವರ

---

೧೫೮. ವಾಸುದೇವಾಜ್ಞಯಾ ಭೀಮ ಇತ್ಯತ್ರ–
ಶತ್ರೋರ್ಜನ್ಮಮೃತೀ ವಿದ್ವಾನ್ ಜೀವಿತಂ ಚ ನಿರಾಕೃತಮ್ ।
ಪಾರ್ಥಮಾಖ್ಯಾಪಯತ್ ಸ್ವೇನ ಚೇತಸಾ ಚಿಂತಯನ್ ಹರಿಃ ।
ಸ ವಿಚಿಂತ್ಯ ವಧೋಪಾಯಂ ಭೀಮಸ್ಯಾಮೋಘದರ್ಶನಃ ॥
ದರ್ಶಯಾಮಾಸ ವಿಟಪಂ ಪಾಟಯನ್ನಿವ ಸಂಜ್ಞಯಾ ।ಇತಿ ಭಾಗವತೋಕ್ತತ್ವಾತ್ ಸಂಜ್ಞಯಾ ಜ್ಞಾತವಾ।–(ತಿ.)

* ತದ್ವೃತ್ತಂ ತ್ರಯೋದಶ್ಯಾಂ ಸಮವೇತಂ ಮಹಾತ್ಮನೋಃ ।
ಚತುರ್ದಶ್ಯಾಂ ನಿಶಾಯಾಂ ತು ನಿವೃತ್ತೋ ಮಾಗಧಃ ಕ್ಷಮಾತ್ ॥ – ಭಾರತ (ಸಭಾ. ೨೩/೩೦)

ಸುಂದರಕಾಂಡದಲ್ಲಿ ಬಂದಿದೆ. ಅದರಂತೆ ಇಲ್ಲಿಯೂ ಸಹ ಬ್ರಹ್ಮನ ವರವನ್ನು ಮನ್ನಿಸಿ ಗೌರವ ತೋರಿದರು ಎಂದು ತಿಳಿಯಬೇಕು.

೪) ಅಸುರವಿಮೋಹನ ಇಂತಹ ಕಾರ್ಯಗಳ ಮತ್ತೊಂದು ಉದ್ದೇಶ ಎಂದು ತಿಳಿಯಬೇಕು. ಶ್ರೀಮದ್ವರು ತ್ರಿವಿಕ್ರಮ ಪಂಡಿತರೊಂದಿಗೆ ವಾದ ನಡೆಸಿದ್ದು ಹದಿನೈದು ದಿನಗಳ ಕಾಲ ಎಂಬ ಸುಮಧ್ವವಿಜಯದ ಉಲ್ಲೇಖವನ್ನು ಗಮನಿಸಬೇಕು.

೫) ಜರಾಸಂಧನೊಂದಿಗೆ ಹದಿನೈದು ದಿವಸಗಳು ಕಾದಿದ್ದು ಅವನನ್ನು ಕೊನೆಗೆ ಸಂಹರಿಸಲೆಂದು. ತ್ರಿವಿಕ್ರಮಪಂಡಿತರೊಂದಿಗೆ ಅಷ್ಟು ದೀರ್ಘಕಾಲ ವಾದಿಸಿದ್ದು ಅವರ ತಪ್ಪು ತಿಳಿವಳಿಕೆಯನ್ನು ನಿವಾರಿಸಿ ಅವರನ್ನು ಉದ್ಧಾರ ಮಾಡಲು ಎಂಬ ವಿಶೇಷಾಂಶವನ್ನು ಗಮನಿಸಬೇಕು.

ಸ ಪ್ರಣಮ್ಯ ಹೃಷೀಕೇಶಂ ಹರ್ಷಾದಾಶ್ಲಿಷ್ಯ ಫಲ್ಗುನಮ್ ।
ರಿಪುಂ ಜಗ್ರಾಹ ಮಕುಟೇ ವಾರಣಂ ಮೃಗರಾಡಿವ ॥ ೧೫೯ ॥

ಅ: ಭೀಮಸೇನ ಹೃಷೀಕೇಶನಾದ ಕೃಷ್ಣನನ್ನು ಸಂಭ್ರಮದಿಂದ ಸಾಷ್ಟಾಂಗ ವಂದಿಸಿ ಅರ್ಜುನನನ್ನು ಪ್ರೀತಿಯಿಂದ ಆಲಿಂಗಿಸಿ ಸಿಂಹ ಆನೆಯನ್ನು ಹಿಡಿಯುವಂತೆ ಜರಾಸಂಧನನ್ನು ತಲೆಯಲ್ಲಿ ಹಿಡಿದ.

ಎ: ಜರಾಸಂಧನ ಸಂಹಾರಕ್ಕೆ ತೊಡಗಿದ ಭೀಮನ ಕಾರ್ಯವನ್ನು ಸಿಂಹ ಆನೆಯನ್ನು ಹಿಡಿದ ಕಾರ್ಯಕ್ಕೆ ಹೋಲಿಸಿರುವರು.

ಪೃಷ್ಠೇऽಸ್ಯ ಜಾನುಮಾಧಾಯ ಕೂರ್ಮದೇಶಂ ಬಭಂಜ ಹ ।
ಮೃತಿಕಾಲೇ ಪುನರ್ದೇಹಂ ವಿದದಾರ ಯಥಾ ಪುರಾ ॥ ೧೬೦ ॥

---

೧೬೦. ಕೂರ್ಮದೇಶಂ ಬಭಂಜ ಹೇತ್ಯತ್ರ ಕೂರ್ಮದೇಶಂ = ಪೃಷ್ಠಮೂಲಮ್। ಪುರಾ ಜನನಕಾಲೇ ॥ – (ವಾ.)

೧೬೦. ಕೂರ್ಮದೇಶಂ ಪೃಷ್ಠದೇಶಂ ಬಭಂಜ । 'ಪೃಷ್ಠೇ ಸಂಕ್ಷಿಪ್ಯ' ಇತಿ ಭಾರತೇ ।
ಮೃತಿಕಾಲ ಇತಿ । ಮರ್ಮಾಜ್ಞಾನಭ್ರಾಂತಿಃ ಸ್ಯಾದಿತಿ ಭಾವಃ । ವಾಸುದೇವಾದಿತಿ – (ತಾ.)

೧೬೦. ಭೀಮಃ ಪುರಾ ಜನ್ಮಕಾಲೇ ಯಥಾ ಶಕಲದ್ವಯಮಭೂತ್ ತಥಾ ಮೃತಿಕಾಲೇ ಪುನಃ ಶಕಲದ್ವಯಭವನಾರ್ಥಂ ದೇಹಂ ವಿದದಾರೇತಿ । – (ಸ.)

೧೬೦. ಭ್ರಾಮಯಿತ್ವಾ ಶತಗುಣಂ ಜಾನುಭ್ಯಾಂ ಭರತರ್ಷಭ ।
ಬಭಂಜ ಪೃಷ್ಠಂ ಸಂಕ್ಷಿಪ್ಯ ನಿಷ್ಪಿಷ್ಯ ವಿನನಾದ ಚ ।
ಕರೇಣ ಗೃಹೀತ್ವಾ ಚರಣಂ ದ್ವೇಧಾ ಚಕ್ರೇ ಮಹಾಬಲಃ ॥ – ಭಾರತ (೨/೨೪/೬,೭)

೧೬೦. ಕೂರ್ಮದೇಶಂ ಕಟಿಪ್ರದೇಶಮ್ । – (ಜ.)

ಅ: ಅವನ ಬೆನ್ನ ಮೇಲೆ ಮೊಣಕಾಲನ್ನಿರಿಸಿ ಅವನ ಸೊಂಟವನ್ನು ಮುರಿದ; ಸಂಹರಿಸುವಾಗ ಅವನ ದೇಹವನ್ನು ಹುಟ್ಟುವ ಕಾಲದಲ್ಲಿದ್ದಂತೆ ಎರಡು ಭಾಗವಾಗಿ ಸೀಳಿ ಹಾಕಿದ.

ವಿ: ಜರಾಸಂಧನನ್ನು ಸೀಳಿ ಹಾಕಿದ್ದು ಪ್ರಸಿದ್ಧವಿಚಾರ. ಆದರೆ, ಹಾಗೆ ಅವನನ್ನು ಸೀಳುವ ಮುನ್ನ ಅವನ ಬೆನ್ನಿಗೆ ಮೊಣಕಾಲನ್ನೂರಿ ಅವನ ಸೊಂಟವನ್ನು ಮುರಿದು ಹಾಕಿದ ವಿಶೇಷ ವಿವರ ಇಲ್ಲಿದೆ. ಇಲ್ಲಿ ಹಿಂದೆ ಎಂದರೆ ಅವನು ಹುಟ್ಟಿದಾಗ ಎರಡು ಪ್ರತ್ಯೇಕ ಸೀಳುಗಳಾಗಿ ಹುಟ್ಟಿದಂತೆ ಈಗ ಸಾಯುವಾಗಲೂ ಎರಡು ಸೀಳುಗಳಾಗುವಂತೆ ಭೀಮಸೇನ ಮಾಡಿದ ಎಂದರ್ಥ.

ಮರ್ಮಣ್ಯೇವ ನ ಹಂತವ್ಯೋ ಮಯಾऽಯಮಿತಿ ಮಾರುತಿಃ ।
ಸ್ವಪೌರುಷಪ್ರಕಾಶಾಯ ಬಭಂಜೈನಂ ನ ಮರ್ಮಣಿ ॥ ೧೬೧ ॥

ಅ: ನಾನು ಇವನನ್ನು ಮರ್ಮಸ್ಥಾನದಲ್ಲಿ ಹೊಡೆಯಬಾರದು ಎಂದು ಭೀಮಸೇನ ತನ್ನ ಸಾಮರ್ಥ್ಯವನ್ನು ಪ್ರಕಟಿಸಲೆಂದು ಮರ್ಮಸ್ಥಾನದಲ್ಲಿ ಅವನನ್ನು ಹೊಡೆಯಲಿಲ್ಲ. .

ವಿ: ೧) ಭೀಮಸೇನ ಮೊದಲು ಅವನ ಸೊಂಟ ಮುರಿದದ್ದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವರು. ಮರ್ಮಸ್ಥಾನದಲ್ಲಿ ಹೊಡೆದು ಶತ್ರುವನ್ನು ಸಂಹರಿಸುವುದು ಒಮ್ಮೊಮ್ಮೆ ದುರ್ಬಲರಿಗೂ ಆಗುವ ಕೆಲಸ.

೨) ಆದರೆ, ಭೀಮಸೇನ ಜರಾಸಂಧನನ್ನು ಸೊಂಟ ಮುರಿದು ಸೀಳುವ ಮೂಲಕ ತನ್ನದು ಅಗಾಧ ಜಯ, ಮರ್ಮಸ್ಥಾನವಲ್ಲದ ಸ್ಥಳದಲ್ಲಿ ಸಹ ಹೊಡೆದು ಕೊಲ್ಲಬಲ್ಲ ಮಹಾಸಾಮರ್ಥ್ಯ ಎಂದು ನಿರೂಪಿಸಿದ ಎಂದರ್ಥ.

ಭಜ್ಯಮಾನೇ ಶರೀರೇऽಸ್ಯ ಬ್ರಹ್ಮಾಂಡಸ್ಫೋಟಸನ್ನಿಭಃ ।
ಬಭೂವ ರಾವೋ ಯೇನೈವ ತ್ರಸ್ತಮೇತಜ್ಜಗತ್ತ್ರಯಮ್ ॥ ೧೬೨ ॥

ಅ: ಅವನ ದೇಹ ಮುರಿದಾಗ ಬ್ರಹ್ಮಾಂಡ ಸ್ಫೋಟವಾದಂತಹ ಶಬ್ದ ಉಂಟಾಯಿತು. ಅದರಿಂದ ಮೂರು ಲೋಕ ತಲ್ಲಣಿಸಿತು.

ವಿ: ೧) ಜರಾಸಂಧನನ್ನು ಭೀಮಸೇನ ಸಂಹರಿಸಲು ತಿಳಿಯದೇ ಗೊಂದಲಗೊಂಡಾಗ ಕೃಷ್ಣ ಒಂದು ಹುಲ್ಲುಕಡ್ಡಿಯನ್ನು ಮುರಿದು ಹಿಂದುಮುಂದಾಗಿ ಇಟ್ಟು ತೋರಿಸಿ ಅವನನ್ನು ಕೊಲ್ಲುವ ವಿಧಾನವನ್ನು ಸೂಚಿಸಿದ ಎಂದೂ, ಭೀಮ ಹಾಗೆ ಸೀಳಿದಾಗ ಆ ಭಾಗಗಳು ಮತ್ತೆ ಅಂಟಿಕೊಳ್ಳಲು

ಭೀಮಸೇನ ಪುನಃ ಸೀಳಿದ ಎಂದೂ ಆ ರೀತಿ ಒಟ್ಟು ಇಪ್ಪತ್ತೊಂದು ಸಲ ಸೀಳುವ ಕಾರ್ಯ ನಡೆದು ಕೊನೆಗೆ ಜರಾಸಂಧ ಹತನಾದ ಎಂದೂ ಕೆಲವು ಪ್ರತಿಗಳಲ್ಲಿ ಉಲ್ಲೇಖವುಂಟು.

೨) ಆದರೆ, ಪುಣೆಯ ಸಂಶೋಧಿತಪ್ರತಿಯಲ್ಲಿ ಅವುಗಳನ್ನು ಪ್ರಕ್ಷಿಪ್ತವೆಂದು ನಿರಾಕರಿಸಿರು–ವುದರಿಂದ ಶ್ರೀಮದಾಚಾರ್ಯರು ತಿಳಿಸಿರುವ ನಿರ್ಣಯವೇ ಪರಿಪೂರ್ಣ ಎಂದು ಸ್ಫುಟಪಡುವುದು.

೩) ಆದರಂತೆ ಕೃಷ್ಣ ಸೂಚಿಸಿದ ಪ್ರಸಂಗ ಪ್ರಕ್ಷಿಪ್ತವಲ್ಲವೆಂದಾದರೂ ಅದು ಭೀಮಸೇನನಿಗೆ ತಿಳುವಳಿಕೆ ನೀಡಲೆಂದು ಅರ್ಥ ಮಾಡಿಕೊಳ್ಳದೇ, ಅನುಜ್ಞೆ ನೀಡಲೆಂದು ತಿಳಿದುಕೊಂಡಲ್ಲಿ ಯಾವ ಬಾಧಕವೂ ಇರದು.

೪) ಅಲ್ಲದೇ ಇಪ್ಪತ್ತೊಂದು ಬಾರಿ ಸೀಳುವುದೂ ಸಹ ಭೀಮಸೇನನ ಮಾಹಾತ್ಮ್ಯಾತಿ–ಶಯಕ್ಕೇ ದ್ಯೋತಕ. ಒಂದು ಬಾರಿ ಮಾತ್ರವಲ್ಲದೇ ಅನೇಕ ಬಾರಿ ಜರಾಸಂಧನನ್ನು ಸೀಳುವ, ಅಥವಾ ಅನೇಕ ಜನ ಜರಾಸಂಧರನ್ನು ಸೀಳುವ ಮಹಾಸಾಮರ್ಥ್ಯ ಭೀಮನದು ಎಂಬ ತತ್ವವು ಅದರಿಂದ ಸೂಚಿತವಾಗುವುದು.

೫) ಮತ್ತೊಂದು ರೀತಿಯಲ್ಲಿ ಭೀಮಸೇನ ಏಕವಿಂಶತಿಕುಭಾಷ್ಯಗಳನ್ನು ನಿರಾಕರಿಸುವ ಶ್ರೀಮಧ್ವಾಚಾರ್ಯರಾಗಿ ಅವತರಿಸುವುದಕ್ಕೂ ಸೂಚಕವಾಗಿ ಪೋಷಕವೇ ಆಗುವುದು. ಆದ್ದರಿಂದ ಅಂತಹ ಕಲ್ಪನೆಗಳಿಂದ ಬಾಧಕ ಪ್ರತಿವಾದಿಗಳಿಗೇ ಹೊರತು ತತ್ವವಾದಿಗಳಿಗಲ್ಲ ಎಂದು ತಿಳಿಯಬೇಕು. ಜರಾಸಂಧನ ದೇಹದ ಸ್ಫೋಟಕ್ಕೆ ಉಂಟಾದ ಶಬ್ದದಿಂದ ಪಾತಾಳ ಲೋಕದಲ್ಲಿದ್ದ ಅಸುರ ಸ್ತ್ರೀಯರ ಗರ್ಭಗಳೂ ಸಹ ಸ್ರಾವಗೊಂಡವು ಎಂಬ ಉಲ್ಲೇಖ ಮಹಾಭಾರತದಲ್ಲಿದೆ.

ಜರಾಸಂಧ ವಧೆಯಿಂದ ಕೃಷ್ಣನ ವಿಶೇಷಾನುಗ್ರಹ

ನಿಹತ್ಯ ಕೃಷ್ಣಸ್ಯ ರಿಪುಂ ಸ ಭೀಮಃ
ಸಮರ್ಪಯಾಮಾಸ ತದರ್ಚನಂ ಹರೇಃ ।
ಕೃತಾಂ ಹಿ ಭೀಮೇನ ಸಮರ್ಚನಾಂ ತಾಂ
ಸಮಕ್ಷಮಾದಾತುಮಿಹಾಗತೋ ಹ್ಯಜಃ ॥ ೧೬೩ ॥

---

೧೬೨. ಆಭವತ್ ತುಮುಲೋ ನಾದಃ ಸರ್ವಪ್ರಾಣಿಭಯಂಕರಃ ।
ವಿತ್ರೇಸುರ್ಮಾಗಧಾಃ ಸರ್ವೇ ಸ್ತ್ರೀಣಾಂ ಗರ್ಭಾಶ್ಚ ಸುಸ್ರುವುಃ ॥ – ಭಾರತ (ಸಭಾ. ೨೪/೮)

ತೇ ವೈ ಗದೇ ಭುಜಜವೇನ ನಿಪಾತ್ಯಮಾನೇ ಅನ್ಯೋನ್ಯತೋಽಂಸಕಟಿಪಾದಕರೋರುಜತ್ರೂನ್ ।
ಚೂರ್ಣೀಬಭೂವತುರುಪೇತ್ಯ ಯಥಾರ್ಕಶಾಖೇ ಸಂಯುಧ್ಯತೋರ್ದ್ವಿರದಯೋರಿವ ದೀಪ್ತಸಂಘ್ಯೋಃ ॥
– ಭಾಗವತ (೧೦/೭೨/೩೭)

ಅ: ಕೃಷ್ಣನ ವೈರಿಯಾದ ಜರಾಸಂಧನನ್ನು ಭೀಮಸೇನ ಸಂಹರಿಸಿ ಕೃಷ್ಣನಿಗೆ ಪೂಜೆಯನ್ನಾಗಿ ಅದನ್ನು ಸಮರ್ಪಿಸಿದ. ಭೀಮಸೇನ ಮಾಡುವ ಆ ಮಹಾಪೂಜೆಯನ್ನು ಪ್ರತ್ಯಕ್ಷ ಸ್ವೀಕರಿಸ-ಲೆಂದೇ ಕೃಷ್ಣ ತಾನು ಅವನೊಡನೆ ಬಂದಿದ್ದ.

ಎ: ೧) ಜರಾಸಂಧನ ಸಂಹಾರಕ್ಕೆ ಭೀಮನನ್ನು ಮಾತ್ರ ಕರೆದೊಯ್ಯದೇ ಅರ್ಜುನನ್ನು ಕರೆದೊಯ್ದದ್ದಕ್ಕೆ ಕಾರಣವನ್ನು ಈ ಮೊದಲು ತಿಳಿಸಿರುವರು. ಈ ಶ್ಲೋಕದಲ್ಲಿ ಕೃಷ್ಣ ಅವರಿಬ್ಬರನ್ನು ಮಾತ್ರ ಕಳಿಸದೇ ಜೊತೆಯಲ್ಲಿ ತಾನೂ ಬಂದಿದ್ದರ ಕಾರಣವನ್ನು ತಿಳಿಸಿರುವರು.

೨) ಭೀಮಸೇನ ಹೀಗೆ ತನ್ನ ಪರಮ ದ್ವೇಷಿಯಾದ ಜರಾಸಂಧನನ್ನು ಸಂಹರಿಸಿ ಕೃಷ್ಣಾರ್ಪಣವೆಂದು ಸಮರ್ಪಿಸಿದಾಗ ಆ ಪೂಜೆಯನ್ನು ಸಮ್ಮುಖದಲ್ಲಿದ್ದೇ ಸ್ವೀಕರಿಸಲೆಂದು ಕೃಷ್ಣ ಹಾಗೆ ಬಂದಿದ್ದ ಎಂದು ಭಾವ. ಜರಾಸಂಧವಧೆ ಕೃಷ್ಣನಿಗೆ ಅತ್ಯಂತಪ್ರಿಯ, ಜರಾಸಂಧ ದುರ್ಮತದ ಸಂಕೇತವಾಗಿದ್ದು ಅವನ ವಧೆ ದುರ್ಮತಖಂಡನೆಗೆ ಸಂಕೇತವಾಗಿರುವುದೇ ಇದಕ್ಕೆ ಕಾರಣ.

೩) ದುರ್ಮತಖಂಡನೆ ಸನ್ಮತಸ್ಥಾಪನೆಗಿಂತ ಭಗವಂತನಿಗೆ ಹೆಚ್ಚು ಪ್ರಿಯ ಎಂಬ ವಿಶೇಷಾಂಶ ಈಶಾವಾಸ್ಯೋಪನಿಷತ್ತಿನಲ್ಲಿ ಬಂದಿದೆ :

ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ॥ – (ಶ್ಲೋ. ೯)

ಭೀಮ ಮಾಡಿದ ಈ ಪೂಜೆಯನ್ನು ಹಾಗೆ ಸ್ವೀಕರಿಸುವ ಮೂಲಕ ಅವನು ಮಾಡುವ ಸಕಲ ಕಾರ್ಯಗಳನ್ನೂ ತಾನು ಹಾಗೆ ಸಾಕ್ಷಾತ್ತಾಗಿ ಸ್ವೀಕರಿಸುವನು ಎಂಬುದನ್ನೂ ಸೂಚಿಸಿದ.

೪) ಮುಂದೆ ದುಶ್ಶಾಸನ, ದುರ್ಯೋಧನರ ಸಂಹಾರ ಸಮಯದಲ್ಲೂ ಕೃಷ್ಣ ಪ್ರತ್ಯಕ್ಷವಾಗಿಯೇ ಇದ್ದು ಭೀಮನ ಆ ಪೂಜೆಯನ್ನು ಸ್ವೀಕರಿಸುವನು ಎಂಬುದನ್ನು ಗಮನಿಸಬೇಕು.

೫) ಭೀಮನಿಂದ ಮಾಡಲ್ಪಡುವ ಪೂಜೆಯನ್ನು ಶ್ರೀಹರಿ ಹೀಗೆ ಸಾಕ್ಷಾತ್ತಾಗಿ ಸ್ವೀಕರಿಸು-ವುದರಿಂದ ಪ್ರತಿಯೊಬ್ಬರೂ ತಾವು ಮಾಡುವ ಸಕಲ ಕರ್ಮಗಳನ್ನೂ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಎಂದು ವಾಯುದೇವರ ಮೂಲಕವೇ ಸಮರ್ಪಿಸಬೇಕು ಎಂಬ ತತ್ವವೂ ಇದರಿಂದ ಸೂಚಿತ :

'ವಾಯೌ ಮುಖ್ಯಧಿಯಾ' – (ಭಾಗವತ)
'ತಸ್ಮಿನ್ನಪೋ ಮಾತರಿಶ್ವಾ ದಧಾತಿ' – ಈಶಾವಾಸ್ಯೋಪನಿಷತ್ (ಶ್ಲೋ. ೪)
ಮಾರುತ್ಯೇವ ಯತಶ್ಚೇಷ್ಟಾ ಸರ್ವಾ ತಾಂ ಹರಯೇಽರ್ಪಯೇತ್॥ –(ಭಾಷ್ಯ)

ಸ್ವೀಕೃತ್ಯ ಪೂಜಾಂ ಚ ವೃಕೋದರಸ್ಯ
ದೃಢಂ ಸಮಾಶ್ಲಿಷ್ಯ ಚ ತಂ ಜನಾರ್ದನಃ ।
ಪ್ರೀತೋ ನಿತಾಂತಂ ಪುನರೇವ ಕೃಷ್ಣಂ
ನನಾಮ ಭೀಮಃ ಪ್ರಣತೋಽರ್ಜುನೇನ ॥ ೧೬೪ ॥

ಅ: ಭೀಮ ಮಾಡಿದ ಆ ಪೂಜೆಯನ್ನು ಕೃಷ್ಣ ಸ್ವೀಕರಿಸಿ ಗಾಢವಾಗಿ ಆಲಿಂಗಿಸಿಕೊಂಡು ಬಹಳ ಪ್ರೀತನಾದ. ಭೀಮ ಕೃಷ್ಣನನ್ನು ಮತ್ತೆ ಮತ್ತೆ ನಮಸ್ಕರಿಸಿದ. ಅರ್ಜುನ ಭೀಮನಿಗೆ ಸಾಷ್ಟಾಂಗವೆರಗಿದ.

ವಿ: ೧) ಭೀಮ ಮಾಡಿದ ಆ ಜರಾಸಂಧ ವಧೆ ಕೃಷ್ಣನಿಗೆ ಮುಂದೆ ನಡೆದ ರಾಜಸೂಯಯಾಗ–ಕ್ಕಿಂತ ಹೆಚ್ಚು ಪ್ರಿಯವಾದ ಕಾರ್ಯವಾಗಿತ್ತು ಎಂಬುದಾಗಿ ವಾಯುಸ್ತುತಿಯಲ್ಲಿ ವಿವರಿಸಿರುವರು.

೨) ಚೂಡಾಮಣಿಯನ್ನಿತ್ತ ಹನುಮಂತನನ್ನು ಶ್ರೀರಾಮರೂಪದಿಂದ ಆಲಿಂಗಿಸಿಕೊಂಡಂತೆ ಜರಾಸಂಧನನ್ನು ಕೊಂದ ಭೀಮನನ್ನು ಕೃಷ್ಣ ಆಲಿಂಗಿಸಿಕೊಂಡ. ಇದರಿಂದ ಶ್ರೀಹರಿಯ ಭೂಭಾರ–ಹರಣ ಕಾರ್ಯದಲ್ಲಿ ಶ್ರೀವಾಯುದೇವರು ಪ್ರಥಮಾಂಗರು ಎಂಬುದು ಸ್ಫುಟಪಡುವುದು:

'ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ' – (೨/೧೬)

೩) ಅರ್ಜುನ ಭೀಮನಿಗೆ ನಮಸ್ಕರಿಸಿದ್ದು ಅವನು ತನಗಿಂತ ತುಂಬಾ ಮಿಗಿಲು ಎಂಬುದನ್ನು ಮತ್ತೊಮ್ಮೆ ಮನಗಂಡಿದ್ದಕ್ಕೆ ಸಂಕೇತವಾಯಿತು ಎಂದು ತಿಳಿಯಬಹುದು.

---

೧೬೪. ನಿರ್ಮ್ಯದ್ಧ್ವನ್ಹತ್ಯಯತ್ನಂ ವಿಜರವರ ಜರಾಸಂಧಕಾಯಾಸ್ಥಿಸಂಧೀನ್
ಯುದ್ಧೇ ತ್ವಂ ಸ್ವದ್ಧರೇ ವಾ ಪಶುಮಿವ ದಮಯನ್ ವಿಷ್ಣುಪಕ್ಷದ್ವಿಡೀಶಮ್ ।
ಯಾವತ್ ಪ್ರತ್ಯಕ್ಷಭೂತಂ ನಿಖಿಲಮಖಭುಜಂ ತರ್ಪಯಾಮಾಸಿಥಾಸೌ
ತಾವತ್ಯಾಯೋಜಿ ತೃಪ್ತ್ಯಾಕಿಮು ವದ ಭಗವನ್ ರಾಜಸೂಯಾಶ್ವಮೇಧೇ ॥ – ವಾಯುಸ್ತುತಿ (ಶ್ಲೋ. ೨೩)

೧೬೪. ದ್ರಪ್ಚುಕಾಮಾನ್ ಕೃಷ್ಣಪಾದೌ ಯಪ್ಚುಕಾಮಂ ಶಿವಾಧ್ವರೇ ।
ತುಷ್ಟಯೇ ವೈಷ್ಣವಾನಾಂ ಯೋ ಭ್ರಷ್ಟಂ ಮುಷ್ಟಿಭರರ್ದಯತ್ ॥
ಅಜರಂ ಯೋ ಜರಾಸಂಧಂ ಜಘಾನಾಚ್ಯುತದೂಷಕಮ್ ।
ದುರ್ಯೋಧನಸ್ಯ ನಿಧನಂ ಯಶ್ಚಕ್ರೇ ಕೃಷ್ಣವೈರಿಣಮ್ ॥
ಭೂಭಾರಹರಣೋದ್ಯುಕ್ತಶ್ರೀಭರ್ತುಃ ಪ್ರೀತಯೇ ಚಮೂಮ್ ।
ಮೃಧೇ ಸುಗದಯಾ ಯೋಽಸಾವಜೀಘನದನೇಕಶಃ ॥ – ಸ. ಭಾ. ವಿ. (೬/೨೯-೩೧)

ಜಗ್ಮುಃ ಸುರಾಶ್ಚಾತಿತರಾಂ ಪ್ರಹೃಷ್ಟಾ
ಬ್ರಹ್ಮಾದಯೋ ದೀನತರಾಶ್ಚ ದೈತ್ಯಾಃ ।
ಬಲಾದುಮೇಶಸ್ಯ ವರೇ ಪ್ರಭಗ್ನೇ
ವೃಕೋದರೇಣಾಚ್ಯುತಸಂಶ್ರಯೇಣ ॥ ೧೬೫ ॥

ಅ: ಶ್ರೀಕೃಷ್ಣನ ಅನುಗ್ರಹದಿಂದಾಗಿ ಭೀಮನಿಂದ ಬಲಾತ್ಕಾರದಿಂದ ಶಿವನ ವರ ಹಾಗೆ ಭಂಗವಾದಾಗ ಬ್ರಹ್ಮಾದಿ ದೇವತೆಗಳೆಲ್ಲಾ ಅತ್ಯಂತ ಸಂತುಷ್ಟರಾಗಿ ತೆರಳಿದರು. ದೈತ್ಯರೆಲ್ಲಾ ಅತ್ಯಂತ ದುಃಖಿತರಾಗಿ ತೆರಳಿದರು.

ಸಹದೇವನಿಗೆ ರಕ್ಷಣೆ

ಸುತೋ ಯಯೌ ಶರಣಂ ತಾನ್ ರಮೇಶ-
ಭೀಮಾರ್ಜುನಾನ್ ಸಹದೇವೋಽಸ್ಯ ಧೀಮಾನ್ ।
ರಥಂ ಸ್ವಸಾರಂ ಚ ದದೌ ಸ ಮಾರುತೇ-
ರ್ನನಾಮ ಕೃಷ್ಣಂ ಪರಯಾ ಚ ಭಕ್ತ್ಯಾ ॥ ೧೬೬ ॥

ಅ: ಜರಾಸಂಧನ ಮಗ ಸಹದೇವ ಬುದ್ಧಿವಂತ; ಅವನು ಕೃಷ್ಣ, ಭೀಮ ಹಾಗೂ ಅರ್ಜುನರನ್ನು ಶರಣುಹೊಕ್ಕ. ರಥವನ್ನು, ತನ್ನ ತಂಗಿಯನ್ನು ಭೀಮನಿಗೆ ಸಮರ್ಪಿಸಿದ. ಕೃಷ್ಣನನ್ನು ಪರಮ ಭಕ್ತಿಯಿಂದ ನಮಸ್ಕರಿಸಿದ.

ವಿ: ೧) ಅವಿವೇಕಿಯಾದ ತಂದೆ ಜರಾಸಂಧನಂತೆ ಕೃಷ್ಣ ಭೀಮರ ಮೇಲೆ ದ್ವೇಷ ಮಾಡದೆ ಅತ್ಯಂತ ಭಕ್ತಿಯಿಂದ ಅವರಿಗೆ ಶರಣಾಗುವ ಮೂಲಕ ಸಹದೇವ ತಾನು ಬುದ್ಧಿವಂತ ಎಂಬುದನ್ನು ನಿರೂಪಿಸಿದ ಎಂದು ತಿಳಿಯಬೇಕು.

೨) ತಂದೆ ಮೃತನಾದಾಗ ಅದಕ್ಕಾಗಿ ದುಃಖಿಸದೆ ಶ್ರೀಹರಿಗೆ ಶರಣಾದ ಇವನ ರೀತಿ ಹಿರಣ್ಯಕಶಿಪು ಮೃತನಾದಾಗ ದುಃಖಿಸದೆ ನರಹರಿಗೆ ಶರಣಾದ ಪ್ರಹ್ಲಾದನ ರೀತಿಯನ್ನು ಹೋಲುವುದು ಎಂಬುದನ್ನು ಗಮನಿಸಬೇಕು.

೩) ಇಲ್ಲಿ ಅವನು ಭಕ್ತಿಯಿಂದ ನಮಸ್ಕರಿಸಿದ ಎಂದು ಹೇಳುವ ಮೂಲಕ ಅವನು ಸ್ವರೂಪತಃ ಸಾತ್ವಿಕ ಎಂಬುದನ್ನೂ ತಿಳಿಸಿರುವರು. ಹೀಗೆ ದೇವತೆಗಳಾದ ಕೃಷ್ಣಾದಿಗಳೊಂದಿಗೆ ಜೊತೆಗೂಡಿದ್ದರಿಂದ ಸಹದೇವ (ದೇವೈಃ ಸಹ ವರ್ತತೇ ಇತಿ ಸಹದೇವಃ) ಎಂಬ ಅವನ ಹೆಸರು ಸಾರ್ಥಕವಾಯಿತು ಎಂಬುದನ್ನೂ ಗಮನಿಸಬೇಕು.

ಸಹದೇವನಿಂದ ರಥಸಮರ್ಪಣೆ

ರಥೋ ಹ್ಯಸೌ ವಸುನಾ ವಾಸುದೇವಾ-
ಚ್ಛಕ್ರಾಂತರಾऽऽಪ್ತೋ ವಸುವಂಶಜತ್ವಾತ್ ।
ಜರಾಸುತಸ್ಯಾಸ ವೃಕೋದರಸ್ತಂ
ಹರೇ ರಥಂ ಪ್ರಾರ್ಪಯಾಮಾಸ ತಸ್ಮೈ ॥ ೧೬೭ ॥

ಅ: ಆ ರಥ ಶ್ರೀಹರಿಯಿಂದ ಇಂದ್ರನ ಮೂಲಕ ವಸುಚಕ್ರವರ್ತಿಗೆ ನೀಡಲ್ಪಟ್ಟಿತ್ತು. ವಸುವಿನ ವಂಶದಲ್ಲಿ ಹುಟ್ಟಿದ್ದರಿಂದ ಜರಾಸಂಧನಿಗೂ ಅದು ದೊರೆತಿತ್ತು. ಭೀಮಸೇನ ಹರಿಯ ರಥವನ್ನು ಶ್ರೀಹರಿಯಾದ ಕೃಷ್ಣನಿಗೇ ಸಮರ್ಪಿಸಿದ.

ವಿ: ಇಲ್ಲಿ ವಸು ಎಂದರೆ ಉಪರಿಚರ ವಸು ಎಂದರ್ಥ. ಜರಾಸಂಧ ಆ ವಂಶದಲ್ಲಿ ಜನಿಸಿದರಿಂದ ಆ ರಥ ಅವನ ವಶಕ್ಕೆ ಬಂದಿತ್ತು. ಭೀಮಸೇನ ಅದನ್ನು ಶ್ರೀಕೃಷ್ಣನಿಗೆ ಅರ್ಪಿಸಿದ. ಹೀಗೆ ಸಕಲ-ವನ್ನೂ ಶ್ರೀಹರಿಗೆ ಅರ್ಪಿಸುವುದು ವಾಯುದೇವರ ಸ್ವಭಾವ.

•

ಸಹದೇವನ ಪತ್ನಿಯಾಗಿ ಸಹದೇವನ ತಂಗಿ

ಕೃಷ್ಣೋऽಸ್ಮರದ್ಗರುಡಂ ಸ ಧ್ವಜೇऽಭೂ-
ದ್ರಥಂ ಕೃಷ್ಣೋऽಥಾರುಹತ್ ಪಾಂಡವಾಭ್ಯಾಮ್।
ಭೀಮಃ ಕನ್ಯಾಂ ಸಹದೇವಸ್ಯ ಹೇತೋಃ
ಸಮಗ್ರಹೀದನುಜಸ್ಯಾತ್ಮನಃ ಸ ॥ ೧೬೮ ॥

---

೧೬೭. ರಥೋ ಹ್ಯಸೌ ವಸುನೇತ್ಯತ್ರ ಶಕ್ರಾಂತರಾ = ಇಂದ್ರವ್ಯವಧಾನೇನ ವಾಸುದೇವಾತ್ ವಸುನಾ = ವಸುಚಕ್ರ-ವರ್ತಿನಾ ಆಪ್ತಃ ಪ್ರಾಪ್ತೋ ಹಿ ॥ – (ವಾ.)

೧೬೭. ವಾಸುದೇವಾದಿತಿ । ತಾರಕಾಸುರಸಂಗ್ರಾಮೇ ವಾಸುದೇವಾದಿಂದ್ರೇಣ ಪ್ರಾಪ್ತಂ ರಥಮಿಂದ್ರೋ ವಸುರಾಜ್ಞೇऽದಾದಿತಿ ಭಾವಃ । 'ಶಕ್ರವಿಷ್ಣೂ ಹಿ ಸಂಗ್ರಾಮೇ ಚೇರತುಸ್ತಾರಕಾಮಯೇ । ರಥೇನ ಯೇನ ತಂ ಕೃಷ್ಣ ಉಪಾರುಹ್ಯ ಯಯೌ ತದಾ ॥' ಇತಿ ಭಾರತೇ (೨/೨೪/೧೭)। – (ತಾ.)

೧೬೭ ಯಂ ಲೇಭೇ ವಾಸವಾದ್ ರಾಜಾ ವಸುಸ್ತಸ್ಮಾದ್ ಬೃಹದ್ರಥಃ ।
ಬೃಹದ್ರಥಾತ್ ಕ್ರಮೇಣೈವ ಪ್ರಾಪ್ತೋ ಬಾರ್ಹದ್ರಥಂ ನೃಪ ॥ – ಭಾ. ೨/೨೪/೨೮

೧೬೮. ಶಕ್ರಾಂತರಾ ಶಕ್ರವ್ಯವಧಾನೇನ ಅಂತರೇತ್ಯವ್ಯಯಮ್ । – (ಜ.)

ಅ: ಕೃಷ್ಣನು ಗರುಡನನ್ನು ನೆನೆದ; ಅವನು ಧ್ವಜದಲ್ಲಿ ಬಂದು ಕುಳಿತ. ಕೃಷ್ಣ ಭೀಮಾರ್ಜುನ-ರೊಂದಿಗೆ ರಥವನ್ನೇರಿದ. ಭೀಮನು ಕನ್ಯೆಯನ್ನು ತಮ್ಮನಾದ ಸಹದೇವನಿಗೋಸ್ಕರವಾಗಿ ಸ್ವೀಕರಿಸಿದ.

ವಿ: ೧) ಸಹದೇವ ನೀಡಿದ ರಥವನ್ನು ಭೀಮಸೇನ ಕೃಷ್ಣನಿಗೆ ಅರ್ಪಿಸಿದರೆ, ಅವನ ತಂಗಿಯನ್ನು ಸಹದೇವನಿಗಾಗಿ ಸ್ವೀಕರಿಸಿದ. ತನಗಾಗಿ ಮಾತ್ರ ಏನನ್ನೂ ಇಟ್ಟುಕೊಳ್ಳಲೇ ಇಲ್ಲ; ಇದು ಭೀಮನ ಮತ್ತೊಂದು ಹಿರಿಮೆ.

೨) ರಥವನ್ನು ಕೃಷ್ಣನಿಗೆ ನೀಡಲು ಅದು ಅವನ ರಥವಾಗಿದ್ದಂತೆ, ಸಹದೇವನ ತಂಗಿಯನ್ನು ಸಹದೇವನಿಗೆ ಸ್ವೀಕರಿಸಲು ಅವಳು ಅಶ್ವಿನೀದೇವತೆಗಳ ಪತ್ನಿಯಾದ ಉಷೆಯ ಅವತಾರ–ವಾಗಿದ್ದುದೇ ಕಾರಣ. ಇದು ಭೀಮನ ಶುದ್ಧ ಭಾಗವತ ಧರ್ಮಕ್ಕೆ ಮತ್ತೊಂದು ನಿದರ್ಶನ ಎಂದು ತಿಳಿಯಬೇಕು. ಸಹದೇವನ ತಂಗಿಯನ್ನು ತನ್ನ ತಮ್ಮನಾದ ಸಹದೇವನಿಗೆ ಸ್ವೀಕರಿಸಿದ್ದು ಭೀಮನ ಮತ್ತೊಂದು ಹಿರಿಮೆ.

೩) ಈ ಸಹದೇವ ಪತ್ರತಾಪನ ಅವತಾರವಾದರೆ, ಮಾದ್ರೇಯನಾದ ಆ ಸಹದೇವ ಅಶ್ವಿನೀ ದೇವತೆಗಳಲ್ಲಿ ಒಬ್ಬನ ಅವತಾರ ಎಂಬುದನ್ನು ಗಮನಿಸಬೇಕು. ಭೀಮಸೇನ ಹೀಗೆ ತನಗೆ ನೀಡಿದ ಕನ್ಯೆಯನ್ನು ತನ್ನ ತಮ್ಮನಿಗಾಗಿ ಸ್ವೀಕರಿಸಿದ ಕಾರ್ಯ ಮುಂದೆ ಅರ್ಜುನನಿಗೆ ವಿರಾಟ ರಾಜ ಅವನಿಗೆ ನೀಡಿದ ಉತ್ತರೆಯನ್ನು ತನ್ನ ಮಗನಾದ ಅಭಿಮನ್ಯುವಿಗೆ ಸ್ವೀಕರಿಸಲು ಪ್ರೇರಣೆ ನೀಡಿತೆಂದು ಭಾವಿಸಬಹುದು: 'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ'(ಗೀತಾ ೩/೨೧).

೪) ಧರ್ಮರಾಜ ಶಿಶುಪಾಲಪುತ್ರಿ ದೇವಕಿಯನ್ನು, ಭೀಮಸೇನ ಕಾಳಿಯನ್ನು, ಅರ್ಜುನ ಸುಭದ್ರೆ, ಚಿತ್ರಾಂಗದೆಯರನ್ನು ವಿವಾಹವಾಗಿದ್ದಂತೆ, ನಕುಲ ಸಹದೇವರು ಪ್ರತ್ಯೇಕ ವಿವಾಹ–ವಾಗಿದ್ದರು. ಅದರಲ್ಲಿ ಸಹದೇವನ ಹೆಂಡತಿ ಈ ಜರಾಸಂಧನ ಪುತ್ರಿ.

ನಕುಲಸ್ಯಾದಾನ್ಮದ್ರರಾಜೋ ಹಿ ಪೂರ್ವಂ
ಸ್ವೀಯಾಂ ಕನ್ಯಾಂ ಸಾ ತಥೈಷಾऽಪ್ಯುಷಾ ಹಿ।
ಏಕಾ ಪೂರ್ವಂ ತೇऽಶ್ವಿನೋಶ್ಚೈವ ಭಾರ್ಯಾ
ಯಮೌ ರೇಮಾತೇ ಯದುಷಾ ಅಶ್ವಿಭಾರ್ಯಾ ॥ ೧೬೯ ॥

ಅ: ನಕುಲನಿಗೆ ಹಿಂದೆಯೇ ಶಲ್ಯರಾಜ ತನ್ನ ಮಗಳನ್ನು ಧಾರೆಯೆರೆದಿದ್ದ. ಅವಳಂತೆ ಇವಳು ಉಷಾದೇವಿಯೇ, ಇವಳೂ ಅಶ್ವಿನೀದೇವತೆಗಳ ಪತ್ನಿಯೇ. ನಕುಲಸಹದೇವರು ಅವರಿಬ್ಬ-ರೊಂದಿಗೆ ರಮಿಸಿದರು. ಈ ಉಷೆ ಅಶ್ವಿನೀದೇವತೆಗಳ ಪತ್ನಿ.

ವಿ: ೧) ಮದ್ರರಾಜಪುತ್ರಿ ವಿಜಯಾ ಎಂದು ಮಹಾಭಾರತದ ಪ್ರಚಲಿತಪಾಠ. ಸಹದೇವಪತ್ನಿ ವಿಜಯಾ ಪಾರ್ವತಿ ಎಂದು ಭಾಗವತ. ಈ ಪಾರ್ವತಿ ತಿಲೋತ್ತಮೆಯ ಅವತಾರ ಎಂಬ ಮಾತು ಮುಂದೆ ಬಂದಿದೆ (೨೨/೫೬).

೨) ಅನಿರುದ್ಧನ ಹೆಂಡತಿ ಉಷೆ ಬೇರೆ, ಅಶ್ವಿನೀ ದೇವತೆಗಳ ಹೆಂಡತಿ ಉಷೆ ಬೇರೆ. ಅನಿರುದ್ಧಪತ್ನಿ ಉಷಾ – ಆಕಾರಾಂತ ಶಬ್ದ; ಅಶ್ವಿನೀ ದೇವತೆಗಳ ಪತ್ನಿ ಉಷಸ್ – ಸಕಾರಾಂತ ಶಬ್ದ.

ತತಃ ಕೃಷ್ಣಾಯಾಮಗ್ರಜಭ್ರಾತೃಭಾರ್ಯಾ-
ವೃತ್ತಿಂ ಹಿ ತೌ ಚಕ್ರತುರ್ಮಾದ್ರಿಪುತ್ರೌ ।
ಜರಾಸುತಸ್ಯಾತ್ಮಜಃ ಕೇಶವಾದೀನ್
ರತ್ನೈಃ ಸಮಭ್ಯರ್ಚ್ಯ ಯಯಾವನುಜ್ಞಯಾ ॥ ೧೭೦ ॥

---

೧೬೯. ಅಶ್ವಿಭಾರ್ಯಾ ಉಷಾಃ ಸಕಾರಾಂತೋಷಸ್‌ಶಬ್ದವಾಚ್ಯಾ ಯತ್ ಯಸ್ಮಾತ್ ತಸ್ಮಾತ್ ಸಾ ಆಕಾರಾಂತೋಷಾಶಬ್ದವಾಚ್ಯಾಯಾ ಅನಿರುದ್ಧಭಾರ್ಯಾಯಾ ಅನ್ಯೇತಿ ವಾಕ್ಯಶೇಷಃ। – (ವೇ.)

೧೬೯. ನಕುಲಸ್ಯಾದಾನ್ಮದ್ರರಾಜ ಇತ್ಯತ್ರ ಪೂರ್ವಂ= ಸಹದೇವವಿವಾಹಾತ್ಪೂರ್ವಂ ಮದ್ರರಾಜಃ ನಕುಲಸ್ಯ ಸ್ವೀಯಾಂ ಕನ್ಯಾಂ ಅದಾದ್ಧಿ । ಸಾ ಮದ್ರರಾಜಪುತ್ರೀ । ತಥಾ ಏಷಾ । ಜರಾಸಂಧಪುತ್ರೀತಿ ತೇ ಉಭೇ ಚ ಪೂರ್ವಂ ಮೂಲರೂಪೇ ಅಶ್ವಿನೋಶ್ಚ ಭಾರ್ಯಾ ಏಕಾ ಉಷೈವ ಹಿ ತಾಭ್ಯಾಂ ಯಮೌ ರೇಮಾತೇ। ನನೂಷಾ-ನಾಮ್ನ್ಯನಿರುದ್ಧಪತ್ನೀ । ತಸ್ಯಾಃ ಕಥಮಶ್ವಿಭಾರ್ಯಾತ್ವಮಿತ್ಯತ ಆಹ। ಯದುಷಾ ಇತಿ । ಯತ್= ಯಸ್ಮಾತ್ಕಾರಣಾತ್ । ಅಶ್ವಿಭಾರ್ಯಾ ಉಷಾಃ ಉಷಃಕಾಲಾಭಿಮಾನಿತ್ವಾತ್ । ಸಕಾರಾಂತೋಷಃ ಶಬ್ದವಾಚ್ಯಾ ಅನಿರುದ್ಧಭಾರ್ಯಾ ತು ಆಕಾರಾಂತೋಷಾಶಬ್ದವಾಚ್ಯೇತಿ ತಯೋರ್ವಿಭಾಗಃ ಇತಿ ಭಾವಃ। ಅತೋ ನ ಪೌನರುಕ್ತ್ಯಮಿತಿ ಜ್ಞೇಯಮ್। ಅತ ಏವ ''ಅನಿರುದ್ಧಶ್ಚ ತತ್ಪೂನುರುಷಾರಮಣ ಉಚ್ಯತೇ'' ಇತ್ಯನುಶಾಸನಮ್ ॥ – (ವಾ.)

೧೬೯. ಸಕಾರಾಂತೋಷಃ ಶಬ್ದವಾಚ್ಯಾಯಾಃ ಉಷಸಃ ಆಕಾರಾಂತೋಷಾಶಬ್ದವಾಚ್ಯಾSನಿರುದ್ಧಭಾರ್ಯಾ ಅನ್ಯಾ ಇತಿ ವಾಕ್ಯಶೇಷಃ। – (ಜ.)

೧೬೯. ನನು ನಕುಲಸ್ಯಾಗ್ರಜತ್ವಾತ್ ತದರ್ಥಂ ಸ್ವಾರ್ಥಂ ವಾ ಕನ್ಯಾಮಗೃಹೀತ್ವಾ ಕಿಮರ್ಥಂ ಭೀಮಃ ಸಹದೇವಾರ್ಥೇSಗ್ರಹೀದಿತ್ಯತ ಆಹ ಯದುಷೇತಿ। ನನ್ವೇಕಸ್ಯಾ ಉಷಸಃ ಕಥಮುಭಯ ಭಾರ್ಯಾತ್ವಮಿತ್ಯತ ಆಹ ಏಕೇತಿ। ಯತಃ ಪೂರ್ವಮೇಕೈವೋಷಾ ಅಶ್ವಿನೋರ್ನೀತಭಾರ್ಯಾ ಅತಸ್ತೇ ಯಮೌ ರೇಮಾತೇ। ಯದ್ವಾ ನನೂಷಾ ಅನಿರುದ್ಧಭಾರ್ಯಾ ಕಥಮಶ್ವಿಭಾರ್ಯೇತಿ ಶಂಕಾಂ ಸ್ಪಷ್ಟಂ ಪದವಿಭಾಗ ಕರಣೇನ ವಾರಯತಿ ಯದಿತಿ । ಯದ್ ಯಸ್ಮಾತ್ ಉಷಾಃ ಸಕಾರಾಂತೋಷಃ ಶಬ್ದವಾಚ್ಯಾಶ್ವಿಭಾರ್ಯಾ ಅತೋSತ್ರ ನಾನಿರುದ್ಧಭಾರ್ಯೋಚ್ಯತೇ । ಉಷಾ ಹಿ ಇತ್ಯತ್ರಾಪಿ 'ಉಷಾಃ ಹಿ' ಇತಿ ಪದವಿಭಾಗ ಇತಿಭಾವಃ । ಯದ್ಯಪಿ ರಾತ್ರಿಮಾನಮಜಾನದ್ಭಿಸ್ತತೋ ನಾಮೇತ್ಯುಷಾ ಸ್ಪ್ರತೇತಿ ಛಾಂದೋಗ್ಯಭಾಷ್ಯೇ, ಸೂಷಾ ಚ ಮೇ ಸುದಿನಂ ಚ ಮೇ ಇತಿ ಶ್ರುತೌ ಚಾಶ್ವಿಭಾರ್ಯಾಯಾಮಷ್ಯಾ-ಕಾರಾಂತೋಷಾಶಬ್ದಃ ಪ್ರಯುಕ್ತಃ । ಅತ ಏವ ಛಾಂದೋಗ್ಯಭಾಷ್ಯೇ ಟೀಕಾಯಾಂ ವ್ಯಾಸತೀರ್ಥಮುನಿಃ ಸೂಷಾ ಚ ಮ ಇತಿ ಪ್ರಯೋಗಪ್ರದರ್ಶನೇನಾಶ್ವಿಭಾರ್ಯಾಯಾಮಾಕಾರಾಂತೋಷಾಶಬ್ದಪ್ರಯೋಗಃ ಸಮರ್ಥಿತಃ । ತಥಾಪಿ ಬಹುಪ್ರಯೋಗಾಪೇಕ್ಷಯಾ ಏತದಿತಿ ಜ್ಞಾತವ್ಯಮ್ । – (ತಾ.)

ಅ: ಬಳಿಕ ದ್ರೌಪದಿಯಲ್ಲಿ ನಕುಲ, ಸಹದೇವರು ಅತ್ತಿಗೆ ಎಂಬ ಪೂಜ್ಯ ಭಾವನೆಯಿಂದ ವರ್ತಿಸತೊಡಗಿದರು. ಜರಾಸಂಧನ ಪುತ್ರ ಸಹದೇವ ಕೃಷ್ಣ ಮತ್ತು ಭೀಮಾರ್ಜುನರನ್ನು ರತ್ನಗಳಿಂದ ಪೂಜಿಸಿ ಅವರ ಅನುಮತಿ ಪಡೆದು ಮರಳಿದ.

ವಿ: ಹೀಗೆ ನಕುಲ, ಸಹದೇವರಿಬ್ಬರೂ ಪ್ರತ್ಯೇಕ ವಿವಾಹವಾದ ಮೇಲೆ ದ್ರೌಪದಿಯನ್ನು ತಮ್ಮ ಪತ್ನಿಯನ್ನಾಗಿ ನೋಡಲಿಲ್ಲ ಎಂದರೆ, ದ್ರೌಪದೀ ದೇಹದಲ್ಲಿದ್ದ ಉಷಾರೂಪದೊಂದಿಗೆ ರಮಿಸಲೇ ಇಲ್ಲ ಎಂದರ್ಥ.

ತದಾಜ್ಞಯಾ ಪಿತೃಕಾರ್ಯಾಣಿ ಕೃತ್ವಾ
ತದಾಜ್ಞಯೈವಾದಿಶತ್ ತಾನ್ ನೃಪಾಂಶ್ಚ ।
ತೈಃ ಸಂಸ್ತುತಃ ಕೇಶವೋ ಭೀಮಪಾರ್ಥ-
ಯುಕ್ತೋ ದೃಷ್ಟ್ವಾ ಭಕ್ತಿನಮ್ರೈರ್ಯಥಾವತ್ ॥ ೧೭೧ ॥

ಅ: ಶ್ರೀಕೃಷ್ಣನ ಆದೇಶದಂತೆ ಸಹದೇವ ಪಿತೃಕಾರ್ಯಗಳನ್ನು ಮಾಡಿದ. ಅವನ ಆದೇಶದಂತೆ ಆ ರಾಜರುಗಳನ್ನು ಬಿಡುಗಡೆಮಾಡಿದ. ಭಕ್ತಿಯಿಂದ ಬಾಗಿದ ಅವರಿಂದ ಬಹಳವಾಗಿ ಸ್ತುತನಾದ ಕೃಷ್ಣ ಅವರನ್ನು ಅನುಸರಿಸಿ ಭೀಮಾರ್ಜುನರೊಂದಿಗೆ ಹಿಂದಿರುಗಿದ.

---

೧೬೯. 'ನಕುಲಸ್ಯಾದಾನ್ನದ್ರರಾಜೋ ಹಿ ಪೂರ್ವಂ ಸ್ವೀಯಾಂ ಕನ್ಯಾಂ ಸಾ ತಥೈವಾऽಪ್ಯಮಾ ಹಿ । ಏಕಾ ಪೂರ್ವಂ ತೇऽಶ್ವಿನೋಶ್ಚೈವ ಭಾರ್ಯಾ ಯಮೌ ರೇಮಾತೇ ಯದುಷಾ ಅಶ್ವಿಭಾರ್ಯಾ' (೧೬೨) ಇತ್ಯತ್ರ ಯಾ ಉಷಾ ಅಶ್ವಿಭಾರ್ಯೇತ್ಯಸ್ಯ ವೈಯರ್ಥ್ಯಮಾಶಂಕ್ಯ ನನು ಉಷಾ ಅನಿರುದ್ಧಭಾರ್ಯಾ ಅಶ್ವಿಭಾರ್ಯಾ ಕಥಮುಚ್ಯತೇ ಇತ್ಯಾಶಂಕ್ಯ ಹಿ ಯದುಷಾ ಇತಿ ಯದ್ಯಸ್ಮಾತ್ ಸಕಾರಾಂತೋಷಃ ಶಬ್ದವಾಚ್ಯಾ ಉಷಾಃ ಅಶ್ವಿಭಾರ್ಯಾ ತಸ್ಮಾತ್ ಮಕಾರಾಂತೋಷಃ ಶಬ್ದವಾಚ್ಯಾ ಯಾ ಉಷಸಃ ಅನಿರುದ್ಧಭಾರ್ಯಾ ಅನ್ಯಾ ಆಬಂತಾ ಇತಿ । ಯದ್ವಾ ಏಕೈವ ಉಷಾ ಅಶ್ವಿಭಾರ್ಯಾ ಯತ್ ತಸ್ಮಾತ್ ನಕುಲಸಹದೇವಭೋಗಾರ್ಥಂ ರೂಪದ್ವಯೇನ ಸಂಪ್ರಜಾತಾ ಇತ್ಯಾಹುಃ । ಇತಿ ಯಸ್ಮಾತ್ ತಸ್ಮಾತ್ ಯಮೌ ರೇಮಾತ ಇತ್ಯನ್ವೇ। – (ತಿ.)

೧೬೯. ಉಕ್ತಂ ಚಾಂಶಾವತರಣೇ – 'ಪಾರ್ವತೀ ನಕುಲಸ್ತ್ರೀ ಯಾ ನಾಮ್ನಾ ಪೂರ್ವಂ ತಿಲೋತ್ತಮಾ' ಇತಿ ॥ (೨೨/೫೬) – (ರಾ.)

೧೭೧. ಭಕ್ತಿನಮ್ರೈರ್ಯಥಾವದಿತ್ಯತ್ರ ಭಕ್ತಿನಮ್ರೈಸ್ತೈಃ ದೃಷ್ಟ್ವಾ ಭೀಮಪಾರ್ಥಯುಕ್ತಃ ಕೇಶವಃ ಯಥಾವತ್ಸಂಸ್ತುತ ಇತಿ ಯೋಜನಾ ॥ – (ವಾ.)

೧೭೧. ಪಿತೃಕರ್ಮಣಿ ಜರಾಸಂಧಮುದ್ದಿಶ್ಯ ತಿಲಾಂಜಲಿಪಿಂಡದಾನಾದಿಕೃತ್ಯಾನಿ ಕೃತ್ವಾ। – (ಜ.)

ವಿ: ೧) ಸಹದೇವನ ಮೂಲಕ ಜರಾಸಂಧನಿಗೂ ಕೃಷ್ಣ ಅಂತ್ಯಕ್ರಿಯೆಗಳನ್ನು ಮಾಡಿಸಿದ್ದು ಪ್ರಹ್ಲಾದನಿಂದ ಹಿರಣ್ಯಕಶಿಪುವಿಗೆ ಅಂತ್ಯಕ್ರಿಯೆಗಳನ್ನು ಮಾಡಿಸಿದಂತೆ ಎಂದು ತಿಳಿಯಬೇಕು. ಪಿತೃಕಾರ್ಯ ಸರ್ವಥಾ ಕರ್ತವ್ಯ ಎಂದು ತಿಳಿಸುವುದು ಇದರ ಉದ್ದೇಶ.

೨) ಇತರರಿಗೆ ಶ್ರಾದ್ಧಾದಿಗಳನ್ನು ಮಾಡುವಾಗ ಅವರು ವೈಷ್ಣವರು ಆಗಿರಲೇ ಬೇಕು ಎಂಬ ನಿಯಮವುಂಟು ಎಂಬುದು ಮುಂದೆ ಭೀಮಸೇನ ನುಡಿಯುವ ಮಾತುಗಳಿಂದ ಸ್ಫುಟಪಡುವುದು (೩೧/೩೩, ೩೪). ಆದರೆ, ತಂದೆ ತಾಯಿಗಳು ಮಾತ್ರ ಹೇಗಿದ್ದರೂ ಅವರಿಗೆ ಅಂತ್ಯಕ್ರಿಯಾದಿಗಳನ್ನು ನಡೆಸಲೇಬೇಕೆಂಬುದು ಧರ್ಮಸೂಕ್ಷ್ಮ. ಅವರು ಅವೈಷ್ಣವರಾಗಿದ್ದಾಗ ಕೇವಲ ಅಂತರ್ಯಾಮಿ ವಿವಕ್ಷೆಯಿಂದಷ್ಟೇ ಆ ಕಾರ್ಯಗಳನ್ನು ಮಾಡಬೇಕೆಂದು ತಾತ್ಪರ್ಯ.

ಮರಳಿ ಇಂದ್ರಪ್ರಸ್ಥಕ್ಕೆ

ಸಂಭಾವಿತಾಸ್ತೇ ಸಹದೇವೇನ ಸಮ್ಯಕ್
ಪ್ರಶಸ್ಯ ಕೃಷ್ಣಂ ಭೀಮಸೇನಂ ಚ ಸರ್ವೇ ।
ಯಯುರ್ಗೃಹಾನ್ ಸ್ವಾನಪತತ್ ಕೇಶವದ್ವಿಟ್
ಜರಾಸುತೋಽಂಧೇ ತಮಸಿ ಕ್ರಮೇಣ ॥ ೧೭೨ ॥

ಅ: ಆ ರಾಜರುಗಳೆಲ್ಲಾ ಸಹದೇವನಿಂದ ಬಹಳವಾಗಿ ಸತ್ಕೃತರಾದರು. ಅವರೆಲ್ಲ ಕೃಷ್ಣನನ್ನು, ಭೀಮನನ್ನು ಸ್ತುತಿಸಿ ತಮ್ಮ ಮನೆಗಳಿಗೆ ತೆರಳಿದರು. ಕೃಷ್ಣದ್ವೇಷಿಯಾದ ಜರಾಸಂಧ ಮುಂದೆ ಕ್ರಮವಾಗಿ ತಮಸ್ಸಿನಲ್ಲಿ ಬಿದ್ದ.

ಕೃಷ್ಣಶ್ಚ ಪಾರ್ಥೌ ಚ ತಥೈಕಯಾನಂ
ಸಮಾಸ್ಥಿತಾ ಧರ್ಮಜಮಭ್ಯಗಚ್ಛನ್ ।
ತೇಷಾಂ ಶಂಖಧ್ವನಿಸಂಬೋಧಿತಾತ್ಮಾ
ರಾಜಾ ಪ್ರೀತಶ್ಚಾತಿತರಾಂ ಬಭೂವ ॥ ೧೭೩ ॥

ಅ: ಕೃಷ್ಣ ಮತ್ತು ಭೀಮಾರ್ಜುನರು ಒಂದೇ ರಥವನ್ನು ಏರಿ ಧರ್ಮರಾಜನ ಬಳಿಗೆ ತೆರಳಿದರು. ಅವರ ಶಂಖಧ್ವನಿಯಿಂದ ಅವರನ್ನು ಅವರ ವಿಜಯ ಕಾರ್ಯವನ್ನು ತಿಳಿದು ಧರ್ಮರಾಜ ಅತ್ಯಂತ ಪ್ರೀತನಾದ.

---

೧೭೨. ಪ್ರಣಮ್ಯೇತಿ ಕುತ್ರಚಿತ್ ಪಾಠಃ। ಅಸಿಪತ್ರಾದ್ಯನೇಕನರಕಭೋಗಕ್ರಮೇಣಾಪತತ್। –(ಜ.)

ಎ: ೧) ಧರ್ಮರಾಜ ಅವರ ಶಂಖಧ್ವನಿಗಳನ್ನು ಕೇಳುತ್ತಲೇ ಅವು ಕ್ರಮವಾಗಿ ಕೃಷ್ಣ ಹಾಗೂ ಭೀಮಾರ್ಜುನರವು ಎಂದು ಗುರುತಿಸಿ ಆನಂದಿಸಿದ ಎಂಬ ಮಾತಿನಲ್ಲಿ ಜಡವಾದ ಧ್ವನಿಗಳಲ್ಲಿರುವ ಭೇದವೂ ಸಹ ನಿರೂಪಿತವಾಗಿದೆ. ಇದು ಪಂಚ ಭೇದಗಳಲ್ಲೊಂದಾಗ ಜಡ–ಜಡ ಭೇದಕ್ಕೂ ಸಾಧಕವಾದ ಒಂದು ವಿಶೇಷ ಪ್ರಮೇಯ ಎಂದು ತಿಳಿಯಬೇಕು.

೨) ಹೀಗೆ ಶ್ರೀಕೃಷ್ಣ ಭೀಮಾರ್ಜುನರಿಂದ ಜರಾಸಂಧ ಪರಾಭವಗೊಂಡ ಈ ಪ್ರಸಂಗ ಅಪೂರ್ವ ಅಧ್ಯಾತ್ಮಗರ್ಭಿತ. ರಾಜಸೂಯ ಯಾಗ ಅತ್ಯಂತ ಮಿಗಿಲಾದ ಯಾಗ, ಅದು ಅತ್ಯಂತ ಶ್ರೇಷ್ಠವಾದ ಜ್ಞಾನಯಜ್ಞಕ್ಕೆ ಸಂಕೇತ. ರಾಜಸೂಯವಾಗಲು ಜರಾಸಂಧ ಸಾಯಲೇ ಬೇಕು, ವಿಪ್ರ–ಚಿತ್ತಿದೈತ್ಯನ ಅವತಾರನಾದ ಅವನು ಮಿಥ್ಯಾಜ್ಞಾನದ ಸಂಕೇತ. ಎಂದರೆ ಜ್ಞಾನಯಜ್ಞವಾಗಲು ಮಿಥ್ಯಾಜ್ಞಾನ ನಿರಾಸವಾಗಲೇ ಬೇಕು. ಅಂತಹ ನಿರಾಸಕಾರ್ಯಕ್ಕೆ ತೆರಳಿದ್ದು ಶ್ರೀಕೃಷ್ಣ ಭೀಮ ಮತ್ತು ಅರ್ಜುನ – ಈ ಮೂವರು. ಈ ಮೂವರು ಶ್ರೀಹರಿ, ವಾಯು ಮತ್ತು ಇಂದ್ರ ಎಂಬ ದೇವತೆಗಳು. ಅವರು ತೆರಳಿದ್ದು ಬ್ರಾಹ್ಮಣವೇಷದಲ್ಲಿ, ಈ ಮೂವರ ಬ್ರಾಹ್ಮಣವೇಷಗಳು ಕ್ರಮವಾಗಿ ವಾಸಿಷ್ಠ–ಕೃಷ್ಣವೇದವ್ಯಾಸರು, ಮಧ್ವಾಚಾರ್ಯರು ಮತ್ತು ಜಯತೀರ್ಥರು ಎಂಬುದಕ್ಕೆ ಸಂಕೇತ. ಅವರು ಮೂವರೂ ಸಹ ಕ್ರಮವಾಗಿ ಸೂತ್ರಕಾರರು, ಭಾಷ್ಯಕಾರರು ಹಾಗೂ ಟೀಕಾಕಾರರು ಆಗಿರುವುದು ವಿಶೇಷ. ಸೂತ್ರ, ಭಾಷ್ಯ, ಟೀಕೆಗಳ ಮೂಲಕವೇ ಮಿಥ್ಯಾಜ್ಞಾನದ ನಿರಾಸ ಎಂಬುದು ಇದರ ತಾತ್ಪರ್ಯ.

೩) ಭೀಮ–ಜರಾಸಂಧರ ಸಂಘರ್ಷ ತತ್ವಜ್ಞಾನ–ಮಿಥ್ಯಾಜ್ಞಾನಗಳ ಸಂಘರ್ಷಕ್ಕೆ ಸಂಕೇತ. ಹದಿನೈದು ದಿನಗಳ ಸಮರ ಹದಿನೈದು ದಿನಗಳ ವಾದ ಕಥೆಗೆ ದ್ಯೋತಕ. ದುರ್ಯೋ–ಧನನಂತೆ ಜರಾಸಂಧನೂ ಸಹ ಅಮಾವಾಸ್ಯೆಯಂದೇ ಸಾಯುವುದು ಮತ್ತೊಂದು ವಿಶೇಷ. ಹೀಗೆ ಮಿಥ್ಯಾಜ್ಞಾನ ನಾಶವಾದಾಗಲೇ ತತ್ವಜ್ಞಾನದ ರಾಜಸೂಯ ಯಾಗ ಎಂಬುದು ಈ ಪ್ರಕರಣದ ಒಟ್ಟು ಅಧ್ಯಾತ್ಮ.

ಶ್ರೀವ್ಯಾಸಾಗಮನ - ರಾಜಸೂಯಕ್ಕೆ ಅನುಜ್ಞೆ

ದ್ವೈಪಾಯನೋಽಥ ಭಗವಾನಭಿಗಮ್ಯ ಪಾರ್ಥಾ-
ನಾಜ್ಞಾಪಯತ್ ಸಕಲಸಂಭೃತಿಸಾಧನಾಯ ।
ತಂ ರಾಜಸೂಯಸಹಿತಂ ಪರಮಾಶ್ವಮೇಧ-
ಯಜ್ಞಂ ಸಮಾದಿಶದನನ್ಯಕೃತಂ ವಿರಿಂಚಾತ್ ।। ೧೭೪ ।।

ಅ: ಬಳಿಕ ಭಗವಂತನಾದ ಶ್ರೀ ವೇದವ್ಯಾಸರು ಆಗಮಿಸಿ ಪಾಂಡವರಿಗೆ ಯಜ್ಞಗಳ ಸಕಲ ಸಾಧನಗಳ ಸಿದ್ಧತೆಯಲ್ಲಿ ತೊಡಗಲು ಆದೇಶಿಸಿದರು. ಬ್ರಹ್ಮನ ಹೊರತು ಇತರರಾರೂ

ಮಾಡದಿದ್ದಂತಹ ರಾಜಸೂಯದಿಂದ ಕೂಡಿದ ಪರಮಾಶ್ವಮೇಧ ಯಜ್ಞವನ್ನು ನಡೆಸಲು ತಿಳಿಸಿದರು.

ವಿ: ೧) ಪಾಂಡವರ ಯಾಗ ರಾಜಸೂಯಯಾಗ ಮಾತ್ರವಾಗದೇ ಮಹಾಶ್ವಮೇಧ ಯಾಗವನ್ನು ಒಳಗೊಂಡಿತ್ತು ಎಂಬುದು ಇಲ್ಲಿಯ ವಿಶೇಷ. ಅಂತಹ ರಾಜಸೂಯ ಯಾಗವನ್ನು ಬ್ರಹ್ಮದೇವರ ಹೊರತು ಬೇರಾರೂ ಮಾಡಿರಲಿಲ್ಲ.

೨) ಹರಿಶ್ಚಂದ್ರ, ಸಗರಾದಿಗಳು ಮಾಡಿದ ರಾಜಸೂಯಯಾಗ ಕೇವಲ ಸಾಮಾನ್ಯ ರಾಜಸೂಯಯಾಗವಾಗಿತ್ತೇ ಹೊರತು ಪಾಂಡವರು ಮಾಡಿದಂತಹ ವಿಶಿಷ್ಟವಾದ ಯಾಗವಾಗಿರಲಿಲ್ಲ ಎಂದು ಇದರಿಂದ ತಿಳಿಯುವುದು.

ರಾಜಸೂಯದಲ್ಲಿ ಭೀಮನ ಪಾತ್ರ

ಕರ್ತಾ ಹಿ ತಸ್ಯ ಪರಮೇಷ್ಠಿಪದಂ ಪ್ರಯಾತಿ
ಯದ್ಯನ್ಯಸದ್ಗುಣವರೈಃ ಪರಮೇಷ್ಠಿತುಲ್ಯಃ ।
ಭೀಮೇ ಮಖಸ್ಯ ಫಲಮತ್ಯಧಿಕಂ ವಿಧಾತುಂ
ವ್ಯಾಸಃ ಕ್ರತುಂ ತಮದಿಶದ್ಗುರುರಬ್ಜಜಸ್ಯ ॥ ೧೭೫ ॥

---

೧೭೪. ತಸ್ಮಾತ್ ಬ್ರಹ್ಮಪದಪ್ರಾಪ್ತೌ ವ್ಯಾಸೋ ಭೀಮಸ್ಯ ತಂ ಕ್ರತುಂ ಅನನ್ಯಕೃತಮಾದಿಶ್ಯೇತ್ಯತ್ರ ಭೀಮಸ್ಯಾನೇನ ಕರ್ಮಣಾ ಬ್ರಹ್ಮಪದಾವಾಪ್ತಿಃ ಶ್ರೂಯತೇ । ತದನುಪಪನ್ನಂ ಬ್ರಹ್ಮಣೋ ದಿವಸೇ ಭೀಮೇನ ತತ್ಕರ್ಮ ಪುನಃಪುನಃ ಕ್ರಿಯತೇ ಚ ಪುನಃ ವ್ಯಾಸೇನ ತತ್ಕರ್ಮಣಾ ಚ ಬ್ರಹ್ಮಪದಾವಾಪ್ತಿಃ ಫಲಮಿತ್ಯುಚ್ಯತೇ ಇದಂ ಕಥಮುಪಪನ್ನಂ ಭವೇತ್ ಪ್ರಾಪ್ತಸ್ಯ ಪುನಃ ಪ್ರಾಪ್ತ್ಯಯೋಗಾತ್ । ತಥಾ ರಾಮೇಣ ಭೋಗಾಶ್ಚ ಯೇ ಯಾನಿ ಚ ಕರ್ಮಜಾತಾನ್ಯನಾದ್ಯನಂತಾನಿ ಮಮೇಹ ಸಂತಿ । ಮದಾಜ್ಞಯಾ ತಾನ್ಯಖಿಲಾನಿ ಸಂತಿ ಧಾತುಃ ಪದೇ ತತ್ಸಹಭೋಗನಾಮ । ಏತಾದೃಶಂ ಮೇ ಸಹಭೋಜನಂ ತೇ ಮಯಾ ಪ್ರದತ್ತಮಿತ್ಯುಚ್ಯತೇ । ಪುನಃಪುನಃ ಬ್ರಹ್ಮಣೋ ದಿವಸೇ ತೇನ ಕ್ರಿಯತೇ ತೇನ ತತ್ಫಲಂ ದೀಯತೇ ತಸ್ಮಾದೇತಸ್ಯ ಸರ್ವಸ್ಯ ಕೋಽಭಿಪ್ರಾಯ ಇತಿ ಚೇತ್ ಧಾತುಃ ಪದೇ ಬಹವೋಽಂಶಭೇದಾಃ ಸಂತಿ । ತತ್ಕೈಕೈಕಕರ್ಮಣಾ ಏಕೈಕಫಲಾವಾಪ್ತಿಃ ಏವಂ ಬ್ರಹ್ಮಣಃ ಶತವರ್ಷಾರ್ಯಂತಂ ಕ್ರಿಯಮಾಣೇನ ಸಂಪೂರ್ಣ ಫಲಾವಾಪ್ತಿರಿತಿ ಜ್ಞೇಯಮ್ । –(ತಿ.)

೧೭೪. ತಂ ರಾಜಸೂಯಸಹಿತಮಿತ್ಯತ್ರ ರಾಜ್ಞಾಂ ಸೂಯಂ = ಸೂದನಮ್। ಜಯ ಇತಿ ಯಾವತ್। ತೇನ ಸಹಿತಂ ವರಾಶ್ವಮೇಧಮ್। ವರಮಿತಿ ವಿಶೇಷಣಮ್ । ಸಗರಾದಿಭಿಃ ಕೃತರಾಜಸೂಯಾದಸ್ಯೋತ್ತಮತ್ವಜ್ಞಾಪನಾರ್ಥಮ್। ಉತ್ತಮತ್ವಂ ಚ ಭಕ್ತ್ಯಾದ್ಯತಿಶಯೇನ। ಅತ ಏವ ವಿರಿಂಚಾದನನ್ಯಕೃತಮಿತ್ಯುಕ್ತಮ್। ಭೀಮಸೇನಸದೃಶಭಕ್ತೇಃ ವಿರಿಂಚಾದಿತರತ್ರಾಸಂಭವಾದಿತಿ ಭಾವಃ ॥ –(ವಾ.)

೧೭೫. ಯದ್ಯನ್ಯಸದ್ಗುಣವರೈಃ ಪರಮೇಷ್ಠಿತುಲ್ಯ ಇತ್ಯತ್ರ ಅನ್ಯಸದ್ಗುಣವರೈಃ= ಪರಮೇಷ್ಠಿಪದಸ್ಥತ್ವಮಾತ್ರವ್ಯತಿರಿಕ್ತ-ಜ್ಞಾನಭಕ್ತ್ಯಾದಿಸದ್ಗುಣವರೈರಿತ್ಯರ್ಥಃ ॥ –(ವಾ.)

ಅ: ಆ ಮಹಾಶ್ವಮೇಧಸಹಿತವಾದ ರಾಜಸೂಯಯಾಗವನ್ನು ಮಾಡುವವನು ಇತರ ಉತ್ತಮ ಗುಣಗಳಿಂದ ಬ್ರಹ್ಮನಿಗೆ ಸಮನಾಗಿದ್ದಲ್ಲಿ, ಬ್ರಹ್ಮ ಪದವಿಯನ್ನು ಹೊಂದುವನು. ಬ್ರಹ್ಮ ದೇವರ ಗುರುವಾದ ವೇದವ್ಯಾಸರು ಭೀಮನಲ್ಲಿ ಯಜ್ಞದ ಫಲವನ್ನು ಅತ್ಯಧಿಕವಾಗಿ ಉಂಟು ಮಾಡಲೆಂದು ಆ ಯಾಗವನ್ನು ನಡೆಸಲು ಅವನಿಗೆ ಆದೇಶಿಸಿದರು.

ವಿ: ಬ್ರಹ್ಮ ಪದವಿಗೆ ಯೋಗ್ಯರಾದವರು ಆ ಯಾಗವನ್ನು ಮಾಡಿದರೆ ಬ್ರಹ್ಮ ಪದವಿಯನ್ನು ಹೊಂದುವರು, ಇತರರಿಗೆ ಆ ಯಾಗವನ್ನು ಮಾಡಲು ಸರ್ವಥಾ ಅಸಾಧ್ಯ ಎಂದರ್ಥ.

ಅಸಾಧಾರಣಹೇತುರ್ಯಃ ಕರ್ಮಣೋ ಯಸ್ಯ ಚೇತನಃ ।
ಸ ಏವ ತತ್ಫಲಂ ಪೂರ್ಣಂ ಭುಂಕ್ತೇಽನ್ಯೋಽಲ್ಪಮಿತಿ ಸ್ಥಿತಿಃ ।
ವಿನಾ ವಿಷ್ಣುಂ ನಿರ್ಣಯೋಽಯಂ ಸ ಹಿ ಕರ್ಮಫಲೋಜ್ಝಿತಃ ॥ ೧೭೬ ॥

ಅ: ಯಾವ ಜೀವಿಯು ಯಾವ ಕರ್ಮಕ್ಕೆ ಅತ್ಯಂತ ಪ್ರಧಾನ ಕಾರಣವೆನ್ನಿಸುವನೋ ಅವನೇ ಅದರ ಪೂರ್ಣ ಫಲವನ್ನು ಪಡೆಯುವನು. ಇತರರು ಅಲ್ಪಫಲವನ್ನು ಪಡೆಯುವರು ಎಂಬುದು ನಿರ್ಣಯ. ವಿಷ್ಣುವಿನ ಹೊರತು ಇತರರ ಬಗ್ಗೆ ಇದೇ ನಿರ್ಣಯ, ಅವನಂತೂ ಕರ್ಮಫಲರಹಿತನಾದವನಲ್ಲವೇ!.

ವಿ: ೧) ಒಂದು ಕರ್ಮ ನಡೆದಾಗ ಅದರ ಪೂರ್ಣಫಲಕ್ಕೆ ಭಾಗಿಯಾಗುವುದು ಅದಕ್ಕೆ ಪ್ರಧಾನ ಕರ್ತೃವಾದವನು ಮಾತ್ರ, ಅದರಲ್ಲಿ ಪಾಲ್ಗೊಂಡ ಇತರರಿಗೆ ಅವರ ಯೋಗ್ಯತಾದಿಗಳಿಗೆ ಅನು–ಗುಣವಾದ ಫಲ ಲಭಿಸುವುದು ಎಂಬುದೇ ಶಾಸ್ತ್ರದ ನಿರ್ಣಯ ಎಂದರ್ಥ. ಮಹಾವಿಷ್ಣುವು ಸರ್ವ ಕರ್ಮ ಪ್ರೇರಕನಾದರೂ ಅವನು ಕರ್ಮಫಲಕ್ಕೆ ಭಾಗಿಯೆನ್ನಿಸನು. ಸದಾ ಪರಿಪೂರ್ಣನಾದ ಅವನು ಸಕಲ ಕರ್ಮಬಂಧಗಳಿಂದ ದೂರಾದವನು ಎಂಬುದೇ ಶಾಸ್ತ್ರದ ಘೋಷಣೆ. ಶ್ರೀಹರಿಯು ಶುಭಕರ್ಮದ ಫಲವನ್ನು ಉಣ್ಣುವನು ಎಂಬ ಮಾತು ಶಾಸ್ತ್ರಗಳಲ್ಲಿದೆ. ಇದಕ್ಕೆ ಕರ್ಮಸ್ವಾಮಿಯಾಗಿ ಅವನು ಅದನ್ನು ಪಡೆಯುವನು ಎಂದು ಅರ್ಥ. ಇತರರಂತೆ ಕರ್ಮಾಚರಣೆಯ ಫಲವಾಗಿ ಪಡೆಯುವನು ಎಂಬ ಅರ್ಥದಲ್ಲಿ ಅಲ್ಲ ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಯಬೇಕು.

ಹೇತವೋಽಪಿ ಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ ।
ದೇವಾಃ ಪುಣ್ಯಸ್ಯ ದೈತ್ಯಾಶ್ಚ ಮಾನುಷಾಸ್ತು ದ್ವಿಭಾಗಿನಃ ॥ ೧೭೭ ॥

ಅ: ದೇವತೆಗಳು ಪಾಪಕರ್ಮಗಳಿಗೂ ಸಹ ಕಾರಣರೇ ಆದರೂ ಸಾಮಾನ್ಯವಾಗಿ ಅವುಗಳ ಫಲಕ್ಕೆ ಅವರು ಭಾಗಿಗಳಾಗುವುದಿಲ್ಲ. ಅದರಂತೆ ದೈತ್ಯರು ಪುಣ್ಯಫಲಕ್ಕೆ ಭಾಗಿಗಳಾಗುವುದಿಲ್ಲ. ಮನುಷ್ಯರು ಎರಡಕ್ಕೂ * ಭಾಗಿಗಳು.

೧೭೭. ಮಾನುಷಾಸ್ತದ್ವಿಭಾಗಿನಃ । (ಪಾಠಾಂತರ)

ತದ್ವಿಭಾಗಿನಃ ಶುಭಾಶುಭಕರ್ಮಫಲವಿಭಾಗಿನಃ । – (ವೇ.)

೧೭೭. ಹೇತವೋऽಪಿ ಹಿ ಪಾಪಸ್ಯೇತ್ಯತ್ರ ದೇವಾಃ ಪಾಪಸ್ಯ ಹೇತವೋऽಪಿ ಪ್ರಾಯಃ ಫಲಭಾಗಿನೋऽಪಿ ನ ಭವಂತಿ। ದೈತ್ಯಾಶ್ಚ ಪ್ರಾಯಃ ಸ್ವಕೃತಪುಣ್ಯಸ್ಯ ಫಲಭಾಗಿನೋ ನ ಭವಂತಿ। ದುರ್ಯೋಧನಾದಯೋ ದೈತ್ಯಾಶ್ಚ ಪುಂಡರೀಕ-ಯಾಗಾದಿಪುಣ್ಯಂ ಕುರ್ವಂತಿ। ತಸ್ಯಾಪಿ ಸಂಪೂರ್ಣಫಲ ತದಾವಿಷ್ಟೋ ಮುಖ್ಯಪ್ರಾಣ ಏವ ಗೃಹ್ಣಾತಿ। ತೇಷಾಮಪಿ ದಂಭೇನ ವಾ ಈರ್ಷ್ಯಯಾ ವಾ ಕರ್ತೃತ್ವಾತ್ಕಿಂಚಿದೇವ ಫಲಂ ಭವತೀತಿ ಭಾವಃ। ಮಾನುಷಾಸ್ತು ದ್ವಿಭಾಗಿನಃ= ದೇವದೈತ್ಯಾಪಹೃತಪುಣ್ಯಪಾಪಫಲಯೋಃ ಭಾಗಿನಃ। ಏಕೈಕಭಾಗವಂತ ಇತಿ ಯೋಜನಾ ॥ – (ವಾ.)

೧೭೭ ಆಜ್ಞಯಾ ಚಾನ್ಯಗಂ ನೈವ ಭೋಗಾಯ ಭವತಿ ಕ್ವಚಿತ್ ।
ಪುಣ್ಯಮೇವಾಮುಮಾಪ್ನೋತಿ ನ ದೇವಾನ್ ಪಾಪಮಾಪ್ನುಯಾತ್ ॥
ಇತ್ಯಾದಿಶ್ರುತಯೋ ಮಾನಮುಕ್ತೇऽರ್ಥೇ ಯುಕ್ತಯೋऽಪರಾಃ ।
ಉಪಾಸನಾಧರ್ಮಫಲಂ ಯತೋ ದೇಹಾಂತರೇ ಸ್ಥಿತಿಃ ॥
ವಾಸುದೇವಾಜ್ಞಯಾ ಚೈವ ಪೂರ್ವಕರ್ಮಾನುಸಾರತಃ ।
ಪ್ರೇರಯಂತಿ ಹಿ ತೇ ಜೀವಾನ್ ಪುಣ್ಯಪಾಪೇಷು ನಿತ್ಯಶಃ ॥
ಅರಾಗದ್ವೇಷತಶ್ಚೈವ ಕಥಂ ದೋಷಾನವಾಪ್ನುಯುಃ ।
ಹರ್ಯಾಜ್ಞಾಕರಣಾದೇವ ಪುಣ್ಯಮೇಭಿರವಾಪ್ಯತೇ ॥
ಹರಿಪೂಜೇತಿ ಚೋದ್ದೇಶಾತ್ಕಥಂ ನ ಶುಭಮಾಪ್ನುಯುಃ ।
ಅತೋ ಯಥಾಕ್ರಮಂ ಧರ್ಮಜ್ಞಾನಯೋಃ ಫಲಮಂಜಸಾ ॥
ಸರ್ವಪ್ರಾಣಿಗತಂ ದೇವಾಃ ಪ್ರಾಪ್ನುವಂತ್ಯಾವಿರಿಂಚತಃ ।
ದೇವಾ ಏವ ಹಿ ದೇವಾನಾಂ ವಿಶಿಷ್ಟಾ ವಿನಿಯಾಮಕಾಃ ॥
ಬ್ರಹ್ಮಾತ್ವಖಿಲದೇವಾನಾಂ ನರಾಣಾಂ ಚ ನಿಯಾಮಕಃ ।
ಅತಃ ಸರ್ವಗುಣಾನೇಷಃ ಪ್ರಾಪ್ನೋತ್ಯಧಿಕಮನ್ಯತಃ ॥
ದ್ರವ್ಯಸ್ವಾತಂತ್ರ್ಯವಿಜ್ಞಾನಪ್ರಯತ್ನೈರಧಿಕಂ ಫಲಮ್ ।
ದೇವಾನಾಮನ್ಯಗಂ ಚಾಪಿ ತೇಷು ಹಿ ಬ್ರಹ್ಮಣೋऽಧಿಕಮ್ ॥
ಬೃಹತ್ತಂತ್ರೋದಿತಂ ವಾಕ್ಯಂ ಹರಿಣಾ ಫಲನಿರ್ಣಯೇ ।
ಲೋಕೇऽಪ್ಯೇತಾದೃಶಗುಣೈಃ ಫಲಾಧಿಕ್ಯಂ ಹಿ ದೃಶ್ಯತೇ ॥
ಏವಂ ಚ ಕಲಿಪೂರ್ವಾಣಾಮಸುರಾಣಾಂ ಮಹತ್ಫಲಮ್ ।
ಅಶುಭೇಷು ಸದೈವ ಸ್ಯಾನ್ನಿಷ್ಠ್ಯಾಜ್ಞಾನಾದಿಕೇಷು ಹಿ ॥ – ಅನುವ್ಯಾಖ್ಯಾನ (೩/೪/೨೫೮-೨೬೫)

'ಶುಭಾಶುಭಫಲಂ ದೇವಾ ಅಸುರಾಶ್ಚ ಸಮಾಪ್ನುಯುಃ ।
ಕ್ರಮೇಣೈವ ಯಥಾಶಕ್ತಿ ಯಥಾ ಚೇ ಯೇ ಪ್ರಯೋಜಕಾಃ ॥
ಪ್ರೇರಕಾ ಅಪಿ ಪಾಪಾನಾಂ ನ ದೇವಾಃ ಪಾಪಮಾಪ್ನುಯುಃ' ।
ಇತಿ ಪ್ರಕಾಶಿಕಾಯಾಂ ಹಿ ಪ್ರೋವಾಚ ಹರಿರಂಜಸಾ ॥ – ಅನುವ್ಯಾಖ್ಯಾನ (೩/೪/೨೬೬-೨೬೭)

* ಆವ ಜೀವರೊಳಿದ್ದರೇನಿ- । ನ್ನಾವ ಕರ್ಮವ ಮಾಡಲೇನಿ- ।
ನ್ನಾವ ಗುಣರೂಪಗಳುಪಾಸನೆ ಮಾಡಲೇನವರು ।
ಕಾವನಯ್ಯನ ಪರಮಸತ್ಕರು- । ಣಾವಲೋಕನಬಲದಿ ಚರಿಸುವ ।
ದೇವತೆಗಳನು ಮುಟ್ಟಲಾಪವೆ ಪಾಪಕರ್ಮಗಳು ॥ – ಹರಿಕಥಾಮೃತಸಾರ (೧೦/೧೦)

ವಿಃ ೧) ಇಂದ್ರಿಯಾಭಿಮಾನಿ ದೇವತೆಗಳೂ ಸಹ ಕರ್ಮ ಪ್ರೇರಕರಾದ್ದರಿಂದ ಅವರಿಗೂ ಕರ್ಮಫಲ ಭೋಗವುಂಟು. ಆದರೆ, ಪಾಪಕರ್ಮಗಳ ಭೋಗ ಮಾತ್ರ ಅವರಿಗೆ ಸಾಮಾನ್ಯವಾಗಿ ಇರುವುದಿಲ್ಲ ಎಂಬುದು ವಿಶೇಷ. ಅದರಂತೆ ದೈತ್ಯರು ಮುಖ್ಯವಾಗಿ ಪಾಪಕರ್ಮಪ್ರೇರಕರಾದ್ದರಿಂದ ಪಾಪಕರ್ಮದ ಮುಖ್ಯ ಭೋಗ ಅವರದ್ದೇ. ಅದರಂತೆ ಮಧ್ಯಮ ಜೀವರು ಮಿಶ್ರ ಸ್ವರೂಪ–ರಾದ್ದರಿಂದ ಅವರಿಗೆ ಯಥಾಯೋಗ್ಯವಾಗಿ ಪುಣ್ಯ ಹಾಗೂ ಪಾಪ ಎರಡರ ಭೋಗವೂ ಉಂಟು.

೨) ಪ್ರಾಯಃ ಎಂದಿರುವುದರಿಂದ ದೇವತೆಗಳಿಗೂ ಸಹ ಪ್ರಾರಬ್ಧವಶಾತ್ ಪಾಪಕರ್ಮ–ಗಳ ಭೋಗ ಉಂಟು ಎಂಬ ವಿಶೇಷ ಸೂಚಿತವಾಯಿತು ಎಂದು ತಿಳಿಯಬೇಕು. ಅದರಂತೆ ದೈತ್ಯರಿಗೂ ಸಹ ಕೆಲವೊಮ್ಮೆ ಉತ್ತಮ ಕರ್ಮಗಳ ಆಚರಣೆಯಿಂದಾಗಿ ಪುಣ್ಯದ ಫಲವೂ ಲಭಿಸುವುದುಂಟು. ಆದರೆ, ಅದು ಅತ್ಯಂತ ಅಮುಖ್ಯ ಪುಣ್ಯಫಲವಾದ್ದರಿಂದ, ಅಲ್ಪಕಾಲೀನ–ವಾದ್ದರಿಂದ ಅಂತತಃ ಅವರಿಗೆ ದುಃಖಪ್ರಾಪ್ತಿಯೇ ಮುಖ್ಯ ಫಲ. ದುರ್ಯೋಧನಾದಿಗಳು ಮರಣಾನಂತರ ಕೆಲವು ಕಾಲ ಸ್ವರ್ಗದಲ್ಲಿದ್ದದ್ದು ಇದಕ್ಕೆ ನಿದರ್ಶನ.

ಅಸಾಧಾರಣಹೇತುಶ್ಚ ಭೀಮ ಏವ ಪ್ರಕೀರ್ತಿತಃ ।
ಯಜ್ಞಸ್ಯಾಸ್ಯ ಜರಾಸಂಧವಧಾತ್ ಕರ್ಣಜಯಾದಪಿ ।
ಜಯಾಚ್ಚ ಕೀಚಕಾದೀನಾಮನ್ಯೈರ್ಜೇತುಮಶಕ್ಯತಃ ॥ ೧೭೮ ॥

---

೧೭೭. ಯದ್ಯಪಿ ಗುಹಾಧಿಕರಣೇ ವಿಷ್ಣೋಃ ಕರ್ಮಫಲಭೋಕ್ತೃತ್ವಮುಕ್ತಂ। ತಥಾಪ್ಯತ್ರ ದೇವೇಷ್ವಿನ ಅಪೂರ್ವೋತ್ಪತ್ತಿದ್ವಾರಾ ಕರ್ಮಫಲಭೋಕ್ತೃತ್ವಾಭಾವಾತ್ ಅಶುಭಭೋಗಸ್ಯ ಸರ್ವಥಾ ಅಭಾವಾಚ್ಚತದಭಾವೋಕ್ತಿಃ। ಪಾಪಸ್ಯ ದೇವಾ ಹೇತವಃ ಸಾಕ್ಷಾತ್ ಕರ್ತಾರೋಽಪಿ ಫಲಭಾಗಿನೋ ನ ಭವಂತಿ। ಉತ್ತಮದ್ರೋಹೇ ಪ್ರಾಪ್ತವ್ಯಹಾನೇಃ ಪ್ರಾಯ ಇತ್ಯುಕ್ತಮ್ । ಉತ್ತಮದ್ರೋಹಾತಿರಿಕ್ತಪಾಪೇಷ್ವಪಿ ವೃತ್ರಹತ್ಯಾದಿನಾ ಪ್ರಾರಬ್ಧಾನರ್ಥಸೂಚನಾತ್ ಅಶುಭಾಭಾವಜೋನ್ನಾಹಸ್ಯಅಶುಭೇಕೃತೇಽಭಾವಾಚ್ಚಪ್ರಾಯ ಇತ್ಯುಕ್ತಂ। ದೈತ್ಯಾನಾಂ ಪುಣ್ಯಕಾರಯಿತೃತ್ವಾಭಾವಾತ್ ಸಾಕ್ಷಾತ್ ಸ್ವಕ್ರಿಯಮಾಣ ಪುಣ್ಯಸ್ಯೇತ್ಯರ್ಥಃ? ಆಚಾರ್ಯತೇಜಸಾ ದುರ್ಯೋಧನಾದೀನಾಂ ಸ್ವರ್ಗಪ್ರಾಪ್ತೇಃ ಪ್ರಾಯ ಇತ್ಯುಕ್ತಂ। ಮದಾಜ್ಞಯಾ ಸಮಸ್ತಶಃ ಶಕ್ರಾದಿಸುರಾಶ್ಚ ಕರಂ ದಾಸ್ಯಂತಿ। ತಥಾ ಇತರೇ ಶೇಷಗರುಡರುದ್ರಾಶ್ಚ ಮದಾಜ್ಞಯಾ ದಾಸ್ಯಂತೀತ್ಯರ್ಥಃ। ಯದ್ವಾ ತಥಾ ಬಾಣಾದಿವತ್ ಸಮಸ್ತೋಽಸುರಾಶ್ಚ ಕರಂ ಪ್ರದಾಸ್ಯಂತಿ। ತಥಾ ಇತರೇ ಅಸುರೇಭ್ಯ ಇತರೇ ದೇವಾಶ್ಚಮದಾಜ್ಞಯಾ ದಾಸ್ಯಂತೀತ್ಯರ್ಥಃ । - (ತಾ.)

೧೭೮. ಅನ್ಯೈರ್ಜೇತುಮಶಕ್ಯತ ಇತ್ಯತ್ರ ಅಶಕ್ಯತ ಇತಿ ಭಾವಪ್ರಧಾನೋ ನಿರ್ದೇಶಃ ॥ – (ವಾ.)

೧೭೮. ಕ್ರತುನಾ ರಾಜಸೂಯೇನ ಕ್ರತೋರ್ಭೋಕ್ತಾರಮಚ್ಯುತಮ್ ।
ಅತರ್ಪಯದ್ಧಿ ಯೋ ಭೀಮಃ ಸ ತಸ್ಯ ಪ್ರಿಯಕೃನ್ನ ಕಿಮ್ ।
ತಸ್ಮಾದ್ಭೀಮಃ ಪರೇ ತತ್ತ್ವೇ ಶುದ್ಧೋಽಭೂದ್ ಬುದ್ಧಿಶುದ್ಧಿಮಾನ್ ॥ – ಸರಸಭಾರತೀವಿಲಾಸ (೬/೩೨/೩೩)

ಆ: ಜರಾಸಂಧನ ವಧೆ, ಕರ್ಣಜಯ, ಕೀಚಕಾದಿಗಳ ಮೇಲಿನ ಜಯ - ಇವು ಅವರೆಲ್ಲ ಇತರರಿಗೆ ಅಜೇಯರಾದ್ದರಿಂದ ರಾಜಸೂಯಯಾಗಕ್ಕೆ ಪ್ರಧಾನವಾದ ಸಾಧನ ಭೀಮಸೇನನೇ ಎಂದು ಹೇಳಲ್ಪಟ್ಟಿದೆ.

ವಿ: ಪ್ರಸ್ತುತ ರಾಜಸೂಯ ಯಾಗದ ಪ್ರಧಾನ ಕಾರಣ ಭೀಮಸೇನನೇ ಎಂಬುದನ್ನು ಇಲ್ಲಿ ವಿವರಿಸಿರುವರು. ಶ್ರೀಕೃಷ್ಣ ಮುಂಚೆಯೇ ತಿಳಿಸಿದಂತೆ ಜರಾಸಂಧನಿರುವವರೆಗೂ ರಾಜಸೂಯ ಯಾಗ ನಡೆಯುವಂತಿರಲಿಲ್ಲ. ಅದನ್ನು ಸಾಧಿಸಿದ್ದು ಭೀಮಸೇನ. ಅದರಂತೆ ಮುಂದೆ ನಡೆಯುವ ದಿಗ್ವಿಜಯದಲ್ಲಿ ಕರ್ಣನನ್ನು, ಕೀಚಕಾದಿ ಮಹಾರಾಕ್ಷಸರನ್ನೂ ಜಯಿಸಿದ ಹಿರಿಮೆ ಭೀಮಸೇನನದೇ. ಆದ್ದರಿಂದ ಆ ಯಾಗದಲ್ಲಿ ಪ್ರಧಾನ ಪಾತ್ರ ಭೀಮನದೇ. ಆದ್ದರಿಂದ ಅದರ ಮುಖ್ಯ ಫಲವಾದ ಬ್ರಹ್ಮಪದವಿ ಲಭಿಸುವುದು ಅವನಿಗೇ ಎಂದರ್ಥ.

ಅರ್ಜುನಾದಿಗಳ ಪಾತ್ರ

ದ್ವಿತೀಯಃ ಫಲ್ಗುನಶ್ಚೈವ ತೃತೀಯಸ್ತು ಯುಧಿಷ್ಠಿರಃ ।
ತಸ್ಮಾದ್ಬ್ರಹ್ಮಪದಾವಾಪ್ತ್ಯೈ ವ್ಯಾಸೋ ಭೀಮಸ್ಯ ತಂ ಕ್ರತುಮ್ ।
ಅನನ್ಯಕೃತಮಾದಿಶ್ಯ ದಿಶಾಂ ವಿಜಯಮಾದಿಶತ್ ॥ ೧೭೯ ॥

ಆ: ಅರ್ಜುನ ಎರಡನೆಯ ಮುಖ್ಯ ಕಾರಣ, ಧರ್ಮರಾಜ ಮೂರನೆಯವನು, ಆದ್ದರಿಂದ ಭೀಮನಿಗೆ ಬ್ರಹ್ಮ ಪದ ಪ್ರಾಪ್ತಿಗೆಂದು ವೇದವ್ಯಾಸರು ಇತರರಾರೂ ಮಾಡದಿದ್ದ ಆ ಯಾಗವನ್ನು ಮಾಡಲು ಆದೇಶಿಸಿ ದಿಗ್ವಿಜಯಕ್ಕೆ ಅಪ್ಪಣೆಯಿತ್ತರು.

---

೧೭೯. ದಿಶಾಂ ವಿಜಯಮಾದಿಶದಿತ್ಯತ್ರ ಭಾಗವತೇ ದಿಗ್ವಿಜಯಾನಂತರಂ ಮಾಗಧವಧೋಕ್ತೇಃ ಕಥಮತ್ರ ತದ್ವಧಾನಂತರಂ ದಿಗ್ವಿಜಯೋಕ್ತಿರಿತಿ ಚೇತ್, ಸತ್ಯಮ್ । ಏತದಭಿಪ್ರಾಯಸ್ತ್ವಾಚಾರ್ಯೈರೇವೋಕ್ತೋ ದಶಮತಾತ್ಪರ್ಯೇ । ತಥಾಹಿ ಸಭಾಪರ್ವಣಿ ಪಶ್ಚಾದ್ದಿಗ್ವಿಜಯೋಕ್ತೇಃ ।

> 'ಪೂರ್ವಾಃ ಕಥಾಃ ಪರಂ ಬ್ರೂಯುಃ ಪರಾಃ ಪೂರ್ವಂ ತಥೈವ ಚ।
> ಮೋಹನಾರ್ಥಾಯ ದುಷ್ಟಾನಾಂ ಸರ್ವಂ ವ್ಯತ್ಯಾಸ ಇಷ್ಯತೇ।
> ವಿಸ್ತಾರೇ ತು ಯದುಕ್ತಂ ಸ್ಯಾತ್ತದ್ಗ್ರಾಹ್ಯಮವಿರೋಧತಃ ।
> ಸಂಕ್ಷೇಪೋಕ್ತವಿರೋಧೇ ತು ಗುಣೋಕ್ತಿಶ್ಚ ಸತಾಂ ಯಥಾ' ಇತಿ ಶಬ್ದನಿರ್ಣಯೇ।
>
> 'ಜರಾಸಂಧಂ ನಿಹತ್ಯೈವ ಪಾಂಡವೈಶ್ಚ ದಿಶೋ ಜಿತಾಃ ।
> ಪ್ರಸಾದಾದ್ವಾಸುದೇವಸ್ಯ ರಾಜಸೂಯಃ ಕ್ರತುಃ ಕೃತಃ' ಇತಿ ಮಾತ್ಸ್ಯೇ ॥ (ಭಾ.ತಾ. ೧೦/೮೬/೧೫)
> – (ರಾ.)

ವಿ: ವ್ಯಾಸರು ರಾಜಸೂಯ ಯಾಗವನ್ನು ಮಾತ್ರ ಹೇಳದೇ ಮಹಾಶ್ವಮೇಧ ಯುಕ್ತವಾದ ರಾಜಸೂಯ ಯಾಗವನ್ನು ಮಾಡಲು ಆದೇಶಿಸಿದ್ದು ಈ ವಿಶೇಷ ಕಾರಣದಿಂದಾಗಿ ಎಂದರ್ಥ. ಭೀಮನ ಅನಂತರ ಅದರ ಫಲ ಭಾಗಿಗಳಾಗುವವರು ಅರ್ಜುನ, ಬಳಿಕ ಯುಧಿಷ್ಠಿರ.

ಅರ್ಜುನನ ದಿಗ್ವಿಜಯ ಕಾತರ

ಅಥಾಬ್ರವೀದ್ಧನಂಜಯೋ ಧನುರ್ಧ್ವಜೋ ರಥೋ ವರಃ ।
ಮಮಾಸ್ತಿ ತದ್ದಿಶಾಂ ಜಯೋ ಮಮೈವ ವಾಂಛಿತಃ ಪ್ರಭೋ ॥ ೧೮೦ ॥

ಅ: ಆಗ ಅರ್ಜುನ ನುಡಿದ 'ಪ್ರಭು, ನನಗೆ ಶ್ರೇಷ್ಠವಾದ ಧನುಸ್ಸು, ಧ್ವಜ ಮತ್ತು ರಥ ಇವೆ, ಆದ್ದರಿಂದ ದಿಗ್ವಿಜಯ ಕಾರ್ಯ ನನಗೇ ವಹಿಸಲು ಅಪೇಕ್ಷಿಸುವೆ'.

ವಿ: ೧) ಅರ್ಜುನನ ಅಪಾರ ಉತ್ಸಾಹ ಇಲ್ಲಿ ಎದ್ದು ಕಾಣುವುದು. ತನ್ನಲ್ಲಿರುವ ರಥಾದಿ ಉತ್ತಮ ಸಾಧನ ಸಾಮಗ್ರಿಯನ್ನು ಸಾರ್ಥಕ ಪಡಿಸಿಕೊಳ್ಳುವುದು ಅವನ ಉದ್ದೇಶ. ಹೀಗೆ ತಮ್ಮಲ್ಲಿರುವ ಸಾಧನ ಸಾಮಗ್ರಿಯನ್ನು ಪೂರ್ಣವಾಗಿ ಬಳಸಿಕೊಳ್ಳುವ ಚಿಂತನೆಯನ್ನು ಒದಗಿಸುವ ಅರ್ಜುನನ ಇಲ್ಲಿಯ ಆದರ್ಶ ಅತ್ಯಂತ ಅಪೂರ್ವ.

೨) ಇಲ್ಲಿ ಧನುಸ್ಸು ಮನಸ್ಸಿಗೂ, ರಥ ದೇಹಕ್ಕೂ, ಧ್ವಜ ಲಾಂಛನಕ್ಕೂ ಸಂಕೇತ. ಎಂದರೆ ಉತ್ತಮ ದೇಹ, ಶ್ರೇಷ್ಠ ಮನಸ್ಸು ಹಾಗೂ ಚಕ್ರಾದಿ ಲಾಂಛನಗಳನ್ನು ಧರಿಸುವ ಯೋಗ ಲಭಿಸಿದಾಗ ಅವುಗಳಿಂದ ಮೋಕ್ಷಸಾಧನೆಯಂತಹ ಶ್ರೇಷ್ಠ ಕಾರ್ಯವನ್ನು ಸಾಧಿಸಬೇಕು ಎಂಬುದು ಇಲ್ಲಿಯ ಸಂದೇಶ.

ಶ್ರೀವ್ಯಾಸರ ಹಿತೋಕ್ತಿ

ಇತೀರಿತೋಽಖಿಲಪ್ರಭುರ್ಜಗಾದ ಸತ್ಯಮಸ್ತಿ ತೇ ।
ಸಮಸ್ತಸಾಧನೋನ್ನತಿರ್ಮಹಚ್ಚ ವೀರ್ಯಮಸ್ತಿ ತೇ ॥ ೧೮೧ ॥

ಭೀಮನಿಂದ ಮಾತ್ರ ಪೂರ್ವ ದಿಗ್ವಿಜಯ ಸಾಧ್ಯ

ತಥಾಽಪಿ ಕೀಚಕಾದಯೋ ವೃಕೋದರಾದೃತೇ ವಶಮ್ ।
ನ ಯಾಂತಿ ನಾಪಿ ತೇ ವಶಂ ಪ್ರಯಾತಿ ಕರ್ಣ ಏವ ಚ ॥ ೧೮೨ ॥

ಅ: ಅರ್ಜುನನು ಹೀಗೆನ್ನಲು ಅಖಿಲ ಸ್ವಾಮಿಯಾದ ವೇದವ್ಯಾಸರು ನುಡಿದರು 'ನಿನಗೆ ಸಮಸ್ತ ಸಾಧನ ಸಾಮಗ್ರಿ ಅಪಾರವಾಗಿ ಇರುವುದು ನಿಜ, ಅದರಂತೆ ನಿನಗೆ ಮಹತ್ತರವಾದ

ಸಾಮರ್ಥ್ಯವೂ ಇದೆ. ಆದರೂ ಭೀಮನ ಹೊರತು ಕೀಚಕಾದಿಗಳು, ಅದರಂತೆ ಕರ್ಣ ನಿನಗೆ ವಶರಾಗುವವರಲ್ಲ'.

ವಿ: ಅರ್ಜುನ ಉತ್ಸಾಹದ ಭರದಲ್ಲಿ ಗಮನಿಸದೇ ಇದ್ದುದನ್ನು ವ್ಯಾಸರು ತಿಳಿಸುವರು. ರಥಾದಿ ಉತ್ತಮ ಸಾಧನ ಸಾಮಗ್ರಿಯಿದ್ದರೂ ಎದುರಾಳಿಗಳಾಗುವ ಕೀಚಕಾದಿಗಳನ್ನು, ಕರ್ಣನನ್ನು ಜಯಿಸುವುದು ಅರ್ಜುನನಿಗೆ ಅಸಾಧ್ಯವಾದ ಕಾರ್ಯ. ಕೀಚಕಾದಿಗಳಿಗೆ ಶಿವನ ವರವಿದ್ದರೆ, ಕರ್ಣನಿಗೆ ಕವಚ ಕುಂಡಲಗಳ ರಕ್ಷಣೆಯಿದೆ. ಇಂಥವರನ್ನು ಗೆಲ್ಲುವ ಸಾಮರ್ಥ್ಯ ಭೀಮನದು ಮಾತ್ರ ಎಂದರ್ಥ.

ಬಲಾಧಿಕೋऽಸಿ ಕರ್ಣತಸ್ತಥಾऽಪಿ ನಾಮೃತಃ ಕರಮ್ ।
ದದಾತಿ ತೇ ಹ್ಯತಿಸ್ಪೃಧಾ ನ ವಧ್ಯ ಏಷ ತೇऽದ್ಯ ಚ ॥ ೧೮೩ ॥

ಅ: 'ಕರ್ಣನಿಗಿಂತ ನೀನು ಬಲದಲ್ಲಿ ಮಿಗಿಲಾದವನಾದರೂ, ಅವನು ಜೀವಿಸಿರುವಷ್ಟು ಕಾಲ ನಿನಗೆ ನಿನ್ನ ಮೇಲಿನ ಸ್ಪರ್ಧೆಯಿಂದಾಗಿ ಕಪ್ಪ ಕೊಡಲಾರ. ಅವನನ್ನು ಈಗ ನೀನು ಕೊಲ್ಲುವುದೂ ಅಸಾಧ್ಯ'.

ವಿ: ಸ್ವರೂಪದಲ್ಲಿ ಇಂದ್ರಾವತಾರನಾದ ಅರ್ಜುನ ಸೂರ್ಯಾವತಾರನಾದ ಕರ್ಣನಿಗಿಂತ ಶ್ರೇಷ್ಠ ಎಂಬುದು ನಿಜ. ಆದರೆ, ಪ್ರಾರಬ್ಧವಶಾತ್ ಕರ್ಣನಿಗೆ ಅರ್ಜುನನ ಮೇಲೆ ಸ್ಪರ್ಧೆ ಉಂಟಾಗಿರುವುದರಿಂದ ಅವನು ಬದುಕಿರುವಷ್ಟು ಕಾಲ ಕಪ್ಪ ನೀಡಲಾರ. ಕವಚ ಕುಂಡಲಗಳನ್ನು ಹೊಂದಿರುವುದರಿಂದ ಅವನನ್ನು ಕೊಂದು ಕಪ್ಪ ಪಡೆಯುವುದು ಆಗದ ಕಾರ್ಯ ಎಂದರ್ಥ.

ಸವರ್ಮಕುಂಡಲತ್ವತ್ತೋ ನ ವಧ್ಯ ಏಷ ಯತ್ ತ್ವಯಾ ।
ತತೋ ವೃಕೋದರೋ ದಿಶಂ ಪ್ರಯಾತು ತೇ ಪಿತುಃ ಪ್ರಿಯಾಮ್ ೧೮೪

ಅ: 'ಕವಚ ಕುಂಡಲಗಳ ಸಮೇತ ಇರುವುದರಿಂದಾಗಿ ಅವನನ್ನು ಕೊಲ್ಲುವುದು ನಿನ್ನಿಂದ ಈಗಾಗದು. ಆದ್ದರಿಂದ ನಿನ್ನ ತಂದೆಗೆ ಪ್ರಿಯವಾದ ಪೂರ್ವದಿಕ್ಕಿಗೆ ಭೀಮಸೇನ ತೆರಳಲಿ' .

---

೧೮೪. ದಿಶಂ ಪ್ರಯಾತು ತೇ ಪಿತುಃ ಪ್ರಿಯಾಮಿತ್ಯತ್ರ ತೇ ಪಿತುಃ ಪ್ರಿಯಾಂ= ಐಂದ್ರೀಮಿತ್ಯರ್ಥಃ। ಇದಮಪಿ ಭಾರತಖಂಡಾಪೇಕ್ಷಯಾ। ಅನ್ಯಥಾ ''ದ್ವೀಪಾನ್। ಸಪ್ತ ಚಾಶೇಷದಿಕ್ಷು'' ಇತಿ ವಕ್ಷ್ಯಮಾಣವಿರೋಧಾತ್ ॥ – (ವಾ.)

೧೮೪. ಭರತಖಂಡಾಪೇಕ್ಷಯೇತಿ ಭಾವಃ। ಅನ್ಯಥಾ ದ್ವೀಪಾನ್ ಸಪ್ತ ಚಾಶೇಷದಿಕ್ಷ್ವಿತ್ಯುತ್ತರಶ್ಲೋಕವಿರೋಧಃ। – (ಜ.)

ವಿ: ೧) ಅರ್ಜುನನಿಗೆ ಮುಂದೆ ಕರ್ಣನನ್ನು ಕೊಲ್ಲುವುದು ಸಾಧ್ಯವಾಗಲು ಆ ವೇಳೆಗೆ ಅವನು ಕವಚ ಕುಂಡಲಗಳನ್ನು ದಾನವಾಗಿತ್ತದ್ದು ಕಾರಣವಾಯಿತು. ಕವಚ ಕುಂಡಲಗಳು ಇದ್ದಾಗಲೂ ಗೆಲ್ಲುವುದು ಭೀಮನಿಗೆ ಮಾತ್ರ ಸಾಧ್ಯವಾಗುವ ಕಾರ್ಯ ಎಂಬ ವಿಶೇಷಾಂಶ ಇಲ್ಲಿದೆ. ಇಲ್ಲಿ ಅರ್ಜುನನ ತಂದೆಗೆ ಪ್ರಿಯವಾದ ದಿಕ್ಕು ಎಂದರೆ ಇಂದ್ರ ಅಭಿಮಾನಿ ದೇವತೆಯಾದ ಪೂರ್ವ ದಿಕ್ಕು ಎಂದರ್ಥ.

೨) ಇದೂ ಸಹ ಭರತಖಂಡದ ಮಟ್ಟಿಗೆ ಮಾತ್ರ ಅನ್ವಯಿಸುವ ಮಾತು. ಅದರಾಚೆಗಿನ ಎಲ್ಲ ದಿಕ್ಕುಗಳನ್ನು ಅರ್ಜುನ ಗೆದ್ದ ವಿವರ ಮುಂದೆ ಬರುವುದು ಎಂಬ ಪ್ರಮೇಯ ವಿಶೇಷವನ್ನು ಶ್ರೀವಾದಿರಾಜರು ತಿಳಿಸಿರುವರು.

ಜೀವಗ್ರಾಹಭಯಾತ್ ಕರ್ಣೋ ದದಾತಿ ಕರಮಂಜಸಾ ।
ಭೀಮಾಯ ನಾತ್ರ ಸಂದೇಹೋ ಜಿತೋಽನೇನ ಚ ಸಂಯುಗೇ ॥೧೮೫॥

ಅ: 'ಜೀವಂತ ಸೆರೆಸಿಕ್ಕುವ ಭಯದಿಂದಾಗಿ ಕರ್ಣ ಭೀಮನಿಗೆ ಚೆನ್ನಾದ ರೀತಿಯಲ್ಲೇ ಕಪ್ಪ ನೀಡುವನು. ಈ ಬಗ್ಗೆ ಸಂಶಯ ಬೇಡ. ಅವನು ಈಗಾಗಲೇ ಭೀಮನಿಂದ ಯುದ್ಧದಲ್ಲಿ ಸೋತಿರುವನಲ್ಲವೇ'.

ವಿ: ಭೀಮ ಅಸಾಧಾರಣ ಶಕ್ತಿಸಂಪನ್ನನಾದ್ದರಿಂದ ಕಪ್ಪ ಕೊಡದಿದ್ದರೆ ತನ್ನನ್ನು ಜೀವಂತ ಸೆರೆ ಹಿಡಿದು ಒಯ್ಯುವುದು ನಿಶ್ಚಿತ ಎಂಬ ಭಯದಿಂದ ಕರ್ಣ ಅವನಿಗೆ ವಶನಾಗುವನು. ಭೀಮ ಈ ಮೊದಲೂ ಕರ್ಣನನ್ನು ಸೋಲಿಸಿರುವನು. ಆದ್ದರಿಂದ ಭೀಮನಿಂದಾಗುವಂತೆ ಅರ್ಜುನನಿಂದ ಈ ಕಾರ್ಯ ಆಗದು ಎಂದರ್ಥ.

ಅಜೇಯೌ ಶರ್ವವಚನಾದ್ರಣೇ ಕೀಚಕಪೌಂಡ್ರಕೌ ।
ವಶಂ ಪ್ರಯಾತೋ ಭೀಮಸ್ಯ ತಥಾಽವಧ್ಯೋಽಪಿ ಚೇದಿಪಃ ॥ ೧೮೬ ॥

ಅ: 'ಶಿವನ ವರದಿಂದಾಗಿ ಕೀಚಕ ಮತ್ತು ಪೌಂಡ್ರಕ ವಾಸುದೇವ ಇಬ್ಬರೂ ಅಜೇಯರು. ಆದರೂ ಅವರು ಭೀಮನಿಗೆ ವಶರಾಗುವರು. ಅದರಂತೆ ಅವಧ್ಯನಾದ ಶಿಶುಪಾಲನೂ ಅವನಿಗೆ ವಶನಾಗುವನು'.

---

೧೮೫. ಜೀವಗ್ರಾಹಭಯಾದಿತ್ಯತ್ರ। ಜೀವಗ್ರಾಹೋ ನಾಮ ಜೀವತ ಏವ ಬಲಾತ್ ಗ್ರಹಣಮ್ ॥ –(ವಾ.)

ವಿ: ವಾಯು ಶಿವೋತ್ತಮನಾದ್ದರಿಂದ ಶಿವ ವರದಿಂದ ಕೂಡಿದ ಕೀಚಕ ಪೌಂಡ್ರಕರ ಪರಾಭವ ಉಚಿತ. ಆದರಂತೆ ಶಿಶುಪಾಲನ ಪರಾಭವವೂ ಸಹ. ಆದರೆ ಅರ್ಜುನ ಇಂದ್ರಾವತಾರನಾದ್ದರಿಂದ ಅವನಿಗಿಂತ ಉತ್ತಮನಾದ ಶಿವನ ವರ ಇರುವ ಕೀಚಕಾದಿಗಳನ್ನು ಗೆಲ್ಲುವುದು ಅವನಿಗೆ ಅಸಾಧ್ಯ ಎಂದರ್ಥ.

ಜೀವಗ್ರಾಹಭಯಂ ಹ್ಯೇಷಾಂ ಭೀಮಾನ್ಮಾಗಧಪಾತನಾತ್ ।
ತಸ್ಮಾತ್ ಕರಂ ಪ್ರಯಚ್ಛಂತಿ ಜಿತಾ ವಾ ಪೂರ್ವಮೇವ ವಾ ॥ ೧೮೭ ॥

ಅ: 'ಜರಾಸಂಧನನ್ನು ಭೀಮ ಕೊಂದದ್ದರಿಂದ ಇವರಿಗೆಲ್ಲಾ ಭೀಮನಿಗೆ ಸೆರೆ ಸಿಕ್ಕುವ ಭಯ. ಅವರು ಸೋತೋ ಅಥವಾ ಅದಕ್ಕೆ ಮುನ್ನವೋ ಕಪ್ಪ ಕೊಡುವರು'.

ವಿ: ೧) ಭೀಮನಿಂದ ನಡೆದ ಜರಾಸಂಧ ವಧೆಯ ಪರಿಣಾಮದ ಚಿತ್ರ ಇಲ್ಲಿದೆ. ಬಲರಾಮ–ನಿಂದಲೂ ಹತನಾಗದಿದ್ದ ಜರಾಸಂಧನನ್ನು ಭೀಮ ಕೊಂದಿದ್ದರಿಂದ ಜರಾಸಂಧನ ಅನುಯಾಯಿ–ಗಳಾದ ಶಿಶುಪಾಲಾದಿಗಳಿಗೆಲ್ಲಾ ಭೀಮನ ಬಗ್ಗೆ ಅಪಾರವಾದ ಅಂಜಿಕೆಯುಂಟಾಗಿತ್ತು. ಜರಾಸಂಧ–ನಂಥವನೇ ಭೀಮನಿಂದ ಹತನಾದಾಗ ತಮ್ಮಂಥವರ ಪಾಡೇನು ಎಂಬ ಅಂಜಿಕೆಯಿಂದ ಅವರು ಯುದ್ಧಮಾಡದೆಯೇ ಕಪ್ಪ ಕೊಡುವರು. ಸೋತು ಕಪ್ಪ ಕೊಡುವುದಂತೂ ನಿಶ್ಚಿತವೇ ಎಂದರ್ಥ.

೨) ಶ್ರೀಕೃಷ್ಣ ತಿಳಿಸಿದಂತೆ ಜರಾಸಂಧವಧೆ ರಾಜಸೂಯ ಯಾಗಕ್ಕೆ ಮಹಾದ್ವಾರ–ದಂತಾಯಿತು ಎಂಬುದನ್ನು ಗಮನಿಸಬೇಕು.

ಪ್ರಯಾಹಿ ಚ ತ್ವಂ ಧನದಪ್ರಪಾಲಿತಾಂ
ದಿಶಂ ದ್ವೀಪಾನ್ ಸಪ್ತ ಚಾಶೇಷದಿಕ್ಷು ।
ನಾಗಾಂಶ್ಚ ದೈತ್ಯಾಂಶ್ಚ ತಥಾಽಧರಸ್ಥಾನ್
ವಿಜಿತ್ಯ ಶೀಘ್ರಂ ಪುನರೇಹಿ ಚಾತ್ರ ॥ ೧೮೮ ॥

ಅ: 'ನೀನು ಕುಬೇರನಿಂದ ಪಾಲಿತವಾದ ಉತ್ತರ ದಿಕ್ಕಿಗೆ ತೆರಳು, ಸಪ್ತ ದ್ವೀಪಗಳನ್ನು, ಎಲ್ಲ ದಿಕ್ಕುಗಳಲ್ಲಿನ ನಾಗರನ್ನು, ದೈತ್ಯರನ್ನು ಹಾಗೆಯೇ ಕೆಳಗಿನ ಲೋಕಗಳಲ್ಲಿರುವ ದೈತ್ಯರನ್ನು ಗೆದ್ದು ಬೇಗನೆ ಇಲ್ಲಿಗೆ ಮರಳಿ ಬಾ'.

---

೧೮೮. ಸೋಮಕುಬೇರಾವುಭಾವಪಿ ಉತ್ತರದಿಗಧಿಪತಿಧನದಪ್ರಪಾಲಿತಾಮಿತ್ಯತ್ರ ಈಶಾನೀದಿಶಮಿತಿ ಕೇಚಿತ್। ಅಶೇಷದಿಕ್ಷು ಸಪ್ತದ್ವೀಪಾನ್ ಸ್ಥಿತಾನಿತಿ ಶೇಷಃ। –(ಜ.)

ವಿ: ಅರ್ಜುನನಿಗೆ ವ್ಯಾಸರು ವಹಿಸಿದ ದಿಕ್ಕು ಉತ್ತರ ದಿಕ್ಕು. ಭರತಖಂಡದ ಉತ್ತರ ದಿಕ್ಕಿನ ರಾಜರುಗಳನ್ನು ಗೆದ್ದು ಬಳಿಕ ಇತರ ಎಲ್ಲಾ ದ್ವೀಪಗಳಲ್ಲಿನ, ಎಲ್ಲಾ ದಿಕ್ಕುಗಳಲ್ಲಿನ ದೈತ್ಯರನ್ನು, ಪಾತಾಳದಲ್ಲಿನ ನಾಗರು ಮೊದಲಾದವರನ್ನು ಗೆದ್ದು ಕಪ್ಪ ಕಾಣಿಕೆಗಳನ್ನು ತರುವ ಕಾರ್ಯವನ್ನು ಅವನಿಗೆ ವಹಿಸಿದರು.

ರಥೋ ಹಿ ದಿವ್ಯೋ೭ಂಬರಗಸ್ತವಾಸ್ತಿ
ದಿವ್ಯಾನಿ ಚಾಸ್ತ್ರಾಣಿ ಧನುಶ್ಚ ದಿವ್ಯಮ್ ।
ಯೇ೭ನ್ಯೇ ಚ ಬಾಣಪ್ರಮುಖಾ ಅಜೇಯಾಃ
ಶರ್ವಾಶ್ರಯಾಸ್ತಾನಪಿ ಭೀಮ ಏತು ॥ ೧೮೯ ॥

ಅ: 'ನಿನಗೆ ಗಗನದಲ್ಲಿ ಸಂಚರಿಸುವ ದಿವ್ಯರಥ ಇದೆ, ಹಾಗೆಯೇ ದಿವ್ಯವಾದ ಅಸ್ತ್ರಗಳೂ ಇವೆ, ದಿವ್ಯವಾದ ಧನುಸ್ಸಿದೆ. ಆದರೂ ಶಿವನ ವರದಿಂದಾಗಿ ಅಜೇಯರಾದ ಬಾಣ ಮೊದಲಾದವರನ್ನು ಎದುರಿಸಲು ಮಾತ್ರ ಭೀಮನೇ ತೆರಳಲಿ'.

ವಿ: ೧) ಅರ್ಜುನನ ರಥದ ಬಗ್ಗೆ ಅಪೂರ್ವ ಉಲ್ಲೇಖ ಇಲ್ಲಿದೆ, ಅದು ಭೂಮಿಯಲ್ಲಿ ಮಾತ್ರವಲ್ಲದೇ ಗಗನದಲ್ಲೂ ಸಂಚರಿಸಬಲ್ಲಂತಹ ಅಪೂರ್ವ ರಥ. ಆದರಿಂದಾಗಿ ಅವನು ಸಪ್ತ ದ್ವೀಪಗಳನ್ನು ಮಾತ್ರವಲ್ಲದೇ ಪಾತಾಳಾದಿ ಲೋಕಗಳನ್ನೂ ಸಹ ಸಂಚರಿಸಿ ಅಲ್ಲಿಯ ಜನರನ್ನು ಗೆಲ್ಲುವುದು ಸಾಧ್ಯ ಎಂದರ್ಥ.

೨) ಬಾಣ ಮೊದಲಾದವರು ಸಹ ಉತ್ತರ ದಿಕ್ಕಿನಲ್ಲಿದ್ದವರು. ಅವರನ್ನು ಸಹ ಭೀಮಸೇನನೇ ಜಯಿಸಬೇಕು ಎಂಬ ಎಚ್ಚರವನ್ನು ಈ ಮೂಲಕ ಅರ್ಜುನನಿಗೆ ನೀಡಿದರು ಎಂದು ತಿಳಿಯಬೇಕು.

ತಥಾ೭ಸುರಾಶ್ಚಾಪಿ ಸಮಸ್ತಶೋ೭ಸ್ಯ ಬಲಿಂ
ಪ್ರಯಚ್ಛಂತಿ ಮದಾಜ್ಞಯೇತರೇ ।
ದಿಶಂ ಪ್ರತೀಚೀಮಥ ದಕ್ಷಿಣಾಂ ಚ
ಯಾತಾಂ ಯಮೌ ಕ್ರಮಶೋ ಹ್ಯಧ್ವರಾರ್ಥೇ ॥ ೧೯೦ ॥

---

೧೮೯. ಬಹುಲಕ್ಷಯೋಜನಾಭ್ಯಂತರಿತಸಪ್ತಸಮುದ್ರೋತ್ತರಣಂ ಕಥಮರ್ಜುನಸ್ಯೇತ್ಯತ ಉಕ್ತಮ್ – ರಥೋ ಹಿ ದಿವ್ಯೋ೭ಂಬರಗ ಇತಿ ॥ –(ವಾ.)

ಯಶಶ್ಚ ಧರ್ಮಶ್ಚ ತಯೋರಪಿ ಸ್ಯಾ-
ದಿತಿ ಸ್ಮ ಕೃಷ್ಣೇನ ಸುತೇನ ಕಾಲ್ಯಾಃ ।
ಉಕ್ತೇ ಯಯುಸ್ತೇ ತಮಭಿಪ್ರಣಮ್ಯ
ದಿಶೋ ಯಥೋಕ್ತಾಃ ಪರಮೋರುಸದ್ಗುಣಮ್ ॥ ೧೯೧ ॥

ಅ: 'ಅದರಂತೆ ನನ್ನ ಆದೇಶದಂತೆ ಇತರ ಸುರರೂ ಸಹ ಭೀಮನಿಗೆ ಕಾಣಿಕೆಯನ್ನು ಒಪ್ಪಿಸುವರು. ಅನಂತರ ಪಶ್ಚಿಮ ದಿಕ್ಕಿಗೂ ಮತ್ತು ದಕ್ಷಿಣ ದಿಕ್ಕಿಗೂ ನಕುಲ ಸಹದೇವರು ದಿಗ್ವಿಜಯಕ್ಕೆ ತೆರಳಲಿ, ಅವರಿಗೂ ಕೀರ್ತಿ ಹಾಗೂ ಪುಣ್ಯಗಳು ಲಭಿಸಲಿ' ಹೀಗೆ ಶ್ರೀ ವೇದವ್ಯಾಸರಿಂದ ಆದೇಶಿಸಲ್ಪಡಲು ಅವರೆಲ್ಲ ಮಹಾಗುಣವಂತರಾದ ಅವರಿಗೆ ಭಕ್ತಿಯಿಂದ ನಮಸ್ಕರಿಸಿ ಅವರು ತಿಳಿಸಿದ ದಿಕ್ಕುಗಳಿಗೆ ತೆರಳಿದರು.

ವಿ: ೧) ಭೀಮನಿಗೆ ನರರು ಮಾತ್ರವಲ್ಲದೇ ಸುರರೂ ಸಹ ಕಾಣಿಕೆ ನೀಡಿ ಸಹಕರಿಸುವರು ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಸಿರುವರು. ಮುಂದೆ ಭೀಮಸೇನ ಶಿವಾದಿಗಳನ್ನು ಜಯಿಸಿದ ವಿವರದಿಂದ ಇದು ಸ್ಫುಟಪಡುವುದು. (ಶ್ಲೋ.೧೯೮, ೧೯೯) ಪಶ್ಚಿಮ, ದಕ್ಷಿಣ ದಿಕ್ಕುಗಳಿಗೆ ತೆರಳಿ ಅರ್ಜುನ ಅಲ್ಲಿಯವರನ್ನು ಜಯಿಸುವ ಸಾಮರ್ಥ್ಯ ಉಳ್ಳವನಾದರೂ ಅವನು ಅಲ್ಲಿಗೆ ತೆರಳದೇ ಆ ಅವಕಾಶವನ್ನು ನಕುಲಸಹದೇವರಿಗೆ ನೀಡಬೇಕೆಂಬುದು ವ್ಯಾಸರ ಮತ್ತೊಂದು ಆದೇಶ. ಅದರಿಂದಾಗಿ ಅವರಿಗೂ ಕೀರ್ತಿ ಹಾಗೂ ಪುಣ್ಯಗಳು ಲಭಿಸಬೇಕು.

೨) ಚಿಕ್ಕವರಿಗೂ ಸಹ ಉತ್ತಮ ಅವಕಾಶಗಳನ್ನು ನೀಡುವ ಮೂಲಕ ಅವರನ್ನು ಪುಣ್ಯ ಭಾಗಿಗಳನ್ನಾಗಿ ಮಾಡುವ ಆದರ್ಶ ತತ್ತ್ವ ಇಲ್ಲಿ ನಿರೂಪಿತವಾಗಿದೆ. ವ್ಯಾಸರು ಹೀಗೆ ತಿಳಿಸಿದಾಗ ಪಾಂಡವರಾರೂ ಅದನ್ನು ಅಪಾರ್ಥ ಮಾಡಿಕೊಳ್ಳದೇ ಉತ್ತಮ ರೀತಿಯಲ್ಲಿ ತಿಳಿದು ಅದರಂತೆ ನಡೆಯಲು ಅವರು '**ಪರಮೋರುಸದ್ಗುಣಾಃ**' – ಮಹಾಸದ್ಗುಣಶಾಲಿಗಳಾಗಿದ್ದುದೇ ಕಾರಣ ಎಂದು

---

೧೯೦. ತಥಾಸುರಾಶ್ಚಾಪಿ ಸಮಸ್ತಶ ಇತ್ಯತ್ರ ಸುರಾ ಇತಿ ಪದಚ್ಛೇದಃ। ಹಿಮವಚ್ಛಿಖರೇ ದೇವಾನಿತಿ ವಕ್ಷ್ಯಮಾಣತ್ವಾತ್॥ – (ವಾ.)

೧೯೦. ಇತರೇ ಕೀಚಕಬಾಣಾದಿಭ್ಯೋಽನ್ಯೇಽಸುರಾ ಬಲಿಂ ಕರಂ ಪ್ರಯಚ್ಛಂತಿ । ತವೇತಿ ಶೇಷಃ । ನನು ತ್ರೈಗರ್ತಾದಯೋಽಸುರಾ ರುದ್ರಾದಿವರಾದಜೇಯಾಃ ಕಥಂ ಬಲಿಂ ಪ್ರಯಚ್ಛಂತೀತ್ಯತ ಆಹ ಮದಾಜ್ಞಯೇತಿ। ಕೇಚಿತ್ತಥಾಸುರಾ ಇತ್ಯತ್ರ ಸುರಾ ಇತಿ ಪದಚ್ಛೇದಂ ಕುರ್ವಂತಿ । ತತ್ರ ಸುರಾ ಬಲಿಂ ಪ್ರಯಚ್ಛಂತಿ ಭೀಮಾಯೇತ್ಯಧ್ಯಾಹಾರೇಣ ಯೋಜ್ಯಂ । – (ಜ.)

೧೯೧. ಕೃಷ್ಣೇನ ಸುತೇನ ಕಾಲ್ಯಾ ಇತ್ಯತ್ರ ಕಾಲ್ಯಾಃ= ಸತ್ಯವತ್ಯಾ ಇತ್ಯರ್ಥಃ॥ – (ವಾ.)

ತಿಳಿಸಿರುವರು. ಇಲ್ಲಿ 'ತಥಾ ಅಸುರಾಶ್ಚಾಪಿ' ಎಂದು ಪದವಿಭಾಗ ಮಾಡಿಕೊಂಡರೆ ಅಸುರರೂ ಸಹ ಭೀಮನಿಗೆ ಅಂಜಿ ಕಪ್ಪ ಕಾಣಿಕೆ ನೀಡುವರು ಎಂಬ ಅರ್ಥವಿಶೇಷ ದೊರೆಯುವುದು.

ಭೀಮಸೇನನ ಅಪೂರ್ವ ಪೂರ್ವ ದಿಗ್ವಿಜಯ

ವೃಕೋದರೋಽಜಯನ್ನೃಪಾನ್ ವಿರಾಟಮಾಸಸಾದ ಹ ।
ಜಿತೇಽತ್ರ ಕೀಚಕೇ ರಣೇ ಸಮಾದದೇ ಕರಂ ತತಃ ॥ ೧೯೨ ॥

ಅ: ಭೀಮಸೇನನು ರಾಜರುಗಳನ್ನು ಪರಾಭವಗೊಳಿಸಿದ. ಬಳಿಕ ವಿರಾಟರಾಜನ ಬಳಿಗೆ ತೆರಳಿದ. ಅಲ್ಲಿ ಕೀಚಕ ಯುದ್ಧದಲ್ಲಿ ಸೋತಾಗ ಭೀಮ ಅವನಿಂದ ಕಪ್ಪವನ್ನು ಪಡೆದುಕೊಂಡ.

ವಿ: ವಿರಾಟ ಕೀಚಕನಿಂದ ರಕ್ಷಿತನಾದ್ದರಿಂದ ಆ ಕಾಲದಲ್ಲಿ ಅವನು ಪ್ರಬಲ ರಾಜರುಗಳ ಸಾಲಿಗೆ ಸೇರಿದ್ದ. ಭೀಮ ಕೀಚಕನನ್ನು ಸೋಲಿಸಿ ಅವನಿಂದ ಕಪ್ಪ ಪಡೆದು ತೆರಳಿದ. ಭೀಮ ಕೀಚಕನನ್ನು ಕೊಂದ ವಿವರ ವಿರಾಟಪರ್ವದಲ್ಲಿ (೨೩/೨೬) ಬರುವುದು.

ಶಿಶುಪಾಲನ ಶರಣಾಗತಿ

ತತಃ ಕ್ರಮಾನ್ನೃಪಾನ್ ಜಿತ್ವಾ ಚೇದೀನಾಂ ವಿಷಯಂ ಗತಃ ।
ಮಾತೃವಾಕ್ಯಾದ್ಭಯಾಚ್ಚೈವ ಶಿಶುಪಾಲೇನ ಪೂಜಿತಃ ॥ ೧೯೩ ॥

ಅ: ಅನಂತರ ಕ್ರಮವಾಗಿ ರಾಜರುಗಳನ್ನು ಗೆದ್ದು ಭೀಮಸೇನ ಚೇದಿ ದೇಶವನ್ನು ತಲುಪಿದ. ಶಿಶುಪಾಲ ತನ್ನ ತಾಯಿಯ ಮಾತಿನಿಂದಲೂ, ಭೀಮನ ಭಯದಿಂದಲೂ ಅವನನ್ನು ಪೂಜಿಸಿದ.

ವಿ: ವ್ಯಾಸರು ತಿಳಿಸಿದ್ದಂತೆ ಯುದ್ಧ ಮಾಡದೇ ಕಪ್ಪ ನೀಡಿದವರಲ್ಲಿ ಶಿಶುಪಾಲ ಪ್ರಧಾನ. ಅವನಿಗೆ ಒಂದೆಡೆ ಅಂಜಿಕೆ, ಮತ್ತೊಂದೆಡೆ ತಾಯಿಯ ಹಿತೋಕ್ತಿ. ಅದರಿಂದಾಗಿ ಅವನು ಭೀಮನೊಂದಿಗೆ ಯುದ್ಧ ಮಾಡದೇ ಆದರದಿಂದ ಕಂಡು ಸತ್ಕರಿಸಿದ. ಅವನು ಹಾಗೆ ಆದರ ಭಾವ ಹೊಂದಲು ಒಳಗಿದ್ದ ಜಯನ ಆವೇಶವು ಮತ್ತೊಂದು ಕಾರಣ ಎಂದು ತಿಳಿಯಬಹುದು. ಶಿಶುಪಾಲನ ತಾಯಿ ಭೀಮನಿಗೆ ಚಿಕ್ಕಮ್ಮ (೧೪/೮೮). ಅದು ಅವಳು ಶಿಶುಪಾಲನಿಗೆ ಹಿತೋಕ್ತಿ ನೀಡಲು ಕಾರಣವಾಯಿತು ಎಂದು ತಿಳಿಯಬೇಕು.

ಮಾತೃಷ್ವಸುರ್ಗೃಹೇ ಚೋಷ್ಯ ದಿವಸಾನ್ ಕತಿಚಿತ್ ಸುಖಮ್ ।
ಕರಂ ಸುಮಹದಾದಾಯ ತತಃ ಪೂರ್ವಾಂ ದಿಶಂ ಯಯೌ ॥ ೧೯೪ ॥

ಅ: ಭೀಮ ಚಿಕ್ಕಮ್ಮನ ಮನೆಯಲ್ಲಿ ಕೆಲವು ದಿವಸಗಳ ಕಾಲ ಸುಖವಾಗಿ ವಾಸಿಸಿ, ಅಪಾರವಾದ ಕಪ್ಪವನ್ನು ತೆಗೆದುಕೊಂಡು, ದಿಗ್ವಿಜಯ ಮುಂದೆವರೆಸಿದ. ಭೀಮ ಒಟ್ಟು ಅಲ್ಲಿ ಒಂದು ತಿಂಗಳ ಕಾಲ ಇದ್ದ ವಿವರ ಮಹಾಭಾರತದಲ್ಲಿದೆ.

ಪೌಂಡ್ರಕ ಕರ್ಣಾದಿಗಳ ಪರಾಭವ – ಹಿಮಾಲಯ ಶಿಖರದಲ್ಲಿ ಗರುಡ ಶೇಷಾದಿಗಳ ಪರಾಭವ

ಕ್ರಮೇಣ ಸರ್ವಾನ್ ನಿರ್ಜಿತ್ಯ ಪೌಂಡ್ರಕಂ ಚ ಮಹಾಬಲಮ್ ।
ವಿರಥೀಕೃತ್ಯ ಕರ್ಣಂ ಚ ಕರಮಾದಾಯ ಸರ್ವತಃ ॥ ೧೯೫ ॥

ಹಿಮವಚ್ಛಿಖರೇ ದೇವಾನ್ ಜಿತ್ವಾ ಶಕ್ರಪುರೋಗಮಾನ್ ।
ಕ್ರೀಡಾರ್ಥಂ ಯುಧ್ಯತಸ್ತೇಭ್ಯಸ್ತುಷ್ಟೇಭ್ಯೋ ರತ್ನಸಂಚಯಮ್ ॥ ೧೯೬ ॥

ಅ: ಕ್ರಮವಾಗಿ ಎಲ್ಲ ರಾಜರುಗಳನ್ನು ಗೆದ್ದು ಮಹಾ ಬಲಶಾಲಿಯಾದ ಪೌಂಡ್ರಕನನ್ನು ಮತ್ತು ಕರ್ಣನನ್ನು ವಿರಥರನ್ನಾಗಿಸಿ ಎಲ್ಲರಿಂದಲೂ ಕಪ್ಪವನ್ನು ತೆಗೆದುಕೊಂಡು ಭೀಮಸೇನ ಹಿಮಾಲಯ ಪರ್ವತದ ಶಿಖರದಲ್ಲಿ ಇಂದ್ರ ಮೊದಲಾದ ದೇವತೆಗಳನ್ನು ಗೆದ್ದ. ಕ್ರೀಡೆಗೆಂದು ಯುದ್ಧಮಾಡಿದ ಅವರು ಸಂತೋಷದಿಂದ ರತ್ನಗಳ ರಾಶಿಯನ್ನು ನೀಡಿದರು.

ವಿ: ೧) ಭೀಮ ಸುರರನ್ನು ಗೆಲ್ಲುವ ಹಿಂದಿನ (ಶ್ಲೋ. ೧೯೧) ಉಲ್ಲೇಖದಂತೆ ಇಲ್ಲಿ ನಡೆದಿದೆ. ಹಿಮವತ್ಪರ್ವತದಲ್ಲಿ ಶಿವಾದಿ ದೇವತೆಗಳು ಭೀಮನೊಂದಿಗೆ ವಿನೋದದಿಂದ ಯುದ್ಧ ಮಾಡಿ, ಸೋತು, ರತ್ನಗಳ ರಾಶಿಯನ್ನೇ ಕಾಣಿಕೆಯನ್ನಾಗಿ ಒಪ್ಪಿಸಿದರು.

೨) ವ್ಯಾಸರು ಹೇಳಿದಂತೆ ಕರ್ಣ ಭೀಮನಿಗೆ ಸೋತು ಕಪ್ಪ ನೀಡಿದ. ಕವಚ ಕುಂಡಲ ಸಮೇತನಾದ ಕರ್ಣನನ್ನು ಹೀಗೆ ಅನಾಯಾಸದಿಂದ ಸೋಲಿಸಿದ ಹಿರಿಮೆ ಭೀಮಸೇನನದು ಮಾತ್ರ ಎಂಬುದನ್ನು ಗಮನಿಸಬೇಕು.

---

೧೯೪. ತತೋ ಭೀಮಸ್ತತ್ರ ರಾಜನ್ನುಷಿತ್ವಾ ತ್ರಿದಶ ಕ್ಷಪಾಃ ।
ಸತ್ಕೃತಃ ಶಿಶುಪಾಲೇನ ಯಯೌ ಸಬಲವಾಹನಃ ॥ – ಭಾರತ (೨/೨೯/೧೬)

೧೯೫. ಸ ಕರ್ಣಂ ಯುಧಿ ನಿರ್ಜಿತ್ಯ ವಶೇ ಕೃತ್ವಾ ಚ ಭಾರತ ।
ತತೋ ವಿಜಿಗ್ಯೇ ಬಲವಾನ್ ರಾಜ್ಞಃ ಪರ್ವತವಾಸಿನಃ ॥ – ಭಾರತ (೨/೩೦/೨೦)

ಬಾಹುಯುದ್ಧೇನ ಶೇಷಂ ಚ ಗರುಡಂ ಚ ಮಹಾಬಲಮ್ ।
ಕ್ರೀಡಮಾನೌ ವಿನಿರ್ಜಿತ್ಯ ಭೂಷಣಾನ್ಯಾಪ ತೋಷತಃ ।
ತಾಭ್ಯಾಂ ಚ ದೃಢಮಾಶ್ಲಿಷ್ಟಃ ಸ್ನೇಹವಿಕ್ಲಿನ್ನಯಾ ಧಿಯಾ ॥ ೧೯೭ ॥

ಅ: ಮಹಾಬಲಶಾಲಿಗಳಾದ ಶೇಷ ಮತ್ತು ಗರುಡರೂ ಸಹ ಕ್ರೀಡೆಗಾಗಿ ಯುದ್ಧ ಮಾಡಿದಾಗ ಅವರನ್ನೂ ಸೋಲಿಸಿ ಭೀಮಸೇನ ಅವರು ಒಪ್ಪಿಸಿದ ಭೂಷಣಗಳನ್ನು ಸಂತೋಷದಿಂದ ಸ್ವೀಕರಿಸಿದ. ಅವರು ಸ್ನೇಹಾರ್ದ್ರ ಮನಸ್ಸಿನಿಂದ ಭೀಮನನ್ನು ಗಾಢವಾಗಿ ಆಲಿಂಗಿಸಿಕೊಂಡರು.

ವಿ: ಗರುಡ, ಶೇಷರ ಮೇಲಿನ ವಿಜಯ ಭೀಮನ ಜೀವೋತ್ತಮತ್ವಕ್ಕೆ ಅತ್ಯಂತ ಅಪೂರ್ವವಾದ ನಿದರ್ಶನ. ''ನಿರ್ಣಯಃ ಸರ್ವಶಾಸ್ತ್ರಾಣಾಂ'' ಎಂಬ ಮಾತಿಗೆ ಇವೆಲ್ಲವೂ ದೃಷ್ಟಾಂತ ಎಂದು ಗಮನಿಸಬೇಕು.

ಬಾಣಾಸುರ ಪರಾಭವ

ಪ್ಲೋಪ್ಲೂಯಮಾನಃ ಸ ತತೋಽಂಬುಧೌ ಬಲೀ
ಜಗಾಮ ಬಾಣಸ್ಯ ಪುರಂ ಹರಂ ಚ ।
ರಣೇಽಜಯದ್ಭಾರಣರೂಪಮಾಸ್ಥಿತಂ
ಕ್ರೀಡಂತಮೇತೇನ ಚ ತೋಷಿತೋ ಹರಃ ॥ ೧೯೮ ॥

ಅ: ಬಲಿಷ್ಠನಾದ ಭೀಮಸೇನ ಬಳಿಕ ಸಮುದ್ರದಲ್ಲಿ ಈಜುತ್ತಾ ಬಾಣಾಸುರನ ಪಟ್ಟಣಕ್ಕೆ ತೆರಳಿದ. ಅಲ್ಲಿ ಯುದ್ಧದಲ್ಲಿ ಆನೆಯ ರೂಪದಲ್ಲಿ ಬಂದ ಶಿವನನ್ನು ಸೋಲಿಸಿದ. ಕ್ರೀಡೆಗೆಂದು ಕಾದಿದ ಹರ ಭೀಮನಿಂದ ಸಂತೋಷಹೊಂದಿದ.

ವಿ: ೧) ಬಾಣಾಸುರನಿಗೆ ಶಿವ ರಕ್ಷಕನಾಗಿ ಇರುವುದು ಪ್ರಸಿದ್ಧ. ಬಾಣ ಬಲಿಯ ಮಗ, ಬಲಿಯ ರಕ್ಷಕನಾಗಿ ಹರಿ ವಾಮನ ರೂಪದಿಂದ ನೆಲೆಸಿದರೆ, ಅವನ ಪುತ್ರನಾದ ಬಾಣನ ರಕ್ಷಣೆಗಾಗಿ ಹರ ಅವನ ಪಟ್ಟಣದಲ್ಲಿ ನೆಲೆಸಿದ್ದ. ಭೀಮಸೇನ ರಕ್ಷಕನಾಗಿದ್ದ ಹರನೊಂದಿಗೆ ಬಾಣನನ್ನೂ ಸೋಲಿಸಿದ.

೨) ಹರ ಇಲ್ಲಿ ಕಾದಿದ್ದು ಕೇವಲ ಕ್ರೀಡೆಗಾಗಿ. ಆ ಮೂಲಕ ಭೀಮನ ಹಿರಿಮೆ ಜಗತ್ತಿಗೆ ತಿಳಿಯಲೆಂಬ ಕಾತರದಿಂದಾಗಿ. ಆದ್ದರಿಂದ ಅದು ದೋಷವಾಗದೇ ಗುಣವೇ ಆಯಿತು ಎಂದು ತಿಳಿಯಬೇಕು. ಹನುಮದ್ರೂಪದಿಂದ ದಕ್ಷಿಣಸಮುದ್ರ ಹಾರಿದ ವಾಯು ಇಲ್ಲಿ ಭೀಮ ರೂಪದಿಂದ

---

೧೯೮. ಪ್ಲೋಪ್ಲೂಯಮಾನಃ = ಬಾಹುಭ್ಯಾಂ ಪ್ಲವನ್ನಿತ್ಯರ್ಥಃ । – (ಜ.)

ಪೂರ್ವಸಮುದ್ರವನ್ನು ಈಜಿದ್ದು ಮತ್ತೊಂದು ವಿಶೇಷ. ಅದು ಹಾರಿದ ದಾಖಲೆಯಾದರೆ, ಇದು ಈಜಿದ ದಾಖಲೆಯಾಯಿತು.

ಪೃಷ್ಟಶ್ಚ ಗಿರಿಶೇನಾಸೌ ವಿಸ್ತರಂ ದಿಗ್ಜಯಸ್ಯ ಚ ।
ಸಿಂಹವ್ಯಾಘ್ರಾದಿರೂಪಾಶ್ಚ ಹ್ಯಾತ್ಮನಾ ವಿಜಿತಾ ಯಥಾ ।
ಗರುತ್ಮಚ್ಛೇಷಶಕ್ರಾದ್ಯಾ ದೇವಾಃ ಸರ್ವೇ ತದಬ್ರವೀತ್ ॥ ೧೯೯ ॥

ಅ: ಶಿವ ಕೇಳಿದಾಗ ತನ್ನ ದಿಗ್ವಿಜಯದ ವಿವರಗಳನ್ನೂ ತನ್ನಿಂದ ಸಿಂಹ, ಹುಲಿ ಮೊದಲಾದ ರೂಪಗಳಲ್ಲಿನ ಗರುಡ, ಶೇಷ, ಇಂದ್ರ ಮೊದಲಾದ ದೇವತೆಗಳು ಪರಾಭವಗೊಂಡಿದ್ದನ್ನೂ ಭೀಮ ತಿಳಿಸಿದ.

ವಿ: ಶಿವನಿಂದ ಪ್ರಾರ್ಥಿತನಾದ ಭೀಮ ತನ್ನ ದಿಗ್ವಿಜಯದ ವಿವರಗಳನ್ನು ಅವನಿಗೆ (ಶ್ಲೋ. ೧೯೭) ತಿಳಿಸಿದ ವಿವರ ಇಲ್ಲಿದೆ. ಹಿಂದೆ ಗರುಡ, ಶೇಷಾದಿಗಳನ್ನು ಭೀಮ ಜಯಿಸಿದ ಉಲ್ಲೇಖ ಬಂದಿದೆ. ಅವರು ಹಾಗೆ ಭೀಮನೊಂದಿಗೆ ಯುದ್ಧ ಮಾಡಿದ್ದು ಸಿಂಹ ವ್ಯಾಘ್ರಾದಿ ರೂಪಾಂತರ–ಗಳಿಂದ ಎಂಬ ವಿಶೇಷಾಂಶ ಇಲ್ಲಿದೆ.

ನಿಶಮ್ಯ ಶಂಕರೋಽಖಿಲಂ ಮಖಸ್ಯ ಚ ಪ್ರಸಾಧಕಮ್ ।
ಹರಿಂ ತತೋ ಬಲೇಃ ಸುತಾದ್ದದೌ ಚ ರತ್ನಸಂಚಯಮ್ ॥ ೨೦೦ ॥

ಅ: ಶಿವ ಎಲ್ಲವನ್ನೂ ಕೇಳಿ ಯಾಗವನ್ನು ನಡೆಸಿಕೊಡಲು ಹೊರಟಿರುವವನು ಶ್ರೀಹರಿ ಎಂಬುದನ್ನೂ ತಿಳಿದು ಬಲಿಯ ಪುತ್ರನಾದ ಬಾಣಾಸುರನಿಂದ ರತ್ನಗಳ ರಾಶಿಯನ್ನು ಕೊಡಿಸಿದ.

ವಿ: ಶಿವ ಹೀಗೆ ಮಾಡುವ ಮೂಲಕ ಗುರುಗಳಾದವರು ತಮ್ಮ ಶಿಷ್ಯರಿಗೆ ಯೋಗ್ಯವಾದ ಮಾರ್ಗದರ್ಶನವನ್ನು ನೀಡಿ ವೈಷ್ಣವರು ಮಾಡುವ ಸತ್ಕಾರ್ಯಗಳಿಗೆ ಕಾಣಿಕೆ ನೀಡುವ ಆದರ್ಶ–ವನ್ನು ಬೋಧಿಸಬೇಕು ಎಂದು ತಿಳಿಸಿದ.

ಮರಳಿ ಇಂದ್ರಪ್ರಸ್ಥಕ್ಕೆ

ಸ ಬಾಣದೈತ್ಯತೋ ಮಹಚ್ಛಿವೇನ ದತ್ತಮುತ್ತಮಮ್ ।
ಪ್ರಗೃಹ್ಯ ರತ್ನಸಂಚಯಂ ಸ್ವಕಂ ಪುರಂ ಸಮಾಯಯೌ ॥ ೨೦೧ ॥

ಅ: ಭೀಮಸೇನ ಶಿವನು ಬಾಣಾಸುರನ ಮೂಲಕ ನೀಡಿದ ಉತ್ತಮವಾದ ರತ್ನರಾಶಿಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಮರಳಿದ.

ಸ ವಿಪ್ರಯಾದವೇಶ್ವರಂ ದ್ವಿಧಾ ಸ್ಥಿತಂ ಜನಾರ್ದನಮ್ ।
ಪುರೋ ನಿಧಾಯ ತದ್ವಸು ಪ್ರಭೂತಮಾನಮತ್ ತದಾ ॥ ೨೦೨ ॥

ಅ: ಭೀಮಸೇನ ಶ್ರೀವೇದವ್ಯಾಸ ಹಾಗೂ ಶ್ರೀಕೃಷ್ಣ ಎಂಬ ಎರಡು ರೂಪಗಳಿಂದ ನೆಲೆಸಿದ್ದ ಶ್ರೀಹರಿಯ ಮುಂದೆ ಆ ಅಪಾರ ಸಂಪತ್ತನ್ನು ಒಪ್ಪಿಸಿ ಭಕ್ತಿಯಿಂದ ನಮಸ್ಕರಿಸಿದ.

ವಿ: ಭೀಮ ಮರಳುವ ವೇಳೆಗೆ ಇಂದ್ರಪ್ರಸ್ಥಕ್ಕೆ ಶ್ರೀಕೃಷ್ಣ ವೇದವ್ಯಾಸರು ಆಗಮಿಸಿದ್ದರು. ಅವರಿಗೆ ಆ ಸಂಪತ್ತನ್ನು ಒಪ್ಪಿಸಿ ಭೀಮ ವಂದಿಸಿದ ಎಂದರ್ಥ. ಭೀಮ ಹಾಗೆ ತರುವ ಸಂಪತ್ತನ್ನು ಸಾಕ್ಷಾತ್ತಾಗಿ ಸ್ವೀಕರಿಸಲೆಂದೇ ಶ್ರೀಹರಿ ಆ ಎರಡು ರೂಪಗಳಿಂದ ಅಲ್ಲಿಗೆ ಆಗಮಿಸಿದ್ದ ಎಂದೂ ತಿಳಿಯಬಹುದು.

ಸೋಽಭಿವಾದ್ಯಾಗ್ರಜಂ ಚೈವ ಯಥಾವೃತ್ತಂ ನ್ಯವೇದಯತ್ ।
ಆತ್ಮನಃ ಕೃಷ್ಣಯೋಃ ಸರ್ವಂ ಧರ್ಮರಾಜಾಗ್ರತೋ ಮುದಾ ॥ ೨೦೩ ॥

ಯಥಾ ಜಿತಾಃ ಕೀಚಕಾದ್ಯಾ ಏಕಲವ್ಯಸಹಾಯವಾನ್ ।
ಯಥಾ ಜಿತಃ ಪೌಂಡ್ರಕಶ್ಚ ಕರ್ಣಾದ್ಯಾಶ್ಚ ತಥಾ ಪರೇ ॥ ೨೦೪ ॥

ಯಥಾ ಸಿಂಹಾದಿತನವಃ ಶೇಷವೀಂದ್ರೇಂದ್ರಪೂರ್ವಕಾಃ ।
ಯಥಾ ಗಜತನುಃ ಶರ್ವಸ್ತಚ್ಚ ಸರ್ವಮವರ್ಣಯತ್ ॥ ೨೦೫ ॥

ಅ: ಭೀಮಸೇನ ಅಣ್ಣನಾದ ಧರ್ಮರಾಜನಿಗೂ ನಮಸ್ಕರಿಸಿ, ಅವನ ಸಮಕ್ಷಮದಲ್ಲಿ, ನಡೆದ ತನ್ನ ವಿಷಯವನ್ನೆಲ್ಲಾ ಅರಿಕೆ ಮಾಡಿದ. ಕೀಚಕಾದಿಗಳನ್ನು ಗೆದ್ದದ್ದನ್ನು, ಏಕಲವ್ಯನ ಜೊತೆಯಲ್ಲಿ ಬಂದಿದ್ದ ಪೌಂಡ್ರಕನನ್ನು ಗೆದ್ದದ್ದನ್ನು, ಹಾಗೆಯೇ ಕರ್ಣ ಮೊದಲಾದ ಇತರರನ್ನು ಸೋಲಿಸಿದನ್ನು, ಸಿಂಹಾದಿ ರೂಪಗಳಲ್ಲಿ ಆಗಮಿಸಿದ್ದ ಶೇಷ, ಗರುಡ, ಇಂದ್ರ ಮೊದಲಾದವರನ್ನು ಸೋಲಿಸಿದ್ದನ್ನು, ಆನೆಯ ರೂಪದಲ್ಲಿ ಬಂದಿದ್ದ ಶಿವನನ್ನು ಗೆದ್ದದ್ದನ್ನು - ಎಲ್ಲವನ್ನೂ ವರ್ಣಿಸಿದ.

ವಿ: ಕಾರ್ಯ ಸಾಧಿಸಿದ ಮೇಲೆ ವರದಿ ಒಪ್ಪಿಸುವ ಪದ್ಧತಿಯ ಮೂಲವನ್ನು ಇಲ್ಲಿ ಗುರುತಿಸಬಹುದು. ಭೀಮ ಮಣಿಮಂತನ ಅವತಾರನಾದ ಏಕಲವ್ಯನನ್ನು ಗೆದ್ದ ವಿಶೇಷಾಂಶ ಇಲ್ಲಿದೆ.

---

೨೦೨. ಸ ವಿಪ್ರಯಾದವೇಶ್ವರಮಿತ್ಯತ್ರ ಪ್ರಭೂತಂ ವಸು ಪುರೋ ನಿಧಾಯ ವಿಪ್ರಯಾದವೇಶ್ವರಂ ಜನಾರ್ದನಂ ಅನಮದಿತಿ ಸಂಬಂಧಃ ॥ – (ವಾ.)

ಭೀಮಸೇನನಿಂದ ಯಜ್ಞಸಿದ್ಧತೆ

ಸಂಭಾವಿತಶ್ಚ ಕೃಷ್ಣಾಭ್ಯಾಂ ರಾಜ್ಞಾ ಚ ಸ ಮಹಾಬಲಃ ।
ಆಜ್ಞಯಾ ವ್ಯಾಸದೇವಸ್ಯ ಯಜ್ಞಾಂಗಾನಿ ಸಮಾರ್ಜಯತ್ ॥ ೨೦೬ ॥

ಅ: ಶ್ರೀಕೃಷ್ಣ ವ್ಯಾಸರಿಂದಲೂ, ಧರ್ಮರಾಜನಿಂದಲೂ ಮಹಾಬಲಿಷ್ಠನಾದ ಭೀಮಸೇನ ಆದರಿಸಲ್ಪಟ್ಟ, ಶ್ರೀವ್ಯಾಸರ ಅಪ್ಪಣೆಯಂತೆ ಯಜ್ಞ ಸಾಮಗ್ರಿಗಳನ್ನು ಸಿದ್ಧಪಡಿಸಿದ.

ಊಚೇ ತಂ ಭಗವಾನ್ ವ್ಯಾಸೋ ಜಿತಂ ಸರ್ವಂ ತ್ವಯಾऽರಿಹನ್ ।
ಜಯೇ ಸರ್ವಸ್ಯ ಯಜ್ಞೋऽಯಂ ಪೂರ್ಣೋ ಭವತಿ ನಾನ್ಯಥಾ ॥೨೦೭॥

ಅ: ಭೀಮನಿಗೆ ಭಗವಾನ್ ಶ್ರೀವ್ಯಾಸರು ನುಡಿದರು 'ಶತ್ರುನಾಶಕನಾದ ಭೀಮನೆ! ನೀನು ಎಲ್ಲವನ್ನೂ ಗೆದ್ದೆ. ಹೀಗೆ ಎಲ್ಲರನ್ನೂ ಗೆದ್ದಾಗಲೇ ಈ ಯಜ್ಞ ಪೂರ್ಣವಾಗುವುದು, ಇಲ್ಲವಾದರೆ ಆಗದು'.

ವಿರಿಂಚಿಃ ಸರ್ವಜಿತ್ ಪೂರ್ವಂ ದ್ವಿತೀಯಸ್ತ್ವಮಿಹಾಭವಃ ।
ಇತ್ಯುಕ್ತ್ವೈನಂ ಸಮಾಶ್ಲಿಷ್ಯ ಯಜ್ಞಾಂಗಾನಿ ಸಮಾದಿಶತ್ ॥ ೨೦೮ ॥

ಅ: 'ಹಿಂದೆ ಹೀಗೆ ಎಲ್ಲವನ್ನೂ ಗೆದ್ದಿದ್ದು ಬ್ರಹ್ಮ ದೇವರು, ನೀನೀಗ ಎರಡನೆಯವನಾದೆ' - ಹೀಗೆ ಅವನಿಗೆ ಹೇಳಿ ಗಾಢವಾಗಿ ಆಲಿಂಗಿಸಿಕೊಂಡು ಯಜ್ಞ ಸಾಮಗ್ರಿಗಳನ್ನು ಸಿದ್ಧಪಡಿಸಲು ಆದೇಶಿಸಿದರು.

ವಿ: ಬ್ರಹ್ಮನ ಅನಂತರ ಇಂತಹ ದಿಗ್ವಿಜಯ ಸಾಧಿಸಿದ ಭೀಮಸೇನ ಭಾವಿ ಬ್ರಹ್ಮ ಎಂಬುದು ಇದರಿಂದ ಸ್ಫುಟಪಡುವುದು. ಶ್ರೀವೇದವ್ಯಾಸರ ಆದೇಶದಂತೆ ಭೀಮ ಯುದ್ಧಸಾಮಗ್ರಿಗಳನ್ನು ಸಿದ್ಧಪಡಿಸಿದ ವಿವರ ಇಲ್ಲಿದೆ.

ಸಹದೇವನ ದಕ್ಷಿಣ ದಿಗ್ವಿಜಯ

ತದೈವಾನ್ಯಾದಿಶೋ ಜಿತ್ವಾ ಸಮೀಯುಸ್ತಸ್ಯ ಯೇऽನುಜಾಃ ।
ಸಹದೇವೋ ದಕ್ಷಿಣಾಶಾಂ ಜಿತ್ವಾ ರತ್ನಾನ್ಯುಪಾಹರತ್ ॥ ೨೦೯ ॥

ಅ: ಆ ವೇಳೆಗೆ ಇತರ ದಿಕ್ಕುಗಳನ್ನು ಗೆದ್ದು ಅವನ ತಮ್ಮಂದಿರು ಅಲ್ಲಿಗೆ ಆಗಮಿಸಿದರು. ಸಹದೇವನು ದಕ್ಷಿಣ ದಿಕ್ಕನ್ನು ಗೆದ್ದು ರತ್ನಗಳನ್ನು ತಂದ.

ರುಗ್ಮಿಯಿಂದ ಕಾಣಿಕೆ ಸಮರ್ಪಣೆ

ತತ್ರ ರುಗ್ಮೀ ನ ಯುಯುಧೇ ಸಹದೇವೇನ ವೀರ್ಯವಾನ್ ।
ಜಿತಃ ಕೃಷ್ಣೇನ ಪೂರ್ವಂ ತು ಶರ್ವಾದಾಪ ಧನುರ್ವರಮ್ ॥ ೨೧೦ ॥

ತಪಸಾ ತೋಷಿತಾತ್ ಕೃಷ್ಣಾದನ್ಯಾನೇವಾಮುನಾऽಖಿಲಾನ್ ।
ವಿಜೇಷ್ಯಸಿ ಯದಾ ಕೃಷ್ಣವಿರೋಧಸ್ತೇ ತದಾ ಧನುಃ ।
ಮಾಮೇಷ್ಯತೀತಿ ತೇನೋಕ್ತೋ ನ ವ್ಯರುಧ್ಯತ ಕೇಶವೇ ॥ ೨೧೧ ॥

ಅ: ಅದರಲ್ಲಿ ಬಲಶಾಲಿಯಾದ ರುಗ್ಮಿ ಸಹದೇವನೊಂದಿಗೆ ಯುದ್ಧ ಮಾಡಲಿಲ್ಲ. ಅವನು ಹಿಂದೆ ಕೃಷ್ಣನಿಂದ ಸೋತವನು ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಶ್ರೇಷ್ಠ ಧನುಸ್ಸನ್ನು ಪಡೆದಿದ್ದ. 'ಅದರಿಂದ ಕೃಷ್ಣನ ಹೊರತು ಬೇರೆಯವರನ್ನು ಗೆಲ್ಲುವಿ, ಕೃಷ್ಣನಿಗೆ ವಿರೋಧ ಮಾಡಿದರೆ ಆ ಧನುಸ್ಸು ನನ್ನ ಬಳಿಗೆ ಮರಳುವುದು' ಎಂದು ಶಿವ ತಿಳಿಸಿದ್ದ, ಆದ್ದರಿಂದ ಅವನು ಕೃಷ್ಣನಿಗೆ ವಿರೋಧ ಮಾಡಲಿಲ್ಲ.

ವಿ: ೧) ಸಹದೇವ ತೆರಳಿದ್ದ ದಕ್ಷಿಣ ದಿಕ್ಕಿನಲ್ಲಿದ್ದ ಪ್ರಬಲ ವೈರಿಗಳಲ್ಲಿ ರುಗ್ಮಿ ಒಬ್ಬ. ಅವನು ರುಗ್ಮಿಣೀ ಸ್ವಯಂವರ ಪ್ರಸಂಗದಲ್ಲಿ ಕೃಷ್ಣನಿಂದ ಇನ್ನಿಲ್ಲದಂತೆ ಸೋತ (೧೭/೧೬) ಮೇಲೆ ಶಿವನನ್ನು ಕುರಿತು ತಪಸ್ಸು ಮಾಡಿ ಒಂದು ಧನುಸ್ಸನ್ನು ಪಡೆದುಕೊಂಡಿದ್ದ. ಧನುಸ್ಸನ್ನು ನೀಡಿದ ಶಿವ ಅವನಿಗೆ ಕೃಷ್ಣನ ಹೊರತು ಇತರರನ್ನು ಮಾತ್ರ ಗೆಲ್ಲುವ ವರ ನೀಡಿದ್ದ. ತಪ್ಪಿದರೆ ಆ ಧನುಸ್ಸು ಅವನಿಗೆ ದಕ್ಕದೇ ಶಿವನ ಬಳಿಗೇ ಮರಳುವುದು ಎಂದು ಎಚ್ಚರಿಸಿದ್ದ. ಅದರಿಂದಾಗಿ ರುಗ್ಮಿ ಕೃಷ್ಣನ ಅನುಗ್ರಹಕ್ಕೆ ಪಾತ್ರರಾದ ಪಾಂಡವರಲ್ಲಿ ಈ ಸಹದೇವ ಒಬ್ಬ ಎಂದು ತಿಳಿದು ಅವನೊಂದಿಗೆ ಯುದ್ಧ ಮಾಡಲಿಲ್ಲ ಎಂದರ್ಥ.

೨) ರುಗ್ಮಿ ಶಿವನನ್ನು ಆರಾಧಿಸಿದ್ದು ಕೃಷ್ಣನ ಮೇಲೆ ಸೇಡು ತೀರಿಸಿಕೊಳ್ಳಲೆಂದು. ಆದರೆ, ಶಿವ ವರ ನೀಡಿದ್ದು ಕೃಷ್ಣನ ಮೇಲೆ ಸೇಡು ತೀರಿಸಿಕೊಳ್ಳಲು ಎಂದೂ ಸಾಧ್ಯವಿಲ್ಲವೆಂದು. ಆ ಎಚ್ಚರ ನೀಡಿ ಅವನು ಧನುಸ್ಸನ್ನು ನೀಡಿದ್ದರೂ ಅವನು ಕೃಷ್ಣನ ಮೇಲೆ ದ್ವೇಷವನ್ನು ಬಿಟ್ಟಿರಲಿಲ್ಲ, ಆದರೆ, ಯುದ್ಧ ಮಾಡುವ ಸಾಹಸಕ್ಕೂ ಕೈಹಾಕಿರಲಿಲ್ಲ. ಆ ಧನುಸ್ಸಿನಿಂದ ಏನನ್ನೂ ಸಾಧಿಸದ ವಿಚಿತ್ರ ವ್ಯಕ್ತಿ ಅವನು ಎಂಬುದು ಇದರಿಂದ ಸ್ಪುಟಪಡುವುದು.

---

೨೧೦. ತತ್ರ ರುಗ್ಮೀತ್ಯತ್ರ ತತ್ರ= ದಕ್ಷಿಣಾಶಾಯಾಮ್। ರುಗ್ಮೀ= ಕುಂಡಿನಪುರಸ್ಥೋ ರುಗ್ಮೀ ॥ – (ವಾ.)

ಸ್ವಸುಃ ಸ್ನೇಹಾಚ್ಚ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ ।
ಭೀಮಾರ್ಜುನಬಲಾಚ್ಚೈವ ಮಾದ್ರೇಯಾಯ ದದೌ ಕರಮ್ ।
ಜಿಗ್ಯೇ ಬಲೇನಾನ್ಯನೃಪಾನ್ ಸಹದೇವಃ ಪ್ರತಾಪವಾನ್ ॥ ೨೧೨ ॥

ಅ: ತಂಗಿಯಾದ ರುಗ್ಮಿಣಿಯ ಮೇಲಿನ ಪ್ರೀತಿಯಿಂದಲೂ, ಕೃಷ್ಣನು ಯಜ್ಞ ಮಾಡಿಸುತ್ತಿರುವನು ಎಂಬುದರಿಂದಲೂ, ಭೀಮಾರ್ಜುನರ ಬಲದ ಕಾರಣದಿಂದಲೂ ಅವನು ಸಹದೇವನಿಗೆ ಕಪ್ಪ ನೀಡಿದ. ಪ್ರತಾಪಶಾಲಿಯಾದ ಸಹದೇವ ಬಲದಿಂದ ಇತರ ರಾಜರುಗಳನ್ನು ಗೆದ್ದ.

ವಿ: ರುಗ್ಮಿ ಸಹದೇವನೊಂದಿಗೆ ಯುದ್ಧ ಮಾಡದಿರಲು ಇನ್ನೂ ಕೆಲವು ಕಾರಣಗಳನ್ನು ಇಲ್ಲಿ ತಿಳಿಸಿರುವರು. ರುಗ್ಮಿಗೆ ಹೀಗೆ ಕೃಷ್ಣ ರುಗ್ಮಿಣಿಯರ ಮೇಲೆ ಆದರವಿರಲು ಅವನೊಳಗಿದ್ದ ದೇವತಾವೇಶ (೧೪/೯೧) ಕಾರಣ ಎಂದೂ ತಿಳಿಯಬೇಕು.

ಘಟೋತ್ಕಚನ ಮೂಲಕ ವಿಭೀಷಣನಿಂದ ಕಪ್ಪಕಾಣಿಕೆ

ತಥಾ ಸ್ಮೃತಂ ಸಮಾಗತಂ ಘಟೋತ್ಕಚಂ ವಿಭೀಷಣೇ ।
ಸಮಾದಿಶದ್ಯಯೌ ಚ ಸೋಽಪ್ಯಸೌ ದದೌ ಮಹಾಕರಮ್ ॥ ೨೧೩ ॥

ಅ: ನೆನೆದೊಡನೆ ಬಂದ ಘಟೋತ್ಕಚನನ್ನು ಸಹದೇವ ವಿಭೀಷಣನ ಬಳಿಗೆ ಕಳಿಸಿಕೊಟ್ಟ. ಅವನೂ ಸಹ ಅವನಿಗೆ ಬಹಳವಾದ ಕಪ್ಪವನ್ನು ನೀಡಿದ.

ವಿ: ೧) ದಕ್ಷಿಣ ದಿಕ್ಕಿನತ್ತ ಮುಂದುವರೆದ ಸಹದೇವ ಕೊನೆಗೆ ಸಮುದ್ರ ತೀರಕ್ಕೆ ತಲುಪಿ ಅಲ್ಲಿಂದ ಮುಂದೆ ಸಾಗಲು ಘಟೋತ್ಕಚನನ್ನು ಸ್ಮರಿಸಿದ. ನೆನೆದೊಡನೆ ಬರುವುದಾಗಿ ವಚನ ನೀಡಿದ್ದ (೧೯/೬೪) ಘಟೋತ್ಕಚ ತಕ್ಷಣ ಆಗಮಿಸಿದ. ಅವನು ಸಹದೇವನ ಆದೇಶದಂತೆ ಲಂಕೆಗೆ ತೆರಳಿ ಅಲ್ಲಿ ವಿಭೀಷಣನಿಂದ ಸತ್ಕೃತನಾಗಿ ಅವನಿಂದ ಕಪ್ಪಕಾಣಿಕೆಗಳನ್ನು ಪಡೆದುಕೊಂಡು ಮರಳಿದ.

೨) ರಾಮಾಯಣದಲ್ಲಿ ಸಮುದ್ರ ಲಂಘಿಸಿ ಲಂಕೆಗೆ ತೆರಳಿದ್ದು ವಾಯುದೇವರ ಅವತಾರನಾದ ಹನುಮಂತ, ಇಲ್ಲಿ ಲಂಕೆಗೆ ತೆರಳಿದ್ದು ಆ ಹನುಮಂತನ ಅವತಾರನಾದ ಭೀಮಸೇನನ ಪುತ್ರ ಘಟೋತ್ಕಚ. ಅಂತೂ ಅಲ್ಲಿ ಸಾಗರ ಲಂಘಿಸಿ ಲಂಕೆಗೆ ತೆರಳಿದ್ದು ತಂದೆಯಾದರೆ, ಇಲ್ಲಿ ಆ ಕಾರ್ಯ

---

೨೧೮. ತ್ರೈಗರ್ತಾಃ ಪಾರ್ವತೇಯಾ ಇತ್ಯತ್ರ ಪಾರ್ವತೇಯನೃಪಾಣಾಂ ಮಧ್ಯೇ ತ್ರಿಗರ್ತಾಧಿಪತಿಃ ಕಶ್ಚನ ರಾಜಾ ವರ್ತತೇ ॥ –(ವಾ.)

ಮಾಡಿದ್ದು ಆತನ ಪುತ್ರ. ವಾಯುದೇವರು ಮತ್ತು ಅವರ ಸಂಬಂಧಿಗಳ ಹೊರತು ಹೀಗೆ ಇತರರಿಗೆ ಸಮುದ್ರತರಣ ಅಶಕ್ಯ ಎಂಬ ಸೂಚನೆ ಇಲ್ಲಿದೆ. ಭವಸಮುದ್ರವನ್ನು ಸಹ ವಾಯುದೇವರು ಮತ್ತು ಅವರ ಅನುಯಾಯಿಗಳು ಮಾತ್ರ ದಾಟಬಲ್ಲರು ಎಂಬುದಕ್ಕೂ ಇದು ಸೂಚಕ.

ಪುರಾ ಹಿ ರಾಘವೋದಿತಂ ತದಸ್ಯ ಸೋಽಖಿಲಂ ತದಾ ।
ವಿಚಾರ್ಯ ಕೇಶವಂ ಚ ತಂ ಬಲಂ ಚ ಭೀಮಪಾರ್ಥಯೋಃ ।
ದಿವೌಕಸಶ್ಚ ಪಾಂಡವಾನವೇತ್ಯ ಸೋಽದದಾತ್ ಕರಮ್ ॥ ೨೧೪ ॥

ಅ: ಹಿಂದೆ ರಾಮ ಹೇಳಿದ್ದನ್ನೆಲ್ಲ ವಿಭೀಷಣ ಜ್ಞಾಪಿಸಿಕೊಂಡ, ಆ ರಾಮನೇ ಶ್ರೀಕೃಷ್ಣ ಎಂಬುದನ್ನು ತಿಳಿದ. ಭೀಮಾರ್ಜುನರ ಬಲವನ್ನೂ ಗಮನಿಸಿದ. ಪಾಂಡವರು ದೇವತೆಗಳೆಂದೂ ಅರಿತು ವಿಭೀಷಣ ಕಾಣಿಕೆಯನ್ನು ನೀಡಿದ.

ವಿ: ಶ್ರೀರಾಮಾವತಾರದಲ್ಲೇ ಶ್ರೀಹರಿ ಮುಂದೆ ಯಜ್ಞಕ್ಕಾಗಿ ಸಹದೇವ ಬರುವ ವಿಚಾರವನ್ನು ತಿಳಿಸಿ ಅವನಿಗೆ ಕಾಣಿಕೆ ಕೊಡಲು ಆದೇಶಿಸಿದ್ದ ಎಂಬುದು ಇಲ್ಲಿಯ ವಿಶೇಷಾಂಶ. ಇದು ಪುನಃ ರಾಮನ ನಾರಾಯಣತ್ವವನ್ನು ಸಮರ್ಥಿಸುವ ಅಪೂರ್ವ ಪ್ರಮೇಯ.

ಮಹೌಘರತ್ನಸಂಚಯಂ ಸ ಆಪ್ಯ ಭೀಮಸೇನಜಃ ।
ಯಯೌ ಚ ಮಾದ್ರಿನಂದನಂ ಸ ಚಾಯಯೌ ಸ್ವಕಂ ಪುರಮ್ ॥೨೧೫॥

ಅ: ಭೀಮಪುತ್ರನಾದ ಘಟೋತ್ಕಚ 'ಮಹೌಘ' ಸಂಖ್ಯೆಯ ರತ್ನರಾಶಿಯನ್ನು ಪಡೆದುಕೊಂಡು ಸಹದೇವನ ಬಳಿಗೆ ತೆರಳಿದ. ಸಹದೇವ ತನ್ನ ಪಟ್ಟಣಕ್ಕೆ ಮರಳಿದ.

ವಿ: ೧) ವಿಭೀಷಣ ಹಾಗೆ ನೀಡಿದ ರತ್ನರಾಶಿ ಒಂದು ಮಹೌಘ ಸಂಖ್ಯೆಯದಾಗಿತ್ತು. ಮಹೌಘ– ವೆಂದರೆ ಒಂದು ಕೋಟಿಯ ಮುಂದೆ ಅರವತ್ತು ಸೊನ್ನೆಗಳನ್ನು ಸೇರಿಸಿದಾಗ ಬರುವ ಸಂಖ್ಯೆ ಎಂಬ ವಿವರ ಈಗಾಗಲೇ ಬಂದಿದೆ (೮/೧೭೯).

---

೨೧೪. ತತಃ ಸಂಪ್ರೇಷಯಾಮಾಸ ರತ್ನಾನಿ ವಿವಧಾನಿ ಚ ।
ಚಂದನಾಗರುಕಾಷ್ಠಾನಿ ದಿವ್ಯಾನ್ಯಾಭರಣಾನಿ ಚ ॥
ವಾಸಾಂಸಿ ಚ ಮಹಾರ್ಹಾಣಿ ಮಣೀಂಶ್ಚೈವ ಮಹಾಧನಾನ್ ।...
ತಾನಿ ಸರ್ವಾಣಿ ರತ್ನಾನಿ ಆಪ್ಲಾವೀತಿರ್ನಿಶಾಚರಾಃ ।
ಆಜಹ್ರುಃ ಸ ಮುದಾ ರಾಜನ್ ಹೈಡಿಂಬೇನ ತದಾ ಸಹ ॥ – ಭಾರತ (ಸಭಾ. ೩೧/೭೫, ೭೬)

೨) ವಿಭೀಷಣ ಹಾಗೆ ಚಿರಂಜೀವಿಯಾಗಿ ಬದುಕಿದ್ದರ ಫಲ ರಾಜಸೂಯಯಾಗಕ್ಕೆ ಕಾಣಿಕೆ ಸಲ್ಲಿಸುವಂತಾಯಿತು. ಸಾತ್ವಿಕರ ದೀರ್ಘಜೀವನ ಹೀಗೆ ವಿಷ್ಣು ವೈಷ್ಣವರ ಸೇವಾಕಾರ್ಯಕ್ಕೆ ವಿನಿಯೋಗವಾಗುವುದು ಎಂಬ ತತ್ತ್ವ ಇದರಿಂದ ಸೂಚಿತ.

ನಕುಲನ ಪಶ್ಚಿಮ ದಿಗ್ವಿಜಯ

ನಕುಲಃ ಪಶ್ಚಿಮಾಶಾಯಾಂ ವಿಜಿಗ್ಯೇಽಖಿಲಭೂಭೃತಃ ।
ಕರಮಾಪ ಚ ವೀರೋಽಸೌ ಸೌಹಾರ್ದಾದೇವ ಮಾತುಲಾತ್ ।
ಆಯಯೌ ಚ ಮಹಾರತ್ನಸಂಚಯೇನ ಸ್ವಕಂ ಪುರಮ್ ॥ ೨೧೬ ॥

ಅ: ನಕುಲ ಪಶ್ಚಿಮ ದಿಕ್ಕಿನಲ್ಲಿ ಎಲ್ಲ ರಾಜರುಗಳನ್ನು ಗೆದ್ದ, ವೀರನಾದ ಅವನು ಸೋದರ ಮಾವನಾದ ಶಲ್ಯನಿಂದ ಪ್ರೀತಿಯಿಂದಲೇ ಕಪ್ಪವನ್ನು ಪಡೆದ. ಮಹಾರತ್ನಗಳ ರಾಶಿಯೊಂದಿಗೆ ತನ್ನ ಪಟ್ಟಣಕ್ಕೆ ಮರಳಿದ.

ವಿ: ೧) ಪಶ್ಚಿಮ ದಿಗ್ವಿಜಯಕ್ಕೆ ನಕುಲ ಶಲ್ಯನಿಂದ ಕಾಣಿಕೆ ಪಡೆಯಲು ಸೋದರಳಿಯ ಎಂಬ ಪ್ರೀತಿಯೊಂದಿಗೆ ಅಳಿಯ ಎಂಬ ಪ್ರೀತಿಯೂ ಸೇರಿಕೊಂಡಿತ್ತು. ಶಲ್ಯನ ಪುತ್ರಿಯಾದ ಪಾರ್ವತಿ ಎಂಬವಳನ್ನು ಅವನು ಮದುವೆಯಾಗಿದ್ದ ವಿವರ ಹಿಂದೆ ಬಂದಿದೆ (ಶ್ಲೋ. ೧೬೯). ಅದರೊಂದಿಗೆ ಶಲ್ಯ ಸ್ವಭಾವತಃ ವೈಷ್ಣವನಾಗಿದ್ದುದು ಕಾರಣ.

೨) ನಕುಲ ದ್ವಾರಕೆಗೂ ತೆರಳಿ ಕೃಷ್ಣನಿಗೂ ಕಪ್ಪ ನೀಡುವ ಸಂದೇಶವನ್ನು ಕಳುಹಿಸಿದ. ಇದು ಅವನು ಭಾಗವತ ಧರ್ಮವನ್ನು ತಪ್ಪಿದ ಒಂದು ವಿಶಿಷ್ಟ ಪ್ರಸಂಗ ಎಂಬ ಉಲ್ಲೇಖ ಹದಿನೆಂಟನೇ ಅಧ್ಯಾಯದಲ್ಲಿ (ಶ್ಲೋ. ೨೪) ಬಂದಿದೆ.

ಅರ್ಜುನನ ಉತ್ತರ ದಿಗ್ವಿಜಯ

ಅರ್ಜುನಃ ಕಪಿವರೋಚ್ಛ್ರಿತಧ್ವಜಂ
ಸ್ಯಂದನಂ ಸಮಧಿರುಹ್ಯ ಗಾಂಡಿವೀ ।
ಯಾತ ಏವ ದಿಶಮುತ್ತರಾಂ ಯದಾ
ಪಾರ್ವತೀಯಕುನೃಪಾಃ ಸಮಾಯಯುಃ ॥ ೨೧೭॥

---

೨೧೬. .... ತತ್ರಸ್ಥಃ ಪ್ರೇಷಯಾಮಾಸ ವಾಸುದೇವಾಯ ಭಾರತ । – ಭಾರತ (ಸಭಾ. ೩೨/೧೩)

ಅ: ಅರ್ಜುನನು ಕಪಿಶ್ರೇಷ್ಠನಾದ ಹನುಮಂತನಿಂದ ಕೂಡಿದ್ದ ಉನ್ನತವಾದ ಧ್ವಜವನ್ನು ಹೊಂದಿದ್ದ ರಥವನ್ನು ಏರಿ ಗಾಂಡೀವಪಾಣಿಯಾಗಿ ಉತ್ತರ ದಿಕ್ಕಿಗೆ ತೆರಳಿದ. ಅವನನ್ನು ಆಗ ಪರ್ವತ ವಾಸಿಗಳಾಗಿದ್ದ ದುಷ್ಟ ರಾಜರುಗಳು ಎದುರಿಸಿದರು.

ವಿ: ೧) ಭೀಮನ ಪೂರ್ವ ದಿಗ್ವಿಜಯದ ಅನಂತರ ಕ್ರಮವಾಗಿ ದಕ್ಷಿಣ ದಿಕ್ಕಿನ ಸಹದೇವನ ದಿಗ್ವಿಜಯವನ್ನು, ಪಶ್ಚಿಮ ದಿಕ್ಕಿನ ನಕುಲನ ದಿಗ್ವಿಜಯವನ್ನು ನಿರೂಪಿಸಿ, ಈಗ ಕೊನೆಯದಾದ ಉತ್ತರ ದಿಕ್ಕಿನ ಅರ್ಜುನ ದಿಗ್ವಿಜಯವನ್ನು ನಿರೂಪಿಸುತ್ತಿರುವರು.

೨) ಭೀಮನ ಪೂರ್ವ ದಿಗ್ವಿಜಯ ಸಾಂಕೇತಿಕವಾಗಿ ಮಹತ್ವಪೂರ್ಣವಾದದ್ದು. ಪೂರ್ವ–ದಿಕ್ಕಿನ ವಿಜಯ ಪೂರ್ವಪಕ್ಷದ ವಿಜಯಕ್ಕೆ ಸಂಕೇತ. ಆ ದಿಕ್ಕಿನಲ್ಲೇ ಪ್ರಬಲರಾದ ಶಿಶುಪಾಲಾದಿ ಮಹಾ ದೈತ್ಯರುಗಳು ನೆಲೆಸಿದ್ದುದು. ಅವರು ಅಹಂ ಬ್ರಹ್ಮಾಸ್ಮಿ ಮೊದಲಾದ ಮಿಥ್ಯೋಪಾಸನೆಗೆ ಸಂಕೇತವಾಗಿದ್ದವರು. ಆದ್ದರಿಂದ ಪೂರ್ವದಿಕ್ಕು ಇತರರಿಗೆ ಅಜೇಯವೆನಿಸಿತ್ತು. ಅದರಂತೆ ಮಹಾ ಪೂರ್ವಪಕ್ಷಗಳಿಂದ ಕೂಡಿದ ಮಾಯಾವಾದಾದಿ ಮತಗಳ ದಿಗ್ವಿಜಯ ಭೀಮನ ಹೊರತು ಇತರರಿಗೆ ಆಗುವಂತಹುದಲ್ಲ ಎಂಬುದು ಇಲ್ಲಿಯ ಸೂಚನೆ.

೩) ಕಲಿಯುಗದಲ್ಲೂ ಮಾಯಾವಾದಾದಿ ಮತಗಳ ಖಂಡನೆ ಇತರಾಸಾಧ್ಯವಾದ ಕಾರ್ಯವೆಂದೇ ಶ್ರೀಹರಿ ವಾಯುದೇವರನ್ನು ಶ್ರೀಮಧ್ವಾಚಾರ್ಯರಾಗಿ ಅವತರಿಸಲು ಆದೇಶಿಸಿ ಕಳುಹಿಸಿದ ವಿವರ ಸುಮಧ್ವವಿಜಯದಲ್ಲಿದೆ (ಸರ್ಗ ೨, ಶ್ಲೋ. ೨, ೩). ಅರ್ಜುನ ಎದುರಿಸಿದ ಪರ್ವತವಾಸಿಗಳಾದ ರಾಜರುಗಳು ಸ್ವಭಾವತಃ ದುಷ್ಟರು ಮಾತ್ರವಲ್ಲದೇ ಅಭೀರ, ನಿಷಾದ ಮೊದಲಾದ ಕ್ಷತ್ರಿಯೇತರ ಪಂಗಡಗಳಿಗೆ ಸೇರಿದವರು ಎಂಬುದನ್ನು ಕುನೃಪಾಃ ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ತ್ರೈಗರ್ತಾಃ ಪಾರ್ವತೇಯಾಶ್ಚ ಸಹಿತಾಃ ಪಾಂಡುನಂದನಮ್ ।
ಅಭ್ಯೇತ್ಯ ಯೋಧಯಾಮಾಸುರ್ಜಾನಂತಸ್ತಚ್ಚಿಕೀರ್ಷಿತಮ್ ॥ ೨೧೮ ॥

ಅ: ತ್ರಿಗರ್ತದೇಶದವರು ಮತ್ತು ಪರ್ವತವಾಸಿಗಳಾದ ರಾಜರುಗಳು ಒಟ್ಟಾಗಿ ಅರ್ಜುನ-ನನ್ನು ಎದುರಿಸಿ ಅವನ ಉದ್ದೇಶವನ್ನು ತಿಳಿದು ಯುದ್ಧಕ್ಕೆ ತೊಡಗಿದ.

ವಿ: ತ್ರಿಗರ್ತ ದೇಶದ ರಾಜರುಗಳು ಸಂಶಪ್ತಕರು ಎಂದೂ ಸಹ ಪ್ರಸಿದ್ಧರಾದವರು. ದಕ್ಷಿಣ ಗೋಗ್ರಹಣದಲ್ಲಿ ಅವರು ಭೀಮನಿಂದ ಪರಾಭವಗೊಂಡರೆ, ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನ–ನನ್ನು ಎದುರಿಸಿ ಹತರಾಗುವರು (೨೮/೩೨).

ಭಗದತ್ತನ ಪರಾಜಯ

ತಾನ್ ವಿಜಿತ್ಯ ಯುಗಪತ್ ಸ ಪಾಂಡವಃ
ಸಂಜಯನ್ ಕ್ರಮಶ ಏವ ತಾಂ ದಿಶಮ್ ।
ಪ್ರಾವ್ರಜಚ್ಚ ಭಗದತ್ತಮೂರ್ಜಿತಂ
ತೇನ ಚಾಸ್ಯ ಸಮಭೂನ್ಮಹಾರಣಃ ॥ ೨೧೯ ॥

ಅ: ಅರ್ಜುನನು ಒಂದೇ ಸಲಕ್ಕೆ ಅವರೆಲ್ಲರನ್ನು ಜಯಿಸಿ ಆ ದಿಕ್ಕನ್ನು ಗೆಲ್ಲುತ್ತಲೇ ಮುಂದೆ ಸಾಗಿ ಬಲಿಷ್ಠನಾದ ಭಗದತ್ತನನ್ನು ಎದುರಿಸಿದ. ಅವನೊಂದಿಗೆ ಇವನಿಗೆ ದೊಡ್ಡ ಯುದ್ಧ ನಡೆಯಿತು.

ವಿ: ಒಟ್ಟಾಗಿ ಬಂದ ಅವರೆಲ್ಲರನ್ನು ಏಕಕಾಲಕ್ಕೆ ಸೋಲಿಸುವ ಮೂಲಕ ಅರ್ಜುನ ತಾನು ಎಂತಹ ಮಹಾಪರಾಕ್ರಮಿ ಎಂಬುದನ್ನು ಜಗತ್ತಿಗೆ ತೋರಿಸಿದ. ಕುಬೇರನ ಅವತಾರನಾದ ಭಗದತ್ತ ಕುಬೇರನ ದಿಕ್ಕಾದ ಉತ್ತರ ದಿಕ್ಕಿನ ಪ್ರಾಗ್ಜ್ಯೋತಿಷದಲ್ಲೇ ನೆಲೆಸಿದ್ದುದು ಒಂದು ವಿಶೇಷ. ದೇವಾವತಾರನಾಗಿದ್ದ ಅವನಲ್ಲಿ ಶಿವನ ಆವೇಶವೂ ಇದ್ದುದರಿಂದ ಅವನು ಮಹಾಬಲಿಷ್ಠನೂ ಆಗಿದ್ದ ಎಂಬ ವಿವರ ಈಗಾಗಲೇ ಬಂದಿದೆ (೧೧/೨೩೧).

ಸೋಽಭಿಯುಧ್ಯ ಸಗಜೋ ದಿನಾಷ್ಟಕಂ
ಶ್ರಾಂತ ಆಹ ಪುರುಹೂತನಂದನಮ್ ।
ಬ್ರೂಹಿ ತೇ ಸಮರಕಾರಣಂ ತ್ವಿತಿ
ಪ್ರಾಹ ದೇಹಿ ಕರಮಿತ್ಯಥಾರ್ಜುನಃ ॥ ೨೨೦ ॥

ಅ: ಅವನು ತನ್ನ ಆನೆಯನ್ನೇರಿ ಎಂಟು ದಿನಗಳ ಕಾಲ ಯುದ್ಧ ಮಾಡಿ ಬಳಲಿ ಅರ್ಜುನನನ್ನು ಕುರಿತು ಕೇಳಿದ 'ನಿನ್ನ ಯುದ್ಧಕ್ಕೆ ಕಾರಣವೇನು? ತಿಳಿಸು'. ಅರ್ಜುನ ತಿಳಿಸಿದ 'ಕಪ್ಪ ನೀಡು'.

ವಿ: ಭಗದತ್ತನ ಆನೆ ಸುಪ್ರತೀಕ, ಅವನು ಎಂಟು ದಿನಗಳ ಕಾಲ ಕಾರಣ ತಿಳಿಯದೇ ಯುದ್ಧ ಮಾಡಿದ ಎಂಬುದು ಇಲ್ಲಿಯ ಸ್ವಾರಸ್ಯ. ಆಯಾಸಗೊಂಡ ಮೇಲೆ ಕಾರಣ ತಿಳಿಯುವ ಎಚ್ಚರ ತೋರಿದ.

---

೨೨೦. ತತಃ ಸ ದಿವಸಾನಷ್ಟೌ ಯೋಧಯಿತ್ವಾ ಧನಂಜಯಮ್ ।
..... ತ್ವಮೀಪ್ಸಿತಂ ಪಾಂಡವೇಯ ಬ್ರೂಹಿ ಕಿಂ ಕರವಾಣಿ ತೇ ॥ – ಭಾರತ (ಸಭಾ. ೨೬/೧೦,೧೩)

ಸೋಽಪ್ಯದಾತ್ ಕರಮಮುಷ್ಯ ವಾಸವೋ
ಮದ್ಗುರುಸ್ತವ ಪಿತೇತಿ ಸಾದರಮ್ ।
ನೈವ ಜೇತುಮಿಹ ಶಕ್ಷ್ಯಸೇ ತ್ವಮಿ-
ತ್ಯಾವದದ್ಧರಿವರಾಸ್ತ್ರತೇಜಸಾ ॥ ೨೨೧ ॥

ಅ: ಅವನು 'ನಿನ್ನ ತಂದೆ ಇಂದ್ರ ನನಗಿಂತ ಹಿರಿಯ' ಎಂದು ನುಡಿದು ಕಪ್ಪವನ್ನು ಆದರದಿಂದ ನೀಡಿದ. 'ನನ್ನಲ್ಲಿ ಶ್ರೇಷ್ಠವಾದ ವೈಷ್ಣವಾಸ್ತ್ರವಿರುವುದರಿಂದ ಅದರ ತೇಜಸ್ಸಿನಿಂದಾಗಿ ನೀನು ನನ್ನನ್ನು ಗೆಲ್ಲಲು ಸಮರ್ಥನಾಗಲಾರೆ' ಎಂದು ನುಡಿದ.

ವಿ: ಹಾಗೆ ಕಪ್ಪ ನೀಡುವಾಗಲೂ ತಾನೇನೂ ಸೋತಿಲ್ಲ, ಹಾಗೆ ಸೋಲುವವನೂ ಅಲ್ಲ, ಕಪ್ಪ ನೀಡುತ್ತಿರುವುದು ಕೇವಲ ತನಗೆ ಪೂಜ್ಯನಾದ ಇಂದ್ರನ ಮಗ ಎಂಬ ಕಾರಣದಿಂದ ಮಾತ್ರ ಎಂದು ಭಗದತ್ತ ನುಡಿದ. ಆ ಮೂಲಕ ತನ್ನಲ್ಲಿ ವೈಷ್ಣವಾಸ್ತ್ರವಿದೆ, ಅದರ ತೇಜಸ್ಸಿನಿಂದ ತಾನು ಅಜೇಯ ಎಂಬ ಅಭಿಮಾನವನ್ನೂ ಪ್ರಕಟಿಸಿದ.

ಸ್ನೇಹಪೂರ್ವಂ ಪ್ರದತ್ತೇ ತು ಕರೇ ನೈವಾಹ ಚೋತ್ತರಮ್ ।
ಅರ್ಜುನೋ ವ್ಯರ್ಥಕಲಹಮನಿಚ್ಛನ್ ಸ್ನೇಹಯಂತ್ರಿತಃ ॥ ೨೨೨ ॥

ಅ: ಆದರಪೂರ್ವಕವಾಗಿ ಅವನು ಕಪ್ಪ ನೀಡಿದ್ದರಿಂದ ಅರ್ಜುನ, ವ್ಯರ್ಥಕಲಹವನ್ನು ಬಯಸದೆ ಸ್ನೇಹಕ್ಕೆ ಕಟ್ಟುಬಿದ್ದು, ಪ್ರತಿಯಾಗಿ ಏನನ್ನೂ ನುಡಿಯಲಿಲ್ಲ.

ವಿ: ೧) ಭಗದತ್ತ ನಿಜಕ್ಕೂ ಸೋತಿದ್ದವನೇ, ಆದರೂ ಆ ರೀತಿ ಬಿಂಕದ ನುಡಿಗಳನ್ನು ಆಡಿದರೂ ಅರ್ಜುನ ಅವನು ಪ್ರೀತಿಯಿಂದಲೇ ಕಪ್ಪ ನೀಡಿದ್ದರಿಂದ ವ್ಯರ್ಥ ಕಲಹವೇಕೆಂದು ಮಾನ್ಯಡಿಯಲಿಲ್ಲ. ಅರ್ಜುನ ಹೀಗೆ ಮಾಡುವ ಮೂಲಕ ಮುಖ್ಯ ಕಾರ್ಯ ಸಾಧನೆ ಆದ ಮೇಲೆ ಇತರ ಕ್ಷುಲ್ಲಕ ವಿಷಯಗಳ ಬಗ್ಗೆ ವಾದಕ್ಕೆ ತೊಡಗುವುದು ವಿವೇಕವಲ್ಲ ಎಂಬ ತತ್ವವನ್ನು ಲೋಕಕ್ಕೆ ಸಾರಿದ ಎಂದು ತಿಳಿಯಬೇಕು.

೨) ಭಗದತ್ತ ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವ ಪಕ್ಷವನ್ನು ಸೇರಿ ಅರ್ಜುನ–ನಿಂದಲೇ ಹತನಾಗುವನು ಎಂಬುದನ್ನು ಗಮನಿಸಬೇಕು (೨೬/೩೨).

---

೨೨೧. ಹರಿವರಾಸ್ತ್ರತೇಜಸೇತ್ಯತ್ರ ಹರೇಃ = ನಾರಾಯಣಸ್ಯ ವರಾಸ್ತ್ರಂ = ಶ್ರೇಷ್ಠಾಸ್ತ್ರಮ್। ವರಾಹದತ್ತವೈಷ್ಣವಾಸ್ತ್ರ-ತೇಜಸೇತ್ಯರ್ಥಃ ॥ –(ವಾ.)

೨೨೨. ನೈವಾಹ ಚೋತ್ತರಮಿತ್ಯತ್ರ ತ್ವಂ ನ ಶಕ್ಷ್ಯಸೀತಿ ಧಿಕ್ಕೃತೇಽಪಿ ಉತ್ತರಂ= ಪ್ರತ್ಯುತ್ತರಂ ನೈವಾಹ ॥ –(ವಾ.)

೩) ಅರ್ಜುನ ಹಾಗೆ ಮಾಡುವ ಮೂಲಕ ಅವನ ಇಂದಿನ ಬಿಂಕಕ್ಕೆ ಪ್ರತ್ಯುತ್ತರ ನೀಡಿದ ಎಂದು ತಿಳಿಯಬಹುದು.

ಅರ್ಜುನನಿಂದ ಸಮಸ್ತ ದಿಗ್ವಿಜಯ

ಪಾರ್ಥೋ ಜಿತ್ವಾऽಷ್ಟವರ್ಷಾಣಿ ಷಡ್ದ್ವೀಪಾನಪರಾನಪಿ ।
ಅಜಯಚ್ಚತುರ್ದಿಶಮಪಿ ಸರ್ವಶಸ್ತ್ರಾಸ್ತ್ರತೇಜಸಾ ॥ ೨೨೩ ॥

ಅ: ಅರ್ಜುನ ಎಂಟು ವರ್ಷಗಳನ್ನು, ಇತರ ಆರು ದ್ವೀಪಗಳನ್ನು, ನಾಲ್ಕು ದಿಕ್ಕುಗಳನ್ನು ತನ್ನ ಸಕಲ ಶಸ್ತ್ರಾಸ್ತ್ರಗಳ ತೇಜಸ್ಸಿನಿಂದಾಗಿ ಗೆದ್ದನು.

ವಿ: ೧) ಇತರ ಎಂಟು ವರ್ಷಗಳು ಎಂದರೆ ಕಿಂಪುರುಷ, ಹರಿವರ್ಷ, ಇಲಾವೃತ, ಭದ್ರಾಶ್ವ, ಕೇತುಮಾಲ, ಹಿರಣ್ಮಯ, ರಮ್ಯಕ ಮತ್ತು ಕುರು ಎಂಬ ಎಂಟು ವರ್ಷಗಳು ಎಂದರ್ಥ. ಇವು ಭರತವರ್ಷದೊಂದಿಗೆ ಸೇರಿ ಒಟ್ಟು ಒಂಭತ್ತು ವರ್ಷಗಳಾಗುವವು.

೨) ಉಳಿದ ಆರು ದ್ವೀಪಗಳು ಎಂದರೆ ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರ ದ್ವೀಪಗಳು, ಜಂಬೂದ್ವೀಪದೊಂದಿಗೆ ಸೇರಿ ಸಪ್ತ ದ್ವೀಪಗಳಾಗುವವು.

೩) ವ್ಯಾಸರು ಇದನ್ನೆಲ್ಲಾ ಮುಂಚೆಯೇ ತಿಳಿಸಿದ್ದುದನ್ನು ಗಮನಿಸಬೇಕು (ಶ್ಲೋ. ೧೮೮). ಅರ್ಜುನನಿಗೆ ಇದೆಲ್ಲಾ ಸಾಧ್ಯವಾಗಲು ಅವನಲ್ಲಿ ಗಗನಗಾಮಿಯಾದ ಅಪೂರ್ವ ರಥವಿದ್ದದ್ದು (ಶ್ಲೋ. ೧೮೯) ಒಂದು ಮುಖ್ಯ ಕಾರಣ ಎಂಬ ವಿವರ ಈಗಾಗಲೇ ಬಂದಿದೆ.

---

೨೨೩. ಪಾರ್ಥೋ ಜಿತ್ವಾऽಷ್ಟವರ್ಷಾಣೀತ್ಯತ್ರ ಅಷ್ಟವರ್ಷಾಣಿ = ಭಾರತವರ್ಷವ್ಯತಿರಿಕ್ತಕಿಂಪುರುಷಾದ್ಯಷ್ಟವರ್ಷಾಣಿ ಅಪರಾನ್ = ಜಂಬುದ್ವೀಪವ್ಯತಿರಿಕ್ತಪ್ಲಕ್ಷಾದಿಷಡ್ ದ್ವೀಪಾನ್ ಚತುರ್ದಿಶಂ= ಚತಸ್ರಃ ದಿಶಃ ಯಥಾ ಜಿತಾ ಭವಂತಿ ತಥಾ ಚತುರ್ದಿಶಮ್ ॥ – (ವಾ.)

೨೨೩. ಪಿತುಃ ಶಿಷ್ಯೋ ಹ್ಯಾತ್ಮಶಿಷ್ಯ ಇತಿವಚನಾತ್ ಅರ್ಜುನೋऽಪಿ ಮದ್ಗುರುರಿತ್ಯಭಿಪ್ರಾಯೇಣ ಸಾದರಂ ಪ್ರೀತಿಪೂರ್ವಕಂ ಅಮುಷ್ಯ ಕರಂ ದದೌ। – (ಜ.)

೨೨೩. ಸಮಾ ಗುರೌ ಯಥಾ ವೃತ್ತಿರ್ಗುರುಪತ್ನ್ಯಾಂ ತಥಾऽऽಚರೇತ್ ।
ತತ್ಪುತ್ರೇ ಚ ತಥಾ ಕುರ್ವನ್ ದ್ವಿತೀಯಃ ಪಾದ ಉಚ್ಯತೇ ॥ – ಭಾರತ (ಉದ್ಯೋಗ. ೪೪/೧೩)

೨೨೩. ಪೂರ್ವಂ ಜಂಬೂದ್ವೀಪಸ್ಥಾಷ್ಟಖಂಡಾಪೇಕ್ಷಯಾ ಸಪ್ತದ್ವೀಪಾಂಶ್ಚ ಪ್ರಯಾಹೀತಿ ವ್ಯಾಸೇನೋಕ್ತಮಿತಿ ಜ್ಞಾಪಯಿತುಂ ಪಾರ್ಥ ಇತ್ಯಸ್ಮಿನ್ ಶ್ಲೋಕಸ್ಥತೃತೀಯ ಪಾದೇ ನವಾಕ್ಷರಾಣಿ। – (ಜ.)

೨೨೩. ಅಷ್ಟವರ್ಷಾಣಿ ಭರತಖಂಡೋತ್ತರಂ ಜಂಬೂದ್ವೀಪಸ್ಥಾಷ್ಟಖಂಡಾನ್ ಅಪರಾನ್ ಜಂಬೂದ್ವೀಪವ್ಯತಿರಿಕ್ತಾನ್। ಷಟ್ ದ್ವೀಪಾನ್ ಪ್ಲಕ್ಷಾದಿಷಡ್ದ್ವೀಪಾನಪಿ ಅಪಿಶಬ್ದೇನ ಅನ್ಯಾಗಮ್ಯತ್ವಂ ಸೂಚಿತಂ। – (ಜ.)

ಪಾತಾಲಸಪ್ತಕಂ ಗತ್ವಾ ಜಿತ್ವಾ ದೈತೇಯದಾನವಾನ್ ।
ಬಲೇಶ್ಚ ವಿಷ್ಣುವಚನಾತ್ ಕರಂ ಜಗ್ರಾಹ ಸಾಮತಃ ॥ ೨೨೪ ॥

ಅ: ಅರ್ಜುನ ಕೆಳಗಿನ ಏಳು ಲೋಕಗಳಿಗೂ ಹೋಗಿ ಅಲ್ಲಿ ದೈತ್ಯ ದಾನವರನ್ನು ಗೆದ್ದ. ವಿಷ್ಣುವಿನ ಆದೇಶದಂತೆ ಬಲಿ ನೀಡಿದ ಕಪ್ಪವನ್ನು ಸಾಮಮಾರ್ಗದಿಂದಲೇ ಪಡೆದುಕೊಂಡ.

ವಿ: ೧) ಪಾತಾಳಲೋಕದ ಪ್ರಧಾನ ರಾಜರುಗಳಲ್ಲಿ ಸುತಲ ಲೋಕದ ಬಲಿ ಅತ್ಯಂತ ಪ್ರಮುಖ. ಭಾವೀಇಂದ್ರನೆಂದು ಶ್ರೀಹರಿಯಿಂದ ಅನುಗೃಹೀತನಾದವ; ಪ್ರಹ್ಲಾದನ ಮೊಮ್ಮಗ. ಅವನು ಶ್ರೀಹರಿಯ ಆದೇಶದಂತೆ ಅರ್ಜುನನಿಗೆ ಶಾಂತಿಯಿಂದಲೇ ಕಪ್ಪ ನೀಡಿದ. ಅರ್ಜುನ ಅದನ್ನು ಪಡೆದು ಮುಂದೆ ಸಾಗಿದ.

೨) ವೈಷ್ಣವನಾದ ಬಲಿಯೊಂದಿಗೆ ಸಾಮೋಪಾಯವೇ ವಿಹಿತ ಎಂದು ತಿಳಿಸುವ ಮೂಲಕ ವೈಷ್ಣವರೊಂದಿಗೆ ವಿರೋಧ ಸಲ್ಲದು ಎಂಬ ಪ್ರಮೇಯವನ್ನು ಸೂಚಿಸಿದ ಎಂದು ತಿಳಿಯಬೇಕು. ಇಲ್ಲಿ ಹರಿಯ ರೂಪ ಎಂದರೆ ವಾಮನ ಅಥವಾ ಕಪಿಲ ಎಂಬ ಎರಡು ರೂಪಗಳೂ ವಿವಕ್ಷಿತ.

೩) ಬಲಿಯ ವಿವರ ಮೊದಲಾದವುಗಳು ಭಾಗವತ, ರಾಮಾಯಣ ಮೊದಲಾದ ಮೂಲ ಕೃತಿಗಳಲ್ಲಿ ವಿಕವಾಕ್ಯತೆಗೆ ನಿದರ್ಶನ.

ಜಿತ್ವಾ ಚ ವಾಸುಕಿಂ ಭೂರಿರತ್ನಮಾದಾಯ ಸತ್ವರಃ ।
ಆಜಗಾಮ ಪುರಂ ಸ್ವೀಯಂ ವೀರೋ ವತ್ಸರಮಾತ್ರತಃ ॥ ೨೨೫ ॥

ಅ: ವಾಸುಕಿಯನ್ನೂ ಸಹ ಗೆದ್ದು ಅವನಿಂದ ಬಹಳ ರತ್ನಗಳನ್ನು ತೆಗೆದುಕೊಂಡು ತ್ವರೆಯಿಂದ ವೀರನಾದ ಅರ್ಜುನ ಒಂದು ವರ್ಷದಲ್ಲೇ ತನ್ನ ಪಟ್ಟಣಕ್ಕೆ ಮರಳಿ ಬಂದ.

ವಿ: ಅರ್ಜುನ ಹಾಗೆ ಅಂತಹ ಅಪೂರ್ವ ದಿಗ್ವಿಜಯಕ್ಕೆ ತೆಗೆದುಕೊಂಡ ಸಮಯ ಕೇವಲ ಒಂದು ವರ್ಷ ಮಾತ್ರ. ನಾಗರಾಜನಾದ ವಾಸುಕಿ ಅರ್ಜುನನಿಗೆ ರತ್ನಗಳನ್ನು ಕಾಣಿಕೆಯಾಗಿ ನೀಡಿದ. ಉಲೂಪಿಯ ಕಾರಣದಿಂದಾಗಿ ಅರ್ಜುನನಿಗೆ ಈಗಾಗಲೇ ನಾಗಲೋಕದ ಸಂಪರ್ಕ ಬಂದಿದ್ದ ವಿವರ ಇಪ್ಪತ್ತನೆಯ ಅಧ್ಯಾಯದಲ್ಲಿ ಬಂದಿದೆ (೨೦/೧೫೩, ೧೫೪).

---

೨೨೪. ವಿಷ್ಣುವಚನಾತ್ ಬಲಿದ್ವಾರಸ್ಥಕಪಿಲಾಖ್ಯ ವಿಷ್ಣುವಚನಾತ್। - (ಜ.)

೨೨೪. ವಿಷ್ಣುವಚನಾತ್ ಬಲಿದ್ವಾರಸ್ಥವಾಮನ ವಚನಾತ್। - (ತಾ.)

ಭೀಮಾದಿಗಳು ತಂದ ಐಶ್ವರ್ಯರಾಶಿ

ಸುವರ್ಣರತ್ನಗಿರಯಶ್ಚತುರ್ಭಿಃ ತೈಃ ಸಮಾರ್ಜಿತಾಃ ।
ಚತ್ವಾರೋ ಯೋಜನಾನಾಂ ಹಿ ದಶ ತ್ರಿಂಶಚ್ಛತಂ ತಥಾ ॥ ೨೨೬ ॥

ಚತುಃಶತಂ ಚ ಕ್ರಮಶ ಉಚ್ಛ್ರಿತಾ ದಿಗ್ಜಯಾರ್ಜಿತಾಃ ।
ಪ್ರತೀಚ್ಯಾದ್ಯಪಸವ್ಯೇನ ಕ್ರಮಾದ್ದಿಗ್ಭ್ಯಃ ಸಮಾರ್ಜಿತಾಃ ॥ ೨೨೭ ॥

ಅ: ಅವರು ನಾಲ್ವರಿಂದ ಸಂಪಾದಿಸಲ್ಪಟ್ಟ ಚಿನ್ನ ಮತ್ತು ರತ್ನಗಳ ರಾಶಿಗಳು ಪಶ್ಚಿಮಾದಿ ದಿಕ್ಕುಗಳಿಂದ ಅಪ್ರದಕ್ಷಿಣ ಕ್ರಮವಾಗಿ ಹತ್ತು ಯೋಜನ, ಮೂವತ್ತು ಯೋಜನ, ನೂರು ಯೋಜನ ಮತ್ತು ನಾನ್ನೂರು ಯೋಜನ ಉನ್ನತವಾಗಿದ್ದವು.

ವಿ: ೧) ಪಾಂಡವರು ಹಾಗೆ ಸಂಪಾದಿಸಿದ ಚಿನ್ನ, ರತ್ನಗಳ ಸಂಪತ್ತು ನಾಲ್ಕು ಬೆಟ್ಟ–ಗಳಷ್ಟಾಯಿತು. ನಕುಲ ತಂದದ್ದು ಹತ್ತು ಸಹದೇವನದು ಮೂವತ್ತು ಭೀಮಸೇನನದು ನೂರು ಮತ್ತು ಅರ್ಜುನನದು ನಾನ್ನೂರು ಯೋಜನಗಳಷ್ಟು ಈ ಬೆಟ್ಟಗಳು ವಿಸ್ತಾರವಾಗಿದ್ದವು. ಇಲ್ಲಿ **'ಪ್ರತೀಚ್ಯಾದ್ಯಪಸವ್ಯೇನ'** ಎಂದರೆ ಪಶ್ಚಿಮ ದಿಕ್ಕಿನಿಂದ ಅಪ್ರದಕ್ಷಿಣವಾಗಿ, ದಕ್ಷಿಣ, ಪೂರ್ವ ಮತ್ತು ಉತ್ತರ ಎಂದರ್ಥ.

೨) ಅವುಗಳಲ್ಲಿ ಅರ್ಜುನನದು ಇತರ ಮೂವರಿಗಿಂತ ಹೆಚ್ಚು ಪ್ರಮಾಣದ್ದಾಗಿರಲು ಕಾರಣ ಅವನ ದಿಗ್ವಿಜಯದ ವ್ಯಾಪ್ತಿ ವಿಶಾಲವಾಗಿದ್ದುದೇ ಆಗಿತ್ತು ಎಂದು ತಿಳಿಯಬೇಕು. ಭೀಮು

---

೨೨೬. ಸುವರ್ಣರತ್ನಗಿರಯಶ್ಚತುರ್ಭಿಸ್ತೈಃ ಸಮಾರ್ಜಿತಾ ಇತ್ಯತ್ರ ಪ್ರತೀಚ್ಯಾದ್ಯಪಸವ್ಯೇನ = ಪ್ರತೀಚೀಂ ದಿಶಮಾರಭ್ಯಾಪಸವ್ಯೇನ ಅಪ್ರಾದಕ್ಷಿಣ್ಯೇನ ''ವಾಮಂ ಶರೀರೇ ಸವ್ಯಂ ಸ್ಯಾದಪಸವ್ಯಂ ತು ದಕ್ಷಿಣಮ್'' ಇತ್ಯನುಶಾಸನೇ ಶರೀರ ಇತಿ ವಿಶೇಷಣಾದಪಸವ್ಯಪದಂ ಶರೀರಕರಚರಣಾದಿಷ್ವೇವ ದಕ್ಷಿಣವಾಚಕಮ್। ಅನ್ಯತ್ರ ತು ವಾಮವಾಚಕಮಪೀತಿ ಸೂಚಿತಮ್। ಅತೋ ದಿಗ್ವಿಷಯತ್ವಾತ್ ಅಪಸವ್ಯಪದಂ ವಾಮವಾಚಕಮಿತಿ ಜ್ಞೇಯಮ್। ತೈಶ್ಚತುರ್ಭಿಃ= ನಕುಲಸಹದೇವಭೀಮಾರ್ಜುನೈಃ ॥ –(ವಾ.)

೨೨೬. ಚತ್ವಾರಃ = ಸುವರ್ಣರತ್ನಗಿರಯಃ ದಿಗ್ಭ್ಯಃ ಸಮಾರ್ಜಿತಾಃ। ತೇಷಾಂ ಗಿರೀಣಾಂ ಪ್ರಮಾಣಮಾಹ। ಯೋಜನಾನಾಮಿತಿ। ಯೋಜನಾನಾಂ ದಶ। ಯೋಜನಾನಾಂ ತ್ರಿಂಶತ್। ಯೋಜನಾನಾಂ ಶತಮ್। ಯೋಜನಾನಾಂ ಚತುಃ ಶತಂ ಚೇತಿ ದಿಗ್ವಯಾರ್ಜಿತಾಶ್ಚತ್ವಾರೋ ಗಿರಯಃ। ಕ್ರಮಶಃ ಕ್ರಮೇಣ। ಉಚ್ಛ್ರಿತಾಃ = ಆಯಾಮವಂತಃ ನಕುಲಾರ್ಜಿತೋ ಗಿರಿಃ ದಶಯೋಜನೋಚ್ಛ್ರಿತಃ। ಸಹದೇವಾರ್ಜಿತಃ ತ್ರಿಂಶದ್ಯೋ-ಜನೋಚ್ಛ್ರಿತಃ। ಭೀಮಸೇನಾರ್ಜಿತಃ ಶತಯೋಜನೋಚ್ಛ್ರಿತಃ। ಅರ್ಜುನಾರ್ಜಿತಃ ಸುವರ್ಣರತ್ನಗಿರಿಃ ಚತುಶ್ಶತಯೋಜನೋಚ್ಛ್ರಿತ ಇತಿ ಭಾವಃ। ಸಪ್ತದ್ವೀಪಾಶ್ರಿತವಿತ್ತಾನಿ ಅರ್ಜುನಸ್ಯ ಇಂದ್ರಾವತಾರತ್ವಾ-ದ್ದೇವದೂತೈರಾನೀತಾನೀತಿ ಜ್ಞೇಯಮ್ ॥ –(ವಾ.)

ತಂದ ಸಂಪತ್ತು ಮೇಲ್ನೋಟಕ್ಕೆ ಅರ್ಜುನನಿಗಿಂತ ಕಡಿಮೆಯೆನ್ನಿಸಿದರೂ, ಅವರ ದಿಗ್ವಿಜಯದ ವ್ಯಾಪ್ತಿಯನ್ನು ಗಮನಿಸಿದಾಗ ಒಟ್ಟು ಲೆಕ್ಕದಲ್ಲಿ ಅವನಿಗಿಂತ ಅಧಿಕಪ್ರಮಾಣದ್ದು ಎಂದು ತಿಳಿಯ–ಬೇಕು.

ವಿಶ್ವಕರ್ಮ ಸಭೆಯ ಅಪೂರ್ವತೆ

ವಿಶ್ವಕರ್ಮಕೃತತ್ವಾತ್ ತು ಪುರಸ್ಯಾಲ್ಪೇಽಪಿ ಚ ಸ್ಥಲೇ ।
ಅಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ॥ ೨೨೮ ॥

ಅ: ಇಂದ್ರಪ್ರಸ್ಥ ವಿಶ್ವಕರ್ಮನ ನಿರ್ಮಾಣವಾದ್ದರಿಂದ ಅದರಲ್ಲಿನ ಅಲ್ಪಸ್ಥಳದಲ್ಲಿಯೂ ಸಹ ಆ ಬೆಟ್ಟಗಳು ಅಡಕವಾಗಲು ಸಾಧ್ಯವಾಯಿತು; ಅದೊಂದು ಅದ್ಭುತದಂತೆಯೇ ಆಯಿತು.

ವಿ: ಒಟ್ಟು ಐನೂರ ನಲ್ವತ್ತು ಯೋಜನಗಳಷ್ಟು ವ್ಯಾಪ್ತಿಯ ಚಿನ್ನ, ರತ್ನಗಳ ರಾಶಿಯನ್ನು ಇಂದ್ರಪ್ರಸ್ಥದಂತಹ ಸೀಮಿತ ಪ್ರದೇಶದಲ್ಲಿ ಅಡಕಮಾಡಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ದೈವಶಿಲ್ಪಿಯಾದ ವಿಶ್ವಕರ್ಮ ನಿರ್ಮಿಸಿದ ಅಪೂರ್ವ ಸ್ಥಳವಾದ್ದರಿಂದ ಅಲ್ಲಿಯ ಸ್ವಲ್ಪ ಪ್ರದೇಶದಲ್ಲೂ ಅಷ್ಟು ಅಪಾರವಾದ ಚಿನ್ನ, ರತ್ನಗಳ ರಾಶಿ ಅಡಕಗೊಂಡಿತು ಎಂದರ್ಥ.

ರಾಜಸೂಯ ಯಾಗದ ಪ್ರಾರಂಭ

ತತೋ ಯಜ್ಞಃ ಪ್ರವವೃತೇ ಕೃಷ್ಣದ್ವೈಪಾಯನೇರಿತಃ ।
ಋತ್ವಿಜೋ ಮುನಯೋಽತ್ರಾಸನ್ ಸರ್ವವಿದ್ಯಾಸು ನಿಷ್ಠಿತಾಃ ॥ ೨೨೯ ॥

---

೨೨೮. ಸಹಸ್ರಯೋಜನಸಭಾಂ ಪ್ರಭಾವಾದ್ವಿಶ್ವಕರ್ಮಣಃ ।
ಅನಂತಾ ರಾಶಯೋಽನಂತಾಃ ಪ್ರಜಾನಾಮಧಿಸಂಸ್ಥಿತಾಃ ॥ ಇತಿ ಸ್ಕಾಂದೇ – ವಿಷ್ಣುತತ್ವನಿರ್ಣಯ

೨೨೯. ತತೋ ದ್ವೈಪಾಯನೋ ರಾಜನ್ ಋತ್ವಿಜಃ ಸಮುಪಾನಯತ್ ।
ವೇದಾವಿವ ಮಹಾಭಾಗಾನ್ ಸಾಕ್ಷಾನ್ಮೂರ್ತಿಮತೋ ದ್ವಿಜಾನ್ ।
ಸ್ವಯಂ ಬ್ರಹ್ಮತ್ವಮಕರೋತ್ ತಸ್ಯ ಸತ್ಯವತೀಸುತಃ ।
ಧನಂಜಯಾನಾಮೃಷಭಃ ಸುಸಾಮಾ ಸಾಮಗೋಽಭವತ್ ।
ಯಾಜ್ಞವಲ್ಕ್ಯೋ ಬಭೂವಾಥ ಬ್ರಹ್ಮಷ್ಠೋಽಧ್ವರ್ಯುಸತ್ತಮಃ ।
ಪೈಲೋ ಹೋತಾ ವಸೋಃ ಪುತ್ರೋ ಧೌಮ್ಯೇನ ಸಹಿತೋಽಭವತ್ ।
ಏತೇಷಾಂ ಪುತ್ರವರ್ಗಾಶ್ಚ ಶಿಷ್ಯಾಶ್ಚ ಭರತರ್ಷಭಃ ।
ಬಭೂವುರ್ಹೋತ್ರಗಾಃ ಸರ್ವೇ ವೇದವೇದಾಂಗಪಾರಗಾಃ ॥ – ಕೃ. ಭಾರತ (ಸಭಾ. ೩೬/೩೩-೩೬)

ಅ: ಬಳಿಕ ವೇದವ್ಯಾಸರು ತಿಳಿಸಿದ್ದ ಯಜ್ಞ ಪ್ರಾರಂಭಗೊಂಡಿತು. ಸರ್ವವಿದ್ಯೆಗಳಲ್ಲಿ ನಿಷ್ಣಾತರಾದ ಮುನಿಗಳು ಆ ಯಾಗದಲ್ಲಿ ಋತ್ವಿಜರಾದರು.

ವಿ: ೧) ಆ ಯಜ್ಞಕ್ಕೆ ಸರ್ವೋತ್ತಮರಾದ ಶ್ರೀವೇದವ್ಯಾಸರದೇ ನೇತೃತ್ವ. ಯಾಜ್ಞವಲ್ಕ್ಯ, ಪೈಲ, ಧೌಮ್ಯ ಮತ್ತು ಸುಸಾಮ ಮುನಿಗಳು ಕ್ರಮವಾಗಿ ಅಧ್ವರ್ಯು, ಹೋತೃ ಮತ್ತು ಉದ್ಗಾತೃ–ಗಳೆಂಬ ಋತ್ವಿಕ್‌ಗಳಾದರು. ಸ್ವತಃ ವೇದವ್ಯಾಸರು ಬ್ರಹ್ಮನೆಂಬ ಋತ್ವಿಕ್ ಎನಿಸಿದರು. ಹೀಗೆ ಆ ಯಜ್ಞದಲ್ಲಿ ಸಕಲ ವಿದ್ಯಾಪಾರಂಗತರಾದ ಮಹಾಮುನಿಗಳು ಋತ್ವಿಕ್‌ಗಳಾಗಿ ಪಾಲ್ಗೊಂಡರು.

೨) ಒಂದು ಯಜ್ಞದ ಹಿರಿಮೆಗೆ ಕಾರಣವಾಗುವ ಅನೇಕ ಮುಖ್ಯಾಂಶಗಳಲ್ಲಿ ಋತ್ವಿಕ್‌ಗಳು ತುಂಬಾ ಪ್ರಧಾನವೆನ್ನಿಸುವರು. ಈ ಅರ್ಥದಲ್ಲೂ ಪಾಂಡವರ ರಾಜಸೂಯ ಯಾಗ ಅತ್ಯುತ್ತಮ ಶ್ರೇಣಿಯ ಯಜ್ಞವಾಗಿತ್ತು ಎಂದು ತಿಳಿಯುವುದು.

ಯುಧಿಷ್ಠಿರನ ಯಜ್ಞದೀಕ್ಷೆ

ದ್ವೈಪಾಯನೋಕ್ತವಿಧಿನಾ ದೀಕ್ಷಯಾಂಚಕ್ರೇ ನೃಪಮ್ ।
ಜ್ಯೇಷ್ಠತ್ವಾದ್ಯಾಜಮಾನ್ಯಂ ತು ಪ್ರಣಿಧಾಯ ಯುಧಿಷ್ಠಿರೇ ।
ಭೀಮಾರ್ಜುನಾದಯಃ ಸರ್ವೇ ಸಹ ತೇನ ಸಮಾಸಿರೇ ॥ ೨೩೦ ॥

ಅ: ಋತ್ವಿಜರು ವೇದವ್ಯಾಸರು ಹೇಳಿದ ವಿಧಿಗೆ ಅನುಗುಣವಾಗಿ ಧರ್ಮರಾಜನನ್ನು ಯಜ್ಞದೀಕ್ಷಿತನನ್ನಾಗಿ ಮಾಡಿದರು; ಧರ್ಮರಾಜ ಜ್ಯೇಷ್ಠನಾದ್ದರಿಂದ ಅವನಲ್ಲಿ ಯಜಮಾನತ್ವ-ವನ್ನು ಒಪ್ಪಿಸಿ ಭೀಮ ಅರ್ಜುನ ಮೊದಲಾದವರೆಲ್ಲ ಅವನೊಂದಿಗೆ ಕುಳಿತರು.

ವಿ: ೧) ಯಜ್ಞಕ್ಕೆ ಯಜಮಾನನಾಗಿ ಕೂಡುವ ಮುಖ್ಯ ಅರ್ಹತೆ ಭೀಮನದು. ಆದರೂ ಧರ್ಮರಾಜನನ್ನು ಹಾಗೆ ಯಜಮಾನನನ್ನಾಗಿ ಕೂಡಿಸಲು ಅವನು ಪಾಂಡವಜ್ಯೇಷ್ಠನಾಗಿದ್ದುದೇ ಕಾರಣ.

೨) ಯಜ್ಞಯಾಗಾದಿಗಳ ಯಾಜಮಾನ್ಯ ಹಿರಿಯರದು ಎಂಬ ವಿಶೇಷಾಂಶ ಇದರಿಂದ ಸೂಚಿತ.

---

೨೩೦. ದೀಕ್ಷಾಯಾಂ ಚಕ್ರೇ ನೃಪಮಿತ್ಯಸ್ಯ ನೃಪಂ ದೀಕ್ಷಾಯಾಂ ಬದ್ಧಂ ಚಕ್ರ ಇತ್ಯರ್ಥಃ। – (ಸ.)

೨೩೦. ದೀಕ್ಷಾಯಾಂಚಕ್ರ ಇತ್ಯಪಿ ಪಾಠಃ। – (ಜ.)

ಯಜ್ಞಪತ್ನಿಯಾಗಿ ದ್ರೌಪದಿ

ಬ್ರಹ್ಮಾಣೇಪದಯೋಗ್ಯತ್ವಾತ್ ಕೃಷ್ಣೈಕಾ ಯಜ್ಞಪತ್ನ್ಯಭೂತ್ ।
ಪದಾಯೋಗ್ಯತಯಾ ನಾನ್ಯಾಃ ಪತ್ನ್ಯಸ್ತೇಷಾಂ ಸಹಾಸಿರೇ ।
ಆಜ್ಞಯೈವ ಜಗದ್ಧಾತುರ್ವ್ಯಾಸಸ್ಯಾನಂತತೇಜಸಃ ॥ ೨೩೧ ॥

ಅ: ಸರಸ್ವತೀಪದವಿಗೆ ಯೋಗ್ಯಳಾದ್ದರಿಂದ ದ್ರೌಪದಿಯೊಬ್ಬಳೇ ಯಜ್ಞಪತ್ನಿಯಾದಳು. ಆ ಪದಕ್ಕೆ ಅರ್ಹತೆಯಿಲ್ಲದ್ದರಿಂದ ಪಾಂಡವರ ಇತರ ಪತ್ನಿಯರು ಅವರೊಂದಿಗೆ ಕುಳಿತು-ಕೊಳ್ಳಲಿಲ್ಲ. ಅದಕ್ಕೆ ಜಗದ್ಧಾರಕರಾದ ಅನಂತ ತೇಜಸ್ಸಿನ ವೇದವ್ಯಾಸರ ಆದೇಶವೇ ಕಾರಣ-ವಾಗಿತ್ತು.

ವಿ: ೧) ರಾಜಸೂಯ ಯಾಗ ಮಾಡಿದವರು ಬ್ರಹ್ಮ ಪದವಿಗೆ ಅರ್ಹರಾಗುವಂತೆ, ಅದಕ್ಕೆ ಯಜಮಾನಿಯಾದವಳು ಸರಸ್ವತೀ ಪದವಿಗೂ ಅರ್ಹಳಾಗುವಳು. ಪಾಂಡವರ ಪತ್ನಿಯರಲ್ಲಿ ದ್ರೌಪದಿಗೆ ಮಾತ್ರ ಆ ಅರ್ಹತೆ ಇದ್ದದ್ದರಿಂದ ಅವರೊಬ್ಬರೇ ಯಜ್ಞಪತ್ನಿಯಾಗಿ ಕುಳಿತರು ಎಂದರ್ಥ.

೨) ಯಜ್ಞಪತ್ನಿ ಎಂದರೆ ಯಜಮಾನನ ಜೊತೆಯಲ್ಲಿ ಯಜ್ಞಕ್ಕೆ ದೀಕ್ಷೆ ವಹಿಸಿ ಕೂಡುವ ಪತ್ನಿ ಎಂದರ್ಥ. ಯಜಮಾನಿ ಎಂದು ಭಾವ. ಉಳಿದ ಪತ್ನಿಯರಲ್ಲಿ ಕಾಳಿ ಸಾಕ್ಷಾತ್ ಭಾರತಿಯೇ, ಅವರಿಬ್ಬರೂ ಒಂದೇ ಆದ್ದರಿಂದ ದ್ರೌಪದಿ ಮಾತ್ರವೇ ಕುಳಿತದ್ದು ಎಂದು ತಿಳಿಯಬೇಕು.

೩) ಧರ್ಮರಾಜ ಯಜಮಾನನಾಗಿ ದೀಕ್ಷಿತನಾಗಿದ್ದಾಗಲೂ ಅವನೊಳಗೆ ಆವಿಷ್ಟರಾಗಿದ್ದ ಸೌಮ್ಯನಾಮಕ ವಾಯುದೇವರೇ ಮುಖ್ಯವಾಗಿ ಆ ದೀಕ್ಷೆ ವಹಿಸಿದ್ದರು ಎಂಬುದನ್ನು ಈಗಾಗಲೇ ಬಂದ ವಿವೇಚನೆಯಿಂದ ತಿಳಿಯಬಹುದು.ಕಾಳಿ ದೇವಿಯು ದ್ರೌಪದಿ ಜೊತೆಗೆ ಕೂಡದಿರಲು ಅನಂತರದ ಜ್ಯೇಷ್ಠತೆ ಯುಧಿಷ್ಠಿರ ಪತ್ನಿಯಾದ ದೇವಕಿಯದೇ ಆಗಿತ್ತು, ಆದರೆ ಶ್ಯಾಮಲೆಯ ಅವತಾರವಾದ ಆಕೆಗೆ ಹಾಗೆ ಕೂಡುವ ಅರ್ಹತೆಯಿರಲಿಲ್ಲ. ಜ್ಯೇಷ್ಠತೆಯಲ್ಲಿ ಅನಂತರದವರಾದ ತಾವು ಕೂಡುವುದು ಲೋಕನೀತಿ ಎನ್ನಿಸದು ಎಂಬ ಕಾರಣದಿಂದ ಕಾಳಿದೇವಿ ತಾನೂ ಸಹ ಕೂಡಲಿಲ್ಲ ಎಂದು ತಿಳಿಯಬಹುದು.

೪) ಆ ಯೋಗ್ಯತೆಯ ಪರಿಜ್ಞಾನವೆಲ್ಲಾ ಸಮಗ್ರವಾಗಿ ಇದ್ದದ್ದು ಶ್ರೀವೇದವ್ಯಾಸರದೇ ಆದ್ದರಿಂದ ಅವರೇ ಆ ಬಗೆಯ ವ್ಯವಸ್ಥೆಯನ್ನು ಮಾಡಿದರು. ಅದನ್ನು ಸಹಜವಾಗಿಯೇ ಇತರರು ಶಿರಸಾ ವಹಿಸಿದರು ಎಂದರ್ಥ.

ಯಜ್ಞವೈಭವ

ಸ್ಥಲಮಪ್ಯತ್ರ ಸರ್ವಂ ಹಿ ರತ್ನಹೇಮಮಯಂ ತ್ವಭೂತ್ ।
ಕಿಮು ಪಾತ್ರಾದಿಕಂ ಸರ್ವಂ ಶಿಬಿರಾಣಿ ಚ ಸರ್ವಶಃ ॥ ೨೩೨ ॥

ಅ: ಅಲ್ಲಿಯ ಸ್ಥಳವೆಲ್ಲ ಸಂಪೂರ್ಣವಾಗಿ ರತ್ನ, ಸುವರ್ಣಗಳಿಂದ ತುಂಬಿಹೋಗಿತ್ತು. ಯಜ್ಞಪಾತ್ರೆಗಳೂ, ಶಿಬಿರಗಳು ಮೊದಲಾದವುಗಳೆಲ್ಲ ಹಾಗೆ ರತ್ನ ಹೇಮಮಯವೆಂದು ಬೇರೆಯಾಗಿ ಹೇಳಬೇಕೇನು!

ವಿ: ರಾಜಸೂಯ ಯಾಗದ ಸಭಾಮಂಟಪದ ನೆಲವೂ ಸಹ ಸುವರ್ಣ ರತ್ನಗಳಿಂದ ಮಾಡಲ್ಪಟ್ಟಿತ್ತು ಅದರಂತೆ ಯಜ್ಞ ಸಾಮಗ್ರಿಗಳು, ಸಿದ್ಧಪಡಿಸಲ್ಪಟ್ಟಿದ್ದ ವಸತಿ ಶಾಲೆಗಳೂ ಸಹ ಸುವರ್ಣ, ರತ್ನಗಳಿಂದಲೇ ನಿರ್ಮಿತವಾಗಿದ್ದವು ಎಂಬುದು ಆ ಯಾಗದ ಅಸಾಮಾನ್ಯ ವೈಶಿಷ್ಟ್ಯಕ್ಕೆ ದ್ಯೋತಕ.

ಯಜ್ಞದಲ್ಲಿ ಪಾಲ್ಗೊಂಡವರು

ಆಹೂತಂ ದಿಗ್ಜಯೇ ಪಾರ್ಥೈಸ್ತದಾ ಲೋಕದ್ವಿಸಪ್ತಕಮ್ ।
ಸರ್ವಮತ್ಯಾಗಮದ್ಬ್ರಹ್ಮಶರ್ವಶಕ್ರಾದಿಪೂರ್ವಕಮ್ ॥ ೨೩೩ ॥

ಅ: ದಿಗ್ವಿಜಯಕಾಲದಲ್ಲಿ ಭೀಮಾದಿ ಪಾಂಡವರಿಂದ ಹದಿನಾಲ್ಕು ಲೋಕಗಳು ಆಹ್ವಾನಿಸಲ್ಪಟ್ಟಿದ್ದವು. ಅದರಂತೆ ಬ್ರಹ್ಮ, ರುದ್ರ, ಇಂದ್ರ ಮೊದಲಾದ ಸಮಸ್ತರೂ ಅಲ್ಲಿಗೆ ಆಗಮಿಸಿದರು.

ವಿ: ೧) ದಿಗ್ವಿಜಯ ಕಾಲದಲ್ಲಿ ದಿಗ್ವಿಜಯ ಕಾರ್ಯದೊಂದಿಗೆ ಭೀಮಾದಿ ನಾಲ್ವರೂ ಯಜ್ಞಕ್ಕೆ ಆಹ್ವಾನ ನೀಡುವ ಕಾರ್ಯವನ್ನೂ ಪೂರೈಸಿದ್ದರು ಎಂದರ್ಥ. ಯಾಗದ ವಿಧಿ ವಿಧಾನಗಳಲ್ಲಿ ಅದೂ ಸಹ ಸೇರಿದ್ದು ಎಂಬುದು ಶಾಸ್ತ್ರ ವಚನಗಳಿಂದ ತಿಳಿಯುವುದು.

೨) ಬ್ರಹ್ಮಾದಿದೇವತೆಗಳೆಲ್ಲಾ ಅಲ್ಲಿಗೆ ಆಗಮಿಸಿದ್ದು ಅವರೆಲ್ಲರನ್ನೂ ಇವರು ಆಹ್ವಾನಿಸಿದ್ದಕ್ಕೆ ಸೂಚಕವೂ ಆಗಿತ್ತು ದೇವತಾಸನ್ನಿಧಾನ ಮಾತ್ರವಲ್ಲದೇ ದೇವತೆಗಳೇ ಪ್ರತ್ಯಕ್ಷವಾಗಿ

---

೨೩೨. ಶಿಬಿರಾಣಿ ಚ ಸರ್ವಶ ಇತ್ಯತ್ರ ಶಿಬಿರಾಣಿ ದ್ರಷ್ಟುಮಾಗತಾನಾಂ ರಾಜ್ಞಾಂ ನೂತನತಯಾ ಕೃತಾನಿ ಸೇನಾಸ್ಥಾನಾನಿ ॥ – (ವಾ.)

೨೩೩. ಪ್ರಯಯುಃ ಪ್ರೀತಮನಸೋ ಯಜ್ಞಂ ಬ್ರಹ್ಮಪುರಃ ಸರಾಃ ॥ – ಭಾರತ (೨/೩೪/೨)

ಉಪಸ್ಥಿತರಿದ್ದದ್ದು ಪಾಂಡವರ ಯಾಗದ ಅಸಾಧಾರಣ ವೈಶಿಷ್ಟ್ಯಗಳಲ್ಲಿ ಒಂದಾಗಿತ್ತು ಎಂಬುದು ಇದರಿಂದ ತಿಳಿಯುವುದು.

ಭೀಷ್ಮೋ ದ್ರೋಣಶ್ಚ ವಿದುರೋ ಧೃತರಾಷ್ಟ್ರಃ ಸಹಾತ್ಮಜಃ ।
ಸಸ್ತ್ರೀಕಾ ಆಯಯುಸ್ತತ್ರ ಬಾಹ್ಲೀಕಶ್ಚ ಸಹಾತ್ಮಜಃ ॥ ೨೩೪ ॥

ಅ: ಭೀಷ್ಮ, ದ್ರೋಣ, ಧೃತರಾಷ್ಟ್ರ, ಅವನ ಮಕ್ಕಳು, ಅವರ ಹೆಂಡಂದಿರು ಅಲ್ಲಿಗೆ ಆಗಮಿಸಿದರು. ಮಕ್ಕಳೊಂದಿಗೆ ಬಾಹ್ಲೀಕನೂ ಅಲ್ಲಿಗೆ ಬಂದ.

ವಿ: ೧) ಬಾಹ್ಲೀಕ ಮಕ್ಕಳೊಂದಿಗೆ ಎಂದರೆ ಮಗನಾದ ಸೋಮದತ್ತ ಹಾಗೂ ಮೊಮ್ಮಕ್ಕಳಾದ ಭೂರಿ, ಭೂರಿಶ್ರವ ಮತ್ತು ಶಲರೊಂದಿಗೆ ಆಗಮಿಸಿದ ಎಂದು ತಿಳಿಯಬೇಕು (೧೧/೧೧). ಅದರಂತೆ ದುರ್ಯೋಧನಾದಿಗಳೂ ಸಹ ಅವರ ಮಕ್ಕಳು ಮೊದಲಾದವರೊಂದಿಗೆ ಆಗಮಿಸಿದ್ದರು ಎಂದೂ ತಿಳಿಯಬೇಕು.

೨) ಎಂದರೆ ಆ ಸಭೆಯಲ್ಲಿ ಜೀವೋತ್ತಮರಾದ ಬ್ರಹ್ಮ ದೇವರಿಂದ ಪ್ರಾರಂಭಿಸಿ ಜೀವಾಧಮನಾದ ದುರ್ಯೋಧನನ ವರೆಗೆ ಸಮಸ್ತ ಜೀವ ಸಂಕುಲ ನೆರೆದಿತ್ತು ಎಂದಾಗುವುದು.

ತಥೈವ ಯಾದವಾಃ ಸರ್ವೇ ಬಲಭದ್ರಪುರೋಗಮಾಃ ।
ರುಗ್ಮಿಣೀಸತ್ಯಭಾಮಾದ್ಯಾಃ ಮಹಿಷ್ಯಃ ಕೇಶವಸ್ಯ ಚ ॥ ೨೩೫ ॥

ಅ: ಹಾಗೆಯೇ ಬಲರಾಮ ಮೊದಲಾದ ಸಕಲ ಯಾದವರು ಆಗಮಿಸಿದರು. ರುಗ್ಮಿಣೀ, ಸತ್ಯಭಾಮೆ ಮೊದಲಾದ ಕೃಷ್ಣನ ಮಹಿಷಿಯರೂ ಆಗಮಿಸಿದರು.

ರಾಜಸೂಯಯಜ್ಞದಲ್ಲಿ ನಡೆದ ಅಪೂರ್ವ ಜ್ಞಾನಯಜ್ಞ

ತತ್ರ ಸರ್ವಜಗದೇಕಸಂಗಮೇ
ತತ್ತ್ವನಿರ್ಣಯಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ
ವ್ಯಾಸ ಏವ ಭಗವಾನ್ ಬಭೂವ ಹ ॥ ೨೩೬ ॥

---

೨೩೬. ಸ್ವಯಂ ಬ್ರಹ್ಮತ್ವಮಕರೋದ್ ತಸ್ಯ ಸತ್ಯವತೀಸುತಃ । – ಭಾರತ (ಸಭಾ. ೩೩/೩೪)

ಅ: ಸಮಸ್ತ ಜಗತ್ತು ಒಂದೆಡೆ ಹಾಗೆ ಪ್ರಧಾನವಾಗಿ ನೆರೆದಿದ್ದ ಆ ಯಾಗಮಂಟಪದಲ್ಲಿ ತತ್ವನಿರ್ಣಯಕ್ಕೋಸ್ಕರ ಶಾಸ್ತ್ರಚರ್ಚೆಗಳು ನಡೆದವು. ಅಲ್ಲಿ ಪರಿಪೂರ್ಣ ಜ್ಞಾನಸ್ವರೂಪರಾದ ವೇದವ್ಯಾಸರೂಪದ ನಾರಾಯಣನೇ ಪ್ರಾಶ್ನಿಕನಾದ.

ವಿ: ೧) ಸಮಸ್ತ ಜಗತ್ತು ನೆರೆದ ಆ ಯಾಗದಲ್ಲಿ ನಡೆದ ಅತ್ಯಂತ ಪ್ರಧಾನವಾದ ಕಾರ್ಯ ತತ್ವನಿರ್ಣಯಕ್ಕೋಸ್ಕರ ಶಾಸ್ತ್ರಚರ್ಚೆ. ಯಾವುದೇ ಕಾರ್ಯ ನಿಜವಾದ ಅರ್ಥದಲ್ಲಿ ಯಶಸ್ವಿಯಾಗುವುದು ಜ್ಞಾನಕಾರ್ಯದ ಸಂಬಂಧ ಪಡೆದಾಗಲೇ.

ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ । – ಗೀತಾ (೪/೩೩)

ಜ್ಞಾನಕಾರ್ಯಕ್ಕಿಂತ ಮಿಗಿಲಾದ ಮತ್ತೊಂದು ಯಜ್ಞವೇ ಇಲ್ಲ. ಪಾಂಡವರ ಸಭೆ ಇಂತಹ ತಾತ್ವಿಕ ಮಹತ್ವದಿಂದಾಗಿಯೂ ಅಪೂರ್ವವೆನ್ನಿಸಿತು.

೨) ಶಾಸ್ತ್ರಚರ್ಚೆಯು ವಾದ, ಜಲ್ಪ ಮತ್ತು ವಿತಂಡಾ ಎಂಬುದಾಗಿ ಮೂರು ಬಗೆ. ತತ್ವನಿರ್ಣಯವೊಂದನ್ನೇ ಗುರಿಯನ್ನಾಗಿ ಇರಿಸಿಕೊಂಡು ನಡೆಯುವ ಶಾಸ್ತ್ರಚರ್ಚೆ ವಾದ ಎನ್ನಿಸಿದರೆ, ಪ್ರಧಾನವಾಗಿ ಜಯ ಹಾಗೂ ಕೀರ್ತಿಗಳನ್ನು ಉದ್ದೇಶಿಸಿ ನಡೆಯುವ ಚರ್ಚೆ ಜಲ್ಪವೆನ್ನಿಸುವುದು. ಪಾಖಂಡಿಗಳೊಂದಿಗೆ ಅವರ ನಿಗ್ರಹಕ್ಕಾಗಿ ನಡೆಯುವ ಶಾಸ್ತ್ರಚರ್ಚೆ ವಿತಂಡಾ ಎನ್ನಿಸುವುದು.

೩) ಆ ಚರ್ಚೆಗಳಲ್ಲಿ ನಿರ್ಣಾಯಕರ ಸ್ಥಾನವನ್ನು ಅಲಂಕರಿಸುವವರಿಗೆ ಪ್ರಾಶ್ನಿಕರು ಎನ್ನುವರು. ಅಂತಹ ಪ್ರಾಶ್ನಿಕರ ಸಂಖ್ಯೆ ಸಾಮಾನ್ಯವಾಗಿ ಮೂರು, ಐದು, ಏಳು ಮೊದಲಾಗಿ ವಿಷಮಸಂಖ್ಯೆಯಲ್ಲಿರಬೇಕು. ಒಬ್ಬನೇ ಪ್ರಾಶ್ನಿಕನಿರುವುದಾದಲ್ಲಿ ಅಂತಹ ಪ್ರಾಶ್ನಿಕ ಸಾಕ್ಷಾತ್ ಸರ್ವಜ್ಞನೇ ಆಗಿರಬೇಕು ಎಂಬುದು ನಿಯಮ :

ಅಶೇಷಸಂಶಯಚ್ಛೇತ್ತಾ ನಿಃಸಂಶಯ ಉದಾರಧೀಃ ।
ಏಕಶ್ಚೇತ್ ಪ್ರಾಶ್ನಿಕೋ ಜ್ಞೇಯಃ ಸರ್ವದೋಷವಿವರ್ಜಿತಃ ॥ – ಕಥಾಲಕ್ಷಣ (ಶ್ಲೋ. ೬)

ಬ್ರಹ್ಮಾದಿ ಸಕಲ ಜಗತ್ತು ನೆರೆದಿದ್ದ ಆ ಸಭೆಯಲ್ಲಿ ವೇದವ್ಯಾಸರೊಬ್ಬರೇ ಪ್ರಾಶ್ನಿಕರಾಗಿದ್ದುದು ಅವರು ಸರ್ವಜ್ಞರು, ಸಾಕ್ಷಾತ್ ಸ್ವತಂತ್ರನಾದ ಶ್ರೀಹರಿ ಎಂಬುದಕ್ಕೆ ಅತ್ಯಂತ ಸ್ಪಷ್ಟವಾದ ನಿದರ್ಶನ. ಹೀಗೆ ವ್ಯಾಸರ ಪಾತ್ರ ಸಾಕ್ಷಾತ್ ಶ್ರೀಹರಿಯ ಪಾತ್ರವಾಗಿಯೇ ಎಲ್ಲೆಡೆಗಳಲ್ಲೂ ಚಿತ್ರಿತವಾಗಿರುವುದು ಮಹಾಭಾರತದ ವಿಶೇಷಗಳಲ್ಲೊಂದು. ಅಂತಹ ಅಪೂರ್ವ ಸಭೆಯ ನಿರ್ವಹಣ ಕಾರ್ಯ ಭೀಮಸೇನನದಾಗಿತ್ತು ಎಂಬ ವಿವರ ಮಹಾಭಾರತದಲ್ಲಿದೆ.

೪) ಅಂತಹ ವಿಶ್ವದಾಖಲೆಯ ವಿದ್ವದ್ಗೋಷ್ಠಿಯನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಭೀಮಸೇನ ತಾನು ಜೀವೋತ್ತಮ ಎಂಬುದನ್ನು ನಿರೂಪಿಸಿದ :

ತತ್ತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ ।
ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ॥
ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।
ಪಾಂಡಿತ್ಯೇ ಚ ಪಟುತ್ವೇ ಚ ಶೂರತ್ವೇಽಪಿ ಬಲೇಽಪಿ ಚ ॥ – (೨/

ಈಗಾಗಲೇ ಭೀಮಸೇನ ಜರಾಸಂಧಾದಿಗಳನ್ನು ಅನೇಕ ಸಲ ವಾದಗಳಲ್ಲಿ ಜಯಿಸಿದ ಉಲ್ಲೇಖ ಬಂದಿದೆ (೨೦/೧೫–೨೫, ೨೧/೧೫೩). ಹಾಗೆಯೇ ಮುಂದೆಯೂ ವಾದದಲ್ಲಿ ಮಣಿ–ಮಂತ ಮೊದಲಾದವರನ್ನು ವಾಗ್ಯುದ್ಧದಲ್ಲಿ ಸೋಲಿಸುವ ವಿವರ ಬರುವುದು (೨೨/೨೯೨–೨೯೫).

ತತ್ತ್ವನಿರ್ಣಯಕಥಾಸು ನಿರ್ಣಯೋ
ವಾಸುದೇವಗುಣವಿಸ್ತರೋಽಭವತ್ ।
ನಾಸ್ತಿ ತತ್ಸದೃಶ ಉತ್ತಮಃ ಕುತಃ
ಪಾರ ಏಷ ನ ತತೋಽನ್ಯ ಇತ್ಯಪಿ ॥ ೨೩೭ ॥

ಅ: ತತ್ವನಿರ್ಣಯ ಗೋಷ್ಠಿಗಳಲ್ಲಿ ಶ್ರೀಹರಿಯ ಗುಣಪೂರ್ಣತ್ವದ ನಿರ್ಣಯ ವಿಶೇಷವಾಗಿ ನಡೆಯಿತು. ಶ್ರೀಹರಿಗೆ ಸದೃಶನಾದವನೇ ಇಲ್ಲ, ಇನ್ನು ಉತ್ತಮನೆಂತಿರುವನು! ಅವನೇ ತಾರತಮ್ಯದ ಕೊನೆ, ಅವನ ಹೊರತು ಮತ್ತೊಬ್ಬನಿಲ್ಲ ಎಂದು ನಿರ್ಣಯವಾಯಿತು.

ವಿ: ಜ್ಞಾನಸತ್ರಗಳ ಯಶಸ್ಸು ಅವುಗಳ ಫಲಿತಾಂಶವನ್ನು ಅವಲಂಬಿಸಿ ಇರುವುದು. ಎಷ್ಟೋ ವಿದ್ವತ್ಸಭೆಗಳು ಯಾವುದೇ ನಿರ್ಣಯಕ್ಕೆ ಬಾರದೇ ವ್ಯರ್ಥ ಕಲಹಾದಿಗಳಲ್ಲಿ, ಅಸಂಗತ ವಿಷಯಗಳ ಚರ್ಚೆಯಲ್ಲಿ ಪರ್ಯವಸಾನವಾಗಿ ಗೋಷ್ಠಿಯ ಮುಖ್ಯ ಉದ್ದೇಶವೇ ವ್ಯರ್ಥವಾಗುವುದು. ಅದರಿಂದಾಗಿ ವೇಳೆ, ಹಣಗಳೊಂದಿಗೆ ಅಪಾರ ಜನಶಕ್ತಿಯ ಅಪವ್ಯಯವೂ ಆಗುವುದು. ಆದರೆ, ಪಾಂಡವರ ಸಭೆಯಲ್ಲಿ ನಡೆದ ಗೋಷ್ಠಿಗಳು ವಿಶ್ವದಾಖಲೆಯ ಗೋಷ್ಠಿಗಳಾಗಿ ಮಾನ್ಯವಾದವು. ಹರಿಸರ್ವೋತ್ತಮತ್ವದಂತಹ ಪರಮಪ್ರಮೇಯ ಅಲ್ಲಿ ಸ್ಫುಟವಾಗಿ ನಿರೂಪಿತವಾಯಿತು.

ಅಗ್ರಪೂಜೆಯ ಜಿಜ್ಞಾಸೆ

ಬಾದರಾಯಣಭೃಗೂತ್ಥರಾಮಯೋಃ
ಶ್ರುಣ್ವತೋಃ ಪರಮನಿರ್ಣಯೇ ಕೃತೇ ।
ಮೋದಮಾನಜನತಾಸಮಾಗಮೇಽ-
ಪೃಚ್ಛದತ್ರ ನೃಪತಿರ್ಯತವ್ರತಮ್ ॥ ೨೩೮ ॥

---

೨೩೭. ವಾಸುದೇವಗುಣವಿಸ್ತರೋಽಭವದಿತ್ಯತ್ರ ವಾಸುದೇವಗುಣಾನಾಂ ವಿಸ್ತರೋ ಯಸ್ಮಿನ್ನಿತಿ ಸಮಾಸಃ ॥– (ವಾ.)

ಅ: ವೇದವ್ಯಾಸರು ಮತ್ತು ಪರಶುರಾಮರು ಆಲಿಸುತ್ತಿದ್ದಂತೆಯೇ ಪರತತ್ವದ ನಿರ್ಣಯ ನಡೆಯಲು ಆನಂದಭರಿತವಾದ ಜನಸಮೂಹದ ಮಧ್ಯೆ ಧರ್ಮರಾಜ ಭೀಷ್ಮರನ್ನು ಕೇಳಿದ.

ವಿ: ೧) ವೇದವ್ಯಾಸರೊಂದಿಗೆ ಪರಶುರಾಮ ರೂಪದ ಶ್ರೀಹರಿಯು ಅಲ್ಲಿ ಮಂಡಿಸಿದ್ದ ವಿಶೇಷ ವಿವರ ಇಲ್ಲಿದೆ. ಹರಿ ಸರ್ವೋತ್ತಮತ್ವದ ನಿರ್ಣಯದಿಂದ ಸಜ್ಜನರೆಲ್ಲ ಆನಂದಭರಿತರಾಗಿ ಇದ್ದಾಗ ನಡೆದ ಮತ್ತೊಂದು ಘಟನೆ ಇಲ್ಲಿ ನಿರೂಪಿತವಾಗಿದೆ.

೨) 'ಯತವ್ರತ' ಎಂದರೆ ತಂದೆಗೋಸ್ಕರ ಆಜೀವಬ್ರಹ್ಮಚರ್ಯವ್ರತವನ್ನು, ರಾಜ್ಯತ್ಯಾಗ ವ್ರತವನ್ನು ಸ್ವೀಕರಿಸಿದ್ದ ದೇವವ್ರತ ಭೀಷ್ಮ ಎಂದರ್ಥ.

ಜಾನಮಾನೋಽಪಿ ನೃಪತಿಃ ಸರ್ವಪೂಜ್ಯತಮಂ ಹರಿಮ್ ।
ಸಂಶಯಂ ಭೂಭೃತಾಂ ಛೇತ್ತುಂ ಭೀಷ್ಮಂ ಪಪ್ರಚ್ಛ ಧರ್ಮವಿತ್ ॥೨೩೯॥

ಅ: ಧರ್ಮ ಬಲ್ಲ ಧರ್ಮರಾಜ ಕೃಷ್ಣನನ್ನು ಅತ್ಯಂತ ಪೂಜ್ಯನಾದ ಶ್ರೀಹರಿ ಎಂದು ಬಲ್ಲವನಾಗಿದ್ದರೂ ನೆರೆದಿದ್ದ ರಾಜರುಗಳ ಸಂಶಯವನ್ನು ಪರಿಹರಿಸಲೆಂದು ಭೀಷ್ಮರನ್ನು ಪ್ರಶ್ನಿಸಿದ.

ವಿ: ಇಲ್ಲಿ ಭೂಭೃತಾಂ ಎಂಬುದು ಉಪಲಕ್ಷಣ. ರಾಜರು ಮೊದಲಾದ ಸಮಸ್ತ ಜನತೆ ಎಂದರ್ಥ. ಧರ್ಮರಾಜರನ್ನು ಧರ್ಮವಿತ್ ಎಂದು ಕರೆಯುವ ಮೂಲಕ ಅವನು ಧರ್ಮ ಬಲ್ಲವನಾದ್ದರಿಂದ ಹಾಗೆ ಅತ್ಯಂತ ವಿವೇಕದಿಂದ ವರ್ತಿಸಿದ ಎಂಬ ಸೂಚನೆಯನ್ನೂ ಮಾಡಿರುವರು.

ನಾಸ್ತಿ ನಾರಾಯಣಸಮಮಿತಿ ವಾದೇನ ನಿರ್ಣಯೇ ।
ಕೃತೇ ಬ್ರಹ್ಮಾದಿಭಿರಪಿ ಕೃಷ್ಣಂ ಮರ್ತ್ಯಂ ಹಿ ಮೇನಿರೇ ॥ ೨೪೦ ॥

ನೃಪಾಸ್ತಸ್ಮಾದಯಂ ಕೃಷ್ಣೋ ನಾರಾಯಣ ಇತಿ ಸ್ಮ ಹ ।
ಸಮ್ಯಗ್ಜ್ಞಾಪಯಿತುಂ ಧರ್ಮಸೂನುರ್ಭೀಷ್ಮಮಪೃಚ್ಛತ ॥ ೨೪೧ ॥

ಅ: ವಾದಕಥೆಯ ಮೂಲಕ ನಾರಾಯಣನಿಗೆ ಸಮನಿಲ್ಲ ಎಂದು ಬ್ರಹ್ಮಾದಿಗಳು ನಿರ್ಣಯಿಸಿದ್ದರೂ ರಾಜರು ಶ್ರೀಕೃಷ್ಣನನ್ನು ಮನುಷ್ಯನೆಂದೇ ತಿಳಿದಿದ್ದರು. ಅದರಿಂದಾಗಿ ಆ ಕೃಷ್ಣನೇ ನಾರಾಯಣ ಎಂದು ಸರಿಯಾಗಿ ಮನವರಿಕೆ ಮಾಡಿಕೊಡಲೆಂದು ಧರ್ಮರಾಜ ಭೀಷ್ಮರನ್ನು ಕೇಳಿದ.

ವಿ: ಹರಿ ಸರ್ವೋತ್ತಮತ್ವ ಅಲ್ಲಿ ನಿರ್ಣೀತವಾಗಿದ್ದರೂ ಕೃಷ್ಣನೇ ಶ್ರೀಹರಿ ಎಂಬ ತತ್ವ ಜಗತ್ತಿಗೆ ತಿಳಿಯಲಿ ಎಂಬುದು ಧರ್ಮರಾಜನ ಆಶಯವಾಗಿತ್ತು ಎಂದರ್ಥ.

ಬ್ರಹ್ಮಾದಯಃ ಸುರಾ ಯಸ್ಮಾದ್ದೃಶ್ಯಂತೇ ಮರ್ತ್ಯವನ್ನೃಭಿಃ ।
ನ ಚೈವಾತಿತರಾಭ್ಯಾಸೋ ನೃಣಾಮಸ್ತಿ ಮುನಿಷ್ವಪಿ ॥ ೨೪೨ ॥

ಅ: ಬ್ರಹ್ಮಾದಿ ದೇವತೆಗಳೂ ಸಹ ಜನರಿಗೆ ಮನುಷ್ಯರಂತೆ ಕಾಣುತ್ತಿದ್ದರು: ಮುನಿಗಳ ಬಗ್ಗೆಯೂ ಸಹ ಜನರಿಗೆ ಅಷ್ಟು ಹೆಚ್ಚಾದ ಬಳಕೆ ಇದ್ದಿರಲಿಲ್ಲ.

ವಿ: ೧) ಬ್ರಹ್ಮಾದಿ ದೇವತೆಗಳಿಂದಲೂ, ಮುನಿಗಳಿಂದಲೂ ನಿರ್ಣಯವಾದ ಮೇಲೆ ಮತ್ತೇಕೆ ಸಂಶಯ ಎಂಬುದಕ್ಕೆ ಇಲ್ಲಿ ಉತ್ತರವಿದೆ. ಬ್ರಹ್ಮಾದಿಗಳು ದೇವತೆಗಳೇ ಆದರೂ ಆ ಸಭೆಯಲ್ಲಿ ಜನ ಅವರು ಮನುಷ್ಯರಂತೆ ಕುಳಿತಿದ್ದುದನ್ನು ಕಂಡು ಮನುಷ್ಯರೆಂದೇ ಭಾವಿಸಿದ್ದರು.

೨) ಅದರಂತೆ ಮುನಿಗಳು ಶ್ರೇಷ್ಠ ಜ್ಞಾನಿಗಳೆಂದು ತಿಳಿದಿದ್ದರೂ ವಿಶೇಷವಾಗಿ ವನವಾಸಿ– ಗಳಾಗಿದ್ದ ಅವರಲ್ಲಿ ಜನಕ್ಕೆ ಅಷ್ಟಾಗಿ ಬಳಕೆ ಇಲ್ಲದ್ದರಿಂದ ಅವರ ಮಾತಿನಲ್ಲಿ ಪೂರ್ಣ ವಿಶ್ವಾಸ ತಳೆಯುವುದು ಸಾಧ್ಯವಾಗುವಂತಿರಲಿಲ್ಲ. ಅಂಥವರಿಗೆಲ್ಲ ತತ್ವ ತಿಳಿಸಿಕೊಡುವುದು ಧರ್ಮರಾಜನ ಅಭಿಪ್ರಾಯವಾಗಿತ್ತು ಎಂದರ್ಥ.

ಸರ್ವಶಾಸ್ತ್ರವಿದಂ ಭೀಷ್ಮಂ ಜಾನಂತ್ಯೇತೇ ನೃಪಾ ಅಪಿ ।
ತಸ್ಮಾದ್ಭೀಷ್ಮಮಪೃಚ್ಛತ್ ಸ ಕುಲವೃದ್ಧತ್ವತಸ್ತಥಾ ॥ ೨೪೩ ॥

ಅ: ಆ ರಾಜರುಗಳೆಲ್ಲ ಭೀಷ್ಮರನ್ನು ಸಕಲ ಶಾಸ್ತ್ರಗಳನ್ನು ಬಲ್ಲವರು ಎಂದು ತಿಳಿದಿದ್ದರು. ಹಾಗೆಯೇ ಅವರು ಕುಲವೃದ್ಧರೂ ಆಗಿದ್ದವರು. ಅದರಿಂದಾಗಿ ಧರ್ಮರಾಜ ಅವರನ್ನೇ ಕೇಳಿದ.

ವಿ: ೧) ಭೀಷ್ಮರನ್ನೇ ಕೇಳಲು ಕಾರಣವನ್ನು ಇಲ್ಲಿ ತಿಳಿಸಿರುವರು. ಭೀಷ್ಮರ ಐನೂರು ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲದ ಅಧ್ಯಯನ ಆಗಿನ ಕಾಲದ ಜನಕ್ಕೆ ವಿಶೇಷವಾಗಿ ತಿಳಿದಿತ್ತು (೧೧/೪೬,೪೭,೪೮,೫೪,೫೫) ಜೊತೆಗೆ ಅವರು ಯಜ್ಞ ಕರ್ತೃಗಳಾದ ಪಾಂಡವರ ಕುಲದಲ್ಲೇ ಅತ್ಯಂತ ಹಿರಿಯರು ಎಂಬುದು ಪ್ರಸಿದ್ಧವೇ ಆಗಿತ್ತು. ಒಂದೆಡೆ ಜ್ಞಾನವೃದ್ಧತ್ವ, ಮತ್ತೊಂದೆಡೆ ವಯೋವೃದ್ಧತ್ವ – ಹೀಗೆ ಎರಡು ಬಗೆಯ ಹಿರಿಮೆಯು ಭೀಷ್ಮರಲ್ಲಿ ಇದ್ದುದರಿಂದ ಅವರನ್ನು ಕೇಳುವ ಮೂಲಕ ಅಲ್ಲಿದ್ದ ಸಕಲರೂ ತತ್ವ ತಿಳಿಯಲು ಧರ್ಮರಾಜ ಅವಕಾಶ ಕಲ್ಪಿಸಿದ ಎಂದು ಭಾವ.

೨) ಅಲ್ಲಿದ್ದ ಹಿರಿಯರಲ್ಲಿ ಭೀಷ್ಮರ ದೊಡ್ಡಪ್ಪನಾದ ಬಾಹ್ಲೀಕ ವಯಸ್ಸಿನಲ್ಲಿ ತುಂಬಾ ದೊಡ್ಡವನಾದರೂ, ಅವನು ಪುತ್ರಿಕಾಪುತ್ರಧರ್ಮದಿಂದ ಬಾಹ್ಲೀಕ ದೇಶಕ್ಕೆ ಸೇರಿದ್ದರಿಂದ ಭೀಷ್ಮರದ್ದೇ ಕುಲವೃದ್ಧತ್ವ ಎಂದು ತಿಳಿಯಬೇಕು. ಈ ಮೂಲಕ ಧರ್ಮರಾಜ ಮುಖ್ಯ ಪ್ರಮೇಯ– ಗಳನ್ನು ವಿಶೇಷವಾಗಿ ಬಹುಶ್ರುತರಾದ ಜ್ಞಾನಿಗಳಿಂದಲೂ, ಮನೆತನದ ಹಿರಿಯ– ರಿಂದಲೂ ಕೇಳಿ ತಿಳಿಯಬೇಕು ಎಂಬ ತತ್ವವನ್ನು ಜನರಿಗೆ ತಿಳಿಸಿದ ಎಂದೂ ತಿಳಿಯಬಹುದು.

ಶ್ರೀಕೃಷ್ಣನಿಗೆ ಅಗ್ರಪೂಜೆ

ಪಿತಾಮಹಾಗ್ರಪೂಜಾರ್ಹಃ ಕೋಽತ್ರ ಲೋಕಸಮಾಗಮೇ ।
ಬ್ರಹ್ಮಶರ್ವಾದಯಶ್ಚಾತ್ರ ಸಂತಿ ರಾಜಾನ ಏವ ಚ ।
ಇತಿ ಪೃಷ್ಟೋಽಬ್ರವೀದ್ಭೀಷ್ಮಃ* ಕೃಷ್ಣಂ ಪೂಜ್ಯತಮಂ ಪ್ರಭುಮ್ ॥೨೪೪॥

ಅ: 'ತಾತ, ಸಮಸ್ತಜನರು ಸೇರಿರುವ ಈ ಸಭೆಯಲ್ಲಿ ಅಗ್ರ ಪೂಜೆಗೆ ಅರ್ಹ ಯಾರು? ಇಲ್ಲಿ ಬ್ರಹ್ಮ, ರುದ್ರಾದಿ ದೇವತೆಗಳೂ, ಹಾಗೆಯೇ ರಾಜರೂ ಇರುವರು'. ಹೀಗೆ ಯುಧಿಷ್ಠಿರ

---

೨೪೪. ಪೂಜ್ಯತಮಂ ಹರಿಮ್ – (ಜ. ಪಾಠ)

೨೪೪. ತತೋ ಭೀಷ್ಮಃ ಶಾಂತನವೋ ಬುದ್ಧ್ಯಾ ನಿಶ್ಚಿತ್ಯ ವೀರ್ಯವಾನ್ ॥
ಅಮನ್ಯತ ತದಾ ಕೃಷ್ಣಮರ್ಹಣೀಯತಮಂ ಭುವಿ ॥ – ಭಾರತ (ಸಭಾ. ೩೬/೨೭)

೨೪೪. ಪ್ರಥಮ ವಕ್ತಾ ದೇವವ್ರತಃ ಸಹದೇವಂ ಪ್ರತಿ । ಸಹದೇವಸ್ತು ಸಭ್ಯಾನ್ ಪ್ರತಿ ವಕ್ತೀತಿ ವಚನಶಾಬಲ್ಯೇನಾರ್ಥಃ ಸಂಭಾವಿತ ಇತ್ಯನುಕ್ತೇ ಸಂಭವತಃ । ಉಕ್ತಂ ಚ ತತ್ರೈವ ಭಾರತೇ 'ತಸ್ಯೈ ಭೀಷ್ಮಾಭ್ಯನುಜ್ಞಾತಃ ಸಹದೇವ' ಇತಿ । ಅತ್ರ ದೇವವ್ರತಸ್ತತ್ರ ಸಹದೇವಶ್ಚ ಗ್ರಾಹ್ಯಮಿತಿ ನ ವಿರೋಧಃ । – ಸತ್ಯಧರ್ಮೀಯಭಾಗವತಟಿಪ್ಪಣಿ

–(ಇದು ಭಾಗವತದಲ್ಲಿ ಕೃಷ್ಣನ ಅಗ್ರಪೂಜೆಗೆ ಸೂಚಿಸಿದ್ದು ಸಹದೇವ ಎಂಬುದಕ್ಕೆ ಸತ್ಯಧರ್ಮೀಯದಲ್ಲಿನ ಸ್ಪಷ್ಟೀಕರಣ)

* ಅಸ್ಯಾಂ ಹಿ ಸಮಿತೌ ರಾಜ್ಞಾಮೇಕಮಪ್ಯಜಿತಂ ಯುಧಿ ।
ನ ಪಶ್ಯಾಮಿ ಮಹೀಪಾಲಂ ಸಾತ್ವತೀಪುತ್ರತೇಜಸಾ ॥
ನ ಹಿ ಕೇವಲಮಸ್ಮಾಕಮಯಮರ್ಚ್ಯತಮೋಽಚ್ಯುತಃ ।
ತ್ರಯಾಣಾಮಪಿ ಲೋಕಾನಾಮರ್ಚನೀಯೋ ಮಹಾಭುಜಃ ॥...
ಗುಣೈರ್ವರ್ದ್ಧಾನತಿಕ್ರಮ್ಯ ಹರಿರರ್ಚ್ಯತಮೋ ಮತಃ ।...
ವೇದವೇದಾಂಗವಿಜ್ಞಾನಂ ಬಲಂ ಚಾಭ್ಯಧಿಕಂ ತಥಾ ।
ನೃಣಾಂ ಲೋಕೇ ಹಿ ಕೋಽನ್ಯೋಽಸ್ತಿ ವಿಶಿಷ್ಟಃ ಕೇಶವಾದೃತೇ ॥
ದಾನಂ ದಾಕ್ಷ್ಯಂ ಶ್ರುತಂ ಶೌರ್ಯಂ ಹ್ರೀಃ ಕೀರ್ತಿರ್ಬುದ್ಧಿರುತ್ತಮಾ ।
ಸನ್ನತಿಃ ಶ್ರೀರ್ಧೃತಿಸ್ತುಷ್ಟಿಃ ಪುಷ್ಟಿಶ್ಚ ನಿಯತಾಚ್ಯುತೇ ॥...
ಕೃಷ್ಣ ಏವ ಹಿ ಲೋಕಾನಾಮುತ್ಪತ್ತಿರಪಿ ಚಾಪ್ಯಯಃ ।
ಕೃಷ್ಣಸ್ಯ ಹಿ ಕೃತೇ ವಿಶ್ವಮಿದಂ ಭೂತಂ ಚರಾಚರಮ್ ॥...
ಬುದ್ಧಿರ್ಮನೋ ಮಹದ್ವಾಯುಸ್ತೇಜೋಽಂಭಃ ಖಂ ಮಹೀ ಚ ಯಾ ।
ಚತುರ್ವಿಧಂ ಚ ಯದ್ಭೂತಂ ಸರ್ವಂ ಕೃಷ್ಣೇ ಪ್ರತಿಷ್ಠಿತಮ್ ॥
ಆದಿತ್ಯಶ್ಚಂದ್ರಮಾಶ್ಚೈವ ನಕ್ಷತ್ರಾಣಿ ಗ್ರಹಾಶ್ಚ ಯೇ ।
ದಿಶಶ್ಚ ವಿದಿಶಶ್ಚೈವ ಸರ್ವಂ ಕೃಷ್ಣೇ ಪ್ರತಿಷ್ಠಿತಮ್ ॥...
ಊರ್ಧ್ವಂ ತಿರ್ಯಗಧಶ್ಚೈವ ಯಾವತೀ ಜಗತೀ ಗತಿಃ ।
ಸದೇವಕೇಷು ಲೋಕೇಷು ಭಗವಾನ್ ಕೇಶವೋ ಮುಖಮ್ ॥ ...
– ಭಾರತ (ಸಭಾ. ೩೮/೮,೯,೧೭,೧೯,೨೦,೨೩,೨೫,೨೬,೨೯)

ಕೇಳಲು ಭೀಷ್ಮರು ತಿಳಿಸಿದರು: ''ಕೃಷ್ಣನೇ ಸರ್ವರಿಗೂ ಪ್ರಭುವೂ, ಪರಮಪೂಜ್ಯನೂ ಆದವನು''.

ಏಃ ೧) ಸಭೆ ಸಮಾರಂಭಗಳಲ್ಲಿ ಗಣ್ಯರನ್ನು ಸತ್ಕರಿಸುವುದು ವಿಧಿ. ಯಜ್ಞಯಾಗಗಳಲ್ಲಂತೂ ಅದಕ್ಕೆ ವಿಶೇಷಮಹತ್ತ್ವ. ಅಭಿಷೇಚನೀಯ ಎಂಬ ಹೆಸರಿನ ಯಾಗವೂ ಒಂದಿದೆ. ಆದ್ದರಿಂದ ಆ ಸಭೆಯಲ್ಲಿ ಮೊದಲ ಮನ್ನಣೆ ಯಾರಿಗೆ ಸಲ್ಲಬೇಕು ಎಂಬುದು ಸಹಜವಾಗಿಯೇ ಉದ್ಭವಿಸಿದ ಪ್ರಶ್ನೆ ಎಂದು ತಿಳಿಯಬೇಕು. *ಋತ್ವಿಕ್, ಗುರು, ಆಚಾರ್ಯ, ಸ್ನಾತಕ, ರಾಜ, ಪ್ರಿಯ – ಹೀಗೆ ಆರು ಜನರಲ್ಲಿ ತುಂಬಾ ಶ್ರೇಷ್ಠರಾದವರಿಗೆ ಅಗ್ರ ಪೂಜೆಯೆಂಬುದು ಸಾಮಾನ್ಯ ನಿಯಮ. ಆ ಸಭೆಯಲ್ಲಿ ಆ ಬಗೆಯ ಜನರೂ ಬಹುಸಂಖ್ಯೆಯಲ್ಲೇ ಇದ್ದರು. ಆದ್ದರಿಂದ ಅತ್ಯಂತ ಶ್ರೇಷ್ಠನಾದ ಅರ್ಹ ವ್ಯಕ್ತಿ ಯಾರೆಂಬುದು ಧರ್ಮರಾಜನ ಪ್ರಶ್ನೆಯ ಆಶಯವಾಗಿತ್ತು.

೨) ಧರ್ಮರಾಜನ ಪ್ರಶ್ನೆಗೆ ಭೀಷ್ಮರು ತತ್ಕ್ಷಣವೇ ''ಎಲ್ಲ ಬಗೆಯಲ್ಲೂ ಅಗ್ರಪೂಜೆಗೆ ಅರ್ಹನಾದವನು ಶ್ರೀಕೃಷ್ಣ'' ಎಂದು ಉತ್ತರಿಸಿದ್ದು ಅತ್ಯಂತ ಗಮನಾರ್ಹ. ಇದರಿಂದ ಅವರ ತತ್ತ್ವದಾರ್ಢ್ಯ ಅಪೂರ್ವ ಎಂಬುದು ಸಿದ್ಧಪಡುವುದು. ಅದಕ್ಕೆ ಅವರೊಳಗಿದ್ದ ಬ್ರಹ್ಮದೇವರ ಅಂಶ ಮುಖ್ಯಕಾರಣ ಎಂದು ತಿಳಿಯಬೇಕು. ಹಾಗೆ ವಿಷ್ಣುವಿನ ಸರ್ವೋತ್ತಮತ್ವವನ್ನು ಸಾರುವುದು ವಿಶೇಷವಾಗಿ ಬ್ರಹ್ಮವಾಯುಗಳಿಗಷ್ಟೇ ಸಾಧ್ಯವಾಗುವ ಅಪೂರ್ವ ಕಾರ್ಯ ಎಂದು ಶಾಸ್ತ್ರಗಳಲ್ಲಿ ನಿರೂಪಿತವಾಗಿದೆ.

ಯದ್ಯಪ್ಯೇಕಸ್ಮಿನ್ನಾ ವಿಷ್ಣುರ್ವಸಿಷ್ಠಭೃಗುವೃಷ್ಣಿಷು ।
ಪ್ರಾದುರ್ಭೂತಸ್ತಥಾऽಪ್ಯೇತೇ ನೃಪಾ ಹಿ ವ್ಯಾಸರಾಮಯೋಃ ॥ ೨೪೫ ॥

ವಿಪ್ರತ್ವಾನ್ನ ವಿರುಧ್ಯಂತೇ ತತ ಏವ ಚ ಯುಕ್ತತಾಮ್ ।
ಮನ್ಯಂತೇ ನ ವಿರೋಧಶ್ಚ ತೇಷಾಂ ತತ್ರ ಹಿ ತಾದೃಶಃ ॥ ೨೪೬ ॥

---

* ಋತ್ವಿಗ್ಗುರುಸ್ತಥಾऽऽಚಾರ್ಯಃ ಸ್ನಾತಕೋ ನೃಪತಿಃ ಪ್ರಿಯಃ ।
ಸರ್ವಮೇತದ್ಧೃಷೀಕೇಶಸ್ತಸ್ಮಾದಭ್ಯರ್ಚಿತೋऽಚ್ಯುತಃ ॥ – ಭಾರತ (ಸಭಾ. ೩೮/೨೨)

೨೪೬. ನ ವಿರೋಧಶ್ಚ ತೇಷಾಂ ತತ್ರ ಹಿ ತಾದೃಶ ಇತ್ಯತ್ರ ತಾದೃಶಃ = ಯಾದೃಶಃ ಕೃಷ್ಣೇ ಯುದ್ಧಾದಿನಾ ನೃಪಾಣಾಂ ವಿರೋಧಃ ಕಲಹೋऽಸ್ತಿ ತಾದೃಶಃ ವಿರೋಧಶ್ಚ = ಕಲಹೋऽಪಿ ತತ್ರ = ವ್ಯಾಸಪರಶುರಾಮಯೋಃ ನ । ಅತೋ ನ ಪೌನರುಕ್ತ್ಯಮ್। ಅವಿವಾದೇ ಪ್ರಸಿದ್ಧಿಶ್ಚೇತ್ಯತ್ರ ಅವಿವಾದೇ= ಕೃಷ್ಣಾಯ ದತ್ತ್ವಾ ವಿವಾದಸ್ಯ ಅಕಾರಿತತ್ವೇ। ಅಸ್ಯ = ಕೃಷ್ಣಸ್ಯ ॥ – (ವಾ.)

ಅ: ಒಬ್ಬನೇ ವಿಷ್ಣು ವಸಿಷ್ಠ, ಭೃಗು ಮತ್ತು ವೃಷ್ಣಿವಂಶಗಳಲ್ಲಿ ಮೂರುರೂಪಗಳಿಂದ ಪ್ರಾದುರ್ಭವಿಸಿರುವನು. ಆದರೂ ವ್ಯಾಸಪರಶುರಾಮರು ವಿಪ್ರರಾದ್ದರಿಂದ ಈ ರಾಜರು ಅವರನ್ನು ವಿರೋಧಿಸಲಾರರು; ಬದಲಾಗಿ ಯುಕ್ತವೆಂದೇ ಭಾವಿಸುವರು ಸಹ. ಅವರಿಬ್ಬರ ಮೇಲೆ ಇವರಿಗೆ ಅಂತಹ ವೈರವೂ ಇಲ್ಲ.

ಎ: ೧) ಆ ಸಭೆಯಲ್ಲಿ ವಿಷ್ಣುವಿನ ಪರಶುರಾಮ, ವೇದವ್ಯಾಸ ಮತ್ತು ಕೃಷ್ಣ ಎಂಬ ಮೂರು ರೂಪಗಳು ಸರ್ವಪ್ರತ್ಯಕ್ಷವಾಗಿದ್ದರೂ, ಭೀಷ್ಮರು ಕೃಷ್ಣರೂಪಕ್ಕೆ ಅಗ್ರಪೂಜೆಯನ್ನು ಸೂಚಿಸಲು ಕಾರಣವನ್ನು ಈ ಶ್ಲೋಕಗಳಲ್ಲಿ ವಿಶ್ಲೇಷಿಸಿ ತಿಳಿಸುತ್ತಿರುವರು.

೨) ಆ ಮೂರು ರೂಪಗಳಲ್ಲಿ ಒಂದೇ ರೂಪಕ್ಕೆ ಅಗ್ರಪೂಜೆ ಎಂದು ಹೇಳುವುದಾದಲ್ಲೂ ಶ್ರೀಪರಶುರಾಮ ಮತ್ತು ಶ್ರೀವೇದವ್ಯಾಸರೂಪಗಳನ್ನು ಸೂಚಿಸದಿರಲು ಕಾರಣ ಹೀಗಿದೆ. ಅವೆರಡೂ ವಿಪ್ರರೂಪಗಳು. ಕ್ಷತ್ರಿಯರು ಸಹಜವಾಗಿಯೇ ವಿಪ್ರರನ್ನು ಗೌರವಿಸುವರು. ಪರಶುರಾಮವೇದವ್ಯಾಸರೂಪಗಳಂತೂ ಶತ್ರುಹನನ ಹಾಗೂ ಜ್ಞಾನಬೋಧನೆಗಳಿಂದ ಅಪಾರ ಮನ್ನಣೆ ಗಳಿಸಿದ್ದ ರೂಪಗಳು. ಅವುಗಳಿಗೆ ಅಗ್ರಪೂಜೆ ಎಂದು ಹೇಳಿದರೆ ರಾಜರು ವಿರೋಧಿಸುವ ಸಂಭವವೇ ಇರುವುದಿಲ್ಲ ಎಂಬುದು ಆ ರೂಪಗಳನ್ನು ಸೂಚಿಸದಿರಲು ಒಂದು ಮುಖ್ಯಕಾರಣ :

ತಪೋವಿದ್ಯಾವ್ರತಧರಾನ್ ಜ್ಞಾನವಿಧ್ವಸ್ತಕಲ್ಮಷಾನ್ ।
ಪರಮರ್ಷೀನ್ ಬ್ರಹ್ಮನಿಷ್ಠಾನ್ ಲೋಕಪಾಲೈಶ್ಚ ಪೂಜಿತಾನ್ ॥
ಸದಸ್ಪತೀನತಿಕ್ರಮ್ಯ ಗೋಪಾಲಃ ಕುಲಪಾಂಸನಃ । – ಭಾಗವತ (೧೦/೭೪/೩೩,೩೪)

೩) ಇನ್ನು ಪರಶುರಾಮರೂಪವಂತೂ **'ಕ್ಷತ್ರಕುಲಾಂತಕ ಶಂಭುವರೇಣ್ಯ'** ಎಂದೇ ಖ್ಯಾತವಾದ ರೂಪ. ಆ ರೂಪದ ಹೆಸರು ಕೇಳಿದರೂ ಕ್ಷತ್ರಿಯರು ಭಯದಿಂದ ತಲೆ ಬಾಗುವಂತಹ ಹಿರಿಮೆ ಲೋಕದಲ್ಲಿ ಪ್ರಸಿದ್ಧವಾಗಿದೆ. ಅದಕ್ಕೆ ಅಗ್ರಪೂಜೆ ಎಂದರೆ ರಾಜರು ಯಾವುದೇ ವಿರೋಧವಿಲ್ಲದೆ ಸಮ್ಮತಿ ಸೂಚಿಸುತ್ತಿದ್ದರು.

೪) ವ್ಯಾಸರೂಪ ವೇದವಿಭಾಗ, ಬ್ರಹ್ಮಸೂತ್ರರಚನೆ ಮೊದಲಾದ ಅಸಾಮಾನ್ಯ ಕಾರಣಗಳಿಂದ ವಿಶ್ವಮಾನ್ಯತೆ ಗಳಿಸಿದ್ದ ರೂಪ. ಒಂದು ರೀತಿಯಲ್ಲಿ ಆ ಸಭೆಯಲ್ಲಿದ್ದ ಪ್ರಮುಖರೆಲ್ಲ ಶ್ರೀವ್ಯಾಸಶಿಷ್ಯರೇ ಆಗಿದ್ದರು (೧೫/೬). ಗುರುಗಳಿಗೆ ಅಗ್ರಪೂಜೆ ಎಂದರೆ ಸಾತ್ತ್ವಿಕಶಿಷ್ಯರಿಗೆ ಸಂಭ್ರಮದ ವಿಚಾರವೇ ಅಲ್ಲವೆ! ಸಾತ್ತ್ವಿಕರಲ್ಲದವರಂತೂ ಅವರ ಜ್ಞಾನದ ವರ್ಚಸ್ಸಿಗೆ ಅಂಜುತ್ತಿದ್ದವರು. ಈ ಕಾರಣದಿಂದ ಯಾವುದೇ ವಿವಾದವೂ ಉದ್ಭವಿಸುವಂತಿರಲಿಲ್ಲವಾದ್ದರಿಂದ ಆ ರೂಪಗಳಿಗೆ ಅಗ್ರಪೂಜೆ ಮಾಡಲು ಭೀಷ್ಮರು ಸೂಚಿಸಲಿಲ್ಲ ಎಂದು ಭಾವ.

ಅವಿವಾದೇ ಪ್ರಸಿದ್ಧಿಶ್ಚ ನೈವಾಸ್ಯ ಭವಿತಾ ಕ್ವಚಿತ್ ।
ತಸ್ಮಾತ್ ಕೃಷ್ಣಾಯ ದಾತವ್ಯಮಿತಿ ಭೀಷ್ಮೇಣ ಚಿಂತಿತಮ್ ॥ ೨೪೭ ॥

ಅ: ವಿವಾದ ಹುಟ್ಟದಿದ್ದಲ್ಲಿ ಕೃಷ್ಣನು ನಾರಾಯಣ ಎನ್ನುವುದು ಎಲ್ಲೂ ಪ್ರಸಿದ್ಧಿಗೊಳ್ಳುತ್ತಿರಲಿಲ್ಲ. ಆದ್ದರಿಂದ ಅಗ್ರಪೂಜೆ ಕೃಷ್ಣನಿಗೆ ನೀಡಬೇಕೆಂದು ಭೀಷ್ಮರು ಯೋಚಿಸಿದರು.

ವಿ: ೧) ಎಲ್ಲರಿಗೂ ಸಮ್ಮತವಾಗುವುದಿದ್ದಲ್ಲಿ ವ್ಯಾಸಪರಶುರಾಮರೂಪಗಳಿಗೆ ಅಗ್ರಪೂಜೆ ಸೂಚಿಸಬಹುದಿತ್ತಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ.

೨) ವಿವಾದ ಹುಟ್ಟದು ಎಂಬ ಕಾರಣಕ್ಕಾಗಿಯೇ ಆ ರೂಪಗಳಿಗೆ ಅಗ್ರಪೂಜೆ ಸೂಚಿಸಲಿಲ್ಲ ಎಂಬುದು ಇಲ್ಲಿಯ ವಿಶೇಷಾಂಶ. ಎಂದರೆ ವಿವಾದ ಹುಟ್ಟಬೇಕು. ಅದರಿಂದಾಗಿ ಚರ್ಚೆ ನಡೆದು, ಕೃಷ್ಣನ ಸರ್ವೋತ್ತಮತ್ವ ಜಗತ್ತಿಗೆ ಸ್ಫುಟವಾಗಿ ತಿಳಿಯಬೇಕು ಎಂಬುದು ಭೀಷ್ಮರ ಆಲೋಚನೆಯಾಗಿತ್ತು. ವಿವಾದ ನಡೆದು ತತ್ತ್ವನಿರ್ಣಯ ಉಂಟಾದಾಗ, ಅದರ ದಾರ್ಢ್ಯದ ಮಹತ್ತ್ವ ಹೆಚ್ಚುವುದು – **'ವಾದೇ ವಾದೇ ಜಾಯತೇ ತತ್ತ್ವಬೋಧಃ'**. ಹಾಗೆ ಚರ್ಚೆ ನಡೆದಲ್ಲಿ ಕೃಷ್ಣನ ಬಗ್ಗೆ ಜನಗಳಿಗೆ ಯಾವ ಸಂಶಯವೂ ಬಾರದಂತೆ ಸರ್ವೋತ್ತಮತ್ವಜ್ಞಾನ ಹುಟ್ಟುವಂತಾಗಬೇಕು ಎಂಬುದು ಅವರ ಆಶಯವಾಗಿತ್ತು.

೩) ಕೃಷ್ಣನದು ಲೋಕದೃಷ್ಟಿಯಲ್ಲಿ ಕ್ಷತ್ರಿಯರೂಪ. ಕ್ಷತ್ರಿಯರಿಗೆ ಬ್ರಾಹ್ಮಣರ ಮೇಲೆ ಅಸೂಯೆ ಇರುವ ಪ್ರಸಕ್ತಿ ಅಷ್ಟಾಗಿ ಇರದು. ಸಹಜವಾಗಿಯೇ ಅವರ ವಿವಾದ ಕ್ಷತ್ರಿಯರ ಮೇಲೆಯೇ ಹೆಚ್ಚು ಪ್ರಸಕ್ತ – **'ವಿವಾಹಶ್ಚ ವಿವಾದಶ್ಚ ಸಮಯೋರೇವ ಶೋಭತೇ'**. ಅಲ್ಲದೆ ಅಲ್ಲಿಯ ಅನೇಕಕ್ಷತ್ರಿಯರು ಕೃಷ್ಣನಿಂದ ಅನೇಕಬಾರಿ ಯುದ್ಧದಲ್ಲಿ ಇನ್ನಿಲ್ಲದಂತೆ ಪರಾಭವಗೊಂಡು ಬಂದವರು. ಎಂದರೆ ಸಹಜವಾಗಿಯೇ ಕೃಷ್ಣನ ಬಗ್ಗೆ ಅಸಹನೆ ತುಂಬಿತ್ತು. ಅದರಿಂದಾಗಿ ಅವರು ವಿರೋಧಿಸುವುದು ಸಂಭಾವ್ಯ ಎಂಬುದು ಮತ್ತೊಂದು ಕಾರಣ. ಅಂತಹ ಪ್ರಸಕ್ತಿ ವ್ಯಾಸಪರಶುರಾಮರೂಪಗಳಿಗೆ ಇರಲಿಲ್ಲ.

೪) ಪರಶುರಾಮರೂಪದಿಂದ ಕ್ಷತ್ರಿಯರು ಸಂಪೂರ್ಣಪರಾಭವಗೊಂಡಿದ್ದರೂ, ಅದು ಪ್ರಾಚೀನಕಾಲದ ವಿಚಾರವಾಗಿತ್ತು. ಅದರಿಂದಾಗಿ ಅವರ ಬಗ್ಗೆ ವೈರಭಾವಕ್ಕಿಂತ ಭೀತಿಯೇ ಹೆಚ್ಚಾಗಿ ತುಂಬಿತ್ತು. ಕೃಷ್ಣರೂಪದ ಬಗ್ಗೆ ಹಾಗಿರಲಿಲ್ಲ ಎಂಬುದು ವಿಶೇಷ.

೫) ವಯಸ್ಸಿನ ಅಂತರ ಕೃಷ್ಣನ ಬಗ್ಗೆ ಆಕ್ಷೇಪಕ್ಕೆ ಮತ್ತೊಂದು ಕಾರಣ. ಪರಶುರಾಮರೂಪ ಕೃತಯುಗದ್ದು. ವ್ಯಾಸರೂಪದ ವಯಸ್ಸು ಎಂಟುನೂರು ವರ್ಷಗಳನ್ನು ಸಮೀಪಿಸಿತ್ತು. ಆದರೆ ಕೃಷ್ಣನ ವಯಸ್ಸು ಆಗ ಐವತ್ತೈದರಿಂದ ಐವತ್ತಾರರ ಮಧ್ಯೆ ಇತ್ತು. ಅದರಿಂದಾಗಿ ವಯೋವೃದ್ಧರಾದ

ರಾಜರು ಅದನ್ನು ವಿರೋಧಿಸುವ ಸಂಭವವಿತ್ತು. ಶಿಶುಪಾಲನ ಆಕ್ಷೇಪಣೆಯ ಮಾತಿನಲ್ಲಿ ಈ ಅಂಶವಿರುವುದು ಗಮನಾರ್ಹ :

ವೃದ್ಧಂ ಚ ಭಾರತಾಚಾರ್ಯಂ ತಥಾ ಶಾರದ್ವತಂ ಕೃಪಮ್ । ....
ಕಿಂ ಹಿ ಶಕ್ಯಂ ಮಯಾ ಕರ್ತುಂ ಯದ್ವೃದ್ಧಾನಾಂ ತ್ವಯಾ ನೃಪ ।
ಪುರಾ ಕಥಯತಾಂ ನೂನಂ ನ ಶ್ರುತಂ ಧರ್ಮವಾದಿನಾಮ್ ॥
– ಭಾರತ (ಸಭಾ. ೪೪/೧೭, ೨೩)

ವಯಸ್ಸನ್ನು ನೋಡುವುದಿದ್ದಲ್ಲಿ ಕೃಷ್ಣನ ತಂದೆಯಾದ ವೃದ್ಧ ವಸುದೇವನಿಗೂ ಅಗ್ರಪೂಜೆ ಮಾಡಬಹುದಿತ್ತಲ್ಲ ಎಂಬ ಶಿಶುಪಾಲನ ವಚನವೂ ಇದಕ್ಕೆ ಗಮಕ :

ಅಥ ವಾ ಮನ್ಯಸೇ ಕೃಷ್ಣಂ ಸ್ಥವಿರಂ ಕುರುಪುಂಗವ ।
ವಸುದೇವೇ ಸ್ಥಿತೇ ವೃದ್ಧೇ ಕಥಮರ್ಹತಿ ತತ್ಸುತಃ ॥ – ಭಾರತ (ಸಭಾ. ೩೭/೬)

೬) ಕೃಷ್ಣ ಕ್ಷತ್ರಿಯನಾಗಿದ್ದರೂ ರಾಜನಾಗಿರಲಿಲ್ಲ ಎಂಬುದು ಅವನ ಬಗ್ಗೆ ವಿವಾದಕ್ಕೆ ಮತ್ತೊಂದು ಕಾರಣ. ಇದನ್ನು ಸ್ಪಷ್ಟವಾಗಿಯೇ ಶಿಶುಪಾಲ ಹೇಳಿದ :

ಕಥಂ ಹ್ಯರಾಜಾ ದಾಶಾರ್ಹೋ ಮಧ್ಯೇ ಸರ್ವಮಹೀಕ್ಷಿತಾಮ್ ।
ಅರ್ಹಣಾಮರ್ಹತಿ ತಥಾ ಯಥಾ ಯುಷ್ಮಾಭಿರರ್ಚಿತಃ ॥– ಭಾರತ (ಸಭಾ. ೩೭/೫)

೭) ವೇದವ್ಯಾಸರಿಗೆ ಅಗ್ರಪೂಜೆ ಸಲ್ಲಿಸುವುದು ಉಚಿತವಾಗುತ್ತಿತ್ತು ಎಂದು ಶಿಶುಪಾಲನೇ ನುಡಿದಿರುವುದು ಗಮನಾರ್ಹ :

ಋತ್ವಿಜಂ ಮನ್ಯಸೇ ಕೃಷ್ಣಮಥ ವಾ ಕುರುನಂದನ ।
ದ್ವೈಪಾಯನೇ ಸ್ಥಿತೇ ವೃದ್ಧೇ ಕಥಂ ಕೃಷ್ಣೋऽರ್ಚಿತಸ್ತ್ವಯಾ ॥–ಭಾರತ (೨/೩೭/೯)

೮) ಪರಶುರಾಮಶಿಷ್ಯನಾದ ಕರ್ಣನಿಗೆ ಮಾಡಬಹುದಾಗಿತ್ತು ಎಂಬ ಮಾತಿನಲ್ಲಿ ಪರಶುರಾಮರಿಗೆ ಮಾಡಿದ್ದರೂ ವಿರೋಧಕ್ಕೆ ಅವಕಾಶವಿರಲಿಲ್ಲ ಎಂಬ ಭಾವವಿದೆ :

ಅಯಂ ಚ ಸರ್ವರಾಜ್ಞಾಂ ವೈ ಬಲಶ್ಲಾಘೀ ಮಹಾಬಲಃ ।
ಜಾಮದಗ್ನ್ಯಸ್ಯ ದಯಿತಃ ಶಿಷ್ಯೋ ವಿಪ್ರಸ್ಯ ಭಾರತ ॥ – ಭಾರತ (ಸಭಾ. ೩೭/೧೫)

೯) ನವನೀತಚೋರ, ಗೋಪೀಜನಜಾರ ಮೊದಲಾಗಿ ಕೃಷ್ಣನನ್ನು ತಪ್ಪು ತಿಳಿದ ಅನೇಕರು ಅಲ್ಲಿದ್ದರು. ಕೃಷ್ಣನಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ಅವನು ಸರ್ವದೋಷದೂರ ಎಂದು ನಿರೂಪಿಸುವ ಮಹತ್ಕಾರ್ಯವೂ ಇದರಿಂದ ನಡೆಯಬೇಕು ಎಂಬ ಆಲೋಚನೆಯೂ ಅವರಿಗಿದ್ದಿತು.

೧೦) ಇದರಂತೆ ಮುಂದೆ ಶಿಶುಪಾಲ ಮೊದಲಾದ ಅನೇಕರು ಅದನ್ನು ಪ್ರತಿಭಟಿಸಿದ್ದು, ಶಿಶುಪಾಲ ಕೃಷ್ಣನಿಂದ ಹತನಾದದ್ದು ನಡೆಯಿತು.

೧೧) ಹೀಗೆ ಕೃಷ್ಣರೂಪಕ್ಕೆ ಅಗ್ರಪೂಜೆ ಎಂದು ಹೇಳಿದ್ದು ಅತ್ಯಂತಸಮುಚಿತವಾದುದು ಎಂಬುದು ಇದರ ಒಟ್ಟು ಭಾವ.

ಕೃಷ್ಣಾಯ ದತ್ತೇ ರಾಜಾನೋ ವಿವಾದಂ ಕುರ್ಯುರಂಜಸಾ ।
ವಿವಾದೇನ ಚ ಕೀರ್ತಿಃ ಸ್ಯಾದ್ವಾಸುದೇವಸ್ಯ ವಿಸ್ತೃತಾ ॥ ೨೪೮ ॥

ಅ: ಕೃಷ್ಣನಿಗೆ ಅಗ್ರಪೂಜೆ ಸಮರ್ಪಿಸಿದಾಗ ರಾಜರು ಸಾಕಷ್ಟು ವಿವಾದ ಮಾಡುವರು ಮತ್ತು ಆ ವಿವಾದದಿಂದ ಕೃಷ್ಣನ ಕೀರ್ತಿ ವಿಶೇಷವಾಗಿ ಹರಡುವುದು.

ತತಃ ಕೃಷ್ಣಾಯಾಗ್ರಪೂಜಾ ದತ್ತಾ ಪಾರ್ಥೈರ್ಜಗತ್ಪುರಃ ।
ವ್ಯಾಸಭಾರ್ಗವಯೋಃ ಸಾಕ್ಷಾತ್ ತದೈಕ್ಯಾತ್ ತದನಂತರಮ್ ॥ ೨೪೯ ॥
ಅಗ್ರ್ಯಾಂ ಪೂಜಾಂ ದದುಶ್ಚಾನ್ಯಾನ್ ಯಥಾಯೋಗ್ಯಮಪೂಜಯನ್ ೨೫೦

ಅ: ಆದ್ದರಿಂದ ಪಾಂಡವರು ಎಲ್ಲರೆದುರು ಕೃಷ್ಣನಿಗೆ ಅಗ್ರಪೂಜೆ ನೀಡಿದರು. ಕೃಷ್ಣನಿಂದ ಅಭಿನ್ನರಾದ್ದರಿಂದ ಬಳಿಕ ವ್ಯಾಸಪರಶುರಾಮರಿಗೂ ಅಗ್ರಪೂಜೆ ನೀಡಿದರು. ಬಳಿಕ ಇತರರನ್ನು ಯಥಾಯೋಗ್ಯವಾಗಿ ಸತ್ಕರಿಸಿದರು.

ವಿ: ೧) ಇದರಿಂದ ಆ ಮೂರೂ ಶ್ರೀಹರಿಯ ರೂಪಗಳು ಎಂದು ಸಕಲರಿಗೂ ತಿಳಿಯುವಂತಾಯಿತು ಎಂದೂ ಅರ್ಥ. ಮನೆಯಲ್ಲಿ ಸಾಲಿಗ್ರಾಮಪೂಜೆ, ವೈಶ್ವದೇವಾದಿಗಳು ಹಾಗೂ ಪಾಠಪ್ರವಚನಗಳು ನಡೆದರೆ ಈ ಮೂರೂ ರೂಪಗಳಿಗೂ ಅಗ್ರಪೂಜೆ ಸಂದಂತೆ. ಅದರಲ್ಲೂ ಸಾಲಿಗ್ರಾಮಪೂಜೆಗೆ ವಿಶೇಷ. ಸಾಲಿಗ್ರಾಮ ವಿಶೇಷವಾಗಿ ಕೃಷ್ಣವರ್ಣದ್ದೇ ಅಲ್ಲವೆ!

ಶಿಶುಪಾಲನ ಆಕ್ಷೇಪ

ಅಗ್ರ್ಯೋಪಹಾರ ಉಪಯಾಪಿತ ಏವ ಕೃಷ್ಣೇ
ಕೋಪಾದನಿಂದದಮುಮಾಶು ಚ ಚೇದಿರಾಜಃ ।
ಶ್ರುತ್ವೈವ ತತ್ ಪವನಜೋಽಭಿಯಯೌ ನೃಪಂ ತಂ
ಹಂತುಂ ಜಗದ್ಗುರುವಿನಿಂದಕಮೃದ್ಧಮನ್ಯುಃ ॥ ೨೫೧ ॥

---

* ವ್ಯಾಸಭಾರ್ಗವಯೋಃ ಕೃಷ್ಣತನ್ಮಾತ್ರತ್ವಾತ್ ಅನಂತರದಾನೇಽಪ್ಯಗ್ರಪೂಜಾವಿರೋಧೋ ನ । ಏಕಸ್ಯೈವ ಪುನಃ ಪುನಃ ಪೂಜಾರೂಪತ್ವಾದಿತಿ ಭಾವಃ । – (ತಾ.)

ಅ: ಶ್ರೀಕೃಷ್ಣನಿಗೆ ಅಗ್ರಪೂಜೆ ನಡೆಯುತ್ತಿದ್ದಂತೆಯೇ ಚೇದಿರಾಜನಾದ ಶಿಶುಪಾಲ ಕೋಪದಿಂದ ಅವನನ್ನು ನಿಂದಿಸತೊಡಗಿದ; ಅದನ್ನು ಕೇಳುತ್ತಲೇ ಭೀಮಸೇನ ಜಗದ್ಗುರುವನ್ನು ನಿಂದಿಸಿದ ಅವನನ್ನು ಕೊಲ್ಲಲೆಂದು ಕೋಪ ಕೆರಳಿದವನಾಗಿ ಎದುರಿಸಿ ಹೊರಟ.

ವಿ: ೧) ಕೃಷ್ಣನಿಗೆ ಪೂಜೆ ಸಲ್ಲಿಸುವುದಿರಲಿ, ಅದನ್ನು ನೋಡಿ ಸಹಿಸುವ ಯೋಗ್ಯತೆಯೂ ಶಿಶುಪಾಲನಿಗಿರಲಿಲ್ಲ. ಅವನು ಕೃಷ್ಣನನ್ನು ಅವಾಚ್ಯಶಬ್ದಗಳಿಂದ ನಿಂದಿಸಿದಾಗ ಅದನ್ನು ಪ್ರತಿಭಟಿಸಿದ ಏಕಮಾತ್ರ ವ್ಯಕ್ತಿ ಭೀಮಸೇನ. ಇದು ಆತನ ಶುದ್ಧಭಾಗವತಧರ್ಮನಿಷ್ಠೆಗೆ ಮತ್ತೊಂದು ನಿದರ್ಶನ (೧೮/೨೮).

೨) ಅತ್ಯಂತ ಪ್ರೀತಿ ಇರುವವರನ್ನು ನಿಂದಿಸಿದಾಗ ನಿಂದಿಸಿದವರ ಮೇಲೆ ಕೋಪ ಕೆರಳುವುದು ಸಹಜ ಕ್ರಿಯೆ. ಉಳಿದವರಿಗೆ ಅದು ಸಾಧ್ಯವಾಗಲಿಲ್ಲ ಎಂದರೆ ಭೀಮನಷ್ಟು ಹಿರಿದಾದ ಭಕ್ತಿ ಅವರಾರಿಗೂ ಕೃಷ್ಣನ ಬಗ್ಗೆ ಇರಲಿಲ್ಲ ಎಂದು ತಿಳಿಯುವುದು. ಮುಂದೆ ಕೌರವ ಸಭೆಯಲ್ಲಿಯೂ ಕೃಷ್ಣನನ್ನು ನಿಂದಿಸಿದಾಗ ತತ್ಕ್ಷಣ ಪ್ರತಿಭಟಿಸಿದ್ದು ಪುನಃ ಭೀಮಸೇನನೇ ಎಂಬುದನ್ನೂ ಗಮನಿಸ–ಬೇಕು (೨೧/೩೪೬). ಇಂತಹ ಕೋಪ ಅತ್ಯಂತ ಸಾತ್ವಿಕವಾದ ಕೋಪ.

ಭೀಮನ ಭಗವನ್ನಿಷ್ಠೆ

ದೂರೇಽಪಿ ಕೇಶವವಿನಿಂದನಕಾರಿಜಿಹ್ವಾ–
ಮುಚ್ಛೇತ್ಸ್ಯ ಇತ್ಯುರುತರಾಽಸ್ಯ ಸದಾ ಪ್ರತಿಜ್ಞಾ ।
ಭೀಮಸ್ಯ ತಂ ತು ಜಗೃಹೇ ಸರಿದಾತ್ಮಜೋಽಥ
ಸಂಪ್ರೋಚ್ಯ ಕೇಶವವಚೋ ನಿಜಯೋರ್ವಧಾಯ ॥ ೨೫೨ ॥

ಅ: ಪರೋಕ್ಷದಲ್ಲಿಯಾದರೂ ಶ್ರೀಹರಿಯನ್ನು ನಿಂದಿಸುವವನ ನಾಲಿಗೆಯನ್ನು ಕತ್ತರಿಸುವೆನು ಎಂಬುದು ಭೀಮಸೇನನ ಸಾರ್ವಕಾಲಿಕವಾದ ಮಹಾಪ್ರತಿಜ್ಞೆ. ಗಂಗಾಪುತ್ರನಾದ ಭೀಷ್ಮ ತನ್ನ

---

೨೫೧. ತಸ್ಯ ತದ್ವಚನಂ ಶ್ರುತ್ವಾ ರೂಕ್ಷಂ ರೂಕ್ಷಾಕ್ಷರಂ ಬಹು ।
ಚುಕೋಪ ಬಲಿನಾಂ ಶ್ರೇಷ್ಠೋ ಭೀಮಸೇನಃ ಪ್ರತಾಪವಾನ್ ॥
ತಥಾ ಪದ್ಮಪ್ರತೀಕಾಶೇ ಸ್ವಭಾವಾಯತವಿಸ್ತೃತೇ ।
ಭೂಯಃ ಕ್ರೋಧಾಭಿತಾಮ್ರಾಕ್ಷೇ ರಕ್ತೇ ನೇತ್ರೇ ಬಭೂವತುಃ ।
ತ್ರಿಶಿಖಾಂ ಭ್ರುಕುಟೀಂ ಚಾಸ್ಯ ದದೃಶುಃ ಸರ್ವಪಾರ್ಥಿವಾಃ ॥
ಲಲಾಟಸ್ಥಾಂ ತ್ರಿಕೂಟಸ್ಥಾಂ ಗಂಗಾಂ ತ್ರಿಪಥಗಾಮಿವ ॥ – ಭಾರತ (ಸಭಾ. ೪೨/೧೦, ೧೧)

ಭಕ್ತ ದಂತವಕ್ರನನ್ನು ತಾನೇ ಕೊಲ್ಲುವುದಾಗಿ ಶ್ರೀಹರಿ ವಚನ ನೀಡಿರುವುದನ್ನು ಹೇಳಿ ಭೀಮನನ್ನು ತಡೆದ.

ವಿ: ಭೀಮ ತನ್ನ ಕರ್ತವ್ಯವನ್ನು ತಾನು ಮಾಡಿದಂತೆ ಭೀಷ್ಮ ತನ್ನ ಕರ್ತವ್ಯವನ್ನು ತಾನು ಮಾಡಿದ ಎಂದು ತಿಳಿಯಬೇಕು.

ಮಯೈವ ವಧ್ಯಾವಿತಿ ತಾವಾಹ ಯತ್ ಕೇಶವಃ ಪುರಾ ।
ತಚ್ಛ್ರುತ್ವಾ ಭೀಮಸೇನೋಽಪಿ ಸ್ಥಿತೋ ಭೀಷ್ಮಕರಗ್ರಹಾತ್ ॥ ೨೫೩ ॥

ಅ: ನಾನೇ ನಿಮ್ಮನ್ನು ಕೊಲ್ಲುವೆನು ಎಂದು ಅವರಿಬ್ಬರಿಗೂ ಶ್ರೀಹರಿಯು ಹಿಂದೆ ಹೇಳಿರುವುದನ್ನು ಕೇಳಿ ಭೀಮಸೇನ ಭೀಷ್ಮರು ಕೈ ಹಿಡಿದಿದ್ದರಿಂದಾಗಿ ಸುಮ್ಮನಾದ.

ವಿ: ಸಭಾಪರ್ವದ ಈ ಪ್ರಸಂಗದಲ್ಲಿ ಭೀಷ್ಮರು ಕೃಷ್ಣನ ಬಗೆಬಗೆಯ ಅವತಾರಗಳನ್ನು ವಿಶೇಷವಾಗಿ ವರ್ಣಿಸಿದ ವಿವರ ಬಂದಿದೆ. ತಾವು ಕೃಷ್ಣನಿಗೆ ಅಗ್ರಪೂಜೆಯೆಂದು ತಿಳಿಸಿದ್ದುದನ್ನು ಅರು ಬಗೆಬಗೆಯ ಪ್ರಮಾಣಗಳನ್ನಿತ್ತು ಸಾಧಿಸುವರು ಎಂಬುದು ಅಲ್ಲಿಯ ಮತ್ತೊಂದು ವಿಶೇಷ. ಹೀಗೆ ಅಲ್ಲಿಯ ಜನರೆಲ್ಲ ಕೃಷ್ಣನ ಮಹಿಮೆಯನ್ನು ವಿಶೇಷವಾಗಿ ತಿಳಿಯುವಂತಾದದ್ದು ಆ ಅಗ್ರಪೂಜಾ ಪ್ರಸಂಗದ ಫಲಶ್ರುತಿ ಎಂದು ತಿಳಿಯಬೇಕು.

ಜಾನನ್ನಪಿ ಹರೇರಿಷ್ಟಂ ಸ್ವಕರ್ತವ್ಯತಯೋತ್ಥಿತಃ ।
ಭೀಮ ಏತಾವದುಚಿತಮಿತಿ ಮತ್ವಾ ಸ್ಥಿತಃ ಪುನಃ ॥ ೨೫೪ ॥

ಅ: ಭೀಮ ಶ್ರೀಹರಿಯ ಸಂಕಲ್ಪವನ್ನು ತಿಳಿದವನಾಗಿದ್ದರೂ ತನ್ನ ಕರ್ತವ್ಯವೆಂದು ತಿಳಿದು ಹಾಗೆ ಧಾವಿಸಿದ್ದ. ಬಳಿಕ ಅಷ್ಟು ಮಾಡಿದ್ದು ಉಚಿತ ಎಂದು ಭಾವಿಸಿ ಸುಮ್ಮನಾದ.

ವಿ: ಭೀಮ ಸರ್ವಜ್ಞ; ಭೀಷ್ಮರು ಹೇಳಿದ ವಿವರಗಳೆಲ್ಲ ಭೀಮನಿಗೆ ಇನ್ನೂ ವಿಶೇಷವಾಗಿಯೇ ತಿಳಿದಿದ್ದವು. ಆದರೂ ಆಗ ಹಾಗೆ ಎದ್ದದ್ದು ಕೃಷ್ಣನಿಂದಕರನ್ನು ಶಾಸನ ಮಾಡುವುದು ತನ್ನ ಕರ್ತವ್ಯ ಎಂದು ತೋರಿಸಲು ಮಾತ್ರ. ಹಾಗೆ ಮಾಡದಿದ್ದಲ್ಲಿ ಕೃಷ್ಣನ ಮಹಿಮೆ ಜಗತ್ತಿಗೆ ವಿವರವಾಗಿ ತಿಳಿಯುತ್ತಿರಲಿಲ್ಲ, ಕೃಷ್ಣನಿಂದಲೇ ಶಿಶುಪಾಲ ಹತನಾಗುವನು ಎಂಬ ಅರಿವು ಹುಟ್ಟುತ್ತಿರಲಿಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಕರ್ತವ್ಯಪಾಲನೆಯನ್ನು ತಾನು ಮಾಡಿದಂತೆಯೂ ಆಗುತ್ತಿರಲಿಲ್ಲ, ಈ ಎಲ್ಲ ಕಾರಣಗಳಿಂದಾಗಿ ಭೀಮ ಹಾಗೆ ಎದ್ದು ಭೀಷ್ಮರಿಂದ ವಸ್ತುಸ್ಥಿತಿ ಜನರಿಗೆ ತಿಳಿಯಲು ಅವಕಾಶ ಕಲ್ಪಿಸಿದ ಎಂದು ತಿಳಿಯಬೇಕು.

ದೇವಸಂಘಭವಿನಾಂ ಮಹಾನಭೂ-
ದೀಕ್ಷ್ಯ ತೋಷ ಇಹ ಕೇಶವೇऽಧಿಕಾಮ್ ।
ಅರ್ಚನಾಂ ಯ ಇಹ ಮಾನುಷೋ ಜನೋ
ಮಧ್ಯ ಏವ ಸ ತು ಸಂಸ್ಥಿತೋऽಭವತ್ ॥ ೨೫೫ ॥

ಆಸುರಾ ಇಹ ಸುಯೋಧನಾದಯ-
ಸ್ತತ್ರ ತೇ ವಿಮನಸೋ ಬಭೂವಿರೇ ।
ದುರ್ವಚೋಭಿರಧಿಕಂ ಚ ಚೇದಿಪಃ
ಕೃಷ್ಣಮಾರ್ಚ್ಛದುರುಸದ್ಗುಣಾರ್ಣವಮ್ ॥ ೨೫೬ ॥

ಅ: ದೇವತೆಗಳ ಗುಂಪಿಗೆ ಸೇರಿದ ಜನರಿಗೆಲ್ಲ ಕೃಷ್ಣನಿಗೆ ಅಂತಹ ಅಗ್ರ ಪೂಜೆ ನಡೆದದ್ದನ್ನು ಕಂಡು ಮಹತ್ತರವಾದ ಆನಂದ ಉಂಟಾಯಿತು. ಮನುಷ್ಯ ವರ್ಗದ ಜನ ಆ ವಿಷಯದಲ್ಲಿ ತಟಸ್ಥರಾಗಿಯೇ ಉಳಿದರು. ದುರ್ಯೋಧನ ಮೊದಲಾದ ಅಸುರ ಸ್ವಭಾವದವರು ಅಲ್ಲಿ ಮನಸ್ಸಿನಲ್ಲಿ ಖೇದಗೊಂಡರು. ಶಿಶುಪಾಲ ಕೆಟ್ಟ ಮಾತುಗಳಿಂದ ಮಹಾ ಸದ್ಗುಣ ಸಮುದ್ರನಾದ ಶ್ರೀಕೃಷ್ಣನನ್ನು ನಿಂದಿಸತೊಡಗಿದ.

ವಿ: ೧) ಅಗ್ರಪೂಜೆಯ ಪರಿಣಾಮ ಜನರಿಗೆ ಅವರವರ ಯೋಗ್ಯತೆಗೆ ಅನುಗುಣವಾದ ರೀತಿಯಲ್ಲಿ ಫಲಿಸಿತ್ತು, ಸಾತ್ವಿಕರಿಗೆ ಆನಂದ, ರಾಜಸರಿಗೆ ತಟಸ್ಥತೆ ಹಾಗೂ ತಾಮಸರಿಗೆ ಖೇದ ಅದರ ಫಲಶ್ರುತಿ ಆಗಿತ್ತು, ಹೀಗೆ ಜೀವತ್ರೈವಿದ್ಯ ಎಷ್ಟು ಯಥಾರ್ಥವಾದುದು ಎಂಬುದನ್ನು ಆ ಪ್ರಸಂಗ ದೃಢಪಡಿಸಿತು ಎಂದು ತಿಳಿಯಬೇಕು.

೨) ಶಿಶುಪಾಲ ಹಾಗೆ ಕೃಷ್ಣನನ್ನು ನಿಂದಿಸುವಾಗ ಅಗ್ರ ಪೂಜೆಗೆ ಪರಶುರಾಮ, ವಸುದೇವ, ದ್ರೋಣ ಮೊದಲಾದವರಿರುವಾಗ ರಾಜನಲ್ಲದ, ವಯಸ್ಸಿನಲ್ಲಿ ಹಿರಿಯನೂ ಅಲ್ಲದ ಕೃಷ್ಣನಿಗೇಕೆ ಅಗ್ರಪೂಜೆ? ಎಂದ. ದುರ್ಯೋಧನ ಶಕುನಿ ಮೊದಲಾದವರಿಗೆ ಮಾಡಬಾರದಿತ್ತೇ?

---

೨೫೫. ದೇವಸಂಘಭವಿನಾಮಿತ್ಯತ್ರ ದೇವ ಇವ ಸಂಘಃ ದೇವಸಂಘಃ ತತ್ರ ಭವೋ ಯೇಷಾಮಸ್ತೀತಿ ದೇವಸಂಘಭವಿನಃ ತೇಷಾಮ್। ಉತ್ತಮಜೀವಾನಾಮಿತ್ಯರ್ಥಃ ॥ – (ವಾ.)

೨೫೫. ಮಧ್ಯಃ ಮಧ್ಯೇ ಇತಿ ಏವೇತ್ಯವ್ಯಯಬಲೇನ ಆವೃತ್ಯ ಪದಚ್ಛೇದಃ। – (ಜ.)

೨೫೬. ದುರ್ವಚೋಭಿರಧಿಕಮಿತ್ಯತ್ರ ದುರ್ವಚೋಭಿಃ ಅಧಿಕಂ ದೋಷಂ ಆರ್ಚ್ಛತ್। ''ಋಚ್ಛ ಗಮನ'' ಇತಿ ಧಾತೋರಂತರ್ಣೀತೋ ಣಿಚ್। ಆರ್ಚ್ಛತ್ = ಪ್ರಾಪಯಾಮಾಸೇತ್ಯರ್ಥಃ ॥ – (ವಾ.)

೨೫೬. ಕೃಷ್ಣಂ ಆರ್ಛತ್ ಪ್ರಾಪ ಋಗತಾವಿತಿ ಧಾತುಃ। – (ಜ.)

ಎಂದು ತನ್ನ ಸಲಹೆಯನ್ನು ನೀಡುವನು. ಆ ಮೂಲಕ ತಾನು ಎಂತಹ ಕೃಷ್ಣದ್ವೇಷಿಯೆಂಬುದನ್ನು ಸ್ಪಷ್ಟಪಡಿಸುವನು.

ಕೃಷ್ಣ ಶಿಶುಪಾಲರ ಯುದ್ಧ - ಕೃಷ್ಣನಿಂದ ಶಿಶುಪಾಲನ ವಧೆ

ಸಮಾಹ್ವಯಚ್ಚ ಕೇಶವಂ ಯುಧೇ ತಮಾಶು ಕೇಶವಃ ।
ನಿವಾರ್ಯ ತಸ್ಯ ಸಾಯಕಾನ್ ಜಘಾನ ಚಾರಿಣಾ ಪ್ರಭುಃ ॥ ೨೫೭ ॥

ಅ: ಶ್ರೀಕೃಷ್ಣನನ್ನು ಅವನು ಆಗಲೇ ಯುದ್ಧಕ್ಕೆ ಆಹ್ವಾನಿಸಿದ. ಅವನ ಬಾಣಗಳನ್ನು ತಡೆದು ಸರ್ವಶಕ್ತನಾದ ಶ್ರೀಕೃಷ್ಣ ಚಕ್ರದಿಂದ ಅವನನ್ನು ಸಂಹರಿಸಿದ.

ವಿ: ಶ್ರೀಕೃಷ್ಣ–ಶಿಶುಪಾಲರ ಮಧ್ಯೆ ಯುದ್ಧ ನಡೆದು ಆ ಯುದ್ಧದಲ್ಲಿ ಕೃಷ್ಣ ಚಕ್ರದಿಂದ ಶಿಶುಪಾಲನ ಶಿರಸ್ಸನ್ನು ಕತ್ತರಿಸಿದ ಎಂದರ್ಥ. ಹೀಗೆ ಕೃಷ್ಣ ತನ್ನ ದ್ವಾರಪಾಲಕರನ್ನು ಅವರಿಗೆ ತಾನು ವಚನ ನೀಡಿದ್ದಂತೆ (೮/೧೨೩) ಅವರ ಮೂರು ಜನ್ಮಗಳಲ್ಲೂ ತಾನೇ ಯುದ್ಧದಲ್ಲಿ ಸಂಹರಿಸಿದ ಎಂಬುದು ವಿಶೇಷ.

ನಿಕೃತ್ಯಮಾನಕಂಧರಃ ಸುಭಕ್ತಿಮಾನಭೂದ್ಧರೌ ।
ಸಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥ ೨೫೮ ॥

ಜಯನಿಗೆ ಸದ್ಗತಿ

ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋಽಭವತ್ ।
ಅಸೌ ಚ ಪಾಂಡವೈಃ ಕ್ರತುಃ ಪ್ರವರ್ತಿತೋ ಯಥೋದಿತಃ ॥ ೨೫೯ ॥

ಅ: ಕತ್ತು ಕತ್ತರಿಸಲ್ಪಡುತ್ತಿದ್ದಂತೆಯೇ ಶಿಶುಪಾಲ ಕೃಷ್ಣನಲ್ಲಿ ಭಕ್ತಿ ಹೊಂದಿದವನಾದ, ಅವನೊಳಗಿದ್ದ ಅಸುರ ಅಂಧಂತಮಸ್ಸಿಗೆ ತೆರಳಿದ. ಜಯ ಕೃಷ್ಣನನ್ನು ಪ್ರವೇಶಿಸಿ ಮುಂದೆ ಪಾರ್ಷದನಾದ. ಆ ಪಾಂಡವರ ಯಜ್ಞ ಶಾಸ್ತ್ರೋಕ್ತ ಕ್ರಮದಲ್ಲಿ ಮುಂದೆ ಸಾಗಿತು.

ವಿ: ೧) ಶಿಶುಪಾಲನಿಗೆ ಕೃಷ್ಣ ಸದ್ಗತಿ ನೀಡಿದ ಎಂಬ ವಿವರವನ್ನು ಇಲ್ಲಿ ವಿಶ್ಲೇಷಿಸಿರುವರು. ಅಲ್ಲಿ ಸದ್ಗತಿಯಾದದ್ದು ಶಿಶುಪಾಲನ ಒಳಗಿದ್ದ ಜಯ ಎಂಬ ವಿಷ್ಣು ಪಾರ್ಷದನಿಗೇ ಹೊರತು ಒಳಗಿದ್ದ

---

೨೫೯. ದ್ವೇಷಿಜೀವಯುತಂ ಚಾಪಿ ಭಕ್ತಂ ವಿಷ್ಣುರ್ವಿಮೋಚಯೇತ್ ।
ಅಹೋಽತಿಕರುಣಾ ವಿಷ್ಣೋಃ ಶಿಶುಪಾಲಸ್ಯ ಮೋಕ್ಷಣಾತ್' ಇತಿ ಸ್ಕಾಂದೇ ॥ –ಭಾ.ತಾ.(೧೦/೨೭/೧೩)

ಹಿರಣ್ಯಕಶಿಪು ಎಂಬ ದೈತ್ಯನಿಗಲ್ಲ. ಜಯ ಆಗ ದಂತವಕ್ರನೊಳಗಿದ್ದ ವಿಜಯನಂತೆ ಕೃಷ್ಣನ ಉದರವನ್ನು ಪ್ರವೇಶಿಸಿ ಕೃಷ್ಣ ಪರಂಧಾಮಕ್ಕೆ ತೆರಳಿದ ಮೇಲೆ ಆತನ ದ್ವಾರಪಾಲಕನಾಗಿ ಅಲ್ಲಿ ನೆಲೆಸಿದ ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಯಬೇಕು (ಶ್ಲೋ. ೩೮). ಇದನ್ನು ಹರಿಕಥಾಮೃತ–ಸಾರದಲ್ಲಿ **'ಕೆಟ್ಟ ಮಾತುಗಳಿನದೇ ಚೈದ್ಯನ ಪೊಟ್ಟೆಯೊಳಗಿಂಬಿಟ್ಟ'** ಎಂದು ವಿವರಿಸಿರುವರು. ಅದನ್ನು ಸಭೆಯಲ್ಲಿದ್ದವರೆಲ್ಲ ಪ್ರತ್ಯಕ್ಷ ನೋಡಿದರು.

೨) ಹಿರಣ್ಯಕಶಿಪುವಾಗಿದ್ದಾಗ ನರಸಿಂಹನ ಉಗ್ರ ರೂಪವನ್ನು ನೋಡಿದ್ದರಿಂದಾಗಿ ರಾವಣನಾಗಿ ರಾಕ್ಷಸ ರೂಪದಿಂದ ಜನಿಸಿದ್ದ ಜಯ ಆಗ ರಾಮನಿಂದ ಹತನಾಗುತ್ತಾ ಅವನ ಸೌಮ್ಯ ರೂಪವನ್ನು ನೋಡುವ ಮೂಲಕ ಶಿಶುಪಾಲನಾಗಿ ರಾಜರೂಪದಿಂದ ಜನಿಸಿದ. ಈಗ ಕೃಷ್ಣ ರೂಪವನ್ನು ನೋಡುತ್ತಾ ಸದ್ಗತಿಗೆ ತೆರಳಿದ ಎಂಬ ವಿಶೇಷಾಂಶ ಶ್ರೀಮದ್ಭಾಗವತತಾತ್ಪರ್ಯದಲ್ಲಿದೆ.

'ಹಿರಣ್ಯಕಶಿಪುರ್ಭೂತಮಮನ್ಯತ ಮೃತೌ ಹರಿಮ್ ॥
ಅತೋ ಭಯಾನಕೋ ಜಾತಸ್ತತ್ರ ರಾಜಾನಮೇವ ಚ ।
ಮತ್ವಾ ರಾಜೈವ ಸಂಜಾತಃ ಕೃಷ್ಣಂ ಚಕ್ರಾದಿಲಕ್ಷಣೈಃ ।
ಮೃತಿಕಾಲೇ ಹರಿಂ ಚೈವ ಮತ್ವಾ ಭಕ್ತ್ಯೈವ ಕೇವಲಮ್ ।
ದ್ವಾಸ್ಥತ್ವಂ ಹರಿಮಾವಿಶ್ಯ ಪ್ರಾಪೈವ ಮನುಜೋಽಪಿ ತು' ಇತಿ ಗಾರುಡೇ ॥

– ಭಾ.ತಾ. (೭/೧/೪೫)

೩) ಶಿಶುಪಾಲನ ಉತ್ತರಾಧಿಕಾರಿಯಾಗಿ ಅವನ ಮಗ ಧೃಷ್ಟಕೇತು ನೇಮಕಗೊಂಡಿದ್ದ. ಮುಂದೆ ಅವನು ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವಪಕ್ಷವನ್ನು ಸೇರಿ ದ್ರೋಣಪರ್ವದಲ್ಲಿ ದ್ರೋಣರಿಂದ ಹತನಾಗುವನು (೨೬/೭೯).

೪) ಕೃಷ್ಣ ನಿಂದಕನಾದ ಶಿಶುಪಾಲನ ಸಂಹಾರದಿಂದಾಗಿ ಆ ಯಜ್ಞಕ್ಕೆ ಮಹತ್ವ ಇನ್ನೂ ಹೆಚ್ಚಿತು, ಹರಿದ್ವೇಷಿಗಳ ನಿರಾಸವಾದಾಗ ಜ್ಞಾನಯಜ್ಞ ಹೆಚ್ಚು ಸಮಗ್ರ– ವಾಗುವುದು ಎನ್ನುವುದಕ್ಕೂ ಇದು ನಿದರ್ಶನ.

ರಾಜಸೂಯ ಯಾಗದ ವೈಭವ

ಸುವರ್ಣರತ್ನಭಾರಕಾನ್ ಬಹೂನ್ ನೃಪಾ ಉಪಾನಯನ್ ।
ಉಪಾಯನಂ ಸುಯೋಧನಂ ನೃಪೋಽದಿಶದ್ಗ್ರಹೇಽಸ್ಯ ಚ ॥ ೨೬೦ ॥

---

೨೬೦. ಗ್ರಹೇಽಸ್ಯ ಚೇತ್ಯತ್ರ ಗ್ರಹೇ= ಗ್ರಹಣೇ ॥ – (ವಾ.)

೨೬೦ ದುರ್ಯೋಧನಸ್ತ್ವರ್ಹಣಾನಿ ಪ್ರತಿಜಗ್ರಾಹ ಸರ್ವಶಃ । – ಭಾರತ (೨/೩೫/೯)

ಅ: ರಾಜರುಗಳು ಕಾಣಿಕೆಯಾಗಿ ಅನೇಕ ಸುವರ್ಣ ಹಾಗೂ ರತ್ನಗಳ ಭಾರಗಳನ್ನು ಒಪ್ಪಿಸಿದರು. ಧರ್ಮರಾಜ ಆ ಕಾಣಿಕೆಗಳನ್ನು ಸ್ವೀಕರಿಸುವ ಕಾರ್ಯದಲ್ಲಿ ದುರ್ಯೋಧನನನ್ನು ತೊಡಗಿಸಿದ್ದ.

ಏ: ೧) ರಾಜ ಮಹಾರಾಜರುಗಳು ದಿಗ್ವಿಜಯ ಕಾಲದಲ್ಲಿ ಕಪ್ಪ ಕಾಣಿಕೆಗಳನ್ನು ಸಮರ್ಪಿಸಿದ್ದು ಮಾತ್ರವಲ್ಲದೇ ಆ ಯಾಗದ ಸಂದರ್ಭದಲ್ಲಿ ಅಪಾರ ಸಂಖ್ಯೆಯ ರತ್ನ, ಸುವರ್ಣಗಳನ್ನು ಕಾಣಿಕೆ–ಯಾಗಿ ಪುನಃ ನೀಡಿದರು ಎಂದರ್ಥ. ಅಂತಹ ಕಾಣಿಕೆಗಳನ್ನು ತೆಗೆದಿರಿಸಿಕೊಳ್ಳುವ ಕಾರ್ಯವನ್ನು ಕೃಷ್ಣ ಧರ್ಮರಾಜನ ಮೂಲಕ ದುರ್ಯೋಧನನಿಗೆ ನೀಡಿದ್ದ (**'ಧನಾಧ್ಯಕ್ಷಃ ಸುಯೋಧನಃ'** ಭಾಗವತ ೧೦/೭೫/೪). ಆ ಕಾರ್ಯ ವಹಿಸಿದ್ದು ಕೃಷ್ಣನೇ ಆದರೂ, ಅದು ರಾಜಶಾಸನವಾಗಿ ಹೊರ ಬಂದಿದ್ದರಿಂದ ಧರ್ಮರಾಜನೇ ವಹಿಸಿದ್ದ ಎಂಬ ಮಾತು ಉಚಿತವಾದುದು.

೨) ಹಾಗೆ ಕಾಣಿಕೆಗಳನ್ನು ತೆಗೆದಿಡುವ ಕಾರ್ಯದಲ್ಲಿ ಅವನನ್ನು ತೊಡಗಿಸುವ ಮೂಲಕ ಪಾಂಡವರ ವೈಭವವನ್ನು ದುರ್ಯೋಧನ ಕಣ್ಣಾರೆ ಕಾಣುವಂತಾಗಿ ಅವನಲ್ಲಿಯ ಪಾಂಡವದ್ವೇಷ ವಿಶೇಷವಾಗಿ ಹೆಚ್ಚಬೇಕೆಂಬುದು ಕೃಷ್ಣನ ಸಂಕಲ್ಪವಾಗಿತ್ತು ಮುಂದೆ ನಡೆದದ್ದೂ ಹಾಗೆಯೇ. ಕೃಷ್ಣ ದಾನ ನೀಡುವ ಕಾರ್ಯವನ್ನು ಕರ್ಣನಿಗೂ, ಬ್ರಾಹ್ಮಣರ ಸ್ವಾಗತದ ಕಾರ್ಯವನ್ನು ಅಶ್ವತ್ಥಾಮ–ನಿಗೂ, ರಾಜರ ಉಪಚಾರ ಕಾರ್ಯವನ್ನು ಸಂಜಯನಿಗೂ, ಎಂಜಲು ತೆಗೆಯುವ ಕಾರ್ಯವನ್ನು ಯುಯುತ್ಸುವಿಗೂ ನೀಡಿದ್ದ ವಿವರ ಭಾಗವತದಲ್ಲಿದೆ.

೩) ಮುಖ್ಯವಾಗಿ ಅಡಿಗೆಯ ವ್ಯವಸ್ಥೆಯ ಮೇಲ್ವಿಚಾರಣೆ ಭೀಮಸೇನನದಾಗಿತ್ತು ಎಂದು ಭಾಗವತದ ಉಲ್ಲೇಖ : **'ಭೀಮೋ ಮಹಾನಸಾಧ್ಯಕ್ಷಃ'**(೧೦/೭೫/೪). ಇದು ಮುಂದೆ ಭೀಮಸೇನ ಅಜ್ಞಾತವಾಸಕಾಲದಲ್ಲಿ ವಿರಾಟರಾಜನ ಆಸ್ಥಾನದಲ್ಲಿ ಮಹಾನಸಾಧ್ಯಕ್ಷನಾದುದಕ್ಕೆ ಮುನ್ಸೂಚನೆ–ಯಂತಾಯಿತು.

೪) ಆಗಮಿಸಿದ ಬ್ರಾಹ್ಮಣರ ಪಾದಪೂಜೆಯ ಕಾರ್ಯವನ್ನು ಸ್ವತಃ ಶ್ರೀಕೃಷ್ಣ ತಾನೇ ವಹಿಸಿಕೊಂಡಿದ್ದ ಎಂಬ ಮಾತು ಮಹಾಭಾರತ ಮತ್ತು ಭಾಗವತಗಳಲ್ಲಿ ಬಂದಿದೆ :

ಚರಣಕ್ಷಾಲನೇ ಕೃಷ್ಣೋ ಬ್ರಾಹ್ಮಣಾನಾಂ ಸ್ವಯಂ ಹ್ಯಭೂತ್ । – (ಸಭಾ.೩೫/೧೦)

'ಕೃಷ್ಣಃ ಪಾದಾವನೇ ಜನೇ' – ಭಾಗವತ (೧೦/೭೫/೫)

೫) ಆ ಮೂಲಕ ಬ್ರಾಹ್ಮಣಾರಾಧನೆ ಅತ್ಯಂತ ಮಿಗಿಲಾದ ಕರ್ತವ್ಯ ಎಂಬುದನ್ನು ಕೃಷ್ಣ ಜಗತ್ತಿಗೆ ಸಾರಿದ ಎಂದು ತಿಳಿಯಬೇಕು.

ಅಭೋಜಯಂಸ್ತಥಾ ದ್ವಿಜಾನ್ ಯಥೇಪ್ಸಭಕ್ಷ್ಯಭೋಜ್ಯಕೈಃ ।
ಸುವರ್ಣರತ್ನಭಾರಕಾನ್ ಬಹೂಂಶ್ಚ ದಕ್ಷಿಣಾ ದದುಃ ॥ ೨೬೧ ॥

ಅ: ಪಾಂಡವರು ಬ್ರಾಹ್ಮಣರಿಗೆ ಯಥೇಚ್ಛವಾಗಿ ಭಕ್ಷ್ಯ, ಭೋಜ್ಯಗಳನ್ನು ಬಡಿಸಿದರು. ಬಹು ಸುವರ್ಣ ರತ್ನಗಳ ಭಾರಗಳನ್ನು ದಕ್ಷಿಣೆಯಾಗಿ ನೀಡಿದರು.

ವಿ: ೧) ಅಲ್ಲಿ ಭೋಜನ ಮಾಡಿದ ಜನರ ಸಂಖ್ಯೆಯನ್ನು ತಿಳಿಸಲು ಒಂದು ವ್ಯವಸ್ಥೆ ಮಾಡಲಾಗಿತ್ತು; ಅದರಂತೆ ಒಂದು ಲಕ್ಷ ಜನ ಬ್ರಾಹ್ಮಣರ ಭೋಜನ ಪೂರೈಸುತ್ತಿದ್ದಂತೆ ಒಂದು ಬಾರಿ ಜೋರಾಗಿ ಘಂಟಾವಾದನವಾಗುತ್ತಿತ್ತು, ಅಂತಹ ಘಂಟಾವಾದನ ಎಡೆಬಿಡದೇ ಅಲ್ಲಿ ಕೇಳುತ್ತಿತ್ತು ಎನ್ನುವ ಮೂಲಕ ಅಲ್ಲಿ ಭೋಜನ ಮಾಡಿದವರ ಸಂಖ್ಯೆಯನ್ನು ಅತ್ಯಂತ ಕಾವ್ಯಮಯವಾಗಿ ಬಣ್ಣಿಸಿರುವುದು ಗಮನಾರ್ಹ.

೨) ಅವರು ನೀಡಿದ ಭೋಜನದಂತೆ, ಅವರು ನೀಡಿದ ಸುವರ್ಣರತ್ನಗಳ ದಕ್ಷಿಣೆಯೂ ಸಹ ಅತ್ಯಪೂರ್ವವಾಗಿತ್ತು: **'ರತ್ನೋಪಹಾರಸಂಪನ್ನೋ ಬಭೂವ ಸ ಸಮಾಗಮಃ'**(೨/೩೫/೧೭). ಸಕಲವರ್ಣದ ಜನರೂ ತೃಪ್ತರಾದದ್ದು ಆ ಯಜ್ಞದ ಮತ್ತೊಂದು ವಿಶೇಷ: **'ತತ್ತರ್ಪುಃ ಸರ್ವವರ್ಣಾಶ್ಚ ತಸ್ಮಿನ್ ಯಜ್ಞೇ ಮುದಾನ್ವಿತಾಃ'** (೨/೩೫/೧೯).

ಯದಿಷ್ಟಮಾಸ ಯಸ್ಯ ಚ ಪ್ರದತ್ತಮೇವ ಪಾಂಡವೈಃ ।
ಸಮಸ್ತಮತ್ರ ಸರ್ವಶೋಽಥ ಸಸ್ನುರುದ್ಧತಾ ಮುದಾ ॥ ೨೬೨ ॥

ಅ: ಯಾರಿಗೆ ಯಾವುದು ಇಷ್ಟವೋ ಅದೆಲ್ಲವನ್ನೂ ಪಾಂಡವರು ವಿಶೇಷವಾಗಿ ನೀಡಿದರು. ಬಳಿಕ ಅವರು ಆನಂದದಿಂದ ಅವಭೃಥಸ್ನಾನವನ್ನು ಮಾಡಿದರು.

ಅವಭೃಥಸ್ನಾನ

ನದತ್ಸುರೋರುದುಂದುಭಿಪ್ರಗೀತದೇವಗಾಯಕಾಃ ।
ಪ್ರನೃತ್ತದಿವ್ಯಯೋಷಿತಃ ಸುರಾಪಗಾಂ ವ್ಯಗಾಹಯನ್ ॥ ೨೬೩ ॥

---

೨೬೩. ನದತ್ಸುರೋರುದುಂದುಭಿಪ್ರಗೀತದೇವಗಾಯಕಾ ಇತ್ಯತ್ರ ನದಂತಃ ಸರೋರುದುಂದುಭಯಃ ಪ್ರಕೃಷ್ಟಗೀತಾನಿ ಚ ಯೇಷಾಂ ತೇ ತಥೋಕ್ತಾಃ। ತೇ ಚ ತೇ ದೇವಗಾಯಕಾಶ್ಚ ಪ್ರಕೃಷ್ಟಂ ನೃತ್ತಂ ಯಾಸಾಂ ತಾಃ ತಥೋಕ್ತಾಃ । ತಾಶ್ಚ ತಾಃ ದಿವ್ಯಯೋಷಿತಶ್ಚನೃತ್ತಗಾನವಾದಿತ್ರಧ್ವನಿಂ ಕುರ್ವಂತಃ ಸುರಾಪಗಾಂ ವ್ಯಗಾಹಯನ್ನಿತಿ ಯೋಜನಾ॥ –(ಮಾ.)

೨೬೩. ಅಘಮರ್ಷಣಂ ಚಕ್ರುಃ। – (ಜ.)

ಅ: ದೇವತೆಗಳ ದುಂದುಭಿಯ ನಾದ ಮೊಳಗುತ್ತಿದ್ದಂತೆ ದೇವ-ಗಂಧರ್ವರ ಗಾನ ಸಾಗುತ್ತಿದ್ದಂತೆ, ದೇವಸ್ತ್ರೀಯರುಗಳು ಅಪೂರ್ವ ನರ್ತನ ಮಾಡುತ್ತಿದ್ದಂತೆ ಅವರು ಗಂಗಾ-ನದಿಯಲ್ಲಿ ಅವಗಾಹನ ಸ್ನಾನ ಮಾಡಿದರು.

ವಿ: ಅವಭೃಥಸ್ನಾನ ಯಾಗ ಸಮಾಪ್ತಿಯ ಸಂಕೇತ. ಅದರೊಂದಿಗೆ ಯಾಗ ಸಮಗ್ರವಾಗಿ ಪೂರ್ಣಗೊಂಡಂತಾಗುವುದು, ಕೃಷ್ಣ ಹಾಗೆ ಯಮುನಾನದಿಯಲ್ಲಿ ಅವಭೃಥಸ್ನಾನ ಪೂರೈಸಿದ ವಿಷಯ ಹಿಂದೆ ಬಂದಿದೆ (ಶ್ಲೋ. ೩೭).

ಸಮಸ್ತರಾಜಸಂಯುತಾ ವಿಗಾಹ್ಯ ಜಾಹ್ನವೀಜಲೇ ।
ಪುರಂ ಯಯುಃ ಪುನಶ್ಚ ತೇ ಸ್ವಪದ್ಮ ಚಾಗಮನ್ ಸುರಾಃ ॥ ೨೬೪ ॥

ಅ: ಸಕಲರಾಜರನ್ನು ಕೂಡಿಕೊಂಡು ಜಾಹ್ನವೀಜಲದಲ್ಲಿ ಅವಗಾಹನಸ್ನಾನ ಪೂರೈಸಿ ಅವರು ಮತ್ತೆ ತಮ್ಮ ಪಟ್ಟಣಕ್ಕೆ ಹಿಂದಿರುಗಿದರು. ದೇವತೆಗಳೆಲ್ಲ ತಮ್ಮ ಲೋಕಗಳಿಗೆ ಮರಳಿದರು.

ದುರ್ಯೋಧನ ಮಾನಭಂಗ

ಗತೇಷು ಸರ್ವರಾಜಸು ಸ್ವಕಂ ಪುರಂ ಸ್ವಕೇಷು ಚ ।
ಸಭೀಷ್ಮಕೇಷು ಸರ್ವಶಃ ಸಹಾಂಬಿಕೇಯಕೇಷು ಚ ॥ ೨೬೫ ॥

ಅ: ಸಕಲ ರಾಜರುಗಳು ತಮ್ಮ ತಮ್ಮ ಪಟ್ಟಣಗಳಿಗೆ ತೆರಳಿದರು. ಭೀಷ್ಮರೊಂದಿಗೆ ಧೃತರಾಷ್ಟ್ರ ಮೊದಲಾದವ ಎಲ್ಲರೂ ಹೊರಟು ಹೋದರು.

ವಿಚಿತ್ರರತ್ನನಿರ್ಮಿತೇ ರವಿಪ್ರಭೇ ಸಭಾತಲೇ ।
ಸಕೇಶವೋ ವರಾಸನೇ ವಿವೇಶ ಧರ್ಮನಂದನಃ ॥ ೨೬೬ ॥

ಅ: ವಿಚಿತ್ರವಾದ ರತ್ನಗಳಿಂದ ನಿರ್ಮಿತವಾಗಿದ್ದ, ಸೂರ್ಯನಂತೆ ಬೆಳಗುತ್ತಿದ್ದ ಸಭಾಂಗಣ-ದಲ್ಲಿ ಧರ್ಮರಾಜನು ಕೃಷ್ಣನೊಂದಿಗೆ ಉತ್ತಮವಾದ ಆಸನದಲ್ಲಿ ಕುಳಿತ.

ತಥೈವ ರುಗ್ಮಿಣೀಮುಖಾಃ ಪರಿಗ್ರಹಾ ರಮೇಶಿತುಃ ।
ತಥೈವ ಭೀಮಫಲ್ಗುನಾವುಪಾವಿಶನ್ ಹರೇರುಪ ॥ ೨೬೭ ॥

ಅ: ಹಾಗೆಯೇ ರುಗ್ಮಿಣೀ ಮೊದಲಾದ ಕೃಷ್ಣನ ಪತ್ನಿಯರು ಕೃಷ್ಣನ ಪಕ್ಕದಲ್ಲಿ ಕುಳಿತರು. ಅದರಂತೆ ಭೀಮಾರ್ಜುನರು ಕೃಷ್ಣನ ಬಳಿಯಲ್ಲಿ ಕುಳಿತರು.

ಸಹೈವ ವಾಯುಸೂನುನಾ ತಥೈವ ಪಾರ್ಷತಾತ್ಮಜಾ ।
ಉಪೈವ ರುಗ್ಮಿಣೀಂ ಶುಭಾಂ ತಥೈವ ಸತ್ಯಭಾಮಿನೀಮ್ ॥ ೨೬೮ ॥

ಅ: ಭೀಮನೊಂದಿಗೆ ದ್ರೌಪದಿಯು, ಮಂಗಳಸ್ವರೂಪರಾದ ರುಗ್ಮಿಣಿ ಮತ್ತು ಸತ್ಯಭಾಮೆಯರ ಸಮೀಪದಲ್ಲಿ ಕುಳಿತಳು.

ಯಮೌ ಚ ಪಾರ್ಷತಾದಯೋ ಧನಂಜಯಾಂತಿಕೇಽವಿಶನ್ ।
ತಥೈವ ರಾಮಸಾತ್ಯಕೀ ಸಮೀಪ ಏವ ಭೂಭೃತಃ ॥ ೨೬೯ ॥

ಅ: ನಕುಲ, ಸಹದೇವರು ಮತ್ತು ಧೃಷ್ಟದ್ಯುಮ್ನ ಮೊದಲಾದವರು ಅರ್ಜುನನ ಸಮೀಪದಲ್ಲಿ ಕುಳತರು. ಅದರಂತೆ ಬಲರಾಮ, ಸಾತ್ಯಕಿಯರು ರಾಜನಾದ ಯುಧಿಷ್ಠಿರನ ಬಳಿ ಕುಳಿತರು.

ಸಮಾಸತಾಂ ತು ಸಾ ಸಭಾ ವ್ಯರೋಚತಾಧಿಕಂ ತದಾ ।
ಯಥಾ ಸಭಾ ಸ್ವಯಂಭುವಃ ಸಮಾಸ್ಥಿತಾ ಚ ವಿಷ್ಣುನಾ ॥ ೨೭೦ ॥

ಅ: ಅವರೆಲ್ಲ ಕುಳಿತಿದ್ದ ಆ ಸಭೆ ವಿಷ್ಣುವಿನಿಂದ ಶೋಭಿತವಾದ ಬ್ರಹ್ಮ ದೇವರ ಸಭೆಯಂತೆ ಬಹಳವಾಗಿ ಕಂಗೊಳಿಸಿತು.

ವಿ: ಬ್ರಹ್ಮ ಸಭೆಯಲ್ಲಿ ಸಾಕ್ಷಾತ್ ಶ್ರೀಹರಿ ಮಂಡಿಸಿದ್ದ. ಅದರಂತೆ ಗರುಡ, ಶೇಷಾದಿ ಸಮಸ್ತ–ದೇವತೆಗಳು ಕುಳಿತಿದ್ದರು. ಪಾಂಡವ ಸಭೆಯಲ್ಲಿ ಸರ್ವೋತ್ತಮನಾದ ಕೃಷ್ಣ, ಭಾವಿಬ್ರಹ್ಮನಾದ ಭೀಮ ಮೊದಲಾದವರೆಲ್ಲ ಕುಳಿತಿದ್ದಾಗ ಅದು ಸಹಜವಾಗಿಯೇ ಬ್ರಹ್ಮಸಭೆಯಂತೆಯೇ ಕಂಗೊಳಿ–ಸಿತು ಎಂದು ತಿಳಿಯಬೇಕು.

ವಿಚಿತ್ರಹೇಮಮಾಲಿನಃ ಶುಭಾಂಬರಾಶ್ಚ ತೇಽಧಿಕಮ್ ।
ಸ್ಫುರತ್ಕಿರೀಟಕುಂಡಲಾ ವಿರೇಜುರತ್ರ ತೇ ನೃಪಾಃ ॥ ೨೭೧ ॥

ಅ: ಆ ಸಭೆಯಲ್ಲಿ ವಿಚಿತ್ರವಾದ ಸುವರ್ಣ ಮಾಲೆಗಳನ್ನು ಧರಿಸಿದವರಾಗಿ, ಮಂಗಳ ವಸ್ತ್ರಗಳನ್ನು ತೊಟ್ಟವರಾಗಿ, ಹೊಳೆಯುವ ಕಿರೀಟ ಕುಂಡಲಗಳನ್ನು ಉಳ್ಳವರಾಗಿ ರಾಜರುಗಳು ಬಹಳವಾಗಿ ಶೋಭಿಸಿದರು.

ವಿಶೇಷತೋ ಜನಾರ್ದನಃ ಸಭಾರ್ಯಕೋ ಜಗತ್ಪ್ರಭುಃ ।
ಯಥಾ ದಿವೌಕಸಾಂ ಸದಸ್ಯನಂತಸದ್ಗುಣಾರ್ಣವಃ ॥ ೨೭೨ ॥

ಅ: ವಿಶೇಷವಾಗಿ ಪತ್ನೀಸಮೇತನಾದ ಜಗತ್ಪಭುವಾದ ಸಾಕ್ಷಾತ್ ಶ್ರೀಹರಿಯಾದ ಶ್ರೀಕೃಷ್ಣ ದೇವತೆಗಳ ಸಭೆಯಲ್ಲಿ ಹೇಗೋ ಹಾಗೆ ಶೋಭಿಸಿದ.

ವಿ: ಪಾಂಡವರೆಲ್ಲ ದೇವತೆಗಳೇ, ಕೃಷ್ಣನಂತೂ ಶ್ರೀಹರಿಯೇ ಆದ್ದರಿಂದ ಆ ಸಭೆ ದೇವ-ಸಭೆಯಂತೆಯೇ ಕಂಗೊಳಿಸಿತು ಎಂದರ್ಥ.

ಉಪಾಸಿರೇ ಚ ತಂ ನೃಪಾಃ ಸಮಸ್ತಶಃ ಸುಹೃದ್ಗಣಾಃ ।
ತದಾऽऽಜಗಾಮ ಖಡ್ಗಭೃತ್ ಸಹಾನುಜಃ ಸುಯೋಧನಃ ॥ ೨೭೩ ॥

ಅ: ಕೃಷ್ಣನನ್ನು ಎಲ್ಲ ರಾಜರೂ ಸಜ್ಜನರ ಗುಂಪುಗಳೂ ಆರಾಧಿಸಿದವು. ಆ ವೇಳೆಗೆ ಅಲ್ಲಿಗೆ ದುರ್ಯೋಧನ ತಮ್ಮಂದಿರೊಂದಿಗೆ ಖಡ್ಗಪಾಣಿಯಾಗಿ ಆಗಮಿಸಿದ.

ವಿ: ಸಾಕ್ಷಾತ್ ಶ್ರೀಹರಿಯೊಂದಿಗೆ ಸಮಸ್ತ ರಾಜರುಗಳೆಲ್ಲ ಮಂಡಿಸಿದ ಆ ಸಭೆಗೆ ದುರ್ಯೋಧನ ವಿಲಂಬವಾಗಿ ಬರುವ ಮೂಲಕ ಅಪರಾಧವೆಸಗುತ್ತಿರುವುದನ್ನು ಗಮನಿಸಬೇಕು; ಅವನಂತೆ ಅವನ ತಮ್ಮಂದಿರೂ ಸಹ ಅಪರಾಧಿಗಳೇ ಆದರು.

ದ್ವಾರಂ ಸಭಾಯಾ ಹರಿನೀಲರಶ್ಮಿ-
ವ್ಯೂಢಂ ನ ಜಾನನ್ ಸ ವಿಹಾಯ ಭಿತ್ತಿಮ್ ।
ಅಭ್ಯಂತರಾಣಾಂ ದೃಶಿ ನೋ ವಿಘಾತಿನೀಂ
ಸಂಸ್ಫಾಟಿಕಾಮಾಶು ದೃಢಂ ಚುಚುಂಬೇ ॥ ೨೭೪ ॥

ಅ: ಇಂದ್ರನೀಲಮಣಿಗಳ ಕಾಂತಿಯಿಂದ ಮುಚ್ಚಿ ಹೋಗಿದ್ದ ಸಭೆಯ ದ್ವಾರವನ್ನು ಅವನು ತಿಳಿಯದೇ ಅದನ್ನು ಬಿಟ್ಟು ಒಳ ಹೊರಗಿನ ನೋಟವನ್ನು ತೆರೆದು ತೋರುತ್ತಿದ್ದ ಸ್ಫಟಿಕ ಮಣಿಗಳ ಗೋಡೆಗೆ ಗಟ್ಟಿಯಾಗಿ ಮುತ್ತಿಕ್ಕಿದ.

ವಿ: ೧) ಅದು ಮಯನಿರ್ಮಿತವಾದ ವಿಚಿತ್ರ ಸಭೆ. ಅದರ ಬಾಗಿಲನ್ನು ಇಂದ್ರನೀಲ ಮಣಿ-ಗಳಿಂದಲೂ, ಗೋಡೆಗಳನ್ನು ಸ್ಫಟಿಕ ಮಣಿಗಳಿಂದಲೂ ಮಯಾಸುರ ನಿರ್ಮಿಸಿದ್ದ. ಅದರಿಂದಾಗಿ ಬಾಗಿಲು ಕಾಣದಂತಿದ್ದು, ಗೋಡೆಗಳು ಪಾರದರ್ಶಕವಾದ್ದರಿಂದ ಅವೇ ಬಾಗಿಲುಗಳಂತೆ ಕಾಣು-

---

೨೭೪. ಅಭ್ಯಂತರಾಣಾಂ ದೃಶೀತ್ಯತ್ರ ಅಭ್ಯಂತರಾಣಾಂ ದೃಶಿ = ದರ್ಶನೇ ॥ – (ವಾ.)

೨೭೪. ಸಂಸ್ಫಾಟಿಕಾಂ ಸಮೀಚೀನಸ್ಫಟಿಕನಿರ್ಮಿತಾಮ್ । – (ಜ.)

ತ್ತಿದ್ದವು. ದುರ್ಯೋಧನ ಅದನ್ನು ಗುರುತಿಸದೇ ಗೋಡೆಗಳನ್ನೇ ಬಾಗಿಲೆಂದು ತಿಳಿದು ಜೋರಾಗಿ ಒಳಗೆ ನುಗ್ಗಲೆಂದು ಪ್ರಯತ್ನಿಸಿ ಗೋಡೆಗೆ ಮುಖ ತಾಗಿಸಿಕೊಂಡ ಎಂದರ್ಥ.

೨) ಅವನು ಹಾಗೆ ಗಾಢವಾಗಿ ಮುಖಕ್ಕೆ ಪೆಟ್ಟು ತಿಂದದ್ದನ್ನು ಇಲ್ಲಿ 'ದೃಢಂ ಚುಚುಂಬೇ' ಎಂಬ ಪದದಿಂದ ವಿವರಿಸಿರುವ ರೀತಿ ಅಪೂರ್ವ ಎಂಬುದನ್ನು ಗಮನಿಸಬೇಕು. ಅವನಂತೆ ಅವನ ತಮ್ಮಂದಿರೂ ಸಹ ಗೋಡೆಗಳಿಗೆ ಮುಖ ತಾಗಿಸಿಕೊಂಡರು. ಅವರ ಸ್ಥಿತಿ ಕುರುಡನ ಹಿಂದೆ ನಡೆದ ಕುರುಡರ ರೀತಿಯದ್ದಾಗಿತ್ತು ('ಅಂಧೇನೈವ ನೀಯಮಾನಾ ಯಥಾಂಧಾಃ' – ಉಪನಿಷತ್). ಎಲ್ಲರೊಂದಿಗೆ ಸಭೆಗೆ ಆಗಮಿಸಿದ್ದಲ್ಲಿ ಅವರಿಗೆ ಹೀಗೆ ನೋಯುವ ಪ್ರಸಂಗ ಒದಗುತ್ತಿರಲಿಲ್ಲ ಎಂಬುದನ್ನೂ ಗಮನಿಸಬೇಕು.

ಪ್ರವೇಶಯೇತಾಂ ಚ ಯಮೌ ತಮಾಶು
ಸಭಾಂ ಭುಜೌ ಗೃಹ್ಯ ನೃಪೋಪದಿಷ್ಟೌ।
ತತ್ರೋಪವಿಶ್ಯ ಕ್ಷಣಮನ್ಯತೋಽಗಾ-
ದಮೃಷ್ಯಮಾಣಃ ಶ್ರಿಯಮೇಷು ದಿವ್ಯಾಮ್ ॥ ೨೭೫ ॥

ಅ: ಆಗ ಧರ್ಮರಾಜನ ಅಪ್ಪಣೆಯಂತೆ ನಕುಲ, ಸಹದೇವರು ಅವನನ್ನು ಕೈಹಿಡಿದು ಒಳಗೆ ಬರಮಾಡಿಕೊಂಡರು. ಅಲ್ಲಿ ಒಂದು ಕ್ಷಣ ಕೂತಿದ್ದ ಅವನು ಅವರಲ್ಲಿದ್ದ ದಿವ್ಯವಾದ ಸಂಪತ್ತನ್ನು ಕಂಡು ಸಹಿಸಲಾರದೇ ಎದ್ದು ಬೇರೆಡೆಗೆ ನಡೆದ.

ವಿ: ೧) ದುರ್ಯೋಧನ ಹಾಗೆ ಗೋಡೆ ತಾಗಿಸಿಕೊಂಡದ್ದು ಆ ಗೋಡೆ ಪಾರದರ್ಶಕ–ವಾದ್ದರಿಂದ ಸಭೆಯಲ್ಲಿದ್ದವರಿಗೆಲ್ಲಾ ಕಾಣಿಸಿತು. ಧರ್ಮರಾಜ ತತ್‌ಕ್ಷಣವೇ ನಕುಲ, ಸಹದೇವರನ್ನು ಕಳುಹಿಸಿ ಅವರನ್ನು ಸರಿಯಾದ ದಾರಿಯ ಮೂಲಕ ಒಳಗೆ ಬರಮಾಡಿಕೊಂಡ ಎಂದರ್ಥ. ಇದರಿಂದ ಅವರಿಗೆಲ್ಲ ತಾವು ಪೆಟ್ಟು ತಿಂದದ್ದು ಇತರರ ಗಮನಕ್ಕೆ ಬಂದದ್ದರ ಅರಿವಾಯಿತು ಎಂಬ ಸೂಚನೆಯೂ ಇಲ್ಲಿದೆ.

೨) ಹಾಗೆ ತಡವಾಗಿ ಬಂದ ಕೌರವರು ಪಾಂಡವರ ಸಂಪತ್ತನ್ನು ನೋಡಿ ಹೊಟ್ಟೆ ಉರಿಯಿಂದ ಸಹಿಸಲಾಗದೇ ಅಲ್ಲಿಂದೆದ್ದು ಹೊರಟುಬಿಟ್ಟರು. ತಡವಾಗಿ ಬಂದದ್ದು ಒಂದು ಅಪರಾಧವಾದರೆ, ಸಭೆಯ ಮಧ್ಯದಲ್ಲಿ ಹಾಗೆ ಸಭಾಮರ್ಯಾದೆಯನ್ನು ತೊರೆದು ಕೃಷ್ಣನಂತಹ ಸರ್ವೋತ್ತಮ ಮಂಡಿಸಿರುವಾಗಲೇ ಹಾಗೆ ಎದ್ದು ನಡೆದದ್ದು ಮತ್ತೊಂದು ರೀತಿಯ ಮಹಾ–ಪರಾಧವಾಯಿತು ಎಂಬುದನ್ನೂ ಗಮನಿಸಬೇಕು. ಸಜ್ಜನರ ಬಗ್ಗೆ ಮತ್ಸರ ಪಡುವುದು ದುರ್ಜನರ ಪ್ರಮುಖಲಕ್ಷಣ ಎಂಬ ಮಾತು ಭಾಗವತದಲ್ಲಿ ಬಂದಿದೆ.

೩) ಹಾಗೆ ಅವನು ಅಲ್ಲಿಂದ ತೆರಳುವಾಗ ಧರ್ಮರಾಜ ಆ ಸಭೆ ತುಂಬ ವಿಚಿತ್ರ-ವಾದುದೆಂದು ಹೇಳಿ ಅದರ ಅವಲೋಕನಕ್ಕೆ ನಕುಲಸಹದೇವರನ್ನು ಜೊತೆಯಾಗಿ ಕಳುಹಿಸುವು-ದಾಗಿ ತಿಳಿಸಿದರೂ ಅದನ್ನು ತಿರಸ್ಕರಿಸಿ ದುರ್ಯೋಧನ ತಾನಾಗಿಯೇ ಆ ಸಭೆಯನ್ನು ನೋಡ ಬಯಸಿ ಅಲ್ಲಿಂದ ತೆರಳಿದ. ತಾನಾಗಿ ಇತರರು ಮಾರ್ಗದರ್ಶನ ಮಾಡಲು ಧಾವಿಸಿದರೂ ಅದಕ್ಕೆ ಕಿವಿಗೊಡದ ಇಂತಹ ದುಷ್ಪವೃತ್ತಿ ಅಸುರಸ್ವಭಾವದ ಲಕ್ಷಣ.

ತತ್ರೇಂದ್ರನೀಲಭುವಿ ರತ್ನಮಯಾನಿ ದೃಷ್ಟ್ವಾ
ಪದ್ಮಾನಿ ನೀರಮನಸಾ ಜಗೃಹೇ ಸ್ವವಸ್ತ್ರಮ್ ।
ರತ್ನೋರುದೀಧಿತಿನಿಗೂಢಜಲಂ ಸ್ಥಲಂ ಚ
ಮತ್ವಾ ಪಪಾತ ಸಹಿತೋಽವರಜೈರ್ಜಲೌಘೇ ॥ ೨೭೬ ॥

ಅ: ಅಲ್ಲಿ ಇಂದ್ರನೀಲ ಮಣಿಯಿಂದ ನಿರ್ಮಿತವಾದ ನೆಲದಲ್ಲಿ ರತ್ನಮಯವಾದ ಪದ್ಮಗಳನ್ನು ಕಂಡು ಅದು ನೀರು ಎಂಬ ಭ್ರಾಂತಿಯಿಂದ ದುರ್ಯೋಧನ ಉಟ್ಟ ವಸ್ತ್ರವನ್ನು ಮೇಲೆತ್ತಿದ; ಮುಂದೆ ರತ್ನಗಳ ಅಪಾರ ಕಾಂತಿಯಿಂದ ಆಚ್ಛಾದಿತವಾಗಿದ್ದ ಜಲವನ್ನು ನೆಲವೆಂದು ಭ್ರಮಿಸಿ ತಮ್ಮಂದಿರೊಂದಿಗೆ ಜಲರಾಶಿಯಲ್ಲಿ ಬಿದ್ದ.

ವಿ: ೧) ಹಾಗೆ ಮುಂದೆ ನಡೆದ ದುರ್ಯೋಧನಾದಿಗಳಿಗೆ ಕಂಡದ್ದು ನೆಲ. ಅದನ್ನು ಮಯಾಸುರ ಇಂದ್ರನೀಲ ಮಣಿಗಳಿಂದ ನಿರ್ಮಿಸಿದ್ದ. ಅದರಿಂದಾಗಿ ಅದು ಸರೋವರದಂತೆ ಕಾಣುತ್ತಿತ್ತು. ಆ ನೆಲದಲ್ಲಿ ಮಧ್ಯೆ ರತ್ನಗಳನ್ನು ಕಮಲದ ಆಕೃತಿಯಲ್ಲಿ ಜೋಡಿಸಿದ್ದ. ಅವು ನಿಜವಾದ ಕಮಲಗಳಂತೆ ಕಾಣುತ್ತಿದ್ದವು. ಅಂತೂ ಆ ನೆಲ ಜಲದಂತೆಯೂ, ರತ್ನಗಳು ಪದ್ಮದಂತೆಯೂ

---

೨೭೬. ಜಗೃಹೇ ಸ್ವವಸ್ತ್ರಮಿತ್ಯಸ್ಯ ಸ್ವವಸ್ತ್ರಮೂರ್ಧ್ವಂ ನೀತ್ವಾ ಜಗೃಹ ಇತ್ಯರ್ಥಃ। – (ಸ.)

೨೭೬. ಸ್ಫಾಟಿಕಂ ಸ್ಥಲಮಾಸಾದ್ಯ ಜಲಮಿತ್ಯಭಿಶಂಕಯಾ ॥
ಸವಸ್ತ್ರೋತ್ಕರ್ಷಣಂ ರಾಜಾ ಕೃತವಾನ್ ಬುದ್ಧಿಮೋಹಿತಃ।
ದುರ್ಮನಾ ವಿಮುಖಶ್ಚೈವ ಪರಿಚಕ್ರಾಮ ತಾಂ ಸಭಾಮ್ ॥
ತತಃ ಸ್ಥಲೇ ನಿಪತಿತೋ ದುರ್ಮನಾ ವ್ರೀಡಿತೋ ನೃಪಃ।
ನಿಃಶ್ವಸನ್ ವಿಮುಖಶ್ಚಾಪಿ ಪರಿಚಕ್ರಾಮ ತಾಂ ಸಭಾಮ್ ॥
ತತಃ ಸ್ಫಾಟಿಕತೋಯಾಂ ವೈ ಸ್ಫಾಟಿಕಾಂಬುಜಶೋಭಿತಾಮ್।
ವಾಪೀಂ ಮತ್ವಾ ಸ್ಥಲಮಿವ ಸವಾಸಾಃ ಪ್ರಾಪತಜ್ಜಲೇ ॥ – ಭಾರತ (ಸಭಾ. ೪೭/೩-೬)

೨೭೬. ಸ್ಥಲೇಽಭ್ಯಗೃಹ್ಣಾದ್ ವಸ್ತ್ರಾಂತಂ ಜಲಂ ಮತ್ವಾ ಸ್ಥಲೇಽಪತತ್।
ಜಲೇ ಚ ಸ್ಥಲವದ್ ಭ್ರಾಂತ್ವಾ ಮಯಮಾಯಾವಿಮೋಹಿತಃ ॥ – ಭಾಗವತ (೧೦/೭೫/೩೭)

ಕಂಡದ್ದರಿಂದ ದುರ್ಯೋಧನ ಅದೊಂದು ಪದ್ಮಸರೋವರ ಎಂದು ಭಾವಿಸಿ ಮುಂಚಿನಂತೆ ಅವಮಾನಕ್ಕೆ ಗುರಿಯಾಗಬಾರದು ಎಂಬ ಎಚ್ಚರಿಕೆಯನ್ನು ತೋರಲೆಂದು ತಾನುಟ್ಟಿದ್ದ ವಸ್ತ್ರಗಳನ್ನು ಮೇಲೆತ್ತಿಕೊಂಡು ನಿಧಾನವಾಗಿ ನಡೆದ. ಅದರಂತೆ ಅವನ ತಮ್ಮಂದಿರೂ ಸಹ. ಮುಂದೆ ನಡೆಯುತ್ತಿದ್ದಂತೆ ಅದು ಜಲವಲ್ಲ ನೆಲ ಎಂದು ಅರಿವಾಗಿ ಮತ್ತೊಮ್ಮೆ ನಾಚುವಂತಾಯಿತು. ಅದರ ಮುಂದೆ ಬಂದಿದ್ದು ನಿಜವಾಗಿಯೂ ಜಲ ತುಂಬಿದ ಸರೋವರವೇ. ಅದರಲ್ಲಿಯೂ ಕಮಲಗಳು ತುಂಬಿದ್ದವು. ದುರ್ಯೋಧನ ಈ ಬಾರಿ ಯೋಚಿಸಿದ, ಇದೂ ಸಹ ನೆಲವೇ; ಇವು ಕೃತಕ ಪದ್ಮಗಳು ಎಂದು ಭಾವಿಸಿ ನೆಲದ ಮೇಲೆ ನಡೆಯುವಂತೆ ಅದರ ಮೇಲೆ ನಡೆಯಲು ಧಾವಿಸಿದ. ಪರಿಣಾಮ ಅದರಲ್ಲಿ ಮುಳುಗಿದ. ಅದರಂತೆ ಅವನ ತಮ್ಮಂದಿರ ಪಾಡೂ ಆಯಿತು. ಜೊತೆಗೆ ಶಕುನಿಯದೂ ಸಹ.

೨) ಹೀಗೆ ನೆಲವನ್ನು ಜಲವೆಂದು, ಜಲವನ್ನು ನೆಲವೆಂದು ತಿಳಿದ ಅವಿವೇಕ ಆ ಕೌರವರದು. ಜಲ ತೀರ್ಥದ ಸಂಕೇತ, ಕಂಡದ್ದನ್ನು ಶಾಸ್ತ್ರವೆಂದು ತಿಳಿಯುತ್ತಾ ಶಾಸ್ತ್ರವನ್ನು ಅವಹೇಳನ ಮಾಡುತ್ತಾ ಬದುಕುವ ಜನರ ರೀತಿ ಇಂತಹ ಕೌರವರ ರೀತಿಯೇ ಸರಿ. ಅದರ ಪರಿಣಾಮ ಹೀನಾಯವಾದ ಪತನ. ಸಹಜವಾಗಿಯೇ ಅದು ಯಾರಿಗೂ ನಗು ತರಿಸುವಂತಹ ಅಪಹಾಸ್ಯದ ಸಂಗತಿ.

ಭೀಮ ದ್ರೌಪದಿಯರ ಪರಿಹಾಸ

ತಂ ಪ್ರಾಹಸದ್ಭಗವತಾ ಕ್ಷಿತಿಭಾರನಾಶ-
ಹೇತೋಃ ಸುಸೂಚಿತ ಉರುಸ್ವರತೋಽತ್ರ ಭೀಮಃ ।
ಪಾಂಚಾಲರಾಜಸುತಯಾ ಚ ಸಮಂ ತಥಾಽನ್ಯೈಃ
ಸ್ವೀಯೈಸ್ತಥಾಽನು ಜಹಸುರ್ಭಗವನ್ಮಹಿಷ್ಯಃ ॥ ೨೭೭ ॥

ಅ: ಭಗವಂತನಾದ ಶ್ರೀಕೃಷ್ಣನಿಂದ ಭೂಭಾರನಾಶ ನಿಮಿತ್ತವಾಗಿ ಸಂಜ್ಞೆ ಮಾಡಲ್ಪಟ್ಟ ಭೀಮಸೇನ ದೊಡ್ಡ ಧ್ವನಿಯಿಂದ ಅವನನ್ನು ಅಪಹಾಸ ಮಾಡಿ ನಕ್ಕ. ಅದರೊಂದಿಗೆ

---

೨೭೭. ಜಲೇ ನಿಪತಿತಂ ದೃಷ್ಟ್ವಾ ಭೀಮಸೇನೋ ಮಹಾಬಲಃ ।
ಜಹಾಸ ಜಹಸುಶ್ಚೈವ ಕಿಂಕರಾಶ್ಚ ಸುಯೋಧನಮ್ ॥...
ಅರ್ಜುನಶ್ಚ ಯಮೌ ಚೋಭೌ ಸರ್ವೇ ತೇ ಪ್ರಹಸಂಸ್ತದಾ ॥...
ಆರುರೋಹ ತತಃ ಸರ್ವೇ ಜಹಸುಶ್ಚ ಪುನರ್ಜನಾಃ । ... – ಭಾರತ (ಸಭಾ. ೪೭/೭,೯,೧೧)

೨೭೭. ಜಹಾಸ ಭೀಮಸ್ತಂ ದೃಷ್ಟ್ವಾ ಸ್ತ್ರಿಯೋ ನೃಪತಯೋಽಪರೇ ।
ನಿವಾರ್ಯಮಾಣಾ ಅಪ್ಯಂಗ ರಾಜ್ಞಾ ಕೃಷ್ಣಾನುಮೋದಿತಾಃ ।
ಬಭೂವ ತೂಷ್ಣೀಂ ಭಗವಾನ್ ಭುವೋ ಭರಂ ಸಮುಜ್ಜಿಹೀಷುರ್ಭಗವಾನ್ ಮತಿಂ ಸ್ಮ ಯದ್ವೃಶಾ ॥
– ಭಾಗವತ (೧೦/೭೫/೩೭, ೩೮, ೩೯)

ದ್ರೌಪದಿಯೂ ನಕ್ಕಳು. ಅದರಂತೆ ಅವರ ಕಡೆಯವರೂ ಹಾಗೆಯೇ ನಂತರ ಕೃಷ್ಣಪತ್ನಿಯರೂ ನಕ್ಕರು.

ವಿ: ೧) ನಗೆಪಾಟಲಿನ ಆ ಸಂಗತಿಯನ್ನು ಕಂಡು ಕೃಷ್ಣ ಭೀಮನಿಗೆ ಸಂಜ್ಞೆ ಮಾಡಿದ. ಅದನ್ನು ಗ್ರಹಿಸಿದ ಭೀಮ ಅವರೆಲ್ಲರಿಗೂ ಕೇಳುವಂತೆ ಜೋರಾಗಿ ನಕ್ಕ. ಅದನ್ನು ಅನುಸರಿಸಿ ದ್ರೌಪದಿಯೂ ನಕ್ಕಳು. ಅದರಂತೆ ಕೃಷ್ಣಪತ್ನಿಯರ ಗುಂಪೂ ಸಹ.

೨) ಹಿಂದೆ ಹೇಳಿದಂತೆ ಅದು ಮಯನಿಂದ ನಿರ್ಮಿತವಾದ ವಿಚಿತ್ರಸಭೆಯಾದ್ದರಿಂದ ಅದರಲ್ಲಿ ಕುಳಿತವರಿಗೆ ಅದರ ಇತರ ಸ್ಥಳಗಳಲ್ಲಿ ನಡೆಯುವ ಪ್ರತಿಯೊಂದು ದೃಶ್ಯವೂ ಸ್ಪಷ್ಟವಾಗಿ ಕಾಣುತ್ತಿತ್ತು. ಅದರಿಂದಾಗಿ ಆ ಕೌರವರ ಅವಿವೇಕ ಅವರಿಗೆಲ್ಲ ಕಣ್ಣಾರೆ ಕಾಣುವಂತಾಗಿತ್ತು.

೩) ಹೀಗೆ ಅಪಹಾಸ್ಯದ ಪ್ರಸಂಗವನ್ನು ಕಂಡು ನಗುವಾಗಲೂ ಭೀಮಸೇನ ಶ್ರೀಕೃಷ್ಣನ ಆದೇಶವನ್ನು ಪಾಲಿಸುವ ಮೂಲಕ ತಾನು ಶುದ್ಧ ಭಾಗವತಧರ್ಮರತ ಎನ್ನುವುದನ್ನು ಮತ್ತೊಮ್ಮೆ ನಿರೂಪಿಸಿದ. ಕೃಷ್ಣ ಹಾಗೆ ಸಂಜ್ಞೆ ನೀಡಿದ್ದು ಮುಂದೆ ಅದು ಭೂಭಾರಹರಣ ಕಾರ್ಯಕ್ಕೆ ನಾಂದಿ–ಯಾಗಲಿ ಎಂಬ ಉದ್ದೇಶದಿಂದ. ಇದು ಸ್ಪಷ್ಟವಾಗಿ ಭಾಗವತ ಪುರಾಣದಲ್ಲಿ ನಿರೂಪಿತವಾಗಿದೆ.

೪) ರಾಮಾಯಣದಲ್ಲಿ ಶೂರ್ಪನಖಿಯ ಕಿವಿಗಳನ್ನು ಕತ್ತರಿಸಿದ ಪ್ರಸಂಗ ಸಹ ಇದರಂತೆ ಭೂಭಾರನಾಶಕ್ಕೆ ಕಾರಣವಾದ ಅಪೂರ್ವಪ್ರಸಂಗ ಎಂಬುದು ಅಲ್ಲಿಯೇ ನಿರೂಪಿತವಾಗಿದೆ (೫/೨೬). ಅದು ಮುಂದೆ ರಾಮ–ರಾವಣರ ಯುದ್ಧಕ್ಕೆ ನಾಂದಿ ಹಾಡಿದಂತೆ ಇದು ಕುರು–ಪಾಂಡವ ಸಮರಕ್ಕೆ ನಾಂದಿ ಹಾಡಿದ ಪ್ರಸಂಗವಾಯಿತು ಎಂದು ತಿಳಿಯಬೇಕು.

೫) ಇಂದ್ರಪ್ರಸ್ಥ ದೇವಶಿಲ್ಪಿಯಾದ ವಿಶ್ವಕರ್ಮನ ನಿರ್ಮಾಣವಾದರೆ, ಅದರಲ್ಲಿನ ಸಭಾಮಂಟಪ ದೈತ್ಯಶಿಲ್ಪಿಯಾದ ಮಯಾಸುರನ ನಿರ್ಮಾಣ. ಅವರಿಬ್ಬರೂ ತಮ್ಮ ಅದ್ಭುತ ಶಿಲ್ಪ ಕೌಶಲಕ್ಕೆ ಹೆಸರಾದವರು. ಮಯಾಸುರ ನಿರ್ಮಿಸಿದ ಗುಹೆಯೊಂದರ ಪ್ರಸ್ತಾಪ ರಾಮಾಯಣದಲ್ಲಿ ಬಂದಿರುವುದನ್ನು ಗಮನಿಸಬೇಕು (೬/೩೬, ೩೭).

೬) ಈ ಮಯಸಭೆ ಆನಂದಮಯನಾದ ಭಗವಂತನ ನಿರ್ಮಾಣವಾದ ವಿಶ್ವದ ಸಂಕೇತ. ಇದನ್ನು ಅರಿಯುವುದು ಸಾಮಾನ್ಯವಾದ ಕೆಲಸವಲ್ಲ. ಜಗತ್ತು ಅದಕ್ಕಿಂತ ಅದ್ಭುತವಾದ

---

೨೭೭. ತತ್ರ ಮಾಂ ಪ್ರಾಹಸತ್ ಕೃಷ್ಣಃ ಪಾರ್ಥೇನ ಸಹ ಸುಸ್ವರಮ್ ।
ದ್ರೌಪದೀ ಚ ಸಹಸ್ತ್ರೀಭಿರ್ವ್ಯಥಯಂತೀ ಮನೋ ಮಮ ॥
– (ಧೃತರಾಷ್ಟ್ರನನ್ನು ಕುರಿತು ದುರ್ಯೋಧನವಚನ) – ಭಾರತ (೨/೫೦/೩೦)

ಚಿತ್ರ–ವಿಚಿತ್ರವಾದ ಸೃಷ್ಟಿ: **'ಬಹುಚಿತ್ರಜಗತ್ ಬಹುಧಾಕರಣಾತ್'**. ಅದಕ್ಕೆ ಶ್ರೀಕೃಷ್ಣನ ಮಾರ್ಗದರ್ಶನ ಅತ್ಯಗತ್ಯ. ಧರ್ಮರಾಜ ಕೌರವರಿಗೆ ನಕುಲಸಹದೇವರ ಮೂಲಕ ಮಾರ್ಗ= ದರ್ಶನ ನೀಡಲು ಮುಂದಾದುದ್ದು ಶೀಲ, ವಿನಯಗಳ ಹಿನ್ನೆಲೆಯಲ್ಲಿಯೇ ಈ ಜಗತ್ತಿನ ಮರ್ಮವನ್ನು ತಿಳಿಯುವ ಪ್ರಯತ್ನಕ್ಕೆ ಸೂಚನೆ. ಅದಿಲ್ಲದವರಿಗೆ ಇದರ ರಹಸ್ಯ ಎಂದೂ ಹೊಳೆಯದು. ಅದನ್ನು ಧಿಕ್ಕರಿಸಿದ ಕೌರವರ ಸ್ಥಿತಿ ಹೀಗೆ ಅತ್ಯಂತ ಹಾಸ್ಯಾಸ್ಪದವಾಯಿತು.

೬) ಶಾಸ್ತ್ರದ ಹಿನ್ನೆಲೆಯನ್ನು ತೊರೆದು ಜಗತ್ತನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಈ ದುರ್ಯೋಧನಾದಿಗಳ ಪ್ರಯತ್ನದಂತೆ ನಗೆಪಾಟಲಿಗೆ ಕಾರಣ ಎಂಬುದು ಇಲ್ಲಿಯ ತತ್ತ್ವ.

ದುರ್ಯೋಧನನ ಅವಿವೇಕ

ಮಂದಸ್ಮಿತೇನ ವಿಲಸದ್ವದನೇಂದುಬಿಂಬೋ
ನಾರಾಯಣಸ್ತು ಮುಖಮೀಕ್ಷ್ಯ ಮರುತ್ಸುತಸ್ಯ ।
ನೋವಾಚ ಕಿಂಚಿದಥ ಧರ್ಮಸುತೋ ನಿವಾರ್ಯ
ಪ್ರಾಸ್ಥಾಪಯದ್ವಸನಮಾಲ್ಯವಿಲೇಪನಾನಿ ॥ ೨೭೮ ॥

ಅ: ಮಂದಹಾಸದಿಂದ ಶೋಭಿಸುವ ಮುಖವೆಂಬ ಚಂದ್ರಬಿಂಬದಿಂದ ಕೂಡಿದ ಶ್ರೀಕೃಷ್ಣ ಭೀಮನ ಮುಖವನ್ನು ನೋಡಿದ. ಏನೂ ನುಡಿಯಲಿಲ್ಲ. ಬಳಿಕ ಧರ್ಮರಾಜ ಅವರನ್ನು ತಡೆದು ದುರ್ಯೋಧನ ಮೊದಲಾದವರಿಗೆ ವಸ್ತ್ರ ಹಾರ, ಗಂಧಗಳನ್ನು ಕಳುಹಿಸಿಕೊಟ್ಟನು.

ವಿ: ೧) ಶ್ರೀಕೃಷ್ಣನು ಆ ಪ್ರಸಂಗದಲ್ಲಿ ತಾನು ಮಾತ್ರ ನಗದೆ, ಮಂದಹಾಸವನ್ನು ಬೀರಿದ. ಅದರಿಂದ ಭೀಮಸೇನನನ್ನು ನೋಡುತ್ತಾ ಅವನ ಕಾರ್ಯವನ್ನು ತಾನು ಮೆಚ್ಚಿದ್ದನ್ನು ಸೂಚಿಸಿದ. ಧರ್ಮರಾಜ ತನ್ನ ಕರ್ತವ್ಯವನ್ನು ಅರಿತು ತತ್‌ಕ್ಷಣವೇ ದುರ್ಯೋಧನಾದಿಗಳಿಗೆ ಬೇರೆ ವಸ್ತ್ರ ಮೊದಲಾದವುಗಳನ್ನು ಕಳುಹಿಸಿದ. ಮೇಲ್ನೋಟಕ್ಕೆ ಮಹಾಭಾರತದಲ್ಲಿ ಈ ಪ್ರಸಂಗ ನಡೆದದ್ದು ಕೃಷ್ಣದ್ವಾರಕೆಗೆ ತೆರಳಿದ ಮೇಲೆ ಎಂಬಂತೆ ತೋರುವುದು.

೨) ಆದರೆ, ಭಾಗವತದಲ್ಲಿ ಸ್ಪಷ್ಟವಾಗಿ ಕೃಷ್ಣ ಸಭೆಯಲ್ಲಿ ಮಂಡಿಸಿದ್ದಾಗಲೇ ಇದು ನಡೆದದ್ದು ಎಂದಿದೆ. ಮುಂದೆ ಮಹಾಭಾರತದಲ್ಲೂ ಹಾಗೆಯೇ ಬಂದಿದೆ. (೨/೫೦/೩೦) ಶ್ರೀಮದಾಚಾರ್ಯರು ಇದರ ಸಮಗ್ರ ವಿವರಣೆಯನ್ನು ಈಗಾಗಲೇ ನೀಡಿರುವರು. (೯/೧೩೪). ಇದರಿಂದ ಮಹಾಭಾರತದ ಈ ಪ್ರಸಂಗದ ನಿರೂಪಣೆ ಕಾಲ ವ್ಯತ್ಯಾಸ ಎಂಬ ನಿರೂಪಣೆಯ ಪ್ರಭೇದವನ್ನು ಆಶ್ರಯಿಸಿದೆ ಎಂದು ತಿಳಿಯುವುದು.

ದುರ್ಯೋಧನನ ಸಂತಾಪ

ಕೃಷ್ಣಾವೃಕೋದರಗತಂ ಬಹುಲಂ ನಿಧಾಯ
ಕ್ರೋಧಂ ಯಯೌ ಸಶಕುನಿರ್ಧೃತರಾಷ್ಟ್ರಪುತ್ರಃ ।
ಸುವ್ರೀಳಿತೋ ನೃಪತಿದತ್ತವರಾಂಬರಾದೀನ್
ನಕ್ಕತ್ವ ಮಾರ್ಗಗತ ಆಹ ಸ ಮಾತುಲಂ ಸ್ವಮ್ ॥ ೨೭ ॥

ಅ: ದುರ್ಯೋಧನ ನಾಚಿ ಧರ್ಮರಾಜ ಕಳುಹಿಸಿಕೊಟ್ಟಿದ್ದ ಉತ್ತಮ ವಸ್ತ್ರಾದಿಗಳನ್ನು ತಿರಸ್ಕರಿಸಿ ಭೀಮದ್ರೌಪದಿಯರ ಬಗ್ಗೆ ಬಹಳವಾದ ಕೋಪವನ್ನು ತಳೆದು ಶಕುನಿಯೊಂದಿಗೆ ತೆರಳಿದ. ದಾರಿಯಲ್ಲಿ ಅವನು ಶಕುನಿಗೆ ಹೇಳಿದ.

ವಿ: ೧) ದುರ್ಯೋಧನ ಧರ್ಮರಾಜನ ಔದಾರ್ಯವನ್ನು ಅರ್ಥಮಾಡಿಕೊಳ್ಳದೇ ಅವನು ಕಳಿಸಿಕೊಟ್ಟಿದ್ದ ವಸ್ತ್ರಾದಿಗಳನ್ನೆಲ್ಲಾ ತಿರಸ್ಕರಿಸಿ ಅಲ್ಲಿಂದ ಹಸ್ತಿನಾವತಿಗೆ ತಮ್ಮಂದಿರೊಂದಿಗೂ, ಶಕುನಿಯೊಂದಿಗೂ ತೆರಳಿದ. ಅವನಲ್ಲಿ ದ್ರೌಪದಿ, ಭೀಮರ ಬಗ್ಗೆ ಅತ್ಯಂತ ಹೆಚ್ಚಿನ ಕೋಪ ತುಂಬಿತ್ತು. ಅವನು ಭೀಮ, ದ್ರೌಪದಿಯರ ಬಗ್ಗೆ ಹಾಗೆ ಕೋಪಗೊಳ್ಳಲು ಕಾರಣ ಅವರು ತನ್ನನ್ನು ಕಂಡು ನಕ್ಕಿದ್ದು. ಆದರೆ ಅವರು ಹಾಗೆ ನಗಲು ತಾನು ಹಾಸ್ಯಾಸ್ಪದರೀತಿಯಲ್ಲಿ ವರ್ತಿಸಿದ್ದು ಕಾರಣ ಎಂಬುದನ್ನು ಗಮನಿಸದ ಅವಿವೇಕಿ ಅವನು. ಆ ಎಲ್ಲ ತಪ್ಪಿಗೂ ಮುಖ್ಯವಾಗಿ ಅವನೇ ಹೊಣೆ. ಹಿಂದೆ ತಿಳಿಸಿದಂತೆ ಅವನು ಒಂದಾದ ಮೇಲೊಂದರಂತೆ ತಪ್ಪುಗಳನ್ನು ಮಾಡುತ್ತಲೇ ಬಂದವನು. ಧರ್ಮರಾಜ ಮುನ್ನೆಚ್ಚರಿಕೆ ನೀಡಿದರೂ ಕೇಳದೇ ಸಭೆಯನ್ನು ನೋಡಹೊರಟ. ಅವನು ಮೊದಲ ಎರಡು ಬಾರಿ ಹಾಗೆ ಹಾಸ್ಯಾಸ್ಪದವಾಗಿ ನಡೆದುಕೊಂಡಾಗಲೂ ಅವರೆಲ್ಲ ನಕ್ಕರಲಿಲ್ಲ ಎಂಬುದು ಅವರ ಉದಾತ್ತ ದೃಷ್ಟಿಗೆ ದ್ಯೋತಕ. ಅವನು ಮಾಡಿದ ತಪ್ಪು ಮಿತಿ ಮೀರಿದಾಗ ಸಹಜವಾಗಿಯೇ ಅವರೆಲ್ಲ ನಕ್ಕರು.

೨) ನಗಬಾರದಕ್ಕೆ ನಗುವುದು ಅಪರಾಧವಾಗುವಂತೆ, ನಗಬೇಕಾದ್ದಕ್ಕೆ ನಗದಿರುವುದೂ ಅಪರಾಧವೇ. ದುರ್ಯೋಧನ ಅದನ್ನು ಗಮನಿಸದೇ ಅವರದ್ದೇ ಅಪರಾಧವೆಂಬಂತೆ ತಿಳಿದದ್ದು ಅವನ ಮೂರ್ಖತನಕ್ಕೆ ದ್ಯೋತಕ. ಕಣ್ಣು ಕಾಣದ ವೃದ್ಧನೊಬ್ಬ ಬಿದ್ದಾಗ ಅದು ನಗುವ ವಿಚಾರವಾಗದೇ ಅನುಕಂಪದ ವಿಷಯವಾಗುವುದು. ಆಗ ನಕ್ಕವರನ್ನೇ ಜನ ಅವಿವೇಕಿಗಳು ಎಂದು ನಿಂದಿಸುವರು. ಆದರೆ, ಕಣ್ಣಿರುವ ಯುವಕ ನೆಲವನ್ನು ಗಮನಿಸದೇ ಎತ್ತಲೋ ನೋಡುತ್ತಾ ಉರುಳಿ ಬಿದ್ದರೆ ಅದನ್ನು ವಿವೇಕಿಗಳು ಕಂಡು ನಗುವರೇ ಹೊರತು ಅನುಕಂಪ ತೋರಲಾರರು. ಮುದುಕನಲ್ಲಿರುವುದು ಅಸಾಮರ್ಥ್ಯವಾದರೆ, ಈ ತರುಣನಲ್ಲಿ ಇರುವುದು ಅವಿವೇಕ. ಅಸಾಮರ್ಥ್ಯಕ್ಕೆ ಅನುಕಂಪ ದೊರೆಯುವಂತೆ ಅವಿವೇಕಕ್ಕೆ ಅನುಕಂಪ ದೊರೆಯಲಾರದು

ಎಂಬುದನ್ನು ಗಮನಿಸಬೇಕು. ಪ್ರಸ್ತುತ ಪ್ರಸಂಗದಲ್ಲಿ ದುರ್ಯೋಧನಾದಿಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುವುದು ಅವಿವೇಕ. ಆದ್ದರಿಂದ ಅವರ ಬಗ್ಗೆ ನಕ್ಕದ್ದರಲ್ಲಿ ಭೀಮಾದಿಗಳ ತಪ್ಪು ಇನಿತೂ ಇಲ್ಲ. ಆದರೂ ಹಾಗೆ ತಿಳಿದದ್ದು ಅವನ ಮತ್ತೊಂದು ಅವಿವೇಕವಾಯಿತು ಎನ್ನದೆ ವಿಧಿಯಿಲ್ಲ. ಅದರ ಪರಿಣಾಮ ತನ್ನ ಕುಲವನ್ನೆಲ್ಲಾ ನಾಶಮಾಡಿಕೊಳ್ಳುವ ಮಹತ್ತರವಾದ ಮತ್ತೊಂದು ಅಪರಾಧಕ್ಕೆ ಅವನು ತೊಡಗುವಂತಾಯಿತು.

ಯೌ ಮಾಮಹಸತಾಂ ಕೃಷ್ಣಾಭೀಮೌ ಕೃಷ್ಣಸ್ಯ ಸನ್ನಿಧೌ ।
ತಯೋರಕೃತ್ವಾ ಸಂತಾಪಂ ನಾಹಂ ಜೀವಿತುಮುತ್ಸಹೇ ॥ ೨೮೦ ॥

ಅ: 'ಕೃಷ್ಣನ ಸಮ್ಮುಖದಲ್ಲಿ ಭೀಮದ್ರೌಪದಿಯರು ನನ್ನನ್ನು ನೋಡಿ ನಕ್ಕಿರುವರು; ಅವರಿಗೆ ಸಂತಾಪ ಉಂಟುಮಾಡದೇ ನಾನು ಬದುಕಲು ಬಯಸೆನು'.

ವಿ: ೧) ದುರ್ಯೋಧನ ಶಕುನಿಯ ಮುಂದೆ ತನ್ನ ಪರಿತಾಪವನ್ನು ತೋರಿಕೊಂಡ ಬಗೆಯಿದು. ಕೃಷ್ಣನ ಎದುರಿನಲ್ಲಿ ಹಾಗೆ ಅವರು ನಕ್ಕದ್ದರಿಂದ ಅವರು ಸಂಕಷ್ಟಕ್ಕೆ ಸಿಲುಕುವುದನ್ನು ಕೃಷ್ಣನೇ ನೋಡುವಂತಾಗಬೇಕು ಎಂಬ ಬಯಕೆಯನ್ನು ದುರ್ಯೋಧನ ಈ ಮೂಲಕ ತೋರಿಕೊಳ್ಳುತ್ತಿರುವಂತಿರುವುದು ಗಮನಾರ್ಹ.

೨) ದುರ್ಯೋಧನನಿಗೆ ಬಿದ್ದ ಪೆಟ್ಟಿಗಿಂತ ಅವರೆಲ್ಲ ನಕ್ಕದ್ದರಿಂದ ಮನಸ್ಸಿಗಾದ ಪೆಟ್ಟು ಅಪಾರವಾಗಿತ್ತು. ಆದರೆ, ಅದು ಅವನ ಸ್ವಯಂಕೃತಾಪರಾಧವಾದ್ದರಿಂದ ಅದರ ಬಗ್ಗೆ ಮತ್ತೊಬ್ಬರನ್ನು ಹಳಿಯುವಲ್ಲಿ ಮಾತ್ರ ಯಾವ ವಿವೇಕವೂ ಇಲ್ಲ ಎಂಬುದು ಅವನಿಗೆ ತಿಳಿಯಲೇ ಇಲ್ಲ.

ಯದಿ ಮೇ ಶಕ್ತಿರತ್ರ ಸ್ಯಾದ್ಭ್ರಾತಯೇಯಂ ವೃಕೋದರಮ್ ।
ಅಗ್ರಪೂಜಾಂ ಚ ಕೃಷ್ಣಸ್ಯ ವಿಲುಂಪೇಯಂ ನ ಸಂಶಯಃ ॥ ೨೮೧ ॥

ಅ: ''ನನಗೇನಾದರೂ ಶಕ್ತಿ ಇದ್ದಿದ್ದರೆ ಭೀಮಸೇನನನ್ನು ಕೊಲ್ಲುತ್ತಿದ್ದೆ. ಕೃಷ್ಣನ ಅಗ್ರಪೂಜೆಯನ್ನೂ ತಪ್ಪಿಸಿಬಿಡುತ್ತಿದ್ದೆ, ಸಂಶಯವಿಲ್ಲ''.

ವಿ: ೧) ಶಿಶುಪಾಲನಂತೆ ಕೃಷ್ಣನ ಅಗ್ರಪೂಜೆಯನ್ನು ಸಹಿಸದ ದುಷ್ಟರ ಸಾಲಿಗೆ ದುರ್ಯೋಧನನೂ ಸೇರಿದ್ದ, ಆದರೆ ಹಾಗೆ ಕೃಷ್ಣನ ಅಗ್ರಪೂಜೆಯನ್ನು ವಿರೋಧಿಸಿದಲ್ಲಿ ಶಿಶುಪಾಲನಿಗಾದ

---

೨೮೧. ತತ್ರ ಸ್ಮ ಯದಿ ಶಕ್ತಃ ಸ್ಯಾಂ ಪಾತಯೇಽಹಂ ವೃಕೋದರಮ್ ॥ – ಭಾರತ (೨/೫೦/೨೭)

ಗತಿಯೇ ತನಗೂ ಆಗುವುದು ಎಂಬ ಭಯ ಅವನಲ್ಲಿ ತುಂಬಿತ್ತು ಎಂಬುದು ಇದರಿಂದ ಸ್ಫುಟಪಡುವುದು.

೨) ದುರ್ಯೋಧನ ತನಗೆ ಭೀಮನನ್ನು ಎದುರಿಸುವ ಶಕ್ತಿಯಿಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡ ಪ್ರಸಂಗಗಳಲ್ಲಿ ಇದೂ ಒಂದು. ಅದು ಅವನಿಗೆ ಬಾಲ್ಯದಿಂದಲೂ ಅತ್ಯಂತ ಸ್ಫುಟವಾಗಿ ತಿಳಿದಿದ್ದ ವಿಚಾರ ಎಂಬುದನ್ನು ಮಹಾಭಾರತ ಉದ್ದಕ್ಕೂ ನಿರೂಪಿಸಿದೆ. ಅದಕ್ಕೆಂದೇ ಅವನು ವಿಷಪ್ರಯೋಗ, ಅರಗಿನಮನೆ ಮೊದಲಾದ ಕಪಟಗಳಿಂದ ಅವನನ್ನು ಕೊಲ್ಲಬಯಸಿದ್ದ.

ದುರ್ಯೋಧನನ ಮಾತ್ಸರ್ಯ

ಈದೃಶಂ ಪಾಂಡವೈಶ್ವರ್ಯಂ ದೃಷ್ಟ್ವಾ ಕೋ ನಾಮ ಜೀವಿತಮ್ ।
ಇಚ್ಛೇತ ಕರದಾ ಯೇಷಾಂ ವೈಶ್ಯವತ್ ಸರ್ವಭೂಮಿಪಾಃ ॥ ೨೮೨ ॥

ಅ: 'ಪಾಂಡವರಿಗೆ ಸಕಲರಾಜರುಗಳು ವೈಶ್ಯರಂತೆ ಕಪ್ಪ ನೀಡುತ್ತಿರುವರು. ಇಂತಹ ಅವರ ಐಶ್ವರ್ಯವನ್ನು ಕಂಡು ಯಾವನು ತಾನೇ ಬದುಕು ಬಯಸಿಯಾನು?'.

ವಿ: ೧) ಪಾಂಡವರ ಐಶ್ವರ್ಯವನ್ನು ದುರ್ಯೋಧನ ಸಾಕ್ಷಾತ್ತಾಗಿ ಗಮನಿಸಿದ್ದಕ್ಕೂ ಇದು ದ್ಯೋತಕ. ಅವನು ಅದನ್ನೆಲ್ಲ ಹಾಗೆ ಗಮನಿಸಬೇಕು, ಅದರಿಂದಾಗಿ ಪಾಂಡವರ ಮೇಲೆ ಅವನ ಮಾತ್ಸರ್ಯ ಹೆಚ್ಚಬೇಕು ಎಂಬ ವಿಚಾರದಿಂದಲೇ ಕೃಷ್ಣ ಪಾಂಡವರಿಗೆ ರಾಜರು ನೀಡುತ್ತಿದ್ದ ಕಾಣಿಕೆಗಳನ್ನು ತೆಗೆದಿಟ್ಟುಕೊಳ್ಳುವ ಕಾರ್ಯವನ್ನು ಅವನಿಗೆ ನೀಡಿದ್ದ ಎಂಬ ಮಾತು ಹಿಂದೆ ಬಂದಿದೆ (ಶ್ಲೋ.೨೬೦). ಮಹಾಭಾರತದಲ್ಲಿ ಅವನೇ ಹೇಳುವಂತೆ ಪಾಂಡವರ ಐಶ್ವರ್ಯದಂತಹ ಐಶ್ವರ್ಯವನ್ನು ಅವನು ಕಂಡಿರಲಿಲ್ಲ ಮಾತ್ರವಲ್ಲ ಕೇಳಿಯೂ *ಇರಲಿಲ್ಲ. ಇದರಿಂದಾಗಿ ಹೊಟ್ಟೆ ಉರಿದಿದ್ದ ಅವನಿಗೆ ಮುಂದಿನ ಅಪಹಾಸದ ಪ್ರಸಂಗ ಅದನ್ನು ಕೆರಳಿಸುವ ಸಾಧನವಾಯಿತೇ ಹೊರತು ಮೂಲತಃ ಅವನಲ್ಲಿ ಪಾಂಡವರ ದ್ವೇಷ ಸದಾ ಮನೆಮಾಡಿಕೊಂಡೇ ಇತ್ತು ಎಂಬುದನ್ನು ತಿಳಿಯಬೇಕು.

೨) ಪಾಂಡವರು ತಮ್ಮ ಸ್ವಂತ ಬಲದಿಂದ ಶ್ರೀಹರಿಯ ದಯೆಯಿಂದ ಕ್ಷತ್ರಿಯೋಚಿತವಾದ ಮಾರ್ಗದಲ್ಲಿ ಅಂತಹ ಅಪೂರ್ವ ಸಾಧನೆಯನ್ನು ಮಾಡಿದ್ದನ್ನು ಅರ್ಥಮಾಡಿಕೊಂಡು ಆ ಬಗ್ಗೆ ಸಂತೋಷಪಡುವ ಬದಲು ಹೀಗೆ ಕೊರಗಿದ್ದು ಅವನ ಅಸುರ ಸ್ವಭಾವಕ್ಕೆ ದ್ಯೋತಕ.

---

* ನ ಕ್ವಚಿದ್ಧಿ ಮಯಾ ತಾದೃಗ್ ದೃಷ್ಟಪೂರ್ವೋ ನ ಚ ಶ್ರುತಃ ।
ಯಾದೃಗ್ ಧನಾಗಮೋ ಯಜ್ಞೇ ಪಾಂಡುಪುತ್ರಸ್ಯ ಧೀಮತಃ ॥ – ಭಾರತ (ಸಭಾ. ೪೯/೨೨)

ದ್ವೇಷಕ್ಕೆ ನೀರೆರೆದ ಶಕುನಿ

ಇತ್ಯುಕ್ತಃ ಶಕುನಿರ್ವೈರಂ ದೃಢೀಕರ್ತುಂ ವಚೋಽಬ್ರವೀತ್ ।
ಕಿಂ ತೇ ವೈರೇಣ ರಾಜೇಂದ್ರ ಬಲಿಭಿರ್ಭ್ರಾತೃಭಿಃ ಪುನಃ ॥ ೨೮೩ ॥

ಅ: ದುರ್ಯೋಧನ ಹೀಗೆನ್ನಲು ಅವನ ದ್ವೇಷ ಭಾವವನ್ನು ದೃಢಪಡಿಸಲೆಂದು ಶಕುನಿ ನುಡಿದ: ''ರಾಜಶ್ರೇಷ್ಠನೇ, ಬಲಶಾಲಿಗಳಾದ ಪಾಂಡವರನ್ನು ದ್ವೇಷಿಸಿ ಏನು ಪ್ರಯೋಜನ?''

ವಿ: ಪಾಂಡವರನ್ನು ಪ್ರಶಂಸಿಸುವಂತಹ ಇಂತಹ ಮಾತುಗಳಿಂದ ದುರ್ಯೋಧನನ ದ್ವೇಷ–ವನ್ನು ಕೆರಳಿಸುವುದು ಶಕುನಿಯ ಉದ್ದೇಶವಾಗಿತ್ತು ಎಂದರ್ಥ. ಅವರನ್ನು ಬಲಶಾಲಿಗಳು ಎನ್ನುವ ಮೂಲಕ ದುರ್ಯೋಧನನನ್ನು ದುರ್ಬಲ ಎಂದು ರೇಗಿಸಿದ ಎಂಬುದನ್ನು ಗಮನಿಸಬೇಕು.

ಅನುಜೀವಸ್ಥ ತಾನ್ ವೀರಾನ್ ಗುಣಜ್ಯೇಷ್ಠಾನ್ ಬಲಾಧಿಕಾನ್ ।
ಇತೀರಿತೋಽತಿಸಂವೃದ್ಧಕೋಪ ಆಹ ಸುಯೋಧನಃ ॥ ೨೮೪ ॥

ಅ: ''ಅವರೆಲ್ಲ ಗುಣದಲ್ಲಿ ಹಿರಿಯರು, ಬಲದಲ್ಲಿ ಹೆಚ್ಚಿನವರು. ಅಂತಹ ವೀರರನ್ನು ನೀನು ಓಲೈಸಿಕೊಂಡಿರು''. ಶಕುನಿ ಹೀಗೆನ್ನಲು ಬಹಳವಾಗಿ ಕೋಪಗೊಂಡು ದುರ್ಯೋಧನ ನುಡಿದ:

ಹೆಚ್ಚಿದ ದುರ್ಯೋಧನನ ವೈರ

ಯದಿ ತೇಷಾಂ ತದೈಶ್ವರ್ಯಂ ನ ಮಾಂ ಗಚ್ಛೇದಶೇಷತಃ ।
ಸರ್ವಥಾ ನೈವ ಜೀವೇಯಮಿತಿ ಸತ್ಯಂ ಬ್ರವೀಮಿ ತೇ ॥ ೨೮೫ ॥

ಅ: ''ಅವರ ಐಶ್ವರ್ಯವು ಸಂಪೂರ್ಣವಾಗಿ ನನ್ನ ವಶಕ್ಕೆ ಬರದಿದ್ದಲ್ಲಿ ನಾನು ನಿಶ್ಚಯವಾಗಿ ಜೀವಿಸಿರಲಾರೆ. ನಿನಗೆ ನಾನು ಸತ್ಯವನ್ನೇ ನುಡಿಯುತ್ತಿರುವೆ''.

ನ ತು ಬಾಹುಬಲಾಚ್ಛಕ್ಯಮಾದಾತುಂ ತಾಂ ಶ್ರಿಯಂ ಕ್ವಚಿತ್ ।
ನೇಂದ್ರೋಽಪಿ ಸಮರೇ ಶಕ್ತಸ್ತಾನ್ ಜೇತುಂ ಕಿಮು ಮಾನುಷಾಃ ॥೨೮೬॥

ಅ: ''ಬಾಹುಬಲದಿಂದ ಅವರ ಸಂಪತ್ತನ್ನು ಸರ್ವಥಾ ಕಿತ್ತುಕೊಳ್ಳಲಾಗದು, ಅವರನ್ನು ಇಂದ್ರನೂ ಸಮರದಲ್ಲಿ ಗೆಲ್ಲಲಾರ; ಇನ್ನು ಮನುಷ್ಯರೆಂತು ಗೆದ್ದಾರು?''

ವಿ: ಪಾಂಡವರು ದಿಗ್ವಿಜಯ ಕಾಲದಲ್ಲಿ ವಿಶ್ವವನ್ನೇ ಜಯಿಸುರುವುದು ಜಗತ್ತಿಗೆಲ್ಲಾ ತಿಳಿದಿತ್ತು ಆ ಹಿನ್ನೆಲೆಯಲ್ಲಿ ದುರ್ಯೋಧನ ಇಂದ್ರನೂ ಅವರನ್ನು ಗೆಲ್ಲಲಾರ ಎಂಬುದಾಗಿ ಸತ್ಯವನ್ನೇ ನುಡಿದ. ತನ್ನ ಅಶಕ್ತಿಯನ್ನು ದುರ್ಯೋಧನ ಮತ್ತೊಮ್ಮೆ ಸಾರಿದ ಪ್ರಸಂಗವಿದು.

ಶಕುನಿಯಿಂದ ಜೂಜಿಗೆ ಸಲಹೆ

ಇತೀರಿತಃ ಪಾಪತಮ ಆಹ ಗಾಂಧಾರಕೋ ನೃಪಃ ।
ಪಾಪಾನಾಮಖಿಲಾನಾಂ ಚ ಪ್ರಧಾನಂ ಚಕ್ರವರ್ತಿನಾಮ್ ॥ ೨೮೭ ॥

ಅ: ದುರ್ಯೋಧನ ಹೀಗೆನ್ನಲು ಪರಮಪಾಪಿಯಾದ ಶಕುನಿ ಸಕಲ ಪಾಪಿಗಳಿಗೂ ಪ್ರಧಾನ ಚಕ್ರವರ್ತಿಯಾದ ದುರ್ಯೋಧನನಿಗೆ ಹೇಳಿದ :

ವಿ: ಸಲಹೆ ಕೊಡುವ ಶಕುನಿಯಂತೆ ಸಲಹೆ ತೆಗೆದುಕೊಳ್ಳುವ ದುರ್ಯೋಧನನೂ ಸಹ ಮಹಾ ಪಾಪಿ ಎಂದು ಭಾವ. ದುರ್ಯೋಧನ ಜೀವಾಧಮನಾದ ಕಲಿಯ ಅವತಾರನಾದರೆ, ಶಕುನಿ ಅವನ ಸಹಚರನಾದ ದ್ವಾಪರನೆಂಬ ದೈತ್ಯ ಎಂಬ ಮಾತು ಈಗಾಗಲೇ ಬಂದಿದೆ (೨/೧೪೪, ೧೧/೧೪೬).

ಯಾಂ ತಾಂ ಶ್ರಿಯಂ ಪ್ರದೀಪ್ತಾಂ ತ್ವಂ ಪಾಂಡವೇಷು ಪ್ರಪಶ್ಯಸಿ ।
ತಾಮಕ್ಲೇಶತ ಆದಾಸ್ಯೇ ಕ್ರೀಡನ್ಪಕ್ಷೈಸ್ತ್ವದಂತಿಕೇ ॥ ೨೮೮ ॥

ಅ: ''ಪಾಂಡವರಲ್ಲಿ ಯಾವ ಉಜ್ಜ್ವಲವಾದ ಸಂಪತ್ತನ್ನು ನೀನು ಕಾಣುತ್ತಿರುವಿಯೋ ಅದನ್ನೆಲ್ಲ ನಾನು ಜೂಜಾಡುತ್ತಾ ಅನಾಯಾಸವಾಗಿ ನಿನ್ನ ಬಳಿಗೆ ಸೆಳೆದು ತರುವೆ''.

ವಿ: ಶಕುನಿ ಪಾಂಡವರ ಸಂಪತ್ತನ್ನು ದೋಚಲು ಯೋಜಿಸಿದ *ಉಪಾಯವನ್ನು ಇಲ್ಲಿ ಪ್ರಕಟಿಸಿರುವನು. ಅದರಂತೆ ದ್ಯೂತ ಅದಕ್ಕೆ ಮುಖ್ಯ ಸಾಧನ. ಪಾಂಡವರ ಸಕಲ ಐಶ್ವರ್ಯವನ್ನೂ ಅದರಿಂದ ಕಿತ್ತುಕೊಳ್ಳುವ ಹಂಚಿಕೆ ಅವನದು.

ಇತೀರಿತಃ ಪ್ರಸನ್ನಧೀಃ ಸುಯೋಧನೋ ಬಭೂವ ಹ ।
ಪ್ರಜಗ್ಮತುಶ್ಚ ತಾವುಭೌ ವಿಚಿತ್ರವೀರ್ಯಜಂ ನೃಪಮ್ ॥ ೨೮೯ ॥

ಅ: ಶಕುನಿ ಹೀಗೆನ್ನಲು ದುರ್ಯೋಧನನ ಮನಸ್ಸು ಪ್ರಸನ್ನಗೊಂಡಿತು. ಅವರಿಬ್ಬರೂ ಧೃತರಾಷ್ಟ್ರನ ಬಳಿಗೆ ತೆರಳಿದರು.

ವಿ: ಜೂಜಿಗೆಂದು ಪಾಂಡವರನ್ನು ಆಹ್ವಾನಿಸುವ ಕಾರ್ಯಕ್ಕೆ ಧೃತರಾಷ್ಟ್ರನನ್ನು ಅಣಿಗೊಳಿಸ–ಲೆಂದು ಅವರಿಬ್ಬರೂ ಅವನ ಬಳಿಗೆ ತೆರಳಿದರು ಎಂದರ್ಥ. ಜೂಜಿಗೆ ತಾವು ಆಹ್ವಾನಿಸಿದರೆ ಪಾಂಡವರು ಬರಲಾರರು; ಜನರೂ ಅದನ್ನು ಮೆಚ್ಚಲಾರರು. ಅದಕ್ಕಾಗಿ ಧೃತರಾಷ್ಟ್ರನ ಮೂಲಕ ಅವರಿಗೆ ಆಹ್ವಾನ ನೀಡಿದಲ್ಲಿ ಅವರು ಅವನ ಮಾತನ್ನು ಗೌರವಿಸಿ ತಪ್ಪದೇ ಬರುವರು; ಆಗ ಅವರನ್ನು ಸೋಲಿಸಬೇಕು ಎಂಬುದು ಅವರ ವಿಚಾರವಾಗಿತ್ತು

---

* ದ್ಯೂತಪ್ರಿಯಶ್ಚ ಕೌಂತೇಯೋ ನ ಸ ಜಾನಾತಿ ದೇವಿತುಮ್ ।
ಸಮಾಹೂತಶ್ಚ ರಾಜೇಂದ್ರೋ ನ ಶಕ್ನೋತಿ ನಿವರ್ತಿತುಮ್ ॥ – ಭಾರತ (ಸಭಾ. ೪೮/೧೯)

ಧೃತರಾಷ್ಟ್ರನ ಬಳಿ ಶಕುನಿದುರ್ಯೋಧನರು

ಧೃತರಾಷ್ಟ್ರಮಥೋವಾಚ ದ್ವಾಪರಾಂಶೋಽತಿಪಾಪಕೃತ್ ।
ನಾಸ್ತಿಕ್ಯರೂಪಃ ಶಕುನಿರ್ವಿವರ್ಣಂ ಹರಿಣಂ ಕೃಶಮ್ ॥ ೨೯೦ ॥

ಅ: ದ್ವಾಪರನ ಅವತಾರನೂ, ನಾಸ್ತಿಕ್ಯದ ಸ್ವರೂಪನೂ ಆದ ಶಕುನಿ ಬಳಿಕ ಧೃತರಾಷ್ಟ್ರನಿಗೆ ಹೇಳಿದ : ''ನಿನ್ನ ಮಗ ಸೊರಗಿರುವನು, ಬಿಳಿಚಿಕೊಂಡಿರುವನು, ಬಣ್ಣಗೆಟ್ಟಿರುವನು''.

ವಿ: ಧೃತರಾಷ್ಟ್ರನ ಮುಂದೆ ಶಕುನಿ ಅವನಿಗೆ ದುರ್ಯೋಧನನ ಬಗ್ಗೆ ಅನುಕಂಪ ಬರುವಂತೆ ವಿಕೃತಚಿತ್ರ ನೀಡುವನು. ಧೃತರಾಷ್ಟ್ರನ ಕುರುಡತನದ ದುರ್ಲಾಭ ಪಡೆಯುವ ರೀತಿ ಅವರದಾಗಿತ್ತು

ದುರ್ಯೋಧನಂ ತು ತಚ್ಛ್ರುತ್ವಾ ಕುತ ಇತ್ಯಾಹ ದುರ್ಮನಾಃ ।
ಅಬ್ರೂತಾಂ ತೌ ನೃಪಾಯಾಶು ದ್ವಾಭ್ಯಾಂ ಯನ್ಮಂತ್ರಿತಂ ಪಥಿ ॥ ೨೯೧ ॥

ಅ: ಅದನ್ನು ಕೇಳಿ ಮನನೊಂದ ಧೃತರಾಷ್ಟ್ರ 'ಏತಕೆ?' ಎಂದು ಕೇಳಿದ. ಕೂಡಲೇ ಅವರಿಬ್ಬರೂ ಹಾದಿಯಲ್ಲಿ ವಿಚಾರ ಮಾಡಿದ್ದನ್ನು ಅವನಿಗೆ ತಿಳಿಸಿದರು.

ಧೃತರಾಷ್ಟ್ರನ ಹಿತೋಕ್ತಿ

ಶ್ರುತ್ವೈವ ತನ್ನೇತ್ಯವದತ್ ಸ ಭೂಪತಿ-
ರ್ವಿರೋಧಿ ಧರ್ಮಸ್ಯ ವಿನಾಶಕಾರಣಮ್ ।
ಕುಮಂತ್ರಿತಂ ವೋ ನ ಮಮೈತದಿಷ್ಟಂ
ಸ್ವಬಾಹುವೀರ್ಯಾಪ್ತಮಹಾಶ್ರಿಯೋ ಹಿ ತೇ ॥ ೨೯೨ ॥

ಅ: ಅದನ್ನು ಕೇಳುತ್ತಲೇ ಧೃತರಾಷ್ಟ್ರ ''ಅದಾಗದು'' ಎಂದ. ''ಧರ್ಮವಿರುದ್ಧವಾದುದು ವಿನಾಶಕ್ಕೆ ಕಾರಣ. ನಿಮ್ಮದು ಕೆಟ್ಟ ವಿಚಾರ; ನನಗದು ಇಷ್ಟವಾಗದು. ಪಾಂಡವರು ತಮ್ಮ ಬಾಹುಬಲದಿಂದ ಮಹಾಸಂಪತ್ತನ್ನು ಗಳಿಸಿದವರು''.

---

೨೯೦. ವಿವರ್ಣಂ ಹರಿಣಂ ಕೃಶಮಿತ್ಯತ್ರ ವಿವರ್ಣಂ= ವಿಗತಪೂರ್ವವರ್ಣಂ ''ಹರಿಣಃ ಪಾಂಡರಃ ಪಾಂಡುಃ'' ಇತ್ಯಭಿಧಾನಾತ್ ಕಾಮಲಾವ್ಯಾಧಿಗ್ರಸ್ತವತ್ ಪಾಂಡುವರ್ಣಮ್ ॥ – (ವಾ.)

೨೯೦. ದುರ್ಯೋಧನೋ ಮಹಾರಾಜ ವಿವರ್ಣೋ ಹರಿಣಃ ಕೃಶಃ । – ಭಾರತ (೨/೪೯/೪)

೨೯೨. ಸರ್ವಥಾ ಪುತ್ರ ಬಲಿಭಿರ್ವಿಗ್ರಹೋ ಮೇ ನ ರೋಚತೇ । – ಭಾರತ (೨/೫೬/೧೧)

ವಿ: ಸಹಜವಾಗಿಯೇ ಧೃತರಾಷ್ಟ್ರ ಆ ದ್ಯೂತದ ವಿಚಾರವನ್ನು ಪ್ರತಿಭಟಿಸಿದ. ಅದು ಅನ್ಯಾಯದ ಮಾರ್ಗ, ಅದು ನನಗೆ ಹಿಡಿಸದು, ಪಾಂಡವರದು ನ್ಯಾಯದ ಸಂಪಾದನೆ ಎಂದೆಲ್ಲಾ ವಿವರಿಸಿದ ಎಂದರ್ಥ.

ತ್ವಯಾಽಪಿ ನಿರ್ಜಿತ್ಯ ದಿಶೋ ಮಖಾಗ್ರ್ಯಾಃ
ಕಾರ್ಯಾಃ ಸ್ಪೃಧೋ ಮಾ ಗುಣವತ್ತಮೈಸ್ತೈಃ ।
ವಿಶೇಷತೋ ಭ್ರಾತೃಭಿರಗ್ರ್ಯಪೌರುಷೈ-
ರಿತ್ಯುಕ್ತ ಆಹಾಶು ಸುಯೋಧನಸ್ತಮ್ ॥ ೨೯೩ ॥

ಅ: 'ನೀನೂ ಸಹ ದಿಕ್ಕುಗಳನ್ನು ಗೆದ್ದು ದೊಡ್ಡ ಯಾಗಗಳನ್ನು ಮಾಡು; ಅಂತಹ ಗುಣಶಾಲಿಗಳೊಂದಿಗೆ ಮತ್ಸರಿಸಬೇಡ. ವಿಶೇಷವಾಗಿ ಅವರು ನಿನ್ನ ಸಹೋದರರು; ಮಹಾಪರಾಕ್ರಮಿಗಳೂ ಆದವರು'. ಅವನು ಹೀಗೆನ್ನಲು ದುರ್ಯೋಧನ ಉತ್ತರಿಸಿದ.

ವಿ: ಪಾಂಡವರನ್ನು ಸಹೋದರರು ಎಂದು ಕರೆಯುವ ಮೂಲಕ ಅವರ ಸಹಾಯವನ್ನು ಪಡೆದಲ್ಲಿ ನೀನೂ ಸಹ ಶ್ರೇಷ್ಠ ಸಾಧನೆ ಮಾಡಲು ಸಾಧ್ಯ ಎಂಬ ಸೂಚನೆಯನ್ನೂ ಧೃತರಾಷ್ಟ್ರ ನೀಡಿದ ಎಂದು ತಿಳಿಯಬೇಕು.

ದುರ್ಯೋಧನನ ದುರಾಗ್ರಹ

ಯದಿ ಶ್ರಿಯಂ ಪಾಂಡವಾನಾಂ ನಾಕ್ಷೈರಾಹರ್ತುಮಿಚ್ಛಸಿ ।
ಮೃತಮೇವಾದ್ಯ ಮಾಂ ವಿದ್ಧಿ ಪಾಂಡವೈಸ್ತ್ವಂ ಸುಖೀ ಭವ ॥ ೨೯೪ ॥

ಅ: 'ಪಾಂಡವರ ಸಂಪತ್ತನ್ನು ಜೂಜಾಟದಿಂದ ಕಿತ್ತುಕೊಳ್ಳಲು ನೀನು ಒಪ್ಪದಿದ್ದಲ್ಲಿ ನನ್ನನ್ನು ಈಗಲೇ ಸತ್ತವನೆಂದು ತಿಳಿ; ನೀನು ಪಾಂಡವರೊಂದಿಗೆ ಸುಖದಿಂದಿರು'.

ಯದಿ ಮಜ್ಜೀವಿತಾರ್ಥೀ ತ್ವಮಾನಯಾಶ್ವಿಹ ಪಾಂಡವಾನ್ ।
ಸಭಾರ್ಯಾನ್ ದೇವನಾಯೈವ ನ ಚಾಧರ್ಮೋಽತ್ರ ಕಶ್ಚನ ॥ ೨೯೫ ॥

---

೨೯೩. ಸ್ಪೃಧೋ ಮಾ ಗುಣವತ್ತಮೈರಿತ್ಯತ್ರ ಗುಣವತ್ತಮೈಃ= ಪಾಂಡವೈಃ ಮಾ ಸ್ಪೃಧಃ= ಸ್ಪರ್ಧಾಂ ಮಾ ಕರೋಃ ॥ – (ವಾ.)

ಅ: 'ನಾನು ಬದುಕಬೇಕೆಂದು ನೀನು ಬಯಸುವೆಯಾದಲ್ಲಿ ಒಡನೆಯೇ ಇಲ್ಲಿಗೆ ಜೂಜಾಟಕ್ಕೆಂದು ಪಾಂಡವರನ್ನು ಸಪತ್ನೀಕರನ್ನಾಗಿ ಕರೆಸು; ಇದರಲ್ಲಿ ಯಾವ ಅಧರ್ಮವೂ ಇಲ್ಲ'.

ವಿ: ಇದು ದುರ್ಯೋಧನ ಧೃತರಾಷ್ಟ್ರನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಉಪಯೋಗಿಸುತ್ತಿದ್ದ ತಂತ್ರ. ತಂದೆಯ ಕುರುಡುತನ, ಪುತ್ರವ್ಯಾಮೋಹ ಮೊದಲಾದವುಗಳ ದುರ್ಲಾಭ ಪಡೆಯ–ಬಯಸುವ ಅವನ ವರ್ತನೆ ಮುಂದೆ ಕೆಟ್ಟ ಮಕ್ಕಳಿಗೆಲ್ಲಾ ಮೇಲ್ಪಂಕ್ತಿಯಾಯಿತೆನ್ನಬಹುದು. ತಂದೆ ತಾಯಿಗಳಿಂದೂ ಮಕ್ಕಳ ಬಾಯಿಂದ ಅವರ ಸಾವಿನ ವಿಚಾರವನ್ನು ಕೇಳಲು ಸರ್ವಥಾ ಇಚ್ಛಿಸರು ಎಂಬುದನ್ನು ಅವನು ಗುರುತಿಸಿ ಇಂತಹ ಕೆಟ್ಟ ಯೋಜನೆಗಳಿಗೆ ಅವರ ಸಮ್ಮತಿ ಪಡೆಯುತ್ತಿದ್ದ.

ವೇದಾನುಜೀವಿನೋ ವಿಪ್ರಾಃ ಕ್ಷತ್ರಿಯಾಃ ಶಸ್ತ್ರಜೀವಿನಃ ।
ತ್ಕುಟ್ಯತೇ ಯೇನ ಶತ್ರುಶ್ಚ ತಚ್ಛಸ್ತ್ರಂ ನೈವ ಚೇತರತ್ ॥ ೨೯೬ ॥

ಅ: ''ವಿಪ್ರರು ವೇದಗಳಿಂದ ಜೀವಿಸುವರು, ಕ್ಷತ್ರಿಯರು ಶಸ್ತ್ರಗಳಿಂದ ಬದುಕುವರು, ಯಾವುದು ಶತ್ರುವನ್ನು ನಾಶಗೊಳಿಸುವುದೋ ಅದೇ ಶಸ್ತ್ರ; ಬೇರೊಂದಲ್ಲ''.

ವಿ: ೧) ದುರ್ಯೋಧನ ದ್ಯೂತವನ್ನೂ ಸಹ ಶಸ್ತ್ರ ಎಂದು ಕರೆಯುವ ದುಸ್ಸಾಹಸಕ್ಕೆ ಕೈಹಾಕಿರುವನು. ಅವನ ವಾದದಂತೆ ಶಸ್ತ್ರ ಎಂದರೆ ಶತ್ರುವನ್ನು ಯಾವುದೇ ರೀತಿಯಲ್ಲಿ ನಾಶ ಮಾಡುವ ಸಾಧನ. ಜೂಜು ಈಗ ಪಾಂಡವರ ನಾಶಕ್ಕೆ ಸಾಧನವಾಗಿರುವುದರಿಂದ ಅದೂ ಶಸ್ತ್ರವೇ.

ದ್ಯೂತಂ ಪಾನಂ ಸ್ತ್ರಿಯಃ ಸೂನಾ ಯತ್ರಾಧರ್ಮಶ್ಚತುರ್ವಿಧಃ ।
ಪುನಶ್ಚ ಯಾಚಮಾನಾಯ ಜಾತರೂಪಮದಾತ್ ಪ್ರಭುಃ ।
ತತೋಽನೃತಂ ಮದಂ ಕಾಮಂ ರಜೋ ಚ ಪಂಚಮಮ್ ॥
ಅಮೂನಿ ಪಂಚ ಸ್ಥಾನಾನಿ ಹ್ಯಧರ್ಮಪ್ರಭವಃ ಕಲಿಃ ॥– ಭಾಗವತ (೧/೧೭/೩೮-೪೦)

೨) ಕ್ಷತ್ರಿಯ ಶಸ್ತ್ರಜೀವಿ, ಆದ್ದರಿಂದ ದ್ಯೂತವೂ ಅವನಿಗೆ ಧರ್ಮವೇ ಎಂಬುದು ಅವನ ವಾದ. ಕಲಿಯುಗದ ಜನ ಜೂಜು ಮೊದಲಾದವುಗಳನ್ನೂ ಸಹ ಈ ಅರ್ಥದಲ್ಲಿಯೇ ಜೀವನೋಪಾಯ ಎಂದು ಸಮರ್ಥಿಸುವ ರೀತಿಗೂ ಇವನ ಧೋರಣೆಯೇ ಕಾರಣ ಎಂದು ತಿಳಿಯಬೇಕು.

---

೨೯೬. ಶಾಸ್ಯತೇ ಯೇನ ವೈರೀ ತಚ್ಛಸ್ತ್ರಮಿತಿ ಸಹಜವೃತ್ತಿಂ ವಿಹಾಯ ಸ್ವಾನುಕೂಲವೃತ್ತಿಮಾಹ । ತೃಟ್ಯತ ಇತಿ ''ಅಪ್ಯಕ್ಷರಸಾಮ್ಯಾನ್ನಿರ್ಬ್ರೂಯಾತ್'' ಇತಿ ವಚನಾತ್ ''ತೃಟ ಚ್ಛೇದನ'' ಇತಿ ಧಾತೋಃ ಕರ್ಮಣಿ ಡಪ್ರತ್ಯಯೇ ಕೃತೇ ಶಃ ಶತ್ರುಃ ತೃಟ್ಯತೇ ಯೇನ ತಚ್ಛಸ್ತ್ರಂ ನಿರುಕ್ತತ್ವಾತ್ಸಕಾರಾಗಮ ಇತಿ ದುರ್ಭಾವಃ ॥ –(ವಾ.)

ಅತಃ ಸ್ವಧರ್ಮ ಏವಾಯಂ ತವಾಪಿ ಸ್ಯಾತ್ ಫಲಂ ಮಹತ್ ।
ಇತ್ಯುಕ್ತೋ ಮಾ ಫಲಂ ಮೇಽಸ್ತು ತವೈವಾಸ್ತ್ವಿತಿ ಸೋಽಬ್ರವೀತ್ ೨೯೭

ಅ: 'ಆದ್ದರಿಂದ ಇದು ಸ್ವಧರ್ಮವೆ; ನಿನಗೂ ಇದರಿಂದ ಮಹತ್ತಾದ ಫಲ ಲಭಿಸುವುದು'. ಅವನು ಹೀಗೆನ್ನಲು ಧೃತರಾಷ್ಟ್ರ ನುಡಿದ 'ನನಗೆ ಫಲ ಬೇಡ, ನಿನಗೇ ಇರಲಿ'.

ವಿ: ದುರ್ಯೋಧನನ ಇಂತಹ ಮಾತುಗಳೂ ಸಹ ಧೃತರಾಷ್ಟ್ರನನ್ನು ಪೂರ್ಣವಾಗಿ ದಾರಿ ತಪ್ಪಿಸಲು ಸಮರ್ಥವಾಗುತ್ತಿಲ್ಲ, ಅದಕ್ಕೆ ಅವನು ಸ್ವರೂಪತಃ ಸುಜೀವಿಯಾಗಿದ್ದುದೇ ಕಾರಣ.

ಧೃತರಾಷ್ಟ್ರನ ಪುತ್ರವ್ಯಾಮೋಹ

ಏವಂ ಬ್ರುವನ್ನಪಿ ನೃಪ ಆವಿಷ್ಟಃ ಕಲಿನಾ ಸ್ವಯಮ್ ।
ಪುತ್ರಸ್ನೇಹಾಚ್ಚ ವಿದುರಮಾದಿಶತ್ ಪಾಂಡವಾನ್ ಪ್ರತಿ ॥ ೨೯೮ ॥

ಅ: ಧೃತರಾಷ್ಟ್ರ ಹೀಗೆ ಹೇಳಿದರೂ ಅವನು ಕಲಿಯ ಆವೇಶಕ್ಕೆ ಒಳಗಾಗಿ, ಪುತ್ರ-ವ್ಯಾಮೋಹದಿಂದಾಗಿ ಪಾಂಡವರ ಬಳಿಗೆ ವಿದುರನನ್ನು ಕಳುಹಿಸಿದ.

ವಿ: ಆದರೂ ಧೃತರಾಷ್ಟ್ರ ಅವನ ಮಾತನ್ನು ಕೇಳಲು ಸಿದ್ಧನಾಗಲು ಅವನೊಳಗೆ ಕಲಿ ಪ್ರವೇಶವಾಗಿದ್ದುದೆ ಕಾರಣವಾಯಿತು. ಧೃತರಾಷ್ಟ್ರನೊಳಗೆ ಕಲಿ ಪ್ರವೇಶಿಸಿದ್ದರಿಂದ ಕಲಿಯ ಅವತಾರನಾದ ದುರ್ಯೋಧನನ ಮೇಲೆ ಅವನಿಗೆ ಪುತ್ರ ವ್ಯಾಮೋಹ ಹುಟ್ಟಿತು. ಅದರಿಂದಾಗಿ ಅವನು ಅವನ ಮಾತುಗಳನ್ನು ಒಪ್ಪದಿದ್ದರೂ ಅವನ ಅಭಿಲಾಷೆಯನ್ನು ಈಡೇರಿಸಲು ಬಯಸಿ ಪಾಂಡವರನ್ನು ಕರೆತರಲೆಂದು ವಿದುರನನ್ನು ಇಂದ್ರಪ್ರಸ್ಥಕ್ಕೆ ಕಳುಹಿಸಿಕೊಟ್ಟ ಎಂದರ್ಥ.

ಆವಿವೇಶ ಕಲಿಸ್ತಂ ಹಿ ಯದಾ ಪುತ್ರತ್ವಸಿದ್ಧಯೇ ।
ಅಂಶೇನ ತತ ಆರಭ್ಯ ನೈವಾಸ್ಮಾದಪಜಗ್ಮಿವಾನ್ ॥ ೨೯೯ ॥

---

೨೯೯. ಆವಿವೇಶ ಕಲಿಸ್ತಂ ಹಿ ಇತ್ಯತ್ರ ಪ್ರಥಮಂ ಪಿತೃಪ್ರವೇಶಃ ಪಶ್ಚಾನ್ಮಾತೃಪ್ರವೇಶ ಇತಿ ನಿಯಮಾತ್ ಅಂಶೇನ ಪುತ್ರತ್ವಸಿದ್ಧಯೇ ಯದಾ ಕಲಿಃ ತಂ ಧೃತರಾಷ್ಟ್ರಂ ಆವಿವೇಶ ತತ ಆರಭ್ಯ ಪುನರಂಶಾಂತರೇಣ ಅಸ್ಮಾನ್ನಾಪಜಗ್ಮಿವಾನ್ ಏಕಾಂಶೇನ ಪುತ್ರೋಽಭೂತ್ ಪುನರಂಶಾಂತರೇಣ ಧೃತರಾಷ್ಟ್ರಬುದ್ಧಿಮನ್ಯಥೀಕರ್ತುಂ ತತ್ರೈವ ಸ್ಥಿತವಾನಿತಿ ಭಾವಃ ॥ – (ವಾ.)

೨೯೯. ಪ್ರಥಮಂ ಪಿತೃಪ್ರವೇಶಃ ಪಶ್ಚಾನ್ಮಾತೃಪ್ರವೇಶ ಇತ್ಯಾದಿನಿಯಮಾತ್ತಂ ಪಿತೃಭೂತಂ ಆವಿಶತ್ ತತ ಆರಭ್ಯ ಯಾವದ್ಯದಾ ಪುರಂ ಪರಿತ್ಯಜ್ಯೈವ ಧೃತರಾಷ್ಟ್ರೋ ವನಂ ಪ್ರವಿವೇಶ ತಾವತ್ಪರ್ಯಂತಂ ಅಸ್ಮಾದ್ಧೃತರಾಷ್ಟ್ರಾತ್ ಅಂಶೇನ ನೈವಾಪಜಗ್ಮಿವಾನ್। – (ಜ.)

ಅ: ಅವನೊಳಗೆ ಕಲಿ ಪುತ್ರತ್ವ ಸಿದ್ಧಿಗಾಗಿ ಒಂದಂಶದಿಂದ ಆವೇಶಿಸಿದ್ದ. ಅಂದಿನಿಂದ ಅವನನ್ನು ಬಿಟ್ಟು ತೆರಳಿರಲೇ ಇಲ್ಲ.

ವಿ: ಧೃತರಾಷ್ಟ್ರನೊಳಗೆ ಪುತ್ರತ್ವಸಿದ್ಧಿಗಾಗಿ ಆವೇಶಿಸಿದ ಕಲಿ ಬಹುದಿನಗಳ ಕಾಲ ಅವನಲ್ಲಿಯೇ ನೆಲೆಸಿದ್ದ; ಅವನನ್ನು ತೊರೆದು ಹೋಗಿರರಲಿಲ್ಲ.

ಯಾವತ್ ಪುರಂ ಪರಿತ್ಯಜ್ಯ ವನಮೇವ ವಿವೇಶ ಹ ।
ತದಂತರಾ ತತಸ್ತಸ್ಯ ಪಾಪಯುಕ್ತಂ ಮನೋಽಭವತ್ ॥ ೩೦೦ ॥

ಅ: ಅವನು ಹಸ್ತಿನಾಪುರವನ್ನು ಬಿಟ್ಟು ಕಾಡಿಗೆ ತೆರಳುವವರೆಗೂ ಅವನ ಮನಸ್ಸು ಅದರಿಂದಾಗಿ ಪಾಪಬುದ್ಧಿಯಿಂದ ಕೂಡಿತ್ತು.

ವಿ: ಹಾಗೆ ಪ್ರವೇಶ ಮಾಡಿದ್ದ ಕಲಿ ಧೃತರಾಷ್ಟ್ರ ಮುಂದೆ ಆಶ್ರಮವಾಸಿಕಪರ್ವದಲ್ಲಿ ಭೀಮ–ನಿಂದ ಶುದ್ಧವೈರಾಗ್ಯಭಾವವನ್ನು ತಳೆದು, ವನಕ್ಕೆ ತೆರಳುವವರೆಗೂ ಅವನೊಳಗೇ ನೆಲೆಸಿದ್ದರಿಂದ ಅಲ್ಲಿಯ ವರೆಗೂ ಅವನ ಬುದ್ಧಿ ದೋಷಪೂರಿತವಾಗಿತ್ತು ಎಂದರ್ಥ (೩೧/೧೨–೫೫).

ವಿದುರನ ಹಿತೋಕ್ತಿ

ನ್ಯವಾರಯತ್ ತಂ ವಿದುರೋ ಮಹಾಮತಿಃ
ಪಾಪಂ ಕುಲಸ್ಯಾಪಿ ವಿನಾಶಕೋಽಯಮ್ ।
ಸಮುದ್ಯಮೋ ನಾತ್ರ ವಿಚಾರ್ಯಮಸ್ತಿ
ಕೃಥಾ ನ ತಸ್ಮಾದಯಶಶ್ಚ ತೇ ಸ್ಯಾತ್ ॥ ೩೦೧ ॥

ಅ: ಮಹಾಪ್ರಾಜ್ಞನಾದ ವಿದುರ ಧೃತರಾಷ್ಟ್ರನನ್ನು ತಡೆದ. ''ಈ ಕಾರ್ಯ ಮಹಾಪಾಪ; ಕುಲಕ್ಕೂ ನಾಶಕರ; ಈ ಬಗ್ಗೆ ಸಂದೇಹವೇ ಇಲ್ಲ. ಇದನ್ನು ನೀನು ಮಾಡದಿರು; ನಿನಗೆ ಅಪಕೀರ್ತಿಯೂ ಒದಗುವುದು''.

---

೩೦೦. ಸ ಧೃತರಾಷ್ಟ್ರಃ ಯಾವತ್ಪುರಂ ಪರಿತ್ಯಜ್ಯ= ವಯಸೋಽಂತೇ ವನಂ= ತಪೋವನಂ ವಿವೇಶ। ತದಂತರಾ= ತನ್ಮಧ್ಯೇ ॥ –(ವಾ.)

೩೦೧. ''ಬಹುಲಂ ಛಂದಸ್ಯಮಾಡ್‌ಯೋಗೇಽಪಿ'' ಇತಿ ವಚನಾತ್ ನ ಕೃಥಾಃ ನಾಕೃಥಾಃ ॥ –(ವಾ.)

ವಿ: ಎಂದಿನಂತೆ ವಿದುರ ಧೃತರಾಷ್ಟ್ರನಿಗೆ ಹಿತೋಕ್ತಿಯನ್ನು ನುಡಿದು ದ್ಯೂತದಂತಹ ಹೀನ–ಕಾರ್ಯಕ್ಕೆ ತೊಡಗದಿರಲು ಎಚ್ಚರಿಸಿದ. ಅದರಿಂದ ಪಾಪಪ್ರಾಪ್ತಿ, ಕುಲನಾಶ, ಕೀರ್ತಿನಾಶ ಎಂಬ ಅನರ್ಥ ಪರಂಪರೆ ಒದಗುವುದನ್ನು ತಿಳಿಸಿದ.

ಇತಿ ಬ್ರುವಾಣಂ ಕಲಹೋಽತ್ರ ನ ಸ್ಯಾ-
ನ್ನಿವಾರಯಾಮೋ ವಯಮೇವ ಯಸ್ಮಾತ್ ।
ದ್ರಷ್ಟುಂ ಸುತಾನ್ ಕ್ರೀಡತ ಏಕಸಂಸ್ಥಾ-
ನಿಚ್ಛಾಮಿ ಪಾರ್ಥಾಂಶ್ಚ ಸುಯೋಧನಾದೀನ್ ॥ ೩೦೨ ॥

ಅ: ಅವನು ಹೀಗೆನ್ನಲು ಧೃತರಾಷ್ಟ್ರ ನುಡಿದ 'ಇಲ್ಲಿ ಕಲಹವೇನೂ ಒದಗದು, ನಾವೇ ಅದನ್ನು ತಡೆಯೋಣ. ಮಕ್ಕಳಾದ ಕೌರವ ಪಾಂಡವರೆಲ್ಲಾ ಒಂದೆಡೆ ಸೇರಿ ಆಡುವುದನ್ನು ನಾನು ನೋಡಬಯಸುವೆ'

ವಿ: ದ್ಯೂತದಿಂದ ಕಲಹವುಂಟಾಗುವ ಪ್ರಸಂಗ ಬಂದಲ್ಲಿ ಭೀಷ್ಮಾದಿಗಳು, ತಾನು, ವಿದುರ ಎಲ್ಲರೂ ಸೇರಿ ಅದನ್ನು ತಡೆದರಾಯಿತು ಎಂದು ಅವನ ಭಾವ. ಆದರೆ ಮುಂದೆ ಅದು ನಡೆದಾಗ ವಿದುರನ ಹೊರತು ಅವರಾರೂ ಹಾಗೆ ತಡೆಯಲು ಮುಂದಾಗಲಿಲ್ಲ ಎಂಬುದು ಗಮನಾರ್ಹ.

ವಿದುರನ ಮೂಲಕ ದ್ಯೂತಕ್ಕೆ ಆಹ್ವಾನ

ಅತಃ ಕ್ಷಿಪ್ರಮುಪಾನೇಯಾಃ ಪಾರ್ಥಾ ಇತಿ ಬಲೋದಿತಃ ।
ಯಯೌ ಸ ವಿದುರಃ ಪಾರ್ಥಾನ್ ದ್ವಾರಕಾಂ ಕೇಶವೇ ಗತೇ ॥ ೩೦೩ ॥

ಅ: 'ಆದ್ದರಿಂದ ಬೇಗನೇ ಪಾಂಡವರನ್ನು ಕರೆದುತಾ' ಎಂದು ಧೃತರಾಷ್ಟ್ರ ಒತ್ತಾಯಿಸಿ ಹೇಳಿದಾಗ ವಿದುರ ಪಾಂಡವರ ಬಳಿಗೆ ತೆರಳಿದ. ಆ ವೇಳೆಗೆ ಕೃಷ್ಣ ಅಲ್ಲಿಂದ ದ್ವಾರಕೆಗೆ ತೆರಳಿದ್ದ.

ವಿ: ವಿದುರ ಹಾಗೆ ಇಂದ್ರಪ್ರಸ್ಥಕ್ಕೆ ತೆರಳುವ ವೇಳೆಗೆ ಕೃಷ್ಣ ಅಲ್ಲಿಂದ ದ್ವಾರಕೆಗೆ ತೆರಳಿದ್ದ ಎಂದರ್ಥ. ಹಾಗೆ ತೆರಳಲು ಒದಗಿದ ಕಾರಣವನ್ನು ಮುಂದಿನ ಶ್ಲೋಕಗಳಲ್ಲಿ ತಿಳಿಸಿರುವರು. ಕೃಷ್ಣ ಇನ್ನು ಇಂದ್ರಪ್ರಸ್ಥದಲ್ಲೇ ಇದ್ದಿದ್ದರೆ, ಅವನು ಅದನ್ನೇಕೆ ತಡೆಯಲಿಲ್ಲ ಎಂಬ ಪ್ರಶ್ನೆಗೆ ಇದು ಉತ್ತರ.

ಸಾಲ್ವನ ತಾಮಸ ತಪಸ್ಸು

ಗತೇ ಹಿ ಪಾರ್ಥಸನ್ನಿಧೇಃ ಸುಯೋಧನೇ ತು ನಾರದಃ ।
ಶಸಂಶ ಧರ್ಮಸೂನುನಾ ಪ್ರಚೋದಿತೋಽರಿಮಾಗತಮ್ ॥ ೩೦೪ ॥

ಅ: ದುರ್ಯೋಧನ ಪಾಂಡವರ ಬಳಿಯಿಂದ ತೆರಳಿದ ಮೇಲೆ ನಾರದಮುನಿ ಧರ್ಮರಾಜ ಕೇಳಿದಾಗ ಶತ್ರುವೊಬ್ಬ ದ್ವಾರಕೆಗೆ ಬಂದದ್ದನ್ನು ತಿಳಿಸಿದರು.

ವಿ: ಸಭೆಗೆ ಆಗಮಿಸಿದ ನಾರದರನ್ನು ಧರ್ಮರಾಜ ಏನು ನಡೆಯುತ್ತಿದೆ ಎಂದು ಕೇಳಿದಾಗ ಅವರು ಸಾಲ್ವ ದ್ವಾರಕೆಯ ಮೇಲೆ ದಂಡೆತ್ತಿ ಹೊರಟಿರುವ ವಿಚಾರವನ್ನು ತಿಳಿಸಿದರು ಎಂದರ್ಥ.

ಕ ಉದ್ಯಮೀ ನೃಪೇಷ್ವಿತಿ ಪ್ರಪೃಷ್ಟ ಆಹ ನಾರದಃ ।
ಸ ಸೌಭರಾಡ್ ವರಂ ಶಿವಾದವಾಪ ವೃಷ್ಣಿನಿರ್ಜಯಮ್ ॥ ೩೦೫ ॥

ಅ: ರಾಜರಲ್ಲಿ ಯುದ್ಧದ ತಯಾರಿಯಲ್ಲಿ ಯಾರಿರುವರು ಎಂದು ಧರ್ಮರಾಜ ಕೇಳಲು ನಾರದರು ಹೇಳಿದರು 'ಸೌಭರಾಜನಾದ ಸಾಲ್ವ ಶಿವನಿಂದ ಯಾದವರನ್ನು ಜಯಿಸುವ ವರ ಪಡೆದ'

ಪಾಂಸುಮುಷ್ಟಿಂ* ಸಕೃದ್ಗ್ರಾಸೀ ಬಹೂನಬ್ದಾಂಸ್ತಪಶ್ಚರನ್ ।
ಆಜಗಾಮ ಹರಾದಾಪ್ಯ ವರಂ ಕೃಷ್ಣಜಯೇ ಪುನಃ ॥ ೩೦೬ ॥

ಅ: ''ಅವನು ದಿನಕ್ಕೊಮ್ಮೆ ಒಂದು ಮುಷ್ಟಿ ಮಣ್ಣನ್ನು ತಿನ್ನುತ್ತಾ ಅನೇಕ ವರ್ಷಗಳ ಕಾಲ ತಪಸ್ಸು ಮಾಡಿದ. ಶಿವನಿಂದ ಹಾಗೆ ಕೃಷ್ಣನನ್ನು ಜಯಿಸುವ ವರವನ್ನು ಪಡೆದು ಬಂದಿರುವನು''.

ವಿ: ೧) ಸಾಲ್ವನ ತಪಸ್ಸಿನ ರೀತಿಯೂ ರಾಕ್ಷಸ ರೀತಿಯದೇ ಆಗಿತ್ತು ಮಣ್ಣನ್ನು ತಿನ್ನುತ್ತಾ ಮಾಡಿದ ಅವನ ತಪಸ್ಸು ಉಗ್ರಗಾಮಿಗಳ ರೀತಿಯ ಕೆಟ್ಟ ತಪಸ್ಸಾಗಿತ್ತು ಕೃಷ್ಣದ್ವೇಷಿಗಳಿಗೆ ಮಣ್ಣು ತಿನ್ನುವುದೇ ಗತಿ ಎಂಬ ಅರ್ಥವೂ ಇದರಿಂದ ಸೂಚಿತ. ಶಿವನಿಂದ ಅವನು ಪಡೆದದ್ದು ಸಮಸ್ತ ಯಾದವರನ್ನು ಜಯಿಸುವಂತಹ ವರ, ಕೃಷ್ಣನೂ ಒಬ್ಬ ಯಾದವನಾದ್ದರಿಂದ ಅವನನ್ನೂ ಜಯಿಸುವೆ ಎಂಬ ಭ್ರಮೆ ಅವನದಾಗಿತ್ತು ಎಂಬ ಅರ್ಥವೂ ಇದರಿಂದ ಸೂಚಿತ.

೨) ಅವನು ಪಾಂಡವರ ದಿಗ್ವಿಜಯಕಾಲದಲ್ಲಿ ತಪಸ್ಸಿಗೆಂದು ತೆರಳಿದ್ದ. ಇಲ್ಲದಿದ್ದಲ್ಲಿ ಸೋಲುವವರ ಸಾಲಿಗೆ ಅವನೂ ಸೇರಿರುತ್ತಿದ್ದ ಎಂಬುದನ್ನು ಗಮನಿಸಬೇಕು.

---

೩೦೫. ಉದ್ಯಮೀ ಉದ್ಯೋಗೀ ವಿಜಯಾಯೇತಿ ಶೇಷಃ। ..... ವೃಷ್ಣಿನಿರ್ಜಯೇ ಇತಿಪಾಠೇ ಸತ್ಸಪ್ತಮೀ ಪ್ರಾಪ್ತೇ ಸತೀತಿ ಶೇಷಃ । – (ಜ.)

೩೦೬. ಪಾಂಸುಮುಷ್ಟಿಂ ಸಕೃದ್ಗ್ರಾಸೀತ್ಯತ್ರ ಸಕೃತ್ ಗ್ರಸತ ಇತಿ ಸಕೃದ್‌ಗ್ರಾಸೀತಿ ಸಮಸ್ತಂ ಪದಮ್। ತೇನ ದ್ವಿತೀಯೋಪಪತ್ತಿಃ ॥ – (ವಾ.)

* ಇತಿ ಮೂಢಃ ಪ್ರತಿಜ್ಞಾಯ ದೇವಂ ಪಶುಪತಿಂ ಪ್ರಭುಮ್ ।
ಆರಾಧಯಾಮಾಸ ನೃಪ ಪಾಂಸುಮುಷ್ಟಿಂ ಸಕೃದ್ಗ್ರಸನ್ ॥ – ಭಾಗವತ (೧೦/೭೬/೪)

ಸ ಶ್ರುತ್ವಾ ಮಾಗಧವಧಂ ದಿಶಾಂ ವಿಜಯಮೇವ ಚ ।
ರಾಜಸೂಯಂ ಕ್ರತುಂ ಚೈವ ಶಿಶುಪಾಲವಧಂ ತಥಾ ॥ ೩೦೭ ॥

ಅ: ಆ ಸಾಲ್ವ ಜರಾಸಂಧನ ವಧೆಯನ್ನೂ, ಪಾಂಡವರ ದಿಗ್ವಿಜಯವನ್ನೂ, ರಾಜಸೂಯ ಯಾಗವನ್ನೂ, ಶಿಶುಪಾಲನ ವಧೆಯನ್ನೂ ಕೇಳಿದ.

ವಿ: ಅವನು ಬರುವ ವೇಳೆಗೆ ಜರಾಸಂಧವಧೆಯಿಂದ ಪ್ರಾರಂಭಿಸಿ ಶಿಶುಪಾಲವಧೆಯವರೆಗಿನ ಪಾಂಡವರ ವಿಜಯಕಾರ್ಯ ನಡೆದಿತ್ತು, ಅದನ್ನೆಲ್ಲಾ ಕೇಳಿದ ಅವನು ಕೋಪದಿಂದ ಯಾದವರ ಮೇಲೆ ಯುದ್ಧಕ್ಕೆ ತೆರಳಿದ ಎಂದರ್ಥ.

ಯದೂನ್ ಪ್ರತ್ಯುದ್ಯಮಂ ತೂರ್ಣಂ ಕರೋತೀತಿ ನಿಶಮ್ಯ ತತ್।
ಸಮೈಕ್ಷದ್ಧರ್ಮಜಃ ಕೃಷ್ಣಮುಖಶೀತಾಂಶುಮಂಡಲಮ್ ॥ ೩೦೮ ॥

ಅ: ''ಅವನು ಯಾದವರ ಮೇಲೆ ಬೇಗನೆ ದಾಳಿ ಮಾಡಲಿರುವನು'' ಎಂಬುದನ್ನು ಕೇಳಿ ಧರ್ಮರಾಜ ಕೃಷ್ಣನ ಮುಖವೆಂಬ ಚಂದ್ರಮಂಡಲವನ್ನು ನೋಡಿದ.

ವಿ: ಸಾಲ್ವನು ಯಾದವರ ಮೇಲೆ ದಾಳಿ ಮಾಡುವ ವಿಚಾರವನ್ನು ಕೇಳಿದ ಧರ್ಮರಾಜ ಪ್ರತಿಕ್ರಿಯೆಗಾಗಿ ಕೃಷ್ಣನ ಮುಖವನ್ನು ನೋಡಿದ. ಕೃಷ್ಣನ ಮುಖ ಚಂದ್ರಮಂಡಲದಂತೆ ಪ್ರಶಾಂತವಾಗಿತ್ತು, ಅದರಿಂದ ಸಾಲ್ವನ ದಾಳಿಯ ವಾರ್ತೆಯಿಂದಾಗಿ ಸರ್ವಸಮರ್ಥನಾದ ಕೃಷ್ಣ ಯಾವುದೇ ರೀತಿಯ ಕಳವಳಕ್ಕೂ ಒಳಗಾಗಿರಲಿಲ್ಲ ಎಂಬುದು ಜಗತ್ತಿಗೇ ತಿಳಿಯುವಂತಿತ್ತು ಎಂದರ್ಥ.

ಸಾಲ್ವನನ್ನು ಎದುರಿಸಲು ಪ್ರದ್ಯುಮ್ನಾದಿಗಳ ಪ್ರಯಾಣ

ಅಸ್ತ್ವಿತ್ಯುಕ್ತ್ವಾ ತು ಸ ಗೋವಿಂದಃ ಪ್ರೇಷಯಾಮಾಸ ಯಾದವಾನ್।
ಪ್ರದ್ಯುಮ್ನಾದೀನ್ ದಿನೈಃ ಕೈಶ್ಚಿತ್ ಸ್ವಯಂ ಚಾಗಾತ್ ಸಹಾಗ್ರಜಃ ॥೩೦೯॥

---

೩೦೮. ನಾರದೇನ ಬಹುಧಾ ಕ್ರೋಧಜನಕವಚನೇ ಉಕ್ತೇಽಪಿ ಕ್ರೀಡಾಮಾತ್ರೇಣ ಸಕಲಜಗತ್ಸಂಹರಣಶಕ್ತಸ್ಯ ಕೃಷ್ಣಸ್ಯ ಕ್ರೋಧೋ ನಾಭೂದಿತಿ ಸೂಚನಾಯ **ಕೃಷ್ಣಮುಖಶೀತಾಂಶುಮಂಡಲ**ಮಿತ್ಯಬ್ರವೀತ್। ತದುಕ್ತಂ ಭಾಗವತೇ 'ಕಿಂಚಿತ್ ಪ್ರಹಸ್ಯಾಸ್ತು ನಾಮೇತ್ಯಾಹ ಸಾ ಹಿ ಮಹಾತ್ಮತಾ' ಇತಿ। ತಸ್ಮಾದೇವಾಚಾರ್ಯೈರಸ್ತ್ವಿತ್ಯುಕ್ತ್ವೇತ್ಯುಕ್ತಮ್। **ಅತೋ ನ ಕೇವಲಮರ್ಥತಃ ಸಾಮ್ಯಂ ಕಿಂತು ಶಬ್ದತೋಽಪಿ ಗುರುಶಿಷ್ಯಗ್ರಂಥಯೋಃ ಸಾಮ್ಯಮ್। ಕ್ವಚಿತ್ ಕ್ವಚಿತ್ ಗುರುವಾಕ್ಯರತ್ನೈಃ ಸಹ ಸುವಾಕ್ಯಹೈಮಮಣಿಮಾಲಾಮಲಂಕುರುತೇ ಭಗವಾನಾಚಾರ್ಯ ಇತಿ ಶ್ಲೇಯಮ್** ॥ –(ವಾ.)

೩೦೮. ಮುಖಸ್ಯ ಚಂದ್ರಬಿಂಬದೃಷ್ಟಾಂತೇನ ಕೃಷ್ಣಸ್ಯಾನಾಕುಲತ್ವಂ ಸೂಚಿತಮ್। –(ಜ.)

---

* ವಿ. ಭಾಗವತ (೧೦/೮೪/೨೭)

ಅ: 'ಆಗಲಿ' ಎಂದು ನುಡಿದು ಕೃಷ್ಣ ಪ್ರದ್ಯುಮ್ನ ಮೊದಲಾದ ಯಾದವರನ್ನು ಕಳುಹಿಸಿ ಕೊಟ್ಟ. ಕೆಲವು ದಿನಗಳ ಬಳಿಕ ಬಲರಾಮನೊಂದಿಗೆ ತಾನೂ ತೆರಳಿದ.

ವಿ: ೧) ಭಾಗವತಪುರಾಣದಲ್ಲಿ ಬಂದಿರುವಂತೆ 'ಕಿಂಚಿತ್ ಪ್ರಹಸ್ಯಾಸ್ತು ನಾಮೇತ್ಯಾಹ ಸಾ ಹಿ ಮಹಾತ್ಮತಾ' (೧೦/೬೪/೨೭) ಎಂಬಲ್ಲಿನ 'ಅಸ್ತು' ಎಂಬ ಪದವನ್ನೇ ಬಳಸುವ ಮೂಲಕ ಶ್ರೀಮದಾಚಾರ್ಯರು ತಾವು ಅರ್ಥತಃ ಮಾತ್ರವಲ್ಲದೇ ಶಬ್ದತಃ ಸಹ ಗುರುಗಳಾದ ವೇದವ್ಯಾಸ–ರನ್ನು ಅನುಸರಿಸುವವರು ಎಂಬುದನ್ನು ಸ್ಫುಟಪಡಿಸಿರುವರು.

೨) ವ್ಯಾಸರ ಮಾತು ರತ್ನಗಳಾದರೆ ಅವುಗಳನ್ನು ಜೋಡಿಸುವ ಮಧ್ವರ ಮಾತುಗಳು ಚಿನ್ನ. ಮಧ್ವರ ಕೃತಿ ಅಪೂರ್ವವಾದ ರತ್ನಮಯ ಸುವರ್ಣಮಾಲಿಕೆ ಎಂಬ ಅಪೂರ್ವ ವಿವರಣೆ ವಾದಿರಾಜೀಯದಲ್ಲಿದೆ. ಹಾಗೆ ತೆರಳಿದ ಕೃಷ್ಣಸಾಲ್ವನನ್ನು ಸಂಹರಿಸಿದ ವಿವರ ೨೨ನೇ ಅಧ್ಯಾಯದಲ್ಲಿ ಬಂದಿದೆ (೨೨/೨೯, ೫೧).

ಜೂಜಿಗೆ ನಡೆದ ಧರ್ಮಮೂರ್ತಿ

ವಿದುರಸ್ತು ತತೋ ಗತ್ವಾ ಧರ್ಮರಾಜಮಥಾಹ್ವಯತ್ ।
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚ ಸ ಧರ್ಮರಾಟ್ ।
ಸಾರ್ಧಂ ಮಾತ್ರಾ ಭ್ರಾತೃಭಿಶ್ಚ ಕೃಷ್ಣಯಾ ಚ ಯಯೌ ದ್ಯೂತಮ್ ೩೧೦

ಅ: ವಿದುರ ಬಳಿಕ ಅಲ್ಲಿಗೆ ತೆರಳಿ ಧರ್ಮರಾಜನನ್ನು ಆಹ್ವಾನಿಸಿದ, ಸೋದರರೂ, ದ್ರೌಪದಿಯೂ ತಡೆದರೂ ಧರ್ಮರಾಜ ಹೊರಟು ನಿಂತ. ಕುಂತಿಯೊಂದಿಗೂ, ಸೋದರ-ರೊಂದಿಗೂ, ದ್ರೌಪದಿಯೊಂದಿಗೂ ಸಮೇತನಾಗಿ ಬೇಗನೇ ಹಸ್ತಿನಾಪುರಿಗೆ ತೆರಳಿದ.

ಜ್ಯೇಷ್ಠಾಜ್ಞಯೈವ ವಿದುರ ಆಹ್ವಯನ್ನಪಿ ಧರ್ಮಜಮ್ ।
ನಾಗಂತವ್ಯಮಿತಿ ಪ್ರಾಹ ದೋಷಾನುಕ್ತ್ವೇಕ್ಷಜಾನ್ ಬಹೂನ್ ॥೩೧೧॥

ಅ: ಅಣ್ಣನಾದ ಧೃತರಾಷ್ಟ್ರನ ಅಪ್ಪಣೆಯಂತೆ ವಿದುರ ಧರ್ಮರಾಜನನ್ನು ದ್ಯೂತಕ್ಕೆ ಕರೆದರೂ ದ್ಯೂತದಿಂದಾಗುವ ಬಹುಬಗೆಯ ಅನರ್ಥಗಳನ್ನು ತಿಳಿಸುತ್ತಾ ಬರಬೇಡ ಎಂದೂ ನುಡಿದ.

ವಿ: ವಿದುರನ ವರ್ತನೆಯ ವೈಶಿಷ್ಟ್ಯವನ್ನು ಇಲ್ಲಿ ಗಮನಿಸಬೇಕು. ಒಂದೆಡೆ ದ್ಯೂತಕ್ಕಾಗಿ ಕರೆತರಲೆಂದು ಅಣ್ಣ ಧೃತರಾಷ್ಟ್ರನ ಅಪ್ಪಣೆ, ಮತ್ತೊಂದೆಡೆ ದ್ಯೂತ ಅನರ್ಥಕರ ಎಂಬ ತನ್ನ ದೃಢವಾದ ಪರಿಜ್ಞಾನ. ವಿದುರ ಎರಡಕ್ಕೂ ನ್ಯಾಯ ಸಲ್ಲಿಸುತ್ತಾ ದ್ಯೂತಕ್ಕೆ ಬರಬೇಕೆಂಬ ಧೃತರಾಷ್ಟ್ರನ ಆದೇಶವನ್ನು ತಿಳಿಸಿದ; ಹಾಗೆ ಬರುವುದು ಸರ್ವಥಾ ತರವಲ್ಲ ಎಂಬ ತನ್ನ ಹಿತೋಕ್ತಿಯನ್ನೂ

ನೀಡಿದ. ಇಂತಹ ಧರ್ಮಸಂಕಟ ಪ್ರಸಂಗದಲ್ಲಿ ವರ್ತಿಸಬೇಕಾದ ರೀತಿ ವಿದುರನ ವರ್ತನೆಯಿಂದ ತಿಳಿಸಲ್ಪಟ್ಟಿದೆ.

ಇತೀಹ ದೋಷಸಂಚಯಸ್ತಥಾऽಪಿ ತೇ ಪಿತುರ್ವಚಃ ।
ಸಮೀಕ್ಷ್ಯ ತದ್ದ್ವಯಂ ಸ್ವಯಂ ಕುರುಷ್ವ ಕಾರ್ಯಮಾತ್ಮನಃ ॥ ೩೧೨ ॥

ಅ: ಹೀಗೆ 'ಜೂಜಿನಲ್ಲಿ ದೋಷಗಳ ಹಿಂಡು ಇದೆ, ಆದರೂ ಅದಕ್ಕೆ ಬರಲೇಬೇಕೆಂದು ನಿನ್ನ ದೊಡ್ಡಪ್ಪನ ಆದೇಶ; ಇವೆರಡನ್ನು ಚೆನ್ನಾಗಿ ಪರಿಶೀಲಿಸಿ ನಿನಗೆ ಯೋಗ್ಯವಾದ ಕಾರ್ಯದಲ್ಲಿ ತೊಡಗು'.

ಇತೀರಿತೋऽಪಿ ಪಾಂಡವೋ ಯಯೌ ಕಲಿಪ್ರವೇಶತಃ ।
ವಿಚಿತ್ರವೀರ್ಯಜಂ ಚ ತಂ ಸಮಾಸದತ್ ಸಸೈನಿಕಃ ॥ ೩೧೩ ॥

ಅ: ವಿದುರ ಹೀಗೆ ತಿಳಿಸಿದರೂ ಧರ್ಮ ರಾಜ ಕಲಿಪ್ರವೇಶದಿಂದಾಗಿ ಸೈನಿಕರ ಸಮೇತನಾಗಿ ಧೃತರಾಷ್ಟ್ರನ ಬಳಿಗೆ ತೆರಳಿದ.

ವಿ: ೧) ವಿದುರ ಮತ್ತು ಧರ್ಮರಾಜ ಇಬ್ಬರೂ ಯಮಧರ್ಮನ ಅವತಾರ ಎಂಬುದು ಇಲ್ಲಿಯ ಮತ್ತೊಂದು ವಿಶೇಷ. ವಿದುರರೂಪದಿಂದ ಬೇಡವೆಂಬ ಹಿತೋಕ್ತಿ ಯುಧಿಷ್ಠಿರ ರೂಪದಿಂದ ದ್ಯೂತಕ್ಕೆ ತೆರಳುವ ಅನುಚಿತ ವರ್ತನೆ. ಅದಕ್ಕೆ ಕಾರಣ ಯಮನ ವಿದುರರೂಪ ಶುದ್ಧವಾಗಿದ್ದು, ಧರ್ಮರಾಜರೂಪ ಕಲಿಯ ಆವೇಶಕ್ಕೆ ಒಳಗಾಗಿದ್ದುದೇ ಆಗಿತ್ತು.

೨) ಒಬ್ಬನೇ ವ್ಯಕ್ತಿಯ ಮನಸ್ಸಿನಲ್ಲಿ ಬೇಕು, ಬೇಡಗಳ ಹೊಯ್ದಾಟ ನಡೆದಂತೆ ಈ ಪ್ರಸಂಗ ಎಂದು ತಿಳಿಯಬೇಕು. ಸಾಮಾನ್ಯವಾಗಿ ಇಂತಹ ಸಂಘರ್ಷದಲ್ಲಿ ಕೆಟ್ಟ ಮನಸ್ಸೇ ಗೆಲ್ಲುವುದು ಒಂದು ಆಶ್ಚರ್ಯ. ಧರ್ಮರಾಜನಲ್ಲಿ ಆಗ ಕಲ್ಯಾವೇಶ ಒದಗಲು ರಾಜಸೂಯ ಯಾಗದಿಂದ ಒದಗಿದ್ದ ಅಧಿಕ ಪುಣ್ಯವೇ ಕಾರಣವಾಯಿತು ಎಂಬ ವಿವೇಚನೆ ಮುಂದೆ ಬಂದಿದೆ (೨೨/೩, ೩೩).

ಧರ್ಮರಾಜನ ಅಧಾರ್ಮಿಕ ಪ್ರತಿಜ್ಞೆ

ಕಲ್ಯಾವೇಶಾನ್ನೃಪತಿಃ ಪ್ರತಿಜಜ್ಞೇ ಪೂರ್ವಮೇವ ಧರ್ಮಾತ್ಮಾ ।
ಆಹೂತೋ ದ್ಯೂತಕರಣಾನ್ನಿವರ್ತೇಯಂ ನೈವ ವಾರಿತೋऽಪೀತಿ ೩೧೪

---

೩೧೪. ದ್ಯೂತಕರಣಾರ್ಥಮಿತ್ಯರ್ಥಃ। –(ರಾ.)

೩೧೪. ಆಹೂತೋ ದ್ಯೂತರಣಾನ್ನಿರ್ವರ್ತೇಯಂ –(ಪಾಠಾಂತರ)

ಅ: . ಕಲಿ ಪ್ರವೇಶದಿಂದಾಗಿ ಧರ್ಮಿಷ್ಠನಾದ ಧರ್ಮರಾಜ ಹಿಂದೆಯೇ ಪ್ರತಿಜ್ಞೆ ಮಾಡಿದ್ದ ''ದ್ಯೂತವಾಡಲು ಕರೆದರೆ ಯಾರು ತಡೆದರೂ ನಾನು ಹೋಗದಿರೆನು'' ಎಂದು.

ವಿ: ೧) ಧರ್ಮರಾಜ ಹಾಗೆ ತೆರಳಲು ಅವನು ಮಾಡಿದ್ದ ಒಂದು ಪ್ರತಿಜ್ಞೆ ಕಾರಣವಾಯಿತು. ಅಂತಹ ಅಧಾರ್ಮಿಕ ಪ್ರತಿಜ್ಞೆಗೆ ಅವನೊಳಗಿದ್ದ ಕಲಿಪ್ರವೇಶ ಕಾರಣವಾಗಿತ್ತು. ಶಪಥ ಪೂರೈಸು–ವುದು ಧರ್ಮವೇ ಆದರೂ ಅಂತಹ ಕೆಟ್ಟಶಪಥವನ್ನು ಮಾಡುವುದು ಮಾತ್ರ ನಿಶ್ಚಿತವಾಗಿಯೂ ಅಧರ್ಮವೇ. ಅಂತಹ ಧರ್ಮಿಷ್ಠ ಅಂತಹ ಕೆಟ್ಟಶಪಥವನ್ನು ಕೈಗೊಳ್ಳಲು ಕಲಿಯ ಆವೇಶವೇ ಮುಖ್ಯ ಕಾರಣ ಎಂದು ತಿಳಿಯಬೇಕು.

೨) ಧರ್ಮರಾಜ ಅಂತಹ ಪ್ರತಿಜ್ಞೆಯೊಂದನ್ನು ಮಾಡಿರುವ ವಿವರ ಶಕುನಿಗೆ ತಿಳಿದಿತ್ತು. ಅದರಿಂದಾಗಿಯೇ ಅವನನ್ನು ದ್ಯೂತಕ್ಕೆ ಆಹ್ವಾನಿಸುವ ಕುತಂತ್ರವನ್ನು ಯೋಜಿಸಲು ಅವನು ತೊಡಗಿದ ಎಂಬ ವಿಷಯ ಮಹಾಭಾರತದಲ್ಲಿ ಬಂದಿದೆ (ಸಭಾ. ೪೮/೧೯ ಇತ್ಯಾದಿ).

ತೇನಾಯಾತ್ ಸ್ವಸುಹೃದ್ಭಿರ್ನಿವಾರ್ಯಮಾಣೋಽಪಿ ನಾಗಪುರಮಾಶು ।
ನ ಹಿ ಧರ್ಮೋ ದ್ಯೂತಕೃತೋ ವಿಶೇಷತಃ ಕ್ಷತ್ರಿಯಸ್ಯ ಲೋಕಗುರೋಃ ॥ ೩೧೫ ॥

ಅ: ಅದರಿಂದಾಗಿ ಅವನು ತನ್ನ ಹಿತೈಷಿಗಳು ಎಷ್ಟು ತಡೆದರೂ ಹಸ್ತಿನಾಪುರಕ್ಕೆ ಒಡನೆಯೇ ತೆರಳಿದ; ವಿಶೇಷವಾಗಿ ಲೋಕಶಿಕ್ಷಕನಾದ ಕ್ಷತ್ರಿಯನಿಗೆ ದ್ಯೂತ ಎಂದೂ ಧರ್ಮವೆನ್ನಿಸದಲ್ಲವೇ!.

ವಿ: ೧) ಸಾಮಾನ್ಯವಾಗಿ ದ್ಯೂತ ಸರ್ವರಿಗೂ ಅಧರ್ಮವೇ, ವಿಶೇಷತಃ ಕ್ಷತ್ರಿಯರಿಗೆ ಅಧರ್ಮ, ಅದಕ್ಕೆ ಅವರು ಲೋಕವನ್ನಾಳುವ ಹಿರಿಯ ವ್ಯಕ್ತಿಗಳಾಗಿರುವುದೇ ಕಾರಣ. ಧರ್ಮರಾಜನಂತೂ ರಾಜಸೂಯ ಯಾಗ ಮಾಡಿದ ಚಕ್ರವರ್ತಿ, ಆದರೂ ಅಂತಹ ಅಧರ್ಮ ಕಾರ್ಯಕ್ಕೆ ಅವನು ತೊಡಗಿದ್ದು ಕಲ್ಯಾವೇಶದಿಂದಾಗಿ.

೨) ಧರ್ಮರಾಜ ಬೇಗನೆ ತೆರಳಿದ ಎಂದು ತಿಳಿಸುವ ಮೂಲಕ ಆ ಬಗ್ಗೆ ಪೂಜ್ಯರಾದ ಕೃಷ್ಣ ವೇದವ್ಯಾಸರೊಂದಿಗೆ ಸಮಾಲೋಚಿಸುವ ಮುಖ್ಯ ಕರ್ತವ್ಯವನ್ನು ಮರೆತು ತೆರಳಿದ ಎಂದರ್ಥ.

---

೩೧೪. ಆಹೂತೋಽಹಂ ನ ನಿವರ್ತೇ ಕದಾಚಿತ್
ತದಾಹಿತಂ ಶಾಶ್ವತಂ ವೈ ವ್ರತಂ ಮೇ ॥ – ಭಾರತ (೨/೫೮/೧೬)

ಆಹೂತೋ ನ ನಿವರ್ತೇಯಮಿತಿ ಮೇ ವ್ರತಮಾಹಿತಮ್ ॥ – ಭಾರತ (೨/೫೯/೧೮)

೩೧೫. ನ ಹಿ ಧರ್ಮೋ ದ್ಯೂತಕೃತ ಇತ್ಯತ್ರ = ಪುರುಷಸ್ಯ ಧರ್ಮೋ ನ ಹಿ। ವಿಶೇಷತಃ ಲೋಕಗುರೋಃ ಕ್ಷತ್ರಿಯಸ್ಯ ಧರ್ಮೋ ನೇತಿ ನಿವಾರ್ಯಮಾಣೋಽಪೀತಿ ಪೂರ್ವೇಣಾನ್ವಯಃ ॥ – (ವಾ.)

ರಾಜಸೂಯ ಯಾಗವನ್ನು ಮಾಡಲು ಪಾಂಡುರಾಜ ನಾರದರ ಮೂಲಕ ಕಳುಹಿಸಿದ್ದ ಸಂದೇಶವನ್ನು ಕೃಷ್ಣನೊಂದಿಗೂ ಸಹೋದರರೊಂದಿಗೂ ಸಮಾಲೋಚಿಸಿ ಕೈಗೊಂಡ (೨೧/೭೨) ಧರ್ಮರಾಜ, ದೊಡ್ಡಪ್ಪನಾದ ಧೃತರಾಷ್ಟ್ರ ವಿದುರನ ಮೂಲಕ ಕಳುಹಿಸಿದ ಕೆಟ್ಟ ಸಂದೇಶವನ್ನು ತತ್ಕ್ಷಣ ಪರಿಪಾಲಿಸಿದ ಎಂಬುದು ಅವನೊಳಗಿದ್ದ ಕಲ್ಯಾವೇಶಪ್ರಭಾವಕ್ಕೆ ದ್ಯೋತಕ ಎಂದು ತಿಳಿಯಬೇಕು.

ಜೂಜಿನ ಸಭೆಗೆ ಪಾಂಡವರು

ವೈಚಿತ್ರವೀರ್ಯತನಯೇನ ತು ಪಾಂಡುಪುತ್ರಾಃ
ಸಂಭಾವಿತಾಸ್ತಮುಪ ಚ ನ್ಯವಸನ್ ನಿಶಾಯಾಮ್ ।
ಪ್ರಾತಸ್ತು ಭೀಷ್ಮಮುಖರಾಃ ಸಕಲಾಶ್ಚ ಭೂಪಾ
ಆಸೇದುರಾಶು ಚ ಸಭಾಂ ಸಹ ಪಾಂಡುಪುತ್ರೈಃ ॥ ೩೧೬ ॥

ಅ: ಧೃತರಾಷ್ಟ್ರ ಪಾಂಡುಪುತ್ರರನ್ನು ಬಹಳವಾಗಿ ಆದರಿಸಿದ. ಅವರು ಅಂದು ರಾತ್ರಿ ಅವನ ಬಳಿಯಲ್ಲೇ ವಾಸ ಮಾಡಿದರು. ಬೆಳಿಗ್ಗೆ ಭೀಷ್ಮ ಮೊದಲಾದವರು ಸಕಲ ರಾಜರು, ಪಾಂಡವರೊಂದಿಗೆ ಸಭೆಯನ್ನು ಸೇರಿದರು.

ಎ: ೧) ಧೃತರಾಷ್ಟ್ರ ದುರ್ಯೋಧನನ ಸಲಹೆಯಂತೆ ಆ ದ್ಯೂತಕ್ಕಾಗಿ ವಿಶೇಷ ಸಭಾಭವನವೊಂದನ್ನು ನಿರ್ಮಿಸಿದ್ದ ವಿವರ ಮಹಾಭಾರತದಲ್ಲಿದೆ (ಸಭಾ. ೫೬/೧೮):

ಸಹಸ್ರಸ್ತಂಭಾಂ ಹೇಮವೈದೂರ್ಯಚಿತ್ರಾಂ ಶತದ್ವಾರಾಂ ತೋರಣಸ್ಫಾಟಿಕಾಖ್ಯಾಮ್ ।
ಸಭಾಮಗ್ರ್ಯಾಂ ಕ್ಷೋಮಮಾಸ್ತೀರ್ಯತಾಂ ಮೇ ತದ್ವಿಸ್ತಾರಮಾಶು ಕುರ್ವಂತು ಯುಕ್ತಾಃ ॥

೨) ಪಾಂಡವರು ರಾಜಸೂಯಯಾಗಕ್ಕಾಗಿ ಸಭೆಯನ್ನು ನಿರ್ಮಿಸಿದರೆ, ಕೌರವರು ದ್ಯೂತಕ್ಕಾಗಿ ಸಭೆಯನ್ನು ನಿರ್ಮಿಸಿದ್ದು ಅವರ ಆಸುರ ಸ್ವಭಾವಕ್ಕೆ ದ್ಯೋತಕ.

ವೈಚಿತ್ರವೀರ್ಯನೃಪತಿರ್ವಿದುರಾನ್ವಿತೋಽಸ್ಯ
ಗಾಂಧಾರರಾಜಸಹಿತಾಸ್ತನಯಾಃ ಸಕರ್ಣಾಃ ।
ಪ್ರಾಪ್ತಾಃ ಸಭಾತಲಮಥಾಹ್ವಯದತ್ರ ಧರ್ಮ-
ರಾಜಂ ಸುತಃ ಸುಬಲಕಸ್ಯ ಸ ದೇವನಾಯ ॥ ೩೧೭ ॥

---

೩೧೬. ವೈಚಿತ್ರವೀರ್ಯತನಯೇನೇತ್ಯತ್ರ ವಿಚಿತ್ರವೀರ್ಯ ಏವ ವೈಚಿತ್ರವೀರ್ಯಃ ಸಹಸ್ರಮೇವ ಸಾಹಸ್ರಮಿತಿವತ್ ಸ್ವಾರ್ಥಿಕೋಽಣ್। ತಸ್ಯ ತನಯೇನೇತ್ಯರ್ಥಃ ॥ –(ವಾ.)

ಅ: ಧೃತರಾಷ್ಟ್ರ ವಿದುರನೊಂದಿಗೆ ಸಭಾಮಂದಿರಕ್ಕೆ ಆಗಮಿಸಿದರೆ, ಅವನ ಮಕ್ಕಳಾದ ದುರ್ಯೋಧನಾದಿಗಳು ಕರ್ಣನೊಂದಿಗೂ ಶಕುನಿಯೊಂದಿಗೂ ಆಗಮಿಸಿದರು. ಅಲ್ಲಿ ಶಕುನಿ ಧರ್ಮರಾಜನನ್ನು ದ್ಯೂತಕ್ಕೆ ಕರೆದ.

ಸರ್ವಾಂಶ್ಚ ತತ್ರ ಕಲಿರಾವಿಶದೇವ ಭೀಮ-
ಪೂರ್ವಾನ್ ವಿನೈವ ಚತುರಃ ಸಪೃಥಾಂ ಚ ಕೃಷ್ಣಾಮ್।
ಕ್ಷತ್ತಾರಮೇವ ಚ ತತೋ ನ ಹಿ ಭೀಷ್ಮಮುಖ್ಯೈ-
ಸ್ತೇ ವಾರಿತಾಃ ಕುಲವಿನಾಶನಕರ್ಮವೃತ್ತಾಃ ॥ ೩೧೮ ॥

ಅ: ಭೀಮ ಮೊದಲಾದ ನಾಲ್ವರು ಪಾಂಡವರು ಕುಂತಿ, ದ್ರೌಪದಿ ಮತ್ತು ವಿದುರರನ್ನು ಹೊರತು ಅಲ್ಲಿದ್ದ ಇತರ ಎಲ್ಲರಲ್ಲೂ ಆಗ ಕಲಿಯು ಪ್ರವೇಶಿಸಿದ್ದ. ಆದ್ದರಿಂದ ಕುಲನಾಶಕವಾದ ಕರ್ಮದಲ್ಲಿ ತೊಡಗಿದ ಅವರನ್ನು ಭೀಷ್ಮ ಮೊದಲಾದವರಾರೂ ತಡೆಯದಾದರು.

ವಿ: ಭೀಷ್ಮಾದಿಗಳು ಕುಲವೃದ್ಧರು, ಧರ್ಮಜ್ಞರು – ಅಂಥವರು ಸಹ ದ್ಯೂತದಂತಹ ಕುಕಾರ್ಯವನ್ನು ತಡೆಯದಿರಲು ಅವರೊಳಗೆ ಕಲ್ಯಾವೇಶ ಉಂಟಾಗಿದ್ದೇ ಕಾರಣ ಎಂದರ್ಥ. ಅಂತಹ ಮಹಾತ್ಮರು ಸಾಮಾನ್ಯ ಅಸುರನ ಆವೇಶದಿಂದ ಅಂತಹ ತಪ್ಪನ್ನು ಮಾಡಲಾರರು ಎಂಬುದನ್ನು **'ಕಲಿರಾವಿಶದೇವ'** ('ಕಲಿಯೇ ಪ್ರವೇಶಿಸಿದ್ದ') ಎಂಬ ಮಾತಿನಿಂದ ಸೂಚಿಸಿರುವರು ಎಂಬ ವಿಶೇಷಾರ್ಥ ವಾದಿರಾಜೀಯದಲ್ಲಿದೆ.

ಜೂಜಿನಲ್ಲಿ ಯುಧಿಷ್ಠಿರನ ವಿಚಿತ್ರ ಪರಾಭವ

ಭೀಮಾದಿಭಿಃ ಸ ವಿದುರೇಣ ಚ ವಾರ್ಯಮಾಣೋ
ದ್ಯೂತೇ ನಿಧಾಯ ಪಣಮಪ್ಯಖಿಲಂ ಸ್ವವಿತ್ತಮ್।
ಗಾಂಧಾರಕೇಣ ವಿದಿತಾಕ್ಷಹೃದಾ ಜಿತೋ ದ್ರಾಕ್
ಪಾಂಡೋಃ ಸುತೋಽಥ ನಕುಲಂ ನ್ಯದಧಾತ್ ಪಣಾಯ ॥೩೧೯॥

---

೩೧೮. ಕಲಿರಾವಿಶದೇವೇತ್ಯತ್ರ ಕಲಿರೇವಾವಿಶದಿತಿ ಏವಕಾರಸಂಬಂಧಃ ನ ತ್ವನ್ಯಂ ಕಂಚಿದ್ದೈತ್ಯಂ ಪ್ರೇಷಿತವಾನಿತಿ ಭಾವಃ ॥ – (ವಾ.)

* ...ತಚ್ಛ್ರುತ್ವಾ ವಿದುರೋ ಧೀಮಾನ್ ಕಲಿದ್ವಾರಮುಪಸ್ಥಿತಮ್ ।
ವಿನಾಶಮುಖಮುತ್ಪನ್ನಂ ಧೃತರಾಷ್ಟ್ರಮುಪಾದ್ರವತ್ ॥ – ಭಾರತ (ಸಭಾ. ೪೯/೫೨)

ಅ: ಭೀಮ ಮೊದಲಾದವರೂ ಹಾಗೂ ವಿದುರನಿಂದಲೂ ತಡೆದರೂ ಧರ್ಮರಾಜ ತನ್ನೆಲ್ಲಾ ಸಂಪತ್ತನ್ನು ದ್ಯೂತದಲ್ಲಿ ಪಣವನ್ನಾಗಿ ತೊಡಗಿಸಿದ. ದ್ಯೂತವಿದ್ಯೆಯನ್ನು ತಿಳಿದಿದ್ದ ಶಕುನಿಯಿಂದ ಬೇಗನೆ ಪರಾಜಿತನಾದ. ಬಳಿಕ ನಕುಲನನ್ನು ಪಣಕ್ಕೆ ಇಟ್ಟ.

ಎ: ೧) ಆಗಲೂ ಮತ್ತೊಮ್ಮೆ ಧರ್ಮರಾಜನನ್ನು ಭೀಮ ವಿದುರ ಮೊದಲಾದವರು ತಡೆದರು. ಆದರೂ ಧರ್ಮರಾಜ ಕೇಳಲಿಲ್ಲ. ದುರ್ಯೋಧನ ತನ್ನ ಪರವಾಗಿ ಶಕುನಿ ದ್ಯೂತ ಆಡುವು–ದಾಗಿಯೂ, ತಾನು ಆಗತ್ಯವಿರುವ ಪಣವನ್ನು ಒಡ್ಡುವುದಾಗಿಯೂ ತಿಳಿಸಿದ. ಧೃತರಾಷ್ಟ್ರ ಆಹ್ವಾನಿಸಿದ್ದು ತನ್ನ ಮಕ್ಕಳು ಆಡಲೆಂದು. ಆದರೆ, ನಡೆದದ್ದೇ ಬೇರೆ. ಪಾಂಡವರನ್ನು ಶಕುನಿ–ಯೊಂದಿಗೆ ಆಡುವ ಕಾರ್ಯಕ್ಕೆ ದುರ್ಯೋಧನ ಉಪಾಯವಾಗಿ ತೊಡಗಿಸಿದ. ಧರ್ಮರಾಜ ಅದನ್ನು ಪ್ರತಿಭಟಿಸಲಿಲ್ಲ, ಅಥವಾ ತನ್ನ ಪರವಾಗಿ ಶಕುನಿಯೊಂದಿಗೆ ಭೀಮ ಅಥವಾ ಅರ್ಜುನರು ಆಡುವರೆಂದು ಹೇಳಲೂ ಇಲ್ಲ.

೨) ಧರ್ಮರಾಜ ಹಾಗೆ ಮಾಡಿ ಭೀಮನನ್ನು ಆಟಕ್ಕೆ ಕುಳ್ಳಿರಿಸಿದ್ದಲ್ಲಿ ಮಹಾಭಾರತಕ್ಕೆ ಆಗ ಬೇರೊಂದು ತಿರುವೇ ಒದಗುತ್ತಿದ್ದುದು ಸ್ಪಷ್ಟ. ಪೂರ್ಣಪ್ರಜ್ಞನಾದ ಭೀಮ ದ್ಯೂತದಲ್ಲೂ ಶಕುನಿಯನ್ನು ಪರಾಭವಗೊಳಿಸುತ್ತಿದ್ದ. ಶಕುನಿ ಅನ್ಯಾಯವನ್ನೆಳಿಸಿದ್ದರೆ ಅದನ್ನು ಪ್ರತಿಭಟಿಸಿ ಅವರನ್ನೆಲ್ಲಾ ಆಗಲೇ ಯಮಪುರಿಗೆ ಆಟ್ಟುವ ಸಮರ್ಥನೂ ಆಗಿದ್ದ. ಭೀಮನಂತಹ ಸರ್ವಸಮರ್ಥನನ್ನು ಉಪಯೋಗಿಸಿಕೊಳ್ಳುವ ವಿವೇಕವನ್ನು ಧರ್ಮರಾಜ ತೋರಲಿಲ್ಲ ಎಂಬುದು ಅವನಿಗಿದ್ದ ಕಲ್ಯಾವೇಶಕ್ಕೆ ದ್ಯೋತಕ.

೩) ಕಲಿಯುಗದ ಜನರೂ ಸಹ ಇದರಂತೆಯೇ, ಭೀಮನ ಪ್ರತಿರೂಪದಂತಹ ಜ್ಞಾನವನ್ನು ಮುಂದೆ ಮಾಡಿ ಬದುಕುವ ಬದಲು ಧೂರ್ತರ ಕಪಟೋಪಾಯಗಳಿಗೆ ಬಲಿಯಾಗಿ ವಿನಾಶದತ್ತ ಸಾಗುವರು. ಭೀಮನ ಪ್ರತಿರೂಪದಂತಹ ಸರ್ವಮೂಲ ಗ್ರಂಥಗಳನ್ನು ಮನೆಯಲ್ಲಿರಿಸಿಕೊಳ್ಳದೇ ಕೆಟ್ಟ ಗ್ರಂಥಗಳನ್ನು ಇರಿಸಿಕೊಳ್ಳುವ ಮೂಲಕ ಆಸುರೀ ಶಕ್ತಿಗಳಿಗೆ ಆಹ್ವಾನವೀಯುವರು. ಧರ್ಮರಾಜ ದಾರಿ ತಪ್ಪಿದಂತೆ ಧರ್ಮಿಷ್ಠರೂ ದಾರಿ ತಪ್ಪುವುದು ಕಂಡಿದೆ. ಧರ್ಮರಾಜ ತನ್ನ ಸಮಸ್ತ ಸ್ಥಿರಾಸ್ತಿ ಚರಾಸ್ತಿಗಳನ್ನು ಪಣವಾಗಿಟ್ಟು ಸೋತ ಬಳಿಕ ಶಕುನಿ ಅವನ ತಮ್ಮಂದಿರನ್ನೇ ಪಣವಾಗಿಡಲು ಪ್ರಚೋದಿಸಿದ.

೪) ಧರ್ಮರಾಜ ಅದಕ್ಕೂ ಒಪ್ಪಿ ಮೊದಲಿಗೆ ನಕುಲನನ್ನು ಪಣವಾಗಿಟ್ಟ. ಮೇಲ್ನೋಟಕ್ಕೆ ಸಹದೇವ ಐವರಲ್ಲಿ ಕಿರಿಯ, ಎಂದರೆ ಅವನನ್ನೇ ಮೊದಲಿಗೆ ಪಣವನ್ನಾಗಿ ಇರಿಸಬೇಕಿತ್ತು. ಆದರೂ ನಕುಲನನ್ನೇ ಇರಿಸಿದ ಎಂದೇ ಸ್ಪಷ್ಟ ಉಲ್ಲೇಖ. ಇದಕ್ಕೆ ಕಾರಣ ನಕುಲ ಸಹದೇವರಿಬ್ಬರೂ ಅವಳಿಗಳು ಮಾತ್ರವಲ್ಲದೇ ಅಶ್ವಿನೀದೇವತೆಗಳ ಅವತಾರರಾದ ಅವರಿಬ್ಬರೂ ಎಲ್ಲ ರೀತಿಯಲ್ಲೂ

ಸಮಾನರು. ಆದ್ದರಿಂದ ಅವರಲ್ಲಿ ಒಬ್ಬೊಬ್ಬರನ್ನು ಒಮ್ಮೊಮ್ಮೆ ಕಿರಿಯ ಎಂದು ಮಹಾಭಾರತ ವ್ಯವಹರಿಸಿದೆ. ಅಶ್ವಿನೀದೇವತೆಗಳ ಅಂತಹ ವಿಶಿಷ್ಟಸಾಮ್ಯದ ವಿವರ ಈಗಾಗಲೇ ಬಂದಿದೆ (ಅಧ್ಯಾಯ ೧೨, ಶ್ಲೋ. ೧೨೪).

೪) ಧರ್ಮರಾಜ ಹಾಗೆ ಸೋಲಲು ಅವನಿಗೆ ದ್ಯೂತ ಬಾರದ್ದು ಒಂದು ಕಾರಣವಾದರೆ, ಶಕುನಿಗೆ ದ್ಯೂತ ಚೆನ್ನಾಗಿ ಬರುತ್ತಿದ್ದುದು ಮತ್ತೊಂದು ಕಾರಣವಾಯಿತು. ಶಕುನಿಗೆ ದ್ಯೂತದೊಂದಿಗೆ ಅದರಲ್ಲಿ ವಂಚನೆ ಮಾಡುವುದೂ ಇನ್ನೂ ಹೆಚ್ಚಾಗಿಯೇ ತಿಳಿದಿತ್ತು ಎಂದರೆ ಅವನು ಆಡಿದ್ದು ಬರೀ ದ್ಯೂತವಾಗಿರದೆ ಕಪಟದ್ಯೂತವಾಗಿತ್ತು ಎಂಬ ಮತ್ತೊಂದು ವಿಶೇಷವನ್ನೂ ಗಮನಿಸಬೇಕು.

ತಸ್ಮಿನ್ ಜಿತೇऽಥ ಸಹದೇವಮಥಾರ್ಜುನಂ ಚ
ಭೀಮಂ ಚ ಸೋಮಕಸುತಾಂ ಸ್ವಮಪಿ ಕ್ರಮೇಣ ।
ರಾಜಾ ನಿಧಾಯ ವಿಜಿತೋऽಥ ಸುಯೋಧನಃ ಸ್ವಂ
ಸೂತಂ ದಿದೇಶ ಪೃಷತಾತ್ಮಜಪುತ್ರಿಕಾಯಾಃ ॥ ೩೨೦ ॥

ಅ: ಧರ್ಮರಾಜ ನಕುಲನನ್ನು ಸೋತ ಮೇಲೆ ಸಹದೇವನನ್ನು, ಬಳಿಕ ಅರ್ಜುನನನ್ನು, ಅನಂತರ ಭೀಮನನ್ನು, ಮುಂದೆ ದ್ರೌಪದಿಯನ್ನು, ಬಳಿಕ ಕ್ರಮವಾಗಿ ತನ್ನನ್ನೂ ಪಣಕ್ಕಿಟ್ಟು ಸೋತನು. ಬಳಿಕ ದುರ್ಯೋಧನ ತನ್ನ ಸಾರಥಿಯನ್ನು ದ್ರೌಪದಿಯ ಬಳಿಗೆ ಕಳುಹಿಸಿದ.

ವಿ: ೧) ನಕುಲನ ನಂತರ ಕ್ರಮವಾಗಿ ತನ್ನ ಇತರ ಸಹೋದರರನ್ನು, ಕೊನೆಗೆ ದ್ರೌಪದಿ–ಯನ್ನು, ಬಳಿಕ ತನ್ನನ್ನೂ, ಪಣಕ್ಕಿಟ್ಟು ಸೋತ.

೨) ನಕುಲಾದಿಗಳನ್ನು ಸೋಲುವುದು ಶೀಲ, ವಿನಯ ಮೊದಲಾಗಿ ಸಮಸ್ತಸದ್ಗುಣಗಳನ್ನು ಕ್ರಮವಾಗಿ ದ್ಯೂತವಾಡುವವನು ಕಳೆದುಕೊಳ್ಳುವುದಕ್ಕೆ ಸಂಕೇತ ಎಂದು ತಿಳಿಯಬೇಕು. ಪಾಂಡವರು ಹಾಗೂ ದ್ರೌಪದಿ ಹಾಗೆ ವಿವಿಧ ಸದ್ಗುಣಗಳ ಸಂಕೇತ ಎಂಬ ಮಾತು ಈಗಾಗಲೇ ಬಂದಿದೆ (೨/೧೩೯).

೩) ಆಗಲೂ ಭೀಷ್ಮಾದಿಗಳೆಲ್ಲಾ ಸುಮ್ಮನೆ ಕುಳಿತಿದ್ದರೂ ವಿದುರ ಮಾತ್ರವೇ ಪ್ರತಿ ಹಂತದಲ್ಲೂ ಅದನ್ನು ಪ್ರತಿಭಟಿಸುತ್ತಿದ್ದ ಎಂಬ ವಿವರ ಮಹಾಭಾರತದಲ್ಲಿದೆ.

೪) ಧೃತರಾಷ್ಟ್ರನಂತೂ ಮುಂದಾಗುವುದನ್ನು ಕೇಳುವ ಕಾತರದಲ್ಲಿದ್ದನೇ ಹೊರತು ಆಗುವ ಅನರ್ಥದ ಪರಿಕಲ್ಪನೆಯನ್ನು ಎಷ್ಟುಮಾತ್ರಕ್ಕೂ ಹೊಂದಿರಲಿಲ್ಲ ಎಂಬ ವಿವರ ಅಲ್ಲಿದೆ. ಇದರಿಂದ 'ನಾವು ತಡೆಯೋಣ' (ಶ್ಲೋ. ೩೦೨) ಎಂಬ ಮಾತನ್ನು ನಡೆಸಲಿಲ್ಲ ಎಂದು ಸ್ಪಷ್ಟವಾಗುವುದು.

೫) ದುರ್ಯೋಧನ ಕಳುಹಿಸಿದ ಆ ಸೂತನ ಹೆಸರು *ಪ್ರಾತಿಕಾಮಿ ಎಂಬುದಾಗಿ ಮಹಾ–ಭಾರತದಲ್ಲಿದೆ (ಸಭಾ. ೬೭/೩).

ದ್ರೌಪದಿಯ ಬಳಿಗೆ ಪ್ರಾತಿಕಾಮಿ

ಸೂತೋ ಗತ್ವಾ ತದಂತಂ ಸಮಕಥಯದಿಮಾಂ ದ್ಯೂತಮಧ್ಯೇ ಜಿತಾऽಸಿ
ಕ್ಷಿಪ್ರಂ ಚಾಯಾಹಿ ರಾಜ್ಞಾಂ ಸಮಿತಿಮುರುತರಾಮಿತ್ಯಥೋ ಸಾऽಪ್ಯವಾದೀತ್ ।
ನಾಹಂ ಯಾಸ್ಯೇ ಕುರೂಣಾಂ ಸಮಿತಿಮಿತಿ ಯಯೌ ಸೋऽಪ್ಯಮುಂ ಭೀಮಭೀತಂ
ಜ್ಞಾತ್ವಾ ದುಃಶಾಸನಂ ಸೋऽಪ್ಯದಿಶದಥ ನೃಪೋ ಧಾರ್ತರಾಷ್ಟ್ರೋऽನುಜಂ ಸ್ವಮ್ ೩೨೧

ಅ: ಸೂತನಾದ ಪ್ರಾತಿಕಾಮಿ ದ್ರೌಪದಿಯ ಬಳಿ ತೆರಳಿ ಅದೆಲ್ಲ ವಿವರವನ್ನು ತಿಳಿಸಿದ 'ನೀನು ದ್ಯೂತದಲ್ಲಿ ಪರಾಭವಗೊಂಡಿರುವೆ, ರಾಜರ ದೊಡ್ಡ ಸಭೆಗೆ ಬೇಗನೆ ಬಾ' ಎಂದು ನುಡಿದ. 'ನಾನು ಕೌರವರ ಸಭೆಗೆ ಬರಲಾರೆ' ಎಂದು ದ್ರೌಪದಿ ನುಡಿಯಲು ಅವನು ಹಿಂದಿರುಗಿದ. ಅವನು ಭೀಮನಿಗೆ ಅಂಜುವನು ಎಂದು ತಿಳಿದು ದುರ್ಯೋಧನ ತನ್ನ ತಮ್ಮನಾದ ದುಶ್ಶಾಸನನನ್ನು ಕಳಿಸಿದ.

ಎ: ದ್ರೌಪದಿ ಆ ದ್ಯೂತದ ಸಿಂಧುತ್ವವನ್ನೇ ಪ್ರಶ್ನಿಸಿ ತಾನು ಆಗ ಬಹಿಷ್ಕೆ ಎಂದು, ಆ ಸ್ಥಿತಿಯಲ್ಲಿ ಗುರು ಹಿರಿಯರು ತುಂಬಿರುವ ರಾಜಸಭೆಗೆ ಬರಲು ಸರ್ವಥಾ ಅಸಾಧ್ಯವೆಂದು ತಿಳಿಸಿದಳು. ದುರ್ಯೋಧನ ಅದಾವುದರ ಪರಿವೆಯೂ ಇಲ್ಲದಂತೆ ತನ್ನ ದೌರ್ಜನ್ಯವನ್ನು ಪ್ರದರ್ಶಿಸುತ್ತಾ ತನ್ನಂತೆಯೇ ಮಹಾಪಾಪಿಯಾಗಿದ್ದ ತನ್ನ ತಮ್ಮ ದುಶ್ಶಾಸನನನ್ನು ದ್ರೌಪದಿಯನ್ನು ಸಭೆಗೆ ಕರೆತರಲು ಕಳುಹಿಸಿದ.

ದ್ಯೂತಸಭೆಗೆ ದ್ರೌಪದಿ

ಸ ಪಾಪಪೂರುಷೋತ್ತಮಃ ಪ್ರಗೃಹ್ಯ ಕೇಶಪಕ್ಷಕೇ।
ಪುರಃ ಸ್ವಮಾತುರಾನಯತ್ ಸಭಾಮಯುಗ್ಮವಾಸಸೀಮ್ ॥ ೩೨೨ ॥

---

* ಏವಮುಕ್ತಃ ಪ್ರಾತಿಕಾಮೀ ಸ ಸೂತಃ ಪ್ರಾಯಾಚ್ಛೀಘ್ರಂ ರಾಜವಚೋ ನಿಶಮ್ಯ ।
ಪ್ರವಿಶ್ಯ ಚ ಶ್ವೈವ ಹಿ ಸಿಂಹಗೋಷ್ಠಂ ಸಮಾಸದನ್ಮಹಿಷೀಂ ಪಾಂಡವಾನಾಮ್ ॥ – ಭಾರತ (ಸಭಾ. ೬೭/೩)

೩೨೧. ಕ್ಷಿಪ್ರಂ ಚಾಯಾಹಿ ರಾಜ್ಞಾಂ ಸಮಿತಿಮಿತ್ಯತ್ರ ಗಾಂಧಾರ್ಯಾದ್ಯಾಶ್ರಿತಪ್ರಾಸಾದಾತ್ ರಾಜ್ಞಾಂ ಸಮಿತಿಮಾಯಾಹೀತಿ ಯೋಗ್ಯಪದಾಧ್ಯಾಹಾರೇಣ ಯೋಜನಾ ॥ – (ವಾ.)

ಅ: ಪಾಪಪುರುಷರಲ್ಲಿ ಪ್ರಧಾನನಾದ ದುಶ್ಶಾಸನ ದ್ರೌಪದಿಯನ್ನು ಕೇಶಪಾಶದಲ್ಲಿ ಹಿಡಿದು ಏಕವಸ್ತ್ರೆಯಾದ ಅವಳನ್ನು ತನ್ನ ತಾಯಿಯ ಮುಂದೆ ಸಭೆಗೆ ಎಳೆದು ತಂದ.

ವಿ: ಪ್ರಾತಿಕಾಮಿಯ ಮುಂದೆ ದ್ರೌಪದಿ ಧರ್ಮರಾಜ ದ್ಯೂತದಲ್ಲಿ ಮೊದಲು ಸೋತದ್ದು ತನ್ನನ್ನೋ? ಅವನನ್ನೋ? ಎಂದು ಕೇಳುವಳು. ಆ ಪ್ರಶ್ನೆಯ ಹಿಂದಿನ ಧರ್ಮಸೂಕ್ಷ್ಮವನ್ನು ತಿಳಿಯದೇ ಅನೇಕರು ಅದನ್ನು ಅರ್ಥಹೀನವಾದ ಪ್ರಶ್ನೆ ಎಂದು ಜರಿಯುವುದುಂಟು. ಅದರ ಬಗ್ಗೆ ಅಪೂರ್ವ ವಿಶ್ಲೇಷಣೆಯನ್ನು ಮುಂದೆ (೨೪, ೨೫) ಶ್ರೀಮದಾಚಾರ್ಯರು ನೀಡಿರುವರು.

ಭೀಷ್ಮಾದಿಗಳಿಗೆ ದ್ರೌಪದಿಯ ಪ್ರಶ್ನೆ

ಸಮಾಹೃತಾ ರಜಸ್ವಲಾ ಜಗಾದ ಭೀಷ್ಮಪೂರ್ವಕಾನ್।
ಅಧರ್ಮ ಏಷ ವಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ॥ ೩೨೩ ॥

ಅ: ಕರೆತರಲ್ಪಟ್ಟ ರಜಸ್ವಲೆಯಾಗಿದ್ದ ದ್ರೌಪದಿ ಭೀಷ್ಮ ಮೊದಲಾದವರನ್ನು ಕೇಳಿದಳು 'ಇದು ಅಧರ್ಮ, ನಿಮ್ಮಂತಹ ಧರ್ಮಿಷ್ಠರು ಇದನ್ನೇಕೆ ತಡೆಯುತ್ತಿಲ್ಲ'.

ವಿ: ದ್ರೌಪದಿ ಇಲ್ಲಿ ಹಿರಿಯರಾದ ಭೀಷ್ಮಾದಿಗಳನ್ನು ಅತ್ಯಂತ ಗಂಭೀರವಾಗಿ ಪ್ರಶ್ನಿಸುತ್ತಿರುವಳು. ಅದು ಕ್ಷಾತ್ರತೇಜಸ್ಸಿನ ವೀರವನಿತೆಯ ಮಾತುಗಳೇ ಹೊರತು, ಒಬ್ಬ ಆರ್ತಸ್ತ್ರೀಯ ಪ್ರಲಾಪಗಳಲ್ಲ ಎಂಬುದನ್ನು ಗಮನಿಸಬೇಕು.

ದ್ರೌಪದಿಯ ಧರ್ಮಜಿಜ್ಞಾಸೆ

ಕಥಂ ಫಲಾತ್ಮಕೇ ದ್ಯೂತೇ ಜಿತೇ ಧರ್ಮಜಯೋ ಭವೇತ್ ।
ನ ಹಿ ದ್ಯೂತಂ ಧರ್ಮಮಾಹುರ್ವಿಶೇಷೇಣ ತು ಭೂಭುಜಾಮ್ ॥೩೨೪॥

ಅ: "ಮೋಸ ತುಂಬಿದ ದ್ಯೂತದಲ್ಲಿ ಗೆಲ್ಲುವುದು ಹೇಗೆ ನ್ಯಾಯದ ಜಯ ಎನ್ನಿಸೀತು? ದ್ಯೂತವನ್ನು ಧರ್ಮವೆಂದು ಯಾರೂ ಹೇಳರು. ಕ್ಷತ್ರಿಯರಿಗಂತೂ ಅದು ವಿಶೇಷವಾಗಿ ಸರ್ವಥಾ ಅಧರ್ಮ".

---

೩೨೪. ಕಥಂ ಫಲಾತ್ಮಕೇ ದ್ಯೂತ ಇತ್ಯತ್ರ ಫಲಂ= ಫದ್ಧ **ಸ್ವೇಚ್ಛಾನುಸಾರೇಣ ಪತದಸ್ಥಿವಿಶೇಷಕೃತಾಕ್ಷರೂಪತ್ವಾತ್ ಫಲಾತ್ಮಕಮಿತ್ಯುಕ್ತಮ್** ॥ – (ವಾ.)

೩೨೪. ದ್ಯೂತಮೇವ ಧರ್ಮೋ ನ ಭವತಿ । ಫಲಾತ್ಮಕಂ ಸುತರಾಮಧರ್ಮಃ । – (ಜ.)

೩೨೪. ಧರ್ಮಜಯಃ ಧರ್ಮೇಣ ಜಯಃ ಕಥಂ ಭವೇತ್। – (ಜ.) **ಧರ್ಮ್ಯಮಾಹುಃ** – (ಜ. ಪಾಠ)

ವಿ: ದ್ಯೂತವೇ ಅಧರ್ಮ; ಅಲ್ಲಿ ನಡೆದದ್ದಂತೂ ಅಧರ್ಮದ ಪ್ರತಿರೂಪವಾದ ಕಪಟದ್ಯೂತ, ಅದಕ್ಕೆ ಶಕುನಿ ಉಪಯೋಗಿಸಿದ ದಾಳಗಳು ಮೂಳೆಗಳ ದಾಳಗಳಾಗಿದ್ದುದೇ ಕಾರಣ ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ. ಅದಕ್ಕೆ ಹಿನ್ನೆಲೆಯಾದ ನಿರೂಪಣೆ ಮಹಾಭಾರತದ ಪ್ರಚಲಿತ ಪಾಠಗಳಲ್ಲಿ ಕಂಡುಬರುವುದಿಲ್ಲ. ದುರ್ಯೋಧನ ಶಕುನಿಯ ನೂರು ಜನ ಸಹೋದರರನ್ನು ಬಂಧನದಲ್ಲಿಟ್ಟು ಆಹಾರವಿಲ್ಲದೇ ಕೊಲ್ಲುವ ಸಂಚನ್ನು ಮಾಡಿದನೆಂದೂ, ಅವರಲ್ಲಿ ಇತರರು ಮಡಿದು ಶಕುನಿಯೊಬ್ಬ ಉಳಿದುಕೊಂಡನೆಂದೂ, ಅವನೊಬ್ಬನಿಂದ ಕೇಡಿಲ್ಲವೆಂದು ದುರ್ಯೋಧನ ಅವನನ್ನು ಬದುಕಲು ಅವಕಾಶ ನೀಡಿದನೆಂದೂ, ಶಕುನಿ ಸೇಡು ತೀರಿಸಿಕೊಳ್ಳಲೆಂದು ತನ್ನ ಸೋದರರ ಅಸ್ಥಿಗಳಿಂದ ದಾಳಗಳನ್ನು ಮಾಡಿಕೊಂಡು ದುರ್ಯೋಧನನ ಹಿತೈಷಿಯಂತೆ ವರ್ತಿಸಿ ಅವನ ಜೊತೆಗಿದ್ದು ಸ್ವಭಾವತಃ ದುಷ್ಟನಾಗಿದ್ದ ಅವನನ್ನು ಇನ್ನೂ ಹೆಚ್ಚಿನ ದುಷ್ಕಾರ್ಯದಲ್ಲಿ ತೊಡಗುವಂತೆ ಮಾಡಿದನೆಂದು ಪ್ರತೀತಿ. ತನ್ನ ವಂಶವನ್ನು ನಿರ್ನಾಮ ಮಾಡಿದ ದುರ್ಯೋಧನನ ವಂಶವನ್ನು ನಿರ್ನಾಮ ಮಾಡುವುದು ಶಕುನಿಯ ಉದ್ದೇಶವಾಗಿತ್ತು ಎಂದು ಅದರ ಭಾವ. ದುಷ್ಟರಲ್ಲೂ ಪರಸ್ಪರ ದ್ವೇಷಾಸೂಯೆಗಳು ತುಂಬಿರುವುದಕ್ಕೆ ಇದೊಂದು ನಿದರ್ಶನ ಎಂದು ಭಾವಿಸಬಹುದು.

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥ ೩೨೫ ॥

ಅ: 'ಯಾರು ಸಭೆಗಳಲ್ಲಿ ಧರ್ಮವನ್ನು ತಿಳಿಸುವುದಿಲ್ಲವೋ ಅವರು ಹಿರಿಯರೆನ್ನಿಸುವುದಿಲ್ಲ, ಅಂತಹ ಹಿರಿಯರಿಲ್ಲದ ಸಭೆಯನ್ನು ಸಭೆಯೆಂದು ಜ್ಞಾನಿಗಳು ಕರೆಯುವುದಿಲ್ಲ'.

ವಿ: ಇದಕ್ಕೆ ಮೂಲವಾದ ಮಹಾಭಾರತದ ಶ್ಲೋಕ ಹೀಗಿದೆ :

ನ ಸಾ ಸಭಾ ಯತ್ರ ನ ಸಂತಿ ವೃದ್ಧಾ ನ ತೇ ವೃದ್ಧಾ ಯೇ ನ ವದಂತೀಹ ಧರ್ಮಮ್ ।
ನಾಸೌ ಧರ್ಮೋ ಯತ್ರ ನ ಸತ್ಯಮಸ್ತಿ ನ ತತ್ಸತ್ಯಂ ಯಚ್ಛಲೇನಾನುವಿದ್ಧಮ್ ॥

– ಭಾರತ (೨/೬೭/೫೩)

ಹಿರಿಯರಿಲ್ಲದ ಸಭೆ ಸಭೆಯಲ್ಲ, ಧರ್ಮ ತಿಳಿಸದ ಹಿರಿಯರು ಹಿರಿಯರಲ್ಲ, ಸತ್ಯವಿಲ್ಲದ ಧರ್ಮ ಧರ್ಮವಲ್ಲ, ಮೋಸದ ಮಾತು ಎಂದೂ ಸತ್ಯವಲ್ಲ ಎಂಬುದು ಅದರ ಭಾವ. ದ್ರೌಪದಿ ಇಂತಹ ಮಾತುಗಳನ್ನಾಡುವ ಮೂಲಕ ಭೀಷ್ಮ, ದ್ರೋಣಾದಿಗಳ ಧರ್ಮಜ್ಞಾನವನ್ನೇ ನೇರವಾಗಿ ಪ್ರಶ್ನಿಸಿರುವುದು ಗಮನಾರ್ಹ. ಹಾಗೆ ಆಕ್ಷೇಪಿಸುವ ಮೂಲಕ ದ್ರೌಪದಿ ಅವರ ತಪ್ಪನ್ನು ಸಾರುತ್ತಾ ತಾನು ಅವರೆಲ್ಲರಿಗಿಂತಲೂ ಮಿಗಿಲಾದ ಮಹಾಜ್ಞಾನಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಿರುವಳು ಎಂದು ತಿಳಿಯಬೇಕು.

ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ।
ಸಮಾನಧರ್ಮಿಣೀಮಾಹುರ್ಭಾರ್ಯಾಂ ಯಸ್ಮಾದ್ವಿಪಶ್ಚಿತಃ ॥ ೩೨೬ ॥

ಅ: 'ನನ್ನ ಪತಿ ಇನ್ನು ಸೋಲದಿರುವಾಗ, ನಾನೆಂತು ದ್ಯೂತದಲ್ಲಿ ಪರಾಜಿತಳಾಗುವೆನು, ಜ್ಞಾನಿಗಳು ಪತ್ನಿಯನ್ನು ಸಹಧರ್ಮಿಣಿ ಎಂದು ಕರೆಯುವರಲ್ಲವೇ?'.

ವಿ: ೧) ಧರ್ಮರಾಜ ಮೊದಲು ಸೋತಿದ್ದು ನನ್ನನ್ನೋ, ತನ್ನನ್ನೋ ಎಂಬ ತನ್ನ ಪ್ರಶ್ನೆಯನ್ನು ದ್ರೌಪದಿ ಇಲ್ಲಿ ವಿಶ್ಲೇಷಿಸಿ ತಿಳಿಸುತ್ತಿರುವಳು. ಸತಿ ಪತಿಗೆ ಸೇರಿದವಳಾದ್ದರಿಂದ ಪತಿಯಾದವನು ತಾನು ಸೋಲುವ ಮುನ್ನ ತನ್ನ ಪತ್ನಿಯನ್ನು ಸೋಲುವ ಅಧಿಕಾರವನ್ನು ಪಡೆದಿಲ್ಲ, ಎಂದರೆ ಸತಿಯನ್ನು ರಕ್ಷಿಸಿಕೊಳ್ಳುವ ಜವಾಬ್ದಾರಿ ಹೊತ್ತಿರುವ ಪತಿ ಸ್ವತಃ ತಾನೇ ಅವಳನ್ನು ಸೋಲುವ ಮೂಲಕ ಪರಾಧೀನಳನ್ನಾಗಿ ಮಾಡುವುದು ಹೇಗೆ ಉಚಿತ ಎಂದರ್ಥ.

೨) ಪತಿಗೆ ಸತಿಯ ಮೇಲೆ ಆಧಿಪತ್ಯವಿರುವುದು ಅವಳನ್ನು ಸಂರಕ್ಷಿಸುವ ವಿಷಯದಲ್ಲಿ ಮಾತ್ರವೇ ಹೊರತು ಅವಳನ್ನು ಮತ್ತೊಬ್ಬರ ಆಧೀನ್ಯಕ್ಕೆ ಒಳಪಡಿಸುವ ವಿಚಾರದಲ್ಲಲ್ಲ ಎಂಬ ಧರ್ಮಸೂಕ್ಷ್ಮ ಇಲ್ಲಿದೆ. ಈ ಮಾತಿನ ಮೂಲಕ ದ್ರೌಪದಿ ವಿವಾಹದ ಅಂತರಾರ್ಥವನ್ನೇ ಅನಾವರಣಗೊಳಿಸುತ್ತಾ ಪತಿಯ ಆಧಿಪತ್ಯದ ಇತಿಮಿತಿಗಳನ್ನು ಸ್ಪಷ್ಟಪಡಿಸಿರುವಳು ಎಂಬುದನ್ನು ಗಮನಿಸಬೇಕು.

೩) ಇಂತಹ ಮಹತ್ವಪೂರ್ಣವಾದ ಧರ್ಮಜಿಜ್ಞಾಸೆಯನ್ನು ಮಹಾಭಾರತದ ವಿಮರ್ಶಕ–ರಾರೂ ಅನಂತರ ಗಮನಿಸಲಿಲ್ಲ ಎಂಬುದು ಅಚ್ಚರಿಯ ಸಂಗತಿ. ಇದನ್ನು ಪ್ರಪ್ರಥಮ ಬಾರಿಗೆ ಬಹಿರಂಗಪಡಿಸಿದ ಯಶಸ್ಸು ಆಚಾರ್ಯಶ್ರೀಮಧ್ವರದು ಎಂಬುದನ್ನು ಗಮನಿಸಬೇಕು.

ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ ।
ದಾಸೀತ್ವಂ ನ ಪೃಥಙ್ ಮೇ ಸ್ಯಾತ್ ಜಿತೇಽಪಿ ಹಿ ಪತೌ ತತಃ ॥ ೩೨೭ ॥

---

೩೨೬. ಅಜಿತೇ ಸ್ವಪತೌ ಸ್ಥಿತ ಇತ್ಯತ್ರ ಧರ್ಮೇಣ ಜಯೋ ಹಿ ಜಯಃ ನ ತ್ವಧರ್ಮೇಣ ಜಯೋ ಹಿ ಜಯಃ। ಶಕುನಿನಾಽಧರ್ಮಂ ಪುರಸ್ಕೃತ್ಯ ಪ್ರವೃತ್ತತ್ವಾನ್ನಾಯಂ ಜಯೋ ಜಯಃ। ನ ಹಿ ನಿದ್ರಾಂ ಕುರ್ವಾಣಸ್ಯ ಶಿರಶ್ಛೇದೇನ ವಧೋ ಜಯ ಇತ್ಯುಚ್ಯತ ಇತಿ ಭಾವಃ ॥ – (ವಾ.)

೩೨೬. ಸ್ವಪತಾವಿತ್ಯತ್ರ ಯುಧಿಷ್ಠಿರಾದಿವ್ಯಾವೃತ್ತ್ಯರ್ಥಂ ಸ್ವೇತ್ಯುಕ್ತಮ್ ॥ – (ಸ.)

೩೨೭. ಪತೌ ದಾಸೇ ಹಿ ಭಾರ್ಯಯೇತ್ಯತ್ರ ಪತೌ= ದಾಸೇ ಜಾತೇ ಸತ್ಯಪಿ ಭಾರ್ಯಯಾ ಸಹೈವ= ಸ್ವಪತಿನಾ ಸಹೈವ ಕರ್ಮ ಕರ್ತವ್ಯಮ್। ಸ್ವಪತಿರ್ದಾಸೋ ಭೂತ್ವಾ ಯತ್ಕರ್ಮ ಕರೋತಿ ತದೇವ ಕರ್ಮ ತೇನ ಸಹೈವ ಕರ್ತವ್ಯಮ್। ನತು ಪತಿಂ ವಿನಾ। ಪತಿವ್ರತಾ ಕೇವಲಮನ್ಯದಾಸೀ ನ ಭವತೀತಿ ಭಾವಃ। ಯತಃ ಪತೌ ದಾಸೇಽಪಿ ಭಾರ್ಯಯಾ ಸಹೈವ ಕರ್ಮ ಕರ್ತವ್ಯಮ್। ತತಃ= ಕಾರಣಾದಿತಿ ಸಂಬಂಧಃ ॥ – (ವಾ.)

ಆ: 'ಪತಿಯು ದಾಸನಾದ ಮೇಲೂ ಪತ್ನಿ ಅವನ ಜೊತೆಯಲ್ಲೇ ಕರ್ಮದಲ್ಲಿ ತೊಡಗಬೇಕು. ನನ್ನ ಪತಿಯು ಪರಾಜಿತನಾದಾಗಲೂ ನನಗೆಂದೂ ಪ್ರತ್ಯೇಕವಾಗಿ ದಾಸಿತ್ವ ಒದಗದು'

ವಿ: ೧) ಪತಿ ತಾನು ಸೋತ ಮೇಲೂ ತನ್ನ ಪತ್ನಿಯನ್ನು ಪಣಕ್ಕಿಡುವಂತಿಲ್ಲ. ತಾನು ಈಗಾಗಲೇ ಪರಾಜಿತನಾಗಿರುವುದರಿಂದ ತನ್ನ ಪತ್ನಿಯನ್ನು ಪಣಕ್ಕಿಡುವ ಅರ್ಹತೆಯೂ ಅವನಿಗೆ ಇಲ್ಲವಾಗಿರುತ್ತದೆ. ತನ್ನನ್ನು ಸೋಲುವಾಗಲೇ ಅವನು ತನ್ನ ಪತ್ನಿಯೊಂದಿಗೆ ಕೂಡಿಯೇ ಪರಾಜಿತನಾಗಿರುತ್ತಾನೆ. ಆದರೂ ಅವಳ ಅಧೀನ್ಯ ತನ್ನ ಪತಿಗೇ ಹೊರತು ಇತರರಿಗಲ್ಲ. ಆಗಲೂ ಅವಳು ತನ್ನ ಪತಿಯ ವಶವರ್ತಿಯಾಗಿ ಅವನ ಕಾರ್ಯದಲ್ಲಿ ಸಹಕಾರಿಣಿಯಾಗುವಳೇ ಹೊರತು ಮತ್ತೊಬ್ಬನ ಆಜ್ಞಾಧಾರಕಳಾಗಿ ಸರ್ವಥಾ ಆಗಲಾರಳು.

೨) ದ್ರೌಪದಿಯ ಈ ಮಾತು ಮತ್ತೊಂದು ರೀತಿಯಲ್ಲಿ ಸ್ತ್ರೀಯರ ಹಕ್ಕು, ಬಾಧ್ಯತೆಗಳನ್ನು ವಿವರಿಸುವ ಧರ್ಮಸೂಕ್ಷ್ಮದ ಸಾರ. ಸತಿ ಎಂದೂ ಸಹ ಯಾವ ಕಾರಣದಿಂದಲೂ ಪರರ ಅಧೀನ್ಯಕ್ಕೆ ಒಳಪಡಲಾರಳು ಎಂಬುದು ಇದರ ಒಟ್ಟು ಭಾವ. ಸಮಸ್ತ ಸ್ತ್ರೀಸಂಕುಲಕ್ಕೆ ಈ ಮೂಲಕ ದ್ರೌಪದಿ ಒದಗಿಸಿರುವ ನ್ಯಾಯ ಒಂದು ಅನನ್ಯ ಐತಿಹಾಸಿಕ ಪವಾಡ. ಭೀಷ್ಮಾದಿಗಳೂ ನಿರುತ್ತರರಾದಂತಹ ವಿಶಿಷ್ಟ ಪ್ರಸಂಗ ಎಂಬುದು ಇದರ ಹಿರಿಮೆ. ಆಧುನಿಕ ಪದ್ಧತಿಯಲ್ಲೂ ಒಬ್ಬ ಸರಕಾರಿ ನೌಕರನ ಮೇಲೆ ಅವನ ಅಧಿಕಾರಿಯ ಅಧಿಕಾರ ಇರುವುದು ಹೀಗೆಯೇ. ಅಧಿಕಾರಿ ತನ್ನ ನೌಕರನನ್ನು ತನ್ನ ಸೇವೆಯ ನಿಯಮಾವಳಿಗಳಿಗೆ ಅನುಗುಣವಾಗಿ ಬಳಸಿಕೊಳ್ಳಬಹುದೇ ಹೊರತು ಅವನ ಪತ್ನಿಯ ಮೇಲೆ ಯಾವುದೇ ರೀತಿಯಲ್ಲೂ ಅಧಿಕಾರ ಚಲಾಯಿಸುವ ಹಕ್ಕನ್ನು ಹೊಂದಿಲ್ಲ ಎಂಬುದನ್ನು ಗಮನಿಸಬೇಕು. ಎಂದರೆ ದ್ರೌಪದಿಯನ್ನು ಎರಡು ರೀತಿಯಲ್ಲೂ ದಾಸಿಯನ್ನಾಗಿಸಿಕೊಳ್ಳುವ ಸಾಧ್ಯತೆ ದುರ್ಯೋಧನಾದಿಗಳಿಗೆ ಇಲ್ಲವಾದ್ದರಿಂದ, ಬೇರೊಂದು ವಿಕಲ್ಪ ಸಾಧ್ಯವಿಲ್ಲವಾದ್ದರಿಂದ ಅವಳನ್ನು ಸಭೆಗೆ ಕರೆತರಿಸಿದ್ದು ಮೊದಲಾದ ಪ್ರತಿಯೊಂದೂ ಸಹ ನ್ಯಾಯ–ಧರ್ಮಗಳಿಗೆ ಬಾಹಿರವಾದ ವರ್ತನೆ ಎಂದು ಸಿದ್ಧವಾಗುವುದು.

ಭೀಷ್ಮಾದಿಗಳ ಅಧಾರ್ಮಿಕ ವರ್ತನೆ

ಇತ್ಯುಕ್ತಾ ಅಪಿ ಭೀಷ್ಮಾದ್ಯಾಃ ಕಲ್ಯಾವೇಶೇನ ಮೋಹಿತಾಃ ।
ಪೃಚ್ಛ ಧರ್ಮಜಮಿತ್ಯುಕ್ತ್ವಾ ತೂಷ್ಣೀಮೇವ ಬಭೂವಿರೇ ॥ ೩೨೮ ॥

---

೩೨೮. ಯುಧಿಷ್ಠಿರಸ್ತುಪ್ರಶ್ನೇऽಸ್ಮಿನ್ ಪ್ರಮಾಣಮಿತಿ ಮೇ ಮತಿಃ ।
ಅಜಿತಾಂ ವಾ ಜಿತಾಂ ವೇತಿ ಸ್ವಯಂ ವ್ಯಾಹರ್ತುಮರ್ಹತಿ ॥ – ಭಾರತ (೨/೬೯/೨೧)

ಅ: ದ್ರೌಪದಿ ಹೀಗೆ ತಿಳಿಸಿದರೂ ಕಲ್ಯಾವೇಶದಿಂದಾಗಿ ಭೀಷ್ಮ ಮೊದಲಾದವರು 'ಧರ್ಮರಾಜನನ್ನೇ ಕೇಳು' ಎಂದು ತಿಳಿಸಿ ಸುಮ್ಮನೇ ಕುಳಿತುಬಿಟ್ಟರು.

ವಿ: ದ್ರೌಪದಿಯ ಧರ್ಮವಿವೇಚನೆ ಭೀಷ್ಮರಿಗೆ ಅರ್ಥವಾಗದಿರಲು ಅವರೊಳಗಿದ್ದ ಕಲ್ಯಾವೇಶ ಕಾರಣವಾಯಿತು ಎಂದರ್ಥ. ಆಗ ಅವರು ದ್ಯೂತವಾಡಿದ ಧರ್ಮರಾಜನನ್ನೇ ಆ ಬಗ್ಗೆ ಕೇಳು ಎಂದು ನುಡಿದು ಸುಮ್ಮನಾಗಿಬಿಟ್ಟರು. ಅದೂ ಸತ್ಯಕ್ಕೆ ಮಾಡಿದ ಅಪಚಾರವೇ. ನ್ಯಾಯ ನೀಡಬೇಕಾದ ಹಿರಿಯರೇ ಇಂತಹ ಮಾತನ್ನು ಆಡಿದರೆ ನ್ಯಾಯ ಉಳಿಯುವುದಾದರೂ ಎಂತು?.

ವಿದುರನ ಧರ್ಮನಿಷ್ಠೆ

ದುರ್ಯೋಧನಪ್ರತೀಪಂ ಹಿ ನ ಕಶ್ಚಿದಶಕತ್ ತದಾ।
ಉವಾಚ ವಿದುರಸ್ತತ್ರ ನ ಧರ್ಮೋಽಯಮಿತಿ ಸ್ಫುಟಮ್ ॥ ೩೮೯ ॥

ಅ: ದುರ್ಯೋಧನನನ್ನು ಪ್ರತಿಭಟಿಸಲು ಆಗ ಯಾರೊಬ್ಬರೂ ಶಕ್ತರಾಗಲಿಲ್ಲ. ಆಗ ವಿದುರ 'ಅದು ಧರ್ಮವಲ್ಲ' ಎಂದು ಸ್ಪಷ್ಟವಾಗಿ ನುಡಿದ.

ವಿ: ಭೀಷ್ಮ, ದ್ರೋಣರಿರಲಿ ಇತರ ಯಾರೂ ಸಹ ದುರ್ಯೋಧನನಿಗೆ ವಿರುದ್ಧವಾಗಿ ನಡೆಯಲು ಶಕ್ತರಾಗಲಿಲ್ಲ. ಕಲಿಯ ಪ್ರಭಾವ ಅಂತಹುದು ಎಂದರ್ಥ. ವಿದುರನಿಗೆ ಆ ಕಲಿಯ ಪ್ರಭಾವ ಉಂಟಾಗದಿರಲು ಅವನು ಭೀಮ, ದ್ರೌಪದಿಯರ ಪಕ್ಷವನ್ನು ಮನಸಾ ಸ್ವೀಕರಿಸಿದ್ದುದೇ ಕಾರಣವಾಗಿದ್ದಿತು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

ನ ತಸ್ಯ ವಾಚಂ ಜಗ್ರಾಹ ಧೃತರಾಷ್ಟ್ರಃ ಸಹಾತ್ಮಜಃ।
ಊರ್ಧ್ವಬಾಹುಃ ಸ ಚುಕ್ರೋಶ ದೇವಾನಾಂ ಖ್ಯಾಪಯಂಸ್ತದಾ॥ ೩೯೦ ॥

ಸ್ವಾಶಕ್ತಿಂ ದ್ರೌಪದೀಂ ಚಾಹ ಜಿತಾ ನೈವಾಸಿ ಧರ್ಮತಃ।
ಅಧರ್ಮೋ ಹಿ ಮಹಾನೇತಾಂ ಸಭಾಮಾಕ್ರಮ್ಯ ತಿಷ್ಠತಿ ॥ ೩೯೧ ॥

---

೩೮೯. ದುರ್ಯೋಧನಪ್ರತೀಪಂ ಹೀತ್ಯತ್ರ ಕರ್ತುಂ ವಕ್ತುಂ ವೇತಿ ಯೋಗ್ಯಪದಾಧ್ಯಾಹಾರಃ। ಉವಾಚ ವಿದುರಸ್ತ್ವೇತ್ಯತ್ರ ವಿದುರಸ್ಯಾಪಿ ಯಮರೂಪತ್ವೇನ ಕಲ್ಯಾವೇಶಸಂಭವೇಽಪಿ ''ಅವಿದ್ಯಾನಿದ್ರಾಂ ವಿದ್ರಾವ್ಯ'' ಇತಿ ವಚನಾತ್ ಕಲಿಮದನಿರ್ಭೇದಿಭೀಮಸೇನಪಕ್ಷಪಾತಿತ್ವಾತ್ ನ ಕಲ್ಯಾವೇಶ ಇತಿ ಜ್ಞೇಯಮ್ ॥ – (ವಾ.)

೩೯೧. ಸ್ವಾಶಕ್ತಿಂ ದ್ರೌಪದೀಮಿತ್ಯತ್ರ ಸ್ವಾಶಕ್ತಿಂ ದೇವಾನಾಂ ಖ್ಯಾಪಯಾನ್ನಿತಿ ಪೂರ್ವೇಣಾನ್ವಯಃ ॥ – (ವಾ.)

ಅ: ವಿದುರನ ಮಾತನ್ನು ಧೃತರಾಷ್ಟ್ರನೂ ಅವನ ಮಕ್ಕಳೂ ಕೇಳಲಿಲ್ಲ. ಆಗ ವಿದುರ ತನ್ನ ಎರಡೂ ಕೈಗಳನ್ನು ಮೇಲೆತ್ತಿ ದೇವತೆಗಳಿಗೆ ತನ್ನ ಅಶಕ್ತಿಯನ್ನು ಸಾರುತ್ತಾ ಕೂಗಿ ಹೇಳಿದ, ದ್ರೌಪದಿಗೂ ತಿಳಿಸಿದನು 'ನೀನು ಸರ್ವಥಾ ನ್ಯಾಯವಾಗಿ ಪರಾಜಿತಳಾದವಳಲ್ಲ. ಈ ಸಭೆಯನ್ನು ಮಹಾ ಅಧರ್ಮ ಮುತ್ತಿನಿಂತಿದೆ'.

ವಿ: ವಿದುರನಿಗೆ ಧರ್ಮಪರಿಜ್ಞಾನವಿದ್ದರೂ ಅದನ್ನು ಆಚರಿಸಿ ತೋರಿಸುವ ಬಾಹುಬಲ ಇರಲಿಲ್ಲ. ಧರ್ಮರಕ್ಷಣೆಗೆ ಬಾಹುಬಲ, ಜ್ಞಾನಬಲವೆರಡೂ ಅತ್ಯಗತ್ಯವೆಂಬ ಮಾತು ಈಗಾಗಲೇ ಬಂದಿದೆ (೧೨/೫೦). ಇತರರಿಗೆ ಆಗ ಅವೆರಡೂ ಇಲ್ಲವಾಗಿದ್ದರೆ ವಿದುರನಿಗೆ ಜ್ಞಾನಬಲ ಮಾತ್ರ ಇದ್ದು ಬಾಹುಬಲವಿಲ್ಲವಾಗಿತ್ತು. ಅದನ್ನು ಸ್ವತಃ ಅವನೇ ಎರಡೂ ಕೈಗಳನ್ನೆತ್ತಿ ಸಾರಿ ತಿಳಿಸಿದ. ಅಂತೂ ಕೌರವರ ಪಕ್ಷದಲ್ಲಿ ಅದನ್ನು ಅಧರ್ಮವೆಂದು ಸ್ಪಷ್ಟವಾಗಿ ಹೇಳಬಲ್ಲ ವಿವೇಕವನ್ನು ತೋರಿದ ಹಿರಿಮೆ ವಿದುರ ಒಬ್ಬನದೇ ಆಗಿತ್ತು ಎಂಬುದು ಇಲ್ಲಿಯ ವಿಶೇಷಾಂಶ.

ವಿಕರ್ಣನ ಡಾಂಭಿಕತೆ

ಏವಂ ತು ವಿದುರೇಣೋಕ್ತೇ ವಿಕರ್ಣಃ ಪಾಪಕೋಽಪಿ ಸನ್।
ಆಹ ಡಂಭಾರ್ಥಮೇವಾತ್ರ ಧರ್ಮವಿತ್ತ್ವಂ ಪ್ರಕಾಶಯನ್।
ಅಧರ್ಮ ಏವಾಯಮಿತಿ ಕರ್ಣೋಽಥೈನಮಭರ್ತ್ಸಯತ್ ॥ ೩೩॥

ಅ: ಹೀಗೆ ವಿದುರ ನುಡಿಯಲು ವಿಕರ್ಣ ಪರಮ ಪಾಪಿಯಾಗಿದ್ದರೂ ಡಂಭಾಚಾರಕ್ಕಾಗಿ ತಾನು ಧರ್ಮ ಬಲ್ಲವನೆಂದು ತೋರಿಸಿಕೊಳ್ಳಲೆಂದು ನುಡಿದ 'ಇದು ಅಧರ್ಮವೇ'; ಆಗ ಅವನನ್ನು ಕರ್ಣ ಗದರಿಸಿದ.

ವಿ: ೧) ಆಗ ಅದನ್ನು ಅಧರ್ಮವೆಂದು ಸಾರಿದ ಮತ್ತೊಬ್ಬ ವ್ಯಕ್ತಿ ದುರ್ಯೋಧನನ ತಮ್ಮಂದಿರಲ್ಲಿ ಒಬ್ಬನಾದ ವಿಕರ್ಣ. ಅವನೂ ಇತರ ಕೌರವರಂತೆಯೇ ಪರಮ ಪಾಪಿಯಾಗಿದ್ದವನು. ಅವನು ರಾಮಾಯಣಕಾಲದಲ್ಲಿ ಅತಿಕಾಯ ಎಂಬ ಹೆಸರಿನಿಂದ ರಾವಣಪುತ್ರನಾಗಿದ್ದವನು.(೧೨/೪೩). ಅವನು ಹಾಗೆ ನುಡಿಯಲು ನ್ಯಾಯದ ಬಗ್ಗೆ ನಿಷ್ಠೆ ಕಾರಣವಾಗಿರದೇ ತಾನು ಮಹಾಧರ್ಮಜ್ಞ ಎಂದು ತೋರಿಸಿಕೊಳ್ಳುವ ಡಂಭಾಚಾರ ಮಾತ್ರ ಆಗಿತ್ತು. ವಿದುರನಂತೆ ಅವನದು ಶುದ್ಧನಿಷ್ಠೆಯಾಗಿರಲಿಲ್ಲ. ಹಾಗಿದ್ದಲ್ಲಿ ಅವನು ಮುಂದೆ ಕೌರವರ ಪಕ್ಷವನ್ನೇ ಸೇರಿ ಯುದ್ಧ ಮಾಡುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

೨) ಅನೇಕರು ಧರ್ಮದ ಮಾತುಗಳನ್ನು ಆಡಿದರೂ ಸಹ ಅವರದು ವಿಕರ್ಣನಂತೆ ಡಂಭಾಚಾರದ ಕಪಟ ಮಾತುಗಳೇ ಹೊರತು ವಾಸ್ತವವಾಗಿ ಧರ್ಮದ ಮಾತುಗಳಾಗಿರುವುದಿಲ್ಲ

ಎಂಬ ಸೂಕ್ಷ್ಮವಿವರ ಇಲ್ಲಿದೆ. ಅವನು ಆಗಲೂ ವಿದುರನಂತೆ ತನ್ನ ಪ್ರತಿಭಟನೆಯ ಕಾರ್ಯವನ್ನು ಮುಂದುವರಿಸದೇ ತೆಪ್ಪಗೆ ಕೂಡುವ ಮೂಲಕ ಅದರಲ್ಲಿ ತನಗೆ ನಿಷ್ಠೆಯಿಲ್ಲ ಎಂಬುದನ್ನು ದೃಢಪಡಿಸಿದ ಎಂದೂ ತಿಳಿಯಬೇಕು.

ಭೀಮಸೇನನ ಯುಧಿಷ್ಠಿರ ಶಾಸನ

ದೃಷ್ಟ್ವಾ ಭೀಮಃ ಕ್ಲಿಶ್ಯಮಾನಾಂ ತು ಕೃಷ್ಣಾಂ
ಧರ್ಮಾತ್ಯಯಂ ಧರ್ಮರಾಜೇ ಚ ದೃಷ್ಟ್ವಾ।
ರಾಜಾ ಶಾಸ್ಯೋ ಯುವರಾಜೇನ ಧರ್ಮಾ-
ಚ್ಚಲನ್ ಯಸ್ಮಾದ್ವಾಕ್ಯಮಿದಂ ಬಭಾಷೇ ॥ ೩೩೩ ॥

ಅ: ಭೀಮ, ದ್ರೌಪದಿ ಕ್ಲೇಶಪಡುವುದನ್ನು, ಧರ್ಮರಾಜ ಧರ್ಮ ಮೀರಿರುವುದನ್ನು ಗಮನಿಸಿ, ಧರ್ಮ ತಪ್ಪಿದಾಗ ರಾಜನನ್ನು ಯುವರಾಜನು ಶಾಸನ ಮಾಡಬೇಕೆಂದು ತಿಳಿಸಲು ಈ ಮಾತನ್ನಾಡಿದ.

ವಿ: ಇಲ್ಲಿ ಯುವರಾಜನ ಕರ್ತವ್ಯದ ಬಗ್ಗೆ ಬೆಳಕು ಚೆಲ್ಲುವ ವಿಶೇಷಾಂಶವಿದೆ. ಯುವರಾಜನ ಕೆಲಸ ಕೇವಲ ಮಹಾರಾಜನನ್ನು ಅನುಸರಿಸಿಕೊಂಡಿರುದದಷ್ಟೇ ಅಲ್ಲ, ಮಹಾರಾಜ ಧರ್ಮ ವಿರುದ್ಧವಾಗಿ ವರ್ತಿಸಿದರೆ, ಅದನ್ನು ಸೂಕ್ತವಾಗಿ ಪ್ರತಿಭಟಿಸುವುದೂ ಸಹ ಆಗಿದೆ ಎಂಬುದು ಧರ್ಮಸೂಕ್ಷ್ಮ. ಇದು ರಾಜನೀತಿಜ್ಞರು ವಿಶೇಷವಾಗಿ ಗಮನಿಸಬೇಕಾದ ಸೂಕ್ಷ್ಮವಿವರ. ದ್ರೌಪದಿಗೆ ಕ್ಲೇಶಪಡುವುದು ಎಂದರೆ ಅಂತಹ ಪರಿಸ್ಥಿತಿಗೆ ಒಳಗಾಗುವುದು ಎಂದಷ್ಟೇ ಅರ್ಥ. ಭಾರತೀಯ ಅವತಾರಳಾದ ಅವಳಿಗೆ ನಿಜವಾದ ಕ್ಲೇಶಾನುಭವ ಸರ್ವಥಾ ಇಲ್ಲ.

ಇಮಾಂ ನ್ಯಸ್ತವತೋ ದ್ಯೂತೇ ಧಕ್ಷಣೀಯೌ ಹಿ ತೇ ಭುಜೌ।
ನೈವಮಿತ್ಯರ್ಜುನೋಽವಾದೀತ್ ತಮಾಹಾಥ ವೃಕೋದರಃ।
ವಕ್ತವ್ಯಂ ನ ತು ಕರ್ತವ್ಯಂ ತಸ್ಮಾನ್ನ ಹಿ ಮಯಾ ಕೃತಮ್ ॥ ೩೩೪ ॥

ಅ: 'ದ್ರೌಪದಿಯನ್ನು ದ್ಯೂತದಲ್ಲಿ ಪಣಕ್ಕಿಟ್ಟ ನಿನ್ನ ಕೈಗಳನ್ನು ಸುಟ್ಟುಹಾಕಬೇಕು', ಅರ್ಜುನ 'ಹಾಗೆ ಮಾಡಕೂಡದು' ಎಂದನು. ಆಗ ಭೀಮಸೇನ ತಿಳಿಸಿದ 'ಹೇಳಬೇಕು, ಆದರೆ ಅದರಂತೆ ಮಾಡಬಾರದು, ಆದ್ದರಿಂದ ನಾನದನ್ನು ಮಾಡುತ್ತಿಲ್ಲ'.

---

೩೩೪. ಬಾಹೂ ತೇ ಸಂಪ್ರಧಕ್ಷ್ಯಾಮಿ ಸಹದೇವಾಗ್ನಿಮಾನಯ ॥ – ಭಾರತ (೨/೬೮/೬)

ವಿ: ಧರ್ಮರಾಜನನ್ನು ಭೀಮು ಎಚ್ಚರಿಸಿದ ರೀತಿಯಿದು. ಅಯೋಗ್ಯ ಕಾರ್ಯವನ್ನು ಮಾಡಿದವರ ಕೈಯನ್ನು ಸುಟ್ಟುಬಿಡಬೇಕು ಎಂಬುದು ಅದರ ಅರ್ಥ. ಶಂಖಲಿಖಿತ ಪ್ರಸಂಗದಲ್ಲಿ ಲಿಖಿತನ ಕೈಗಳನ್ನು ಕತ್ತರಿಸುವ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು (ಮಹಾಭಾರತ, ಶಾಂತಿಪರ್ವ, ಅಧ್ಯಾಯ ೨೩, ಶ್ಲೋ. ೩೬). ಭೀಮು ಹಾಗೆ ಮಾಡುವನೆಂಬ ಭಯದಿಂದ ಅರ್ಜುನ ಅದನ್ನು ತಡೆಯಲು ಪ್ರಯತ್ನಿಸಿದ. ಆಗ ಭೀಮು ನುಡಿದ – ತಾನು ಹಾಗೆ ಹೇಳಿದೆನೇ ಹೊರತು ಹಾಗೇನೂ ಮಾಡುತ್ತಿಲ್ಲ. ಅದಕ್ಕೆ ಕಾರಣ ಮುಂದಿನ ಶ್ಲೋಕದಲ್ಲಿ ಬಂದಿದೆ.

ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಮ್ ।
ಅಧಮೇ ದೇಹದಂಡಶ್ಚ ತಸ್ಮಾದ್ವಾಚ್ಯೋ ಯುಧಿಷ್ಠಿರಃ ॥ ೩೩೫ ॥

ಅ: 'ಉತ್ತಮರ ಬಗ್ಗೆ ಮಾತಿನಿಂದಲೇ ಶಿಕ್ಷೆ, ಮಧ್ಯಮರಿಗೆ ಧನದ ದಂಡ, ಅಧಮರಿಗೆ ದೇಹದಂಡನೆ - ಆದ್ದರಿಂದ ನಾನು ಯುಧಿಷ್ಠಿರನಿಗೆ ಹೇಳಿದೆನಷ್ಟೇ'.

ವಿ: ೧) ಧರ್ಮಾಚರಣೆಯ ಬಗ್ಗೆ ಮತ್ತೊಂದು ಸೂಕ್ಷ್ಮ ವಿಚಾರ ಇಲ್ಲಿ ಬಂದಿದೆ. ಉತ್ತಮರು ತಪ್ಪು ಮಾಡಿದಾಗ ಅದಕ್ಕೆ ಇಂತಹ ಶಿಕ್ಷೆ ಎಂದು ತಿಳಿಸಬೇಕು ಮಾತ್ರ, ಅದನ್ನು ಮಾಡಿ ತೋರಿಸಬಾರದು. ಮಧ್ಯಮರು ಎಂದರೆ ಸಮಾನರು ಮಾಡಿದಾಗ ಆ ಶಿಕ್ಷೆಗೆ ಬದಲಾಗಿ ಸೂಕ್ತ ದಂಡವನ್ನು ವಿಧಿಸಬೇಕು. ಕೆಳಗಿನವರು ಮಾಡಿದಾಗ ಆ ಶಿಕ್ಷೆಯನ್ನು ಯಥಾವತ್ತಾಗಿ ಜಾರಿಗೆ ತರಬೇಕು ಎಂಬುದು ಇಲ್ಲಿಯ ವಿಶೇಷ.

೨) ಲೋಕದ ಆಚರಣೆಯೂ ಹೀಗೇ ಇರುವುದನ್ನು ಗಮನಿಸಬೇಕು. ಧರ್ಮರಾಜ ಮಹಾರಾಜನಾಗಿ, ಅಣ್ಣನಾಗಿ ಉತ್ತಮನಾದ್ದರಿಂದ ಅವನ ಕೈಗಳನ್ನು ಸುಡುವಂತಿಲ್ಲ. ಆದರೆ, ಅಂತಹ ಕಾರ್ಯಗಳನ್ನು ಅವನು ಮಾಡಿರುವನು ಎಂದು ತಿಳಿಸಲೇಬೇಕು ಎಂದು ಭೀಮು ನುಡಿಯುವನು ಎಂದರ್ಥ.

೩) ಲಕ್ಷಾಲಂಕಾರದಲ್ಲಿ ಗೃಹೀತವಾದ ಮಹಾಭಾರತ ಪಾಠದಲ್ಲಿ ಧರ್ಮರಾಜನ ಅಧರ್ಮಕಾರ್ಯವನ್ನು ಧರ್ಮವೆಂದೇ ವಾದಿಸುವುದಾದಲ್ಲಿ ಅರ್ಜುನನ ಕೈಗಳನ್ನು ಸಹ ಕತ್ತರಿಸ–ಬೇಕಾಗುವುದು ಎಂದು ಭೀಮು ನುಡಿದ ಎಂದು ಉಲ್ಲೇಖವಿದೆ.

---

೩೩೫. ಏವಂ ದೃಶ್ಯಮಾನಪ್ರಕಾರೇಣ ಕೃತೇ ಧರ್ಮರಾಜೇನ ಕೃತೇ ಸತಿ ಅಸ್ಮಿನ್ ಧರ್ಮರಾಜೇ ವಿದ್ಯಾಂ ಧರ್ಮಬುದ್ಧಿಂ ಯದಿ ಭವಾನಾಹ ಸ್ಮ ತರ್ಹಿ ತವ ಚ ತಸ್ಯ ಚ ಸಹಿತೌ ಬಾಹೂ ಅಗ್ನೌ ಪ್ರಕ್ಷಿಪೇಯಮಿತಿ ಸಂಬಂಧಃ।
– ಲಕ್ಷಾಲಂಕಾರ(ಅ. ೧೦೨)

ಕರ್ಣನ ವಿಕೃತವರ್ತನೆ – ದುರ್ಯೋಧನನ ಭೇದತಂತ್ರ

ಅಥ ಕರ್ಣೋಽಬ್ರವೀತ್ ಕೃಷ್ಣಾಮಪತಿರ್ಯಸಿ ಶೋಭನೇ ।
ಧಾರ್ತರಾಷ್ಟ್ರಗೃಹಂ ಯಾಹೀತ್ಯಥ ದುರ್ಯೋಧನೋಽವದತ್।
ಪರಸ್ಪರವಿರೋಧಾರ್ಥಂ ಪಾಂಡವಾನಾಮಿದಂ ವಚಃ ॥ ೩೩೬ ॥

ಅ: ಆಗ ಕರ್ಣ ದ್ರೌಪದಿಗೆ ನುಡಿದ 'ಸುಂದರಿ! ನಿನಗಿನ್ನು ಗಂಡಂದಿರಿಲ್ಲ, ದುರ್ಯೋಧನನ ಮನೆಗೆ ತೆರಳು' ಬಳಿಕ ದುರ್ಯೋಧನ ನುಡಿದ. ಪಾಂಡವರಲ್ಲಿ ಪರಸ್ಪರ ವಿರೋಧ ಹುಟ್ಟಿಸಲೆಂದು ಅವನು ಈ ಮಾತನ್ನಾಡಿದ.

ವಿ: ೧) ಸೂರ್ಯಾವತಾರನಾದ ಕರ್ಣ ಹೀಗೆ ದ್ರೌಪದಿಯಂತಹ ಮಹಾತ್ಮಳನ್ನು ಅವಾಚ್ಯ ಮಾತುಗಳಿಂದ ಹೀಯಾಳಿಸಲು ಅವನೊಳಗಿದ್ದ ಸಹಸ್ರವರ್ಮ ಎಂಬ ಅಸುರನ ಆವೇಶವೇ ಕಾರಣವೆಂದು ತಿಳಿಯಬೇಕು.

೨) ದುರ್ಯೋಧನನ ಈ ಮಾತಿನ ಉದ್ದೇಶ ದ್ರೌಪದಿಯನ್ನು ಬಿಡುಗಡೆ ಮಾಡುವು– ದಾಗಿರದೇ ಪಾಂಡವರಲ್ಲಿ ಪರಸ್ಪರ ವಿರೋಧ ಹುಟ್ಟಿಸಿ ಅವರ ಒಗ್ಗಟ್ಟನ್ನು ಒಡೆಯುವುದೇ ಆಗಿತ್ತು. ಭೇದೋಪಾಯ ಎಂದರೆ ಇದೇ.

ದುರ್ಯೋಧನನ ಭೇದನೀತಿ

ಯುಧಿಷ್ಠಿರೋ ದುಃಖಹೇತುಸ್ತವೈಕೋ
ಯದ್ಯೇನಮನ್ಯೇ ನ ಗುರುರ್ನ ಏಷಃ ।
ಇತಿ ಬ್ರೂಯುರಥವಾ ಭೀಮಪಾರ್ಥಾ–
ವೇಕೋಽಪಿ ವಾ ಭೀಮ ಇಹೋತ್ಸೃಜೇ ತ್ವಾಮ್ ॥ ೩೩೭ ॥

ಅ: ''ದ್ರೌಪದಿ! ನಿನಗೆ ಧರ್ಮರಾಜನೊಬ್ಬನೇ ದುಃಖಕ್ಕೆ ಕಾರಣ, ಅವನನ್ನು ಉಳಿದವರಾಗಲಿ ಅಥವಾ ಭೀಮಾರ್ಜುನರಾಗಲಿ ಅಥವಾ ಭೀಮನೊಬ್ಬನೇ ಆಗಲಿ 'ಇವನು ನಮಗೆ ಪೂಜ್ಯನಲ್ಲ' ಎಂದು ನುಡಿದರೆ ನಿನ್ನನ್ನು ಬಿಟ್ಟುಬಿಡುವೆನು''.

---

* ಅನೀಶ್ವರಂ ವಿಬ್ರುವಂತ್ವಾರ್ಯಮಧ್ಯೇ ಯುಧಿಷ್ಠಿರಂ ತವ ಪಾಂಚಾಲಿ ಹೇತೋಃ ।
ಕುರ್ವಂತು ಸರ್ವೇ ಚಾನೃತಂ ಧರ್ಮರಾಜಂ ಪಾಂಚಾಲಿ ತ್ವಂ ಮೋಕ್ಷ್ಯಸೇ ದಾಸಭಾವಾತ್ ॥
– ಭಾರತ (೨/೭೦/೪)

ಭೀಮಸೇನನ ವೀರಾವೇಶ

ಇತ್ಯುಕ್ತ ಊಚೇ ಪವಮಾನಸೂನುಃ
ಪೂಜ್ಯೋ೭ಸ್ಮಾಕಂ ಧರ್ಮಜಃ ಸಂಶಯೋ ನ।
ಗುರುಶ್ಚಾಹಂ ವೋ೭ಖಿಲಾನಾಂ ಯತೋ ಹಿ
ಬಲಜ್ಯೇಷ್ಠಂ ಕ್ಷತ್ರಮಾಹುರ್ಮಹಾಂತಃ ॥ ೩೩೮ ॥

ಅ: ಅವನು ಹೀಗೆನ್ನಲು ಭೀಮಸೇನ ನುಡಿದ : ''ನಮಗೆಲ್ಲಾ ಧರ್ಮರಾಜ ಪೂಜ್ಯ; ಸಂಶಯವಿಲ್ಲ. ನಾನು ನಿಮ್ಮೆಲ್ಲರಿಗೂ ಗುರುವಾಗಿರುವೆನಲ್ಲವೇ! ಬಲದಲ್ಲಿ ಹಿರಿಯನಾದವನೇ ಕ್ಷತ್ರಿಯರಲ್ಲಿ ಪೂಜ್ಯ ಎಂದು ಜ್ಞಾನಿಗಳು ಹೇಳುವರಷ್ಟೆ!''.

ವಿ: ೧) ದುರ್ಯೋಧನನ ಭೇದೋಪಾಯಕ್ಕೆ ಪ್ರತಿಯಾಗಿ ಭೀಮ ನುಡಿದ ಮಾತಿದು. ಇದರಂತೆ ಧರ್ಮರಾಜ ಭೀಮಾದಿ ಪಾಂಡವರಿಗೆ ಮಾತ್ರವಲ್ಲದೇ ಅಲ್ಲಿ ನೆರೆದಿದ್ದ ಸಮಸ್ತರಿಗೂ ಪೂಜ್ಯನೇ ಆಗಿರುವನು ಎಂದರ್ಥ. ಅದನ್ನು ಭೀಮು ಸಮರ್ಥಿಸುವ ರೀತಿಯೂ ಅಪೂರ್ವವಾ–ದುದು. ಕ್ಷತ್ರಿಯರಲ್ಲಿ ಹಿರಿತನಕ್ಕೆ ಆಧಾರ ಅವರ ಬಲ; ಭೀಮನಂತಹ ಬಲಾಢ್ಯ ಮತ್ತೊಬ್ಬನಿಲ್ಲ–ವಾದ್ದರಿಂದ ಅವನು ಅಲ್ಲಿರುವ ಎಲ್ಲರಿಗೂ ಪೂಜ್ಯ. ಧರ್ಮರಾಜ ಅವನ ಅಣ್ಣನಾದ್ದರಿಂದ ಅವನಿಗೆ ಪೂಜ್ಯ, ಆದ್ದರಿಂದ ಧರ್ಮರಾಜ ಎಲ್ಲರಿಗೂ ಪೂಜ್ಯ. ಇದು ಭೀಮಸೇನ ನೀಡಿದ ಅಪೂರ್ವ ಯುಕ್ತಿ

೨) ದುರ್ಯೋಧನ ಪಾಂಡವರಲ್ಲಿ ಒಡಕು ಹುಟ್ಟಿಸಲೆಂದು ಆ ಮಾತನ್ನಾಡಿದರೆ, ಭೀಮು–ಸೇನ ಸಮಸ್ತರನ್ನೂ ಸದೆಬಡಿಯುವ ಅಸ್ತ್ರವನ್ನಾಗಿ ಅದನ್ನು ಉಪಯೋಗಿಸಿಕೊಳ್ಳುವನು ಎಂಬು–ದರಲ್ಲಿ ಆತನ ಮಹಾವಿವೇಕ ತೋರುವುದು. ಭೀಮು ತನ್ನ ಹಿರಿತನವನ್ನು ಸಾರಲು ಆಗ ತನ್ನ ಬಾಹುಗಳ ಮಧ್ಯೆ ಸಿಲುಕಿಕೊಂಡರೆ *ದೇವೇಂದ್ರನೂ ಪಾರಾಗಲಾರ ಎನ್ನುವುದು ಗಮನಾರ್ಹ.

ಬಲಜ್ಯೈಷ್ಠ್ಯೇ ಯದಿ ವಃ ಸಂಶಯಃ ಸ್ಯಾ–
ದುತ್ತಿಷ್ಠಧ್ವಂ ಸರ್ವ ಏವಾದ್ಯ ವೀರಾಃ ।
ಮೃತ್ನಾಮಿ ವಃ ಪಾದತಲೇನ ಸರ್ವಾನ್
ಸಹಾನುಬಂಧಾನ್ ಯಶ್ಚ ಮಾಂ ಯೋದ್ಧುಕಾಮಃ ॥ ೩೩೯ ॥

ಯದ್ಯೇಷ ಗುರುರಸ್ಮಾಕಂ ಧರ್ಮರಾಜೋ ಮಹಾಮನಾಃ ।
ನ ಪ್ರಭುಃ ಸ್ಯಾತ್ ಕುಲಸ್ಯಾಸ್ಯ ನ ವಯಂ ಮರ್ಷಯೇಮಹಿ ॥
ಪಶ್ಯಧ್ವಂ ಹ್ಯಾಯತೌ ವೃತ್ತೌ ಭುಜೌ ಮೇ ಪರಿಘಾವಿವ ।
ನೈತಯೋರಂತರಂ ಪ್ರಾಪ್ಯ ಮುಚ್ಯೇತಾಪಿ ಶತಕ್ರತುಃ ॥
ಧರ್ಮರಾಜನಿಸೃಷ್ಟಸ್ತು ಸಿಂಹಃ ಕ್ಷುದ್ರಮೃಗಾನಿವ ।
ಧಾರ್ತರಾಷ್ಟ್ರಾನಿಮಾನ್ ಪಾಪಾನ್ ನಿಷ್ಪಿಷೇಯಂ ತಲಾಸಿಭಃ ॥ – ಭಾರತ (ಸಭಾ. ೭೦/೧೨, ೧೫, ೧೭)

ಅ: ''ನನ್ನ ಬಲದ ಹಿರಮೆಯ ಬಗ್ಗೆ ನಿಮಗೆ ಸಂಶಯವಿದ್ದಲ್ಲಿ ವೀರರಾದ ನೀವೆಲ್ಲ ಈಗಲೇ ಎದ್ದುಬನ್ನಿ, ನಿಮ್ಮನ್ನೆಲ್ಲ ನಿಮ್ಮ ಪರಿವಾರ ಸಮೇತ ನನ್ನ ಅಂಗಾಲಿನಿಂದ ಹೊಸಕಿಹಾಕುವೆ, ನನ್ನನ್ನು ಎದುರಿಸುವವರು ಯಾರು?''.

ವಿ: ೧) ಭೀಮನ ಅಗಾಧವಾದ ಬಲದ ಸ್ಪಷ್ಟ ಚಿತ್ರವನ್ನು ಇಲ್ಲಿ ಕಾಣಬಹುದು. ಅಲ್ಲಿಯ ಸರ್ವರೂ ಒಟ್ಟಾಗಿ ಬಂದರೂ ಅವನ ಅಂಗಾಲಿನ ತುಳಿತಕ್ಕೆ ಸಮರಾಗಲಾರರು ಎಂಬುದು ಇಲ್ಲಿಯ ಮುಖ್ಯಾಂಶ. ಅದು ಯಥಾರ್ಥವೂ ಆದುದು ಎಂಬುದು ಹಿಂದಿನ ಮುಂದಿನ ಅನೇಕ ಪ್ರಸಂಗಗಳಿಂದ ದೃಢಪಟ್ಟಿದೆ.

೨) ತನ್ನ ಸಮಗ್ರ ಜೀವನದಲ್ಲಿ ಭೀಮ ಎಂದೂ ಪರಾಭವಗೊಂಡಿಲ್ಲ ಎಂಬುದು ಅತ್ಯಂತ ಗಮನಾರ್ಹವಾದ ಅಂಶ. ಆಯುಧದ ಸಹಾಯವಿಲ್ಲದೇ ಕೇವಲ ಕಾಲುಳಿತದಿಂದ ಸರ್ವ ಮಹಾವೀರರನ್ನೂ ಸದೆಬಡಿಯಬಲ್ಲ ಸಾಮರ್ಥ್ಯವನ್ನು ಸಾರುವ ಮೂಲಕ ತನ್ನ ಬಲ ಅತ್ಯಂತ ಅಸಾಧಾರಣವಾದುದು ಎಂಬುದನ್ನು ಭೀಮ ಸಾರಿದ.

ಭೀಮನಿಂದ ಸಭೆಯ ಕಂಪನ

ಇತಿ ಬ್ರುವನ್ ಸಮುತ್ಥಿತೋ ನದನ್ ವೃಕೋದರೋ ಯದಾ।
ವಿಘೂರ್ಣಿತಾ ಸಭಾऽಖಿಲಾ ಭಯಾನ್ನ ಚಾಹ ಕಿಂಚನ ॥ ೩೪೦ ॥

ಅ: ಹೀಗೆನ್ನುತ್ತಾ ಭೀಮಸೇನ ಸಿಂಹನಾದ ಮಾಡುತ್ತಾ ಎದ್ದು ನಿಂತೊಡನೆ ಸಭೆಯೆಲ್ಲಾ ಭಯದಿಂದ ಗಡಗಡನೆ ನಡುಗಿತು; ಏನನ್ನೂ ನುಡಿಯದಾಯಿತು.

ವಿ: ೧) ಬಾಯಿಂದ ಅಂದದ್ದು ಮಾತ್ರವಲ್ಲದೇ ಕೃತಿಯಿಂದ ತನ್ನ ಅಂತಹ ಬಲವನ್ನು ತೋರಲು ಭೀಮ ಮುಂದಾಗಲು ಸಭೆಯಲ್ಲಿ ಅದನ್ನು ಎದುರಿಸುವ ಸಾಮರ್ಥ್ಯ ಒಬ್ಬನಿಗೂ ಇಲ್ಲವಾಗಿತ್ತು ಎಂಬುದು ಇದರ ಮುಖ್ಯಾಂಶ. ಎಂದರೆ ಭೀಮನ ಅಗಾಧಬಲದ ಪರಿಕಲ್ಪನೆ ಅವರಿಗೆಲ್ಲ ಮತ್ತೊಮ್ಮೆ ಸ್ಫುಟಪಟ್ಟಿತು ಎಂದರ್ಥ.

೨) ಹಿಂದೆ ಸಮಸ್ತರಾಜರ ಸಮ್ಮುಖದಲ್ಲಿ ಕೃಷ್ಣನನ್ನು ಎದುರಿಸಲಾಗದೇ ಎಲ್ಲರೂ ಪರಾಜಿತರಾದ ವಿವರ ಬಂದಿದೆ (೨೦/೭೮–೮೦). ಅದು ಅವನ ಸರ್ವೋತ್ತಮತ್ವಕ್ಕೆ ಸಾಧಕ–ವಾದರೆ, ಇದು ಭೀಮನ ಜೀವೋತ್ತಮತ್ವಕ್ಕೆ ಸಾಧಕವಾಯಿತು ಎಂಬುದು ವಿಶೇಷ.

---

೩೪೧. ತಮುವಾಚ ತದಾ ಭೀಷ್ಮೋ ದ್ರೋಣೋ ವಿದುರ ಏವ ಚ।
ಕ್ಷಮ್ಯತಾಮಿದಮಿತ್ಯೇವಂ ಸರ್ವಂ ಸಂಭಾವ್ಯತೇ ತ್ವಯಿ ॥ – ಭಾರತ (೨/೭೦/೧೮)

ಭೀಷ್ಮಾದಿಗಳ ಶರಣಾಗತಿ

ಭೀಷ್ಮೋ ದ್ರೋಣೋ ವಿದುರಾದ್ಯಾಃ ಕ್ಷಮಸ್ವ
ಸರ್ವಂ ತ್ವಯೋಕ್ತಂ ಸತ್ಯಮಿತ್ಯೇವ ಹಸ್ತೌ ।
ಗೃಹೀತ್ವೈನಂ ಸ್ಥಾಪಯಾಮಾಸುರಸ್ಮಿನ್
ಸ್ಥಿತೇ ಶಾಂತಿಂ ಚಾಪಿರೇ ಧಾರ್ತರಾಷ್ಟ್ರಾಃ ॥ ೩೪೧ ॥

ಅ: ಭೀಷ್ಮ, ದ್ರೋಣ, ವಿದುರ ಮೊದಲಾದವರು 'ಕ್ಷಮಿಸು, ನೀನು ಹೇಳಿದ್ದೆಲ್ಲಾ ಸತ್ಯ' ಎನ್ನುತ್ತಾ ಅವನ ಎರಡೂ ಕೈಗಳನ್ನು ಹಿಡಿದುಕೊಂಡು ಕುಳ್ಳಿರಿಸಿದರು. ಭೀಮ ಸುಮ್ಮನಾಗಲು ಕೌರವರಿಗೆ ನೆಮ್ಮದಿಯೆನ್ನಿಸಿತು.

ಎ: ೧) ಭೀಮನ ಆ ಮಾತನ್ನು ಭೀಷ್ಮಾದಿಗಳೆಲ್ಲ ಒಪ್ಪಿ ಆಗ ಮನ್ನಿಸಲು ಬೇಡಿದ್ದರಿಂದ ಭೀಮ ಸುಮ್ಮನಾದ ಎಂದರ್ಥ – **'ಸರ್ವಂ ಸಂಭಾವ್ಯತೇ ತ್ವಯಿ'**. ಅಂತಹ ಮಹಾಬಲಶಾಲಿಯಾದ ಭೀಮ ಹಿರಿಯರ ಮಾತನ್ನು ಗೌರವಿಸುವ ಅಸಾಮಾನ್ಯ ವಿನಯಶೀಲನೂ ಆಗಿದ್ದುದು ಇನ್ನೊಂದು ವಿಶೇಷ **'ವಿನಯೋ ಹಿ ಭೂಷಯತಿ ಸರ್ವಸ್ವಮ್'**(ಮ.ವಿ.೧೧/೫೪). ಶ್ರೀಹರಿಯ ಸಂಕಲ್ಪದಂತೆ ಅವರನ್ನು ಸಂಹರಿಸುವ ಕಾಲ ಅದಲ್ಲ ಎಂಬುದನ್ನು ತಿಳಿದು ಭೀಮಸೇನ ಸುಮ್ಮನಾದ ಎಂಬುದು ಇಲ್ಲಿಯ ಮುಖ್ಯ ಪ್ರಮೇಯ. ಭೀಮ ಸುಮ್ಮನಾದದ್ದು ಕೌರವರಿಗೆ ಆಗ ನೆಮ್ಮದಿ ನೀಡಿದ್ದು ಮಾತ್ರವಲ್ಲದೆ ಮುಂದೆ ಆ ಬಗೆಯ ಹೀನ ಕಾರ್ಯಗಳನ್ನು ಮುಂದುವರಿಸಲು ಸ್ಫೂರ್ತಿ ನೀಡಿತು ಎಂದು ತಿಳಿಯಬೇಕು.

೨) ದುಷ್ಟರ ಸ್ವಭಾವ ಇಂತಹುದು. ಅವರು ಸಜ್ಜನರ ಹಿರಿಮೆಯನ್ನು ಅರ್ಥಮಾಡಿಕೊಳ್ಳುವ ಬದಲು ಅದರ ದುರ್ಲಾಭವನ್ನು ಪಡೆಯುವಲ್ಲಿಯೇ ತಮ್ಮ ಅಧೋಗತಿಯನ್ನು ಸಾಧಿಸಿಕೊಳ್ಳುವರು. ಭೀಮ ಮತ್ತೆ ಹೀಗೆ ಸಿಡಿದೆದ್ದರೆ ಭೀಷ್ಮಾದಿಗಳೆಲ್ಲಾ ಪುನಃ ತಮ್ಮನ್ನು ಹೀಗೆಯೇ ಸಂರಕ್ಷಿಸುವರೆಂಬ ಕೆಟ್ಟ ಧೈರ್ಯ ಅವರಲ್ಲಿ ತುಂಬಿತು ಎಂದು ತಿಳಿಯಬೇಕು.

ಭೀಮನ ಸಹನೆಯ ಮರ್ಮ

ನಿವಾರಿತೋ ಧರ್ಮಜೇನ ಗುರುಭಿಶ್ಚಾಪ್ತರೈಸ್ತದಾ।
ಮಾನನಾರ್ಥಂ ಗುರೂಣಾಂ ತು ನ ಭೀಮಸ್ತಾನ್ ಜಘಾನ ಹ ॥ ೩೪೨ ॥

ಅ: ಧರ್ಮರಾಜನಿಂದಲೂ ಇತರ ಹಿರಿಯರಿಂದಲೂ ತಡೆಯಲ್ಪಟ್ಟ ಭೀಮಸೇನ ಗುರುಗಳನ್ನು ಗೌರವಿಸಲೆಂದು ಕೌರವರನ್ನೆಲ್ಲಾ ಆಗಲೇ ಕೊಲ್ಲಲಿಲ್ಲ.

ಎ: ಭೀಮ ಆಗ ಸುಮ್ಮನಾಗಲು ಮುಖ್ಯ ಕಾರಣ ಮಾತ್ರ ಶ್ರೀಹರಿಯ ಸಂಕಲ್ಪವೇ ಎಂಬುದನ್ನು ಮುಂದೆ ತಿಳಿಸುವರು (೨೨/೨೯–೩೫).

ನ ಚಾತ್ಯವರ್ತತ ಜ್ಯೇಷ್ಠಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ತೇಷಾಂ ಪಾಪಾಭಿವೃದ್ಧ್ಯರ್ಥಂ ಜ್ಯೇಷ್ಠವೃತ್ತಿಂ ಚ ದರ್ಶಯನ್ ॥ ೩೪೩ ॥

ಅ: ಅವರೆಲ್ಲರ ಪಾಪವನ್ನು ಇನ್ನೂ ಹೆಚ್ಚಿಸುವುದಕ್ಕಾಗಿ ಮತ್ತು ಅಣ್ಣನಲ್ಲಿ ತಮ್ಮಂದಿರು ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಸಿಕೊಡುವುದಕ್ಕಾಗಿ ಭೀಮಸೇನ ಅಣ್ಣನೂ , ಧರ್ಮಿಷ್ಠನೂ ಆದ ಧರ್ಮರಾಜನನ್ನು ಮೀರಿ ನಡೆಯಲಿಲ್ಲ.

ಎ: ಧರ್ಮರಾಜನ ಮಾತನ್ನು ಭೀಮ ಮೀರುವುದಿಲ್ಲವಾದ್ದರಿಂದ, ಧರ್ಮರಾಜನೇ ಭೀಮ–ಸೇನನಿಗಿಂತ ಸ್ವರೂಪದಲ್ಲಿ ಹಿರಿಯ ಎಂದು ತಪ್ಪಾಗಿ ತಿಳಿಯುವ ಮೂಲಕ ದುರ್ಯೋಧನಾದಿಗಳ ಪಾಪ ಹೆಚ್ಚುವುದು ಎಂಬ ಎಶೇಷಾಂಶ ವಾದಿರಾಜೀಯದಲ್ಲಿದೆ.

ಭೀಮನ ಊರುಭಂಗ ಪ್ರತಿಜ್ಞೆ

ಅಥ ದುರ್ಯೋಧನಃ ಪಾಪೋ ಭೀಮಸೇನಸ್ಯ ಪಶ್ಯತಃ।
ಊರುಂ ಸಂದರ್ಶಯಾಮಾಸ ಕೃಷ್ಣಾಯೈ ಭೀಮ ಆಹ ತಮ್ ॥ ೩೪೪ ॥

---

೩೪೨. ಕೃಷ್ಣಸಂಕಲ್ಪಸಿದ್ಧ್ಯರ್ಥಂ ಕೃಷ್ಣಾಯೈ ದ್ರೋಹಕಾರಿಣಃ ।
ನ ಜಘಾನಾಕ್ಷಕಿತವಾನ್ ಮತಂ ಜಾನನ್ ರಮಾಪತೇಃ ॥ - ಸರಸಭಾರತೀವಿಲಾಸ (೬/೧೮)

ಇದಂ ತು ಮಹದಾಶ್ಚರ್ಯಂ ಸಭಾಮಧ್ಯೇ ವೃಕೋದರಃ ।
ಸ್ವಭಾರ್ಯಾಯೈ ದ್ರುಹ್ಯತೋಽಪಿ ಸೇಹೇ ಸ್ನೇಹೇನ ಕೇಶವೇ ॥
ಸಸೈನ್ಯಸ್ಯ ಕುರುಕ್ಷೇತ್ರೇ ವಧೋ ಭೂಭಾರಹಾರಿಣಃ ।
ಯತೋ ಮತೋ ಹರೇಸ್ತಸ್ಮಾದಿದಾನೀಮಭವತ್ ಕ್ಷಮಾ ॥
ಈದೃಶ್ಯಾಮಪ್ಯವಸ್ಥಾಯಾಂ ಯೋಽಪ್ರಿಯಂ ನಾಕರೋದ್ಧರೌ ।
ಸ ತಸ್ಮಿನ್ ಶುದ್ಧಧೀಃ ಸಿದ್ಧೋ ಭೀಮಃ ಸರ್ವತ್ರ ಸರ್ವದಾ ॥ – ಸರಸಭಾರತೀವಿಲಾಸ (೬/೧೬-೧೮)

೩೪೩. ತೇಷಾಂ ಪಾಪಾಭಿವೃದ್ಧ್ಯರ್ಥಮಿತ್ಯತ್ರ ತೇಷಾಂ = ದುರ್ಯೋಧನಾದೀನಾಂ ಪಾಪಾಭಿವೃದ್ಧ್ಯರ್ಥಂ= ಭೀಮಸೇನಾದಪಿ ಯುಧಿಷ್ಠಿರೋ ಜ್ಯೇಷ್ಠ ಇತ್ಯಾದಿ ಭ್ರಮಜನನೇನ ಪಾಪಾಭಿವೃದ್ಧ್ಯರ್ಥಮ್। ತ್ರಯೋದಶ-ವರ್ಷಪರ್ಯಂತಂ ಪುನರಪಿ ವಿಷ್ಣುವೈಷ್ಣವದ್ರೋಹೇಣ ಪಾಪಾಭಿವೃದ್ಧ್ಯರ್ಥಂ ವಾ ॥ – (ವಾ.)

೩೪೪. ಊರುಂ ಸಂದರ್ಶಯಾಮಾಸೇತ್ಯತ್ರ ಮಮ ಭಾರ್ಯಾ ಊರಾವುಪವಿಶೇತಿ ದುರ್ಭಾವೇನ ಊರುಂ= ವಾಮೋರುಂ ಪ್ರದರ್ಶಯಾಮಾಸೇತ್ಯರ್ಥಃ ॥ – (ವಾ.)

ಅ: ಬಳಿಕ ಪಾಪಿಯಾದ ದುರ್ಯೋಧನ ಭೀಮಸೇನ ನೋಡುತ್ತಿದ್ದಂತೆಯೇ ದ್ರೌಪದಿಗೆ ತನ್ನ ತೊಡೆಯನ್ನು ತೋರಿಸಿದ.

ವಿ: ಹೀಗೆ ತೊಡೆ ತೋರುವ ಮೂಲಕ ದುರ್ಯೋಧನ ದ್ರೌಪದಿಯನ್ನು ತನ್ನ ತೊಡೆಯೇರಿ ಕುಳಿತುಕೋ ಎಂದು ಸೂಚಿಸಿದ. ಭೀಷ್ಮಾದಿಗಳು ತಡೆಯುವುದರಿಂದ ಭೀಮಸೇನ ಅಂದು ತಮ್ಮನ್ನು ಸರ್ವಥಾ ಶಿಕ್ಷಿಸಲಾರ ಎಂಬ ಕೆಟ್ಟ ಧೈರ್ಯದಿಂದ ದುರ್ಯೋಧನ ಇಂತಹ ಮಹಾ ಅಕಾರ್ಯಕ್ಕೆ ಎಳೆಸಿದ ಎಂದರ್ಥ. ಈ ರೀತಿಯಾಗಿ ಅವನ ಪಾಪಕಾರ್ಯ ಹೆಚ್ಚಬೇಕೆಂಬುದೂ ಸಹ ಭೀಮಸೇನ ಆಗ ಸುಮ್ಮನಿರಲು ಕಾರಣವಾಗಿತ್ತು ಎಂದು ತಿಳಿಯಬೇಕು.

ತವೋರುಮೇನಂ ಗದಯೋರುವೇಗಯಾ
ವಿಭೇತ್ಸ್ಯ ಇತ್ಯೇವ ಪುನಃ ಸುಯೋಧನಃ ।
ಊಚೇ ನಾನ್ಯದ್ಭವತಾಮಸ್ತಿ ವಿತ್ತಂ
ದ್ಯೂತೇ ಕೃಷ್ಣಂ ಸ್ಥಾಪಯಧ್ವಂ ಪಣಾಯ ॥ ೩೪೫ ॥

ಅ: 'ನಿನ್ನ ಈ ತೊಡೆಯನ್ನು ಮಹಾವೇಗದ ಗದೆಯಿಂದ ಪುಡಿಮಾಡುವೆ' - ಭೀಮ ಹೀಗೆನ್ನಲು ದುರ್ಯೋಧನ ಪುನಃ ನುಡಿದ 'ನಿಮಗೆ ಬೇರಾವ ಸಂಪತ್ತೂ ಇಲ್ಲ, ದ್ಯೂತದಲ್ಲಿ ಪಣವನ್ನಾಗಿ ಕೃಷ್ಣನನ್ನೇ ಇರಿಸಿರಿ'.

ವಿ: ಈ ವರೆಗೂ ಪಾಂಡವರನ್ನು ಅವಹೇಳನ ಮಾಡಿದ ದುರ್ಯೋಧನ ಈಗ ಶ್ರೀಕೃಷ್ಣನ ಅವಹೇಳನಕ್ಕೂ ತೊಡಗಿದ. ಹರಿಭಕ್ತರಲ್ಲಿ ಭಕ್ತಿ ಹರಿಭಕ್ತಿಗೆ ಕಾರಣವಾಗುವಂತೆ ಹರಿಭಕ್ತರ ದ್ರೋಹ ಹರಿದ್ರೋಹದಲ್ಲಿ ಪರ್ಯವಸಾನವಾಗುವುದು ಎನ್ನಲು ಇದೊಂದು ನಿದರ್ಶನ.

ಭೀಮನ ಭಯಂಕರ ಶಪಥ

ಅಥಾಬ್ರವೀದ್ವೃಕೋದರಃ ಕೃತೇऽವಮಾನನೇ ಹರೇಃ ।
ನಿಪಾತ್ಯ ಭೂತಲೇ ಹಿ ತೇ ಶಿರೋ ಮೃದಿಷ್ಯ ಇತ್ಯಲಮ್ ॥ ೩೪೬ ॥

---

೩೪೫. ವಿಭೇತ್ಸ್ಯ ಏವೇತಿ ಸಂಬಂಧಃ ॥ – (ವಾ.)

೩೪೬. ಸುಯೋಧನಮಿಮಂ ಪಾಪಂ ಹಂತಾऽಸ್ಮಿ ಗದಯಾ ಯುಧಿ ।
ಶಿರಃ ಪಾದೇನ ಚಾಸ್ಯಾಹಮಧಿಷ್ಠಾಸ್ಯಾಮಿ ಭೂತಲೇ ॥ – ಭಾರತ (೨/೭೭/೨೮)

ಅ: ದುರ್ಯೋಧನ ಹಾಗೆ ಶ್ರೀಹರಿಯನ್ನು ಅವಮಾನಿಸುತ್ತಲೆ ಭೀಮ ಶಪಥತೊಟ್ಟ 'ನಿನ್ನನ್ನು ನೆಲದ ಮೇಲೆ ಕೆಡವಿ ಚೆನ್ನಾಗಿ ತಲೆಯನ್ನು ತುಳಿಯುವೆ'.

ವಿ: ಹೀಗೆ ತಲೆ ತುಳಿಯುವುದು ಅವನನ್ನು ಸರ್ವಾತ್ಮನಾ ಜ್ಞಾನಶೂನ್ಯನನ್ನಾಗಿ ಮಾಡುವುದರ ಸಂಕೇತ. ಅದರೊಂದಿಗೆ ಅಂಧಂತಮಸ್ಸಿಗೆ ಕಳುಹಿಸುವುದರ ಸೂಚನೆ ಎಂದು ತಿಳಿಯಬೇಕು. ತಲೆಗೆ ಪೆಟ್ಟು ಬಿದ್ದಾಗ ಎಚ್ಚರ ತಪ್ಪುವುದು, ಕಣ್ಣು ಕತ್ತಲಿಡುವುದು ಲೋಕದಲ್ಲಿ ಕಂಡಿದೆಯಲ್ಲವೇ.

ಸ ವಧ್ಯ ಏವ ಮೇ ಸದಾ ಪರೋಕ್ಷತೋಽಪಿ ಯೋ ಹರಿಮ್।
ವಿನಿಂದಯೇದಿತಿ ಧ್ರುವಂ ಪ್ರತಿಶ್ರುತಂ ಹಿ ಮಾರುತೇಃ ॥ ೩೪೭ ॥

ಅ: 'ಪರೋಕ್ಷದಲ್ಲಾದರೂ ಹರಿಯನ್ನು ನಿಂದಿಸಿದವನನ್ನು ನಾನು ಸದಾ ನಿಶ್ಚಯವಾಗಿ ಸಂಹರಿಸುವೆ'ಎಂಬುದೇ ಭೀಮನ ದೃಢಪ್ರತಿಜ್ಞೆಯಲ್ಲವೇ!

ವಿ: ಎದುರಿಗೆ ಮಾತ್ರವಲ್ಲ ಎಲ್ಲಿಯೇ ಆದರೂ ಹರಿನಿಂದೆ ಮಾಡಿದವರನ್ನು ಭೀಮ ಸಂಹರಿಸದೇ ಬಿಡನು ಎಂದು ತಾತ್ಪರ್ಯ.

ಮತ್ತೊಮ್ಮೆ ಕರ್ಣನ ಅಪಚಾರ

ಪುನಶ್ಚ ಪಾಪವೃದ್ಧಯೇ ತದೈವ ನೋ ಜಘಾನ ತಮ್।
ವಿಕರ್ತನಾತ್ಮಜಃ ಪುನರ್ಜಗಾದ ಸೋಮಕಾತ್ಮಜಾಮ್ ॥ ೩೪೮ ॥

ಅ: ಮತ್ತೂ ಪಾಪ ಹೆಚ್ಚಲಿ ಎಂಬ ಕಾರಣದಿಂದ ಆಗಲೇ ಅವನನ್ನು ಕೊಲ್ಲಲಿಲ್ಲ. ಆಗ ಸೂರ್ಯಪುತ್ರನಾದ ಕರ್ಣ ದ್ರೌಪದಿಗೆ ಮತ್ತೆ ನುಡಿದ.

ಪ್ರಯಾಹಿ ಭೂಭೃತೋ ಹಿ ನೋ ಗೃಹಂ ನ ಸಂತಿ ಪಾಂಡವಾಃ।
ಇತೀರಿತೇ ಸಮುತ್ಥಿತೋ ವೃಕೋದರೋಽನು ಚಾರ್ಜುನಃ।
ಉಭೌ ಚ ತೌ ಯುಧಿಷ್ಠಿರೋ ನ್ಯವಾರಯತ್ ತಥಾ ಪರೇ ॥ ೩೪೯ ॥

ಅ: 'ದುರ್ಯೋಧನನ ಮನೆಗೆ ತೆರಳು, ನಿನಗಿನ್ನು ಪಾಂಡವರಿಲ್ಲ' - ಅವನು ಹೀಗೆನ್ನಲು ಭೀಮ ಏರಿ ಬಂದ; ಅವನ ಹಿಂದೆಯೇ ಅರ್ಜುನನೂ ಎದ್ದ. ಅವರಿಬ್ಬರನ್ನೂ ಧರ್ಮರಾಜನೂ, ಹಾಗೆಯೇ ಇತರರೂ ತಡೆದು ನಿಲ್ಲಿಸಿದರು.

ವಿ: ದುರ್ಯೋಧನನ ಸಹವಾಸದಿಂದಾಗಿ ಸೂರ್ಯಪುತ್ರನಾದ ಕರ್ಣನಿಗೂ ಆಗ ಅಕಾರ್ಯದಲ್ಲಿ ಮನಸ್ಸು ತೊಡಗಿತು ಎಂದು ತಿಳಿಯಬೇಕು : 'ಸಂಗಂ ನ ಕುರ್ಯಾತ್ ಪ್ರಮದಾಸು ಜಾತು', 'ತಮೋದ್ವಾರಂ ಯೋಷಿತಾಂ ಸಂಗಿಸಂಗಮ್'.

ಪಾಂಡವ ವಸ್ತ್ರಾಪಹರಣಕ್ಕೆ ದುರ್ಯೋಧನನ ಆದೇಶ

ತತೋ ನಿಷಣ್ಣಯೋಸ್ತಯೋಃ ಸುಯೋಧನೋ ವಚೋಽಬ್ರವೀತ್ ।
ದುಃಶಾಸನೈಷಾಂ ವಾಸಾಂಸಿ ದಾಸಾನಾಂ ನೋ ವ್ಯಪಾಕುರು ॥ ೩೫೦ ॥

ಇತ್ಯುಕ್ತೋಽಭ್ಯಗಮತ್ ಪಾರ್ಥಾನ್ ಸ್ವವಾಸಾಂಸ್ಯಥ ತೇ ದದುಃ ॥೩೫೧॥

ಅ: ಆಗ ಅವರಿಬ್ಬರೂ ಕುಳಿತುಕೊಳ್ಳಲು ದುರ್ಯೋಧನ ಈ ಮಾತನ್ನಾಡಿದ 'ದುಶ್ಶಾಸನ, ನಮ್ಮ ದಾಸರಾದ ಇವರ ವಸ್ತ್ರಗಳನ್ನು ಕಳಚಿಹಾಕು'. ಹೀಗೆ ಹೇಳಲ್ಪಟ್ಟ ದುಃಶಾಸನ ಪಾಂಡವರ ಬಳಿಗೆ ನುಗ್ಗಿದ. ಆಗ ಅವರು ವಲ್ಕಲಗಳನ್ನು ಧರಿಸಿ ತಮ್ಮ ವಸ್ತ್ರಗಳನ್ನು ತೆಗೆದಿರಿಸಿದರು.

ವಿ: ೧) ದುರ್ಯೋಧನನ ದುರ್ಬುದ್ಧಿ ಹಂತ ಹಂತವಾಗಿ ಹೆಚ್ಚು ಹೆಚ್ಚು ವಿಕೃತ–ವಾಗುತ್ತಿರುವುದನ್ನು ಇಲ್ಲಿ ಗಮನಿಸಬಹುದು. ರಾಮಾಯಣದಲ್ಲಿ ಕೈಕೇಯಿ ಶ್ರೀರಾಮಾದಿಗಳನ್ನು ಪೀತಾಂಬರ ತ್ಯಜಿಸಿ ವಲ್ಕಲ ಧರಿಸುವಂತೆ ಮಾಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅದಕ್ಕೆ ಅಲ್ಲಿ ಕಾರಣವಾಗಿ ಕೈಕೇಯಿಗೆ ಪ್ರಚೋದನೆ ನೀಡಿದ್ದು ಕಲಿಪತ್ನಿ ಮಂಥರೆಯಾದರೆ, ಇಲ್ಲಿ ಕಲಿಯಾದ ದುರ್ಯೋಧನನೇ ಆ ಕಾರ್ಯಕ್ಕೆ ತೊಡಗಿರುವನು.

೨) ಅಂತೂ ಪರರ ವಸ್ತ್ರಾಪಹರಣ ಕಲಿಯ ಮಹಾದುಷ್ಕಾರ್ಯಗಳಲ್ಲೊಂದು. ಅದಕ್ಕೆ ಕಾರಣ ವಸ್ತ್ರಾಭಿಮಾನಿ ವಾಯುದೇವರು ಎಂಬುದೇ ಆಗಿದೆ. ಕಲಿ ವಾಯುದ್ವೇಷಿಯಾದ್ದರಿಂದ ವಾಯುದೇವರಿಂದ ಅಭಿಮನ್ಯಮಾನವಾದ ವಸ್ತ್ರಗಳನ್ನು ಕಳಚಲು ಯತ್ನಿಸುವ ಮೂಲಕ ತನ್ನ ದ್ವೇಷವನ್ನು ತೋರಿಸಿಕೊಳ್ಳುವನು ಎಂದರ್ಥ.

ಪಾಂಡವರ ಅಪೂರ್ವ ಸಹನೆ

ತೇ ಚರ್ಮವಸನಾ ಭೂತ್ವಾ ತಾನಶಿಷ್ಯಾನ್ ಪ್ರಕಾಶ್ಯ ಚ ।
ನಿಷೇದುಶ್ಚ ಕ್ಷಮಾಯಾಂ ತೇ ಕ್ಷಮಾಮಾಲಂಬ್ಯ ವಿಸ್ತೃತಾಮ್ ॥ ೩೫೨ ॥

ಅ: ದುರ್ಯೋಧನಾದಿಗಳು ದುಷ್ಟರು ಎಂಬುದನ್ನು ತೋರಿಸಿಕೊಟ್ಟು, ಅವರು ವಿಶಾಲವಾದ ಕ್ಷಮೆಯನ್ನು ತಾಳಿ ನೆಲದ ಮೇಲೆ ಕುಳಿತರು.

ಎ: ಪಾಂಡವರು ಆಗ ತಾವಾಗಿಯೇ ವಸ್ತ್ರಗಳನ್ನು ತ್ಯಜಿಸಿ ಕೌರವರ ದೌರ್ಜನ್ಯವನ್ನು ಜಗತ್ತಿಗೆ ಸಾರಿದರು. ಆಸನಗಳನ್ನು ತ್ಯಜಿಸಿ ನೆಲದ ಮೇಲೆಯೇ ಕುಳಿತರು. ಹಾಗೆ ಉತ್ತಮರನ್ನು ಕೆಳಗೆ ಕುಳಿಸುವುದು ದುರ್ಯೋಧನನ ಪದಚ್ಯುತಿಗೆ ಸಾಧನ ಎಂಬ ಸೂಚನೆಯನ್ನೂ ನೀಡಿದರು.

ದ್ರೌಪದೀವಸ್ತ್ರಾಪಹರಣಕ್ಕೆ ದುಃಶಾಸನನ ಪ್ರಯತ್ನ

ಪುನರ್ದುರ್ಯೋಧನೇನೋಕ್ತಃ ಪಾರ್ಥಾನಾಮಥ ಪಶ್ಯತಾಮ್ ।
ಚಕರ್ಷ ವಾಸೋ ದ್ರೌಪದ್ಯಾಸ್ತದಾऽವಾದೀದ್ ವೃಕೋದರಃ ॥ ೩೫೩ ॥

ಆ: ಮತ್ತೆ ದುರ್ಯೋಧನ ಹೇಳಿದಂತೆ ದುಶ್ಶಾಸನ ಪಾಂಡವರು ನೋಡುತ್ತಿದ್ದಂತೆಯೇ ದ್ರೌಪದಿಯ ಸೀರೆಯನ್ನು ಸೆಳೆಯತೊಡಗಿದ. ಆಗ ಭೀಮ ಶಪಥತೊಟ್ಟ.

---

೩೫೨. **ಚೀರವಸನಾ** – (ಜ. ಪಾಠ)

೩೫೨. 'ತೇ ಚರ್ಮವಸನಾ ಭೂತ್ವಾ ತಾನಶಿಷ್ಟಾನ್ ಪ್ರಕಾಶ್ಯ ಚ। ನಿಷೇದುಶ್ಚ ಕ್ಷಮಾಯಾಂ ತೇ ಕ್ಷಮಾಮಾಲಂಬ್ಯ ವಿಸ್ಮತಾಮ್' ಇತ್ಯತ್ರ ತೇ ಪಾಂಡವಾಶ್ಚರ್ಮವಸನಾಃ ದೇಹಸ್ಥಚರ್ಮ್ಯೇವ ವಸನಂ ವಸ್ತ್ರಂ ಯೇಷಾಂ ತೇ ತಥಾ । ಉಪರಿಪರಿಧಾನರಹಿತಾ ಇತ್ಯರ್ಥಃ । ದಿಗ್ವಾಸಾ ಇತಿ ಯಾವತ್ । ಯದ್ವಾ ಕೃಷ್ಣಾಜಿನಾದಿಚರ್ಮಪರಿಧಾನಾ ಇತ್ಯರ್ಥಃ । ಯದ್ವಾ 'ಅಚರ್ಮವಸನಾ' ಇತಿ ವಿಭಾಗಃ । ಅಜಿನಾದಿನಾऽಪಿ ರಹಿತಾ ಇತ್ಯರ್ಥಃ । – (ರಾ.)

೩೫೨. ಕ್ಷಮಾಯಾಂತೇತ್ಯೇಕಂ ಪದಂ ಆಯಃ ಆಯತಿರ್ನಾಮವಿಸ್ತಾರಃ ಕ್ಷಮಾಯಾಃ ಆಯಃ ಕ್ಷಮಾಯಃ ಕ್ಷಮಾಯಸ್ಯ ಅಂತೇ ಸಮಾಪ್ತೌ ಸಭಾತಲಸಭ್ಯಮೇಃ ಪ್ರಾಂತಭಾಗ ಇತಿಭಾವಃ । – (ಜ.)

೩೫೨. **ಸಭಾಯಾಂತ** ಇತಿ ವಾ ಪಾಠಃ । – (ಜ.)

೩೫೨. ಯದ್ವಾ ಕ್ಷಮಾಯಾಂತ ಇತ್ಯತ್ರ ಕ್ಷಮಾಯಾ ಅಂತ ಇತಿ ಪದಚ್ಛೇದಃ । ಸಭಾ ಭೂಮ್ಯಾಂತ ಇತ್ಯರ್ಥಃ । ಪ್ರಿಯಃ ಪ್ರಿಯಾಯಾರ್ಹಸಿ ದೇವಸೋಢುಮಿತಿವದ್ವಿಸರ್ಗಲೋಪೇನ ಕ್ಷಮಾಯಾಂತ ಇತಿ ಪ್ರಾಪ್ತಮ್ । – (ತಾ.)

೩೫೨. ತೇ ಪಾಂಡವಾಃ ತೇ ಚ ತೇऽಪಿ ಶೌರ್ಯಾದಿಗುಣವತ್ತಯಾ ಪ್ರಸಿದ್ಧಾ ಅಪಿ ಚರ್ಮವಸನಾ ಭೂತ್ವಾ ತಾನ್ ದುರ್ಯೋಧನಾದೀನಶಿಷ್ಟಾನ್ ಪ್ರಕಾಶ್ಯ ವಿಸ್ಮೃತಾಂ ಮಹತೀಂ ಕ್ಷಮಾಮಾಲಂಬ್ಯ ಚ ಕ್ಷಮಾಯಾಂ ನಿಷೇದುರಿತಿ ॥ – (ಸ.)

೩೫೨. ಗುಹಾಶಯಾಶಬ್ದವತ್ ಕ್ಷಮಾಯಾಶಬ್ದ ಆಕಾರಾಂತಃ ॥ – (ರಾ.)

೩೫೨. ಸಭಾಯಾಂ ತದಂತಿಕೇ ಇತಿ ಕೇಚಿತ್ ಪಠಂತಿ । ಅನ್ಯೇ ತ್ವಾಹುಃ ಅಚರ್ಮವಸನಾಸ್ತೇ ಭೂತ್ವಾ ಚರ್ಮವಸನಾ ಭೂತ್ವೇತಿ । ಅಪರೇ ತ್ವಾಹುಃ ತೇ ಯಾಂ ಕ್ಷಮಾಮಾಲಂಬ್ಯ ನಿಷೇದುಃ ಸೈವ ಕ್ಷಮೇತಿ ಅಸ್ಮಿನ್ ಪಕ್ಷೇ ಕ್ಷಮಾಯಾಂತೇ ಪದತ್ರಯಮಿತ್ಯುಕ್ತಂ ಭವತಿ । – (ತಿ.)

ಎ: ದ್ರೌಪದಿ ಭಾವೀ ಸರಸ್ವತಿ, ವಿದ್ಯಾಭಿಮಾನಿ ದೇವತೆ. ಅವರ ವಸ್ತ್ರವನ್ನು ಕಳಚುವ ಪ್ರಯತ್ನ ವೇದಾದಿಶಾಸ್ತ್ರಗಳ ಮುಖ್ಯಾರ್ಥವನ್ನು ಬದಲಿಸುವ ಕುತಂತ್ರಕ್ಕೆ ಸಂಕೇತ. ಬಲಾತ್ಕಾರ–ವಾಗಿ ಶಾಸ್ತ್ರಾರ್ಥವನ್ನು ತಿಳಿಯಬಯಸುವ ಯತ್ನವೂ ಸಹ ದ್ರೌಪದೀ ವಸ್ತ್ರಾಪಹರಣದಂತೆ ಅತ್ಯಂತ ಹೇಯ ಕಾರ್ಯ. ಜೊತೆಗೆ ಪ್ರಕೃತಿಯ ಸಂಕೇತ. ಬಲಾತ್ಕಾರವಾಗಿ ಪ್ರಕೃತಿಯನ್ನೆಲ್ಲ ಸಂಪೂರ್ಣ ಅರಿವೆವು ಎಂಬ ಕೆಲವು ಆಧುನಿಕರ ಮೂರ್ಖತನದ ಸಂಕೇತ. ದುಶ್ಶಾಸನ ದುಷ್ಟ ಶಾಸನದ ಸಂಕೇತ. ದುಷ್ಟ ಶಾಸನಗಳ ಪರಿಣಾಮದಿಂದಾಗಿ ಅನರ್ಹರೂ ಸಹ ಶಾಸ್ತ್ರವಿದ್ಯೆಯನ್ನು ಅಪಾರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೆ ತೊಡಗುವುದು ಇಲ್ಲಿಯ ಧ್ವನಿ. ಅದನ್ನು ಪ್ರತಿಭಟಿಸುವ ಮಹಾಸಾಮರ್ಥ್ಯ ಭೀಮನದು ಮಾತ್ರ ಎಂಬ ಪ್ರಮೇಯವೂ ಇಲ್ಲಿದೆ.

ದುಃಶಾಸನನ ವಧೆಗೆ ಭೀಮನ ಭಯಂಕರ ಪ್ರತಿಜ್ಞೆ

ಪಾಪೇಷು ಪೂರ್ವಸ್ಯ ತಥಾऽಧಮಸ್ಯ
ವಂಶೇ ಕುರೂಣಾಮುರುಧರ್ಮಶೀಲಿನಾಮ್ ।
ದುಃಶಾಸನಸ್ಯಾಸ್ಯ ವಿದಾರ್ಯ ವಕ್ಷಃ
ಪಿಬಾಮಿ ರಕ್ತಂ ಜಗತಃ ಸಮಕ್ಷಮ್ ॥ ೩೫೪ ॥

ಅ: 'ಪಾಪಿಗಳಲ್ಲಿ ಮೊದಲಿಗನೂ, ಮಹಾ ಧರ್ಮಶೀಲರಾದ ಕುರುಗಳ ವಂಶದಲ್ಲಿ ಜನಿಸಿದ ನೀಚನೂ ಆದ ಈ ದುಶ್ಶಾಸನನ ಎದೆಯನ್ನು ಬಗೆದು ರಕ್ತವನ್ನು ಕುಡಿಯುವೆ'.

ವಿ: ೧) ದುಶ್ಶಾಸನನ ಎದೆಬಗೆದು ರಕ್ತಪಾನ ಮಾಡುವ ಭೀಮಸೇನನ ಶಪಥ ಮಹಾಭಾರತದ ಅಸಾಮಾನ್ಯ ಪ್ರಸಂಗಗಳಲ್ಲೊಂದು. ವಸ್ತ್ರಾಪಹರಣ ಮಾಡಬಯಸಿದ ಅವನ ಎದೆಯನ್ನೇ ಸೀಳುವುದು ಸಹ ಯೋಗ್ಯ ಪ್ರತೀಕಾರದ ಸಂಕೇತ. ರಕ್ತ ಕುಡಿಯುವುದು ಸಂಹರಿಸು–ವುದಕ್ಕೆ ಸೂಚಕ. ಭೀಮಸೇನ ವಾಸ್ತವವಾಗಿ ದುಶ್ಶಾಸನನ ರಕ್ತಪಾನ ಮಾಡಿಲ್ಲ ಎಂಬ ವಿವರ ಮುಂದೆ ಬರುವುದು (೨೭/೧೪೦).

೨) ಭೀಮಸೇನ ಇಲ್ಲಿ ತೋರಿದ ಸಂಯಮ ಅತ್ಯಂತ ಅಗಾಧವಾದುದು. ಒಂದುಕಡೆ ಪ್ರಿಯಪತ್ನಿಗಾಗುತ್ತಿದ್ದ ಅತ್ಯಂತ ಹೇಯವಾದ ಅವಮಾನ, ಮತ್ತೊಂದೆಡೆ ಪಾಪಿಗಳಾದ ಕೌರವರ–ನ್ನೆಲ್ಲಾ ಆಗಲೇ ಸಂಹರಿಸದೇ ಕುರುಕ್ಷೇತ್ರ ಯುದ್ಧದಲ್ಲಿಯೇ ಸಂಹರಿಸಬೇಕು ಎಂಬ ಕೃಷ್ಣನ ಸಂಕಲ್ಪ.

---

೩೫೪. ಅಸ್ಯ ಪಾಪಸ್ಯ ದುಬುದ್ಧೇರ್ಭಾರತಾಪಸದಸ್ಯ ಚ ।
ನ ಪಿಬೇಯಂ ಬಲಾದ್ ವಕ್ಷೋ ಭಿತ್ವಾ ಚೇದ್ರುಧಿರಂ ಯುಧಿ ॥ – ಭಾರತ (೨/೬೮/೫೩)

ಒಂದೆಡೆ ಪತ್ನಿ, ಮತ್ತೊಂದೆಡೆ ಜಗತ್ಪತಿಯಾದ ಶ್ರೀಹರಿ. ಇಂತಹ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಸ್ವಾಮಿಭಕ್ತಿಗಿಂತ ಪತ್ನೀಪ್ರೇಮವೇ ಮೇಲಾಗಿ ಮಹಾಜ್ಞಾನಿಗಳೂ ಸಹ ಧರ್ಮಪ್ರಜ್ಞೆಯನ್ನು ಕಳೆದು ಕೊಳ್ಳುವುದುಂಟು.

೩) ಗೌತಮರಂತಹ ಮಹಾತಪಸ್ವಿಗಳು ಅಹಲ್ಯಾಪ್ರಸಂಗದಲ್ಲಿ ಧರ್ಮಪ್ರಜ್ಞೆಗಿಂತ ಪತ್ನೀಪ್ರೇಮವನ್ನೇ ಪ್ರಧಾನವನ್ನಾಗಿಸಿಕೊಂಡು ಅವಳ ಮೇಲೆ ಬಲಾತ್ಕರಿಸಿದ್ದಕ್ಕಾಗಿ ಇಂದ್ರದೇವ–ರನ್ನೇ ಶಪಿಸುವ ಅಕಾರ್ಯಕ್ಕೆ ಎಳೆಸಿದರು. ಬೇರೆಲ್ಲ ಬಗೆಯಿಂದಲೂ ಜಿತಕ್ರೋಧರಾಗಿದ್ದ ಅವರು ಪತ್ನೀಧರ್ಷಣ ನಿಮಿತ್ತವಾದ ಕ್ರೋಧವನ್ನು ಗೆಲ್ಲಲಾಗದೇ ಇಂದ್ರನ ಮೇಲೆ ಮುನಿದು ತಮ್ಮ ಅಪಾರ ತಪಃಶಕ್ತಿಯನ್ನು ಶಾಪ ನೀಡುವ ಮೂಲಕ ಕಳೆದುಕೊಂಡದ್ದು ರಾಮಾಯಣದಲ್ಲಿ ಪ್ರಸಿದ್ಧ.

೪) **'ಸತಿಯಳ ಬೈದರೆ ನಾ ಬೈವೆ'** ಎಂಬ ನರಹರಿತೀರ್ಥರ ಕೀರ್ತನೆಯಲ್ಲಿ ಇದರ ಚಿತ್ರಣವಿದೆ. ಆದರೆ, ಭೀಮ ಪತ್ನೀಪ್ರೇಮಕ್ಕಿಂತ ಮಿಗಿಲಾಗಿ ಸ್ವಾಮಿಭಕ್ತಿಯನ್ನೇ ಮೆರೆದ ಅಪ್ರತಿಮ ಭಾಗವತ ಶಿರೋಮಣಿ. ರುದ್ರಾದಿ ದೇವತೆಗಳನ್ನೂ ಮೀರಿಸಿದ ಅಚ್ಛಿನ್ನ ಭಕ್ತ. ಈ ಬಗ್ಗೆ ಸರಸಭಾರತೀವಿಲಾಸದಲ್ಲಿ ಶ್ರೀವಾದಿರಾಜರು ತುಂಬಾ ವಿವರವಾಗಿ ವಿಶ್ಲೇಷಣೆ ಮಾಡಿರುವುದನ್ನು ಗಮನಿಸಬೇಕು.

೫) ಭೀಮನ ಆ ರೀತಿಯ ವರ್ತನೆಗೆ ತನ್ನ ಪತ್ನಿಯ ಅಸಾಮಾನ್ಯ *ಸಾಮರ್ಥ್ಯದ ಪರಿವೆ ಇದ್ದದ್ದು ಮತ್ತೊಂದು ಕಾರಣ. ಭೀಮನಿಗೆ ತಿಳಿದಿತ್ತು ತನ್ನ ಪತ್ನಿಯನ್ನು ರುದ್ರಾದಿದೇವತೆಗಳ ವರವಿರುವ ಮಹಾದೈತ್ಯನೂ ಸಹ ಯಾವುದೇ ರೀತಿಯಲ್ಲೂ ಪರಾಭವಗೊಳಿಸಲಾರ. ಇಂತಹ ದಿವ್ಯ ಪರಿಜ್ಞಾನದಿಂದಾಗಿ ದ್ರೌಪದಿ ಪೂರ್ಣ ಸುರಕ್ಷಿತಳು ಎಂಬ ಕಾರಣದಿಂದಲೂ ಭೀಮ ಆಗಲೇ ಆಪತ್ಪರಿಹಾರಕ್ಕೆ ಮುಂದಾಗಲಿಲ್ಲ ಎಂಬುದನ್ನು ಸಹ ಗಮನಿಸಬೇಕು.

ಶ್ರೀಕೃಷ್ಣನಿಂದ ಅಕ್ಷಯವಸ್ತ್ರಪ್ರದಾನ

ವಿಕೃಷ್ಯಮಾಣೇ ವಸನೇ ತು ಕೃಷ್ಣಾ
ಸಸ್ಮಾರ ಕೃಷ್ಣಂ ಸುವಿಶೇಷತೋऽಪಿ ।
ತದಾऽನ್ಯದಾಸೀದ್ವಸನಂ ಚ ತಸ್ಯಾ
ದಿವ್ಯಂ ಸುಸೂಕ್ಷ್ಮಂ ಕನಕಾವದಾತಮ್ ॥ ೩೫೫ ॥

---

* ಭವತಿ ಯದನುಭಾವಾದೇಡಮೂಕೋऽಪಿ ವಾಗ್ಮೀ ಜಡಮತಿರಪಿ ಜಂತುರ್ಜಾಯತೇ ಪ್ರಾಜ್ಞಮೌಲಿಃ ।
ಸಕಲವಚನಚೇತೋ ದೇವತಾ ಭಾರತೀ ಸಾ ಮಮ ವಚಸಿ ನಿಧತ್ತಾಂ ಸನ್ನಿಧಿಂ ಮಾನಸೇ ಚ ॥
– ಶ್ರೀಮನ್ನ್ಯಾಯಸುಧಾ

ಅ: ದುಶ್ಶಾಸನನು ಸೀರೆಯನ್ನು ಸೆಳೆಯತೊಡಗುತ್ತಲೆ ದ್ರೌಪದಿಯು ಅತ್ಯಂತ ವಿಶೇಷವಾಗಿ ಕೃಷ್ಣನನ್ನು ಸ್ಮರಿಸತೊಡಗಿದಳು. ಆಗ ದಿವ್ಯವಾದ, ಅತ್ಯಂತ ಸೂಕ್ಷ್ಮವಾದ, ಬಂಗಾರದಂತೆ ಕಂಗೊಳಿಸುವ ಮತ್ತೊಂದು ಸೀರೆ ಕಾಣಿಸಿಕೊಂಡಿತು.

ಎ: ೧) ದುಶ್ಶಾಸನನು ವಸ್ತ್ರಾಪಹರಣಕ್ಕೆ ತೊಡಗುತ್ತಿದ್ದಂತೆಯೇ ಅದ್ಭುತ ಪವಾಡ ಘಟಿಸಿತು. ಅವನು ಸೀರೆ ಸೆಳೆಯುತ್ತಿದ್ದಂತೆಯೇ ಒಂದರ ಅನಂತರ ಮತ್ತೊಂದು ಸೀರೆ ಕಾಣಿಸಿಕೊಳ್ಳತೊಡಗಿತು. ಹಾಗೆ ಬರುತ್ತಿದ್ದ ಸೀರೆಗಳೂ ಸಹ ಸಾಮಾನ್ಯವಾಗಿರದೇ ಅತ್ಯಂತ ನವಿರಾದ ದಿವ್ಯ ಪೀತಾಂಬರಗಳೇ ಆಗಿದ್ದವು ಎಂಬುದು ಮತ್ತೊಂದು ವಿಶೇಷ.

೨) ದುಃಶಾಸನ ವಸ್ತ್ರಾಪಹರಣಕ್ಕೆ ತೊಡಗುತ್ತಲೇ ದ್ರೌಪದಿಯು ಬಗೆಬಗೆಯಾಗಿ ಪ್ರಾರ್ಥನೆ ಮಾಡಿದ ಉಲ್ಲೇಖ ಮಹಾಭಾರತದಲ್ಲಿದೆ. ಆದರೆ ದ್ರೌಪದಿ ಋಜುಯೋಗಿ. ಫಲಾಪೇಕ್ಷೆಯಿಂದ ಅವರು ಯಾವ ಕಾರ್ಯವನ್ನೂ ಮಾಡುವವರಲ್ಲ. **'ಮಾ ಫಲೇಷು ಕದಾಚನ'** ಎಂಬುದು ಭಗವದ್ಭಕ್ತರಿಗೆಲ್ಲಾ ಸಮಾನಸಂದೇಶವಾಗಿರುವಾಗ, ಮಹಾಭಾಗವತಶಿರೋಮಣಿಯಾದ ಅವರು ಹಾಗೆ ಫಲಕ್ಕಾಗಿ ಪ್ರಾರ್ಥನೆ ಮಾಡುವುದು ಸಾಧ್ಯವೂ ಇಲ್ಲ. ರುದ್ರಾದಿದೇವತೆಗಳಿಗಿಂತ ಮಹಾಸಮರ್ಥರಾದ ಅವರಿಗೆ ಯಾವ ದೈತ್ಯಶಕ್ತಿಗಳಿಂದಲೂ ಯಾವುದೇ ವಿಧವಾದ ಭಯ ಯಾವ ಕಾಲದಲ್ಲೂ ಸರ್ವಥಾ ಇರುವುದಿಲ್ಲ ಎಂಬುದು ಮುಖ್ಯಪ್ರಮೇಯ.

---

೩೫೫. ಹರಿಶ್ಚ ಭೀಮಸೇನಸ್ಯ ದೃಷ್ಟ್ವಾ ಭಕ್ತಿಮಚಂಚಲಾಮ್ ।
ಅಕಾರ್ಷೀತ್ ತಸ್ಯ ಮಹಿಷೀಂ ದ್ರೌಪದೀಮಕ್ಷಯಾಂಬರಾಮ್ ॥
ಅನ್ಯೋನ್ಯಸ್ಪರ್ಧಯೋರೇವಂ ಶುದ್ಧಯೋಃ ಕೃಷ್ಣಭೀಮಯೋಃ ।
ಕೋಽನ್ಯಥಾ ಕುರುತೇ ಚಿತ್ತಂ ದೇವೋ ವಾ ದಾನವೋಽಪಿ ವಾ ॥ - ಸ. ಭಾ. ವಿ. (೬/೨೧/೨೩

ಆಕೃಷ್ಯಮಾಣೇ ವಸನೇ ದ್ರೌಪದ್ಯಾಶ್ಚಿಂತಿತೋ ಹರಿಃ । – ಭಾರತ (೨/೬೮/೪೧)

ಕೃಷ್ಣಂ ಚ ಜಿಷ್ಣುಂ ಚ ಹರಿಂ ನರಂ ಚ ತ್ರಾಣಾಯ ವಿಕ್ರೋಶತಿ ಯಾಜ್ಞಸೇನೀ ।
ತತಸ್ತು ಧರ್ಮೋಽಂತರಿತೋ ಮಹಾತ್ಮಾ ಸಮಾವೃಣೋದ್ವೈ ವಿವಿಧೈಃ ಸುವಸ್ತ್ರೈಃ ॥ – ಭಾರತ (೨/೬೮/೪೬)

೩೫೫. ಆಕೃಷ್ಯಮಾಣೇ ವಸನೇ ದ್ರೌಪದ್ಯಾಸ್ತು ವಿಶಾಂಪತೇ ।
ತದ್ರೂಪಮಪರಂ ವಸ್ತ್ರಂ ಪ್ರಾದುರಾಸೀದನೇಕಶಃ ॥ – ಭಾರತ (೨/೬೮/೪೭)

ನಾನಾರಾಗವಿರಾಗಾಣಿ ವಸನಾನ್ಯಥ ವೈ ಪ್ರಭೋ ।
ಪ್ರಾದುರ್ಭವಂತಿ ಶತಶೋ ಧರ್ಮಸ್ಯ ಪರಿಪಾಲನಾತ್ ॥ – ಭಾರತ (೨/೬೮/೪೮)

೩೫೫. ಕೃಷ್ಣಂ ಸುವಿಶೇಷತೋಽಪೊಷ್ಯಾರೇತ್ಯುಕ್ತ್ಯಾ ಮಹಾಪದ್ಯಪಿ ತಸ್ಯಾಃ ಮನೋ ಭಗವನ್ನಿಯತಮೇವೇತ್ಯುಕ್ತಂ ಭವತಿ ನ ತ್ವಾಪನ್ನಿವೃತ್ಯರ್ಥ ತತ್ಸ್ಮರಣಂ ತಸ್ಯಾಃ ಶುದ್ಧಭಾಗವತಧರ್ಮನಿರತತ್ವೇನ ಕ್ರಮ್ಯಾನುಷ್ಠಾನರಹಿತತ್ವಾತ್ ತದಾ ನ ದ್ದುಸನವಿಕರ್ಷಣಾಮರೇ ತಸ್ಯಾಸ್ತೂರ್ವಪರಿಧಾನಮಸನಾತ್ ದಿವ್ಯಂ ಉತ್ತಮಮ್ । – (ಜ.)

೩) ಹಾಗಿದ್ದಲ್ಲಿ ದ್ರೌಪದಿ *ಪ್ರಾರ್ಥನೆ ಮಾಡಿದ್ದೇಕೆ ಎಂಬುದಕ್ಕೆ ಆಚಾರ್ಯರು 'ಸುವಿಶೇಷತೋಽಪಿ' ಎಂದು ವಿವರಣೆ ನೀಡಿರುವರು. ಎಂದರೆ ಋಜುಗಳು ಸದಾ ಹರಿಸ್ಮರಣೆ–ಯಲ್ಲೇ ನಿರತರಾದವರು. ಆಗಲೂ ಸಹ ಎಂದಿನಂತೆ ಭಕ್ತ್ಯತಿಶಯದಿಂದ ಶ್ರೀಹರಿಯನ್ನು ಸ್ಮರಿಸಿದರೇ ಹೊರತು ಆಪನ್ನಿವೃತ್ತಿಗಾಗಿ ಅಲ್ಲ ಎಂಬ ಅಪೂರ್ವವಿವರಣೆ ಜನಾರ್ದನೀಯದಲ್ಲಿದೆ.

೪) ದ್ರೌಪದಿಗೆ ಯಾವುದೇ ರೀತಿಯಲ್ಲೂ ದುಃಖದ ಪ್ರಸಕ್ತಿ ಸರ್ವಥಾ ಇಲ್ಲವೆಂಬ ಮತ್ತೊಂದು ಪ್ರಮೇಯವನ್ನು ಮುಂದೆ ತಿಳಿಸಿರುವರು(೩೦/೧೨೯). ಕೃಷ್ಣಾ ಎಂಬ ಅವರ ಹೆಸರಿನಲ್ಲೇ ಅವರು ಸದಾ ಆನಂದಪೂರ್ಣರು ಎಂಬ ವಿಶೇಷಾರ್ಥವಿದೆ ಎಂಬ ವಿವರ ಈಗಾಗಲೇ ಬಂದಿದೆ. **'ಉತ್ಕೃಷ್ಟಾ ನಂದಿನೀ ಚ ಸಾ'** (೧೮/೧೦೧).

೫) ಇನ್ನು **'ಗೋವಿಂದ ದ್ವಾರಕಾವಾಸಿನ್'** ಎಂಬ ಮಾತುಗಳ ವಿವರ – ಮೇಲ್ನೋಟಕ್ಕೆ ಇಲ್ಲಿ ದುಃಖದ ಧ್ವನಿಯಿರುವುದು ಸ್ಪಷ್ಟ. ಆದರೆ, ಅಂತಹ ದುಃಖದ ಧ್ವನಿಯನ್ನು ಭಾರತಿ ಸರ್ವಥಾ ಹೊಂದಲು ಸಾಧ್ಯವಿಲ್ಲವಾದ್ದರಿಂದ ಅದರ ತಾತ್ಪರ್ಯ ಬೇರೆಯೇ ಆಗಿದೆ. ದ್ರೌಪದಿಯ ದೇಹದಲ್ಲಿ ಪಾರ್ವತ್ಯಾದಿ ಇತರ ದೇವತಾಸ್ತ್ರೀಯರು ಇರುವರು. ಅವರಿಗೆ ಬ್ರಹ್ಮಶಾಪದಿಂದ ಪರ–ಪುರುಷಸ್ಪರ್ಶದ ಭೀತಿಯಿದೆ. ದುಃಶಾಸನ ಆ ಕಾರ್ಯಕ್ಕೆ ಈಗ ತೊಡಗಿಯೂ ಇರುವನು, ಅದರ ಪರಿಹಾರಕ್ಕೆಂದು ಅವರು ಹಾಗೆ ರಕ್ಷಣೆಗಾಗಿ ಪ್ರಾರ್ಥಿಸಿಕೊಂಡರು ಎಂದು ತಿಳಿಯಬೇಕು.

೬) 'ಪತಿಂ ದೇಹಿ' ಎಂಬ ಮಾತು ಒಂದೇ ಬಾಯಿಂದ ಬೇರೆ ಬೇರೆ ದೇವತಾ ಸ್ತ್ರೀಯರಿಂದ ಬಂದ ವಿವರ ಹಿಂದೆ ಬಂದಿರುವುದನ್ನು ಗಮನಿಸಬೇಕು. ಅದರಂತೆ ಕೇವಲ ಭಕ್ತಿಯ ಪ್ರಾರ್ಥನೆಯೆಲ್ಲಾ, ಭಾರತಿಯ ಮಾತುಗಳಾಗಿದ್ದು ಫಲಾಪೇಕ್ಷೆಯ ದುಃಖದ ಪ್ರಾರ್ಥನೆಯೆಲ್ಲಾ ಇತರ ದೇವತಾ ಸ್ತ್ರೀಯರ ಪ್ರಾರ್ಥನೆಯೆಂದು ತಿಳಿಯಬೇಕು.

---

* ಗೋವಿಂದೇತಿ ಸಮಾಭಾಷ್ಯ ಕೃಷ್ಣೇತಿ ಚ ಪುನಃ ಪುನಃ।
ಮನಸಾ ಚಿಂತಯಾಮಾಸ ದೇವಂ ನಾರಾಯಣಂ ಪ್ರಭುಮ್ ।
ಆಪತ್ಸ್ವಭಯದಂ ಕೃಷ್ಣಂ ಲೋಕಾನಾಂ ಪ್ರಪಿತಾಮಹಮ್ ॥
ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ।
ಕೌರವೈಃ ಪರಿಭೂತಂ ಮಾಂ ಕಿಂ ನ ಜಾನಾಸಿ ಕೇಶವ ॥
ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ।
ಕೌರವಾರ್ಣವಮಗ್ನಾಂ ಮಾಮುದ್ಧರಸ್ವ ಜನಾರ್ದನ ॥
ಕೃಷ್ಣಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ।
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇಽವಸೀದತೀಮ್ ॥... – ಭಾರತ(ಸಭಾ. ೬೮/೪೦-೪೩)

೬) ಇನ್ನು ಕೃಷ್ಣನು ಅಕ್ಷಯವಸ್ತ್ರ ನೀಡಿದ ವಿಚಾರ – ವಾಯುದೇವರೇ ಸ್ವತಃ ವಸ್ತ್ರ–ರೂಪರಾದ್ದರಿಂದ ದ್ರೌಪದಿಯ ವಸ್ತ್ರ ಸ್ವತಃ ಅಚ್ಛೇದ್ಯ, ಅಭೇದ್ಯವಾದುದು. ದ್ರೌಪದಿಗೆ ನಿಜವಾದ ಆಪತ್ತಂತೂ ಇಲ್ಲವೇ ಇಲ್ಲ, ಆದರೂ, ಕೃಷ್ಣ ಅಕ್ಷಯ ವಸ್ತ್ರ ನೀಡಿದ. ಅದಕ್ಕೆ ಕಾರಣ ದ್ರೌಪದಿ ಕೇಳಿದ್ದಕ್ಕಾಗಿ ಅಲ್ಲ, ತಾನಾಗಿಯೇ ಅನುಗ್ರಹಿಸಿದ್ದು. ಕೇಳಿದ ಮೇಲೆಯೇ ಫಲ ನೀಡುವ ಸಾಮಾನ್ಯ ವ್ಯಕ್ತಿ ಭಗವಂತನಲ್ಲ.

೭) ಭಕ್ತರಿಗೆ ಉಚಿತವಾದ ಅನುಗ್ರಹವನ್ನು ತಾನಾಗಿಯೇ ಮಾಡುವ ಮಹಾಕರುಣಾಳು. ಅದಕ್ಕೆಂದೇ ಅವನು 'ಮಾ ಫಲೇಷು ಕದಾಚನ' ಎಂದು ಆದೇಶಿಸಿರುವನು. ನಾನಾಗಿಯೇ ಸರ್ವಫಲಗಳನ್ನು ನೀಡುವಾಗ ನೀವು ಕೇಳುವ ಶ್ರಮವನ್ನೇಕೆ ಹೊಂದುವಿರಿ ಎಂಬುದು ಅದರ ಮತ್ತೊಂದು ಬಗೆಯ ಭಾವ. ಇನ್ನು ಅಕ್ಷಯ ವಸ್ತ್ರದ ಅವಶ್ಯಕತೆ ತಮಗಿಲ್ಲ ಎಂಬ ಪರಿಜ್ಞಾನ ಪಾರ್ವತ್ಯಾದಿ ಇತರ ದೇವತಾ ಸ್ತ್ರೀಯರಿಗೆ ಆ ಕಾಲದಲ್ಲಿ ಇರಲಿಲ್ಲ, ಅದರಿಂದಾಗಿ ಅವರು ಭೀತಿ–ಯಿಂದ ಪ್ರಾರ್ಥಿಸಿಕೊಂಡರು. ಭಾರತೀದೇವಿಯಲ್ಲಿರುವ ತಾವು ಅತ್ಯಂತ ಸುರಕ್ಷಿತ ಎನ್ನುವ ಹಿನ್ನೆಲೆಯಲ್ಲೇ ಹಾಗೆ ಅವರ ದೇಹದಲ್ಲಿ ಸೇರಿ ಅವತರಿಸಿ ಬಂದಿದ್ದರೂ ಅದರ ಪರಿವೆ ಅವರಿಗೆ ಆಗ ಇರಲಿಲ್ಲ ಎಂದು ತಿಳಿಯಬೇಕು.

೮) ಕೃಷ್ಣ ಅಕ್ಷಯ ವಸ್ತ್ರವನ್ನು ನೀಡುವ ಮೂಲಕ ಅವರ ಆ ಭಯವನ್ನು ಪರಿಹರಿಸಿದ ಎಂದರ್ಥ. ಈ ಘಟ್ಟ ಹೀಗೆ ಪರಿಪರಿಯಾಗಿ ಭಾಗವತ ಧರ್ಮದ ವಿವಿಧ ಮುಖಗಳನ್ನು ಅನಾ–ವರಣಗೊಳಿಸುವ ಅತ್ಯಂತ ಅಪೂರ್ವವಾದ ಘಟ್ಟ. ಶ್ರೀಮಧ್ವಾಚಾರ್ಯರ ಮಹಾಭಾರತ–ತಾತ್ಪರ್ಯನಿರ್ಣಯದ ಹೊರತು ಬೇರಾವ ಕೃತಿಯಿಂದಲೂ ಇದರ ತಾತ್ವಿಕ ವಿಶ್ಲೇಷಣೆ ನಡೆದಿಲ್ಲ ಎಂಬುದನ್ನು ಗಮನಿಸಬೇಕು.

೯) ಹರಿಕಥಾಮೃತಸಾರದಲ್ಲಿ 'ಕೇಳಿದಾಕ್ಷಣ ಸೀರೆಗಳ ಪಾಂಚಾಲಿಗಿತ್ತ' ಎಂಬ ಉಲ್ಲೇಖ–ವುಂಟು. ಇಲ್ಲಿ 'ಕೇಳಿದಾಕ್ಷಣ' ಎಂದರೆ ಪ್ರಾರ್ಥನೆ ಕೇಳಿದಾಕ್ಷಣ ಎಂದರ್ಥವೇ ಹೊರತು, ಸೀರೆ ಕೇಳಿದಾಕ್ಷಣ ಎಂದಲ್ಲ ಎಂಬುದು ಋಗ್ಭಾಷ್ಯದಲ್ಲಿನ ಮಾತಿನಿಂದ ಸ್ಪುಟಪಡುವುದು :

ಉಕ್ತಂ ಚೇತ್ಸ ಶೃಣೋತ್ಯೇವ ಶ್ರುತಂ ಚೇದಾಗಮಿಷ್ಯತಿ ।

– ಋಗ್ಭಾಷ್ಯ(೨/೩೦/೩೬೬)

೧೦) ಪಾಂಚಾಲಿ ಎಂಬುದಕ್ಕೆ ದ್ರೌಪದೀ ದೇಹದಲ್ಲಿನ ಶ್ಯಾಮಲಾ ಮೊದಲಾದವರು ಸೀರೆ ಕೇಳಿದಾಕ್ಷಣ ಎಂದು ಮತ್ತೊಂದು ಬಗೆಯ ಅರ್ಥ. ಕನಕದಾಸರ ಕೃತಿಯಲ್ಲಿ '**ಯಮಸುತನ ರಾಣಿಗೆ ಅಕ್ಷಯ ವಸನವನಿತ್ತ**' ಎಂಬ ಮಾತಿರುವುದು ಗಮನಾರ್ಹ. ಯಮ ಪತ್ನಿ ಶ್ಯಾಮಲೆ ಅಲ್ಲವೆ!

೧೧) ಕೌರವಸಭೆಯಲ್ಲಿನ ದ್ರೌಪದಿಯ ಪರಿಸ್ಥಿತಿಯಂತೆ ಕಲಿಯುಗದಲ್ಲಿ ವೇದವಿದ್ಯೆಯ ಸ್ಥಿತಿ ಇತ್ತು. ಅಲ್ಲಿ ಭೀಮಸೇನ ದ್ರೌಪದಿಯ ರಕ್ಷಣೆಗೆ ಧಾವಿಸಿದಂತೆ, ಇಲ್ಲಿ ಆ ಭೀಮನೇ ಆದ ಆಚಾರ್ಯ ಮಧ್ವರು ಅವತರಿಸಿ, ಅದನ್ನು ಸಂರಕ್ಷಿಸಿದರು ಎಂಬ ಅಪೂರ್ವ ವಿಶ್ಲೇಷಣೆ ಸುಮಧ್ವವಿಜಯದಲ್ಲಿ ಬಂದಿದೆ.

ಶ್ರಾಂತನಾದ ದುಃಶಾಸನ

ಪುನಃ ಪುನಶ್ಚೈವ ವಿಕರ್ಷಮಾಣೇ
ದುಃಶಾಸನೇऽನ್ಯಾನಿ ಚ ತಾದೃಶಾನಿ ।
ಬಭೂವುರಂತಂ ನ ಜಗಾಮ ಪಾಪಃ
ಶ್ರಾಂತೋ ನ್ಯಷೀದತ್ ಸ್ವಿನ್ನಗಾತ್ರಃ ಸಭಾಯಾಮ್ ॥ ೩೫೬ ॥

ಅ: ಮತ್ತೆ ಮತ್ತೆ ದುಶ್ಶಾಸನ ಸೀರೆ ಎಳೆಯುತ್ತಿದ್ದಂತೆ ಅಂತಹ ಇತರ ಸೀರೆಗಳು ಬರತೊಡಗಿದವು. ಪಾಪಿಯಾದ ಅವನಿಗೆ ಕೊನೆಮುಟ್ಟಲು ಆಗಲೇ ಇಲ್ಲ. ಅವನು ಬಳಲಿ ಸಭೆಯಲ್ಲಿ ಕುಕ್ಕರಿಸಿದ.

ಭೂಸುರಪ್ರವರಬುದ್ಧಿಸಮೃದ್ಧಿಷ್ಮಕ್ತಯುಕ್ತವಪುಷಂ ರುಚಿರಾಂಗೀಮ್ ।
ಸೂತ್ರದೀಪ್ತಮಣಿಮಾಲಿಕಯಾऽಲಂ ಭೂಷಿತಾಂ ಭುವನಭೂಷಣಭೂತಾಮ್ ॥
ಪಾದಸುಂದರಪದಕ್ರಮಭಾವೈರ್ಭಾಸಿತಾಂ ಪ್ರಕಟವರ್ಣಗುಣಾಢ್ಯಾಮ್ ।
ಭಾರತೋತ್ತಮಭೃತಾಮನುರೂಪಾಚ್ಛಾದನಾಂ ಸಮಧಿಕಸ್ವರಶೋಭಾಮ್ ॥
ರಾಜಸೂಯಮುಖಸನ್ಮಖವೃತ್ತಾಂ ವಾಸುದೇವಗುಣನಿಷ್ಠಿತಭಾವಾಮ್ ।
ಸರ್ವಧರ್ಮಪರಿಶಿಕ್ಷಣದಕ್ಷಾಂ ವಂದಿತಾಂ ಜನತಯಾ ಜನನೀವತ್ ॥
ಮೌಲಿಸಂಗ್ರಹವಿಕರ್ಷಣದೂನಾಂ ಮಾಯಿನಾ ಸದಸಿ ದುಷ್ಟಜನೇನ ।
ನ್ಯಾಯಮಾರ್ಗಮಪಹಾಯ ಮಹಾಂತಂ ಸ್ವೇಶ್ವರತ್ವಮಪಿ ಸಾಧಯತಾऽಲಮ್॥
ಸಜ್ಜನೈಃ ಕತಿಪಯೈರತಿದೀನೈಶ್ಚಾಲಿತೈಃ ಕಲಿಬಲಾಚ್ಛುಭಮಾರ್ಗಾತ್ ।
ಅಪ್ಯಪೇಕ್ಷಿತವಿಕರ್ಷಣದುಃಖಾಂ ಸಾತಿಶೋಕಮಪಿ ಕೈಶ್ಚನ ದೃಷ್ಟಾಮ್॥
ವಾಸುದೇವ ಧರಣೀಧರ ನಾಥೇತ್ಯುಚ್ಚೈರಪಿ ಮುಹುಃ ಪ್ರವದಂತೀಮ್ ।
ಪೂರ್ಣಸದ್ಗುಣಮಜಂ ಗತದೋಷಂ ಬಿಭ್ರತೀಂ ಹೃದಿ ವಿವಿಕ್ತಮಶೇಷಾತ್ ॥
ವಾರ್ಯತಾಂ ಬುಧಜನೈರ್ನನು ಹಾ ಹಾ ನೈಷ ಧರ್ಮ ಇತಿ ಚಾಭಿದಧಾನಾಮ್।
ಕೃಷ್ಣಲಾಲಿತಮಾಮನವದ್ಯಾಮಷ್ಟನನ್ಯಶರಣಾಂ ಶರಣೋತ್ಯಾಮ್ ॥
ವೇದಿಜಾಮಿವ ಪುರಾ ಭರತಾಗ್ರ್ಯಃ ಸ ಸ್ವಯಂ ಶ್ರುತಿತತಿಂ ಖಲು ದೃಷ್ಟ್ವಾ ।
ಪುಷ್ಪಬುದ್ಧಿರಕರೋತ್ ಕರುಣಾಬ್ಧಿರ್ದುಷ್ಪಕ್ಷದಮನಸ್ಥಿರಸಂಧಾಮ್ ॥ —ಸುಮಧ್ವವಿಜಯ (೬/೨೪-೩೧)

ಏಃ ದ್ರೌಪದಿಗೆ ಅವಮಾನ ಮಾಡಲು ಹೊರಟ ಆ ಪಾಪಿ ತಾನೇ ಅವಮಾನಿತನಾಗಿ ಕುಸಿದ. ಇದರಿಂದ ದ್ರೌಪದಿ ವಸ್ತ್ರಾಪಹರಣ ಸರ್ವಥಾ ಅಶಕ್ಯ ಎಂದು ಜಗತ್ತಿಗೆ ತಿಳಿಯಿತು. ಇದು ಬಲಾತ್ಕಾರದಿಂದ ಶಾಸ್ತ್ರಾರ್ಥವನ್ನು, ಪ್ರಕೃತಿಯನ್ನು ಪೂರ್ಣ ಅರಿಯುವ ಪ್ರಯತ್ನ ಎಂದೂ ಫಲಿಸದು ಎನ್ನುವುದಕ್ಕೂ ನಿದರ್ಶನ.

ದುರ್ಯೋಧನನ ಮಹಾಪಚಾರ

ವಸ್ತ್ರೋಚ್ಚಯೇ ಶೈಲನಿಭೇ ಪ್ರಜಾತೇ
ದುರ್ಯೋಧನಃ ಪ್ರಾಹ ಸಂಜಾತಕೋಪಃ ।
ಪ್ರವೇಶಯೇಮಾಂ ಗೃಹಮೇವ ಶೀಘ್ರಂ
ಕಿಂ ನಶ್ಚಿರೇಣೇತಿ ಸುಮಂದಬುದ್ಧಿಃ ॥ ೩೫೭ ॥

ಅಃ ಸೀರೆಗಳ ರಾಶಿ ಪರ್ವತಪ್ರಾಯವಾಗಿ ಬೆಳೆಯಲು ಬಹಳವಾಗಿ ಕೋಪಗೊಂಡ ಮಂದಬುದ್ಧಿಯ ದುರ್ಯೋಧನ ನುಡಿದ ''ಇನ್ನೇಕೆ ತಡ, ಇವಳನ್ನು ನಮ್ಮ ಮನೆಗೆ ಕರೆದೊಯ್ಯಿ''.

ಏಃ ಇಷ್ಟಾದರೂ ಪಾಂಡವರ, ದ್ರೌಪದಿಯ ಹಿರಿಮೆಯನ್ನು ದುರ್ಯೋಧನ ತಿಳಿಯಲಿಲ್ಲ ಎಂಬುದನ್ನು 'ಸುಮಂದಬುದ್ಧಿ' ಎಂಬ ಪದದಿಂದ ಸೂಚಿಸಿರುವರು. ಅವನಿಗೆ ಭಕ್ತಿಯ ಬದಲು ಕೋಪ ಕೆರಳಿದ್ದು ಅವನ ಅಸುರ ಸ್ವಭಾವಕ್ಕೆ ದ್ಯೋತಕ.

ದ್ರೌಪದಿಯ ಭೀಮಪ್ರತಿಜ್ಞೆ

ತಚ್ಛ್ರುತ್ವಾ ವಚನಂ ಕೃಷ್ಣಾ ಪ್ರತಿಜ್ಞಾಮಕರೋತ್ ತದಾ ।
ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ॥೩೫೮॥

ಶಕುನಿಂ ತ್ವಕ್ಷಕಿತವಂ ಸಹದೇವೋ ವಧಿಷ್ಯತಿ ।
ಇತ್ಯುಕ್ತೇ ತತ್ ತಥೇತ್ಯಾಹ ಭೀಮಸೇನಃ ಸಭಾತಲೇ ॥ ೩೫೯ ॥

---

೩೫೮. 'ದುರ್ಯೋಧನಂ ಹಂತೇ'ತ್ಯಾದಿ ಲುಟ್ । –(ತಾ.)

೩೫೮. ಅಹಂ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ।
ಶಕುನಿಂ ಚಾಕ್ಷಕಿತವಂ ಸಹದೇವೋ ಹನಿಷ್ಯತಿ ॥ (ಭೀಮವಚನ) – ಭಾರತ (೨/೭೭/೨೬)

ಅ: ಅವನ ಮಾತನ್ನು ಕೇಳಿ ದ್ರೌಪದಿಯು ಆಗ ಪ್ರತಿಜ್ಞೆ ಮಾಡಿದಳು 'ಭೀಮನು ದುರ್ಯೋಧನನ್ನು ಕೊಲ್ಲುವನು. ಕರ್ಣನನ್ನು ಅರ್ಜುನ ಕೊಲ್ಲುವನು. ಅಕ್ಷಧೂರ್ತನಾದ ಶಕುನಿಯನ್ನು ಸಹದೇವ ಕೊಲ್ಲುವನು' - ದ್ರೌಪದಿ ಹೀಗೆನ್ನಲು 'ಅದು ಹಾಗೆಯೇ ಆಗುವುದು' ಎಂದು ಸಭೆಯ ಮಧ್ಯೆ ಭೀಮಸೇನ ನುಡಿದ.

ವಿ: ೧) ದ್ರೌಪದಿ ತೊಟ್ಟಿದ್ದು ಶಪಥವೇ ಹೊರತು ಶಾಪವಲ್ಲ ಎಂಬುದನ್ನು ಗಮನಿಸಬೇಕು. ಶಪಥ ವಿವೇಕದ ಸಂಕೇತವಾದರೆ, ಶಾಪ ಅವಿವೇಕದ ಸಂಕೇತ. ಬ್ರಹ್ಮದೇವರ ಹೊರತು ಉಳಿದವರೆಲ್ಲ ಕೊಡುವ ಶಾಪಗಳು ಒಂದರ್ಥದಲ್ಲಿ ಪುಣ್ಯ ನಾಶಕವಾಗುವುದರಿಂದ ಅದು ಶ್ಲಾಘ್ಯವೆನ್ನಿಸದು.

೨) ದ್ರೌಪದಿಯು ಸಾಕ್ಷಾತ್ ಭಾರತಿಯಾದ್ದರಿಂದ ಶಾಪ ಕೊಡುವ ಕಾರ್ಯವನ್ನು ಮಾಡದೇ ಶಪಥ ತೊಟ್ಟು ವಿವೇಕ ತೋರಿದಳು ಎಂದರ್ಥ :

ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ।
ಶಕುನಿಂ ಚಾಕ್ಷಕಿತವಂ ಸಹದೇವೋ ಹನಿಷ್ಯತಿ ॥

ಇಲ್ಲಿ 'ಹಂತ' ಎನ್ನುವುದು 'ಹನು' ಧಾತುವಿನ ಭವಿಷ್ಯತ್ಕಾಲದ ಅರ್ಥ ಹೇಳುವ ಲುಟ್ ಲಕಾರದ ರೂಪ.

೩) ಭೀಮು ಆ ಮೂಲಕ ದ್ರೌಪದಿಯ ಪ್ರತಿಜ್ಞೆಯನ್ನು ಅಂಗೀಕರಿಸಿದ. ಆ ಪ್ರತಿಜ್ಞೆ ಭೀಮಸೇನ ಆ ವೇಳೆಗೆ ಮಾಡಿದ ಪ್ರತಿಜ್ಞೆಗಳಿಗೆ ಅನುಗುಣವಾಗಿಯೇ ಇರುವುದು ಗಮನಾರ್ಹ.

ಪ್ರತಿಜ್ಞಾಮಾದದೇ ಪಾರ್ಥಸ್ತಾಂ ಮಾದ್ರೀನಂದನಸ್ತಥಾ।
ನಕುಲಃ ಪ್ರತಿಜಜ್ಞೇಽಥ ಶಾಕುನೇಯವಧಂ ಪ್ರತಿ ॥ ೩೬೦ ॥

ಅ: ಅರ್ಜುನ ಆ ಪ್ರತಿಜ್ಞೆಯನ್ನು ಸ್ವೀಕರಿಸಿದ, ಹಾಗೆಯೇ ಸಹದೇವನೂ ಮಾಡಿದ. ಬಳಿಕ ಶಕುನಿಪುತ್ರನಾದ ಉಲೂಕನನ್ನು ಕೊಲ್ಲುವುದಾಗಿ ನಕುಲ ಪ್ರತಿಜ್ಞೆ ಮಾಡಿದ.

ವಿ: ೧) ಅರ್ಜುನ ಸ್ವತಃ ಪ್ರತಿಜ್ಞೆ ಮಾಡದೇ ದ್ರೌಪದಿ ಪ್ರತಿಜ್ಞೆ ಮಾಡಿದ ಅನಂತರ ಅದನ್ನು ಅಂಗೀಕರಿಸಿದ ಎನ್ನುವ ಮೂಲಕ ಆತನ ಸ್ಥಾನ ದ್ರೌಪದಿಯ ಅನಂತರದ್ದು ಎಂಬುದು ಸ್ಫುಟಪಡುವುದು.

೨) ಇಲ್ಲಿ ಮಹಾಭಾರತದಲ್ಲಿರುವಂತೆ ಉಲೂಕನನ್ನು ಕೊಲ್ಲುವುದಾಗಿ ನಕುಲ ಪ್ರತಿಜ್ಞೆ ಮಾಡಿದ ವಿವರವಿದ್ದರೂ ಮುಂದೆ ನಿರ್ಣಯದಲ್ಲೂ, ಮಹಾಭಾರತದಲ್ಲೂ ಸಹದೇವನೇ ಅವನನ್ನೇ ಕೊಲ್ಲುವುದಾಗಿ ಉಲ್ಲೇಖವಿದೆ. ಇದನ್ನು ಪುರುಷವ್ಯತ್ಯಾಸವೆಂದು ತಿಳಿಯಬಹುದು.

ಅದರಂತೆ ಈಗಾಗಲೇ ತಿಳಿಸಿದಂತೆ ಅಶ್ವಿನೀ ದೇವತೆಗಳ ಸಕಲ ಗುಣಗಳೂ, ಅವರ ಹೆಸರುಗಳೂ ಸರ್ವಾತ್ಮನಾ ಒಂದೇ ತೆರನಾಗಿರುವುದರಿಂದ ಅವರ ಅವತಾರದಲ್ಲಿಯೂ ಹಾಗೆಯೇ ಸಾಮಾನ್ಯ– ವೆಂದು ಭಾವಿಸಿ ನಕುಲ ಎಂಬುದಕ್ಕೆ ಸಹದೇವ ಎಂದೇ ಅರ್ಥಮಾಡಿಕೊಳ್ಳಬಹುದು. ಅಥವಾ ಅವರಿಬ್ಬರೂ ಹಾಗೆ ಸಮಾನರಾದ್ದರಿಂದ ಪ್ರತಿಜ್ಞೆ ಮಾಡಿದ್ದು ನಕುಲನಾದರೂ ಅದನ್ನು ಪೂರೈಸಿದ್ದು ಸಹದೇವ, ಅದರಿಂದ ಪ್ರತಿಜ್ಞಾಲೋಪವಾಗದು ಎಂದೂ ಭಾವಿಸಬಹುದು. ಅವರಿಬ್ಬರಲ್ಲಿ ಯಾರು ಪೂರೈಸಿದರೂ ಇಬ್ಬರಿಗೂ ಅನ್ವಯಿಸುವುದು ಎಂದರ್ಥ.

ಭೀಮನ ಧರ್ಮಸಂದೇಶ

ತತಃ ಸುಯೋಧನಾನುಜಶ್ಚಕರ್ಷ ಪಾರ್ಷತಾತ್ಮಜಾಮ್।
ಗೃಹಾಯ ತಾಂ ನಿಶಾಮ್ಯ ತು ಕ್ರುಧಾऽऽಹ ಮಾರುತಾತ್ಮಜಃ ॥ ೩೬೧ ॥

ಅರ್ಜುನಾರ್ಜುನ ನೈವಾತ್ರ ಕ್ಷಮಾ ಮೇ ತಾತ ರೋಚತೇ ।
ಪತಿತಸ್ಯಾಸ್ಯ ದೇಹಸ್ಯ ಕಾಷ್ಮವಿಷ್ಮಾಸಮಸ್ಯ ಚ ।
ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾ ಕರ್ಮ ಸುತಾ ಇತಿ ॥ ೩೬೨ ॥

ಅ: ಬಳಿಕ ದುಶ್ಶಾಸನ ದ್ರೌಪದಿಯನ್ನು ಮನೆಯೊಳಗೆ ಸೆಳೆದೊಯ್ಯತೊಡಗಿದ. ಅದನ್ನು ನೋಡಿ ಭೀಮ ಕೋಪದಿಂದ ನುಡಿದ 'ಅರ್ಜುನ! ಅರ್ಜುನ! ಇನ್ನಿಲ್ಲಿ ನನಗೆ ಕ್ಷಮೆ ಒಪ್ಪಿಗೆಯಾಗದು. ಅಳಿದ ಮೇಲೆ ಕಟ್ಟಿಗೆ, ಮಲದಂತೆ ಆಗುವ ಈ ದೇಹಕ್ಕೆ ಉಳಿಯುವ ಫಲಗಳು ಮೂರು - ವಿದ್ಯೆ, ಕರ್ಮ ಹಾಗೂ ಸಂತಾನ'.

ವಿ: ೧) ಬಾಳಿನ ಫಲವನ್ನು ಭೀಮ ಇಲ್ಲಿ ನಿರೂಪಿಸುವ ರೀತಿ ಅತ್ಯಂತ ರಮ್ಯವಾದುದು. ಜೀವ ತೆರಳಿದ ಮೇಲೆ ಅವನು ಸಂಪಾದಿಸಿದ ವಿದ್ಯೆ, ಮಾಡಿದ ಸಾಧನೆ ಹಾಗೂ ಪಡೆದ ಸಂತತಿ – ಮೂರು ಮಾತ್ರ ಉಳಿದುಕೊಳ್ಳುವವು ಎಂದರ್ಥ. ಈ ಮೂರರ ಹೊರತು ಉಳಿದೆಲ್ಲವೂ ನಶ್ವರವಾದ್ದರಿಂದ

---

೩೬೨. ತ್ರೀಣಿ ಜ್ಯೋತೀಂಷಿ ಪುರುಷ ಇತಿ ವೈ ದೇವಲೋऽಬ್ರವೀತ್ ।
ಅಪತ್ಯಂ ಕರ್ಮ ವಿದ್ಯಾ ಚ ಯತಃ ಸೃಷ್ಟಾಃ ಪ್ರಜಾಸ್ತತಃ ॥
ಅಮೇಧ್ಯೇ ವೈ ಗತಪ್ರಾಣೇ ಶೂನ್ಯೇ ಜ್ಞಾತಿಭಿರುಜ್ಝಿತೇ ।
ದೇಹೇ ತ್ರಿತಯಮೇವೈತತ್ ಪುರುಷಸ್ಯೋಪಯುಜ್ಯತೇ ॥
ತನ್ನೋ ಜ್ಯೋತಿರಭಿಹಿತಂ ದಾರಾಣಾಮಭಿಮರ್ಷನಾತ್ ।
ಧನಂಜಯ ಕಥಂಸ್ವಿತ್ ಸ್ಯಾದಪತ್ಯಮಭಿಮೃಷ್ಟಜಮ್ ॥ – ಭಾರತ (೨/೭೨/೫-೭)

೩೬೨. ದಾಹೇ ಕಾಷ್ಮಸಮಃ ಸ್ಯಾದದಾಹೇವಿಷ್ಮಾಸಮಃ ಸ್ಯಾತ್। – (ಜ.)

ಈ ಮೂರಕ್ಕಾಗಿಯೇ ಜೀವನು ಸಾಧನೆ ಮಾಡಬೇಕು ಎಂದರ್ಥ. ಈ ಮೂರರಲ್ಲೂ ವಿದ್ಯೆಯ ಸ್ಥಾನ ಅತ್ಯಂತ ಪ್ರಧಾನ, ಅನಂತರದ್ದು ತಾನು ಮಾಡುವ ಸಾಧನೆ, ಕೊನೆಯದಾಗಿ ಸಂತತಿ ಎಂದು ಅವುಗಳ ಪ್ರಾಧಾನ್ಯವನ್ನು ಅವರೋಹಣ ಕ್ರಮದಲ್ಲಿ ತಿಳಿಸಿರುವುದನ್ನು ಗಮನಿಸಬೇಕು.

೨) ಆದ್ದರಿಂದ ವಿದ್ಯೆಗೆ ಪ್ರಥಮ ಸ್ಥಾನವನ್ನು, ಬಳಿಕ ಕರ್ಮಕ್ಕೆ ದ್ವಿತೀಯ ಸ್ಥಾನವನ್ನು, ಸಂತತಿಗೆ ತೃತೀಯ ಸ್ಥಾನವನ್ನು ನೀಡಿ ಅದರಂತೆ ಜೀವನ ಸಾಗಿಸಬೇಕು ಎಂದರ್ಥ. ವಿದ್ಯೆ ಮೋಕ್ಷ ಸಾಧನ, ಕರ್ಮ ಸ್ವರ್ಗಾದಿ ಸಾಧನ, ಸಂತತಿ ಇಹಲೋಕದಲ್ಲಿ ಪ್ರಜಾವೃದ್ಧಿಯ ಸಾಧನ ಎಂಬುದು ಇವುಗಳಲ್ಲಿನ ವಿಶೇಷ.

ಇತಿ ವೇದೋದಿತಂ ವಾಕ್ಯಂ ನ ಸುತೋ ದಾರದೂಷಣೇ ।
ದುಷ್ಪದಾರೋ ನ ಚಾಪ್ನೋತಿ ಲೋಕಾನರ್ಧೋ ಹಿ ದೂಷಿತಃ।
ಅರಕ್ಷಣಾದ್ದೂಷಿತಾಯಾ ನ ತ್ಯಾಗಾಚ್ಚ ಶುಭಂ ಭವೇತ್ ॥ ೩೬೩ ॥

ಅ: 'ಇದು ವೇದೋಕ್ತವಾದ ಮಾತು, ಪತ್ನಿ ದೂಷಿತಳಾದಲ್ಲಿ ಸತ್ಸಂತತಿ ಇಲ್ಲವಾಗುವುದು. ಪತ್ನಿ ಕೆಟ್ಟಾಗ ಅವನ ಅರ್ಧದೇಹ ಕೆಟ್ಟಂತಾಗುವುದರಿಂದ ಅವನಿಗೆ ಪುಣ್ಯ ಲೋಕಗಳು ಲಭಿಸಲಾರವು. ರಕ್ಷಣೆ ನೀಡದೇ ಪತ್ನಿ ಕೆಟ್ಟರೆ ಅವಳನ್ನು ತೊರೆಯುವುದರಿಂದಲೂ ಕಲ್ಯಾಣವಾಗದು'.

ವಿ: ಪತ್ನಿಯ ರಕ್ಷಣೆಯ ಮಹತ್ವ ಇಲ್ಲಿ ನಿರೂಪಿತವಾಗಿದೆ. ಪತ್ನಿ ಬಲಾತ್ಕಾರಾದಿಗಳಿಂದ ಶೀಲ ಕಳೆದುಕೊಂಡಲ್ಲಿ ಅವಳಿಂದ ಜನಿಸುವ ಸಂತತಿ ಉತ್ತಮವೆನ್ನಿಸಲಾರದು. ಅದರಂತೆ ಅರ್ಧಾಂಗಿಯಾದ ಅವಳು ಕೆಟ್ಟರೆ ಅವಳ ಪತಿಗೂ ಪುಣ್ಯ ಲೋಕಗಳು ಲಭಿಸವು. ಅವಳು ಕೆಡಲು

---

೩೬೩. ಅರಕ್ಷಣಾದ್ದೂಷಿತಾಯಾ ಇತ್ಯತ್ರ ದೂಷಿತಾಯಾ ಅರಕ್ಷಣಾತ್= ಯಥಾ ಪುನಃ ಪುನಃ ಪಾಪಂ ನ ಕರಿಷ್ಯತಿ ತಥಾ ಶೃಂಖಲಾದಿನಾ ನಿರ್ಬಂಧಂ ಕೃತ್ವಾ ಕಿಂಚಿದನ್ನಪಾನಾದಿಕಂ ಚ ದತ್ವಾ ರಕ್ಷಣಾಭಾವಾಚ್ಚಾಶುಭಂ ನ ಭವತಿ। ಅಗ್ನಿಸಾಕ್ಷಿಕತಯಾ ಗೃಹೀತಪಾಣೇರ್ಭಾರ್ಯಾಯಾಃ ಸಂಗಮಾತ್ರಂ ತ್ಯಕ್ತ್ವಾ ಅನ್ನಸ್ಯಾಪ್ಯದಾನೇನ ಪರಲೋಕೋ ನಾಸ್ತೀತಿ ಭಾವಃ। ತ್ಯಾಗಾತ್= ಸರ್ವಥಾ ಪರಿತ್ಯಾಗಾತ್ ಉಪರಿ ತಯಾ ಪುನಃ ಪುನಃ ಕ್ರಿಯಮಾಣಸ್ಯ ಪಾಪಸ್ಯ ಉಪೇಕ್ಷಣಾತ್ ಪರಲೋಕೋ ನ ಭವತಿ। ಸ್ವಾಧ್ಯಕ್ಷೇ ಏವ ಪುನಃ ಪುನಃ ಪಾಪಕರಣೇನ ಸ್ವಯಶೋಭಂಗಾದೈಹಿಕಂ ಚ ಶುಭಂ ನ ಭವತೀತಿ ಭಾವಃ। ತರ್ಹಿ ನಿರ್ಬಂಧೇನೈವ ಸಾ ರಕ್ಷಣೀಯಾ ತದಾ ಕಾ ಹಾನಿರಿತಿ ಚೇತ್ಸತ್ಯಮ್। ಸ್ವಗೃಹ ಏವ ಸದಾ ನಿರ್ಬಂಧಮನುಭವಂತ್ಯಾ ಸ್ವಭಾರ್ಯಾಯಾ ದರ್ಶನಸ್ಯ ನಿತ್ಯದುಃಖದಾಯಕತ್ವೇನ ಐಹಿಕನರಕೋಪಮತಯಾ ತತೋಽಪಿ ಶುಭಾಭಾವಾದಿತಿ ಭಾವಃ ॥ – (ವಾ.)

೩೬೩. ಅರಕ್ಷಣಾದ್ದೂಷಿತಾಯಾಂ – (ಪಾಠಾಂತರ)

ಸೂಕ್ತ ರಕ್ಷಣೆ ಇಲ್ಲದೇ ಇರುವುದೇ ಕಾರಣವಾದಾಗ ಅಂಥವಳನ್ನು ತ್ಯಜಿಸುವುದು ಸಹ ವಿಹಿತವಲ್ಲ. ಇದರಿಂದ ರಕ್ಷಣೆಯಿದ್ದು ಭ್ರಷ್ಟಳಾಗುವ ಸ್ತ್ರೀಯನ್ನು ತ್ಯಜಿಸುವುದು ವಿಹಿತ ಎಂಬ ಧರ್ಮಸೂಕ್ಷ್ಮವೂ ನಿರೂಪಿತ.

ಭೀಮನ ಉಗ್ರರೂಪ

ಅತೋಽದ್ಯ ಸಾನುಬಂಧಕಾನ್ ನಿಹನ್ಮಿ ಧಾರ್ತರಾಷ್ಟ್ರಕಾನ್।
ಇತಿ ಬ್ರುವನ್ ವ್ಯಲೋಕಯದ್ರಿಪೂನ್ ದಹನ್ನಿವೌಜಸಾ ॥ ೩೬೪ ॥

ಅ: 'ಆದ್ದರಿಂದ ನಾನೀಗ ಈ ಕೌರವರನ್ನು ಅವರ ಬಾಂಧವರ ಸಮೇತವಾಗಿಯೇ ಕೊಂದುಹಾಕುವೆನು' ಎಂದು ನುಡಿಯುತ್ತಾ ಭೀಮ ಓಜಸ್ಸಿನಿಂದ ಆ ಶತ್ರುಗಳನ್ನು ಸುಟ್ಟುಹಾಕುವಂತೆ ನೋಡಿದ.

ದದರ್ಶ ಚ ಮಹಾಘೋರಮಾದಾತುಂ ಪರಿಘಂ ರುಷಾ।
ಕರ್ತುಂ ವ್ಯವಸಿತೋ ಬುದ್ಧ್ಯಾ ನಿಃಶೇಷಾನ್ ಧಾರ್ತರಾಷ್ಟ್ರಕಾನ್ ॥೩೬೫॥

ಅ: ಕೌರವರನ್ನೆಲ್ಲಾ ನಿಃಶೇಷರನ್ನಾಗಿಸಲು ಮನಸ್ಸಿನಲ್ಲಿ ನಿಶ್ಚಯಿಸಿದವನಾಗಿ ಮಹಾ-ಭಯಂಕರವಾದ ಪರಿಘವನ್ನು ಕೋಪದಿಂದ ಕೋಪದಿಂದ ನೋಡಿದ.

ವಿ: ಪರಿಘವೆಂಬುದು ಒಂದು ಆಯುಧವಿಶೇಷ. ಸಭಾಭವನದ ದೊಡ್ಡ ಕಂಬ, ಕಬ್ಬಿಣದ ಕಟ್ಟು ಹಾಕಿದ ದೊಣ್ಣೆ ಮೊದಲಾದ ಅರ್ಥಗಳು ವ್ಯಾಖ್ಯಾನಗಳಲ್ಲಿವೆ.

ದುಃಶಕುನಗಳ ಸರಮಾಲೆ

ತದಾ ಶಿವಾ ವವಾಶಿರೇ ಸುಯೋಧನಾಗ್ನಿಗೇಹತಃ।
ತಥೈವ ತತ್ಪಿತುರ್ಗೃಹೇಽಪ್ಯಭೂದ್ಭಯಾನಕಂ ಬಹು ॥ ೩೬೬ ॥

---

೩೬೫. ಮಂದಾನಾಂ ಭ್ರಾಂತಿಮುತ್ಪಾದಿತವಾನಿತಿ । ಏತೇನ ಭೀಮಸ್ಯ ಭ್ರಾಂತೇರಯೋಗಾತ್ । ಭೀಮೋ ಧಾರ್ತರಾಷ್ಟ್ರಕಾನ್ನಿಃಶೇಷಾನ್ ಕರ್ತುಂ ನಿಶ್ಚಯವಾನ್ ಸನ್‌ಪರಿಘಂ ದದರ್ಶೇತಿ ಕಥನಮನುಪಪನ್ನಮಿತಿ ದೂಷಣಸ್ಯಾನವಕಾಶಃ । ಇತಿ ಮಂದಾನಾಂ ಭ್ರಾಂತಿಮುತ್ಪಾದಿತವಾನಿತ್ಯಸ್ಯ ಶೇಷಮಭ್ಯುಪೇತ್ಯ ಯದ್ಯಪಿ ಭೀಮಸ್ಯ ಪರಿಘದರ್ಶನಮೇವ ನ ತು ಧಾರ್ತರಾಷ್ಟ್ರಕಾನ್ನಿಃಶೇಷಾನ್ ಕರ್ತುಂ ನಿಶ್ಚಯವಾನ್ ಸನ್ ಪರಿಘಂ ದದರ್ಶೇತಿ ಮಂದಾನಾಂ ಭ್ರಾಂತಿಮುತ್ಪಾದಿತವಾನಿತ್ಯರ್ಥ ಉಚ್ಯತ ಇತಿ ಸ್ವೀಕರಣಾತ್ ॥ –(ಸ.)

ಅ: ಆಗ ದುರ್ಯೋಧನನ ಅಗ್ನಿಗೃಹದಿಂದ ಹೆಣ್ಣು ನರಿಗಳು ಊಳಿಟ್ಟವು. ಹಾಗೆಯೇ ಅವನ ತಂದೆಯ ಮನೆಯಲ್ಲೂ ಅನೇಕ ಉತ್ಪಾತಗಳು ಕಾಣಿಸಿಕೊಂಡವು.

ವಿ: ೧) ಹೆಣ್ಣು ನರಿಗಳು ಹಾಗೆ ಊಳಿಡುವುದು ತುಂಬಾ ಅಮಂಗಳದ ಸಂಕೇತ ಎಂಬ ವಿವರ ಭಾಗವತ ತಾತ್ಪರ್ಯದಲ್ಲಿದೆ (೩/೧೮/೯) :

'ನಾಶಸ್ತತ್ರ ಸೃಗಾಲಾನಾಂ ಶಿವಾನಾಂ ಚಾನ್ಯಥಾಸ್ವರೇ' ಇತ್ಯಾಗ್ನೇಯೇ ।

೨) ಅಗ್ನಿಗೃಹ ಎಂದರೆ ಅಗ್ನಿಹೋತ್ರದ ಮನೆ ಎಂದರ್ಥ.

ನಿಮಿತ್ತಾನ್ಯತಿಘೋರಾಣಿ ಕುಪಿತೇ ಮಾರುತಾತ್ಮಜೇ।
ದೃಷ್ಟ್ವಾऽऽಂಬಿಕೇಯೋ ವಿದುರಂ ಪಪ್ರಚ್ಛೈಷಾಂ ಫಲಂ ದ್ರುತಮ್ ೩೬೭

ಅ: ಭೀಮ ಕೋಪಗೊಂಡಾಗ ಹಾಗೆ ಅತ್ಯಂತ ಭಯಂಕರವಾದ ದುಶ್ಶಕುನಗಳು ಉಂಟಾದುದ್ದನ್ನು ಗಮನಿಸಿ ಧೃತರಾಷ್ಟ್ರ ಕೂಡಲೆ ಅವುಗಳ ಫಲವನ್ನು ವಿದುರನನ್ನು ಕೇಳಿದ.

ವಿ: ಅಂತಹ ಉತ್ಪಾತಗಳಿಂದ ಸೂಚಿತವಾಗುವ ವಿಷಯ ಎಂತಹುದು ಎಂದು ವಿದುರನಿಂದ ಧೃತರಾಷ್ಟ್ರ ಕೇಳಿ ತಿಳಿದುಕೊಂಡ. ಇದರಿಂದ ವಿದುರ ಅನೇಕ ವಿಷಯಗಳಲ್ಲಿ ಪಾರಂಗತನಾಗಿದ್ದ ಅಪೂರ್ವಜ್ಞಾನಿ ಎಂಬುದು ಸ್ಥಿರಪಡುವುದು. ಧೃತರಾಷ್ಟ್ರ ಕುರುಡ; ಇಲ್ಲಿ 'ದೃಷ್ಟ್ವಾ' ಎಂಬುದಕ್ಕೆ ಗಮನಿಸಿ ಎಂದರ್ಥ.

ವಿದುರನ ಹಿತೋಕ್ತಿ

ಆಹ ತಂ ವಿದುರೋ ಜ್ಯೇಷ್ಠಂ ಕ್ಷಣೇऽಸ್ಮಿಂಸ್ತವ ಪುತ್ರಕಾಃ।
ಸಾನುಬಂಧಾ ನ ಶಿಷ್ಯಂತಿ ವೃಕೋದರಬಲಾಹತಾಃ ॥ ೩೬೮ ॥

ಅ: ಆಗ ವಿದುರ ಅಣ್ಣನಿಗೆ ತಿಳಿಸಿದ 'ಈ ಕ್ಷಣದಲ್ಲೇ ನಿನ್ನ ಮಕ್ಕಳೆಲ್ಲಾ ಬಾಂಧವಸಮೇತರಾಗಿ ಭೀಮನ ಬಲದ ಹೊಡೆತಕ್ಕೆ ನಾಶಹೊಂದುವರು'.

---

೩೬೬. ಸುಯೋಧನಾಗ್ನಿಗೇಹತ ಇತ್ಯತ್ರ ಅಗ್ನಿಗೇಹತಃ= ಅಗ್ನಿಹೋತ್ರಗೇಹಾತ್ ॥ – (ವಾ.)

೩೬೬. ಗೇಹತಃ ಗೇಹೇ ಸಾರ್ವಂ ವಿಭಕ್ತಿಕಸ್ತಸಿಃ । – (ಜ.)

೩೬೬. ದುರ್ಯೋಧನಸ್ಯಾಗ್ನಿಹೋತ್ರೇ ಪ್ರಾಕ್ರೋಶನ್ ಭೈರವಂ ಶಿವಾಃ ।
ತಾಸ್ತದಾ ಪ್ರತ್ಯಭಾಷಂತ ರಾಸಭಾಃ ಸರ್ವತೋ ದಿಶಃ ॥ – ಭಾರತ (ಸಭಾ. ೮೧/೨೫)

ಕ್ರೀಡಸೇಽರ್ಭಕವತ್ ತ್ವಂ ಹಿ ಕಿಂ ಜಿತಂ ಕಿಂ ಜಿತಂ ತ್ವಿತಿ ।
ಅಧರ್ಮೇಣ ಜಿತಾನತ್ರ ಜಿತಾನ್ ಪಶ್ಯಸಿ ಪಾಂಡವಾನ್ ॥ ೩೬೯ ॥

ಅ: 'ನೀನು ಮಕ್ಕಳಂತೆ ಏನು ಗೆದ್ದದ್ದು ಏನು ಗೆದ್ದದ್ದು ಎಂದು ಆಡುತ್ತಿರುವಿ. ಅಧರ್ಮದಿಂದ ಪಾಂಡವರನ್ನು ಗೆದ್ದು ಅವರನ್ನು ಗೆದ್ದೆವೆಂದು ತಿಳಿದುಕೊಂಡಿರುವಿ'.

ವಿ: ದ್ಯೂತ ಕಾಲದಲ್ಲಿ ಪ್ರತೀ ಆಟ ಮುಗಿದಾಗಲೂ ಈಗೇನು ಗೆದ್ದದ್ದು? ಈಗೇನು ಗೆದ್ದದ್ದು ಎಂದು ಧೃತರಾಷ್ಟ್ರ ವಿದುರನನ್ನು ಕೇಳುತ್ತಿದ್ದ. ಅದನ್ನೀಗ ವಿದುರ ಮೂದಲಿಸುತ್ತಿರುವನು ಎಂದು ತಿಳಿಯಬೇಕು.

ಸ್ತ್ರೀಷು ದ್ಯೂತೇಷು ವಾ ದತ್ತಂ ಮದಾಂಧೇನ ನರೇಣ ವಾ ।
ನ ದತ್ತಮಾಹುರ್ವಿದ್ವಾಂಸಸ್ತಸ್ಯ ಬಂಧುಭಿರೇವ ಚ ॥ ೩೭೦ ॥

ಆಹಾರ್ಯಂ ಪುನರಾಹುಶ್ಚ ತಥಾಽಪಿ ನ ತು ಪಾಂಡವೈಃ ।
ತತ್ಕೃತಂ ತವ ಪುತ್ರಾಣಾಂ ಖ್ಯಾಪಯದ್ಭಿರಶಿಷ್ಟತಾಮ್ ॥ ೩೭೧ ॥

ಅ: 'ಸ್ತ್ರೀಯರಿಗೆ ನೀಡಿದ್ದನ್ನು, ದ್ಯೂತದಲ್ಲಿ ಪಡೆದದ್ದನ್ನು, ಮದವೇರಿದ ಮನುಷ್ಯ ನೀಡಿದ್ದನ್ನು, ವಿದ್ವಾಂಸರು ಗೆದ್ದದ್ದು ಎಂದು ಕರೆಯಲಾರರು. ಅವನ ಬಂಧುಗಳು ಅವನ್ನು ಮರಳಿ ಪಡೆಯಬಹುದು ಎಂದು ಹೇಳುವರು. ಆದರೂ ಪಾಂಡವರು ನಿನ್ನ ಮಕ್ಕಳು ಅಯೋಗ್ಯರೆಂಬುದನ್ನು ನಿರೂಪಿಸಲೆಂದು ಹಾಗೆ ಮಾಡದೇ ಇರುವರು'.

ವಿ: ಇಲ್ಲಿ ಸ್ತ್ರೀಯರು ಎಂದರೆ ವೇಶ್ಯಾಸ್ತ್ರೀಯರು ಎಂದರ್ಥ. ವೇಶ್ಯೆಯರಿಗೆ ಕೊಟ್ಟಿದ್ದಾಗಲಿ, ದ್ಯೂತದಲ್ಲಿ ಸೋತದ್ದಾಗಲಿ, ಮತ್ತೇರಿದವನು ನೀಡಿದ್ದಾಗಲಿ ನಿಜವಾಗಲು ಕೊಟ್ಟದ್ದು ಎನ್ನಿಸದು. ಸಂಬಂಧಿಸಿದವರು ಅಂತಹ ವಸ್ತುಗಳನ್ನು ಪಡೆಯುವ ಅಧಿಕಾರ ಹೊಂದಿರುವರು ಎಂದರ್ಥ. ಪಾಂಡವರು ಈ ಕಪಟ ದ್ಯೂತದಲ್ಲಿ ಸೋತದ್ದನ್ನು ಹಾಗೆ ಮಾಡಬಲ್ಲವರಾದರೂ ನಿನ್ನ ಮಕ್ಕಳ ದೌರ್ಜನ್ಯ ಲೋಕಕ್ಕೆ ತಿಳಿಯಲಿ ಎಂದು ಸುಮ್ಮನಿರುವರು ಎಂದರ್ಥ.

---

೩೬೯. ಕಿಂ ಜಿತಂ ಕಿಂ ಜಿತಮಿತ್ಯತ್ರ ಕಿಂ ದೇವನಂ ಕಿಂ ದೇವನಂ ಜಿತಮಿತಿ ಅರ್ಭಕವತ್ ಕ್ರೀಡಸೇ= ವಿನೋದಂ ಕರೋಷೀತ್ಯರ್ಥಃ ॥ – (ವಾ.)

೩೬೯. ಧೃತರಾಷ್ಟ್ರಸ್ತು ತಂ ಹೃಷ್ಟಃ ಪರ್ಯಪೃಚ್ಛತ್ ಪುನಃ ಪುನಃ ।
ಕಿಂ ಜಿತಂ ಕಿಂ ಜಿತಮಿತಿ ಹ್ಯಾಕಾರಂ ನಾಭ್ಯರಕ್ಷತ ॥ – ಭಾರತ (ಸಭಾ. ೬೫/೪೩)

ಧೃತರಾಷ್ಟ್ರನ ವರಪ್ರದಾನ

ಇತ್ಯುಕ್ತ ಆಹಾಂಬಿಕೇಯೋ ನಿಮಿತ್ತಾನಾಂ ಫಲಂ ಕಥಮ್।
ನ ಭವೇದಿತಿ ಸ ಪ್ರಾಹ ದ್ರುತಂ ಕೃಷ್ಣಾ ವಿಮುಚ್ಯತಾಮ್ ॥ ೩೭೨ ॥

ಅ: ವಿದುರ ಹೀಗೆನ್ನಲು ಧೃತರಾಷ್ಟ್ರ ಕೇಳಿದ 'ಈ ಅಪಶಕುನಗಳ ಫಲ ನಡೆಯದಿರುವಂತೆ ಮಾಡುವ ಬಗೆ ಯಾವುದು?'; ವಿದುರ ಕೂಡಲೆ ತಿಳಿಸಿದ 'ದ್ರೌಪದಿಯನ್ನು ಬೇಗನೇ ಬಿಡುಗಡೆ ಮಾಡು'.

ವಿ: ಈ ಪ್ರಸಂಗದಿಂದ ಉತ್ಪಾತಗಳ ಪರಿಹಾರದ ಉಪಾಯವೂ ಸಹ ತಿಳಿಸಲ್ಪಟ್ಟಂತೆ ಆಯಿತು. ಅಪಶಕುನಗಳು ಕಂಡಾಗ ಅವುಗಳಿಗೆ ಕಾರಣಗಳನ್ನು ಹುಡುಕಿ ಅವುಗಳನ್ನು ಸರಿಪಡಿಸಿಕೊಂಡರೆ ಅವುಗಳ ಫಲ ಪರಿಹಾರವಾಗುವುದು ಎಂದರ್ಥ. ದ್ರೌಪದಿಗೆ ಮಾಡಿದ ಅವಮಾನದಿಂದ ಭೀಮು ಕೆರಳಿರುವುದರಿಂದ ದ್ರೌಪದಿಯನ್ನು ಬಿಡುಗಡೆ ಮಾಡುವ ಮೂಲಕ ಅದನ್ನು ಸರಿಪಡಿಸಿಕೊಂಡಲ್ಲಿ ಸದ್ಯಕ್ಕೆ ಅವನ ಪುತ್ರರು ಹತರಾಗದೇ ಉಳಿಯುವರು ಎಂದರ್ಥ. ವಿದ್ಯೆಗೆ ಅವಮಾನವಾದಾಗ ಸರ್ವನಾಶದ ಸೂಚನೆಗಳು ಕಂಡು ಬರುವವು. ಪುನಃ ವಿದ್ಯೆಗೆ ಗೌರವ ತೋರಿದಲ್ಲಿ ಅವುಗಳು ಪರಿಹಾರವಾಗುವವು ಎಂದರ್ಥ.

ತೋಷಯಸ್ವ ವರೈಶ್ಚೈನಾಮನ್ಯಥಾ ತೇ ಸುತಾನ್ ಮೃತಾನ್ ।
ವಿದ್ಧಿ ಭೀಮೇನ ನಿಷ್ಪಿಷ್ಟಾನ್ ನಾತ್ರ ತೇ ಸಂಶಯೋ ಭವೇತ್ ॥ ೩೭೩ ॥

ಅ: 'ಅವಳನ್ನು ವರಗಳಿಂದ ಸಂತೋಷಪಡಿಸು. ಇಲ್ಲವಾದಲ್ಲಿ ನಿನ್ನ ಮಕ್ಕಳು ಭೀಮನಿಂದ ಈಗಲೇ ಪುಡಿಯಾಗಿ ಸಾಯುವರೆಂದು ತಿಳಿ. ಇದರಲ್ಲಿ ನಿನಗೆ ಸಂದೇಹಬೇಡ'.

ಕೃಷ್ಣಾ ಚ ಪಾಂಡವಾಶ್ಚೈವ ತಪೋವೃದ್ಧಿಮಭೀಪ್ಸವಃ।
ತಪಸಾ ನೈವ ಧಕ್ಷ್ಯಂತಿ ತೇನ ಜೀವಂತಿ ತೇ ಸುತಾಃ ॥ ೩೭೪ ॥

---

೩೭೪. ಕ್ಷರತೀತಿ ತಪಃ ಕ್ರೋಧಾದ್ಯಷಯೋ ನ ಶಪಂತಿ ಹಿ ।
ಜಾನಂತೀ ತದ್ ಯಥಾತತ್ತ್ವಂ ಪಾಂಚಾಲೀ ನ ಶಶಾಪ ತಮ್ ॥
ಶಪತಾ ಯತ್ಕೃತಂ ಪುಣ್ಯಂ ಶಾಪ್ಯಮಾನಂ ತು ಗಚ್ಛತಿ । – ಭಾರತ (೪/೧೬/೫೧)
ಶಾಪ್ಯಮಾನಸ್ಯ ಯತ್ಪಾಪಂ ಶಪಂತಮನುಗಚ್ಛತಿ ॥ – ಭಾರತ (ಆಶ್ವಮೇಧಿಕ. ೩೮೬)

ಅ: 'ದ್ರೌಪದಿಯಾಗಲೀ, ಪಾಂಡವರಾಗಲೀ ತಪೋವೃದ್ಧಿಯನ್ನು ಬಯಸಿದವರಾಗಿ ನಿನ್ನ ಮಕ್ಕಳನ್ನು ತಪಸ್ಸಿನಿಂದ ಸುಟ್ಟಿಲ್ಲ. ಅದರಿಂದಾಗಿ ಅವರಿನ್ನೂ ಬದುಕಿರುವರು'.

ವಿ: ೧) ತಪಸ್ಸನ್ನು ಶಾಪ ನೀಡಲೆಂದು ಉಪಯೋಗಿಸಿಕೊಂಡಾಗ ಅದರ ಶಕ್ತಿ ಕುಂದುವುದು. ಹಾಗೆ ಮಾಡದೇ ಸಹಿಸಿಕೊಂಡಿದ್ದಲ್ಲಿ ಅಯೋಗ್ಯರಿಗೆ ಅನರ್ಥ ತಪ್ಪದೇ ಆಗುವುದು ಜೊತೆಗೆ ಇವರ ಪುಣ್ಯ ವೃದ್ಧಿಸುವುದು. ಶಾಪ ಕೊಡುವವರೆಲ್ಲ ತಮ್ಮ ತಪಶ್ಶಕ್ತಿಯನ್ನು ಕಳೆದುಕೊಳ್ಳುವರು ಎಂಬ ಎಚ್ಚರಿಕೆ ಇಲ್ಲಿದೆ.

೨) ಆದ್ದರಿಂದಾಗಿಯೇ ಗೌತಮ, ಮಾಂಡವ್ಯಾದಿಗಳು ಶಾಪ ನೀಡಿದಾಗ ಅವರ ಅಧಿಕಪುಣ್ಯ ಕ್ಷಯಿಸಿತು ಎಂಬ ವಿವರ *ಹಿಂದೆ ಬಂದಿದೆ. ಮಹಾಭಾರತದಲ್ಲೂ ದ್ರೌಪದಿಯು ಶಾಪ ನೀಡದಿರಲು ಇದೇ ಮುಖ್ಯ ಕಾರಣ ಎಂಬ ಅಂಶ ನಿರೂಪಿತವಾಗಿದೆ :

ಕ್ಷರತೀತಿ ತಪಃ ಕ್ರೋಧಾದೃಷಯೋ ನ ಶಪಂತಿ ಹಿ ।
ಜಾನಂತೀ ತದ್ ಯಥಾತತ್ತ್ವಂ ಪಾಂಚಾಲೀ ನ ಶಶಾಪ ತಮ್ ॥ – (೪/೧೬/೫೧)

ತಥಾऽಪಿ ಯದಿ ಕೃಷ್ಣಾಂ ತ್ವಂ ನ ಮೋಚಯಸಿ ತೇ ಸುತಾನ್ ।
ಹನಿಷ್ಯತಿ ನ ಸಂದೇಹೋ ಬಲೇನೈವ ವೃಕೋದರಃ ॥ ೩೭೫ ॥

ಅ: ''ಇಷ್ಟಾಗಿಯೂ ನೀನು ದ್ರೌಪದಿಯನ್ನು ಬಿಡುಗಡೆ ಮಾಡಿಸದಿದ್ದಲ್ಲಿ ನಿನ್ನ ಮಕ್ಕಳನ್ನು ಭೀಮ ತನ್ನ ಬಲದಿಂದ ಕೊಲ್ಲುವನು, ಸಂಶಯವಿಲ್ಲ''.

ವಿ: ಶಾಪಾದಿಗಳನ್ನು ತಪಶ್ಶಕ್ತಿಯಿಂದ ಕೊಂದರೆ ತಪಶ್ಶಕ್ತಿ ಕುಂದುವುದು, ಆದರೆ, ಭೀಮ ಬಾಹುಬಲದಿಂದಲೇ ಕೊಲ್ಲುವುದರಿಂದ ತಪಶ್ಶಕ್ತಿಗೆ ಚ್ಯುತಿ ಒದಗದು ಎಂದರ್ಥ.

ಇತೀರಿತೋ ವಿನಿರ್ಭರ್ತ್ಸ್ಯ ಪುತ್ರಂ ದುಃಶಾಸನಂ ನೃಪಃ ।
ಅಮೋಚಯದ್ವರೈಶ್ಚೈನಾಂ ಛಂದಯಾಮಾಸ ಪಾರ್ಷತೀಮ್ ॥ ೩೭೬ ॥

ಅ: ವಿದುರ ಹೀಗೆನ್ನಲು ಧೃತರಾಷ್ಟ್ರ ಮಗನಾದ ದುಶ್ಶಾಸನನನ್ನು ಗದರಿಸಿ ದ್ರೌಪದಿಯನ್ನು ಬಿಡಿಸಿದ. ವರಗಳನ್ನು ಕೇಳಿಕೊಳ್ಳುವಂತೆ ಅವಳನ್ನು ಬಹಳವಾಗಿ ಒತ್ತಾಯಿಸಿದ.

ವಿ: ದ್ರೌಪದಿ ತಾನಾಗಿ ವರ ಕೇಳದೇ ಧೃತರಾಷ್ಟ್ರ ಒತ್ತಾಯ ಮಾಡಿದ್ದರಿಂದಾಗಿ ಕೇಳಿದ್ದರಿಂದ ವರ ಕೇಳಿದ ಧರ್ಮಲೋಪ ದ್ರೌಪದಿಗೆ ಉಂಟಾಗಲಿಲ್ಲ ಎಂಬ ಸೂಚನೆಯೂ ಇಲ್ಲಿದೆ.

---

* ಮ.ಭಾ.ತಾ.ನಿ. (೪/೧೦, ೧೧/೧೩೮); ವಾ.ರಾ. (೧/೪೯/೨); ಸಂ.ರಾ. (೧/೬/೧೮)

ವರಸ್ವೀಕಾರ ಪ್ರಸಂಗದಲ್ಲೂ ದ್ರೌಪದಿಯ ಧರ್ಮನಿಷ್ಠೆ

ಛಂದಿತಾ ಸಾ ವರೈಸ್ತೇನ ಧರ್ಮೇ ಭಾಗವತೇ ಸ್ಥಿತಾ ।
ನೈವಾತ್ಮನೋ ವರಾನ್ ವವ್ರೇ ವವ್ರೇ ತೇಷಾಂ ವಿಮೋಕ್ಷಣಮ್ ॥೩೭೭॥

ಅ: ಅವನು ಹಾಗೆ ಒತ್ತಾಯ ಮಾಡಿದಾಗಲೂ ಶುದ್ಧ ಭಾಗವತ ಧರ್ಮದಲ್ಲಿ ದೀಕ್ಷಿತಳಾದ ದ್ರೌಪದಿ ತನಗಾಗಿ ವರಗಳನ್ನು ಕೇಳಿಕೊಳ್ಳಲಿಲ್ಲ. ಪಾಂಡವರ ವಿಮೋಚನೆಯನ್ನು ಮಾತ್ರ ಕೇಳಿದಳು.

ಯುಧಿಷ್ಠಿರಸ್ಯ ಸಭ್ರಾತುಃ ಸರಾಷ್ಟ್ರಸ್ಯ ವಿಮೋಕ್ಷಣಮ್ ।
ದದೌ ನೃಪೋಽಸ್ಯಾ ನ ಪುನಶ್ಛಂದ್ಯಮಾನಾಽಪಿ ಸಾಽವೃಣೋತ್ ೩೭೮

ಅ: ಧರ್ಮರಾಜ, ಅವನ ಸಹೋದರರು ಮತ್ತು ಅವನ ರಾಷ್ಟ್ರದ ಬಿಡುಗಡೆಯನ್ನು ಧೃತರಾಷ್ಟ್ರ ಅವಳಿಗೆ ನೀಡಿದ. ಮತ್ತೆ ಎಷ್ಟು ಒತ್ತಾಯಿಸಿದರೂ ದ್ರೌಪದಿ ಬೇರೇನನ್ನೂ ಕೇಳಿಕೊಳ್ಳಲಿಲ್ಲ.

ಭರ್ತುರ್ವಿಷ್ಣೋಶ್ಚ ನಾನ್ಯಸ್ಮಾದ್ವರಸ್ವೀಕಾರ ಇಷ್ಯತೇ।
ಏವಂ ಹಿ ಭಗವದ್ಧರ್ಮಸ್ತಸ್ಮಾತ್ ಸಾ ನಾವೃಣೋತ್ ಪರಮ್ ॥ ೩೭೯ ॥

ಅ: ಸ್ತ್ರೀಯು ತನ್ನ ಗಂಡನಿಂದ ಅಥವಾ ಶ್ರೀಹರಿಯಿಂದ ಹೊರತು ಬೇರಾರಿಂದಲೂ ವರವನ್ನು ಸ್ವೀಕರಿಸುವುದು ತರವಲ್ಲ, ಭಾಗವತ ಧರ್ಮ ಇರುವುದು ಹಾಗೆ. ಆದ್ದರಿಂದ ದ್ರೌಪದಿ ಬೇರಾವ ವರವನ್ನೂ ಕೇಳಿಕೊಳ್ಳಲಿಲ್ಲ.

ಅಧರ್ಮತೋ ಹೃತತ್ವಾತ್ ತು ತದ್ದಾನಂ ನ ವರೋ ಭವೇತ್।
ಇತಿ ಮತ್ವಾ ಪಾಂಡವಾನಾಂ ವವ್ರೇ ಕೃಷ್ಣಾ ವಿಮೋಕ್ಷಣಮ್ ॥ ೩೮೦ ॥

ಅ: ಧರ್ಮಬಾಹಿರವಾಗಿ ಅವರು ಅಪಹರಿಸಿರುವುದರಿಂದ ಅದನ್ನು ಮರಳಿ ಪಡೆದದ್ದು ವರವೆನ್ನಿಸಲಾರದು. ಹೀಗೆ ಭಾವಿಸಿ ದ್ರೌಪದಿ ಪಾಂಡವರ ವಿಮೋಚನೆಯನ್ನು ಕೇಳಿದಳು.

---

೩೮೦. ಅನ್ಯಾಯೇನಾಪಹೃತಸ್ಯ ಪುನರುಪಾದಾನಂ ವರ ಏವ ನ ಭವತೀತ್ಯುಕ್ತಂ ಧರ್ಮೇ ಭಾಗವತೇ ಸ್ಥಿತೇತಿ ॥
– (ವಾ.)

ವಿ: ೧) ದ್ರೌಪದಿ ಧೃತರಾಷ್ಟ್ರನ ಒತ್ತಾಯದಂತೆ ಕೇಳಿಕೊಂಡ ವರಗಳೂ ಸಹ ನಿಜವಾದ ಅರ್ಥದಲ್ಲಿ ವರಗಳೇ ಅಲ್ಲ. ಅಧರ್ಮದಿಂದ ಕಿತ್ತಿಕೊಂಡದ್ದನ್ನು ಪುನಃ ಪಡೆಯುವುದು ನ್ಯಾಯ–ಸಮ್ಮತವಾದ ಅಧಿಕಾರವೇ ಆದ್ದರಿಂದ ಅದು ವರ ಎನ್ನಿಸಲು ಸಾಧ್ಯವೇ ಇಲ್ಲ ಎಂದರ್ಥ.

೨) ಈ ವರ ಕೇಳಿದ್ದು ಅಧರ್ಮವಲ್ಲ ಎಂದು ತಿಳಿಸಿ ವಾಸ್ತವವಾಗಿ ಅವು ವರಗಳೇ ಅಲ್ಲ ಎಂದು ನಿರೂಪಿಸುತ್ತಿರುವನು.

ಶ್ವಶುರಾದ್ಯೈಹಿಕವರಾಃ ಕ್ಷತ್ರಿಯಾಯಾಸ್ತ್ರಯೋ ಯತಃ ।
ಉಕ್ತಾಃ ಶತಂ ಚ ವಿಪ್ರಾಯಾ ಧರ್ಮೇ ಭಾಗವತೇ ತತಃ ।
ಹೇತುನಾऽನೇನ ವವ್ರೇ ಸಾ ನಾನ್ಯತ್ ಕಿಂಚಿದತಃ ಪರಮ್ ॥ ೩೮೧ ॥

ಅ: ಭಾಗವತ ಧರ್ಮದಲ್ಲಿ ಕ್ಷತ್ರಿಯಸ್ತ್ರೀಗೆ ಮಾವನಿಂದ ಮೂರು ಐಹಿಕ ವರಗಳು ವಿಹಿತವಾಗಿವೆ. ಬ್ರಾಹ್ಮಣಸ್ತ್ರೀಗೆ ನೂರು ವರಗಳು ವಿಹಿತ. ಆದ್ದರಿಂದ ಆ ಕಾರಣದಿಂದ ದ್ರೌಪದಿ ಬೇರಾವ ವರಗಳನ್ನೂ ಕೇಳಿಕೊಳ್ಳಲೇ ಇಲ್ಲ.

ವಿ: ೧) ದ್ರೌಪದಿ ವರ ಪಡೆದದ್ದು ಸರ್ವಥಾ ಧರ್ಮಚ್ಯುತಿಯಾಗಲಿಲ್ಲ ಎಂಬುದನ್ನು ಮತ್ತೊಂದು ಬಗೆಯಿಂದ ಇಲ್ಲಿ ವಿವರಿಸಿರುವರು. ಭಾಗವತ ಧರ್ಮದ ರೀತಿಯಲ್ಲಿ ಕ್ಷತ್ರಿಯ ಸ್ತ್ರೀ ತನ್ನ ಮಾವನಿಂದ ಮೂರು ವರಗಳನ್ನು ಪಡೆಯಬಹುದು. ದ್ರೌಪದಿ ಪಡೆದದ್ದು ಎರಡೇ ವರಗಳು. ಆದ್ದರಿಂದ ಅದು ಧರ್ಮಲೋಪವಾಗುವ ಪ್ರಸಂಗವೇ ಆಗದು ಎಂದರ್ಥ.

೨) ಸಾಮಾನ್ಯ ಕ್ಷತ್ರಿಯಸ್ತ್ರೀ ಎರಡು ವರಗಳನ್ನು, ಮಹಾರಾಣಿ ಮೂರು ವರಗಳನ್ನು ಪಡೆಯಬಹುದು ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ. ಹೀಗೆ ದ್ರೌಪದಿ ವರ ಪಡೆದದ್ದು ಸರ್ವಥಾ ಧರ್ಮ ವಿರುದ್ಧವಲ್ಲ ಎಂಬುದು ಇಲ್ಲಿಯ ಮುಖ್ಯಾಂಶ. ಮೂರನೆಯ ತಾನು ಕೇಳಲಾರೆ ಎಂದು ದ್ರೌಪದಿ ಸ್ಪಷ್ಟವಾಗಿ ನಿರಾಕರಿಸಿದಳು :

ಲೋಭೋ ಧರ್ಮಸ್ಯ ನಾಶಾಯ ಭಗವನ್ ನಾಹಮುತ್ಸಹೇ ।
ಅನರ್ಹಾ ವರಮಾದಾತುಂ ತೃತೀಯಂ ರಾಜಸತ್ತಮ ॥
ಏಕಮಾಹುರ್ವೈಶ್ಯವರಂ ದ್ವೌ ತು ಕ್ಷತ್ರಸ್ತ್ರಿಯಾ ವರೌ ।
ತ್ರಯಸ್ತು ರಾಜ್ಞೋ ರಾಜೇಂದ್ರ ಬ್ರಾಹ್ಮಣಸ್ಯ ಶತಂ ವರಾಃ ॥ – ಭಾರತ (೨/೭೧/೩೪, ೩೫)

---

೩೮೧. ಪ್ರಕಾರಾಂತರೇಣಾಪಿ ಭಾಗವತಧರ್ಮಹಾನಿರ್ನ ಭವತೀತ್ಯಾಹ ಶ್ವಶುರಾದಿತಿ ॥ – (ವಾ.)

ಇಂದ್ರಪ್ರಸ್ಥದತ್ತ ಪಾಂಡವರು

ತತೋ ವಿಮುಕ್ತಾಃ ಪ್ರಯಯುಶ್ಚ ಪಾರ್ಥಾ
ಗುರೂನ್ ಪ್ರಣಮ್ಯ ಸ್ವಪುರಂ ಸಕೃಷ್ಣಾಃ ।
ದುರ್ಯೋಧನಾನಂತರಜೋ ಜಗಾದ
ತಾತಂ ನಿಜಂ ಪಾಪಕೃತಾಂ ಪ್ರಧಾನಃ ॥ ೩೮೨ ॥

ಅ: ಬಳಿಕ ವಿಮೋಚನೆಗೊಂಡ ಪಾಂಡವರು ಹಿರಿಯರಿಗೆ ವಂದಿಸಿ ದ್ರೌಪದಿಯೊಂದಿಗೆ ತಮ್ಮ ಪಟ್ಟಣಕ್ಕೆ ತೆರಳಿದರು. ಆಗ ಪಾಪಿಗಳಲ್ಲಿ ಪ್ರಮುಖನಾದ ದುಃಶಾಸನ ಧೃತರಾಷ್ಟ್ರನಿಗೆ ಹೇಳಿದ :

ದುಃಶಾಸನ ನೀಡಿದ ಅನುದ್ಯೂತದ ಸಲಹೆ

ಸಮಸ್ತಪಾಂಡವಶ್ರಿಯಂ ಸಮಾಗತಾಮಹೋ ಪುನಃ ।
ವ್ಯಮೋಚಯೋ ವೃಕೋದರಾದ್ವಧಶ್ಚ ನೋ ಧ್ರುವೋ ಭವೇತ್॥೩೮೩॥

ಅ: 'ಏನಾಶ್ಚರ್ಯ..!! ನಮ್ಮ ವಶವಾಗಿದ್ದ ಪಾಂಡವರ ಸಮಸ್ತ ಸಂಪತ್ತನ್ನು ಪುನಃ ಅವರಿಗೆ ನೀಡಿಬಿಟ್ಟೆ, ಇನ್ನು ನಾವೆಲ್ಲಾ ಭೀಮನಿಂದ ಸಾಯುವುದು ನಿಶ್ಚಿತ'.

ವಿ: ಬಿಡುಗಡೆಗೊಂಡ ಪಾಂಡವರು ತಮ್ಮ ಮೇಲೆ ಯುದ್ಧ ಮಾಡಿ ನಿಶ್ಚಿತವಾಗಿಯೂ ಕೊಂದು ಹಾಕುವರು ಎಂಬುದು ಅವನ ಭಯ.

ಅತಃ ಪುನಶ್ಚ ಪಾಂಡವಾನ್ ಸಮಾಹ್ವಯಸ್ವ ನಃ ಕೃತೇ ।
ಪುನಶ್ಚ ದೇವನಂ ಭವೇಜ್ಜಿತಾ ವನಂ ಪ್ರಯಾಂತು ಚ ॥ ೩೮೪ ॥

ಅ: 'ಆದ್ದರಿಂದ ಪಾಂಡವರನ್ನು ನಮಗೋಸ್ಕರ ಮರಳಿ ಕರೆಸು, ಇನ್ನೊಮ್ಮೆ ದ್ಯೂತ ನಡೆಯಲಿ. ಅವರು ಸೋತು ಕಾಡಿಗೆ ತೆರಳಲಿ'.

ಮತ್ತೊಮ್ಮೆ ದ್ಯೂತ

ತೇನೋಕ್ತಃ ಸ ತಥಾ ರಾಜಾ ಪಾಂಡವಾನ್ ಪುನರಾಹ್ವಯತ್ ।
ಪುನಃ ಪಿತ್ರಾ ಸಮಾಹೂತೋ ದೇವನಾಯ ಯುಧಿಷ್ಠಿರಃ ।
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚಾಗಮತ್ ಸಭಾಮ್ ೩೮೫

ಅ: ದುಶ್ಶಾಸನ ಹೀಗೆನ್ನಲು ಧೃತರಾಷ್ಟ್ರ ಪಾಂಡವರನ್ನು ಮರಳಿ ಕರೆಸಿದ. ದೊಡ್ಡಪ್ಪನಿಂದ ಕರೆಯಲ್ಪಟ್ಟ ಯುಧಿಷ್ಠಿರನು ಸಹೋದರರು, ದ್ರೌಪದಿಯು ತಡೆದರೂ ಕೇಳದೇ ದ್ಯೂತಕ್ಕೆಂದು ಸಭೆಗೆ ತೆರಳಿದ.

ವಿ: ೧) ಧರ್ಮರಾಜನಿಗೆ ಮತ್ತೆ ಕಲಿಯ ಆವೇಶದಿಂದಾಗಿ ದ್ಯೂತವನ್ನು ಆಡಲೇಬೇಕೆಂಬ ವ್ರತವನ್ನು ಪಾಲಿಸುವ ಛಲ ಹುಟ್ಟಿತು :

ದೇವಕಾರ್ಯಾರ್ಥಸಿದ್ಧ್ಯರ್ಥಂ ಮುಹೂರ್ತಂ ಕಲಿರಾವಿಶತ್ । –(ಸಭಾ. ೯೮/೨೮)

೨) ಭೀಮಸೇನ ಎರಡು ಬಾರಿ ಸೌಗಂಧಿಕ ತಂದು, ಹನುಮಂತ ಎರಡು ಬಾರಿ ಸಂಜೀವನ ತಂದು ಹರಿಸೇವೆ ಮಾಡಿದರೆ, ಧರ್ಮರಾಜ ಎರಡು ಬಾರಿ ದ್ಯೂತವಾಡಿ ಪ್ರಮಾದವೆಸಗುವ ಮೂಲಕ ತಾನು ಪರಶುಕ್ಷತ್ರಿಯರಂತೆ ಶುದ್ಧ ಭಾಗವತಧರ್ಮರತನಲ್ಲ ಎಂದು ನಿರೂಪಿಸಿಕೊಂಡ ಎಂದು ತಿಳಿಯಬೇಕು. ಅನುವ್ಯಾಖ್ಯಾನ ಬರೆಯುವಂಥ ಭೀಮನಂತಹ ತಮ್ಮನಿದ್ದು ಅನುದ್ಯೂತವಾಡಿದ್ದು ಧರ್ಮರಾಜನ ಪ್ರಾರಬ್ಧ.

ದ್ವಾದಶಾಬ್ದಂ ವನೇ ವಾಸಮಜ್ಞಾತತ್ವೇನ ವತ್ಸರಮ್ ।
ವಾಸಂ ಪ್ರಸಿದ್ಧನೃಪತೇಃ ಪುರೇ ನೈವಾತಿದೂರತಃ ॥ ೩೮೬ ॥

ಕೃಷ್ಣಾಯಾಃ ಪಾಂಡವಾನಾಂ ವಾ ದರ್ಶನೇಽಜ್ಞಾತವಾಸಿನಾಮ್ ।
ಏಕಸ್ಯಾಪಿ ಸಮಸ್ತಾನಾಂ ದ್ವಾದಶಾಬ್ದಂ ಪುನರ್ವನಮ್ ॥ ೩೮೭ ॥

ವತ್ಸರಾಜ್ಞಾತವಾಸಂ ಚ ತ್ಯಾಗೇಽಪ್ಯುಕ್ತವಿಧೇಸ್ತಥಾ ।
ದುರ್ಯೋಧನಃ ಪಣಂ ಚಕ್ರೇ ಬುದ್ಧ್ಯಾ ದುಃಶಾಸನೋಕ್ತಯಾ ॥ ೩೮೮ ॥

ಅ: ಹನ್ನೆರಡು ವರ್ಷಗಳ ಕಾಲ ವನವಾಸ, ಒಂದು ವರ್ಷ ಕಾಲ ಅಜ್ಞಾತವಾಸ, ಅಂತಹ ಅಜ್ಞಾತವಾಸವನ್ನು ಹಸ್ತಿನಾಪುರದಿಂದ ಹೆಚ್ಚು ದೂರವಲ್ಲದ ಪ್ರಸಿದ್ಧ ರಾಜನ ಬಳಿಯೇ ಮಾಡುವುದು. ಅಜ್ಞಾತವಾಸ ಕಾಲದಲ್ಲಿ ದ್ರೌಪದಿ ಅಥವಾ ಪಾಂಡವರಲ್ಲಿ ಒಬ್ಬರ ಅಥವಾ ಎಲ್ಲರ ದರ್ಶನಮಾಡಿದರೆ ಪುನಃ ಹನ್ನೆರಡು ವರ್ಷಗಳ ವನವಾಸ ಮತ್ತೊಂದು ವರ್ಷ ಅಜ್ಞಾತವಾಸ, ಅದು ಮಧ್ಯೆ ತಪ್ಪಿದಲ್ಲಿ ಮೊದಲಿನಂತೆ ಆ ರೀತಿ ವನವಾಸ, ಅಜ್ಞಾತವಾಸಗಳು -

---

೩೮೮. ತ್ಯಾಗೇಽಪ್ಯುಕ್ತವಿಧೇರಿತ್ಯತ್ರ ಉಕ್ತವಿಧೇಃ= ಉಕ್ತನಿಯಮಸ್ಯ ತ್ಯಾಗೇ= ಕರಣಾಸಾಮರ್ಥ್ಯೇನ ಸ್ವಯಮೇವ ತ್ಯಾಗೇಽಪಿ ತಥಾ= ಪೂರ್ವವದೇವೇತಿ ಪಣಂ ಚಕ್ರ ಇತಿ ಯೋಜನಾ ॥ –(ವಾ.)

ಇವುಗಳನ್ನು ದುಃಶಾಸನ ನೀಡಿದ ಸಲಹೆಯಂತೆ ದುರ್ಯೋಧನ ಪಣವನ್ನಾಗಿ ಇಟ್ಟ. ಈ ಪಣದಲ್ಲಿ ಪಾಂಡವಸಂಬಂಧಿ ಪಣ ಮಾತ್ರ ಇಟ್ಟಿದ್ದು. ದ್ರೌಪದಿ ಅಥವಾ ಪಾಂಡವರ ದರ್ಶನ ಸಿಕ್ಕರೆ ಎಂದು ಹೇಳುವ ಮೂಲಕ, ಅವರ ದ್ಯೂತದಲ್ಲಿ ಸೋಲು ಮೊದಲೇ ನಿಶ್ಚಿತ. ಆದ್ದರಿಂದಲೂ ಆ ಪಣಕ್ಕೆ ಅರ್ಥವೇ ಇಲ್ಲ.

ವಿ: ೧) ಎರಡನೆಯ ಬಾರಿ ನಡೆದ ದ್ಯೂತಕ್ಕೆ ಅನುದ್ಯೂತ ಎಂದು ಹೆಸರು. ಅದರಲ್ಲಿ ಪಣವನ್ನಾಗಿ ಇಟ್ಟ ವಿವರಗಳು ಇಲ್ಲಿ ನಿರೂಪಿತವಾಗಿವೆ. ಆಷ್ಟು ವರ್ಷಗಳ ಕಾಲ ಸೋತವರ ರಾಜ್ಯ ಗೆದ್ದವರ ಅಧೀನ ಎಂಬುದು ಅದಕ್ಕೆ ಸಂಬಂಧಿಸಿದ ಮತ್ತೊಂದು ಪಣ.

೨) ಅಜ್ಞಾತವಾಸವನ್ನು ದೂರದ ಸ್ಥಳದಲ್ಲಿ ಮಾಡದೇ ತಮಗೆ ಗುರುತಿಸಲು ಸಾಧ್ಯವಾಗುವಂತೆ ಹತ್ತಿರದ ಸ್ಥಳದಲ್ಲೇ ಮಾಡಬೇಕು, ಅದರಂತೆ ಯಾವುದೋ ಅಪ್ರಸಿದ್ಧ ರಾಜನ ಬಳಿಯಲ್ಲಿ ಕಳೆಯದೇ, ಪ್ರಸಿದ್ಧ ರಾಜನ ಬಳಿಯೇ ಕಳೆಯಬೇಕು ಎಂಬ ಅಂಶಗಳನ್ನು ಆ ಪಣದಲ್ಲಿ ಸೇರಿಸುವ ಮೂಲಕ ಆದಷ್ಟು ಪಾಂಡವರನ್ನು ಪುನಃ ವನವಾಸ, ಅಜ್ಞಾತವಾಸಗಳ ಸರಪಳಿಯಲ್ಲಿ ತೊಡಗಿಸುವ ಕುತಂತ್ರವು ಅದರಲ್ಲಿ ಸೇರಿತ್ತು.

ಅನುದ್ಯೂತದಲ್ಲಿ ಯುಧಿಷ್ಠಿರನ ಪರಾಭವ

ಗಾಂಧಾರೇಣ ಪುನಶ್ಚಾಕ್ಷಹೃದಯಜ್ಞೇನ ಧರ್ಮಜಃ ।
ಪರಾಜಿತೋ ವನಂ ಯಾತುಮೈಚ್ಛತ್ ಸಭ್ರಾತೃಕೋ ಯದಾ ॥ ೩೮೯ ॥

ಅ: ದ್ಯೂತದ ಮರ್ಮ ತಿಳಿದಿದ್ದ ಶಕುನಿಯಿಂದ ಧರ್ಮರಾಜ ಮತ್ತೆ ದ್ಯೂತದಲ್ಲಿ ಪರಾಜಿತನಾದ. ಸಹೋದರರೊಂದಿಗೆ ವನಕ್ಕೆ ತೆರಳಲು ಬಯಸಿದ.

ದುರ್ಯೋಧನನ ಪೈಶಾಚಿಕ ತೃಪ್ತಿ

ತದಾ ನನರ್ತ ಪಾಪಕೃತ್ ಸುಯೋಧನಾನುಜೋ ಹಸನ್।
ವದಂಶ್ಚ ಮಾರುತಾತ್ಮಜಂ ಪುನಃ ಪುನಶ್ಚ ಗೌರಿತಿ ॥ ೩೯೦ ॥

---

೩೯೦. ಗೌರಿತ್ಯಸ್ಯ ಉತ್ಸ್ಪಷ್ಟವೃಷವದ್ವೃಥಾ ಪುಷ್ಟ ಇತ್ಯರ್ಥಃ । ಏತೇನ ಗೌರಿತ್ಯನೇನ ದೂಷಣಸ್ಯಾಲಾಭಾತ್ । ಗೌರಿತಿ ವದನ್ನಿತಿ ಕಥನಮನುಪಪನ್ನದೂಷಣಂ ನಿರಸ್ತಮ್ ॥ ಗೌರಿತ್ಯನೇನೋತ್ಸ್ಪಷ್ಟವೃಷಭಸಾದೃಶ್ಯಮುಚ್ಯತ ಇತಿ ಸ್ವೀಕರಣಾತ್॥ – (ಸ.)

ಅ: ಆಗ ಪಾಪವೆಸಗಿದ ದುಶ್ಶಾಸನ ನಗುತ್ತಾ ಭೀಮಸೇನನನ್ನು ಮತ್ತೆ ಮತ್ತೆ 'ಬಸವ, ಬಸವ' ಎಂದು ಅಣಕಿಸುತ್ತಾ ಕುಣಿಯತೊಡಗಿದ.

ವಿ: ಗೂಳಿಗಳು ಆಹಾರಕ್ಕಾಗಿ ಕಾಡಿಗೆ ತೆರಳುವಂತೆ ಪಾಂಡವರು ಬದುಕಲೆಂದು ಕಾಡಿಗೆ ತೆರಳುತ್ತಿರುವರು ಎಂದು ಹಂಗಿಸುತ್ತಾ ದುಶ್ಶಾಸನ ಸಂಭ್ರಮದಿಂದ ಕುಣಿದಾಡಿದ. ಪಾಂಡವರು ಹಾಗೆ ತೆರಳಿದ್ದು ಹದಿಮೂರು ವರ್ಷಗಳ ಕಾಲ ತಮ್ಮ ಆಯುಷ್ಯ ವೃದ್ಧಿಯಾಗಿದ್ದಕ್ಕೆ ಸೂಚನೆ ಎಂಬ ಯೋಚನೆ ಅವರಿಗೆ ಹಾಗೆ ಸಂಭ್ರಮಿಸಲು ಕಾರಣವಾಯಿತು ಎಂದು ತಿಳಿಯಬಹುದು.

ಉವಾಚ ಚ ಪುನಃ ಕೃಷ್ಣಾಂ ನೃತ್ಯನ್ನೇವ ಸಭಾತಲೇ।
ಅಪತಿಹ್ಯಸಿ ಕಲ್ಯಾಣಿ ಗಚ್ಛ ದುರ್ಯೋಧನಾಲಯಮ್ ॥ ೩೯೧ ॥

ಅ: ಸಭಾಂಗಣದಲ್ಲಿ ಕುಣಿಯುತ್ತಲೇ ದುಶ್ಶಾಸನ ದ್ರೌಪದಿಗೆ ಮತ್ತೆ ನುಡಿದ 'ಕಲ್ಯಾಣಿ, ನಿನಗಿನ್ನು ಗಂಡಂದಿರಿಲ್ಲ. ದುರ್ಯೋಧನನ ಮನೆಗೆ ತೆರಳು'.

ವಿ: ದ್ರೌಪದಿ ಮುಂದೆ ಕಲ್ಯಾಣಿದೇವಿಯಾಗಿ (೩೨/೧೨೯) ಜನಿಸುವುದರಿಂದ ಇಲ್ಲಿ ಕಲ್ಯಾಣಿ ಎಂದು ಕರೆದದ್ದು ಉಚಿತವೇ ಆಗಿದೆ. ಆದರೆ ದುಶ್ಶಾಸನನಿಗೆ ಅದರ ಪರಿಜ್ಞಾನವಿಲ್ಲದ್ದರಿಂದ ಅವನಿಗೆ ಅಪಹಾಸ್ಯ ಮಾಡಿದ ಪಾಪವೇ ಒದಗಿತು.

ಪ್ರಾಣ ತೆಗೆದ ನಗು

ಏತೇಽಖಿಲಾಃ ಷಂಢತಿಲಾಸ್ತಮೋಽಂಧ-
ಮಾಪ್ತಾ ನ ಚೈಷಾಂ ಪುನರುತ್ಥಿತಿಃ ಸ್ಯಾತ್ ।
ಇತಿ ಬ್ರುವಾಣೋಽನುಚಕಾರ ಭೀಮಂ
ತದಾಽಹಸನ್ ಧಾರ್ತರಾಷ್ಟ್ರಾಶ್ಚ ಸರ್ವೇ ॥ ೩೯೨ ॥

ಅ: ''ಇವರೆಲ್ಲಾ ಜೊಳ್ಳೆಳ್ಳುಗಳು, ಎಂದೂ ಮೇಲೇಳಲಾಗದ ಅಂಧಂತಮಸ್ಸಿಗೆ ತೆರಳಿರುವರು'' ಎಂದು ನುಡಿಯುತ್ತಾ ಭೀಮನನ್ನು ಅಣಕಿಸಿದನು. ಇತರ ಕೌರವರೆಲ್ಲಾ ಜೋರಾಗಿ ನಕ್ಕರು.

ವಿ: ಅಯೋಗ್ಯರು ಅಂಧಂತಮಸ್ಸಿಗೆ ತೆರಳುವರು ಎಂಬ ಭೀಮನ ಸಿದ್ಧಾಂತವನ್ನು ಅಣಕಿಸುತ್ತಾ ಪಾಂಡವರೇ ಜೊಳ್ಳೆಳ್ಳುಗಳು, ಅವರು ಮತ್ತೆ ಮತ್ತೆ ವನವಾಸ, ಅಜ್ಞಾತವಾಸಗಳಲ್ಲಿ ತೊಡಗುತ್ತಾ

---

೩೯೨. ಷಂಢತಿಲಾಃ ನಿರ್ವೀರ್ಯತಿಲಾಃ। –(ತಾ.)

ಶಾಶ್ವತ ದೂರಾಗುವರು ಎಂಬ ಸಂಭ್ರಮದಿಂದ ದುಶ್ಶಾಸನ ಅಣಕವಾಡಿದ. ಅವನ ತಮ್ಮಂದಿರು ಅದನ್ನು ಉತ್ತೇಜಿಸುವಂತೆ ಜೋರಾಗಿ ನಕ್ಕರು. ಹಾಗೆ ಸಜ್ಜನರನ್ನು ಕಂಡು ನಗುವುದು ಅಸುರರ ಲಕ್ಷಣ ಎಂಬ ಮಾತು ಭಾಗವತಪುರಾಣದಲ್ಲಿದೆ: **'ಏಹಸಂತ್ಯಚ್ಯುತಪ್ರಿಯಾನ್'**(೧೧/೫/೭).

೨) ದುರ್ಯೋಧನ 'ಗೌಃ' ಎಂದರೆ, ದುಃಶಾಸನ 'ಜೊಳ್ಳೆಳ್ಳು' ಎಂದ. ಹೀಗೆ ಅವರಿಬ್ಬರಲ್ಲೂ ಪಾಪಬುದ್ಧಿಯ ಸಾಮ್ಯ ಎದ್ದು ಕಾಣುವುದು.

ತದಾऽಕರೋದ್ಭೀಮಸೇನಃ ಪ್ರತಿಜ್ಞಾಂ
ಹಂತಾऽಸ್ಮಿ ವೋ ನಿಖಿಲಾನ್ ಸಂಗರೇऽಹಮ್ ।
ಇತೀರಿತೇ ಶರಣಂ ದ್ರೋಣಮೇವ
ಜಗ್ಮುಃ ಸಮಸ್ತಾ ಧೃತರಾಷ್ಟ್ರಪುತ್ರಾಃ ॥ ೩೯೩ ॥

ಅ: ಆಗ ಭೀಮಸೇನ ಪ್ರತಿಜ್ಞೆ ಮಾಡಿದ 'ನಿಮ್ಮೆಲ್ಲರನ್ನೂ ನಾನು ಯುದ್ಧದಲ್ಲಿ ಕೊಂದು ಹಾಕುವೆ'. ಭೀಮ ಹೀಗೆನ್ನಲು ಕೌರವರೆಲ್ಲಾ ದ್ರೋಣರನ್ನು ಶರಣು ಹೊಕ್ಕರು.

ವಿ: ೧) ದುರ್ಯೋಧನ, ದುಶ್ಶಾಸನರನ್ನು ಕೊಲ್ಲುವ ಪ್ರತಿಜ್ಞೆಯನ್ನು ಭೀಮ ಈಗಾಗಲೇ ಮಾಡಿ ಆಗಿತ್ತು; ಉಳಿದ ಕೌರವರನ್ನೂ ಕೊಲ್ಲುವ ಪ್ರತಿಜ್ಞೆ ಮಾಡಿದ ಪ್ರಸಂಗ ಇಲ್ಲಿ ನಿರೂಪಿತವಾಗಿದೆ. ಸಾತ್ವಿಕರ ಅವಮಾನವನ್ನು ಪ್ರತಿಭಟಿಸದೇ ಪ್ರೋತ್ಸಾಹಿಸುವುದೂ ಸಹ ಮೃತ್ಯುವಿಗೆ ಆಹ್ವಾನ ನೀಡುವ ನಿಂದಾಕಾರ್ಯ ಎಂಬುದು ಇದರ ತಾತ್ಪರ್ಯ.

೨) ಭೀಮಸೇನ ಯುದ್ಧದಲ್ಲಿ ಕೊಲ್ಲುವೆ ಎಂಬ ಮೂಲಕ ಕೌರವರಂತೆ ದ್ಯೂತ ಮೊದಲಾದ ಅನ್ಯಾಯದ ಹಾದಿಯನ್ನು ಆಶ್ರಯಿಸದೆ ಕ್ಷತ್ರಿಯರಿಗೆ ವಿಹಿತವಾದ ಯುದ್ಧದಲ್ಲಿಯೇ ಕೊಲ್ಲುವೆ ಎಂದು ತನ್ನ ಧರ್ಮಪ್ರಜ್ಞೆಯನ್ನು ಮೆರೆದ ಎಂದು ತಿಳಿಯಬೇಕು.

ಕೌರವರ ದ್ರೋಣಶರಣಾಗತಿ

ಯತ್ರ ದ್ರೋಣಸ್ತತ್ರ ಪುತ್ರಸ್ತತ್ರ ಭೀಷ್ಮಃ ಕೃಪಸ್ತಥಾ ।
ನ ಚಾತ್ಯೇತಿ ಗುರುಂ ಭೀಮ ಇತಿ ತಂ ಶರಣಂ ಯಯುಃ ॥ ೩೯೪ ॥

---

೩೯೩. ಯೇ ಚ ತ್ವಾಮನುವರ್ತಂತೇ ಕ್ರೋಧಲೋಭವಶಾನುಗಾಃ ।
ಗೋಪ್ತಾರಃ ಸಾನುಬಂಧಾಂಸ್ತಾನ್ ನೇತಾऽಸ್ಮಿ ಯಮಸಾದನಮ್ ॥ – ಭಾರತ (೨/೭೭/೧೮)

ಅ: ''ದ್ರೋಣನಿದ್ದಲ್ಲಿ ಅವರ ಮಗ ಅಶ್ವತ್ಥಾಮ, ಅಲ್ಲಿಯೇ ಭೀಷ್ಮರು, ಹಾಗೆಯೇ ಕೃಪಾಚಾರ್ಯರು ಇರುವರು; ಭೀಮ ಈ ಗುರು ಹಿರಿಯರನ್ನು ಮೀರಿ ನಡೆಯಲಾರ'' ಎಂಬ ಯೋಚನೆಯಿಂದ ಅವರೆಲ್ಲ ದ್ರೋಣರನ್ನು ಶರಣುಹೊಕ್ಕರು.

ದ್ರೋಣರಿಂದ ಕೌರವರಿಗೆ ಅಭಯ

ಅಬ್ರವೀದ್ಧಾರ್ತರಾಷ್ಟ್ರಾಂಶ್ಚ ದ್ರೋಣೋ ವಿಪ್ರೋಽಪಿ ಸನ್ನಹಮ್।
ಸಪುತ್ರಃ ಸಕೃಪಃ ಶಸ್ತ್ರಂ ಗ್ರಹೀಷ್ಯೇ ಭವತಾಂ ಕೃತೇ ॥ ೩೯೫ ॥

ಅ: ದ್ರೋಣರು ಕೌರವರಿಗೆ ಹೇಳಿದರು 'ನಾನು ಬ್ರಾಹ್ಮಣನಾದರೂ, ನನ್ನ ಮಗ ಅಶ್ವತ್ಥಾಮ ಹಾಗೂ ಕೃಪಾಚಾರ್ಯರೊಂದಿಗೆ ನಿಮಗಾಗಿ ಶಸ್ತ್ರ ಹಿಡಿಯುವೆ'.

ರಕ್ಷಣೇ ಭವತಾಂ ಚೈವ ಕುರ್ಯಾಂ ಯತ್ನಂ ಸ್ವಶಕ್ತಿತಃ।
ನ ತು ಭೀಮಾದ್ರಕ್ಷಿತುಂ ವಃ ಶಕ್ತಃ ಸತ್ಯಂ ಬ್ರವೀಮ್ಯಹಮ್ ॥ ೩೯೬ ॥

ಅ: 'ನನ್ನ ಶಕ್ತಿಯಿದ್ದಷ್ಟು ನಿಮ್ಮ ರಕ್ಷಣೆಗಾಗಿ ಪ್ರಯತ್ನ ಮಾಡುವೆ. ಆದರೆ, ಭೀಮನಿಂದ ನಿಮ್ಮನ್ನು ರಕ್ಷಿಸಲು ನಾನು ಸಮರ್ಥನಲ್ಲ; ನಾನು ನಿಜ ಹೇಳುತ್ತಿರುವೆ'.

ವಿ: ಆ ಮೊದಲು ಎಂದೂ ಶಸ್ತ್ರ ಹಿಡಿಯದಿದ್ದ ದ್ರೋಣರು ಮುಂದೆ ಶಸ್ತ್ರ ಹಿಡಿದು ಕೌರವರ ಪಕ್ಷ ಸೇರಿ ಯುದ್ಧಕ್ಕಿಳಿಯಲು ಕೌರವರು ಶರಣಾದ ಈ ಪ್ರಸಂಗ ಕಾರಣವಾಯಿತು. ಅವರು ಅವರನ್ನು ರಕ್ಷಿಸುವ ಆಶ್ವಾಸನೆಯನ್ನು ನೀಡದೇ ಅವರ ಪಕ್ಷವನ್ನು ಸೇರಿ ಸಾಧ್ಯವಾದಷ್ಟು ಹೋರಾಡುವುದಾಗಿ ಮಾತ್ರ ತಿಳಿಸಿದರು ಎಂಬುದನ್ನು ಗಮನಿಸಬೇಕು.

ದುರ್ಯೋಧನನ ಮತ್ತೊಂದು ಅವಿವೇಕ

ತತೋ ಯಯುಃ ಪಾಂಡವಾಸ್ತೇ ಸಭಾಯಾ
ವನಾಯ ಕೃಷ್ಣಾಸಹಿತಾಃ ಸುಶೂರಾಃ।
ಗತ್ಯಾಽನುಚಕ್ರೇ ಯುವಸಿಂಹವೇಲ-
ಗತಿಂ ಭೀಮಂ ಧಾರ್ತರಾಷ್ಟ್ರೋಽಪಹಸ್ಯ ॥ ೩೯೭ ॥

---

೩೯೭. ಯುವಸಿಂಹವತ್ ವೇಲಾ ಚತುರಾ ಗತಿಃ ಗಮನಂ ಯಸ್ಯ ಸ ತಥಾ ತಮ್। –(ಜ.)

೩೯೭. ತಸ್ಯ ರಾಜಾ ಸಿಂಹಗತೇಃ ಸವೇಲಂ ದುರ್ಯೋಧನೋ ಭೀಮಸೇನಸ್ಯ ಹರ್ಷಾತ್।
ಗತಿಂ ಸ್ವಗತ್ಯಾಽನುಚಕಾರ ಮಂದೋ ನಿರ್ಗಚ್ಛತಾಂ ಪಾಂಡವಾನಾಂ ಸಭಾಯಾಃ।

ಅ: ಬಳಿಕ ತುಂಬಾ ಶೂರರಾದ ಪಾಂಡವರೆಲ್ಲ ಆ ಸಭೆಯಿಂದ ದ್ರೌಪದೀಸಮೇತರಾಗಿ ಕಾಡಿಗೆ ತೆರಳಿದರು. ಆಗ ದುರ್ಯೋಧನ ತರುಣ ಸಿಂಹದಂತೆ ಗಂಭೀರವಾಗಿ ನಡೆಯುತ್ತಿದ್ದ ಭೀಮನನ್ನು ಅಣಕಿಸುತ್ತಾ ಅವನಂತೆ ನಡೆದು ತೋರಿಸಿದ.

ವಿ: ಪಾಂಡವರು ಅಧರ್ಮದ ರೀತಿಯಲ್ಲಿ ಸೋತದ್ದೇ ಹೊರತು ಧರ್ಮಯುದ್ಧದಲ್ಲಿ ಅವರೆಂದೂ ಸೋಲುವವರಲ್ಲ ಎಂಬುದನ್ನು **ಸುಶೂರಾಃ** ಎಂಬ ಪದದಿಂದ ತಿಳಿಸಿರುವರು. ಭೀಮನ ನಡಿಗೆ ತರುಣ ಸಿಂಹದ ನಡಿಗೆಯಂತೆ ಗಂಭೀರವಾಗಿತ್ತು, ನಿರ್ಭಯತ್ವಾದಿಗಳನ್ನು ಸೂಚಿಸುವ ಅಂತಹ ನಡಿಗೆ ಪೂರ್ಣತೆಯ ಶ್ರೇಷ್ಠ ಲಕ್ಷಣಗಳಲ್ಲೊಂದು ಎಂದು ಪುರಾಣಗಳಲ್ಲಿದೆ. ಅದನ್ನು ಅರ್ಥ ಮಾಡಿಕೊಳ್ಳದ ದುರ್ಯೋಧನ ಅಣಕಿಸುವ ಮೂರ್ಖತನಕ್ಕೆ ಕೈಹಾಕಿದ. ಅವನ ಸಕಲ ವಿಧವಾದ ಅವನತಿಗೂ ಅಂತಹ ಮೂರ್ಖತನವೇ ಕಾರಣವಾಗಿತ್ತು.

ಊರುಭಂಗಕ್ಕೆ ಭೀಮನ ಮತ್ತೊಂದು ಶಪಥ

ದೃಷ್ಟ್ವಾ ಸಭಾಯಾ ಅರ್ಧನಿಷ್ಕ್ರಾಂತದೇಹೋ
ವ್ಯಾವೃತ್ಯ ಭೀಮಃ ಪ್ರಾಹ ಸಂರಕ್ತನೇತ್ರಃ ।
ಊರುಂ ತವಾನ್ಯಂ ಚ ರಣೇ ವಿಭೇತ್ಸ್ಯೇ
ಇತ್ಯುಕ್ತ್ವಾಽಸೌ ನಿರ್ಗತೋಽಸತ್ಸಭಾಯಾಃ ॥ ೩೯ ॥

ಅ: ಸಭೆಯಿಂದ ಅರ್ಧ ಹೊರಗೆ ನಡೆದಿದ್ದ ಭೀಮ ಹಿಂತಿರುಗಿ ಕೆಂಗಣ್ಣಿನಿಂದ ದೃಷ್ಟಿಸುತ್ತಾ ನುಡಿದ 'ನಿನ್ನ ಮತ್ತೊಂದು ತೊಡೆಯನ್ನೂ ಯುದ್ಧದಲ್ಲಿ ಪುಡಿಗೈಯ್ಯುವೆ'. ಹೀಗೆ ನುಡಿದು ಆ ಕೆಟ್ಟ ಸಭೆಯಿಂದ ಹೊರ ನಡೆದ.

ವಿ: ೧) ದುರ್ಯೋಧನ ಹಾಗೆ ಅಣಕಿಸುವಾಗ ಭೀಮ ಆಗಲೇ ಒಂದು ಕಾಲನ್ನು ಸಭೆಯ ಹೊರಗೆ ಇಟ್ಟಾಗಿತ್ತು. ಅಲ್ಲಿಂದ ಮುಖ ತಿರುಗಿಸಿದವನೇ ಅವನ ಮತ್ತೊಂದು ತೊಡೆಯನ್ನು ಮುರಿದು ಹಾಕುವ ಶಪಥವನ್ನು ಗೈದು ಭೀಮಸೇನ ಅಲ್ಲಿಂದ ಹೊರಟುಬಿಟ್ಟ. ಹಾಗೆ ಭೀಮ ಹೊರಟದ್ದು ಆ ಸಭೆಯಲ್ಲಿದ್ದವರೆಲ್ಲ ಪ್ರಾಣ ಕಳೆದುಕೊಳ್ಳುವುದಕ್ಕೆ ಮುನ್ಸೂಚನೆಯಾಯಿತು ಎಂದೂ ತಿಳಿಯಬೇಕು.

---

೩೯. ನೈತಾವತಾ ಕೃತಮಿತ್ಯಬ್ರವೀತ್ ತಂ ವೃಕೋದರಃ ಸಂನಿವೃತ್ತಾರ್ಧಕಾಯಃ ।
ಶೀಘ್ರಂ ಹಿ ತ್ವಾಂ ನಿಹತಂ ಸಾನುಬಂಧಂ ಸಂಸ್ಮಾರ್ಯಾಹಂ ಪ್ರತಿವಕ್ಷ್ಯಾಮಿ ಮೂಢ ॥
– ಭಾರತ (೨/೭೭/೨೩.೨೪)

೨) ಮುಖ್ಯಪ್ರಾಣನಾದ ಅವನು ಹೊರನಡೆಯುವುದು ಎಂದರೆ ಇತರರಿಗೆ ಪ್ರಾಣನಾಶದ ಸೂಚನೆಯೇ ಅಲ್ಲವೇ..!

೩) ದ್ರೌಪದಿಗೆ ತೊಡೆ ತೋರಿಸಿದಾಗ ಅದನ್ನು ಮುರಿಯುವೆನೆಂದು ನುಡಿದಿದ್ದ ಭೀಮು, ಈಗ ಇನ್ನೊಂದು ತೊಡೆಯನ್ನೂ ಮುರಿಯುವುದಾಗಿ ಶಪಥ ಮಾಡಿದ. ಹೀಗೆ ದುರ್ಯೋಧನ ಎರಡೂ ತೊಡೆಗಳನ್ನು ಕಳೆದುಕೊಳ್ಳುವಂತಾಯಿತು.

೪) ಹೀಗೆ ತೊಡೆ ಮುರಿದು ಹಾಕುವುದು ಶಾಶ್ವತವಾಗಿ ನೆಲಕಚ್ಚುವಂತೆ ಮಾಡುವುದಕ್ಕೆ ಸಂಕೇತ. ಅದನ್ನು ಅಸತ್ಸಭೆ ಎಂದು ಕರೆಯುವ ಮೂಲಕ ಪಾಂಡವರ ರಾಜಸೂಯ ಯಾಗದ್ದು ಸತ್ಸಭೆ ಎಂದು ಸ್ಫುಟಪಡಿಸಿದಂತಾಯಿತು.

೫) ಪಾಂಡವರ ಸಭೆಯಲ್ಲಿ ರಾಜಸೂಯ ಯಾಗ, ತತ್ವನಿರ್ಣಯದ ವಿಚಾರ ಗೋಷ್ಠಿಗಳು, ಕೃಷ್ಣನಿಗೆ ಅಗ್ರಪೂಜೆ, ಕೋಟ್ಯಂತರ ಜನಕ್ಕೆ ಅನ್ನ ಸಂತರ್ಪಣೆ ಮೊದಲಾದ ಪುಣ್ಯ ಕಾರ್ಯಗಳ ಸಂಭ್ರಮ ನಡೆದಿದ್ದರೆ, ಕೌರವ ಸಭೆಯಲ್ಲಿ ದ್ಯೂತದಂತಹ ಅತ್ಯಂತ ಹೇಯವಾದ ಕೃತ್ಯ ನಡೆದು ಜಗತ್ತೇ ತಲೆತಗ್ಗಿಸುವಂತಹ ದ್ರೌಪದೀ ವಸ್ತ್ರಾಪಹರಣ ಮೊದಲಾದ ಅಧರ್ಮದ ಕಾರ್ಯಗಳು ನಡೆದವು.

೬) ಅಲ್ಲಿ ಕೃಷ್ಣನಿಗೆ ಅಗ್ರಪೂಜೆ ನಡೆದದ್ದು ಪ್ರಧಾನವಾದ ಸತ್ಕಾರ್ಯವಾದರೆ ಇಲ್ಲಿ ಕೃಷ್ಣಾ ದೇವಿಗೆ ವಸ್ತ್ರಾಪಹರಣ ಮಾಡುವ ಪ್ರಯತ್ನದಂತಹ ಅವಮಾನ ನಡೆದದ್ದು ಅತ್ಯಂತ ಪ್ರಧಾನವಾದ ದುಷ್ಕಾರ್ಯವಾಯಿತು ಎಂಬ ವ್ಯತ್ಯಾಸಗಳನ್ನು ಗಮನಿಸಬೇಕು.

ಕುಂತಿಯ ವ್ಯಥೆ

ಪ್ರಯಾತಾನನು ತಾನ್ ಕುಂತೀ ಪ್ರಯಯೌ ಪುತ್ರಗೃದ್ಧಿನೀ।
ರೋರುದ್ಯಮಾನಾಂ ವಿದುರಃ ಸ್ಥಾಪಯಾಮಾಸ ತಾಂ ಗೃಹೇ ॥ ೩೯ ॥

---

೩೯. ವಿದುರಶ್ಚಾಪಿ ತಾಮಾರ್ತಾಂ ಕುಂತೀಮಾಶ್ವಾಸ್ಯ ಹೇತುಭಿಃ।
ಪ್ರಾವೇಶಯದ್ ಗೃಹಂ ಕ್ಷತ್ತಾ ಸ್ವಯಮಾರ್ತತರಃ ಶನೈಃ ॥ – ಭಾರತ (೨/೭೯/೩೧)

೩೯. ಯದವಸ್ಥಾ ಬಭೂವಾರ್ತಾ ಹ್ಯಯೋಧ್ಯಾ ನಗರೀ ಪುರಾ।
ರಾಮೇ ವನೇ ಗತೇ ದುಃಖಾದ್ಭರತರಾಜ್ಞೇ ಸಲಕ್ಷ್ಮಣೇ ॥
ತದವಸ್ಥಂ ಬಭೂವಾರ್ತಮದ್ಯೇದಂ ಗಜಸಾಹ್ವಯಮ್।
ಗತೇ ಪಾರ್ಥೇ ವನಂ ದುಃಖಾದ್ಭರತರಾಜ್ಞೇ ಸಹಾನುಜೈಃ ॥ – ಭಾರತ (೩/೮೦/೩೫)

ಅ: ಹೊರಟು ನಿಂತ ಅವರನ್ನು ಪುತ್ರವತ್ಸಲೆಯಾದ ಕುಂತಿ ಹಿಂಬಾಲಿಸಿದಳು. ವಿದುರ ಅಳುತ್ತಿದ್ದ ಅವಳನ್ನು ತಡೆದು ತನ್ನ ಮನೆಯಲ್ಲಿ ನಿಲ್ಲಿಸಿಕೊಂಡ.

ವಿ: ಕುಂತಿ ತಾನೂ ಕಾಡಿಗೆ ಹೊರಡಲು ಸಿದ್ಧಳಾದಾಗ ವಿದುರ ಅವಳನ್ನು ತಡೆದು ತನ್ನ ಮನೆಯಲ್ಲಿ ಇರಿಸಿಕೊಳ್ಳುವ ಮೂಲಕ ತನ್ನ ಕರ್ತವ್ಯವನ್ನು ಪಾಲಿಸಿದ. ಆ ವಿವೇಕವನ್ನು ಧೃತರಾಷ್ಟ್ರ ತೋರಲಿಲ್ಲ ಎಂಬುದು ಇಲ್ಲಿಯ ಮತ್ತೊಂದು ಅಂಶ. ಕುಂತಿಯ ಜೊತೆಗೆ ನಕುಲಸಹದೇವರ ಪತ್ನಿಯರು ಉಳಿದುಕೊಂಡು ಅವಳ ಯೋಗಕ್ಷೇಮವನ್ನು ವಹಿಸಿಕೊಂಡ ವಿವರ ಮುಂದೆ ಬಂದಿದೆ (೨೨/೫೬).

ಪಾಂಡವರ ಅಪೂರ್ವ ವನಗಮನ

ಪ್ರಣಮ್ಯ ತಾಂ ಯಯುಃ ಪಾರ್ಥಾಃ ಸಕೃಷ್ಣಾಃ ಶೀಘ್ರಗಾಮಿನಃ।
ಯುಧಿಷ್ಠಿರೋಽವಾಗ್ವದನೋ ಯಯೌ ನ ಕ್ರೋಧಚಕ್ಷುಷಾ ।
ದಹೇಯಂ ಕೌರವಾನ್ ಸರ್ವಾನಿತಿ ಕಾರುಣಿಕೋ ನೃಪಃ ॥ ೪೦೦ ॥

ಅ: ಅವಳನ್ನು ನಮಸ್ಕರಿಸಿ ಪಾಂಡವರು ದ್ರೌಪದಿಯೊಂದಿಗೆ ಶೀಘ್ರಗತಿಯಿಂದ ತೆರಳಿದರು. ಕರುಣಾಳುವಾದ ಧರ್ಮರಾಜ ತನ್ನ ಕೋಪ ತುಂಬಿದ ಕಣ್ಣಿನಿಂದ ಕೌರವರನ್ನೆಲ್ಲ ಸುಟ್ಟುಹಾಕುವುದು ಬೇಡವೆಂದು ತಲೆ ತಗ್ಗಿಸಿಕೊಂಡು ಹೊರಟ.

ವಿ: ೧) ತಾನು ಕೋಪ ತುಂಬಿದ ನೋಟದಿಂದ ನೋಡಿದರೆ ಕೌರವರೆಲ್ಲ ಸುಟ್ಟು ಹೋದಾರು ಎಂಬ ಯೋಚನೆಯಿಂದ ಧರ್ಮರಾಜ ತಲೆ ತಗ್ಗಿಸಿಕೊಂಡು ನಡೆದ ಎಂದರ್ಥ. ಆದರೆ, ಕೋಪ ತುಂಬಿದ ನೋಟದಿಂದ ಭೀಮ ಕೌರವರನ್ನು ನೋಡಿದ ಉಲ್ಲೇಖ ಮಹಾಭಾರತದಲ್ಲಿದೆ. ಭೀಮನ ಅಂತಹ ಕೋಪ ದೃಷ್ಟಿಗೆ ಸುಡದ ಕೌರವರು ಧರ್ಮರಾಜನ ದೃಷ್ಟಿಗೆ ಹೇಗೆ ಸುಟ್ಟು ಹೋದಾರು

---

೪೦೦. ನ ಕ್ರೋಧಚಕ್ಷುಷಾ ದಹೇಯಮಿತ್ಯತ್ರ ಭೀಮಸೇನೇನ ಕ್ರೋಧಚಕ್ಷುಷಾ ದರ್ಶನೇಽಪಿ ಕುತಃ ಕೌರವಾಣಾಂ ನ ದಾಹಃ। ಧರ್ಮರಾಜಸ್ಯ ಕ್ರೋಧಚಕ್ಷುಷಾ ಕುತೋ ದಾಹಶಂಕೇತಿ ಚೇತ್ಸತ್ಯಮ್। ಭೀಮಸ್ಯ ವಿದ್ಯೋಪಜೀವನಾಭಾವಾತ್ ನ ಕ್ರೋಧಚಕ್ಷುಷಾ ತಪಸೋ ಮೇಲನಮ್। ಅತೋ ನ ದಾಹಃ। ಧರ್ಮರಾಜಸ್ಯ ತು ಏ ಕ್ರೋಧೇನ ಸಹ ತಪೋ ಮಿಲಿತಂ ಗಚ್ಛೇದೇವ ಅತಸ್ತಪಃ ಸಾಮರ್ಥ್ಯಾತ್ ದಾಹೋ ಭವೇದಿತಿ ವಿವೇಕಸಂಭವಾತ್। ಯಥಾ ಹಂಸಸ್ಯ ನೀರಂ ವಿಹಾಯ ಕ್ಷೀರಮಾತ್ರಾದಾನೇ ಶಕ್ತಿರಸ್ತಿ। ತಥಾ ಶ್ರೀಭೀಮಸೇನಃ ತಪೋಽಸಂಕಲಯ್ಯ ಕೇವಲಂ ಕ್ರೋಧಮೇವ ಕರ್ತುಂ ಶಕ್ನೋತಿ। ಧರ್ಮರಾಜಸ್ಯ ತು ಪಕ್ಷ್ಯಂತರವತ್ ನ ತಥಾ ವಿವೇಚನಶಕ್ತಿರಸ್ತಿ। ತಸ್ಮಾದ್ಧರ್ಮರಾಜಕ್ರೋಧ ಏವ ದಾಹಶಂಕೇತಿ ಭಾವಃ ॥ – (ವಾ.)

ಎಂಬ ಪ್ರಶ್ನೆಗೆ ಇಲ್ಲಿ ಅವಕಾಶವಿದೆ. ಈ ಪ್ರಶ್ನೆಗೆ ಶ್ರೀವಾದಿರಾಜರು ಅಪೂರ್ವ ರೀತಿಯ ಪರಿಹಾರವನ್ನು ನೀಡಿರುವರು.

೨) ಭೀಮ ಹಾಗೆ ತೀವ್ರ ಕೋಪದಿಂದ ನೋಡುವಾಗಲೂ ಅವರನ್ನು ಸುಟ್ಟು ಹೋಗುವಂತೆ ಮಾಡುವ ರೀತಿಯಲ್ಲಿ ತನ್ನ ತಪಸ್ಸನ್ನು ಉಪಯೋಗಿಸಿಕೊಳ್ಳುವುದಿಲ್ಲ. ಅದರಿಂದ ಅವರು ಸುಡದೇ ಉಳಿಯುವರು. ಧರ್ಮರಾಜನಿಗೆ ಆ ರೀತಿಯಾದ ಕಲೆ ಸಿದ್ಧಿಸಿಲ್ಲವಾದ್ದರಿಂದ ಅವನು ನೋಡಿದಾಗ ತಪಸ್ಸು ಸೇರಿಕೊಂಡು ಅವರು ಸುಟ್ಟು ಹೋಗುವ ಸಂಭವವಿತ್ತು. ನೀರನ್ನು ಬಿಟ್ಟು ಹಾಲನ್ನು ಮಾತ್ರ ಸ್ವೀಕರಿಸುವ ಶಕ್ತ ಹಂಸ ಪಕ್ಷಿಗೆ ಇರುವಂತೆ ಇತರ ಪಕ್ಷಿಗಳಿಗೆ ಇಲ್ಲವಷ್ಟೇ. ಧರ್ಮರಾಜ ಇದನ್ನು ಬಲ್ಲದವನಾಗಿದ್ದ. ಅದಕ್ಕೆಂದೇ ಅವನು ತಲೆತಗ್ಗಿಸಿ ನಡೆದ ಎಂದರ್ಥ.

ಶತ್ರುಸಂಹಾರಕ್ಕೆ ತೋಳುಗಳೇ ಸಾಕು

ಉದ್ಧೃತ್ಯ ಬಾಹೂ ಪ್ರಯಯೌ ಬಾಹುಶಾಲೀ ವೃಕೋದರಃ ।
ಆಭ್ಯಾಮೇವಾಖಿಲಾನ್ ಶತ್ರೂನ್ ಶಕ್ತೋ ಹಂತುಮಹಂ ತ್ವಿತಿ ॥ ೪೦೧ ॥

ಅ: ಬಾಹುಶಾಲಿಯಾದ ಭೀಮಸೇನ ತನ್ನ ಎರಡೂ ತೋಳುಗಳನ್ನು ಮೇಲೆತ್ತಿಕೊಂಡು ಅವೆರಡರಿಂದಲೇ ತಾನು ಎಲ್ಲ ಶತ್ರುಗಳನ್ನು ಕೊಲ್ಲಬಲ್ಲ ಸಮರ್ಥ ಎಂದು ಸೂಚಿಸುತ್ತಾ ನಡೆದ.

ವಿ: ಹಾಗೆ ಮಾಡುವ ಮೂಲಕ ಭೀಮಸೇನ ತನ್ನದು ಸಹಜ ಸಾಮರ್ಥ್ಯ ಎಂದು ತಿಳಿಸಿಕೊಟ್ಟ ಎಂದರ್ಥ.

ದ್ರೌಪದಿಯ ಮುಕ್ತಕೇಶದ ಮರ್ಮ

ಅಬದ್ಧಕೇಶಾ ಪ್ರಯಯೌ ದ್ರೌಪದೀ ಸಾ ಸಭಾತಲಾತ್ ।
ಮುಕ್ತಕೇಶಾ ಭವಿಷ್ಯಂತಿ ಧಾರ್ತರಾಷ್ಟ್ರಸ್ತ್ರಿಯಸ್ತ್ವಿತಿ ॥ ೪೦೨ ॥

ಅ: ಅದರಿಂದ ಕೌರವರ ಹೆಂಡಂದಿರು ಮುಂದೆ ಸದಾ ಮುಕ್ತಕೇಶಿಯರಾಗುವರು ಎಂದು ಸೂಚಿಸಲೆಂದು ದ್ರೌಪದಿಯು ತನ್ನ ತಲೆಗೂದಲುಗಳನ್ನು ಕಟ್ಟಿಕೊಳ್ಳದೆಯೇ ಸಭಾಂಗಣದಿಂದ ಹೊರನಡೆದಳು.

---

೪೦೨. ಧಾರ್ತರಾಷ್ಟ್ರಸ್ತ್ರಿಯಸ್ತ್ವತ್ರ ಸ್ನಾನಾಭ್ಯಂಜನಾದೌ ಮುಕ್ತಕೇಶತ್ವಸ್ಯ ಪತಿಮತೀಷ್ವಪಿ ಸಂಭವಾತ್ ತುಶಬ್ದೇನ ಸರ್ವದಾ ಮುಕ್ತಕೇಶತ್ವಂ ಸೂಚಯತಿ ॥ – (ವಾ.)

ವಿ: ಕೂದಲು ಕಟ್ಟಿಕೊಳ್ಳದಿರುವುದು ವೈಧವ್ಯದ ಸಂಕೇತ. ತನ್ನ ಮುಡಿಯನ್ನು ಬಿಚ್ಚಿದ ದುಶ್ಶಾಸನಾದಿಗಳೆಲ್ಲ ಭೀಮನಿಂದ ಹತರಾಗುವುದರಿಂದ ಅವರ ಹೆಂಡಂದಿರೆಲ್ಲಾ ವಿಧವೆಯರಾಗುವರು ಎಂದು ದ್ರೌಪದಿ ಹಾಗೆ ಸೂಚಿಸಿದಳು ಎಂದು ತಿಳಿಯಬೇಕು.

ಅರ್ಜುನನ ವಿಚಿತ್ರಸಂದೇಶ

ವರ್ಷನ್ ಪಾಂಸೂನ್ ಯಯೌ ಪಾರ್ಥ ಇತ್ಥಂ ಶತ್ರುಷು ಸಾಯಕಾನ್ ।
ವರ್ಷಯಾಮೀತ್ಯಭಿಪ್ರಾಯಃ ಪರಮಾಸ್ತ್ರವಿದಾಂ ವರಃ ॥ ೪೦೩ ॥

ಅ: ಅರ್ಜುನ ದಾರಿಯುದ್ದಕ್ಕೂ ಮಣ್ಣು ಸುರಿಸುತ್ತಾ ನಡೆದ. ಪರಮಾಸ್ತ್ರ ಬಲ್ಲ ತಾನು ಶತ್ರುಗಳ ಮೇಲೆ ಬಾಣಗಳನ್ನು ಹಾಗೆ ಪ್ರಯೋಗಿಸುವೆ ಎಂಬುದು ಅವನ ಭಾವವಾಗಿತ್ತು.

ವಿ: ಮುಂದೆ ಅರ್ಜುನ ಯುದ್ಧ ಮಾಡಿದಾಗ ಅವನು ಸುರಿಸುವ ಬಾಣಗಳು ಅಸಂಖ್ಯವಾಗಿದ್ದವು ಎಂಬುದಕ್ಕೆ ಇದು ದ್ಯೋತಕ. ಧೂಳಿನ ಕಣಗಳು ಎಣಿಸಲಾಗದಷ್ಟು ಅಸಂಖ್ಯವಲ್ಲವೇ! ಅದರಂತೆ ಎಂದರ್ಥ.

ನಾಚಿ ತಲೆಬಾಗಿದ ನಕುಲಸಹದೇವರು

ಯಮಾವವಾಙ್ಮುಖೌ ಯಾತೌ ನಾವಯೋಃ ಶತ್ರವೋ ಮುಖಮ್ ।
ಪಶ್ಯತ್ವಸ್ಯಾಮವಸ್ಥಾಯಾಮಿತ್ಯೇವ ಧೃತಚೇತಸೌ ॥ ೪೦೪ ॥

ಅ: ನಕುಲ, ಸಹದೇವರು ಮುಖ ತಗ್ಗಿಸಿಕೊಂಡು ನಡೆದರು. ಶತ್ರುಗಳು ಆ ಪರಿಸ್ಥಿತಿಯಲ್ಲಿ ತಮ್ಮ ಮುಖಗಳನ್ನು ಕಾಣಬಾರದೆಂಬ ನಿಶ್ಚಯ ಅವರ ಮನಸ್ಸಿನಲ್ಲಿತ್ತು.

ಧೌಮ್ಯರಿಂದ ಪ್ರೇತಸಂಸ್ಕಾರಸೂಕ್ತಗಳ ಪಠನೆ

ಪ್ರೇತಸಂಸ್ಕಾರಸೂಕ್ತಾನಿ* ಪಠನ್ ಧೌಮ್ಯೋಽಗ್ರತೋ ಯಯೌ ।
ಹತೇಷು ಧಾರ್ತರಾಷ್ಟ್ರೇಷು ಮಯಾ ಕಾರ್ಯಾಃ ಕ್ರಿಯಾ ಇತಿ ॥ ೪೦೫ ॥

---

* ಧೌಮ್ಯೋ ರೌದ್ರಾಣಿ ಸಾಮಾನಿ ಯಾಮ್ಯಾನಿ ಚ ವಿಶಾಂಪತೇ ।
ಗಾಯನ್ ಗಚ್ಛತಿ ಮಾರ್ಗೇಷು ಕುಶಾನಾದಾಯ ಪಾಣಿನಾ ॥ – ಭಾರತ (ಸಭಾ. ೮೦/೮)

ಅ: ''ಕೌರವರು ಸತ್ತಾಗ ಅವರ ಅಂತ್ಯಕ್ರಿಯೆಗಳು ನನ್ನಿಂದಾಗಬೇಕು'' ಎಂದು ಧೌಮ್ಯರು ಪ್ರೇತ ಸಂಸ್ಕಾರ ಸೂಕ್ತಗಳನ್ನು ಪಠಿಸುತ್ತಾ ಮುಂದೆ ಸಾಗಿದರು.

ವಿ: ಧೌಮ್ಯರ ಪ್ರೇತ ಸಂಸ್ಕಾರ ಸೂಕ್ತದ ಪಠನೆ ಕೌರವರ ಅಂತ್ಯ ಸಂಸ್ಕಾರದ ಮುನ್ಸೂಚನೆ–ಯಾಗಿತ್ತು ಎಂದರ್ಥ. ದುಷ್ಟರು ದುಷ್ಕಾರ್ಯವೆಸಗುತ್ತಿದ್ದಂತೆಯೇ ವಿಪ್ರರು ಅವರ ಅಂತ್ಯ–ಸಂಸ್ಕಾರಸೂಕ್ತಗಳನ್ನು ಪಠಿಸುವರು ಎಂಬ ತತ್ತ್ವವೂ ಇದರಿಂದ ಸೂಚಿತ.

ಪಾಂಡವರ ಹಿಂದೆ ಹಸ್ತಿನಾಪುರದ ಜನತೆ

ತಾನಥಾನುಯಯುಃ ಸೂತಾ ರಥೈಃ ಪರಿಚತುರ್ದಶೈಃ ।
ಸೂದಾಃ ಪೌರೋಗವಾಶ್ಚೈವ ಭೃತ್ಯಾ ಯೇ ತ್ವಾಪ್ತಕಾರಿಣಃ ॥ ೪೦೬ ॥

ಅ: ಹದಿನಾಲ್ಕು ಉಪರಥಗಳಿಂದ ಕೂಡಿದ ಮೂಲರಥಗಳೊಂದಿಗೆ ಸೂತರು, ಅಡಿಗೆಯವರು, ಪಾಕ ವೀಕ್ಷಕರು, ಇತರ ಆಪ್ತವರ್ಗದವರು ಅವರನ್ನು ಹಿಂಬಾಲಿಸಿ ನಡೆದರು.

ಗಂಗಾತೀರದಲ್ಲಿ ಗಂಗಾಜನಕನ ಸ್ಮರಣೆಯಲ್ಲಿ ಪಾಂಡವರು

ತತಸ್ತೇ ಜಾಹ್ನವೀತೀರೇ ವನೇ ವಟಮುಪಾಶ್ರಿತಾಃ ।
ನ್ಯಷೀದನ್ನಾಗತಾನ್ ದೃಷ್ಟ್ವಾ ಸಮಸ್ತಾನ್ ಪುರವಾಸಿನಃ ॥ ೪೦೭ ॥

---

೪೦೬. ರಥೈಃ ಪರಿಚತುರ್ದಶೈರಿತ್ಯತ್ರ ಪರಿ= ಪರಿತಃ ಚತುರ್ದಶಸಂಖ್ಯಾಕಾಃ ಉಪರಥಾ ಯೇಷಾಂ ತೇ ತಥೋಕ್ತಾಃ ತೈಃ। ಪಂಚಪಾಂಡವಾನಾಂ ರಥೈ ಧರ್ಮರಾಜಸ್ಯ ರಾಜತಯಾ ಪೃಷ್ಠಗಾಮಿತ್ವೇನ ಪೃಷ್ಠೇ ನ ರಥಾಂತರಾಪೇಕ್ಷಾ। ಅತಸ್ತಸ್ಯ ದ್ವಾವೇವ ಪಾರ್ಶ್ವೇ ರಥೌ। ಅನ್ಯೇಷಾಂ ಯೋದ್ಧೃತಯಾ ಏಕಃ ಪೃಷ್ಠೇ ರಥಃ। ದ್ವೌ ದ್ವೌ ಪಾರ್ಶ್ವಯೋಃ ಏವಂ ಚತುರ್ದಶ ಉಪರಥಾ ಇತಿ ಜ್ಞೇಯಮ್ ॥ –(ವಾ.)

೪೦೬. ಪರಿಚತುರ್ದಶೈಃ ಪರಿತಃ ಚತುರ್ದಶ ಯೇಷಾಂ ತೇ ತಥಾ ತೈಃ ಚತುರ್ದಶೋಪರಥಯುಕ್ತೈಃ ಪ್ರಧಾನರಥೈಃ ಸಹ ಏಕೈಕರಥಸ್ಯ ಪರಿತಶ್ಚತುರ್ದಶ ಚತುರ್ದಶೋಪರಥಾಃ ಆಸನ್ನಿತಿ ಭಾವಃ। –(ಜ.)

೪೦೬. ಸೂದಾಃ ಪೌರೋಗವಾಶ್ಚೇತ್ಯತ್ರ ಸೂದಯಂತಿ ಚೂರ್ಣಯಂತಿ ಮರೀಚಿತಂಡುಲಾನಿತಿ ಸೂದಾಃ= ಪಾಕಕರ್ತಾರಃ ಪಾಕಸ್ಯ ಪುರತೋ ಗೌಃ ಚಕ್ಷುಃ ತತ್ಸಂಬಂಧಿನಃ ಪೌರೋಗವಾಃ = ಪಾಕಸಾಕ್ಷಿಣ ಇತ್ಯರ್ಥಃ। ''ಸೂದಾ ಔದಾನಿಕಾ ಗಣಾಃ। ಪೌರೋಗವಾಸ್ತದಧ್ಯಕ್ಷಾಃ ಸೂಪಕಾರಾಃ'' ಇತಿ ಚ ಅನುಶಾಸನಮ್ ॥ –(ವಾ.)

೪೦೭. ಆಜಗ್ಮುರ್ಜಾಹ್ನವೀತೀರೇ ಪ್ರಮಾಣಾಖ್ಯಂ ಮಹಾವಟಮ್ ।
ತೇ ತಂ ದಿವಸಶೇಷೇಣ ವಟಂ ಗತ್ವಾ ತು ಪಾಂಡವಾಃ ॥
ಊಷುಸ್ತಾಂ ರಜನೀಂ ವೀರಾಃ ಸಂಸ್ಪೃಶ್ಯ ಸಲಿಲಂ ಶುಚಿ ॥
ಬ್ರಹ್ಮಘೋಷಪುರಸ್ಕಾರಃ ಸಂಜಲ್ಪಃ ಸಮಜಾಯತ ॥ –ಭಾರತ (೩/೧/೪೧,೪೬)

ಅ: ಬಳಿಕ ಪಾಂಡವರು ನಗರ ವಾಸಿಗಳೆಲ್ಲಾ ತಮ್ಮನ್ನು ಅನುಸರಿಸಿ ಬಂದದ್ದನ್ನು ಕಂಡು ಗಂಗಾತೀರದ ಕಾಡಿನಲ್ಲಿ ಒಂದು ವಟವೃಕ್ಷದ ಕೆಳಗೆ ಕುಳಿತರು.

ತತಸ್ತು ತೇ ಸರ್ವಜಗನ್ನಿವಾಸಂ
ನಾರಾಯಣಂ ನಿತ್ಯಸಮಸ್ತಸದ್ಗುಣಮ್ ।
ಸ್ವಯಂಭುಶರ್ವಾದಿಭಿರರ್ಚಿತಂ ಸದಾ
ಭಕ್ತ್ಯಾऽಸ್ಮರನ್ ಭಕ್ತಭವಾಪಹಂ ಪ್ರಭುಮ್ ॥ ೪೦೮ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಪಾಂಡವವನವಾಸಗಮನಂ ನಾಮ ಏಕವಿಂಶೋऽಧ್ಯಾಯಃ ॥ ೨೧ ॥

ಅ: ಬಳಿಕ ಅವರೆಲ್ಲ ಸರ್ವಜಗತ್ತಿನಲ್ಲಿ ನೆಲೆಸಿದವನೂ, ಸದಾ ಸಮಸ್ತ ಸದ್ಗುಣಗಳನ್ನು ಉಳ್ಳವನೂ, ಬ್ರಹ್ಮ, ಶಿವ ಮೊದಲಾದವರಿಂದ ಸದಾ ಪೂಜಿತನೂ, ಭಕ್ತರ ಸಂಸಾರವನ್ನು ಪರಿಹರಿಸುವವನೂ, ಸ್ವಾಮಿಯೂ ಆದ ನಾರಾಯಣನನ್ನು ಭಕ್ತಿಯಿಂದ ನೆನೆದರು.

ವಿ: ಅಂತಹ ಪ್ರಸಂಗದಲ್ಲೂ ಪಾಂಡವರದ್ದು ಶ್ರೀಹರಿಯಲ್ಲಿ ಅಚಲವಾದ ಪರಮ ಭಕ್ತಿಯೇ ಆಗಿತ್ತು. ಎಂತಹ ಆಪತ್ತಿನಲ್ಲೂ ಶ್ರೀಹರಿಯ ಕರುಣೆಯನ್ನೇ ನೆನೆಯುವುದು ಪರಮಭಕ್ತರ ಅಪೂರ್ವಲಕ್ಷಣ ಎಂಬುದು ಇದರಿಂದ ಸೂಚಿತ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವವನವಾಸಗಮನ'ವೆಂಬ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು ॥ ೨೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ದಕ್ಷಿಣಾರೂಪದ ಬಗ್ಗೆ ಕೆಲವು ವಿಶೇಷಾಂಶಗಳು

೧. 'ಸತ್ತತ್ತ್ವರತ್ನಮಾಲಾ' ಕೃತಿಯಲ್ಲಿ ಬಂದಿರುವ ವಿಶೇಷಾಂಶಗಳು

(ಸಾ ದಕ್ಷಿಣಾಮಾನಿನೀ ದೇವತಾ ಚ ಸಾ ಚ ಸ್ಥಿತಾ ಬಹುರೂಪಾ ಮದರ್ಧಾ ।
ವಾಮಾರ್ಧೋ ಮೇ ತತ್ಪ್ರಿಯೋ ಯತೋ ಹಿ ತತೋಽಹಂ ಸ್ಯಾಮರ್ಧನಾರಾಯಣಾಖ್ಯಃ॥

ತದಾऽಪ್ಯಸ್ಯಾ ಉತ್ತಮೋಽಹಂ ಸುಪೂರ್ಣೋ ನ ಮಾದೃಶಃ ಕಶ್ಚಿದಸ್ಯುತ್ತಮೋ ವಾ ।
ಇತ್ಯೇವಾವಾದೀದ್ದಕ್ಷಿಣಾಭಿಃ ಸಹೇತಿ ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ ಸಃ ॥

ತಾಭಿಶ್ಚೈತಾಭಿರ್ದಕ್ಷಿಣಾಭಿಃ ಸಮೇತಾದ್ಧರಿಶ್ಚೋಽಹಂ ಜಗತಃ ಸರ್ವದೈವ ।
ಮತ್ತಾಸಮರ್ಥ್ಯಾನ್ನೈವ ಚಾನಂತಭಾಗೋ ದಕ್ಷಿಣಾನಾಂ ವಿದ್ಯತೇ ನಾರದೇತಿ ॥)

– (ಅಧ್ಯಾಯ ೨೦, ಶ್ಲೋ. ೭೪-೭೬)

ಈ ಶ್ಲೋಕಗಳ ತಾಮ್ರಪರ್ಣಿಶ್ರೀನಿವಾಸಾಚಾರ್ಯರ ಟಿಪ್ಪಣಿ ಹೀಗಿದೆ :

ಮತ್ತಾಸಮರ್ಥ್ಯಾದಿತಿ । ಮತ್ತಾಸಮರ್ಥ್ಯಮಪೇಕ್ಷ್ಯ । ತಾಭಿರ್ವೇದಾದಿಭಿರೇತಾಭಿರ್ದಕ್ಷಿಣಾಭಿಃ ಸಮೇತಾಜ್ಜಗತ ಇತ್ಯುಕ್ತ್ಯಾಪ್ರಾಪ್ತಂ ದಕ್ಷಿಣಾಯಾ ಇತರಸಾಮ್ಯಂ ವಾರಯನ್ ಕದಾಚಿದ್ದಕ್ಷಿಣಾನಾಮುತ್ತಮತ್ವಂ ಕದಾಚಿದ್ಯಜ್ಞಾನಾಮುತ್ತಮತ್ವಂ ಕಿಮಿತಿ ಶಂಕಾಂ ಚ ವಾರಯತಿ – ಅನ್ಯೋತ್ತಮತ್ವಮಿತಿ । ದಕ್ಷಿಣಾಭಿಃ ಸಾಕಮಿತಿ ವದತಃ ಕೃಷ್ಣಸ್ಯ ದಕ್ಷಿಣಾಮನ್ಯೋತ್ತಮತ್ವಮಭಿಪ್ರೇತಮಿತಿ ಭಾವಃ । ಸೇಯಂ ಬೈಷ್ಮೀತಿ । ಸಾ ದಕ್ಷಿಣೇಯಂ ಬೈಷ್ಮೀತ್ಯರ್ಥಃ । ನನು ಕಥಂ ಬೈಷ್ಮ್ಯಾ ದಕ್ಷಿಣಾತ್ವಂ ಸಾऽರ್ಧನಾರೀನರಾತ್ಮನಾ ದಕ್ಷಭಾಗೇ ಸ್ಥಿತೇನತ್ವಾಭಾವಾತ್ । ನಚ ದಕ್ಷಿಣೈಕ್ಯವಿವಕ್ಷಯೈವಮುಕ್ತಿರಿತಿ ವಾಚ್ಯಮ್ । ಯಜ್ಞೈಕ್ಯೇ ನ ಬೈಷ್ಮೀ ಯಜ್ಞನಾಮ್ನೀತಿ ವಕ್ತವ್ಯತಾಪತ್ತೇರಿತಿ ಚೇದತ್ರಾಹುಃ ದಕ್ಷಿಣಾರೂಪಾದ್ಧಿ ಭಕ್ತ್ವೇನೈವ ಮುಕ್ತಿಸಂಭವಾತ್ । ಯದ್ವಾ ರುಗ್ಮಿಣ್ಯಪೀದಾನೀಂ ದಕ್ಷಿಣೈವ ಭಾಗತಃ ಪುರುಷತ್ವಂ ನ ವ್ಯಕ್ತಮತೋ ನ ದೋಷಃ । ತಸ್ಯಾ ಇನೋ ಹಿ ವಿಷ್ಣುಃ ಸಃ ದಕ್ಷಭಾಗಸ್ಥಿತಃ ಸದೇತ್ಯೈತರೇಯಭಾಷ್ಯಾನುಸಾರೇಣ ದಕ್ಷಿಣಾರೂಪಾಣಿ ವ್ಯವಸ್ಥಿತಾನಿ ವಾ । ಯದಾ ತು ಸಾ ಮೇ ವಾಮಾ ವಾಮಾರ್ಧರೂಪೇತ್ಯಾದಿಬಲಾತ್ ಸರ್ವರೂಪಾಣಾಮಪಿ ದಕ್ಷಿಣಾತ್ವಂ ಭವತಿ ವೇತಿ ಚಿಂತಾऽಸ್ಮದಾಚಾರ್ಯೈಃ ಕೃತಾऽನ್ಯತ್ರೇತಿ ನೇಹ ಕೃತಾ । – (ತಾ.)

ಇದರಲ್ಲಿ 'ಅಸ್ಮದಾಚಾರ್ಯೈಃ' ಎಂಬುದಾಗಿ ಪ್ರಸ್ತಾಪಿತರಾಗಿರುವವರು ಸತ್ತತ್ತ್ವರತ್ನಮಾಲಾಕಾರರಾದ ಶ್ರೀ ತಾಮ್ರಪರ್ಣಿ ಆನಂದತೀರ್ಥಾಚಾರ್ಯರು. ಅವರು ಸತ್ತತ್ತ್ವರತ್ನಮಾಲಾದಲ್ಲಿ ದಕ್ಷಿಣರೂಪದ ವಿಶೇಷದ ಬಗ್ಗೆ ನೀಡಿರುವ ವಿವರಗಳು ಹೀಗಿವೆ :

ವೇದಾಭಿಮಾನಿನೀ ಸೈವ ಸಾ ವಿಷ್ಣೋರ್ದೂರತಃ ಸ್ಥಿತಾ ।
ಯಜ್ಞಾಖ್ಯಾ ಸೈವ ವಿಷ್ಣೋಸ್ತು ಯಾ ತೂರಃಸ್ಥಲಮಾಶ್ರಿತಾ ।

ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾ ऽಪಿ ಸೈವ ತು ॥
ಉತ್ತರೋತ್ತರತಃ ಸಾ ऽಪಿ ವಿಶಿಷ್ಟಾ ದಕ್ಷಿಣಾ ಸುಖಿ । (ಭಾ.ತಾ. ೧೧/೧೬/೧೨) ಇತಿ ।

ಅಯಂ ಭಾವಃ । ಯದ್ಯಪಿ ರಮಾಯಾಃ ಸರ್ವರೂಪೇಷು ಸಾಮ್ಯಮೇವ । ಜೀವಸ್ಯಾಪಿ ವಾಯೋಃ ಪ್ರಾಕೃತದೇಹವಿಶಿಷ್ಟಸ್ಯ 'ಇತ್ಥಮೇವ ನಿಹತ'ಮಿತ್ಯಾದ್ಯುಕ್ತೇಃ ಕೇವಲಚಿದ್ರೂಪಾಯಾಃ 'ಹರೇಃ ಪ್ರಸಾದ-ಸಾಮರ್ಥ್ಯಾದಕ್ಷರಾ ಚಾಜರಾ ಹ್ಯಹಮ್' ಇತ್ಯುಕ್ತ್ಯಾ ಈಶ್ವರ್ಯಾಃ ಕೈಮುತ್ಯೇನ ಸಾಮ್ಯಸ್ಯ ಸಿದ್ಧತ್ವಾತ್ । ತಥಾ ऽಪಿ ಭಗವತ್ಸಮೀಪತಾತಿಶಯಕ್ರಮೇಣ ಸುಖೇ ಕ್ರಮಃ । ತತ್ರಾಪಿ ದಕ್ಷಿಣಾರೂಪಂ ಭಗವಚ್ಚಿದ್ಯೋಗಲಕ್ಷಣಾತಿಸಂಶ್ಲೇಷವತ್ತಯಾ ರತಿಯೋಗವತ್ತ್ವೇನಾತಿಶಯಿತಂ ಸುಖಂ ಭವತಿ । ನನು ತದ್ವಿಶಿಷ್ಟಂ ಸುಖಂ ಶ್ರಿಯೋ ನ ತಾವತ್ತ್ವರೂಪಮ್ । ಸ್ವರೂಪತ್ವೇ ರೂಪಾಂತರೇಷ್ವಭಾವಃ ಕಥಮ್ । ಸ್ವರೂಪಸ್ಯ ಕುತ್ರಾಪ್ಯನಪಾಯಾತ್ । ನ ಚ ಭಗವತ್ಸನ್ನಿಧಿಲಕ್ಷಣವ್ಯಂಜಕಸದ್ಭಾವಾದ್ದಕ್ಷಿಣಾರೂಪೇ ವ್ಯಕ್ತಿಃ ಅನ್ಯತ್ರ ತದ-ಭಾವಾದವ್ಯಕ್ತಿರಿತಿ ವಾಚ್ಯಮ್ । ರೂಪಾಂತರೇಷು ಕದಾ ऽಪಿ ತಾದೃಶಸಂಶ್ಲೇಷವಿಶೇಷಾಭಾವೇನ ಕದಾ ऽಪ್ಯ-ವ್ಯಕ್ತತ್ವೇ ऽನ್ಯತ್ರಾನನುಸಂಧೀಯಮಾನತ್ವೇ ಸತಿ ಸರ್ವಥಾ ऽತ್ರಾನುಸಂಧೀಯಮಾನಸ್ಯ ತತ್ಸ್ವರೂಪತ್ವಾ-ನುಪಪತ್ತೇಃ । ಅತ ಏವ ವಿಕರ್ಮಕರಣಾದಿನಾ ಹ್ರಸಿತಮುಕ್ತಸ್ವರೂಪಾನಂದವದುಪಪತ್ತಿರಿತಿ ನಿರಸ್ತಮ್। ಅಪಿ ಚ ದಕ್ಷಿಣಾಯಾಂ ವ್ಯಕ್ತಂ ರೂಪಾಂತರೈರನುಸಂಧೀಯತೇ ನ ವಾ? ಆದ್ಯೇ ಕಥಂ ದಕ್ಷಿಣೈವ ವಿಶಿಷ್ಟಸುಖಾ? ರೂಪಾಂತರೇಷ್ವಪಿ ತದನುಭವಸದ್ಭಾವಾತ್ । ನ ದ್ವಿತೀಯಃ । ಪರಸ್ಪರಸುಖಾದ್ಯನುಸಂಧಾನಸ್ಯ ಸ್ವರೂಪೈಕ್ಯ-ವ್ಯಾಪಕತ್ವೇನ ವ್ಯಾಪಕಾಭಾವೇ ವ್ಯಾಪ್ಯೈಕ್ಯಾಯೋಗಾತ್ । ನ ಚ ವಾಚ್ಯಮಿಂದ್ರಾದಿಗತಸುಖಾದ್ಯನುಸಂಧಾನ-ಸ್ಯಾರ್ಜುನಾದಾವಭಾವೇ ऽಪ್ಯರ್ಜುನಾದಿಗತಯಾವದ್ಧರ್ಮಾನುಸಂಧಾನಸ್ಯೇಂದ್ರಾದೌ ಸದ್ಭಾವಮಾತ್ರೇ-ಣೈಕ್ಯೋಪಪತ್ತಿವದ್ದಕ್ಷಿಣಾಗತಸುಖಾನುಸಂಧಾನಸ್ಯಾನ್ಯತ್ರಾಭಾವೇ ऽಪಿ ರೂಪಾಂತರಗತಯಾವದನು-ಸಂಧಾನಸ್ಯಾತ್ರ ಸದ್ಭಾವಮಾತ್ರೇಣೈಕ್ಯಂ ಯುಕ್ತಮಿತಿ । ದೃಷ್ಟಾಂತೇ ಮಾನುಷದೇಹಾದ್ಯುಪಾಧಿಸದ್ಭಾವೇನ ಕಥಂಚಿದುಕ್ತವ್ಯವಸ್ಥಾಸದ್ಭಾವೇ ऽಪ್ಯತ್ರ ತದಯೋಗಾತ್ । 'ತತ್ರಾಪ್ಯಂಶಿಗತಸ್ಯ ಸಾಧನೋತ್ತಮಸ್ಯಾಂಶೇನ ಭುಜ್ಯಮಾನತ್ವಾತ್' ಇತಿ ನ್ಯಾಯವಿವರಣೋಕ್ತೇರ್ದೃಷ್ಟಾಂತೋ ऽಪ್ಯಸಮ್ಮತ ಏವ । ವಿಶ್ಲಿಷ್ಟೋಪಾಧಿ-ವಿಶಿಷ್ಟಸೌಭರಿಕರ್ದಮಾದಿರೂಪೇಷ್ವಪಿ ಪರಸ್ಪರಾನುಸಂಧಾನಾಚ್ಚ । ತಥಾ ಚಾನನುಸಂಧಾನೇ ಐಕ್ಯಾ-ಯೋಗಾದನುಸಂಧಾನೇ ದಕ್ಷಿಣಾಯಾಃ ಸುಖಿವೈಶಿಷ್ಟ್ಯಾನುಪಪತ್ತೇರ್ನೋಕ್ತಂ ಯುಕ್ತಮಿತಿ । ಅತ್ರೋಚ್ಯತೇ । ಯದತ್ರೋಕ್ತಂ ವಿಶಿಷ್ಟಸುಖಸ್ಯ ರೂಪಾಂತರೇಷು ಕದಾ ऽಪ್ಯವ್ಯಕ್ತೌ ತತ್ಸ್ವರೂಪತ್ವಾನುಪಪತ್ತಿರಿತಿ । ತತ್ರೈಕೇ ಆಹುಃ– 'ನ ಹಿ ದಕ್ಷಿಣಾರೂಪಂ ನಾಮ ಪ್ರತಿನಿಯತಂ ವರ್ತತೇ । ಸರ್ವಾಣ್ಯಪಿ ರೂಪಾಣ್ಯರ್ಧನಾರೀತ್ವೇನ ಭಗವದತಿಸಂಶ್ಲೇಷದಶಾಯಾಂ ದಕ್ಷಿಣಾನಾಮಕಾನಿ । ಯದಾ ತಾನ್ಯೇವ ದೂರಾದಿಗತಾನಿ ನ ತದಾ ದಕ್ಷಿಣಾನಾಮಕಾನಿ । ಅತ ಏವ ರತಿಯೋಗಸ್ಥೇತ್ಯವಸ್ಥಾವಿಶೇಷವೈಶಿಷ್ಟ್ಯೇನೈವ ದಕ್ಷಿಣಾರೂಪಮುಕ್ತಮ್ । ತಥಾ ಚ ಸರ್ವರೂಪೇಷ್ವಪ್ಯುಕ್ತವಿಶೇಷವ್ಯಕ್ತೇರವಸ್ಥಾವಿಶೇಷೇ ವಿದ್ಯಮಾನತ್ವೇನ ನಾಸ್ವರೂಪತ್ವಶಂಕೇತಿ । ವಸ್ತುತಸ್ತು ನ ಸರ್ವರೂಪಾಣಾಂ ಕಾಲವಿಶೇಷೇ ದಕ್ಷಿಣಾತ್ವಮ್ । ಕಿಂ ತು ದಕ್ಷಿಣಾನಾಮಕಾನಿ ಪ್ರತಿನಿಯತಾನ್ಯೇವ ರೂಪಾಣಿ । ತೇಷಾಮೇವ ಸರ್ವದಾರ್ಧನಾರೀತ್ವೇನಾವಸ್ಥಾನಮ್ । ಪರಂ ತು ತಾನ್ಯೇವಾಂಶವಿಶ್ಲೇಷೇಣಾನ್ಯ-ರೂಪಾಣಿ ಭವಂತಿ । ಯಥಾ ರುಕ್ಮಿಣ್ಯಾದೀನಿ । ಯಥಾ ನಿರ್ಣಯೇ 'ದಕ್ಷಿಣಾಭಿಃ ಸಾಕಮ್' ಇತ್ಯನ್ಯೋತ್ತಮತ್ವಂ ದಕ್ಷಿಣಾನಾಮಭಿಧಾಯ ಸತ್ಸ್ವಪಿ ರೂಪಾಂತರೇಷು 'ಸೇಯಂ ಭೈಷ್ಮೀ ದಕ್ಷಿಣಾ' ಇತಿ ವಿಶಿಷ್ಯ ರುಕ್ಮಿಣ್ಯಾ ದಕ್ಷಿಣಾತ್ವಕಥನಮಯುಕ್ತಂ ಸ್ಯಾತ್ । ಏತರೇಯಭಾಷ್ಯೇ ಚ– 'ತಸ್ಯಾ ಇನೋ ಹಿ ವಿಷ್ಣುಃ ಸ ದಕ್ಷಭಾಗೇ ಸ್ಥಿತಃ ಸದಾ' ಇತಿ ಸರ್ವದಾ ದಕ್ಷಭಾಗಸ್ಥಿತ್ಯುಕ್ತೇಃ 'ಸಾ ದಕ್ಷಿಣಾಮಾನಿನೀ ದೇವತಾ ಚ ಸಾ ಚ ಸ್ಥಿತಾ ಬಹುರೂಪಾ ಮದರ್ಥೇ' ಇತ್ಯುಕ್ತೇಶ್ಚ ಸತ್ಯಾದ್ಯಭಿಮಾನಿಶ್ರೀಭೂದುರ್ಗಾರೂಪಾದಿವತ್ ಪೃಥ-

ಗ್ರೂಪತ್ವಸ್ಯೈವ ದಕ್ಷಿಣಾನಾಮಕರೂಪಸ್ಯೋಚಿತತ್ವಾಚ್ಚ। ತಥಾ ಚ ದಕ್ಷಿಣಾರೂಪೇಷ್ವೇವ ಸುಖವಿಶೇಷವ್ಯಕ್ತಿಃ। ರೂಪಾಂತರೇಷು ತದನುಸಂಧಾನಸದ್ಭಾವಾದಸ್ವರೂಪತ್ವಾಭಾವಶ್ಚ । ಯದತ್ರೋಕ್ತಂ ದಕ್ಷಿಣಾಗತವಿಶಿಷ್ಟ-ಸುಖಸ್ಯ ರೂಪಾಂತರೇಷ್ವನುಸಂಧಾನೇ 'ವಿಶಿಷ್ಟಾ ದಕ್ಷಿಣಸುಖ' ಇತಿ ವಿಶಿಷ್ಯೋಕ್ತೇರನುಪಪತ್ತಿರಿತಿ । ತನ್ನ। ಯಥಾ ಹಸ್ತಾದ್ಯಂಶಗತಸುಖಾದೇಃ ಪಾದಾದಾವನುಸಂಧಾನೇಽಪಿ ಹಸ್ತೇ ಮೇ ಸುಖಮಿತ್ಯಾದಿ-ವಿಶೇಷವ್ಯವಹಾರಃ ಸುಖಾದಿವ್ಯಕ್ತಿಸ್ಥಾನತ್ವಾದುಪಪದ್ಯತೇ । ಏವಂ ಸರ್ವರಮಾರೂಪೇಷು ಸುಖವಿಶೇಷಾ-ನುಸಂಧಾನೇಽಪಿ ದಕ್ಷಿಣಾರೂಪಸ್ಯೈವಾತೀವ ಭಗವದ್ರತಿಯೋಗವತ್ತ್ವೇನ ವಿಶಿಷ್ಟಸುಖವ್ಯಕ್ತಿಸ್ಥಾನತ್ವಾ-ದ್ವಿಶಿಷ್ಯೋಕ್ತಿರ್ಯುಜ್ಯತ ಇತಿ । ಅಥವಾ ಏತತ್ಸುಖವಿಶೇಷಾನುಸಂಧಾನಮಾತ್ರಸ್ಯಾನ್ಯತ್ರಾಭಾವೇಽಪಿ ತದಿತರಸುಖಜ್ಞಾನಾದಿ ಯಾವದ್ಧರ್ಮಾನುಸಂಧಾನಸ್ಯ ಸದ್ಭಾವೇನೈಕ್ಯೋಪಪತ್ತೇರ್ನ ಕಶ್ಚಿದ್ದೋಷ ಇತಿ।

****

೨. 'ಮಧ್ವಸಿದ್ಧಾಂತಸಾರ'ದಲ್ಲಿ ಬಂದಿರುವ ವಿಶೇಷಾಂಶಗಳು

ತತ್ರ ದಕ್ಷಿಣಾಮೂರ್ತೌ ಸುಖೇ ವಿಶೇಷೋಽಸ್ತಿ। ತದುಕ್ತಮೇಕಾದಶತಾತ್ಪರ್ಯೇ –

'ಸರ್ವವೇದಾಭಿಮಾನಿನ್ಯೋ ದೇವ್ಯೋ ಲಕ್ಷ್ಮ್ಯಸ್ತತೋಽಧಿಕಾ।
ವೇದಾಭಿಮಾನಿನೀ ಸಾಕ್ಷಾತ್ ಸಾ ವಿಷ್ಣೋರ್ದೂರತಃಸ್ಥಿತಾ।
ಯಜ್ಞಾಖ್ಯಾ ಸೈವ ವಿಷ್ಣೋಸ್ತು ಯಾ ತೂರಃ ಸ್ಥಲಮಾಶ್ರಿತಾ।
ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾಪಿ ಸೈವ ತು।
ಉತ್ತರೋತ್ತರತಃ ಸಾಽಪಿ ವಿಶಿಷ್ಟಾ ದಕ್ಷಿಣಾ ಸುಖೇ ॥ ಇತಿ।

ನಿರ್ಣಯೇಽಪಿ –

ಬ್ರಹ್ಮಾಣಮೇವೋತ್ತಮಮಾಹ ಸೋಽಪಿ.....
.....ದಕ್ಷಿಣಾನಾಂ ಸ್ಮರನ್ ಸಃ ..... ॥ ಇತಿ।

ಐತರೇಯಭಾಷ್ಯೇಽಪಿ –

ದಕ್ಷಿಣಾಭಿಃ ಸಹೈವೈತನ್ಮದಧಸ್ತಾಜ್ಜಗತ್ ಸದಾ।
ಧನ್ಯಾಶ್ಚರ್ಯೋಽಹಮೇವೈಕೋ ಮಿತ್ರಂ ಮೇ ದಕ್ಷಿಣಾ ರಮಾ ॥
ಇತ್ಯವಾದೀದ್ಧರಿರ್ಭೂಪಾ ಧನ್ಯೋಽಸೀತ್ಯುದಿತೋ ಮಯಾ। ಇತಿ ನಾರದವಚನಮ್।

ಅತ್ರಾಯಂ ಸಂಪ್ರದಾಯಃ।

'ಪರಮಾತ್ಮಸಂಭೋಗೇನಾದೌ ಸುಖಾಭಿವ್ಯಕ್ತಿರ್ದಕ್ಷಿಣಾಯಾಮ್ । ತತಃ ಸರ್ವಾಸಾಮ-ನುಭವಃ। ಅತ ಆದೌ ಸುಖಾಭಿವ್ಯಕ್ತಸ್ಥಾನತ್ವಾದ್ವಿಶಿಷ್ಟಾ ದಕ್ಷಿಣಾ ಸುಖೇ' ಇತ್ಯುಕ್ತಿರಿತಿ।

★★★★★

'ಅಯಮಗ್ನೇ ಜರಿತಾ...' ಸೂಕ್ತ

(ಅಯಮಗ್ನೇ ಜರಿತೇತ್ಯಾದಿಮಂತ್ರೈಃ ಸ್ತುತ್ವಾ ವಹ್ನಿಂ ಪಕ್ಷಿಣೋ ನೈವ ದಗ್ಧಾಃ ।
ಸ ಚಾಶ್ವಸೇನಃ ಪುತ್ರಕಸಕ್ಷಕಸ್ಯ ಮಾತ್ರಾ ಗ್ರಸ್ತಃ ಪ್ರಾತಿಲೋಮ್ಯೇನ ಕಂಠೇ)

– (ಅಧ್ಯಾಯ ೨೦, ಶ್ಲೋ. ೨೩೯)

॥ ೮ ಶಾರ್ಙ್ಗಾಃ – ೧-೨ ಜರಿತಾ, ೩-೪ ದ್ರೋಣಃ, ೫-೬ ಸಾರಿಸೃಕ್ವಃ, ೭-೮ ಸ್ತಂಬಮಿತ್ರಃ । ಅಗ್ನಿಃ । ತ್ರಿಷ್ಟುಪ್, ೧-೨ ಜಗತೀ, ೭-೮ ಅನುಷ್ಟುಪ್ ॥

ಅಯಮಗ್ನೇ ಜರಿತಾ ತ್ವೇ ಅಭೂದಪಿ ಸಹಸಃ ಸೂನೋ ನಹ್ಯನ್ಯದಸ್ತ್ಯಪ್ಯಮ್ ।
ಭದ್ರಂ ಹಿ ಶರ್ಮ ತ್ರಿವರೂಥಮಸ್ತಿ ತ ಆರೇ ಹಿಂಸಾನಾಮಪದಿದ್ಯುಮಾ ಕೃಧಿ ॥ ೧ ॥

ಪ್ರವತ್ ತೇ ಅಗ್ನೇ ಜನಿಮಾ ಪಿತೂಯತಃ ಸಾಚೀವ ವಿಶ್ವಾ ಭುವನಾ ನ್ಯೃಂಜಸೇ ।
ಪ್ರ ಸಪ್ತಯಃ ಪ್ರ ಸನಿಷಂತ ನೋ ಧಿಯಃ ಪುರಶ್ಚರಂತಿ ಪಶುಪಾ ಇವ ತ್ಮನಾ ॥ ೨ ॥

ಉತ ವಾ ಉ ಪಾರಿ ವೃಣಕ್ಷಿ ಬಪ್ಸದ್ಬಹೋರಗ್ನ ಉಲಪಸ್ಯ ಸ್ಪಧಾವಃ ।
ಉತ ಖಿಲ್ಯಾ ಉರ್ವರಾಣಾಂ ಭವಂತಿ ಮಾ ತೇ ಹೇತಿಂ ತವಿಷೀಂ ಚುಕ್ರುಧಾಮ ॥೩॥

ಯದುದ್ವತೋ ನಿವತೋ ಯಾಸಿ ಬಪ್ಸತ್ ಪೃಥಗೇಷಿ ಪ್ರಗರ್ಧಿನೀವ ಸೇನಾಮ್ ।
ಯದಾ ತೇ ವಾತೋ ಅನುವಾತಿ ಶೋಚಿರ್ವಪ್ತೇವ ಶ್ಮಶ್ರು ವಪಸಿ ಪ್ರ ಭೂಮ ॥ ೪ ॥

ಪ್ರತ್ಯಸ್ಯ ಶ್ರೇಣಯೋ ದದೃಶ್ರ ಏಕಂ ನಿಯಾನಂ ಬಹವೋ ರಥಾಸಃ ।
ಬಾಹೂ ಯದಗ್ನೇ ಅನುಮಮೃಜಾನೋ ನ್ಯಙ್ಙುತ್ತಾನಾಮನ್ವೇಷಿ ಭೂಮಿಮ್ ॥ ೫ ॥

ಉತ್ ತೇ ಶುಷ್ಮಾ ಜಿಹತಾಮುತ್ ತೇ ಅರ್ಚಿರುತ್ ತೇ ಅಗ್ನೇ ಶಶಮಾನಸ್ಯ ವಾಜಾಃ ।
ಉಚ್ಛ್ವಂಚಸ್ವ ನಿ ನಮ ವರ್ಧಮಾನ ಆ ತ್ವಾದ್ಯ ವಿಶ್ವೇ ವಸವಃ ಸದಂತು ॥ ೬ ॥

ಅಪಾಮಿದಂ ನ್ಯಯನಂ ಸಮುದ್ರಸ್ಯ ನಿವೇಶನಮ್ ।
ಅನ್ಯಂ ಕೃಣುಷ್ವೇತಃ ಪಂಥಾಂ ತೇನ ಯಾಹಿ ವಶಾಂ ಅನು ॥ ೭ ॥

ಆಯನೇ ತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥ ೮ ॥

– ಋಗ್ವೇದ (ಮಂ. ೧೦, ಸೂ. ೧೪೨)

★★★★★